నవయుగ

3--8--1967

ಕಥಾ ಪ್ರವಾಹ

ಬೆಳಕಿನೆಡೆಗೆ

ಬರೆದವರು : ಶ್ರೀ ಗೋಪಾಲ ರಾವ್ ಎ., ಮಣಿಪಾಲ

— ೧ —

ಆಗ ತಾನೆ ಬಂದ ಪತ್ರಿಕೆಯನ್ನು ಮಗುಚಿ ಹಾಳುಪತ್ತಿದ್ದಾಗ "ಕಾಣೆಯಾಗಿದ್ದಾನೆ" ಎಂದು ದಪ್ಪ ಅಕ್ಷರಲ್ಲಿ ಭಾವಚಿತ್ರ ಸಹಿತ ಆಚ್ಚಾಗಿದ್ದ ವಿಷಯದೆಡೆಗೆ ನನ್ನ ದೃಷ್ಟಿ ಹರಿಯಿತು.

"ಎಲ್ಲಿ ಬೆಳ್ಳಗಾರುವ ದಟ್ಟವಾಗಿ ಬೆಳೆದ ತಲೆಕೂದಲುಳ್ಳ ಮುಖದಲ್ಲಿ ಅಲ್ಲಲ್ಲಿ ಮೊಡವೆಗಳುಳ್ಳ ಹಡೆ ಹಡೆದು ವಾತ ನಾದುವ ಎಡ ತೋಳಿನಲ್ಲಿ ಕಪ್ಪುಗಿನ ಮಚ್ಚೆ ಇರುವ ಇಪ್ಪತ್ತೊಂದು ವರ್ಷ ವಯಸ್ಸಿನ ನನ್ನ ಮಗ ಆಚ್ಯುತ ಮನೆ ಬಿಟ್ಟು ಇಂದಿಗೆ ಒಂದು ಸಾಪ್ತಾಹವಾಗುತ್ತಾ ಬಂತು. ಆತನ ವಿಳಾಸ ತಿಳಿಸಿದವರಿಗೆ ಇನ್ನೂರು ರೂಪಾಯಿಗಳ ನಗದು ಬಹು ಮಾನವನ್ನೂ ಕೆಳಗಿನ ವಿಳಾಸದಲ್ಲಿಗೆ ಖುದ್ದಾಗಿ ಕರೆದು ಕೊಂಡು ಬಂದರೆ ಬಹು ಮಾನಕೊಡನೆ ಪ್ರಯಾಣದ ಎಲ್ಲಾ ವೆಚ್ಚವನ್ನು ನೀಡಲಾಗುವುದು" ಎಂದು ಬರೆದಿದ್ದು ಕೆಳಗೆ ವಿಳಾಸ ಸಹಿತ ವಕೀಲರೊಬ್ಬರ ಹೆಸರು ಆಚ್ಚಾಗಿತ್ತು. ಮೂತ್ರವಲ್ಲ ಅದರ ಕೆಳಗಡೆ ಉಚ್ಚಾರಣಿಗೆ ಎಂದು ಬರೆದು.

'ನೀನು ಮನೆಬಿಟ್ಟು ಹೋದಂದಿನಿಂದ ನಿನ್ನ ತಂಟೆ ಊಟ ಮಾಡುವುದೆಂತೂ ದೂರ ಉಳಿಯಿತು. ನೀರು ಸಹ ಮುಟ್ಟಲಿಲ್ಲ. ನಿನ್ನ ಮಡದಿ ನುತ್ತು ಚಿಕ್ಕ ಮಗು ನೋಡಲಸಾಧ್ಯವಾಗುವಷ್ಟು ಕ್ಷೀಣಿಸಿದ್ದಾಳೆ. ಹ ದಿನವನ್ನೆಲ್ಲಾ ಮರೆತು ತಿರುಗಿ ಬಾ' ಎಂದು ಒರೆಯಿತ್ತು. ಫೋಟೋವನ್ನೇ ಎರಡು ಮೂರು ಸಿಮಿಷಗಳ ತನಕ ದಿಟ್ಟಿಸಿ ನೋಡುತ್ತಿದ್ದಾಗ ನನ್ನ ಮನಸ್ಸಿನಲ್ಲಿ ನೂರಾರು ಯೋಚನೆಗಳು ಸುಳಿದು ಮಾಯವಾಯಿತು. ಅದಕ್ಕೆ ಕಾರಣವೂ ಇಷ್ಟವೆಂದಲ್ಲ.

ಒಂದು ಪತ್ರಿಕೆಯ ಸಂಪಾದಕರನ್ನು ಭೇಟಿಯಾಗುವ ನಿಮಿತ್ತ ಸುತ್ತೂರು ಬೀರು ವೈಲುಗಳಷ್ಟು ಎಂತರವಿದ್ದ ಅವರ ಕಾರ್ಯಾಲಯಕ್ಕೆ ಬಸ್ಸಿನಲ್ಲಿ ತೆರಳಿದ್ದೆ. ಬಸ್ಸಿನಲ್ಲಿ ಬೀಳಿಷ್ಟೇನು ಜನಸಂದಣಿ ಇರಲಿಲ್ಲ. ಹಿಂಭಾಗದಲ್ಲಿದ್ದ ಆಸನಗಳು ಮ ಾ ದ್ದೂ ನಾನು ಚಾಲಕನ ಹಿಂದಿನ ಆಸನದಲ್ಲಿ ಕುಳಿತಿದ್ದೆ. ಬಸ್ಸು ಹೊರಟು ಸ್ವಲ್ಪ ದೂರ ಸಾಗಿದ ಬಳಿಕ ಚಾಲಕನ ಪಕ್ಕದಲ್ಲಿ ಕುಳಿತಿದ್ದ ಆಸಾಮಿಯೊಬ್ಬ ಎದ್ದು ಹಿಂಭಾಗದ ಸೀಟಿನಲ್ಲಿ ಕುಳಿತು ಚಾಲಕನ ಜೊತೆ ಮಾತುಕತೆಯಲ್ಲಿ ತೊಡಗಿದ. ಇದರಿಂದ ಒಂಟಿ ರೀತಿಯ ಅಸ್ವಸ್ಥತೆ ಆನಂದ ಭಾಗವಾಗಿತ್ತು.

ಆ ಸಂತೆಯಲ್ಲಿ ತಲೆಗೊಂದು ಮಾತ್ರ ರಂತೆ, ಎರಡು ಹುಟ್ಟಗಳ ಮಧ್ಯೆ ಸಿಕ್ಕಿ ತಿರುವ ಸಿಗರೇಟನ್ನು ಆಗೊಮ್ಮೆ ಈಗೊಮ್ಮೆ ಎಂದು ಸೇವಿಸುತ್ತಾ ವಾಹನ ಚಲಾಯಿಸುತ್ತಿದ್ದ ಆತನ ವರ್ತನೆಯನ್ನು ಆತನ ಬದಿಯಲ್ಲಿದ್ದ ಕನ್ನಡಿಯಲ್ಲಿ ನೋಡಿದ ನ

ಮೂರೇ ದಿನಗಳಾಗಿದ್ದುವೆಂದು ಇಳಿ ಬಿಟ್ಟಿದ್ದ ಗಡ್ಡವೇ ಸಾರುತ್ತಿತ್ತು. ಯಾರೇ ಆಗಲಿ ಒಮ್ಮೆ ನೋಡಿದರೆಂದರೆ ಆತನ ರೂಪ ಮನಸ್ಸಿನಲ್ಲಿ ಬಚ್ಚಳಿಯದೆ ಉಳಿಯುವುದು ಸಹಜವಾಗಿತ್ತು.

ಇಂದು ಪತ್ರಿಕೆಯಲ್ಲಿ ಆಚ್ಚಾಗಿದ್ದ ಫೋಟೋವನ್ನು ಗಮನಿಸಿದಾಗ ಆತನ ಅಸ್ಪಷ್ಟರೂಪ ನನ್ನೆದುರು ಬಂದು ನಿಂತಿತು. ನಾ ನೋಡಿದ ವ್ಯಕ್ತಿಯು ಇಳಿಬಿಟ್ಟ ಗಡ್ಡವೊಂದನ್ನು ಬಿಟ್ಟರೆ ಆತನ ರೂಪ ಪತ್ರಿಕೆಯಲ್ಲಿ ಆಚ್ಚಾಗಿದ್ದ ಫೋಟೋವನ್ನೇ ಹೋಲುತ್ತಿತ್ತು. ಕಾಣೆಯಾದ ವ್ಯಕ್ತಿ ನಾನು ನೋಡಿದ ವ್ಯಕ್ತಿಯೇ ಆಗಿದ್ದಲ್ಲಿ ಆತನನ್ನು ಹುಡುಕಿ ತಿಳಿಸಿದಲ್ಲಿ ಇನ್ನೂರು ರೂಪಾಯಿಗಳ ಒಡೆಯನಾಗಬಹುದು. ಎಂದು ಯೋಚಿಸತೊಡಗಿದ. ಆದರೆ ನನ್ನ ಮನಸ್ಸು ರೂಪಾಯಿಗಳ ಬಯಕೆಯಿಂದ ಮುಕ್ತವಾಗಿ ಕಾಣೆಯಾದ ವ್ಯಕ್ತಿಯತ್ತಲೇ ಹರಿಯುತಿತ್ತು. ಆತ ಮನೆಯಿಂದ ತಪ್ಪಿಸಿಕೊಂಡು ಬಂದಿರ ಬೇಕಾದರೆ ಅದಕ್ಕೆ ಯೋಗ್ಯ ಕಾರಣವಿರಲೇ ಬೇಕು. ಮನೆಯವರ ಕಣ್ಣು ತಪ್ಪಿಸಿ ತಾನು ಮಾಡಿದ ಯಾವುದೋ ರಹಸ್ಯ ಕಾರ್ಯ, ತನ್ನ ಅಚಾತುರ್ಯದಿಂದಾಗಿ ಮನೆಯವರಿಗೆ ತಿಳಿದು ಇನ್ನು ತಾನಿಲ್ಲಿದ್ದರೆ ತನ್ನ ಮಾನಕ್ಕೆ ಚ್ಯುತಿ ಬರಬಹುದೆಂದು ಭಾವಿಸಿ ತಪ್ಪಿಸಿಕೊಂಡು ಬಂದಿರ ಬಹುದೆ? ಅಥವಾ ಮನೆಯಲ್ಲಿದ್ದ ಹಣವನ್ನು ಅಪಹರಿಸಿ ಕಣ್ಮರೆಯಾಗಿರ ಬಹುದೇ? ಹೀಗೆ ಒನೇಕ ರೀತಿಯಲ್ಲಿ ಯೋಚಿಸಿ ನನ್ನ ಮನಸ್ಸು ಯೋಚನೆಯಿಂದ ಬಳಲಿ ಸಿಕ್ಕಿ ಹೊಯ್ದಾಡ ತೊಡಗಿತು. ಕೊನೆಗೆ ಒಂದು ನಿರ್ಧಾರಕ್ಕೆ ಬಂದೆ. ಪತ್ರಿಕೆಯಲ್ಲಿ ಆಚ್ಚಾಗಿದ್ದ ಫೋಟೋ ಚಾಲಕನನ್ನೇ ಹೋಲುತಿದ್ದುದರಿಂದ ಆತನನ್ನು ಭೇಟಿಯಾದರೆ ಎಲ್ಲಾ ವಿಚಾರಗಳನ್ನೂ ಕೇಳಿ ತಿಳಿಯಬಹುದೆಂದು ಯೋಚಿಸಿ ಕಾರ್ಯಮಗ್ನನಾದೆ.

— ೨ —

ಮರುದಿನ ಮುಂಜಾನೆ ಹಿಂದಿನ ದಿನದ ಪತ್ರಿಕೆಯಲ್ಲಿ ಬಂದ ಫೋಟೋವನ್ನು ಕತ್ತರಿಸಿ ಜೇಬಿನಲ್ಲಿರಿಸಿ ಜೊರ ಹೊರಟೆ. ಹಿಂದೆ ಹತ್ತಿದ್ದ ಬಸ್ಸೇ ಸಿಕ್ಕಿ ಹಿಂದೆ ಇದ್ದ ಚಾಲಕನೇ ಇರುವನೆಂಬ ಭರವಸೆ ನನಗಿರಲಿಲ್ಲ. ಏಕೆಂದರೆ ಪತ್ರಿಕೆಯಲ್ಲಿ ಬಂದ ವಿಷಯ ತನ್ನದೆಂದು ತಿಳಿದು ಆತ ಹೊರ ಬಾರದಿರಲೂ ಬಹುದು. ಆದರೆ ಮನುಷ್ಯನಿಂದಾಗುವ ಪ್ರಯತ್ನವನ್ನು ಮಾಡಲು ಯಾರನ್ನೂ ಕೇಳಬೇಕಾಗಿಲ್ಲ ತಾನೆ?

ನಾನು ಬಸ್‌ಸ್ಟಾಪ್ ತಲಪಿದಾಗ ನಾನು ಹಿಡಿಯಬೇಕೆಂದಿದ್ದ ಬಸ್ಸು ಹೊರಟು ಹೋಗಿತ್ತು. ಊರಿನ ಬಸಿನಲ್ಲಿನ ಪ್ರಯಾಣ ಅಲ್ಲಿ ನಡೆದು ಬಂದುದರಿಂದ ನನ್ನ ಮನಸ್ಸು ಬೇಸರಗೊಂಡಿತ್ತು. 'ಹಕ್ಕಿ ಹಾರಿಹೋಯಿತೆ?' ಎಂದು ಯೋಚಿಸುತ್ತಿರುವಾಗ ನನ್ನ ಬಳಿಯಲ್ಲೇ ಒಂದು ವ್ಯಕ್ತಿ, ಹೌದು ನನ್ನ ಬದಿಯಲ್ಲಿದ್ದ ಬಸ್ಸನ್ನು ಹತ್ತಿತು. ವ್ಯಕ್ತಿಯ ಮುಖವನ್ನು ದೃಷ್ಟಿಸಿ ನೋಡಿದ ನಾನು 'ಹಕ್ಕಿ ಹಾರಿ ಹೋಗಲಿಲ್ಲ, ಹೋಗುತ್ತಲಿದೆ' ಎಂದು ಮನಸ್ಸಿನಲ್ಲೇ ಹೇಳಿಕೊಂಡೆ ಮರುಕ್ಷಣದಲ್ಲಿ ನಾನು ಆತ ಏರಿದ ಬಸ್ಸನ್ನೇ ಹತ್ತಿ ಆತನ ಪಕ್ಕದಲ್ಲಿ ಕುಳಿತೆ. ಆತ ಈ ವೇಷ ಧರಿಸಿ ಎಲ್ಲಿಗೆ ಹೊರಟಿರಬಹುದು? ಈ ವ್ಯಕ್ತಿಯನ್ನು ಈ ಉಡುಪಿನಲ್ಲಿ ಯಾರಾದರೂ ನೋಡಿದರೆ ಪತ್ರಿಕೆಯಲ್ಲಿ ಆಚ್ಚಾಗಿದ್ದ ಫೋಟೋ ಆತನದ್ದು ಎಂದು ಸಂಶಯಪಡಬಲಾರರು. ನನ್ನ ಯೋಚನಾಲಹರಿ ಸರಿದಂತೆ ಆತನ ಮಾರ್ಗವೂ ಕಳೆದಿಂಬೇಕು. ಮುಂದಿನ ಬಸ್ ಸ್ಟಾಪಿನಲ್ಲಿ ತನ್ನ ಕೈಚೀಲದೊಂದಿಗೆ ಆತ ಇಳಿದ. ನಾನೂ ಇಳಿದು ಆತನನ್ನು ಹಿಂಬಾಲಿಸ ತೊಡಗಿದೆ. ಎರಡು ಮೂರು ಬಾರಿ ತಿರುಗಿ ನೋಡಿದ ಆತನಿಗೆ, ನನ್ನ ಮೇಲೆ ಅನುಮಾನ ಬಂದಿರಬೇಕೆಂದು ಭಾವಿಸಿದೆ. ನಾನು ಆತನನ್ನು ನೋಡುತ್ತಿರುವಂತೆಯೇ ಆತ ಬದಿಯಲ್ಲಿದ್ದ ಒಂದು ಪೆಂಚಿನ ಮನೆಯ ಮುಂಭಾಗದ ಹೊಕ್ಕ ಶಬ್ದವಾಗುವಂತೆ ಬಾಗಿಲನ್ನು ಮುಚ್ಚಿದ. ಒಂದು ಕ್ಷಣ ನನಗೆ ಏನು ಮಾಡಬೇಕೆಂದೇ ತೋಚಲಿಲ್ಲ. ಕೊನೆಗೆ ಕೈಗೆ ಬಂದ ತುತ್ತನ್ನು ಬಾಯಿಗಿದಲೇಬೇಕೆಂದು ನಿರ್ಧರಿಸಿ ಮನೆಯ ಮೆಟ್ಟಿಲನ್ನು ಹತ್ತಿ ಬಾಗಿಲನ್ನು ನಿಧಾನವಾಗಿ ಬಡಿದೆ. ನಾನು ಬಡಿದ ರೀತಿಯಿಂದಲೇ ಆತ ಕೈನ ಬಾಗಿಲು ತೆರೆದು "ನೀನು ಬೇಕಾಗಿತ್ತು?' ಎಂದು ಗಡುಸಾಗಿಯೇ ಕೇಳಿದ. ಒಂದು ಗಳಿಗೆ ಆತನಿಗೆನು ಉತ್ತರಿಸಲೂ ಬೇಕೆಂಬುದೇ ತಿಳಿಯಲಿಲ್ಲ. ಮರುಕ್ಷಣದಲ್ಲಿ ನನ್ನ ಜೇಬಿನಲ್ಲಿರಿಸಿದ್ದ ಫೋಟೋವನ್ನು ಆತನ ಕಣ್ಣಿಗೆದುರಾಗಿ ಹಿಡಿದು— ಭಾವಚಿತ್ರವನ್ನು ನೋಡುತ್ತಿದ್ದಂತೆ ಆತನ ನಯನದ್ವಯಗಳು ಜಿಗಿದಾಡುವ ಆನಂದ ತರಂಗಗಳಿಂದ ನನ್ನನ್ನು ಒಳಬರುವಂತೆ ಸಂಜ್ಞೆ ಮಾಡಿ ಬಾಗಿಲನ್ನು ಕೈದ. ಮೆಲ್ಲ ನಡೆಯಿಡುತ್ತಾ ನನ್ನ ಬಳಿಗೆ ಬಂದ "ನೀವು ಯಾರಿಗಾಗಿ ಶ್ರಮವಹಿಸಿ ಹುಡುಕುತ್ತಿದ್ದಿರೋ ಆ ವ್ಯಕ್ತಿಯೇ ನಾನು. ಪತ್ರಿಕೆಯಲ್ಲಿ ಮುದ್ರಿತವಾದ ವಿಷಯ ಆ ನಗೂ ತಿಳಿದಿದೆ. ಇನ್ನೂರು ರೂಪಾಯಿಗಳ ಆಸೆಯಿಂದ ನೀವು ಇಲ್ಲಿಗೆ ಬಂದಿರಿ. ನನ್ನ ವಿಳಾಸ ತಿಳಿಸುವುದು ಯಾ ನನ್ನನ್ನು ಕರೆದೊಯ್ಯುವುದು ನಿಮ್ಮಿಂದಾಗದ ಕೆಲಸ. ಆದರೆ ಒಂದು ಮಾತು ಹೇಳುವೆ. ನನ್ನ ವಿಳಾಸ ತಿಳಿಸಿದರ ನಿಮಗೆ ದೊರೆಯುವುದು ಕೇವಲ ಎರಡು ನೂರು ರೂಪಾಯಿಗಳು. ಆದರೆ ನನ್ನ ವಿಳಾಸ ತಿಳಿಸದಲ್ಲಿ ನಾನು ನಿಮಗೆ ಮುನ್ನೂರು ರೂಪಾಯಿಗಳನ್ನೀಯುವೆ. ನಿಮ್ಮಂತೆ ಮೂರು ಮಂದಿ ನನ್ನ ಬಳಿಗೆ ಬಂದು ತಲಾ ಮೂರು ನೂರು ರೂಪಾಯಿಗಳೆಂತ ಅಸಿದುಕೊಂಡರು" ಎಂದು ಹೇಳುತ್ತಾ ನೂರು ರೂಪಾಯಿಗಳ ಮೂರು ನೋಟನ್ನು ನನ್ನತ್ತ ಎಸೆದ ಮಾತನಾಡವಾಗಿ ಆತ ಚಲ್ಲಿಲ್ಲ ತಡೆಯುವುದನ್ನು ನಾನು ಗಮನಿಸದಿರಲಿಲ್ಲ.

(ಹದಿನೈದನೇ ಪುಟ ನೋಡಿರಿ)

ಬಲ್ತಂಗಡಿ ಮನ್ಸಿಫ್ ಕೋರ್ಟಿನ ಸ್ಥಳ
O S. 69/67

ಕಿನ್ನಿ ಯೂನಿ ತಿಮ್ಮಯ್ಯ ಪೆರಡೆ—ಪಾದಿ.

ನುತ್ತು

ಸದಾಶಿವ ಹಬ್ಬರ್ —ಪ್ರತಿವಾದಿ.

ಬೆಳ್ತಂಗಡಿ ತಾಲ್ಲೂ ನಿಟ್ಟಡೆ ಗ್ರಾಮದ ಕಂಡಿಜಿಲೆಳ್ಳದಲ್ಲಿರುವ ರಾಮಚಂದ್ರ ಹೆಬ್ಬಾರರ ಮಗ ಸದಾಶಿವ ಹೆಬ್ಬಾರರಿಗೆ—

ಮೇಲಿನ ವ್ಯಾಜ್ಯದಲ್ಲಿ ನಿಮ್ಮಿಂದ ಬರಬೇಕಾದ 04.—66ನೇ ಇಸವಿಯ ಗೇಣಿ ಬಾಕಿ ಬಗ್ಗೆ ಮಾಡಿದ ವ್ಯಾಜ್ಯವು ತಾ 8-8-67ಕ್ಕೆ ನಿಮ್ಮ ಹಾಜ್ರಾಯಿ ಬಗ್ಗೆ ಇಟ್ಟಿರುತ್ತಾದೆ. ಆದುದಂದ ಆ ದಿವಸ ನೀವು ವಕೀಲರ ಮುಖಾಂತರ ಯಾ ಸ್ವತಃ ಆ ದಿವಸ ಬೆಳಿಗ್ಗೆ 11 ಗಂಟೆಗೆ ಹಾಜ್ರಾಗಬೇಕಾದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಪೂರ್ವಿ ವ್ಯಾಜ್ಯವನ್ನು ಮುಂದುವರಿಸಲಾಗುವುದು. ತಿಳಿದಿರಲಿ.

Nemaja Shetty
Advocate, Beltangady.

ಬೆಳ್ತಂಗಡಿ 21—7—1967.

ಸುಸ್ವಾಗತ!

ಈಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಮನಮೆಚ್ಚುವ ಸರ್ವ ಸೌಕರ್ಯಗಳಿಂದೊಡಗೂಡಿದ
ವಸತಿ ಗೃಹ



ಹೊಟೆಲ್ ಶಿವಕೃಪಾ

ಈಂದಾಪುರ, ದ. ಕ

ಶಿವಳ್ಳಿ ಬ್ರಾಹ್ಮಣರ ಶುದ್ಧ-ರುಚಿಯಾದ ಭೋಜನ, ಸರಳ ವಿಧದ ತಿಂಡಿತಿನಿಸು
ಪಾಶ್ಚಿಮಾತ್ಯರಿಗೆ ಉಣಬಡಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

ಫೋನ್: 77

ನಲ್ವತ್ತಾರನೆ ವರ್ಷ
Telephone 226.

Estd. 1921
NAVAYUGA
Leading Kannada Weekly
UDIPI, S. Kanara

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:
. ಕೆ. ಹೊನ್ನಯ್ಯ ಶೆಟ್ಟ

++

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

++

ಜಾಹೀರಾತು ದರಗಳು:
ಅಧಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ಫಿಯಮಿತ (ಕಂಟ್ರಾಕ್ಟ್)
ಕಲಂ ಸ್ಕೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ
ಲೇಖನವು ಕಿರಿದಾಗಿದ್ದು ಸಿಂದರ್ಥದಿಂದ ಕೂಡಿರಬೇಕು. ಕಾಲು ತಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬರಿಯಿಂಬುಗಳನ್ನು ಬಿಟ್ಟು ಸಂಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಧಾರಿಕ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—
ಚಂಪಾಷಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂದಿಳೇಹಿ ದೇಂತನ ಯಾವುದೇ ಕಾಪಿಯಲ್ಲಿ ಯಾವ ವಿಷಯ ಇಲ್ಲದೆ 'ನವಯುಗ'ದ ಪಾತಿಗೆ ಜಮೆ ಹೂಡುವ ಔಚಿತ್ಯವಿರುವುದು.

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೪೯	೩—೮—೧೯೬೭	No. 49

ವಚನ ಸುಧೆ

ವಿಶಾಸ್ಯಾಶಾಗೃಹೀತಾನಿ
ವ್ಯಾಪಾದಯಿಷ್ಯಸಾನುಷ್ಯಲಂ॥
ಅವಿಧೇಯೋ ಇವಾದಾಂತಾ
ಪಯೋ: ಪಥಿ ಕುಸಾರಥಿಂ॥

ಪಳಗದ, ಆಂಕೆಯಲ್ಲಿಲ್ಲದ ಕುದುರೆಯು ಮೂರ್ಖ ಸಾರಥಿಯನ್ನು ನಡುದಾರಿಯಲ್ಲೇ ಉರುಳಿಸಿ ಬಿಡುವಂತೆ, ಇಂದ್ರಿಯಗಳನ್ನು ವಶದಲ್ಲಿಟ್ಟು ಕೊಳ್ಳದವರೆದವನು ಇಂದ್ರಿಯ ವಶನಾಗಿಯೇ ಮಡಿಯುತ್ತಾನೆ.

ಪ್ರಜಾನಿಷ್ಠ ತತ್ವಪಾಲನೆ

ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ಸು ಸರಕಾರ ಉರುಳಿತು. ಸ್ಪಷ್ಟ ಮಾತ್ರವಲ್ಲ ಸುಸ್ಪಷ್ಟ ಬಹುಮತ ಪಡೆದೇ ನಾಲ್ಕನೆಯ ಸಾರ್ವತ್ರಿಕ ಚುನಾವಣೆಯ ನಂತರ ಇಲ್ಲಿ ಶ್ರೀ ಮಿಶ್ರರು ಮಂತ್ರಿಮಂಡಳ ರಚಿಸಿದ್ದರು. ಹೆಚ್ಚಾತ್ಯಾಗಿ ಮೂವತ್ತಾರೋ (ಮೂವತ್ತೇಳೋ) ಕಾಂಗ್ರೆಸ್ ಶಾಸಕರು ಪಕ್ಷತ್ಯಾಗವನ್ನು ಮಾಡಿದ್ದರಿಂದ ಸಚಿವ ಸಂಪುಟ ಪೇಚಿನಲ್ಲಿ ಸಿಕ್ಕಿಕೊಂಡಿತು. ಮುಖ್ಯಮಂತ್ರಿ ಮಿಶ್ರರು ವಿಧಾನ ಸಭೆಯನ್ನು ಮುಂದುವರಿಸಿ ತನ್ನ ಶಕ್ತಿ—ಅಶಕ್ತಿಯನ್ನು ತೂಕ ಮಾಡಲು ಮುಂದಾದರು; ಹೀಗೆಯೇ ಬಹುದಿನ ದೂಡುವುದು ಅಸಾಧ್ಯ. ವಿಧಾನ ಸಭೆಯಲ್ಲಿ ತನ್ನ ಬಲ ಪ್ರದರ್ಶನವಾಗಲೇ ಬೇಕು—ಎಂದು ಛೋಪಾಳಕ್ಕಿಂದ ದಿಲ್ಲಿಗೂ ಹೋಗಿ ಚರ್ಚಿಸಿದ ನಿರ್ಣಯಕ್ಕೆ ಮೊಕ್ಕಾಂ ಮಾಡಿದರು. ಆದರೆ, ಮಿಶ್ರರ ವ್ಯವಹಾರ ಕಾಂಗ್ರೆಸ್ ವರಿಷ್ಠರಿಗೆ ಕೊನೆಗೆ ಸರಿಬಾರದೆ ಹೋಯಿತು. ಐದು ತಿಂಗಳ ಮಿಶ್ರ ಸರಕಾರ ಮಧ್ಯ ಪ್ರದೇಶದಲ್ಲಿ ಉರುಳಿತು.

ಮಿಶ್ರರ ರಾಜಕೀಯ ಪ್ರತಿಭೆ ಕಡಿಮೆಯಾದುದಾಗಲೀ, ಅವರ ಸರಕಾರ ಉರುಳಿದುದಾಗಲೀ ಇಲ್ಲಿ ಮುಖ್ಯವಲ್ಲ. ಮಧ್ಯ ಪ್ರದೇಶದ ಈ ಸ್ಥಿತ್ಯೆಯು ಭಾರತವು ವಿಶಿದ್ಧ ಪ್ರಜಾಸ್ಪಭುತ್ವವೆಂಬುದನ್ನು ಮತ್ತೊಮ್ಮೆ ಸಮರ್ಥಿಸಿದೆ. ಕಾಂಗ್ರೆಸ್ ವರಿಷ್ಠರೂ ದೇಶದಲ್ಲಿ ಪ್ರಜಾ ಪ್ರಭುತ್ವವನ್ನು ರಕ್ಷಿಸಲು ಅನುಕೂಲವಾದ ಕ್ರಮವನ್ನೇ ಪ್ರೋತ್ಸಾಹಿಸಿದ್ದಾರೆ. ಮಿಶ್ರರವರು ತಮ್ಮ ತಮ್ಮಟೆಯನ್ನೇ ಎಡೆಬಿಡದೆ ಹೋದಲ್ಲಿ ಬಂದಲ್ಲಿ ಗಟ್ಟಿಯಾಗಿ ಬಾರಿಸುತ್ತಿದ್ದರೂ ಅವರ ವಿಚಾರಧಾರೆಯು ಪ್ರಜಾಸತ್ತೆಗೆ ಮಾರಕವೆಂಬುದು ವರಿಷ್ಠರಿಗೆ ಮನವರಿಕೆಯಾಯಿತು. ಆದುದರಿಂದಲೇ ಕಾಂಗ್ರೆಸ್ಸು ಬಹುಮತ ಕಳೆದುಕೊಂಡ ಮೇಲೂ ಮಿಶ್ರ ನಿರುಪಾಯರಾಗಿ ರಾಜೀನಾಮೆ ನೀಡಿದರು. ಈ ದಿಸೆಯಲ್ಲಿ ಮಿಶ್ರರ ವ್ಯಕ್ತಿಗತ ನಿಲುಮೆಯು ಸಮರ್ಥನೀಯವೆನ್ನುವಂತಿಲ್ಲ. ವಿಧಾನ ಸಭೆಯನ್ನು ವಿಸರ್ಜಿಸಿ ಮಧ್ಯಾವಧಿ ಚುನಾವಣೆಗಳನ್ನು ನಡೆಸಬೇಕೆಂದು ರಾಜ್ಯಪಾಲರಿಗೆ ಸಲಹೆ ಮಾಡುವ ಅಧಿಕಾರ ಮುಖ್ಯ ಮಂತ್ರಿಗೆ ಸಂವಿಧಾನ ರೀತ್ಯಾ ಇದೆಯಾದರೂ ಅದನ್ನು ರಾಜ್ಯಪಾಲರು ಒಪ್ಪಿಕೊಳ್ಳಲೇ ಬೇಕೆಂಬ ನಿರ್ಬಂಧನೆಯಿರುವುದಿಲ್ಲ. ರಾಜ್ಯದಲ್ಲಿ ಒಂದು ಸರಕಾರ ಪತಿತವಾಯಿತೆಂದರೆ, ಇನ್ನುಳಿದ ಪಕ್ಷಗಳನ್ನೂ ಕರೆದು ಸರಕಾರ ರಚಿಸುವ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸುವ ಅಧಿಕಾರ ರಾಜ್ಯಪಾಲರಿಗೂ ಇದೆ. ಜನಪ್ರಿಯ ಸರಕಾರ ರಚನೆಯು ಸರ್ವಥಾ ಅಸಾಧ್ಯವೆಂದು ಮನವರಿಕೆಯಾದ ಮೇಲೆಯೇ ರಾಷ್ಟ್ರಪತಿ ಆಳಿಕೆಯನ್ನು ಘೋಷಿಸಲು ಸಲಹೆ ನೂಡಬಹುದು. ಶ್ರೀ ಮಿಶ್ರ ಇಲ್ಲಿ ತುಂಬ ಜಾರಿಬಿದ್ದರು. ತನ್ನ ಪಕ್ಷೀಯರು ಪಕ್ಷತ್ಯಾಗ ಮಾಡಿದಂದೇ ನಿರುಪಾಯರಾಗಿ ವಿಧಾನ ಸಭೆಯನ್ನು ಮುಂದೂಡುವ ಸಲಹೆ ಮಾಡಿದರು— ಇದು ನ್ಯಾಯವೆನ್ನೋಣ—ರಾಜ್ಯಪಾಲರೂ ಇದನ್ನು ಸ್ವೀಕರಿಸಿದರೂ ತನ್ನ ಬಲಾಬಲಗಳನ್ನು ಪರೀಕ್ಷಿಸಿಕೊಳ್ಳಲು, ಸಾಧ್ಯವಾದರೆ ಚೇರಿಸಿಕೊಳ್ಳಲು ಮುಖ ಭಂಗಿತ ನಾಯಕನಿಗೆ ಒಂದು ಅವಕಾಶವಷ್ಟೆ!. ಆದರೆ, ಆ ದಿನವೇ ಅವರು ತಮ್ಮ "ಅಧಿಕಾರ" ದಂಡವನ್ನು ಹಿಡಿದುಕೊಂಡೇ ದೆಹಲಿಗೆ ಹಾರಿಹೋದರು. ಎಲ್ಲಿಂದ ರಲ್ಲಿ ಈ ಅಧಿಕಾರ ದಂಡವನ್ನೇ ಮುಂದೆ ಮಾಡಿದರು. ವಿಧಾನ ಸಭೆಯು ವಿಸರ್ಜನೆ—ಮಧ್ಯಾವಧಿ ಚುನಾವಣೆ—ಇಷ್ಟೇ ಅವರ ಪಲ್ಲವಿಯಾಗಿತ್ತು. ಈ ಸಲಹೆ ಮಾಡುವ ಅಧಿಕಾರ ನನಗೆ ಸಂವಿಧಾನ ಕೊಡವಮಾಡಿದೆ, ಅದನ್ನು ಯಾರೂ ಕಸಿದುಕೊಳ್ಳಲಾರರು— ಅವರ ಈ ಬಿರುನುಡಿ ಪ್ರಜಾಪ್ರಭುತ್ವಕ್ಕೆ— ಆದರಲ್ಲೂ ಪಕ್ಷೀಯ ಪ್ರಜಾಸತ್ತೆಗೆ ಭೂಷಣವಲ್ಲ. ಕಾಂಗ್ರೆಸ್ ಹೈ ಕಮಾಂಡು ಈ ದಿಸೆಯಲ್ಲಿ ತಳೆದ ನೀತಿ ಸಂಪ್ರದಾಯವನ್ನು ಹಾಕೆ ಬೆಳೆಸಲು ಉತ್ತೇಜಕವಿದೆ.

ವಿರೋಧಿಗಳು ಪ್ರಜಾಸ್ಪಭುತ್ವವನ್ನು ದುರ್ಬಲ ಪ್ರಭುತ್ವವೆಂದು ಟೀಕಿಸುತ್ತಾರೆ. ಇದರ ಒಂದು ಮುಖ್ಯ ದೋಷವೆಂದರೆ ಅನಿಶ್ಚಿತತೆ—ದುರ್ಬಲತೆ. ಯಾವ ಕ್ಷಣದಲ್ಲಿ ಆಡಳಿತ ಪಕ್ಷವು ಬಹುಮತ ಕಳೆದುಕೊಳ್ಳುವುದೆಂದು ಹೇಳ ಬರುವುದಿಲ್ಲ—ಆದುದರಿಂದ ಕಸುವಿನ ಸಮರ್ಪಕ ಆಡಳಿತೆ ಸಾಧ್ಯವಿರುವುದಿಲ್ಲ. ಆದರೆ, ಇದು ನಮ್ಮ ದೇಶದಲ್ಲಿ ಮಾತ್ರವಲ್ಲ. ಎಲ್ಲ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲೂ ಇರುವ ದೋಷ. ಇದರಿಂದ ಪಾರಾಗುವುದು ಕಷ್ಟ ಸಾಧ್ಯವೇ. ಜೀವನವು ನಶ್ವರ, ಕ್ಷಣಿಕವೆಂದು ಬದುಕದೆಯಳಿಯುವುದು ಹೇಗೆ ಅಸಾಧ್ಯವೋ ಹಾಗೆಯೇ ಪ್ರಜಾಪ್ರಭುತ್ವದ ಈ ದೋಷದಿಂದ ದೂರ ವಿರುವುದೂ ಅಸಾಧ್ಯ. ಆದರೂ ಜೀವನದಲ್ಲಿ ಆಚಾರ ಸಂಹಿತೆಯನ್ನು ಅನುಸರಿಸಿದರೆ ಬದುಕಬಹುದಾದ ದಿನಗಳೂ ಹೆಚ್ಚು ಬಹುದು; ರಾಜಕೀಯದಲ್ಲೂ ಆಚಾರ ಸಂಹಿತೆಯು ಪಾಲನೆ ಬೇಕೆನಿಸುತ್ತದೆ. ಪಕ್ಷ ಪರಿವರ್ತನೆಯು ರೋಗದಿಂದ ಶಾಸಕರು ಮುಕ್ತರಾದರೆ ಸರಕಾರ ತನ್ನ ಗೊತ್ತಾದ ಅವಧಿಯವರೆಗಾದರೂ ಬದುಕಬಹುದು. ಆದರೆ,ಅಭಿವ್ಯಾಯ ಸ್ವಾತಂತ್ರ್ಯದ ಮೂಲಾಧಿಕಾರವನ್ನು ಇದರಿಂದ ಅದುಮಿದಂತಾಗಲಾರದೆ!ಅದೇನೇ ಇದ್ದರೂ,ಅಭಿಪ್ರಾಯ ಸ್ವಾತಂತ್ರ್ಯ ವ್ಯಕ್ತಿನಿಷ್ಠವಾದುದ. 'ಪಕ್ಷ ತ್ಯಾಗ'ವು ಪ್ರಜಾನಿಷ್ಠವಾದುದು. ಪ್ರಜಾಪ್ರಭುತ್ವದಲ್ಲಿ ಪ್ರಜಾನಿಷ್ಠ ತತ್ವ ಕ್ಕಾಗಿ ವ್ಯಕ್ತಿನಿಷ್ಠ ತತ್ವಗಳಿಗೆ ಎರವಾಗಬೇಕೇ? ಸಮಾಜವಾದದ ಮೊದಲ ಪಾಠವಿದು. ಈ ಸಂಗತಿಯನ್ನು ನಾವಿಂದು ಯೋಚಿಸಬೇಕು, ಗಂಭೀರವಾಗಿ.

ಉಚಿತ.....ಅನುಚಿತ

ಎಂ ಪಿ ಸಿಸಿ ಯು ಹೊಸ ಯೋಜನೆಯೊಂದನ್ನು ಆರಂಭಿಸಿ ಬಡವರಿಗೆ ಉಚಿತ ವಕೀಲಿ ಸೌಕರ್ಯವೊದಗಿಸುವ ಏರ್ಪಾಡು ಮಾಡಿದೆಯೆಂಬಂಗೂ ಇದು ಈ ತಿಂಗಳ ಮೊದಲನೆ ತಾರೀಕಿನಿಂದ ಆರಂಭವಾಗಿದೆಯೆಂಬಂಗೂ ತಿಳಿದು ಬಂದಿದೆ. ಸದ್ಯ ಬೆಂಗಳೂರಿನ ಹತ್ತು ಮಹಶೀಯ ವಕೀಲರು ಸ್ವೇಚ್ಛೆಯಿಂದಲೇ ಈ ಬಗೆಯ ನೆರವು ನೀಡಲು ಮುಂದೆ ಬಂದಿರುವರಂತೆ. ಬಡ ಜನರಿಗೆ ನ್ಯಾಯಾಲಯಗಳ ಮೆಟ್ಟಲು ಹತ್ತ ಬೇಕಾದ ಅವಶ್ಯಕತೆಯಿಲ್ಲದಿರುವಂತೆಯೂ ಮಾಡಿದರೆ ಒಳ್ಳೆಯದೇ. ಆದರೂ ಕೆಲವೊಮ್ಮೆ ನ್ಯಾಯಾಲಯಗಳಿಗೂ ಬಡವರೇ ಬೇಕಾಗುವುದುಂಟು. ಆಗ ಇವರ ಪರವಾಗಿ ವಾದಿಸುವುದಕ್ಕಾದರೂ ಉಚಿತ ವಕೀಲರು ದೊರೆಯುವುದು ಅನುಚಿತವಲ್ಲ. ಆದರೆ, ಎಂಪಿಸಿಸಿ ಒದಗಿಸುವ ಈ ಸೇವೆಯನ್ನು ಪಕ್ಷೀಯ ನೆಲೆಗೆ ಸೀಮಿತವಾಗಿಯೇ ಇಡುವುದೆ? ಕಮ್ಯುನಿಸ್ಟರು ತಮ್ಮ ಸೇವೆಯನ್ನು "ಕಾಮ್ರೇಡ್"ಗಳಿಗೆಮಾತ್ರ ಪರಿಮಿತಗೊಳಿಸಿರುವಂತೆ. ಕ್ರಿಶ್ಚಿಯನ್ ಪಾದ್ರಿಗಳು ಅನ್ನದ ಆಮಿಷವೊಡ್ಡಿ ಹಿಂದೂ-ಮುಸಲ್ಮಾನರ ಕೊರಳಿಗೆ ಯೇಸುವಿನ ಕ್ರಾಸ್ ಕಟ್ಟುವುದಕ್ಕೂ ರಾಜಕೀಯ ಪಕ್ಷಗಳು 'ಉಚಿತ ನೆರವಿ'ನ ಪ್ರಲೋಭನೆ ತೋರಿಸಿ ಬಡವರ ಕೊರಳಿಗೆ ಪಕ್ಷೀಯ ಪದಕವೇರಿಸುವುದಕ್ಕೂ ಇರುವ ಅಂತರವೆಂದರೆ ಒಂದೇ —ಮೊದಲನೆಯದು ಮತಾಂತರ, ಎರಡನೆಯದು ಪಕ್ಷಾಂತರ. ಮೊದಲನೆಯದಕ್ಕೆ ಬಲಾತ್ಕಾರ ಸ್ಪಷ್ಟವಿರ ಸ್ರಾಯ: ಎರಡನೆಯದು ಬಲಾತ್ಕಾರದ ಮೇಲೆಯೇ ನಡೆಯುತ್ತದೆ.

ನರಸಣ್ಣನ ಸರಸ



"ನಮ್ಮ ರಕ್ಷಣೆ ಮತ್ತು ಭದ್ರತೆಗೆ ಒಂದೇ ಒಂದು ದಾರಿಯೆಂದರೆ ನಮ್ಮ ಕಾಲಮೇಲೆ ನಾವು ನಿಲ್ಲುವುದು—ಛಗವಾರ ಈ ನಾತಿಗೆ ಪಸೋರ್ದಾರ್ ಹೊರಬೆತ್ತಂತೆ...."

'ಚಿಕ್ಕಿನ ಕುತ್ತಿಗೆಗೆ ಗಂಟೆ ಕಟ್ಟುವುದು ಹೇಗೆಂಬ...'

ಚಂದ್ರನ ಒಳಮುಖದ ಚಿತ್ರವಿದು. ಲ್ಯೂನರ್ ಉಪಗ್ರಹ—೨. ಇದನ್ನು ತೆಗೆದು ಕಳಿಸಿತ್ತು.

ಮುಖಪತ್ರದಲ್ಲಿ:

ಜನಾಂಗ ಪರಿಚಯ

ಜ್ಯೂ ಜನಾಂಗದ ಸಂಕ್ಷಿಪ್ತ ಚರಿತ್ರೆ

ಲೇಖಕರು :
ಶ್ರೀ ಕೆ. ಜಿ. ವಸಂತ ಮಾಧವ, ಎಂ. ಎ.

ಪೀಠಿಕೆ

ಜ್ಯೂ ಜನಾಂಗದವರು ಜಗತ್ತಿನ ಬುದ್ಧಿವಂತ ಶ್ರಮಜೀವಿಗಳಲ್ಲಿ ಒಬ್ಬರಾಗಿದ್ದಾರೆ. ಮೊನ್ನೆ ನಡೆದ ಈಜಿಪ್ತ—ಇಸ್ರೇಲಿ ಕದನಗಳಲ್ಲಿ ಜ್ಯೂಗಳು ಅಸ್ತಿತಮ ಸಾಹಸ ತೋರಿಸಿ ಜಗತ್ತನ್ನೆ ಬೆರಗುಗೊಳಿಸಿದ್ದಾರೆ. ಇವರ ಧೈರ್ಯ, ಪರಾಕ್ರಮ, ಬುದ್ಧಿವಂತಿಕೆ, ತಾಳ್ಮೆಯಿಂದ ಜಗತ್ತಿನ ಇತಿಹಾಸದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದಿದ್ದಾರೆ. ಅತೀ ಪ್ರಾಚೀನ ಜ್ಯೂ ಜನಾಂಗವು ಜಗತ್ತಿನ ಇತಿಹಾಸಕ್ಕೆ ಧರ್ಮ, ಸಾಹಿತ್ಯ, ರಾಜನೀತಿ, ಕಾನೂನು ಮತ್ತು ಲೆಗ ಆಮೂಲ್ಯ ಕಾಣಿಕೆಗಳನ್ನಿತ್ತಿದೆ. ಇವರ ಇತಿಹಾಸವನ್ನು ವಿಮರ್ಶಿಸಿದಲ್ಲಿ ಇವರ ತಾಳ್ಮೆ, ಬುದ್ಧಿವಂತಿಕೆ, ಧೈರ್ಯ, ಪರಾಕ್ರಮ ಮತ್ತು ಶಿಸ್ತು ಎದ್ದು ತೋರುತ್ತದೆ. ಈ ಗುಣಗಳಿಂದಾಗಿಯೇ ಜ್ಯೂ ಜನಾಂಗದವರು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದಾರೆ.

ಜ್ಯೂ ಜನಾಂಗದ ಮೂಲ

ಜ್ಯೂ ಜನಾಂಗದವರಿಗೆ ಹಾಜ್ರು ಎಂಬ ಪ್ರವಾಯಹೂದ್ಯ ಎಂಬ ಹೆಸರುಗಳಿವೆ. ಈ ಜನಾಂಗದವರು ಪ್ಯಾಲೆಸ್ಟೈನ್‌ನ್ನು ಮಾತೃ ಭೂಮಿಯೆಂದು ನಂಬಿದ್ದಾರು. ಬೈಬಲ್ಲಿನ ಹಳೆ ಒಡಂಬಡಿಕೆಯು ಜ್ಯೂ ಸಂಸ್ಕೃತಿಯ ವಿಚಾರವನ್ನು ನಮಗೆ ತಿಳಿಸುತ್ತದೆ. ಪೂರ್ವದಲ್ಲಿ ಇವರ ಅರೇಬಿಯಾ ಮರುಭೂಮಿಯಲ್ಲಿ ಅಲೆದಾಡಿಕೊಂಡು ಜೀವಿಸುತ್ತಿದ್ದರು. ಅನಂತರ ಇವರು ಪಂಗಡಗಳಲ್ಲಿದ್ದು ಪ್ಯಾ. ಕೆಲವು ಪಂಗಡಗಳಲ್ಲಿ ಪರುಷಾಲನೆಯು ಮುಖ್ಯ ಕಸುಬಾಗಿತ್ತು. ಅವರ ಧಾರೆ ಸಮೆಟಿಸ್ ಜ್ಯೂಗಳು ಫಿನೀಷಿಯನ್ನರಿಂದ ಬರವಣಿಗೆಯನ್ನು ಕಲಿತು ವರ್ಣಮಾಲೆ ಕಲ್ಪಿಸಿಕೊಂಡರು. ಅರಬರಿಂದ ಪಿತೃ ಪ್ರಧಾನ ಕುಟುಂಬ ಜೀವನವನ್ನು, ಈಜಿಪ್ತಿಯನಿಂದ ಸಂಘಕಾರದಿಂದ ಧೈರ್ಯ ಧಾರಾಳ ವಿಲಾಸಮಯ ಜೀವನ ನಡೆಸುವ ಕ್ರಮವನ್ನು ಜ್ಯೂ ಜನರು ಅರಿತರು. ಈ ಜ್ಯೂ ಜನರು ಸೆಮೆಟಿಕ್ ಜನಾಂಗಕ್ಕೆ ಸೇರಿದವರೆಂಬ ಅಭಿಪ್ರಾಯ ಇತಿಹಾಸಜ್ಞರಲ್ಲಿದೆ. ಅವರನ್ನು ವಿಕೇಂದ್ರೀಕರಿಸಿದ ಕೇರ್ತ ಬೈಬಲ್ಲಿನ ಹಳೆ ಒಡಂಬಡಿಕೆಯಲ್ಲಿ ಜೆರಿಸೆವ ಅಬ್ರಹಾಮನಿಗೆ ಕರ್ತನು ಕರೆದನೆಂದು ಹೇಳಿದೆ. ಇದರಿಂದ ಜ್ಯೂಗಳು ಅಬ್ರಹಾಮನ ವಂಶಕ್ಕೆ ಸೇರಿದವರೆಂದು ಹೇಳಿಕೊಳ್ಳುತ್ತಿದ್ದರು. ಅರೇಬಿಯಾದಲ್ಲಿದ್ದ ಜ್ಯೂ ಪಂಗಡವು, ಅಬ್ರಹಾಮನ ನೇತೃತ್ವದಲ್ಲಿ ಪೆಲಿಸ್ತಿನಿಗೆ ಬಂದಿತು. ಆ ಸಮಯದ ಅಲ್ಲಿ ನೆಲೆಸಿದ್ದ ಕ್ಯಾನನೈಟ್ ಜನಾಂಗದವರ ಸಂಪರ್ಕ ಜ್ಯೂಗಳಿಗಾಯಿತು. ಕ್ಯಾನನೈಟ್ ಜನರು ಕೋಟೆಕೊತ್ತಲಗಳಿಂದ ಕೂಡಿದ ನಗರಗಳಲ್ಲಿ ವಾಸಿಸಿ ಮೆಸೆಪೊಟೇಮಿಯಾ ಜನರೊಡನೆ ವ್ಯಾಪಾರ ಮಾಡಿಕೊಂಡಿದ್ದರು. ಸ್ವಲ್ಪಕಾಲ ಜ್ಯೂ ಮತ್ತು ಕ್ಯಾನನೈಟ್ ಜನರು ಮೈತ್ರಿಯಿಂದ ಶಾಂತಜೀವನವನ್ನು ನಡೆಸಿದ್ದರು. ಕ್ರಮೇಣ ಅವರಿಬ್ಬರಲ್ಲಿ ವೈಮನಸ್ಸು ಬೆಳೆದು ಹೋರಾಟ ಆರಂಭವಾಯಿತು. ಈ ಹೋರಾಟದಲ್ಲಿ ಕ್ಯಾನನೈಟ್ ಜನರನ್ನು ಸೋಲಿಸಿ ಜ್ಯೂಗಳು ಅವರ ಸಂಸ್ಕೃತಿಯನ್ನು ಸ್ವೀಕರಿಸಿದರು. ಕೆಲವು ಹಿಬ್ರುಗಳು ಕ್ರಿ. ಪೂ. ೧೩೦೦ರಲ್ಲಿ ಈಜಿಪ್ತನ್ನು ಪ್ರವೇಶಿಸಿದರು.

ಈಜಿಪ್ತನಲ್ಲಿ ಸೆರೆ ಜೀವನ - ಈಜಿಪ್ತನ್ನು ಪ್ರವೇಶಿಸಿದ ಜ್ಯೂಗಳು ಅಲ್ಲಿ ನೆಲಸಿ ಸ್ವಲ್ಪ ಕಾಲದಲ್ಲಿಯೇ ಬಹಳ ಶ್ರೀಮಂತರಾದರು. ಅವರ ಅಭಿವೃದ್ಧಿಯನ್ನು ನೋಡಿ ಈಜಿಪ್ತಿನ ಪೊರೋವ ಅರಸರಿಗೆ ಅಸೂಯೆ ಸಹಿಸಲಾಗಲಿಲ್ಲ. ಅವರನ್ನು ಈಜಿಪ್ತಿನ ಪೊಫೋವ್ ಗುಲಾಮರನ್ನಾಗಿ ಮಾಡಿಕೊಂಡರು. ಸಾವಿರಾರು ಜ್ಯೂಗಳು ದೇವಸ್ಥಾನ ಮತ್ತು ಪಿರೇಮಿಡ್ ಕಟ್ಟಲು ಒತ್ತಾಯಪೂರ್ವಕವಾಗಿ ದುಡಿಯಬೇಕಾಗಿ ಬಂತು. ಈಜಿಪ್ತಿನ ಪಿರೇಮಿಡ್ ಮತ್ತು ದೇವಾಲಯಗಳ ರಚನೆಯಲ್ಲಿ ಬಹಳಷ್ಟು ಯಹೂದಿಗಳ ಶ್ರಮವನ್ನು ಒತ್ತಾಯಪೂರ್ವಕವಾಗಿ ಉಪಯೋಗಿಸಲಾಗುತ್ತು ಈಜಿಪ್ತಿನ ಅಡಳಿತದಲ್ಲಿ ಜ್ಯೂಗಳು ಹೇಳಲಾರದಷ್ಟು ಕಷ್ಟಪಡಬೇಕಾಗಿ ಬಂತು. ಆ ಕಷ್ಟ ಜೀವನದಲ್ಲಿ ಜ್ಯೂಗಳು ಕೃಷಿ, ಕಾನೂನಿನ ಪ್ರಾವೀಣ್ಯತೆ, ಶಿಸ್ತು, ನಿಯಮ ಮತ್ತು ಏಕ್ಯತನ, ಕಲಿತರು. ಪೊರೋವರು ಜ್ಯೂಗಳನ್ನು ತಚ್ಚು ರೀತಿ ನೋಡಿಕೊಂಡು ಅಸಾಧ್ಯವಾದ ಕಷ್ಟ ಹಿಂಸೆಗಳನ್ನು ಕೊಡುತಿದ್ದರು. ಬೈಬಲಿನ ಪ್ರಕಾರ ಈಜಿಪ್ತಿನ ಒಬ್ಬ ಪೊರೋವನು, ಜ್ಯೂ ಜನರನ್ನು ನಾಶ ಮಾಡುವ ಉದ್ದೇಶದಿಂದ ಅವರ ಗಂಡು ಮಕ್ಕಳನ್ನು ಕೊಲ್ಲುವಂತೆ ಆಜ್ಞೆ ಇತ್ತನು. ಇದನ್ನು ಸಹಿಸಲು ಜ್ಯೂಗಳಿಗೆ ಆಗಲಿಲ್ಲ. ಆ ಸಂದರ್ಭ ಸಮಯದಲ್ಲಿ ಹೀಬ್ರುಗಳ ಮುಖಂಡನಾದ ಮೋಸೆಸ್ ಎಂಬವನು ಇವರನ್ನು ಗುಲಾಮಗಿರಿಯಿಂದ ವಿಮೋಚಿಸಿ ಪುನಃ ಪ್ಯಾಲೆಸ್ಟೈನಿಗೆ ಕರೆದುಕೊಂಡು ಹೋದನು.

ಜ್ಯೂ ಅರಸರು: ಪ್ಯಾಲೆಸ್ಟೈನಿನಲ್ಲಿ ನೆಲೆಸಿದ ಹೀಬ್ರುಗಳು ಮೋಸೆಸ್‌ನ ನಾಯಕತ್ವದಲ್ಲಿ ಸ್ವತಂತ್ರ ರಾಜ್ಯವನ್ನು ಕಟ್ಟಿದರು. ಅವನ ಕಾಲಗಲ್ಲಿಯೇ ಸಮುದ್ರ ಪ್ಯಾಲೆಸ್ಟೈನ್ ಜ್ಯೂಗಳ ವಶದಲ್ಲಿದ್ದಿತ್ತು. ಕ್ಯಾನನೈಟ್ ಜನಾಂಗದವರು ಸಂಪೂರ್ಣವಾಗಿ ಸೋತು ಹೀಬ್ರುಗಳಜಧೀನಕ್ಕೆ ಒಳಗಾದರು. ಜೋಸುವಾನ ನಂತರ ಕೆಲವು ಕಾಲ ಪ್ಯಾಲೆಸ್ಟೈನ್‌ನ್ನು ರಾಜಗುರುಗಳು ಆಳಿದರು. ಆ ಕಾಲದಲ್ಲಿಯೇ ಕ್ಯಾನನೈಟರೊಡನೆ ಸೇರಿ ಜ್ಯೂಗಳು ಬ್ಯಾಬಿಲೋನಿನ ಸಂಸ್ಕೃತಿಯನ್ನು ಸ್ವೀಕರಿಸಿದರು. ಜ್ಯೂಗಳ ಪ್ರಥನ ಚಕ್ರವರ್ತಿ ಸಾವುಲ. ಅವನಲ್ಲಿ ಬಲಿಷ್ಠವಾದ ಸೈನ್ಯವಿದ್ದಿತ್ತು. ಆದರೆ ಸಿರಿಯಾ—ಪ್ಯಾಲೆಸ್ಟೈನ್ ಸಮುದ್ರ ತೀರ ಭಾಗಗಳಲ್ಲಿ ಪಿಲಿಸ್ಟೈನ್ ಎಂಬವರು ನೆಲೆಸಿ ಸಾವುಲ್‌ನನ್ನ ಸೋಲಿಸಿದರು. ಅವನ ನಂತರ ಡಾವಿಡ್‌ನು ಪಟ್ಟಕ್ಕೆ ಬಂದು ಪಿಲಿಸ್ಟೈನ್‌ರನ್ನು ಸೋಲಿಸಿ ವಿಶಾಲ ಸಾಮ್ರಾಜ್ಯ ಸ್ಥಾಪಿಸಿದನ. ಇವನ ಸಾಮ್ರಾಜ್ಯ ಉತ್ತರದಲ್ಲಿ ಯು ಫರೇಟಿಸ್‌ನಿಂದ ಹಿಡಿದು ದಕ್ಷಿಣದಲ್ಲಿ ಕೆಂಪು ಸಮುದ್ರ ಮತ್ತು ಈಜಿಪ್ತಿನ ವರೆಗೆ ಹಬ್ಬಿತ್ತು. ಇವನು ಜೆರುಸಲೇಮನ್ನು ವಶಪಡಿಸಿಕೊಂಡು ಪ್ರಸಿದ್ಧ ದೇವಾಲಯವನ್ನು ಕಟ್ಟಿಸಲು ಆರಂಭಿಸಿದನು. ಇವನ ಕಾಲದಲ್ಲಿ ವ್ಯಾಪಾರ ಉದ್ಯಮಕ್ಕೆ ಪ್ರೋತ್ಸಾಹವಿದ್ದಿತು. ಜ್ಯೂಗಳು ಈ ಕಾಲದಲ್ಲಿ ಫಿನೀಷಿಯನರೊಡನೆ ಉತ್ತಮ ವ್ಯಾಪಾರ ಸಂಬಂಧವನ್ನು ಹೊಂದಿದ್ದರು. ಬಲಿಷ್ಠ ಸರಕಾರ, ಸೈನಿಕ ಸಾಹಸ ಮತ್ತು ಲೌಕಿಕ ಸಂಪತ್ತು ಡಾವಿಡ್‌ನ ಆಡಳಿತದ ಮುಖ್ಯ ಲಕ್ಷಣಗಳಾಗಿದ್ದವು. ಇವನು ೪೦ ವರ್ಷ ರಾಜ್ಯವಾಳಿದನು.

ಇವನ ಮಗನೊಲೇವನ್ ಬಹು ಬುದ್ಧಿವಂತ ಅರಸನೆಂಬ ಖ್ಯಾತಿ ಪಡೆದಿದ್ದನು. ಇವನು ಅತ್ಯಂತ ರಾಜಕೀಯ ನಿಪುಣನು. ಇವನು ವ್ಯಾಪಾರಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟನು. ಇವನ ಫಿನೀಷಿಯಾ ರಾಜ್ಯದ ಟೈರ್ ನಗರದ ರಾಜನೊಂದಿಗೆ ಮೈತ್ರಿ ಬೆಳೆಸಿದನು. ಜ್ಯೂ ಚಕ್ರವರ್ತಿಗಳಲ್ಲಿ ವಿಲಾಸ ಪ್ರಿಯನೆಂಬ ಬಿರುದು ಸೊಲೇಮನ್‌ನಿಗೆ ಇದೆ. ಇವನು ತನ್ನ ಕಾಲದಲ್ಲಯೇ ಜೆರುಸಲೇವನ್‌ನಲ್ಲಿ ಜಿಹೋವಾ ದೇವಾಲಯವನ್ನೊಳಗೊಂಡು ಹಲವಾರು ದೇವಾಲಯಗಳನ್ನು ಕಟ್ಟಿಸಿ ಕಲಿಗಳಿಗೆ ಪ್ರೋತ್ಸಾಹ ನೀಡಿದನು. ಇವನ ಕಾಲವು ಜ್ಯೂಗಳ ಸುವರ್ಣಯುಗವೆಂದರೆ ತಪ್ಪಾಗಲಾರದು. ಇವನ ನಂತರ ಜ್ಯೂಗಳ ರಾಜ್ಯವು ಒಡೆದು ಉತ್ತರದಲ್ಲಿ ಇಸ್ರೇಲ್ ದಕ್ಷಿಣದಲ್ಲಿ ಜೂಡ್ ಎಂದು ಎರಡು ಭಾಗಗಳಾದುವು. ಅವರಲ್ಲಿ ಆಗಿಂದಾಗ್ಗೆ ಕಲಹ ಮತ್ತು ಕೊಲೆಗಳು ಸಿಂಹಾಸನಕ್ಕೋಸ್ಕರ ನಡೆಯುತ್ತಿದ್ದವು. ಇದರಿಂದಾಗಿ ಯಹೂದ್ಯರಲ್ಲಿ ಅನೈತಿಕತೆ ಉಂಟಾಯಿತು. ಇದು ಕ್ರಿ. ಪೂ. ೫೭೭ರಲ್ಲಿ ನೆಬುಚಡನೆಜರನು ಅವರನ್ನು ಸೋಲಿಸಿ ಗುಲಾಮರನ್ನಾಗಿ ಮಾಡಿ ಬ್ಯಾಬಿಲೋನಿಗೆ ಎಳೆದೊಯ್ಯಲು ಕಾರಣವಾಯಿತು. ೫೦ ವರ್ಷದ ವರೆಗೆ ಯಹೂದ್ಯರು ಗುಲಾಮರಾಗಿ ಜೀವಿಸಿದ್ದರು. ಪರ್ಷಿಯಾ ದೇಶದ ಅರಸ ಬ್ಯಾಬಿಲೋನ್‌ನ್ನು ಗೆದ್ದ ಬಳಿಕ ಜ್ಯೂಗಳು ಹಿಂತಿರುಗಿ ಪ್ಯಾಲೆಸ್ಟೈನ್‌ಗೆ ಬರುವಂತಾಯಿತು. ಪ್ಯಾಲೆಸ್ಟೈನ್‌ಗೆ ಬಂದ ಜ್ಯೂಗಳು ಬ್ಯಾಬಿಲೋನಿನ ಸಂಸ್ಕೃತಿಯಿಂದ ಪ್ರಭಾವಿತರಾಗಿ ತಮ್ಮ ಧರ್ಮ ಮತ್ತು ಸಾಹಿತ್ಯವನ್ನು ಊರ್ಜಿತಗೊಳಿಸಿದರು. ಅಲೆಗ್ಸಾಂಡರ್‌ನ ಧಾಳಿಯಿಂದಾಗಿ ಗ್ರೀಕ್ ಸಂಸ್ಕೃತಿಯು ಅವರ ಮೇಲೆ ಪ್ರಭಾವ ಬೀಳಲಾರಂಭಿಸಿತು. ನಂತರ ರೋಮನರು ಅವರ ರಾಜ್ಯವನ್ನು ಗೆದ್ದು ತಮ್ಮ ಸಾಮ್ರಾಜ್ಯದಲ್ಲಿ ಸೇರಿಸಿಕೊಂಡರು ರೋಮ್ ಸಾಮ್ರಾಜ್ಯದಲ್ಲಿ ಅವರು ಅತ್ಯಪ್ಪ ಪ್ರಜೆಗಳಾಗಿ ಉಳಿಯಬೇಕಾಗಿ ಬಂತು. ಜ್ಯೂಗಳು ರೋಮ್ ಚಕ್ರವರ್ತಿಗಳಿಗೆ ಆಗಿಂದಾಗ್ಗೆ ಉಪಟಳ ಕೊಡುತಿದ್ದರು. ಇದನ್ನು ಸಹಿಸಲಾಗದೆ ಟೈಟಸ್ ಎಂಬ ರೋಮ್ ಚಕ್ರವರ್ತಿ ಕ್ರಿ. ಶ. ೭೦ರಲ್ಲಿ ಹೀಬ್ರು ರಾಜ್ಯವನ್ನು ನಾಶಪಡಿಸಿ ಅವರನ್ನು ಜಗತ್ತಿನ ಮೂಲೆ ಮೂಲೆಗಳಿಗೆ ಚದರಿಸಿದನು. ಅಂದಿನಿಂದ ಯಹೂದ್ಯರು ತಮ್ಮ ರಾಜ್ಯವನ್ನು ಕಳೆದುಕೊಂಡು ಜಗತ್ತಿನ ಮೂಲೆ ಮೂಲೆಗಳಲ್ಲಿ ತಮ್ಮ ಸಂಸ್ಕೃತಿಯನ್ನು ಬಹಳ ಶ್ರದ್ಧೆಯಿಂದ ಕಾಪಾಡಿಕೊಂಡ ಗಡಿಯಲ್ಲಿ ತನಕವೂ ಜೀವಿಸುತಿದ್ದರು.

ಅಡಳಿತ ಕ್ರಮ: ಇನ್ನಿತರ ಸುಸಂಸ್ಕೃತ ಜನರಂತೆ ಜ್ಯೂಗಳು ಅಡಳಿತಕ್ಕೆ ಹೆಚ್ಚಿನ ಆಸಕ್ತಿ ತೋರಿದ್ದಾರು. ರಾಜ್ಯ ದೇವರದ್ದಾಗಿಯೂ ಅರಸುಗಳ ದೇವರ ಪ್ರತಿನಿಧಿಯೆಂದೂ ಜ್ಯೂಗಳು ನಂಬಿದ್ದರು. ಅವರ ರಾಜ್ಯವು ೧೨ ವಿಭಾಗಗಳಾಗಿ ವಿಂಗಡಿಸಲ್ಪಟ್ಟು ಪ್ರತಿಯೊಂದು ವಿಭಾಗಕ್ಕೆ ರಾಜನ ಪ್ರತಿನಿಧಿಗಳು ಇರುತ್ತಿದ್ದರು. ರಾಜಪ್ರತಿನಿಧಿ ಮೇಲೆ ರಾಜನಿಗೆ ಬಲವಾದ ಹಿಡಿತವಿದ್ದಿತ್ತು. ಅರಸರು ನ್ಯಾಯ ಪರಿಪಾಲನೆಯಲ್ಲಿ ಹೆಚ್ಚಿನ ಶ್ರದ್ಧೆಯನ್ನಿತ್ತಿದ್ದರು. ದೇಶದಲ್ಲಿ ಯೋಗ್ಯವಾದ ನ್ಯಾಯ ಪರಿಪಾಲನ ನಡೆಯುತಿತ್ತು. ಪ್ರತಿ ಜಿಲ್ಲೆಗೊಂದು ನ್ಯಾಯಾಲಯವಿದ್ದಿತ್ತು. ಅರಸನು ಸರ್ವೋನ್ನತ ನ್ಯಾಯಾಧೀಶನಾಗಿ ಕೆಳ ಕೋರ್ಟಿನಿಂದ ಅಪೀಲನ್ನು ಕೇಳಿ ಪ್ರಜೆಗಳಿಗೆ ನ್ಯಾಯ ನೀಡುತಿದ್ದನು. ಪ್ರಜೆಗಳು ಹಲವಾರು ಬಗೆಯ ತೆರಿಗೆಗಳನ್ನು ಅರಸರಿಗೆ ಕೊಡುತಿದ್ದರು. ಕೆಲವು ಅರಸರು ವಿಪರೀತ ತೆರಿಗೆಯನ್ನು ಹೇರಿಸಿದಾಗ ಜನರು ಅಶ್ರುತರಾಗಿ ದಂಗೆ ಎದ್ದು ತಮಗೆ ಬೇಕಾದ ರಾಜರನ್ನು ನೇಮಿಸಿದ ಉದಾಹರಣೆ ಅವರ ಚರಿತ್ರೆಯಲ್ಲಿ ಸಿಗುತ್ತದೆ.

ಸಾಮಾಜಿಕ ಜೀವನ: ಪ್ಯಾಲೆಸ್ಟೈನಿಗೆ ಬರುವ ಪೂರ್ವದಲ್ಲಿ ಜ್ಯೂಗಳು ೧೨ ಪಂಗಡಗಳಾಗಿ ಅರೇಬಿಯಾ ಮರುಭೂಮಿಯಲ್ಲಿ ಪಶುಪಾಲನೆ ವೃತ್ತಿಯನ್ನು ಅವಲಂಬಿಸಿದ್ದರು. ಈ ಪಂಗಡಗಳನ್ನೆಲ್ಲಾ ಒಂದುಗೂಡಿಸಿದ ಕೀರ್ತಿ ಅಬ್ರಹಾಮನಿಗೆ ಸಲ್ಲುತ್ತದೆ. ಅವರ ಕುಟುಂಬ ಪಿತೃ ಪ್ರಧಾನವಾಗಿತ್ತು. ಕುಟುಂಬದ ಯಜಮಾನನಿಗೆ ಸಮಸ್ತ ಸಂಪತ್ತಿನ ಮೇಲೂ

(ಹದಿಮೂರನೇ ಪುಟ ನೋಡಿರಿ)

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಹಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು
ವಿವರಿಸುವ ಕೈಪಿಡಿ
ಬೆಲೆ 0—50 ಪೈಸೆ ಮಾತ್ರ.
0-60 ಪೈಸೆ M. O. ಮಾಡಿ, ಯಾ ಸ್ಟ್ಯಾಂಪು ಕಳಿಸಿ ಒಂದು ಪ್ರತಿಯನ್ನು
ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ
ಪಾಲುಕೋಟೆ, ಉಡುಪಿ, ದ. ಕ.

ನೀವು ನಂಬುತ್ತೀರಾ?

ಭೀಮನೂ ಕಣ್ಣೀರು ಸುರಿಸಿದ

ಬರೆದವರು : ಶ್ರೀ ಪ್ರೇಮನಾಥ ಚೈ ಕರಣ್.

ಕುವೂರವ್ಯಾಸ, ಭಾರತದಲ್ಲಿ ಸೃಷ್ಟಿಸಿರುವ ಭೀಮ ಸತ್ವ ಮೂರ್ತಿ, ಧೈರ್ಯಶಾಲಿ. ಇಲ್ಲಿ ಭೀಮನ ಪಾತ್ರವನ್ನು ಕುವೂರವ್ಯಾಸ ಸುಲಭ ಸುಂದರವಾಗಿ ಕಡೆದಿದ್ದಾನೆ. ಇಂತಹ, ಸಹ್ಯ ಶಾಲಿ, ಧೈರ್ಯ ಮೂರ್ತಿ, ಗಂಭೀರವೇ ಮೂರ್ತಿವೆತ್ತ ಭೀಮ, ಕೆಲವೊಮ್ಮೆ ಕಠಿಣ ಹೃದಯಿಯಾಗಿದ್ದರೂ ಕೂಡ, ತನ್ನ ಜೀವ ಮಾನ ಲ್ಲಿ ಒಂದೇ ಒಂದು ಸಾರಿ ಕಣ್ಣೀರಿಕ್ಕಿ ನೆಂದರೆ ಅತ್ಯಂತ ಆಶ್ಚರ್ಯ, ವಿಸ್ಮಯ ಕಾರಿ, ಸಂಗತಿಯಾದೀತು. ಭೀಮನೂ ಅತ್ತನೇ?—ಎಂದು ಎಲ್ಲರೂ ಕೇಳುತ್ತದು, ಆಶ್ಚರ್ಯಪಡುವುದು ಸಹಜವಾಗಿದೆ. ಭೀಮಸೇನ ಎರಡೇ ಎರಡು ಬಾರಿ ಕಣ್ಣೀರಿಡಬೇಕಾದರೆ, ಆ ಪ್ರಸಂಗ, ಅತನಿಗೆ ಅತ್ಯಂತ ಬಿದುರಾಘಾತವಾಗಿದ್ದಿರಲೇ ಬೇಕಲ್ಲವೇ? [ಆ ಎರಡು ಪ್ರಸಂಗಗಳ ಕುರಿತು ಇಲ್ಲಿ ವಿವೇಚಿಸುತ್ತೇನೆ.]

ಅಸೂಯೆಯು ವಿತ್ತು, ಕೌರವರ ಹೃದಯದಲ್ಲಿ, ಅವರು ಹುಟ್ಟುವಾಗಲೇ ಹುಟ್ಟಿತ್ತು. ಅವರು ಬೆಳೆದಂತೆಲ್ಲ, ಅದೂ ಬೆಳೆದು ಹೆಮ್ಮರವಾಗಿ, ದ್ವೇಷಕ್ಕೆ ತಿರುಗಿತ್ತು. ಪಾಂಡವರಲ್ಲಿ, ಅತ್ಯಂತ ಬಲಶಾಲಿಯೂಗಿ ಮೆರೆಯುತ್ತಿದ್ದ ಭೀಮಸೇನನನ್ನು ನೋಡಿ ದುರ್ಯೋಧನ ಮನದೊಳಗೇ ಕಡಿಯುತ್ತಿದ್ದನು. ಅದಲ್ಲದೇ, ಪಾಂಡವರ ಶಕ್ತಿ ಸಾಮರ್ಥ್ಯವನ್ನೂ, ದಿನ ಹೋದಂತೆಲ್ಲಾ, ಬೆಳಗುತ್ತಿರುವ ಅವರ ಪ್ರತಿಭೆಯನ್ನೂ, ಕೀರ್ತಿಯನ್ನೂ, ಚಿವುಟಿ ಹಾಕಲು ಬಹಳಷ್ಟು ಬಾರಿ ಪ್ರಯತ್ನ ಪಟ್ಟು ದುರ್ಯೋಧನ ವಿಫಲನಾಗಿದ್ದನು. ತನ್ನ ಪಟ್ಟಕ್ಕೆ ಪಾಂಡವರೂ ಧರ್ಮದಾಯನೂ, ಸಂಚಕಾರಿಯೂಆದುದು, ಅತನಿಗೆ ಎಳ್ಳಷ್ಟೂ ಇಷ್ಟವಿರಲಿಲ್ಲ. ಕೊನೆಗೆ ತನ್ನ ತಂದೆಯೂ ಆದ ಧೃತರಾಷ್ಟ್ರನಿಗೇ ಮರೆಹೋಗುತ್ತಾನೆ, ದುರ್ಯೋಧನ. ಉಕ್ಕುತ್ತಿರುವ ಮಗನ ಮೇಲಿನ ಮಮತೆಯನ್ನು ಹತ್ತಿಕ್ಕಲಾರದೆ, ಧೃತರಾಷ್ಟ್ರ, ಧರ್ಮಬಾಹಿರವಾದ ಕಾರ್ಯಕ್ಕೆ 'ಅಸ್ತು' ಎನ್ನುತ್ತಾನೆ. ಪಾಂಡವರೊಡನೆ, ವಾರಣಾವತದ ಸೊಬಗನ್ನು ಬಣ್ಣಿಸುತ್ತಾನೆ. ಅವರನ್ನು ಕೆಲವು ದಿನಗಳ ವರೆಗೆ ಅಲ್ಲಿಗೆ ಕಳುಹಿಸುತ್ತಾನೆ. ಅಲ್ಲಿ ದುರ್ಯೋಧನ, ಅವರಿಗಾಗಿ, ಪುರೋಚನನೊಡನೆ ಸಮಾಲೋಚಿಸಿ, ಒಂದು ಅರಗಿನ ಅರಮನೆಯನ್ನು ಕಟ್ಟುವನು. ಆ ಮನೆಯು ಹೊರಗಿನ ಆಡಂಬರಕ್ಕೆ ಬಲಿಬಿದ್ದ ಪಾಂಡವರು ಅಲ್ಲೇ ಉಳಿಯಲು ನಿರ್ಧರಿಸುತ್ತಾರೆ. ಆದರೆ ವಿವೇಕಶಾಲಿ ಧರ್ಮರಾಯನಿಗೂ, ಸೂಕ್ಷ್ಮ ಬುದ್ಧಿ ವಿದುರನಿಗೂ ಎಷ್ಟೋ "ಉರುಳಲು ಮನ" —ಎಂದು ತಿಳಿದು ಹೋಗುತ್ತಿದೆ. ಪಾಂಡವರನ್ನು ಕಾಪಾಡಲು ವಿದುರ ಒಬ್ಬ ಅಗತೆಯವನನ್ನು ಕಳುಹಿಸಿ, ಅವನಿಂದ, ಅವರ ರಕ್ಷಣೆಗೆ ಸಹಕಾರಿಯಾಗುವ ಒಂದು ಬಿಲವನ್ನು ತೋಡಿಸಿ, ಅದರ ಬಾಯನ್ನು ಏಬು ಕಾಣದಂತೆ ಮಾಚ್ಚಿಸುತ್ತಾನೆ. ಪಾಂಡವರಾದರೋ ನಂಬಿಕೆಯಿಲ್ಲದಿದ್ದರೂ, ನಂಬಿಕೆ ಇದ್ದಂತೆಯೂ, ಅತ್ಯಪ್ರರಾಗಿದ್ದರೂ ತೃಪ್ತರಾಗಿದ್ದಂತೆಯೂ, ನಟಿಸುತ್ತ, ಪುರೋಚನನ್ನು ನಂಬಿಸಿ, ಮುಳ್ಳಿನ ಮೇಲೆ ಇದ್ದರು. ಹೀಗೆ ಒಂದು ವರ್ಷ ಕಾಲ ಕಳೆಯಿತು. ಪಾಂಡವರಿಗೆ ಇನ್ನೂ ಸಂದೇಹ ಬಂದಿಲ್ಲ ಎಂದು ತಿಳಿದ ಪುರೋಚನನು, ಒಂದು ರಾತ್ರಿ ಆ ಮನೆಯನ್ನು ಹೊತ್ತಿಸುತ್ತಾನೆ. ಆದರೆ ಜಾಗರೂಕರಾಗಿದ್ದ ಪಾಂಡವರು ಮೊದಲೇ ತೋಡಿದ್ದ ಬಿಲದ ಮೂಲಕ ಪಾರಾಗುತ್ತಾರೆ ಆದರು ಬೇಗಬೇಗನೇ ಹೋಗಲಾಗದ ಅವರನ್ನು ಆಪದ್ಬಾಂಧವ ಭೀಮಸೇನ, ಹೊತ್ತುಕೊಂಡು ವಾಯುವೇಗದಿಂದ ನಡೆಯುತ್ತಾನೆ. ಬೆಳಗಾದ ಕೂಡಲೇ, ಅರಗಿನ ಮನೆಯಲ್ಲಿ, ಸಿಕ್ಕ ಒಬ್ಬ ಬೇಡಿತಿ ಮತ್ತು ಆಕೆಯ ಐದು ಮಕ್ಕಳ ಕರಿಕಲಾದ ದೇಹವನ್ನು ಕಂಡು ಕೌರವರು, ಸಮಾಧಾನ ಪಡುತ್ತಾರೆ. ಇತ್ತ ಪಾಂಡವರನ್ನು ಹೊತ್ತ ಭೀಮಸೇನ, ಅರಣ್ಯವನ್ನು ಸೇರುತ್ತಾನೆ, ಅವರನ್ನು ಒಂದು ಮರದ ಕೆಳಗೆ ಕೂರಿಸಿ, ವಿಶ್ರಮಿಸಿಕೊಳ್ಳಲು ಹೇಳಿ, ಬಾಯಾರಿದ ಅವರಿಗೆ ನೀರು ತರಲು, ತಾನೊಬ್ಬನೇ ಹೋಗುತ್ತಾನೆ. ಆದರೆ ಆತ ಹಿಂದಿರುಗಿ ಬರುವಾಗ ಎಲ್ಲರೂ, ನೆಲದ ಮೇಲೆ ನಿದ್ರಿಸುತ್ತಿದ್ದಾರೆ. ಅದನ್ನು ಕಂಡು ಅವನಿಗೆ ತುಂಬಾ ದುಃಖವಾಗಿ ಅಯ್ಯೋ! ವಾರಣಾವತದಲ್ಲಿ ಸೊಗಸಾದ ಸುಪ್ಪತ್ತಿಗೆ ಮೇಲೆ ಮಲಗಿಯೂ, ನಿದ್ರೆ ಬಾರದಿದ್ದವರು ಇಲ್ಲಿ ನೆಲದ ಮೇಲೆ ಮಲಗಿ ನಿದ್ರೆ ಮಾಡುತ್ತಿದ್ದಾರೆ. ಈ ಕುಂತಿ, ಕುಂತಿ ಭೋಜನ ಮಗಳು. ಪಾಂಡುರಾಜನ ಹೆಂಡತಿ, ಉಪ್ಪರಿಗೆಯ ಮನೆಯಲ್ಲಿ ಕಮಲದಂಥ ಹಾಸಿಗೆಯಲ್ಲಿ ಮಲಗುತ್ತಿದ್ದ ಸುಕುಮಾರಿ, ಧರ್ಮ, ಇಂದ್ರ, ವಾಯು ಗಳಿಂದ ಮಕ್ಕಳನ್ನು ಪಡೆದವಳು, ಇಂಥವಳು ಆಯಾಸ ಪಟ್ಟು, ನೆಲದ ಮೇಲೆ ಮಲಗಿ ನಿದ್ರಿಸಾಡುವುದನ್ನು ನೋಡುವುದಕ್ಕಿಂತ ಇನ್ನೇನು ಇದ್ದೀತು? ಮೂರು ಲೋಕಕ್ಕೂ, ರಾಜನಾಗಿರಲು, ಅರ್ಹನಾದ ಈ ಧರ್ಮಾತ್ಮನೂ, ಲೋಕೋತ್ತರನಾದ, ಈ ಅರ್ಜುನನೂ, ದಿವ್ಯ ಸುಂದರರಾದ ಈ ನಕುಲ ಸಹದೇವರೂ, ಬಳಲಿ ಬಡಜನರಂತೆ ನೆಲದಮೇಲೆ ಕಲ್ಲು ಮುಳ್ಳಿನ ಮೇಲೆ ನಿದ್ರೆ ಹೋಗುತ್ತಿದ್ದಾರಲ್ಲ? ಇದಕ್ಕಿಂತ ದುಃಖಕರವಾ

(ಹನ್ನೆರಡನೇ ಪುಟ ನೋಡಿರಿ)

ಸಮಯ ಯಾರಿಗೂ ಕಾದುಕೊಂಡು ಇರುವುದಿಲ್ಲ

ನಿಮ್ಮ ಪ್ರೀತಿಪಾತ್ರರಾದವರೆ, ನಿಮ್ಮ ಕುಟುಂಬದವರ ಭವಿಷ್ಯವು ಸುರಕ್ಷಿತ ಹಾಗೂ ಸುಖಮಯವಾಗುವಂತೆ ಅವರಿಗಾಗಿ ಸರಿಯಾದ ಆರ್ಥಿಕ ವ್ಯವಸ್ಥೆಯನ್ನು ಮಾಡುವಂಥ ಮುಖ್ಯ ವಿಷಯಕ್ಕೆ ಈ ಮಾತು ವಿಶೇಷವಾಗಿ ಅನ್ವಯಿಸುತ್ತದೆ. ಜೀವನವು ಅನಿಶ್ಚಿತವಾದದ್ದು — ಅವರು ನಿರ್ಗತಿಕ ಹಾಗೂ ನಿರಾಶ್ರಿತರಾಗದಂತೆ ಜಾಗರೂಕತೆ ವಹಿಸಿರಿ. ಇಂದೇ ನಿಮ್ಮ ಮೃತ್ಯುಪತ್ರ ಬರೆದಿಡಿ.



ನಿಮ್ಮ ಆಸ್ತಿಪಾಸ್ತಿ, ಧನಸಂಪತ್ತು ಎಷ್ಟೇ ಇರಲಿ, ಕೆನರಾ ಬ್ಯಾಂಕು ನಿಮ್ಮ 'ಎಗ್ಸಿಕ್ಯೂಟರ್' ಅಥವಾ 'ಟ್ರಸ್ಟಿ'ಯಾಗಿ ವ್ಯವಹರಿಸಲು ಸದಾ ಸಿದ್ಧವಾಗಿದೆ. ಹಾಗೆ ಮಾಡುವುದರಿಂದ ನಿಮ್ಮ ಮೆನೆಯವರ ಭವಿಷ್ಯವು ಭದ್ರವಾಗಿರುತ್ತದೆ. ಈ ವಿಸಾರ್ಟನ್ನು ನೀವು ಈ ವರೆಗೆ ಮಾಡಿರದಿದ್ದರೆ ಇಂದೇ ಕೆನರಾ ಬ್ಯಾಂಕನ್ನು ಸಂದರ್ಶಿಸಿರಿ-ವಿಳಂಬ ಮಾಡಬೇಡಿರಿ. ಸಮಯವು ಯಾರಿಗೂ ಕಾದುಕೊಂಡಿರುವುದಿಲ್ಲ

ಸಾಧನ ಸಂಪತ್ತು ರೂಪಾಯಿ 123 ಕೋಟಿಗಳಿಗೆಂತಲೂ ಅಧಿಕ.
—240ಕ್ಕಿಂತಲೂ ಹೆಚ್ಚು ಶಾಖೆಗಳು
—ಅಗತ್ಯಾನುಸಾರ ವ್ಯವಹಾರ

CANARA BANK LTD ESTD 1906

ಕೆನರಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ : ಲೈಟ್‌ಹೌಸ್ ಹಿಲ್, ಮಂಗಳೂರು · ಆಡಳಿತ ಆಫೀಸ್ : 112, ಜಯಚಾಮರಾಜೇಂದ್ರ ರೋಡ್, ಬೆಂಗಳೂರು.

SISTA'S-CB-33 KAN

ಯಂತ್ರಿಕ ಯುಗದ ಜೀವಿಗಳ ಭಯಾನಕ ಶತ್ರು

ಕ್ಯಾನ್ಸರ್

ಲೇಖಕಃ ಶ್ರೀ ಸಿ. ಎಸ್. ನಾಗರಾಜ, ಮೈಸೂರು.

ಯುನೈಟೆಡ್ ಸ್ಟೇಟ್ಸ್‌ನಲ್ಲಿ ಪ್ರತಿವರ್ಷವೂ ಆರ್ಥಮಿಲಿಯನ್ನಿನಷ್ಟು ಜನ ಕ್ಯಾನ್ಸರ್ ವ್ಯಾಧಿ ಹೊಂದುತ್ತಿದ್ದರೆಂದು ಇತ್ತೀಚಿನ ವರದಿಗಳಿಂದ ತಿಳಿದು ಬಂದಿದೆ. ಪ್ರತಿವರ್ಷ ಮರಣ ಹೊಂದುವವರ (ಕ್ಯಾನ್ಸರ್‌ನಿಂಗ್) ಸಂಖ್ಯೆ ಮೇಲಿನದರಲ್ಲಿ ಅರ್ಧದಷ್ಟು.

ಶ್ವಾಸಕೋಶದ ಕ್ಯಾನ್ಸರ್ ವ್ಯಾಧಿಯು ಆಲ್ಲಿ ಇತರ ಪ್ರಾಯಿಲೆಗಳಿಗಿಂತ ಶೀಘ್ರವಾಗಿ ಹೆಚ್ಚುತ್ತಿದೆ ಎಂದೂ ತಿಳಿದು ಬಂದಿದೆ. ಪ್ರತಿವರ್ಷ ಈ ಶ್ವಾಸಕೋಶದ ಕ್ಯಾನ್ಸರ್‌ನಿಂದ ೫೫,೦೦೦ಜನ ಅಮೆರಿಕನ್ನರು ಅಸುನೀಗುತ್ತಿದ್ದಾರಲ್ಲದೆ, ಅದರಲ್ಲಿ ಕೇ. ಲಜಗಷ್ಟು ಪುರುಷರೇ ಆಗಿದ್ದಾರೆ. ವಿಸರೀತ ಧೂಮಪಾನ ಮಾಡುವವರು ಸಾಯುವ ಸಂಖ್ಯೆ ಧೂಮಪಾನ ಮಾಡದೆ ಇರುವವರು ಸಾಯುವ ಸಂಖ್ಯೆಗಿಂತ ೩೫ ಪಟ್ಟು ಜಾಸ್ತಿ ಇದೆ.

ಕ್ಯಾನ್ಸರ್‌ವ್ಯಾಧಿ ಬರಲು ಹಲವಾರು ಬಲವಾದ ಕಾರಣಗಳಿವೆ. ೧. ಅನುವಂಶೀಯತೆ (Heridity)

ಇದರಿಂದ ಕ್ಯಾನ್ಸರ್ ಬರುವುದು ಬಹಳ ಕಡಿಮೆ ಆದರೂ ಕ್ಯಾನ್ಸರ್ ಪೀಡಿತ ವಂಶದವರು ಇತರರಿಗಿಂತ ಸ್ವಲ್ಪ ಹೋರಾಟ ನಡೆಸುತ್ತಾರೆ.

೨. ರಶ್ಮಿಪಸರಣದಿಂದ

ಮೇಲಿಂದ ಮೇಲೆ ದೇಹವನ್ನು ಎಕ್ಸ್‌ರೇ, ಕೆಡಿಯಂಗಳಿಗಾಗಲೀ, ನೀಲಲೋಹಿತಾತೀತ ಸರಣಿಗಳಿಗೆ ಆಗಲಿ, ಅಧಿಕಕಕ್ತಿಗೆ ಸಂಬಂಧಿಸಿದ ಕೆಡಿಯಂಗಳಿಗಾಗಲೀ ವಿಸರೀತ ಗೂರ್ಯನ ಬೇಕಿನ ಕೆಡಿಯಂಗಳಿಗೆ (ದೇಹವನ್ನು) ತೆರೆದಿಡುವುದು ಕ್ಯಾನ್ಸರ್ ಬರಲು ಕಾರಣಗಳಲ್ಲೊಂದು ಎಂದು ವಿಜ್ಞಾನಿಗಳು ಅಭಿಪ್ರಾಯ ಪಡತ್ತಾರೆ.

೩. ಹಾನಿಕಾರಕ ರಾಸಾಯನಿಕ ವಸ್ತುಗಳು.

ಸಿಗರೇಟಿನ ಹೊಗೆಯಲ್ಲಿರುತಕ್ಕಂಥ ವಿಷಯುಕ್ತ ರಾಸಾಯನಿಕ ವಸ್ತು ಆಥ್ರಾ ಆಬ್ಸೋಗ್ಯಾಲೀನ್ ಎಂಬುದಾಗಲಿ ದೇಹದ ಮೇಲೆ ಪರಿಣಾಮ ಬೀರುತ್ತದಲ್ಲದೆ ಇದರಿಂದ ಕ್ಯಾನ್ಸರ್ ಬೇಗ ಬರುತ್ತದೆ.

೪ ವೇದನೆಯನ್ನುಂಟು ಮಾಡುವುದರಿಂದ ದೇಹದ ಯಾವುದಾದರೊಂದು ಭಾಗವನ್ನು ಸತತವಾಗಿ ಕೆಚ್ಚಿಸುವುದರಿಂದ ಕ್ಯಾನ್ಸರ್ ಬರುವುದು ಸಾಧ್ಯ.

ಜ ನೈರಸ್‌ಗಳಿಂದ

ಕೆಲವು ನೈರಸ್‌ಗಳು ದೇಹದೊಳಕ್ಕೆ ಪ್ರವೇಶ ಮಾಡಿದರೆ ಕ್ಯಾನ್ಸರ್ ಬರುತ್ತದೆಂಬುದು ಕೆಲವರ ಮತವಾಗಿದೆ. ಆದರೆ ಇದು ಕೇವಲ ಪುಸ್ತಕದ "ಥಿಯರಿ" ಆಗಿಯೇ ಉಳಿದಿದೆ. ಇದು ಮತ್ತೆ ಕೆಲವರ ಅಭಿಮತ.

ಕ್ಯಾನ್ಸರ್‌ನ ವಿರುದ್ಧ ಕ್ರಮಗಳು

ಕ್ಯಾನ್ಸರ್ ಪೀಡಿತ ಭಾಗವನ್ನು ಶಸ್ತ್ರ ಚಿಕಿತ್ಸೆಯ ಮೂಲಕ ನಿರ್ಮೂಲನಗೊಳಿಸುವುದು, ಆಥವಾ ಆ ಭಾಗಕ್ಕೆ "ರೇಡಿಯೇಷನ್" ಚಿಕಿತ್ಸೆ ನಡೆಸುವುದು ಇದರಿಂದ ಕ್ಯಾನ್ಸರ್ ಹಾವಳಿ ಸ್ವಲ್ಪ ಮಟ್ಟಿಗೆ ತಡೆಗಟ್ಟಬಹುದು. ಆಸಾಧ್ಯವೆನಿಸಿದ್ದ ಕ್ಯಾನ್ಸರ್ ಖಾಯಿಲೆಯ ನಿವಾರಣೆ ಇತ್ತೀಚಿನ ಕಷ್ಟಕರವಾದ ಶಸ್ತ್ರಕ್ರಿಯೆಗಳಿಂದ ಸಾಧ್ಯವೆನಿಸಿದೆ. ಇಷ್ಟಾದರೂ ಕ್ಯಾನ್ಸರ್ ರೋಗದ ಮೂಲವಾವುದು? ಅದರ ನಿರ್ಮೂಲನ ಕ್ರಮ ಹೇಗೆ? ಎಂಬೆರಡು ಪ್ರಶ್ನೆಗಳು ಹಗಲೂ ರಾತ್ರಿ ವಿಜ್ಞಾನಿಗಳನ್ನು ಪೀಡಿಸುತ್ತಿವೆ.

ಕ್ಯಾನ್ಸರ್ ವಿರುದ್ಧ ಔಷಧಿಗಳು

ವಿಜ್ಞಾನಿಗಳೂ ಡಾಕ್ಟರುಗಳೂ ಸೇರಿ ಔಷಧಿಗಳನ್ನು (ಕ್ಯಾನ್ಸರ್ ವಿರುದ್ಧ) ತಯಾರಿಸುತ್ತಿದ್ದಾರೆ. ಹೀಗೆ ಇವರುತಯಾರಿಸಿದವಸ್ತುಗಳಬ್ಬಿಗೆ ಮಾಹಿತಿ ನೀಡುವರಾತ್ರವೇ "ಕೇಮೋಥೀರಾಫೀ" ಕೇಮೋಥೀರಾಫೀಯಿಂದ ಕ್ಯಾನ್ಸರ್ ನಿವಾರಣೆಗೆ ಸೂಕ್ತ ಸಲಹೆಗಳನ್ನು ಪಡೆಯಬಹುದು.

ಕೇಮೋಥಿರಾಫೀಪ್ರಕಾರ ಇನ್ನೂ ಒಂದು ಮಿಲಿಯನ್ನಿನಷ್ಟು ರಾಸಾಯನಿಕ ವಸ್ತುಗಳ ಬಗ್ಗೆ ಪರೀಕ್ಷೆ ನಡೆಸಬೇಕಾಗಿದೆ. ಇಲ್ಲಿಯ ವರೆವಿಗೆ ಸಾವಿರಾರು ರಾಸಾಯನಿಕಗಳ ಬಗ್ಗೆ ಪರಿಶೀಲನೆ ನಡೆಸಲಾಗಿದೆ. ಆದರೆ ಕೇವಲ ೭೦ ರಾಸಾಯನಿಕ ವಸ್ತುಗಳು ಮಾತ್ರವೇ ಕ್ಯಾನ್ಸರ್ ರೋಗಿಯ ನರಳುವಿಕೆಯನ್ನು ಕಡಿಮೆ ಮಾಡುವುದರಲ್ಲಿ ಜಯಶೀಲವಾಗಿದೆಯಲ್ಲದೆ ಅವನ ಜೀವಿತ ಕಾಲವನ್ನೂ ಜಾಸ್ತಿಮಾಡಬಲ್ಲದ್ದೆಂದು ಪ್ರಯೋಗಾಲಯಗಳು ತಿಳಿಸಿವೆ. ಆದರೂ ಈ ರಾಸಾಯನಿಕ ವಸ್ತುಗಳು ಶಾಶ್ವತವಲ್ಲವೆಂದೂ ಕೆಲವೇ ದಿನಗಳಲ್ಲಿ ಕ್ಯಾನ್ಸರ್ ತನ್ನ ಶಕ್ತಿಯನ್ನು ಪ್ರತಿರೋಧಿಸಿ ರೋಗಿಗಳನ್ನು ಬಲಿ ತೆಗೆದುಕೊಳ್ಳುದೆ ಇರುವುದಿಲ್ಲವೆಂದೂ ಅದೇ ಪ್ರಯೋಗಾಲಯಗಳು ತಿಳಿಸಿವೆ.

ವಿಶ್ವದ ನಾನಾ ಮೂಲೆಗಳಿಂದ ಪ್ರತಿದಿನ ಬರುವ ವರೀಕ್ಷಿಸಿದ, ಪರೀಕ್ಷೆಗೆ ವಿಧವಿಧವಾದ ರಾಸಾಯನಿಕ ವಸ್ತುಗಳನ್ನು ಅಮೇರಿಕಾದ ವಿಜ್ಞಾನಿಗಳು ಹಗಲಿರುಳು ಪರೀಕ್ಷಿಸುತ್ತಿದ್ದಾರೆ. ಕ್ಯಾನ್ಸರ್ ರೋಗ ನಿವಾರಣೆಯಲ್ಲಿ ಆ ವಸ್ತುಗಳ ಪಾತ್ರವೇನೆಂದೂ, ಶಕ್ತಿ ಏನೆಂದೂ ತಿಳಿಯಲು ಅವರು ತವಕಪಡುತ್ತಿದ್ದಾರೆ. ಆದರೆ ಹಾಗೆ ಬರುತ್ತಿರುವ ಬಹಳಷ್ಟು ರಾಸಾಯನಿಕ ಪದಾರ್ಥಗಳು ನಿರುಪಯೋಗಿಗಳೆಂದೂ ಸ್ಥಿರಪಟ್ಟಿದೆ. ಆದರೆ ಕೇವಲ ೫೦೦ ರಾಸಾಯನಿಕ ಪದಾರ್ಥಗಳು ಮಾತ್ರ ಪ್ರಥಮ ಪರೀಕ್ಷೆಯಲ್ಲಿ ಉತ್ತೀರ್ಣವಾಗಿವೆ. ಈ ಉತ್ತೀರ್ಣವಾದ ಪದಾರ್ಥಗಳನ್ನು ಪ್ರಯೋಗಾಲಯದ ಕ್ಯಾನ್ಸರ್ ವ್ಯಾಧಿ ಬಂದಿರುವ ನಾನಾ ಪ್ರಾಣಿಗಳ ಮೇಲೆ ಪ್ರಯೋಗಿಸಲಾಗಿದ್ದು, ಇದರಿಂದ ಪ್ರಯೋಗಿಸಲಾದ ರಾಸಾಯನಿಕ ಪದಾರ್ಥಗಳು ಕ್ಯಾನ್ಸರ್ ಪೀಡಿತ ಜೀವಕೋಶಗಳನ್ನು ಹೃವೇತಿಸುವ ವಿಧಾನ, ಪ್ರಕ್ರಿಯೆ ಪರಿಣಾಮ, ಆ ರಾಸಾಯನಿಕ ವಸ್ತುವಿನ ಎಷ್ಟು ಭಾಗ ಒಳ್ಳೆಯದು? ಎಂಬ ಹಲವಾರು ಉಪಯುಕ್ತ ವಿಷಯಗಳನ್ನು ತಿಳಿಯಬಹುದು.

ಒಂದು ಕ್ಯಾನ್ಸರ್ ನಿವಾರಕ ರಾಸಾಯನಿಕ ಪದಾರ್ಥದ ಸಂಪೂರ್ಣ ಪರೀಕ್ಷೆಗೆ ೧೩ ವರ್ಷಗಳು ಹಿಡಿಯುತ್ತದೆ. ಹೀಗಿರುವಲ್ಲಿ ನಾವಿರಕ್ಕೊಂದು ರಾಸಾಯನಿಕ ವಸ್ತುವು ಕ್ಯಾನ್ಸರ್ ಪೀಡಿತ ಭಾಗವನ್ನು ನಿರ್ಮೂಲನಗೊಳಿಸುವುದರಲ್ಲಿ ಜಯಶೀಲವಾಗುತ್ತದೆಯೆಂದು ವಿಜ್ಞಾನಿಗಳು ತಿಳಿಸಿದ್ದಾರಲ್ಲದೆ, ಆದೇ ವಸ್ತುವು ದೇಹದ ಇತರ ಆರೋಗ್ಯ ಜೀವ ಕೋಶಗಳನ್ನೂ ನಾಶ ಮಾಡುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆಂದೂ ತಿಳಿಸಿದ್ದಾರೆ. ಇದೀಗ ವಿಜ್ಞಾನಿಗಳಿಗೆ ಹೀಕಲಾಟಕ್ಕೆಟ್ಟು ಕೊಂಡಿದೆ.

ಆಶಾದಾಯಕ ಮುನ್ನಡೆ

ಕ್ಯಾನ್ಸರ್ ವ್ಯಾಧಿಯು ನಿರ್ಮೂಲನೆ ತುಂಬಾ ಕಷ್ಟಕರ ಏಕೆಂದರೆ, ಕ್ಯಾನ್ಸರ್ ಪೀಡಿತ ಜೀವಕೋಶಗಳನ್ನೂ ಪರೀಕ್ಷಿಸಿದ ಒಂದು ಔಷಧದ ಸಂಪರ್ಕವನ್ನೇರ್ಪಡಿಸಿದಲ್ಲಿ ಕ್ರಮೇಣವಾಗಿ ಆ ಔಷಧ ತನ್ನ ನಿರೋಧ ಶಕ್ತಿಯನ್ನು ಕ್ಯಾನ್ಸರ್ ಮೇಲೆಬೀರುತ್ತದೆ. ಸ್ವಲ್ಪ ಔಷಧ ಉಪಯೋಗಿಸಿದರೆ ನಿರೋಧಕ ಶಕ್ತಿ ಕಾಗ್ಗುತ್ತದೆ ಮೇಲಾಗಿ ಕಾಲವೂ ವ್ಯರ್ಥ; ಜಾಸ್ತಿ ಉಪಯೋಗಿಸಿದರೆ ಕ್ಯಾನ್ಸರ್ ಪೀಡಿತ ಜೀವ ಕೋಶಗಳ ನಾಶದ ಜೊತೆಗೆ ಆರೋಗ್ಯವಂತ ಜೀವಕೋಶಗಳು ನಾಶಹೊಂದುತ್ತವೆ.

ಈ ರೀತಿ ಶೇಖರಿಸಲ್ಪಡುವ ವಸ್ತುಗಳು ಕೆಲವು ವಿಶೇಷ ಜೀವಕೋಶಗಳೊಂದಿಗೆ ಹೊಂದಿಕ್ಕುತ್ತವೆಂದು ಪ್ರಯೋಗಗಳು ತಿಳಿಸಿವೆ.

ನಮ್ಮ ವಿಜ್ಞಾನಿಗಳು, ದೇಹದ ಇತರ ಭಾಗಗಳ ಹಾನಿಕಾರಕವಾಗದೆ ಕ್ಯಾನ್ಸರ್ ಪೀಡಿತ ಭಾಗವನ್ನು ಮಾತ್ರ ಗುಣಪಡಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುವ ಔಷಧಿಗಾಗಿ ಸತತ ಪ್ರಯತ್ನ ನಡೆಸುತ್ತಿದ್ದಾರೆ.

ಇತ್ತೀಚಿನ ವರದಿಯಂತೆ ಕೆಲವು 'ಆ್ಯಂಟಿಬಯೋಟಿಕ್ಸ್"ಗಳನ್ನು ರೇಡಿಯೋ ಆಕ್ಟಿವ್ ಸಲಕರಣೆಗಳೊಂದಿಗೆ ಮಿಶ್ರ ಮಾಡಿದಾಗ ಉಂಟಾಗುವ ವಸ್ತುವಿನಿಂದ ಪ್ರಯೋಗ ನಡೆಸುವುದರಿಂದ ಕ್ಯಾನ್ಸರ್ ಪೀಡಿತ ಪ್ರದೇಶವನ್ನು ನಾಶಮಾಡುವುದರ ಜೊತೆಗೆ ಚಿಕಿತ್ಸೆ ಕೂಡಾ ನಡೆಸಬಹುದು. ಈ ಬಗ್ಗೆ ನಾಕಷ್ಟು ವೈಜ್ಞಾನಿಕ ಸಂಶೋಧನೆ ನಡೆಯುತ್ತಿದ್ದರೂ ಅದೆಲ್ಲಾ ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇವೆ. ಆದರೂ ಇತರ ಕೆಲವು ಪ್ರದೇಶಗಳಲ್ಲೂ ಕ್ಯಾನ್ಸರ್ ನಿವಾರಣೆಗೆ ಸತತ ಪ್ರಯತ್ನ ನಡೆಯುತ್ತಿದೆ.

ಭಾನ್‌ಡಾಸ್‌ಕೆನ್ಸ್ ವಿಶ್ವವಿದ್ಯಾನಿಲಯದಲ್ಲಿನ ಅನೇಕ ಸಂಶೋಧನೆಗಳು ಆಶಾ ಕಿರಣ ಮೂಡಿಸಿವೆ. ಶಕ್ತಿರಹಿತ, ನೋವು ರಹಿತ, ವಿದ್ಯುತ್ ಪ್ರವಾಹವನ್ನು ಕ್ಯಾನ್ಸರ್ ಪೀಡಿತ ಮೊಲದ ಜೀವ ಕೋಶದ ಮೇಲೆ ಹರಿಸಿದಾಗ ವ್ಯಾಧಿ ಪೀಡಿತ ಪ್ರದೇಶಗಳನ್ನು ಆರೋಗ್ಯವಂತವನ್ನಾಗಿ ಮಾಡಬಲ್ಲದ್ದೆಂದು ಅಲ್ಲಿನ ಸಂಶೋಧನಾ ತಂಡ ತಿಳಿದಿದೆ.

ಕ್ಯಾನ್ಸರ್; ವೈಜ್ಞಾನಿಕ ಸಂಶೋಧನೆ

ಕ್ಯಾನ್ಸರ್‌ನ ನಿವಾರಣಾ ಶಕ್ತಿಯೆಂದರ ಅನ್ವೇಷಣೆಗಾಗಿ ವಿಜ್ಞಾನಿಗಳು ಬಹಳವಾಗಿ ಶ್ರಮಿಸುತ್ತಿದ್ದಾರೆ. ಕೆಲವುಪ್ರಯೋಗಾಲಯಗಳಿಂದ ವೈಫಲ್ಯಕರವಾದ ಫಲಿತಾಂಶದ ಸುದ್ದಿ ಬರುತ್ತಿದ್ದರೂ, ಅವುಗ

(ಹನ್ನೊಂದನೇ ಪುಟ ನೋಡಿರಿ)

ನೇತ್ರತಜ್ಞ ಡಾ। ಎನ್. ಬಿ. ಶೆಟ್ಟಿಯವರಲ್ಲಿ ನಿಮ್ಮ ದೃಷ್ಟಿದೋಷ ನಿವಾರಣಾರ್ಥ ಇಂದೇ ಸಲಹೆ ಕೇಳಿರಿ. **Phone 261448**

Shetty's OPTICS & CONTACT LENS CLINIC

London Qualified Optometrists

ನೇತ್ರ ಪರೀಕ್ಷೆಗಾಗಿ, ದೃಷ್ಟಿದೋಷಗಳ ನಿವಾರಣೆಗಾಗಿ
ಅತ್ಯಾಧುನಿಕ ಉಪಕರಣಗಳಿಂದ ಸಜ್ಜುಗೊಳಿಸಿದ ಏಕೈವ ಕೇಂದ್ರ

7 ಈ ಗನ್ ಬೊ ಸ್ಟೀಟ್, ಬಾರ್ಮೂರ್‌ಗೇಟ್ ಪೋಸ್ಟ್ ಆಫೀಸಿನ ಎದುರು

ಮುಂಬಯಿ—1

ವೃತ್ತೂರು ಮುನ್ಸಿಫ್ ಕೋರ್ಟಿನಲ್ಲಿ

R. E. P. 99/67

R. L. A. 167/57

O. S. 455/64

ಸೋಮಪ್ಪ ಗೌಡ —ಅರ್ಜಿದಾರ

ಲಿಂಗಪ್ಪ ಗೌಡ ಸಹ ...ಎದ್ರಿರು

12ನೇ ಎದ್ರಿ—ಬಡಿವ ಬ್ಯಾರಿ ಪೋಕರೆ ಬ್ಯಾರಿಯ ಪುಗ, ತಾಕರಗೋಡು ತಾಲ್ಲ್ಕ ಆರಿ ಕ್ಯಾನಿ ಗ್ರಾಮ-ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಮೇಲಿನ ದಿಕ್ಕಿಯಲ್ಲಿ ಇವರಬ್ಬಾರಿಯಿರುವ ಆಸ್ತಿ ಯೇಲಂ ಕುಂಠು ವಾಕ್ಸು ಸೊಗಿದ ಯಾಸ್ತಿಹಾರಿಸಲ್ಲಿ ಯೇಲಂಣ ಶರತ್ತುಗಳನ್ನು ನಿರ್ಣಯಿಸುವರೆ ನ್ಯಾಯೆರ ಮೇರಿನ ಆಸ್ತುಜ್ಯಾರಿಯು ತಾ.18—8—67ಕ್ಕೆ ಇಟ್ಟುರುತ್ತದೆ. ಆ ದಿನ ಏವು ಸ್ವಾಥ ವ ವಕೀಲರ ಮುಖಾಂತ್ರ ಯಾವುದಾಗಿ ಉಪಪರಿಸಿಕೊಳ್ಳ ತಪ್ಪಿದ್ರೆ ನಂ ಮುಗ್ಗರು ಹಾಜರಿಯಿಂದ ತೀರ್ಮಾನಿಸಲಾ ನೀತು ಎಂತ ಈ ಮೂಲಕ ತಿಳಿಸೋಣಾ ನಿದೆ.

(Sd·) C. V. Shastry

Advocate for Petitioner

ವೃತ್ತೂರು, ತಾ. 25—7—67

ಮಕ್ಕಳಿಗಾಗಿ ಕಥೆ

ಸಂಗೀತಗಾರರು

ಬರೆದವರು
ಶ್ರೀಮತಿ ರಮಾ ನಾಗೇಶ್.

ಒಂದೂರಲ್ಲಿ ಒಂದು ಕತ್ತೆಯಿತ್ತು, ತನ್ನಲ್ಲಿ ಸಾಮರ್ಥ್ಯವಿದ್ದಷ್ಟು ದಿನ ಯಜಮಾನ ಸೇವೆಯನ್ನು ಸಿಸ್ಟೆಯಿಂದ ಮಾಡಿಕೊಂಡು ಬರುತಿತ್ತು. ಈಗ ಇದು ಮುದಿಯಾಗುತ್ತಾ ಬಂದಿದೆ. ಶ್ರಮದ ಕೆಲಸವನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಇದುಂದ ಸಾಕಿ ಸಲಹುವ ಯಜಮಾನನ ಯೋಚನೆಗೆ ಒಳಗಾದನು. ಕತ್ತೆಯನ್ನು ಕೊನೆಗೊಳಿಸುವ ಯೋಚನೆಯೇ ಅವನಲ್ಲಿ ಬಲವಾಗುತ್ತಿತ್ತು. ಏನೋ ಸಂಭವಿಸಲಿದೆ ಎಂದು ತಿಳಿದ ಕತ್ತೆಯು ತಾನೇ ಮನೆಯಿಂದ ಹೊರಡುವ ಯೋಚನೆಯನ್ನು ಮಾಡಿತು.

ದೊಡ್ಡ ನಗರದಲ್ಲಿ ಸಂಗೀತದಲ್ಲಿ ಅಭಿರುಚಿ ಹುಳ್ಳವರು ತುಂಬಾ ಜನರಿರುತ್ತಾರೆ. ನನ್ನ ಇಂಪಾದ ಹಾಡುವಿಕೆಗೆ ಅವರು ಸಂತೋಷ ಪಡುತ್ತಾರೆ. ನನಗೆಸಂಪಾದನೆ ಹೆಚ್ಚೆ ನಾನು ಉತ್ತಮ ಜೀವನವನ್ನು ಖಂಡಿತವಾಗಿಯೂ ಮಾಡಬಹುದು" ಎಂದು ಯೋಚಿಸುತ್ತಾ, ಯೋಚಿಸುತ್ತಾ ರಸ್ತೆಯನ್ನು ಹಿಡಿದೇ ಬಿಟ್ಟಿತು.

ಸ್ವಲ್ಪ ದೂರ ಹೋಗುತ್ತಲೇ ಬಳಲಿಕೆಯಿಂದ ವಿಸುತ್ತಾ ಮಲಗಿರುವ ಒಂದು ನಾಯಿಯನ್ನು ನೋಡಿ "ನೀನೇಕೆ ಏದುದ.ತ್ತಾ ಮಲಗಿರುವೆ ಗಳೆ ಯನ್ನೇ?" ಎಂದು ಕತ್ತೆಯು ವಿಚಾರಿಸಿತು.

"ಅಯ್ಯೋ, ನಾನೊಬ್ಬ ದುರದೃಷ್ಟಶಾಲಿ. ನಾನಿ ಗ ಮುದುಕನಾಗಿದ್ದೇನೆ ಆಲ್ಲದೆ ನಿತ್ರಾಣ. ನಾನೇನೂ ಕೆಲಸಕ್ಕೆ ಯೋಗ್ಯನಾಗಿಲ್ಲ. ಹೀಗಾಗಿ ನನ್ನ ಯಜಮಾನನ ನನ್ನ ತಲೆಯೆಂಡೆಯುವ ಆಲೋಚನೆಯಲ್ಲಿದ್ದಾನೆ. ನಾನಾ ಮನೆಯಿಂದ ತಪ್ಪಿಸಿಕೆ ಂಡು ಓಡಿ ಬಂದು ಏದುತ್ತಾ ಇದ್ದೇನೆ. "ಅಲ್ಲದೆ ಜೀವನಕ್ಕೆ ಏನು ದಾರಿ ಕಂಡು ಹಿಡಿಯಲಿ ಎಂದು ಯೋಚಿಸುತ್ತಲೂ ಇದ್ದೇನೆ" ಎಂದು ದೀರ್ಘವಾದ ಭಾಷಣವನ್ನೇ ಕೊಟ್ಟಿತು.

"ಹಾಗಾದರೆ ನನ್ನ ಮಾತಿಗೆ ಗಮನ ಕೊಡು. ನಾನು ದೊಡ್ಡ ನಗರವೊಂದಕ್ಕೆ ಸಂಗೀತಗಾರನಾಗಲು ಹೊರಟಿದ್ದೇನೆ. ನೀನೂ ಬಲ್ಲಿ ಏನಾದರೂ ಮಾಡಬಹುದೋ ಏನೋ? ದೊರಡವ ಮನಸ್ಸಿದ್ದರೆ ಬಾ" ಎಂದು ಕತ್ತೆಯು ಹೇಳಿತು.

ಈ ಮಾತನ್ನು ಕೇಳಿದ ನಾಯಿಯು ಸಂತೋಷದಿಂದ ಒಪ್ಪಿ, ಕತ್ತೆಯು ಜತೆಯಲ್ಲಿ ಸ್ವಲ್ಪ ದೂರ ಸಾಗುತ್ತಲೇ, ರಸ್ತೆಯು ಪುಳ್ಳದಲ್ಲಿ ತೀರಾ ಹತ್ತಾವಸ್ಥೆಯಲ್ಲಿ ಬಿದ್ದುಕೊಂಡಿದ್ದ ಒಬ್ಬನನ್ನು ಎದುರುಗೊಂಡಿತು.

"ಓ, ದುರ್ದೈವವೇ! ನೀನಸ್ಸುನಾಗಿದ್ದೆ?' ಎಂದು ಬಕ್ಕನನ್ನು ಕತ್ತೆಯು ವಿಚಾರಿಸಿತು.

"ಅಯ್ಯಯ್ಯೋ! ನಾನು ಏನು ಹೇಳಲಿ? ನಾನೀಗ ದೊಡ್ಡ ಗಂಡಾಂತರದಲ್ಲಿ ಸಿಕ್ಕಿಬಿದ್ದಿದ್ದೇನೆ. ಮುದುಕಿಯೂದ ನನಗೆ ಇಲಿ ಹಿಡಿಯಲು ಶಕ್ತಿ ಸಾಲದು. ಇದರಿಂದ ನನ್ನ ಯಜಮಾನಿಯು ನನ್ನ ಮೇಲೆ ಕೋಪಗೊಂಡಿದ್ದಾಳೆ; ಹಾಗೆಯೇ ನನ್ನನ್ನು ಕೊಲ್ಲಲು ನಿಶ್ಚಯಿಸಿದ್ದಾಳೆ. ನಾನಾದರೋ ತಪ್ಪಿಸಿ ಕೊಂಡು ಬಂದು ಆಲೋಚನಾ ಮಗ್ನನಾಗಿದ್ದೇನೆ" ಎಂದಿತು ಮುದಿ ಬೆಕ್ಕು.

"ಹಾಗಿದ್ದರೆ ನಿನಗೆ ನಮ್ಮೊಡನೆ ಸೇರಿ ನಗರದ ಸಂಗೀತಗಾರಳಾಗುವ ಆಸೆಯಿದ್ದರೆ ಕೂಡಲೇ ಹೊಂಡು" ಎಂದಿತು ಕತ್ತೆ.

ಬೆಕ್ಕು ಈ ವಾರ್ತೆಯಿಂದ ಹರ್ಷಗೊಂಡಿತು. ಆ ಗುಂಪಿನೊಡನೆ ಎರಡಕ್ಕೆ ಮೂರಾಗಿ ಸೇರಿಕೊಂಡು ಮುಂದಿನ ಪ್ರಯಾಣಕ್ಕೆ ಹೊರಟಿತು. ಅವುಗಳೆಲ್ಲವೂ ಗದ್ದೆಯ ಬಳಿಗೆ ಬದುತ್ತಲೇ, ಕತ್ತೆಲ್ಲಾ ಶಕ್ತಿಯನ್ನು ಉಪಯೋಗಿಸಿಕೊಂಡು, ಹಿತ್ತಿಲಿನ ಆವರಣದ ಗೋಡೆಯನ್ನು ದಾಟಲು ಪ್ರಯತ್ನಿಸುತ್ತಿರುವ ಕೋಳಿಯೊಂದನ್ನು ನೋಡಿದುವು.

'ಓ! ನೀನೇನು ಶಬ್ದ ಮಾಡುತ್ತೀ ನಿನ್ನ ಹೋರಾಟಕ್ಕೆ ಏನು ಕಾರಣ?" ಎಂದು ಕತ್ತೆಯು ಕೋಳಿಯನ್ನು ವಿಚಾರಿಸಿತು.

"ನಾಳೆಯೇ ಆತಿಥಿಗಳು ನಾನಿರುವ ವನೆಗೆ ಬರಲಿರುವವರು. ಅವರ ಔತಣಕ್ಕೆ ನನ್ನ ಕುತ್ತಿಗೆಯನ್ನು ಬಲಿ ತೆಗೆಯಲಿರುವರು. ಹಾಗಾಗಿ ಇಂದೇ ತಪ್ಪಿಸಿಕೊಳ್ಳಲಿರುವೆನು." ಎಂದು ಕೋಳಿಯು ಹೇಳಿತು.

'ಪರಮಾತ್ಮಾ, ನೀನು ತಲೆಯನ್ನು ತಳಕೊಳ್ಳುವ ಬದಲು ನಮ್ಮೊಂದಿಗೆ ಬರುವುದು ಎಷ್ಟಕ್ಕೂ ಒಳ್ಳೆಯದು, ಒಂದು ವೇಳೆ ನೀನು ಉತ್ತಮ ಹಾಡುಗಾರನಾದರೆ, ನಮ್ಮ ಸಂಪಾದನೆಗೆ ಒಂದು ಮಿತಿಯೇ ಇಲ್ಲ. ಹಾಗಾಗಿ ನೀನು ಮನಸ್ಸಿದ್ದರೆ ನಮ್ಮೊಡನೆ ಸೇರು.' ಎಂದಿತು ಕತ್ತೆ.

ಎಲ್ಲವೂ ಸೇರಿಕೊಂಡು ನಗರದ ಕಡೆಗೆ ಹೊರಟವು. ಕಾಡಿನ ಸಮೀಪ ಬರುತ್ತಲೇ ರತ್ರಿಯಾಯಿತು. ಹಾಗಾಗಿ ರಾತ್ರಿಯನ್ನು ಕಾಡಿನಲ್ಲಿಯೇ ಕಳೆಯುವ ಮನಸ್ಸು ಮಾಡಿ ತಮ್ಮ ತಮ್ಮ ಜಾಗಗಳನ್ನು ಆರಿಸಿಕೊಂಡವು. ನಾಯಿ ಮತ್ತು ಕತ್ತೆ ವಿಶಾಲವಾದ ವೃಕ್ಷದ ಕೆಲಗೆ ಮಲಗಿಕೊಂಡವು ಬೆಕ್ಕು ಒಂದು ಕೊಂಬೆಯನ್ನು ಆಶ್ರಯಿಸಿತು. ಆದರೆ ಕೋಳಿಯು ತನ್ನ ಸುರಕ್ಷತೆಯ ದೃಷ್ಟಿಯಿಂದಾಗಿ ಮರದ ತುತ್ತ ತುದಿಯನ್ನು ಏರಿಕುಶ್ರಲೂ ನೋಡಿತು. ಆದರ ದೃಷ್ಟಿಗೆ ದೂರದಲ್ಲಿ ಹೊಳೆಯಾಗಿ ಹೊಳೆಯುತ್ತಿರುವ ದೀಪವು ಕಾಣಿಸಿತು. ಈ ಸುದ್ದಿಯನ್ನು ತನ್ನ ಮೂವರು ಗೆಳೆಯಂಗೆ ತಿಳಿಸಿತು. ಎಲ್ಲವೂ ತಮ್ಮ ಉಳಕೊಳ್ಳುವ ಜಾಗವನ್ನು ಖಾದಲಾಯಿಸುವ ಯೋಚನೆಯನ್ನು ಮಾಡಿ ಅಲ್ಲಿಂದ ಹೊರಟವು. ಕ್ರಮಕ್ರವಾಗಿ ಹೊಳೆಯುತ್ತಿರುವ ದೀಪ ಇರುವ ಮನೆಯ ಸಮೀಪಕ್ಕೆ ಬಂದವು. ಆದರೆ ಆ ಮನೆಯು ಕಳ್ಳರ ಗುಂಪಿನದಾಗಿತ್ತು.

ನಾಲ್ವರಲ್ಲಿ ಉದ್ದದೇಹ ಪಡೆದಿರುವ ಕತ್ತೆಯು, ಸದ್ದುಮಾಡದೆ ಕಿಟಕಿಯ ಬಳಿಗೆ ಹೋಗಿ ಇಣಿಕಿ ನೋಡಿತು.

'ಏನು ನಡೆಯುತ್ತಾ ಇದೆ?" ಎಂದು ಕೋಳಿ ಕೇಳಿತು.

'ವೈಜನ ತಂಬಾ ಉತ್ತಮ ತಿಂಡಿ, ತಿನಿಸು. ಪಾತ್ರೆಯಗಳನ್ನಿಟ್ಟುಕೊಂಡು ಸುತ್ತಲೂ ಕುಳಿತುಕೊಂಡು ಮಜಾ ಮಾಡುತಿದ್ದಾರೆ" ಎಂದಿತು ಮೆಲ್ಲನೆ ಕತ್ತೆ.

'ಹಾಗಾದರೆ ಇದು ನಮಗೆ ಉತ್ತಮ ವಸತಿ ಆಲ್ಲವೆ?" ಎಂದಿತು ನಾಯಿ.

'ಹೌದು ನಾವು ಒಳಗೆ ಹೋದರೆ ಮಾತ್ರ' ಎಂದಿತು ಬೆಕ್ಕು.

ಎಲ್ಲರೂ ಆಲೋಚಿಸಿ, ಕಳ್ಳರನ್ನು ಹೊರಗೆ ಓಡಿಸುವ ಹಂಚಿಕೆಯನ್ನು ಮಾಡಿದುವು.

ಕತ್ತೆಯು ಹಿಂಗಾಲನ್ನು ನೆಲಕ್ಕೂರಿದು ಮುಂಗಾಲುಗಳನ್ನು ಕಿಟಕಿಗೆ ಲಧರಿಸಿ ನಿಂತಿತು. ನಾಯಿಯು ಕತ್ತೆಯು ಬೆನ್ನನ್ನೇರಿತು. ಬೆಕ್ಕು ನಾಯಿಯ ಭುಜವನ್ನೇರಿತು. ಕೋಳಿಯು ಬೆಕ್ಕಿನ ತಲೆಯ ಮೇಲೆ ಕುಳಿತುಕೊಂಡಿತು. ಎಲ್ಲಾ ತಯಾರಿಯಾದ ಬಳಿಕ ಕೋಳಿಯು ಸೂಚನೆಯನ್ನು ಕೊಟ್ಟಿತು. ಎಲ್ಲವೂ ತಮ್ಮ ತಮ್ಮ ಸಂಗೀತವನ್ನು ಆರಂಭಿಸಿದುವು.

ಕತ್ತೆ ಒದರಿತು.

ನಾಯಿ ಬೊಗಳಿತು

ಬೆಕ್ಕು ಮ್ಯಾಂ ಎಂದಿತು

ಕೋಳಿ ಕೊ ಕ್ಕೊ ಕೋ ಎಂದಿತು.

ಆ ಏರಿಕೆಯ ಸ್ವರ ಮಾಲಿಕೆಯೊಂದಿಗೆ ಕಿಟಕಿಯ ಕನ್ನಡಿಯನ್ನು ಒಡೆದು ಒಳಗೆ ನುಗ್ಗಿದುವು.

ಈ ತಾರಕ ಆವಸ್ವರದಿಂದ ಹೆದರಿದ ಕಳ್ಳರು ಹಿಂತಿರುಗಿಯೂ ನೋಡದೆ ಬದುಕಿದರೆ ಬೇಡಿ ತಿಂದೇವೆಂದು ನಿಶ್ಚಯಿಸಿ ಕಾಲಿಗೆ ಬುದ್ಧಿ ಹೇಳಿದರು.

ಪ್ರಯಾಣಿಕರಾದ ಸಂಗೀತಗಾರರಿಗೆ ಉಳಕೊಳ್ಳಲು ಉತ್ತಮ ಮನೆ ಊಟಕ್ಕೆ ಉತ್ತಮ ಆಹಾರ ದೊರಕಿತು. ಉಂಡು ತೃಪ್ತಿಗೊಂಡಿತು. ದೀಪ ಆರಿಸಿ ತಮ್ಮ ತಮ್ಮ ಅನುಕೂಲ ಜಾಗವನ್ನು ಹುಡುಕಿಕೊಂಡರು.

ಕತ್ತೆಯು ಅಂಗಳದಲ್ಲಿರುವ ಹುಲ್ಲಿನ ರಾಶಿಯ ಮೇಲೊರಗಿತು.

ನಾಯಿಯು ಹಿಂಬಾಗಿಲಿನ ಕಾಲು ಜಾಪೆಯ ಮೇಲೆ ಮಲಗಿತು.

ಬೆಕ್ಕು ಒಲೆಯು ಬಿಸಿ ಬೂದಿಯನ್ನು ಆಶ್ರಯಿಸಿದ.

ಕೋಳಿಯು ಮೊಡಿನ ಮಲೆಯೊಂದನ್ನು ಸೇರಿಕೊಂಡ ನಿದ್ರಿಸಿತು.,

(ಹತ್ತನೇ ಪುಟ ನೋಡಿರಿ)

ನಿಮ್ಮ ಹಣವನ್ನು ಚೆಲ್ಲುವಿರಾ?



ಎಷ್ಟೇ ಶ್ರೀಮಂತಸಿರಲಿ, ಯಾರೂ ಹಣವನ್ನು ಚೆಲ್ಲುವಷ್ಟು ವಿವೇಕಹೀನರಲ್ಲ. ಆದರೂ ನಮ್ಮಲ್ಲಿ ಒಹಣವುಂದಿ ನೂಡುತ್ತಿರುವುದೇ ನನ್ನು? ನಮ್ಮ ಕಣ್ಣನ್ನು ಸೆಳೆದ ಯಾವ ವಸ್ತುವೇ ಇರಲಿ, ನಮಗೆ ಅನವಶ್ಯಕವೆನಿಸಿದರೂ, ಅದಕ್ಕಾಗಿ ನಾವು ವೆಚ್ಚ ಮಾಡುತ್ತಿರುವುದು ಹಣದ ಚೆಲ್ಲಾಟವಲ್ಲದೆ ಇನ್ನೇನು?

ಬೆಲೆ ಏರಿಕೆ, ಹಣದ ಉಬ್ಬರದ ಈ ಸಂದಿಗ್ಧ ಕಾಲದಲ್ಲಿ ನಾವು ಖರ್ಚಿನಲ್ಲಿ ಮಿತಿಯನ್ನೂ ಅನವಶ್ಯಕ ವೆಚ್ಚಗಳಲ್ಲಿ ಕಡಿತನನ್ನೂ ಸಾಧಿಸುವುದು ತೀರಾ ಅವಶ್ಯಕ. ಸಂಪೈಯಲ್ಲಿ ಹೇರಳವಿರುವ ದುಂದು ವೆಚ್ಚಗಳನ್ನು ಒಂದೊಂದಾಗಿ ಕೂಡಿಸಿದಲ್ಲಿ ಆ ಮೊಲಕ ಉಳಿಸಲಾಗುವ ಹಣವೇ ಒಂದು ಸಿಧಿಯಾಗಬಲ್ಲದು, ಹೀಗೆ ಉಳಿಸಿದ ಹಣದಿಂದ, ಬೆಲೆ ಇಳಿದಂತೆ ನೀವು ಹೆಚ್ಚು ಹೆಚ್ಚು ಸರಕುಗಳನ್ನು ಖರೀದುಬಲ್ಲಿರಿ.

ಸಾಮೂಹಿಕ ಉಳಿತಾಯ ಯೋಜನೆಯಿಂದಲೇ—ಉಳಿತಾಯದ ಮೊತ್ತ ಎಷ್ಟೇ ಕಿರಿದಾಗಿರಲಿ—ಸರಕು, ಸಾಮಗ್ರಿಗಳ ಮೇಲಿನ ಬೆಲೆಇಳಿಕೆಯ ಲಾಭವನ್ನು ಇಳಿಸಿ ಆವುಗಳ ಬೆಲೆಯನ್ನು ಕೆಳಮಟ್ಟಕ್ಕೆ ತಾಡಬಹುದಾಗಿದೆ.

ಉಳಿತಾಯ ಸಾಧಿಸಲು ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ಯುಮುಲೇಟಿವ್ ರೀವಣಿಕೆ ಖಾತೆಯೊಂದನ್ನು ತೆರೆಯಿರಿ. ತಿಂಗಳ ವರಮಾನ ಕೈಗೆ ಬಂದಂತೆ ಖಾತೆಯಲ್ಲಿ ಹಣ ಕೂಡಿಡುತ್ತಾ ಬನ್ನಿರಿ.

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಬಿಹಾರದಲ್ಲಿ ಗಾಳ ಹಾಕಿದವರಿಗೆ

ಕಂಡದನ್ನೇ ಆಡಿದಲ್ಲಿ ಕೆಂಡದಂಥ ಕೋಪ

ಬರೆದವರು: ಶ್ರೀ ಶಿವಶಂಕರ.

ಕಣ್ಣಾರೆ ಕಂಡದ್ದನ್ನೇ ಸರಾಸುರ್ತಿ ಹೇಳಿದಲ್ಲೂ ಕೆಂಡದಂಥ ಕೋಪ ಕ್ರಿಸ್ತೀಯ ಮತಪ್ರಸಾರಕರಿಗೆ ಬರುತ್ತದೆ. ಭಾರತದ ಲೋಕಸಭೆಯಲ್ಲಿ ಕ್ರಿಸ್ತೀಯ ಮತಪ್ರಸಾರಕರ ಮತೀಯ ಕಾರಕಾಧ್ಯನದ ಬಗೆಗಿತು ಮಾತುಕತೆ ನಡೆದಿತ್ತು. ನಾಗಾಲೇಂಡಿನಲ್ಲಿ ಕ್ರಿಸ್ತೀಯರಿಗೆ ಕೋಪ ಬರುವುದೆಂಬ ವಿಕಮೇವ ಕಾರಣದಿಂದ ಆಲ್ಲಿಗೆ ಅನ್ಯ ಸಮೂಹದವರಿಗೆ, ಆಲ್ಲ ರಾಮಕೃಷ್ಣ ಸಂಸ್ಥೆಯವರಿಗೆನೇ ಶಾಲೆ ತೆರೆಯಲು ನಮ್ಮ ದಿಲ್ಲಿ ದೇವತೆಗಳು ಒಪ್ಪಿಗೆ ಕೊಟ್ಟಾರಲಿಲ್ಲ. ಗೋವಾದ ಕ್ರಿಸ್ತೀಯ ಮತ ಪ್ರಸಾರಕರಿಗೆ ಕೋಪ ಬಂದಲ್ಲಿ ತಮ್ಮ ಮತದ ಪೆಟ್ಟಗೆ ತುಂಬಿಲಿಕ್ಕಿಲ್ಲನೆಂಬ ವಿಕಮೇವ ಭಯದಿಂದ ಗೋವಾವನ್ನು ಪ್ರತ್ಯೇಕವಾಗಿಯೇ ಇಡಬೇಕೆಂದು ಸರಕಾರ ಕೈ ಕಾಂಗ್ರೆಸ್ಸು ಕಟ್ಟಪ್ಪಣೆ ಇತ್ತಿರುತ್ತದೆ. ಕೇರಳದಲ್ಲಂತೂ ಅವರು ಕಮ್ಯೂನಿಸ್ಟರೊಂದಿಗೆನೇ ಕೈಕಲುಕಿಸಿಕೊಂಡು ಬಡಬೀಗರನ್ನು ಬಾಚ್ಚಿಯೊಳಗೆ ಹಾಕಿಕೊಳ್ಳುತ್ತಿರುವಾಗಲೂ ಕೇಂದ್ರ ಸರಕಾರ ಸುಮ್ಮನೆ ಇದೆ. ಹೀಗೆ ಕ್ರಿಸ್ತೀಯ ಮತಪ್ರಸಾರಕರ ಮತಜೇಟಿ ನಡೆಯುತ್ತಿರುವಾಗ ಕಾಂಗ್ರೆಸ್ಸೂ ಅಲ್ಲದೆ ಅಂತಹ ಅನ್ಯ ರಾಜಕೀಯ ಪಕ್ಷಗಳು ಹಾಗೂ ಕೇಂದ್ರ ಸರಕಾರ ಅವನ್ನು ಬಯಲಿಗೆ ಬಾರದಂತೆ ಮುಚ್ಚಿಡುತ್ತಿವೆ. ಹಾಗಿದ್ದರೂ ಬಿಹಾರಿನ ಭೀಕರ ಪರಿಸ್ಥಿತಿಯು ಅದನ್ನು ಬಯಲಿಗಳಿದುಬಿಟ್ಟಿತು.

ನೆಂವಿನ ನೆನಸದಲ್ಲಿ ಅನ್ಯರಾಜ್ಯಗಳಿಂದ ಹಣದ ಹೊಳೆಯೇ ಕ್ರಿಸ್ತೀಯ ಮತ ಪ್ರಸಾರಕರಿಗೆ ಬರುತ್ತಿದೆಯೊದರೂ, ಅವರು ಶುತ್ತಿಗೆಯಲ್ಲಿ ಶಿಲುಬೆಯನ್ನು ಹಾಕಿಕೊಳ್ಳಲೊಪ್ಪದ ಮಕ್ಕಳಿಗೆ ಭೀಕರ ಪರಿಸ್ಥಿತಿಯಿರುವ ಬಿಹಾರಿನಲ್ಲಿ ಜಾಲು ಕೊಡಲೊಪ್ಪದಿದ್ದ ವಿಷಯವನ್ನು ಶ್ರೀ ಆಟಲ ಬಿಹಾರಿ ವಾಜಪೇಯಿಯವರು ಲೋಕಸಭಾ ಸಭಸ್ಯರ ಗಮನಕ್ಕೆ ತಂದಾಗ, ಇಂತಹ ದೊರೆಗಳು ತಮ್ಮ ಪೈಲುಗಳಲ್ಲರಿಯವದಾಗಿ ಕಿಳಿಸಿದ ಗೃಹ ಖಲಾಖೆಯ ಮಂತ್ರಿ ಶ್ರೀ ಚವ್ಹಾಣರವರು, ಹೆಚ್ಚಿನ ವಿವರಗಳನ್ನು ಬಿಹಾರಿನ ರಾಜ್ಯ ಸರಕಾರದ ಕಲೆಯ ಮೇಲೆ ಹಾಕಿ ಬಿಟ್ಟರು. ಕಾಫ್ಟ ದಿರುತ್ತಿರುವದನ್ನರಿತು ಕೊಂಡ ಶ್ರೀ ಜಕ್ಲೆರವರು ಅನ್ಯಾಯದ ಸಂಹಾರವನ್ನು ಸರಕಾರ ಸಹಿಸದು, ಪರದೇಶೀಯ ಮತ ಪ್ರಸಾರಕರಿಗೆ ಬಾಗುತ್ತಿರುವ ಹಣದಪ್ಪ ಸರಕಾರ ಕಣ್ಣಿಟ್ಟಿದೆ ಯೆಂದೂ ಅದನ್ನು ಹೇಗೆ ಬಿಡುವ ಮಾತು ಆತ್ಮರೆಯಿಂದನ್ನು ಪರಿಶೀಲಿಸುವದಾಗಿ ಯೂ ಆಶ್ವಾಸನೆ ಇತ್ತರು. ಇಂತಹ ದುರ್ಘಟನೆಗಳು ಬರಗಾಲದಿಂದ ತತ್ತರಿಸುತ್ತಿರುವ ಬಿಹಾರಿನಲ್ಲಿ ನಡೆಯುತ್ತಿವೆಯೊದರೂ ಅಪ್ಪ ಅಪಾಯಕರ ನೆಲೆಗೆ ತಲಪಿಸ್ಲಿವ ಮಾಹಿತಿಯನ್ನು ವಿಚಾರಿಸಲು ಸಂಸದ ಸಿದ್ಧಗೊಳಿಸುವ ಆವಶ್ಯಕತೆ ಇಲ್ಲವೆಂದು ಅವರು ತಪ್ಪಿಸಿಕೊಂಡರು. ಇಂತಹ ವಾದ-ವಿವಾದದ ಪ್ರಸಂಗಗಳು ಲೋಕಸಭೆಯಲ್ಲಿ ಎರಡು-ಮೂರು ಸಲ ಕಲೆದೋರಿದ್ದುಂಟು. ದೆಲ್ಲಿಯ ಲ್ಲಿ ಕೆಲ ಲೋಕಸಭಾ ಸದಸ್ಯರು ತಾವು ಕಂಡದ್ದನ್ನು ಹೇಳಿದ್ದೇ ತಡ, ದೇಶದಾದ್ಯಂತ ಬಲೆ ಬೀಸುತ್ತಿರುವ ಕ್ರಿಸ್ತೀಯ ಮತ ಪ್ರಸಾರಕರಿಗೆ ಧಗಧಗಿಸುತ್ತಿರುವ ಕೆಂಡದಂಥ ಕೋಪ ಬಂದು ಬಿಟ್ಟಿತು.

ಕೋಲ್ಕಗೊಂಡ ಕೆಥೋಲಿಕ್ ಮತೀಯ ಗುರುಗಳು ಬೆಂಗಳೂರಿನಲ್ಲಿ ಒಡನೆ ದೊಡ್ಡ ಸಭೆ ನೇರಿದರು. ತಾವು ಗೋವಾ ಲೇಂಡ್, ನಾಗಾಲೇಂಡ್, ಮಿಝೋಲೇಂಡ್ ಹೀಗೆ ಲೇಂಡಿನಮೇಲೆ ಲೇಂಡ್ ಕಟ್ಟಿತ್ತಿರುವಾಗ ಕಣ್ಣು ಮುಚ್ಚಿಕೊಂಡಿದ್ದ ಕಾಂಗ್ರೆಸ್ಸ್ ಸರಕಾರ ಇದೀಗ ಬಾಯಿತೆರೆಯಲು ಕಾರಣವೇನೆಂಬುದನ್ನವರು ಚರ್ಚಿಸಿದರು. ಜ್ವರದ ತಾಪದಿಂದ ಹೋಗಿ ಬಡಬಡಿಸಲಾರಂಭಿಸಿದಾಗ ಅವನ ತಲೆಯ ಮೇಲೆ ಹಿಮದ ಚೀಲವನ್ನಿಟ್ಟು ಬಿಟ್ಟಲ್ಲಿ ಎಲ್ಲಾ ಸರಿಯಾಗಿ ಹೋಗುತ್ತದೆಂಬುದನ್ನು ಅರಿತಿದ್ದ ಕ್ರಿಸ್ತೀಯ ಮತ ಪ್ರಸಾರಕರು ಕಾಂಗ್ರೆಸ್ಸಿಗರ ತಲೆಯ ಮೇಲೆ ಮತೀಯ ಹಿಮದ ಚೀಲವನ್ನು ಇಟ್ಟರು. ಆದೆಷ್ಟರ ಮಟ್ಟಿಗೆ ಅದು ಪರಿಣಾಮಕಾರಿಯಾಗಿದೆಂಬುದನ್ನು ತಡೆದು ನೋಡಬೇಕು.

ಬೆಂಗಳೂರಿನ ಕೆಥೋಲಿಕ ಮತ ಗುರುಗಳ ಸಭೆ ನೇರಲು ಮುಖ್ಯ ಕಾರಣ ಲೋಕಸಭೆಯಲ್ಲಿ ನಡೆದ ಬಿಸಿ ಬಿಸಿ ಚರ್ಚೆ ಇದೆ. ಬಿಹಾರಿನಲ್ಲಿ ಕ್ರಿಸ್ತೀಯ ಮತಪ್ರಸಾರಕರು ನಡೆಸಿರುವ ಕುಕೃತ್ಯ ಎಂತಹವರ ಕಣ್ಣನ್ನೂ ತೆರೆಸುವಂತೇ ಇದೆ. ಈ ರೀತಿಯಲ್ಲನ್ನು ಸಹಿಸಲಾಗದ ಕೆಥೋಲಿಕ ಮತಗುರುಗಳು ನೇರಿದರು. ಬಲತ್ಕಾರದ ಮತಾಂತರಕ್ಕೆ ಸರಕಾರ ಸಮ್ಮತಿಸದೆಂದು ಸರಕಾರ ಸೂಚಿಸಿದುದರಿಂದ ಇವರು ಭಾರತ ಸರಕಾರ ಕಣ್ಣಿಗೆ ಮಣ್ಣೆರಚಲು, ಸಾಧ್ಯವಾಗದಿದ್ದಕ್ಕಿ ಭಯ ಹುಟ್ಟಿಸಲು ಒಂದಾಗಿ ನೇರಿದರು. ಬಿಹಾರಿನಲ್ಲಿ ಅದೇನೂ ಅಚಾತುರ್ಯ ನಡೆದಿಲ್ಲವೆಂದು ಅವರು ಬಂಬಡ ಬಾರಿಸಿದರು. ಹಾಗಾದರೆ ಅಲ್ಲಿ ಕ್ರಿಸ್ತೀಯ ಮತಪ್ರಸಾರಕರು ಮತಾಂತರ ಮಾಡಿಯೇ ಇಲ್ಲವೇನು? ಎಡವುಟ್ಟಿ ಇದಕ್ಕೆ ಕೆಥೋಲಿಕ ಬಷಪ್ಪರು ಬದಲಯಿಲಿ ನಿಜವಾಗಿ ಬಿಹಾರಿನ ಬರಗಾಲದಿಂದ ಬಳಲುತ್ತಿರುವ ನೂನರಿಗೆ ಸಹಾಯ ಸಲ್ಲಿಸುವದೇ ಇವರ ಉದ್ದೇಶವಾಗಿದ್ದಲ್ಲಿ ಇವರು ಹಣವನ್ನೋ, ಬಟ್ಟೆಲಿನ ಹುಡಿಯನ್ನೋ, ಒಟ್ಟೆ ಪಾತ್ರೆಗಳನ್ನೋ ಪ್ರಧಾನಿಸುವರಷ್ಟಿ ಧಿಗೆ, ಉಕಾಲ ಪೀಡಿತ ಸಹಾಯತಾ ಸಮಿತಿ, ಬಿಹಾರ್ ರಿಲೀಫ್ ಸೊಸೈಟಿಯಂತಹ ಸಂಸ್ಥೆಗಳಿಗೆ ಕೊಡಬಹುದಾಗಿತ್ತಲ್ಲಾ? ಆವುಗಳ ಮೇಲೆ ಕ್ರಿಸ್ತೀಯ ಬಿಷಪ್ಪರಿಗೆ ನಂಬಿಕೆ ಇಲ್ಲವೇನು? ಒಳ್ಳೆಯದು ಇವರೇ ಕೊಡಲಿ. ಆದರೆ ಅಲ್ಲಿ ಮತಪ್ರಸಾರಕರಿಗೆ ಏನು ಕೆಲಸ ಇದೆ? ಅಲ್ಲಿ ಬರಗಾಲ ಬಂದಿರುವದು ಮತಕ್ಕೆ ಅಲ್ಲ, ಅನ್ನಕ್ಕೆ; ನೀರಿಗೆ. ಇದನ್ನು ತಿಳಿದುಕೊಳ್ಳಲಾರದ್ದು ಮತಾಂತರವನ್ನು ವ್ಯಾಪಾರ ವಹಿವಾಟಿಗಿಸಿಕೊಂಡಿರುವ ಈ ಕ್ರಿಸ್ತೀಯ ಮತಪ್ರಸಾರಕರು ಅಲ್ಲಿ ತಮ್ಮ ಬಲೆಯನ್ನು ಬೀಸಿದರು. ಅಂದೊಬ್ಬ ದರಿದ್ರನನ್ನು ಒಬ್ಬ ಕ್ರಿಸ್ತನನ್ನು ಶಿಲುಬೆಗೆ ಹಾಕಿದ್ದನಂತೆ. ಇಂದು ಅವನ ಹೆಸರಿನಲ್ಲಿ ಸಹಸ್ರಾರು ಜನರನ್ನು ಶಿಲುಬೆಗೆ ಹಾಕಲಾಗುತ್ತಿದೆ!

ಬಿಹಾರಿನಲ್ಲಿ ತಾವು ನಡೆಸಿದ ಕುತ್ಸಿತ ಕೃತ್ಯವನ್ನು ಮಾತ್ರ ಇವರು ಸಮರ್ಥಿಸಿ ಕೊಂಡದ್ದಲ್ಲದೆ ಪರದೇಶಿಯ ಮತ ಪ್ರಸಾರಕರ ದುಷ್ಕೃತ್ಯವನ್ನು ಸಮರ್ಥಿಸಿರುವರು! ಒಂದೇ ರೀತಿಯ ಗರಿಗಳಿರುವ ಹಕ್ಕಿಗಳಲ್ಲವೇ! ಇನ್ನೇನು ತಾನೇ ಮಾಡಿಯಾವು? ಪರದೇಶಿಯ ಮತ ಪ್ರಸಾರಕರು ವಿದ್ಯಾರಂಗದಲ್ಲಿ ಸಮಾಜ ಸೇವೆಯಲ್ಲಿ ಪಟ್ಟಿರುವ ಶ್ರಮಕ್ಕೆ ದೇಶವು ಅವರಿಗೆ ಋಣಿಯಾಗಿದೆಯಂತೆ! ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳದೆ ಇನ್ನಾರು ತಟ್ಟುವರು? ಈ ಪಲ್ಲವಿಯನ್ನು ಹಿಂದಿನಿಂದ ಹಾಡಲಾಗುತ್ತಿದೆ. ಮಂತ್ರಿ ವರ್ಗಗಳು, ರಾಜಕೀಯ ಪುಢಾರಿಗಳು ಅದಕ್ಕೆ ತಾಳಹಾಕಿದ್ದಾರೆ. ಅವರ ವಿದ್ಯಾಲಯಗಳಲ್ಲಿ ನಡೆಯುತ್ತಿರುವದಾದರೂ ಏನು? ಅಲ್ಲಿ ಶಿಸ್ತು ಇದೆ; ವಿದ್ಯೆ ಚೆನ್ನಾಗಿ ಕೇಳಿಕೊಡುತ್ತಾರೆಂಬ ಪ್ರಶಂಸಾ ಪತ್ರವನ್ನು ಕೊಡಲಾಗುತ್ತದೆ. ಆ "ಶಿಸ್ತು" ಯಾವದರ ದ್ಯೋತಕ? ನಮ್ಮಲ್ಲಿರುವ ಗುಲಾಮೀ ಮನೋಭಾವನೆಯೇ ಇದೆ—ವಿದ್ಯಾರ್ಥಿಗಳಲೂ ಏಷ್ಟೇ, ವಿದ್ಯಾರ್ಥಿಗಳ ಹೆತ್ತವರಲ್ಲೂ ಹಾಗೆನೇ. ಕ್ರಿಸ್ತೀಯ ಪಾದ್ರಿಗಳೆಂದರೆ ಬ್ರಿಟಿಷರು, ಪೆಂಚರು ಪೋರ್ಚುಗೀಸರ ಪ್ರತಿನಿಧಿಗಳೇ ಇದ್ದಾರೆನ್ನುವದು ಅವರ ಭಾವನೆ. ಅವರು ಆಳಲಿಕ್ಕಾಗಿ ಇರುವವರು, ನಾವು ಆಳಿಸಿಕೊಳ್ಳಲಿಕ್ಕಾಗಿ ಇರುವವರು! ಅದುದರಿಂದಲೇ ವಿದ್ಯಾರ್ಥಿಗಳಿಗೆ ಶಿಕ್ಷೆ ಕೊಟ್ಟಾಗ ಅವರ ಹೆತ್ತವರು ಪಾದ್ರಿಗಳ ಬಳಿ ಕ್ಷಮಾಯಾಚನೆ ಮಾಡುವದು ಮತ್ತು ಅನ್ಯ ವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳೂ ಅವರ ಹೆತ್ತವರೂ ಛೇರಾವೋ ನಡೆಸುತ್ತಿರುವದು, ಇವರಲ್ಲಿರುವ ಈ ಗುಲಾಮಿಯ ಭಾವನೆಗೆ ಬರಗಾಲ ಬಂತೆಂದರೆ ಅಗ ಗೊತ್ತಾಗುತ್ತದೆ, ಪಾದ್ರಿಗಳ ಶಾಲೆಗಳಲ್ಲಿರುವ ಶಿಸ್ತಿನ ವಿಷಯ.

ಆಲ್ಲಿ ಕಲಿಸುವದಾದರೂ ಏನನ್ನು? ಬಲಾತ್ಕಾರವಾಗಿ ಕ್ರಿಸ್ತೀಯೇತರರಿಗೆ ಬಾಯಿಬಲನ್ನು ಹೇಳಿ ಕೊಡಲಾಗುತ್ತಿಲ್ಲವೆಂದು ಅವರು ವಾದನೂಡುತ್ತಿದ್ದಾರೆ. ಕ್ರಿಸ್ತೀಯ ವಿದ್ಯಾರ್ಥಿಗಳ ಪ್ರಾರ್ಥನಾ ಪುಸ್ತಕಕ್ಕೂ, ಕ್ರಿಸ್ತೀಯೇತರ ವಿದ್ಯಾರ್ಥಿಗಳ ಪ್ರಾರ್ಥನಾ ಪುಸ್ತಕಕ್ಕೂ ಇರುವ ವ್ಯತ್ಯಾಸವೇನು? ಕ್ರಿಸ್ತೀಯ ವಿದ್ಯಾರ್ಥಿಗಳ ಪ್ರಾರ್ಥನಾ ಪುಸ್ತಕದಲ್ಲಿ ಯೇಸುವಿನ ಹೆಸರು ಬರುತ್ತದೆ, ಇತರವುಗಳಲ್ಲಿ ಸುಮ್ಮನೆ ಕರ್ತ, ದೇವರೆಂಬ ಶಬ್ದ ಇರುತ್ತದೆ, ಅಷ್ಟೇ. ಇತರ ವಿಷಯ ಹಾಗೇನೇ ಇರುತ್ತದೆ ಅಷ್ಟೇ ಅಲ್ಲ ಬಾಯಿಬಲನ್ನು ನೇರವಾಗಿ ಹೇಳಿಕೊಡುವ ಬದಲು ಫೀತಿಭೋದೆಯ ಮೂಲಕ ಹೇಳಿಕೊಡಲಾಗುತ್ತಿದೆ. ಆಲ್ಲಿ ಪುನರ್ಜನ್ಮ ಇಲ್ಲವೆಂಬುದನ್ನು ವಿದ್ಯಾರ್ಥಿಗಳು ಒಪ್ಪಲೇ ಬೇಕು. ನಿರ್ಬಲ ಮನಸ್ಸಿನ ವಿದ್ಯಾರ್ಥಿಗಳನ್ನು ಆಲ್ಲಿ ಮತಾಂತರಿಸಲಾಗುತ್ತಿದೆ. ಇದಕ್ಕೆ ಅಪವಾದವಾಗಿರುವ ಕ್ರಿಸ್ತೀಯ ವಿದ್ಯಾಲಯಕ್ಕೆ ಏನಾದರೂ ಇದೆಯೆ? ವಿದ್ಯಾರ್ಥಿನಿಯರು ಆಲ್ಲಿ ಜೊಟ್ಟು, ಕಂಕಣ, ಹೂ ಇತ್ಯಾದಿಗಳನ್ನು ಉಪಯೋಗಿಸುವಂತಿಲ್ಲ! ಇದು ಇವರ ವಿದ್ಯೆ!

ಇನ್ನು ಇವರ ಸಮಾಜ ಸೇವೆಯು ಸಂಗತಿಯೂ ಹಾಗೆನೇ. ಅದರ ಸ್ಪಷ್ಟ ಚಿತ್ರವನ್ನು ನಾಗಾಲೇಂಡ್, ಮಿಝೋಲೇಂಡ್ ನಮ್ಮ ಕಣ್ಮುಂದೆ ಇಡುತ್ತಿವೆ. ಪರದೇಶಿ ಮತ ಪ್ರಸಾರಕರ ಕಣ್ಣಿಗೆ ಭಾರತದ "ಬಡವರು" ಮಾತ್ರ ಕಣ್ಣಿಗೆ ಬಿದ್ದಿರುವದೇನು? ಅಮೆರಿಕದಲ್ಲಿ, ಬ್ರಿಟನಿನಲ್ಲಿ ಬಿಕ್ಕೆ ಬೇಡುವವರು ಇಲ್ಲವೇನು? ಮೊದಲು ಅಲ್ಲಿ ಸರಿಮಾಡಿಕೊಂಡು ಇಲ್ಲಿಗೆ ಬರಬೇಕಲ್ಲವೇ? ಅದನ್ನು ಬಿಟ್ಟು ಇತ್ತ ಬರುತ್ತಿರುವದಕ್ಕೆ ಬೇರೆ ಕಾರಣ ಇದ್ದೇ ಇರಬೇಕು. ಸರಿ ಹಾಗೆ ಬಂದ ಮೇಲೆ ಇಲ್ಲಿ ಮಾಡುವ ಸಮಾಜ ಸೇವೆಯಾದರೂ ಯಾವ ರೀತಿಯದ್ದು? ಹಿಂದೂಗಳಲ್ಲಿ "ಜಾತಿ ಭೇದ" ಇರುವ ಕಾರಣ "ಕೆಳಜಾತಿಯವರನ್ನು 'ಮೇಲ್ಜಾತಿಯವರು' ತುಳಿದಿಟ್ಟಿರುವದರಿಂದ ಅವರನ್ನು ಅನ್ಯ ಮಾನವರಿಗೆ ಸರಿ ಸಮಾನವಾಗುವಂತೆ ಮಾಡಲಿಕ್ಕಾಗಿ 'ಜಾತಿ ಭೇದ ಇಲ್ಲದ" ಕ್ರಿಸ್ತೀಯ ಮತಕ್ಕೆ ಅವ ತಾಂತರಿಸಲಾಗುತ್ತಿದೆ ಮತ್ತು ಇದು ಕರುಣೆಯಿಂದ ಇದ್ದು, ಉತ್ತಮ ಸಮಾಜ ಸೇವೆಯೆನ್ನಲಾಗುತ್ತಿದೆ. ಹಾಗಿದ್ದಲ್ಲಿ ಸಮಾನ ಮಾನವರಿಗೆ ಸಲುಗೆಯು ಅವಶ್ಯಕತೆಯಾದರೂ ಏನು? ಈ ರೀತಿ ಕಲಗೆದುಕುತ್ತಿರುವ ಕ್ರಿಸ್ತೀಯ ಮತ ಪ್ರಸಾರಕರು ಮೊತ್ತ ಮೊದಲು ಭಾರತಕ್ಕೆ ಬರಬಹುದಿತ್ತೇ ಅನ್ನುವದನ್ನು ಅರಿತುಕೊಳ್ಳಬೇಕು. ಬಾಯಿಬಲನ್ನು ಹೊಸ ಒಡಂಬಡಿಕೆ [New Testament] ಒಂದು ಭಾಗವಿದೆ. ಅದರಲ್ಲಿ ಅಪೋಸ್ತಲರ ಕೃತ್ಯಗಳೆಂಬ ವಿಭಾಗವಿದೆ. ಅದರಲ್ಲಿ ಹದಿನಾರನೆಯ ಅಧ್ಯಾಯದಲ್ಲಿ, ವಿಷ್ಯಾದಲ್ಲಿ ಮತ ಪ್ರಚಾರ ಮಾಡಕೂಡದೆಂದು 'ಪವಿತ್ರಾತ್ಮ"ವು ಅಪೋಸ್ತಲರಿಗೆ ಆದೇಶವೀಯುತ್ತಿದೆ.

"Now when they had geon throughout Phrygia and the region of Galatia, and were forbidden of the Holy Ghost to preach the word in Asia. (6)

"After they were come to Mysia, they assayed to go into Bithynia, but the Spirit suffered them not"(7)

ವಾಸ್ತವ ಸ್ಥಿತಿ ಹೀಗಿದ್ದರೂ ಭಾರತದಲ್ಲಿ ಮತಪ್ರಸಾರ ಮಾಡಲು ತಮಗೆ ಸಂವಿಧಾನದ ಪ್ರಕಾರ ಹಕ್ಕು ಇದೆಯೆಂದು ಬೆಂಗಳೂರಿನಲ್ಲಿ ನೇರಿದ ಬಿಷಪ್ಪರು ತಮ್ಮ ಸಹಾಯಕ್ಕೆ ಸಂವಿಧಾನದ ಹೆಸರನ್ನು ತೆಗೆದಿರುವರು. ಹಾಗಿದ್ದಲ್ಲಿ ಈ ಮತ ಪ್ರಚಾರಕರು ಆತ್ಮಸಾಕ್ಷಿಯಿಂದ ಹೇಳಬಲ್ಲರೇ—ತಮಗೆ ಬಾಯಿಬಲಗಿಂತಲೂ

ಭಾರತದ ಗಣವಿಧಾನ (ಕೌನ್‌ಸ್ಟಿಟ್ಯೂಶನ್) ಪವಿತ್ರವಾದದ್ದು ಅಥವಾ ಕೊನೆಯ ಪಕ್ಷ ಮಾನ್ಯವಾದದ್ದೆಂದು? ಅದೆಷ್ಟು ಜನ ಪಾದ್ರಿಗಳು ಸಂವಿಧಾನಕ್ಕೆ ಜಾಯಿಬಲಿಗಿಂತ ಮೇಲ್ಮಟ್ಟದ ಸ್ಥಾನವನ್ನು ಕೊಡಲು ಸಿದ್ಧವಾಗಿದ್ದಾರೆ?

ಇಂತಹ ಸನ್ನಿವೇಶದಿಂದ ಪಾರಾಗಲಿಕ್ಕಾಗಿ ಈ ವಿಷಪ್ಪರುಗಳು ವೆಟಿಕನಿನ ಹೆಸರನ್ನು ತೆಗೆದಿರುವರು. ಭಾರತದ ಕ್ರಿಸ್ತೀಯ ಮತ ಪ್ರಸಾರಕರಿಗೆ, ಭಾರತದ ಸಂವಿಧಾನಕ್ಕನುಸಾರವಾಗಿ ನಡೆಯುವ ಕ್ರಿಸ್ತೀಯರಿಗೆ ರೋಮಿನಿಂದ ಆಜ್ಞೆ ಬರಬೇಕಂತೆ! ಏನು ಸೋಜಿಗ! ಹಾಗಾದು. ವೆಟಿಕನಿನಿಂದ ಆಜ್ಞೆ ಬಂದಲ್ಲಿ ಅವರು ಜಾಯಿಬಲವನ್ನು ಒದಿಗೆ ಸರಿಸಲು ಸಿದ್ಧರೋ, ಏನೋ! ಅದಕ್ಕೆ ನಿದರ್ಶನವಾಗಿ ಇದಿ ಆದಿತ್ಯವಾರ ದೇವರು ಜಗತ್ತನ್ನು, ಜೀವಾದಿಗಳನ್ನು ಆರು ದಿನಗಳಲ್ಲಿ ಸೃಷ್ಟಿಸಿದ ಮೇಲೆ ಏಳನೆಯ ದಿನ ವಿಶ್ರಾಂತಿ ಪಡೆದು ಕೊಂಡಿರುವರಲ್ಲದೆ, ಎಲ್ಲರೂ ಇಂದು ವಿಶ್ರಾಂತಿ ಪಡೆದುಕೊಳ್ಳಬೇಕೆಂದು ಕಟ್ಟಪ್ಪಣೆಯ ತ್ತಿರುವರೆಂದು ಜಾಯಿಬಲ್ ತಿಳಿಸುತ್ತದೆ. ಅಂದರೆ ಶನಿವಾರದ ದಿನ ಕ್ರಿಸ್ತೀಯರು ವಿಶ್ರಾಂತಿಯಿಂದಿದ್ದು ಭಗಜಿಗೆ ಹೋಗ ಬಂತೆ ಮತೀಯ ಕಾರ್ಯಾಚರಣೆಯಲ್ಲಿ ಭಾಗವಹಿಸಬೇಕು. ಇಂದು ಹಾಗೆ ನಡೆಯುತ್ತದೆಯೇ? ಇದಕ್ಕೆ ಕಾರಣವೇನ ?

ರೋಮ್ ಸಾಮ್ರಾಜ್ಯ ಜಗತ್ ಪ್ರಸಿದ್ಧ ಸಾಮ್ರಾಜ್ಯವಾಗಿತ್ತು. ಅಲ್ಲಿಯ ಜನರು ಸುಪ್ರೀಮಾಸಾಕರು ಅಲ್ಲಿಯ ಚಕ್ರವರ್ತಿಗಿನ್ನಂತೂ ಬುಟ್ಟಿಯಲ್ಲಿ ಹಾಕಿಕೊಂಡ ಕ್ರಿಸ್ತೀಯ ಮತ ಪ್ರಸಾರಕರು ಯೋಚಿಸಲಾರಂಭಿಸಿದರು.-ಜನರನ್ನೆಂಥ ಬಲೆಯಲ್ಲಿ ಬೀಳಿಸಿಕೊಳ್ಳುವದೆಂದು ಒಡನೆ ಉಪಾಯ ಹೊಳೆಯಿತು. ಅಲ್ಲಿಯ ಜನರಿಗೆ ಪ್ರಿಯವಾದ ಭಾನುವಾರ ಅಥವಾ ಆದಿತ್ಯವಾರದಂದು ಇಗರ್ಜಿಯು ಕಾರ್ಯಕ್ರಮಗಳನ್ನಿಟ್ಟುಕೊಂಡಲ್ಲಿ ಸೂರ್ಯ ದೇವಾಲಯಕ್ಕೆ ಜನರು ಹೋಗುವಂತೆ ಇಗರ್ಜಿಗೂ ಒಂದಾರು. ಹಾಗೆಯೇ ಆಯಿತು. ಹೀಗೆ ಕ್ರಿಸ್ತೀಯರಲ್ಲಿ ಕೆಥೋಲಿಕ ಮತ ಪ್ರಸಾರಕರಿಗೆ ರೋಮ್ ಕೇಂದ್ರ ನಗರವಾಗಿ ಬಿಟ್ಟಿದೆ. ಇಂದೊ ಅಲ್ಲಿಂದಲೇ ಅವರಿಗೆ ಅಪ್ಪಣೆ ಬರಬೇಕು.

ಹೀಗಿರುವಾಗ ಜಾಯಿಬಲಿನ ಪ್ರಕಾರ ನಡೆದು ಅವರಿಗೆ ಜಾಯಿ ಬಲನ್ನು ಭೋಧಿಸುವ ಅಧಿಕಾರವಾದರೂ ಏನು? ಇದರಿಂದ ಅವರು ಕೇವಲ ಜಾಯಿಬಲನ್ನು ಭೋಧಿಸಲಿಕ್ಕಾಗಿ ಬಾದಿತರಾಗಿದಿಲ್ಲ; ಅದರ ಬದಲು ನಾಗಾಲೇಂಡ್, ವಿಯೆಟ್‌ನಾಮ್ ಲೇಂಡಿನ ರಜನೆಗಾಗಿ ಪ್ರಯತ್ನಿಸುತ್ತಿರುವ ಸ್ವಾತಂತ್ರಿಯಾಂಬುದು ಸ್ಪಷ್ಟವಾಗುತ್ತದೆ. ಹಾಗಿದ್ದರೂ ಭಾರತ ಸರಕಾರವು ತಮ್ಮ ಪಟ್ಟನಾದಶ್ಚ ಹಕ್ಕನ್ನು ಯಾರಿಸುತ್ತಿದೆಯೆಂದು ವಿಷಪ್ಪರುಗಳು ತಮ್ಮ ಆಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಘಟನೆಯಲ್ಲಿ ಇರುವ ದಾದರೂ ಏನು? ಆಯೋಯ ಮತಸ್ಥರು ಅವರವರ ಮತಸಿಯಮಗಳಿಗನುಸಾರವಾಗಿ ನಡೆದುಕೊಳ್ಳಬೇಕಂದಿದೆ. ಇದಕ್ಕೆ ಯಾರೂ ಅಡ್ಡಿ ಬರಬಾರದು. ಇದು ಕ್ರಿಸ್ತೀಯ ಮತಪ್ರಸಾರಕರಿಗೆ ಮಾತ್ರ ವಿಶಾಲವಾದ ವಿಶೇಷ ಹಕ್ಕು ಇಲ್ಲ. ಸರ್ವ ಜನರಿಗೂ ಸರ್ವ ನಾಗರಿಕರಿಗಾಗಿ ಇರುವ ಹಕ್ಕು. ಬಿಹಾರದ ಸಂತ್ರಸ್ತ ಜನತೆಗೆ ಈ ಹಕ್ಕು ಇಲ್ಲವೇನು? ಬಡ ಜನತೆಗೆ ತಮ್ಮ ತಮ್ಮ ಮತ ನಿಯಮಗಳನ್ನು ಪಾಲಿಸುವ ಹಕ್ಕು ಇಲ್ಲವೇನು? ಅವರಿಗೂ ಆ ಹಕ್ಕು ಇದ್ದಲ್ಲಿ ಅದನ್ನು ಅಪಹರಿಸುವದು ಅನ್ಯಾಯ ಅಲ್ಲವೇನು? ಅದಕ್ಕೆ ತಾವು ಬಲತ್ಕಾರ ಮಾಡಿಲ್ಲ. ಅವರಾಗಿಯೇ ಬಂದರೆಂದು ಮತಪ್ರಸಾರಕರು ಮಾತು ಹಾರಿಸಬಹುದು. "ಇಲ್ಲಿ ವಿಷನು ಹಿಡಿಯಾ ಬಾರದೆಂದು ಒಂದು ಕೆರೆಯ ಬಳಿ ಹಲಗೆಯಲ್ಲಿ ಬರೆದಿಟ್ಟಿದ್ದರು. ಆ ಕೆರೆಯ ಲ್ಲಿ ಒಬ್ಬನು ಗಾಳ ಹಾಕುತ್ತಿದ್ದನು ಮತ್ತು ಬಂಗ ಮೀನುಗಳನ್ನು ನಿರ್ದಿಷ್ಟ ಸ್ಥಾನದತ್ತ ಹಾರಿಸಿ ಬಿಡುತ್ತಿದ್ದನು. ಅವನನ್ನು ಹಿಡಿದಾಗ ಅವನು ತಾನು ಮೀನು ಹಿಡಿದಿಲ್ಲವೆಂದೇ ಸಾಧಿಸಿದನು. ಮೀನುಗಳು ತಾವಾಗಿಯೇ ಬಂದು ಗಾಳವನ್ನು ನುಂಗಿದವೆನ್ನುವದು ಅವನ ವಾದ. ಅದು ನ್ಯಾಯ ಅಲ್ಲವೇ? ಇವ ಅದೆಲ್ಲಿ ಅಧ್ಯಗಳನ್ನು ಹಿಡಿಯಲು ಹೋಗಿದ್ದ, ಅವಾಗಿಯೇ ಬಂದು ಸಿಕ್ಕಿ ಬಿದ್ದುವು. ಆ ಕೆರೆಯಲ್ಲಿ ಅವನು ಪ್ರಗತಿ ಪೊಂದಿದ್ದನು. ಏನೇ ಇದ್ದರೂ ಆ ಗಾಳದ ಕೊಂಡಿಯಲ್ಲಿ ಆಹಾರವನ್ನು ಇಟ್ಟಿದ್ದರಿಂದಲ್ಲವೇ ಮೀನು ಅದಕ್ಕೆ ಬಾಯಿ ಹಾಕುತ್ತಿತ್ತು? ಕ್ರಿಸ್ತೀಯ ಮತಪ್ರಸಾರಕರು ಮಾಡುತ್ತಿರುವದಾದರೂ ಇದೇ ಗಾಳ ಹಾಕುವ ಕೆಲಸವನ್ನಲ್ಲವೇ? ಇದರ ಮೇಲೆ ಗಾಳ ಹಾಕಲಿ. ತಮಗೆ ಅಡ್ಡಿ ಬರುವ್ರಿದ್ದಾರೆಂಬ ಆರೋಪನವನ್ನೂ ಅವರು ಹೊರಿಸುತ್ತಿದ್ದಾರೆ. ಎಂತಹ ಚತುರರು! ಇತರರು ಎಂತಹ ಹೆದ್ದರು!

ಈ ಜಬರದಸ್ತಿನ ಕಣ್ಣಾಮುಚ್ಚಾಲೆಯಾಟ ಬಹಳ ದಿನ ನಡೆಯುವಂತಿಲ್ಲ. ಅವರು ವೆಟಿಕನ್ ಮತ್ತು ಭಾರತದ ಸಂವಿಧಾನಕ್ಕೆ ಹೊಂದಿಕೊಂಡಿರಲು ಸಾಧ್ಯವಿರುವದಿಲ್ಲ. ಎರಡರಲ್ಲಿ ಒಂದನ್ನ ಆರಿಸಿಕೊಳ್ಳಲೇಬೇಕು. ಡಚ್ಚರು, ಫ್ರೆಂಚರು, ಪೋರ್ಚುಗೀಸರ ಹಾಗೂ ಆಂಗ್ಲೇಯರ ಆಕ್ರಮಣದ ಪರಿಣಾಮವಾಗಿ ಮತ್ತು ಅಮೇರಿಕ, ಸ್ವಿಟ್ಜರ್‌ಲೇಂಡ್ ಮುಂತಾದ ದೇಶಗಳ ಮತೀಯ ಪ್ರಸಾರಕರ ಪರಿಣಾಮವಾಗಿ ಭಾರತದಲ್ಲೇ ಇದ್ದ ಹಿಂದೂಗಳು ಮತಗಡಿಸಿಕೊಳ್ಳುವಂತಾಗಿತ್ತು. ಈಗ ನನಗೆ ಸ್ವಾತಂತ್ರ್ಯವಿದೆ. ಹಿಂದಿನ ಆ ಗುಲಾಮಿಯ ನೊಗವನ್ನು ಕಿತ್ತೊಗೆದು ಮೂತೆಯು ಮಡಿಲಿಗೆ ಮರಳಬಹುದು. ಆದದ್ದು ಆಗಿಹೋಯಿತು. ಅಂದಿಗೆ ಅದೇ ಸುಖ ಇಂದಿಗೆ ಇದೇ ಸುಖವೆನ್ನಿನದಾಪ್ಪಲ್ಲ. ಬಾಲ ಕಳೆದುಕೊಂಡಿರುವ ಈ ನರಿಗಳು ಅನ್ಯರ ಬಾಲ ಕತ್ತರಿಸುವದು ಸರಿಯಲ್ಲ. ಇದು ಇಲ್ಲಿರುವ ಮತಪ್ರಸಾರಕರ ವಿಷಯ.

ಅನ್ಯದೇಶೀಯ ಮತಪ್ರಸಾರಕರೂ ಇದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಅವರಿಗೆ ಇಲ್ಲಿಯ ಸಂವಿಧಾನಾನುಯಾಯಿಗಳು ಸಹಾಯ ಮಾಡುವುದು ಸರಿ ಇರುವದಿಲ್ಲ. ಈ ವಿಷಯದಲ್ಲಿ ಕಂಡಪ್ಪನ್ನ ಹೇಳಿರುವದಕ್ಕೆ ಅವರಿಗೆ ಕೆಂಡಾಮಂಡಲ ಕೋಪ ಬರುವದು ಸರಿ ಇರುವದಿಲ್ಲ. ಕೋಪದ ಭರದಲ್ಲಿ ಭೂತವು ಗೀತೆಯು ಶೆಲ್ಲೀಗಳನ್ನು ಪಠಿಸುವಂತೆ ಸಂವಿಧಾನವನ್ನು ಸಂಲುಗನ್ನು ಉದ್ಧರಿಸುವದು ಸರಿ ಇರುವದಿಲ್ಲ.

ಇದು ಏಯು ಜಾಜಂವಿ ವಿಶೇಷ

ನಾವು—ನೀವು ಉತ್ತರಿಸಬೇಕು

ಒಬ್ಬರಿಗೆ ಸುಖ ಇದೆಯೇ?

– ಶ್ರೀ ಸುರತ್ಕಲ್ ರಾಮಕೃಷ್ಣ ಜೆಬ್ಬಾರ್.

'ನಿನಗೆ—ನನಗೆ ಸ್ವಾತಂತ್ರ್ಯ ಸಿಕ್ಕಿದೆ. ಸಂಬಳ ಹುಟ್ಟಿ ಭತ್ತೆ ಏರಿದೆ. ಇನ್ನು ಆರಾಮವಾಗಿರ ಬಹುದಲ್ಲವೇ?'

'ಏನಾದರೇನು? ಅಕ್ಕಿ, ಸಕ್ಕರೆ ಇತ್ಯಾದಿ ಸಾಮಾಪ್ಪುಗಳು ಬೆಲೆ ಏರಿದ ಈ ಸಂಭ್ರದಲ್ಲಿ ಸಂಬಳ ಏರಿದರೂ ಏನು ಉಪಯೋಗ? ಒಬ್ಬರಿಗೆ ಸುಖವಿಲ್ಲ. ನವ್ಯ ಕೃಷಿ ಪ್ರಧಾನವಾದ ದೇಶವಾದರೂ ಸುಖವಿಲ್ಲ. ಶ್ರೀ ರಾಮಾ!"

ಎಂದು ಹಲವರು ಹೇಳುವ ಮಾತುಗಳನ್ನು ನಾವು ಕೇಳಬಹುದು. ಕಲಿತವನಿಂದ ಕಲಿಯದವನ ವರೆಗೂ ಇರುವ ಮನುಷ್ಯನ ಮುಖ್ಯ ಉದ್ದೇಶ ಸುಖ. ಆದರೆ ಆ ಸುಖ ಎಂಬುದು ಕನಸಿನ ಮಾತು. ಮಾನವನಾದವನಿಗೆ ಸುಖ ಎಂಬುದಿದೆಯೇ? ಸಾಯುವ ವರೆಗೂ ಅವನಿಗೆ ಸುಖ ಎಂಬ ಭವ್ಯ ಸೌಧ ಬಿಂಡಿತಕ್ಕೂ ಸಿಗದು.

ಎಷ್ಟೋ ದುಡಿದು ಹಣಕಂವಾದಿಸಿ ಶ್ರೀಮಂತನೆನಿಸಿದ್ದರೂ ಸುಖದಿಂದ ಇರುವೆನೆಂದು ಛಾವಿಸಿದ್ದರೂ ಸುಖದಿಂದ ಇರುವೆನೆಂದು ಭಾವಿಸಿದರೆ ಅವನ ಹಣವನ್ನು ಕಳ್ಳ ಟಾಕರು ಕದ್ದೊಯ್ಯುತ್ತಾರೆ. ಮನೆ ಬೇಕು, ಮಡದಿ ಬೇಕು, ಮಕ್ಕಳಿಗೆ ವಿದ್ಯುತ್ ಲೈಟ್, ಫ್ಯಾನ್, ರೇಡಿಯೋಗಳು ಬೇಕು; ಧನ ಬೇಕು, ಧಾನ್ಯ ಬೇಕು, ಐಶ್ವರ್ಯ ವೈಭವಗಳು ಬೇಕು ಎಂಬ ಭಾವನೆಯೇ ಸಲಿದ ಉದ್ದೇಶವಲ್ಲವೆ ಮತ್ತೇನಲ್ಲ.

ಸುಖವನ್ನು ಬಯಸಿ ಕಾರವನ್ನು ಏನೇನೋ ಮಾಡಿದನು. ಆದರೂ ಅವನಿಗೆ ಸುಖ ದೊರೆಯಲಿಲ್ಲ. ರಾವಣನು ಹೆಣ್ಣನ್ನು ಬಯಸಿ ಸುಖ—ಸುಖವೆಂದು ಕೊನೆಗೂ ಆ ಸುಖದ ಸವಿಯನ್ನು ಉಣ್ಣದೆ ಹೋದನು.

ಆದರೂ ನಮ್ಮ ಗುರಿ ಸುಖ! ಸುಖ!

ನಮ್ಮ ಮನಸ್ಸು ಸುಖವನ್ನು ಸುಖವನ್ನಾಗಿ ಪಡೆಯಲು ಬಯಸುತ್ತದೆ. ನಮ್ಮಲ್ಲಿಲ್ಲದ ಇತರ ವಸ್ತುಗಳನ್ನು ಸುಖಕ್ಕಾಗಿ ಬಯಸುತ್ತದೆ. ಅದು ಸಿಕ್ಕಿದ ಬಳಿಕ ಅ ವಸ್ತು ಏನಲ್ಲಿ ಸುಖವನ್ನೇ ಕಂಡುಕೊಳ್ಳದೆ ಇನ್ನೊಂದು ವಸ್ತುವಿನಲ್ಲಿ ಸುಖವನ್ನು ಬಯಸುತ್ತದೆ. ಒಟ್ಟಿನಲ್ಲಿ ಸುಖವನ್ನು ಅರಸುವುದು ಆ ಸುಖವನ್ನು ತಂದುಕೊಳ್ಳಲು ಎಂಬುದಂತೂ ಅಕ್ಷರಶಃ ಸತ್ಯ.

ಸುಖ ಎಂಬುದು ಸಂತೋಷ, ಆನಂದದ ಮೂಲವೇ ಸುಖ.

ಸಿಕ್ಕಿರುವ ವಸ್ತುವಿನಿಂದಲೇ ತೃಪ್ತಿಯನ್ನು ಪಡೆಯುವುದು; ಸಿಗದಿರುವ ವಸ್ತುವನ್ನು ಅಪೇಕ್ಷಿಸದಿರುವುದು. ಇದುವೇ ಮುಕ್ತಿಗೆ ದಾರಿಯಂತೆ! ಈ ಲೋಕ ಮತ್ತು ಪರಲೋಕಗಳಲ್ಲಿ ಸುಖ ಸಿಗಬೇಕೆಂಬ ಆಪೇಕ್ಷೆಯನ್ನು ಹಿಡಿಯದೆ ನಿಷ್ಕಾಮ ಬುದ್ಧಿಯಿಂದ ತನ್ನ ಕರ್ತವ್ಯ ಎಂಬ ದೃಷ್ಟಿಯಿಂದ ಇರುವುದೇ ಮುಕ್ತಿಗೆ ದಾರಿ. ಇಲ್ಲವಾದರೆ ಸುಖವು ಸಿಗದು.

ಈ ಶರೀರವೇ –ದುಃಖಮಯ! ಸುಖದ ಆಸೆಯಿಂದ ನಾವು ಯಾವುದನ್ನೂ ಹುಡುಕಲು ಹೋಗಬಾರದು.

"ಮನುಜ ಶರೀರವಿದೇನು ಸುಖ...." ಎಂದು ದಾಸವರೇಣ್ಯರು ಹಾಡಿರುವುದನ್ನು ನಮನಿಸಿದಾಗ— 'ಒಬ್ಬರಿಗೆ ಸುಖ ವಿಲ್ಲ" ಎನ್ನಬಹುದು.

ಮೂವ್ವೋ ಲೋಕದ ಅದ್ಭುತಗಳು

ಚೀನಾದಲ್ಲಿ ನೂವ್ವೋ ಮಂತ್ರ ಪಠಿಸಿದರೆ ಅನ್ನವೂ ಸಹ ಬೇಗ ಬೇಯುತ್ತದೆಯಂತೆ! ಮೂವ್ವೋ ತತ್ವವನ್ನು ಅಷ್ಟು ಮಟ್ಟಿಗೆ ವ್ಯಾಪಕಗೊಳಿಸಲಾಗಿದೆ.

ಮೂವ್ವೋ ತತ್ವಗಳ ಸಂಗ್ರಹವುಳ್ಳ ಚಿಕ್ಕ "ಕೆಂಪು ಪುಸ್ತಕ"ದ ಪ್ರಭಾವ ಎಷ್ಟಿದೆ? ಎಂಬುದನ್ನು ವಿಶ್ವದ ಚೀನೀ ವ್ಯವಹಾರ ತಜ್ಞರು ಈಗ ಆಳೆದು ನೋಡತೊಡಗಿದ್ದಾರೆ.

ಆವಗ ಪ್ರಾರಂಭಿಕ ಅಧ್ಯಯನದಿಂದ ಈ ಸಂಗತಿಗಳು ಬೆಳಕಿಗೆ ಬಂದಿವೆ. ಮೂವ್ವೋತ್ಸೆ ತುಂಗರ ಕೆಂಪು ಪುಸ್ತಕಕ್ಕೆ ಸಾಮಾನ್ಯವಾಗಿ ಭಾವಿಸಿರುವಂತೆ ಹೆಚ್ಚಿನ ಗಿರಾಕಿಗಳಿಲ್ಲ. ಈ ಪುಸ್ತಕವನ್ನು ಕೊಂಡವರೆಲ್ಲ ಮೂವ್ವೋ ತ್ಸೆ - ತುಂಗರ ಹಿಂಬಾಲಕರಲ್ಲ. ಕೆಂಪು ಪುಸ್ತಕವನ್ನ ಕೊಂಡವರು ಸ್ವ ಇಚ್ಛೆಯಿಂದ ಅದನ್ನು ಕೊಳ್ಳಲ್ಲಿಲ್ಲ. ಒತ್ತಾಯಕ್ಕೋ ಅಥವಾ ಬೆದರಿಕೆಗೋ ವಶವಿದು ಅದನ್ನು ಕೊಂಡರು ಕೊಳ್ಳದಿದ್ದರೆ, ಬದುಕುವುದೇ ಕಷ್ಟ ಎಂಬ ಭೀತಿಯಿಂದ.

ಇನ್ನು ಈ ಪುಸ್ತಕದಲ್ಲಿನ ತತ್ವಗಳಿಗಿಂತಲೂ ಅಧ್ಯಗಳ ಆನುಷ್ಠಾನ ಅಸ್ಪೃಶ್ಯ ವಿಷ್ಯಯಕಾರಿಯಾಗಿದೆ.

ಟೀಕಿಂಗ್ ಜೈಲಿ ಪತ್ರಿಕೆಯಲ್ಲಿ ಪ್ರಕಟವಾದ ವರದಿಯ ಮೇರೆಗೆ ಜೀಳುವುದಾದರೆ, ಮೂವ್ವೋ ತತ್ವಗಳ ಪರಣದಿಂದ ಅನ್ನವೂ ಬೇಗನೇ ಬೆಂದಿತ.! ಪೈಡಾನ್ ರೇಡಿಯೋ ಪ್ರಕಾರ ಲೈಲು ಬಂಡಿಯು ಪ್ರಧಾನ ಶ್ರೈವರನೊಬ್ಬನು ಮೂವ್ವೋ ವಿ

(ಹದಿಮೂರನೇ ಪುಟ ನೋಡಿರಿ)

ವಿಶ್ವ ಸಹಿತೆ

'ಗೀತೆ'ಯ ಮಹತ್ವ

ಬರೆದವರು : ಶ್ರೀ ಬಿ. ನರಸಿಂಗರಾವ್.

'ಮಹಾಭಾರತ'ವು ವಿಶ್ವಸಾಹಿತ್ಯದಲ್ಲಿ ಒಂದು ಅನುಪಮ ಗ್ರಂಥವೆನಿಸುತ್ತದೆ. ಮಹಾಭಾರತದ 'ಗೀತೆ'ಯನ್ನೊಳಗೊಂಡಿರುವುದರಿಂದ 'ಮಹಾಭಾರತ'ದ ಜನಪ್ರಿಯತೆಯು ಇನ್ನೂ ಹೆಚ್ಚಿದೆ, ಮಹಾಭಾರತದ ಭೀಷ್ಮಪರ್ವದಲ್ಲಿ 'ಗೀತೆ'ಯ ಅಮೃತೋಪದೇಶವನ್ನು ಸವಿಯಬಹುದು. 'ಗೀತೆ'ಯನ್ನು ಹಿಂದುಗಳ ಪವಿತ್ರ ಗ್ರಂಥವೆಂದು ಹೇಳಬಹುದಾದರೂ "ಗೀತೆ"ಯು ವಿಶ್ವದ ಮಾನವ ಜನಾಂಗಕ್ಕೆ 'ಆದರ್ಶ ಗೀತ'ವಾಗಿದೆಯೆಂಬುದಕ್ಕೆ ವಿದೇಶದಲ್ಲಿ 'ಗೀತೆ'ಯ ಪ್ರಸಿದ್ಧಿಯೇ ಸಾಕ್ಷ್ಯವೊದಗಿಸುತ್ತದೆ. ಸರ್ ಎಡ್ವಿನ್ ಆರ್ನಲ್ಡ್ ಗೀತೆಯನ್ನು 'ಸ್ವರ್ಗೀಯ ಗೀತ'ವೆಂದ ಕೊಂಡಾಡಿ ಇಂಗ್ಲೀಷಿನಲ್ಲಿ ಅದನ್ನು ಭಾಷಾಂತರಿಸಿದ್ದಾರೆ.

ಇಂಡಾದರೋ ವಿಶ್ವದಲ್ಲಿ ಗೀತೆಯಂಥ ಕುರಿತಾದ ಹಲವಾರು ಪೊತ್ತಗೆಗಳು, ಟೀಕಾ ಸಹಿತ ವಿವರಣೆಗಳು, ವ್ಯಾಖ್ಯೆಗಳು ಅಧಿಕ ಪ್ರಮಾಣದಲ್ಲಿ ಕಾಣಬರುತ್ತವೆ. 'ಗೀತೆಯನ್ನೋದಿದವನಿಗೆ ಇನ್ನಗ್ರಂಥಗಳನ್ನೋದುವ ಅವಶ್ಯಕತೆಯಿಲ್ಲ.' ಎಂದಿದ್ದಾರೆ, ಜಗದ್ಗುರು ಆದಿ ಶಂಕರಾಚಾರ್ಯರು. ಗೀತೆಯನ್ನು ಶ್ರೀ ಕೃಷ್ಣನು ಅರ್ಜುನನಿಗೆ ಪದ್ಯರೂಪದಲ್ಲಿ ಅತ್ಯಂತ ಸುಂದರ, ಸರಳ ಶೈಲಿಯಲ್ಲಿ, ಸುಂದರ ಉಪಮೆದಳನ್ನು ನೀಡಿ ವಿವರಿಸಿದ್ದಾನೆನ್ನುವುದು ನಿಜ. ಆದರೆ ಇಲ್ಲಿ ಅರ್ಜುನನೆಂದರೆ ಈ ವಿಶ್ವದ ಮಾನವ ಕೋಟಿಯೆಂದೇ ಅರ್ಥವಲ್ಲದೆ ಅನ್ಯಥಾ ಅಲ್ಲ. ವರಾಹ, ಸ್ಕಂದ, ಪದ್ಮ ಪುರಾಣಗಳಲ್ಲಿ ಗೀತೆಯ ಮಹತ್ವದ ಕುರಿತು ಉಲ್ಲೇಖವಿದೆ. ಬಾಣಭಟ್ಟನ "ಕಾದಂಬರಿ" ಯಲ್ಲೂ 'ಗೀತೆ'ಯ ಪಾನವನ್ನು 'ಅಮೃತಪಾನ'ಕ್ಕೆ ಹೋಲಿಸಲಾಗಿದೆ. ಮಾನವ ಹೃದಯಕ್ಕೆ ಶಾಂತಿಯ ತಂಪನ್ನು ಕೀಡುವುದು 'ಗೀತೆ' ಯೇ ಆಗಿದೆ.

ಗಿಬ್ಬನ್ಸರಲ್ಲಿ ಚಾರ್ಲ್ಸ್ ವಿಲ್ಕಿನ್ಸ್ ಎಂಬ ಮೋರ್ವ ಆಂಗ್ಲೇಯನು ಗೀತೆಯ ಒಂದು ಇಂಗ್ಲೀಷು ಆನುವಾದವನ್ನು ಪ್ರಕಟಿಸಿದನು. ಆ ಅನುವಾದಕ್ಕೆ ಮುನ್ನುಡಿ ಬರೆದಿದ್ದ ವಾರನ್ ಹೇಸ್ಟಿಂಗ್ಸ್, ಅದರಲ್ಲಿ ಗೀತೆಯನ್ನು ಈ ರೀತಿಯಾಗಿ ಹೊಗಳಿದ್ದಾನೆ. "ಗೀತೆಯು ಎಂದೆಂದಿಗೂ ಇಡೀ ಭಾರತದಲ್ಲಿ ಬ್ರಿಟಿಷ್ ರಾಜ್ಯದ ಪೂರ್ವ ಗೀತೆಯಂತೆ ಇರಲಿದೆ ಮತ್ತು ವಿಶ್ವದ ಅದರ ಸಮೃದ್ಧ ಸಾಹಿತ್ಯ ನಾಶವಾದಮೇಲೆ ಕೂಡ ಉಳಿದಿರುತ್ತದೆ." ಕ್ರಿಸ್ತೂ ಪೂರ್ವ ಇಪ್ಪತ್ತೊಂಭತ್ತರವರ ಗೀತಾನುವಾದ ಕೈಗೊಂಡ ಒಬ್ಬ ಮಾಕ್ಸಾಲ್ಟ್ ಮಾರ್ಶಲ್ ಹಿಂಗೂ ಬರೆದಿದ್ದಾನೆ. "ಗೀತೆಯಲ್ಲಿ ವಿಶ್ವದ ದಾರ್ಶನಿಕ ಸಾಹಿತ್ಯದ ಪೂರ್ಣ ಜ್ಞಾನವೇ ಇದೆ, ಅದರ ಸಂಕ್ಷೇಪವೆಂಬಂತಿದೆ. ಇದು ಭಾರತೀಯ ಗ್ರಂಥಾಂದರೂ ಇದು ವಿಶ್ವವನ್ನೇ ಗ್ರಂಥಪಡಿಸಿಸುತ್ತದೆ."

ಲೋಕಮಾನ್ಯರು ಗೀತೆಯು ಕುರಿತಾದ ಬೃಹದ್ ಗ್ರಂಥವೊಂದನ್ನೆ ರಚಿಸಿ ಗೀತೆಯಲ್ಲಿ 'ಕರ್ಮಯೋಗ' ಕ್ಕೆ ಪ್ರಾಧಾನ್ಯವೆಂದಿದ್ದಾರೆ. ಮಹಾತ್ಮಾ ಗಾಂಧೀಜಿಯವರಿಗೆ ಗೀತೆಯು 'ಆಧ್ಯಾತ್ಮಿಕ ಮಾತೆ' ಯೇ ಆಗಿತ್ತು. 'ನನ್ನನ್ನು ಹೆತ್ತ ಮಾತೆಯನ್ನೂ ನಾನು ಕಳೆದುಕೊಂಡಿದ್ದೇನೆ, ಆದರೆ ಆ ಮಾತೆಯು ಸ್ಥಾನವನ್ನು ತುಂಬಲು"ಗೀತಾ ಮಾತೆ"ಗೆ ಮಾತ್ರ ಸಾಧ್ಯವಾಯಿತು.'ಅವಳೆ'ಂದೂನನ್ನನ್ನು ನಿರಾಶೆಗೊಳಿಸಿದ್ದಿಲ್ಲ. ಅದೆಷ್ಟು ಕಷ್ಟದ ನಡುವೆ ನಾನು ಬಿದ್ದರೂ "ಅವಳು" ನನಗೆ ಆಸರೆಯಾಯಿತಿದ್ದಳು; ಅಭಯ ನೀಡುತ್ತಿದ್ದಳು"

ಮಹರ್ಷಿ ಅರವಿಂದರು ಗೀತೆಯು ಕುರಿತಾದ ೮೦೦ ಪುಟಗಳ ಗ್ರಂಥದಲ್ಲಿ ಈ ರೀತಿ ಬರೆದಿದ್ದಾರೆ—' "ಗೀತೆಯು ಉದ್ಭವದ ಮಾತೇನೇ ಇಂಥಿ ಆದರಲ್ಲಿ ಹೇಳಿದ ಸತ್ಯವಂತೂ ವಿಶ್ವಮಾನ್ಯ. ಅದು ಭಾರತೀಯ ಸಂಸ್ಕೃತಿಯ ಅತ್ಯುತ್ಕೃಷ್ಟಮ, ಅಳಿಯಲಾರದ ಕೊಡುಗೆ."

ಗೀತೆಯು ಎಷ್ಟು ಚಿಕ್ಕದೋ, ಅಷ್ಟೇ ದೊಡ್ಡದೂ ಕೂಡ. ಗೀತೆ ಎಷ್ಟು ಹಳತಾದರೂ, ನಾಳೆಯಂತೆ ಹೊಸದು. ಗೀತೆಯಲ್ಲಿ ಸರಮೋತ್ಕರ್ಷವನ್ನು ಮೂರ್ತಿ ಸ್ವರೂಪದಲ್ಲಿ ವರ್ಣಿಸಲಿಲ್ಲ ಬದಲಾಗಿ ಅನಂತ, ಪ್ರೇಮಮಯ, ಭಾವನಾತೀತಮೂರ್ತಿಯಾಗಿಯೇ ಚಿತ್ರಿಸಲಾಗಿದೆ. 'ಎಲ್ಲೂ, ತಮಗೆ ಕೋಚಿದ ಜಾಡಿಯಲ್ಲಿ ನನ್ನನ್ನು ಪೂಜಿಸುತ್ತಾರೆ' ಎನ್ನುವ ಶ್ರೀಕೃಷ್ಣನ ಮಾತಿನಲ್ಲಿ ಧಾರ್ಮಿಕ ಸಮನ್ವಯತೆಯೇ ಎದ್ದು ಕಾಣುತ್ತದೆ. ಈಶ್ವರನನ್ನು ಹೊಂದಲು ಧಾರ್ಮಿಕ ಜೀವನದ ಅವಶ್ಯಕತೆಯನ್ನಿಲ್ಲಿ ಎತ್ತಿತೋರಲಾಗಿದೆ—ತಾವರೆಯ ಎಲೆಯ ಬುಡಾಹರಣೆಯಿಟ್ಟು, ತಾವರೆಯು ಎಲೆಯು ಜಲದಲ್ಲಿದ್ದರೂ, ಜಲದೊಂದಿಗೆ ತೊಯ್ದಿರದಂತೆ ಮನುಷ್ಯನು ಭೌತಿಕ ಜಗತ್ತಿನಲ್ಲಿ ವಾಸಿಸುವಿದ್ದರೂ ಭೌತಿಕತೆಯೊಂದಿಗೆ ಸೇರಿಕೊಂಡುಬಾರದೆಂಬುದೇ ತತ್ವ.

ಗೀತೆಯು "ಕರ್ಮಕಾಂಡ"ದಷ್ಟು ಸುಂದರ ಭಾಗವು ಇನ್ನೊಂದಿಗಲಾರದು. 'ಕಾರ್ಯವನ್ನು ಮಾಡುವುದು ನಿನ್ನ ಕರ್ತವ್ಯ. ಆದರೆ ಫಲದ ಆಶೆಯನ್ನು ಮಾತ್ರ ಇಡಬೇಡ. ಅದು ನನ್ನ ಖಾಲಿನ ಕೆಲಸ" ಎನ್ನುತ್ತಾನೆ ಶ್ರೀ ಕೃಷ್ಣ. ಭಾಗವಂತನಲ್ಲಿ ನಿನ್ನ ಭಾರವನ್ನು ಹಾಕಿ ನಿನ್ನ ಕೈಲಾದ ಕರ್ಮವನ್ನು ಮಾಡು ಫಲವನ್ನಾತ ನೀಡಿಯೇ ನೀಡುವನೆಂದೇ ಇದರ ಅರ್ಥ. ಇಲ್ಲಿ ಕರ್ಮವೇ ಭಗವತ್ ಪೂಜೆಯಾಗಿ ಗಣಿಸಲಾಗಿದೆ.

'ಅದೆಷ್ಟು ಕಷ್ಟಬಂದರೂ ನಿನ್ನ ಧರ್ಮವನ್ನು ಬಿಡಬೇಡ. ಸತ್ಯ, ನೀತಿಗಾಗಿ ಹೋರಾಡುವುದೇ ನಿನ್ನ ಧರ್ಮ. ಅದು ದರಿಂದ ನೀನು ಈ ಕೌರವರೆದುರು ಹೋರಾಡಬೇಕು' ಎನ್ನುವ ಮಾತಿನಲ್ಲಿ ಕೌರವರನ್ನು ಅಧರ್ಮ, ಅನ್ಯಾಯದ ಪ್ರತೀಕವಾಗಿ ಕಾಣಲಾಗಿದೆ.

ಗೀತೆಯ ಪೂರ್ವಾರ್ಧವು ಪರಿಪೂರ್ಣತೆಯೆಡೆಗೆ ಕೊಂಡೊಯ್ಯುವ ಸನ್ಮಾರ್ಗವೇ ಆಗಿದೆ. ಆತನು ಚಿರಂತನ, ಆತನಿಗೆ ಸಾವು ನೋವು ಇಲ್ಲ. ಆದುದರಿಂದ ನೀನು ಸಾವಿಗಾಗಿ ಅಂಜದಿರು. ಸಾವು ಕೇವಲ ಭೌತಿಕ ದೇಹಕ್ಕೆ ಮಾತ್ರವೇ ಒದಗುತ್ತದೆ.' ಎನ್ನುವಲ್ಲಿ ಹುರ್ಜನ್ಮದ ಕುರಿತಾದ ಬಾವವೂ ಕಾಣ ಬರುತ್ತದೆ. ಅಲ್ಲದೆ ಮನುಷ್ಯನು ಅತ್ಯಪ ಬಳಿತಿಗಾಗಿಯೆ, ಪರಮಾತ್ಮನನ್ನು ಧ್ಯಾನಿಸಬೇಕು. ಎಷ್ಟೆ ದೈಹಿಕ ಯಾತನೆ ಅನುಭವಿಸುವಾಗಲೂ ಭಗವನ್ನಾಮ ಸ್ಮರಣೆಯನ್ನು ಆತ್ಮಹಿತ ದೃಷ್ಟಿಯಿಂದ, ಭವಿಷ್ಯದಲ್ಲಿ ಉತ್ತಮನಾದೇನೆಂಬ ಆಶಾದೃಷ್ಟಿಯಿಂದ ಮಾಡಬು ಮರೆಯ ಬಾರದು.

ಗೀತೆಯು ಭಗವತ್ಪ್ರೇಮದ ಪಾರಮ್ಯವನ್ನೇ ಹೇಳಿ ಕೂಷ್ಮತ್ತದೆ, ಅದರ ಈಶ್ವರ—ಭಯದ ಪ್ರಾರವನ್ನಲ್ಲ. ಭಕ್ತನು, ಭಗವಂತನ ಪ್ರಿಯ ವ್ಯಕ್ತಿಯು. ಗೀತೆಯ ಹನ್ನೆರಡನೇ ಅಧ್ಯಾಯದಲ್ಲಿ ನೈಜ ಭಕ್ತನ ಕುರಿತು ವಿವರಣೆಯಿದೆ!

ಇಂಥಿನ ಭಾರತದ ಅವನತಿಗೆ ಮುಖ್ಯ ಕಾರಣ ಗೀತೆಯು ಅವಹೇಳನವೆ. ನಮ್ಮ ಮುಂದಾಳುಗಳಿಗೂ, 'ಅಧುನಿಕ'ರೆನಿಸುವ ವ್ಯಕ್ತಿಗಳಿಗೂ "ಧರ್ಮನಿರಪೇಕ್ಷತೆ"ಯು ಗುಂಗಿನಲ್ಲಿ 'ಗೀತೆ'ಯೆಂದರೆ ಅದೇನೋ 'ತುಚ್ಛ ವಸ್ತು'ವೆಂಬ ಭಾವನೆ ಹುಟ್ಟಿದುವುದು. ಅಂತಲೇ ನಮ್ಮಲ್ಲಿ ಸಾಂಘಿತ್ಯಿಕ, ನೈತಿಕ, ಆಧ್ಯಾತ್ಮಿಕ ಪತನವು ಒಂದೇ ಬಾರಿ ಆಗಿರುವುದು. ಗೀತೆಯ ಸಂದೇಶವು, ಶಂಖನಾದವನ್ನೂ ಮತ್ತೆ ಈ ಭಾರತ ಭೂಮಿಯಲ್ಲಿ ಎಲ್ಲೆಲ್ಲೂ ಕೇಳಿ ಬರುವಂತಾದರೆ ಮಾತ್ರವೇ ಭಾರತದ ಸರ್ವತೋಮುಖ ಪ್ರಗತಿ ಸಾಧ್ಯ.

ಕ್ಷಾಮ ನಿವಾರಣೆಗಾಗಿ

ಇಂದೇ

ಉದಾರ ಸಹಾಯ ನೀಡಿರಿ

"ಇದೀಗ ಕೇವಲ ಒಂದೆರಡು ಪ್ರದೇಶಗಳಿಗಷ್ಟೇ ಸೀಮಿತವಾದ ಸಮಸ್ಯೆಯಿಲ್ಲ! ಭಾರತದ ಸಮಸ್ತ ಜನತೆಗೆ ಎದುರಾಗಿರುವ ಕೆಷ್ಟ. ಇಂತಹ ಹೊತ್ತಿನಲ್ಲಿ ಎಲ್ಲಾ ಜನರೂ ತನು ಮನ ಧನಗಳಿಂದ ಸಹಾಯ ಮಾಡಬೇಕೆಂಬುದಾಗಿ ನಾನು ನಿಮ್ಮಲ್ಲಿ ಅರಿಕ ಮಾಡುತ್ತೇನೆ.

ಈಗಾಗಲೇ ಕಾಣಿಕೆ ನೀಡಿರುವವರು ಇನ್ನೂ ಹೆಚ್ಚು ನೀಡಿರಿ. ಈ ತನಕ ಕೊಡದೆ ಇರುವವರೂ ಉದಾರವಾಗಿ ಕೊಡಿರಿ. ನೀಡುವವರೆಲ್ಲ ಈಗಲೇ ನೀಡಿರಿ."

ಪ್ರಧಾನ ಮಂತ್ರಿಯವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣ.

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಗೆ ಉದಾರವಾಗಿ ಕಾಣಿಕೆ ನೀಡಿರಿ.

ಈ ನಿಧಿಗೆ ಕಳುಹಿಸುವ ಹಣ ಮತ್ತು ಸಾಮಗ್ರಿಗಳ ಬಗ್ಗೆ ಯಾವ ಆರ್ಡರ್ ಕುಲ್ಕ, ಅಂಚೆ ವೆಚ್ಚ ಮತ್ತು ರಿಜಿಸ್ಟ್ರೇಶನ್ ಚಾರ್ಜು ಕೊಡಬೇಕಾಗಿಲ್ಲ. ಟಿಕಸಥಿ, ಬಟ್ಟೆಬರೆ, ದಬ್ಬಿಗಳನ್ನು ಸಂಗ್ರಹಿಸಿದ ಅಂಗಡಿಗಳನ್ನು ವಿಮಾನ ಮೂಲಕ ಉಚಿತವಾಗಿ ಸಾಗಿಸಲಾಗುತ್ತದೆ. ಅಂಚೆ, ವಿಮಾನ ಸಾರಾಟ, ಮತ್ತು ರೈಲ್ವೆ ವೆಚ್ಚಗಳು, ಪರಮಾನ ತೆರಿಗೆ, ಅಬಕಾರಿ ಮತ್ತು ಸುಂಕ ಇತ್ಯಾದಿಗಳನ್ನೆ ರಿಯಾಯಿತಿ ದೊರೆಯುತ್ತದೆ.

ಪ್ರೈಮ್ ಮಿನಿಸ್ಟರ್ಸ್ ಡ್ರಾಟ್ ರಿಲೀಫ್ ಫಂಡ್,
ಕ್ಯಾಬಿನೆಟ್ ಸೆಕ್ರೆಟೇರಿಯೆಟ್, ರಾಷ್ಟ್ರಪತಿ ಭವನ, ನ್ಯೂ ಡಿಲ್ಲಿ—1

ಸಂಗೀತಗಾರರು

(ಏಳನೇ ಪುಟದಿಂದ)

ಮಧ್ಯ ರಾತ್ರಿಯ ಸಮಯ. ಕತ್ತಲು! ಕಳ್ಳರು ತಮ್ಮ ಮನೆಗೆ ಹಿಂತಿರುಗಿ ಏನಿದೆ? ಏನಾಗಿದೆ? ಎಂದು ನೋಡುವ ಮನಸ್ಸು ಮಾಡಿದರು. ಮೊದಲು ಮನೆಯ ಸಮಿಪದ ಮರ ಒಂದನ್ನು ಹತ್ತಿ ಮನೆಯೊಳಗೆ ಇಣಕಿದರು. ಎಲ್ಲವೂ ಸ್ತಬ್ಧವಾಗಿತ್ತು. ಶಾಂತವಾಗಿತ್ತು. ತಾವು ಬೇಕೆಂದೇ ಅವಸರಿಸಿ ಓಡಿ ಬಂದೆವು ಎಂದು ಅವರು ಆಲೋಚಿಸುವಂತಾಯಿತು. ಹಾಗೆಯೇ ಅವರಲ್ಲಿನ ಅತೀ ಧೀರನೊಬ್ಬ ನವೆಯೊಳಗೆ ಹೊಕ್ಕನು. ಅಡುಗೆಯ ಮನೆಗೆ ಕಾಲಿಟ್ಟನು. ಸುತ್ತಲೂ ನೋಡಿದನು. ದೀಪ ಉರಿಸುವ ಧೈರ್ಯ ಮಾಡಿಕೊಂಡನು. ಬೆಂಕಿ ಪೆಟ್ಟಿಗೆಗಾಗಿ ಒಲೆಯ ಸವಿಾಪಕ್ಕೆ ಬಂದನು. ಬೆಕ್ಕಿನ ಎರಡು ಕಣ್ಣುಗಳನ್ನು ಬೆಂಕಿಯು ಕೆಂಡಗಳೆಂದೇ ತಿಳಿದುಕೊಂಡು ಒಲೆಯ ದಂಡೆಗೆ ಕೈ ಹಾಕುತ್ತಲೇ ಒಂದನ್ನೂ ತಿಳಿಯದ ಬೆಕ್ಕು ಅವನ ಮುಖವನ್ನು ಪರಚಿ ಗಾಯ ಗೊಳಿಸಿತು. ಹೆದರಿಂದ ಧೀರ ಹುಬ್ಬಾಗಿಲನ್ನು ತೆರೆದು ಓಡುವಾಗ ನಾಯಿಯ ಬಾಲವನ್ನು ನೆಟ್ಟದ ಕೂಡಲೇ ನಾಯಿ ಅವನನ್ನು ಬಲವಾಗಿ ಕಚ್ಚಿ ಬಿಟ್ಟಿತು. ಆಂಗಳದಲ್ಲಿ ಮಲಗಿದ ಕತ್ತೆಯನ್ನು ತುಳಿಯುತ್ತಲೇ ಅದು ತನ್ನ ಹಿಂಗಾಲುಗಳಿಂದ ಬಲವಾಗಿ ಬಿಡ್ಡ ಬಿಟ್ಟಿತು. ಗಲಾಟೆ ಏನೆಂದು ತಿಳಿಯದೆ, ನಿದ್ದೆಗಟ್ಟ ಕೋಳಿ ಅಪಸ್ವರದಿಂದ ಬಹಳ ಗಟ್ಟಿಯಾಗಿ ಕೂಗಿಕೊಂಡಿತು.

ಬದುಕೆದರೆ ಸಾಕೆಂಬ ಬಗದು ಓಡೋಡಿ ಕನ್ನ ಗುಂಸನ್ನು ಸೇರಿಕೊಂಡ ಕಳ್ಳನು ಏದುಸ್ಸಲೇ ಇದ್ದನು. ಕಂಗಾಲಾಗಿ ವಿದುಸಿರು ಬಿಸುತ್ತಲೇ ತನಗಾದ ಅನುಭವವನ್ನೆಲ್ಲಾ ವಿವರಿಸ ಕೊಡಗಿದ. ಬೆಕ್ಕಿನ ಪರಚುವಿಕೆಯ ಫಲ ಕತ್ತೆಯ ತಿವಿತ ಎಂದರೆ; ನಾಯಿಯು ಕಚ್ಚುವಿಕೆಯನ್ನು ಕತ್ತೆಯು ಹೊಡೆತವಂದೇ ಬಣ್ಣಿಸಿದ. ಕತ್ತೆಯು ಒದೆತವನ್ನು ಭೂಕಂಪ ಪೆಟ್ಟಿಂದು ವಿವರಿಸಿದ; ಅಲ್ಲದೆ ದೊಡ್ಡ ಭೂತವೊಂದು 'ಆ ಧರ್ತನನ್ನು ಹಿಡಿಯಿರಿ; ಇಕ್ಷ ಎಸೆಯಿರಿ ಅವನನ್ನು ಈಗಲೇ ಮುಗಿಸುತ್ತೇನೆಂದು' ಒದರಿತು ಎಂದೆಲ್ಲಾ ಹೇಳಿದನು.

ಇದನ್ನು ಕೇಳಿದ ಕಳ್ಳರು ಆ ಮನೆಯು ಕಡೆಗೆ ಮುಖ ತಿರುಗಿಸುವ ಧೈರ್ಯವನ್ನೂ ಮಾಡದೆ ಅಲ್ಲಿಂದಲೇ ಹುಂಡಿರುಡರು.

(ಆಧಾರಿತ)

ಕ್ಯಾನ್ಸರ್

(ಆರನೇ ಪುಟದಿಂದ)

ಳು ಪ್ರಯೋಗಿಕವಾಗಿ ಅಷ್ಟಾಗಿ ಬೆಲೆಯುಳ್ಳದ್ದೆಂದು ತಿಳಿದು ಬಂದಿದೆ.

ಉದಾ ಕಳೆದ ದಿನಗಳಲ್ಲಿ ಪ್ರಾಣಿಗಳ ಜೀವ ಕೋಶಗಳನ್ನು ಸಜೀವವಾಗಿಡಲು ರಕ್ತದ ತೆಳುಪಾರದರ್ಶಕ ರಸವನ್ನೂ ಇವೇ ಮುಂತಾದ ಇತರ ದೇಹದ ರಸಗಳನ್ನು ಉಪಯೋಗಿಸಲಾಗುತ್ತಿತ್ತು. ಆದರೆ ಇವು ಯೂನಿಡೆಂಟೆಫೈಡ್ ರಾಸಾಯನಿಕ ಗಳನ್ನು ಹೊಂದಿರುವುದರಿಂದ ಸಂಶೋಧನೆಗಳಿಗೆ ನಿರುಪಯೋಗಿ ಎಂದು ತಿಳಿದು ಬಂದಿದ

ಬ್ರೂಹಾರ್ಬರ್‌ನಲ್ಲಿರುವ ಆ. ಬಿ. ಜಾಕ್ಸನ್ ಪ್ರಯೋಗಾಲಯದ ಸ್ತ್ರೀ ವಿಜ್ಞಾನಿ ಡಾ|| ಜಾಂಟೀ ವೀರ್ಮೌತ್ ರವರು ಪ್ರಯೋಗಾಲಯದಲ್ಲಿ ಜೀವಕೋಶಗಳನ್ನ ಬೆಳಸಲು ಬೇಕಾದ ಪೌಷ್ಟಿಕ ಆಹಾರವನ್ನೂ, ಕೆಲವು ಗುರುತರವಾದ ರಾಸಾಯನಿಕಗಳನ್ನೂ ಕಂಡು ಹಿಡಿದಿದ್ದಾರೆ.

ಅವರಿಕದ ಕ್ಯಾನ್ಸರ್ ಸೊಸೈಟಿಯವರ ಪ್ರಕಾರ, ಡಾ||ಜಾಂಟೀ ವೀರ್ ಮೌತ್‌ರವರ ಈ ಸಂಶೋಧನೆಯು, ಪ್ರಕೃತಿಯು ಕೆಲವು ಸಾಧಾರಣ ವಸ್ತುಗಳಿಂದ ಹೇಗೆ ನಮ್ಮ ದೇಹದಲ್ಲಿ ಜಟಿಲ ವಸ್ತುಗಳನ್ನು ನಿರ್ಮಿಸಬಲ್ಲನೆಂಬುದನ್ನ ತಿಳಿಸಬಲ್ಲದು ಎಂಬುದ ಅವರ ಅಭಿಪ್ರಾಯವಾಗಿದೆ.

ಈ ಸುವಲ್ಲಿ ವಿಜ್ಞಾನಿಗಳು, ಕ್ಯಾನ್ಸರ್‌ನ ಒಳವರ್ಣಗಳನ್ನು ಪೂರ್ತಿಯಾಗಿ ನಿಲ್ಲಿಸಲು, ಕ್ಯಾನ್ಸರ್ ಪೀಡಿತ ಜೀವ ಕೋಶಗಳಿಗೆ ಆಹಾರ ಸರಬರಾಜನ್ನು ಬದಲಾಯಿಸುವುದು ಅಥವಾ ಆ ಆಹಾರದೊಡನೆ ಕ್ಯಾನ್ಸರ್ ನಾಶಕಗಳನ್ನು ಮಿಶ್ರಮಾಡಿ ಚಿಕಿತ್ಸೆ ನಡೆಸುವುದು ಎಂಬ ತೀರ್ಮಾನಕ್ಕೆ ಬರಲು ನವೇಚನೆ ನಡೆಸುತ್ತಿದ್ದಾರೆ. ಆರೋಗ್ಯಕರ ಜೀವಕೋಶಗಳನ್ನು ನಾಶಮಾಡದ, ಕ್ಯಾನ್ಸರಸ್ ಜೀವಕೋಶಗಳನ್ನು ನಾಶಮಾಡಲು (ಕ್ಯಾನ್ಸರ್ ನಾಶಕ ಮಿಶ್ರಿತ) ಆಹಾರವನ್ನು ಹೇಗೆ ಜೀವಕೋಶಗಳಿಗೆ ಸೂಡಬೇಕೆಂಬ ಸಂಗತಿ ಸದ್ಯದಲ್ಲಿ ಪ್ರಯೋಗಾಲಯಗಳಿಂದ ಬರಲಿದೆ.

ಕ್ಯಾನ್ಸರ್ ಬಂದರೆ ಬೇಗನೆ ಆಯಿಲು ಒಂದು ಮಾರ್ಗ ಹುಡುಕಬೇಕೆಂಬುದು ಇಂದಿಗೂ ಶ್ರೀ ಸಾಮಾನ್ಯನ ಅಭಿಪ್ರಾಯವಾಗಿದೆ. ಆದರೆ 'ಕ್ಯಾನ್ಸರ್ ಗುಣಪಡಿಸುವ ಪ್ರಯತ್ನದಲ್ಲಿ ಇಂದಲ್ಲ ನಾಳೆ ನಾವು ಜಯಶೀಲರಾಗುತ್ತೇವೆ" ಎಂಬ ವಿಜ್ಞಾನಿಗಳ ವಿಶ್ವಾಸವೆಂಬ, ಆಸ್ಪತ್ರೆಯಲ್ಲಿ ನರಳುವ ಸಾವಿರಾರು ಕ್ಯಾನ್ಸರ್ ರೋಗಿಗಳನ್ನು ಪ್ರತಿಯೊಬ್ಬರೂ ಸದ್ಯದಲ್ಲೇ ನೀವು ಗುಣವಾಗುತ್ತೀರಿ ಎಂಬ ಆಶಾ ಕಿರಣವನ್ನ ಅವರ ಹೃದಯದ ಅಂಧಕಾರದಲ್ಲಿ ಮೂಡಿಸುತ್ತಾ ಇದೆ. ಸದ್ಯದಲ್ಲೇ ಇದು ಕಣ್ಣಿಗೆ ಬೆಳಕಾಗಬಹುದು— ಎಲ್ಲವೂ ಸಾಧ್ಯ ಎನ್ನುತ್ತಾರೆ ವಿಜ್ಞಾನಿಗಳೂ, ಡಾಕ್ಟರುಗಳೂ!

(Science for to-morrow ಕೃಪೆಯಿಂದ)

READ & ADVERTISE IN NAVAYUGA WEEKLY

ಇತಿಹಾಸದ ಪುಟಗಳಿಂದ

ಸುಲ್ತಾನನಿಗೊಂದು ಪಾಠ

ಅನುವಾದಕರು:
ಶ್ರೀ ಕೆ. ನಾರಾಯಣಾಚಾರ್, ಶಿರೋಮಣಿ, ವಿದ್ವಾನ್,

ಕ್ರಿಸ್ತ ಶಕ ೧೩೬೬ನೇ ವರ್ಷದ ಶರತ್ಕಾಲದಲ್ಲಿ ಒಂದು ದಿನ ಸಾಯಂಕಾಲ ಗುಬ್ಬಗದ ಬಹಮನೀ ಸುಲ್ತಾನ ಮಹಮ್ಮದ ಶಾಹನ ಆರಮನೆಯಲ್ಲಿ ಬಹಳ ಸಂಭ್ರಮ.

ಡಿಲ್ಲಿಯಿಂದ ಸುಪ್ರಸಿದ್ಧ ಸಂಗೀತಗಾರರು ಬಂದಿದ್ದರು ಒಂದು ನರ್ತನ ಸಮಾರಂಭವೂ ಏರ್ಪಡಿಸಲಾಗಿತ್ತು.

ಸವಾರಂಭದ ಕೊನೆಯಲ್ಲಿ ಸುಲ್ತಾನನು ವಜೀರನನ್ನು ಕರೆದು ಹೇಳಿದನು. "ಈ ಸಂಗೀತಗಾರರನ್ನು ಉಚಿತವಾದ ಸಂಭಾವನೆಗಳಿಂದ ಗೌರವಿಸಬೇಕು. ಆದ್ದರಿಂದ ವಿಜಯನಗರದ ಬೊಕ್ಕಸದಿಂದ ಮುನ್ನೂರು ಬಂಗಾರದ ಮೊಹರಗಳನ್ನು ಕಳಿಸಲಿಕ್ಕೆ ಒಂದು ಚೀಟು ಬರೆಯಿಸು."

"ವಿಜಯನಗರದ ಬೊಕ್ಕಸ!" ವಜೀರನು ಆಶ್ಚರ್ಯದಿಂದ ತಿರುತಿರುಗಿ ಹೇಳಿದನು: "ಅಪರಿ ಮಹಾಪ್ರಭು! ವಿಜಯನಗರವು ಸ್ವತಂತ್ರವಾಗಿದೆ ಅದು ನಮ್ಮ ಅಧೀನದಲ್ಲಿಲ್ಲ."

ಸುಲ್ತಾನನು ಅವನನ್ನು ಅಧಿಕಾರ ಸೂಚಕ ಸನ್ನೆಯಿಂದ ತಡೆದು ನಿಲ್ಲಿಸಿದನು —"ವಿಜಯನಗರವು ಈ ಕ್ಷಣಕ್ಕೆ ಸ್ವತಂತ್ರವಾಗಿರ ಬಹುದು. ಆದರೆ ಇನ್ನು ಮುಂದೆ ಹಾಗಾಗಲಾರದು. ಎಲ್ಲಾ ಹಿಂದೂ ರಾಜ್ಯಗಳು ನಮ್ಮ ವಶವಾಗಿವೆ."

ವಜೀರನು ಸುಲ್ತಾನನನ್ನು ನೋಡಿದನು. ವಾದಿಸುವುದು ನಿರರ್ಥಕ. ಒಂದು ಚೀಟುಮನ್ನು ಬರಯಿಸಿದನು. ಹಸ್ತಾಕ್ಷರವಿಡಲ್ಪಟ್ಟಿತು. ರಾಜಮುದ್ರೆಯು ಒತ್ತಲ್ಪಟ್ಟಿತು. ರಾಗಯೇ ವಿಜಯನಗರಕ್ಕೆ ಕಳುಹಿಸಲಾಯಿತು.

ಬುಕ್ಕರಾಯನ ಆಸ್ಥಾನದಲ್ಲಿ ಈ ಅಪೂರ್ವವಾದ ಸಮಾಚಾರವು ಮುಟ್ಟಿ ಕೋಪದಿಂದ ಏನಿದು? ಎಂದು ಅರಚಿತು. ಎಲ್ಲರೂ ಕುತೂಹಲ ದೃಷ್ಟಿಗಳಿಂದ ನೋಡಿದರು.

ಬಹುಮನೀ ಸುಲ್ತಾನನ ಕಡೆಯಿಂದ ಬಂದ ಒಬ್ಬ ದೂತನು ಒಂದು ರಾಯಸವನ್ನು ಹಿಡಿದುಕೊಂಡು ಆಸ್ಥಾನಕ್ಕೆ ಬಂದನು.

ಪ್ರಧಾನ ಮಂತ್ರಿಯು ಪತ್ರವನ್ನು ತೆಗೆದು ಓದಿದನು. ಅವನು ಓದುತ್ತಿದ್ದುದನ್ನು ಜನತೆ ಹೇಳುತ್ತಿದ್ದಾಗ ತಪ್ಪುಗಳು ಬಲಗೊಂಡವು. ಹುಬ್ಬಗಳು ಗಂಟಿಕ್ಕಿದವು. ಕೈಗಳ ಕತ್ತಿಯ ಕಡೆಗೆ ಚಲಿಸಿದವು

ಅರಸನು ಮೌನವಾಗಿದ್ದನು. ಅವನ ಮುಖದಲ್ಲಿ ಒಂದು ಸಣ್ಣ ಬಿಳಿ ರೇಖೆಯು ಕಂಗೊಳಿಸಿತು. ಓದುವುದು ಮುಗಿಯಿತು. ಆ ದೊಡ್ಡ ಸಭಾ ಮಂದಿರದಲ್ಲಿ ಕ್ಷಣ ಕಾಲ ಸಂಪೂರ್ಣ ಮೌನವು ನಲೆಯಿತು.

ಅರಸನ ಆ ಮುಸ್ಲಿಮ್ ದೂತನನ್ನು ಗುರಿಯಿಟ್ಟು ನೋಡಿ ಹೇಳಿದನು.— "ನಿಮ್ಮ ಸುಲ್ತಾನನಿಗೆ ಸ್ವತಂತ್ರರಾದ ಅರಸರೊಡನೆ, ವಿಶೇಷತಃ ಹಿಂದೂ ಅರಸರೊಡನೆ, ಹೇಗೆ ವ್ಯವಹರಿಸಬೇಕೆಂಬ ವಿಷಯದಲ್ಲಿ ಒಂದು ಪಾಠ ಕಲಿತ ಕೊಳ್ಳುವ ಅವಶ್ಯಕತೆಯಿದೆ. ಇದು ಸ್ಪಷ್ಟ ನಿನ್ನಲ್ಲಿ ನಮಗೇನೂ ವಿರೋಧವಿಲ್ಲ ಆದರೆ ನಾವೂಂದು ನೋಟೀಸು ಕೂಡಬೇಕು "

ಆ ಮೇಲೆ ಅವನು ಒಬ್ಬ ಅಧಿಕಾರಿಯ ಕಡೆ ತಿರುಗಿ ಅಪ್ಪಣೆ ಕೊಟ್ಟನು — 'ಇವನ ತಲೆಯನ್ನು ಬೋಳಿಸಿ ಕತ್ತೆಯ ಮೇಲೆ ಕುಳ್ಳಿರಿಸಿ ಮೆರವಣಿಗೆ ಮಾಡಿಸು."

ತನ್ನ ರಾಜದೂತನಿಗೆ ಸಂಭವಿಸಿದ್ದಾಗ ಎಸುನ್ನು ಕೇಳಿ ತಿಳಿದಾಗ ಸುಲ್ತಾನನು ದನು. ಆವೇಶ ಭರದಿಂದ ಎದ್ದ ನಂ ಒರೆಯಿಂದೆಳೆದು. "ಇಪ್ಪತ್ತು ಸಾವಿರ ಹಿಂದೂ ತಲೆಗಳನ್ನು ಕೆಡಹುವ ತನಕ ಈ ಖಡ್ಗವನ್ನು ನಾನು ಒರೆಯೊಳಗೆ ಹಾಕಲಾರೆನು'

ಆಗ ಕೃಷ್ಣಾ ತುಂಗಭದ್ರಾ ಎದಿಗಳ ನಡುವೆ ವಿಜಯನಗರ ಸಾಮ್ರಾಜ್ಯವ ವಶವಿದ್ದ ರಾಯಚೂರ್ - ಮಂದ್ಗಲ್ ದೋಆಬ್ ಪ್ರದೇಶದಲ್ಲಿ ಭಯಾನಕ ಪರಿಸ್ಥಿತಿಯು ಉದ್ಭವಿಸಿತು.

"ಸೂರೆ ಮಾಡಿರಿ, ಕೊಂದು ಹಾಕಿರಿ' ಎಂದು ಸುಲ್ತಾನನು ತನ್ನ ಭಟರಿಗೆ ಆಜ್ಞೆ ಕೊಟ್ಟನು.

'ಯುದ್ಧವು ಆರಂಭವಾಗಿದೆ. ಶತ್ರುವನ್ನು ಪ್ರತಿಭಟಿಸಲು ನಾವು ತೆರಳೋಣ' ಎಂದು ಬುಕ್ಕರಾಯನು ಘೋಷಿಸಿದನು.

ಸೈನ್ಯ ಸನ್ನೇಹನಾಗಿ ಬುಕ್ಕರಾಯನು 'ದೋಆಬ್' ಪ್ರದೇಶಕ್ಕೆ ತೆರಳಿದನು. ಅವನ ಧೀರ ಸಹೋದರರಾದ ಮಾರಪ್ಪನು ತುಮುಲುಪ್ಪರೂ ಜೊತೆಗೂಡಿದರು ಮುನೀಶ್ವರರಾದವಿದ್ಯಾರಣ್ಯರೂ, ಸಾಯಣಾಚಾರ್ಯರೂ ಹರಸಿ ಪ್ರೋತ್ಸಾಹಿಸಿದರು

೧೩೬೬ನೇ ಜಲಾಯಿ ತಿಂಗಳಲ್ಲಿ ಆರಂಭವಾಯಿತು. ದಿನದ ಮೇಲೆ ದಿನ, ತಿಂಗಳ ಮೇಲೆ ತಿಂಗಳು, ವರ್ಷದ ಮೇಲೆ ವರ್ಷ ರಾತ್ರಿ ಹಗಲೂ ಘೋರವಾದ ಸಂಗ್ರಾಮಗಳು ನಡೆದವು.

ಎಂಟು ವರ್ಷಗಳು ಉರುಳಿದವು. ಆ ವೇಳೆಯುದ್ಧದ ಗತಿಯು ಸುಲ್ತಾನನ ದಂಡಿನ ಆಕ್ರಮಣಕಾರರಿಗೆ ವಿಪರೀತವಾಗಿ ಮಾರ್ಪಟ್ಟಿತು.

ಅನಂತರ ಗುಬ್ಬಗಳಲ್ಲಿ ಒಂದು ದಿನ ಅಕಸ್ಮಾತ್ತಾಗಿ ಸುಲ್ತಾನನಿಗೆ ಅವಸಾನ ಸಮಯವು ಪ್ರಾಪ್ತವಾಯಿತು. ಅವನ ತನ್ನ ಡೇರೆಯೊಳಗೆ ಕೆಳಗೆ ಮೇಲೆ ಹೆಜ್ಜೆ ಹಾಕುತ್ತಿದ್ದನು ಒಬ್ಬ ದೂತನು. ಪ್ಯೆಯೆಲ್ಲ ಬೆವರಿದವನಾಗಿ ಅತಿ ಭೀತಿಯನ್ನು ಸೂಚಿಸುತ್ತಾ ಓಡಿ ಬಂದನು.

"ಮಹಾಪ್ರಭೂ! ಇಂದು ನಮಗೆ ಅತ್ಯಂತ ಪರಾಜಯವಾಗಿದೆ. ನಮ್ಮ ನೇತಾಧಿಪರನ್ನೆಲ್ಲಾ ಸೆರೆಹಿಡಿದಿದ್ದಾರೆ ಸೈನ್ಯವು ಅತ್ಯಂತ ಭೀತಿಗೊಂಡಿದೆ." ಎಂದನು ಒದರಿಪನು.

ಅಂತ್ಯಕಾಲವು ಪ್ರಾಪ್ತವಾಯಿತು. 'ನನಗೂ ಇದು ಅವಸಾನ ಕಾಲ ವೆಂದು ಸುಲ್ತಾನನು ಗಣಿಗಿದನೆ ರಾತ್ರಿ ಗಂ ಬಂತು. ಕತ್ತಲೆಯು ವರೆಯ ಸುಲ್ತಾನನು ಗುಲ್ಬರ್ಗಕ್ಕೆ ಓಡಿ ಹೋದನು.

ಸುಲ್ತಾನನು ಪಾರಿಕಲಿಯ ವೃದ್ಧರಲ್ಲಿ ದಡ್ಡ. ನ್ನ ಪಾರಿ ಕಲಿಸುವಿಕ್ಕೆ ಅವನಿಗೆ ಎಂಟು ವರ್ಷಗಳು ಹಿಡಿದವು ತದನು ಅವನಿಗೆ ಶಿಕ್ಷಕನು ಅವನಿಗೆ ಕಲಿಸಿಯೇ ಬಿಟ್ಟರು.

ತಮ್ಮ ಹಿರಿಯರ ಘನತೆ ಗೌರವಗಳನ್ನು ರಿಂಬಿದವರು ಭವಿಷ್ಯದ ತಮ್ಮ ಘನತೆ ಗೌರವಗಳನ್ನು ಗಳಿಸರು.

o o o

ಎಲ್ಲಾ ರಾಜಕೀಯ ಪಕ್ಷಗಳೂ ತಮ್ಮ ಸುಳ್ಳಿನ ಕಂತೆಯ ಭಾರವನ್ನು ಹೊರಲಾರದೆ ಸಾಯುತ್ತವೆ.

ಭೀಮನೂ ಕಣ್ಣೀರು ಸುರಿಸಿದ

(ಐದನೇ ಪುಟದಿಂದ)

ದ್ದ ಅನ್ನೇನು ಇದ್ದೀತು?"—ಎಂದು ಭೀಮಸೇನ, ತಮ್ಮ ಸ್ಥಿತಿಯನ್ನು ಅರಿತು ವ್ಯಥಪಟ್ಟು, ಬೇಗುದಿಗೊಂಡು ಕಣ್ಣೀರ್ಗರೆಯುತ್ತಾನೆ.

ದ್ಯೂತ ಯುದ್ಧದಲ್ಲಿ, ಪಾಂಡವರು, ಕೌರವರಿಗೆ ಸೋತು, ವನವಾಸಮಾಡುತ್ತಾರೆ. ಪಣದಂತೆ, ಹದಿನೆರಡು ವರ್ಷ ಅರಣ್ಯವಾಸವನ್ನೂ, ಒಂದು ವರ್ಷ ಅಜ್ಞಾತವಾಸವನ್ನೂ ಅನುಭವಿಸಲು ತೊಡಗುತ್ತಾರೆ. ಹದಿನೆರಡು ವರುಷ ಕಷ್ಟವಲ್ಲಿ ಕಳೆದು, ಹದಿಮೂರನೆಯ ವರುಷ ನಿರಾಟರಾಜನ ಆರಮನೆಯಲ್ಲಿ ಕಳೆಯಲು ನಿರ್ಧರಿಸುತ್ತಾರೆ. ವಿರಾಟನಗರವನ್ನು ಸೇರಿ, ವಿರಾಟರಾಜನಲ್ಲಿ, ಸುಳ್ಳುಹೇಳಿ ಕೆಲಸವನ್ನು ಪಡೆದುಕೊಳ್ಳುತ್ತಾರೆ. ಹೀಗೆ ಹತ್ತು ತಿಂಗಳು, ಅವರು ಸುಖವಾಗಿ, ಕಾಲಕಳೆಯುತ್ತಾರೆ. ಆದರೆ, ಆದೊಂದು ದಿನ, ವಿರಾಟನ ಸೇನಾಪತಿಯೂ, ಸುದೇಷ್ಣೆಯ ತಮ್ಮನೂ ಆದ, ಕೀಚಕನು, ಅಂತಃಪುರದಲ್ಲಿ ಓಡಾಡುತ್ತಿರುವ, ಸುಂದರಿ ದ್ರೌಪದಿಯನ್ನು ಕಂಡ', ವಾಸನೆಗಟ್ಟಿದ ಮದ್ದಂತೆ ಉನ್ಮಾದನಾಗಿ ಆಕೆಯನ್ನು ಸಿಕ್ಕಿಸಿಕೊಳ್ಳಲೆಲ್ಲಾ ಕಾಡಿಸುತ್ತಾನೆ. ಒಮ್ಮೆ ಸಭೆಯು ವರೆಗೂ ಕೂಡ, ಅಟ್ಟಿಸಿಕೊಂಡು ಹೋಗಿ, ಉನ್ಮಾದನಾಗಿ, ಆಕೆಯ ಜುಟ್ಟನ್ನು ಹಿಡಿದು ಎಳೆಯುತ್ತಾನೆ. ಭೀಮ ಕೋಪಗೊಂಡು, ಕನಲಿ ಆತನನ್ನು ಸಂಹರಿಸಲು ಉನ್ಮತ್ತನಾದಾಗ, ಯುಧಿಷ್ಠಿರನು ಆತನನ್ನು ತಡೆದು, ಗುಪ್ತ ಭಾಷೆಯಲ್ಲಿ, 'ನಾವು ಅಜ್ಞಾತವಾಸದಲ್ಲಿದ್ದೇವೆ' ಎಂದು ನೆನಪಿಸುತ್ತಾನೆ ಅಂದು ರಾತ್ರಿ ಸೈರಂಧ್ರಿ, ತನ್ನ ಕಷ್ಟವನ್ನು ಪರಿಹರಿಸಿಕೊಳ್ಳಲು, ಆಪದ್ಬಾಂಧವ ಭೀಮಸೇನನಲ್ಲಿಗೆ ಬರುತ್ತಾಳೆ. ಆದರೆ ಭೀಮಸೇನ ಇನ್ನು ಹದಿನೈದು ದಿನದ ವರೆಗೆ, ತಡೆದುಕೊಳ್ಳುವಂತೆ, ಆಕೆಯನ್ನು ಸಮಾಧಾನ ಪಡಿಸುತ್ತಾನೆ. ಆಗ ದ್ರೌಪದಿ "ಯ ಧಿಷ್ಠಿರನ ಹೆಂಡತಿಯೂದವಳು, ಪದದಿರುವ ಸಂಕಟ ಯಾವುದು? ನನ್ನ ಎಲ್ಲಾ ದುಃಖಗಳನ್ನು ತಿಳಿದೂ ಕೂಡ, ನೀನು ಮತ್ತೆ ಏಕೆ ಕೇಳುತ್ತೀಯೇ? ಪ್ರತಿ ಕಾಮಿಯು ಕೂಡ' ನನ್ನನ್ನು 'ಲೇ ದಾಸಿ' ಎಂದು ಕೂಗಿ ನನ್ನನ್ನು ಸಭೆಗೆ ಕರೆದು ತಂದದ್ದು, ಈಗಲೂ ನನ್ನ ನ್ಯೆ ಉರಿಸುತ್ತಿದೆ, ಕಾಡಿನಲ್ಲಿ ದ್ದಾಗ ದುರಾತ್ಮನಾದ ಸೈಂಧವನ ಕಾಟ, ಇಲ್ಲಿಯೋ, ದುಷ್ಟ ಕೀಚಕನ ಕಾಟ. ವೀರರೈವರ ಹೆಂಡತಿಯಾಗಿದ್ದವಳು ಇದನ್ನೆಲ್ಲಾ ಎಂತು ಸಹಿಸಿಯಾಳು? ಜೂಜಾಟದಲ್ಲಿ ಸೋತು, ನನಗೆ ಈ ಕಷ್ಟವನ್ನು ಉಣ್ಣಿಸಿದ ಧರ್ಮರಾಯನನ್ನು ಎಷ್ಟು ನಿಂದಿಸಿದರೂ ಸಾಲದು. ಈ ದುಃಖಗಳನ್ನು ಅನುಭವಿಸಿ, ನಾನಲ್ಲದೆ ಮತ್ತಾವ ರಾಜಪುತ್ರಿಯು ಬದುಕಿರುತ್ತಿದ್ದಳು?... ಧರ್ಮಾತ್ಮನಾಗಿ, ರಾಜ್ಯವನ್ನು ಪಂಪಾಲಿಸಬೇಕಾದ ಯುಧಿಷ್ಠಿರ, ಇಂದು ಪರಿಚಾರಕ ಕೆಲಸವನ್ನು ಮಾಡುತ್ತಿದ್ದಾನೆ. ನೀನಾದರೋ, ಕಬ್ಬಿಣದ ಸಾಟನ್ನು ಕೈಯಲ್ಲಿ ಹಿಡಿದು, ಅಡಿಗೆ ಭಟ್ಟನಾಗಿರುವುದನ್ನು ಯಾವ ಕಣ್ಣಿಂದ ನೋಡಲಿ? ಸುರನರೋರಗರನ್ನು ಏಕಾಕಿಯಾಗಿಯೇ ಗೆಲ್ಲುತ್ತಿದ್ದ ವೀರನು, ಇಂದು ಹೆಣ್ಣು ಹುಡುಗಿಯರ ಪರಿಚಾರಕನಾಗಿ, ಅವರೊಡನೆ ಕುಣಿಯುವುದನ್ನು ಕಂಡಾಗ ನನ್ನ ನುನಸ್ಸು ಬೆಂದು ಹೋಗುತ್ತದೆ. ಧನಗಳ ಮಧ್ಯೆ, ಧನಗಳನ್ನು ಕಾಯ್ದುಕೊಂಡು ಹೋರಿಯಂತಿರುವ ಸಹದೇವನನ್ನು ನೋಡಿದರೆ ನನ್ನ ಮೈಬಿಳಚಿ ಹೋಗುತ್ತದೆ. ರಾತ್ರಿಕಾಲದಲ್ಲಿ ಕರುಗಳ ಚರ್ಮದ ಮೇಲೆ, ನಿದ್ರಿಸುವ ಆತನನ್ನು ಕಂಡಾಗಂತೂ, ನನ್ನ ಮೈ ಉರಿದು ಹೋಗುತ್ತಿದೆ. ರೂಪ, ಅಸ್ತ್ರ, ಬುದ್ಧಿ, ಮೂರರಲ್ಲಿಯೂ, ಹೆಸರಾದ, ನಕುಲನು, ವಿರಾಟನಲ್ಲಿ ಕಾಸದಾರನಾಗಿದ್ದಾನೆ! ಇದನ್ನು ನೋಡುತ್ತಿರುವ ನನಗೆ ಹೇಗೆ ಸುಖವಿದ್ದೀತು ಭೀಮಸೇನ? ರಾಜಪುತ್ರಿಯೂದ್ದ, ನನಗೆ ಬಂದಿರುವ ಅವಸ್ಥೆಯನ್ನು ನೋಡು. ಬೇರೆ ಯಾವ ರಾಜಕುಮಾರಿಯಾದರೂ, ಇದನ್ನು ಅನುಭವಿಸಿಯೂ ನೋಡಿಯೂ, ಜೀವದಿಂದಿರುತ್ತಿದ್ದರೇ? ಇದೆಲ್ಲಾ, ನಿಮ್ಮಣ್ಣ ಧರ್ಮರಾಯನಿಂದಲ್ಲವೇ ಆದುದು?"— ಹೀಗೆಂದು, ಭೀಮಸೇನನ್ನು ನೋಡುತ್ತಾ, ಅಳುತ್ತಾ, ನಿಟ್ಟುಸಿರು ಬಿಡುತ್ತಾ, ಅವನ ಎದೆಯ ಮೇಲೆ ತಲೆಯಿಟ್ಟು, 'ಭೀಮಸೇನ, ನಾನು ಹಿಂದೆ, ತುಂಬಾ ಪಾಡು ಮಾಡಿರಬೇಕು. ಇಲ್ಲದಿದ್ದರೆ, ಎಂದೋ, ಸತ್ತು ಹೋಗಬೇಕಾಗಿದ್ದ ನಾನು ಇನ್ನೂ ಬದುಕಿರೋಣವೆಂದರೇನು?"— ಎಂದು ಗೋಳಿಟ್ಟಳು. ಭೀಮಸೇನನು, ಊದಿ ಜಿಡ್ಡು ಕಟ್ಟಿದ್ದ, ಅವಳ ಕೈಗಳನ್ನು, ತನ್ನ ಕೆನ್ನೆಗಳ ಮೇಲಿಟ್ಟುಕೊಂಡು ಮಹಾವೀರನಾದರೂ ಗೋಳೋ ಎಂದು ಅತ್ತುಬಿಟ್ಟನು. ಅವುಗಳ ಮೇಲೆ ಕಣ್ಣೀರು ಸುರಿಸಿದನು. ಆ ಮೇಲೆ ಮಹಾದುಃಖದಲ್ಲಿ ಮುಳುಗಿ ಹೀಗೆಂದನು "ನಿನ್ನ ಎರಡೂ ಕೈಗಳೂ, ಹೀಗೆ ಕೆಂಪಾಗಿ ಜಡ್ಡು ಕಟ್ಟಿ, ಹೋದ ಮೇಲೆ, ನನ್ನ ಬಾಹುಬಲವೂ, ಅರ್ಜುನನ ಗಾಂಢೀವವೂ ವ್ಯರ್ಥ. ನಾಳಿನ ರಾತ್ರಿಯೇ ನಾನಾತನನ್ನು ಕೊಲ್ಲುತ್ತೇನೆ"— ಎಂದು ಅಳುತ್ತ, ಆಕೆಯನ್ನು ಸಮಾಧಾನ ಪಡಿಸುತ್ತಾನೆ ಭೀಮ.

—ಹಾಗೆ, ತನ್ನ ಜೀವ ಮಾನದಲ್ಲೇ, ಎರಡು ಬಾರಿ ಮಹಾವೀರನಾದರೂ, ಭೀಮ ಕಣ್ಣೀರ್ಗರೆಯುತ್ತಾನೆ. ತನಗಾಗಿರುವ ಬಿದುರಾಘಾತದ ವಜ್ರಾಘಾತವನ್ನು ರಣರಂಗದಲ್ಲಿ ಕೌರವರಿಗೆ ದರ್ಶನಮಾಡಿಸುತ್ತಾನೆ.

ಶ್ರೀ ಕೆ.ಕೆ.ಶೆಟ್ಟಿ, ಎಂ.ಎಲ್.ಸಿ. ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವೃಥಭಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುತಲವ	0=50
ಚತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ವೇದವು ಸಾರುತ್ತಿದೆ:

"ಏಳು; ಎಚ್ಚರಗೊಳ್ಳು; ತಿಳಿದವರ ಕಾಲಿಗೆ ಬಿದ್ದು ತಿಳಿದುಕೊಳ್ಳಿ" ಎಂದು. ತಿಳಿದವರೆನ್ನೆಲ್ಲಿ ಹುಡುಕೋಣವೆಂದು ನೀವು ಗೊಣಗಾಡಬೇಕಾದ್ದಿಲ್ಲ. ತಿಳಿದವ ಒರಿಯನೆಂದು ಎಲ್ಲರಿಂದಲೂ ಮನ್ನಣೆಗೊಂಡಿರುವ ಶ್ರೀ ಕೃಷ್ಣನ ಪ್ರತಿನಿಧಿ— ಗೀತೆ. ಶ್ರೀ ಕೃಷ್ಣನು ತನ್ನ ಉಪದೇಶದ ಜೀವಕಳೆಗಳನ್ನೆಲ್ಲ ಗೀತೆಯಲ್ಲಿ ಪ್ರತಿಷ್ಠೆ ಮಾಡಿದ್ದಾನೆ. ಕನ್ನಡ ನಾಡಿನ ಪ್ರತಿಯೊಬ್ಬರೂ—ಹುಡುಗರು, ಹೆಂಗಸರು ಕೂಡ ತಮ್ಮ ಮನುಷ್ಯತ್ವವನ್ನು ಸಾರ್ಥಕ ಮಾಡಿಕೊಳ್ಳುವಂತೆ

ಹೊಸಕೆರೆ ಚಿದಂಬರಯ್ಯನವರು ಬರೆದ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ

ಅದನ್ನು ಎಲ್ಲರೂ ಓದಬೇಕಾಗಿದೆ.

—"ಒರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಜೆನ್ನಾಗಿ ಓದಬೇಕು" ಎಂದು ವರಾಹ ಪುರಾಣವೂ ಸಾರುತ್ತಿದೆ.

ಸರ್ವರಿಗೂ ಕೊಳ್ಳಲು ಅನುಕೂಲವಾಗುವಂತೆ 450 ಕ್ಕೂ ಮಿಕ್ಕಿದ ಪುಟಗಳುಳ್ಳ ಪಾಕೇಟ್ ಸೈಜಿನ ಈ ಪುಸ್ತಕದ ಬೆಲೆ ಬರೇ ಒಂದೂವರೆ ರೂಪಾಯಿ

2 ರೂ. ಕಳುಹಿಸಿದರೆ ಒಂದು ಪ್ರತಿಯನ್ನು ಕಳುಹಿಸಲಾಗುವುದು.

ರಿಯಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು — ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಬೆಂಗಳೂರಲ್ಲಿ ಪ್ರತಿಗಳು ಸಿಗುವ ಸ್ಥಳ— ಟಿ. ಎನ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್, ಚಿಕ್ಕಪೇಟೆ, ಬೆಂಗಳೂರು—೨.

ಜ್ಯೂ ಜನಾಂಗದ ಸಾಧನೆ

(ನಾಲ್ಕನೇ ಪುಟದಿಂದ)

ಹಾಗೂ ಕುಟುಂಬದ ಸದಸ್ಯರ ಮೇಲೂ, ಹಿಡಿತವಿದ್ದಿತ್ತು. ಪವಿತ್ರವಾಗಿ ಆಚರಿಸಲ್ಪಡುತ್ತಿದ್ದ ವಿವಾಹ ಹಬ್ಬಗಳಿಗೆ ಕಡ್ಡಾಯವಾಗಿದ್ದಿತ್ತು. ವಿಧವೆಯರಿಗೆ ಮರು ವಿವಾಹವಾಗುವ ಹಕ್ಕಿತ್ತು. ಪರು ತನ್ನ ಗತಿಸಿದ ಗಂಡಂದಿರ ತಮ್ಮಂದಿರನ್ನ ವಿವಾಹ ಆಗಲು ಅನುಮತಿ ಇತ್ತು. ಗಂಡಿಲ ಸ್ತ್ರೀಯರನ್ನು ಕಲ್ಲಿನಿಂದ ಹೊಡೆದು ಕೊಲ್ಲುತ್ತಿದ್ದರು. ಜ್ಯೂಗಳು ವಿದೇಶಿಯರನ್ನು ಬಹಳ ಅಂತರಿಸಿ ಸತ್ಕರಿಸುತಿದ್ದರು. ಜ್ಯೂಗಳಲ್ಲಿ ಪಂಗಡ ಜಗಳ ಸಾಮಾನ್ಯವಾಗಿದ್ದಿತ್ತು. ಕೊಲೆಯನ್ನು ಮುಖ್ಯ ಅಪರಾಧವೆಂದು ತಿಳಿಯಲಿದ್ದರು.

ಜ್ಯೂಗಳ ಕಾಣಿಕೆ: ಜಗತ್ತಿನ ಇತಿಹಾಸಕ್ಕೆ ಜ್ಯೂಗಳ ಮೊದಲನೆಯ ಕಾಣಿಕೆ ಅವರ ಧರ್ಮ. ಅವರ ಧರ್ಮವನ್ನು ಯಹೂದಿ ಮತವೆನ್ನುತ್ತಾರೆ ಇದು ಹಲವಾರು ಪ್ರವಾದಿಗಳ ವಚನಗಳನ್ನ ಒಳಗೊಂಡ ಧರ್ಮ ಪೊತ್ತಕವಾಗಿದೆ. ಇಪ್ಪತ್ತೊಂದು ಪವಿತ್ರ ಪುಸ್ತಕಗಳನ್ನು ಒಳಗೊಂಡಿದೆ. ಇಪ್ಪತ್ತೊಂದೆ ಹಲವಾರು ದಂತ ಕಥೆಗಳನ್ನು ಜ್ಯೂಗಳು ರಚಿಸಿದ್ದರು. ಆದರೆ ಮತ್ತು ಈವ್ ದೇವರಿಂದ ಶಾಪಕ್ಕೊಳಗಾದ ಕಥೆಯು ಇಂತಹ ದಂತ ಕಥೆಗಳಲ್ಲೊಂದು. ಜ್ಯೂಗಳು ಸೊಲೆಮನ್ ಹಾಡು (Song of Solomon) ಎಂಬ ಭಾವಗೀತೆಯನ್ನು ರಚಿಸಿದರು.

ಪ್ರಾಚೀನ ಜಗತ್ತಿಗೆ ಕಾನೂನುಗಳನ್ನು ನೀಡಿದವರಲ್ಲಿ ಜ್ಯೂ ಜನಾಂಗದವರೊಬ್ಬರಾಗಿದ್ದಾರೆ. ಅವರಲ್ಲಿ ಮೋಸೆಸ್ ಎಂಬವನು ಶ್ರೇಷ್ಠ ಕಾನೂನು ಪಂಡಿತ. ದಶ ಆಜ್ಞೆ ನೀತಿ, ಜೆಹೋವಾನ ಆರಾಧನೆ ಅವರ ಕಾನೂನಿನಲ್ಲಿ ಒಳಗೊಂಡಿದೆ. ಹಿರಿಯರಿಗೆ ವಿಧೇಯತೆಯನ್ನೂ, ಜೀವನದ ಗೌರವನ್ನೂ ವೈಯುಕ್ತಿಕ ಆಸ್ತಿಯ ಹಕ್ಕುಗಳನ್ನು ಅವರ ಕಾನೂನು ಮನ್ನಿಸುತ್ತದೆ. ಅವರ ಕಾನೂನು ಗುಲಾಮಗಿರಿಯನ್ನು ಒಪ್ಪಿಕೊಂಡಿದೆ.

ಯಹೂದ್ಯರು ಜವನಶಿಯ ದಾರಿಯನ್ನು ಹಿಡಿದಾಗ ಅವರಿಗೆ ಯೋಗ್ಯ ಮಾರ್ಗದರ್ಶನ ಬೇಕಾಯಿತು. ಹಲವಾರು ಪ್ರವಾದಿಗಳು ಜನಿಸಿ, ಕೆಟ್ಟ ಮಾರ್ಗದಲ್ಲಿರುವ ತಮ್ಮ ಜನರಿಗೆ ದೇವರು ಶಿಕ್ಷಿಸುವನೆಂದು ಎಚ್ಚರಿಸಿದ್ದರು. ಅವರಲ್ಲಿ ಪ್ರಮುಖನು ಅಮೋಸ (Amos) ಅವನು ಸಮಾಜದ ಮೇಲು ಕೀಳು ಎಂಬ ಭಾವನೆಯನ್ನು ನಿಷ್ಠುರವಾಗಿ ಖಂಡಿಸಿ ಇಂತಹ ವರ್ತನೆಗಳಿಂದ ನಾಶದ ಹಾದಿ ಹಿಡಿಯುವನೆಂದು ಎಚ್ಚರಿಸಿದನು. ಜೆಹೋವನು ಇಸ್ರೇಲ್ ದೇಶದವರಿಗಲ್ಲದೆ ಸಮಸ್ತ ಜಗತ್ತಿನ ದೇವನೆಂಬ ತತ್ವವನ್ನು ಅವನು ಸ್ಥಾಪಿಸಿದನು. ಮತ್ತು ಯೋಗ್ಯ ವರ್ತನೆಯಿಂದ ಒಲಿಸಿಕೊಳ್ಳಬಹುದಲ್ಲದೆ ಬೆಲಿ ಮತ್ತು ಯಾಗಗಳಿಂದ ಒಲಿಸಿಕೊಳ್ಳಲಾಗುವುದಿಲ್ಲ ಎಂದೂ ಅನುಭವನು ಬೋಧಿಸಿದನು. ಅವರ ಇನ್ನೊಬ್ಬ ಪ್ರವಾದಿ ಇಸ್ಸಾಯಿ (Isaih) ಜ್ಯೂಗಳಿಗೆ ಬರುವ ಕಷ್ಟದಿನಗಳ ಬಗ್ಗೆ ತುಪ್ಪಂದಂಗಿ ಎಚ್ಚರಿಸಿದನು. ಅವರೆಲ್ಲ ವಿನೋಚಿಸಲು ಇನ್ನೊಬ್ಬ ಪ್ರವಾದಿಯು ಜನಿಸುವನೆಂದು ಇಸ್ಸಾಯಿ ತಿಳಿಸಿದನು. ಆತನ ಕೊನೆಯ ಪ್ರವಾದಿ ಕ್ರೈಸ್ತನು.

ಟ್ಟು ಇನ್ನಿತರ ಯಾವ ಶಕ್ತಿಯನ್ನು ಪೂಜಿಸಬಾರದೆಂದು ಇತರ ಪ್ರವಾದಿಗಳು ಆಜ್ಞಾಪಿಸಿದರು. ಕೆಲವು ಪ್ರವಾದಿಗಳು ಮೂರ್ತಿ ಪೂಜೆಯನ್ನು ಖಂಡಿಸಿದರು. ಈ ಪ್ರವಾದಿಗಳ ಬೋಧನೆಯಿಂದ ಯಹೂದಿ ಧರ್ಮವು ಪರಿಪೂರ್ಣಗೊಳ್ಳುವಂತಾಯಿತು. ಈ ಮಹಾನ್ ಲೈಸ್ತ ಮತ್ತು ಇಸ್ಲಾಂ ಮತಗಳಿಗೆ ಹಿನ್ನೆಲೆಯೊಗಿದೆ.

ಜ್ಯೂಗಳು ಸಮ್ಮಾಭಿವೃದ್ಧಿ ಕಾಲದಲ್ಲಿ ಹಲವಾರು ಕೃತಿಗಳನ್ನು ರಚಿಸಿ ತಮ್ಮ ಸಾಹಿತ್ಯವನ್ನು ಬೆಳೆಸಿದರು. ಆವುಗಳಲ್ಲಿ ಮುಖ್ಯವಾದುದು ಬೈಬಲ್ಲಿನ ಹಳೆ ಒಡಂಬಡಿಕೆ. ಮೋಸೆಸ್‌ನ ಹೇಳಿಕೆಯನ್ನೊಳಗೊಂಡ ಪುಸ್ತಕವು ಜಗತ್ತಿನ ರಚನೆ ಜಿಹೋವಾನ ಪ್ರಭಾವ ಯಹೂದ್ಯರ ಪೂರ್ವ ಚರಿತ್ರೆ ದಶ ಆಜ್ಞೆ ನೀತಿನಿಯಮ ಪುಸ್ತಕ ಅವರ ಧರ್ಮ ನಿಯಮಗಳನ್ನು ಒಳಗೊಂಡಿದೆ. ಇಷ್ಟಲ್ಲದೆ ಹಲವಾರು ದಂತ ಕಥೆಗಳನ್ನು ಜ್ಯೂಗಳು ರಚಿಸಿದ್ದರು. ಆದರೆ ಮತ್ತು ಈವ್ ದೇವರಿಂದ ಶಾಪಕ್ಕೊಳಗಾದ ಕಥೆಯು ಇಂತಹ ದಂತ ಕಥೆಗಳಲ್ಲೊಂದು. ಜ್ಯೂಗಳು ಸೊಲೆಮನ್ ಹಾಡು (Song of Solomon) ಎಂಬ ಭಾವಗೀತೆಯನ್ನು ರಚಿಸಿದರು.

ಪ್ರಾಚೀನ ಜಗತ್ತಿಗೆ ಕಾನೂನುಗಳನ್ನು ನೀಡಿದವರಲ್ಲಿ ಜ್ಯೂ ಜನಾಂಗದವರೊಬ್ಬರಾಗಿದ್ದಾರೆ. ಅವರಲ್ಲಿ ಮೋಸೆಸ್ ಎಂಬವನು ಶ್ರೇಷ್ಠ ಕಾನೂನು ಪಂಡಿತ. ದಶ ಆಜ್ಞೆ ನೀತಿ, ಜೆಹೋವಾನ ಆರಾಧನೆ ಅವರ ಕಾನೂನಿನಲ್ಲಿ ಒಳಗೊಂಡಿದೆ. ಹಿರಿಯರಿಗೆ ವಿಧೇಯತೆಯನ್ನೂ, ಜೀವನದ ಗೌರವನ್ನೂ ವೈಯುಕ್ತಿಕ ಆಸ್ತಿಯ ಹಕ್ಕುಗಳನ್ನು ಅವರ ಕಾನೂನು ಮನ್ನಿಸುತ್ತದೆ. ಅವರ ಕಾನೂನು ಗುಲಾಮಗಿರಿಯನ್ನು ಒಪ್ಪಿಕೊಂಡಿದೆ.

ಯಹೂದ್ಯರು ಜವನಶಿಯ ದಾರಿಯನ್ನು ಹಿಡಿದಾಗ ಅವರಿಗೆ ಯೋಗ್ಯ ಮಾರ್ಗದರ್ಶನ ಬೇಕಾಯಿತು. ಹಲವಾರು ಪ್ರವಾದಿಗಳು ಜನಿಸಿ, ಕೆಟ್ಟ ಮಾರ್ಗದಲ್ಲಿರುವ ತಮ್ಮ ಜನರಿಗೆ ದೇವರು ಶಿಕ್ಷಿಸುವನೆಂದು ಎಚ್ಚರಿಸಿದ್ದರು. ಆವರಲ್ಲಿ ಪ್ರಮುಖನು ಅಮೋಸ (Amos) ಅವನು ಸಮಾಜದ ಮೇಲು ಕೀಳು ಎಂಬ ಭಾವನೆಯನ್ನು ನಿಷ್ಠುರವಾಗಿ ಖಂಡಿಸಿ ಇಂತಹ ವರ್ತನೆಗಳಿಂದ ನಾಶದ ಹಾದಿ ಹಿಡಿಯುವನೆಂದು ಎಚ್ಚರಿಸಿದನು. ಜೆಹೋವನು ಇಸ್ರೇಲ್ ದೇಶದವರಿಗಲ್ಲದೆ ಸಮಸ್ತ ಜಗತ್ತಿನ ದೇವನೆಂಬ ತತ್ವವನ್ನು ಅವನು ಸ್ಥಾಪಿಸಿದನು. ಮತ್ತು ಯೋಗ್ಯ ವರ್ತನೆಯಿಂದ ಒಲಿಸಿಕೊಳ್ಳಬಹುದಲ್ಲದೆ ಬೆಲಿ ಮತ್ತು ಯಾಗಗಳಿಂದ ಒಲಿಸಿಕೊಳ್ಳಲಾಗುವುದಿಲ್ಲ ಎಂದೂ ಅನುಭವನು ಬೋಧಿಸಿದನು. ಅವರ ಇನ್ನೊಬ್ಬ ಪ್ರವಾದಿ ಇಸ್ಸಾಯಿ (Isaih) ಜ್ಯೂಗಳಿಗೆ ಬರುವ ಕಷ್ಟದಿನಗಳ ಬಗ್ಗೆ ತುಪ್ಪಂದಂಗಿ ಎಚ್ಚರಿಸಿದನು. ಅವರೆಲ್ಲ ವಿನೋಚಿಸಲು ಇನ್ನೊಬ್ಬ ಪ್ರವಾದಿಯು ಜನಿಸುವನೆಂದು ಇಸ್ಸಾಯಿ ತಿಳಿಸಿದನು. ಆತನ ಕೊನೆಯ ಪ್ರವಾದಿ ಕ್ರೈಸ್ತನು.

ಪ್ರವಾದಿಗಳ ಬೋಧನೆಯು ಅಶಾದಾಯಕ ಭವಿಷ್ಯ ನಿರೂಪಣೆಯಿಂದ ಕೂಡಿತ್ತು. ಡಾವಿಡ್ ಮತ್ತು ಸೊಲೆಮನ್ ಕಾಲದಲ್ಲಿ ಜೆರುಸಲೆಮ್ ನಗರವು ಹಲವಾರು ದೇವಾಲಯಗಳಿಂದಲೂ, ಅರಮನೆಗಳಿಂದಲೂ ಶೋಭಿಸುತ್ತಿತ್ತು. ಇದೇ ರೀತಿಯಲ್ಲಿ ಕೆಲವು ಪಟ್ಟಣಗಳನ್ನು ರಚಿಸಿದ್ದರು. ಇದರಿಂದಾಗಿ ಜ್ಯೂಗಳು ವಾಸ್ತು ಶಿಲ್ಪಕ್ಕೆ ಪ್ರೋತ್ಸಾಹ ನೀಡುತ್ತಿದ್ದರೆಂದು ತಿಳಿದುಬರುತ್ತದೆ.

ಉಪಸಂಹಾರ: ಜ್ಯೂಗಳು ಪ್ರಾಚೀನ ಚರಿತ್ರೆಯಲ್ಲಿ ಈಜಿಪ್ಟ್, ಬ್ಯಾಬಿಲೋನ್, ಗ್ರೀಕ್ ಮತ್ತು ರೋಮನ್ ರಷ್ಟು ಪ್ರಮುಖ ಸ್ಥಾನ ಪಡೆಯುದಿದ್ದರೂ, ತಮ್ಮದೇ ಆದ ಕಾಣಿಕೆಯನ್ನು ಜಗತ್ತಿಗೆ ನೀಡಿತವ್ಯ ಸ್ಥಾನವನ್ನು ಪ್ರಾಚೀನ ಇತಿಹಾಸದಲ್ಲಿ ಉಳಿಸಿಕೊಂಡಿದ್ದಾರೆ. ಡಾವಿಡ್ ಮತ್ತು ಸೊಲೆಮೊನ್‌ರ ಕಾಲವು ಇವರ ಸುವರ್ಣ ಯುಗವೆಂದರೆ ತಪ್ಪಾಗಲಾರದು. ಆ ಕಾಲದಲ್ಲಿ ಇವರು ತಮ್ಮ ಸಾಮರ್ಥ್ಯವನ್ನು ರಚಿಸಿದಲ್ಲದೆ ಕಲೆ, ಕೈಗಾರಿಕೆ ಮತ್ತು ವ್ಯಾಪಾರ ಉದ್ಯಮವನ್ನು ಪ್ರೋತ್ಸಾಹಿಸಿದರು. ಧರ್ಮ, ಸಾಹಿತ್ಯ, ಕಾನೂನು, ಲಲಿತ ಕಲೆಗಳಿಗೆ ಕೊಟ್ಟ ಪ್ರೋತ್ಸಾಹಕ ಮತ್ತು ಪ್ರವಾಗಿಗಳ ಹಿತವಚನಗಳು ಜ್ಯೂ ಸಂಸ್ಕೃತಿದು ಮೂಲಧಾರ ಮಾತ್ರವಲ್ಲದೆ ಜಗತ್ತಿಗೆ ಅವರು ನೀಡಿದ ಕಾಣಿಕೆಗಳೂ ಆಗಿವೆ.

ಮಾಪೋ ಲೋಕದ ಅದ್ಭುತಗಳು

(ಐಂಭತ್ತನೇ ಪುಟದಿಂದ)

ಚಾರ ಧಾರೆಯನ್ನು ಜೀರ್ಣಿಸಿಕೊಂಡಿದ್ದರಿಂದ, ಗಾಡಿಯನ್ನು ವೇಗವಾಗಿ ಓಡಿಸುವಲ್ಲಿ ನಿಪುಣನಾಗಿದ್ದಾನೆ. 'ಶರಿಪ್ಯಕರಣ ವಾದಿ'ಗಳಿಂದ ಕೊಂಡ ಈ ಬೈಲ್ಸೆ ಎಂಜಿನ್ ಕೇವಲಕ್ಕೆ ಚಾರದ ಹಳೆಯ ಎಂಜಿನ್ ಆಗಿದ್ದರೂ ಅವನು ಈ ನೈಪುಣ್ಯತೆ ತೋರಿಸುತ್ತಿದ್ದಾನಂತೆ!

ಕ್ವಾಟಿಂಗ್ ಪ್ರಾಂತದ ಪಲ್ಲದ ಪ್ರಥಮ ಕಾರ್ಯದರ್ಶಿಯು ಹೇಳುವಂತೆ ಮಾಪೋ ತ್ಸೆ ತುಂಗರು ಕೋಳಿಯ ಪುಕ್ಕಗಳನ್ನು ಸ್ವರ್ಗದಷ್ಟು ಎತ್ತರಕ್ಕೆ ಹಾರಿಸಬಲ್ಲರು;—ಅಸಾಧ್ಯವಾದುದನ್ನು ಸಾಧಿಸಬಲ್ಲರು.

ಇನ್ನು ಕೆಲವರಿಗೆ ಮಾಪೋ ತ್ಸೆ ತುಂಗರ ವಿಚಾರಧಾರೆಗಳ ಆಧ್ಯಯನದಿಂದ ವೃದ್ಧಾಪ್ಯದಲ್ಲೂ ತಾರುಣ್ಯದ ಹುರುಪು ಬಂದಿದೆಯಂತೆ!

ಮಾಪೋ ತ್ಸೆ ತುಂಗರ ವಿಚಾರಧಾರೆ ಚೀನೀಯರಿಗೆ ಬೇಡವಾದರೂ ಅವರ ಗಂಟಲಲ್ಲಿ ಅದನ್ನು ತುರುಕಲಾಗುತ್ತಿದೆ.

ನಾಮಾವಶೇಷವಾದ ಆಶ್ರಿತ ರಾಜ್ಯ

ಕಾಂಗ್ ಕೇರ್

ಶ್ರೀ ಎಚ್. ಎಂ. ನಾರಾಯಣ ಭಟ್

ಕಾಂಗ್ ಕೇರ್ ಎಂಬ ಹೆಸರು ಅಷ್ಟೇನೂ ಪ್ರಸಿದ್ಧವಾಗಿಲ್ಲ. ಆದರೂ ಈ ಹೆಸರಿನ ಒಂದು ಆಶ್ರಿತ ಸಂಸ್ಥಾನವಿತ್ತು. ಆ ಆಶ್ರಿತ ರಾಜ್ಯದ ಹೆಸರಿನಲ್ಲಾದರೂ ಒಂದು ಆಕರ್ಷಣೆಯಿರ ಬೇಡವೆ? ಪ್ರತಾಪವೂ ಐಶ್ವರ್ಯವೂ ತುಂಬಿ ತುಳುಕುತ್ತಿದ್ದ ದಿನಗಳಲ್ಲೇ ಭಾರತದಲ್ಲಿ ಆಶ್ರಿತ ಸಂಸ್ಥಾನಗಳಿದ್ದುದು.

ಹಿಂದೆ ಆಶ್ರಿತ ರಾಜ್ಯವಾಗಿದ್ದ ಕಾಂಗ್ ಕೇರ್ ಇಂದು ವನ ಪ್ರದೇಶವಾಗಿ ನಾಮಾವಶೇಷವಾಗಿದೆ. ಆಶ್ರಿತ ರಾಜ್ಯಗಳ ಸಂಯೋಜನೆಯ ಮುನ್ನ ಕೇವಲ 1500 ಚ. ಮೈ. ವಿಸ್ತೀರ್ಣವಿದ್ದ ಈ ರಾಜ್ಯವು ಒರ್ವ "ಮಹಾ ರಾಜಾಧಿರಾಜ"ನ ಆಡಳಿತದಲ್ಲಿತ್ತು. ಒಂದು ಕಾಲದಲ್ಲಿ ಈ ರಾಜ್ಯ ಬಹಳ ವಿಸ್ತಾರವಾಗಿತ್ತು ಅಂದೆ ಅಳಿದ್ದು ಒಬ್ಬ 'ಮಹಾರಾಜ'ನೂ! ರಾಜ್ಯದ ಸಿಂಹಭಾಗವನ್ನು ಬ್ರಿಟಿಷರಿಗೆ ಕಾಣಿಕೆಯರ್ಪಿಸಿದುದಕ್ಕೆ ಅವರಿಂದ ಲಭಿಸಿದ ಪಾರಿತೋಷಕ 'ಮಹಾರಾಜಾಧಿರಾಜ' ನೆಂದಾಗಿತ್ತು. ರಾಜ್ಯದ ವಿಸ್ತೀರ್ಣ ಕಡಿಮೆಯಾದಾಗ ಪದವಿಯು ಹಿರಿಮೆ ಹೆಚ್ಚಿತು!

ಭಾನುಪ್ರತಾಪನು ಈ ರಾಜ್ಯವನ್ನಾಳಿದ ಕೊನೆಯ ಮಹಾರಾಜಾಧಿರಾಜನು. ಇಂಡಿಯನ್ ಸಿವಿಲ್ ಸರ್ವೀಸಿಗೆ ತರಬೇತಿ ಹೊಂದುತ್ತಿದ್ದಾಗ ಈ ಅರಸನು ಆಡಳಿತವಹಿಸಬೇಕಾಗಿ ಬಂದಿತ್ತೆನ್ನಲಾಗಿದೆ. ಆಶ್ರಿತ ರಾಜ್ಯಗಳ ಸಂಯೋಜನಾನಂತರ ಭಾನು ಪ್ರತಾಪ ದೇವನೂ ರಾಜಕೀಯವನ್ನೇ ವಿನೋದವಾಗಿ ಪರಿಗ್ರಹಿಸಿದನು.

ಆದಿವಾಸಿಗಳು ಹೆಚ್ಚಾಗಿರುವ ಈ ರಾಜ್ಯವೀಗ ಬಸ್ತಾರ್ ಜಿಲ್ಲೆಯ ಎರಡು ತಾಲೂಕುಗಳಲ್ಲಡಗಿದೆ. ಮೊದಲು ಬಸ್ತಾರ್ ರಾಜ್ಯದೊಂದಿಗೂ ಮತ್ತೆ ಮಧ್ಯ ಪ್ರದೇಶದೊಂದಿಗೂ ವಿಲೀನ (ಸಂಯೋಜನೆ) ವಾಯ್ತು.

ಕಾಂಗ್ ಕೇರ್ ಒಂದು ಕಾಲದಲ್ಲಿ ಛತ್ತೀಸ್‌ಗಡ (36 ಕೋಟೆಗಳು—36 ರಾಜ್ಯಗಳ ಸಮೂಹ)ದ ಭಾಗವಾಗಿತ್ತು. ಅಂದು ಈ ರಾಜ್ಯದ ಉತ್ತರ ಗಡಿಯು ರಾಯ್‌ಪುರಕ್ಕೆ ಸಮೀಪದ ದಂತರಿ ವರೆಗೂ ವ್ಯಾಪಿಸಿತ್ತು.

ಕಾಂಗ್ ಕೇರಿನ ರಾಜ ಕುಟುಂಬದವರು ಒರಿಸ್ಸಾದ ಜಗನ್ನಾಥನರಿಯಿಂದ ಬಂದವರೆನ್ನಲಾಗಿದೆ. ಬ್ರಿಟಿಷ್ ಆಡಳಿತ ಕಾಲದಲ್ಲಿ ರಾಯ್‌ಪುರದಲ್ಲಿದ್ದ ಪೊಲಿಟಿಕಲ್ ಏಜೆಂಟ್‌ನ ಆಶ್ರಯದಲ್ಲಿತ್ತು. ಆಡಳಿತ ಸಂಬಂಧ ಘೋರಣೆಗಳನ್ನು ಅವಿಶ್ಯರಿಸಿದ್ದು ಕಲ್ಕತ್ತಾದಲ್ಲಿನ ಬ್ರಿಟಿಷ್ ಏಜೆಂಟ್!

ಈ ರಾಜ್ಯದ ಆದಿವಾಸಿಗಳನ್ನು ಗೊಂಡುಗಳೆನ್ನುವುದಿದೆ. ಮುರಿಯಿಡಿ ಎಲೆ, ಸಾಸಿವೆ ಮುಂತಾದುವುಗಳೇ ಇಲ್ಲಿನ ವ್ಯಾಪಾರೋದ್ಯಮ—ಸಾಂಪತ್ತಿಕ ಆಡಳಿತವಲ್ಲ. ಜನರು ಸಂತೃಪ್ತರು— ಇದ್ದದರಲ್ಲಿಯೆ!

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬಿರಿದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಮುತ್ತಿನ ನೂಲೆ	1—80
ಹೂ ಗೊಂಚಲು	1—70
ಸಂಜಗಜ್ಜಾಯ	1—75
ಏಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—20
ವಿಚಿತ್ರ ಕಳ್ಳಪೇಟೆ	1—50
ಭಾರತದ ವೀರಾಂಗನೆಯರು	1—50
ಮೋರಿಕೊಟ್ಟೆ ಬೆಂಡೋಲೆ	1—80
ಶಿಲ್ಪಿ	1—50
ಪ್ರತಿಜ್ಞೆ ಪೂರ್ತಿ	1—00
ಭಂಟಮೊರಾ	2—50
ನೀತಿ ವಿನೋದ ಕತೆಗಳು	1—00

ಕೆಟಲಾಗಿಗೆ ಬರೆಯಿರಿ

ಪಪಭಾರತ ಪುಸ್ತಕ ಭಂಡಾರ,
ಉಡುಪಿ.

ಎಲ್ಲೆಲ್ಲಿ ಏನೇನು?

ಲೋಕ ಸೇವಾ ಹಾ. ಸೆ. ಶಾಲೆಯಲ್ಲಿ ವನಮಹೋತ್ಸವ.

ತಾ: 26—7—67ರಂದು ಲೋಕಸೇವಾ ಜೈಯರ್ ಸೆಕೆಂಡರಿ ಶಾಲೆಯಲ್ಲಿ ವನಮಹೋತ್ಸವವು ಆಚರಿಸಲ್ಪಟ್ಟಿತು. ವಿಟ್ಲದ ಡಿಸ್ಟ್ರಿಟ್ ಬಿ. ಡಿ.ಓ. ಶ್ರೀ ಜಾನುವೆಚಕೆ ಇವರು ವಿವಿಧ ಜಾತಿಯ ಹಲ್ಲುಗಿಡಗಳನ್ನು ತಂದು ಶಾಲಾ ವರಾಂಡದಲ್ಲಿ ನೆಡುವ ಕಾರ್ಯಕ್ರಮವನ್ನು ಮಾಡಿದರಲ್ಲದೆ ಆ ಹುಲ್ಲಿನ ಉಪಯೋಗವನ್ನು ವಿವರಿಸಿದರು. ಲೋಕಸೇವಾ ವೃಂದದ ಅಧ್ಯಕ್ಷರು ಶ್ರೀ ಯಂ. ನಾರಾಯಣ ಭಟ್ಟರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ವಾರ್ಷಿಕ ಮಹಾಸಭೆ

ಬಂಟರಯಾನೆ ನಾಡವರ ಸಂಘ, ಮುಂಬಾಯಿ ಸಂಘದ ವಾರ್ಷಿಕ ಮಹಾಸಭೆಯು ಇದೇ ತಿಂಗಳ 29ನೇ ತಾರೀಕು ಆದಿತ್ಯವಾರ ಸಂಘದ ಅಧ್ಯಕ್ಷ ಡಾ॥ ಯಂ. ಬಾಲಕೃಷ್ಣ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಮೇಲಿನ ವರ್ಷದ ಆಡಳಿತ ಸಮಿತಿಗೆ ಈ ಕೆಳಗಿನ ಮಹಾನೀಯರು ಆರಿಕಲ್ಪಟ್ಟರು.

1] ಅಧ್ಯಕ್ಷ:—ಡಾ॥ ಯಂ. ಬಾಲಕೃಷ್ಣ ಶೆಟ್ಟಿ. 2] ಉಪಾಧ್ಯಕ್ಷ:—ಶಿವಕೃಷ್ಣ ದಾಸ ಶೆಟ್ಟಿ 3] ಗೌ. ಪ್ರಧಾನ ಕಾರ್ಯದರ್ಶಿ:—ಯನ್ ಗೋಪಾಲ ಶೆಟ್ಟಿ, 4] ಉಪ ಕಾರ್ಯದರ್ಶಿ:—ಕೆಕ್ಕ ಕರುಣಾಕರ ಶೆಟ್ಟಿ. 5] ಗೌ ಕೋಶಾಧಿಕಾರಿ:—ವೈ. ರಘು ಶೆಟ್ಟಿ 6] ಉಪಕೋಶಾಧಿಕಾರಿ:—ವೈ. ಮುದ್ದು ಶೆಟ್ಟಿ. 7] ಶಾಲಾ ಚೆಯರ್‌ಮೆನ್:—ಯಂ ಮಂ. ಪ್ರತಾಪಚಂದ್ರ ಶೆಟ್ಟಿ. 8] ಶಾಲಾ ಕಾರ್ಯದರ್ಶಿ ಸಿ.ಕೃಂಕರ್‌ಪಾರ್ಶ್ವಕ 9]ಶಾಲಾ ಕೋಶಾಧಿಕಾರಿ:—ಪಿ. ತೀನ ಸಿ.ಶೆಟ್ಟಿ ಸಭೆಗಳಲ್ಲಿ ಸೂಚನೆಶೆಟ್ಟಿ, ಎ. ಬಿ. ಶೆಟ್ಟಿ, ಶ್ಯಾಮ ಬಿ. ಶೆಟ್ಟಿ, ಕೊಲ್ಯಾರು ರಾಜುಶೆಟ್ಟಿ ಮತ್ತು ಕಳವಾರು ಶ್ಯಾಮ ಶೆಟ್ಟಿ ಇವರು ಸಮಯೋಚಿತವಾಗಿ ಭಾಷಣಮಾಡಿದ್ದರು. ಅಧ್ಯಕ್ಷರ ಭಾಷಣವಾದ ಮೇಲೆ ಗೌ. ಪ್ರಧಾನ ಕಾರ್ಯದರ್ಶಿ ಶ್ರೀ ಯನ್. ಗೋಪಾಲ ಶೆಟ್ಟಿ ಧನ್ಯವಾದವನ್ನು ಅರ್ಪಿಸಿದರು. ಲಘು ಉಪಹಾರವಾದ ಮೇಲೆ ಅಂದಿನ ಕಾರ್ಯಕ್ರಮವು ಮುಕ್ತಾಯವಾಯ್ತು.

ಮುಕ್ಕಳ ವಾಲಿಮೆಂಟಿನ ಉದ್ಘಾಟನೆ

ಉಡುಪಿ, ಜುಲೈ 22:—ಉಡುಪಿ ಮೋಡರ್ನ್ ಹಾರ್ಯರ್ ವಿಲಿಮೆಂಟರೀ ಶಾಲಾ ಮಕ್ಕಳ ವಾಲಿಮೆಂಟಿನ ಉದ್ಘಾಟನಾ ಸಮಾರಂಭವು ಶಾಲಾ ಪ್ರಗತಿಪರೀ ಸಮಾಜದ ಖಾಯಂ ಅಧ್ಯಕ್ಷ ಶ್ರೀ ಎಚ್. ಎಲ್. ಭಟ್ಟರ ಅಧ್ಯಕ್ಷತೆಯಲ್ಲಿ ಉಡುಪಿ ರೇಂಜಿನ ಶಾಲಾ ಪರೀಕ್ಷಾಧಿಕಾರಿ ಶ್ರೀ ಶ್ರೀಪತಿರಾವ್ ಫಲಿದೂರ್ ಕಾರ್ಯಾರಂಭರವರಿಂದ ನೆರವೇರಿತು. ಸ್ವೀಕರ್ ಯು. ರತ್ನಾಕರ ಆಡಿಗರು ಸ್ವಾಗತಿಸಿ, ಸಲಹೆಸೂಚನೆಗಳನ್ನಿತ್ತು ತಪ್ಪನ್ನು ತಿದ್ದಬೇಕೆಂದು ಕೇಳಿಕೊಂಡರು. ಉದ್ಘಾಟಿಕರು ಭಾಷಣದಲ್ಲಿ ಶಾಲೆಗಳಲ್ಲಿ ಇಂತಹ ಚಟುವಟಿಕೆಗಳ ಅವಶ್ಯಕತೆ ತಿಳಿಸಿ ಸದಸ್ಯರಿ ಹಳ್ಳು ಧಾರ್ಮಿಕಗಳನ್ನು ವಿವರಿಸಿದರು ಪ್ರಕ್ಷೇತ್ರರ ಕಾಲದಲ್ಲಿ ಸದಸ್ಯರ ಪ್ರಶ್ನೆಗಳಿಗೆ ಮಂತ್ರಿ ಮಂಡಲವು ಸಾಕಷ್ಟು ಉತ್ತರ ಕೊಟ್ಟಿತು. ವಿರೋಧ ಪಕ್ಷದ ಸದಸ್ಯರಿಂದ ಎದ್ದಾಡಿ ಒಂದೆಡೆ ಸೇರಿ ಸಾಮೂಹಿಕ ಪ್ರಾರ್ಥನಾ ಪದ್ಧತಿಯನ್ನು ಜ್ಯಾರಿಗೆ ತರಬೇಕೆಂಬ ನಿಲುವಳಿ ಸೂಚನೆಯು ಚರ್ಚೆಗೆಬಟ್ಟು ಅಕ್ಕಲ್ಪ ಮತಗಳಿಂದ ಬಿದ್ದು ಹೋಯಿತು. ಉದ್ಘಾಟಕರು ಸಿಮರ್ಪಕ ಭಾಷಣದಲ್ಲಿ ಮಕ್ಕಳ ಚುರುಕುತನಕ್ಕೆ ಪೆಟ್ಟಾಗಿ ಸೂಚನೆ ಇನ್ನೂ ಹಲವಾರು ವಿಧದ ಚಟುವಟಿಕೆಗಳನ್ನು ಶಾಲೆಗಳಲ್ಲಿ ಆಚರಿಸಲು ಸಲಹೆ ಕೊಟ್ಟರು. ಅಧ್ಯಕ್ಷರ ಭಾಷಣದ ಬಳಿಕ ಶಾಲಾ ಸಂಸ್ಕೃತಿಕ ಮಂತ್ರಿ ಕುಮಾರಿ ಉಷಾದೇವಿಯವರು ಧನ್ಯವಾದ ಸಮರ್ಪಿಸಿದರು.

ವಂಕಿಧಾರಣಾ ಶಿಬಿರ

ಮಣಿಪಾಲ, ಜು. 31ಭಾರತದ ಈಮುಂಬರುವ ಜೋಜನಾ ಸಂಘದ ದಕ್ಷಿಣ ಕನ್ನಡ ಜಿಲ್ಲೆಯ ಆಶ್ರಯದಲ್ಲಿ ಬರುವ ಆಗಸ್ಟ್ 31ರಂದು ಕಳಿಪಾಡಿಯ ಗ್ರಾಮಾಂತರ ಹೆರಿಗೆ ಕೇಂದ್ರದಲ್ಲೂ, ೧೭ರಂದು ಆಲೆಖಾನಿನ ಗ್ರಾಮಾಂತರ ಹೆರಿಗೆ ಕೇಂದ್ರದಲ್ಲೂ, ೧೭ರಂದು ಕಡೆಕಾರಿನ ಗ್ರಾಮಾಂತರ ಹೆರಿಗೆ ಕೇಂದ್ರದಲ್ಲೂ, ೨೪ರಂದು ಉಡುಪಿಯ ಮುಖಾಂದ ವಿವಾಸದಲ್ಲಿರುವ ಎಕಾಡೆಮಿ ಸಂಗೀತ ಶಾಲೆಯಲ್ಲಿ ಅಪರಾಹ್ನ ಎರಡರಿಂದ ಐದು ಗಂಟೆಯವರೆಗೆ ವಂಕಿಧಾರಣಾ ಶಿಬಿರಗಳನ್ನು ನಡೆಸಲಾಗುವುದೆಲ್ಲದೆ ಚಲಚಿತ್ರಗಳನ್ನೂ ಪ್ರದರ್ಶಿಸಲಾಗುವುದೆಂದು ಇಲ್ಲಿ ಪ್ರಕಟಿಸಲಾಗಿದೆ.

ದಂತ ವಿದ್ಯಾರ್ಥಿ ಸಂಘದ ಉದ್ಘಾಟನೆ

ಮಣಿಪಾಲ, ಜು. ೨೭—ನಮ್ಮಲ್ಲಿ ಸಾಕಷ್ಟು ದಂತ ವೈದ್ಯರು ನಿರ್ಮಾಣರಿಗೆ ಪಲ್ಲುಗಳು ಕ್ಷೀಣಿಸುವುದರಿಂದ ಉಂಟಾಗುವ ವಿವಿಧ ರೋಗಗಳನ್ನು ನಿವಾರಿಸುವುದಕ್ಕಾಗುವುದಿಲ್ಲ,' ಎಂದು ಎಕಾಡೆಮಿ ಆಫ್ ಜನರಲ್ ಎಜುಕೇಶನ್ ಅಧ್ಯಕ್ಷ ಹಾಗೂ ರಿಜಿಸ್ಟ್ರಾರ್ ಡಾ॥ ಟಿ. ಎಂ. ಎ. ಪೈಯವರು ಇಂದು ಇಲ್ಲಿ ನುಡಿದರು.

ದಂತ ಶಸ್ತ್ರ ವೈದ್ಯರು ಇತರ ಶಸ್ತ್ರ ವೈದ್ಯರುಗಳಷ್ಟೇ ಮುಖ್ಯರೆಂದವರು ಆದರೆ ಅವರು ನೂರಾರು ಸಂಖ್ಯೆಯಲ್ಲಿ ಬೇಕಾಗಿದ್ದರೂ, ದೇಶದಲ್ಲಿ ಅವರು ಅಲ್ಪ ಸಂಖ್ಯೆಯಲ್ಲಿದ್ದಾರೆ. ಎರಡು ವರ್ಷಗಳ ಸಂತರ ಪ್ರತ್ಯೇಕ ಕಾಲೇಜು ಆಗಲಿರುವ ಕನ್ಯಾಕುಮಾರಿ ಬಾ ಮೆಡಿಕಲ್ ಕಾಲೇಜಿನ ದಂತ ವಿಭಾಗವು ಈ ಕೊರತೆಯನ್ನು ನೀಗಿಸುವುದಕ್ಕಾಗಿ ಶ್ರಮಿಸಬೇಕು ಎಂದು ಅವರು ಹೇಳಿದರು.

ದಂತ ವಿದ್ಯಾರ್ಥಿಗಳ ಸಂಘವನ್ನು ಅವರು ಉದ್ಘಾಟಿಸುತ್ತಾ ಕಳೆದ ಎರಡು ವರ್ಷಗಳಲ್ಲಿ ಉತ್ತಮ ಪ್ರಗತಿ ಸಾಧಿಸಿದ ಅಧ್ಯಾಪಕರನ್ನೂ ವಿದ್ಯಾರ್ಥಿಗಳನ್ನೂ ಅಭಿನಂದಿಸಿದರು.

ಅಧ್ಯಕ್ಷರಾದ ಶ್ರೀ ಜೆ. ಸಿ. ಡಿ. ಸಿಲ್ವಾರವರು ಎಲ್ಲರನ್ನೂ ಸ್ವಾಗತಿಸಿದರು. ಪೋಷಕ ಹಾಗೂ ದಂತ ಅಧ್ಯಯನಗಳ ಡೈರೆಕ್ಟರ್ ಡಾ॥ ಸುಂದರ್ ಜೆ. ವಯ್ಯರಾನಿಯವರು ಭಾಷಣ ಮಾಡಿದರು. ಉಪಾಧ್ಯಕ್ಷರಾದ ಶ್ರೀ ಕೆ. ನಸರರ್ನರವರು ವಂದನೆರ್ಗನ್ಪರ್ಪಿಸಿದರು.

ಪದ್ಮಶ್ರೀ ಡಾ॥ ಮಾಧವ ಪೈಗಳ 70ನೆ ಜನ್ಮ ದಿನಾಚರಣೆಯ ಸಿದ್ಧತೆ

ಜುಲೈ 16ರಂದು ಜರಗಿದ ಉಡುಪಿ ನಾಗರಿಕರ ಸಭೆಯಲ್ಲಿ ಡಾ॥ ಪೈಗಳ ಏಳನೆ ದಶಮಾನೋತ್ಸವ ಮತ್ತು ಎಕೆಡೆಮಿಯ ರಜತೋತ್ಸವಗಳನ್ನು 1968ನೇ ಎಪ್ರಿಲಿನಲ್ಲಿ ಜರಗಿಸಬೇಕೆಂದು ತೀರ್ಮಾನಿಸಿ ಆ ಬಗ್ಗೆ ವಿವರವಾದ ಕಾರ್ಯಕ್ರಮವನ್ನು ಯೋಚಿಸಲು ಸ್ಥಾನಿಕ ಸಮಿತಿಯೊಂದನ್ನುರಚಿಸಲಾಗಿತ್ತು. ಈ ಸಮಿತಿಯ ಸಭೆಯು ತಾ. 30ರಂದು ಶ್ರೀ ಡಿ. ಬಿ. ಕರ್ಮಾರ್ ಕರರ ಅಧ್ಯಕ್ಷತೆಯಲ್ಲಿ ಕಲ್ಪನಾ ಟೂರಿಸ್ಟ್ ಹೋಮ್‌ನಲ್ಲಿ ಜರಗಿತು. ಕನ್ವೀನರ್ ಶ್ರೀ ಟಿ. ರಮೇಶ ಪೈಗಳು ಗತ ಸಭೆಯ ವಿವರಗಳನ್ನೆತ್ತು ಮುಂದಿನ ಕಾರ್ಯಕ್ರಮ ರೂಪಿಸಲು ಒಂದು ಕಾರ್ಯಕಾರಿ ಸಮಿತಿಯನ್ನೂ ಉಪಸಮಿತಿಗಳನ್ನೂ ರಚಿಸಬೇಕಾಗಿದೆಯೆಂದರು. ಹಲವರು ಕೆಲ ಸಲಹೆ ಸೂಚನೆಗಳನ್ನಿತ್ತನಂತರ ಶ್ರೀ ಟಿ. ಎ. ಪೈಗಳು ಅಧ್ಯಕ್ಷರಾಗಿರುವ ಕಾರ್ಯಕಾರಿ ಸಮಿತಿ ರಚಿಸಲ್ಪಟ್ಟಿತು. ಅಧ್ಯಕ್ಷರು ಡಾ॥ ಪೈಗಳ ಸಾಧನೆಗಳನ್ನು ಕೊಂಡಾಡಿ ಈ ಉತ್ಸವವನ್ನು ಆಚರಿಸುವುದು ಸಮಯೋಚಿತವೆಂದು ಹೇಳಿದರು. ಶ್ರೀ ಎ. ಜೆ. ಅಳ್ವೆಯವರು ಧನ್ಯವಾದಗಳನ್ನರ್ಪಿಸಿದರು.

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ ನವಯುಗದ 46ನೇ ಸಂಪುಟವು ಮುಗಿದು ಸರ್ವಂಬರದಿಂದ 47ನೇ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಬಾಕಿ ಇರುವ ಚಂದಾದಾರರು ತಮ್ಮ ಚಂದಾಹಣವನ್ನು ಅದಷ್ಟು ಶೀಘ್ರ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಮೆನೇಜರ್

ಸಂಕ್ಷಿಪ್ತ ಸುದ್ದಿಗಳು

1966—67ರಲ್ಲಿ ಕಲ್ಲಿದ್ದಲ ಉತ್ಪಾದನೆಯು 68ದಶಲಕ್ಷ ಟನ್ನುಗಳಷ್ಟಾಗುವುದು. 1965—66ರಲ್ಲಿ ಈ ಉತ್ಪಾದನೆಯು 67.73 ದಶಲಕ್ಷ ಟನ್ನುಗಳಷ್ಟಾಗಿದ್ದಿತು ಎಂದು ಕೇಂದ್ರ ಸರ್ಕಾರಗಡೆಗಳ ಮತ್ತು ಲೋಹ ಮಂತ್ರಿ ಶಾಖೆಯ ವಾರ್ಷಿಕ ವರದಿಯಲ್ಲಿ ತಿಳಿಸಲಾಗಿದೆ.

೦೦೦ ೦೦೦ ೦೦೦

ರಾಜ್ಯದಲ್ಲಿ 1965-66ರಲ್ಲಿ ಕೈಗೊಂಡ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ. ಅವುಗಳ ಅಭಿವೃದ್ಧಿ ದುರಸ್ತಿ ಮತ್ತು ಇತರ ಮೂಲ ಕೆಲಸ ಕಾರ್ಯಗಳಿಗಾಗಿ 1966—67ರಲ್ಲಿ 40.30ಲಕ್ಷ ರೂ. ಗಳನ್ನು ಒದಗಿಸಲಾಗಿದೆ. ರಾಜ್ಯದ ಹೆದ್ದಾರಿಗಳ ದುರಸ್ತಿ ಮತ್ತು ಉಸ್ತುವಾರಿ ಕಾರ್ಯಗಳಿಗಾಗಿ 28.46ಲಕ್ಷ ರೂ. ವೆಚ್ಚ ಮಾಡಲಾಗಿದೆ.

ನೆರೆ ಪೀಡಿತರಿಗೆ ಪರಿಹಾರ ಸಾರ್ವಜನಿಕರಲ್ಲಿ ವಿನಂತಿ

ಮುಂಬಯಿ ದಿನಗಳ ನಿರಂತರ ಮಳೆಯಿಂದ ಕುಂದಾಪುರ ಮತ್ತು ಉಡುಪಿ ತಾಲೂಕುಗಳ ಎಲ್ಲಾ ನದಿಗಳಲ್ಲಿ ಹಿಂದೆಂದೂ ಕಾಣದಂತಹ ಭಾರಿ ನೆರೆ ಬಂದಿತ್ತು. ಪರಿಣಾಮವಾಗಿ 800ಕ್ಕೂ ಮಿಕ್ಕಿ ಮನೆಗಳು ಜಖಂಗೊಂಡಿವೆ, ಮನೆವಾರ್ತನೆಯ ಸಾಮಾನುಗಳೆಲ್ಲ ನೀರು ಪಾಲಾಗಿವೆ. ಇದರಿಂದುಂಟಾದ ನಷ್ಟವು ಸುಮಾರು ಒಂದು ಲಕ್ಷ ರೂಪಾಯಿಗೂ ಮಿಕ್ಕಿಬಹುದೆಂದು ಅಂದಾಜು ಮಾಡಲಾಗಿದೆ ನೆರೆ ಹಾವಳಿಗೆ ಬಲಿ ಬಿದ್ದು ಮನೆ ಮಾರಿಲ್ಲದಂತಾದವರು ಹೆಚ್ಚಾಗಿ ಬಡ ವಕ್ಕಲುಗಳೇ ಆಗಿದ್ದು, ಅವರ ಸ್ಥಿತಿ ಚಿಂತಾಜನಕವಾಗಿದೆ.

ನೆರೆಪೀಡಿತರಿಗೆ ಸರಕಾರ ನೀಡಬಹುದಾದ ಸರ್ವ ಸಹಾಯವನ್ನು ಕೊಡಲಾಗುತ್ತಿದೆ. ಆದರೆ ನೆರೆ ಹಾವಳಿಯು ಬಹುನೊಡ್ಡ ಪ್ರಮಾಣದಲ್ಲುಂಟಾಗಿರುವುದರಿಂದ, ಇವರ ಹುಸರ್ನಿವೇತನವು ಸಾಧ್ಯವಾಗಲು ಸರಕಾರದ ಸಹಾಯದೊಂದಿಗೆ ದೊಡ್ಡ ಮೊತ್ತದ ಸಾರ್ವಜನಿಕ ಬೆಂಬಲವೂ ಅಗತ್ಯವಾಗಿದೆ. ನಗದು, ಬಟ್ಟೆ ಬರೆ, ಪಾತ್ರೆ, ಬಿದಿರು ಮತ್ತು ತಟ್ಟಿಯೇ ಮೊದಲಾದ ಕಟ್ಟಡ ಸಾಮಗ್ರಿಗಳು ಇವುಗಳನ್ನೆಲ್ಲ ಉದಾರಿಗಳು ದಾನನೀಡಿ ನೆರವು ನೀಡಿದರೆ ಮಾತ್ರ ಈ ಸಮಸ್ಯೆಯನ್ನು ಯಶಸ್ವಿಯಾಗಿ ನಿರ್ವಿಸಬಹುದಾಗಿದೆ.

ಈ ಕೆಳಗಿನ ಗ್ರಾಮಗಳಲ್ಲಿ ಮನೆ ಮತ್ತು ಬದುಕುಗಳೆಗುಂಬಾದ ಹಾನಿಯು ವಿಶೇಷವಾಗಿದೆ.

ಫಲಿಮಾರು, ನಂದಿಕೂರು, ಕುಮ್ಮಗೋಡು ಹಂದಾಡಿ, ಹೊಸಾಳ, ಬನ್ನಾಡಿ, ಚತ್ರಸಾಡಿ, ವಡ್ಡರ್ಸೆ, ಬಾಂಡೇಶ್ವರ, ಉಪ್ಪೂರು, ಮೂಡಹಡು, ಗಿಳಿಯೂರು, ಕೋಟೆ, ಕಾರ್ಕಡ, ಕಚ್ಚೂರು, ಬೆಳ್ಳೆ ಮತ್ತು ಕುಂದಾಪುರ ತಾಲೂಕಿನ ಬೇಳೂರು ಗ್ರಾಮಗಳು.

ಅಲ್ಲದೆ ಮಂಗಳೂರು ತಾಲೂಕಿನ ಸೋಮೇಶ್ವರ ಗ್ರಾಮದಲ್ಲಿ 28 ಕುಟುಂಬಗಳು ತಮ್ಮ ಮನೆಗಳನ್ನು ಕಳೆದುಕೊಂಡಿದ್ದಾರೆ

ಈ ರೀತಿ ಅಪತ್ಕಾಲ ಗುರಿಯಾದ ಜನರಿಗೆ ನೆರವಾಗುವಂತೆ ಸಾರ್ವಜನಿಕರು ವಿವಿಧ ರೀತಿಯಲ್ಲಿ ಉದಾರವಾಗಿ ಸಹಾಯ ನೀಡಿ ಪುಣ್ಯ ಕಟ್ಟಿಕೊಳ್ಳಬೇಕಾಗಿ ವಿನಂತಿ.

ಅಗೋಸ್ತು ಎರಡನೆಯ ತಾರೀಕಿನಂದು ಸಾಲಿಗ್ರಾಮ ಪಂಚಾಯತಿನ ವರಾಂಡದಲ್ಲಿ ನೆರೆ ಪೀಡಿತರಿಗೆ ಸಹಾಯವನ್ನು ವಿತರಣೆ ಮಾಡಬೇಕೆಂಬ ಅವೇಕ್ಷೆ ಇದೆ. ಇದಕ್ಕೆ ಅನುಕೂಲವಾಗಿ ದಾನಿಗಳು ತಮ್ಮ ಸಹಾಯವನ್ನು ಮುಂಚಿತವಾಗಿ ಉಡುಪಿ ತಹಶೀಲ್ದಾರರಿಗೆ ಅಥವಾ ಅದೇ ದಿನ ಸಾಲಿಗ್ರಾಮ ಪಂಚಾಯತಕ್ಕೆ ಕಳುಹಿಸಬೇಕಾಗಿ ಪ್ರಾರ್ಥನೆ.

ಎಚ್.ಎಲ್.ನಾಗೇಗೌಡ
ಕಲೆಕ್ಟರ್, ಉಡುಪಿ.
28—7—1967. ದಕ್ಷಿಣ ಕನ್ನಡ ಜಿಲ್ಲೆ

ಭಾರತದ ಜನಸಂಖ್ಯೆಯು 1966—67ರಲ್ಲಿ 500 ದಶಲಕ್ಷದ ಮಿತಿಯನ್ನು ದಾಟಿದೆ. ಜನರ ಆರೋಗ್ಯ ಸ್ಥಿತಿ ಸುಧಾರಿಸುವುದರಿಂದ, ಮರಣ ಪ್ರಮಾಣ ಕಡಿಮೆಯಾಗಿರುವುದರಿಂದ ಜನಸಂಖ್ಯೆಯು ಹೆಚ್ಚುತ್ತಿದೆ. ಈಗ ಜನಸಂಖ್ಯೆಯು ಶೇಕಡವಾರು ಹೆಚ್ಚಳ ವರ್ಷಕ್ಕೆ 2.5 ರಷ್ಟಿದೆ. ಇದೇ ವೇಗದಲ್ಲಿ ಜನಸಂಖ್ಯೆಯು ಹೆಚ್ಚಿದರೆ, 1970ರ ಹೊತ್ತಿಗೆ ಭಾರತದ ಜನಸಂಖ್ಯೆ 555 ದಶಲಕ್ಷದಷ್ಟಾಗುತ್ತದೆ. 1976ರ ಹೊತ್ತಿಗೆ 620 ದಶಲಕ್ಷದಷ್ಟಾಗುವ ಅಂದಾಜಿದೆ.

೦೦೦ ೦೦೦ ೦೦೦

ನಾಲ್ಕನೇ ಯೋಜನೆಯಲ್ಲಿ 19.21 ಕೋಟಿ ರೂ.ಗಳನ್ನು ರಾಷ್ಟ್ರೀಯ ಮಲೇರಿಯಾ ನಿವಾರಣ ಕಾರ್ಯಕ್ರಮಕ್ಕಾಗಿ ವೆಚ್ಚ ಮಾಡಲಾಗುವುದು. 1966—67ರಲ್ಲಿ 1207.32 ಲಕ್ಷ ರೂ.ಗಳನ್ನು ಈ ಬಗ್ಗೆ ಖರ್ಚು ಮಾಡಲಾಯಿತು. ಈ ವಿವರಗಳನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಯೋಜನಾ ಮಂತ್ರಿ ಶಾಖೆಯು 1966—67ನೇ ವಾರ್ಷಿಕ ವರದಿಯಲ್ಲಿ ಪ್ರಕಟಿಸಲಾಗಿದೆ.

೦೦೦ ೦೦೦ ೦೦೦

1966ರಲ್ಲಿ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಈ ಅವಧಿಯಲ್ಲಿ ಒಟ್ಟು 1,59,603 ಮಂದಿ ವಿದೇಶಿ ಪ್ರವಾಸಿಗರು ಭಾರತಕ್ಕೆ ಬಂದರು. ಈ ಸಂಖ್ಯೆಯಲ್ಲಿ ಪಾಕಿಸ್ತಾನಿ ರಾಷ್ಟ್ರೀಯರ ಸಂಖ್ಯೆ ಸೇರಿಲ್ಲ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 48/1967.

ವಾದಿ— ರಾಮ ಹೊಳ್ಳ.

ಪ್ರತಿವಾದಿಯು— ವಾಸುದೇವ ಕಾರಂತ ಕೊಡಾ.

1ನೇ ಪ್ರತಿವಾದಿ— ವಾಸುದೇವ ಕಾರಂತ, ವೆಂಕಟ್ರಮಣ ಕಾರಂತರ ಮಗ, ಕುಂದಾಪುರ ಶಾಲ್ಕು ಹೊಸಾಡು ಗ್ರಾಮದ ಕಂಡಗೋಡದಲ್ಲಿರುವವ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದರೆ—

ನೀವು ಕೊಡಾ ಪ್ರತಿವಾದಿಯಿಂದ ವಾದಿಗೆ ಬರಬಾಕಿಳ್ಳತ್ತು ಕ್ರೋಧ, ನುತ್ತು ವಿಷ್ಣುವಾಸ ಸಂ|ರದಬಾಬ್ತು ತಾ.೭.10.1965ರ ಎಸರಿನ ಗೇಜಿಗೆ ಪಾಡಿಯು ನಿಮ್ಮ ಮೇಲೆ ಮಾಡಿದ ಮೇಲಿನ ದಾವೆಯು ತಾ. 9—8—1967 ಕ್ಕೆ ತಪ್ಪಿಗೆ ಯಿಟ್ಟಿರುತ್ತದೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪಣೆಯಿದ್ದರೆ ಆ ದಿನ ಹಗಲು 11ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಜ್ಮೆರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿರುತ್ತದೆ.

(ಕೋರ್ಟು ಹುಕುಂ ಪ್ರಕಾರ)

Y. Tejappa Shetty.
Advocate for Piff.
Coondapoor, 25—7—1967.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಪೈಸೆ ಪೈಸೆಗೆ

(೨ರಜನೇ ಪುಟದಿಂದ)

ನೋಟುಗಳನ್ನು ಅತನ ಬಳಿಕೊಡು ತ್ತಾ "ನಾನು ರೂಪಾಯಿಗಳ ಬಯಕೆ ಯಿಂದ ನಿನ್ನ ಬಳಿಗೆ ಬರಲಿಲ್ಲ" ಎಂದೆ.

"ಮತ್ತೆ?" ಕುತೂಹಲದಿಂದ ಕೇಳಿದ ಅತ.

'ನೀನು ಈ ರೀತಿ ತಲೆಗುರಿಸಿಕೊಳ್ಳಲು ಕಾರಣವೇನು?' ವೃಶ್ಚಾರ್ಥದ ದೃಷ್ಟಿಯಿಂದ ಅತನನ್ನು ನೋಡುತ್ತಾ ಕೇಳಿದೆ.

'ಅದನ್ನು ಕೇಳಲು ನೀವು ಯಾರು?'

'ನಿನ್ನ ಹಿತಚಿಂತಕನೆಂದು ತಿಳಿ' ಎಂದೆ.

ಸ್ವಲ್ಪನವದನನಾಗಿ ಕುಳಿತ ಅತ ಏದಾರು ನಿಮಿಷಗಳ ನಂತರ ಯೋಚನೆಯಿಂದ ಮುಕ್ತನಾಗಿ "ನಾನು ಮನೆ ಬಿಟ್ಟು ಬರಲು ಕಾರಣನೇನೆಂಬುದನ್ನು ನಿನಂದ ಹೇಳಲು ಸಾಧ್ಯವಿಲ್ಲ. ಶಕ್ತನೂ ಅಲ್ಲ. ಆದರೆ ಬರೆದು ಕೊಡುವೆ' ಎಂದ ಅತ ಹೇಳಿದಾಗ ನನಗೆ ಸಂತಸವಾಯಿತು.

ಪೆನ್ಸಿಲನ್ನು ಭೇಟಿಯಾದಾಗ ಬರೆದುದನ್ನು ಕೊಡುವೆನೆಂದು ಅತ ಹೇಳಿ ಒಂದು ಎಳಕಾಗದವನ್ನು ಬರೆದು ನನ್ನೊಡನೆ ಕೊಟ್ಟ. ಅಲ್ಲಿಂದು ಹಿಂತಿರುಗಿ ಮನೆಯತ್ತ ಹೆಜ್ಜೆ ಹಾಕಿ ತೊಡಗಿದ ನನಗೆ ಅತನ ವರ್ತನೆ ವಿಚಿತ್ರವೆನಿಸಿತು.

— ೩ —

ಮರುದಿನ ಅತ ಕೊಟ್ಟ ವಿಳಾಸವನ್ನು ಜೇಬಿನಿಂದ ತೆಗೆದು ಹೊರಟೆ. ನನ್ನನ್ನು ಕಂಡೊಡನೆ ಅತನ ತಂದೆ ಸಡಿಲುವ ಧ್ವನಿಯಲ್ಲಿ ಅತ ತಪ್ಪು ವಿಳಾಸ ಕೊಟ್ಟು ಎಲ್ಲಿಂದ ಬರುತ್ತಿರುವಿರಿ ಎಂದು ಯೋಚಿಸಿದೆ. ಆದರೆ ನನ್ನ ಭಾವನೆ ತಪ್ಪಾಗಿತ್ತು. ನಾನು, ನಿನ್ನೇನು ಅಮನೆಯನ್ನು ತಲುಪಬೇಕು ಎನ್ನುವಷ್ಟರಲ್ಲಿಂದು. ಕಾರು ಬಂದು ನನ್ನ ಬಳಿಯಲ್ಲಿ ನಿಲ್ಲಿತು. ಹಿಂದಿನಸೀಟಿನಲ್ಲಿದ್ದವ್ಯಕ್ತಿಯನ್ನು ತ್ತ ತಿಸಿ ದಪ್ಪವಾದ ಕವರೊಂದನ್ನು ಕೊಟ್ಟು ಒಂದು ನಿಮಿಷವೂ ತಡಮಾಡದೆ ಕಾರು ಸ್ಟಾರ್ಟ್ ಮಾಡುವಂತೆ ಆಜ್ಞಾಪಿಸಿತು. ನಾನು ಏನೋ – ಹೇಳಬೇಕೆಂದು ಬಾಯಿ ತೆದಾಗ ಕಾರು ನನ್ನ ಕಣ್ಣಿಂದ ಕಣ್ಮರೆಯಾಗಿತ್ತು. ಒಂದು ಕ್ಷಣ ಅತಕೊಟ್ಟ ಕವರನ್ನೇ ತದೇಕ ದೃಷ್ಟಿಯಿಂದ ನೋಡಿದ ನಂತರ ಅದನ್ನು ಜೇಬಿನಲ್ಲಿ ತುರುಕಿಸಿದೆ. ಮನೆಯಲ್ಲಿ ಅಂದಿನಂತೆ ಈ ದಿನವೂ ಅತನ ವಿಷಯವಾಗಿ ಒಡಲೂಡಗಿನೆ. ಆದರೆ—

ನೀನು ನಾನು ತಲೆ ಕೆರಸಿಕೊಳ್ಳಲು ಕಾರಣವೇನೆಂಬ ಕೇಳಿದಿರಿ. ಅದನ್ನು ಕ್ರಮಬದ್ಧವಾಗಿ ತೆಪಲ್ಲಿ ಒಂದು ಸ್ಪಂಥವಾಗಿ ಬರೆ ಅದನ್ನು ಸಾಕ್ಷ್ಯವಾಗಿ ಈ ಕೆಳಗಿನಂತೆ ಬರೆದಿರುತ್ತೇನೆ.

ಶ್ರೀಮಂತ ಮನೆತನದಲ್ಲಿ ಜನ್ಮತಾಳಿದ ನನಗೆ ಯಾತ್ರಿಕಳ್ಳಿ ಕೊರತೆ ಇರಲಿಲ್ಲ. ಬಾಲ್ಯದಲ್ಲಿ ತಾಯಿಯ ಪ್ರೀತಿಯು ಕೈಗೊಂಬೆಯಾಗಿ ಬೆಳೆದೂ ಇಷ್ಟವೇನೆಂಬುದನ್ನೇ ಅರಿಯದಾದೆ. ವಿದ್ಯೆಯ ಗಂಧಗಾಳಿಯೇ ನನಗೆ ಹಿಡಿಯುತ್ತಿರಲಿಲ್ಲ. ಆದರೆ ಮನೆಯಲ್ಲಿ ಹಿರಿಯರ ಒತ್ತಾಯಕ್ಕೊಳಪಟ್ಟ ಶಾಲೆಗೆ ಹೋಗುತ್ತಿದ್ದೆ. ಅಷ್ಟೆ ಶಾಲೆಯಲ್ಲೂ ನನ್ನ ಉಪದ್ರವನ್ನು ತಾಳಲಾರದೆ ಅಧ್ಯಾಪಕರೊಮ್ಮೆ ಮನೆಗೆ ದೂರು ಹೊತ್ತು ಬಂದಿದ್ದರು. ಎಸ್. ಎಸ್. ಎಲ್. ಸಿ. ಯಲ್ಲಿದ್ದಾಗ ನಡೆದ ಆ ಘಟನೆ ಇನ್ನೂ ನನಗೆ ಜ್ವಾಜ್ವಲ್ಯವಿದೆ.

ತರಗತಿಯಲ್ಲಿ ಅಧ್ಯಾಪಕರ ಎದುರಿಗೆ ಸಿಗರೇಟು ಸೇದಿದುದಕ್ಕೆ ಅವರು ನನ್ನ ಹಿಡುದಾರಿಯಲ್ಲೇ ನನ್ನ ತಂದೆಯೊಡನೆ ದೂರು ಹೇಳಿದರು. ಸಿಟ್ಟಾದ ನನ್ನ ತಂದೆಯವರು "ಅಜ್ಜತ ನನ್ನ ಮಗನೇ ಅಲ್ಲ. ಏನಿದ್ದರೂ ಅವನ ತಾಯಿಯೊಡನೆ ಹೇಳಿ ಎಂದಾಗ ಅಧ್ಯಾಪಕರು ಸುಸ್ತಾಗಿ ಹಿಂತಿರುಗಿದರು. ಹೀಗೆ ನಾನು ಏನು ಮಾಡಿದರೂ ತಂದೆ ಅಡ್ಡ ಬರುತ್ತಿರಲಿಲ್ಲ. ಹಣದ ವಿಷಯದಲ್ಲಿಯೂ ಅವರು ನನಗೆ ಎಂದೂ "ಇಲ್ಲ" ಎಂದುದಿಲ್ಲ. ಆದರೆ ನಾನು ಮಾಡಿದ ಇನ್ನೊಂದು ಕೆಟ್ಟ ಕೆಲಸದಿಂದಾಗಿ ಅವರು ಸಂಪೂರ್ಣ ಧೋಸಿ ಹೋದರು. ಒಮ್ಮೆ ಒಂದೆರಡು ಕೇಡಿ ಜನಗಳೊಂದಿಗೆ ಸೇರಿ ಕಳ್ಳ ಭಟ್ಟಿಸಾಂಗಡಿಗೆ ಹೋದಾಗ ನಾನು ಪೋಲೀಸರ ಕೈಗೆ ಸಿಕ್ಕಿ ಬಿದ್ದೆ. ಕೋರ್ಟಿನಲ್ಲಿ ನನ್ನ ಅಪ್ಪನೇ ನನ್ನ ಪರವಾಗಿ ವಾದಿಸಿದರು. ಸಮಾಜದಲ್ಲಿದ್ದ ತಂದೆಯ ಗೌರವಕ್ಕೆ ಕಳಂಕ ತಂದೆ. ಮುಸ್ಲಿಮಳೊಬ್ಬಳನ್ನು ವಿವಾಹವಾಗಿ ಜಾತಿಯನ್ನೆ ಕೆಡಿಸಿದೆ. ಇದ್ದಕ್ಕಿದ್ದಂತೆ ಒಂದು ದಿನ ತಂದೆ ನನ್ನಲ್ಲಿ ಬರಿದು ಅನೇಕ ಬುದ್ಧಿವಾದ ಹೇಳಿದರು. ಅದರಿಂದ ನನ್ನ ವರ್ತನೆಗೊಂಡಿತು.

ನಾನು ಇದುವರೆಗೆ ಅಂಧಕಾರದಲ್ಲೇ ಇದ್ದು ಬೆಳಕನ್ನು ಕಂಡವನಲ್ಲ— ಎಂದು ನನಗೆನಿಸಿತು. ಜೀವನದ ನಿಜವಾದ ಬೆಳಕನ್ನು ನಾನು ಕಾಣುವೆ. ಒಂದರ್ಥದಲ್ಲಿ ಯೂ ಜೀವನದಲ್ಲಿ ಜಿಗುಪ್ಸೆ ಬಂದಿತ್ತು. ಅಷ್ಟರಲ್ಲಿ ಅತನ ಪತ್ರ ಬಂದಿತ್ತು. ಅದರಲ್ಲಿ ಅತ ಬರೆದಿದ್ದ ಸಾಲುಗಳು ನನ್ನ ಜೀವನದಲ್ಲಿ ಹೊಸ ಬೆಳಕನ್ನು ಕಂಡಂತಾಯಿತು. ಅತನ ಪತ್ರದಲ್ಲಿ ಬರೆದಿದ್ದ ಸಾಲುಗಳು ಹೀಗಿದ್ದವು.

"ಪ್ರಿಯ ಮಿತ್ರನೆ,

ನಾನು ಮನೆ ಬಿಟ್ಟು ಬರಲು ಕಾರಣವೇನೆಂದು ನಿನ್ನಲ್ಲಿ ಹೇಳಲು ಸಾಧ್ಯವಿಲ್ಲವೆಂದು ಹೇಳಿದ್ದೆ. ಆದರೆ ಬರೆದು ಕೊಡುವೆನೆಂದು ಹೇಳಿದ್ದೆ. ಆದರೆ ಈಗ ಬರೆದು ಕೊಡಲಾರೆ. ಕಾರಣ ನಾನು ಬರೆದು ಕೊಡುವ ಸಂಗತಿಗಳು ನಿನಗೆ ಅರ್ಥವಾಗಲಾರವು. ಅಲ್ಲದೆ

NAVAYUGA 3--8 --1967
Registered with the Registrar
of News Papers for India
under No. k. N. 3540/'67

REGD. No. B. G. 176
LICENCE No. 31
Licensed to Post without Prepayment

ನಿನುಗೂ ಗೊತ್ತಿರಲಿ

ಕಾರಿನ ತೀವ್ರ ಮರಣ ಹೇಗಾಗುತ್ತದೆ ?

ಸಂಗ್ರಹಕಾರರು:

ಶ್ರೀ ಪಿ. ಕೆ. ಪ್ರಕಾಶರಾವ್, ಕೆಮ್ಮಣ್ಣು

"ನೋಟಾರು ಅಪಘಾತದಿಂದ ಮರಣ" ಎಂಬ ಸಾವಿರಾರು ಸುದ್ದಿಗಳನ್ನು ಪತ್ರಿಕೆಗಳು ವರ್ಷನಿಡಿ ಪ್ರಕಟಿಸುತ್ತಾಬರುತ್ತಿವೆ. ಇಂತಹ ಅಪಮೃತ್ಯುಗಳು ಸರ್ವ ಸಾಧಾರಣವಾಗಿ ದಕ್ಷದ ಸಂಗತಿಯಾದರೂ, ಅದರ ವಿಚಾರದ ತಿಳಿವಳಿಕೆ ಇನ್ನೂ ಅತ್ಯಲ್ಪ.

ವೈದ್ಯಕೀಯ ವಿಜ್ಞಾನ ಯಂತ್ರ ಕುಶಲರಿಂದ ಈ ಭೀಕರತೆ ಜಮೀರಕದಲ್ಲಿ ಹಲವಾರು ವರ್ಷಗಳಿಂದೀಚೆಗೆಪರಿಶೋಧನೆಯ ಪ್ರಯತ್ನಗಳು ನಡೆಯುತ್ತಿವೆ. ಆದಕ್ಕಾಗಿ ನೂರಾರು ನೋಟಾರು ಕಾರುಗಳನ್ನೊಡೆದಿದ್ದಾರೆ. ಸಾವಿರಾರು ವರಡಿಗಳನ್ನು ಪರಾಮರ್ಶಿಸಿದ್ದಾರೆ. ಹಲವಾರು ದುರಂತದ ಸನ್ನಿಧಿಗಳನ್ನು ಪ್ರಸಿದ್ಧ ನೋಟಾರು ಸಯರಿಯ ಕಾರ್ಖಾನೆಗಳ ತಜ್ಞರು ಅವರೊಂದಿಗೆಲ್ಲಾ ಸಹಕರಿಸಿದ್ದಾರೆ. ಪರೀಕ್ಷಿಸಿದ್ದಾರೆ. ಹಾಗೂ ಪ್ರಸಿದ್ಧ ವೈದ್ಯರ ಸಲಹೆಯೂ ಅವರಿಗೆ ದೊರೆತಿದೆ. ಈ ಎಲ್ಲಾ ಶೋಧನೆ, ಪ್ರಯತ್ನಗಳ ಮುಖ್ಯ ಗುರಿ— ದುರಂತಗಳನ್ನು ತಪ್ಪಿಸುವ ಹಾಗೂ ಕಡಿಮೆಪಡಿಸುವಂತೆ ನೋಟಾರು ಗಾಡಿಗಳ ನಿರ್ಮಾಣ ಹಾಗೂ ಜಕ್ಷಣತಕ್ಕೀಡಾದ ಗಾಡಿಗಳು ಹೆಚ್ಚಿನ ಜಖಂ ಆಗದಂತೆ ಮಾಡುವುದು.

ಅದಕ್ಕಾಗಿ ನೋಟಾರು ವೇಗದ ನೂತನ ಪರಿಕಲ್ಪನೆಯಿಂದ ಕೂಡಿರಬೇಕು. ಅಧವಾ ಇದ್ದ ಭಾಗಗಳನ್ನು ಸ್ವಲ್ಪ ಏಪರ್ಯಾಸ ಪಡಿಸಬೇಕು. ಸೆಫ್ಟಿ ಬೆಲ್ಟು, ನೂತನ ಸ್ಟಿಯರಿಂಗ್ ವೀಲು, ಸೇಫ್ಟಿ ಬಾಗಿಲುಗಳು, ಡೇಶ್ ಬೋರ್ಡ್ ಪ್ಲೇಟಿಂಗ್— ಕೆಲವು ಸೂಚನೆಗಳು. ಅಷ್ಟೆಸಿ. ಶೋಧನೆಯ ಪರಿಣಾಮವಾಗಿ ಮಾನವ ದೇಹವು ಕ್ಷಣ ಮಾತ್ರದಲ್ಲಿ ಮೃತ್ಯುವಶವಾಗಲು ಉಳಿಸಿ ಮತ್ತು ಗಾಯ ಮಾಂಸದ ಮೇಲೆ ಮತ್ತು ರಕ್ತದ ಮೇಲೆ ಉಂಟುಮಾಡಿದ ದುಷ್ಪರಿಣಾಮಗಳೆಂದು ಕಂಡು ಹಿಡಿಯಬಲ್ಲೆವೆ. ಗಂಟೆಗೆ ೫೫ ಮೈಲ ವೇಗದಿಂದ ಚಲಿಸುತ್ತಿರುವ ಕಾರೊಂದು ಪಂಕ್ಚೆ ಡಿಕ್ಕಿ ಹೊಡೆದಾಗ ಕ್ಷಣಮಾತ್ರದ ಘಟನೆಗಳ ಮಂದಗತಿಯ ಚಿತ್ರವೊಂದನ್ನು ಹೀಗೆ ಅಳವಡಿಸಬಹುದು.

ಕ್ಷಣದ 1/10ನೇ ಭಾಗ

ಕಾರಿನ ಎಡರು ಭಾಗದ ಬಂಪರ್ ಮತ್ತು ಕ್ರೋಮಿಯಂ ರೇಡಿಯೇಟರ್ ಗ್ರಿಲ್ ಕಾಣಿಯುವುದು. ಸ್ಟೀಲ್ ಸ್ಲೀಪರುಗಳು ಒಂದೂವರೆ ಇಂಚುಗಳವರೆಗೆ ಮರವನ್ನು ಸ್ಪರ್ಶಿಸುತ್ತವೆ.

ಕ್ಷಣದ 2/10ನೇ ಭಾಗ

ಕಾರಿನ ಬೊನೆಟ್ ಮೇಲೇರುತ್ತಲೆ ಇದ್ದು. ಚಲಿಸುತ್ತಿರುವ ಹಿಂಭಾಗದ ಚಕ್ರಗಳು ನೆಲ ಬಿಟ್ಟೇಳುವುವು. ರೇಡಿಯೇಟರ್ ಕೆಲಸ ಕಾರ್ಯಗಳನ್ನು ನಿಲ್ಲಿಸುವುದು. ಹಿಂಭಾಗದ ಭಾಗಗಳನ್ನು ವಿಂಬಾಗಿಲುಗಳ ಮೇಲೆ ಚದುರಿಸಿ ಕಾರಿನ ವಿಂಗ್ಸ್ ಮರದ ಸಂಬಂಧ ಬೆಳೆಸುವುದು. ಇದೇ ಕ್ಷಣದಲ್ಲಿ ಕಾರಿನ ಭಾರವಾದ ಭಾಗಗಳು ಅದರ ಮುನ್ನಡೆಯ ಚಲನೆಯನ್ನು ತಡೆಗಟ್ಟುವುವು. ಆದರೆ ಜಾಲಕನ ದೇಹವು ಮೊದ ಹಿಂದಿನ ವೇಗದಲ್ಲಿ ಮುಂದೋಡಿ ಸ್ಟಿರುಗುವು. ಗುರುತ್ವಾಕರ್ಷಣೀಯ 20ಪಾಲು ಅಂದರೆ ಸಾಧಾರಣ3,200 ಪೌಂಡುಗಳ ಒತ್ತಡದಿಂದದೇಹ ಮುಂದರಿಯುತ್ತಿದೆ. ಆತನ ಕಾಲುಗಳು ನೇರವಾಗಿ ಮೊಣಕಾಲು ಮುರಿಯುವುದು.

ಕ್ಷಣದ 3/10ನೇ ಭಾಗ

ಮುರಿದ ಮೊಣ ಗಂಟುಗಳು ಚಾಲಕನ ದೇಹ ಆಸನವನ್ನು ಬಿಟ್ಟಿದ್ದು ಡೇಶ್ ಬೋರ್ಡಿಗೆ ಬಡಿಯುವುದು. ಸಾವಿನೊಡನೆ ಒದ್ದಾಡುವ ಅವನ ಹಿಡಿತದಿಂದ ಸ್ಟಿಯರಿಂಗ್ ವ್ಹೀಲ್‌ಸ್ಟಿಕ್ ಹಾಗೂ ಸ್ಟೀಲ್ ಫ್ರೇಮ್‌ಗಳು ಬಗ್ಗಿತೊಡಗುವುವು. ಈಗ ಚಾಲಕನ ತಲೆಯು ಸನ್ ವೈಸರ್‌ನ ಹತ್ತಿರವೂ ವಕ್ರವಿಳಿವು ಸ್ಟಿಯರಿಂಗ್ ವೀಲ್‌ನ ಮೇಲಕ್ಕೂ ಬರುವುದು.

ಕ್ಷಣದ 4/10ನೇ ಭಾಗ

ಈಗ ಸಾಧಾರಣವಾಗಿ ಕಾರಿನ ಮುಂಬದಿ ಎರಡಡಿಯಷ್ಟು ಸಂಪೂರ್ಣ ನಾಶವಾಗಿರುವುದು. ಆದರೆ ಹಿಂಭಾಗ ಸಾಮಾನ್ಯವಾಗಿ 35 ಮೈಲಿಗಳ ವೇಗದಲ್ಲಿ ಚಲಿಸುತ್ತಿದೆ. ಚಾಲಕನ ದೇಹ ಇನ್ನೂ 55 ಮೈಲಿಗಳ ವೇಗದಲ್ಲಿ ಮುಂದರಿಯುತ್ತಿದೆ ಮುಖ್ಯವಾದ ಎಂಜಿನ್ ಈಗ ಮರಕ್ಕೆ ಬಡಿಯುವುದು. ಕಾರಿನ ಹಿಂಭಾಗವು ಮೇಲಕ್ಕೆದ್ದು ಮರದ ಕೆಳಗಿನ ಗೆಲ್ಲುಗಳಿಗೆ ತಾಗಬಹುದು.

ಕ್ಷಣದ 5/10ನೇ ಭಾಗ

ಭಯದಿಂದ ಮರಗಟ್ಟಿದ ಡ್ರೈವರನ ಕೈಗಳು ಸ್ಟಿಯರಿಂಗ್ ಕಾಲಂ ನೆಟ್ಟಗಾಗುವಂತೆ ಬಗ್ಗಿಸುವುವು. ಶೂಲಕ್ಕೇರಿಸಿದ ತೆರದಲ್ಲಿ ಗುರುತ್ವ ಶಕ್ತಿಯು ಚಾಲನ ದೇಹವನ್ನು ಸ್ಟಿಯರಿಂಗ್ ಕಾಲಂನ ಮೇಲೇರಿಸುವುದು ಪುಡಿಯಾದ ಉಕ್ಕಿನ ಭಾಗಗಳು ಅವನೆದೆಯೊಳಹೊಕ್ಕು ಶ್ವಾಸಾಂಗ ಹಾಗೂ ರಕ್ತನಾಳಗಳನ್ನೊಡೆಯುವುವು ಶ್ವಾಸಕೋಶಗಳೊಳಗೂ ಇವು ಹರಿಯಬಹುದು.

ಕ್ಷಣದ 6/10ನೇ ಭಾಗ.

ವೇಗದ ಅಧಿಕ ಒತ್ತಡದ ಪರಿಣಾಮವಾಗಿ ಗಟ್ಟಿಯಾಗಿ ಕಟ್ಟಿದ ಬೂಟ್ಸುಗಳು ಹರಿದು ಜಾಲಕನ ಕಾಲುಗಳು ಹೊರಬರಬಹುದು. ಬ್ರೇಕ್ ಪೆಡಲ್ ತುಂಡಾಗಿ ಕೆಳಬೋರ್ಡಿನ ಮೇಲೆ ಬೀಳುವುದು. ಗಾಡಿ ನಡುವಿಪಲ್ಲೇ ಬಗ್ಗಿ ಚಾಲಕನನ್ನು ಒಳಗೇ ಬಂಧಿಸುವುದು. ಅವನ ತಲೆ ವಿಂಡ್ ಸ್ಕ್ರೀನಿನ ಮೇಲೆ ಹೊಡೆಯುವುದು. ಗಾಡಿಯ ಹಿಂಭಾಗ ಕೆಳಕ್ಕೆರಗಿತೊಡಗಿ ಚಕ್ರಗಳು ನೆಲಮೊಳಗೆ ನಿಶ್ಚಲವಾಗುವುವು.

ಕ್ಷಣದ 7/10ನೇ ಭಾಗ.

ಕಾರು ವಿರೂಪವಾಗಿ ನಾಶವಾಗಿರುವುದು. ಬಾಗಿಲುಗಳು ತೆರೆದುಕೊಳ್ಳುವುವು. ಕೊನೆಗೆ ಸೀಟುಗಳು ಮುಂದೆ ತಳ್ಳಲ್ಪಟ್ಟ ಸ್ಟಿಯರಿಂಗ್ ಕಾಲಂನ ಮೇಲೆ ಇದ್ದ ಚಾಲಕನ ಮೇಲೆ ಬೀಳುವುವು. ದಿಗಿಲಿನಿಂದ ಹೃದಯ ಸ್ತಂಭನವಾದ ಅವನ ಬಾಯಿಯಿಂದ ರಕ್ತ ಬರುತ್ತಿದೆ. ಆತನೀಗ ಶತ್ರಂತೆ.

ಇಷ್ಟೆಲ್ಲಾ ನಡೆಯುವುದು ಒಂದು ಕ್ಷಣದ 7/10ನೇ ಭಾಗದೊಳಗಾಗಿ.

ಚುಟುಕಗಳು

ಬುನಗಿನ ವಾರ್ತೆ

ಎಸೆಂಬ್ಲಿಯಲ್ಲು ಬಿಗುಮೂತುಗಳ ಚರ್ಚೆ
"ಘಾಸಿಗೊಂಡವನಿಗೊದತ ಬಿದ್ದಿಹನು ಮೂರ್ಛೆ"

ಇಂತು ಬಿಟ್ಟನು ಓರ್ವನಲ್ಲೂ ಟೀಕಾಸ್ತ್ರ
ಅಂತೊಡನೆ ಅವನೆದೆಗೆ ಸಧಾತ್ಯಾಗಶಸ್ತ್ರ.

ಸುಯೆಜ್ ಬಂದ್

ಹಡಗ ಸುರಕ್ಷೆತವೇ ನಾಸೇರ ಭಾಯಿ?
ಭಾರತೀಯರು ಇಲ್ಲಿ ತೆರೆದಿಹರು ಬಾಯಿ
ಕಡೆಯಜ್ಜೆ ಹೊಂಟಿಹುದು ಸುಯೇಜ ಬಗ್ಗೆ
ಬಡಜನತೆ ನಾವ್ ಅಯ್ಯೋ....! ತಡೆಯದಿರಿ ಬುಗ್ಗೆ.

ಕನ್ನಡ ಮಾಧ್ಯಮ

ಶೇಕ್ಸ್‌ಪೇ ಕನ್ನಡದ ಮಾಧ್ಯಮವು ಜ್ಯಾರಿ
ಇಳ್ಳುವರೇ ಅಂಗ್ಲ ಭಾಷೆಗೆ ಇವರು ಫೇರಿ?

ವೇಷ ಭೂಷಣವೆಲ್ಲ ಆಂಗ್ಲೇಯರಂತೆ
ಭಾಷಣಕೆ ಕನ್ನಡದ ಲಿಪಿಗಳದೆ ಚಿಂತೆ.

—ಮ. ಗೋ. ರಾವ್.

ದಿ॥ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ನಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ.ಎರಡು.(ಟಿ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಸಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು

ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಡಾ॥ ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ - ಮದ್ದು

ನಿತ್ಯವೂ ಕಾಡಿಲೆಗಳಿಗೆ ಮನೆಯಲ್ಲೆ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹವೈದ್ಯ.

ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಇರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

R. E. P. 172/1967
O. S. 4/1964.

Narayana Ammannaya and others —Petitioners.

and

Lingappa Gowda and others —Respondents.

1ನೇ ಎದ್ರಿ ಲಿಂಗಪ್ಪ ಗೌಡ— ಬಡ್ಡಿಗಿದ್ದ ಗಾಡರ ಮಗ, ಸುಳ್ಯ ತಾಲ್ಲೂ, ಕೇನ್ಯ ಗ್ರಾಮದ ಕುಚ್ಚಿಲ್ಲು ಎಂಬಲ್ಲಿ ವಾಸ್ತು: ಪಂಜ, ದ. ಕ. ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯ ಪಡಿಸುವುದೇನೆಂದರೆ—

ಮೇಲ್ಕಾಣುವ ಅಮಲ್ದಾರಿಯಲ್ಲಿ ಪುತ್ತೂರು ಮುನ್ಸಿಫ್ ಕೋರ್ಟಿನ O. S. 4/1964 ರಲ್ಲಿ ಡಿಕ್ರಿಗೆ ಮುಂಚಿತವಾಗಿ ಜಪ್ತಾದ ಸ್ಥಿರಾಸ್ತಿಯನ್ನು ಏಲಂ ಪಡಿಸುವ ಬಗ್ಗೆ ಆರ್ಡರ್ ಆಗಿ ಸದ್ರಿ ಆರ್ಡರ್ಯು ನಿಮ್ಮ ನೋಟೀಸಿನ ಬಗ್ಗೆ ತಾ. 9-8-1967ಕ್ಕೆ ಇಟ್ಟುತ್ತದೆ. ಆದ್ದರಿಂದ ನೀವು 9-8-1967ಕ್ಕೆ ಬೆಳಗ್ಗೆ 11ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಸ್ವತ್ತಿಯ ಮಖೇಲರ ದ್ವಾರಾ ಹಾಜರಾಗಿ ಉಡಾಪೆ ರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಅಮಲ್ದಾರಿಯನ್ನು ಮುಂದುವರಿಸಲಾದೀತು, ತಿಳಿದರಲ್ಲಿ.

(By order of court.)

Pulu. Narayana Bhat
Advocate for Petitioners.

Puttur, S. K. 11-7-1967

నవరత్న

10—8—1967



ಕಥಾ ಪ್ರಪಂಚ

ಒಂದೇ ದುಃಖ

ಮೂಲ: ಶ್ರೀ ಟಿ. ಗೋಪೀಚಂದ

ಅನು: ಶ್ರೀ ಬಿ. ನರಸಿಂಗರಾವ್.

ತಾಯಮ್ಮ ಅಳುತಿದ್ದಳು.

ಗತಕಾಲದ ಮೂತಾಗಿದ್ದರೆ ಅವಳು ತಲೆಯನ್ನೆಲ್ಲಾ ಕೆದರಿ ತಲೆಗೆ ಪಟ್ಟಿಯನ್ನು ಕಟ್ಟಿ, ಕೋಪಗ್ಯಕಕ್ಕೆ ತೆರಳುತಿದ್ದಳು. ಇಂದು ಬಾಡಿಗೆಗೆ ಮನೆ ಹೊರಟು ವುದೇ ಕಷ್ಟವಾದಾಗ ವಕ್ಕೆ ಕೋಪಗ್ಯ ಹೆದ ಸ್ರಶ್ನೆಯೇ ಏಳದು; ಜಗತ್ತು ಬದಲಾಗಿದೆ. ಆದುದರಿಂದ ತಾದಾರಮ್ಮ ಕೋವನೃಹಕ್ಕೆ ತೆರಳದೆ ತನ್ನ ಬಾಡಿಗೆ ಮನೆಯಲ್ಲೆ ಒಂದೆಡೆ ಕುಳಿತು ಅಳುವುದಕ್ಕೆ ಮೊದಲಾದಳು.

ಹೆಂಗುಸು ತನ್ನ ದೌರ್ಭಾಗ್ಯವನ್ನು ಹಳಿದು ಅತ್ತು ನೆರೆಹೊರೆಯ ಹೆಂಗಸರು ಅವಳನ್ನು ಮುತ್ತಿ ಏನೇನೋ ಸಾಂತ್ವನ ದ ಮಾತನ್ನಾಡುತ್ತಾರೆ.

ಛೀ, ತಾಯಮ್ಮ ಅಳುತ್ತಾ ಇದ್ದಳು. ಅಳುವುದರಲ್ಲಿ ಅವಳದೇನು ತಪ್ಪು? ಅವಳು ಅಳದೆ ಇನ್ನೇನು ತಾನೆ ಮಾಡಿಯಾಳು? ಪತಿಯನ್ನೆ ಸರ್ವಸ್ವ ವೆ ಆತನೇ ತನ್ನ ಜೀವಧದ ಪಾಲುಗಾರನೆಂದು ತಿಳಿದುಕೊಂಡು ಬಂದಿದ್ದ ತಾಯಮ್ಮನನ್ನು ಆತ ಜೆನ್ನಾಗಿ ಆರಿಯುದೇ ಹೋದ. ಆದರೆಲ್ಲಿ ತಾಯಮ್ಮ ತಪ್ಪೇನನ್ನೆ ಮಾಡಿದವಳಲ್ಲ. ಹೆಣ್ಣಾಗಿ ಜನಿಸುವುದು ಮಹಾ ಪಾಪವೆಂದವಳು ಬಗದಳು. ಈ ವಿಶ್ವವೇ ರಕ್ಕ, ನೋನಗೈವರೆಂದು ಅವಳು ಗಣಿಸಿದಳು. ಈ ಗಂಡಸು ಜಾತಿಯೇ ವಿಚಿತ್ರವೆಂದವಳು ಒರಿಗಣಿಸಿದಳು. ಮಹಾವೆಂಬ ಸಂದರ್ಭದಲ್ಲಿ ಏನೇನೋ ಮಾತನ್ನೀರಾ.ತ್ತಾರೆ, ಅರ್ಥಾಂಗಿಯೆಂದು ಹೆಣ್ಣನ್ನು ಕರೆಯುತ್ತಾರೆ, ಆದರೆ ಕೊನೆಗೆ ಅವಳ ಕೈ ಬಿಡುತ್ತಾರೆ.

ಈ ಕೆಲದಿನಗಳಿಂದ ಅವಳ ದೇಹ ಆಷ್ಟ ಬೀಳುತಿತ್ತು. ಆದರಲ್ಲಿ ಅವಳ ತಪ್ಪೇ ಇತ್ತು? ದೆಂಗಸು ದಪ್ಪವಾಗಿರುವುದು ಹಿತವಲ್ಲವೆಂದವಳು ಅರಿತಿದ್ದಳು. ಜನರಿಗೂ ದಪ್ಪ ಜೀಹದವರನ್ನು ಕಂಡರೆ ಗೇಲಿ ಮಾಡಲು ಒಂದು ಸಂದರ್ಭ. ಬಿದಿರಿನ ಕೋಲಿನಂತೆ ಆಗಲು ಅವಳು ತುಂಬಾ ಯತ್ನಿಸಿದಳು, ಮದ್ದನ್ನು ಸೇವಿಸಿದಳು, ಅನ್ನ-ಜಸಾತಿ ತಿನ್ನುವುದನ್ನೆ ಕಡಿವಾಣ ಹಾಕಿದಳು, ಹತ್ತು ದಿನಗಳ ವರೆಗೆ ಫಲಾಹಾರವನ್ನೇ ಮಾಡಿದಳು. ಆದರೆ ಎಲ್ಲಾ ನೀರಿನಲ್ಲಿ ಹೋಮ ಗೈದಂತೆ ಆಯಿತು. ಕೊನೆಗೆ ವ್ಯಾಯಾಮಾಭ್ಯಾಸಕ್ಕೆ ಕೊಡಗಿ "ದಂಡ್" ಹೊಡೆಯಲು ತೊಡಗಿದ್ದೂ ಆಯಿತು. ಇಷ್ಟೆಲ್ಲ ಮಾಡಿದ ನಂತರ ತಾನು ಕೊಂಚ ತೆಳುವಾದೆನೆಂದವಳು ಬಿಂಬುಕೊಂಡಳು.

ಮತ್ತೆ ಒಂದು ವಾರ ಕಳೆದು ತಾನು ಹುಸಿ ದಪ್ಪವಬಿದ್ದೇನೆಂದು ಅವಳಿಗೆ ತೋಚಿತು. ಮತ್ತೆ ಅವಳು ನಿಶ್ಚಯಿಸಿದಳು-ದೇವರಿತ್ತ ಈ ಶರೀರಕ್ಕೆ ವೃಥಾ ಏಕೆ ಕಷ್ಟ ನೀಡಲಿ?ಅಂತ.

ಮೊದಲಿಗೆಲ್ಲಾ ತಾಯಮ್ಮನನ್ನು ಪತಿ ಮೋಹಿಸುವುದನ್ನು ಕಂಡು ನೆರೆಯವರೆಲ್ಲಾ ದ್ವೇಷ ತಾಳುತಿದ್ದರು. ಆತ ಯಾವಾಗಲೂ ಅವಳನ್ನೆ ಹಿಂಬಾಲಿಸಿ ಕೊಂಡಿದ್ದ. ಅವಳನ್ನು ಹೊಗಳುತ್ತಾ ಇದ್ದ.

ಒಂದುದಿನ ಆತ ತಾಯಮ್ಮನನ್ನು ಸಮೀಪಕ್ಕೆ ಕರೆದ.—'ತಾಯಮ್ಮ, ನಿನ್ನ ಹೆಸರೇನೂ ಜೆನ್ನಾಗಿಲ್ಲ. ಇದರ ಬದಲು ಬೇರೇನಾದ್ರೂ ಹೆಸರು ಇಟ್ಟೋಣ. ಹೇಳು, ಯಾವುದು ಅದೀತು?

'ಅಲ್ಲ....ಹೆಸರಲ್ಲಿ ಏನಿದೇಂತ? ಇರಲಿಲ್ಲಿ! ಈ ಸ್ಯಾಯದಲ್ಲಿ ಹೆಸರು ಬದಲಿಸಿ ಆಗ ಬೇಕಾದ್ದೂ ಏನು? ಇದೇ ಥಾರಾಳ" ತಾಯಮ್ಮ ಅಂದಳು.

"ಇಲ್ಲ ಇಲ್ಲ! ಇದು ಸೂರ್ಯ ಹಳೇ ಹೆಸರು. ಮತ್ತೆ ನಿನ್ನ ಪ್ರಾಯ ಅಂದ್ರೆ ಲ್ಲಾ? ಈಗ ನೀನೇನು ಮುದ್ಕಿ ಆಗಿದ್ಯಾ? ಇಪ್ಪತ್ತೈದಷ್ಟೆ ಪ್ರಾಯ."

ತಾಯಮ್ಮನಿಗೂ ಹೆಸರು ಬದಲಿಸುವ ಯೋಚನೆಯಿತ್ತು. ಮತ್ತೆ ಇಬ್ಬರೆಲ್ಲೂ ಜೊಸ ಹೆಸರಿನ ಕುರಿತು ಚರ್ಚೆಯಾಯಿತು.

'ಪಾಪ್ಪವತಿ" ಪತಿಯೆಂದ.

"ಇಲ್ಲ, ಅದು ಬೇಡ್ವೇ ಬೇಡ. ನನಗಿಷ್ಟ ಹಿಡಿಯೋಲ್ಲ."

ಮತ್ತೆ ಆತನೆಂದ-"ರಾಜರಾಜೇಶ್ವರಿ"

ಇದನ್ನು ಕೇಳಿತ್ತಲೆ ವೈಶ್ಯರು ಕಟ್ಟಿದ ದೊಡ್ಡ ದೊಡ್ಡ ಧರ್ಮ ಶಾಲೆಗಳೂ, ಕಟ್ಟಡಗಳೂ ಎಂಬ ಕಣ್ಣಂದೆ ಹಾದು ಹೋದುವು. ಈ ಹೆಸರಾ ಜೆನ್ನಾಗಿಲ್ಲ."

"ಈಗ ನೀನೆ ಹೇಳು ಯಾವ ಹೆಸರು ಆದೀತೂಂತ" ಆತನೆಂದ.

ಅವಳು ತುಂಬಾ ಯೋಚಿಸಿದರೂ ಅವಳಿಗೆ ಯಾವ ಹೆಸರೂ ಹೊಳೆಯಲಿಲ್ಲ.

ಮರುದಿನ ತಾಯಮ್ಮ ಪತಿಯೊಡನೆಂದಳು—"ನನ್ನೆಸ್ರು ಮೈಥಿಲಿ ಅಂತ ಇಟ್ಟಿಡಿ"

ಈ ಹೆಸರನ್ನು ಹೇಳುತ್ತಲೆ ಅವಳಿಗೆ ವಿಷಾದದ ನೆನಪಾಯಿತು. ಅವಳಿಗೆ ನಗುವುಕ್ಕೆ ಬಂತು.

ಅವಳು ತುಂಬಾ ನಾಚಿದಳು.

ಮತ್ತೆ ಅವರ ನಂತರ ಹೆಸರು ಬದಲಿಸುವ ಕುರಿತು ಯೂರೂ ಏನನ್ನೂ ಹೇಳಲ್ಲ. ಇಬ್ಬರೂ ಮೌನವಾಗಿದ್ದರು.

ಇಂದಿನ ಹಾಗೂ ಅಂದಿನ ದಿನದಲ್ಲಿ ಎಷ್ಟೊಂದು ವ್ಯತ್ಯಾಸ! ಅವಳೆಂದು ದಪ್ಪ ಬಿದ್ದುದರಿಂದ ಈಗೀಗ ಪತಿ ವಾಕಿಂಗ್ ಹೋಗುವಾಗ ಒಬ್ಬನೇ ಹೋಗುತಿದ್ದ. ಎಂದಾದರೂ ಅವಳನ್ನು ಒಟ್ಟಿಗೆ ಬರ ಹೇಳುತಿದ್ದರೂ ಕಷ್ಟಲೆಗಷ್ಟೆ ಆಗಿತ್ತು. ಸಿನಿಮಾಕ್ಕೂ ಈಗ ಜೋತಾ ಬಂದಿತ್ತು. ಅವಳು ಇತರ ಸ್ತ್ರೀಯರೊಡಗೂಡಿ ಬರುವುದಾದರೆ ಅದಕ್ಕೆ ಆತ ತಡೆಯೊಡ್ಡುತ್ತಿರಲಿಲ್ಲ. ಮೂವರೂ ವಾಕಿಂಗ್ ಹೋಗಬಹುದಿತ್ತು. ನೋಡುವವರಿಗೆ ಇಬ್ಬರಲ್ಲಿ ಆತನ ಪತ್ನಿಯಾರೆಂದು ಊಹಿಸುವ ಕೇಕತ್ತಷ್ಟೆ. ಆತನ ಮನಸ್ಸಿಗೂ ಹಾಗೆ ಹೊಳೆದಿರಬೇಕು ಉಪಾಯ.

ತಾಯಮ್ಮ ಪತಿಯ ಬರವನ್ನೆ ನಿರೀಕ್ಷಿಸಿ ಸಂಜೆ ತನ್ನನ್ನು ಶೃಂಗರಿಸಿ, ಬೆಳ್ಳನೆಯ ಸೀರೆಉಟ್ಟು ನಿಂತಿದ್ದಳು. ಅವಳನ್ನು ನೋಡಿ ಪತಿ "ತಾಯ್ರ' ಅಂಥ ಪರಿಯಲಿ ಎಂದೇ ಅವಳ ಯೋಚನೆಯಿತ್ತು. ಆದರೆ ಎಲ್ಲ ನಿಷ್ಫಲ. ಆತ ಪಕ್ಷಿಯನ್ನು ರಾಕ್ಷಸಿಯನ್ನು ನೋಡಿದವನಂತೆ ನೋಡುತ್ತಾ ಏನನ್ನೂ ಜೇಳದೆ ಒಳಗಡೆ ತೆರಳುವ.

ಅಂತಿದ್ದಾಗ ತಾಯಮ್ಮನಿಗೆ ಬೇಸರವಲ್ಲದೆ ಇನ್ನೇನುತಾನೆ ಆದೀತು? 'ನಾನೇಕೆ ಅವರನ್ನು ಹಳೆಯಲಿ? ನನ್ನ ಹಣೆಯಲ್ಲಿ ಭಾಗ್ಯ ರೇಖೆಯೇ ಇಲ್ಲ" ಅವಳು ಯೋಚಿಸುತಿದ್ದಳು. ಮತ್ತೆ ಅವಳು ಪರರು ಮನೆಗೆ ತೆರಳಲು ಯೋಚಿಸಿದಳು.

ತಾಯಮ್ಮ ಬಸ್‌ಸ್ಟೇಷನ್ ತಲುಪಿದಳು. ಬಸ್ಸುಗಳು ಬರುತ್ತಾ ಹೋಗುತ್ತಾ ಇದ್ದವು. ಜನರ ಗುಂಪೇ ನೆರೆದಿತ್ತು. ಬಸ್ಸನ್ನೇರುವವರು ಇಳಿಯುವರಿಗೆ ತೊಂದರೆ ಪಡಿಸುತ್ತಿದ್ದರು. ಪ್ರತಿಯೊಬ್ಬನಿಗೂ ಗಡಿಬಿಡಿ; ಅವಸರ. 'ಈ ಗಂಡುಸರಿಗೆ ಹೂವಾಗ್ಲೂ ಅವಸರವೇ! ಎಲ್ಲದರಲ್ಲೂ ಗಡಿಬಿಡಿಯೇ ಮತ್ತೆ!" ತಾಯಮ್ಮಳಿಗೆ ಗಂಡುಸರ ಮೇಲೆ ಏಕೋ ಸಿಟ್ಟು ಏಂತ್ತು. ಬಸ್ಸು ಗುಲ್ಲು ಮಾಡುತ್ತಾ ಹೋಯಿತು. ಅದೇ ಅವಳು ಕಾದು ಕೊಂಡಿದ್ದ ಬಸ್ಸು.

"ಬರುವ ಬಸ್ಸಿಗೆ ಹೋಗೋಣ" ಎಂದವಳು ಯೋಚಿಸಿ ಬಸ್ಸಿನ ನಿರೀಕ್ಷಣೆಯಲ್ಲಿ ನಿಂತಳು.

ಫಳ್ಳನೆ ಅವಳ ದೃಷ್ಟಿ ಸಮೀಪದಲ್ಲೆ ಪೆಟ್ಟಿಗೆಯೊಂದರ ಮೇಲೆ ಕುಳಿತ ಹೆಂಗುಸಿನ ಕಡೆ ತೆರಳಿತು. ತಾಯಮ್ಮ ಅವಳ ಸಮೀಪಕ್ಕೆ ತೆರಳಿದಳು.

ಆ ಹೆಂಗುಸನ್ನು ನೋಡುತ್ತಲೆ ತಾಯಮ್ಮನ ಮುಖದಲ್ಲಿ ನಗೆಯೂಡಿತು. ಆ ಹೆಂಗಸು ಬಹಳೇ ತೆಳುವಿದ್ದಳು, ಒಳ್ಳೇ ಲಕ್ಷಣವಾಗಿದ್ದಳು.

ತಾಯಮ್ಮ ಅವಳನ್ನು ತದೇಕ ದೃಷ್ಟಿಯಲ್ಲಿ ನೋಡುತ್ತಿದ್ದಳು. ತನ್ನ ದೇಹದ ವಿಶರೀತಕ್ಕೆ ಬೆಳೆದಿದೆ ಈಗ ಎಂದು ತಾಯಮ್ಮನಿಗೆ ತೋಚಿತು. ಅವಳಿಗೆ ಅಲ್ಲಿ ನಿಲ್ಲುವುದು ಅಸಾಧ್ಯವಾಯಿತು. ಸಮೀಪವಿದ್ದ ಬೆಂಚೊಂದರಲ್ಲಿ ಅವಳು ಕುಳಿತಳು.

ಆ ಹೆಂಗುಸಿನ ತೆಳು ದೇಹದ ಗುಟ್ಟೇನೆಂದು ಅರಿಯಲು ತಾಯಮ್ಮನಿಗೆಬಯಕೆಯಾಯಿತು. ಆದರೆ ಅಪರಿಚಿತಳೊಡನೆ ಮಾತುಕತೆಗೆ ತೊಡಗುವುದೆಂತು?

'ನೋಡು, ತಂಗೀ ಆ ಮರದಿಂದ ಎಲೆ ಉದರೋ ಚಂದ ನೋಡು."ನಗುತ್ತಾ ತಾಯಮ್ಮ ಪ್ರಾರಂಭಿಸಿದಳು.

"ಹೌದಾದು—" ಎನ್ನುತ್ತಾ ಆ ಹೆಂಗುಸು ತಾಯಮ್ಮನನ್ನೆ ನೋಡಿದಳು.

ಅವಳ ಮಾತು ಬಹಳ ಇಂಪಾಗಿತ್ತು, ಗಲ್ಲದಲ್ಲಿ ಗುಲಾಬಿ ವರ್ಣವಿತ್ತು. ಕಣ್ಣಳಲ್ಲಿ ಮೂದಕತೆಯಿತ್ತು. ಅವಳು ಮಾತಾಡುವಾಗ ಜೇನು ತೊಟ್ಟಿಕುವಂತೆ ಕೇಳುತ್ತಿತ್ತು. ತಾಯಮ್ಮ ತನ್ನನ್ನು ತಾನೇ ಹಳಿದ ಕೊಂಡಳು.

ಮತ್ತೆ ಇಬ್ಬರೂ ಮೌನ. ಅಷ್ಟರಲ್ಲೆ ಎರಡು ಬಸ್ಸುಗಳು ಜೋರಾಗಿ ಶಬ್ದ ಮಾಡುತ್ತಾ ಅತ್ತ ಬಂದವು.

'ಏನು ಕರ್ಕಶ ಶಬ್ದ" ತಾಯಮ್ಮ ಯೋಚಿಸಿದಳು. 'ಹೌದು' ಆ ಹೆಂಗುಸು ಆಷ್ಟೆ ನುಡಿದಳು.

ಯಾರಿ ಮಾತು? ನನ್ನದೆ?"

"ಇಲ್ಲ....ಇಲ್ಲ...ಬಸ್ಸಿನ ಶಬ್ದ.' ಆ ಹೆಂಗಸ್ಸು ಈಗಲೂ ತಾಯಮ್ಮನೆಡೆಗೆ ನೋಡುತಿದ್ದಳು. ಅವಳ ದೃಷ್ಟಿಯಲ್ಲಿ ತಿರಸ್ಕಾರವಿರಲಿಲ್ಲ, ಯಾಚನೆಯಂತಿತ್ತು.

ತಾಯಮ್ಮಳಲ್ಲಿ ಸಾಹಸವಿತ್ತು.

'ತಾವೆಲ್ಲಿಗೆ ಹೋಗ್ತೀರಾ?"

"ನಾನು?"

"ಹೂಂ"

'ಹೋಗ್ತಿದ್ದೇನೆ.'

'ಎಲ್ಲಿಗೆ?"

'ನನ್ನ ತವರಿಗೆ!'ಬಹಳ ದುಃಖಿಪೂರಿತ ಸ್ವರದಲ್ಲವಳಿಂದಳು.

'ಇಷ್ಟೊಂದು ತೆಳು ಹಾಗೂ ಸುಂದರಯುವತಿಯೂ ತವರು ಮನೆಗೆ ತೆರಳುತ್ತಾಳೆ? 'ತಾಯಮ್ಮ ಯೋಚಿಸಿದಳು' —'ಕೊನೆಗೆ ಇವಳು ಹೋಗುವಾದರೂ ಏಕೆ?'

'ತಾವು ಬಹಳ ತೆಳುವಾಗಿದ್ದೀರಾ....ಬಹಳ ಜೆನ್ನಾಗಿದ್ದೀರಾ ತಾಯಮ್ಮ ಧೈರ್ಯದಿಂದೆಂದಳು.

"ನಾನೇ?'

"ಹೂಂ ತಾನೇ"

"ತೆಳು ಹಾಗೂ ಸುಂದರಿಯಾಗಿದ್ದೇನೆ ನಾನು?'

"ಹೂಂ"

ಅವಳು ಮುಂದೆ ಮಾತಾಡಲಿಲ್ಲ.

(ಹನ್ನೊಂದನೇ ಪುಟನೋಡಿರಿ)

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ಕಮಿ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ನಲ್ವತ್ತಾರನೆ ವರ್ಷ
Telephone 226.

Estd. 1921
NAVAYUGA
Leading Kannada Weekly
UDIPI, S. Kanara
ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.
++
ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ
++
ವಾರ್ಷಿಕ ಚಂದಾ:
ನೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪
++
ಜಾಹೀರಾತು ದರಗಳು:
ಅಳತೆಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ಳೆಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50
++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬರೆಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಥಾರಕ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾದಾರವನ್ನಾಗಲೀ ಜಾಹೀರಾತಿನ ವೆಬಲಗನ್ನಾಗಲೀ ಸಿಂಡಿಕೇಟ್ ಬೆಂಕಿನ ಜಾಡ್ಡನೇ ಕಾಪಿಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಅವೆ ಪೂರೈಸುವ ಸೌಕರ್ಯವಿರುವುದು.

ಮುಖಪುಟದಲ್ಲಿ: .....

ಮೋಟಾರು ಯಂತ್ರ ಸಾಧನಗಳು

A. ಗಾಳಿ ತಡೆಗಟ್ಟುವ 'ಬೆಕ್ಕಿನ ಮೀಸೆ'.
B. ನೊರೆ ತೊಳೆಯುವ ಸಾಧನ—ಫೇನ ಧಾವಕ.
C. ಮಬ್ಬಿಗೆ ದೀಪ ತಂತಿಗೆ ಬೇಕಾದ ನೈಲಾನ್ ಆವರಣ.
D. ಸ್ಟೀರಿಂಗ್ ಚಕ್ರದ ಬುಡಕ್ಕೆ ಬೇಕಾದ ನೈಲಾನ್ ಕಟ್ಟು ಮತ್ತು ಬಿಲಿ ಬಟ್ಟಲು.
E. ಟೈಲ್ ಲೈಟ್ ಸಾಕೆಟ್‌ಗಳು.
F. ಮುಂದಿನ ಚಕ್ರವನ್ನು ವಶವಿಡುವ ವಿಶ್‌ಬೋನ್.

ಸಂಪುಟ ೪೬ | ಉಡುಪಿ | Vol. 46
ಸಂಚಿಕೆ ೫೦ | ೧೦—೮—೧೯೬೨ | No. 50

ರಾಜಧನ

ಇದೀಗ ದೇಶದಲ್ಲಿ ಎದ್ದಿರುವ ಹೊಸ ಪ್ರಶ್ನೆ—ರಾಜಧನದ ರದ್ದತಿ, ಮಾಜಿ ರಾಜ—ಮಹಾ ರಾಜರಿಗಿರುವ ವಿಶೇಷ ಸವಲತ್ತುಗಳ ಕೊನೆ. ಸಮಾಜವಾದದಲ್ಲಿ ಇಡಿಯ ದೇಶದ ಜನತೆಗೆ ಸಮಾನಾಧಿಕಾರ—ಸಮಾನಾವಕಾಶಗಳಿರುವುದು ಆವಶ್ಯಕವಾಗಿರುವಾಗ ಈ, ಧಾತೀಯು ನಾಗರಿಕರಂತಿರುವ ಮಾಜಿ ರಾಜ—ಮಹಾರಾಜರುಗಳಿಗೇಕೆ ವಿಶೇಷಾಧಿಕಾರವೆಂಬ ಪ್ರಶ್ನೆಯೇಳುವುದು ಸಹಜ—ಇದು ಯುಗವಾಣಿಯೆಂದರೂ ಸಲ್ಲಬಹುದು. ಆದರೆ, ರಾಜಧನವೇಕೆ ಎಂಬ ಪ್ರಶ್ನೆ ಅನೇಕ ಉಪಪ್ರಶ್ನೆಗಳಿಗೆ ಅವಕಾಶ ನೀಡುತ್ತದೆ. ಎಐಸಿಸಿಯ ಈ ಸಂಬಂಧದ ನಿರ್ಧಾರವನ್ನು ಕಾರ್ಯಗತಗೊಳಿಸಲು ಸರಕಾರ ಬದ್ಧವಿದೆಯೆಂದು ಗೃಹಸಚಿವ ಚವನರು ಘೋಷಿಸಿದ್ದಾರೆ. ಕಮ್ಯುನಿಸ್ಟ್, ಪ್ರಸವಾ ನೊದಲಾದ ಎಡ ಪಕ್ಷಗಳ ಬೆಂಬಲವೂ ಅವರಿಗಿದೆ ರಾಜ....ಮಹಾರಾಜರಿಗಿರುವ ವಿಶೇಷ ಹಕ್ಕುಗಳನ್ನು ರದ್ದು ಮಾಡುವಂತೆ ಪ್ರಸವಾ ಸದಸ್ಯರೊಬ್ಬರು ಈಗಾಗಲೇ ವಿಧೇಯಕ ಮಂಡಿಸಿದ್ದಾರೆ. ಮೂಲಭೂತ ಹಕ್ಕುಗಳ ನ್ನೊಳಗೊಂಡು ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಸಂಸತ್ತು ಅಧಿಕಾರವನ್ನೂ ಇತ್ತೀಚೆಗೆ ಪಡೆದಿಕೊಂಡಿದೆ. ಆದುದರಿಂದ ರಾಜಧನ ರದ್ದತಿ ಅಥವಾ ಹಕ್ಕುಗಳ ಹಿಂದೆ ತೆಗೆದುಕೊಳ್ಳುವಿಕೆಗಳಿಗೆ ಸಂವಿಧಾನ ತಿದ್ದುಪಡಿ ನೂನ್ಯತೆ ದೊರಕಿಸಿಕೊಳ್ಳಲು ಕಷ್ಟವಿಲ್ಲ.

ಇಲ್ಲಿರುವುದು ಅಧಿಕಾರ ಮತ್ತು ಅರ್ಥದ ಪ್ರಶ್ನೆ ಮಾತ್ರವಲ್ಲ. ಮಾನವೀಯತೆಯ ಪ್ರಶ್ನೆಯೂ ಇದೆ. ರಾಜ-ಮಹಾರಾಜರು ಭಾರತ ಸರಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದಾರೆ. ಇದಕ್ಕೆ ಉಭಯ ಪಕ್ಷಗಳೂ ಬದ್ಧರಾಗಿರಬೇಕೇ ಬೇಡವೆ? ಇತ್ತೀಚೆಗಿನ ದಿನಗಳಲ್ಲಿ ರಾಜ— ಮಹಾರಾಜರು ಸಭೆ ಸೇರಿ ಕಾಂಗ್ರೆಸ್ಸಿನ ಈ ನಿರ್ಣಯದಿಂದ ತಮಗಾದ ನೋವನ್ನು ವ್ಯಕ್ತಪಡಿಸಿದ್ದಾರೆ, ಪ್ರತಿ ರಾಜಮನೆತನವನ್ನೂ ಹೊಂದಿಕೊಂಡು ನೂರಾರು ಸಂಸಾರಗಳಿವೆ; ಅವುಗಳ ಜೀವನಕ್ರಮ ಹೇಗೆ ಸಾಧ್ಯ? ಇದು ಹೈದರಾಬಾದಿನ ನಿಜಾಮರ ಉದ್ಗಾರ. ಇದಕ್ಕೆ ಹಲವೆಡೆಗಳಿಂದ ಸಹಾನುಭೂತಿಯ ಮಾತುಗಳೂ ಕೇಳಿಬಂದಿವೆ. ಆದುದರಿಂದಲೇ ಅವರು ಸುಸಂಘಟಿತರಾಗುತ್ತಿದ್ದಾರೆ; ತಮ್ಮ ಹಕ್ಕುಗಳಿಗಾಗಿ ಅವರು ಹೋರಾಡುವುದು ಅನ್ಯಾಯವೆನಿಸುವುದಿಲ್ಲ— ಪ್ರಜಾಪ್ರಭುತ್ವದಲ್ಲಿ. ಭಾರತ ಸರಕಾರವು ಈ ಒಪ್ಪಂದದಿಂದ ಹಿಂದೆ ಸರಿಯುವುದು ವಿಶ್ವಾಸಘಾತವಾಗುವುದು— ಇದು ರಾಜ ಮಹಾರಾಜರ ಹೃದಯದ ಉಲಿತ. ಇದರಿಂದ ಒಂದು ವ್ಯಕ್ತವಾಗುವುದು—ಪಾರ್ಲಿಮೆಂಟು ಮಾನಸು ಮಾಡಿದರೆ, ತಮ್ಮನ್ನು 'ಕಂಗಾಲ' ರನ್ನಾಗಿ ಮಾಡಿಬಿಡಬಹುದೆಂದು ಅವರಿಗೆ ಮನವರಿಕೆಯಾಗಿದೆ. ಇದು ನಿಜವೇ. ಆದರೆ, ಪ್ರಜಾಪ್ರಭುತ್ವದಲ್ಲಿ ಅಂತಿಮ ನಿರ್ಧಾರವೆಂಬುದಿಲ್ಲ. ಜನಾಭಿಪ್ರಾಯವನ್ನು ಹೊಂದಿಕೊಂಡು ಕಾನೂನು—ಕಾಯಿದೆಗಳು ಬದಲಾಗಲೇ ಬೇಕು. ಪ್ರಜಾಪ್ರಭುತ್ವದ ವಿಚಾರಧಾರೆ ಪುನರ್ನವವಾದುದು. ಅಂದು ರಾಜಧನಾದಿ ಸೌಕರ್ಯ ಕೊಟ್ಟಿದ್ದರೂ ಇಂದು ಹಿಂತೆಗೆದುಕೊಳ್ಳಬಾರದೆಂದೇನು? ಒಪ್ಪಂದ ಮಾಡಿಕೊಂಡವರು ತಿದ್ದುಪಡಿ ಮಾಡಿ ಅದನ್ನು ಸಂವಿಧಾನದ ಸೂತ್ರದಿಂದ ಬಂಧಿಸಿ ಅಸಹಾಯಕ ರಾಜ-ಮಹಾರಾಜರ ಮೇಲೆ ಹೊರಿಸುತ್ತಾರೆ—ಪ್ರಜಾಸತ್ತೆಯಲ್ಲಿ ಅಸಂಭವವೆಂಬುದಾವುದು?

ಮಾನವೀಯತೆಯ ದೃಷ್ಟಿಯಿಂದ ವಿವೇಚಿಸುವುದಕ್ಕೆ ಮೊದಲು ನಿಜಾಮರ ಮಾತು ನೆನಪಿಗೆ ಬರುತ್ತದೆ. ರಾಜ—ಮಹಾರಾಜರೊಡನಾದ ಒಡಂಬಡಿಕೆಯನ್ನು ಕೇಂದ್ರ ಸರಕಾರ ಗಾಳಿಗೆ ತೂರುವುದಾದರೆ, ಉಳಿದ ಒಡಂಬಡಿಕೆಗಳ ಪಾಡೇನು? ಸರಕಾರ ಮುಕ್ತ ಮೂಂ.ಕಟ್ಟೆಯಲ್ಲಿ ಸಾಲತೆಗೆಯುವ್ಕದೆ. ಚಿನ್ನದ ಬಾಂಡುಗಳು, ಚಿಕ್ಕ ಉಳಿತಾಯ ಯೋಜನೆ ನೊದಲಾದ ನೂರಾರು ಒಡಂಬಡಿಕೆಗಳ ಮೂಲಕ ಜನತೆಯಿಂದ ಋಣ ಪಡೆಯುತ್ತದೆ. ಇವನ್ನು ಹಿಂದಿರುಗಿಸುವುದೆಂಬ ಭರವಸೆಯೆಲ್ಲಿದೆ?

ಆದರೂ ಸಮೂಹಾನ್ಯ—ರಾಜ ಮಹಾರಾಜರು ಅಲ್ಪ ಸಂಖ್ಯಾಕರು, ಇತರರು ಬಹು ಸಂಖ್ಯಾಕರು. ಪ್ರಜಾಪ್ರಭುತ್ವ ನೀತಿಗೆ ಒಪ್ಪಿಯೇ ರಾಜ—ಮಹಾರಾಜರು ತಮ್ಮ ರಾಜ್ಯಗಳನ್ನು ತ್ಯಾಗಮಾಡಿ ಅಲ್ಪ ಪ್ರತಿಫಲ ಪಡೆಯಲು ಒಪ್ಪಿದ್ದಾರೆ. ಈ ಪ್ರತಿಫಲವೂ ತಲೆ ಬದಲಾಗುತ್ತ ಹೋದಂತೆ ಕಡಿಮೆಯಾಗುವುದು. ಕೆಲವರು ಸ್ವೇಚ್ಛೆಯಿಂದಲೇ ತಮ್ಮ ರಾಜಧನದ ಮೊತ್ತವನ್ನು ಕಡಿಮೆ ಮಾಡಿಕೊಂಡಿದ್ದಾರೆ. ಅಂದರೆ, ಹೊಸ ಕಾಲಕ್ಕೆ ಹೊಂದಿಕೊಂಡು ನಡೆಯಲು ಇವರು ಸಿದ್ಧರಾಗಿಯೇ ಇದ್ದಾರೆನ್ನಬಹುದು. ಆದುದರಿಂದ ಕೇಂದ್ರವು ಯಾವುದೇ ಅಂತಿಮ ನಿರ್ಧಾರವನ್ನು ಕೈಗೊಳ್ಳುವ ಮೊದಲು ರಾಜ—ಮಹಾರಾಣಿಯರೆಲ್ಲರೊಡನೆ ಸಮಾಲೋಚನೆ ನಡೆಸಿ ಅವರ—ಎಐಸಿಸಿಯ ಅಭಿವ್ಯಾಯಗಳ ಮಧ್ಯೆ ಹೊಂದಾಣಿಕೆಯೇರ್ಪಡಿಸಿಕೊಳ್ಳಬಾರದು?

—ಕಾಂಗ್ರೆಸ್ಸಾ ಈ ಬಗ್ಗೆ ಯೋಚಿಸಬೇಕಾಗಿದೆ. ಇತ್ತೀಚೆಗಿನ ಚುನಾವಣೆಗಳಲ್ಲಿ ಹೆಚ್ಚಿನ ರಾಜ—ಮಹಾರಾಜರು ವಿರೋಧ ಪಕ್ಷಗಳಿಗೆ—ಮುಖ್ಯವಾಗಿ ಸ್ವತಂತ್ರ ಪಕ್ಷಕ್ಕೆ—ಬೆಂಬಲ ಕೊಟ್ಟಿದ್ದರು. ರಾಜಧನ ಮತ್ತು ವಿಶೇಷ ಹಕ್ಕುಗಳು ಅವರ ರಕ್ಷಣೆಗಿದ್ದವು. ಇಂದಿಂದಾಗಿಯೇ ಹೊಸ

ವಚನ ಸುಧೆ

ನಿಶ್ಚಿತ್ಯಕ್ಕೆ ಯಃ ಪ್ರಳಯಮತೇ
ನಾನಾತರ್ವಸತಿ ಕರ್ಮಣಃ;
ಅವಂಧ್ಯಕಾಲೋ ವಶ್ಯಾತ್ಮಾ
ಸ ವೈ ಪಂಡಿತ ಉಚ್ಯತೇ॥

ನೊಡಲು ನಿರ್ಧಾರಕ್ಕೆ ಬಂದು ಮುಂದೆ ಕಾರ್ಯಾರಂಭ ಮಾಡುವವನು, ತೊಡಗಿದ ಕೆಲಸವನ್ನು ನಡುವೆ ಕೈ ಬಿಡದವನು, ಹೊತ್ತನ್ನು ವ್ಯರ್ಥಗೊಳಿಸದವನು ಮತ್ತು ಚಿತ್ತವನ್ನು ವಶದಲ್ಲಿಟ್ಟುಕೊಂಡವನು ಪಂಡಿತನು.

ಸಲಹೆ ಬಂದಿತೆನ್ನುತ್ತಾರೆ. ಆದರೂ ಬರೋಡದ ಮಹಾರಾಜರು, ಕಾಶ್ಮೀರದ ಡಾ! ಕರಣ ಸಿಂಗರು—ಮಂತ್ರಿ ಸ್ಥಾನದಲ್ಲಿದ್ದಾರೆ; ಮೈಸೂರಿನ ಮಹಾರಾಜರು ರಾಜ್ಯಪಾಲರಿದ್ದಾರೆ. ಸಾಮಾನ್ಯ ಪ್ರಜೆಯಂತೆ ವರ್ತಿಸುವ ರಾಜ— ಮಹಾರಾಜರಿಗೆ ವಿಶಿಷ್ಟ ಹಕ್ಕು ನೀಡುವುದು ಅಸಮಂಜಸವೆಂದೂ ತಪ್ಪಲ್ಲ ಅದಕ್ಕಾಗಿ ಅವರ ವಿಶಿಷ್ಟ ಹಕ್ಕುಗಳನ್ನು ಹಿಂತೆಗೆದುಕೊಂಡು ರಾಜಧನದ ಬಗ್ಗೆ ಪರ್ಯಾಲೋಚನೆ—ಮಾನವತೆ—ಸಮಾಜವಾದಗಳ ನೆಲೆಯಲ್ಲಿ ನಡೆಯುವೇಕು.

ಶಾಸಕರು—ನೌಕರರು

ಕನ್ನ ನೌಕರರ ವೇತನ ಪರಿಶೀಲನೆಗೆ ಆಯೋಗ ನೇಮಿಸಿದ ನಮ್ಮ ರಾಜ್ಯ ಸರಕಾರದ ಶಾಸಕರು ತಮ್ಮ ಹಾಗೂ ಶಾಸಕರ ವೇತನ—ಭತ್ತೆಗಳನ್ನು ಮೂರು ದಿನಗಳಲ್ಲಿಯೇ ಹೆಚ್ಚಿಸಿಕೊಂಡರು. ಯಾರೂ ಕೇಳಿರಲಿಲ್ಲ, ಹೇಳಿರಲಿಲ್ಲ. ವಿಧೇಯಕ ಬಂತು ಮಂಜೂರಾಯಿತು. ಈ ಸಂದರ್ಭದಲ್ಲಿ ನಮ್ಮ ಮಂತ್ರಿಗಳೂ—ಕಾಂಗ್ರೆಸ್ಸು ಶಾಸಕರೂ ವಿಧೇಯಕವನ್ನು ಸ್ವಾಗತಿಸಿದರು, ಉಳಿದ ಕೆಲವು ಪಕ್ಷೇತರರು ವಿರೋಧಿಸಿದರೂ ಸಭಾತ್ಯಾಗ ಮಾಡಿದರೂ ಹೆಚ್ಚಿನ ವೇತನ—ಭತ್ತೆಗಳಿಗಾಗಿ ಕೈಯೊಡ್ಡದಿರುವುದಿಲ್ಲ. ರಾಜ್ಯದ ಮುಖ್ಯಮಂತ್ರಿ—ಅರ್ಥಮಂತ್ರಿಯವರು ನೌಕರರ ವೇತನ ಪರಿಷ್ಕರಣಕ್ಕೆ ರಾಜ್ಯದ ಅರ್ಥವ್ಯವಸ್ಥೆ ಕೃಪ್ತಿಕರವಿಲ್ಲವೆಂದು ಘೋಷಿಸಿದ ಧೀರರು. ಕೇಂದ್ರ ಸರಕಾರವು ತುಟ್ಟಿಭತ್ತೆಯೇರಿಸುವುದನ್ನು ವಿರೋಧಿಸಿದ ಮಹಾಪುರುಷರು. ಬೆಲೆಯೇರಿಕೆ ತಡೆಯಲು ವೇತನ ಹೆಚ್ಚಳವು ಸರ್ವಥಾ ಸಹಾಯಕವಾಗಲಾರದು ಎಂಬ ದೃಢ ವಿಶ್ವಾಸವುಳ್ಳವರು. ಇನ್ನು, ನೌಕರರು ವೇತನ ಕಡಿಮೆಯೆಂದು ಹುಯ್ಯಲಿಟ್ಟರೆ, ಅದು ಮೊದಲೇ ಗೊತ್ತಿರಲಿಲ್ಲ

(ಹಕ್ಕನೇ ಪುಟ ನೋಡಿರಿ)

ನರಸಣ್ಣನ ಸರಸ



'ಮಂತ್ರಿಗಳ ಸಂಬಳ ಏರಿತಂತೆ. ಇನ್ನು ನೌಕರರೂ, ವ್ಯಾಪಾರಿಗಳೂ ಆಂದೋಲನ ನಡಾಯಿಸಬಹುದು..'

ಗೇಹೆ ರಾಜ್ಯದಲ್ಲಿ

ಅಲಸಂಖ್ಯಾಕರ ಹಿತರಕ್ಷಣೆ

"ಹೌದ್ರೀ....."

"ಏನು?"

'ಒಲ್ಲ, ಮಂತ್ರಿ ಮಾಗಧರಿಗೆ, ಶಾಸಕರಿಗೆ ಸಂಬಳ ಏರುವ್ತದಂತಲ್ಲಾ...."

'ಯಾರು ಹೇಳಿದ್ರು?'

'ಯಾರು ಯಾಕೆ ಹೇಳ್ಬೇಕು? ವಿಧೇಯಕ ಶಾಸನ ಸಭೆಯಲ್ಲಿ ಚರ್ಚೆಗೆ ಬಂದಿದೆ, ಇನ್ನೇನು, ಹ್ಞೂಂ....ಹ್ಞೂಂ ಅನ್ನುವುದೊಳಗೆ ನುಂಜೂರೂ ಆಗುತ್ತೆ...'

'ನೀನು ಅನ್ನೋದು ಕರ್ನಾಟಕದ ಕಥೆ....."

'ಮತ್ಯಾರ್ದಾರ ಕಥೆ ನನಗ್ಯಾಕೆ?"

'ಹ್ಞೂಂ...ಏನೋ, ಸ್ವತಂತ್ರ ಪಕ್ಷದ ಶ್ರೀ ಕಾಶೀಮಠರೆಂಬ ಸದಸ್ಯರು ವಿಧೇಯಕ ಮಂಡಿಸಿದ್ದಾರೆ.'

"ಮಂಡಿಸಿದ್ದಾರೆ ಎಂದ ಮೇಲೆ ಅದು ಸ್ವೀಕಾರವೂ ಆಗುತ್ತೆ.. '

"ಹ್ಞೂಂ... ಆದರೂ ಆಗಬಹುದು..."

"ಯಾಕೆ? ನಿಮಗೆ ಸಂದೇಹವೆ?'

"ಸಂದೇಹವೇನೂ ಇಲ್ಲಾನ್ನು. ಆದರೂ ಸದಸ್ಯರೆಲ್ಲರೂ ಮಾನವತಾವಾದ ಪ್ರೇರಿತರಾದರೆ, ಕಾಶೀಮಠರ ವಿಧೇಯಕ ಮುರಿದು ಬೀಳಲೂ ಬಹುದು...."

"ಅಯ್ಯೋ, ನೋಡಿ, ಶ್ರೀ ಕಾಶೀಮಠರಿಗೆ ಸ್ವತಂತ್ರ ಪಕ್ಷ ವಿಧೇಯಕ ಮಂಡಿಸಲು ಅವಕಾಶ ಕೊಟ್ಟಲ್ಲವಂತೆ...."

'ಹೌದು, ಇನ್ನು ಶಿಸ್ತು ಭಂಗದ ಕ್ರಮ ಕೈಗೊಂಡು ಅವರನ್ನು ಸಕ್ಷದಿಂದ ಹೊರಗಿಟ್ಟರೆ ಸರಿ....'

"ಮತ್ತೇನು? ಅಷ್ಟಾದರೆ ಸಾಕು, ಸರಕಾರಿ ದೊಡ್ಡಿಯಿದೆ...."

'ಅಂದರೆ?'

'ಅಂದ್ರೆ, ನಿಮ್ಮ ಟೋಪಿಯವ್ರ ಪಕ್ಷ ವಿದೆ ನೋಡಿ. ಅವ್ರು ದೂರಿಗಾದ್ರೂ ಅಶ್ರಯ ನೀಡುತ್ತಾರೆ... ಆದ್ದರಿಂದ್ಲೇ ಯಾರೋ ಗಡುಗಿದ್ರು ಕೇಳಿ, ಮಧ್ಯ ಪ್ರದೇಶದ ಘಟನೆ ಇಲ್ಲಿ ಪುನರಾವರ್ತನೆ ಹೊಂದ ವುದೆಂಬ ಭೀತಿ ಜೀವಂತ..."

'ಆದ್ರೂ, ಈ ಬಾರಿಯ ಚುನಾವಣೆಯ ನಂತರ, ಎಲ್ಲ ಪಕ್ಷಗಳೂ 'ಒಂದೇ ತಾಯ ಮಕ್ಕಳು' ಎಂದು ವೈಶ್ಯವಾಯ ತ...'

"ಆದು ಹೇಗೆ?'

'ಇಷ್ಟ ಕೇಳು, ಬಂಡಗಾರ ಕಾಂಗ್ರೆಸ್ಸಿಗರ ಸಹಾಯದಿಂದಲೇ ಕಾಂಗ್ರೆಸ್ಸೇತರ ಸರಕಾರ ರಚನೆ ಸಾಧ್ಯವಾಯ್ತು.'

"ಹ್ಞೂಂ... ಇದು ತಸು ಮಟ್ಟಿಗೆ ನಿಜಾನ್ನಿ...."

"ತುಸುವೇಕೆ? ನೂರಕ್ಕೆ ನೂರರಷ್ಟು ಸತ್ಯ. ಇನ್ನೊ ತಮಾಲೆಯೆಂದರೆ...'

"ಏನು?'

'ಒಂದು ದೃಷ್ಟಿಯಿಂದ ಹೆಚ್ಚಿನ ರಾಜ್ಯಗಳಲ್ಲಿರುವುದು ಕಾಂಗ್ರೆಸ್ಸು ಸರಕಾರವೇ ಎನ್ನ ಬಹುದು....'

"ಆದು ಠ್ಯಾಗ್ರೀ....ಸುಮ್ಮನೆ ಬಂಬಡಿ ಬಾರ್ಸಿಬ್ರೆ....'

'ಸಿಟ್ಟಿಗೇಳ ಬೇಡ್ವೇ, ನೋಡ್ರು ಮಧ್ಯಕ್ರದೇಶದ ಉದಾಹರಣೆಯನ್ನೇ ತೆಗೆದುಕೊಳ್ಳಿ, ಸಂಯುಕ್ತ ದಳದ ಶ್ರೀ ಗೋವಿಂದ ನಾರಾಯಣ ಸಿಂಗರು "ಮಾಜಿ ಕಾಂಗ್ರೆಸಿಗರು' ಅವರ ಸಚಿವ ಮಂತ್ರಿಗಳಲ್ಲಿ ಗ್ರ ಮಂದಿ ಇವರಂತೆಯೇ ಕಸಿಕಟ್ಟಿ ಸಂಯುಕ್ತ ದಳಕ್ಕೆ ಸೇರಿದವರು...."

"ಓ, ಹಾಗೆ. ಆದು ಹೌದ್ರಿ,

'ಬಂಗಾಳಧ ಕಥೆ ಗೂ ಇದೇ...'

'ಬಂಗಾಳ ಅಂತೇನು, ಬಿಹಾರ, ಯುಪಿ ಒರಿಸ್ಸಾ ಎಲ್ಲಾ ಒಂದೇ'

'ಹ್ಞೂಂ..... ಕಾಂಗ್ರೆಸ್ಸಿಗರೇ ಕಾಂಗ್ರೆಸ್ಸೇತರ ಸರಕಾರದ ಮುಖ್ಯ ಮಂತ್ರಿಯೂ ಗಿಯೋ ಮಂತ್ರಿಯೂಗಿಯೋ ತಮ್ಮ ಹುದ್ದಿಯನ್ನು ಭದ್ರಗೊಳಿಸಿಕೊಂಡಿದ್ದಾರೆ....'

'ನೋಡಿ, ಒಂದು ಕಥೆ ನೆನಪಾಗುತ್ತಿಗುತ್ತಿದೆ..."

'ಏನು?'

'ಹಿಂದೆ ನೋಡಿ, ಅಕ್ಬರನ ಕಾಲದಲ್ಲಿ ನಡೆಯುತ್ತಿತ್ತಂತೆ....'

"ಏನಪ್ಪಾ..."

"ಹಿಂದೂರಾಜರು ತಮ್ಮ ರಾಜಪದವಿಯನ್ನುಳಿಸಿಕೊಳ್ಳಲು ಇಷ್ಟಾಮನ್ನು ಆಪ್ತುತಿದ್ದರಂತೆ, ಅಥವಾ ರಾಜನಿಗೆ ತಮ್ಮ ಮಗಳಂದಿರನ್ನು ಮದುವೆಮಾಡಿ ಕೊಡುತಿದ್ದರಂತೆ...."

'ಹ್ಞೂಂ.... ಇದೂ ಹಾಗೆಯೇ ಅನ್ನು. ಮತಾಂತರವೇ."

'ಅದು ಹೇಗೆ?"

"ಮತ ಅಂದ್ರೆ ಅಭಿಪ್ರಾಯಾಂತರ್ಥ. ನಮ್ಮ ದೇಶದಲ್ಲಿ ಮತ ಸ್ವಾತಂತ್ರ್ಯವಿದೆ. ನಮ್ಮ ನಮ್ಮ ಸೌಂದರ್ಯ ವರ್ಧನೆಗಾಗಿ ಬೇರೆ ಬೇರೆ ಅಂಗಿ—ಬಟ್ಟೆಗಳನ್ನು ತೊಡುವಂತೆ ತಮ್ಮ ತಮ್ಮ ಸ್ವಾರ್ಥ ಸಾಧನೆಗಾಗಿ ಮತಾಂತರಗೊಂಡರೆ ತಪ್ಪೇನು?"

'ಆದರೂ ಒಂದು, ನೋಡಿ, ಒಂದು ಪಕ್ಷದಿಂದ ಆಯ್ಕೆಯಾಗಿ ಬಂದ ಮೇಲೆ, ಆ ಪಕ್ಷಕ್ಕೆ ರಾಜೀನಾಮೆಯಿಯಾಯುವುದು ತಪ್ಪಲ್ಲವೆ? ಮತದಾರರನ್ನು ವಂಚಿಸಿದಂತಲ್ಲವೆ?'

"ಅಯ್ಯೋಸಿ, ಸ್ವಿ, ನೀನೆಲ್ಲಿದ್ದಿ? ಪಕ್ಷೀಯ ನೆಲೆಯಲ್ಲಿ ನೀತಿಯಲ್ಲಿ ಧೂರು ಸ್ಪರ್ಧಿಸಿದ್ದಾರೆ?"

"ಅಂದರೆ?"

"ನೋಡು, ನಮ್ಮ ದೇಶದಲ್ಲಿ ನಿಷ್ಠೆಯಿಂದ ಪಕ್ಷರಚನೆಯೂಗಲಿಲ್ಲಿ. ಪಕ್ಷ ವೆಂಬುದು ಒಂದು ಬಲೆ. ಪಕ್ಷೀಯ ನಾಯಕರು ಈ ಬಲೆಯನ್ನು ಹರಡಿ, ವಾದ್ಯ ಊದುತ್ತಾರೆ. ಕಾಡಿನಲ್ಲಿ ಬೇಡರನ ಹರಡಿದ ಬಲೆಯಲ್ಲಿ ಪ್ರಾಣಿಗಳು ಸಿಕ್ಕಿ ಬೀಳುವಂತೆ ಅಧಿಕಾರ ವ್ಯೋಹವುಳ್ಳ ಜನರು ಇದರಲ್ಲಿ ಸಿಕ್ಕಿಬೀಳುತ್ತಾರೆ. ಅವರಿಗೆ ಪಕ್ಷದ ಖ್ಯಾತಿನ್ನು ಇತ್ತು ಚುನಾವಣೆಗೆ ನಿಲ್ಲಿಸಲಾಗ ತ್ತಿದೆ....ಅಂಥವರು ಪಕ್ಷಾಂತರ ಹೊಂದಿದರೆ ತಪ್ಪೇನು?'

'ಹ್ಞೂಂ..."

"ಇನ್ನೂ ಇದೆ ನೋಡು. ತಮ್ಮ ಪಕ್ಷದ ನೀತಿಯ ನೆಲೆಯಲ್ಲಿ ಯಾರೂ ಚುನಾವಣೆಗೆ ಇಲ್ಲಿ ನಿಲ್ಲುವುದಿಲ್ಲ. ನಾನು ಈ ಪಕ್ಷದಿಂದ ಶಂತಿದ್ದೇನೆ ಎಂದೇ ಮತ ಕೇಳುತ್ತಾರೆ ಅಭ್ಯರ್ಥಿಗಳು— ಉತ್ತಮ ಪುರುಷರಾಗಿ ಈ ಪಕ್ಷವು ನನ್ನನ್ನು ನಿಲ್ಲಿಸಿದೆಯೆಂಬ ಪ್ರಥಮ ಪುರುಷದ ಪ್ರಯೋಗ ಎಲ್ಲಾದರೂ ಕೇಳಿದ್ದೀಯೂ?"

'ಅದು ಸರಿನ್ನಿ....",

'ಹಾಗಿರುವಾಗ, ಜನ ನೀಡಿದ ಮತ ಅಭ್ಯರ್ಥಿಗೆ. ಆತನ ಪಕ್ಷಕ್ಕಲ್ಲ. ಅಭ್ಯರ್ಥಿಯು ಪಕ್ಷೀಯ ಮುದ್ರೆ ಹೊತ್ತಕಾರಣದಿಂದ ಪಕ್ಷೀಯ ಬೇಡರು ತಮ್ಮದೆಂದು ಕೊಚ್ಚಿಕೊಳ್ಳುತ್ತಾರೆ...'

'ಅದು ಹೌದು. ಮೂಢವಲ್ಲ ನೋಡಿ, ನಮ್ಮ ಜನರೂ ಅಷ್ಟೆ. ಪಕ್ಷಕ್ಕೆ ಓಟು ಮಾಡುವ ಇಚ್ಛೆಯಲ್ಲಿಲ್ಲ, ಅವರು ನಮ್ಮ ಓಟು ಇಂಥವರಿಗೆ ಎನ್ನುತ್ತಾರೆಯೇ ಹೊರತು, ಇಂಥ ಪಕ್ಷಕ್ಕೆ ಎನ್ನುವುದಿಲ್ಲ. ಇವರ 'ಇಂಥವರು' ಕಾಂಗ್ರೆಸ್ಸಿನಿಂದ ಫಿಲ್ಲಲಿ, ಪ್ರಸವಾ, ಎಸ್‌ಎಸ್‌ಪಿ, ಕಮ್ಯುನಿಸ್ಟ್, ಸ್ವತಂತ್ರ ಅಥವಾ ಮತ್ತಾವುದೇ ಪಕ್ಷದಿಂದ ನಿಲ್ಲಲೀ ಇಂಡಿಪೆಂಡೆಂಟಾಗಿಯೇ ನಿಲ್ಲಲಿ— ಅವರ ಓಟು 'ಅವರಿಗೆ....'

'ನೋಡು, ಹಾಗಿರುವಾಗ ನಮ್ಮನ್ನು ಜನ ಆರಿಸಿದೆಯೆಂದು ಸದಸ್ಯರು ಜಂಬ ಕೊಚ್ಚಿಕೊಂಡು, ಪಕ್ಷ ವನ್ನು ಕಡೆಗಣಿಸಿದರೆ ತಪ್ಪಾದರೂ ಏನು?'

'ಹೌದ್ರಿ, ಇಲ್ಲಿ ಮೂಲಭೂತ ವಿಚಾರವೇ ಇದೆ....'

"ಇಲ್ಲೇಂತೇನು? ಎಲ್ಲೆಡೆಯೂ ಇದೆ. ರಾಜ್ಯದ ಶಾಸಕರ ವೇತನ ಭತ್ತೆ ಏರಿಸುವ ಪ್ರಶ್ನೆ ಬಂದಾಗ ಬಹುಮತೀಯ ಪಕ್ಷದವು, ಬಾಯಿ ಮುಚ್ಚಿ ಕುಳಿತಿದ್ದಾರೆ. ವಿರೋಧಿ ಪಕ್ಷಗಳು ಬಂಬಡಿ ಬಾರಿಸಿ ವಿರೋಧಿಸುತ್ತವೆ. ನಾಳೆ ಮಂಜೂರಾಯಿತೆಂದರೆ, ಅವ್ರು ಹೆಚ್ಚಿನ ವೇತನ—ಭತ್ತೆ ಪಡೆದೇ ತೀರುತ್ತಾರೆ.'

'ಅಂದ್ರೆ ಇದೆಲ್ಲಾ ಒಂದು ನಾಟಕ."

"ಹ್ಞೂಂ....ನೋಡು, ನಮ್ಮೂರಿನ ಒಬ್ಬ ಸರಕಾರಿ ನೌಕರ ಬೆಂಗಳೂರಿಗೆ ಡ್ಯೂಟಿಯು ಮೇಲೆ ಹೋದರೆ, ಆತನಿಗೆ ಭತ್ತೆ ಹತ್ತು ರೂಪಾಯಿ ವೇತನಕ್ಕೆ ಹದಿನಾರು ಪೈಸೆಯಂತೆ....'

'ಹೌದ್ರಿ, ಮೊನ್ನೆ ಮೇಷ್ಟ್ರು ಹೇಳಿದ್ರು....ಅವರಿಗೆ ಇನ್ನೂರು ರೂಪಾಯಿ ಸಂಬಳ ಅಂತೆ ಮೂರು ರೂಪಾಯಿ ಇಪ್ಪತ್ತು ಪೈಸೆ ಭತ್ತೆಯಂತೆ. ಠೊಂ ಬಾಡಿಗೇನೇ ಐದಾರು ರೂಪಾಯಿ ಆಗುತ್ತಂತೆ. ಮತ್ತೆ ಊಟ—ತಿಂಡಿ...'

'ಅದೇ ಅಂದದ್ದು ನೋಡು, ನಮ್ಮ ಶಾಸಕರಿಗೆ ದಿನ ೨೫ ರೂಪಾಯಿ ಭತ್ತೆ ಬೇಕಂತೆ. ತಿಂಗಳಿಗೆ ನಾಲ್ಕುನೂರು ರೂಪಾಯಿ ಸಂಬಳ ಬೇರೆ ಕಂತೆ. ಇನ್ನೊಂದು ಮಾತೆಯಿಂದರೆ, ಇವರು ಇಷ್ಟು ದಿನ ಅಧಿವೇಶನ ನಡೆದರೆ, ಇಂತಿಷ್ಟು ದಿನವಾದರೂ ಹಾಜರು ಇರಲೇ ಬೇಕೆಂಬ ನಿಯಮವೇನೂ ಇಲ್ಲ ...'

'ಅಲ್ರಿ, ಉಳಕೊಳ್ಳಲು ಹಾಸ್ಟೆಲ್ಲು ಇರುವ ಶಾಸಕರು ದಿನಕ್ಕೆ ಇಪ್ಪತ್ತೈದು ರೂಪಾಯಿ ಭತ್ತೆ ತೆಗೆದುಕೊಳ್ಳಬಾರದು. ನಾಲ್ಕೂರು ರೂಪಾಯಿ ಸಂಬಳ—ಅದು—ಹೆಣ್ಣಾಂ, ಲೆಕ್ಚರ್ಚಾರಕ್ಕೆ ತೆಗೆದುಕೊಳ್ಳೋಣ—ಆದು ರೂಪಾಯಿ ನಲುವತ್ತು ಪೈಸೆಯಲ್ಲಿ ದಿನದಂಡಿ ಸರಕಾರಿ ನೌಕರರಿಗೆ ಆದರ್ಶ ಹಾಕಿಕೊಡಬೇಕು..."

ಅಯ್ಯೋ, ನೀನೊಬ್ಬನು....ನೌಕರರಿಗೆ ವೇತನ—ಭತ್ತೆ ಹೆಚ್ಚಿಗಲು ಶುಂಬ ಹಣ ಬೇಕು, ಮಂತ್ರಿ—ಶಾಸಕರ ಸಂಖ್ಯೆ ಕಡಿಮೆ. ಅಲ್ಪಸಂಖ್ಯಾಕರ ಹಿತರಕ್ಷಣೆ....'

'ಸಾಕು ಬಿಡೀಂದ್ರೆ...."

'ಬಿಡೋದು ಸಾಧ್ಯನೇ ಇಲ್ಲ."

"ಹಾಗಾದ್ರೆ ಹಿಡ್ಕೊಳ್ಳಿ..."

'ಬೇಕಾಗಿದೋದೋ ದೇ...."

'ಅಯ್ಯೋ...."

—ಗೋರಾ

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17—4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ನರಿಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಶ್ರೀ ಕೆ.ಕೆ.ಶೆಟ್ಟಿ, ಎಂ.ಎಲ್.ಸಿ. ಯವರ ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಳಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಶಾಂತಿ — ಸಂಘರ್ಷ ಮೂರ

ನಸ್ಯ ಶ್ಯಾಮಲೆ - ಪ್ರಕೃತಿ ಮಾತೆ

ಬರೆದವರು:
ಶ್ರೀ ಸ. ನಾರಾಯಣ

ವನಶ್ರೀಯ ಅನುಪಮ ಸೌಂದರ್ಯದಿಂದ ಮನೆಯ ಅಂದ ಹೆಚ್ಚುತ್ತದೆ. ನಾಡಿನ ಶ್ರೀವಂತಿಕೆ ವೃದ್ಧಿಯಾಗುತ್ತದೆ. ಭೂಮಿಯ ಮೇಲೆ ಬೆಳೆದ ಸಸ್ಯ ಸಮುದಾಯದ ಸೌಂದರ್ಯವನ್ನು ವರ್ಣಿಸುವುದು ಸುಲಭ ಕಾರ್ಯವಲ್ಲ. ಭೂದೇವಿ ಉಟ್ಟ ಹಸಿರು ಸೀರೆಯಂತೆ ಗಿಡ, ಮರ, ಬಳ್ಳಿಗಳು ಅಚ್ಚ ಹಸುರಾಗಿ, ಅಚ್ಚಾದಕರವಾಗಿ ಕಂಗೊಳಿಸುತ್ತವೆ. ಸಸ್ಯ ಶ್ಯಾಮಲೆಯ ರಮಣೀಯ ರೂಪ ವರ್ಣಿಸಲಸದಳ. ಸಸ್ಯ ಶೋಭಿತ ಭೂಮಿ ನಂದನ ವನವಾಗಿ ಕಾಣ ಬರುತ್ತದೆ. ಹಸಿರೆಲೆಯ ಸಸ್ಯ ಸಮೂಹ ನಾಡಿನ ಶ್ರೀವಂತಿಕೆ, ಸೌಂದರ್ಯಗಳನ್ನು ಇಮ್ಮಡಿಗೊಳಿಸಬಹುದು. ಅದೇ ಹಸಿರು ಬೆಳೆದ ನೆಲ ರಕ್ತ ಪಾತಕ್ಕು ಅವಕಾಶ ಮಾಡಿಕೊಟ್ಟಬಹುದು. ಆದರೆ ಚಿಕ್ಕ ಗಿಡಗೆಂಟೆಗಳ ಕಾರಣದಿಂದಲೇ ಸಾಮ್ರಾಜ್ಯಗಳು ಪಾರಕಂತ್ರ್ಯಕ್ಕೆ ಒಳಗಾದವು. ಹಾಗೆಯೇ ಬಂಧನದ ಬೇಡಿಯನ್ನು ಶಿಥಿಲ್ಯಗೆಯು ಪ್ರಬಲವಾದವು. ಸ್ವಾತಂತ್ರ್ಯದ ಕಹಳೆಯನ್ನು ಊದಿದವು.

ಕರಿಯ ಮೆಣಸು ಸಾಂಬಾರ ಪದಾರ್ಥಗಳಲ್ಲಿ ಪ ಮುಖವಾದುದು. ಮೆಣಸು ಇಂದಿಗೂ ಅಮೌಲ್ಯ ವಸ್ತು ಎಂದ ಹೇಳಲೂ ಬಹುದು. ಕರಿಯ ಮೆಣಸು ಕಷ್ಟಾಗಿ ಗುಂಡಾಗಿರುವ ಕಾಳು. ಮೆಣಸಿನ ಬಳ್ಳಿಯಲ್ಲಿ ದೊಡ್ಡಿಯುತ್ತದೆ. ಈ ಕರಿಯ ಮೆಣಸಿನ ಬಳ್ಳಿಗಳು ವಿಶೇಷವಾಗಿ ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ನೀಲಗಿರಿ ಪ್ರದೇಶದಲ್ಲಿ ಬೆಳೆಯುತ್ತವೆ. ಕರಿ ಮೆಣಸಿಗೆ ಇಂದಿಗೂ ಪೂರುಷಟ್ಟೆಯಲ್ಲಿ ವಿಶೇಷ ಬೇಡಿಕೆ ಇದೆ.

ಕರಿಯ ಮೆಣಸು ಇಂದು ಅಗ್ಗದ ಬೆಲೆಗೆ (ಬಂಗಾರದ ಬೆಲೆಗಿಂತಲೂ ಕಡಿಮೆ ಎನ್ನುವ ಅರ್ಥದಲ್ಲಿ) ಪೇಟೆಯಲ್ಲಿ ದೊರೆಯುತ್ತಿದ್ದರೂ ಒಂದು ಕಾಲದಲ್ಲಿ ಅದರ ಬೆಲೆ ಬಂಗಾರಕ್ಕೆ ಸರಿಸಮನಾಗಿತ್ತು. ಮೆಣಸನ್ನು ಇಂದು ಸಾಮಾನ್ಯ ಜನರೂ ಸಾಲೆಯಲ್ಲಿ ಬಳಸಲು ಅವಕಾಶವಿದೆ. ಆದರೆ ಕ್ರಿಸ್ತಶಕ ಪೂರ್ವದಲ್ಲಿ ಆದ ಕೇವಲ ರಾಜ, ಮಹಾರಾಜ, ಧನಿಕರಿಗೆನೂತ್ರು ಮೀಸಲಾಗಿದ್ದ ಶ್ರೀಮಂತ ವಸ್ತುವಾಗಿತ್ತು. ಅವರು ಮಾತ್ರ ಕೊಂಡು ಉಪಯೋಗಿಸಲು ಸಾಧ್ಯವಿತ್ತು.

ರೋಮ ನಗರದಲ್ಲಿ ಕರಿ ಮೆಣಸನ್ನು ಬಂಗಾರ ತೂಗುವ ತ್ರಾಸಿ (ತಕ್ಕಡಿ)ನಲ್ಲಿಟ್ಟು ತೂಗುತ್ತಿದ್ದರಂತೆ. ಮೆಣಸನ್ನು ಬಂಗಾರದ ತೂಕಕ್ಕೆ ಸಮನಾಗಿ ಹಾಗಿ ಕೊಡುತ್ತಿದ್ದರಂತೆ. ಕ್ರಿ. ಶ. ೪ನೆಯ ಶತಮಾನದಲ್ಲಿ ರೋಮ ನಗರಕ್ಕೆ ಮುತ್ತಿಗೆ ಹಾಕಿದ ರಾಜ ಅಲೇರಿಕ್ ತನಗೆ ೩,೦೦೦ ಪೌಂಡ್ ಕರಿ ಮೆಣಸು, ೫೦೦೦ ಪೌಂಡು ಬಂಗಾರ ೩೦,೦೦೦ ಪೌಂಡು ಬೆಳ್ಳಿ ಕೊಟ್ಟರೆ ಮುತ್ತಿಗೆ ಹೆಗಲು ಹಿಂತಿರುಗುವುದಾಗಿ ತಿಳಿಸಿದನಂತೆ. ಅತಿ ಪ್ರಾಚೀನ ಕಾಲದಿಂದಲೂ ಯುರೋಪಿನ ಪ್ರಮುಖ ನಗರಗಳಿಗೆ ಭಾರತದಿಂದ ಮಸಾಲೆ (ಸಾಂಬಾರ) ಪದಾರ್ಥಗಳು ಸರಬರಾಜಾಗುತ್ತಿದ್ದವು ಎಂಬ ಸಂಗತಿಯನ್ನು ಇಲ್ಲಿ ಜೆನ್ಮೆಯಿಂದ ಸ್ಮರಿಸಬಹುದಾಗಿದೆ.

ಅಟಿಲಾಸಿಂಬುವ ಅರಸ ರೋಮಿಗೆ ಮುತ್ತಿಗೆ ಹಾಕಿದ. ಮುತ್ತಿಗೆಯಿಂದ ವಿಮುಖನಾಗಲು ೩,೦೦೦ ಪೌಂಡ ಕರಿ ಮೆಣಸು ಕೊಡಬೇಕೆಂದು ಪರತ್ತು ಹಾಕಿದ ೧೩೧೮ನೆಯ ಶತಮಾನಗಳ ವರೆಗೂ ವಿದೇಶಗಳಲ್ಲಿ ಕರಿ ಮೆಣಸಿಗೆ ವಿಶೇಷ ಪ್ರಾಶಸ್ತ್ಯವಿತ್ತು. ಕರಿ ಮೆಣಸಿಗೆ ಆ ದೇಶಗಳಲ್ಲಿ ವಿಶೇಷ ಬೇಡಿಕೆಯೂ ಇತ್ತು. ಜವಿನ್ಸಾದಾರರು ರೈತರಿಂದ ಹೊಲದ ತೆಗೆಯ ರೂಪದಲ್ಲಿ ಹಣವನ್ನು ಪಡೆಯುದೆ, ಕರಿ ಮೆಣಸನ್ನು ಪಡೆಯುತ್ತಿದ್ದರು.

ಯುರೋಪಿನ ಎಲ್ಲ ರಾಷ್ಟ್ರಗಳಲ್ಲಿಯೂ ಸಾಮಾನ್ಯವಾಗಿ ಕರಿಮೆಣಸಿಗೆ ವಿಶೇಷ ಬೇಡಿಕೆ ಮಹತ್ವಗಳು ಇದ್ದವು. ನೆರೆಯ ರಾಷ್ಟ್ರಗಳ ಬೇಡಿಕೆಯನ್ನು ಪೂರೈಸಿ ಲಾಭ ಸಂಪಾದಿಸುವ ಸಲುವಾಗಿ ಸ್ಪೈನ್ ಮತ್ತು ಪೋರ್ಚುಗಲ್ ನಾವಿಕರಿಗರು ಸಾಗರದ ಮೂಲಕ ಭಾರತ ತಲುಪಲು ಪ್ರಯತ್ನಿಸಿದರು. ಭಾರತವನ್ನು ತಲುಪಬೇಕೆಂದು ಸಾಗರದಲ್ಲಿ ಯೂ ನ ಮಾಡಿದ ಕೊಲಂಬಸ್ ಭಾರತಕ್ಕೆ ಬದಲಾಗಿ ಅಮೇರಿಕಾ ತಲುಪಿದ. ಆದರೆ ಪೋರ್ಚುಗಲ್ಲಿನ ವಾಸ್ಕೋಡಿಗಾಮ ಭಾರತದ ಅನ್ವೇಷಣೆಯಲ್ಲಿ ಯಶಸ್ಸು ಗಳಿಸಿದ. ಅವನ ಹಡಗು ಭಾರತದ ಪಶ್ಚಿಮ ತೀರದಲ್ಲಿದ್ದ ಕಾಲಿಕಟ (ಕಲ್ಲಿ ಕೋಟೆ) ಬಂದರನ್ನು ತಲುಪಿತು. ಪೋರ್ಚುಗಲ್ಲಿನ ವಾಸ್ಕೋಡಿಗಾಮನ ಆಗಮನದಿಂದ ಭಾರತಕ್ಕೆ ಸರಕೀಯರ ಪದಾರ್ಪಣ ಆರಂಭವಾಯಿತು. ಭಾರತದ ಪರತಂತ್ರತೆಗೆ ಕರಿಮೆಣಸು ಮುಖ್ಯ ಕಾರಣ ಎಂದು ಹೇಳಲೂ ಬಹುದು. ಭಾರತದ ಶ್ರೀಮಂತಿಕೆ, ವೈಭವ, ಪ್ರಕೃತಿ ಸಂಪತ್ತು, ದೈವದತ್ತ ಸನ್ನದ್ಧ ವಸ್ತುಗಳು ವಿದೇಶಿಯರನ್ನು ಆಕರ್ಷಿಸಿದುದರಲ್ಲಿ ಆತಿಶಯವೇನಿಲ್ಲ. ಭಾರತದಲ್ಲಿ ಬೆಳೆಯುತ್ತಿದ್ದ ಸಂಬಾರ ಪದಾರ್ಥಗಳು ವಿದೇಶಿಯ ವ್ಯಾಪಾರಿಗಳಿಗೆ ವಿಶೇಷ ನಿಧಿಗೂಡಿ ದೊರೆತವು.

ಭಾರತಕ್ಕೆ ವಿದೇಶೀಯರ ಆಗಮನ—ಆಕ್ರಮಣಗಳಿಗೆ, ನೆಲೆಸಾಗಿ ನಿಲ್ಲಲು ಕರಿ ಮೆಣಸು ಕಾರಣವಾದಂತೆ ವಿದೇಶೀಯರನ್ನು ಭಾರತದಿಂದ ಹೊರ ದೂಡಲು ಮಹಾತ್ಮರು ಸಾರಿದ ಸತ್ಯಾಗ್ರಹಕ್ಕೆ ಭಾರತದಲ್ಲಿ ಬೆಳೆಯುವ "ನೀಲಿ" ಕಾರಣವಾಯಿತು.

ಇಂದ ಎಶ್ವದಾದ್ಯಂತ ಪಸರಿಸಿ ವಿಶೇಷ ಕೀರ್ತಿ ಪಡೆದಿರುವ ನೀಲಿ ಮೊಟ್ಟ ಮೊದಲಿಗೆ ಕಾಣಿಸಿ ಕೊಂಡುದು ಭಾರತದಲ್ಲಿ. ಸುಮಾರು ೨ ಸಾವಿರ ವರ್ಷಗಳ ಪೂರ್ವದಲ್ಲಿಯೇ ನೀಲಿ ಭಾರತದಿಂದ ರಷ್ಯಾ ಮತ್ತು ಯೂರೋಪು ದೇಶಗಳಿಗೆ ರವಾನೆಯಾಗುತ್ತಿತ್ತಂತೆ. ರೋಮನಲ್ಲಿ ನೀಲಿಗೆ ವಿಶೇಷ ಬೇಡಿಕೆ ಇದ್ದ ಸಂಗತಿ ಸ್ಪಷ್ಟವಾಗಿದೆ. ರೋಮ ಸಾಮ್ರಾಜ್ಯ ನಾಮಾವಶೇಷವಾದ ಸರುವಾಯ ನೀಲಿಯ ಪ್ರಾಪ್ತಿ, ಪ್ರಾಬಲ್ಯ ಯೂರೋಪದಲ್ಲಿ ಕುಂಠಿತವಾಯಿತು, ಭಾರತಕ್ಕೆ ಆಗಮಿಸಿದ ಡಚ್ಚ ವ್ಯಾಪಾರಿಗಳು ಪುನಃ ನೀಲಿಯನ್ನು ಯೂರೋಪಿನ ಮಾರುಕಟ್ಟೆಯಲ್ಲಿ ಬಳಕೆಗೆ ತಂದರು ಅತ್ಯಲ್ಪ ಕಾಲದಲ್ಲಿಯೇ ನೀಲಿಯ ಬೇಡಿಕೆ ಯೂರೋಪು ದೇಶದ ಆಗಣಿತವಾಗಿ ಬೆಳೆಯಿತು. ಪ್ರತಿಸ್ಪರ್ಧಿಯೂ ಮೂರುವರೆ ಲಕ್ಷ ಪೌಂಡು ನೀಲಿ ಹಡಗಿನಲ್ಲಿ ರವಾನೆಯಾಗುತ್ತಿತ್ತು. ನೀಲಿನಿರ್ಮಾಣ ಹೇಗಾಗ ಶ್ರದ್ಧೆ ಎಂಬುದ ವಿದೇಶಿಯರಿಗೆ ತಿಳಿಯದ ಗೂಢ ಸಂಗತಿಯಾಗಿತ್ತು. ಆ ಗುಟ್ಟನ್ನು ಯಾರೂ ಬಯಲಿಗೆಳೆಯಲೂ ಸಿದ್ಧರಿರಲಿಲ್ಲ. ನೀಲಿ ಗಡಿಗೆಗಳಲ್ಲಿ ದೊರೆಯುತ್ತದೆ ಎಂಬ ಕಲ್ಪನೆ ವಿದೇಶಿಯರದಾಗಿತ್ತು.

ಭಾರತದ ಬಂಗಾಲ ಪ್ರದೇಶ ನೀಲಿಯ ಕೇಂದ್ರ—ತೌರುಮನೆಯಾಗಿತ್ತು. ೧೮ನೆಯ ಶತಮಾನದ ಆರಂಭದ ದಿನಗಳಲ್ಲಿ ನೀಲಿ ಗಿಡಗಳಿಂದ ದೊರೆಯುತ್ತದೆ ಎಂಬ ಸಂಗತಿ ಬೆಳಕಿಗೆ ಬಂತು. ವಿದೇಶಗಳಲ್ಲಿಯೂ ಸ್ವಚ್ಛಾರವಾಯಿತು. ಆಗ ಬಂಗಾಲದ ಯಜಮಾನರಾಗಿದ್ದ ಇಂಗ್ಲೀಷ್ ವ್ಯಾಪಾರಿಗಳು ಜವಿನ್ಸಾದಾರರು ನೀಲಿಗಾಗಿ ಹೊಡೆದಾಡಲಾರಂಭಿಸಿದರು. ನೀಲಿಯ ಲಾಭ ಅವರಿಗೆ ಹುಚ್ಚು ಹಿಡಿಸಿತು, ಕೆಲವರು ಆಫ್ರಿಯೇ ಖಾಯಂ ಆಗಿ ನೆಲೆಸಿದರು. ಇಂಗ್ಲೀಷ್ ಭೂಮೂಲಿಕರು ಭೂಮಿಯ ನಿಯೋಜಿತ ಭಾಗದಲ್ಲಿ ನೀಲಿ ಬೆಳೆಯ ಬೇಕೆಂಬ ಕರಾರಿನ ಮೇರೆಗೆ ಭೂಮಿಯನ್ನು ರೈತರಿಗೆ ಕೊಡಲಾರಂಭಿಸಿದರು. ನೀಲಿ ಹೊಲಗಳಲ್ಲಿ ಕೆಲಸ ಮಾಡುವ ಕೂಲಿಯಾಳುಗಳು ಶೋಷಣೆಗೆ ಗುರಿಯಾದರು.

ಇಂಗ್ಲೀಷ್ ಭೂಮೂಲಿಕರು ಕೂಲಿಗಾರರಿಗೆ ಅತ್ಯಲ್ಪ ಪ್ರಮಾಣದ ಕೂಲಿಕೊಟ್ಟು ತಾವು ಅಧಿಕ ಲಾಭವನ್ನು ಪಡೆಯುತ್ತಿದ್ದರು. ಗಂಡಾಳಿಗೆ ೧೦ ಬಿಲ್ಲೆ. ಹೆಣ್ಣಾಳಿಗೆ ೬ ಬಿಲ್ಲೆ ಮತ್ತು ಮಕ್ಕಳಿಗೆ ೩ ಪೈಸೆ ಕೂಲಿ ಎಂದು ನಿಗದಿ ಮಾಡಿ ಅದರಂತೆ ಕೂಲಿಯನ್ನು ಹಂಚುತ್ತಿದ್ದರು. ಈ ಮಾನುಷ ಶೋಷಣೆಕೂಲಿಗೆರಿಗೆಗಳಿಗೆ ಅಂತ್ಯವಿರಲಿಲ್ಲ. ಬಡ ಕೂಲಿಗಾರರು ಅನ್ಯ ಮಾರ್ಗವಿಲ್ಲದೆ ಪರಿಸ್ಥಿತಿಯಲ್ಲಿ ತೊಳಲುತ್ತಿದ್ದರು. ಅದೇ ಸಮಯದಲ್ಲಿಯೇ ಮಹಾತ್ಮಗಾಂಧಿಯವರು ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿದ್ದರು.

ಬ್ರಿಟೀಷ್ ಭೂಮೂಲೀಕರ ಲಾಭ ಚಿಂತನೆ, ಅಭಿವೃದ್ಧಿ ಶೂನ್ಯ ನಡವಳಿಕೆ, ನೀಲಿಯ ಆ ವ್ಯಾಪಾರವನ್ನು ಮಹಾತ್ಮ ಗಾಂಧಿಯವರು ಸೂಕ್ಷ್ಮವಾಗಿ ತರಿತರು. ಬಂಗಾಲದ ರೈತರ ಕೂಲಿಕಾರರ ಅಸಹಾಯಕ, ಅಸಹನೀಯ, ದೀನ ಪರಿಸ್ಥಿತಿಯನ್ನು ತಿಳಿದು ಪೂರ್ಣ ಅಭ್ಯಾಸಕ್ಕಾಗಿ ಅನುಯಾಯಿಗಳೊಂದಿಗೆ ಚಂಪಾರಣ್ಯಕ್ಕೆ ತೆರಳಿದರು. ಮಹಾತ್ಮ ಗಾಂಧಿಯವರು ಅನುಯಾಯಿಗಳೊಂದಿಗೆ ಚಂಪಾರಣ್ಯ

(ಎಂಟನೇ ಪುಟ ನೋಡಿರಿ)

ಮುತ್ತು ಗಾನ

ವಸಂತ ಋತು:
ಜಲಧಿಯಿಂದ ಸರಸಿನಿಂದ
ಧರೆಯ ಜಲಾಶ್ರಯಗಳಿಂದ
ನೀರಹನಿಯು ನೆಲ್ಲನೆಲ್ಲ ಹೀರಿ
ಕೊಳ್ಳುವೆ.
ಕಣ ಕಣ ತುಣುಕು ಹನಿಗಳನ್ನು
ಬಾನ ಬಟ್ಟೆಯಲ್ಲಿ ಇರಿಸಿ
ಮುಗಿಲ ರೂಪದಲ್ಲಿ ನಾನು ಉಳಿಸಿ
ಕೊಳ್ಳುವೆ.

ವರ್ಷ ಋತು:
ಧರೆಯ ಕಾವು ಏರಿದಾಗ
ನೀರಿನಾಗಿ ಬಳಲಿದಾಗ
ಹೊಲಕೆ ಮಳೆಯ ರೂಪದಲ್ಲಿ ನೀರ
ರೆಯುವೆ.
ಹಸುರು ತಳೆದ ಹೊಲಗಳಿಲ್ಲಿ
ಫಲವು ತಾಳಿದಾಗಲೆಲ್ಲಿ
ಬುವಿಯ ಜನರ ಹಸುಷ ಕಂಡು
ಹಿಗ್ಗಿಕೊಳ್ಳುವೆ.



ವಸಂತ ಋತು — ವರ್ಷ ಋತು
ಮಿಗಿಲಾದ ಏಸಿರಿ ಉಳಿತಾಯಕ್ಕಾಗಿ
ಉಳಿತಾಯದ ಗರಿ ಬಾಳಸುಮಕ್ಕಾಗಿ

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ವಿಮೋಚನೆ ಕೋಣನ ನೋವು ಕಾಗೆಗೇನು ಗೊತ್ತು?

ಬರೆದವರು : ಶ್ರೀ ಶಿವಶಂಕರ.

ಕೋಣದ ಮೇಲೆ ಸವಾರಿ ಮಾಡುತ್ತ ಯಮರಾಜ ಮೈಯ್ಯನ್ನು ಕಾಗೆ ಕುಟುಕುತ್ತಾ ಇರುತ್ತದೆ. ಆಗ ಕೋಣ ಸುಮ್ಮನೆ ಇರುತ್ತದೆ. ನೋವಾದಾಗ ಬಾಲ ಅಲ್ಲಾಡಿಸುತ್ತದೆ. ಕಾಗೆ ಕೇಳಬೇಕಲ್ಲಾ? ಅದು ಕೋಣನ ಕಣ್ಣನ್ನೇ ಕುಕ್ಕಿ ಬಿಡುತ್ತದೆ. ಅದರ ಮನಸ್ಸಿನಲ್ಲಿ ಆ ಪ್ರಾಣಿ, ಅದೆಷ್ಟು ದೊಡ್ಡ ದಾಗಿದ್ದರೂ, ಕೋಣನೇ. ಆಗ ಮೂಕ ಕೋಣ ಸುಮ್ಮಗಿರುವದಿಲ್ಲ. ಅದು ತಲೆಯನ್ನೂ ಅಲ್ಲಾಡಿಸುತ್ತದೆ; ಕಾಗೆಯನ್ನು ಓಡಿಸುವೆ ಬಿಡುತ್ತದೆ. ಆ ರೀತಿ ಓಡಿಸುವಾಗ ಪೆಟ್ಟಾದಲ್ಲಿ ಮಾತ್ರ ಕಾಗೆಗೆ ನೋವೆಂದರೇನೆಂಬುದರ ಅರಿವಾಗುತ್ತದೆ. ಅದು ವರೆಗೂ ಕುಟುಕುವ ಕಾರ್ಯವನ್ನು ನಿಲ್ಲಿಸುವದೇ ಇಲ್ಲ.

ರಾಜಕೀಯದಲ್ಲೂ ಹಾಗೆನೇ. ಚುನಾವಣೆಯ ಸಮಯ ಅಭ್ಯರ್ಥಿ ಯಾವನೇ ಇರಲಿ, ಅವನು ಗೆದ್ದು ಬರುವನೇ ಎಂಬುದು ಮುಖ್ಯ. ಅವನು ತನ್ನ ಪಕ್ಷದ ಸದಸ್ಯನಲ್ಲದಿದ್ದರೂ ಸರಿಯೇ, ಎದುರು ಪಕ್ಷದವನಾದಲ್ಲಿ ಮತ್ತೂ ಒಳ್ಳೆಯದು. ಒಂದೇ ಕಲ್ಲಿನಿಂದ ಎರಡು ಹಣ್ಣುಗಳನ್ನು ಉದುರಿಸಿದಷ್ಟು ತೃಪ್ತಿ. ಒಡನೆ ಅವನಿಗೆ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಟ್ಟು ತಮ್ಮ ಪಕ್ಷದ ಅಭ್ಯರ್ಥಿಯನ್ನಾಗಿ ನಿಲ್ಲಿಸಿ ಬಿಡಲಾಗುತ್ತದೆ.

ಈ ಅಧ್ಯಾಸ ಚುನಾವಣಾ ಚದುರಂಗಕ್ಕೆ ಮಾತ್ರ ಸೀಮಿತವಲ್ಲ. ಗೆದ್ದ ಮೇಲಂತೂ ಆ ಸದಸ್ಯರುಗಳ ಬೆಲೆ ಏರಿಬಿಡುತ್ತದೆ. ಆಯಾಯಾ ಸಭೆಗಳಲ್ಲಾಗ ಅವರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸಲಾಗುತ್ತದೆ. ಕ್ರಿಸ್ತೀಯರು ಅನ್ಯರನ್ನು ತಮ್ಮ ಮತಕ್ಕೆ ಸೇರುವಂತೆ ಪುಸಲಾಯಿಸುವ ವಿಧಾನದಲ್ಲಿ ಆ ಸದಸ್ಯರುಗಳಿಗೆ ಅದೇನೇನೋ ಆಕರ್ಷಣೆಗಳನ್ನು ತೋರಿಸಲಾಗುತ್ತದೆ. ಮಂತ್ರಿಗುರುತ್ವಾಗಿ ಮಾಡುವ ಆಶ್ವಾಸನೆಕೊಡಲಾಗುತ್ತದೆ. ಈ ಆಟವಂತೂ ಇಷ್ಟು ವರ್ಷ ಸಂಗವಾಗಿ ನಡೆದುಕೊಂಡು ಬರುತ್ತಿತ್ತು. ಅದಕ್ಕೆ ಕಾರಣವೆಂದರೆ ಹೆಚ್ಚಿನ ರಾಜ್ಯಗಳಲ್ಲಿ ಕಾಂಗ್ರೆಸ್ಸು ಅಧಿಕಾರದಲ್ಲಿದ್ದದ್ದೇ ಕಾರಣವಿದೆ. ಇತರ ಪಕ್ಷಗಳ ಹೆಸರು ಕೇಳಿಕೊಂಡು ವಿಧಾನ ಸಭೆ ಅಥವಾ ಲೋಕ ಸಭೆಗೆ ಹೋದವರನ್ನು ಕಾಂಗ್ರೆಸ್ಸು ಕಾಗೆಯು ಕುಟುಕಿ ಬಿಡುತ್ತಿತ್ತು. ಆಗ ಇತರ ಪಕ್ಷಗಳ ನೋವು ಕಾಗೆಗೆ ಅರಿವಾಗುತ್ತಿರಲಿಲ್ಲ. ಅಶೋಕ ಮೆಹತ್ತಾ, ಪಟ್ಟಂಥಾನು ಪಿಳ್ಳೈ ಮುಂತಾದ ದೊಡ್ಡ ದೊಡ್ಡ ವಿಷಯಗಳನ್ನು ಪಿಡಿದಾಗಲೂ ವಿರುದ್ಧವಾಗಿ ಅಂತಹ ಪ್ರತಿಭಟನೆ ಎನೂ ಕಂಡು ಬರಲಿಲ್ಲ. ಹುತಾತ್ಮ ಡಾಕ್ಟರ್ ಶ್ಯಾಮ ಪ್ರಸಾದ ಮುಖರ್ಜಿಯವರ ಕಣ್ಣು ಕಳ್ಳಲು ಹೋದಾಗ ಅವರು ತಾಗೆಯನ್ನು ಓಡಿಸಿಯೇ ಬಿಟ್ಟರು. ಅಪನಂಬಿಕೆ ಕಾಗೆ ಅಪಾಯ ಸಂಕೇತಗಳನ್ನು ತೀರಿಸಿ ಕೊಂಡಿತೆಂಬುದು ಮರೆಯಲಾಗದ ದುರ್ಘಟನೆ ಇದೆ. ರಾಜಸ್ಥಾನ, ಮುಕ್ತಿಪ್ರದೇಶ, ಹರಿಯಾಣ ಪಂಜಾಬ ಮುಂತಾದ ರಾಜ್ಯಗಳಲ್ಲಿ ಈ ವ್ಯವಹಾರ ಚತುರ ಕಾಂಗ್ರೆಸ್ಸು ರಾಜಕೀಯ ಜ್ಞರಿಗೆ ಕರಗತವಾಗಿತ್ತು. ಚುನಾವಣೆ ಮುಗಿದು, ಫಲಿತಾಂಶ ಬಂದು, ಅಧಿಕಾರದ ಆಸನಕ್ಕೆ ಹೋಗುವಾಗ ಅವರಿಗೆ ಅಷ್ಟು ಬೆಂಬಲ ಇರುವದಿಲ್ಲ; ಸವಯ ಹೋದಂತೆ ಅವರ ಬರ್ಬಾರ್ ನೋಡಬೇಕು. ಕೈ ಎತ್ತುವವರ ಸಂಖ್ಯೆ ಅಧಿಕವಾಗಿ ಬಿಡುತ್ತದೆ. ಇದನ್ನು ಕೆಟ್ಟ ಅಧ್ಯಾಸವೆಂದು ಆಗ ಪ್ರತಿಪಕ್ಷದ ಕಾಂಗ್ರೆಸ್ಸಿ ಅಧ್ಯಕ್ಷ ಯಾರೂ ಇರುವದಿಲ್ಲ.

ಕಾಲ ಬದಲಾಗಿ ಹೋಗಿದೆ. ಕೆಲ ರಾಜ್ಯಗಳು ಕಾಂಗ್ರೆಸ್ಸೇತರರ ಕೈಗೆ ಹೋಗಿದೆ. ಅಲ್ಲೂ ಕೆಲವೆಡೆ ಆವರಿಗೆ ನಿಶ್ಚಿಂತ ಬಹುಮತ ಇಲ್ಲ. ರಾಜಸ್ಥಾನದಲ್ಲಿ ಪಕ್ಷೋಪಪಕ್ಷಗಳು ಗಜಬಿಜಿ ಪಲ್ಟಿಯೂಡಿದಾಗ ಅಲ್ಲಿನ ಸುಖನಿಯೂರವರು ಬಹಳ ಸುಲಭವಾಗಿ ಆ ಪಲ್ಟಿಯ ರುಚಿನೋಡಿದರು. ಕಾಂಗ್ರೆಸ್ಸಿನ ಅಧ್ಯಕ್ಷ ತಿರುಕಾಮರಾಜರು ಅತ್ಯತ್ಪಿಯ ನೋಟ ಬೀರಿದರು. ಉತ್ತರ ಪ್ರದೇಶದಲ್ಲಿ ಚಂದ್ರಭಾನು ಗುಪ್ತರವರು ಕೆಲ ಸದಸ್ಯರ ಬಳಿ ರಾಜಕೀಯ ಮಧ್ಯಚಂದ್ರ ನಡೆಸಿದಾಗಲೂ ತಿರು ಕಾಪ ರಾಜರು ಅವರತ್ತ ಮುಗುಳ್ನಗೆ ಬೀರಿದರು. ಆದರೆ ಎದುರು ಪಕ್ಷಗಳೊಂದಿಗೆ ತಮ್ಮ ಚರಣ ಸಿಂಘರು ಕೈ ಸೇರಿಸಿದಾಗ ತಿರು ಕಾಮರಾಜರಿಗೆ ಕಾಲು ಜಾರಿದುದರ ಅನುಭವ ಆಯಿತು. ಅದು ಅಲ್ಲಿಯೇ ಅಂತ್ಯವಾಗಿಲ್ಲ. ಮಧ್ಯ ಪ್ರದೇಶದಲ್ಲಿ ಕಳೆದ ಸಲದಂತೆ ಈ ಸಲವೂ ಕುಟುಕುತ್ತಿರ ಬಹುದೆಂದು ಭಾವಿಸಿಕೊಂಡಿದ್ದ ದ್ವಾರಕಪ್ರಸಾದ ಮಿಶ್ರರಿಗೆ ಘಡಾರನೆ ವೆಟ್ಟು ಬಿತ್ತು. ಒಬ್ಬರೇ, ಇಬ್ಬರೇ, ಅಬ್ಬಾ! ಆದೆಷ್ಟು ಮಂದಿ! ತನ್ನ ಬಳಿ ಇದ್ದದ್ದು ಶುದ್ಧ ಪ್ರಸಾದವಲ್ಲ, ಮಿಶ್ರ ಪ್ರಸಾದವೆಂಬುದು ಆಗ ಶ್ರೀ ಮಿಶ್ರರಿಗೆ ಗೊತ್ತಾಯಿತು. ಒಡನೆ ಅವರು ಶ್ರೀಜೆಂಸಲರಾಯ ರೆಡ್ಡಿಯುವರ ಬಳಿ ರಾಯರೇ ಶರಣೆಂದರು. ರೆಡ್ಡಿಯವರು ನಾನೂ ರೆಡಿಯೆಂದರು. ಇಬ್ಬರೂ ಡೆಲ್ಲಿಗೆ ಹೋದರು. ಶ್ರೀಮತಿ ಇಂದಿರಾ ಗಾಂಧಿಯವರನ್ನು, ತಿರು ಕಾಮರಾಜರನ್ನು ಕಂಡು ತಮ್ಮ ಪ್ರಸಾದಕ್ಕೆ ಧಕ್ಕೆ ಬಂದಿದೆಯೆಂದು ಕೋರಿಕೊಂಡರು. ಇಂದಿರಾಜಿ, ಕಾಮರಾಜ, ಯಶವಂತ ಚಾವಾಣ....ಆದು ಯಾವ ಬಾಣವೇ ಆದರೂ ಮಿಶ್ರರನ್ನು ಉಳಿಸಲು ಸಾಧ್ಯವಾಗಲಿಲ್ಲ.

ಆಗ ಕಾಂಗ್ರೆಸ್ ಕಾಗೆಗಳಿಗೆ ಕಸವಿಸಿಯೂಯಿತು. ಏನು ಮಾಡೋಣ, ಏನು ಮಾಡೋಣ? ಪ್ರಶ್ನೆ ಎದುರು ಬಂದು ನಿಂತಿತು. ಡೆಲ್ಲಿ ಬಿಟ್ಟು ಹಳ್ಳಿಗೆ ಹೋಗುವದಿಲ್ಲವೆಂದು ತಿರು ಕಾಮರಾಜರು ಅಲ್ಲಿಂದ ಕಾಲ್ತೆಗೆಯುಲಿಲ್ಲ. ಈಗ ಎಲ್ಲಾ ಕಾಂಗ್ರೆಸ್ಸಿಗರೂ ಈ ರೀತಿ ಕುಟುಕುವ ಅಭ್ಯಾಸ ಪಟ್ಟುಬಿಡಿಸುತ್ತಿದ್ದಾರೆ. ಊರಿಗೆ ಉಪದೇಶ ಕೊಡುತ್ತಿರುವಂತೆಯೇ ತಮ್ಮ ಪಕ್ಷಕ್ಕೆ ಇತರ ಪಕ್ಷಗಳ ಸದಸ್ಯರನ್ನು ಸೇರಿಸಿಕೊಳ್ಳುವ ಚಟವನ್ನು ಅವರು ಬಿಟ್ಟಿಲ್ಲವಾದರೂ, ತಮ್ಮ ಕಾಗೆಗೆಗಳು ಹಾರಿ ಹೋಗ ಕೂಡದೆಂದೇ ಅವರು ಆಲಾಪನೆ ನೂ ಡುತ್ತಿದ್ದಾರೆ! ಈ ಘಟನೆಯನ್ನು ನೋಡುವಾಗ ಒಂದು ಕಥೆ ಜ್ಞಾಪಕಕ್ಕೆ ಬರುತ್ತಿದೆ. ಅದನ್ನು ಶ್ರೀ ರಘುನಾಥ ಸಿಂಘರು ಬರೆದಿದ್ದು, ಅದು ದಿಲ್ಲಿಯ ಆಂಗ್ಲ ವಾರ ಪತ್ರಿಕೆ 'ಆರ್ಗನೈಸರ್'ನಲ್ಲಿ ಪ್ರಕಟವಾಗಿರುತ್ತದೆ. ಆ ಕಥೆ ಈ ರೀತಿ ಇದೆ:—

ಅದೊಂದು ನುಂಗಲಾರದ ಕಹಿ ಮೂಲ್ರೈ-ಈಗ, ಯುದ್ಧಪ್ರಿಯ ಪರಾಜನ ವಂಶಜನಿಗೆ ಬೇರೆ ಏಟ್ಟಿಕ್ಕೇ ಇರಲಿಲ್ಲ. ಪರಾಜ ಜನರ ಮುಖಂಡ ಹಮಿಂದನ ಹಿರಿಯ ಅವನ ಹದಿನಾಲ್ಕು ವರ್ಷ ಪ್ರಾಯದ ಮಗನು ಕುಳಿತುಕೊಂಡಿದ್ದನು. ತನ್ನ ತಂದೆ ವರ್ಣಿಸುತ್ತಿದ್ದ ಸಿಂಧ್ ಮತ್ತು ಜೈಸಲ್ಮೇರ್ ರಣರಂಗದ ಕದನ ಕಥೆಗಳನ್ನು ಮಗನು ಕಿವಿಗೊಟ್ಟು ಕೇಳುತ್ತಿದ್ದನು.

"ನನ್ನ ಹೆಸರು ಸಿಂಧ್ ಮತ್ತು ಜೈಸಲ್ಮೇರ್‌ನಲ್ಲಿ ಹೆದರಿಕೆಯನ್ನುಂಟು ಮಾಡುತ್ತಿದೆ. ಮಗನೇ, ನೀನು ಈ ಸಂಪ್ರದಾಯವನ್ನು ಉಳಿಸುವೆಯೆಂಬ ಭರವಸೆ ನನಗಿದೆ. ನೀನು ದೊಡ್ಡವನಾದಾಗ ನಿದೇ ರೀತಿ ಕದನ ಕಲಿಯಾಗಿರಬೇಕೆ"ಂದು ಹಮಿಂದನು ಹೆಮ್ಮೆಯಿಂದ ತನ್ನ ಹುಡುಗನಿಗೆ ಹೇಳಿದನು.

ಹುಡುಗನ ವಿದ್ಯಾಭ್ಯಾಸದಲ್ಲಿ ಇದೂ ಒಂದು ಅಂಶ, ಹೇಗೆ ಕದನ ನಡೆಯುವದೆಂಬುದನ್ನು ಮಾತ್ರ ಮಗನಿಗೆ ಹೇಳಿಕೊಟ್ಟರೆ ಸಾಲದು; ಧೈರ್ಯ ತುಂಬಿಸುವಂತಹ ಹಾಗೂ ವಿಜಯದಲ್ಲಿ ವಿಶ್ವಾಸವನ್ನುಂಮಾಡುವಂತಹ ಕದನ ಕಥೆಗಳನ್ನೂ ಹೇಳಿಕೊಡಬೇಕು.

"ಅದರೆ ಅದಕ್ಕೆ ಒಂದೇ ಒಂದು ಅಪವಾದ ಇದೆ. ಅದು ಜಂಜಣ್ಯಾಲಿ."

'ಜಂಜನ್ಯಾಲಿ! ಅದು ಜೈಸಲ್ಮೇರಿನಲ್ಲಿರುವ ಒಂದು ಹಳ್ಳಿ ಅಲ್ಲಿ ವಾಸಿಸಿರುವವರು ಭಾಟಿ ರಜಪೂತರು. ಅವರು ಅಜೇಯರೇ ಆಗುದು. ಹಮಿಂದನಾದರೋ ಹಲವಾರು ಬಾರಿ ಅವರ ಮೇಲೆ ಹಲ್ಲೆ ನಡಿಸಿರುವನಾದರೂ ಒಮ್ಮೆ ಕೂಡಾ ವಿಜಯ ವೈಜಯಂತಿಯನ್ನು ಹಾರಿಸಲು ಅವನಿಂದಾಗಿರಲಿಲ್ಲ.

"ಈ ಒಂದು ಹಳ್ಳಿಯ ವಿಷಯದಲ್ಲಿ ಅತ್ಯಂತ ಹುಷಾರಾಗಿರಬೇಕು, ಹೈದ. ನಿನ್ನ ಸಾಮರ್ಥ್ಯದ ಮೇಲೆ ನಿನಗೆ ಇನ್ನಷ್ಟೂ ವಿಶ್ವಾಸ ಇದ್ದಲ್ಲ ಮಾತ್ರ ಆ ಹಳ್ಳಿಯ ಮೇಲೆ ಹಲ್ಲೆ ನಡೆಸಬೇಕು. ಅಲ್ಲಿಯ ಕಾಫಿರರು ಪಿಶಾಚಿಗಳ ವಂಶಜರೇ ಇದ್ದಾರೆ"ಂದು ಹಮಿಂದನು ತನ್ನ ಹುಡುಗನಿಗೆ ಎಚ್ಚರಿಕೆಯನ್ನಿತ್ತನು.

ಅವರ ಸಂಭಾಷಣೆಯನ್ನು ಹೊಂಚು ಹಾಕಿ ಹೆಂಡಸೊಬ್ಬಳು ಕಿವಿಗೊಟ್ಟು ಕೇಳುತ್ತಿದ್ದಳು. ಅವಳು ಹಮಿಂದನನ್ನು ಹಡೆದವ್ವೆ. ಹಮಿಂದನ ಮಾತಿನ ಕೊನೆಯ ಪದಗಳನ್ನು ಕೇಳಿದೊಡನೆ ಆಕೆಯ ಕಣ್ಣುಗಳು ಲೋಡದಿಂದ ತುಂಬಿದವು. ಜಂಜನ್ಯಾಲಿಯ ಭಾಟಿ ರಜಪೂತರು ಅಜೇಯರೆಂಬುದನ್ನು ಒಪ್ಪಿಕೊಳ್ಳಲು ಆಕೆ ಸಿದ್ಧಳಿಲ್ಲ.

"ಹೋಗು, ವಿಜಯ ವೈಜಯಂತಿಯನ್ನು ಹಾರಿಸಿ ಬಾ"—ಹಲವಾರು ಬಾರಿ ಆಕೆ ಹಮಿಂದನಿಗೆ ಆಜ್ಞೆ ಇತ್ತಿದ್ದಳು, ಪ್ರತೀ ಸಲವೂ ಹಮಿಂದನು ಹೋಗುತ್ತಿದ್ದನು, ಹಾಗೆಯೇ ಬರುತ್ತಿದ್ದನಾದರೂ, ವಿಜಯ ವೈಜಯಂತಿಯನ್ನು ಹಾರಿಸಲು ಹಮಿಂದನಿಗೆ ಸಾಧ್ಯವಾಗಿರಲಿಲ್ಲ. ಅವನು ಅಪಜಯವನ್ನು ಅನುಸರಿಸಿಕೊಂಡು ಹಿಂತಿರುಗುತ್ತಿದ್ದನು.

ಹೆಣ್ಣಿನ ಹೃದಯದಲ್ಲಿ ಹಗೆಯು ಹೂಗೆ ಗುಮ್ಮಗುಮ್ಮಿಸುತ್ತಿತ್ತು. ಅದಕ್ಕಾಗಿ ಗಾಳಿ ಬೀಸಿತ.

'ಥೂ! ನಿನ್ನ ಹಾಳು ಮುಖಕ್ಕೆ —ಹಮಿಂದ್ ಹಲವಾರು ಬಾರಿ ಜಂಜನ್ಯಾಲಿಯ ಜವಾಹರ್ ಸಿಂಘನಿಂದ ಮುಖಕ್ಕೆ ಮಂಗಳಾರತಿ ಮಾಡಿಸಿಕೊಂಡು ನೀನು ಬಂದಿರುವದು ಮಾತ್ರವಲ್ಲದೆ, ಇನ್ನೆಂದಿಗೂ ಅವನನ್ನು ಹುಡುಗಟ್ಟಲು ಸಾಧ್ಯವಿಲ್ಲವೆಂಬುದನ್ನು ಒಪ್ಪಿಕೊಂಡಂತೆ ಕಾಣುತ್ತದೆ ನಿಮ್ಮ ಭಾಟಿಗಳಾದರೋ....' ಹಮಿಂದನ ಹಡೆದವ್ವೆ ಕಿಡಿಕಿಡಿಯಾಗಿ ಕೂಗಾಡಿದಳು.

'ಮತ್ತೆ, ನಾನೇನು ಮಾಡಬೇಕೆನ್ನುತ್ತಿಯಾಮ್ಮಾ?" ಹಮಿಂದನು ಹುಬ್ಬುಗಂಟಿಕ್ಕಿಕೊಂಡು ಗುಡುಗು ಗುಟ್ಟಿದನು.

'ಮಾಡುವದು, ಮತ್ತಿನ್ನೇನನ್ನು? ನಿನ್ನ ಮಗನಿಗೆ ಸೋಲಿನ ಪರಿಪ್ರಶ್ನಾಮಾದ ಪಠಯ ಮಾಡಿಕೊಡುವ ಮುಂಚೆ, ಇನ್ನೊಮ್ಮೆ ದಂಡೆತ್ತಿಹೋಗಿ ಬರಬೇಕು. ಆದನ್ನು ಬಿಟ್ಟು, ನೀನು ಭಾಟಿಗಳ ಮೇಲೆ ನಡೆಯೆತ್ತಿಕೊಂಡು ಇನ್ನೆಂದಿಗೂ ಹೋಗುವದಿಲ್ಲವೆಂದಾದಲ್ಲಿ, ಸರಿ. ನಾನು ನಿನ್ನೊಂದಿಗೆ ಇರುವದೂ ಇಲ್ಲ, ನಿನ್ನ ಉಪ್ಪನ್ನು ತಿನ್ನಲಾರೆನೆಂ'ದು ಸ್ಪಷ್ಟವಾಗಿ ಹಮಿಂದನ ಹಡೆದಾಕೆ ಹೇಳಿದಳು.

ಶುಟಿ ಎರಡು ವಾರದೆ ಹಮಿಂದನು ಹಲ್ಲೆ ನಡೆಸಿದನು—ಮತ್ತೆ—ಅದೇ ಅನುಭವ—ಸೋತು ಹೋದನು. ಹಿಂತಿರುಗಿದನು.

ರಾತ್ರಿ ಒಲೆಯ ಹತ್ತಿರ ಹಮಿಂದನೂ ಅವನ ಅಮ್ಮ ಹಾಗೂ ಇತರರೂ ಕುಳಿತುಕೊಂಡು ಊಟ ಮಾಡುತ್ತಿದ್ದರು. ಆಗ ಸ್ತ್ರೀಯ ಸ್ವರ ಕೇಳಿ ಬಂತು.

ತಾತ್ಸಾರದಿಂದ ತಾಯಿ ಬುಸು ಗುಟ್ಟಿದಳು—'ವಿಜಯೀ ವೀರರ ವಂಶಜದಲ್ಲಿ ನಿನ್ನನ್ನು ಹೆತ್ತ ದಿನ ಅದೆಂತಹ ದುರ್ದಿನವೋ!"

ಹಮಿಂದನು ಉಸಿರೆತ್ತದೆ ಉಣ್ಣುತ್ತಿದ್ದನು. ಅವನ ಹೃದಯ ಭಾರವಾಗಿತ್ತು. ಅವನು ನುಂಗುತ್ತಿದ್ದ ಪ್ರತಿಯೊಂದು ತುತ್ತಿನೊಂದಿಗೂ ತನ್ನ ತಾಯಿಯು ತಾತ್ಸಾರಪೂರ್ಣ ಮಾತುಗಳನ್ನೂ ನುಂಗುತ್ತಿದ್ದನು.

ಅಪವಾನದ ಅಂಗಣದಲ್ಲಿ ಅದಕ್ಕಿಂತ ಹೆಚ್ಚು ಸ್ಥಳವಿರಲಿಲ್ಲ. ಅವನು ಒಡನೆ ಧಗಧಗಿಸುತ್ತಿದ್ದ ಒಲೆಯಲ್ಲಿ ಜಮಖಾಯನ್ನು ಹಾಕಿ ಕೆಂಗೆಂಡವನ್ನು ತೆಗೆದು ತಾಯಿಯು ತೊಡೆಯ ಮೇಲೆ ಹಾಕಿ ಬಿಟ್ಟನು!

'ಹಾಯ್!'

ಸುಟ್ಟ ಮಾಂಸದ ಕೆಟ್ಟ ವಾಸನೆ ಹೆ

ಚ್ಚಿತು. ಹವಿೂದನ ಹೆತ್ತಾಕೆ ನೋವಿನಿಂದ ಚೀರಿದಳು.

"ನಿನ್ನನ್ನು ಹೆತ್ತದ್ದಕ್ಕೆ ಪರಿಪೂರ್ಣ ಶಿಕ್ಷೆಯನ್ನಿಂದು ನೀನು ಇತ್ತೆ."

"ಅಲ್ಲಿ, ಅಮ್ಮಾ" ನೇದನಾಥರಿತ್ತ ಮಾತೆಯ ಮುಖವನ್ನು ನೋಡುತ್ತ ಹೆಣ್ಣಾದಷ್ಟು ಹೇಳಿದನು. "ಅಮ್ಮಾ! ಒಂದೇ ಒಂದು ಕೆಂಡ! ಆದರೆ ನೋವಿನಿಂದ ಕಂಗೆಟ್ಟ ಸೂತೆದು ಮುಖವನ್ನು ನೋಡಲು ಸಾಧ್ಯವಾಗುವದಿಲ್ಲವೆಂದಾದಲ್ಲಿ, ಸಹನಾರು ಮಾತೆಯರು ನಗುನಗುತ್ತ, ಜಿಜ್ಞಾಲೆಯಲ್ಲಿ ಜಿಗಿದುವದನ್ನು ಕಂಡಾಲು ಸಾಧ್ಯವೇನವ್ಮಾ?"

ಹವಿೂದನ ತಾಯಿ ತನ್ನ ಮಗನ ಮುಖವನ್ನೇ ನೋಡಿದಳು. ಆಗ ಆವಳಿಗೆ ಅದರ ಅರಿವಾಯಿ ತು.

ಇದು ಶ್ರೀ ರಘನಾಥಸಿಂಘರು ವರ್ಣಿಸಿರುವ ಕಥೆ.

ಜಂಜನ್ಯಾಲಿಯಲ್ಲಿ ಹಲವಾರು ಮಾತೆಯರು ಜೋಹಾರ ನಡೆಸಿದಾಗ ಆ ನೋವಿನ ಅನುಭವ ಹವಿೂದನ ಹೆತ್ತಾಕೆಗೆ ಆಗಿರಲಿಲ್ಲ. ಆದರೆ ಒಂದೇ ಒಂದು ಉರಿಗೆಂಡವು ಆಕೆಗೆ ಆದರ ಅನುಭವವನ್ನು ಉಂಟುಮಾಡಿಕೊಟ್ಟಿತು. ಕಾಂಗ್ರೆಸ್ಸಿನ ಗತಿಯೂ ಅದೇ. ಇಷ್ಟು ದಿನಗಳ ವರೆಗೆ ಕಾಂಗ್ರೆಸ್ಸಿನ ಅಧ್ಯಕ್ಷರು ನೇರವಾಗಿಯೇ, ಒಳಗಿಂದೊಳಗೆಯೇ ಹಮ್ಮು ಪಕ್ಷಪಾತ ಸದಸ್ಯರ ಬಳ—ಹೋಗಿರಿ, ವಿಧಾನ ಪರಾಗೂ ಲೋಕ ಸಭೆಯಲ್ಲಿರುವ ಕಾಂಗ್ರೆಸ್ಸೇತರ ಸದಸ್ಯರ ತಲೆಯ ಮೇಲೆ ಬಿಳಿ ಟೊಪ್ಪಿಯನ್ನಿಡಿರೆಂದು ಹೇಳುತ್ತಿದ್ದರು. ಕಾಂಗ್ರೆಸ್ಸೇತರ ಮುಖಂಡರಿಗೆ ಅದೆಂತಹ ನೋವಾಗುತ್ತದೆಂಬುದರ ಅರಿವು ಅವರಿಗಾಗಿರಲಿಲ್ಲ. ಅಜ್ಜೇ ಅಲ್ಲ, ರಾಮನಾಥ ಪುರಂ ಮತ್ತು ಬನಾರ್ಸಿನಲ್ಲಿ ಪೈಶಾಚಿಕ ಪೀಡೆ ನಡೆಸಲೂ ಅವರು ಹಿಂಜರಿಯಲಿಲ್ಲ.

ರಾಜಕೀಯ ಪಕ್ಷಗಳ ಪ್ರಮುಖರು ಕಲೆತು ಒಂದು ನಿರ್ಣಯಕ್ಕೆ ಬಂದಿದ್ದರು—ಅನ್ಯ ಪಕ್ಷಗಳ ಅನುಮತಿ ಮೇರೆಗೆ ಚುನಾವಣೆಯಲ್ಲಿ ನಿಂತು ಗೆದ್ದು ಬಂದವರನ್ನು ಇತರರು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಬಾರದೆಂದು. ಆದರೆ ಇದನ್ನು ಗಾಳಿಗೆ ತೂರಿಬಿಟ್ಟವರಲ್ಲಿ ಅಗ್ರಗಣ್ಯರೆಂದರೆ ಕಾಂಗ್ರೆಸ್ಸಿಗರೇ. ಆ ಅಧಿವೇಶನವನ್ನು ಬಡಲು ಅವರಿಗೆ ಸಾಧ್ಯವಾಗಿರುವದಿಲ್ಲ. ಈ ಸಲವೂ ಅಷ್ಟೇ. ಬಂಗಾಲದಲ್ಲಿ ಪ್ರಭುತ್ವವು ಬಾರಿ ಅಲ್ಲಿನ ವಿಧಾನ ಸಭೆಗೆ ಭಾರತೀಯ ಜನ ಸಂಘದ ಹೆಸರಿನಲ್ಲಿ ಒಬ್ಬರು ಗೆದ್ದು ಬಂದಿದ್ದರು. ಅದರ ಒಂದುಗಡೆಯೇ ಇನ್ನೊಂದು ಸಮೂಹದ ಸದಸ್ಯರು ಹಬ್ಬಿತು—ಅವರು ಕಾಂಗ್ರೆಸ್ಸಿಗೆ ಸೇರಿದರೆಂದು. ತಾನು ಕಾಂಗ್ರೆಸ್ಸಿಗೆ ಸೇರಿರುವದಿಲ್ಲವೆಂದು ಒಡನೆ ಅವರು ಇನ್ನೊಂದು ಸುದ್ದಿಯನ್ನು ಹಬ್ಬಿಸಿ ಬಿಟ್ಟರು.

ಮಿಶ್ರರ ಮನ್ಮಥ್ಪಗೀಶದಲ್ಲೇ ನಡೆದ ಒಂದು ಘಟನೆ. ಗಿರಿವಾಸಿ ಜನರ ಮತಗಳಿಂದ ಭಾರತೀಯ ಜನಸಂಘದ ಹೆಸರಿನ ಮೇಲೆ ವಿಧಾನ ಸಭೆಗೆ ಚುನಾಯಿತರಾಗಿದ್ದ ಸದಸ್ಯರಿಬ್ಬರು ಕಾಂಗ್ರೆಸ್ಸಿಗೆ ಸೇರಿರುವರೆಂಬ ಸುದ್ದಿ ಹರಡಿತು. ಅವರಿಗೆ ಓದು ಬರಹ ಬರುವದಿಲ್ಲ. ಅವರ ಬಳ ಆದೇನೇನೋ ಹೇಳಿ ಕಾಂಗ್ರೆಸ್ಸು ಖದೀಮರು ಕಾಗದದ ಮೇಲೆ ಹಸ್ತಾಕ್ಷರ ತೆಗೆದುಕೊಂಡಿದ್ದರು. (ಹಸ್ತಾಕ್ಷರ ಹಾಕಲು ಮಾತ್ರ ಅವರು ಅಭ್ಯಾಸ ಮಾಡಿಕೊಂಡಿದ್ದರೆಂದು ಕಾಣುತ್ತದೆ.) ತಮಗೆ ಕಾಂಗ್ರೆಸ್ಸಿಗರು ಈ ರೀತಿ ಮೋಸಮಾಡಿದರೆಂದು ಅವರು ವಿಧಾನಸಭೆಯಲ್ಲೇ ಹೇಳಿಬಿಟ್ಟರು. ಇಂತಹ ಘಟನೆಗಳು ನಡೆದಾಗಲೂ ಮಿಶ್ರರು ಅದಕ್ಕೆ ಎದುರಾಡಿರಲಿಲ್ಲ. ಅವರೇ ಹಿಂದೊಮ್ಮೆ ಹಲ್ಲಿಹೊಡೆದಿದ್ದವರು ತಾನೇ? ಇಂದು ಮಾತ್ರ ಜಗಜಟ್ಟಿಯಂತೆ ಸವಾಲು ಕೊಡುತ್ತಿದ್ದಾರೆ—ಕಾಂಗ್ರೆಸ್ಸಿನಿಂದ ಶಾಲ್ತೆಗೆದ ಸದಸ್ಯರನ್ನು ಜನತೆಯೆದುರು ನಿಲ್ಲಿಸಬಿದ್ದಲ್ಲಿ "ನನ್ನ ಹೆಸರು ಮಿಶ್ರ ಅಲ್ಲ". ಆವರ ಹೆಸರು ಮಿಶ್ರ ಹೌದೋ, ಅಲ್ಲವೋ, ಅವರ ಹೆಸರಿನಲ್ಲಿ ಮಿಶ್ರ ಇದೆ. ಆದುದರಿಂದಲೂ ಅವರನ್ನು ಜನರು ಶ್ರೀ ದ್ವಾರಕ ಪ್ರಸಾದ ಮಿಶ್ರರೆಂದು ಕರೆಯುತ್ತಿದ್ದಲ್ಲಿ ಇನ್ನು ಮುಂದೆ ಮಿಶ್ಟರ್ ಕಾಂಗ್ರೆಸ್ಸ್ ಪ್ರಸಾದ ಮಿಶ್ರರೆಂದು ಕರೆದೀತು! ಇವರ ಪಾಲಿಗೆ ಕಾಂಗ್ರೆಸ್ಸೆಂದರೆ ಒಂದೇ ಬದಿಯಲ್ಲಿ ತೆರೆದಿರುವ ಮೋರ್ಗ ಇದೆ. ಅಲ್ಲಿ ಬರಲಿಕ್ಕೆ ಮಾತ್ರ ಪ್ರವೇಶದ್ವಾರ ಇದೆ; ಹೊರ ಹೋಗಲಿಕ್ಕೆ ಇಲ್ಲ!

ಮಿಶ್ರರ ಮಾತುಗಳನ್ನು ಕೇಳಿಕೊಂಡು ಕಾಮರಾಜರು ಡಿಲ್ಲಿಯಲ್ಲಿ ಬೀಡು ಬಿಟ್ಟಿ ಕೊಂಡಿದ್ದಾರೆ. ಆದರೆ ಅವರು ಮಾತ್ರ ಆದೇನನ್ನು ಆಡುವದಿಲ್ಲ. ಆಡುವದಾದರೂ ಹೇಗೆ? ಕಾಂಗ್ರೆಸ್ಸು ಇರುವದು ಮಧ್ಯ ಪ್ರದೇಶದಲ್ಲಿ ಮಾತ್ರವಲ್ಲ. ಉತ್ತರ ಪ್ರದೇಶದಲ್ಲಿ ಏನು ನಡೆದಿದೆಯೆಂಬುದು ಅವರಿಗೆ ಗೊತ್ತು. ಭಾರತೀಯ ಜನ ಸಂಘದ ಹೆಸರಿನ ಮೇಲೆ ಚುನಾಯಿಸಲ್ಪಟ್ಟಿರುವ ಸದಸ್ಯರುಗಳು ಆ ಪಕ್ಷದ ಕಟ್ಟು ನಿಟ್ಟಿನಿಂದ ಹೊರ ಹೋಗುವವರಲ್ಲಲೆಂಬ ಮಾತು ಬೇಳೆ ಬರುತ್ತಿದ್ದ ದಿನವಿತ್ತು. ಅಂತಹ ಬಿಗಿ ಪಕ್ಷದ ದೊಡ್ಡ ದೊಡ್ಡ ಕುಳಗಳೇ ಇಂದು ಕಾಂಗ್ರೆಸ್ಸಿನ ಹೋರಿಗಳ ಬಾಲ ಹಿಡಿಯುತ್ತಿದ್ದಾರೆ. ತಿರು ಕಾಮರಾಜರು ಇದು ತಮ್ಮ ಪಕ್ಷದ ಪ್ರಭಾವವೆನ್ನುತ್ತಿದ್ದಾರೆ.

ರಾಜಸ್ಥಾನದ ರಾಜಕೀಯದಾಳ ಇನ್ನು ಮರೆತಿರಲಿಕ್ಕಿಲ್ಲ. ಚುನಾವಣೆಯು ಫಲಿತಾಂಶ ಪ್ರಕಟವಾದಾಗ ಮಂತ್ರಿ ಮಂಡಲ ರಚಿಸಲು ಅದ್ಯಾವ ಪಕ್ಷಕ್ಕು ಲರ್ಧ ಕ್ಕಿಂತ ಅಧಿಕ ಸ್ಥಾನಗಳು ಸಿಕ್ಕಿರಲಿಲ್ಲ. ಆಕ್ಷ ನೂರೆಂಭತ್ತನಾಲ್ಕು ಸ್ಥಾನಗಳಿದ್ದು ಕಾಂಗ್ರೆಸ್ಸು ಹಡೆದದ್ದು ಎಂಭತ್ತೆಂಟು ಸ್ಥಾನಗಳನ್ನ. ಆಗ ಎದುರು ಪಕ್ಷಗಳವರು ಕಲೆತು ರಾಣಿ ಗಾಯತ್ರಿ ದೇವಿಯವರ ಹಿಂದುಗಡೆ ದಿಲ್ಲಿಗೂ ಹೋದರು. ಏನು ಫಲ! ಸುಖಾಏಯಿರವರು ಸ್ವಮುಖವಾಗಿ ಕಾಂಗ್ರೆಸ್ಸು ಮಂತ್ರಿ ಮಂಡಲವನ್ನು ರಚಿಸಿಯೇ ಬಿಟ್ಟರು. ಇಂದು ಅಲ್ಲಿ ಕಾಂಗ್ರೆಸ್ಸಿನ ಬಲ ನೂರೈದು. ಕಾಂಗ್ರೆಸ್ಸಿನಿಂದ ಒಬ್ಬರು ಹೆಚ್ಚಾರಿಗೆ ಹೋಗಿದ್ದಾರೆ. ಇದರಿಂದ ಕಾಂಗ್ರೆಸ್ಸಿಗೆ ಹಡಿನೆಂಟು ಮಂದಿ ಸೇರಿದ್ದಾರೆಂಬುದು ಸ್ಪಷ್ಟವಾಗಿತ್ತದೆ. ಇದನ್ನೇತಕ್ಕೆ ತಿರು ಕಾಮರಾಜರು ಎದುರಿಸಲಿಲ್ಲ? ಇವರನ್ನೇತಕ್ಕೆ ಜನತೆಯೆದುರು ನಿಲ್ಲಿಸಿಬಾರದು?

ರಾಜಕೀಯವೆಂದರೆ ಒಂದು ಭಾರೀ ವ್ಯಾಪಾರವಾಗಿ ಬಿಟ್ಟಿದೆ. ತಮಗೆ ಲಾಭ ಬರುವ ವರೆಗೆ ಆ ಪಕ್ಷದವರು ಬುಟಿಪಿಟ ಕೈನ್ನು ಹೊದಿಲ್ಲ. ನಷ್ಟ ಆಯಿತೆಂದರೆ ಒಡನೆ ಅವರ ಅರ್ಥಬಲ್ಕಾಂಭವಾಗಿ ಬಿಡುತ್ತದೆ. ತಮ್ಮಂಥ ನ್ಯಾಯ ನಿಷ್ಠರು ಇದುವರೆಗೂ ಹುಟ್ಟಿಯೇ ಇಲ್ಲವೆಂಬಂತೆ ತಿರು ಕಾಮರಾಜ ಹಾಗೂ ಶ್ರೀ ವಿಶ್ರರವರು ಇಂದು ಅದೇ ಆಟವನ್ನಾಡುತ್ತಿದ್ದಾರೆ. ಇಂದು ಸ್ಥಳಾಂತರದ ಈ ಆಟ ಪ್ರಜಾಪ್ರಭುತ್ವದ ಪರಿಹಾರ್ಯವೆಂದು ಗಂಟಲು ಹರಿದು ಹೋಗುವಂತೆ ಕೂಗುವ ಕಾಂಗ್ರೆಸ್ಸು ಮೊದಲು ತಮ್ಮ ಬಾಗಿಲನ್ನು ಸುಪಡಿಸಿಕೊಳ್ಳಬೇಕು. ಆ ಬಾಗಿಲಿನ ಮೂಲಕ ಒಳಗೆ ಬರುವ ಅನ್ಯ ಪಕ್ಷದವರಿಗೂ ಧಿಕ್ಕಾರವೆನ್ನಬೇಕು. ಅವರು ಆ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ಕಾಂಗ್ರೆಸ್ಸಿನ ಹೆಸರಿನಲ್ಲಿ ಚುನಾವಣೆಗೆ ನಿಂತು ಬರಬೇಕು. ಆಗ ಮಾತ್ರ ತನ್ನ ಪಕ್ಷದವರು ಹೊರ ಹೋಗುವದು ತಪ್ಪೆಂದು ಅವರು ಹೇಳಬಹುದು. ಅದನ್ನು ಬಿಟ್ಟು ಕಾಂಗ್ರೆಸ್ಸಿನ ಈ ಅತಿರಥ ಮಹಾರಥರು ತಮ್ಮ ಹೋರಿಗಳಿಗೆ ಮಾತ್ರ ನಾಲ್ಕು ಕಾಲೆಂದು ಹಾರಾಡುತ್ತ ಬಾದಲ್ಲಿ ಇತರರು ಸುಮ್ಮನಿರಲಿಕ್ಕಿಲ್ಲ. ತಮ್ಮ ಪ್ರಧಾನವಿಂದಿಗೆ ಶ್ರೀ ವಿಶ್ರರು ವಿಂಧ್ಯಪ್ರದೇಶದಲ್ಲಿ ಮಾಡಿದ ಚುನಾವಣೆಗೆ ದಾರಿ ಮೂಡಬಹುದು. ಆದರೆ ಪ್ರತಿಕ್ರಿಯೆ ಮಧ್ಯಪ್ರದೇಶಕ್ಕೆ ಮಾತ್ರ ಸೀಮಿತವಾಗಿಳಿಯಲಾರದು. ಬೆಕ್ಕಿನ ತಲೆಯ ಮೇಲೆ ಹಣತೆ ಇಟ್ಟಿರುವ ಎಲ್ಲಾ ರಾಜ್ಯಗಳಲ್ಲೂ ಹಾಂಗೆ ಆಗಬಹುದು. ಅಷ್ಟೇ ಅಲ್ಲ, ಲೋಕ ಸಭೆಯಲ್ಲೂ ಹಾಗಾಗದಿರಲಿ ಆಶ್ಚರ್ಯವೇನಿಲ್ಲ.

ಮಧ್ಯಪ್ರದೇಶದ ಆಟ ಶುರಿಗೆನೇ ನಿಲ್ಲ ವಂತಹದಲ್ಲ ಎದುರು ಪಕ್ಷಗಳು ನಡೆಸಿರುವ ಪ್ರಯತ್ನಗಳೇ ಶ್ರೀ ವಿಶ್ರರು ನಾಳೆ ಆಡಬಹುದು. ಆಗ ಪುನಃ ಕಾಂಗ್ರೆಸ್ಸು ಮಂತ್ರಿಮಂಡಲವೇ ಬರಬಹುದು. ಇದನ್ನು ತಿರುಕಾಮರಾಜರು ತಪ್ಪೆನ್ನುವದೇ ಇಲ್ಲ. ಆಗ ಅವರಿಗೆ ಅವಿತ ಆನಂದವಾದೀತು.

ಕೋಣವ ನೋಟ್ಟ ರಾಗಿಗ ಗೊರ್ತಾಗುವದಾದರೂ ಹೇಗೆ?

ಶ್ರೀ ಸತ್ಯಸಾಯಿ ಬಾಬರ ವ್ಯಾಖ್ಯೆ

ಶೀಲದ ಮಹತ್ವ

ಹಿಂದಿನ ಎಲ್ಲಾ ಯುಗಗಳಿಗಿಂತಲೂ ಈ ಕಲಿಯುಗದಲ್ಲಿ "ವಿವೇಕ"ವನ್ನು ಸಂಪಾದಿಸಲು ಮಾನವನಿಗೆ ಬೇಕಾದಷ್ಟು ಸಾಧನಗಳಿವೆ. ನಿಮಗೆ ಶಿಕ್ಷಣ ಬೇಕೋ? ಶಾಲೆಗಳಿಗೆ— ವಿದ್ಯಾಸಂಸ್ಥೆಗಳಿಗೇನೂ ಕೊರತೆಯಿಲ್ಲ. ನಿಮಗೆ ದುಡ್ಡು ಗಳಿಸಲು ಬೇಕೋ? ಗಾರವದಿಂದ ಧನಾರ್ಜನೆ ಮಾಡಲು ಬೇಕಾದಷ್ಟು ಮಾರ್ಗಗಳಿವೆ. ಹೀಗಿದ್ದರೂ ಮಾನವರ ಸುಖದಲ್ಲಿ-ಶಾಂತಿಯಲ್ಲಿ ಹೆಚ್ಚಳ ಕಂಡು ಬರುತ್ತಿಲ್ಲವಲ್ಲ? ಮುಂಚಿನ ಯುಗಗಳಿಗಿಂತಲೂ ಈ ಯುಗದಲ್ಲಿ ಹೆಚ್ಚು ದುಃಖವೇ ಕಂಡು ಬರುತ್ತಿದೆ.

ಇದಕ್ಕೆ ಕಾರಣವೇನು? ಮಾನವನ ನಡತೆಯಲ್ಲಿ—ಜೀವನ ರೀತಿಯಲ್ಲಿ ಇದರ ಕಾರಣ ಸಿಕ್ಕುತ್ತದೆ. ವಿಕಾಸಕ್ರಮದಲ್ಲಿ ಮಾನವ ಜೀವಿತ ನಿಜವಾಗಿಯೂ ಉತ್ಕೃಷ್ಟ; ಅದಕ್ಕೆ ಆ ಉಚ್ಚ ಮೌಲ್ಯವುಂಟಾ

ಗಬೇಕಾದಲ್ಲಿ ಪರಮೋದ್ದೇಶ ದಾರಿಯೆಳ್ಳಿದುದಿತ, ಶುದ್ಧತೆ— ಪವಿತ್ರತೆಗಳನ್ನು ದೊರಕಿಸಿಕೊಡುವ ದುರಿತ ಬೇಕು. ಈ ತೆರನ ಜೀವನದ ಶೀಲ ಉಳಿಯಬೇಕಾದ ವಸ್ತು. ಶೀಲ ಜೀವನವನ್ನು ಒಮರಿಗೊಳಿಸುವುದ, ಸಾವಿನ ತರುವಾಯವೂ ಆ ದು ಜೀವಿಸುವುದು. ಕೆಲವರು ಜ್ಞಾನವೇ ಬಲವೆನ್ನುವರು; ಆದರೆ ಅದು ಸತ್ಯವಲ್ಲ. ಶೀಲವೇ ಬಲ. ಜ್ಞಾನಾರ್ಜನೆಗೂ ಶೀಲವೇ ಬೇಕಾಗುತ್ತದೆ. ಅತೆಯೇ ಪ್ರತಿಯೊಬ್ಬರೂ ನಿರ್ಮಲ—ಪಾಪ ರಹಿತ ಶೀಲವನ್ನು ಪಡೆಯಲು ಪ್ರಯತ್ನಿಸಬೇಕು.

ಬಬ್ಬ—ಶ್ರೇಷ್ಠ ವಿಚಾರವಂತರಾದ ಮಾನವರು, ಋಷಿ—ಮಹರ್ಷಿಗಳು—ಸಾಧು ಸಂತರು, ಧಾರ್ಮಿಕ ಪೀಠೋಪಾಧಿಗಳು ಮಾನವರ ಸ್ಮೃತಿಪಟಲದಲ್ಲಿ ಚಿರ್ಜೀವಿಯಾಗಿ ಉಳಿದಿರುವರು ಯಾವ ಸದ್ಗುಣವು ಚಿರಂತಾಲಿಕ ಕೀರ್ತಿಗಾಗಿ ಇವರ ಶೀಲವಂತಿಕೆ ಎಂದು ನಾನು ನ್ನುವೆ.

ಶೀಲವಿಲ್ಲದ ಧನ, ಶಿಕ್ಷಣ, ಸಾಮಾಜಿಕ ಸ್ಥಾನಮಾನ ಇವೆಲ್ಲ ವ್ಯರ್ಥ. ಈ ಸುಸಂಸ್ಕೃತ ಸುಗಂಧದಂತೆ ಇವೆಲ್ಲವುಗಳಿಗೆ ಶೀಲವೆ ಬೆಲೆ ತಂದುಕೊಡುವುದು. ಕವಿಗಳು, ಚಿತ್ರಕಾರರೆ, ಕಲಾವಿದರು, ವೈಜ್ಞಾನಿಕರು ತಂತಮ್ಮ ಕ್ಷೇತ್ರದಲ್ಲಿ ದೊಡ್ಡವರಿರಬಹುದು; ಆದರೆ ಶೀಲವಿಲ್ಲದಿದ್ದರೆ ಅವರಿಗೆ ಸಮಾಜದಲ್ಲಿ ಪ್ರತಿಷ್ಠೆಯಿಲ್ಲ.

ಈಗ ಸಮಾಜದಲ್ಲಿ ಮಾನ—ಸನ್ಮಾನ ಹೊಂದಿದವರು, ನಿಜವಾದ ದೊಡ್ಡಸ್ಥಿಕೆಗೆ ಬೇಕಾಗುವ ಶೀಲವನ್ನು ಪಡೆದಿರುವರೆ? ಆದರೆ ನಾನು ಕಣ್ಣಿದುರಿನಲ್ಲಿಟ್ಟುಕೊಂಡಿರುವ ಸಮಾಜ ಮತ್ತು ಶೀಲಗಳು, ಕೆಲವೊಂದು ಶಾಶ್ವತ ಮೌಲ್ಯಗಳಿಗೆ ಅಂಟಿಕೊಂಡಿರುವವು. ಸಾಮಾನ್ಯವಾಗಿ ಸಮಾಜವು ಮನ್ನಿಸುವ ಮೌಲ್ಯಗಳಲ್ಲಿ ದಿನದಿನಕ್ಕೂ ಏರುಪೇರು ನಡೆದಿರುತ್ತವೆ. ಸಮಾಜದ ಬಹಿರಂಗವನ್ನುಣಾಣವಾಗಿ ಫ್ಯಾಶನ್ನುಗಳು ಬದಲಾವಣೆ ಹೊಂದುತ್ತವೆ. ಆದರೆ ನಿಷ್ಕಲಂಕ ಶೀಲದ ಮೂಲ ಪ್ರಕೃತಿ ಎಂದೆಂದಿಗೂ ಒಂದೇ ತೆರನಾಗಿರುತ್ತದೆ. ಸಮಾಜದ ಸ್ಥಿತ್ಯಂತರಗಳು, ಏಳು ಬೀಳುಗಳು ಆದರಲ್ಲಿ ಹೆಚ್ಚುತಡಿಮೆ ಮಾಡುವುದಿಲ್ಲ.

ಈ ಅರ್ಥದಲ್ಲಿ ಶೀಲವು ಅಜರಾಮರವಾಗಿದೆ. ಏಕೆಂದರೆ ಆತ್ಮರಾಮರ ಆತ್ಮ ನೊಡನೆ ಅದು ಹೊಂದಿಕೊಂಡಿರುತ್ತದೆ.

ನಿರ್ಮಲ ಶೀಲ ನಿರ್ಮಾಣಕ್ಕೆ ಬೇಕಾಗುವ ಸದ್ಗುಣಗಳಲ್ಲಿ ಪ್ರೇಮ, ಪ್ರೀತಿ ಸಹನೆ, ವೈರ್ಯ, ಪರಿಪೂರ್ತಿ, ಇವು ಶ್ರೇಷ್ಠತಮವಾದುವು. ಇವು ಮೂಡಬೇಯವಾವವು.

ನಾವು ಪ್ರತಿ ದಿನವೂ ನೂರಾರು ಕೆಡಕು ಕಣ್ಣು-ಪುಟ್ಟ ಬೃತಗಳ ರೂಢಿಗಳಾಗಿ ಹುಟ್ಟುಮಾಡುತ್ತವೆ. ಈ ರೂಢಿಗಳು (ಹವ್ಯಾಸಗಳು) ನಮ್ಮ ಬುದ್ಧಿ ಮತ್ತೆಯನ್ನು ರೂಪಿಸುತ್ತವೆ. ನಮ್ಮ ದೃಷ್ಟಿಕೋನ—ಜೀವನಗಳು ಅಕಾರ

(ಉಳಿದದ್ದು ಮುಂದಿನ ಸಂಚಿಕೆಯಲ್ಲಿ)

ಇತಿಹಾಸ ಸೃಷ್ಟಿ

ಸಾವಿನಲ್ಲಿ ಸಂತೋಷ

೧

ಅನು: ಶ್ರೀ ಕೆ. ನಾರಾಯಣಾಚಾರ್.

ಒಡಾಖಿನ ಉನ್ನತ ಶಿಖರದ ಮೇಲೆ ನಿರ್ಜನವಾದ ಏಕಾಂತ ಸ್ಥಳದಲ್ಲಿ ಹಿಂದೂ ಸೇನೆ ಒಂದು ಸಣ್ಣ ಕಂಡುಬಿನಿಂತಿತ್ತು. ದಕ್ಷಿಣದಲ್ಲಿ ಹಿಂಬದಿಯಲ್ಲಿ ಇನ್ನೊಂದು ಶಿಖರದ ಮೇಲೆ ಪ್ರಧಾನ ಸೇನೆಯು ಕಾಣಬರುತ್ತಿತ್ತು.

ಕೆಳಗಿನಿಂದ ಒಂದು ಎತ್ತರಗೆದು ಸಾಹು ಬಂದಿದು-"ರಾತ್ರಿಯೆಲ್ಲಾ ಎಚ್ಚರವಾಗಿರಿ. ಚೀನೀ ದಾಳಿಯು ಯಾವ ಸಮಯದಲ್ಲಾದೂ ಬರಬಹುದು'. ಮುಂದಿರುವ ಸೈನ್ಯದ ದಳಪತಿಯಾದ ಸ್ವರೂಪ ಸಿಂಗನಿಗೆ ಯಾವೊಂದು ಸೂಚನೆಯು ಅವಶ್ಯಕತೆಯಿರಲಿಲ್ಲ. ಅಳಸ್ಟಿಕವಾಗಿ ಬರುವ ದಾಳಿಯನ್ನು ತಡೆಯಲು ತನ್ನ ಜನರಿಗೆ ಎಚ್ಚರಿಕೆ ಕೊಡಲು ಅವನು ನಿರ್ಣಯಿಸಿದ್ದನು.

'ಜವಾನರೇ, ಬನ್ನಿರಿ. ಚೀನೀಯರ ಕುರಿತು ಕೆಲವು ಕವಾಪತೆಯ ಕಥೆಗಳನ್ನು ನಾನು ಹೇಳುವೆನು' ಸ್ವರೂಪಸಿಂಗನು ಹೇಳಿದನು. ಆ ಅತಿಕಠಿಣವಾದ ಚಳಿಯಲ್ಲಿ ಜವಾನರೆಲ್ಲರೂ ಸುತ್ತಾಗಿ ಬಳಿ ಬಂದುಕೊಂಡರು.

ಅವರ ಕಿವಿಗಳು ಕಥೆಗಳನ್ನು ಕೇಳಿದವು. ಆದರೆ ಕಣ್ಣುಗಳು ಎದುರಿಗಿರುವ ಶತ್ರು ರಾಜ್ಯವಾದ ಶಿಖರದ ಮೇಲೆ ನಡೆಯುವ ಕಾರ್ಯಕಲಾಪಗಳ ಅತಿ ಸೂಕ್ಷ್ಮವಾದ ಸಂಜ್ಞೆಗಳನ್ನು ಆ ಕತ್ತಲೆಯಲ್ಲಿ ಕೂಡ ಬಿಡುಬಿಡಿಯಲು ಬದ್ಧವಾದುತ್ತಿದ್ದವು.

ರಾತ್ರಿಯಲ್ಲಾ ಕಳೆಯಿತ ಒಂದು ಕಡೆ ಕಥೆಗಳ ಇನ್ನೊಂದು ಕಡೆ ನಿರಂತರವಾದ ಕಾವಲು.

ಪ್ರಾತಃ ಕಾಲದ ಸುಸಿಕಿನ ವೇಳೆಯು ಬಂದಾಗ ಮೋಸವಿತು. ಬಹು ಅಸ್ಪಷ್ಟವಾದ ಬೆಳಕಿನ ಕಿರಣವು ಪೂರ್ವ ದಿಕ್ಕಿನಲ್ಲಿ ಗೋಚರಿಸಿತು. ರಾತ್ರಿಯು ಶಾಂತವಾಗಿ ಕಳೆಯಿತು. ಶತ್ರುಗಳೇನು ಮಾಡುತ್ತಿದ್ದರು?

ಸ್ವರೂಪಸಿಂಗನು ತನ್ನ ದುರ್ಬೀನನ್ನು ಎತ್ತಿಕೊಂಡು ಜಾಗ್ರತೆಯಿಂದ ಎದುರಿಗಿರುವ ವಿಖರವನ್ನು ಪರೀಕ್ಷಿಸಿ ನೋಡಿದನು.

ಎಲ್ಲವೂ ಶಾಂತವಾಗಿತ್ತು. ಇಲ್ಲ ಆ ಗುಡ್ಡಗಳ ಮಾರೆಯಲ್ಲಿ ಸಣ್ಣ ಆಕಾರಗಳಲ್ಲಿ ಒಂದು ಸಾಲು ವೇಗದಿಂದ ಚಲಿಸುತ್ತಿತ್ತು.

ಒಂದು ದೀರ್ಘವಾದ ಕ್ಷಣಕಾಲದಲ್ಲಿ ಸ್ವರೂಪಸಿಂಗನ ಚಲಿಸುವ ಆ ಸಾಲನ್ನು ನೋಡಿದನು. ಶತ್ರುಗಳ ಬಲವನ್ನು ಎಷ್ಟಿದೆಯೆಂದು ತಿಳಿದುಕೊಂಡನು. ಅದು ಸಾಕಷ್ಟು ಭಯಂಕರವಾಗಿತ್ತು.

ತನ್ನ ದುರ್ಬೀನನ್ನು ಕೆಳಗಿಟ್ಟು ಸ್ವರೂಪಸಿಂಗನು ಹೇಳಿದನು- "ಹೊಸಿಯೂರ್, ಶತ್ರುಗಳು ಬರುತ್ತಿದ್ದಾರೆ ಅವರ ಸಂಖ್ಯೆಯಂ ನಿಂತಿರುವ ನಮ್ಮ ಪ್ರಧಾನ ಸೈನ್ಯಕ್ಕೂ ಹೆಚ್ಚಿನದ್ದಾಗಿದೆ.

ಪ್ರತಿಯೊಬ್ಬರೂ ತಮ್ಮ ನೆಲೆಯನ್ನು ಭದ್ರಪಡಿಸಿಕೊಂಡರೆ. ಬೆರಳನ್ನು ಬಂದೂಕಿನ ಚಕ್ರದಲ್ಲಿಟ್ಟಿರು. ಆದರೆ ಸ್ವರೂಪಸಿಂಗನು ಆಲೋಚಿಸುತ್ತಿದ್ದನು.

ಅವನ ಕಂಡಷ್ಟು ಬಳು ಸಣ್ಣದಾಗಿತ್ತು. ಆದನ್ನು ಸುಲಭವಾಗಿ ಅಡಗಿಸಬಹುದಾಗಿತ್ತು. ಅವನನ್ನೂ ಅವನ ಜನರನ್ನೂ ಸಲೆಬಡಿಯು ಬಹುದಿತ್ತು. ಏನೇನೂ ದೊಡ್ಡ ವಿಷಯವಾಗಿರಲಿಲ್ಲ. ಅವನ ಮುಖ್ಯ ಉದ್ದೇಶವು ಪ್ರಧಾನ ಸೇನಾ ಶಿಬಿರಕ್ಕೆ ಸೂಚನೆ ಕೊಡುವುದಾಗಿತ್ತ. ಅದನ್ನು ಮಾಡಲು ಸಾಧ್ಯನೇ?

ಆಗ ಅವನು ನಿರ್ಣಯಿಸಿದನು.

ತನ್ನಲ್ಲಿ ಎಷ್ಟು ಜನರಿದ್ದಾರೆ? ಸುಮಾರು ಏನತ್ತು. ಆ ಬಲಿಷ್ಠ ಜನರ ಮೇಲೆ ಅವನು ದೃಷ್ಟಿ ಬೀರಿದನು. ಆರು ಮಂದಿಗೆ ತನ್ನ ಪಾಡಿ ಕರೆದನು.

'ನೀವು ನನ್ನೊಡನೆ ಇಲ್ಲಿ ನಿಲ್ಲಬೇಕು. ಉಳಿದವರು ಪ್ರಧಾನ ರಾಜ್ಯಕ್ಕೆ ಹೋಗಬೇಕು. ಬರಲಿರುವ ದಾಳಿಯ ಕುರಿತು ನಮ್ಮ ಜನರಿಗೆ ಎಚ್ಚರ ಕೊಟ್ಟು ಅವರನ್ನು ಬಲಪಡಿಸಬೇಕು. ಅವರು ತಯಾರಾದಾಗ ನನಗೆ ಸೂಚನೆ ಕೊಡುವಂತೆ ಹೇಳಿರಿ.'

ಶಾಂತವಾಗಿ ಜವಾನರು ಎದ್ದನಿಂತು ಹೇಳಿದಂತೆ ಮಾಡತೊಡಗಿದರು.

"ಹೊಡೆಯಿರಿ" ಸ್ವರೂಪಸಿಂಗನು ಅಪ್ಪಣೆ ಕೊಟ್ಟನು. ಅವರು ಪ್ರಧಾನ ರಾಜ್ಯಕ್ಕೆ ನಡೆದರು.

ಆ ಮೇಲೆ ಮಾನವಾಗಿ ಸ್ವರೂಪಸಿಂಗನು ಉಳಿದವರಿಗೆ ಆವರಿವರ್ಗನೆಲೆಯನ್ನು ತೋರಿಸಿಕೊಟ್ಟನು. ಅವರು ಆಯುಧಗಳನ್ನು ತೆಗೆದು ಕೊಂಡರು. ಅವರ ಬೆರಳುಗಳು ತಯಾರಿದ್ದವು.

ಆ ದೊಡ್ಡ ಚೀನೀ ಸೇನೆಯು ಮುಂದೆ ಬರುತ್ತಿದ್ದುದನ್ನು ನೋಡುತ್ತಿದ್ದಾಗ ಸ್ವರೂಪ ಸಿಂಗನ ಮುಖದಲ್ಲಿ ಯಾವ ವಿಕಾರವೂ ಆಗಲಿಲ್ಲ.

ಅವರು ಹತ್ತಿರ ಹತ್ತಿರ ಬಂದರು. ಕೆಲವು ಗಜ ದೂರ....ಕೆಲವೇ ಅಡಿಗಳು.... ಆಗ—

"ಹೊಡೆಯಿರಿ"

ಸ್ವರೂಪ ಸಿಂಗನ ಅಪ್ಪಣೆಯೂಸೊನೆ ಬಂದೂಕುಗಳು ಒಂದಾಗಿ ಭೋರ್ಗರೆದವು.

ಟಟ್, ಟಟ್, ಟಟ್.

ಶತ್ರುಗಳು ಉತ್ತರಿಸಿದರು. ಟಟ್—ಟಟ್—ಟಟ್—ಟಡ್.

ಜವಾನರು ಹರವಿಂದ ಕಾದಿದರು. ಚೀನೀಯರು ಬಿದ್ದರು. ಆದರೆ ಆ ಜನರು ಮನ್ನುಗ್ಗುತ್ತಲಿದ್ದರು.

ಈಗ ಶತ್ರುಗಳು ಮೇಲೆ ಬೀಳುವಷ್ಟು ಹತ್ತಿರದಲ್ಲಿ ಬಂದರು. ತನ್ನ ಜನರು ಪ್ರಧಾನ ರಾಜ್ಯಕ್ಕೆ ತಲಪಿದರೆ? ಆದು ಶತ್ರುಗಳನ್ನೆದುರಿಸಲು ಸಿದ್ಧವಾಯಿತೆ?

ಅಲ್ಲಿಂದ ಸೂಚನೆ ಬರುವ ತನಕ ತಾನು ಹೇಗಾದರೂ ತಡೆಯಬೇಕು.

ಮಂದಿನ ಸಾಲಿನ ಚೀನೀಯರು ಚಿಟ್ಟನೆ ಚೀರಿ ಆ ಸಣ್ಣ ಹಿಂದೂ ಸೈನ್ಯದ ಮೇಲೆ ಬಿದ್ದರು.

"ಇದೇನು ನಮ್ಮ ಅವಸಾನವಾಯಿತೇ?" ಸ್ವರೂಪ ಸಿಂಗನು ಕೂಗಿದನು. 'ಜವಾನರೇ ಗಟ್ಟಿಯಾಗಿ ನಿಲ್ಲಿ" ಆ ಜನರು ನಿಂತಲ್ಲಿಯೇ ನಿಂತು ಗುಂಡಿನ ಮಳೆ ಸುರಿಸಿದರು.

ಆ ಮೇಲೆ ಗುಂಡುಗಳ ಶಬ್ದ.

ಸೂಚನೆ ಬಂತು ಪ್ರಧಾನ ಸೈನ್ಯವು ದಾಳಿಯ ಕುರಿತು ಎಚ್ಚರಗೊಂಡಿತು. ಈಗ ಆದು ಪ್ರತಿಭಟಿಸಲು ಸಿದ್ಧವಾಗಿದೆ.

ಕ್ರೋಕ್! ಸ್ವರೂಪ ಸಿಂಗನ ಎದೆಯೊಳಗೆ ಒಂದು ಗುಂಡು ನುಗ್ಗಿತು. ಆದರೆ ಆ ಪತನ ಮುಖದಲ್ಲಿ ನೆಗೆ ಗೋಚರಿಸಿತು. 'ನಾನೀಗ ಸಂತೋಷದಿಂದ ಸಾಯುವೆನು." ಅವನು ಗುಣುಗಿದನು. ಮತ್ತು ಒಂದು ನಗೆಯೊಡನೆ ಪ್ರಾಣಬಿಟ್ಟನು.

— ಸಮಾಪ್ತಿ —

—

ಅಭಿಪ್ರಾಯ

'ಕರ್ಣ' ನನ್ನು 'ಕರ್ನ' ಎಂದರೆ....???

ಲೇ:—

ಶ್ರೀ ನುರಕ್ಕುಲ್ ರಾಮಕೃಷ್ಣ ಹೆಬ್ಬಾರ್.

ನಾವು ವಾಸಿಸುವುದು ಕರ್ನಾಟಕದಲ್ಲಿ ನಮ್ಮ ತಾಯ್ನುಡಿಯು ಕನ್ನಡ. ತೆಲುಗು, ತಮಿಳು, ಮಲೆಯಾಳಗಳಂತೆ. ಪಂಚ ದ್ರಾವಿಡ ಭಾಷಾ ವರ್ಗಕ್ಕೆ ನನ್ನ ಕನ್ನಡವು ಸೇರಿದೆ.

'ಕಂ' ಎಂದರೆ ಕಂಸ. ಕಂ ಎಂಬ ಭಾವ ನಾಮಕ್ಕೆ ನಡೆ ಎಂಬ ದು ಸೇರಿ—ಕನ್ನಡ ಎಂದಾಯಿತೆಂದು ಸಂಶೋಧನಕಾರರು ಅಭಿಪ್ರಾಯ ಪಡುತ್ತಾರೆ ಕರಿಯ ಮಣ್ಣಿನ ನಾಡ "ಕರ್ನಾಡು' ಎಂದು ಹೆಸರಾಯಿಸಿಂದೂ ಬೀಳುತ್ತಾರೆ.

ಕರ್ಣ ಎಂದರೆ ಸಂಸ್ಕೃತದಲ್ಲಿ ಬೆಟ ವೆಂದೂ ಕನ್ನಡವನ್ನು ಕಾಡು ಜನರು ಆಡುತ್ತಿದ್ದರೆಂದೂ ಆಂಧ್ರ ಪಂಡಿತರೊಬ್ಬರು ಅಭಿಪ್ರಾಯ ಪಡುತ್ತಾರೆ. ತಮಿಳನ್ನಯೂ ಕರೆ= ಎಂದರೆ ಬೆಟ್ಟ. ಬೆಟ್ಟದ ನಾಡು ಕರುನಡಂ ಎಂದು ಕರೆಯಲ್ಪಟ್ಟಿತೆನ್ನುತ್ತಾರೆ ಆದರೆ ಕಾವೇರಿಯಿಂದ ಗೋದಾವರಿ ತನಕ ಹಬ್ಬಿದ ಈ ನಾಡು "ಬೆಟ್ಟದ ನಾಡು" ಎಂಬ ಹೆಸರಿಗೆ ಯೋಗ್ಯವಾದೀತೇ?

ಕರ್ನಾಟ ಎಂದರೆ ಎಲ್ಲರ ಕಿವಿಗಳಲ್ಲಿ ಪ್ರಸಿದ್ಧವಾಗಿ ಕಿವಿಗೆ ಇಂಪಾಗಿ ಇರುವುದರಿಂದ ಇದಕ್ಕೆ ಕರ್ನಾಟಕ ಎಂದು ಹೆಸರಾಯಿಸಿದ್ದು ("ಕರ್ನಾಯೋ ಟಿಟಿತಿ ಇತಿ ಕರ್ನಾಟಃ) ಎಂದು ಹೇಳುವುದು.

ದಿ| ಗೋವಿಂದ ಪೈಗಳ ಅಭಿಪ್ರಾಯದಂತೆ—ಕರ್ + ನಾಡು = ಕರ್ನಾಡು (ದೊಡ್ಡದೇಶ)ಎಂಬ ಕನ್ನಡ ಸಮಾಸ ಪದವೆ 'ಕರ್ನಾಟ' ಎಂದಾಗಿರಬೇಕು. ಕರ್ನಾಟಕವನ್ನೇ ಸಾಧುವಲ್ಲದೆ—ಕರ್ಣಾವನ್ನು ಕರ್ನ ಎಂದೂ, ಚೂರ್ಣವನ್ನು ಚೂರ್ನ ಎಂದೂ, ಪರ್ಣವನ್ನು ಪರ್ನ ಎಂದೂ(ಶಾಲೆ) ವರ್ಣವನ್ನು (ಪಂಜ) ವರ್ನ (ಗಿಳಿ) ಎಂದೂ ಹೇಳಿದಾಗ ಉಚ್ಚರಿಸಲಿಕ್ಕೆ ಸುಲಭವಾಗಿ ಇಹುದು. ಕರ್ನಾಟಕ ಎಂಬುದು ಸಾಮಾನ್ಯ ಜನರ ಬಾಯಿಯಲ್ಲಿ ನುಂದ—ಮೂಕ. ಇದರಿಂದಾಗಿ ಕರ್ನಾಟಕವಲ್ಲ— ಕರ್ನಾಟಿಕ ಎಂಬುದೇ ಸಾಧು ಎಂದು ಪ್ರತಿಪಾದಿಸಿರುವುದು ಯೋಗ್ಯವಾಗಿದೆ. ಆದುದರಿಂದ ನಮ್ಮದು ಕರ್ನಾಟಕ ದೇಶ ಎನ್ನಬಹುದಲ್ಲವೇ?

ಸಸ್ಯ ಶ್ಯಾಮಲೆ—
ಪ್ರಕೃತಿ ಮಾತೆ

(ಐದನೇ ಸಂಪುಟದಿಂದ)

ಪ್ರವೇಶಿಸಿದೊಡನೆಯೇ ಬ್ರಿಟಿಷ್ ಭೂಮೂಲೀಕರಿಗೆ ಬಿಸಿಯಾಗತೊ.

ತಾವು ಹಬ್ಬಿಸಿ ಬೆಂಕಿ ಹವ್ಯ ಸಾನ, ಬೈ, ಮನೆಗಳನ್ನು ಭಸ್ಮ ಮಾಡಿತ್ತಿದೆ ಎಂಬುದನ್ನು ಅರ್ಧ ಮಾಡಿಕೊಂಡರು. ಕೂಡಲೇ ಬ್ರಿಟಿಷ್ ಭೂಸೂಲಕರು ಶಾಂತಿ ಭಂಗದ ಹೊಣೆಯನ್ನು ಕೂಡಲೇ ಅಲ್ಲಿಂದ ಹೊರಡುವಂತೆ ಗಾಂಧೀಜಿಯವರಿಗೆ ನೋಟೀಸು ಕೊಟ್ಟರು. ಆದ ಗಾಂಧೀಜಿಯವರು "ನಾನು ಇಲ್ಲಿರುವುದರಿಂದ ಶಾಂತಿಭಂಗವಾಗುವುದೆಂದು ನಾನು ಭಾವಿಸಿಲ್ಲ. ಬಂಬಾರಣ್ಯದಲ್ಲಿಯೇ ಇರಲು ನನ್ನ ಕರ್ತವ್ಯ ಪರಾಯಣತೆ ಆದೇಶ ನೀಡುತ್ತಿದೆ" ಎಂದು ಎದೆ ಗುಂದದೆ ಉತ್ತರಿಸಿದರು. ಅಂದು ಸವಿನಂಗ ಕಾಯಿದೆ ಭಂಗವಾಯಿತು. ನುಂದೆ 'ಭಾರತ ಬಿಟ್ಟು ತೊಲಗಿ' ಎನ್ನುವ ವರೆಗೆ ಚಳುವಳಿ ವಿರಾಟ್ ರೂಪ ತಳಿತು. ಗಾಂಧಿಜಿಯವರ ಅಗಸ್ಟ್ ಗಾಂಧಿಯ ಚಳುವಳಿಯ ಉದ್ದೇಶ ಸಾರ್ಥಕವಾಯಿತು.

ಸುಸ್ಥಾಪಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ಕನ್ನ 84 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 3% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

ಶಾ

ರಿ ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು—೩

ಎಲ್ಲಾ ಚಿಕಿತ್ಸಾ ವಿಧಾನಗಳಲ್ಲಿಯೂ ಅಮೂಲ್ಯ ಮೂಲಿಕೆ

ಅಮೃತ ಬಳ್ಳಿ

ಶ್ರೀ ಎಚ್. ಎಂ. ನಾರಾಯಣ ಭಟ್ಟ್

"ಅಮೃತ" ಎಂಬ ಹೆಸರು ಕೇಳದವರು ವಿರಳ. ಒಂದಲ್ಲ ಒಂದು ವಿಧದಲ್ಲಿ ಉಪಯೋಗಿಸ ಬಯಸದವರೂ ವಿರಳ. ಸಮುದ್ರ ಮಥನದ ಕಥಾನಂತರ ದೇವತೆಗಳಿಗೆ ಲಭಿಸಿದ ಅಮೃತದ ಮಹತ್ವವನ್ನು ಪುರಾಣಗಳಿಂದ ಕೇಳಿದ್ದೇವೆ. ಅದರ ಕಲಂಶವಾದರೂ ಗುಣಗಳಿಲ್ಲದೆ ಹೋಗಿದ್ದರೆ ಈ ವನಸ್ಪತಿಯನ್ನು 'ಅಮೃತ ಬಳ್ಳಿ" ಯೆಂಬೆಕೆ ಕರೆಯ ಬೇಕಾಗಿ ಈ ವನಸ್ಪತಿಯನ್ನು ನಿರ್ದಿಷ್ಟ ಕ್ರಮದಂತೆ ಸೇವಿಸಿದರೆ ನಿಶ್ಚಯವಾಗಿಯೂ ಪ್ರಾಪ್ತಿಯೆಂದು ಆಯುರ್ವೇದದ ನಿರ್ದೇಶನವಿದೆ.

'ಹೃದಯ ದಾರ್ಢ್ಯತೆಯ ಎಲೆಗಳುಳ್ಳ' ಈ ಬಳ್ಳಿ ಆಯುರ್ವೇದ ಚಿಕಿತ್ಸಾ ಪದ್ಧತಿಗೆ ಮಾತ್ರವಲ್ಲ – ರಕ್ತ ದೋಷ, ಪಿತ್ತ, ತ್ರಿದೋಷ, ಆಮದೋಷ, ತುರಿ, ಕಜ್ಜಿ, ವಿಸರ್ಪ, ಕೆಮ್ಮು, ಗುಲ್ಮ, ಕುಷ್ಠ, ವಾತ, ಕ್ರಿಮಿ, ಪ್ರಮೇಹ, ಹೈದ್ರೋಗ ಮುಂತಾದ ಅನೇಕ ಖಾಯಿಲೆಗಳಿಗೆ ಔಷಧ.

ಈ ವನಸ್ಪತಿಯು ಎಲ್ಲಾ ಭಾಗಗಳೂ ಔಷಧಗಳೇ!

ಅಲೋಪತಿ ಪದ್ಧತಿಯನ್ನೆಯು ಈವ ನಸ್ಪತಿಯು ವಾತ, ಸಿಫಿಲಿಸ್, ಉಷ್ಣ, ಗಸ್ಟ್ರೋರಿಯಾ ಮುತ್ತಿಗೆ ಮಮರ್ಮ ವ್ಯಾಧಿಗಳಿಗೂ ಔಷಧ. ಧಾತು ನಷ್ಟ ಹಾಗೂ ಮಲೇರಿಯಾಗಳಿಗೆ ರಾಮ ಬಾಣ.

ಹೋಮಿಯೋಪತಿ ಪದ್ಧತಿಯಲ್ಲಿಯೂ ಇದು ಧಾತುವೃದ್ಧಿಗೆ, ಸ್ವಪ್ನಸ್ಖಲನ, ವಿವಿಧ ವಾತಗಳು, ವ್ರಣ, ಮೂತ್ರ ದೋಷಗಳು, ಮುಂತಾದವುಗಳಿಗೆ ದಿವ್ಯಾಷಧವೆಂದೇ ಪರಿಗಣಿಸಲಾಗುತ್ತಿದೆ. ವನಸ್ಪತಿಯಿರಿಗೆ ಪ್ರಥಮಾನಂತರ ಹಾಲು ಎರ್ಧನೆಗೆ ಇದರ ಸತ್ವವನ್ನು ನಿರ್ದೇಶಿಸಲಾಗುವುದು. ಹೃದಯ ರೋಗಗಳಿಗೂ ಕೆಮ್ಮು, ಉಬ್ಬಸ ಮುಂತಾದ ಖಾಯಿಲೆಗಳಿಗೂ ಅಮೃತ ಬಳ್ಳಿ ಅಥವಾ ಈ ವನಸ್ಪತಿ ಸೇರಿದ ಇತರ ಔಷಧ ಕೊಡಲಾಗುತ್ತಿದೆ.

ಬಂಗಾಳ, ಕೇರಳ, ವೈಸೂರಿನ ಹಲವು ಭಾಗಗಳಲ್ಲಿಯೂ ಈ ವನಸ್ಪತಿ ಧಾರಾಳವಾಗಿ ಬೆಳೆಯುತ್ತಿದೆ.

ಅಮೃತ ಬಳ್ಳಿಯ ಎಲೆ ಮನುಷ್ಯನ ಹೃದಯದ ಆಕಾರದಲ್ಲಿದ್ದು ಇದರಿಂದಾಗಿ ಈ ವನಸ್ಪತಿಗೂ ನಮ್ಮ ಹೃದಯಗಳಿಗೂ ಸಮೀಪ ಸಂಬಂಧವಿರುವುದಾಗಿ ಪ್ರಸಿದ್ಧ ಸೈದ್ಧಾಂತಿಗಳು ವಿವರಿಸಿದರು.

ಆ ವೈದ್ಯರ ಅಭಿಪ್ರಾಯದ ಮೇರೆಗೆ ಅಮೃತ ಬಳ್ಳಿಯ ಗುಣ ಹೃದ್ರೋಗಗಳಿಗೆ – ಹೃದಯ ಸ್ತಂಭನಗಳಿಗೆ ಉತ್ತಮವಾದ ಸಂಜೀವಿನಿ. ಹೃದಯವನ್ನು ಬಾಧಿಸಿದ ವಾತವೇ ಹೃದಯ ಸ್ತಂಭನಕ್ಕೆ ಕಾರಣವೆಂದೂ ಈ ವನಸ್ಪತಿಯನ್ನು ನಿರ್ದಿಷ್ಟ ವಿಧಾನದಲ್ಲಿ ಉಪಯೋಗಿಸಿದರೆ ಅಂತಹ ರೋಗಗಳ ನಿವಾರಣೆಯಾಗಿ ಉತ್ತಮ ಆರೋಗ್ಯ ಸಿದ್ಧಿಸುವುದೆಂದೂ ಅವರು ವಿವರಿಸಿದ್ದಾರೆ.

ಅಮೃತ ಬಳ್ಳಿಯನ್ನು ಬಳಸಿದ ಅನೇಕ ಕಷಾಯಗಳೂ ಲೇಹಗಳೂ ಆಯುರ್ವೇದ ಪಂಡಿತರಿಂದ ಲಭಿಸುತ್ತವೆ. ಈ ಸಂಜೀವಿನಿಯನ್ನೊಳಗೊಂಡ ಅನೇಕ ತಾಜ ಔಷಧಗಳು ಇತರ ಔಷಧ ಶಾಲೆಗಳಲ್ಲಿಯೂ ದೊರಕುವವು.

—ಸಂಗ್ರಹ.

ಶೀಲದ ಮಹತ್ವ

(ಏಳನೇ ಪುಟದಿಂದ)

ಕೊಡುತ್ತವೆ, ನಾವು ನಮ್ಮ ಕಲ್ಪನೆಯಲ್ಲಿ ಹೆಣೆಯುವುದೆಲ್ಲ ಅದರ್ಶಗಳಲ್ಲಿ ಅರಸುವುದೆಲ್ಲ, ಆಕಾಂಕ್ಷೆಗಳಲ್ಲಿ ಹಾರೈಕೆಯುವ ದೆಲ್ಲ ನಮ್ಮ ಮನಸ್ಸಿನ ಮೇಲೆ ಜಜ್ಜಿಬಿಡುವುದು. ಇವುಗಳಿಂದ ವಿಕಾಸಗೊಂಡುದೇ ನಮ್ಮಜ್ಞಾನವಾಗಿ, ಸುತ್ತಲಿನ ಜಗದ ಒಗ್ಗೆ ಚಿತ್ರಿಸುವ ಚಿತ್ರವಾಗಿ ಪರಿಣಮಿಸುವುದು. ಮತ್ತೆ ಚಿತ್ರಕ್ಕೆ ನಾವು ಆಸಕ್ತಿಯಿಂದ ಅಂಟಿಕೊಳ್ಳುವೆವು.

ಮಾನವನ ವರ್ತಮಾನವು ಆತನ ಭೂತಕಾಲದ— ಆ ದೀರ್ಘಾವಧಿಯಲ್ಲಿ ಆತ ನಿರ್ಮಿಸಿಕೊಂಡಿರುವ ಸೂಕ್ಷ್ಮಗಳ ಪರಿಣಾಮವು. ಆತನ ಈಗಿನ ಚಾರಿತ್ರ್ಯ ಎಂತಹದೇ ಇರಲಿ, ಆತ ರೂಪಿಸಿಕೊಂಡಿರುವ ವಿಚಾರಗಳು ಕಲ್ಪನೆಯ ಕ್ರಮುಗಳಲ್ಲಿ ಬದಲಾವಣೆ ಮಾಡುವುದರಿಂದ ಈ ಚಾರಿತ್ರ್ಯವನ್ನು ಬದಲಾಯಿಸಬಹುದಾಗಿದೆ.

ಸದಾಚಾರಿಯು ಬರದ ದುಷ್ಟನೆಂಬುದಿಲ್ಲ. ಪರೋಪಕಾರಿಯಾದ ಅಂಗುಲಿಮಾಲನಾಗಲಿಲ್ಲವೇ? ಕಳ್ಳ ರತ್ನಾಕರ ವಾಲ್ಮೀಕಿಯಾಗಲಿಲ್ಲವೆ? ಸೃಜ್ಞಾ ಪೂರ್ವಕ ಪ್ರಯತ್ನದಿಂದ ಚಟುಗಳನ್ನು—ರೂಢಿಗಳನ್ನು ಬದಲಾಯಿಸಿಕೊಳ್ಳಬಹುದು ತನ್ನ ದುಷ್ಪ್ರವೃತ್ತಿಗಳಿಗೆ ಪಂಥಹ್ವಾನವಿತ್ತು, ತನ್ನ ದುಷ್ಟಾಭ್ಯಾಸಗಳನ್ನು ಮೂರ್ಖಿಸಿಕೊಳ್ಳುವುದು. ಮಾನವನ ಅಳವಿನೊಳಗಿನ ಮಾತು.

ನಿಸ್ವಾರ್ಥ ಸೇವೆ, ತ್ಯಾಗ, ಭಕ್ತಿ, ಪ್ರಾರ್ಥನೆ, ಆತ್ಮವಿಚಾರಣೆಗಳಿಂದ ಮಾನವನು ದುಷ್ಟ ರೂಢಿಗಳನ್ನೆಲ್ಲ ದೂರಿಸಬಲ್ಲನು. ಪರಿಶುದ್ಧ ಮನಸ್ಸಿನಲ್ಲಿ ಮೂಡುವ ಭಾವನೆಗಳು ಜನತೆಗೆ ಹಾಗೂ ರಾಷ್ಟ್ರಕ್ಕೆ ಸಹಕಾರಿಯೂಗಬಲ್ಲುವು.

("ಪ್ರೇಮವಾಹಿನಿ"ಯಿಂದ)

ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ ನಮ್ಮ ಪತ್ರಿಕೆಯು 46ನೇ ಸಂಪುಟವು ಮುಗಿದು ಸಪ್ತಂಬರದಿಂದ 47ನೇ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಬಾಕಿ ಇರುವ ಚಂದಾದಾರರು ತಮ್ಮ ಚಂದಾಹಣವನ್ನು ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಮೆನೇಜರ್

ಭಾರತ ಸ್ವಾತಂತ್ರ್ಯ ಗಾಯತ್ರಿ

ಅದೇ ವಂದೇ ಮಾತರಂ

ಬರೆದವರು: ಶ್ರೀ ಕೆ. ಪೂವಪ್ಪ

ಒಂದು ದೇಶ ಸ್ವಾತಂತ್ರ್ಯ ಪಡೆಯಲು ಆಥವಾ ಒಂದು ಸರಕಾರ ಬದಲಾವಣೆ ಹೊಂದಲು ಆ ದೇಶದ ಜನರ ಅಂತಃಕರಣದಲ್ಲಿ ಮೂಡುವ ಚೇತನ ಶಕ್ತಿಯೇ ಕಾರಣ. ಮನುಷ್ಯನಲ್ಲಿ ಒಡ ಮೂಡುವ ಉತ್ತೇಜನ ಶಕ್ತಿ ಹಾಗೂ ರಾಷ್ಟ್ರೀಯ ಭಾವನೆ ವಾತಾವರಣದ ಒಳಕು ಕೆಡುಕುಗಳ ಕಡೆಗೆ ಪ್ರಭಾವ ಬೀಳುವುದು. ಆದರೆ ಒಳಿತು—ಕೆಡುಕನ್ನು ನಿರ್ಧರಿಸುವ ಶಕ್ತಿ ಅಂತಃಕರಣಕ್ಕಿದೆ. ಅಂತಹ ಪರಿಶುದ್ಧ ಮನಸ್ಸಿನಲ್ಲಿ ಮೂಡುವ ಭಾವನೆಗಳು ಜನತೆಗೆ ಹಾಗೂ ರಾಷ್ಟ್ರಕ್ಕೆ ಸಹಕಾರಿಯೂಗಬಲ್ಲುವು.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಕೆಲವರು ಕವಿತಾ ಶಕ್ತಿಯಿಂದ ದೇಶದ ಜನತೆಯನ್ನು ಎಚ್ಚರಿಸಲು ಸಹಕಾರಿಯೂದರು. ಇದೇ ರಾಷ್ಟ್ರೀಯ ಗೀತೆಗಳು. ಇದರಿಂದ ಜನತೆಯಲ್ಲಿ ರಾಷ್ಟ್ರೀಯ ಭಾವನೆ ಮೂಡಿ ದೇಶದ ಭದ್ರತೆಗೆ ಸಹಕಾರಿಯೂದುವು. ಇದಕ್ಕೊಂದು ಉದಾಹರಣೆ ಕೊಡುವುದಾದರೆ ವಂದೇ ಮಾತರಂ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಅತುಳ ಕ್ರಾಂತಿಯನ್ನು ಜೆಲ್ಲಾತ್ತ ಜಗತ್ತಿಗೆ ದರ್ಶನವನ್ನಿತ್ತ ಅನೇಕ ಗ್ರಂಥಗಳಲ್ಲಿ "ಆನಂದ ಮಠ" ಎಂಬ ಗ್ರಂಥ ಜನತೆಯಲ್ಲಿ ರಾಷ್ಟ್ರೀಯ ಭಾವನೆಯನ್ನು ಮೂಡಿಸಿ ಜನತೆಯಲ್ಲಿ ಹೆಚ್ಚಿಗೆ ಪ್ರಭಾವ ಬೀರಿದ ಗ್ರಂಥಗಳಲ್ಲಿ ಇದು ಒಂದು ಮುಖ್ಯವಾದುದು.

ಗಲೇ ಶತಮಾನದಲ್ಲಿ ಬಂಗಾಳದಲ್ಲಿ ಅದ ಸನ್ಯಾಸಿ ವಿದ್ರೋಹ ಚಳವಳಿಕ್ಕೆ ಇದೇ ನಾಂದಿಯೂಯಿತು ಈ ಕಥಾವಸ್ತುವಿನೊಂದಿಗೆ ದಾರಾವಾಹಿಯಾಗಿ ಪ್ರಸಿದ್ಧಿಸಿ ಗೀತೆ ವಂದೇಮಾತರಂ, ಸಾಮಾನ್ಯ ಗೀತೆಯೊಂದು ರಾಷ್ಟ್ರಗೀತೆಯೂಯಿತು. ಇಂಕೋಟೆ ಕಂದರಗಳೂ ಒಕ್ಕೋರಲಿನಿಂದ ಹಾಡಿದುವು ವಂದೇಮಾತರಂ. ಕೇವಲ ಬಂಗಾಳದೇ ಅಲ್ಲ, ಆಸೇತು ಹಿಮಾಚಲ ಘೋಷವಾಗಿ ಮೊಳಗಿತು ವಂದೇಮಾತರಂ. ರಾಷ್ಟ್ರೀಯ ಚಳವಳಿಯಲ್ಲಿ ಪ್ರತಿಯೊಬ್ಬ ಭಾರತೀಯನ ಉಸಿರು ಹೊರಬೆಸೆ ವಂದೇಮಾತರಂ ಅಷ್ಟದಿಕ್ಕುಗಳಿಗೂ ಪೂರ್ಣವಾಗಿ ಪ್ರಭಾವ ಬೀರಿದ್ದ ವಂದೇ ಮಾತರಂ ಎಂಬ ಗೀತೆ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಮಲಗಿದವರನ್ನು ಎಚ್ಚರಿಸಿದ ರಣಕಹಳೆ. ಹಿಂದೆ ಸ್ವಾತಂತ್ರ್ಯ ಸಮರ ಕಾಲದಲ್ಲಿ ಬೆಳಕು ಕಂಡು ಎದ್ದ ಗೀತೆ ವಂದೇ ಮಾತರಂ—ಬಂಗಾಳದ ಪ್ರಸಿದ್ಧ ಕವಿ ಬಂಗಿಮ್ ಚಂದ್ರ ಚಟರ್ಜಿಯವರು ಇದರ ನಿರ್ಮಾತೃರು. ರಾಷ್ಟ್ರ ರಚನೆಯ ಕಾರ್ಯ ಭರದಿಂದ ಸಾಗುತ್ತಿರುವ ಕಾಲದಲ್ಲಿ ಸಾಹಿತ್ಯ ಸೇವೆ ಎಂದು ಸಣ್ಣ ಪದ್ಯವೊಂದನ್ನು ರಚಿಸಿ ಹಾಡಿದರು. ಅದು ಬರೆ ಸಾಹಿತ್ಯ ಸೇವೆ ಎಷ್ಟೆಸರೆ ರಾಷ್ಟ್ರದ ಜನರಲ್ಲಿ ಅಡಗಿದ ಶಕ್ತಿಗನ್ನೂ ಕೆಲಸಿ ಸ್ವಾತಂತ್ರ್ಯ ಮಹಾಸಮರಕ್ಕೆ ಸಿದ್ಧರಾಗಲು ಸಹಾಯವಾಯಿತು, ಸರಕೇಯ ದಬ್ಬಾಳಿಕೆಯಿಂದ ನರಳುತ್ತಿರುವ ಬಂಗಾಳದ ಜನತೆಯಲ್ಲಿ ಉರಿಯುವ ಹೋಮಾಗ್ನಿಗೆ ತುಪ್ಪವನ್ನಿಟ್ಟಂತಾಯಿತು. ಬ್ರಿಟಿಷರ ಆನೀತಿಯನ್ನು ಬಯಲಿಗೆಳೆದು ಸ್ವದೇಶಪ್ರೇಮ, ಸ್ವಧರ್ಮಾಭಿಮಾನಗಳನ್ನು ಕೆರಳಿಸಿ ತಾಯ್ನಾಡಿನ ಸಿರಿಗಾಗಿ ಹೃದಯ ತುಂಬಿ ಮನಮುಟ್ಟಿ ಹಾಡಿದರೆ. ಕರ್ಜನ್ ದೊರೆಯ ಕರ್ಣ ಕಮ್ಮಟೆಯನ್ನು ಭೇದಿಸಿ ಬ್ರಿಟಿಷ್ ಸಾಮ್ರಾಜ್ಯದ ಬೆನ್ನೆಲುಬನ್ನು ಅಲುಗಾಡಿಸಿತು— ವಂದೇ ಮಾತರಂ.

ಬಂಗಾಳದ ಯುವ ಜಂದ್ರ ಚಟರ್ಜಿಯವರ ಸ್ಪೀತಿಯ ಮಗನಾಗಿ ಬಂಕಿಂಬಾಬು ಹುಟ್ಟಿದರು. ಆ ಕಾಲದಲ್ಲಿ ವಾತಾವರಣವು ಇಂಗ್ಲಿಷ್‌ಮಯ. ಮೇಲಾಗಿ ತಂದೆ ಕಲೆಕ್ಟರರು. ಚಿಕ್ಕಂದಿನಲ್ಲೇ ಸಂದರ್ಭ ಸನ್ನಿವೇಶಗಳನ್ನು ಉತ್ತಮವಾಗಿ ಹೆಣೆದು ಬಹು ಸುಂದರವಾಗಿ ಕಥೆ ಹೇಳುವಂತಹ ಚಾತುರ್ಯ ಬಾಲಕನಿಗಿತ್ತು. ತೀಕ್ಷ್ಣ ಮತಿ ಕುಶಲನೂ ಆದ ಬಂಕಿಂ ಸಾಹಿತ್ಯ ಸೇವೆಯನ್ನು ಸೈ ಗೊಂಡರು. ಈ ಉತ್ಸಾಹಗಳೇ ಮುಂದಿನ ಸ್ವಾತಂತ್ರ್ಯ ದೊರಾಟದ ಗಾಯತ್ರಿ ಮಂತ್ರವಾಯಿತು. ಈ ಉಜ್ವಲ ಕೃತಿಯೇ ಬೆಳಕು ಕಾಣುವ ಕೈದೀವಿಗೆದಾಯಿತು—ವಂದೇ ಮಾತರಂ.

ಪರಿಕಥೆಗಳು

ಸುರತ್ಕಲ್ಲು ಕೇಂದ್ರದ ಹೊಸಬೆಟ್ಟು ಗ್ರಾಮ ಸಂಘದಲ್ಲಿ ನಾಗರಪಂಚಮಿಯಿಂದ (ಆ. 10) ಹೆಣ್ಣೆಮಯ ತಂಗೆ ಶ್ರೀ ಕಿನ್ನಿ ಮೂಲ್ಕಿ ಅನಂತ ಪದ್ಮನಾಭ ಭಟ್ಟರಿಂದ ಬಲಿ ಚರಿತ್ರೆ ಮೊದಲಾದ ಹರಿಕಥೆಗಳು ನಡೆಯಲಿವೆ.

ಕಾರ್ಕಳ ಮುನ್ಸಿಫ್ ಕೋರ್ಟ್‌ನಲ್ಲಿ

O. S. NO. 116/1967.

ಕಾರ್ಕಳ ಶ್ರೀ ವೆಂಕಟ್ರಮಣ ದೇವರ ಭಂಡಾರ, ಯಿಕ್ಷ ಮನೇಜಿಗರ್ ಸ್ವಸ್ತಿಗಳು ಕೆ. ನಾರಾಯಣ ಸ್ತುಳಿ ನಿಷಾ —ವಾದಿರು.

ರುಕ್ಕು ಆಚಾರ್ತಿ ನಪಾ —ಪ್ರತಿವಾದಿರು.

೩. ಆನಂದ ಆಚಾರ್ಯ, ೬. ಗೋಪಾಲಾಚಾರಿ— ನಾರಾಯಣಾಚಾರಿ ಮಕ್ಕಳು . ಕಾರ್ಕಳ ತಾಲ್ಲೂ ನೆಲ್ಲಿಕಾರ ಗ್ರಾಮದಲ್ಲಿರುವವರು—

೩, ೬ನೇ ಪ್ರತಿವಾದಿರಾದ ನಿಮಗೆ ಈ ಮೂಲಕ ತಿಳಿಸುವುದೇನೆಂದ್ರೆ—

ನೀವು ವಾದಿ ದೇವರ ಭಂಡಾರದವಳಗೆ ಜಾಗಗೇಣಿ ಹಕ್ಕಿನಿಂದ ಅನುಭವಿಸಿ ಬರುತ್ತಿರುವ ಗ್ರಾಮದ ಆಸ್ತಿ ಜಾಬ್ತು ಪಾಡಿದೇವರ ಭಂಡಾರಕ್ಕೆ ನಿಮ್ಮಿಂದ ತಾ 31.3.1966 ಕ್ಕೆ ಬರತಕ್ಕ ಜಾಲಗೇಣಿ ಗೇಣಿ ಬಪ್ಪಿ ಕೂಡಾ ರೂಪಾಯಿ 666—10ಕ್ಕೆ ವಾದಿರು ನಿಮ್ಮ ವಗೈರೆರ ಮೇಲೆ ಮಾಡಿದ ಸಿದ್ಧ ದಾವೆಯು ತಾರೀಕು 19—8—1967ಕ್ಕೆ ನಿಮಗೆ ಆಕ್ಷೇರ ನೋಟೀಸಿಗೆ ಇಟ್ಟಿದ್ದ. ಆಕ್ಷೇಪ ಇದ್ದ ಪಕ್ಷದಲ್ಲಿ ಸಿದ್ಧಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ಉದಾತಂಡೆ ಕೊಡತಕ್ಕದ್ದು. ಹಪ್ಪಟ್ಟಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ದಾವೆಯ ತೀರ್ಮಾನ ಆಗುವುದು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸುವುದೆ.

K. S Kamath
Advocate for Plaintuff.
Karkala, 4—8—67.

ಆರೋಗ್ಯ ವಿಜ್ಞಾನ

ನಿಯಂತ್ರಿತ ಉಪವಾಸದಿಂದ ದೀರ್ಘಾಯುಷ್ಯ

***

ಉಪವಾಸದ ಮೂಲಕ ದೇಹಕ್ಕೆ ಪುನಃ ಯೌವನ ಪ್ರಾಪ್ತಿಯೂಗಬಹುದು ಎಂದು ಜೀವ ರಾಸಾಯನಿಕ ವಿಜ್ಞಾನಿ ವ್ಲಡೀಮಿರ್ ನಿಕೇತಿನ್ನರು ಅಭಿಪ್ರಾಯ ಪಡುತ್ತಾರೆ. ಮೇದೋಜೀರಕ ಗ್ರಂಥಿಯೂ (ಪ್ಯಾಂಕ್ರಿಯಾಸ್) ಮತ್ತು ಮೂತ್ರ ಜನಕಾಂಗಗಳ ಮೇಲಿರುವ ನಿರ್ನಾಳ ಗ್ರಂಥಿಗಳೂ (ಅಡ್ರಿನಲ್ ಗ್ಲಾಂಡ್ಸ್) ಮುಪ್ಪಿನ ಕ್ರಿಯೆಯಲ್ಲಿ ಗಣನೀಯ ಪಾತ್ರವನ್ನು ವಹಿಸುತ್ತವೆ.

ವಯಸ್ಸು ಹೆಚ್ಚಿದಂತೆ ಮೇದೋಜೀರಕ ಗ್ರಂಥಿಯು ಬಹುಮಟ್ಟಿಗೆ ಬದಲಾಯಿಸುತ್ತದೆಯೆಂದೂ, ಅಂಗಾಂಗಗಳಿಗೆ ಪೋಷಣೆಗೆ ಸಹಾಯಕವಾದ 'ಹಾರ್ಮೋನ್' ವಸ್ತುಗಳನ್ನು ಅದು ತಯಾರಿಸುವುದು ಕಡಮೆಯಾಗುತ್ತದೆಯೆಂದೂ ಅವರು ನಂಬುತ್ತಾರೆ. ಆದರೆ ಇನ್ನೊಂದು ಬಗೆಯ ಹಾರ್ಮೋನ್ ತಯಾರಿಸುವ 'ಅಡ್ರೀನಲ್' ಗ್ರಂಥಿಗಳು ವಿಕಸ್ವರವಾಗಿ ಎಲ್ಲ ವಯಸ್ಸಿನಲ್ಲಿಯೂ ಕೆಲಸ ಮಾಡುತ್ತಿರುತ್ತವೆ.

ಇದರ ಪರಿಣಾಮವಾಗಿ ಎರಡು ಬಗೆಯ ಹಾರ್ಮೋನುಗಳ ನಡುವಣ ಸಂತುಲನವು ಕ್ರಮಶಃ ಅಸ್ತವ್ಯಸ್ತವಾಗುತ್ತದೆಯೆಂದೂ, ಉಪವಾಸವು ಈ ಸಂತುಲನವನ್ನು ಪುನಃ ಸ್ಥಾಪಿಸಲು ಸಹಾಯಕವಾಗುತ್ತದೆಯೆಂದೂ ಅವರ ನಂಬಿಕೆ. ಆಹಾರ ಸೇವನೆಯಿಂದಾದ ನೀಳ್ಗೆಯಲ್ಲಿ ಶರೀರವು 'ಅಡ್ರಿನಲ್' ಗ್ರಂಥಿಗಳಿಂದ ಉತ್ಪಾದಿಸಲಾದ ಅಧಿಕ 'ಹಾರ್ಮೋನು'ಗಳನ್ನು ಸಕ್ರಿಯವಾಗಿ ಬಳಸಿಕೊಳ್ಳಬೇಕಾಗುತ್ತದೆ ಯೆಂದು ಅವರು ತಿಳಿಸುತ್ತಾರೆ.

ಆದರೆ ಉಪವಾಸ ಚಿಕಿತ್ಸೆಗೆ ವಿಶೇಷ ಎಚ್ಚರಿಕೆ ಅವಶ್ಯಕವೆಂದೂ, ರೋಮನ್ ಚಕ್ರವರ್ತಿ ವೆಸ್ಪಾಸಿಯನ್ನರಂತೆ ತಿಂಗಳಿಗೊಂದು ದಿನ ಉಪವಾಸ ಮಾಡುವ ಅಭ್ಯಾಸವನ್ನಿಟ್ಟುಕೊಳ್ಳುವುದು ಒಳ್ಳೆಯ ದೆಂದೂ ಪ್ರೊ. ನಿಕೇತಿನ್ನರು ಹೇಳುತ್ತಾರೆ. ಈ ದಿನವನ್ನು ಕೂಡ ಚಿಕಿತ್ಸಕರೊಡನೆ ಹಂಗಾಮಿಕ ನಡೆಸಿದ ಮೇಲೆಯೇ ಗೊತ್ತುಪಡಿಸಬೇಕೆಂದು ಅವರು ಹೇಳುತ್ತಾರೆ.

ನಿಯಂತ್ರಿತ ಉಪವಾಸ

ಜಾಗರೂಕತೆಯಿಂದ ನಿಯಂತ್ರಿತವಾದ ಉಪವಾಸವು ಜೀವಿತಾವಧಿಯನ್ನು ಹೆಚ್ಚಿಸಬಹುದೆಂದು ಈ ವಿಜ್ಞಾನಿಯು ಅನೇಕ ವರ್ಷಗಳ ವರೆಗೆ ಇಲಿಗಳ ಮೇಲೆ ಪ್ರಯೋಗಗಳನ್ನು ನಡೆಸಿದ ತರುವಾಯ ನಿರ್ಧರಿಸಿದ್ದಾರೆ. ಸಾಮಾನ್ಯವಾಗಿ ಇಲಿಗಳು ಜೀವಿಸುವುದು ಎರಡೂವರೆ ವರ್ಷ ಕಾಲ. ಆದರೆ ಅವುಗಳ ಜೀವಿತಾವಧಿಯನ್ನು ಅವರು ಹಮ್ಮಿಪ್ರಯೋಗದ ಮೂಲಕ ನಾಲ್ಕೂವರೆ ವರ್ಷಗಳ ವರೆಗೆ ವೃದ್ಧಿಗೊಳಿಸುವಲ್ಲಿ ಸಫಲತೆ ಸಾಧಿಸಿದರು. ಅವುಗಳಿಗೆ ಆಹಾರವನ್ನು ಅಗಾಗ್ಗೆ ನೀಡದಿರುವುದರ ಮೂಲಕ ಅವರು ಈ ಪವಾಡವನ್ನು ಸಾಧಿಸಿದರು.

ಈಗ ಕೆಲವು ಚಿಕಿತ್ಸಾಲಯಗಳು ಉಪವಾಸ ಚಿಕಿತ್ಸೆಯನ್ನು 'ವೈಜ್ಞಾನಿಕ ವಿಕಾಸ'ದಿಂದ ಮೊದಲ್ಗೊಂಡು ಶ್ವಾಸಕೋಶದ ವರೆಗಿನ ಬಗೆ ಬಗೆಯ ರೋಗಗಳಿಗೆ ಯಶಸ್ವಿಯಾಗಿ ಬಳಸುತ್ತಿವೆ.

JUST THREE DOSES, WONDERFUL HERB FOR ASTHMA

A Saint has set about distributing free medicine for ASTHMA patients. It is a real boon and thousands have benefitted by this wonderful medicine. Poor sufferers will be even supplied medicines free except postage. ASTHMA patients kindly write in legible English or Hindi for this medicine to Sri SHIV KUMAR KIYAL, 40, Upper Chitpur Road,

CALCUTTA—7.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

S. C. 29/67.

B. ಕೇಶವದಾಸ್ ಬಾಳಿಗ —ವಾದಿ.

ಇದ್ದಿನಬ್ಬ ಸಹಾ —ಪ್ರತಿವಾದಿರು.

ಬೆಳ್ತಂಗಡಿ ತಾಲ್ಲೂ ಕುಕ್ಕೆಡಿ ಗ್ರಾಮದ ಉಜಿರ್ತಡಿ ಎಂಬಲ್ಲಿರುವ ಹಾಜಿ ಅಬ್ಬಾಬ್ಬಾರಿಗಳ ಮಗ ಇದ್ದಿನಬ್ಬನವರಿಗೆ ಕೋರ್ಟ್ ಹುಕುಂ ಜಾರಿ ತಿಳಿಸುವುದೇನೆಂದರೆ—

ಮೇಲಿನ ದಾವೆಯಲ್ಲಿ ನಿಮ್ಮಿಂದ ಬರತಕ್ಕ ರೂ. 199.93ಕ್ಕೆ ಮೊಡಿದ ಡಿಪಿಯು ಸಾ. 21.8.67ಕ್ಕೆ ನಿಮ್ಮ ಹಾಜ್ರಾತಿ ಬಗ್ಗೆ ಇರುತ್ತದೆ. ಆ ದಿವಸ ನೀವು ಸ್ವತಹಾ ಯಾ ವಕೀಲರ ದ್ವಾರ ಬೆಳಿಗ್ಗೆ 11ಗಂಟೆಗೆ ಕೋರ್ಟು ಮುಂದೆ ಹಾಜ್ರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾಪೂರ್ತಿ ದಾವೆಯನ್ನು ಮುಂದುವರಿಸಲಾದೀತು. ತಿಳಿದಿರಲಿ.

N. J. Kadamba
Advocate for Plaintiff.

ಬೆಳ್ತಂಗಡಿ, 8—8—1967.

ಗಾತ್ರದೆಯೆಂದೂ ಅವರ ನಂಬಿಕೆ. ಆಹಾರ ಸೇವನೆಯಾಗದ ನೀಳ್ಗೆಯಲ್ಲಿ ಶರೀರವು 'ಅಡ್ರಿನಲ್' ಗ್ರಂಥಿಗಳಿಂದ ಉತ್ಪಾದಿಸಲಾದ ಅಧಿಕ 'ಹಾರ್ಮೋನು'ಗಳನ್ನು ಸಕ್ರಿಯವಾಗಿ ಬಳಸಿಕೊಳ್ಳ ತೊಡಗುತ್ತದೆ ಯೆಂದು ಅವರು ತಿಳಿಸುತ್ತಾರೆ.

ಆದರೆ ಉಪವಾಸ ಚಿಕಿತ್ಸೆಗೆ ವಿಶೇಷ ಎಚ್ಚರಿಕೆ ಅವಶ್ಯಕವೆಂದೂ, ರೋಮನ್ ಚಕ್ರವರ್ತಿ ವೆಸ್ಪಾಸಿಯನ್ನರಂತೆ ತಿಂಗಳಿಗೊಂದು ದಿನ ಉಪವಾಸ ಮಾಡುವ ಅಭ್ಯಾಸವನ್ನಿಟ್ಟುಕೊಳ್ಳುವುದು ಒಳ್ಳೆಯ ದೆಂದೂ ಪ್ರೊ. ನಿಕೇತಿನ್ನರು ಹೇಳುತ್ತಾರೆ. ಈ ದಿನವನ್ನು ಕೂಡ ಚಿಕಿತ್ಸಕರೊಡನೆ ಹಂಗಾಮಿಕ ನಡೆಸಿದ ಮೇಲೆಯೇ ಗೊತ್ತುಪಡಿಸಬೇಕೆಂದು ಅವರು ಹೇಳುತ್ತಾರೆ.

ನಿಯಂತ್ರಿತ ಉಪವಾಸ

ಜಾಗರೂಕತೆಯಿಂದ ನಿಯಂತ್ರಿತವಾದ ಉಪವಾಸವು ಜೀವಿತಾವಧಿಯನ್ನು ಹೆಚ್ಚಿಸಬಹುದೆಂದು ಈ ವಿಜ್ಞಾನಿಯು ಅನೇಕ ವರ್ಷಗಳ ವರೆಗೆ ಇಲಿಗಳ ಮೇಲೆ ಪ್ರಯೋಗಗಳನ್ನು ನಡೆಸಿದ ತರುವಾಯ ನಿರ್ಧರಿಸಿದ್ದಾರೆ. ಸಾಮಾನ್ಯವಾಗಿ ಇಲಿಗಳು ಜೀವಿಸುವುದು ಎರಡೂವರೆ ವರ್ಷ ಕಾಲ. ಆದರೆ ಅವುಗಳ ಜೀವಿತಾವಧಿಯನ್ನು ಅವರು ಹಮ್ಮಿಪ್ರಯೋಗದ ಮೂಲಕ ನಾಲ್ಕೂವರೆ ವರ್ಷಗಳ ವರೆಗೆ ವೃದ್ಧಿಗೊಳಿಸುವಲ್ಲಿ ಸಫಲತೆ ಸಾಧಿಸಿದರು. ಅವುಗಳಿಗೆ ಆಹಾರವನ್ನು ಅಗಾಗ್ಗೆ ನೀಡದಿರುವುದರ ಮೂಲಕ ಅವರು ಈ ಪವಾಡವನ್ನು ಸಾಧಿಸಿದರು.

ಈಗ ಕೆಲವು ಚಿಕಿತ್ಸಾಲಯಗಳು ಉಪವಾಸ ಚಿಕಿತ್ಸೆಯನ್ನು 'ವೈಜ್ಞಾನಿಕ ವಿಕಾಸ'ದಿಂದ ಮೊದಲ್ಗೊಂಡು ಶ್ವಾಸಕೋಶದ ವರೆಗಿನ ಬಗೆ ಬಗೆಯ ರೋಗಗಳಿಗೆ ಯಶಸ್ವಿಯಾಗಿ ಬಳಸುತ್ತಿವೆ.

(ಮೂರನೇ ಪುಟದಿಂದ)

ವೆ? ಮತ್ಯಾಕೆ ಈ ನ್ಯಾಕರಿಗೆ ಬಂದೆ ಎಂದು ಕೆಂಗಣ್ಣು ತೋರಿಸುವವರೂ ಇಪ್ಪಾರೆ.... ಈಯೆಲ್ಲ ಮಾಹನೀಯರು ಶಾಸಕರ ವೇತನ—ಭತ್ತೆ ಕಡಿವೆಯೆಂದು ಗೊತ್ತಿದ್ದೂ ಗೊತ್ತಿದ್ದೂ ಮತ್ಯಾಕೆ ಶಾಸಕರಾಗಲು ಇಚ್ಚಿಸಿದರು ಎಂದರೆ, ತಮ್ಮ ವೇತನ—ಭತ್ತೆಯ ಸೃಷ್ಟಿ ಸ್ಥಿತಿ ಲಯಾಧಿಕಾರ ತಮ್ಮ ಕೈ ಗಳಲ್ಲೇ ಇವೆಯೆಂದಲ್ಲವೆ? ನ್ಯಾಕರನ್ನಾಳಿ ಹೊಟ್ಟೆಯಲ್ಲಿರಿಸಿ ತಾವು ತಿಂದು ತೇಗುವ ಶಾಸಕರ ಈ ಪ್ರವೃತ್ತಿ ಖಂಡನೀಯ. ಅವರು ತಪ್ಪುಗಾರುವ ಅಧಿಕಾರವಷ್ಟು ದುರುಪಯೋಗ ಪಡಿಸಿಕೊಂಡಂತೆ—ಹೀಗೆಯೇ ನಡೆದರೆ, ರಾಜ್ಯದ ಪ್ರಜಾ ಜನರು ಒಂದಾಗಿ ಪ್ರತಿಭಟನೆ ಗೂಡಿಸುವ ದಿನಗಳೂ ಬರಬಹುದು —ಇಂತಹ ಅನಪೇಕ್ಷಿತ ದರ್ಘಟನೆಗಳಿಗೆ ಶಾಸಕರು ಅವಕಾಶಕೊಡದಂತೆ ಎಚ್ಚರಿಕೆಯೇಕು — ಸ್ವಾರ್ಥ ಸಾಧನೆಯಲ್ಲ ಮಾನವತೆಯು ತಲಾಂಶವಾದರೂ ಬೇಡವೆ?

ನಿರೀಕ್ಷಿಸಿರಿ!

ಮುಂದಿನ ವಾರ

ಸ್ವಾತಂತ್ರ್ಯ ವಿಶೇಷಾಂಕ

ಪ್ರಕಟವಾಗುವುದು

ಇದರಲ್ಲಿ ಶ್ರೀಗಳಾದ 'ನವಗಿರಿನಂದಿ', 'ಶಿವಶಂಕರ', ಯು. ನಾ. ಉಡುಪ, ಪಿ. ಶ್ಯಾಮ ಭಟ್, ಪ್ರೊ. ಎಂ. ಎಸ್. ಎಸ್. ರಾವ್, ಸುಬೋಧ ಎಂ. ರಾಮರಾವ್, ಬೈಕಾಡಿ ವೆಂಕಟಕೃಷ್ಣ ರಾವ್, ಪ್ರಿನ್ಸಿಪಾಲ್ ಪಿ. ಗುರುರಾಜ ಭಟ್, ವಾ. ಅ. ಹೊಡಿಕೆ, ಶಿವಮಂಜೆ ಹರಾರಿ, ದಿಗಂಬರ ಜೋಶಿ, ಪ್ರಿನ್ಸಿಪಾಲ್ ಶಂಕರ ಮೊಕಾಶಿ, ಕೆ. ಜಿ. ಹೆಗ್ಗಡೆ, ಕಯ್ಯಾರ ಕಿಞ್ಞಣ್ಣ ರೈ, ಎಸ್. ಶಿವಮಲೇಶ್ವರ ಭಟ್, ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ ಮೊದಲಾದ ಪ್ರಸಿದ್ಧ ಬರಹಗಾರರ ಲೇಖನ, ಕವಿತೆಗಳು ಬರಲಿವೆ.

ವಾರಪತ್ರಿಕೆಯ ಆಕಾರದ 36 ಪುಟಗಳು. ಬೆಲೆ 0-50 ಪೈಸೆ. 0-60 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ಮೆನೇಜರ್, ನವಯುಗ, ಉಡುಪಿ.

ಜನಪದ ಗೀತೆ

ದಾಯವಾಡ್ಯೋದ ಮಳೆರಾಯ

ಅರಗಿ ಬಂದ್ಯಾ ಅಣ್ಣ ಹಲಗಿ ಮಂಚವನೇರಿ
ಅರಗಲಿಲ್ಲ ತಂಗಿ ಹದವಿಲ್ಲ| ಆ ಹೊಲಕೆ ರೋಣಿ ಭರಣೆಂಬೋ ಮಳೆ ಬೇಕು||
ಬಿತ್ತಿ ಬಂದ್ಯಾ ಅಣ್ಣ ಪಟ್ಟೆ ಮಂಚವ ನೇರಿ
ಬಿತ್ತಲಿಲ್ಲ ತಂಗಿ ಹದವಿಲ್ಲ| ಆ ಹೊಲಕೆ ಚಿತ್ತ ಸ್ಯಾತೆಂಬೋ ಮಳೆ ಬೇಕು||
ಅರಗಿದ ಹೊಲಗಳು ಸೋರಾಗಿ ಹೋಗುತಾವೆ
ಅರಿಗಿರೆ ಹೋದ ಮಳೆ ರಾಯ| ಕುಮಾರ ಸ್ವಾಮಿ
ಆಸ್ರಿ ಮಳೆಯ ತಂಸಯ್ಯ||
ಬಿತ್ತಿದ ಹೊಲಗಳು ಬತ್ತಿ ಹೋಗುತಾವೆ ಎತ್ತರದಾಗೆ ಹೋದ ಮಳೆರಾಯ
ಕುಮಾರ ಸ್ವಾಮಿ |
ಉತ್ತರ ಮಳೆಯ ತಂಸಯ್ಯ ||
ಸೂರ್ಯದನೆ ಗುಟ್ಟಿಗಟ್ಟಿ ಹಾಯವಾಗೈ ದಾರೆ ದೇವಗನ್ನೇರ್ ಕಳಸವ | ಹುಂ ಬೊಕ್ಕಿಗೆ
ಲೆತ್ತವಾಡ್ಯೋದ ವ ಳೆರಾಯ ||
ಚಂದ್ರನೆ ಗುಟ್ಟಿ ಅಂದವಾಗೈದಾರೆ ದೇವಗನ್ನೇರ್ ಕಳಸವ | ಹುಂಬೊಕ್ಕಿಗೆ
ದಾಯ ವಾಡ್ಯೋದ ಮಳೆರಾಯ ||

ಸಂಗ್ರಾಹಕ: ಕೋ. ಶ. ವಿಶ್ವನಾಥ,
ಹಾಡಿದವರು: ಓಬಮ್ಮ (ಬೋರೇ ದೇವರ ಹೆಟ್ಟಿ).

ವಿದ್ಯಾರ್ಥಿ ವೇತನ

ಕರ್ನಾಟಕ ಫ್ರೀ ಸ್ಟೈಟ್ ಹೈಸ್ಕೂಲಿನ ಸಂಚಾಲಕರಾದ ಬಂಟರ ಯಾನೆ ನಾಡವರ ಸಂಘ—ಮುಂಬಯಿ— ಇವರು ಇಲ್ಲಿಯ ಕಾಲೇಜುಗಳಲ್ಲಿ ಕಲಿಯುತ್ತಿರುವ ಯಾ ಕಲಿಯಲಿಚ್ಛಿಸುವ ಸ್ವಜಾತಿ ಬಡ ವಿದ್ಯಾರ್ಥಿಗಳಿಗೆ ಎಂಬೆಸಂಕಿ ವಿದ್ಯಾರ್ಥಿ ವೇತನ ರೂಪದಿಂದ ಸಾಲಕೊಡುವುದರಿಂದ, ಧನಸಹಾಯ ಪಡೆಯ ಲಿಚ್ಛಿಸುವ ವಿದ್ಯಾರ್ಥಿಗಳು ಅಗೋಸ್ತು ತಿಂಗಳ 15ರೊಳಗಾಗಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಬೇಕಾಗಿ ಅಪೇಕ್ಷಿಸಲಾಗಿದೆ.

Bunt Alias Nadava Sangha
4/34 Navayug Nivas
Opp. Minerva cinema,
Lamington Road, Bombay— 7.

ತಿದ್ದುಪಡಿ

ಇದೇ ಸಂಚಿಕೆಯ ಪುಸ್ತಕಂದನೇ ಪುಟದ ಆರಂಭದಲ್ಲಿ ಪ್ರಕಟವಾದ ಲೇಖನದ ಶಿರೋನಾಮೆಯೂ ಲೇಖಕರ ಹೆಸರೂತಪ್ಪಾಗಿ ಮುದ್ರಣವಾಗಿದೆ. "ಇತಿಹಾಸ ಪೃಷ್ಠ—ಸಾವಿನಲ್ಲಿ ಸಂತೋಷ" ಆನು. ಶ್ರೀ ಜೆ. ನಾರಾಯಣಾಚಾರ್ ಎಂಬುದರ ಬದಲಿಗೆ "ವಿಚಾರ ವೀಚಿ. ಭಾರತೀಯ ಸಾಹಿತ್ಯದ ಕೆಲವು ವಿಶೇಷತೆಗಳು". ಬರೆದವರು- ಶ್ರೀ ಮ. ಗೋ ರಾವ್ ಎಂದು ತಿರುಪಡಿಸಿ ಓದಬೇಕಾಗಿ ಸಾಹಿತ್ಯಾಸ್ತ್ರೆವೆ, ಅಲ್ಲದೆ ಈ ಪ್ರಮಾದಕ್ಕಾಗಿ ವಿಷಾದಿಸುತ್ತೇವೆ. (ಸಂ. ನ.)

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

S. C. 23/67.

ಕರಿಯಣ್ಣ ಕನ್ನಡ —ವಾದಿ.

ಮತ್ತು

ಮುದರ ಪೂಜಾರಿ —ಪ್ರತಿವಾದಿ.

ಬೆಳ್ತಂಗಡಿ ತಾಲ್ಲೂ ನಾವೂರು ಗ್ರಾಮದ ಮುನಿಮೂರು ಎಂಬಲ್ಲಿರುವ ತುಳ್ಳ ಪೂಜಾರಿಯ ಮಗ ಮುದರ ಪೂಜಾರಿಯವರಿಗೆ—

ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ.—

ನೀವು ದಿ ವೂ ಂದು ಪ್ರೊಮಿಸರಿನೋಟಿನ ಮೂಲಕ ವಾದಿಯಿಂದ ಪಡೆದ ರೂ. 100/-ಕ್ಕೆ ಮಾಡಿದ ದಾವೆಯು ತಾ. 1—9—1967 ಕ್ಕೆ ನಿಮ್ಮ ಹಾಜ್ರಾತಿ ಬಗ್ಗೆ ಇಟ್ಟಿರುತ್ತದೆ. ಆ ದಿವಸ ನೀವು ಬೆಳಿಗ್ಗೆ 11ಗಂಟೆಗೆ ಸ್ವತಹಾ ಯಾ ವಕೀಲರ ದ್ವಾರ ಕೋರ್ಟು ಮುಂದೆ ಹಾಜ್ರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾಪೂರ್ತಿ ದಾವೆಯನ್ನು ಮುಂದುವರಿಸಲಾದೀತು. ತಿಳಿದಿರಲಿ.

N. J. Kadamba
Advocate for Plaintiff

ಬೆಳ್ತಂಗಡಿ, 8—8—1967.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ಇತಿಹಾಸ ಪೃಷ್ಠ

ಸಾಮಿನಲ್ಲಿ ಸಂತೋಷ

ಅನು: ಶ್ರೀ ಕೆ. ನಾರಾಯಣಾಚಾರ್.

ಸಮಸ್ತ ಭಾರತೀಯ ಸಾಹಿತ್ಯದ ಎಲ್ಲಕ್ಕಿಂತ ದೊಡ್ಡ ವಿಶೇಷತೆ ಎಂದರೆ ಸಮನ್ವಯದ ಭಾವನೆಯೊಗಿದೆ. ಈ ವಿಶೇಷತೆಯು ಎಷ್ಟು ಪ್ರಮುಖ ಮತ್ತು ಮೂರ್ಮಿಕವೆಂದು ಕೇವಲ ಇದರ ಪ್ರಭಾವದಿಂದ ಜಗತ್ತಿನ ಅನ್ಯ ಸಾಹಿತ್ಯಗಳ ಎದುರಿಗೆ ತನ್ನ ಮೌಲ್ಯದ ಪತಾಕೆಯನ್ನು ಎತ್ತಿ ನಿರೆಯಿತ್ತಿದೆ. ಅಂತೆಯೇ ಅದು ತನ್ನ ಸ್ವತಂತ್ರತೆ, ಸಾರ್ಥಕ್ಯತೆಗಳನ್ನು ಎರೆಯಿತ್ತಿದೆ. ವಾಸ್ತವದಲ್ಲಿ ಜೀವನದ ಮಂಗಲಮಯ ಮತ್ತು ಆದರ್ಶಮಯ ರೂಪವನ್ನು ನಾವು ನಮ್ಮ ಸಮ್ಮುಖದಲ್ಲಿರಿಸಿದ್ದೇವೆ. ಹಾಗೆಯೇ ಭವಿಷ್ಯದ ಬಗ್ಗೆ ಅಶಾ ಭಾವನೆಯಲ್ಲಿದ್ದೇವೆ. ಇಂತಹ ಮೂರ್ಮಿಕತೆಯು ನಮ್ಮಲ್ಲಿ ನೆಲೆಗೊಳ್ಳಲು ಸಾಹಿತ್ಯ ನೆರವಾಗಿದೆ ಮತ್ತು ನಾವು ಸಮನ್ವಯವಾದದ ಭಾವನೆ ಇರಿಸಿಕೊಂಡಿದ್ದೇವೆ. ಒಂದು ಕಡೆಯಿಂದ ಸುಖವನ್ನು ಮತ್ತೊಂದೆಡೆಯಿಂದ ದುಃಖವನ್ನು ನಮ್ಮಣಾಗಿಸಿಕೊಂಡಿದ್ದೇವೆ.

ಸಾಹಿತ್ಯದ ಸಮನ್ವಯ:— ಸಾಹಿತ್ಯದ ಸಮನ್ವಯದ ಒಳಾರ್ಥ ಸಾಹಿತ್ಯದಲ್ಲಿ ಪ್ರದರ್ಶಿತ ಸುಖ—ದುಃಖ, ಉತ್ಸಾಹ- ಹತಾಶ, ಹರ್ಷ—ವಿಷಾದ, ಇತ್ಯಾದಿ ವಿವರಿತ ಭಾವಗಳ ಸವಿಸ್ತರಣ ಹಾಗೆಯೇ ಅಲೌಕಿಕ ಆನಂದದಲ್ಲಿ ವಿಲೀನಗೊಳ್ಳುವುದಾಗಿದೆ.

ಸಾಹಿತ್ಯದ ಬಗ್ಗೆ ಅಜ್ಞಾನ ಕತ್ತಲೆಗಳನ್ನು ನಿರೂಪಿಸಿಗುವುದನ್ನು ದೂರಗೊಳಿಸಬೇಕು. ಜೊತೆಗೆ ಭಾರತೀಯ ಸಾಹಿತ್ಯದಲ್ಲಿ ಧಾರ್ಮಿಕ ಭಾವನೆಯನ್ನು ತುಂಬಬೇಕು. ಧಾರ್ಮಿಕತೆಯನ್ನು ಅನೇಕ ರೂಪಗಳಲ್ಲಿ ನಾವು ಕಾಣಬಹುದು. ಪರಮಾತ್ಮನಿಗೆ ಅನೇಕ, ಅಗಣ್ಯ ರೂಪಗಳಿರುತ್ತವೆ ಎಂಬಂತೆ ಧಾರ್ಮಿಕ ದೃಷ್ಟಿಕೋನ ಅಧಿಕವಾಗಿ ವಿಸ್ತೃತಗೊಂಡಿತು. ಈ ಧಾರ್ಮಿಕ ಭಾವನೆಯು ಪರಿಣಾಮವಾಗಿ ಭಾರತೀಯ ಸಾಹಿತ್ಯದ ಮೇಲೆ ಒಂದು ಕಡೆಯಿಂದ ಪವಿತ್ರ ಭಾವನೆಗಳು ಮತ್ತು ಜೀವನ ಸಂಬಂಧದ ಗಂಭೀರ ವಿಚಾರಗಳು ವೃದ್ಧಿಗೊಂಡುವು. ಮತ್ತೊಂದೆಡೆಯಿಂದ ಲೌಕಿಕ ಭಾವನೆ ಹಾಗೆಯೇ ವಿಚಾರಗಳ ಚಿತ್ರವೂ ಕಡಿಮೆಯಾಯಿತು. ಈ ಧಾರ್ಮಿಕ ಭಾವನೆಯು ಅಧಿಕತೆಯಿಂದ ಎರಡು ರೀತಿಯ ಅನರ್ಥವೂ ಉಂಟಾಯಿತು. ಸಾಂಪ್ರದಾಯಿಕತೆಗಳು ಹಾಗೂ ಉಪದೇಶಗಳ ಕವನಗಳು ನಿರ್ಲಕ್ಷಿಸಲ್ಪಟ್ಟವು. ಹಾಗೂ ಕಲುಷಿತ ವಿಚಾರಗಳ ಸೃಷ್ಟಿಯುಂಟಾಯಿತು. ಈ ಎರಡನರ್ಥಗಳು ಸಮೂಹದಲ್ಲಿ ಪ್ರಾಸಿಕಾರಕನೆನಿಸಿಕೊಂಡುವು.

ಸಾಹಿತ್ಯದ ಜಾತಿಗತ ವಿಶೇಷತೆಗಳಿಂದ, ದೇಶಗತ ವಿಶೇಷತೆಗಳಿಂದ ಈ ಮೂರು ವ್ಯಕ್ತವಾಗುತ್ತವೆ. ಎಂತಹ ದೇಶದ ನಿಸರ್ಗ ರಮ್ಯತೆಯನ್ನು ಯಾವ ಕವಿ ನಿರೀಕ್ಷಿಸುವನೋ, ಭಾವನಾಪೂರಿತ ದೃಷ್ಟಿಕೋನದಿಂದ ವಿಕ್ಷೀಸುವನೋ ಅವನಿಗೆ ಆ ದೇಶದ ವೈಶಿಷ್ಟ್ಯಗಳ ರಹಸ್ಯದ ಅರಿವಾಗುವುದು. ಅರೇಬಿಯಾದ ಸಾಹಿತಿಯೊಬ್ಬನಿಗೆ ಅಲ್ಲಿಯ ಮರುಭೂಮಿಯ ದೃಶ್ಯಕಣ್ಣಿದುರು ನಿಲ್ಲಬಹುದು. ಒಂಟೆಗಳ ಸಾಲು, ಖರ್ಜೂರ ವೃಕ್ಷಗಳ ಶ್ರೇಣಿಗಳು, ಅಲ್ಲಲ್ಲಿ ಅಷ್ಟಿಷ್ಟು ಎತ್ತರವಾಗಿ ದಿನ್ನೆ ದಿನ್ನೆಗಳಾಗಿ ಬಿದ್ದಿರುವ ಮರಳ ರಾಶಿಗಳು, ಸೀರಿನ ಒಸರುಗಳಲ್ಲಿ ಕಾಣಬರಬಹುದು. ಭಾರತೀಯ ಕವಿಯು ಪ್ರಾಕೃತಿಕ ಸೌಂದರ್ಯದ ರಸಾಸ್ವಾದ ಮಾಡಿಕೊಂಡು ಆ ದುದರಂಗಳೇ ಭಾರತೀಯ ಸಾಹಿತ್ಯದಲ್ಲಿ ಸ್ವಾಭಾವಿಕವಾಗಿ ಈ ರಮ್ಯ ಪ್ರಕೃತಿಯ ವರ್ಣನೆ ಒಡಗೂಡಿಕೊಂಡಿದೆ ಈ ಕಾರಣದಿಂದಾಗಿ ಇಲ್ಲಿಯ ಕವಿಗಳ ಪ್ರಕೃತಿ ವರ್ಣನೆಯು ಸತ್ವ, ಸಜ್ಜನತೆ ಸೌಂದರ್ಯ ಜ್ಞಾನ ಉಚ್ಚ ಸ್ಥಾನವನ್ನಲಂಕರಿಸಿದೆ. ನಮ್ಮ ಕವಿಗಣವು ತಮ್ಮ ನೈಸರ್ಗಿಕ ಪೂರ್ಣ ಬುದ್ಧಿ ಕುಶಲತೆಯಿಂದ ದೃಶ್ಯ ಪ್ರಾಕೃತಿಕ ನಾನಾ ರೂಪಗಳಲ್ಲಿ ಒಂದು ಆವೃಶ್ಯ ಆದರೆ ಸಜೀವ ಸತ್ಯವು ಸಾಕಷ್ಟು ತತ್ಪರ ಮಾಡುತ್ತ ಆದರಲ್ಲಿ ಭಾವ ಮಗ್ನರಾದರು. ಪ್ರಕೃತಿ ಸಂಬಂಧಿ ರಹಸ್ಯವಾದ ನಮ್ಮ ಸಾಹಿತ್ಯದ ಒಂದು ದೇಶಗತ ವಿಶೇಷತೆಯಾಗಿದೆ.

ಭಾರತೀಯ ಸಾಹಿತ್ಯವನ್ನು ಮಥಿಸಿ



ನನ್ನವರು!

ಹುದಿಬೆರಳಲೆನ್ನ ಗಲ್ಲವಪಿಡಿದು ಮುದ್ದಿನಲಿ
ಈಜು ಒ 'ರಾಜು' ಎನ್ನೆದೆಗೊಳಿದಲಿ
ಎಂದು ಕರೆವರು ನನ್ನವರು!

ಮೆಲ್ಲನೆ ಮೈದಡವಿ ಗಲಿನೆ ಗಲ್ಲವ ಸವರಿ
ಈ ಜಗದೊಳ್ಳಾರಿಲ್ಲ ನಿನಗಿಂತ ಸುಂದರಿ
ಎಂದೆನುತ ಮುಗುಳ್ನಗುವರು!

ಕಂಕಣದ ಕಿಂಕಿಣಿಯ ದನಿಯನಾಲಿಸಿ
ಬಂದು
ಬೆಳು ಬೆರಳಲಿ ಹೆಣೆದು ನನ್ನ ನಲಿದು
ಪಪ್ಪಳಿಲ್ಲದೆ ಎದೆಯನಪ್ಪುವರು!

ನಿನ್ನ ನಾನು ಮೆಚ್ಚಿದೆ ಆದನ ಗೊತ್ತ
ಹಚ್ಚಿದೆ
ನಿನ್ನ ಕಂಡು ಕುರಿತು ನಾ ಕವಿತೆಯ
ಹೆಣೆದೆ
ಎಂದೆನ ಹೆ ನನ್ನವರು,

ನಕ್ಕ ನಗಿಸಿ ಮನೆಯಂಗಳಿಂಬಿತ್ತಳು
ಕಿಶೋರರು
ವೈಗುಸರ ಜೊತೆಯಲಿ ಹಾಡಿ ಹಾಡಿ
ನಲಿವರು
ನನ್ನವರು ಇಹ ಪರೈಶ್ವರು!

—"ಮಲ್ಲಾರಿ"

ಒಂದೇ ದುಃಖ

(ಎರಡನೇ ಪುಟದಿಂದ)

"ತಾವು ಹೀಗೆ ದೇಹವನ್ನು ಬೆಳೆಸಿದ ಗುಟ್ಟೇನು?"

'ಎಲ್ಲಾ ನನ್ನ ಹಣೇ ಬರಹ ಆಪ್ಪೇ'

ಇದನ್ನು ಕೇಳಿ ತಾಯಿರಮ್ಮ ಕಬ್ಬಿಬ್ಬಾದಳು. ಪನ್ನ ಕಣ್ಮುಂದಿನಿಂದ ಒಂದು ಪರದೆ ಸರಿದಂತೆ ಅವಳಿಗೆ ತೋಚಿತು.

"ನಿಶ್ಚಾರ್ಥಗ್ಯ? ಆದೆಂಥ ತಂಗೀ?"

'ನಾನು ತೆಳ್ಳಗಾಗಿಯೂ, ಸುಂದರಿಯಾಗಿಯೂ ಇರೋದು ನನ್ನವರಿಗೆ ಇಷ್ಟವಿಲ್ಲ."

"ಶಹಭ್ಯಪತಿಗೆ ಇಷ್ಟವಿಲ್ಲ!'

"ಇಲ್ಲ, ಎಳ್ಳಷ್ಟೂ ಇಲ್ಲ"

'ಆದೇಕ ಹಾಗೆ?"

'ನಾನು ಬಸ್ಸವಿಲ್ಲವಂತೆ. ಹೊಗಸರು ದಪ್ಪವಾಗಿರಬೇಕಂದೇ ಅವರ ಅಭಿಪ್ರಾಯ' ಹೀಗೆನ್ನುತ್ತ ಅವಳು ಅಳಲು ತೊಡಗಿದಳು. ಕಣ್ಣೀರು ಕೆನ್ನೆಗಳ ಮೊದಗಿ ತುಂಬಿದ ಕಣ್ಣಿಂದ

ತಾಯಿರಮ್ಮನ ಮನಸ್ಸಲ್ಲಿ ಭಾವಾವೇಷವಾಯಿತು. ಅವಳಲ್ಲೊಂದು ನವ ಸ್ಫೂರ್ತಿ ಉಂಟಾಗುತ್ತು. ಅವಳು ಯೋಚಿಸಿದಳು—"ಈ ಗಂಡುಸರು? ಎಷ್ಟೊಂದು ವಿಚಿತ್ರ ವ್ಯಕ್ತಿಗಳು. ಕೆಲವರು ಕೆಳುವಾದವರನ್ನೆ ಮೆಚ್ಚುತ್ತಾರೆ, ಕೆಲವರಿಗೆ ದಪ್ಪವೆ ಬೆಳೆದ ಪತ್ನಿಯೇ ಬೇಕು. ಅದರೆ ಬಡಪಾಯಿ ಹೆಂಗುಸು ಅವರ ಇಷ್ಟದಂತೆ ಹೇಗೆ ಬೆಳೆಯ ಸುದ? ಅವಳಿಗೂ ತನ್ನದೊಂದು ಸ್ವತಂತ್ರ ಅಸ್ತಿತ್ವವೆಂಬುದಿಲ್ಲವೇ ಮತ್ತೆ?"

ತನ್ನ ಬಳಿ ಕುಳಿತವಳನ್ನು ಮರೆತು ತಾಯಿರಮ್ಮ ಯೋಚನಾ ಮಗ್ನಳಾದಳು.

"ನೋಡು, ತಂಗೀ ನನ್ನೊಂದು ಪ್ರಶ್ನೆಗೆ ಉತ್ತರ ಹೇಳ್ತೀಯಾ?" ಆ ಹೆಂಗಸು ತಾಯಿರಮ್ಮನನ್ನು ಎಚ್ಚರಿಯಿಕ್ಕಿವೆ ನೋಡುತ್ತಾ ಕೇಳಿದಳು.

ತಾಯಿರಮ್ಮ ಯೋಚನೆಯ ಮಗ್ನಳಾದ್ದಳು. ಅವಳಿಗೆ ಈ ವಂತೇ ಲೇಳಲಿಲ್ಲ.

"ಲೇಳಿತೇ ನಿಮಗೆ? ತಾವು ಇಷ್ಟೊಂದು ಆದ್ದ ಬೆಳೆಯಲು ಕಾರಣವೇನು? ನನಗೂ ತಿಳಿಸ್ತೀರಾ?" ದೀನಾಭಾವದಿಂದ ಅವಳು ಪ್ರಶ್ನಿಸಿದಳು.

ಆಗಲಿಗ ತಾಯಿರಮ್ಮ ಯೋಚನಾ ಭಂಗಿಯಿಂದ ಏಳಲಿಲ್ಲ. ಅವಳ ಮನಸ್ಸಲ್ಲಿ ವಿಚಾರಗಳ ತಿಕ್ಕಾಟವಾಗುತ್ತಿತ್ತು. ಅವಳು ಯೋಚಿಸುತ್ತಿದ್ದಳು—'ಹಾಗಾದ್ರೆ ಹೆಂಗಸರು ಪತಿಯ ಲೈಗೊಂಬೆಯಂತೆ ಅವರ ಆಜ್ಞಾಪಾಲಕರಾಗಿರಬೇಕೆ? ನಾನು ದೇಹದಲ್ಲಿ ದಪ್ಪವಿದ್ದರೇನಾಯ್ತು, ಮನಸ್ಸಲ್ಲಿ ಕಪ್ಪಿನವಳಲ್ಲವಲ್ಲ. ಈ ದೇಹಕ್ಕೋಸ್ಕರ ನಾನ್ಯಾಕೆ ವ್ಯರ್ಥ ಒತ್ತಾಪಟ್ಟು ಚಿಂತಿಸಲಿ? ಇದರ ಬದಲು ಪನ್ನ ಪತಿಯೇ ನಾಕಷ್ಟು ತಿಂದು ಕಾಡಿದ ಅಷ್ಟೆ ಬೇಳಲಿ. ಕೇವಲ ನಾನೇ ವಿಶ ತೆಳುವಾಗುವ ಯೋಚನೆ ಪಿಡಿಯುವುದು?'

ಫಕ್ಕನೆ ಅವಳಿಗೆ ತನ್ನ ಪತಿಯು ಕ್ಷೀಣ ದೇಹಪ್ರಕೃತಿಯವನೆಂದು ಹೊಳೆಯಿತು.

ಬಿಗಿ ಸಾಪು ಶೈಲಿಯ ಎಡ ರೂಪವನ್ನು ಕಾಣ ಶ್ರೇವೆ. ಅತ್ಯಧಿಕವೂ ಅತ್ಯನಿವೇದನೆ ಇತ್ತು ವರ್ಣನಾತ್ಮಕ ಭಾವಗೀತೆ ಕವಿಯ ತನ್ನ ಭಾವನೆಗಳ ಸುಂದರ ಚಿತ್ರಣವನ್ನು ಪೋಣಿಸಿ ಬರುವುದು. ಇದರಲ್ಲಿ ಈ ಎರಡನೆಯ ಶೈಲಿಗೆಯೇ ಹೆಚ್ಚು ಪ್ರಾಧಾನ್ಯ. ಇದು ಸಾಮಾನ್ಯಕ್ಕೆ ವಿರುಗನ್ನು ಕೊಟ್ಟಂತೆ ಸಾಹಿತ್ಯವನ್ನು ರಂಜಿಸುವುದಕ್ಕಾಗಿ ಪೂಡ ವುದು.. ನಾವು ಭವಿಷ್ಯದ ಬಗ್ಗೆ ಆಶಾಭಾವನೆಯನ್ನಿಟ್ಟು ಜೀವನದ ಆದರ್ಶ ರೂಪವನ್ನು ಕಾಣುವ. ಇದರಿಂದ ಸಾಹಿತ್ಯದ ಅಭಿವೃದ್ಧಿಯನ್ನೂ ಬಯಸುವ.

(ಹಿಂದಿಯಿಂದ)

ರಾಷ್ಟ್ರಪತಿ ನಿವಾರಣೆಗಾಗಿ

ಇಂಬೇ
ಉದಾರ ಸಹಾಯ ನೀಡಿರಿ

"ಕಡಿಗೆ ಕೇವಲ ಒಂದೆರಡು ಪ್ರಶ್ನೆಗಳಲ್ಲ ಸ್ವೇ ಸೀಮಿತವದ ಪವಸ್ಯೆಯಲ್ಲ; ಬಾರತದ ಸಮಸ್ತ ಜನತೆಗೆ ಎದುರಾಗಿರುವ ಕಷ್ಟ. ಇಂತಹ ಪರಿಸ್ಥಿತಿನ್ನು ಎಲ್ಲಾ ಜನರೂ ತನು ಮನ ಧನಗಳಿಂದ ಸಹಾಯ ಮಾಡಬೇಕೆಂಬುದಾಗಿ ನಾನು ನಿಮ್ಮಲ್ಲಿ ಅರಿಕೆ ಮಾಡುತ್ತೇನೆ.

ಈಗಾಗಲೇ ಕಾಣಿಕೆ ನೀಡಿರುವವರು ಇನ್ನಷ್ಟು ಹೆಚ್ಚು ನೀಡಿರಿ. ಈ ತನಕ ಕೊಡದ ಇರುವವರೂ ಉದಾರವಾಗಿ ಕೊಡಿ. ನಾವು ಎಲ್ಲರೆಲ್ಲ ಈಗಲೇ ನೀಡಿರಿ."

ಪ್ರಧಾನ ಮಂತ್ರಿಯವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣ.

ಪ್ರಧಾನ ಮಂತ್ರಿಯವರ ಕ್ಷಾಮ ನಿವಾರಣ ನಿಧಿಗೆ ಉದಾರವಾಗಿ ಕಾಣಿಕೆ ನೀಡಿರಿ.

ಈ ನಿಧಿಗೆ ಕಳುಹಿಸುವ ಧನ ಮತ್ತು ಸಾಮಗ್ರಿಗಳ ಬಗ್ಗೆ ಮನಿ ಆರ್ಡರ್ ಫಲ, ಅಂಚೆ ಪೆಟ್ಟಿ ಮತ್ತು ರೈಲ್ವೆ ಸೌಕರ್ಯ ಉಚಿತವಾಗಿದೆ. ಪಿಪಸ್ಸು, ಬಟ್ಟೆಗಳನ್ನು ಕಂಗ್ರೆಸಿಸಿದ ಆಹಾರ ಇತ್ಯಾದಿಗಳನ್ನು ಎಷ್ಟಾದ ಮೊತ್ತಕ್ಕೆ ಉಚಿತವಾಗಿ ಸಾಗಿಸಲಾಗುತ್ತಿದೆ. ಅಂಚೆ, ವಿಮಾನ ಸಾಗಾಟ, ಮತ್ತು ರೈಲ್ವೆ ವೆಚ್ಚಗಳು, ವರಮಾನ ತೆರಿಗೆ, ಆಬಕಾರಿ ಮತ್ತು ಸುಂಕಕ್ಕೆ ಇತ್ಯಾದಿಗಳಲ್ಲಿ ರಿಯಾಯಿತಿ ದೊರೆಯುತ್ತದೆ.

ಸೈಮ್ಯ ಮಿನಿಸ್ಟರ್ಸ್ ಡ್ರಾಟ್ ರಿಲೀಫ್ ಫಂಡ್,
ಕ್ಯಾಬಿನೆಟ್ ಸೆಕ್ರೆಟೇರಿಯೆಟ್, ರಾಷ್ಟ್ರಪತಿ ಭವನ, ನ್ಯೂ ಡಿಲ್ಲಿ—1

NAVAYUGA [illegible]
Registered with the Registrar of News Papers for India under No. R. N. 3597/58

REGD. No. B. G. 176
LICENCE No. 31
Licensed to Post without Prepayment

ಸುಯೇಜ್ ಕಾಲುವೆ

ಪ್ರಾಮುಖ್ಯವನ್ನು ಕಳೆದುಕೊಳ್ಳುತ್ತಿದೆಯೆ?

"ಸೂಯೆಜ್ ಕಾಲುವೆ ಮುಚ್ಚಿದ ಸುಮಾರು ಆರು ವಾರಗಳ ನಂತರ ಪ್ರಪಂಚದ ವ್ಯಾಪಾರಕ್ಕೆ ಸ್ವಲ್ಪ ಉಸಿರು ಬೇಕೆನ್ನಿಸಿದರೂ ಉಸಿರು ಕಟ್ಟುವ ಸ್ಥಿತಿಯೇನೂ ಆದಕ್ಕೆ ಬಂದಿಲ್ಲ" ಎಂದು ಬ್ರೆಂಡನ್ ಜೋನ್ಸ್ ನ್ಯೂಯಾರ್ಕ್ ಟೈಂಸಿನಲ್ಲಿ ಬರೆದಿದ್ದಾರೆ.

"ಇಂಥ ಮೈಲುಗಳ ಉದ್ದದ ಕಾಲುವೆಯನ್ನು ಇತ್ತೀಚೆಗೆ ಮುಚ್ಚುವ ಮುನ್ನವೂ, ಈ ಕಾಲುವೆ ಕಂಪನಿಯ ಧಣಿಯಲ್ಲುವವರೂ ಆಪತ್ಕಾಲದಲ್ಲಿ ಸಾಮಾನ್ಯ ಮಾರ್ಗವಾಗಿ ಉಪಯೋಗಿಸಲ್ಪಡುವಂತೆ ಮಾಡಲು ಸಾಧ್ಯವಿತ್ತು" ಎಂದೂ ಜೋನ್ಸ್ ಬರೆದಿದ್ದಾರೆ.

"ಆದರೆ ವ್ಯಾಪಾರದ ಹರಿವು ಬಹಳ ಭರದಿಂದ ಪರ್ಯಾಯ ಮಾರ್ಗಗಳಿಗೆ ತೊಡಿಕೊಂಡಿರುವುದನ್ನು ನೋಡಿದರೆ ಮೂಲಭೂತ ಸ್ಪರ್ಧೆಯೊಂದು ಏಳುತ್ತಿದೆ. ಪ್ರಪಂಚದ ವ್ಯಾಪಾರಕ್ಕೆ ಸೂಯೆಜ್ ಎಷ್ಟು ಮುಖ್ಯ—ಈಗ ಮತ್ತೆಂದೂ ಇನ್ನು ಮುಂದೆ?"

ಕಾಲುವೆಯನ್ನು ಮುಚ್ಚಿದ್ದರಿಂದ ಪ್ರಪಂಚ ವ್ಯಾಪಾರದಲ್ಲಿ ಸ್ವಲ್ಪ ತೊಂದರೆಯೂಯಿತೇ ಹೊರತು ಆ ವ್ಯಾಪಾರ ನಾಶವಾಗಿಲ್ಲ ಎಂದು ನ್ಯೂಯಾರ್ಕ್ ಬಂದರಿನ ಅಧಿಕಾರಿ ಜೆರೋಮ್ ಗಿಲ್ಬರ್ಟ್ ಹೇಳಿದರೆಂದು ಜೋನ್ಸ್ ಉಲ್ಲೇಖಿಸಿದ್ದಾರೆ.

'ನಾಪೇಕ್ಷವಾಗಿ ನ್ಯೂಯಾರ್ಕಿನ ಭೂಗರ್ಭ ವ್ಯವಸ್ಥೆ ಲಾಭಕರವಾಗಿದ್ದರೆ ಸೂಯೆಜ್ ಕಾಲುವೆಯನ್ನು ಮುಚ್ಚಿದ್ದರಿಂದ ಆಗಿರುವುದಕ್ಕಿಂತ ಹೆಚ್ಚಿನ ತೀವ್ರತರವಾದ ಸಾರಿಗೆ ಸಮಸ್ಯೆಗಳು ಉದ್ಭವವಾಗುತ್ತಿದ್ದವು. ಅದು ಅನಿವಾರ್ಯವೆಂಬ ಪರಿಸ್ಥಿತಿ ಈಗ ಅಸ್ತಿತ್ವದಲ್ಲಿದೆ" ಎಂದು ಗಿಲ್ಬರ್ಟ್ ಹೇಳಿದರೆಂದು ಜೋನ್ಸ್ ತಿಳಿಸಿದ್ದಾರೆ. "ಆ ಕಾಲುವೆ ಮುಚ್ಚಿದ ಕಾರಣ ಉಂಟಾದ ಹಿತಾಸಕ್ತಿಗಳ ರಕ್ಷಣೆಗಾಗಿ ಪ್ರಪಂಚ ಯುದ್ಧದ ಅವಾಂತರವನ್ನು ಎದುರಿಸುವುದಕ್ಕೂ ಪ್ರೊಟೆಸ್ಟ್ ಹಾಗೂ ವ್ಯಾಸ್ಗಳು ಸಿದ್ಧವಿದ್ದ ರೀತಿಯಿಂದ ಈಚೆಗೆ ಬಹಳ ಬದಲಾವಣೆಗಳಾಗಿವೆ ಎಂದೂ ಜೋನ್ಸ್ ಸೂಚಿಸಿದ್ದಾರೆ.

ತಮ್ಮ ವಾದಕ್ಕೆ ಪೂರಕವಾಗಿ ಅವರು ಈ ಸಂಗತಿಗಳನ್ನು ಉದಾಹರಿಸಿದ್ದಾರೆ—

ರೋಟರ್ಡ್ಯಾಮ್ ಸರಿಸುಮಾರು ೧೦ ನಾಟುಗಳಷ್ಟು ವೇಗದಲ್ಲಿ ಚಲಿಸುತ್ತಿದ್ದ ಟ್ಯಾಂಕರುಗಳ ಸ್ಥಾನಕ್ಕೆ ಈಗ ೧೫ ನಾಟುಗಳ ವೇಗದಲ್ಲಿ ಚಲಿಸುವ ಟ್ಯಾಂಕರುಗಳು ಬರುತ್ತಿವೆ. ಅಂದರೆ ಅನೇಕ ವೇಳೆ ಅರ್ಧ ದಿವಸವನ್ನು ಬಳಸಿ ಹೋಗುವುದೇ ತಪ್ಪಿದಂತಾಗಿದೆ.

ರೋಟರ್ಡ್ಯಾಮ್‌ನಿಂದೀಚೆಗೆ ಪತ್ತಿನು ಸುಯೋಜಿಪಿಸಲ್ಪಟ್ಟ ಎಣ್ಣೆಯ ಬಳಕೆ ಮೂಡುಪಟ್ಟು ಹೆಚ್ಚಿದ್ದರೂ, ೧೦ ವರ್ಷಗಳ ಕೆಳಗೆ ಎಣ್ಣೆಯ ಬೇಡಿಕೆಯ ೦೦೫ಷ್ಟು ಸೂಯೆಜ್ ಮೂಲಕ ಬರುತ್ತಿದ್ದರೆ ಈಗ ಅವ್ಯವಸ್ಥೆಯ ಅರ್ಥದಷ್ಟು ಸೂತ್ರ ಈ ಕಾಲುವೆಯ ಮೂಲಕ ಬರುತ್ತಿದೆ.

ಕಾಲುವೆ ಮುಚ್ಚಿದ್ದರಿಂದ ನಷ್ಟಕ್ಕೆ ಒಳಗಾದವರಲ್ಲಿ ಇದ್ದಾರೆ. ಆದರೆ 'ಬೇರೆ ಯಾವುದೇ ಪ್ರದೇಶಕ್ಕಿಂತ ಪರ್ಶ್ಯ ಖಾಡ್ಯನೇ ಕಾಲುವೆಯ ನಷ್ಟ ಪರಿಚ್ಛೇದನ ಪರಿಣಾಮವನ್ನು ಹಚ್ಚಾಗಿ ಅನುಭವಿಸುವಂತೆ ತೋರುತ್ತಿದೆ' ಎಂದು ಜೋನ್ಸ್ ಬರೆದಿದ್ದಾರೆ.

ಆ ಪ್ರದೇಶಕ್ಕೆ ಎಣ್ಣೆಯು ತೀಕ್ಷ್ಣ ಸೇವೆಯನ್ನು ಪೂರ್ತಿಯಾಗಿ ಪೂರೈಸಲಿದೆ 'ಸೂಯೆಜ್ ಪೂರ್ವದ ಮಾರುಕಟ್ಟೆಗಳಿಗೆ' ಆದಾಯವನ್ನು ಅಮದು ಮಾಡುವುದಕ್ಕೂ ಕಾಲುವೆ ಅವಶ್ಯ.

'ಈಗಾಗಲೆ ವಿಪರೀತವಾದ ಆರ್ಥಿಕ ಸಂಗ್ಲೆಷ್ಟನಲ್ಲಿರುವ ಈಜಿಪ್ಟ್ ಸೂಯೆಜ್‌ನಿಂದ ವರ್ಷವೊಂದಕ್ಕೆ ಲಭಿಸುವ ೨೦ ಕೋಟಿ ಡಾಲರುಗಳ ವಿದೇಶ ವಿನಿಮಯವನ್ನು ಕಳೆದುಕೊಳ್ಳುತ್ತಿದೆ. ಇದರ ಜತೆಗೆ ಈಗ ಸಿಂಕು ಜೋಡಿಸುವ ಪ್ರಯಾಸಿಗ್ಯಾಸಾಂದ ಬರುತ್ತಿದ್ದ ಸುಮಾರು ೧೦ ಮಿಲಿಯ ಡಾಲರ್ ಗಳನ್ನೂ ಕಳೆದುಕೊಳ್ಳುತ್ತಿದೆ. ಈ ಎರಡು ಆದಾಯಗಳು ಒಟ್ಟು ಬೇಡಿಕೆಯ ಆದಾಯದ ಮೂರನೆ ಒಂದರಷ್ಟಾಗುತ್ತವೆ.

'ಕಾಲುವೆ ಮುಚ್ಚಿದ್ದರಿಂದ, ಹಡಗುಗಳ ವಿಳಾಸದಿಂದ ಈಜಿಪ್ಟಿಗೆ ಅಭಿವೃದ್ಧಿಯ ಆದಾಯ ತರುವ ಪತ್ತಿನು ಸಂಸ್ಥೆಗಳು ಕಡಿಮೆ' ಎಂದೂ ಜೋನ್ಸ್ ಬರೆದಿದ್ದಾರೆ.

ಕಾಲುವೆಯನ್ನು ಮುಚ್ಚಿದ್ದರಿಂದ ಭೂ ಆಕರ್ಷಣೆ ನಷ್ಟವಾಗುವ ಸಂಭವವಿದೆ. ನಾವಿಕರ ಸ್ಥಾನದಿಂದ ಭಾರವಿಳಿಕೆ ಭೂಸ್ಥಿತಿ, ತರಬೇತಿ ಪಡೆದ ಸಿಬ್ಬಂದಿ ಅನಾವಶ್ಯಕವಾಗಿ ಬೇಕಾದಷ್ಟು ಹೆಚ್ಚು ಬೇಡಿಕೆಯಾಗಿದೆ.

ಈ ವರ್ಷ ಪೂರ್ತಿ ಕಾಲುವೆ ಮುಚ್ಚಿದ್ದರೆ, ಸೂಯೆಜ್ ಕೊಲ್ಲಿ ಪಾಲುದಾರರು ಹೊಸ ಹಡಗುಗಳ ಹೆಚ್ಚಳ ನೆವನ್ನೆ ಹೆಚ್ಚಳವನ್ನೂ ಹಚ್ಚಿಸುವ ಯೂರೋಪ್ ಮೂಲಕ ಹೋಗಲಾರಂಭಿಸುವುದು ಎಂದೂ ಜೋನ್ಸ್ ಬರೆದಿದ್ದಾರೆ. ಆದರೆ ಪ್ರಯಾಣಿಕರನ್ನು ಸಕ್ಕರೆಯೂ ಹಾಗೂ ಎಣ್ಣೆಯ ಬೆಲೆ ಗ್ಯಾಲನ್ನಿಗೆ ಒಂದರಿಂದ ಎರಡು ಸೆಂಟುಗಳನ್ನು ಹೆಚ್ಚಬಹುದು ಎಂಬ ಒಂದು ಸಂಗತಿಯಿಂದ ಈತ್ಯ ಪ್ರಯತ್ನ ತಳೆಯಬಹುದು.

"ಅಮೆರಿಕಕ್ಕೆ ಸೂಯೆಜ್ ಕಾಲುವೆಯ ಮೂಲಕ ಯಾವ ಮುಖ್ಯ ವಸ್ತುವೂ ಬರುವುದಿಲ್ಲ" ಎಂದು ಪಾಶ್ಚಿಮ್ಯ ಕಾಲುವೆಯವರು ಹೇಳಿದರು.

ನ್ಯೂಯಾರ್ಕ್ ಟೈಂಸ್ ಪತ್ರಿಕೆಯಲ್ಲಿ ಪ್ರಕಟವಾಗಿರುವ ಇನ್ನೊಂದು ಲೇಖನದಲ್ಲಿ ವಿಲಿಯಂ ಡಿ. ಸ್ಮಿತ್ ಅವರು, ಈ ಕಾಲುವೆ ಇನ್ನೂ ಮುಂದು ತಲೆಗಾಲ ಮುಚ್ಚಿರುವುದೆಂಬ ನಿರ್ಣಯಕ್ಕೆ ತಜ್ಞರು ಬಂದಿರುವರೆಂದೂ, "ಭೂ ವಿನಿಮಯವನ್ನು ಬಳಸಿ ಹೋಗುವವರು ಅನುಕೂಲ, ಅನಾನುಕೂಲಗಳ ಪರಿಶೀಲನೆಗೆ ಈ ಪರಿಸ್ಥಿತಿ ಅವಕಾಶ ನೀಡಿದೆಯೆಂದೂ ಅವರು ಹೇಳಿದ್ದಾರೆ.

ಕಾಲುವೆಯನ್ನು ಮತ್ತೆ ತೆರೆದಾಗ, ಅದಕ್ಕೆ ಒಡಿಷ್ಕಾರ ಹಾಕುವ ಪ್ರಶ್ನೆಯನ್ನು ನೌಕಾ ಸಾರಿಗೆದಾರರು ಪರಿಶೀಲಿಸುತ್ತಿದ್ದಾರೆಂದೂ, ಇನ್ನೂ ಹೊಡ್ಡ ದೊಡ್ಡ ಎಣ್ಣೆಂಕಾರ್ಗೆಗಳು ಬಳಸುವ ಪ್ರವೃತ್ತಿಯ ವೇಗವನ್ನು ಎಣ್ಣೆಯ ಸುತ್ತಿದ್ದಾರೆಂದೂ ಸ್ಮಿತ್ ಬರೆದಿದ್ದಾರೆ.

ಈ ಪರಿಸ್ಥಿತಿಯಿಂದ ಸೈಜೀರಿಯ, ವೆನಿಜುವೆಲಾ ಮತ್ತಿತರ ಅಮೆರಿಕಗಳಲ್ಲಿ ಎಣ್ಣೆಯ ಉತ್ಪನ್ನ ಹೆಚ್ಚುವೆಯೆಂದೂ, ಇದರಿಂದ ಅರಬ್ ಪ್ರದೇಶಕ್ಕಿನ ಪೆಟ್ರೋಲಿನ ಎಣ್ಣೆಯ ಮಾರಾಟಗಳು ಸ್ಪರ್ಧೆಯಿಂದ ಸ್ವಲ್ಪ ಕುಗ್ಗುವೆಯೆಂದೂ ಸ್ಮಿತ್ ತಮ್ಮ ಲೇಖನದ ಕೊನೆಯಲ್ಲಿ ಹೇಳಿದ್ದಾರೆ.

ಜಪಾನು ಎಣ್ಣೆಯ ಸಂಬಂಧವಾಗಿ ಹೆಚ್ಚು ಹೆಚ್ಚಾಗಿ ಕೆಲವು ಸರಕಾರ್ಯಾಗಳನ್ನು ಸಿನಿಯಮಿತ ಅಂತರಾಷ್ಟ್ರೀಯ ಎಣ್ಣೆಯ ಮಾರಾಟ ಸಂಸ್ಥೆಗಳ ಕದಿಗೆ ತಿರುಗುವ ಮೂಲಕ ವಿಧ್ಯುಕ್ತವಾಗಿ ಎಣ್ಣೆಯ ಅವಲಂಬನೆಯನ್ನು ಇಂದಿನ ಬೇಡಿಕೆಯಿಂದ ಶೇಕಡ ೬೦ಕ್ಕೆ ಇಳಿಸುವ ಉದ್ದೇಶ ತನ್ನದೆಂದು ಪ್ರಕಟಿಸಿದೆ.

ನಿಮ್ಮ ಕೈಯಲ್ಲಿ ಪ್ರೀತಿಪಾತ್ರರಾಯರಿಂದ ನಿರೀಕ್ಷಿಸುವಂತೆ—

ಆಂಗ್ಲ ಸ್ವಯಂಬೋಧಿನಿ

ಸುಲಭವಲ್ಲ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ಪಂಡಿತರಿಗೂ ಅತ್ಯಂತ ಉಪಯುಕ್ತವಾಗುವಂತೆ ಬರೆದಿರುವ ಪುಸ್ತಕ

ಇಂಗ್ಲಿಷಿನಲ್ಲಿ ಪ್ರೌಢ್ಯವನ್ನು ಪಡೆಯಲು ಬಯಸುವವರಿಗೆ ಅತ್ಯಂತ ಉಪಯುಕ್ತವಾದ

ಸುಲಭವಲ್ಲ ಇಂಗ್ಲಿಷ್

ವಿವಿಧ ವ್ಯಾಕರಣಾಂಶಗಳನ್ನು ಸ್ಪಷ್ಟವಾಗಿ ವಿವರಿಸಿ ಅನೇಕ ಉದಾಹರಣೆಗಳನ್ನು ಕೊಟ್ಟಿದೆ

ಪುಟಗಳು ೬೦೦ ಬೆಲೆ ರೂ. ೮-೦೦

ಡಾ॥ ಕೂರಿಯಾಲ ವೆಂಕಟಸುಬ್ಬಯ್ಯ ವಿರಚಿತ

ಅಮೆರಿಕ - ಅಮೆರಿಕನ್ನರು

ಸಂಯುಕ್ತ ಸಂಸ್ಥಾನದ ಇತಿಹಾಸ, ಭೂಗೋಳ, ಜನಜೀವನ, ಸಂಸ್ಕೃತಿ ಮತ್ತು ಸಾಧನೆಗಳ ವಿಸ್ತೃತ ಪರಿಚಯ

ವಿಧಾನ ವಿವರಿಸುವ ಗ್ರಂಥವೆನ್ನಿಸಿದೆ.

ಬೆಲೆ ರೂ. ೭-೦೦ (ಪೋಸ್ಟೇಜು ಉಚಿತ)

ಪ್ರತಿಗಾಗಿ ಬರೆಯಿರಿ:

ಪ್ರಕಾಶಕರು: ಸ್ಮಿತ್ ಪಬ್ಲಿಷಿಂಗ್ ಹೌಸ್, ಸಿ.ಎಸ್.ಐ. ಅಗ್ರಹಾರ

ನವಯುಗಕ್ಕೆ ಸೈನು, ಉಡುಪಿ

ಮುತ್ತೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 2805/1966.
O. S. 569/65.

ಬಾಡು ನ್ಯಾಕ —ವಾದಿ.

ವರ್ಸಸ್

ಡಪ್ಪಮೂರ ಕೆಟ್ಟಿ ಕೂಡಾ —ಪ್ರತಿವಾದಿರು.

10ನೇ ಪ್ರತಿವಾದಿ ಕನುಲಾವತಿ—ನಾಗ ಕುಮಾರ ಕೆಟ್ಟಿ ಪಕ್ಷ— ಬೆಟ್ಟಂಗಡಿ ತಾಲೂಕು ಮುಲಜಂತಿಗೆ ಗ್ರಾಮದ ಎಳನೀರು ಬಾಗಿಮನೆ.

ಮೇಲಿನ ವಾದಿಯು ವಾದಿಯ ಪರ ವಕೀಲರ ಮೂಲಕ ಪಡೆದ ಪ್ರಿಲಿಮಿನರಿ ಡಿಕ್ರಿಕ್ಕಿ ಪ್ರಕಾರ ಫೈನಲ್ ಡಿಕ್ರಿ ಕೂಡಿಸಬೇಕೆಂದು ಪಡೆದಿರುವ ದಾವ್ಯ ಪತ್ರದ ಅರ್ಜಿಯು ತಾ. 14—8—1967ಕ್ಕೆ ಇಟ್ಟುಕೊಂಡಿರುವುದರಿಂದ ಆ ದಿವಸ ನಿಮ್ಮ ಅಕ್ಷೇಪಣೆ ಇದ್ದಲ್ಲಿ ಸದ್ರಿ ದಿವಸ 11 ಗಂಟೆಗೆ ಕೋರ್ಟಿನಲ್ಲಿ ಹಾಜರ್ ಹೊಡಿಕೊಳ್ಳಬೇಕೆಂದೂ ಕೋರ್ಟು ಹುಕುಂ ಪ್ರಕಾರ ಈ ಪಬ್ಲಿಕ್ ನೋಟಿಸು ಹೊರಡಿಸಲಾಗಿರುತ್ತದೆ.

(Sd.) N. R. Bhat
Advocate for Plaintiff.

ಪುತ್ತೂರು, ತಾ. 29—7—1967.

ನವಯುಗಕ್ಕೆ

ಏಜೆಂಟರಾಗಲಿಚ್ಛಿಸುವವರಿಗೆ ಪ್ರೋತ್ಸಾಹಸಿರಿ

ಮಾಸಿಕಗಳ ಚಂದಾ ರೂ. ೧೦.

ನವಯುಗ

ಸ್ವಾತಂತ್ರ್ಯ ವಿಶೇಷಾಂಕ ೧೯೬೭

NAVAYUGA

INDEPENDENCE DAY SPECIAL

1967

80

ಸ್ವಾತಂತ್ರ್ಯದಿನದ ಶುಭಾಶಯಗಳು!



1 ಶ್ರೀ ಯಂ ಸುಂದರ್‌ರಾಮು ಶೆಟ್ಟಿ, ಬೆಂಗಳೂರು (ಜಯರ್‌ಮೇಸ್)
2. " ಜೆ. ಸುಂದರರಾಮು ಶೆಟ್ಟಿ, ಮಂಗಳೂರು
3 " ಬಿ ರಾಜೀವ ಶೆಟ್ಟಿ, ಮಂಗಳೂರು.
4 " ಕೆ ಯಾಲ್. ಭಂಡಾರಿ, ಮೈಸೂರು.
5 " ವಿ. ರಘುವರ್ಮ ಹೆಗ್ಗಡೆ, ಧರ್ಮಸ್ಥಳ.
6. ಡಾ। ಕೆ. ವಿಠಲ ಶೆಟ್ಟಿ, ಕಾಪು.
7 ಡಾ। ಕೆ. ಬಾಲಕೃಷ್ಣ ಶೆಟ್ಟಿ, ಮಂಗಳೂರು.
8 ಶ್ರೀ ಬಿ ಟಿ ರವೀಂದ್ರನಾಥ ಪೂಂಜ, ಬೆಂಗಳೂರು
9. " ಬಿ ಜಿ. ವೀರಣ್ಣ, ಬೆಂಗಳೂರು.
10. " ಕೆ. ಪಿ ಪುಟ್ಟಯ್ಯ, ದೊಡ್ಡಬಳ್ಳಾಪುರ.
11. " ಯಚ್ ಟಿ ಭಂಡಾರಿ, ಮುಂಬಾಯಿ.
12 " ಕೆ ಪಿ ಮಾಧವನ್ ನಾಯರ್, ಉಟಕಮಂಡ್
13. " ಆನಂದರಾವ್ ಬಿಂದೂರಾವ್ ದೇಸಾಯಿ, ಹುಬ್ಬಳ್ಳಿ

ಶ್ರೀ ಪಿ. ಜಯರಾಮು ಶೆಟ್ಟಿ,
ಸೆಕ್ರೆಟರಿ.

ಶ್ರೀ ಯಸ್. ವಿಠಲ ಶೆಟ್ಟಿ,
ಡೆಪ್ಯುಟಿ ಸೆಕ್ರೆಟರಿ.

ಶ್ರೀ ಪಿ ಯಂ ಹೆಗ್ಡೆ,
ಆಡಿಟರ್.

ಮೈಸೂರು ರಾಜ್ಯದಲ್ಲಿ	—	53
ಕೇರಳ ರಾಜ್ಯದಲ್ಲಿ	—	25
ಮದ್ರಾಸ್ ರಾಜ್ಯದಲ್ಲಿ	—	4
ಮಹಾರಾಷ್ಟ್ರ ರಾಜ್ಯದಲ್ಲಿ	—	2

ಸಧ್ಯದಲ್ಲಿಯೇ ನಮ್ಮ ಹೊಸ ಶಾಖೆಗಳನ್ನು ಮಂಡ್ಯ, ಉಟಕಮಂಡ್ ಮತ್ತು ಉಜಿರೆ ಕಡೆಗಳಲ್ಲಿ ತೆರೆಯಲಿದ್ದೇನೆ.

ರಿಜಿಸ್ಟರ್ಡ್ ಆಫೀಸು:- "ವಿಜಯಾ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು - 3

ಸ್ಥಾಪನೆ: 1931
ಫೋನ್ ನಂಬ್ರ.. 4040

ಸ್ವಾಮಿಕರು:
ದಿ। ಎ. ಬಿ. ಶೆಟ್ಟಿರು

ಸಂಜಾಲಕ-
ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ.

ನವಯುಗ

ಸ್ವಾತಂತ್ರ್ಯ ವಿಶೇಷಾಂಕ ೧೯೬೭

ಫೋನ್: 226

ಸಂಪುಟ ೮೬

ಸಂಚಿಕೆ ೫೧

ಸಂಪಾದಕೀಯ-

ನಾವು ಹಿಂದುಳಿದಿಲ್ಲ

ನನಗೆ ಸ್ವಾತಂತ್ರ್ಯಲಭಿಸಿ, ನಾವು ಸ್ವತಂತ್ರರಾಗಿ ಇಪ್ಪತ್ತು ವರ್ಷಗಳು ಗತಿಸಿದುವು. ಸ್ವತಂತ್ರ ಭಾರತೀಯರು ಈ ಇಪ್ಪತ್ತು ವರ್ಷಗಳಲ್ಲಿ ತಮ್ಮ ಸ್ವಾತಂತ್ರ್ಯ ರಕ್ಷಣೆಯನ್ನು ಮಾಡಿಕೊಳ್ಳುತ್ತ ಸ್ವಾತಂತ್ರ್ಯ ವೃಕ್ಷದ ಬೇರನ್ನು ಬಲವಾಗಿ ಹರಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಸಮಾನತೆಯನ್ನು ನಮ್ಮ ಸಂವಿಧಾನ ನಮಗೆ ಕೊಡಮಾಡಿದೆ. ಮಹಿಳೆಯರೂ ಪುರುಷರಂತೆಯೇ ಸಮಾನಾಧಿಕಾರ ಹೊಂದಿದ್ದಾರೆ. ಆರ್ಥಿಕ ವಿಷಮತೆಯನ್ನೂ ದೂರ ಮಾಡಲು ಸಮಾಜ ವಾದದ ತಳಹದಿಯಲ್ಲಿ ದೇಶ ಮುಂದುವರಿಯುತ್ತಿದೆ. ಅಧಿಕಾರ ಸೂತ್ರ ಹಿಡಿದಿರುವ ಕಾಂಗ್ರೆಸ್ಸು ಇದರತ್ತ ತೀವ್ರವಾಗಿ ಧಾವಿಸುವತ್ತ ಲಕ್ಷ್ಯ ವಹಿಸಿದೆ.

ನಮ್ಮ ದೇಶದಲ್ಲಿ ಸಮಾಜವು ಸ್ವತಂತ್ರವಾಗಿದೆ. ವ್ಯಕ್ತಿ ಸ್ವತಂತ್ರನಾಗಿದ್ದಾನೆ. ಈ ದಿನೆಯಲ್ಲಿ ಭಾರತವು ಪ್ರಾಚೀನತಮ ಪ್ರಜಾಪ್ರಭುತ್ವದೊಡನೆ ಸ್ಪರ್ಧಿಸಬಲ್ಲುದು. ಅಭಿವ್ಯಾಯ ಪ್ರಕಟಣಾ ಸ್ವಾತಂತ್ರ್ಯವಿರುವುದರಿಂದಲೇ ಇಲ್ಲಿ ಪತ್ರಿಕೆಗಳ ಸಂಖ್ಯೆ—ಪ್ರಸಾರ ಹೆಚ್ಚಿದೆ. ರೇಡಿಯೋ ಪ್ರಸಾರ ಬೆಳೆದಿದೆ. ಭಾರತದಲ್ಲಿ ನಾನಾ ಧರ್ಮೀಯರು ತಮ್ಮ ತಮ್ಮ ಸಂಪ್ರದಾಯಗಳನ್ನು ಅನುಸರಿಸಿಕೊಂಡು ಒಂದಾಗಿ ಬಾಳುತ್ತಿದ್ದಾರೆ. ಹಿಂದುಳಿದ ವರ್ಗಗಳನ್ನು ಮುಂದೆ ತರಲು ಪ್ರಯತ್ನ ಸಾಗುತ್ತಿದೆ. ಇವೆಲ್ಲವುಗಳಿಗಿಂತ ಹೆಚ್ಚಾಗಿ, ವ್ಯಕ್ತಿ ಸ್ವಾತಂತ್ರ್ಯಕ್ಕೆ ತಲೆಯೆತ್ತಿ ನಿಂತಿದೆ. ಇದಕ್ಕೆ ನಾಲ್ಕನೆಯ ಸಾರ್ವತ್ರಿಕ ಚುನಾವಣೆ—ಮತ್ತು ಅಘಂತರದ ವಿದ್ಯಮಾನಗಳೇ ಸಾಕ್ಷಿ.

ಈ ಇಪ್ಪತ್ತನೆಯ ವರ್ಷದಲ್ಲಿ ಭಾರತದ ಪ್ರಜಾಪ್ರಭುತ್ವದ ಬುನಾದಿಯೂ ಸಭದ್ರವಾಗಿ ಮೂಡಿದೆಯೆಂಬುದು ವ್ಯಕ್ತವಾಗಿದೆ. ಆದುವರೆಗೆ ಕೇಂದ್ರದಲ್ಲೂ ಹೆಚ್ಚಿನ—ಎ.ಜ್ಞಿ ಎಂದರೂ ತಪ್ಪಲ್ಲ—ರಾಜ್ಯಗಳಲ್ಲೂ ಕಾಂಗ್ರೆಸ್ಸೇ ಅಧಿಕಾರ ಸೂತ್ರ ಹಿಡಿದಿತ್ತು. ಜನತೆಗೆ ಬದಲಾವಣೆ ಬೇಕೆನ್ನಿಸಿತು. ವಿವಿಧ ಪಕ್ಷಗಳು ಜನತೆಯನ್ನು ನಂಬಿಸಿದುವು. ಪರಿಣಾಮವಾಗಿ ನಾಲ್ಕಾರು ರಾಜ್ಯಗಳನ್ನುಳಿದು ಇತರಕಡೆ ಕಾಂಗ್ರೆಸ್ಸೇತರ ಸರಕಾರಗಳು ರಚನೆಯಾದುವು. ಸಂಯುಕ್ತರಂಗ ಸರಕಾರಗಳ ಆಯುಸ್ಯವೆಷ್ಟೆಂದು ಈಗಲೇ ಹೇಳುವಂತಿಲ್ಲವಾದರೂ ಕಾಂಗ್ರೆಸ್ಸೇತರರೂ ಸರಕಾರ ರಚಿಸುವ ಅನಿವಾರ್ಯತೆ ದೊರೆತುದರಿಂದ ತುಲನಾತ್ಮಕ ಅಧ್ಯಯನ ಮಾಡುವ ಸಂದರ್ಭ ಜನತೆಗೊದಗಿತು. ಕೇಂದ್ರದಲ್ಲಾದರೂ ಕಾಂಗ್ರೆಸಿನ ತುಂಬಿ ತುಳುಕುವ ಬಹುಮತ ದೂರವಾಗಿ ಬರಿಯ ಬಹುಮತ ಲಭ್ಯವಾದದು ಪ್ರಜಾಪ್ರಭುತ್ವದ ಆರೋಗ್ಯಕೊಂದು ಪೆನಿಸಿಲಿನ್ ಇಂಜೆಕ್ಷನ್ನು.

ನಾಲ್ಕು ಸಾರ್ವತ್ರಿಕ ಚುನಾವಣೆಗಳನ್ನು ಸುಸೂತ್ರವಾಗಿ ಭಾರತೀಯರು ನಡೆಸಿ, ತಮಗೆ ಬೇಕಾದಂತೆ ಆಡಳಿತವನ್ನು ರೂಪಿಸಿದರು. ಇದು ಸ್ವಾತಂತ್ರ್ಯದ ಸಕ್ಷಲಗಳಲ್ಲಿ ಒಂದು. ನ್ಯಾಯೋಂಗವು ಸಂಪೂರ್ಣವಾಗಿ ಪ್ರತ್ಯೇಕವಾಗಿದ್ದು ನಾಗರಿಕರಿಗೆ ತಮ್ಮ ಸ್ವಾತಂತ್ರ್ಯ ರಕ್ಷಣೆಯುಕಾವಲುಗಾರನೆಂತಿದೆ. ಇತ್ತೀಚೆಗೆ ಕೆಲವೊಂದು ಶಾಸನಗಳು ಸಂವಿಧಾನ ವಿರೋಧಿಯೆಂದು ನಾಗರಿಕರ ಪರ ನ್ಯಾಯಾಲಯಗಳು ತೀರ್ಮಾನ ಮಾಡಿದ್ದನ್ನು ನಾವು ಗಮನಿಸಬಹುದು. ದೇಶದಲ್ಲಿ ಹಲವಾರು ಹಳೆಯ ಹೊಸ ಸಮಸ್ಯೆಗಳು ತುಂಬಿ ತುಳುಕಾಡುತ್ತಿದ್ದರೂ, ಜನತೆಯಲ್ಲಿ ಒಂದು ಬಗೆಯ ತೀವ್ರ ಆಸಮಾಧಾನ ಅಂತರ್ಜ್ವಾಲೆಯಂತೆ ಉರಿಯುತಿದ್ದರೂ 'ನಾವೆಲ್ಲರೂ ಭಾರತೀಯರು' ಎಂಬ ಭಾವನೆ ದಿನದಿನಕ್ಕೆ ಬೆಳೆದು ಬರುತ್ತಿದೆ. ಪರಾಕ್ರಮಣದ ವೇಳೆ ಇದು ವಿಶ್ವ ವಿದಿತವಾಗಿತ್ತು.

ಈ ಇಪ್ಪತ್ತು ವರ್ಷಗಳಲ್ಲಿ ನಾವು ಸಾಧಿಸಿದ್ದೇನು? ಸಾಧನೆಯೆಂದರೆ, ಬ್ಯಾಂಕುಗಳಲ್ಲಿನ ವಿವಿಧ ಖಾತೆಗಳಲ್ಲಿ ಜಮೆಯಾದ ಹಣವಲ್ಲ; ಕೊಂಡುಕೊಂಡ— ವಾಹನ—ಒಡವೆ— ಭೂಮಿ— ಮನೆಯಲ್ಲ. ಜೀವನದ ದಾರಿಯು ಸುಗಮವಾಗಿಲ್ಲವೆ? ಜೀವನ ಸೌಕರ್ಯಗಳು ಹೆಚ್ಚಿಲ್ಲವೆ? ಸಂಪಾದನೆಯೂ ಹೆಚ್ಚಿದೆ, ವೆಚ್ಚವೂ ಹೆಚ್ಚಿದೆ—ಶಾರಣ, ಇಂದಿನ ಮಾನವನ ಬೇಕುಗಳ ಸಂಖ್ಯೆಯೂ ಹೆಚ್ಚಿದೆ. ಹನ್ನ ಬೇಕುಗಳಲ್ಲಿ ಕೆಲವನ್ನಾದರೂ ಸಾಧಿಸಿಕೊಳ್ಳುವ ಶಕ್ತಿಯಿಂದು ನಾಗರಿಕನಿಗಿದೆ. ಇದೇ ನಾವಧನೆ—ಪ್ರಗತಿ; ಸ್ವಾತಂತ್ರ್ಯದ ಫಲ ನಮ್ಮ ಕನಸು—ಬಂಗಾರದಿದ್ದಿತು ನಿಜ. ಅದನ್ನು ನೆನಸು ಮೂಡುವುದು ನಮಗಿನ್ನೂ ಸಾಧ್ಯವಾಗಿಲ್ಲವೆಂಬುದೂ ಸತ್ಯ. ಆದರೂ ನಮ್ಮ ಸಾಧನೆ ಸ್ಪೂರ್ತಿದಾಯಿಯಾಗಿದೆ; ನಾವು ಕೈಕಟ್ಟಿ ಕೂತಿಲ್ಲ—

- ಇಂದು ಭಾರತೀಯರ ಸರಾಸರಿ ಆಯುರ್ಮಾನ ೫೦ ವರ್ಷಗಳಿಗೇರಿದೆ.
- ಸೇ. ಮೂವತ್ತರಷ್ಟು ನಾಸ್ತರರು ದೇಶದಲ್ಲಿದ್ದಾರೆ.
- ಶಾಲೆಗೆ ಹೋಗುತ್ತಿರುವ ಮಕ್ಕಳ

(ಮೂಲಪತ್ರಿಕೆಯನೇ ನೋಡಿರಿ)

ಶ್ರೀ ಟಿ. ಎ. ಪೈ

ರಾಷ್ಟ್ರೀಯ ದುರ್ಬಲತೆಗೊಂದು ರಾಮಬಾಣ

ದೇಶದ ಸಮಸ್ಯೆಯನ್ನು ಜನ ಹಂಚಿಕೊಳ್ಳುವುದನ್ನು ಬಿಟ್ಟು, ಜನರ ಸಮಸ್ಯೆಗಳನ್ನು ದೇಶಕ್ಕೆ ಒದಗಿಸ ಬಾರದು. ರಾಷ್ಟ್ರೀಯ ದುರ್ಬಲತೆಯನು ಜಾಡಿಸಲು ಸಾಮಾಜಿಕ ಸುಧಾರಣೆಯೊಂದೇ ರಾಮಬಾಣ. ಈ ದಿಸೆಯಲ್ಲಿ ನವ ಜನಾಂಗದ ಪಾತ್ರ ಮಹತ್ವಪೂರ್ಣವಾಗಿದೆ.



ಯಾವುದೇ ದೇಶವು ಪ್ರಗತಿ ಹೊಂದ ಬೇಕಾದರೆ ಕಷ್ಟಪಟ್ಟು ದುಡಿಯಬೇಕು. ಭಾರತವೊಂದು ಉದಿಯವೂನ ದೇಶ. ಭಾರತೀಯರೆಲ್ಲರೂ ಪರಿಶ್ರಮದಿಂದ ದುಡಿದರೆ ಮಾತ್ರ ಇದು ಎದ್ದು ಬರುವುದು ಸಾಧ್ಯ. ಬೇರೆ ಬೇರೆ ಯೋಜನೆಗಳ ಮೂಲಕ ದೇಶವನ್ನು ಮುನ್ನಡೆಸುವುದು ನಿಜವಾದರೂ ಯೋಜನೆಗಳಿಗಾಗಿ ಹಣ ಒದಗಿಸ ಬೇಕಾದರೆ, ನಮ್ಮ ಜನತೆ ಹೆಚ್ಚಿನ ತ್ಯಾಗವನ್ನು ಮಾಡಲೇ ಬೇಕಾಗುವುದು.

ಮಾನವ ಸಂಪತ್ತು ದೇಶದ ದೊಡ್ಡ ಸಂಪತ್ತು. ನಮ್ಮ ದೇಶದ ಯೋಜನೆಗಳಲ್ಲಿ ಈ ಸಂಪತ್ತಿಗೆ ಸಲ್ಲ ಬೇಕಾದ ಸ್ಥಾನ ಸಂದಿರುವುದಿಲ್ಲ— ಉಪೇಕ್ಷೆಯಾಗಿದೆಯೆಂದರೂ ಸರಿಯಾದೀತು. ಅಭಿವೃದ್ಧಿ ಯೋಜನೆಗಳಿಗಾಗಿ ಬಂಡವಳದ ಕೊರತೆಯಿರುವಾಗ, ಕಾಯಕವೊಂದೇ ರಾಜಮಾರ್ಗ. ಹೆಚ್ಚಿನ ಪ್ರತಿಫಲದ ಆಶೆಯನ್ನು ಬಿಟ್ಟು ದೇಶ ನಿರ್ಮಾಣಕಾಗಿ ತ್ಯಾಗ ಮಾಡುವ ದಷ್ಟೇ ಇಂದಿನ ದಾರಾ ಮುಂದಿನ ತಲೆಮಾರಿಗೂ ದೊರೆತ ಮಹಾ ಧಾಗ್ಯನೆಂದರೂ ತಪ್ಪಲ್ಲ.

ನಮ್ಮಲ್ಲಿ ಹಲವು ಸಮಸ್ಯೆಗಳಿವೆ. ಇವನ್ನು ನಮ್ಮ ಜೀವನಶೈಲಿಯಲ್ಲಿಯೇ ಪರಿಹರಿಸಲು ಯುವಕರು ಸಿದ್ಧರಾಗಬೇಕು.

ದೇಶದ ೫೦ ಕೋಟಿ ಜನರ ದೇಶದ ಮಹಾ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಒಂದಾಗಿ ದುಡಿದರೆ, ಪ್ರತಿಯೊಬ್ಬರ ಪಾಲಿಗೂ ಐವತ್ತು ಕೋಟಿಯಲ್ಲಿ ಒಂದಂಶ ಸಮಸ್ಯೆ ಮಾತ್ರ ಉಳಿಯುವುದು. ಬದಲಿಗೆ ಪ್ರತಿಯೊಬ್ಬನೂ ಒಂದೊಂದು ಸಮಸ್ಯೆಯ ರೂಪ ತಳೆದರೆ, ದೇಶದ ಮುಂದೆ ೫೦ ಕೋಟಿ ಸಮಸ್ಯೆಗಳು ಎದ್ದು ನಿಲ್ಲುವುವು

ಭಾಷೆ, ಶಿಕ್ಷಣ ಮಾಧ್ಯಮ, ರಾಜ್ಯಗ

(ಮೂಲವತ್ತೆರಡನೇ ಪುಟ ನೋಡಿರಿ)

೧೫ ಆಗಸ್ಟ್ ೧೯೬೭

ವಿಜಯೋತ್ಸವಕುದಯಿಸುತಿದೆ ಅಪರಾಜಿತ ದೇಶಾ
ಉರಿ ಬಿಸಿಲಲಿ ಮರಗಟ್ಟಿಹ ಮುಗಿಲಲಿ ಜಲರೇಷಾ
ಓರೋರನೆ ಮೂಡುತಲಿದೆ ಧಾರೆಯ ಉನ್ಮೇಷಾ.

ಕಷ್ಟಲೆಯುದರದಿ ಚಿಮ್ಮಿತ್ತುತಲಿದೆ ಶಕ್ತಿಯು
ಬಿತ್ತಿಹ ಬಿಡು ನೆಲದಲಿ ಹಲೆಯೆತ್ತುತಲಿದೆ ಸಸಿಯು
ಬತ್ತಿಹ ಹೆಗ್ಗೆರೆಯಲಿ ಹೊಸ ಸೆಲೆಯೂಟದ ಹಸಿಯು.

ವಿಶ್ವದ ವಿನ್ಯಾಪಿಹ ಗುರುಗುಂಟಿದ ಬಸಿರು
ಇಂದೇತಕೆ ಆಳವಳದಿದೆ? ಯಂತರ ಏಟ್ಸುಸಿಗ ?
ಕದುಕುತಲಿದೆ ಶಿವಪ್ರಸವವು! ಏನಾಹನ ಹೆಸರು?

ಬೆಲ್ಲದಿ ಸಂ ಬೆರೆಯಲಿ ನಳು ಕಹಿ ಬೇವಿನ ನೋವು
ಬೆನ್ನಾಟಕೆಯೂಗಲಿ ಕೊಲ್ಲಲು ಬಂದಿಹ ಸಾವು
ಇರುಳಿನ ತೊಡೆಯಲಿ ಕಣ್ಣೆರೆಯಲಿ ಮುಂಜಾವು.

ವಿಜಯೋತ್ಸವಕುದಯಿಸುತಿದೆ ಅಪರಾಜಿತ ದೇಶಾ....

—ಶಂಕರ ಮೊಕಾಶಿ –ಪುಣೇಕರ

ಪ್ರಿನ್ಸಿಪಾಲ್ ಕು. ವಿ. ಹರಿದಾಸ ಭಟ್ಟ.

ಪ್ರಭುದ್ಧ ಭಾರತ

ಇಂದು ನಮ್ಮ ದೇಶದ ಸಾಮಾಜಿಕ—ರಾಜಕೀಯ ಸನ್ನಿವೇಶವನ್ನು ಗಮನಿಸಿದರೆ ವಿಚಾರವಂತರು ಭೀತರಾಗಬೇಕಾದ ಕಾರಣಗಳು ಹೇರಳ ದೊರೆಯುತ್ತವೆ. ಇಪ್ಪತ್ತು ವರ್ಷಗಳ ಹಿಂದಿನ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಆಗ ಜನರಲ್ಲಿ ಒಂದು ಬಗೆಯ ಉತ್ಸಾಹ ಕಂಡುಬರುತ್ತಿತ್ತು. ಸ್ವಾತಂತ್ರ್ಯ ಸಂಪಾದನೆಯ ಹಂಬಲ ಎಲ್ಲರಲ್ಲಿಯೂ ಮನೆಮಾಡಿತ್ತು. ಸ್ವಾತಂತ್ರ್ಯ ಸಂಪಾದನೆಯ ಹೋರಾಟದಲ್ಲಿ ಜನರು ಒಂದಾಗಿ ಸೇರಿ ಕೆಲಸ ಮಾಡುತ್ತಿದ್ದರು. ಆಗ ಜನರಲ್ಲಿ ಒಂದು ಬಗೆಯ ಸಾಮರಸ್ಯ ಕಂಡುಬರುತ್ತಿತ್ತು. ಆದರೆ ಈಗ ಸ್ವಾತಂತ್ರ್ಯ ಸಂಪಾದನೆಯ ಹಂಬಲ ಕಡಿಮೆಯಾಗಿ ಅದರ ಸ್ಥಾನದಲ್ಲಿ ಸ್ವಾರ್ಥ ಮನೆಮಾಡಿದೆ. ಸ್ವಾತಂತ್ರ್ಯ ಸಂಪಾದನೆಯ ಹೋರಾಟದಲ್ಲಿ ಜನರು ಒಂದಾಗಿ ಸೇರಿ ಕೆಲಸ ಮಾಡುತ್ತಿದ್ದರು. ಆಗ ಜನರಲ್ಲಿ ಒಂದು ಬಗೆಯ ಸಾಮರಸ್ಯ ಕಂಡುಬರುತ್ತಿತ್ತು. ಆದರೆ ಈಗ ಸ್ವಾತಂತ್ರ್ಯ ಸಂಪಾದನೆಯ ಹಂಬಲ ಕಡಿಮೆಯಾಗಿ ಅದರ ಸ್ಥಾನದಲ್ಲಿ ಸ್ವಾರ್ಥ ಮನೆಮಾಡಿದೆ. ಸ್ವಾತಂತ್ರ್ಯ ಸಂಪಾದನೆಯ ಹೋರಾಟದಲ್ಲಿ ಜನರು ಒಂದಾಗಿ ಸೇರಿ ಕೆಲಸ ಮಾಡುತ್ತಿದ್ದರು. ಆಗ ಜನರಲ್ಲಿ ಒಂದು ಬಗೆಯ ಸಾಮರಸ್ಯ ಕಂಡುಬರುತ್ತಿತ್ತು. ಆದರೆ ಈಗ ಸ್ವಾತಂತ್ರ್ಯ ಸಂಪಾದನೆಯ ಹಂಬಲ ಕಡಿಮೆಯಾಗಿ ಅದರ ಸ್ಥಾನದಲ್ಲಿ ಸ್ವಾರ್ಥ ಮನೆಮಾಡಿದೆ.

ಭಾರತದ ವಿಭಜನೆಯಿಂದ ತೊಡಗಿದ ಈ ದೇಶಭಂಜಕ ಮನೋವೃತ್ತಿ, ಭಾಷಾವಾರು ಪ್ರಾಂತಗಳ ರಚನೆಯಲ್ಲಿ ಪರಿಣಾಮವಾಗಿ, ಈಗಂತೂ ಪರಸ್ಪರ ದ್ವೇಷಾಸೂಯೆಗಳ ವಿಕಟ ರೂಪವನ್ನು ತಳೆದು ಭಾರತದ ಐಕ್ಯ ಸೂತ್ರಗಳನ್ನು ತುಂಡಿದು ನಿಂತಿದೆ. ಮುಂಬಯಿಯ ಶಿವಸೇನೆಗೆ ಇದಿರಾಗಿ ಬೆಂಗಳೂರಿನಲ್ಲಿ ಬಸವಸೇನೆ ನಿರ್ಮಾಣವಾಗುತ್ತಲಿದೆ. ಕೃಷ್ಣಾ ನೀರಿನ ವಿವಾದವನ್ನು ಎರಡು ರಾಜ್ಯಗಳು ನ್ಯಾಯಾಲಯದಲ್ಲಿ ವ್ಯವಹರಿಸಿ ಪರಿಹರಿಸಿಕೊಳ್ಳಬೇಕೆಂದು ತೀರ್ಮಾನಿಸಿದೆ. ಪಂಜಾಬನ್ನು ಎರಡಾಗಿ ಒಡೆದ ಮೇಲೆಯೂ ಅನ್ಸಾಮಿನ ಛಿದ್ರೀಕರಣಕ್ಕೆ ನಾಂದಿ ಹೇಳಲು ಅಕಾಲಿದಳ ಮಹಾ ಉತ್ಸಾಹ ತೋರಿದ್ದಾರೆ. ವಿದ್ಯಾರ್ಥಿಗಳ ಸಂಕುಚಿತ ಮನೋವೃತ್ತಿ ಮುಂದಾಗಿ ಐಕ್ಯಕ್ಕೆ ಹೇತುವಾಗಬಲ್ಲ ಸಿಂದಿಯನ್ನು ಹೀನಯಿಸಿ ಹಿಂದೂಡುವ ಪ್ರಯತ್ನ ಸಫಲವಾಗುವುದೆಲ್ಲದೆ. ಆಡಳಿತದಲ್ಲಿಯೂ, ಅಂತರ್ ಪ್ರಾಂತೀಯ ವ್ಯವಹಾರದಲ್ಲಿಯೂ ನಮ್ಮ ನಾಡಿನ ಐಕ್ಯವನ್ನು ಶಾಸನಾರೂಢವಾಗಿ ಬಂದಿದ್ದ ಇಂಗ್ಲಿಷಿಗೆ ಚಟ್ಟು ಹೊಡುವ ನೋಟೀಸನ್ನು ಕೇಂದ್ರ ಶಿಕ್ಷಣ ಮಂತ್ರಿ ತ್ರಿಗುಣ ಸೇನರು ಜಾರಿ ಮಾಡಿದ್ದಾರೆ.

ದೇಶವು ಅಂದು ಕಟ್ಟಿಕೊಂಡಿದ್ದ ಕನಸು ನುಚ್ಚು ನೂರಾಗಿದೆ. ನಮ್ಮ ಗೋರಿಯನ್ನು ನಾವೇ ಕಟ್ಟಿಕೊಳ್ಳಬಾರದೆಂದಿದ್ದರೆ, ಎಚ್ಚರಾಗಲೇ ಬೇಕು. ಇಂದಿನ ಪ್ರಕ್ಷುಬ್ಧ ಭಾರತವನ್ನು ಪ್ರಶಾಂತ ಭಾರತವನ್ನಾಗಿಸಬಲ್ಲ ಕೆಲವು ಉಪಾಯಗಳನ್ನು ಸೂಚಿಸಿದೆ.

ಭಾರತದ ಅನಭಿಷಿಕ್ತ ಸಾರ್ವಭೌಮ ಪಂಡಿತ ನೆಹರೂ ಅವರ ಕಾಲದಲ್ಲಿ ಬೀಜಾರೋಪಣಗೊಂಡಿದ್ದ ಈ ಭಾರತ ಪ್ರವೃತ್ತಿಗಳೆಲ್ಲವೂ ಈಗ ವೈ ಮೇಲಿನ ಬೊಕ್ಕೆಗಳಂತೆ ಹೊರಕ್ಕೆದ್ದು ಕಾಣಿಸುವಂತಾಗಿವೆ. ದೇಶಾಭಿಮಾನ, ರಾಷ್ಟ್ರಾಭಿಮಾನಗಳ ಜೀವಂತ ಮೂರ್ತಿಯಾಗಿದ್ದ ಪಂಡಿತಜಿಯವರ ಮರಣಾನಂತರ ಇಷ್ಟು ಬೇಗನೆ ನಮ್ಮ ರಾಷ್ಟ್ರೀಯ ರೋಗವು ಉಲ್ಬಣಿಸೀತೆಂದು ಯಾರೂ ಎಣಿಸಿರಲಿಲ್ಲ. ನಮ್ಮ ಶಾಸನ ಸಭೆಗಳಲಿನ ದೈನಂದಿನ ಜಟಾಪಟಿಕೆಗಳನ್ನೇ ಹೊರಗೆ ಪತ್ರಿಕೆಗಳಲ್ಲಿ ಪ್ರಕಟಿಸುವ ಜಗಳಗಳನ್ನು ನೋಡಿದರೆ ನಮ್ಮ ಗೋರಿಯನ್ನು ನಾವೇ ತೋಡಿಕೊಳ್ಳುವ ಹುಚ್ಚು ದಡ್ಡತನವು ನಮ್ಮನ್ನು ಆವರಿಸಿರುವುದು ಸ್ಪಷ್ಟವಾಗುವುದು.

ಪ್ರತಿಯೊಂದು ರಾಜಕೀಯ ಸನ್ನಿವೇಶದಲ್ಲಿಯೂ ನಮ್ಮ ಧುರೀಣರು ಅವರ ನಿರೂಪದ್ರವಿ ಬೆಂಬಲಿಗರನ್ನು ತಪ್ಪುಹಾದಿ ಹಿಡಿಸುವ ಪ್ರಯತ್ನ ಕಂಡುಬರುತ್ತಿದೆ. ಉದಾಃ ಮುಂಬಯಿಯ ಶಿವಸೇನೆಯನ್ನು ಚಿವುಟಿ ನಾವಣೆಯಲ್ಲಿ ಕೃಷ್ಣ ಮೆನನ್ನರನ್ನು ಸೋಲಿಸುವ ಒಂದೇ ಇರಾದೆಯಿಂದ ಕಟ್ಟಬೇಕೆಂಬ ಸೂಚನೆ ಮಾಡಿದವರು ದೇಶದ ಆಗ್ರಗಣ್ಯ ನಾಯಕರಲ್ಲೊಬ್ಬರೆಂದು ನಾವು ಕೇಳಿಲ್ಲವೆ? ಪಂಜಾಬನ್ನು ಒಡೆದು ಹೋಳು ಮಾಡುವಾಗ ದಿಲ್ಲೀಶ್ವರರು ತಮ್ಮ ಪಟ್ಟಭದ್ರತೆಯನೆಷ್ಟು ನದರಿನಲ್ಲಿರಿಸಿಕೊಂಡಿರಲಿಲ್ಲವೆ? ತಾವು ಪಂಜಾಬನ್ನು ಒಡೆಯದಿದ್ದರೆ ತಮ್ಮ ಪಕ್ಷಕ್ಕೆ ಚುನಾವಣೆಯಲ್ಲಿ ಸೋಲು ಕಂಡಿತ ಎಂಬ ಭೀತಿಯಿಂದ ಅನಾವಶ್ಯಕವಾಗಿ ಪಂಜಾಬನ್ನು ಎಂದಿಗೂ ತಲೆ ಎತ್ತದಂತೆ ಒಡೆಯುವ ಸುಲಭ ಮಾರ್ಗಕ್ಕೆ ಅನುಕೂಲವಾಗಲಿಲ್ಲವೆ? ಕೃಷ್ಣ ನೀರಿನ ಕಾದಾಟದಿಂದ ವೈ ಸೂರು— ಮಹಾರಾಷ್ಟ್ರ ನುಸ್ಸು ಆಂಧ್ರಗಳ ಕಜ್ಜಾಟವು ಗಂಭೀರ ಸ್ವರೂಪವನ್ನು ತಾಳಿದರೆ ಆಶ್ಚರ್ಯವೇನು? ಅನ್ಸಾಮ್ ರಾಜ್ಯಕ್ಕೆ 'ಫೆಡರಲ್' ಯೋಜನೆಯನ್ನು ರೂಪಿಸಿ ಅದನ್ನೂ ತಮ್ಮ ಕಕ್ಷೆಯೊಳಗೆ ಉಳಿಸಿಕೊಳ್ಳಬೇಕೆಂಬ ಹವಣಿಕೆಯಿಂದ ದೂರಿಗೆ ಲಾಭವಾದೀತು? ಉಚ್ಚ ಶಿಕ್ಷಣದ ಹಂತದಲ್ಲಿಯೂಡದರೂ ಈ ಭಾರತಕ್ಕೆ ಒಂದು ಭವಿಷ್ಯ ಇಲ್ಲದೆ ಅಂತಾ ರಾಜ್ಯ ಮತ್ತು ಒಕ್ಕೂಟದ ವ್ಯವಹಾರಗಳನ್ನು ನಡೆಸಲು ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗಿರುವಾಗ ನಾಯಕ ವರ್ಗದ ಅವಿವೇಕದ ಮೂಸುಗಳಿಗೆ ಸಂವೇದಕ ಕಿವಿಗೊಡಬೇಕೋ ತಿಳಿಯದಾಗಿದೆ.

ಪ್ರಕ್ಷುಬ್ಧ ಭಾರತದ ತಂತ್ರಿಗಳಂಗದ ಶುದ್ಧೀಕರಣಕ್ಕೆ ನಾವು ಬೇಗನೆ ತೊಡಗದಿದ್ದರೆ ನಮ್ಮ ದಾರ್ಢ್ಯಲ್ಯವನ್ನು ಪಯೋಗಿಸಿಕೊಳ್ಳುವ ಶತ್ರುಗಳು ನಮ್ಮ ಗಡಿಯಲ್ಲಿ ಕಾಯುತ್ತಿದ್ದಾರೆಂಬುದನ್ನಾದರೂ ಯೋಚಿಸಿ ನಾವು ಕಾರ್ಯ ತತ್ಪರರಾಗಬೇಕು.

(೧) ಈ ದೇಶದಲ್ಲಿ ಇದುವರೆಗೆ—ಈಗ ಆದರೂ ರೂಢವಾಗಿರುವ ಸ್ಥಿರತೆ, ಶಾಂತಿಗಳು—ನಮ್ಮ ಜನಸಾಮಾನ್ಯರ ಸಾಂಪ್ರದಾಯಿಕ ತಾಳ್ಮೆಯ, ಸೌಜನ್ಯದ ಪರಿಣಾಮವೆಂಬುದನ್ನು ನಾಯಕ ವರ್ಗ ಮರೆಯದೆ ತಮ್ಮ ಮನೆಯಂಗಳವನ್ನು—ಕೂಡಲೇ ಶಾಸನ ಸಭೆಯಂಗಳವನ್ನು—ಗುಡಿಸಿ ಜೋಕ್ಯ ಮಾಡಬೇಕು. ಶಾಸನ ಸಭೆಗಳನ್ನು ಸಂತೆ ಮಾರ್ಕೇಟಿನ ಮಟ್ಟಕ್ಕೆ ಇಳಿಸಿ ಪ್ರಜಾಪ್ರಭುತ್ವ ಪದ್ಧತಿಯನ್ನು ಕೆಣಕಿ ಅವಹೇಳನ ಮಾಡತ್ತಿರುವ ಈ ಆ

(ಮುಂದೆತ್ತೊಂದನೇ ಪುಟ ನೋಡಿರಿ)

In the Court of the Munsiff
Udipi

R. L. P. 74/67 in O. S. 191/64

Bridget Madtus Bai and another
—Petitioners

vs

Lucy Lasrado & others— Respts.

The above Execution Petition filed by the Petitioners is posted for the appearance of Respondents 3 and 4 Ignatious Lasrado and Margaret Lasrado to 19—8—67. The Respondents 3 and 4 are directed to appear before this Court on 19—8—67 at 11 A.M either in person or by Pleader, failing which the matter will be decided in their absence.

K. L. Aithal,
Vakil for Petitioners.

Udipi, 9—8—67.

WHILE IN

SECUNDERABAD AND BOMBAY

STAY AT

NATIONAL LODGE

(BOARDING, LODGING AND RESTAURANT)

OPP. RAILWAY STATION,

SECUNDERABAD.

Telegram: "SOJOURN" Telephones: Boarding 74272. Lodging 74422.

AND

MODERN HINDU HOTEL

(BOARDING AND LODGING)

12, WALLACE STREET,

BOMBAY.

Telegram: "SOJOURN" Telephone: 262092.

FOR CLEAN, DELICIOUS FOOD AND COURTEOUS SERVICE.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ.

S. C. No. 139/67.

P. ಸತ್ಯೋತ್ತಮ ನಾಯರ್—ಜನರಲ್ ಪವರ್ ಆಫ್ ಅಟಾರ್ನಿ P. ಗೋಪಾಲ ನಾಯರ್—ವಾದಿ.

ಮತ್ತು

ಸೀತು ಪೂಜಾರ್ತಿ—ಅತು ಪೂಜಾರಿ ಹೆಂಡತಿ-ಉಡ್ಪಿ ತಾಲ್ಲೂ ಶಿವಳ್ಳಿ ಗ್ರಾಮ—
—ಪ್ರತಿವಾದಿಳು.

ಇವರೊಳಗೆ.

ವಾದಿಯ ಒಳಗೆ ಪ್ರತಿವಾದಿಳು ಬಾಲಗೇಣಿ ಹಕ್ಕಿನಿಂದ ಅನಾಭವಿಸಿ ಬರುವ ಅಸ್ತಿಯ ಬಾಬ್ತು ಇಳಿದ ಕ್ರೋಧಿ ಸಂವತ್ಸರದ ಗೇಣಿ ಬಾಕಿ ಬಡ್ಡಿ ಕೂಡಾ ರೂ. 79.10ಕ್ಕೆ ದಾಖಲುಮಾಡಿದ ಮೇಲಿನ ದಾವೆಯು ಪ್ರತಿವಾದಿಳ ನೋಟೀಸಿನ ಬಗ್ಗೆ ತಾ. 25-8-67ಕ್ಕೆ ಇಟ್ಟಿದೆ. ಪ್ರತಿವಾದಿಳು ಸದ್ರಿ ದಿನದ ಪೂರ್ವಾಹ್ನ ಘಂಟೆ 10ಕ್ಕೆ ಸದ್ರಿ ವ್ಯಾಜ್ಯದಲ್ಲಿ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಪ್ರತಿವಾದಿರ ಗೈರು ಹಾಜ್ರಿಯಿಂದ ಸದ್ರಿ ವ್ಯಾಜ್ಯವನ್ನು ತೀರ್ಮಾನಿಸಲ್ಪಡುವುದು.

By Order
Sd/- Gratian C. Rego
Vakil for Plaintiff.

ಉಡ್ಪಿ, ತಾ. 7-8-67.

ಸ್ವಾತಂತ್ರ್ಯ ದೇವಿ ಚಿರಕಾಲ ನೆಲಸು !

— ೧ —

ಸ್ವಾಪಂತ್ರ್ಯ ದೇವಿ, ನಿನ್ನಾರಾಧನೆಯು ನಿತ್ಯ
ಭಾರತದಿ ನಡೆಯುತಿಹ ವೈಭವದಲಿ
ಪ್ರಕೃತಿದೇವಿಯು ನಿನ್ನನಾರಾಧಿಸುತ್ತಿಹಳು
ಉದಯ ರವಿಯೂರತಿಯ ಬೆಳಗುತ್ತಲಿ

— ೨ —

ಭಾರತದ ದೇಗುಲದಿ, ವಿಂಧ್ಯಾಪ್ರಿ ಪೀಠದಲಿ
ಮಂಡಿಸಿಹ ಸ್ವಾತಂತ್ರ್ಯದೇವಿ ದಿನವು
ಇಕ್ಕಡೆಯ ಕಡಲುಗಳು ತೆರೆಗೈಗಳಿಂ ನಿನಗೆ
ಸೀರ್ಪನಿಯು ಸೀಗುರಿಯು ಬೀಸುತಿಹವು

— ೩ —

ನಿನ್ನ ನಿರ್ಮಲ ಕೀರ್ತಿ, ಉತ್ತರದಿ ಬೆಳೆಬೆಳೆದು
ಉತ್ತುಂಗಧವಳ, ಹಿಮಗಿರಿಯೂಗಿದೆ
ಪೂರ್ವ ಪಶ್ಚಿಮ ದಕ್ಷಿಣದಿ ಹಬ್ಬಿ ಹಿಡಿಯದೆಯೆ
ಸಾಗರವಸೇರ್ದು ಬೆಳ್ಕೊರೆಯೂಗಿದೆ

— ೪ —

ಸ್ವಾತಂತ್ರ್ಯಲಕ್ಷ್ಮಿ ನೀನಾದಿ ಶಕ್ತಿಸ್ವರೂಪಿ
ರಾಜ್ಯಲಕ್ಷ್ಮಿಯರಿನಾರಾಧ್ಯನಾನೆ
ರವಿಚಂದ್ರಕಲೆಯು ಬಾನ್ ಬೆಳ್ಕೊಡೆಯು ನೆಳಲಿನಲಿ
ಮೆರೆವ ಭಾರತದ ಸಾಮ್ರಾಜ್ಞಿ ನೀನೆ.

— ೫ —

ಯೋಧ ಮಂಗಲವಾಂಡೆ ವೀರ ತಾಂತ್ಯಾಟೋಪೆ
ಕಿತ್ತೂರ ಚೆನ್ನಮ್ಮ ಝಾನ್ಸಿ ಲಕ್ಷ್ಮಿ
ವೀರ ನರ ನಾರಿಯರು ನಿನ್ನನಾರಾಧಿಸಿದ—
ರಂದು ಬೆಳಗಿಸಿ ಧೈರ್ಯ ಶೌರ್ಯಶಿಖೆ

— ೬ —

ಸತ್ಯತ್ಯಾಗಾಹಿಂಸೆಯೆಂಬ ಮಂತ್ರತ್ರಯಂ
ಗಾಂಧಿಮಹಾರಾಧಿಸಲ್ಕಂದು ಒಲಿದೆ
ದೇಶಭಕ್ತಿಯು ಕುಸುಮ ಮೂಲೆಯಪೀಸೆ ನೆಹರು
ಧರಿಸುತದನಾನಂದದಿಂದ ನಲಿದೆ.

— ೭ —

ಕಂದಿನಾರಾಧನೆಯು ಫಲವಾಗಿ ಭಾರತಕೆ
ಸ್ವಾತಂತ್ರ್ಯ ಬಂದಿಹುದು ರಕ್ತರಹಿತಂ
ಇಂದೀ ಸ್ವತಂತ್ರಭಾರತದಿ ಭ್ರಷ್ಟಾಚಾರ
ಲಂಚ ವಂಚನೆ ನಡೆವುದೇನು ವಿಹಿತಂ!

— ೮ —

ಸತ್ಯಪಥದಲಿ ನಡೆದು, ಧರ್ಮಸೂತ್ರವ ಹಿಡಿದು
ಸ್ವಾತಂತ್ರ್ಯದಿಂದೆನಿಬರಾಳಿಲ್ಲ!
ಸ್ವಾತಂತ್ರ್ಯಕಾಗಿ ನೆರೆನೋಂತ ಹರಕೆಯನಾಂತ
ಪ್ರಜೆಗಳೆನಿಶಾನಂದ ತಾಳಲಿಲ್ಲ!

— ೯ —

ಭರತ ಮಾತೆಯ ವೀರ ಗರ್ಭದಲಿ ಜನಿಸಿರ್ದ
ವೀರ ಸಂತಾನದವರಲ್ತೆ ನಾವು
ಪ ಕೀಯರಾಕ್ರಮಣ ತಡೆಯೆ ನಮ್ಮಯ ಹರಣ
ಮುಡಿಪಿಟ್ಟು ಕಾದಲೆಮಗಿರದು ನೋವು

— ೧೦ —

ರಾಜ್ಯಭೇದಗಳಳಿದು, ರಾಷ್ಟ್ರ ಭಕ್ತಿಯು ಬೆಳೆದು
ಭಾವೈಕ್ಯದಿಂ ಬಾಳುವಂತೆ ಹರಸು.
ಸತ್ಯಪಥದಲಿ ನಡೆದು ಭಾರತವ ಬಲಗೊಳಿಸು
ಸ್ವಾತಂತ್ರ್ಯದೇವಿ ಚಿರಕಾಲ ನೆಲಸು!

—ಶ್ರೀ ಎಸ್. ತಿರುಮಲೇಶ್ವರ ಭಟ್, ವಿದ್ವಾನ್

ಮೈಸೂರು ಸರಕಾರದ ರೇಷ್ಮೆ ನೆಯ್ಗೆಯ ಕಾರಖಾನೆ

ಮೈಸೂರು

ಅಡಿಯಿಂದ ಮುಡಿಯ ವರೆಗೆ ಶ್ರೇಷ್ಠ ದರ್ಜೆಯ ನೂಲು
ಸರ್ವಕಾಲ ಬಾಳಿಕೆಗೆ ಹೆಸರಾದ
ವಿಶ್ವ ಸಂದರ್ಭಗಳ ಫ್ಯಾಶನ್ನಿಗೆ ಹೆಸರು ಪಡೆದ
ಆಡಿ ಅಡಿಗೂ ಭದ್ರತೆಯ ಭರವಸೆಯನ್ನು ಕೊಡುವ

ಮೈಸೂರು ಸರಕಾರದ ರೇಷ್ಮೆ ಬಟ್ಟೆಗಳು.

• • •

ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಕೊಟ್ಟ ಮಾರಾಟ ಮಳಿಗೆ ಮತ್ತು
ಪ್ರದರ್ಶನಾಲಯಗಳಿಗೆ ಒಮ್ಮೆ ಭೇಟಿಕೊಡಿ.

1. ಮೈಸೂರು ಸರಕಾರದ ರೇಷ್ಮೆ ನೆಯ್ಗೆಯ ಕಾರಖಾನೆ, ಷೋ-ರೂಮ್, ಮಾನಂದವಾಡಿ ರಸ್ತೆ, ಮೈಸೂರು–4
2. "ಗುಪ್ತಾ ಮಾರ್ಕೆಟ್", ಕೆಂಪೇಗೌಡ ರಸ್ತೆ — ಬೆಂಗಳೂರು–9
3. "ಮೈಸೂರು ಸಿಲ್ಕ್ ಹ್ಯಾಲೆಸ್", ಲಸ್ ಕಾರ್ನರ್, ನಂ. 92, ರಾಯಪೇಟೆ ಹೈರೋಡ್, ಮೈಲಾಪುರ್, ಮದ್ರಾಸ್-4
4. "ವಿಶ್ವೇಶ್ವರಯ್ಯ ಭವನ", ನಂ. 8 ಕೃಷ್ಣರಾಜೇಂದ್ರ ಸರ್ಕಲ್, ಮೈಸೂರು—1.

ಗ್ರಾಮ ಒನ್ನನು ಮೊನ್ನೆಯ ಕನ್ನಿಮ್ಮ ಕಲವು ವರ್ಷಗಳ ಹಿಂದೆ ನಡೆದುದು ಆಗ ಈಗಿನಂತೆ ಬೆಲೆ ಏರಿಕೆ ಜನದುಬ್ಬರ, ರೋಗಾಯಿ ಆಪತ್ತುಗಳೆಂಬ ಯಾವ ಗಲಾಟೆಯೂ ಇರಲಿಲ್ಲ. ಸರ್ವಸಾಮಾನ್ಯ ರೀತಿಯಲ್ಲಿಯೇ ಜೀವನಾವಶ್ಯಕ ವಸ್ತುಗಳೆಲ್ಲವನ್ನೂ ತಾಳಸಂತೆಯಲ್ಲಿ ಕೊಳ್ಳುತ್ತಿದ್ದರಲಿಲ್ಲ. ಆಹಾರದ ಆಘಾತವಿರಲಿಲ್ಲ ಹಣಗಳಲ್ಲಿ ಲೆಪ, ದೃಢ ಸತ್ಕಿಕೆಗಳೆಂಬ ಕಾನೂನಿನ ತಾಳಕಾಕ್ಷನ ಕರಾಳನೃತ್ಯ ಇರಲಿಲ್ಲ. ಕೊಕ್ಕ ಇದ್ದರೆ ತಕ್ಕ ತಾಲದಲ್ಲಿ ಯಾವ ವಸ್ತುವೂ ದೊರಕುತ್ತಿತ್ತು. ಪಾರತಂತ್ರ್ಯದಿಂದ ಅಂಗ್ಲರ ಆಳ್ವಿಕೆಯಲ್ಲಿ ಸ್ವೂ ಸುಖವಾಗಿ ಬದುಕುತ್ತಿದ್ದ ಕಾಲ ಒಂದಿತ್ತು.

ಅಂಥಾ ಕಾಲದಲ್ಲಿ ಅಳಿಯಸಂತಾನಿಗಳಾದ ಹಳ್ಳಿಯ ಹಿರಿಯ ಕಟ್ಟಿಕೊಬ್ಬರು ಕಾಲವಾದರು. ಅವರ ಕುಟುಂಬದ ಕಿರಿಯರು ಯಜಮಾನನ ಶ್ರಾದ್ಧವನ್ನು ಅದ್ಧೂರಿಯಿಂದಲೇ ನಡೆಳಬೇಕೆಂದಿದ್ದರು.

ಸಾಧಾರಣ ನಾಲ್ಕು ಸಾವಿರ ಜನರ ಊಟದ ಏರ್ಪಾಡು. ಊಟಕ್ಕೆ ಕೂತು ಕೊಳ್ಳಲು ಬೇರೆ, ಬಂದ ಅತಿಥಿಗಳಿಗೆ ವಿಶ್ರಮಿಸಲು ಬೇರೆ, ಅಡಿಗೆಗೆ ಬೇರೆ ಈ ರೀತಿ ಸಾಧಾರಣ ಒಂದ ವರೆ ಫರ್ಲಾಂಗಿನ ಪ್ಲು ವಿಸ್ತೀರ್ಣದಲ್ಲಿ ಚಪ್ಪರಗಳು ಹಾಕಲ್ಪಟ್ಟವು. ಶ್ರಾದ್ಧದ ಎರಡು ದಿನಗಳ ಮೊದಲೇ ಊರ ಪರಊರವರಿಂದ ಹೊರೆ ಕಾಣಿಕೆಗಳು ಬರತೊಡಗಿತು. ಹೊರೆ ಹೊತ್ತು ಬಂದ ಹರಿಜನರಿಗೆ ಕಲಾ ಒಂದು

ಶ್ರೀಮತಿ ವಿದ್ಯಾ ಚಂದ್ರಭಾಗಿ ಕೆ ನೈ.

ಹರಿಜನೋದ್ಧಾರ

ನಿನ್ನ ಬಂದವರನ್ನು ಎಬ್ಬಿಸ ಬಹುದು, ನಿದ್ದೆ ಬಂದವರಂತೆ ನಟಿಸುವವರನ್ನು? ಉತ್ತರ—ಕಾಯಕದ ದುಡಿತ ಬೇಕೆನ್ನುವವರಿಗೆ ಅವಕಾಶ ಒದಗಿಸ ಬಹುದು—ಎಂಜಲೆಲೆ ತಿಂದು ಅಲಸಿಯೊಗಿಯೇ ಇದ್ದು ಸುಖ ಪಾಣುವವರನ್ನು ಏನು ಮಾಡಬಹುದು?

ಸೇರು ಅಕ್ಕಿ, ಎಲೆ ಅಡಿಕೆಗಳ ವಿತರಣೆಯಾಯ್ತು. ಕುಂಬಳ ಕ್ಯಾ, ಬಾಳೆಕ್ಯಾ, ಬಾಳೆ ದಿಂಡು, ತೆಂಗಿನ ಕ್ಯಾಗಳ ರಾಶಿ ರಾಶಿಗಳೇ ಒಟ್ಟಲ್ಪಟ್ಟವು.

ಶ್ರಾದ್ಧದ ಹಿಂದಿನ ದಿನ ಊರಮರ ಹರಿವೂರವರು ಎನ್ನದೆ ಸಾಧಾರಣ ಇನ್ನೂರು ಮಂದಿ ಜನರು ಜೇಳದೆ ಕೇಳದೆ ಸೊಂಟಕಟ್ಟಿ ಶ್ರಾದ್ಧದ ಕೆಲಸಕ್ಕೆ ತಯಾರಾದರು. ಕೆಲಸ ಮಾಡಿಸುವವರು ಬೇರೆ, ಮಾಡಿಸುವವರು ಬೇರೆ; ಪಾಕಮಾಡುವವರುಬೇರೆ ಮಾಡಿಸುವವರು ಬೇರೆ ಈ ರೀತಿ ಜಾತಿ ವಿಜಾತಿ ಎನ್ನದೆ ರಾತ್ರಿ ಊಟ ಆಗಿ ಕೆಲಸ ಪ್ರಾರಂಭವಾಯ್ತು. ಎಣ್ಣೆ ದೀಪಗಳು ಉರಿದುವು. ಕಾಯಿ ಪಲ್ಯ ಹೆಚ್ಚುವುದು ತೆಂಗಿನ ಕ್ಯಾ ತುರಿಯುವುದು, ಕುಟ್ಟುವುದ, ಕಡೆಯುವುದು, ಒಂದು ಕಡೆಯಲ್ಲಾದರೆ ಇನ್ನೊಂದೆಡೆಯಲ್ಲಿ ಲಡ್ಡು, ಹೋಳಿಗೆ, ವಡೆಗಳು ರಾಯುತ್ತಿದ್ದುವು. ಮತ್ತೊಂದೆಡೆಯಲ್ಲಿ ಪಲ್ಯ ಪರಮಾನ್ನಗಳನ್ನು ಬೇಯಲಿಕ್ಕಿಡುತ್ತಿದ್ದರು. ಈ ರೀತಿ ಪಂಗಸರು ಗಂಡಸರು, ಜಾತಿ ವಿಜಾತಿ ಎನ್ನದೆ ಪ್ರೇಮ ಸಹಕಾರಗಳಿಂದ ಕೆಲಸ ಸಾಗುತ್ತಿತ್ತು. ಬೆಳಗಾಗುವಾಗಲೇ ಉಪ್ಪಿನಕ್ಯಾ, ಭಕ್ಷ್ಯ, ಭೋಜ್ಯಗಳೆಲ್ಲ ತಯಾರಾಗಿ ಘಮ ಘಮಿಸತೊಡಗಿತು ಈ ಕಾರ್ಯಕಲಾಪಗಳನ್ನು ನೋಡಿದವರಿಗೆ ನೋಡುವುದೇ ಒಂದು ಹಬ್ಬ. ಹಳ್ಳಿಗಳಲ್ಲಿ ಜನ ಪರಸ್ಪರ ಪ್ರೇಮ, ಒಗ್ಗಟ್ಟು, ಸಹಕಾರಗಳನ್ನು ಇಂಥ ಕೆಲಸಗಳಲ್ಲೇ ನೋಡಿ ಹೆಮ್ಮೆ ಪಡಬೇಕ.

ಶ್ರಾದ್ಧದ ದಿನ ಬೆಳಿಗ್ಗೆ ನಾಲ್ಕು ಗಂಟೆಗೆ ಸತ್ತ ಶೆಟ್ಟರ ಕುಟುಂಬಿಕರು ಎದ್ದು ಸ್ನಾನ ತೀರಿಸಿದ ಮೇಲೆ ಶ್ರಾದ್ಧದ ವಿಧಿ ವಿಧಾನಗಳು ಪ್ರಾರಂಭವಾಗುತ್ತದೆ. ಮಧ್ಯಾಹ್ನ ಹನ್ನೆರಡು ಗಂಟೆಗೆ ಬಂದ ಅತಿಥಿ ಅಭ್ಯಾಗತರು, ಕುಟುಂಬಿಕರೆಲ್ಲ ಬೇಂಡ, ವಾಲಗ, ಕದಸಿ, ಗರ್ನಾಲುಗಳ ಗಡಚಿಕ್ಕುವ ಶಬ್ದದೊಡನೆ ದಕ್ಷಿಣ ಕ್ಷಳಕ್ಕೆ ಹೋಗಿ ಅಲ್ಲಿ ನಡೆಯಬೇಕಾದ ವಿಧಿಗಳನ್ನು ತೀರಿ ಹಿಂದೆ ಬರತ್ತಾರೆ. ಒಂದು ಗಂಟೆಗೆ ಎಲೆ ಹಾಕಲಿಕ್ಕೆ ಪ್ರಾರಂಭವಾಯ್ತು. ಅಲ್ಲಿಯೂ ಎಲೆ ಹಾಕುವವರು ಬೇರೆ, ಭೋಜನ ಸಾಮಗ್ರಿ ಪಾತ್ರೆಗಳಿಗೆ ಕೋಡಿ ಕೊಡುವವರು ಬೇರೆ, ಬಡಿಸುವವರು ಬೇರೆ, ಯಾವ ಪಂಕ್ತಿಗೆ ಯಾವ ಭಕ್ಷ್ಯ ಭೋಜ್ಯ ಬಂದಿದೆ ಬರಲಿಲ್ಲ ಎಂಬ ಕನಿಷ್ಠ ಮಾಡವವರು ಬೇರೆ. ಭಕ್ಷ್ಯ, ಭೋಜ್ಯಗಳ ಉಸ್ತುವಾರಿಕೆ ನೋಡಿ ಕೊಳ್ಳುವವರು ಬೇರೆ. ಈ ರೀತಿಯ ಶಿಸ್ತು ನಿಯಮಗಳು ತನ್ನಿಂದ ತಾನೇ ನಿರ್ಮಾಣವಾಗಿ ಪ್ರತಿ ಕೆಲಸವು ಶ್ರದ್ಧೆಯಿಂದಲೂ ಶಿಸ್ತಿನಿಂದಲೂ ನಡೆಯುತ್ತಿತ್ತು.

ಎಲೆ ಬಡಿಸಿದ ನಂತರ ಪ್ರಥಮ ಉಪ್ಪಿನ ಕ್ಯಾ, ಅನ್ನ, ಪಲ್ಯ, ಪಾಯಸ ಭಕ್ಷ್ಯಗಳು ಈ ರೀತಿ ಊಟ ಪ್ರಾರಂಭವಾಗಿತ್ತು. ಪಾಯಸದ ಊಟದ ಗೌಜಿಯೇ ಬೇರೆ. ಸಾವಿರಾರು ಜನರು ಸಾಲಾಗಿ ಕೂತು ಪಾಯಸವನ್ನು ಆಸ್ವಾದಿಸುವ ಶಬ್ದ ಸಾಧಾರಣ ಅರ್ಧ ಮೈಲಿನ ವರೆಗೆ ಕೇಳುತ್ತದೆ. ಆಂಗ್ಲರಿಗೆ ಸಂಬಂಧವಾಗಿ ಊಟ ಮಾಡುವುದು ಶಿಸ್ತು ಸಂಪ್ರದಾಯವಂತ. ಅವರು ಊಟ ಮಾಡುವಾಗ ಬಟ್ಟಲು, ಚಮಚ, ಚೂರಿ, ತ್ರಿಶೂಲಗಳನ್ನು ಉಪಯೋಗಿಸುತ್ತಾರೆ. ಆದ್ದರಿಂದ ನಿಶ್ಶಬ್ದವಾಗಿ ಊಟ ಮಾಡಲೂ ಬಹುದು. ನಾವು ಬಾಳೆ ಎಲೆ ಕೈಗಳಿಂದಲೇ ಊಟ ಮಾಡುವುದರಿಂದ ಅಂಥ ಶಬ್ದ ಉಂಟಾಗುತ್ತದೆ. ನಮ್ಮ ಊಟದ ಶಬ್ದಗಳನ್ನು ಕೇಳಿ ದೂರದಲ್ಲಿದ್ದವರಿಗೂ ಬಾಯಲ್ಲಿ

(ಉಪತ್ತೊಂಭತ್ತನೇ ಪುಟ ನೋಡಿರಿ)

ವೈದ್ಯರತ್ನಂ ಪಿ. ಎಸ್. ವಾರಿಯರ್ ರವರ

ಆರ್ಯ ವೈದ್ಯ ಶಾಲಾ,

ಕೋಟ್ಟಕಲ್ (ಕೇರಳ ರಾಜ್ಯ)

ಸ್ಥಾಪನೆ: 1902

ಹೆಡ್ ಆಫೀಸು: ಕೋಟ್ಟಕಲ್

ಹೆಡ್ ಆಫೀಸು ಟೆಲಿಫೋನುಗಳು — ಕೋಟ್ಟಕಲ್ ಎಕ್ಸ್‌ಚೇಂಜ್.

ಆಫೀಸು — — — ಫೋನ್ ನಂ. 31

ನರ್ಸಿಂಗ್ ಹೋಮ್ — — — ಫೋನ್ ನಂ. 44

ಶಾಖೆಗಳು;

1. ಕೋಯಿಕೋಡ್	(ಫೋನ್ ನಂ. 2155) ಕಲ್ಲಾಯಿ ರೋಡ್.	5. ಎರ್ನಾಕುಳಂ	(ಫೋನ್ ನಂ. 3026) ಎಂ. ಜಿ ರೋಡ್
2. ತಲಶ್ಶೇರಿ	(ಫೋನ್ ನಂ. 21) ಸ್ಟೇಶನ್ ರೋಡ್.	,,	(ಫೋನ್ ನಂ. 674) ವೈದ್ಯರ ನಿವಾಸ.
3. ಪಾಲ್ಘಾಟ್	(ಫೋನ್ ನಂ. 164) ವಡಕ್ಕಂತರ.	6. ತ್ರಿವೆಂಡ್ರಮ್	(ಫೋನ್ ನಂ. 3924) ಸ್ಟೇಜು ರೋಡ್.
4. ತ್ರಿಚ್ಚೂರ್ ಸೆಲ್ಫ್ ಜಿಲ್ಲಾ	(ಫೋನ್ ನಂ. 564) ಜಿ. ಬಿ. ರೋಡ್	7. ಈರೋಡು	(ಫೋನ್ ನಂ. 172) ಪೆರಿಯಾರ್ ರೋಡ್.
		8. ಬಳ್ಳಾರಿ	ಸೇಲ್ಸ್ ಡಿಪೋ ಬ್ಯಾಂಕ್ ರೋಡ್

ಕೋಟ್ಟಕಲ್‌ನ್ಲಿರುವ ನಮ್ಮ ಪ್ರಧಾನ ಆಯುರ್ವೇದಿಯಶಿಕ್ಷಣಶಾಲೆಯಲ್ಲಿಯೂ ಶಾಖೆಗಳಲ್ಲಿಯೂ ಅಗತ್ಯವಾದ ಉತ್ಕೃಷ್ಟ ಮಟ್ಟದ ಆಯುರ್ವೇದೀಯ ಔಷಧಿಗಳು ಮತ್ತು ಶಸ್ತ್ರ ವೈದ್ಯಕೀಯ ಸಲಹೆ ದೊರೆಯುತ್ತದೆ. ಕೋಟ್ಟಕಲ್‌ನ ನಮ್ಮ ಪ್ರಧಾನ ವೈದ್ಯರು ಪತ್ರವ್ಯವಹಾರದ ಮೂಲಕ ವೈದ್ಯಕೀಯ ಸಲಹೆ ಕೊಡುವರು. ಓಬಿಟಿಸ್, ನರವಿಕಿರಿಯ ಮೊದಲಾದ ವಿಶಿಷ್ಟ ವಿಕಿತ್ಸೆಗಳು ನಮ್ಮ ಪ್ರಧಾನ ವೈದ್ಯರ ಮೇಲ್ವಿಚಾರಣೆಯಲ್ಲಿ ನಮ್ಮ

ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋಮ್‌ನಲ್ಲಿ

ನಡೆಸಲ್ಪಡುತ್ತವೆ.

ಮೆನೇಜಿಂಗ್ ಟ್ರಸ್ಟಿ

ARYA VAIDYA SALA, KOTTAKKAL.

ಶ್ರೀ "ನವಗಿರಿನಂದ"

ದೇಶಕ್ಕೆ ಸ್ವಾತಂತ್ರ್ಯ ಬಂದು ಇಪ್ಪತ್ತು ವರ್ಷಗಳು ಸಂದುವು. ಇಪ್ಪತ್ತೆ ವರ್ಷಗಳಿಗೆ ಮೊದಲು ಕಲ್ಪನಾತೀತವಾದುದು ಇಂದು ನಿತ್ಯ ಸಂಗತಿಗಳಾಗಿವೆ. ಇನ್ನು ಇಪ್ಪತ್ತು ವರ್ಷಗಳ ನಂತರ ಏನಾಗುವುದು? ಯಾರಿಗೆ ಗೊತ್ತು?... ಅದರೂ ಕಲ್ಪನಾಶಕ್ತಿ ಉಪಯೋಗಿಸಿಕೊಂಡ ಒಂದು ಚಿತ್ರ ಇಲ್ಲಿದೆ—

ಇದು ಬಂತು ನೋಡಿ,ಭಾರತ ದೇಶಕ್ಕೆ ಇದು- ಸ್ವಾತಂತ್ರ್ಯ—ಇಪ್ಪತ್ತು ವರ್ಷಗಳ ಹಿಂದೆ ಬಂದದ್ದು; ಮಹಾತ್ಮಾ ಮಹಾತ್ಮಾ ತ್ಯಾಗಿಗಳ ಮೈಹನತ್ತುಗಳಿಂದ ಬರಮಾಡಿಕೊಂಡದ್ದು; ನಾವು ಪಡಕೊಂಡದ್ದು; ಆಗ ಹುಟ್ಟಿದ್ದೆಲ್ಲಾ ಚಿದೀತು ಎಂತ ಯೂರಾದರೂ ಯೋಚನೆ ಮಾಡಿದ್ದಾರೆಯೆ? ಪ್ರಜೆಗಳ ಸ್ವತಂತ್ರ ಸರಕಾರ ಹೇಗೆ ವ್ಯಾಪಾರಂಭವಾಯಿತು! ಪ್ರಜೆಗಳಿಗೆಲ್ಲ ಎಷ್ಟು ಗಮ್ಮತ್ತೆ ಇತ್ತು!

ಆಃ! ನೆನೆಸಿದರೇ ಖೈನವಿರೇಳುತ್ತೆ!

ಕೊನೆಗೆ ಇಪ್ಪತ್ತು ವರ್ಷಗಳಲ್ಲಿ ಸವೆದುಹೋದದ್ದು ಹೇಗಾಯಿತೊ!

ತೇಯುತ್ತಾ ಇದ್ದರೆ ಗಂಧದ ಕೊರಡು ಸವೆಯದೆ ಮತ್ತೇನಾಗುತ್ತೆ? ಸವೆಯುವುದು ಅಂದರೆ ಸೇವೆ ಮಾಡುತ್ತಾ ಇರುವುದು ತಾನೆ?

ಗಂಧದ ಕೊರಡು ಸವೆಯುತ್ತಾ ಹೋದರೂ ಪರಿಮಳ ಹಾಳಾಗಿ ಹೋಗುತ್ತೆಯೆ? ಇಲ್ಲ. ಸುತ್ತುಮುತ್ತೂ ಹರಡಿಕೊಳ್ಳುವ ಪ್ರಾಣವಾಗುತ್ತೆ. ಮುದ್ದೆಹೂರುತ್ತೆ. ಒಣಕಲಾಗಿರುತ್ತೆ. ನೀರಾಗಿರುತ್ತೆ. ಹೀಗೆಲ್ಲಾ ಬೇರೆ ಬೇರೆ ರೂಪದಲ್ಲಿ ಗಂಧದ ಪರಿಮಳ ಎಲ್ಲರಿಗೂ ಬರುತ್ತಾ ಇರುತ್ತೆ.

ಹಾಗೇ ಆಯಿತು ಅಳಿಯನ ಪಕ್ಷ. ಸೇವೆ ಮಾಡುವುದೇ ಅದರ ಧರ್ಮ. ಸೇವೆಯೆಂಬ ಕಾರ್ಯದಿಂದ ತೇದು-ಕೊಂಡು ತೇದುಕೊಂಡು ಸಣ್ಣಾಗಿ ಹೋಯಿತು ಪಾಪ. ಅದರೇನು. ಆದರ ಮುದ್ದೆಯಿಂದ ಬೇ ಬೇರೆ ಬೇರೆ ಕಕ್ಷಿಗಳೂ ಪತ್ರಗಳೂ ಸಹಜವಾಗೇ ಹುಟ್ಟಿದುವು. ಕಾಣುತ್ತಿನೆಯಲ್ಲ? ಕೆಲವು ಪರಿಮಳವಾಗಿನೆ; ಕೆಲವು ಏನೇನೋ ವಾಸನೆಗಳನ್ನೂ ಕೂಡಿವೆ; ಅಡ್ಡವಾಸನೆ. ಹಳಸುವಾಸನೆ ಕೆಲವಕ್ಕೆ. ಏನು ಮಾಡುವುದು? ಸಹಜವಾಸ ದೋಷ ಅಂತ ಒಂದು ಉಂಟೇ ಉಂಟಲ್ಲ?

ಅದು ತೇದು ಹೋದ ಕೊರಡು ಮತ್ತೆ ಮೊದಲಿನ ಹಾಗೆ ಆಗುವ್ಹದುಂಟೆ? ಹಾಗಾಗಿ ಬೇಕೆಂದು ಬಡಾಸಿದರೆ, ಅವನ ತಲೇನ ಸಂಶಯದಿಂದ ನೋಡಿಯೂರು. ಬಹುಶಃ ತಾನು ಮೊದಲಿನ ಹಾಗೇ ಆಗಬೇಕೆಂದು ಗಂಧದ ಕೊರಡು ಬಯಸುತ್ತದೋ ಏನೋ?

ಅದು ಪೂರಾ ತೇದು ಹೋಗಲಿಲ್ಲವಲ್ಲಾ, ಮೊದಲಿನ ಹಾಗೆ ದೊಡ್ಡದಾಗಿದ್ದರೆ ಬಲಸುರಾಕೆ ಒತ್ತಿಒತ್ತಿ ತೇಯಲು ಸುಲಭವೆಂದು ಅದು ಯೋಚಿಸಿದರೆ ತಪ್ಪಲ್ಲ ಪಾಪ. ಬೇರೆ ಚಕ್ಕೆಗಳನ್ನು ತೇಪೆ ಅಂಟಿಸಿಕೊಂಡರೂ ಮೊದಲಿನ ಘಸನ್ಟ ಬರಬೇಕಲ್ಲ!

"ಆರೆ, ನಾನು ಎಷ್ಟು ಘಸನವಾಗಿ ದೊಡ್ಡವಾಗಿ ಹೋಗಿದ್ದೆ! ಅಷ್ಟು ಬೇಗ ಸವೆದು ಹೋಗಲು ಏನಾಯಿತಪ್ಪ? ಏನು ಕಾರಣ?—" ಅಂತ ಅದು ಕೇಳಿಕೊಂಡರೆ —ಏನು ಹೇಳಲಿ?

"ಹೇ ಗಂಧದ ಕೊರಡೆ? ಹಾಗೆ ನೀನು ಕೇಳಿಕೊಂಡರೆ ತೇಯುತ್ತಾ ಇರುವ ನಿನ್ನ ಗುಣ ಧರ್ಮವನ್ನೇ ನೀನು ಮರೆತ ಹಾಗೆ. ನೋಡು, ನಿನ್ನ ಉಪಯೋಗ ಬೇರೆ ಬೇರೆ ರೂಪಗಳಲ್ಲಿ ಆ ಮತ್ತಿದೆಯಲ್ಲಾ, ಅದನ್ನು ನೋಡಿ ನಂತೆ ಸಂತಪಡು, ತೃಪ್ತಿಪಡು" ಎನ್ನಲೆ?

ಏನೋ ಇದ್ದದರಲ್ಲಿ ಇನ್ನೂ ತನ್ನನ್ನು ತೇಯಲು ಬಿಟ್ಟುಕೊಂಡು ತನ್ನ ಧರ್ಮದಲ್ಲಿದ್ದರೆ ಅದೇ ಸಾರ್ಥಕ. ಹಾಗಿದ್ದರೆ ಒಂದು ವೇಳೆ ಮೊದಲಿನಂತೆ ಘನವಾದ ಹೊಸ ಕೊರಡೇ ಆಗುವ ಅದ್ಭುತ ಪವಾಡವಾದರೂ ಆಗೀತು.

ಯಾರಿಗೆ ಗೊತ್ತು? ಇಪ್ಪತ್ತೈಪ್ಪತ್ತು ವರ್ಷಗಳ ಮೇಲೆ ಅದರ ಪರಿಮಳವನ್ನು ಯಾವ ರೂಪವನ್ನು ಪಡೆಯುತ್ತದೋ ಹೇಳ ಲಿಕ್ಕಾಗದು ಏಕೆಂದರೆ ಇಪ್ಪತ್ತು ವರ್ಷಗಳ ಮೇಲೆ ಹೀಗಾಗುತ್ತದೆಂದು ಅಗಿನವರಿಗೆ ಕಂಡಿತ್ತೆ?

ಇವಿಷಯ ಬಿಡಿ, ಯಾವುದೋ ದೊಡ್ಡ ವಿಷಯ. ಅದರಲ್ಲೆಲ್ಲ ಹೆಚ್ಚು ಹೇಳುವ ಕಾಖಿಲ್ಲ ನನಗಿಲ್ಲ. ಈಗ ನಮ್ಮ ನಿತ್ಯ ಸುತ್ತಮುತ್ತಿನ ವಿಷಯಕ್ಕೇ ಬರೋಣ.

ಇಪ್ಪತ್ತಲ್ಲಿ, ಇಪ್ಪತ್ತೈದು, ಮೂವತ್ತು ವರ್ಷಗಳ ಹಿಂದೆ ನಮ್ಮ ಹೆಂಗುಸರಿಗೆಲ್ಲ ಗೃಹಕೃತ್ಯ ತಂತ್ರವೆಂದರೆ, ಗಂಡುಸರಿಗೆ ಮಾತ್ರ ತಾಲೆ ಕಾಲೇಜುಗಳು ಮುಖ್ಯವೆಂತಲೂ ತಿಳಿಯಲಾಗಿತ್ತು. ಆ ಮೇಲೆನಾಯಿತು?

ಎದ್ದಿತು ಸ್ತ್ರೀ ಸ್ವಾತಂತ್ರ್ಯದ ಚಳುವಳಿ. ಗಂಡುಸರೊಂದಿಗೆ ಸರಿಸಮಾನವಾಗಿರುವ ಹಕ್ಕು ಹಟ ಎಲ್ಲ ಶುರುವಾಯಿತು. ಅದರಲ್ಲಿ ನ್ಯಾಯವುಂಟು ಅಂತ ಮುದ್ದೆ ಬಿದ್ದು, ಚಳುವಳಿಗೂ ಬಲಬಂತು ಬಂದು ಬಂದು, ಈಗ —ಇವತ್ತಿನ ಸ್ಥಿತಿಗೆ ಬಂದು ನಿಂತಿದೆ.

ನಿಂತಿಲ್ಲ ಓಡುತ್ತಿದೆ. ಓಟದ ಭರದಲ್ಲಿ ಗಂಡು ಹೆಣ್ಣು ಸರಿ ಸಮಾನತೆಯನ್ನು ಸಹಾ ವಿಾರಿ, ವಿರುದ್ಧ ಮಾರ್ಗಾಗಲಿಕ್ಕೂ ವ್ಯಾಪಂಭವಾಯಿಕೂ ಆಯ್ತು. ಉದಾಹರಣೆ ಬೇಕಾದರೆ ಪೆಜ್ಜೇನೂ ಕಷ್ಟ ಪಡಬೇಕಾಗಿಲ್ಲ. ಪಾರ್ಕಿನಲ್ಲೋ ಬೀದಿಯಲ್ಲೋ ಮನೆಗಳ ಕಿಟಕಿಗಳು ಬದಿಗಳಲ್ಲೋ—ಮನೆಗಳ ಕಿಟಕಿ ಅಂದದ್ದು ತಪ್ಪಾದರೂ ಮಾತಿಗೆ ಹೇಳಿದೇ ಅಂದುಕೊಂಡು ಕ್ಷಮಿಸಿ—ಅಂತಲ್ಲಿ ಸ್ವಲ್ಪ ಕೆವಿ ಕೊಡುತ್ತಾ ನಿಂತರೆ, ಆಧುನಿಕ ಪೆಳಿಗೆ ಇಡೆಯುತ್ತಾ ಇದ್ದರೂ ಸಾಕು.

ಹಾಗೆ ಕೆವಿಗೊಡುವ ಪ್ರಾಮಾಣ್ಯಕಳಿಲ್ಲರಿಗೂ ಇರಲಿಕ್ಕಿಲ್ಲ. ವ್ಯಾಪಾರದ್ದು ನನಗೆ ಅಂಟಿಕೊಂಡಿದೆ. ಕೆವಿಗೆ ಬಿದ್ದ ಇಬ್ಬರು ಯುವತಿಯರೊಳಗಿನ ಮೊತನ ಸ್ಯಾಂಪಲ್ ತೋರಿಸಲೆ?

"ಏನೇ, ನಿನ್ನ ಅದಿತ್ಯವಾಗಿ, ರಜೆ ಮುಗ್ಸಿಕೊಂಡು ನುಂಗಿದೆಯೆ ಬಿಡು."

ಂ ಂ ಂ

"ಇದೇನೇ ಲೈಲಿ ಪಾಕ ಶಾಸ್ತ್ರ ಪುಸ್ತಕ? ಇದನ್ನು ಸಹಾ ಕಲೀಲಿಕ್ಕೆ ಶುರು ಮಾಡಿದಿಯೋ?"

"ಆಯ್ಯೋ, ನಾನು ನಿನ್ನ ಕಲ್ಲು ಏನು ಉದ್ಧಾರವಾಗೋದು ಗಿಡು. ಅರ್ಜಂಟಾಗಿ ನನ್ನ ಕಪ್ಪೆಂಡ್ ಗಿಡಿಗೇ ಬಹಳ ಅವಶ್ಯವಾಗಿತ್ತು ಇದೆ. ಇದನ್ನಾದರೂ ನೋಡಿ ಸ್ವಲ್ಪ ರುಚಿಯಾಗಿ ಮಾಡ್ಲಿಕ್ಕೆ ಕಲೀಲಿ ಅಂತ ಕೊಂಡುಕೊಂಡೆ"

ಂ ಂ ಂ

"ಯಾಕೇ ಮಿತ್ಕಾ, ಬಹಳ ಪಾಡಿ ಹೋಗಿ ಕೂತು ಬಿಟ್ಟಿ? ತಲೆನ್ನೋ, ಆನ ಟೇ ನಾಣೇನ ಮದ ಪೆ ಪೂರಾಕೊಂಡಂದಿ ನಿಂದ್ಲೂ ನೀನು ಹೊರಗೆ ನೋಡಲಿಕ್ಕೇ ಸಿಗೋಲ್ಲಲ್ಲೋ ಬಾ ಜೆ ದಾಗಿ ನಿನ್ನ ನೋಡಿಕೋಡ್ದಾಕೇ ಅನ್ನು"



ಯಾರಿಗ್ಗೊತ್ತು ಏನೇನಾಗುತ್ತೋ?

"ಅಯ್ಯೋ, ಸಸ್ಯ ಹೆಣ ಎತ್ತ! ಎಂಟೆಯೊದ ಹೆಣ್ಣಿನಲ್ಲಿ ನನ್ನ ಡ್ಯಾಗೆ ಸೇರಿಡಿಕೊಳ್ಳಿದ್ದಳಾ! ಯೂವ ಕೆಲ್ಸಕ್ಕು ನನ್ನ ಬಿಡೋಲ್ಲ. ಪಾಡಿಗೆಗೆ ಜನಾ ನಾಡಿದಳು. ನಾನು ಯೂವಾಗಲೂ ಶೇಖಳು ಪಾಡಿ ಕೊಂಡು ಕಾದು-ಬರಿ ಒದ್ದು ಹಾಗೇ ಇದ್ದೆ. ನನ್ನ ರೋಕೆಗೆ ಬೇಕಾದ್ದೆಲ್ಲಾ ಆ ವಳೇ ತಂದು ತಂದು ಕೊಡ್ತಿದ್ದಳು. ನನಗೆ ಗೊತ್ತಿಲ್ಲದ ಶೋಕ್ಕಗಳನ್ನೆಲ್ಲಾ ತಲಿಸಿಕೊಟ್ಟಳು. ಮತ್ತೇ ನೋಡೋ, ಒಂದು ಮಗು ಹುಟ್ಟಿಪಪ್ಪ. ಆಗಲಿ ಅಪ್ಪೆಕೇ ನಾ ನಂಬಿತ್ತು. ಮಗುವಿಗೆ ಹಾಲು ಕುಡಿಸೋಗ್ಲು ಅದರ ಹೇಸಿಗೆ ನನ್ನ ಜೋಲಾಗೋದು- ಹೀಗೆಲ್ಲಾ ಆಗಿ ನನ್ನ ಶೋಕೂ ಶುದ್ಧ ನಾಸೂಕು ಎಲ್ಲಾ ಬಿಸಟೇ ಕಾಯ್ತು. ಆಮ ಆವಳಿಗೆ ಆಗಲಿಲ್ಲ. ಅವಳು ಸ್ವಾತಿಯಾಯೋದಿಂದ ಬರುವಾಗ ನಾನು ಗಬ್ಬಜ ಇದ್ದೇ ಅಂತ ನೆನಾ ತೆಗೆದು, ಜಗಳ ಕೆವಿವ ಡೈವೋರ್ಸ್‌ಮಾಡಿಕೊಂಡು ಬಿಟ್ಟಳು."

(ಇಪ್ಪತ್ತೊಂಟನೇ ಸುಟ ನೋಡಿ)

ಶ್ರೀ 'ಶಿವಶಂಕರ', ಮದರಾಸು

ಅಗೋ ಅಸ್ತು - ಅರಿವುತ್ತೇಳು

ನಲವತ್ತೇಳು—ಆರುನಲ್ವತ್ತೇಳುಗಳ ನಡುವೆ ಬರಿಯ ಇಪ್ಪತ್ತರ ಅಂತರ. ಆದರೆ, ನಮ್ಮ ಮಟ್ಟಿಗೆ ಎಪ್ಪತ್ತರ ಅಂತರ ಕಾಣಿಸುತ್ತದೆಯೆ? ನೀಲದ ಸಂರಕ್ಷಣೆಯಲ್ಲಿ ನಾವು ಅಸಹಾಯಕರಲ್ಲದಿದ್ದೇವೆ. ಇಜಿಪ್ಟ್— ಅನ್ಯರ ಆಳ್ವಿಕೆಗಳಿಂದ ಪಾರು ಕಲಿತು ನಾವು ದೇವರನ್ನು ಸಂರಕ್ಷಿಸುವ ಶಕ್ತಿ ಪಡೆಯಲು ಬೇಡುವೆವು— ಅತ ಅಗೋ ಅಸ್ತು ಎಂದು ಆಶೀರ್ವದಿಸನೆ?

ಅಂದು ಆಗೋಸ್ತು ಹನ್ನೆರಡು ಸಾವಿರ ಮೊಂಬ್ಯೆನೂರು ನಲ್ವತ್ತೇಳು. ಇಂದು ಆಗೋಸ್ತು ಹನ್ನೆರಡು ಸಾವಿರದೆಂಟೈನೂರ ಅರುವತ್ತೇಳು. ಅಂದು \| ಶ್ರೀ ನುಡಾತ್ಮ ಮೋಹನದಾಸ ಕರಂಚಂದ ಗಾಂಧೀಜಿ, ಸರದಾರ ವಲ್ಲಭ್ಭಾಯ್ ಪಟೇಲ್, ಬಾಬು ರಾಜೇಂದ್ರ ಪ್ರಸಾದ್, ಶ್ಯಾಮ ಪ್ರಸಾದ ಮುಖರ್ಜಿ, ಪಂಡಿತ ಜವಾಹರಲಾಲ ನೆಹ್ರೂ, ಸ್ವಾತಂತ್ರ್ಯವೀರ ವಿನಾಯಕ ದಾಮೋದರ ಸಾವರ್‌ಕರ್, ಲಾಲ ಬಹದೂರ ಶಾಸ್ತ್ರಿಜೀ ಮೊದಲಾದ ಮಹಾಪುರುಷರೂ. ಧೀರ ಪುರುಷರೂ, ಸ್ವಾತಂತ್ರ್ಯ ಪ್ರೇಮಿಗಳೂ ಜನನಾಯಕರೂ ಇದ್ದರು. ಇಂದು ಅವರಲ್ಲಿ ಅದ್ಯಾರೂ ಇರುವದಿಲ್ಲ. ಅಷ್ಟೇ ಅಲ್ಲ, ಅಂದು ಸರ್ವೋಚ್ಚ ಅಧಿಕಾರ ಅಂತಸ್ತಿನಲ್ಲಿದ್ದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರಿಂದು ಪ್ರಥಮ ಎದುರು ಪಕ್ಷದ ಅನಭಿಷಿಕ್ತ ಚಕ್ರವರ್ತಿಯವರಾಗಿದ್ದಾರೆ. ಅಂದು ಅನ್ಯ ದೇಶಗಳು ನೂರಾರು ಕೋಟಿ ರೂಪ್ಯಾ ಸಾಲವನ್ನು ನಮಗೆ ಹಿಂತಿರುಗಿಸಬೇಕಾಗಿತ್ತು. ಇಂದು ಸಹಸ್ರಾರು ಕೋಟಿ ರೂಪ್ಯಾ ಸಾಲವನ್ನು ಅನ್ಯ ದೇಶಗಳವರಿಗೆ ನಾವು ಕೊಡಬೇಕಾಗಿರುತ್ತದೆ. ಅಂದು ದೇಶಭಕ್ತಿ ಒಕ್ಕಟ್ಟು ಒಂದಿನಿತೂ ಬತ್ತಿ ಹೋಗಿರಲಿಲ್ಲ. ಇಂದು "ದೇಶ ಭಕ್ತಿ" ಶಬ್ದದ ಅರ್ಥವೇ ಬದಲಾಗಿರುತ್ತದೆ; ಒಕ್ಕಟ್ಟು ಒಂದಿನಿತೂ ಕಂಡು ಬರುತ್ತಿರುವದಿಲ್ಲ. ಅಂದು ಅಷ್ಟೆಲ್ಲಾ ಇದ್ದರೂ ನಾವು ಅಮವಾಸ್ಯೆಯ ಅಂಧಕಾರದಲ್ಲಿದ್ದೆವು. ಹಾಗಿದ್ದಲ್ಲಿ ಇಂದು ನಾವು ಹಾಲು ಬೆಳದಿಂಗಳನ್ನ, ತಂತಾದ ಪೂರ್ಣಿಮೆಯಕ್ಕ ಹೋಗುತ್ತಿದ್ದೇವೆಯೇ? ಅದೂ ಸಾಮಾನ್ಯ ಪಡ್ಡೆಮೆ ಆಸ್ಲಿ—ಒಕ್ಕಟ್ಟಿನ ಒರತೆ ಪುಟಿಯುವ ರಾಷ್ಟ್ರೀ ಪೂರ್ವೋತ್ಥಾನದತ್ತ!

ಬುಗ್ಗೆಯು ಬುಡವನ್ನು, ಅದರ ಉಗಮ ಸ್ಥಾನವನ್ನು ಕಂಡವರ್ಯಾರೂ ಇಲ್ಲ. ಹೂಮೋಟಗಳಲ್ಲಿ ನೀರು ಸುಂಯ್ಯನೆ ಮೇಲಕ್ಕೆ ಹಾರುವದನ್ನು, ಹುಟ್ಟುವದನ್ನು ಕಂಡವರಿದ್ದಾರೆ. ಬಣ್ಣ ಬಣ್ಣದ ನೀರ ಹನಿಗಳು ಇಡೆಸುವ ಪೋಟಿಯನ್ನು ಕಂಡು ವೃಷ್ಟಿ ತೃಪ್ತಿಯನ್ನು ತೀರಿಸಿಕೊಂಡವರಿದ್ದಾರೆ. ವರ್ಣ ನಿಜವಲ್ಲ, ಅದು ಮಿಥ್ಯೆ, ನೀರು ವರ್ಣ ರಹಿತವಾದದ್ದೆನ್ನುವದು ನೀರು ಮೇಲಣ ಗಗೈಯುವ್ಯೇ ನಿಜವೆನ್ನುವ ವಾಸ್ತವ ವಾದಿಗಳೂ ಇದ್ದಾರೆ. ನಗರ ವಾಸಿಗಳು, ವಿದ್ಯಾವಂತರು ಹಾಗೂ ಶ್ರೀಮಂತರು ಕಾಣುವದು ಇಂಥಹ ವೈವಿಧ್ಯತೆಗಳನ್ನೇ. ಇನ್ನೆಲ್ಲಾದರೂ ಅದು ಬರತವನ ನೇತ್ರದ್ವಯಗಳಲ್ಲಿ, ಇನ್ನೂ ಒಚ್ಚೆಂದರ ಗೋಸುಂಬೆಯ ಕಣ್ಣುಗಳಲ್ಲಿ ಅದರೆ ಗ್ರಾಮ ವಾಸಿಗಳು, ವನ ವಾಸಿಗಳ ವಿಷಯ ಹಾಗಲ್ಲ. ಅವರಿಗೆ ಗೊತ್ತಿರುವ ಬಣ್ಣವೆ ಬಗ್ಗೆಯ ವಿಷಯ ಮೂರ್ಖ. ಹಾದು. ಅದೂ ವರ್ಣ ರಹಿತವೇ ಇದೆ. ಅದರ ಅದಷ್ಟ ಶೀತಲ! ಅದೆಷ್ಟು ಸಿಹಿ! ಅದು ನಿಸರ್ಗದತ್ತ. ಹಾಗಿದ್ದರೂ ಅದರ ಮೂಲವನ್ನು ಕಂಡು ಹಿಡಿದವರು ಯಾರೂ ಇಲ್ಲ. ಅವರಿಗೆ ಅದರ ಮೂಲದ ಅವಶ್ಯಕತೆ ಇರುವದಿಲ್ಲ. ಅದು ನಿಸರ್ಗದತ್ತ ಪ್ರಾಪ್ತಲ್ಯಪೂರ್ಣ ವರಪ್ರಸಾದ ಅವರಿಗೆ. ಅದು ಎಷ್ಟಂದ ಕಂಡೆದ್ದು ಬರುತ್ತೆನ್ನುವದರ ಪ್ರಜ್ಞೆ ಅವರಿಗೆ ಇದೆ. ಆ ಮಣ್ಣಿನ ಮಹಾ ಗುಣದ ಅರಿವು ಅವರಿಗೆ ಇದೆ.

ಮಣ್ಣು! "ಹುಲ್ಲು ಮುಳ್ಳು ಮೊಳೆಯದ ಹಾಳು ಮಣ್ಣು!" ಭಾರತೀಯವಾದಿ ಪಂಡಿತವರೇಣ್ಯ ಜವಾಹರಲಾಲ ನೆಹ್ರೂ ಜೀಯನರು ನುಡಿದಿರುವ ಅವರ ಅನುಭವದ ಸಾರ ಇದು. ಇಂದು ಆ ಜಡತಾವಾದಿ ಜವಾಹರಲಾಲಜೀ ಜನತೆಯು ನಡುವೆ ಇಲ್ಲ. ಇಂದಿಯೂದ ಒಂದು ಚದರ ವ್ಯೆಲಾಗಲೀ ಅಥವಾ ಒಂದು ಬೀಗವಾಗಲೀ ಅದು ಪವಿತ್ರ ಭೂಪ್ರದೇಶವಿದೆಯೆಂದು ಲೋಕ ಸಭಾ ಸದಸ್ಯರಿದ್ದರು ಶ್ರೀ ಮಹಮ್ಮದ್ ಕರೀಂ ಛಾಗಲಾ ಹೇಳಿದರು. ಹಿಂದೆ ಇದೇ ಧಾಟಿಯಲ್ಲಿ ಜಂದಿನ ಸ್ವಧಾನಿ ಶ್ರೀ ಜವಾಹರ ಲಾಲ ನೆಹ್ರೂಜೀ ಹಾಗೂ ರಕ್ಷಣಾ ಮಂತ್ರಿ ಶ್ರೀ ಕೃಷ್ಣ ಮೆನನರು, ಇಂಡಿಯಾದ ಒಂದಿಂಚು ನೆಲವನ್ನೂ ಶತ್ರುಗಳಿಗೆ ಬಿಟ್ಟುಕೊಡಲಾರವೆಂದು ಗರ್ಜಿಸುತ್ತಿದ್ದರು. ಫೆಡೆಸುವ ಸಿಂಹದ ಬಾಯ್ತೆರೆದು ಹಲ್ಲುಗಳನ್ನೆಣಿಸುತ್ತಿದ ಅವರು ಭರತನಂತೆ ಭಾರತೀಯ ಜನ ಸಂಘದ ಜನಮನ ಜೋರ ಶ್ರೀ ಅಟಲ ಬಿಹಾರಿ ವಾಜಪೇಯಿಯವರೂ, ಆಗ ಸ್ವಾಮಿ ನಿನ್ನ ಒಂದು ಇಂಚಿಗೆ ಅಡಮ್ಮು ಮೈಲುಗಳೆಂದು ಕೋಪದಿಂದ ಲೆ ಕೆಳಿದಾಗ ಜನತಾ ಸ್ತಿನಿಧಿಗಳು ಫೊಳ್ಳೆಂದು ನಕ್ಕ ಬಿಡ ಪ್ತಿದ್ದರು ಇಂದು ನಮ್ಮ ಪ್ರೊಲ್ಡೆನ್ ಮಿನಿಸ್ಟರ್ ಮಿಸ್ಟರ್ ಭಗ್ಗಾರವರು ಭಾರತದ ನೆಲ ಸೇಫ್ ಡ್ ಟೆರ್ರಿಟರಿಯೆನ್ನುತ್ತಿದ್ದಾರೆ. ಬಟ್ಟನೊ ದಲಾವ ಪರದೇಶ ;ನಾಮಕಾಗ್ಯಿ ನ್ನು ಅಗ್ನಿಪಾಲು ಮಾಡುತ್ತಿದ್ದ ಹಿಂದಿನ ದಿನಗಳ ಉತ್ಸಾಹವಾಯೊ ಫೆಟನೆಇನ್ನು ಸೈಕಿಪತಲದಿಂದ ಪೂರ್ಣಮಾ ಯವಾಗಿರುವದಿಲ್ಲ. ಆದರೂ ಇಂದು 'ಪರದೇಶಿ ಶಕ್ತಿಯಿಂದಲೇ ಭಾರತದ ಜೀವನಾಡಿಯಲ್ಲಿ ರಕ್ತ ಹರಿಯುತ್ತಿದೆಯೆಂದರೆ ಸತ್ಯಕ್ಕೆ ಅಪಚಾರ ಮಾಡಿದಂತಾಗಲಿಕ್ಕಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಸ್ವಪಂಪ್ರ ಭಾರತದಲ್ಲಿ ಪರದೇಶಿಯಲ್ಲಿ ಮಂತ್ರಿಯವರು ಇದ್ದಾರೆನ್ನುವದು ಪರಿಹಾಸ್ಯದ ಸಂಗತಿಯಾಗಲಿಕ್ಕಿಲ್ಲ. ಇಂದಿನ ಪರದೇಶೀಯ ಮಂತ್ರಿಯವರು ಭಾರತದ ನೆಲ ಸೇಕ್ರೆಡ್ ಟೆರ್ರಿಟರಿಯೆಂದು ಹೇಳುತ್ತಿದ್ದಾರೆ. ಇವರ ಮಾಲಿಗೆ ಸೇಕ್ರೆಡ್ ಅಂದರೆ ಏನು? ಪವಿತ್ರ ಭೂಮಿ, ಪುಣ್ಯ ಭೂಮಿ, ಕರ್ಮ ಭೂಮಿ, ಪಾವನ ಭೂಮಿ, ಹಿಂದೂ ಭೂಮಿ, ದೇವ ಭೂಮಿ, ಗಂಡು ಭೂಮಿ....ಭಾಷಾ ಬಲ್ಲದರ ಬಳಿ ಇಂತಹ ಪದಗಳಿಗೆ ಬರಗಾಲ ಬಂದಿರಲಿಕ್ಕಿಲ್ಲ. 'ನನ್ನನ್ನು ಸುಖವಾಗಿ ಬೆಳೆಸಿದ ಹಿಂದೂ ಭೂಮಿಯೇ, ನೀನು ಮಹಾ ಮಂಗಲೆ ಪುಣ್ಯ ಭೂಮಿಯೇ ನಿನ್ನ ಸೇವೆಗಾಗಿ ಈ ಜೀವವು ಮಂಡಿಪಾಗಿರಲಿ, ನಿನಗೆ ಪ್ರಣಾಮಗಳು, ಅನಂತ ಪ್ರಣಾಮಗಳೆಂದು ಎನಂಪ್ರಥಿ ಪೂಜಿಸುವವರನ್ನು ಕಾಣಬಹುದು. ಪಾದದಿಂದ ಸ್ಪರ್ಶಮಾಡಬೇಕಾಗಿರುವದರಿಂದ ವಿಷ್ಣುಪತ್ನಿಯ ಬಳಿ ಕ್ಷಮಿಸಲು ಬೇಡಿಕೊಳ್ಳುವವರನ್ನು ಕಾಣಬಹುದು. ಇದೀಗ ಸೇಕ್ರೆಡ್ ಟೆರಿಟರಿ ಅನ್ನುವವರನ್ನೂ ಕಾಣಬಹುದಾಗಿದೆ. ಈ 'ಸೇಕ್ರೆಡ್' ಶಬ್ದದ ಅರ್ಥವಾದರೂ ಏನು? ಅನಂತ ಪ್ರಣಾಮಗಳಿಗೆ ಯೋಗ್ಯವಾದ, ಸ್ಪರ್ಶನೂ ಬೇಡಿಕೆಗೆ ತಕ್ಕುದಾದ ಪವಿತ್ರ ಪದ ಅದು ಏನು? ನಾವು ಬಾಯು ಪಚಾರಕ್ಕಾಗಿ ಹಾಗೂ ಸ್ವಾರ್ಥದಿಂದ, ಇನ್ನೂ ಹೆಚ್ಚೆಂದರೆ ಶಿಷ್ಟಾಚಾರದ ಕಣ್ಣಿಗೆ ಧೂಳೆರಚಲಿಕ್ಕಾಗಿ ಈ ಪದಪ್ರಯೋಗ ನ ಡೆಸುತ್ತಿದ್ದೇವೆಯೇ? ಅದು ಬಿಟ್ಟು ನಿಜವಾಗಿ ನಮಗಿದು ಪುಣ್ಯಭೂಮಿ ಪವಿತ್ರ ಭೂಮಿ, ಧರ್ಮಭೂಮಿಯೊಗಿದ್ದಲ್ಲಿ ಅದರ ವಿಭಜನೆಗೆ ನಾವು ಒಪ್ಪುತ್ತಿದ್ದೆವೆಯೇ? ಪರರ ಸುಖಕ್ಕಾಗಿ, ಅನ್ಯರ ತೃಪ್ತಿಗಾಗಿ ನಿಮ್ಮ ಅದಷ್ಟು ಪವಿತ್ರ ಅಥವಾ ಪ್ರೀತಿಯ ವಸ್ತುಗಳನ್ನು ದಾನವೂ ಡಿಯುವಿರಿ? ಅಬೂ ಜೇಡ, ಹೆತ್ತ ಕರುಳು ಜ್ವರಡಿಂದ ಚಡಪಡಿಸುತ್ತಿರವಾಗ, ಡಾಕ್ಟರರಬ್ಬರ ತೃಪ್ತಿಗಾಗಿ, ನಿನ್ನ ಹೆತ್ತ ವ್ವನನ್ನು ವಿಭಜಿಸಿ, ಅವರಿಬ್ಬರಿಗೂ ಕೊಟ್ಟು ಬಿಡುವಿರೇನು? ಅದೂ ಬೇಡ. ತಾಯಿ ತೀರಿಯೇ ಜೋಗಿರುವಳು. ಕಳೇಬರವನ್ನು ಸ್ಮಶಾನಕ್ಕೆ ತಂದಿರುವಿರಿ. ಅಷ್ಟೆ ಹೊಂಡ ತೆಗೆಯುವ ಅಥವಾ ಚಿತೆ ತಯಾರಿಸುವ ಎರಡು ಗುಂಪುಗಳ ನಡುವೆ ಜಗಳವೆದ್ದಾಗ ಹೆತ್ತಾಕೆಯ ಹೆಣವನ್ನು ಎರಡು ಭಾಗಮಾಡಿ ಅವರಿಗೆ ಕೊಟ್ಟುಬಿಡುತ್ತೀರೇನ; ನುತ್ತೆ, ಹಸಿವಿನಿಂದ ಕಂಗೆಟ್ಟು ಕಣ್ಣೀರು ಸುರಿಸುತ್ತ, ನಾಲಗೆ ಜಜ್ಜಿರುವ ನಾಯಿಗೂ ಒಂದಿಷ್ಟನ್ನು ಕೊಡುತ್ತೀರೇನು? ಇಲ್ಲ. ಇಲ್ಲ. ಎಂದೆಂದಿಗೂ ಇಲ್ಲ. ಹೌದು, ಆಕೆ ನಮಗೆ ಪಾವನ ಮೂರ್ತಿ ವತ್ತೆ ಶ್ರೀ ಧಾಗ್ಲಾರ 'ಸೇಕ್ರೆಡ್'ನ ಅರ್ಥವೇನು? ಇದು "ವಿಸಲಾದ" ಭೂಮಿ, ಇದು 'ಅರ್ಪಿತ' ಭೂಪ್ರದೇಶ! ಅಲ್ಲವೇ ಖಂತೆ. ಇದು ಪಾಕಿ ಜೈನ ಶತ್ರುಗಳಿಗೆ ವಿಸಲಾದ, ಅರ್ಪಿತ ಭೂಮಿ. ಶ್ರೀ ಧಾಗ್ಲಾ ಅದನ್ನೇ ಹೇಳಿರುವರೇ? ಇಂದು ಅದಕ್ಕೆ ಬೇರೆ ಅರ್ಥವಾದರೂ ಏನು? ದೇಶ ವಿಭಜನೆಯ ನಂತರವೂ ರೆಡ್‌ಕ್ಲಿಫ್, ಯಲ್ಲೋಕ್ಲಿಫ್, ಗ್ರೀನ್‌ಕ್ಲಿಫ್‌ಗಳ ಹೆಸರಿನಲ್ಲಿ 'ಸೇಕ್ರೆಡ್ ಟೆರಿಟರಿ'ಯನ್ನು ಬಿಟ್ಟುಕೊಡುತ್ತಿದ್ದೇನೆಂದ ಮೇಲೆ ಅವರಿಗಾಗಿಯೇ ವಿಸಲಗಿಟ್ಟಿರುವ, ಅರ್ಪಿತಪಟ್ಟಿರುವ ಭೂಪ್ರದೇಶ ಇನ್ನೆವಿರಲು ಸಾಧ್ಯವೇನು? ಹಾಗೇನಿಲ್ಲ, ನಾವಡೆಷ್ಟು ತಪ್ಪು ಮಾಡಿದರೂ ಇದು ನಮ್ಮ ಪವಿತ್ರರಾಷ್ಟ್ರ, ಪುಣ್ಯಭೂಮಿಯೇ ಇದೆ ಅನ್ನುವದಿನ್ನಲ್ಲಿ ಈ ಸಿಹಿ—ಕಹಿ, ಸುಖ—ದುಃಖ ವಿಮಿಶ್ರಿತ ದಿನವೆಂದು ಯೋಚಿಸಿಕೊಂಡು, ಅದರ ಕಾರ್ಯಾಚರಣೆಗಾಗಿ ರಕ್ಷ ಬಂಧನವೆಂದು ರಿಬಿನ್ನನ್ನ ಕಟ್ಟಿಕೊಳ್ಳಲೇಬೇಕು. ಅದಕ್ಕಾಗಿ ಈಗ ಯೋಚಿಸಲೇ ಬೇಕು.

ಆತ್ಮಮಣಿಗಾರ ಅಂಗ್ಲೋಸ್ ಆಳ್ವಿಕೆಯನ್ನು ಅಂತ್ಯಗೊಳಿಸಲಿದಾಗಲೇ ಇಪ್ಪತ್ತು ವರ್ಷಗಳು ಸಂದು ಹೋಗಿವೆ. ಈ ಮಧ್ಯೆ ಅವರಂತೆಯೇ ಬಂದಿದ್ದ ವ್ಯೆಂಜರನ್ನೂ ಹಿಂದಕ್ಕೆ ಕಳುಹಿಸಿರುವೆವು. ಅಲ್ಲಲ್ಲಿ ಇದ್ದ ಚಿಕ್ಕಪುಟ್ಟ ಹಾಗೂ ಹಿರಿಯ ಕೆರೆಯ ರಾಜರುಗಳ ಕಾರುಭಾರನ್ನು ಕೊನೆಗೊಳಿಸಿ, ಅವರಿಗೆ ಚಲಿತಲ್ಲಿಯೇ ವಿಧಿ (ಕಪ್ಪ ಕಾಣಿಕೆ.)ಯನ್ನು ಪಿಸುತ್ತ, ಇನ್ನೊಂದೆಡೆ ಹೊತ ನಮೂನೆಯ

(ಇಪ್ಪತ್ತೇಳನೇ ಪುಟ ನೋಡಿರಿ)

WHEN YOU ARE AT VIJAYAWADA,

STAY AT,

WELCOME HOTEL

(Vegitarian Boarding and Lodging)

Recognised by the Govt. of India
Tourist Department.

Gandhi Nagar, Vijayawada-3.

Phone No. 3286. gram: "PRIYABOJAN".

PROPRIETOR: P. LAKSHMANA RAO & SONS.

ಶ್ರೀ. ಯು. ನಾ. ಉಡುಪ, ವಿದ್ವಾನ್, ಕುಂದಾಪುರ.

ಭಾರತದ ರಾಷ್ಟ್ರಭಾಷೆ- ಸಂಸ್ಕೃತ

ಮೂಗು ಮುರಿಯ ಬೇಡಿ, ಇದೇನು ಹೊಸತೊಂದು ವಾದವೆಂದು ಕೊಚ್ಚಿಗೇಳಬೇಡಿ; ಭಾರತೀಯ ಭಾಷೆಯೊಂದು ಭಾರತದ ರಾಷ್ಟ್ರಭಾಷೆಯಾಗ ಬೇಕಾಬರೆ, ಸಂಸ್ಕೃತವೇ ಆಗಬೇಕು—ಎನ್ನುತ್ತಾರೆ ಲೇಖಕರು. ಇದಕ್ಕೆ ಇತಿಹಾಸವೂ ಇದೆ, ಸಾಹಿತ್ಯವೂ ಇದೆ, ಸಾಮರ್ಥ್ಯವೂ ಇದೆ. ಇದನ್ನು ಕಂಡುಕೊಳ್ಳುವ ಶಕ್ತಿ ಭಾರತೀಯರಲ್ಲಿಲ್ಲವೆಂದ ಮಾತ್ರಕ್ಕೆ ಅದರಲ್ಲಿ ಶಕ್ತಿಯಿಲ್ಲ ವೆಂದು ಅರ್ಥವಲ್ಲ. ಭಾರತೀಯರೂ ಅವರ ಸರಕಾರವೂ ಅಡಗಿರುವ ಸಾಂಸ್ಕೃತಿಕ ಶಕ್ತಿಯನ್ನು ಅರಸುವ ಪ್ರಯತ್ನ ಅರಂಭಿಸ ಬೇಕು.

— ೧ —

ಭಾರತದಲ್ಲಿಂದು ಸಂಸ್ಕೃತ ಭಾಷೆಗೆ ಬೆನ್ನುಕಟ್ಟಿ, ಅದರ ಸ್ಥಾನಮಾನದ ಕುರಿತು ಮೂತಾಡುತ್ತಿದೆಯೆಂದರೆ ತುಂಬಾ ಆಪಹಾಸ್ಯದ ಮತ್ತು ಅಪರಾಧದ ವಿಷಯವೆಂದು ಯಾರಿಗೆ ತಾನೆ ತಿಳಿಯದು? ಆದರೂ ಈ ದೇಶದಲ್ಲಿ ಕೆಲವು ಸಾವಿರ ವರ್ಷಗಳ ವರೆಗೆ ಪ್ರಭುತ್ವ ಗಳಿಸಿದ್ದ ಒಂದು ಮಹಾ ಭಾಷೆಯು ಏಕಾಏಕಿ ಮರಣೋನ್ಮುಖವಾಗಿ ನಿರುಪಯುಕ್ತ ಭಾಷೆಯೆಂದು ಭಾರತೀಯರಿಂದಲೇ ತೀರ್ಮಾನಕ್ಕೆ ಬರುತ್ತಿದೆಯೆಂದರೆ, ಇದಕ್ಕಿಂತಲೂ ಭಾರತೀಯರ ತಲೆತಿನ್ನುವ ಭೀಕರ ಸಮಸ್ಯೆ ಇನ್ನಾವುದು? ಸಹಸ್ರ ಸಹಸ್ರ ವರ್ಷಗಳಿಂದ ಭಾರತೀಯರ ಹೃನ್ಮನಂದಿಂದ ದಿವ್ಯ ಜ್ಯೋತಿಯೆನಿಸಿದ್ದ ಈ ದೇವ ಭಾಷೆಯು ಇಂದು, ಇದೊಂದು ಜಾತೀಯ ಕ ಭಾಷೆ, ನಾಗರಿಕ ಪ್ರಪಂಚಕ್ಕೆ ಉಪಾದೇಯವಾಗದ ಭಾಷೆ—ಎಂದು ಭಾರತೀಯರೇ ಘಂಟಾ ಘೋಷವಾಗಿ, ಸ್ವಾಭಿಮಾನ ರಹಿತರಾಗಿ, ನಿರ್ಭೀತಿಯಿಂದ ತೀರ್ಮಾನ ಹೇಳಿ ವುದೆಂದರೆ, ವರ್ತಮಾನ ಭಾರತೀಯರ ಮನೋವೃತ್ತಿಯಾದರೂ ಯಾವ ಹಂತಕ್ಕಿಂದ ಇಳಿದು ಯಾವ ಹಂತಕ್ಕೆ ಏರಿದೆಯೆಂದು ಊಹಿಸಲೂ ಸಾಧ್ಯವಿಲ್ಲ ವೆಂಟೆ? ಭಾರತೀಯರು ಪರಮ ಪುಣ್ಯಪ್ರದವಾದ ದೈವಿಕ ಜೀವನವನ್ನು ತಾಲಿನಿಂದ ಒದೆದು, ವೈಶಾಖಿಕ ಜೀವನವೇ ಪರಮ ಪುರುಷಾರ್ಥವೆಂದು ತಲೆಯ ಮೇಲೆ ಹೊತ್ತು ನಡೆಯು ತೊಡಗಿರುವಂದು, ಭಾರತಕ್ಕೆ ಅನೈತಿಕ ಮಾರ್ಗಗಳಿಂದ ವಿಮೋಚನೆಯುಂಟೆ? ಭಾರತೀಯರಿಗೆ ಮಘರತರ ಅಮೃತಕ್ಕಿಂತ ಹುಳಿ ಹೆಂಡವೇ ಪಾವನವಾಗಿ ತೋ ಲೇಕೆ? ಪವಿತ್ರ ಜನ್ಮದಾತೆಗಿಂತ ಬೆಡಗಿನ ವೇಶ್ಯೆಯೇ ಆರಾಧ್ಯ ದೇವತೆಯೆನಿಸುವುದಂಟೆ?....ಭಾರತದ ಶಾಂತ ಸುಭಿಕ್ಷ ಜೀವನವು ಹಸನಾ ಭಾರತದಲ್ಲಿ ಉದಯಿಸಬೇಕಾದರೆ, ಸಂಸ್ಕೃತ ಭಾಷೆಯು ಮೊತ್ತ ಮೊದಲು ಭಾರತದ ರಾಷ್ಟ್ರ ಭಾಷೆಯಾಗಲೇ ಬೇಕು. ಅದೊಂದು ಪಂಗಡದ—ಜಾತಿಯ ಭಾಷೆಯಲ್ಲವೆಂದೂ, ಸರ್ವೋದಯ ಭಾಷೆಯೆಂದೂ ಎಲ್ಲರಿಗೂ ಮಂದಟ್ಟು ಮಾಡಬೇಕು. ಆಗ ಆ ಭಾಷೆಯು ಪಂಚಜ್ಞಾನವಾದ ಧರ್ಮ ಮಂದಾಕಿನಿಯು ಭಾರತದ ಗುಡಿಸಲುಗಳನ್ನೂ ಅರಮನೆ ಗುರುಮಂದಿರಗಳನ್ನೂ ಪಾವನೀಕರಿಸುವುದು. ಅಂದೇ ಭಾರತೀಯರ ಬಾಳು ಸಾರ್ಥಕವಾಗುವುದು; ಶಾಂತ ಜೀವನದ ತೌಲು ಮನೆಯೂಗುವುದು; ಅಧರ್ಮ, ಅನ್ಯಾಯಗಳಿಂದ ಗಾರುಗೆಟ್ಟ ನನ್ಮನುಜತೆಯು ಪ್ರಾಮಾಣಿಕತೆ, ಪರೋಪಕಾರ, ಸಹಕಾರ್ಯ ಮಹಾಮಹಿಮರ ಮೊದಲಾದ ಸದ್ಗುಣಗಳ ಮಂದಿರವಾಗುವುದು, ಹೀಗೆ ಕಮರುತ್ತಿರುವ ಸಂಸ್ಕೃತ ಭಾಷಾ ವೃಕ್ಷವು ಪುನಃ ಸಾಹಿತ್ಯಕಲೆಗಳೆಂಬ ಚಿಗುರು ಹಣ್ಣುಗಳಿಂದ ತುಂಬಿ ಜೈತ್ರಯಾತ್ರೆಯಂತೆ ನಳನಳಿಸಬೇಕಾದರೆ ಆರ್ಥಚೆಂದ್ರ ಪ್ರಯೋಗಕ್ಕೆ ಸಿದ್ಧರಾದ ಭಾರತೀಯರು ಸಂಸ್ಕೃತ ಭಾಷೆಯನ್ನು ಹಾರ್ದಿಕವಾಗಿ ಎತ್ತಿ ಹಿಡಿಯಬೇಕು; ಆ ಭಾಷೆಯು ಭಾರತೀಯರ ಭಾಗೀರಥಿಯಾಗಿ, ಭಾಷಾಭಿಮಾನ, ದೇಶಾಭಿಮಾನಗಳು ತುಂಗಾಳಿ ತೆಂಗಾಳಿಯಾಗಿ, ಭರತಭೂಮಿಯು ಭಾರತೀಯರಿಗೆ ಸ್ವರ್ಗಕ್ಕಿಂತ ಗರೀಯವಾಗಬೇಕು. ಸಮಸ್ತ ಭಾರತವು ಬ್ರಿಟಿಷರ ವಶವಾದಾಗ ಭಾರತದಾದ್ಯಂತ ಒಂದು ಭಾಷಾವಿವಾದವೆದ್ದಿತ್ತು. ಸಮಗ್ರ ಭಾರತವು ಬ್ರಿಟಿಷರ ವಶವಾದಾಗ ಭಾರತದಾದ್ಯಂತ ಒಂದೆ ಭಾಷಾವಿವಾದವೆದ್ದಿತ್ತು. ಸನಾತನಿಗಳು ತಮಗೆ ಸಂಸ್ಕೃತವೇ ರಾಷ್ಟ್ರಭಾಷೆಯಾಗಬೇಕೆಂದು ಗೊಣಗಿದರು. ಇವರ ಗೊಣಗಾಟ ಮತ್ತು ಸಂಘಟನೆ ಸಾಕಷ್ಟು ಬಲವಾಗಿರಲಿಲ್ಲ. ಇನ್ನು ಕೆಲವು ಧುರೀಣರು ಆರಬ್ಬಿ. ಪಾರ್ಸಿ ಭಾಷೆಗಳ ಮೂಲಕ ಭವಿಷ್ಯ ಭಾರತಕ್ಕೆ ಶಿಕ್ಷಣ ದೊರೆಯಬೇಕೆಂದೂ, ಇವುಗಳಲ್ಲಿ ಒಂದು ರಾಷ್ಟ್ರ ಭಾಷೆಯಾಗಬೇಕೆಂದೂ ವಾದಿಸಿದರು. ಆದರೆ ಮುಸ್ಲಿಮರ ರಾಜ್ಯಭಾರದ ಸಾಧಕ ಬಾಧಕಗಳನ್ನುಂಡ ಭಾರತೀಯರು ಅದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡಲಿಲ್ಲ. ಆಗ ಭಾರತೀಯರಲ್ಲಿ ಪ್ರತಿಭಾವಂತರೆನ್ನಿಸಿದ್ದ ಕೆಲವರು ಪಾಶ್ಚಾತ್ಯ ವೇಷ ಭೂಷಣಗಳಿಗೆ ಮೂರು ಹೋಗಿದ್ದು, ಅವರ ಪ್ರಬಲ ಭಾಷಾ ಜ್ಞಾನದಿಂದ ಭಾವೀ ಭಾರತವು ಸಂಜೆಕೆಂಪಾದರೆ ಅದರ ಅಸ್ತಿತ್ವಕ್ಕೇ ಹಾನಿ ಬರುವುದೆಂದು ಆಂಗ್ಲಭಾಷೆಗೆ ಆಮಂತ್ರಣವಿತ್ತರು. ಆ ಕಾಲದಲ್ಲಿ ಈ ಸಂಗಡದವರು ಆಕಾಶ ಪಾತಾಳಗಳನ್ನು ಒಂದು ಮಾಡವ ಸಾಹಸಿಗಳಾಗಿದ್ದರು! ಈ ತಂಡದ ಧ ಘೋಷವು ಆಂಗ್ಲ ಅಧಿಕಾರಿಗಳಿಗೆ ಹಿತಕರವಾಯಿತು. ರೋಗಿ ಬಯಸಿದ್ದೂ ವೈದ್ಯ ಹೇಳಿದ್ದೂ ಒಂದೇ ಆಯಿತು ಭಾರತೀಯರ ಪರವಾಗಿ ಅವರ ಹಿತಚಿಂತಕರೆನ್ನಿಸಿದ್ದ ರಾಜಾರಾಮ ಮೋಹನ ರಾಯರು ತಮ್ಮ ಅಪೂರ್ವ ವಾಗ್ವೈಖರಿಯಿಂದ ಸನಾತನಿಗಳ ವಾದವನ್ನು ಪ್ರತಿಭಟಿಸಿ—"...ಸಂಸ್ಕೃತ ಭಾಷೆ, ಸನಾತನ ಭಾರತೀಯ ಶಾಸ್ತ್ರಗಳು, ಶ್ರುತಿ ಸ್ಮೃತಿಗಳು—ಇವುಗಳನ್ನೇ ಭಾರತದ ತರುಣರಿಗೆ ಇನ್ನು ಮುಂದೂ ಕಲಿಸುವುದಾದರೆ, ನಮ್ಮ ಯುವಕರನ್ನು ಇನ್ನೊಮ್ಮೆ ಎರಡು ಸಾವಿರ ವರ್ಷಗಳ ಹಿಂದೆ ನೂಕಿದ ತಪ್ಪಾಗುತ್ತದೆ! ಬ್ರಿಟಿಷ್ ಪಾರ್ಲಿಮೆಂಟಿನ ಧ್ಯೇಯವನ್ನು ನ್ನು ಹಿಂದಿನ ಅಂಧಕಾರದಲ್ಲೇ ಇನ್ನೂ ತೆವಳಲಿಸಬೇಕೆಂದು ಇರಲಿಕ್ಕಿಲ್ಲ. ಭಾರತೀಯರ ಸರ್ವತೋಮುಖ ಅಭಿವೃದ್ಧಿಯೇ ಅದರ ಗುರಿ! ಅದುದರಿಂದ ಆಧುನಿಕ ಗಣಿತ, ಸೃಷ್ಟಿ ವಿಜ್ಞಾನ, ರಸಾಯನ ಶಾಸ್ತ್ರ, ವೈದ್ಯಶಾಸ್ತ್ರ ಮುಂತಾದುವು ಗಳನ್ನು ಇಂಗ್ಲಿಷಿನ ಮೂಲಕ ಆಂಗ್ಲರ ಜ್ಞಾನದಿಂದ ಶಕ್ತ ಸಲಕರಣೆಗಳ ಸಹಿತ ನಮಗೆ ಕಲಿಸಲು ಪ್ರಯತ್ನಿಸುವುದೇ ಆಂಗ್ಲ ಸರಕಾರದ ಕರ್ತವ್ಯ...' ಎಂದು ಭಾರತದ ಅಳಿವು ಉಳಿವುಗಳ ಸಂಧಿಕಾಲದಲ್ಲಿ ಗವರ್ನರ್ ಜನರಲರನ್ನು ಒತ್ತಾಯಿಸಿದರು. ಆಗ ಸಾರ್ವಜನಿಕ ಶಿಕ್ಷಣ ಸಮಿತಿಯ ಅಧ್ಯಕ್ಷನಾಗಿದ್ದ ಮೆಕಾಲೆ ಸಾಹೇಬನು ರಾಜಾರಾಮ ಮೋಹನರಾಯರ ವಾದಕ್ಕೆ ಮನ್ನಣೆಕೊತ್ತನು. ಭಾರತೀಯರ ಆಂಗ್ಲಶಿಕ್ಷಣದ ವ್ಯಾಮೋಹವೇ ಅವರ ವಾರತಂತ್ರ್ಯದ ಧ್ವಜಪಟನೆಂದು ಅರಿತಿದ್ದ ಮೆಕಾಲೆಯು, ಭಾರತದಲ್ಲಿ ಅಲ್ಲಲ್ಲಿ ಆಂಗ್ಲ ವಿದ್ಯಾಲಯಗಳನ್ನು ತೆರೆದ ಧಾರಾಳಿಯಿಂದ ಪಾಶ್ಚಾತ್ಯ ಶಿಕ್ಷಣವನ್ನು ಕೊಡಿಸತೊಡಗಿದನು. ಅಂದು ಭಾರತೀಯರಿಂದ ಲೇ ಗೀರ್ವಾಣ—ವಾಣಿಯು ಕಡೆಗಣಿಸಲ್ಪಟ್ಟಿತು.

ಸು ಇಪ್ಪತ್ತನೆಯ ಶತಮಾನದ ಆರಂಭದಿಂದ ಪಾಶ್ಚಾತ್ಯ ಸಂಸ್ಕೃತಿಯು ಅತ್ಯವಾದ ವಿಜೃಂಭಣೆಯ ವಿಶ್ವವ್ಯಾಪ್ತಿಯನ್ನು ಹೊಂದಿಕ. ಇದರೊಂದಿಗೆ ಭಾರತವು ಮೂಲನ ಜೀವನದಲ್ಲಿ ನೂತನ ಯುಗವನ್ನಾರಂಭಿಸಿದೆ ಎಂಬ ಆತ್ಮವಿಶ್ವಾಸದಿಂದ ನಮ್ಮ ರಾಜಕೀಯ ಧುರೀಣರು ನಕ್ಕು ನಲಿದಾಡಿದರು. ಆಗ ಭಾರತೀಯರು ಗೊಡ್ಡು ವ್ಯೆಕರಣಿಯಿಂದ ನವನಾಗರಿಕತೆಯ ದೇವಮಂದಾಕಿನಿಯಲ್ಲಿ ವಿಹರಿಸ ಹೊರಟಿದ್ದ ರಿಂದು ಅವರು ನೆವ್ಯದಿ ಹೊಂದಿದರು. ವಿಜ್ಞಾನ ವಿಚಾರಗಳನ್ನು ಹೊತ್ತ ಆಂಗ್ಲಭಾಷೆಯು ಅವರಿಗೆ ಅದ್ವಿತೀಯ ಭಾಷೆಯೆಂದು ಅಂದು ತೋರಿತು. ಈ ಭಾಷೆಯಿಂದಲೇ ಭಾರತದ ಒಡಕಿನ, ದಾಸ್ಯ, ಮೂಢನಂಬಿಕೆ, ಆಲಸ್ಯಗಳು ಹೇಳ ಹೆಸರಿಲ್ಲದೆ ಹೋಗಿ, ಭೌತ ವಿಜ್ಞಾನವು ಈ ದೇಶದಲ್ಲಿ ಸಂಸ್ಥಾಪನೆ ಮಾಡಿಕೊರಿಸಿ, ಈ ನಾಡು ಸಾಮ್ಯದ ಅಡುಂಬೊಲವಾಗುವುದೆಂದು ನವ್ಯ ಮಹಾಮಹಾ ಮುತ್ಸದ್ದಿಗಳು ಘೋಷಿಸಿದ್ದರು. ಆದರೆ ಆಂಗ್ಲ ಭಾಷೆಯು ಜೀವನದಲ್ಲಿ ಶಾಂತಿ ಸುಭಿಕ್ಷೆಗಳನ್ನುಂಟು ಮಾಡಬಲ್ಲ ಪಥ್ಯ ಶಕ್ತಿಯಲ್ಲವೆಂಬುದು ಈ ಶತಮಾನದಲ್ಲಿ ನೆದೆದ ಎರಡು ಜಾಗತಿಕ ಯುದ್ಧಗಳೂ, ಇಂದಿನ ನವ್ಯ ನೇತಾರರೂ ಸ್ಪುಟಲ ಸಾಕ್ಷ್ಯಗಳಾಗಿದ್ದಾರೆ. ಸಂಸ್ಕೃತವು ರಾಷ್ಟ್ರ ಭಾಷೆಯಾಗಿದ್ದ ಕಾಲದ ದೇಶಸ್ಥಿತಿಯನ್ನು ಇಂದಿನ ಯುಗದೊಡನೆ ತುಲನೆಮಾಡಿ, ಆಂಗ್ಲ ಭಾಷೆ ಕೊಟ್ಟ ವಿಜ್ಞಾನ ಶಕ್ತಿಯ ದುಷ್ಪರಿಣಾಮಗಳನ್ನು ಕಂಡು ಊಹಿಸಿ ಭಾರತದ ರೂವಾರಿಗಳು ನಡುಗತೊಡಗಿದ್ದಾರೆ!

ಆಂಗ್ಲ ಭಾಷೆಯಿಂದ ವಿಜ್ಞಾನವನ್ನು ಕಳಚಿದ ಮೇಲೆ ಅದರ ಪ್ರಭಾವವೆಷ್ಟೆಂಬುದು ತಿಳಿದೂ, ಅದರ ವ್ಯಾಮೋಹವು ನಮ್ಮವರಿಗನ್ನೂ ಬಿಡದಾಗಿದೆ. ಆಂಗ್ಲ ಭಾಷೆಯಿಂದ ಪ್ರಭಾವಿತವಾದ ರಾಷ್ಟ್ರಗಳ ಭ್ರೂಣಹತ್ಯೆ, ಅಸೀಮ ವ್ಯಭಿಚಾರ, ಅತ್ಯಾಚಾರ, ಕೊಲೆ ಕಳವುಗಳ ಭೀಕರತೆಯನ್ನು ಕಂಡೂ ಅವರ ಕುತ್ತಿಗೆಗೆ ಈ ದುರಂತ ಪತ್ರಿಕೆಯನ್ನು ಕಟ್ಟಲಾದವರಾಗಿದ್ದಾರೆ! ಈಗಂತೂ ಕೃತಕ ರೀತಿಯ ಸಂತತಿ ಸಂಯಮವೆಂಬ ನಿಷಿದ ಗಾಳಿಯು ಸಮಗ್ರ ಭಾರತದ ಮೇಲೆ ಬೀಸತೊಡಗಿದೆ! ಇದರಿಂದ ಮುಂದೊಂದು ದಿನ ನಮ್ಮ ಪವಿತ್ರ ಸಂಯುಕ್ತ ದೇಶವು ಕ್ರೈಸ್ತರು, ಮುಸ್ಲಿಮರು, ಭಿಕ್ಷುಕರು, ಹೊಲೆಯರ ಭಾರತವಾಗಲಿದೆ! ಅಂದು ಸಂಸ್ಕೃತ ಭಾಷೆಯು ಸಂಪೂರ್ಣ ಸಮಾಧಿಯಾಗುವುದು! ಇದೇ ಆಂಗ್ಲರ ಭಾಷೆಯು ಭಾರತಕ್ಕೆಕೊಟ್ಟ ಕೊಡುಗೆಯು ಉಡುಗೊರೆ!

ಇಂದು ಭಾರತದ ನೈತಿಕ, ಆರ್ಥಿಕ ಮತ್ತು ರಾಜಕೀಯ ವಿಚಾರಗಳಲ್ಲಿ ತಾಳ ಮೇಳ ತಪ್ಪಿದುದಕ್ಕೆ ಇಂಗ್ಲಿಷ್ ಭಾಷೆಯೊಂದು ಪ್ರಬಲ ಕಾರಣವೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಅಂತೂ ಈಗ ಭಾರತೀಯರು ದೇವರು ಮತ್ತು ಧರ್ಮವಿಲ್ಲದ ಪಾಷಂಡಿಗಳಾಗಿ ಪರಿವರ್ತನೆ ಹೊಂದತೊಡಗಿದ್ದಾರೆಂಬುದು ಸತ್ಯ.

— ೨ —

ಜಗತ್ ಶಾಂತಿಗೆ, ಭಾರತದ ನೆಮ್ಮದಿಗೆ ಭಾರತ ಸಂಸ್ಕೃತಿಯ ಪುನರುತ್ಥಾನವಾಗಬೇಕು. ದಿವ್ಯ ಭಾಷೆಯೂದ ಸಂಸ್ಕೃತವನ್ನು ಇಂಗ್ಲಿಷಿನ ಮತ್ತು ಇಂದಿನ ರಾಷ್ಟ್ರಭಾಷೆಯ ಸ್ಥಾನದಲ್ಲಿ ನೆಲೆನಿಲ್ಲಿಸಬೇಕು. ಇಂದಿನ ನಿಸ್ಸಾರ ದರಿದ್ರ ಭಾರತವನ್ನು ಹಿಂದಿಯು ಪ್ರತ್ಯಕ್ಷ ಪರೋಕ್ಷ ರೀತಿಯಿಂದ ಸುಧಾರಿಸಲು ಸಾಧ್ಯವಿಲ್ಲ ವು. ಒಂದು ಶತಮಾನಕ್ಕಿಂತ ಹೆಚ್ಚಾಗಿ ಸಂಸ್ಕೃತ ವಾಙ್ಮಯಕ್ಕೆ ಪ್ರೋತ್ಸಾಹವಿಲ್ಲದ ಮಾತ್ರಕ್ಕೆ, ಇವತ್ತು ಶತಮಾನಕ್ಕಿಂತ ಹೆಚ್ಚಾಗಿ ಜಗತ್ತಿಗೇ ಬೆಳಕು ಚೆಲ್ಲಿದ ಸಂಸ್ಕೃತವು ನ್ಯಾಯವಾದೀತೆ? ತಾಯಿಯೂ, ತಾಯ್ನುಡಿಯೂ ಜೀವ ಚೈತನ್ಯವನ್ನಿಸುವುದು ಯಾರ ದೌರ್ಬಲ್ಯದಿಂದ?

ಕಳೆದ ದಕ್ಷಿಣ ಭಾರತದ ಹಿಂದೀ ವ್ಯವಹಾರ ಸಭೆಯು ಮೂವತ್ತನೆಯ ಪುಟ್ಟ ಕೋತ್ಸವದ ವೇಳೆ ಈಗಿನ ರಾಷ್ಟ್ರಪತಿಗಳಾದ ಡಾ। ರಾಜೇಂದ್ರ ಪ್ರಸಾದರವರು—ಹಿಂದಿಯೇ ಸಮಗ್ರ ಭಾರತದ ರಾಷ್ಟ್ರ ಭಾಷೆಯಾಗಬೇಕೆಂದು ಮತ್ತೊಮ್ಮೆ ಘೋಷಿಸಿದ್ದರು. ಇದಕ್ಕೆ ಅವರು ಈ ಕಾರಣಗಳನ್ನು ನೀಡಿದ್ದರು. ೧. ರಾಷ್ಟ್ರದ ಏಕ್ಯಕ್ಕಾಗಿ—ಎಲ್ಲಾ ಜನತೆಯಲ್ಲಿ ಸಂಪರ್ಕವೇರ್ಪಡಲು ಸಾಮಾನ್ಯ ಭಾಷೆಯೊಂದರ ಆಗತ್ಯವಿದೆ. ಈ ಸ್ಥಾನವನ್ನು ಸರಳ ಹಿಂದೀ ಆಥವಾ ಹಿಂದುಸ್ತಾನಿಯು ಪೂರೈಸಲು ಸಮರ್ಥವಿದೆ. ೨. ಬಹುತ್ವರು ಮತ್ತು ದಕ್ಷಿಣ ಹಿಂದೂ ದೇಶದಲ್ಲಿ ಹಲವರುಹಿಂದೀಮಾತನಾಡುವವರೂ, ಅರ್ಥವಾಡಿಕೊಳ್ಳುವವರೂ ಇದ್ದಾರೆ. ೩. ಭಾರತದ ಸಂಸ್ಕೃತಿಯ ಪುನರುತ್ಥಾನಕ್ಕೆ ಹಿಂದೀ ಸಾಹಿತ್ಯವು ಸಹಾಯಕವಾಗಿದೆ. ೪. ಹಿಂದೀ ಭಾಷೆಯು ಸಂಸ್ಕೃತ ಭಾಷೆಯಿಂದ ಬಹಳಷ್ಟು ಪದಗಳನ್ನು ಪಡೆದಿದೆ. ೫. ಹಿಂದೀ ಭಾಷೆಯು ಸಂಸ್ಕೃತ ಭಾಷೆಯಂತೆ ಸರಳ ಮತ್ತು ಸುಲಭವಾಗಿದೆ. ೬. ಹಿಂದೀ ಭಾಷೆಯು ಸಂಸ್ಕೃತ ಭಾಷೆಯಂತೆ ಸರಳ ಮತ್ತು ಸುಲಭವಾಗಿದೆ. ೭. ಹಿಂದೀ ಭಾಷೆಯು ಸಂಸ್ಕೃತ ಭಾಷೆಯಂತೆ ಸರಳ ಮತ್ತು ಸುಲಭವಾಗಿದೆ. ೮. ಹಿಂದೀ ಭಾಷೆಯು ಸಂಸ್ಕೃತ ಭಾಷೆಯಂತೆ ಸರಳ ಮತ್ತು ಸುಲಭವಾಗಿದೆ. ೯. ಹಿಂದೀ ಭಾಷೆಯು ಸಂಸ್ಕೃತ ಭಾಷೆಯಂತೆ ಸರಳ ಮತ್ತು ಸುಲಭವಾಗಿದೆ. ೧೦. ಹಿಂದೀ ಭಾಷೆಯು ಸಂಸ್ಕೃತ ಭಾಷೆಯಂತೆ ಸರಳ ಮತ್ತು ಸುಲಭವಾಗಿದೆ.

(ಇಪ್ಪತ್ತಾರನೆ ಪುಟ ನೋಡಿರಿ)

ಪ್ರಾಚೀನ ಇತಿಹಾಸದಲ್ಲಿ ಗ್ರೀಸಿಗೆ ವಿಶಿಷ್ಟವಾದ ಸ್ಥಾನವೊಂದಿದೆ. ಗ್ರೀಕ್ ಪುರಾಣ ಕವಿ ಹೋಮರ್, ಇತಿಹಾಸ ಜನಕ ಹೆರೊಡೊಟಸ್, ಶಸ್ತ್ರಜ್ಞಾನಿಗಳಾದ ಸೊಕ್ರೆಟಿಸ್, ಏರಿಸ್ಟಾಟಲ್, ಪ್ಲೇಟೊ, ಗಣಿತಾಚಾರ್ಯನಾದ ಯುಕ್ಲಿಡ್, ವಿಜ್ಞಾನಿಯೂದ ಆರ್ಕಿಮಿಡಿಸ್, ಪ್ರಸಿದ್ಧ ವಾಗ್ಮಿಯೂದ ಡೆಮಾಸ್ತನೀಸ್ ಮೊತ್ತವಲ್ಲದೆ ನಾಟಕಕಾರರಾದ ಎಸ್ಕಿಲನ್ ಸೊಫೊಕ್ಲೆಸ್, ಯುರಿಪಿಡಿಸ್, ಎರಿಸ್ಟೊಫೆನ್ಸ್‌ರಂತಹ ಅನೇಕ ಮೇಧಾವಿಗಳನ್ನೂ, ಅಲೆಕ್ಸಾಂಡರನಂತಹ ವೀರರನ್ನೂ ಹೆತ್ತ ಕೀರ್ತಿ ಗ್ರೀಸಿನದು. ಗ್ರೀಸಿನ ಏಥೆನ್ಸ್ ನಗರದಲ್ಲಿ ಕ್ರಿ. ಪೂ. 427ರ ಸುಮಾರಿನಲ್ಲಿ 'ಪ್ಲೇಟೊ' ಜನಿಸಿದನು. ತಶ್ಚಜ್ಞಾನಿಯೂದ ಸೊಕ್ರೆಟಿಸನ ಪ್ರತಿಭೆಯಿಂದ ಪ್ರಭಾವಿತನಾದ ಈ ಮಹಾನುಭಾವನೂ ಕೂಡ ಗುರುವಿಗಿಂತ ಕಡಿಮೆಯಲ್ಲದ ವರ್ಚಸ್ಸನ್ನು ಬೀರಿ, ಯಶಸ್ಸನ್ನು ಸಂಪಾದಿಸಿ ಕ್ರಿ. ಪೂ. 347ರಲ್ಲಿ ಪರಿಂಧಾನುವನ್ನೈದಿದನು.

ಕ್ರಿ. ಪೂ. 386ರಲ್ಲಿ ಪ್ಲೇಟೊ ಏಥೆನ್ಸಿನ ಸರಹದ್ದಿನಲ್ಲಿ ಒಂದು ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ, ಅಧ್ಯಾತ್ಮ ವಿಚಾರಗಳ ಅಧ್ಯಾಪನಕ್ಕೆ ಏರ್ಪಾಡು ಮಾಡಿದನು. ವಿಚಾರ ಚಿಂತನದ ರೀತಿ ಸರಕಾರ ರೂಪಿಸುವುದರಲ್ಲಿ ಇರಬೇಕಾದ ನೀತಿ ಅವನ ಆಜ್ಞು ಮೆಚ್ಚಿನ ವಿಚಾರಗಳು. ಮತ್ತು ಆಳುಗಳ ಕುರಿತು ಬಹುವಾಗಿ ವಿವೇಚಿಸಿ ಆ ಕುರಿತು ಉದ್ಗ್ರಂಥಗಳನ್ನೆ ರಚಿಸಿದ್ದಾನೆ. ಎಚ್. ಜಿ. ವೆಲ್ಸ್ ಕರೆಯುವಂತೆ ಸಮೂಹವಾದದ ಪ್ರಭುತ್ವ (communist aristocracy) ದ ಕುರಿತು ಬರೆದ ಪುಣ್ಯಾತ್ಮನೂ ಪ್ಲೇಟೊ ಆಗಿದ್ದಾನೆ. ಒಂದು ಆದರ್ಶಭೂತವಾದ ನಗರ ರಾಜ್ಯ (city state) ನ ಕುರಿತಾದ ಅವನ ಕನಸುಗಳಲ್ಲವನ್ನೂ ಆತನು ತನ್ನ ಅಮರ ಕೃತಿಯೂದ ಪ್ರಜಾಪ್ರಭುತ್ವ (The Republic) ದಲ್ಲಿ ಉಲ್ಲೇಖಿಸಿದ್ದಾನೆ. ಹಲವು ಇತರ ವಿಚಾರಗಳ ನಡುವೆ, ತನ್ನ ಪ್ರಜಾಪ್ರಭುತ್ವದಲ್ಲಿ ಕವಿಗಳ ಸ್ಥಾನ ಏನೆಂಬುದನ್ನೂ ಆತನು ಸ್ಥೂಲವಾಗಿ ವಿವೇಚಿಸಿದ್ದಾನೆ.

ಪ್ರಾರಂಭದಲ್ಲಿ ಹೇಳುವುದಿದ್ದರೆ, ಕವಿಗಳ ಮತ್ತು ಕವಿ ಕೃತಿಗಳ ಕುರಿತು ಆತನು ಲವಲೇಶವೂ ಸಹಾನುಭೂತಿಪರನಲ್ಲವೆಂದು ಹೇಳಬಹುದು. ಅವರ ಕುರಿತ ತೀರಾ ತಾತ್ಪಾರ ಮನೋಭಾವವನ್ನೇ ತಳೆದಿದ್ದನೆನ್ನಬಹುದು. ಆಧುನಿಕ ಯುಗದಲ್ಲಿ ಕವಿಗಳಿಗೆ ಒಂದು ಮೆಚ್ಚಿನ ಮನ್ನಣೆಯ ಮಣೆ ಸಿಗುತ್ತದೆಂದರೂ ಸರಿಯೆ! ಏಕೆಂದರೆ ನಾಗರಿಕತೆಯತ್ತ ಕೈದೀವಿಗೆ ಹಿಡಿದು, ಮಾರ್ಗದರ್ಶನ ಮಾಡಿಸಿ ನಡೆಸುವವರು ಕವಿಗಳೆಂದು ಇಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಆದರೆ, ಪ್ಲೇಟೋನ ದೃಷ್ಟಿ ತೀರಾ ಭಿನ್ನವಾಗಿದೆ. ಆತನ ದೃಷ್ಟಿಯಲ್ಲಿ ಒಬ್ಬ ಕವಿಯೆಂದರೆ, ತಾನು ಏನನ್ನು ಬರೆಯುತ್ತೇನೆಂಬುದನ್ನು ಏನೂ ಅರಿತಿರದ ಮನುಷ್ಯ ಎಂದಾಗಿದೆ. ಕವಿ ಕಾಣುವುದನ್ನೂ ಕವಿ ಕಾಣುವನೆಂಬ ದೃಷ್ಟಿಯಿಂದ ಕವಿಯೊಬ್ಬನು ಏನನ್ನೂ, ಯಾವ ವಿಚಾರವನ್ನೂ ಬರೆಯಬಹುದೇನೋ ನಿಜ, ಅನನು ಒಬ್ಬ ವೈದ್ಯನ ಕುರಿತು ಬರೆಯಬಹುದು; ವೈದ್ಯಕೀಯ ಬೋಧನೆಯನ್ನೇ ಗೀಚಬಹುದು ಆದರೆ ಅವನು ಯಾವ ರೋಗಿಯನ್ನೂ ಗುಣಪಡಿಸಲಾರ; ಏಕೆಂದರೆ ಅವನಿಗೆ ಔಷಧದ ಜ್ಞಾನವಿರುವುದು ಕೇವಲ ಶೂನ್ಯವೆ. ಏನೇ ರೀತಿಯಲ್ಲಿ ಮೆಟ್ಟು ಹೊಲಿಯುವ ಕುರಿತು ಒಂದಿಂತಿಷ್ಟೂ ಅರಿತಿರದ ಅಕಸು ಆ ಕುರಿತು ದೀರ್ಘ ಕವನಗಳನ್ನೇ ಬರೆಯಬಹುದು.

ಹೆಚ್ಚಿನ ಎಲ್ಲಾ ಸಂದರ್ಭಗಳಲ್ಲೂ ಪ್ಲೇಟೋನ ವಿಮರ್ಶೆಯ ಲಘಾತಕ್ಕೆ ಸಿಲುಕಿದವನೆಂದರೆ ಗ್ರೀಕ್ ಪುರಾಣ ಕರ್ತೃವಾದ ಹೋಮರ್. ಆತನು ವಿಶೇಷವಾಗಿ ಚಿತ್ರಿಸಲೆಳಸಿದ ಯುದ್ಧಗಳು, ಆಕ್ರಮಣಗಳು ಸರಕಾರದ ರೀತಿ ನೀತಿ, ಜನರ ವಿದ್ಯಾಭ್ಯಾಸ ಮುಂತಾದ ಶ್ರೇಷ್ಠ ಹಾಗೂ ಉತ್ತಮವಿಚಾರಗಳ ಕುರಿತು ಪ್ಲೇಟೋನ ಪ್ರಶ್ನೆಯೊಂದೆ—"ಪ್ರಿಯ ಹೋಮರನೇ, ನಿನ್ನಿಂದಾಗಿ, ನಿನ್ನ ಕೃತಿ ಪ್ರಭಾವದಿಂದಾಗಿ ಯಾವ ನಗರದ ಆಡಳಿತೆಯಲ್ಲಿ ಇನ್ನೂ ಹೆಚ್ಚಿನ ಸುಧಾರಣೆಯಾಗಬೇಕಿತ್ತು? ಉತ್ತಮ ನ್ಯಾಯಪಾಲನಾ ರೀತಿಯ ಬೋಧನೆಯನ್ನಿತ್ತ ನಿನಗೆ ಗೌರವ ತರಬಹುದಾದ ಯಾವುದಾದರೂ ಒಂದು ನಗರದ ಹೆಸರನ್ನು ಹೇಳಬಲ್ಲೆಯೊ?" ಆದುದರಿಂದ ಸಾರ್ವಜನಿಕ ವಿಚಾರಗಳಲ್ಲಾಗಲೀ, ವೈಯಕ್ತಿಕ ವಿಚಾರಗಳಲ್ಲಾಗಲಿ ಹೋಮರನು ಏನೇನೂ ಘನ ಕಾರ್ಯವನ್ನು ಸಾಧಿಸಿದ್ದಿಲ್ಲವೆಂಬುದು ಪ್ಲೇಟೋನ ಅಭಿಪ್ರಾಯ.

ಅವನು ಕವಿಗಳನ್ನು ಆ ರೀತಿ ಹೀನೈಸಿದ್ದೇಕೆ? ಅವನು ಕವಿಕೃತಿಗಳಲ್ಲಿ ಕಂಡುಕೊಂಡ ಕೊರತೆಗಳನ್ನಾದರೂ ಏನು? ಅವುಗಳ ಕುರಿತು ಆಧುನಿಕ ದೃಷ್ಟಿ ವಿಶ್ಲೇಷಣೆಯಿತ್ತಿದ್ದರೂ, ಪ್ಲೇಟೊ ತನ್ನದೇ ಆದ ಕಾರಣಗಳನ್ನು ಕೊಡುತ್ತಾನೆ. ಅವನು ಸತ್ಯವನ್ನು ಮೂರು ಹಂತಗಳಲ್ಲಿ ಕಾಣುತ್ತಾನೆ ಒಂದು ಹಾಸಿಗೆಯ ಕುರಿತಾದ ಮೊದಲ ಸತ್ಯವೆಂದರೆ "ಹಾಸಿಗೆತನ"ವೆನ್ನುವ ಭಾವನೆ; ಎರಡನೆಯದು ನಾವು ನಿದ್ರಿಸಲು ಉಪಯೋಗಿಸುವ ನಿಜವಾದ ಹಾಸಿಗೆ; ಮೂರನೆಯದು ಚಿತ್ರದಲ್ಲಿ ತೋರುವ ಹಾಸಿಗೆಯ ಪ್ರತಿರೂಪ. ಪ್ರಕೃತಿಯಲ್ಲಿ ಕಾಣುವ ಎಲ್ಲಾ ವಸ್ತುಗಳಿಗೂ ಇದು ಅನ್ವಯಿಸುತ್ತದೆಯೆಂಬುದು ಅವನ ಸಿದ್ಧಾಂತ. ಹಾಸಿಗೆಯೆನ್ನುವ ಭಾವವು ಪರಮಾತ್ಮನಿಗೆ ಸಂಬಂಧಿಸಿದ್ದಾಗಿದೆ. ಹಾಸಿಗೆತನವೆನ್ನುವ ಭಾವವನ್ನಿಟ್ಟುಕೊಂಡು ಕುಶಲ ಕೆಲಸಗಾರರು ಅವುಗಳ ರೂಪು, ಆಕಾರ, ಗಾತ್ರಗಳನ್ನು ಕಲ್ಪಿಸಿ, ಅವುಗಳನ್ನು ಸೃಷ್ಟಿಸುತ್ತಾರೆ. ಅಂತೆಯೇ ಕುಶಲ ಕೈಗಾರಿಕೋದ್ಯಮಿಗಳು ತಮ್ಮದೇ ಆದ ಕಲ್ಪನೆಗಳಿಂದ ವಿವಿಧ ವಸ್ತುಗಳನ್ನು ರಚಿಸುತ್ತಾರೆ. ಆದರೆ, ಯಾವುದೇ ದೃಷ್ಟಿಯಿಂದ ದೇವರ ಹೊರತು ಬೇರೆ ಯಾವಾತನಿಗಾದರೂ ವಸ್ತುಗಳ ಕುರಿತಾದ ನಿಜವಾದ ಭಾವವಿರಲು ಸಾಧ್ಯವೆ? ಇರುವುದಾದರೂ ಹೇಗೆ? ಒಂದು ದರ್ಪಣವನ್ನು ಹೊರಗುವ ಡೆಗಳಿಗೆಲ್ಲಾ ಒಯ್ದು, ಕಾಣ ಸಿಗುವ ಎಲ್ಲಾ ವಸ್ತುಗಳ ಎದುರಾಗಿ ಅದನ್ನು ಹಿಡಿದರೆ, ಆ ವುಗಳೆಲ್ಲವೂ ಅದರಲ್ಲಿ ಪ್ರತಿಬಿಂಬಿತವಾಗುವುದನ್ನು ಕಾಣುವೆವಷ್ಟೆ! ಕವಿಗಳ ವಿಚಾರದಲ್ಲೂ ಹಾಗೆಯೆ. ಅವರು ನೈಜವನ್ನು ತೋರಿಸುವವರಲ್ಲ; ಬದಲಾಗಿ ಪ್ರತಿರೂಪವನ್ನು ಸೃಷ್ಟಿಸುವವರು. ಆದುದರಿಂದ ಕಲೆಯು ಸತ್ಯವನ್ನು ಪ್ರತಿನಿಧೀಕರಿಸುವುದಿಲ್ಲ. ಅದು ಕೇವಲ ಸತ್ಯತೆಯ ಅನುಕರಣೆ. ಅನುಕರಣೆಯು ನಿಜವನ್ನು ಸೃಷ್ಟಿಸುವುದಕ್ಕಿಂತ ಕೀಳು ತಾನೆ? ಅನುಕರಣೆಯು ನಿಜಕ್ಕಿಂತ ದೂರ. ಹಾಗಾಗಿ ಪ್ಲೇಟೋ ಕವಿಗಳನ್ನು ಮೂರನೆಯ ಸ್ಥಾನದಲ್ಲಿಂಸುತ್ತಾನೆ.

ಅನುಕರಣೆಯು ಯಥಾರ್ಥವನ್ನು ರೂಪಿಸಲಾರದು, ಏಕೆಂದರೆ ಒಂದೇ ವಸ್ತುವು ಹಾಸಿಗೆಯು— ಬೇರೆ ಬೇರೆ ದೃಷ್ಟಿ ಕೋನಗಳಿಂದ ಬೇರೆ ಬೇರೆ ತೆರನಾಗಿ ಕಾಣುವುದು ಸ್ವಾಭಾವಿಕ. ಆದರೆ ನಿಜವಾದ ಹಾಸಿಗೆಯಲ್ಲಿ ಈ ಭಿನ್ನತೆಗಳಿರುವುದಾದರೂ ಸಾಧ್ಯವಿದೆಯೆ? ಆದುದರಿಂದ ಕವಿಗಳು ಹಾಸಿಗೆಯ ತೋರುವಿಕೆಯ ಕುರಿತಾದ ಹಲವು ಅಭಿನ್ಯಾಯಗಳನ್ನಿಡುವುದರಿಂದ ಅದು ಮೂಲ ಹಾಸಿಗೆಯ ನೈಜತೆಯ ಸಂಪೂರ್ಣ ಅನುಕರಣೆಯೂ ಆಗಲಾರದು. ಹಾಗಾಗಿ ಅವರಿಗೆ ವ್ಯಾವಹಾರಿಕ ದೃಷ್ಟಿ ಏನೇನೂ ಇಲ್ಲವೆಂಬುದು ಸ್ಪಷ್ಟ. ಏಕೆಂದರೆ ಅವರು ಚಿತ್ರಿಸುವ ವಸ್ತುಗಳ ಕುರಿತಾದ ಸಂಪೂರ್ಣ ಮಾಹಿತಿ ಅವರಿಗಿರುತ್ತಿದ್ದರೆ, ಅವರು ಅದನ್ನು ಚಿತ್ರಿಸುವ ಬದಲಾಗಿ ತಮ್ಮ ಕಲ್ಪನೆಗಳಿಗನುಸಾರವಾದ ಉತ್ತಮ ಹಾಗೂ ಸುಂದರವಾದ ವಸ್ತುಗಳನ್ನು ಸೃಷ್ಟಿಸುವ ಉದ್ಯೋಗವನ್ನವಲಂಬಿಸಿ, ಲಾಭಬಡಕರಾಗುತ್ತಿದ್ದರೆ ವಿನಹ ಈ ರೀತಿಯೊಗಿ ಭಾವಗಳನ್ನು ಗೀಚುವ ಹವ್ಯಾಸಕ್ಕೆ ಸರ್ವಥಾ ಹೋಗುತ್ತಿರಲಿಲ್ಲವೆಂಬುದು ಪ್ಲೇಟೋನ ಸ್ಪಷ್ಟ ಅಭಿಪ್ರಾಯ.

ಕವಿ ಕೃತಿಯು ಮನುಷ್ಯನ ಮನಸ್ಸಿನಲ್ಲಿ ಅವಾಯಕರ ಪರಿಣಾಮವನ್ನುಂಟುಮಾಡುವುದೆಂಬುದು ಒಂದು ವಿಷಾದನೀಯ ವಿಚಾರ. ಮಾನವನ ಮನಸ್ಸು ಹರ

(ಇಪ್ಪತ್ತೈದನೇ ಪುಟ ನೋಡಿರಿ)

ಶ್ರೀ ಪಿ. ಶಾಮು ಭಟ್, ಬಿ. ಎ., ಬಿ. ಇಡಿ.

ಪ್ಲೇಟೋನ ಪ್ರಜಾಪ್ರಭುತ್ವದಲ್ಲಿ ಕವಿಗಳು

ಆಧುನಿಕ ಪಾಶ್ಚಾತ್ಯ ದಾರ್ಶನಿಕ ಪ್ಲೇಟೋ ಪ್ರಜಾಪ್ರಭುತ್ವದ ಆದರ್ಶ ಕನಸನ್ನು ಕಂಡಿದ್ದನು. ಇಲ್ಲಿ ಈ ಕನಸಿನ ಒಂದು ಅಂಶದ ಶಬ್ದಚಿತ್ರ ಕಾಣಬಹುದು. "ಪ್ರಜಾಪ್ರಭುತ್ವ ಯುಗದಲ್ಲಿ ಇದರ ಜ್ಞಾನ ಅವಶ್ಯಕ".

ಕರ್ನಾಟಕ ಸಂಘ, ಉಡುಪಿ
ಇವರ ಜನಪ್ರಿಯ ಪ್ರಕಟಣೆಗಳು

೧ ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ ಎ.)
ಗಗನ ವಿಹಾರ ಕ್ಷೇತ್ರದಲ್ಲಿ ಈಗಾಗಲೇ ನಡೆದಿರುವ ಪ್ರಯತ್ನ ಮತ್ತು ಇನ್ನು ಮುಂದೆ ನಡೆಯಲಿರುವ ಸಾಹಸವನ್ನು ವಿವರಿಸುವ ಪುಸ್ತಕ. ಬೆಲೆ ರೂ. ಒಂದು.

೨ ಸಾಮಾನ್ಯ ರೋಗಗಳು
(ಡಾ। ಕೆ. ಎಲ್. ಐತಾಳ, ಎಂ. ಬಿ., ಬಿ. ಎಸ್.)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ. ಬೆಲೆ ರೂ. ಒಂದು.

೩ ಭೌತಿಕ ದರ್ಶನ
(ಬಡೆಕ್ಕಿಲ ಕೃಷ್ಣ ಭಟ್, ಎಲ್. ಎಲ್. ಬಿ., ಛದ್ರಾವತಿ)
ಸರ್ವರೂ ಓದಲೇ ಬೇಕಾದ ಭೌತಿಕ ದರ್ಶನದ ಸ್ಥೂಲ ಪರಿಚಯ. ಬೆಲೆ ರೂ. ಒಂದು.

ಪ್ರತಿ ಪುಸ್ತಕಕ್ಕೂ ಅಂಚೆ ವೆಚ್ಚ 50 ಪೈಸೆ ಪ್ರತ್ಯೇಕ.

ನವಭಾರತ ಪುಸ್ತಕ ಭಂಡಾರ,
ಪಾಲುತೋಟ, ಉಡುಪಿ, ದ. ಕ.

ವಿಜ್ಞಾನ ಮತ್ತು ಪ್ರಕೃತಿ (ನಿಸರ್ಗ)

ಪ್ರೊ। ಎಂ. ಎನ್. ಎಸ್ ರಾವ್, ಎಂ.ಎಸ್‌ಸಿ., ಬಾಗಲಕೋಟೆ

ವಿಜ್ಞಾನದ ಸಹಾಯದಿಂದ ಆಭೇದ್ಯವೆನಿಸಿದ ಪ್ರಕೃತಿಯ ಗರ್ಭವನ್ನು ಮಾನವ ಭೇದಿಸುತ್ತ ಬಂದಿದ್ದಾನೆ. ನೆಲ, ಜಲ, ಆಕಾಶಗಳನ್ನೂ ತನ್ನ ಆಂಕಿತದಲ್ಲಿಟ್ಟುಕೊಳ್ಳುತ್ತಿದ್ದಾನೆ; ಪ್ರಕೃತಿಯ ಸಹಜ ಶಕ್ತಿಯಿಂದ ತನ್ನ ಕಾರ್ಯಸಾಧನೆ ಮಾಡುತಿದ್ದಾನೆ ಆದರೂ ಇನ್ನೂ ಅಭೇದ್ಯ ರಹಸ್ಯಗಳು ಪ್ರಕೃತಿಯಲ್ಲಿ ಆಸಂಖ್ಯವಿವೆ. ಯಾರ ಕೈ ಮೀರಾಗುವುದು, ಯಾರು ತಾನೇ ಹೇಳಬಲ್ಲರು?

ಮಾನವನ ಮನಸ್ಸು ವಸ್ತು ಬದ್ಧಿಶಕ್ತಿ ಪ್ರಕೃತಿಯು (ನಿಸರ್ಗ) ನಿಗೂಢ ರಹಸ್ಯಗಳನ್ನು ಸಾಕಷ್ಟು ಯಶಸ್ವಿಯಾಗಿ ಭೇದಿಸಿ, ಶೋಧಿಸಿ, ನಿಸರ್ಗ ಮತ್ತು ನಿಸರ್ಗ ಶಕ್ತಿಗಳ ಮೇಲೆ ಕಳ್ಳಮಟ್ಟಿನ ಪ್ರಭುತ್ವವನ್ನು ಸಂಪಾದಿಸಿದೆ. ಪ್ರಕೃತಿಯ ಅನೇಕ ಶಕ್ತಿಗಳು ಹೇಗೆ ಕಾರ್ಯ ಮಾಡುವುವು ಎಂಬುದನ್ನು ಮಾನವನು ಈಗ ಅರಿತು ಕೊಂಡಿರುತ್ತಾನೆ. ಅಷ್ಟೇ ಅಲ್ಲದೆ ನಿಸರ್ಗದ ನಿಯಮ ಹಾಗೂ ತತ್ವಗಳನ್ನೂ ಹೆಚ್ಚು ಬಳವಾಗಿ ಅಭ್ಯಸಿಸಿ, ಅವುಗಳನ್ನು ತನ್ನ ಸಂಶೋಧನೆಗಳಿಗೆ ಅಳವಡಿಸಿಕೊಳ್ಳುತ್ತಿದ್ದಾನೆ. ಹೀಗೆ ಪರಿಶೋಧನೆಗಳಿಂದ ಗಳಿಸಿಕೊಂಡ ಜ್ಞಾನ ಹಾಗೂ ಅನುಭವವನ್ನು ಪ್ರಾಯೋಗಿಕವಾಗಿ ಅನೇಕ ಸೇವೆಗಳಿಗೆ ಪರಿಹಾರ ಒದಗಿಸಲೂ ಬಳಸಿಕೊಳ್ಳುತ್ತಿದ್ದಾನೆ. ಮಾನವನು ನಿಸರ್ಗದ ಪ್ರತಿಯೊಂದು ಬಗೆಯ ಶಕ್ತಿಯನ್ನೂ ತನ್ನ ಹಲವಾರು ಉದ್ದೇಶಗಳಿಗಾಗಿ ಬಳಸಿಕೊಂಡು ಈ ಭೂಮಿಯ ಮೇಲೆ ತನ್ನ ಜೀವನವನ್ನು ಹೆಚ್ಚಿಚ್ಚು ಸಮೃದ್ಧವೂ, ಸಂಪದ್ಭರಿತವೂ ಸುಖಿಕರವೂ ಆಗುವಂತೆ ಮಾಡಿಕೊಳ್ಳುತ್ತಿದ್ದಾನೆ.

ಉದಾಹರಣೆಗೆ-ಜಗತ್ತಿನಲ್ಲಿರುವ ಸಾಗರಗಳು ಮತ್ತು ನದಿಗಳು ಪ್ರಕೃತಿಯ ಶಕ್ತಿಗಳಲ್ಲಿ ಒಂದು ಅತ್ಯಂತ ಆಮೋಘವೂ, ರಮಣೀಯವೂ ಆದ ಶಕ್ತಿಯೆನ್ನಬಹುದು. 'ಸಾಗರಗಳು ಮಾನವನಿಂದ ಆಜೇಯವಾದುವು' ಎಂದು ಒಬ್ಬ ಆಂಗ್ಲ ಕವಿ ಹೇಳಿದ್ದರೂ ಮಾನವನು ಸಾಗರಗಳ ಮೇಲೆ ಸಾಕಷ್ಟು ಪ್ರಭುತ್ವ ಪಡೆದಿದ್ದಾನೆಯೆಂಬುದನ್ನು ಮಾತ್ರ ಯಾರೂ ಅಲ್ಲಗಳೆಯುವಂತಿಲ್ಲ.

ಮಾನವನು ವಿವಿಧ ಗಾತ್ರದ ದೋಣಿ, ಹಡಗುಗಳನ್ನು ಕಟ್ಟಿ ನದಿ, ಸಾಗರಗಳ ಮೇಲೆ ತೇಲಿ ಹೋಗುವುದಕ್ಕೂ ಮತ್ತು ಒಂದು ಭೂಖಂಡದಿಂದ ಇನ್ನೊಂದು ಭೂಖಂಡಕ್ಕೆ ಹೋಗಿ ಸೇರಲೂ ಬಳಸಿಕೊಳ್ಳುತ್ತಿರುವುದನ್ನು ನಾವು ನೋಡಬಹುದು. ಯುದ್ಧ ಸಮಯಗಳಲ್ಲಿ ದೇಶದ ರಕ್ಷಣೆಗಾಗಿ ಸಮುದ್ರ ಸಾಗರಗಳ ಕೆಳಗೂ 'ಸಬ್‌ಮೆರಿನ್' ಗಳೆನ್ನುವ ಹಡಗುಗಳನ್ನು ಬಳಸಿಕೊಂಡು ವಾರಗಟ್ಟಲೆ, ತಿಂಗಳುಗಟ್ಟಲೇ ನೀರಿನೊಳಗೇ ವಾಸಿಸಬಲ್ಲವನಾಗಿದ್ದಾನೆ.

ಜಗತ್ತಿನ ಒಂದು ಭಾಗದ ಜನರನ್ನು ಇನ್ನೊಂದು ಭಾಗದ ಜನರಿಂದ ಒಂದು ಕಾಲಕ್ಕೆ ಬೇರ್ಪಡಿಸುತ್ತಿದ್ದ ವಿಶಾಲ ಸಾಗರಗಳು ಇಂದು ಹಡಗುಗಳ ಮೂಲಕ ಸೇತುವೆಯಂತೆ ಒಂದುಗೂಡಿದಂತಾಗಿ ಜಗತ್ತಿನ ಬೇರೆ ಬೇರೆ ಭಾಗಗಳು ಹತ್ತಿರ ಅಥವಾ ಸಮೀಪವಿರುವಂತೆ ತೋರುವುವು. ಈ ಬೃಹತ್ಸಾಗರದ ಹಡಗುಗಳಾದರೂ ಒಂದೊಂದು ಸಲಕ್ಕೆ ಸಾವಿರಾರು ಜನರನ್ನು ಒಯ್ದು, ಒಂದು ತೇಲುವ ನಗರದಂತೆಯೇ ಇರುತ್ತವೆ. ಆಟ್ಟಿ ಆಗಾರ, ವಿಹಾರ, ರಂಜನೆ, ಇತ್ಯಾದಿ ಸಕಲ ಸೌಕರ್ಯಗಳನ್ನೂ ಒಳಗೊಂಡ ವಿಶಾಲವಾದ ಅರಮನೆಗಳಿರುತ್ತವೆ.

ಆಫ್ರಿಕಾ, ಅಮೆರಿಕ ಮುಂತಾದ ಪ್ರದೇಶಗಳ ಶೋಧವು ಮಾನವನು ಸಮುದ್ರಗಳ ಮೇಲೆ ಪಡೆದ ನಿಜಯ ಹಾಗೂ ಪ್ರಭುತ್ವದಿಂದಲೇ ಸಾಧ್ಯವಾಯಿತೆನ್ನಬಹುದು, ಮಾನವನು ಸಮುದ್ರ ಸಾಗರಗಳನ್ನು ತನ್ನ ಯುಕ್ತಿ ಹಾಗೂ ಬುದ್ಧಿಶಕ್ತಿಯಿಂದ ಮಣಿಸಿ, ಹೊಸ ಹೊಸ ಸಂಶೋಧನೆಗಳು ಮತ್ತು ಭೂಭಾಗಗಳನ್ನು ಕಂಡು ಹಿಡಿಯುವುದಕ್ಕಾಗಿ ದೀರ್ಘ ಸಂಚಾರ ಪ್ರವಾಸವನ್ನು ಕೈ ಕೊಳ್ಳತೊಡಗಿದನು. ನದಿಗಳನ್ನು ಸಹ ಮಾನವನು ತನ್ನ ಹಿತ ಹಾಗೂ ಉದ್ದೇಶಗಳಿಗೆ ಬಳಸಿಕೊಂಡಿದ್ದಾನೆ. ನದಿಗಳಾದರೂ ಒಂದು ಮುಖ್ಯ ಸಂಚಾರ ಸಾಧನವಾಗಿ ಮಾತ್ರವಲ್ಲದೆ ಅಮೂಲ್ಯ ಸಾಧನಗಳಾಗಿರುತ್ತವೆ. ಒಳ ಒಳ ಪ್ರದೇಶಗಳಲ್ಲಿ ಮುಖ್ಯ ಸಂಚಾರವಾಹನವಾಗಿ ದೋಣಿ ಮತ್ತು ಸಣ್ಣ ಸಣ್ಣ ಹಡಗುಗಳನ್ನು ಜಗತ್ತಿನಾದ್ಯಂತ ಎಲ್ಲ ಕಡೆಯಲ್ಲೂ ಉಪಯೋಗಿಸಲಾಗುತ್ತದೆ.

ಇನ್ನು ನದಿಗಳನ್ನು ನೀರಾವರಿ ವ್ಯವಸಾಯಗಳಿಗೂ ಬಳಸಿಕೊಳ್ಳಲಾಗುತ್ತದೆ. ನದಿಗಳೇ ಇಲ್ಲದೇ ಹೋಗಿದ್ದರೆ ಭೂಮಿಯನ್ನು ನೀರಾವರಿ ವ್ಯವಸಾಯಗಳಿಗೆ ಬಳಸಿಕೊಂಡು ಆತಿದೊಡ್ಡ ಪ್ರಮಾಣದಲ್ಲಿ ಕೃಷಿಯನ್ನು ಅಭಿವೃದ್ಧಿ ಪಡಿಸುವುದಾಗುತ್ತಿರಲಿಲ್ಲ.

ನದಿಗಳಿಂದ ಮಾನವನು ಜಲವಿದ್ಯುಚ್ಛಕ್ತಿಯನ್ನೂ ಪಡೆಯುತ್ತಾನೆ. ಭಾರತ, ಅಮೆರಿಕ ಮತ್ತಿತರ ಪಾಶ್ಚಾತ್ಯ ದೇಶಗಳಲ್ಲಿ ಬೃಹತ್ ಪ್ರಮಾಣದ ನದಿ ಯೋಜನೆಗಳಿಂದ, ನದೀ ನೀರನ್ನು ಕಾಲುವೆಗಳಿಗೆ ತಿರುಗಿಸಿ, ಆದರಿಂದ ಹರಿಯುವ ನೀರನ್ನು ನೀರಾವರಿ ವ್ಯವಸಾಯಗಳಿಗೂ, ಮತ್ತು ದೊಡ್ಡ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಪಡೆಯುವುದಕ್ಕೂ ಬಳಸಿಕೊಳ್ಳಲು ಉದ್ದೇಶಿಸಲಾಗುತ್ತಿದೆ.

ಇನ್ನು ವಿದ್ಯುಚ್ಛಕ್ತಿಯೊಂದರೂ ಒಂದು ನಿಸರ್ಗದತ್ತ ವರ. ಅದನ್ನು ಶೋಧಿಸಿದ ಮಾನವನು ಇಂದು ಆ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿ, ನೂರಾರು ಸಾವಿರಾರು ಉದ್ದೇಶಗಳಿಗೆ ಬಳಸಿಕೊಳ್ಳುತ್ತಾನೆ. ಒಕ್ಕಲುತನಕ್ಕೆ ಸಂಬಂಧಿಸಿದ ಯಂತ್ರೋಪಕರಣಗಳನ್ನು ಹಾಗೂ ಕೈಗಾರಿಕಾ ಯಂತ್ರಗಳನ್ನು ನಡೆಸಲು ವಿದ್ಯುಚ್ಛಕ್ತಿಯನ್ನು ಉಪಯೋಗಿಸಲಾಗುತ್ತದೆ. ರೈಲ್ವೇ ಗಾಡಿಗಳನ್ನು ಎಳೆಯುವುದಕ್ಕೂ ವಿವಿಧ ಬಗೆಯ ಎಂಜಿನ್ನು ಮೋಟರು ಗಾಡಿಗಳನ್ನು ನಡೆಸುವುದಕ್ಕೂ ವಿದ್ಯುಚ್ಛಕ್ತಿ ಆವಶ್ಯಕ.

ಕೆಲವು ಬಗೆಯ ರೋಗರುಜಿನಗಳನ್ನು ಗುಣಪಡಿಸುವುದಕ್ಕೂ ವಿದ್ಯುಚ್ಛಕ್ತಿಯು ಬೇಕು. ಮನರಂಜನೆಗೆ ಬಳಸುವ ಅನೇಕ ಯಂತ್ರ ಸಾಮಗ್ರಿಗಳ ಚಾಲನೆಗೂ ವಿದ್ಯುಚ್ಛಕ್ತಿಯಿಲ್ಲದೆ ಬೇರೆ ಗತಿಯೇ ಇಲ್ಲ. ಬೆಳಕು ಮತ್ತು ಪ್ರಕಾಶ ನೀಡುವ ಸಾಧನದ ರೂಪದಲ್ಲಿ ವಿದ್ಯುಚ್ಛಕ್ತಿಯನ್ನು ಸರಿಗಟ್ಟುವ ಮತ್ತೊಂದು ಸಾಧನವಿಲ್ಲ. ಸ್ವಲ್ಪದರಲ್ಲಿಯೇ ಹೇಳುವುದಾದರೆ ವಿದ್ಯುಚ್ಛಕ್ತಿಯು ಮಾನವನಿಗೆ ಒಂದು ವರಪ್ರದವಾಗಿ ದೊರೆತಿದೆ. ಅದರ ಉಪಯೋಗ ಮಾನವನ ನಿತ್ಯ ಜೀವನ ಹಾಗೂ ಅತನ ಜೀವನದ ಎಲ್ಲ ರಂಗದಲ್ಲಿಯೂ ಕಂಡು ಬರುತ್ತಿದೆ.

ಇನ್ನು ಸೂರ್ಯ ಶಕ್ತಿ ಎನ್ನಾದರೂ ಮಾನವನು ಹಲವಾರು ರೂಪದಲ್ಲಿ, ಹಲವಾರು ಉದ್ದೇಶಗಳಿಗೆ ಬಳಸಿಕೊಳ್ಳುತ್ತಾನೆ. ನಿಸರ್ಗದ ಒಂದು ಅಂಗವೇ ಆದ ಸಸ್ಯ ಪ್ರಾಣಿಗಳಾದರೂ ಕೂಡ ಸೂರ್ಯ ಶಕ್ತಿಯನ್ನು ಬಹು ವಿಧಗಳಿಗೆ ಅವಲಂಬಿಸುತ್ತದೆ.

ಸಮುದ್ರ ಸಾಗರದಲ್ಲಿ ಉಕ್ಕಿ ಬರುವ ತೆರೆಗಳನ್ನು ಕೂಡಾ ತನ್ನ ಹಲವಾರು ಉದ್ದೇಶಗಳು ಸಫಲವಾಗುವಂತೆ ಮಾಡಲು ಬೇಕಾದಾಗ ಅನಿಶ್ಚಯವಿದ್ದಂತೆ ತನ್ನ ನಿಯಂತ್ರಣದೊಳಗೆ ತಂದುಕೊಳ್ಳಬಲ್ಲವನಾಗಿದ್ದಾನೆ. ಮಿನು ಹಿಡಿಯುವುದು, ದೋಣಿ ಸಾಗಿಸುವುದು, ಮರಮಟ್ಟುಗಳನ್ನು ಸಾಗಿಸುವುದು ಮುಂತಾದುವುಗಳಿಗೆಲ್ಲ ಸಮುದ್ರದ ಉಬ್ಬರವಿಳಿತಗಳು ಒಂದು ಮಹತ್ವದ ಅಂಶ.

ಇನ್ನು "ಅಣು ಶಕ್ತಿ'ಯೆಂಬುದೂ ಒಂದು ನಿಸರ್ಗದ ಶಕ್ತಿಯೇ. ಅಣು ಸಂಶೋಧನೆಯು ಮಾನವನು ಸಾಧಿಸಿರುವ ಮಹತ್ವದ ಐತಿಹ್ಯ ಘಟನೆಗಳಲ್ಲಿ ಒಂದು. ಈ ಅಣು ಶಕ್ತಿಯನ್ನು ಶಾಂತಿಯುತವಾದ ಅನೇಕ ಉದ್ದೇಶ ಸಾಧನೆಗಳಿಗೆ ಅನೇಕ ರೀತಿ ಬಳಸಲಾಗುತ್ತದೆ. ಅದು ಅತಿ ಅಗದರದ ಹಾಗೂ ಅಸ್ಪತು ಅಥವಾ ಎಂದೂ ತೀರಲಾರದಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಒಂದು ಮುಖ್ಯ ಸಾಧನವೂ ಹೌದು.

ಈ ಅಣುಶಕ್ತಿಯಿಂದಲುಂಟೆಂದೂ ಮಾಡಲಾಗದೇ ಇದ್ದ ಕೆಲವು ರೋಗರುಜಿನಗಳನ್ನು ಇಂದು ಗುಣಪಡಿಸಬಹುದಾಗಿದೆ. ಅಣುಶಕ್ತಿಯನ್ನು ಬೆಳೆಗಳಲ್ಲಿ ಉತ್ಪಾದನಾ ಗುಣಗಳನ್ನು ಸುಧಾರಿಸಲು ಹಾಗೂ ಎಕರೆವಾರು ಬೆಳೆಗಳನ್ನು ಹೆಚ್ಚಿಸಲು, ಭೂವಿಯ ಸಾರವನ್ನು ವೃ

(ಇನ್ನಷ್ಟನ್ನಾಲ್ಕನೆ ಪುಟ ನೋಡಿರಿ)

Telegram. "FOOD" Telephone: 5012

THE
SOUTH KANARA CENTRAL CO-OPERATIVE
WHOLESALE STORES LTD.,

POST BOX NO. 124,
"SAHAKARI MAHAL", MANGALORE-1.

DEALERS IN

RICE, WHEAT AND WHEAT PRODUCTS,
MILL CLOTH, HANDLOOM CLOTH, SILK,
GRAINS AND PROVISIONS ETC.

OIL AND OIL CAKES, CATTLE FOOD,
MANURES AND INSECTICIDES,
CONSUMER GOODS, KEROSENE,
IRON AND STEEL
etc. etc.

Sri K. B. Jinaraja Hegde,
B. Sc., LL. B.,
Vice-President

Sri S. Narsapaya,
B. A., B. L.,
President.

ಸ್ವಾತಂತ್ರ್ಯ ದಿನದ ಶುಭಾಶಯಗಳು

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಮನಮೆಚ್ಚುವ ಸರ್ವ ಸೌಕರ್ಯಗಳಿಂದೊಡಗೂಡಿದ
ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಶಿಸ್ತಿನ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ,
ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ
ಆಗ್ರಸ್ಥಾನ ಪಡೆದ ಏಕಮಾತ್ರ ಹೊಟೆಲ್.

ಫೋನ್ 77

ಗಾಂಧಿಯವರು ಪರಉಪದೇಶ ಪಂಡಿತರಲ್ಲ

(ಶ್ರೀಮನ್ನಾರಾಯಣ)

ಗಾಂಧಿಯವರಲ್ಲೊಂದು ಕೌಶಲ್ಯವಿತ್ತು. ತಾವು ಅನ್ಯರಿಗೆ ಏನು ಹೇಳುವದಿದ್ದರೂ ಅದನ್ನು ಮೊದಲು ತಾವು ಆಚರಣೆಯಲ್ಲಿ ತರುತ್ತಿದ್ದರು ರಾಜಕೀಯ ಕ್ಷೇತ್ರದಲ್ಲಿ ಸ್ವರಾಜ್ಯ ಸಂಗ್ರಾಮದಲ್ಲಿ ತಮ್ಮ ಪರಿವಾರದಲ್ಲಿಯ ಜನರನ್ನೆಲ್ಲ ಮೊದಲು ಸೇರಿಸಿಕೊಂಡರು. ಸಾಮಾಜಿಕ ಕ್ಷೇತ್ರದಲ್ಲಿ— ಹರಿಜನ ಉದ್ಧಾರ ಹಾಗೂ ಅಸ್ಪೃಶ್ಯತಾ ನಿವಾರಣೆಯನ್ನು ತಮ್ಮ ಮನೆ ಹಾಗೂ ಆಶ್ರಮದಿಂದಲೇ ಮೊದಲು ಮಾಡಿದರು. ಶಿಕ್ಷಣ ಸುಧಾರಣೆಯ ಪ್ರಯೋಗಗಳನ್ನು ಅವರು ತಮ್ಮ ಮಕ್ಕಳ ಮೇಲೆಯೇ ಮೊದಲು ನಡೆಸಿದರು. ಅನಂತರ ಇನ್ನಿತರರ ಮಕ್ಕಳ ಮೇಲೆ ನಿಸರ್ಗಚಿಕಿತ್ಸೆ ವಿಷಯುಕ್ತ ಭೋಜನ ಪ್ರಯೋಗಗಳನ್ನೂ ಸಹ ಅವರು ಮೊದಲು ತಮ್ಮ ಶರೀರದ ಮೇಲೆಯೇ ನಡೆಸಿ ನೋಡಿದರು.

"ಭೋಜನ ಸಂಬಂಧೀ ಇಂಥ ಪ್ರಯೋಗಗಳನ್ನು ನೀವು ಸ್ವತಃ ಯಾಕ ಮಾಡುತ್ತೀರಿ?" ಎಂದು ಒಮ್ಮೆ ಕೇಳಿದೆ.

"ನಾನು ಮಹಾತ್ಮನಲ್ಲವೇ? ಆದ್ದರಿಂದ" ಎಂದು ಅವರು ಉತ್ತರ ಕೊಟ್ಟರು.

ಅನ್ಯರಿಗೆ ಉಪದೇಶ ಮಾಡುವ ಮೊದಲು ಸ್ವತಃ ಆಚರಿಸುತ್ತಿದ್ದರಿಂದಲೇ ಅವರು ನಿಜವಾಗಿಯೂ "ಮಹಾತ್ಮ"ರಾಗಿದ್ದರು!

ಮಾಡಿಕೆಯಂತೆ ಕಸ್ತೂರಬಾರು ಗಾಂಧಿಯವರ ಕಾಲು ತೊಳೆದ ಬಾಲ್ದಿಯಲ್ಲಿಯು ನೀರನ್ನು ಹೆತ್ತಿರದ ಗುಲಾಬೀ ಗಿಡದ ಬುಡಕ್ಕೆ ಚಲ್ಲಿದರು. ಇದನ್ನು ಕಂಡು ಗಾಂಧಿಯವರು ಗಂಭೀರಂತಾಗಿ ಹೇಳಿದರು

"ಶ್ರೀಮನ್, ಈ ಗುಲಾಬಿ ಹೂವು ಕಾಣಲಿಕ್ಕೇನೋ ಚಂದ ಕಾಣ ತ್ರವೆ ನಿಜ. ಕಸ್ತೂರಬಾರು ಸ್ವತಃ ಈ ಗಿಡ ನೆಟ್ಟಿದ್ದಾರೆ. ಆದರೆ ಇಂದಿನ ದೇಶಸ್ಥಿತಿಯನ್ನು ನೆನೆದರೆ ಈ ಹೂವುಗಳು ನನಗೆ ಚುಚ್ಚುತ್ರವೆ ಇತ್ತಗಳ ಸ್ಥಳದಲ್ಲಿ ನಾವು ಗೋದಿ ನೆಟ್ಟರೆ ಜೀನ್ನಾಗಿತ್ತಲ್ಲವೇ? ಎಂದು.

ಆ ಗುಲಾಬಿ ಗಿಡಗಳ ಮಡಿಗಳಲ್ಲಿ ಮರುದಿನವೇ ಗಾಂಧಿಯವರು ಗೋದಿ ಬಿತ್ತಿಬಿಟ್ಟರು!

ಕುಷ್ಠರೋಗಿಯಾಗಿದ್ದ ಪರಚುರೆ ಶಾಸ್ತ್ರಿಯವರ ಉಪಚಾರ ಮಾಡಲಿಕ್ಕೆ ಆಶ್ರಮವಾಸಿಗಳು ಹಿಂಜರಿಯುತ್ತಿರುವದು ಕಂಡೊಡನೆ ಗಾಂಧಿಯವರು ಸ್ವತಃ ಕುಷ್ಠದ ಗಾಯು ತೊಳೆಯಲಿಕ್ಕೂ ಮಾಲಿಶ ಮಾಡಲಿಕ್ಕೂ ಹತ್ತಿ ಬಿಟ್ಟರು.

ನಿಮ್ಮ ದೈನಂದಿನ ಜೀವನವೇ ನಿಮ್ಮ ದೇಗುಲ, ನಿಮ್ಮ ಧರ್ಮ.

ಒಳಗಿದ್ದ ದೇವರ ಕಾಣದೆ ಹೊರಗೆ ದೇಗುಲವ ಹೂಜಿಸುವ ನೆಗ್ಗ.



ವೇದವು ಸಾರುತ್ತಿದೆ:

"ಏಳಿ, ಎಚ್ಚರಗೊಳ್ಳಿ, ತಿಳಿದವರ ಕಾಲಿಗೆ ಬಿದ್ದು ತಿಳಿದುಕೊಳ್ಳಿ" ಎಂದು ತಿಳಿದವರನ್ನೆಲ್ಲಿ ಹುಡುಕೋಣವೆಂದು ನೀವು ಗೊಣಗಾಡಬೇಕಾದ್ದಿಲ್ಲ ತಿಳಿದವರಿಯನೆಂದು ಎಲ್ಲರಿಂದಲೂ ವಂದನೆಗೊಂಡಿರುವ ಶ್ರೀ ಕೃಷ್ಣನ ಪ್ರತಿನಿಧಿ— ಗೀತೆ ಶ್ರೀ ಕೃಷ್ಣನ ಶಬ್ದ ಉಪದೇಶದ ಜೀವಕಳೆಗಳನ್ನೆಲ್ಲ ಗೀತೆಗಳಲ್ಲಿ ಪ್ರತಿಷ್ಠೆ ಮಾಡಿದ್ದಾನೆ ಕನ್ನಡ ನಾಡಿನ ಪ್ರತಿಯೊಬ್ಬರೂ—ಹುಡುಗರು, ಹೆಂಗಸರು ಕೂಡ ತಮ್ಮ ಮನುಷ್ಯತ್ವ ಎನ್ನು ಸಾರ್ಥಕ ಮಾಡಿಕೊಳ್ಳುವಂತೆ

ಹೊಸಕೆರೆ ಚಿದಂಬರಯ್ಯನವರು ಬರೆದ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ

ಅದನ್ನು ಎಲ್ಲರೂ ಓದಬೇಕಾಗಿದೆ

—"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಜೆನ್ನಾಗಿ ಓದಬೇಕು"
ಎಂದ ನರಸಿಂಹ ಪುರಾಣವೂ ಸಾರುತ್ತಿದೆ.

ಸರ್ವರಿಗೂ ಕೊಳ್ಳಲು ಅನುಕೂಲವಾಗುವಂತೆ 45ರಿಕ್ಕೂ ಮಿಕ್ಕಿದ ಪುಟಗಳುಳ್ಳ ಪಾಕೇಟ್ ಸೈಜಿನ ಈ ಪುಸ್ತಕದ ಬೆಲೆ ಬರೀ ಒಂದೂವರೆ ರೂಪಾಯಿ

2 ರೂ. ಕಳುಹಿಸಿದರೆ ಒಂದು ಪ್ರತಿಯನ್ನು ಕಳುಹಿಸಲಾಗುವುದು.

ರಮ್ಯ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು— ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಸ್ವಾತಂತ್ರ್ಯಪೂರ್ವದಲ್ಲಿ ಸ್ವಾತಂತ್ರ್ಯ ಪ್ರಾಪ್ತಿ ಮತ್ತು ಮುಂದಿನ ದೇಶದ ಆಗು-ಹೋಗುಗಳ ಬಗ್ಗೆ ಮಹಾತ್ಮರು ಆಶಾಗೋಪುರವನ್ನು ಕಟ್ಟಿದ್ದರು. ಆದರೆ, ಇಂದೇನಾಗುತ್ತಿದೆ? ಮಹಾತ್ಮರ 'ಕನಸಿನ ಭಾರತ' ಇನ್ನೂ ಕನಸಾಗಿಯೇ ಇದೆ. ದೇಶದ ನಾಯಕರಲ್ಲಿ ಮಹಾತ್ಮರ—ಅವರ ತತ್ವಗಳ—ಮೇಲೆ ವಿಶ್ವಾಸ ಹಾರಿ ಹೋಗಿದೆ. ಇದನ್ನು ಕಣ್ಣಾರೆ ಕಾಣಲು ಮಹಾತ್ಮರು ಜೀವಿಸಿಲ್ಲ; ಅವರ ನಿಕಟ ಭಕ್ತರಾದ ಲೇಖಕರು ತಮ್ಮ ನೊಂದ ಹೃದಯದ ಆಳವನ್ನು ಇಲ್ಲಿ ಮೂಡಿಸಿದ್ದಾರೆ.

ಶ್ರೀ ಸುಬೋಧ
ಎಂ. ರಾಮರಾವ್
ಬೆಂಗಳೂರು

ಮಹಾತ್ಮರ ಕನಸಿನ ಭಾರತ

ಮಹಾತ್ಮಾ ಗಾಂಧಿಯವರು ದಕ್ಷಿಣ ಆಫ್ರಿಕಾ ಸರ್ಕಾರದ ಮೇಲೆ ತಮ್ಮ ಅಹಿಂಸಾ ಧೋರಣವನ್ನೆತ್ತಿ ವಿಜಯ ಗಳಿಸಿ ಭಾರತಕ್ಕೆ ಬಂದ ತರುವಾಯ ಒಂದು ವರ್ಷ ಕಾಲ ಭಾರತ ದೇಶವನ್ನೆಲ್ಲ ಸುತ್ತಿ ಬಂದರು. ಅದರ ಮುಖ್ಯ ಉದ್ದೇಶ, ಅವರ ರಾಜಕೀಯ ಗುರುವಾದ ದಿ। ಗೋಪಾಲಕೃಷ್ಣ ಗೋಖಲೆಯವರ ಆಜ್ಞೆಯನುಸಾರ-"ಬ್ರಿಟಿಷ್ ಸರ್ಕಾರದ ಪರಿಪಾಲನೆಯಲ್ಲಿರುವ ಈ ದೇಶದ ಸ್ಥಿತಿಗತಿಗಳನ್ನು ಕುರಿತು ಪ್ರತ್ಯಕ್ಷ ಅನುಭವಗೊಳ್ಳುವುದು-ತರುವಾಯ ಇಲ್ಲಿಯ ರಾಜಕೀಯ ವಿಚಾರಗಳಲ್ಲಿ ಪ್ರವೇಶಿಸುವುದು" ಎಂದಾಗಿತ್ತು. ಆ ಸಂಚಾರ ಕಾಲದಲ್ಲಿ ಅವರಿಗೆ ಅನೇಕ ಸಂಗತಿಗಳು ಗೋಚರವಾದುವು. ಬ್ರಿಟಿಷರ ಆಳ್ವಿಕೆಯಲ್ಲಿ ಭಾರತೀಯರು ವಿವಿಧ ರಾಜಕೀಯ ವ್ಯಾಧಿಗಳಿಂದ ತೊಳಲಿ ಬಳಲುತ್ತಿರುವರೆಂದು ಅವರು ಮನಗಂಡರು. ಆ ವ್ಯಾಧಿಯ ಮೇಲೆ ಮೇಲೆ ನಡೆವ ಚಿಕಿತ್ಸೆಗಳಲ್ಲಿ ಪೂರ್ಣ ಗುಣ ಹೊಂದಲಾರದು ಎಂದು ನಿಶ್ಚಯಿಸಿ, ಆ ಪರದೇಶೀಯ ಸರ್ಕಾರದ ಮೇಲೆ ತಮ್ಮ ಅಸಹಕಾರ— ಅಹಿಂಸಾ— ಸತ್ಯಾಗ್ರಹದ ಅಸ್ತ್ರ

ದೀರ್ಘ ಕಾಲದ ಆಹಾರ ಆಭಾವದಿಂದ ನರಳುತ್ತಿರುವ ಈ ರಾಷ್ಟ್ರದ ಜನತೆಯ ಮುಂದೆ ಹೇಳಿದ್ದರು "ಬ್ರಷಿತೋ ನಾಸ್ತಿ ದುರ್ಭಿಕ್ಷಂ" "ಬೇಸಾಯಗಾರ ಬೇಗ ಸಾಯ" ಇಂದು ನಾವು ಉಣ್ಣುತ್ತಿರುವ ಗದ್ದೆಗಳನ್ನೆಲ್ಲ ಸಿದ್ಧಪಡಿಸಿದವರು ನಾವಲ್ಲ. ಕೈಕೋದು, ಕಾಲ್ಕೊಡು, ಸುದಗ—ಮುಂತಾದ ನೀರಾವರಿ ಯೋಜನೆಗಳನ್ನೆಲ್ಲ ಹಾಕಿದವರು ನಮ್ಮ ಹಿಂಯರು ಹಾಡಿ ಹಕ್ಕಲು ಬೆಳೆಸಿದವರು ಅವರ.

ಈ ಗದ್ದೆಗೆ ಈ ಬೀಜ—ಈ ಶ್ರಾಯ ದಲ್ಲಿ ಬಿಕ್ಕನೆ ಮೂಡಬೇಳ—ಈ ಭಾಗದ ನೀರು ಈ ಸಾಧನಲ್ಲಿ ಹೋಗಬೇಕು—ಈ ಗದ್ದೆಗೆ ಈ ಮುದಗದ ನೀರು ಬರಬೇಕು. ಹೀಗಿತ್ತು ಅವರ ಯೋಜನೆ. ವ್ಯವಸಾಯ ದ ಕೆಲಸದಲ್ಲಿ ಊರಿಲ್ಲ ಒಂದಾಗುತ್ತಿದ್ದರು.

ಕಾಲ ಬದಲಾಯಿತು. ಬೇಸಾಯಗಾರನ ಮೂರ್ಖನ್ ಬೆಲೆ ತಗ್ಗಿತು. ಬೆಳೆದ ಬೆಳೆಗೆ ಬೆಲೆ ಇಲ್ಲ ಎಂದಾಯಿತು. ಹಳ್ಳಿಯ ಜನ ಪಟ್ಟಣ ಸೇರಿದರು—ನಗರದ ಎಜ್ಜೋಗ ಬೆಳೆಯಿತು. ಹಳ್ಳಿ ಬಡವಾಯಿತು—ದೇಶದ ಕಾಜ ಬದಲಾಯಿತು. ಇಂದು ಜೋಳಿಗೆ ಹಿಡಿದು ಭಾರತ ಲೋಕಸಭೆಯ ಕಿರಿಯವಂತಾಗಿದೆ.

ನಾವು ಸ್ವರಾಜ್ಯ ಸಂಪಾದಿಸಿದ್ದೇವೆ. ಅದನ್ನು ಬಲಿಸಿಕೊಳ್ಳಬೇಕು. ಹೊರ ದೇಶದಿಂದ ಆಹಾರ ದಾನ್ಯಗಳನ್ನೇ ಇನ್ನಿತರ ನೆರವನ್ನೋ ಪಡೆಯುತ್ತಿದ್ದೇವೆ ಅಭಿವೃದ್ಧಿ ಪದವಿಯಲ್ಲಿರುವ ರಾಷ್ಟ್ರಗಳು ಅರಂಭದಲ್ಲಿ ಹೀಗೆ ಮಾಡತ್ತಿವೆ. ಸ್ವಾವಲಂಬನ ಎಲ್ಲ ರಾಷ್ಟ್ರಗಳಲ್ಲೂ ಎಲ್ಲ ಪ್ರಜಾರಂಗಗಳಲ್ಲೂ ಸಾಧ್ಯವಾಗಿಲ್ಲ— ಆದರೆ ನಾವು ಸ್ವರಾಜ್ಯದ ಇಪ್ಪತ್ತು ವರ್ಷ ಕಳೆದಿದ್ದೇವೆ. ಆರಂಭಿಕ ಕಾಲ ಮುಗಿದಿದೆ— ಇನ್ನೂ ಯಾವದೇ ಕ್ಷೇತ್ರದಲ್ಲಿ ನಾವು ಸ್ವಾವಲಂಬನ ಸಾಧಿಸಿಲ್ಲ.

ಆಹಾರ ಧಾನ್ಯವಾಗಲೀ, ಯಂತ್ರ ಸಾಮಗ್ರಿಗಳಾಗಲೀ—ಅಸಿದ್ಧ ವಸ್ತುಗಳಾಗಲೀ—ವಂದವರಿಂದ ರಾಷ್ಟ್ರಗಳು ಸುಮ್ಮನೇ ಕೊಡುತ್ತವೆಯೆ? — ನೆರವಾಗಲೀ—ಎರವಲಾಗಲೀ — ಆದಕ್ಕೊಂದು ಕಿರ್ಚ ಉಂಟು—ಅವರ ದೋರಣೆ ನಾವು ಒಪ್ಪಬೇಕು. ಆಮೆರಿಕ ನಮಗೆ ನಾನಾರೀತಿಯ ನರವ್ತೆ ನೀಡುತ್ತದೆ ಕೇಳಿಯೂ ನೀಡುತ್ತದೆ— ಕೇಳದೆಯೂ ನೀಡುತ್ತದೆ— ಪಾಕಿಸ್ತಾನಕ್ಕೂ ನೀಡುತ್ತದೆ ನಮಗೆ ಆಹಾರ ಮತ್ತೆ ಯಂತ್ರ ಸಾಮಗ್ರಿಗಳು ಯೋಜನೆಗಳಿಗೆ ಡಾಲರ್-ಅದೇ ಪಾಕಿಸ್ತಾನಕ್ಕೆ ಯುದ್ಧ ಸಾಮಗ್ರಿಗಳು ಹೀಗಾಗಿ ಅವರ ಕಂತ್ರ.

ಅಮೆರಿಕದ ಆಸ್ತಿಯಿಂದ ಬದುಕುವ ನಾವು—ಅವರ ಬುದ್ಧಿಯಿಂದ ಬಳಿಯುವ ನಮ್ಮ ದೇಶ ಅವರ ವಿಯಟ್ನಾಂ ಧೋರಣೆಯನ್ನು ಸಹಿಸಬೇಕು. ಅವರ ಇಸ್ರೇಲ್ ನೀತಿ ನಾವೂ ಒಪ್ಪಬೇಕು. ಅಂದ ಮೇಲೆ ನಮ್ಮ ಸ್ವಾತಂತ್ರ್ಯವೆಲ್ಲಿ ಉಳಿಯಿತು?

ತಿಳಿದ ಪಾಕಿಸ್ತಾನ—ಭಾರತ ಯುದ್ಧ ಕಾಲದಲ್ಲಿ ನಿವ ಗೆ ಇನ್ನು ನಮ್ಮ ತೆರವು ಇಲ್ಲ—ಆಹಾರ ಕಳಿಸಲು ಸಾಧ್ಯವಿಲ್ಲ ಎಂದರು. ಪಾಕಿಸ್ತಾನ ಅಮೇರಿಕದ ಶಕ್ತಿಗಳನ್ನು ಬಳಸಿದ್ದೆ ಎಂದು ನಾವು ಲೋಕಕ್ಕೆ ತಿಳಿಸಿದ್ದೇ ಅವರಿಗೆ ಕಂಡ ಅವಮಾನವಾಗಿತ್ತು. ನಮ್ಮ ಪ್ರಧಾನಿ ವಿಯಟ್‌ನಾಂನ ಬಾಂಬ್‌ದಾಳಿಯನ್ನು ಕಠೋರವಾಗಿ ಟೀಕಿಸಿದಾಗ— ಗೋಧಿ ನಿಲ್ಲಿಸುವೆವು ಎಂದರು. ಇದರಿಂದ ನಾವು ಕಲಿಯುವ ಪಾಠವಿದೆ.

ನಾವು ಸ್ವಾವಲಂಭನೆ ಸಾಧಿಸಬೇಕು. ಬಿಟ್ಟುಯಾಗಿ ಕೊಟ್ಟರೂ ನಮ್ಮ ಆತ್ಮಾಭಿಮಾನಕ್ಕೆ ದಕ್ಕೆ ಬರುವಂತಾದರೆ ಉಗುವಾಸ ಇದ್ದರೂ ಚಿಂತಿಲ್ಲ—ಂಂಥಹ ದಾನ ನಿರಾಕರಿಸಬೇಕು.

ಕೃಷಿ ಕ್ಷೇತ್ರದಲ್ಲಿ ಇಂದು ಕ್ರಾಂತಿ ಯಾಗಬೇಕಾಗಿದೆ. ಅಧಿಕ ಆಹಾರ ಬೆಳೆಸುವ ಕಾರ್ಯ ಈ ಇಪ್ಪತ್ತು ವರ್ಷಗಳಲ್ಲಿ ನಡೆದಿದೆ. ತಜ್ಞರ ಮೇಲೆ ತಜ್ಞರು ಈ ಕುರಿತು ಚಿಂತನೆ ನಡೆಸಿದ್ದಾರೆ—ಯೋಜನೆ ಸಿದ್ಧಪಡಿಸಿದ್ದಾರೆ. ಆದರೂ ನಾವು ಈ ಇಪ್ಪತ್ತು ವರ್ಷಗಳಲ್ಲಿ ಯಶಸ್ಸು ಗಳಿಸಿಲ್ಲ—

ಕೃಷಿ ನಮ್ಮ ದೇಶದ ಎಷ್ಟುಸಂಖ್ಯಾಕರಿಗೆ ಉದ್ಯೋಗ ನೀಡಬಲ್ಲದು. ಇದೊಂದು ಗ್ರಾಮೀಣ ಕಸುಬು—ಎಂಬ ಸತ್ಯ ನಮ್ಮ ತಜ್ಞರಿಗೆ ಇನ್ನೂ ಹೊಳಿಯಲಿಲ್ಲ— ಕೃಷಿಯಲ್ಲಿ ರೈತನ ಬದುಕು ಅವರಿಗೆ ಅರ್ಥವಾಗಲಿಲ್ಲ— ಆದ್ದರಿಂದಲೇ ಕೃಷಿ ಇನ್ನೂ ಬಹಳ ಮಂದಿಗೆ ಆಕರ್ಷಣೀಯ ವಾದ ಕಸುಬಾಗಲಿಲ್ಲ.

ಸುಧಾರಿತ ಬೀಜ, ರೈತಕ ಗೊಬ್ಬರ, ಉತ್ತಮ ಉಳುಮೆ, ಯಂತ್ರದ ನೇಗಿಲು, ನೀರಾವರಿ ಇವು ಅಧಿಕ ಉತ್ಪತ್ತಿಯ ಸಾಧನಗಳು.— ಇವುಗಳ ಜತೆಯಲ್ಲಿಯೇ ಮಾನವ ಶಕ್ತಿ ಇವಕ್ಕೆಲ್ಲ ಮೂಲ ಎಂಬುದನ್ನು ನಾವು ಮರೆಯಬಾರದು. ಅಧಿಕ ಆಹಾರ ಧಾನ್ಯ ಬೆಳೆದರೆ ಸಾಲದ. ಅದು ಬಹುಸಂಖ್ಯಾಕರ ಜೀವನದ ಕಷ್ಟ ಪರಿಹಾರಕ್ಕೆ ಸಹಾಯಕವಾಗಬೇಕು—ಎಂಬುದನ್ನು ನಾವು ಮರೆಯಬಾರದು. ಕೃಷಿಯೇ ಪೂರ್ಣ ಹಕ್ಕಿನ ಉದ್ಯೋಗ ಕೊಡಲಾರದು; ಗುಡಿ ಕೈಗಾರಿಕ ಅದರ ಇನ್ನೊಂದ ವಯ.

ಸುಧಾರಿತ ಕೃಷಿಯ ಕುರಿತು ಹಲವು ಯೋಜನೆಗಳು ಸಿದ್ಧವಾಗಿವೆ. ಆದರೆ ಈ ಯೋಜನಾ ಪಂಡಿತರಿಗೆ ನಮ್ಮ ಗ್ರಾಮಗಳ ವಾಸ್ತವಿಕ ಪರಿಚಯವೇ ಇಲ್ಲ ಎಂದು ನನಗೆ ಅನ್ನಿಸುತ್ತದೆ. ಬೀಜ, ಗೊಬ್ಬರ ಇವೆಲ್ಲ ಹೇಗೆ ಅವಶ್ಯವೋ ಅಷ್ಟೇ ದುಬ್ಯ ನಮ್ಮ ಗದ್ದೆಗಳು ತಾನೆ? ನಮ್ಮ ಕೃಷಿ ಯೋಜಕರೆಲ್ಲ ಒಮ್ಮೆ ಪಮ್ಮ ಗ್ರಾಮಗಳನ್ನು ಸುತ್ತಾಡಬೇಕು. ನಮ್ಮ ಗದ್ದೆಗಳು ಇರುವ ಸ್ಥಿತಿ, ಅವುಗಳ ಮಣ್ಣಿನ ಗುಣ— ಈ ಅಂಜುಕಟ್ಟು— ನೀರಿನ ಮೂಗ್ಗ, ಓಡಿ, ಊರಲ್ಲಿರುವ ಮರಮಟ್ಟು— ಇವುಗಳ ವಾಸ್ತವಿಕ ಅನುಭವ ಪಡೆದು ಯೋಜನೆ ಸಿದ್ಧ ಪಡಿಸಿದರೆ ಅದು ಸಾರ್ಥಕವಾಗುತ್ತದೆ.

ನಮ್ಮಲ್ಲಿ ಬಹು ಸಂಖ್ಯಾಕ ರೈತರು ಕಡಿಮೆಹಿಡುವಳಿದಾರರು. ಕಾರಣಾಂತರಗಳಿಂದ ಒಮ್ಮಲ್ಲಿನ ಭೂಮಿಯ ಒಡೆತನ ನಮ್ಮಲ್ಲಿ ಬಹಳ ಮುಂದಿಗೆ ಇಲ್ಲ ನಾಲ್ಕು ಸಂಟ್ಸು—ಐದು ಸೆಂಟ್ಸಿನ ಗದ್ದೆಗಳೂ ನಮ್ಮಲ್ಲಿವೆ. ಇಂತಹ ಕ್ಷೇತ್ರಗಳಲ್ಲಿ ಯಂತ್ರಗಳ ಉಳುಮೆ ಎಷ್ಟು ಸಾಧ್ಯವಾದೀತು? ಉಳುಮೆ ಯಂತ್ರದ ಬೆಲೆಯು ಪ್ರಶ್ನೆ ಸಾನು ಎತ್ತನ್ನದೇ ಇಲ್ಲ. ಜಪಾನಿನ ಒಂದು ಉಳುಮೆ ಯಂತ್ರದ ಬೆಲೆ ಹತ್ತು ಸಾವಿರ ರೂ. ಇಷ್ಟು ಬೆಲೆಯು ಭೂಮಿವುಳ್ಳ ರೈತರ ಸಂಖ್ಯೆಯೇ ನಮ್ಮಲ್ಲಿ ಬಹುವಿರಳ. ಇನ್ನು ಅವುಗಳ ರಿಪೇರಿ ಮುಂತಾದ ಸಮಸ್ಯೆ ಎಂದು?

ನಮ್ಮ ರೈತನಿಗೆ ಬೇಕಾದಷ್ಟು ಜಾನುವಾರುಗಳು—ಕಡಿಮೆ ಬೆಲೆಯಲ್ಲಿ ಕೋಣಗಳು—ಗೊಬ್ಬರ— ಉಳುಮೆ—ಎರಡಕ್ಕೂ ಅನುಕೂಲವಾಗುವಂತಹವು. ನಮ್ಮ ಕೃಷಿಯೋಜನೆಯಲ್ಲಿ ಜಾನುವಾರುಗಳಿಗೆ ಸ್ಥಾನವೇ ಇಲ್ಲ.

ಬ್ರಷಿತೋ ನಾಸ್ತಿ ದುರ್ಭಿಕ್ಷಂ

ಶ್ರೀ ಬೈಕಾಡಿ ವೆಂಕಟೇಶ್ವರ ರಾಯರು



ಲೇಖಕರು

ಬಿಹಾರದ ಆಹಾರ ಆಭಾವದ ದುರುಪಯೋಗವನ್ನು ಕ್ರಿಸ್ತೀಯ ಪಾದ್ರಿಗಳು ಮಾಡಿಕೊಂಡಿರುವಂತೆಯೇ ಭಾರತದ ಆಭಾವವನ್ನು ಸಂಪನ್ನ ರಾಷ್ಟ್ರಗಳು ರಾಜಕೀಯ ಸ್ವಾರ್ಥ ಸಾಧನೆಗೆ ಬಳಸುತ್ತಿವೆ. ಈ ಇಪ್ಪತ್ತು ವರ್ಷಗಳಲ್ಲಿ ನಾವು ಸ್ವಾವಲಂಬನೆಯ ಗುರಿ ಮುಟ್ಟಲಿಲ್ಲ. ರೈತನ ಮೂಲಭೂತ ಸಮಸ್ಯೆಗಳ ಅನ್ವಯ ನಮಿಂದ ರೂಪಿತ ಯೋಜನೆಗಳ ಅವಶ್ಯಕತೆ ಕೃಷಿ ರಂಗಕ್ಕಿದೆ. ಇತ್ತ ಯೋಜಕರ ಮನ ತಿರಿಯಬೇಕು.

ವರ್ಷದ ಹಿಂದೆ ನವರ್ಕಾರಲ್ಲಿ ಒಂದುವನ ಮಹೋತ್ಸವ ನಡೆಯಿತು. ನಡೆದದ್ದು ಇನ್ನೂರು ಎಕ್ರೆ ಕಾಡಿಟ್ಟ ಪಂಚಾಯತ್ ಕಾಡಿನಲ್ಲಿ—ಈ ಕಾಡನ್ನು ನಮ್ಮ ಹಿರಿಯರು ಕಾದಿಟ್ಟದ್ದು—ರೈತರಿಗೆ ಸೊಪ್ಪು ಸೌದೆಗಾಗಿ. ಜಿಲ್ಲಾ ಪಂಪ್ಯಾಟ ಕಮಿಷನರರು ವನಮಹೋತ್ಸವ ನಡೆಸಿ—ಈ ಕಾಡನ್ನು ಇನ್ನು ಜೀನ್ನಾಗಿ ಕಾಪಾಡಿ ಎಂದು ಹೇಳಿದವರು ತಿಂಗಳಲ್ಲೇ— ಅದೇ ಕಾಡಿನ ಒಂದು ಭಾಗವನ್ನು ಒಂದು ಖಾಸಗಿ ವಿದ್ಯಾ ಸಂಸ್ಥೆಗಳು ದಹನ ಮಾಡಲು ಬಂದರು. ಕಾಡು ಕಡಿಯಲು ತಪ್ಪಣೆಯೂ ಆಯಿತು. ರೈತರ ಪ್ರತಿಭಟನೆ ಕೇಳುವವರು ಯಾರು? ಸರಕಾರದವನ ಮಹೋತ್ಸವದ ನೀತಿ ಹೀಗಿದೆ—ಆದರೂ ಹಸಿರೆಲೆ ಗೊಬ್ಬರದ ಪ್ರಚಾರ ನಡೆಯುತ್ತಿದೆ. ಗೊಬ್ಬರದ ಗುಂಡಿಗಳ ಬಗ್ಗೆ ಕರಪತ್ರ ಹಂಚುವುದು ಎಲ್ಲ ನಡೆಯಿದೆ— ಆದರೆ ಸ್ಯಾಂಪಲ್ಲಾಗಿ ಒಂದು ಗ್ರಾಮವನ್ನು ನೀವು ತಿರುಗಾಡಿ ನೋಡಿ--ನಮ್ಮ ರೈತನಲ್ಲಿ ಬಹಳ ಮಂದಿಗೆ ಜಾನುವಾರು ಹಟ್ಟಿಯೇ ಇಲ್ಲ. ಗೊಬ್ಬರದ ಬಟ್ಟಬಯಲಿನಲ್ಲಿ ಬಿಸಿಲು ಮಳೆಗಳ ರಕ್ಷಣೆ ಇಲ್ಲದೇ ಬಿದ್ದಿದೆ.

(ಇಪ್ಪತ್ತೊಂದನೇ ಪುಟ ನೋಡಿರಿ)

With the best compliments from—

SRI LAKSHMI BHAVAN

Boarding & Lodging

Rashtrapati Road

SECUNDERABAD

Grams. "Touristhom"

Phone: 74202 Estd: 1938

ಪ್ರೊ॥ ಪಿ. ಗುರುರಾಜ ಭಟ್

ಮಲ್ಪೆಯಿಂದ ಮಂಗಳೂರಿಗೆ -



ಮಲ್ಪೆಯಿಂದ ಮಂಗಳೂರಿಗೆ ಸುಮಾರು ೮೫ ಮೈಲು ದೂರ ಈ ದಾರಿಯಲ್ಲಿ ಪ್ರಾಚೀನ ಸಂಸ್ಕೃತಿ—ನಾಗರಿಕತೆ—ಇತಿಹಾಸಗಳನ್ನು ಸಾರಬಲ್ಲ ಹಲವಾರು ಶಿಲ್ಪ—ಮಂದಿರಗಳು ಗೋಚರಿಸುತ್ತವೆ ಪ್ರಸ್ತುತ ಲೇಖಕರು ಈ ದಾರಿಯ ಮೈಲಿಗಲ್ಲುಗಳ ಸ್ಥೂಲ ಪರಿಚಯ ಮಾಡಿಕೊಟ್ಟಿದ್ದಾರೆ

ಮಲ್ಪೆಯಿಂದ ಮಂಗಳೂರಿಗೆ ಉಡುಪಿ, ಕಾಪು, ನೂಲ್ಕಿ, ಸೂರತ್ಕಲ್ಲು ಮತ್ತು ಕೂಳೂರಿಗಾಗಿ ಸುಮಾರು 45 ಮೈಲು ದೂರವಿದೆ ಪ್ರಯಾಣ ಮಾಡುವಾಗ ಸಿಕ್ಕುವ ಹಲ ಕಲವು ಸ್ಥಳಗಳ ಐತಿಹಾಸಿಕ ವೈಶಿಷ್ಟ್ಯವನ್ನು ಈ ಕೆಳಗೆ ಕೊಟ್ಟಿದೆ

ಮಲ್ಪೆಯು ಸಮುದ್ರ ದಂಡೆಯಲ್ಲದ್ದು 'ಮಲ್ಪಾಹಾ' ಎಂಬ ನದಿಯ ಹೆಸರಿನಿಂದ ಪಡೆದ ನಾವ ಧೇಯವುಳ್ಳದ್ದಾಗಿರಬೇಕು. ಕ್ರಿ ಶ 3ನೇ ಶತಮಾನದಷ್ಟು ಪ್ರಾಚೀನವಾದ ರೇವಿದೆಂದು ತಿಳಿಯಲು ಅವಕಾಶವಿದೆ ಈ ಬಂದರದ ಸಮೀಪವೇ ಒಡಭಾಂಡೇಶ್ವರವೆಂಬಲ್ಲಿ ಸುಮಾರು ಕ್ರಿ. ಶ. 9—10ನೇ ಶತಕಕ್ಕೆ ಅನ್ವಯಿಸುವ ಸುಬ್ರಹ್ಮಣ್ಯ ದೇವಾಲಯವೂ ಆದರ ಸಮೀಪದೇ ಅಷ್ಟೇ ಪ್ರಾಚೀನವಿದ್ದಿರಬೇಕಾದ ಕೊಡವೂರು ಶಂಕರನಾರಾಯಣ ದೇಗುಲವೂ ಕಂಡು ಬರುತ್ತವೆ. ಕೊಡವೂರು ಶಂಕರನಾರಾಯಣ ದೇವಾಲಯವು ನಮ್ಮ ಜಿಲ್ಲೆಯ ಶ್ರೇಷ್ಠ ಸುಂದರ ದೇಗುಲಗಳಲ್ಲಿ ಒಂದಾಗಿದೆ. ಶ್ರೀ ಮಧ್ವಾಚಾರ್ಯರು ಈ ದೇಗುಲಕ್ಕೆ ತನ್ನ ಬಾಲಾವ್ಯದಲ್ಲಿ ಸಂದರ್ಶನವಿತ್ತಂತೆ ತಿಳಿಯುತ್ತದೆ.

ಉಡುಪಿಯು ಒಂದು ಪ್ರಸಿದ್ಧ ಯಾತ್ರಾಸ್ಥಳ ಸ್ಥಳ ಪುರಾಣಗಳು ಒಂದು ತೆರನಾಗಿ ಉಡುಪಿಯು ಮಾಹಾತ್ಮೆಯನ್ನು ಜೇಳಿದರೂ ಇತಿಹಾಸದ ದೃಷ್ಟಿಯಿಂದ ವಿವೇಚನೆ ಮಾಡಿದರೆ ಈ ಕ್ಷೇತ್ರವು ರಜತಪೀಠಪುರವೆಂಬುದಾಗಿಯೂ ತಿಳಿ (ತಿಳಿಳ್ಳ) ಎಂಬುದಾಗಿಯೂ ತಿಳಿದು ಬರುತ್ತದೆ. ಈ ತಿಳಿಳ್ಳ ಗ್ರಾಮವು ಬಹಳ ವಿಶಾಲವಾಗಿತ್ತೆಂದೂ ಉದ್ಯಾವರ, ಮಲ್ಪೆ, ಕೊಡವೂರು, ಕುಂಜಿಬೆಟ್ಟು, ಚಿಟ್ಪಾಡಿ, ಬನ್ನಂಜೆ, ಸಗ್ರಿ, ಇಂದ್ರಾಣಿ ಇತ್ಯಾದಿ ಸ್ಥಳಗಳನ್ನು ಸೇರಿಕೊಂಡಿತ್ತೆಂಬುದಾಗಿಯೂ ಕಂಡು ಬರುತ್ತದೆ

ಆನಂದಗಿರಿ ವಿರಚಿತ ಶಂಕರ ವಿಜಯದಲ್ಲಿ ರಜತಪೀಠಪುರದ ಉಲ್ಲೇಖವಿದೆ. ಶ್ರೀ ಶಂಕರಾಚಾರ್ಯರ ಕಾಲದಲ್ಲಿ (ಕ್ರಿ. ಶ. 778—820) ಇಲ್ಲಿ ಶ್ರೀ ಕೃಷ್ಣರಾಧನೆಯು ಅನಂತೇಶ್ವರ ಶಿಷ್ಯಹಸ್ತಾಮಲಕರಿಂದ ಪ್ರಾರಂಭವಾಗಿತ್ತೆಂದು ಶಂಕರವಿಜಯದಿಂದ ತಿಳಿದು ಬರುತ್ತದೆ. ಶ್ರೀ ಮಧ್ವಾಚಾರ್ಯರ ಕಾಲದಲ್ಲಿ ಇಲ್ಲಿ ಕೃಷ್ಣಾರ್ಚನೆಯು ಮತ್ತಷ್ಟು ಬಲಗೊಂಡಿತು. ಉಡುಪಿಯಲ್ಲಿರುವ ಶ್ರೀ ಅನಂತೇಶ್ವರ ದೇಗುಲವು ಗಜಪೃಷ್ಠಾಕಾರವಾಗಿದ್ದು ರಚನೆಯಲ್ಲಿ ಏಕೈಕವೆನಿಸಿದ ದಕ್ಷಾರಾಮವನ್ನು ಹೋಲುತ್ತದೆ. ಶಿವಳ್ಳಿ ಎಂಬ ಹೆಸರು ಅಷ್ಟಂತೇಶ್ವರ ದೇಗುಲದ ಮೂಲಸ್ಥಾನ ದೇವರಾವೆ "ಶಿವ" ನಿಂದ ಬಂದಿರಬೇಕು. ಇದು ಕನಿಷ್ಟ ಪಕ್ಷ ಕ್ರಿ ಶ. 9ನೇ ಶತಮಾನದಷ್ಟು ಪ್ರಾಚೀನವೆನ್ನಲಡ್ಡಿಯಿಲ್ಲ. ಐತಿಹ್ಯ ಪ್ರಕಾರ ತಿಳಿದು ಬರುವಂತೆ ಇದು ಜೈನ ಬಸದಿಯೊಂದಿರದೆ ಮೂಲತಃ ಹಿಂದೂ ದೇವಾಲಯವೇ ಆಗಿದೆ. ಅಂತೆಯೇ ಅನಂತೇಶ್ವರ ದೇಗುಲದ ಎದುರಿಗೆ ಇರುವ ಚಂದ್ರೇಶ್ವರ ದೇವಾಲಯವು ಚಂದ್ರನಾಥ ಬಸದಿಯೂ ಆಗಿತ್ತೆಂದು ತರ್ಕಿಸಲಡ್ಡಿಯಿಲ್ಲ. ಸುಮಾರು ಕ್ರಿ. ಶ 9ನೇ ಶತಮಾನದ ವರೆಗೆ ಈ ದೇವಾಲಯದ ಸ್ಥಳವು ಕರೆಯೂಗಿದ್ದಿರಬೇಕೆಂದು. ಅನುಮಾನಿಸಲು ಒಂದು ಕಲ್ಲರಪವು ಇಂಬನ್ನೀಯುತ್ತದೆ. ಹಾಗಾದರೆ ಅದರ ನಂತರವೇ ಈ ದೇಗುಲದ ನಿರ್ಮಾಣವಾಗಿರಬೇಕು. ಶಿವಾಲಯವಾದ ಅನಂತೇಶ್ವರ ದೇವಾಲಯದ ಎದುರು ಕ್ರಿ ಶ. 9ನೇ ಶತಮಾನದಲ್ಲಿ ಒಂದು ಜೈನ ಬಸದಿ ನಿರ್ಮಾಣವಾಯಿ ತೆಂತರೆ ಅದನ್ನು ನಂಬಲಸಾಧ್ಯ. ಶ್ರೀ ಸುಮಧ್ವ ವಿಜಯದಲ್ಲಿ ಈ ದೇಗುಲವು ಇಂದ್ರದಿಗಾಲಯವೆನ್ನಲ್ಪಡ ತ್ತದೆ. (ನೂಡುದಿಕ್ಕಿನಲ್ಲಿರುವ ದೇವಾಲಯ) ಕ್ರಿ ಶ. 14ನೇ ಶತಕದ ಕಲ್ಬರಹಗಳಲ್ಲೂ ಅನಂತೇಶ್ವರ ದೇವತವನ್ನು ಪಡುವ ದೇವನೆಂದೂ ಚಂದ್ರೇಶ್ವರ ದೇವತವನ್ನು ಮೂಡದೇವನೆಂದೂ ಸಂದೋಧಿಸಿದೆ ಹೊರತು ಅನಂತೇಶ್ವರ ಮತ್ತು ಚಂದ್ರೇಶ್ವರ ಎಂಬ ಹೆಸರುಗಳ ಉಲ್ಲೇಖವೇ ಬಾರದಿಲ್ಲ

ಶಿವಳ್ಳಿಯು ಸುಮಾರು ಕ್ರಿ. ಶ. 7-8ನೇ ಶತಕಗಳಿಂದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಕಲಾಪಗಳಲ್ಲಿ ನಮ್ಮ ಜಿಲ್ಲೆಯಲ್ಲೇ ಪ್ರಖ್ಯಾತಿಯನ್ನು ಪಡೆದಿದೆ ಇದು ಪ್ರಾಚೀನ ಕಾಲದಿಂದಲೂ ಬ್ರಾಹ್ಮಣ್ಯಕ್ಕೆ ಹೆಸರು ವಾಸಿಯಾದ ಸ್ಥಳ ನೆಲ್ಲಿ ವಾಡಿನಲ್ಲಿ ಖ್ಯಾತಿವೆತ್ತ ಶಿವಳ್ಳಿ ಬ್ರಾಹ್ಮಣರ ಮೂಲ ಉಡುಪಿಯ ಶಿವಳ್ಳಿಯೇ ಆಗಿದೆ. ಇವರು ಮಧ್ವಾಚಾರ್ಯರ ಕಾಲದ ವರೆಗೆ ಸ್ಮಾರ್ತ ಮತ್ತು ಭಾಗವತ ಸಂಪ್ರದಾಯವಾದಿಗಳಾಗಿ ಅನಂತರ 'ವೈಷ್ಣವ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯ' ರಾದ ಶ್ರೀ ಆಚಾರ್ಯರಿಂದ ರುದ್ಧ ವೈಷ್ಣವರಾಗಿ ಪರಿವರ್ತಿತರಾದರು. ಇವರಲ್ಲಿ 300 ಕ್ಕೂ ಮಿಕ್ಕಿದ ಕುಲನಾಮಗಳು ಕಂಡು ಬರುತ್ತವೆ. ಶಿವಳ್ಳಿಯಲ್ಲಿ ದೇವೀ ಆರಾಧನೆಯೂ ಪ್ರಾಚೀನ ಕಾಲದಿಂದ ಬಳಕೆಯಲ್ಲಿದ್ದದ್ದು ಕಡಿಯಾಳಿಯ ಮಹಿಷ ಮರ್ದಿನಿ ವಿಗ್ರಹದಿಂದಲೂ ಇಂದ್ರಾಣಿಯು ಪ್ರಾಚೀನ ಕುರುಹುಗಳಿಂದಲೂ ತಿಳಿದು ಬರುತ್ತದೆ. ಉಡುಪಿಯು ಧಾರ್ಮಿಕ ಇತಿಹಾಸದಲ್ಲಿ ಪರ್ಯಾಯವು ಒಂದು ವಿಶಿಷ್ಟವಾದ ಸಮೂರಂಭ ರಾಜಕೀಯದಲ್ಲಿ ವಿಶೇಷ ವಾಗಿ ಉಡಪಿಯಲ್ಲಿ ನಿಡಂಬೂರು ಬೀಡು ವತ್ತು ಚಿಟ್ಪಾಡಿ ಬೀಡುಗಳೆಂಬೀ ರಾಜಸ್ಥಾನಗಳಲ್ಲದ್ದಂತೆ ಕಂಡು ಬರುತ್ತದೆ. ಈ ಬೀಡಗಳ ಪ್ರಾಚೀನ ಇತಿಹಾಸದ ವಿವರ ನಮಗೆ ಇಷ್ಟರ ತನಕ ದೊರಕಲಿಲ್ಲ.

ಉದ್ಯಾವರವು ಉಡುಪಿಯಿಂದ ಮೂರು ಮೈಲು ದಕ್ಷಿಣಕ್ಕಿದೆ. ಇದು ನಮ್ಮ ತುಳುನಾಡಿನ ಒರಿತ್ಯೆಯಲ್ಲಿ ಮಹತ್ವವನ್ನು ಪಡೆದ ಸ್ಥಳ. ತಾಮ್ರಶಾಸನಗಳಲ್ಲಿ ಇದು "ಉದಯಪುರ" 'ಒಡೆವೂರ' ಎಂಬುದಾಗಿ ಕರೆಯಲ್ಪಟ್ಟಿದೆ. ಇದರ ಇತಿಹಾಸವನ್ನು ನಿಸ್ಸಂಶಯವಾಗಿ ಕ್ರಿ. ಶ 8ನೇ ಶತಕಕ್ಕಾದರೂ ಕೊಂಡೊಯ್ಯಬಹುದು ಆಳ್ವಖೇಡ ತಾಮ್ರಶಾಸನದಲ್ಲಿ ಪ್ರಸ್ತಾಪ 'ಆಳುಪ' ಅರಸು ಮನೆತನದ ವೈಭವದ ರಾಜಕೀಯ ಕೇಂದ್ರವು 'ಉದಯಪುರ.' 'ಸಮೃದ್ಧನಗರ' ಎಂಬರ್ಥವನ್ನು 'ಉದಯಪುರ' ವೆಂಬ ಹೆಸರು ಕೊಡುತ್ತಿದೆ. ಇಲ್ಲಿ ನಮ್ಮಿನಾದಿನಲ್ಲೇ ಅತಿ ಪ್ರಾಚೀನವಾದ 'ಜಂಬು ಕಲ್ಲು ದೇವಿ'ತದ ಆಲಯದ ಪ್ರಾಚೀನ ಕುರುಹುಗಳೂ ಕರ್ನಾಟಕದಲ್ಲೇ ವಿಶಿಷ್ಟವೆನಿಸಿದ ಪಡೆಮ ಬಹುದಾದ ಶಿಷ್ಟ ವೈಶಿಷ್ಟ್ಯಗಳಿಂದ ಕೂಡಿರುವ ದೇಗುಲವೂ ದ್ವಿಬಾಹು ಗಣೇಶಾಲಯವೂ ಇವೆ. ಇವೆಲ್ಲಾ ಕ್ರಿ. ಶ 7-8-9ನೇ ಶತಕದ ದೇಗುಲಗಳು ಆಳುಪರ ಆರವನೆ ಕುರುಹುಗಳಿವೆ ಪ್ರಾಚೀನ ವೀರಗಲ್ಲುಗಳೂ ಶಾಸನಗಳೂ ಕಂಡು ಬರುತ್ತವೆ

"ಕಟ್ಟೆಪಾಡಿ" ಎಂಬ ಮೂಲ ರೂಪದಿಂದ ಕಟ್ಪಾಡಿ ಎಂಬ ಹೆಸರು ಬಂದಿರಬೇಕು. ಕಟ್ಪಾಡಿಯು ಸಮೀಪ 'ಮಟ್ಟು" ಎಂಬ ಊರಲ್ಲಿರುವ ಶ್ರೀ ಜನಾರ್ದನ (ಗೋಪೀನಾಥ) ದೇವಾಲಯವು ಸುಮಾರು ಕ್ರಿ ಶ. 11—12ನೇ ಶತಕಕ್ಕೆ ಅನ್ವಯಿಸುವಂಥದ್ದಾಗಿದೆ. ಪಾಂಗಳ ಎಂಬ ಊರಿನ ಮೂಲ ರೂಪವು "ಪಾನಂಗಳ್ಳು" ಎಂದಾಗಿದ್ದಿರಬೇಕು ಪಾಂಗಳವು ಒಂದು ಬ್ರಾಹ್ಮಣ ಕೇಂದ್ರ. ಜೊಕ್ಕಾಡಿಯು ಸುಮಾರು ಕ್ರಿ. ಶ 8ನೇ ಶತಕದ ಒಂದು ಶಿಲಾಲೇಖದಲ್ಲಿ 'ಜೊಕಿಪಾಳಿ" ಎಂಬ ಹೆಸರನ್ನು ಪಡೆದಂತಿದೆ

ಉಡಪಿಯಿಂದ 8—9ಮೈಲು ದೂರ ದಕ್ಷಿಣ ದಿಕ್ಕಿನಲ್ಲಿ ಕಾಪು ಇದೆ ಇದೂ ಸಾಕಷ್ಟು ಪ್ರಾಚೀನ ಊರು. ಶ್ರೀ ಮತ್ ಆಳುವರಸನ ಕ್ರಿ ಶ 8ನೇ ಶತಮಾನದ ಒಂದು ಶಿಲಾಲೇಖದಲ್ಲಿ ಕಾಪಿನ ಉಲ್ಲೇಖವಿದೆ. ಕಾವಲಿಗ ಪ್ರಸಿದ್ಧಿ ಪಡೆದ ಊರು ಇದಾಗಿರಬೇಕು ಚಾರಿತ್ರಿಕ ಪ್ರಕಾರ ಕಂವು ಒಂದು ರಾಜ್ಯ (ವೇಗನಾಡು, ಸೀಮೆ) ವಾಗಿತ್ತೆಂದೂ ಇದರ ಒಡೆತನ 'ಮರ್ಡಹೆಗ್ಗಡೆ" ಎಂಬ ಜೈನ ಧರ್ಮಾವಲಂಬಿಯಾದ ಪಾಳೆಯಗಾರನ ಕೈವಶವಿತ್ತೆಂದೂ ತಿಳಿದು ಬರುತ್ತದೆ. ಇಲ್ಲಿಯ ಶ್ರೀ ಜನಾರ್ದನ ಸ್ವಾಮಿಯ ದೇಗುಲವು ಕು

VISIT
SUKHA NIVAS
High Class Vegetarian Boarding and Lodging,
RASHTRAPATHI ROAD, SECUNDERABAD.
Gram SUKHANIVAS Phone 72723
UNDER THE MANAGEMENT OF
SREE ANANDA BHAVAN,
Rashtrapathi Road, Secunderabad
Our Rates are fixed to suit everybody

ಮೂರು 11—12ನೇ ಶತಕಕ್ಕೆ ಅನ್ವಯಿಸುವಂತಿದ್ದು ಶ್ರೀ ಜನಾರ್ದನ ಸ್ವಾಮಿಯ ಮೂರ್ತಿಯು ಪ್ರಾಚೀನ ಶಿಲ್ಪ ಶೈಲಿಯನ್ನು ಒಳಗೊಂಡಿದೆ. ಚಂದ್ರನಾಥ ಸ್ವಾಮಿಯ ಬಳಿಯಿರುವ ಸಂಪೂರ್ಣ ವಾಳು ವಿದ್ದಿದೆ. ದೇವೀ ಆರಾಧನೆಯು 'ವಾರಂಬ್ಯಮ್ಮ'ನ ರೂಪದಲ್ಲಿ ಇಲ್ಲಿ ಬಹು ಖ್ಯಾತಿ ಪಡೆದಿದೆ. ಇಳಿ ನಾಡಿನ ಏಳು ವೈಶಿಷ್ಟ್ಯಗಳಲ್ಲಿ 'ಕಾಸಿನ ಮೂರಿ ಸೂಜಿ' ಒಂದೆಂದು ಪರಿಗಣಿಸಲ್ಪಟ್ಟಿದೆ. ಕಾಸಿನ ಸಮೀಪವಿರುವ "ಮಲ್ಲಾರ್" ಎಂಬ ಊರು ಮಲ್ಲಗ ಅಧಿಕಾರದಿಂದ ಹೆಸರನ್ನು ಪಡೆದಿರಬೇಕು. ಇಲ್ಲಿ ಮಧ್ಯಕಾಲದ ಕೋಟೆ ಕೊತ್ತಲಗಳ ಕುರುಹುಗಳಿವೆ

ಕಾಸಿನಿಂದ ಮುಂದುವರಿಯುವಾಗ ಮೂಳೂರು ಸಿಗುತ್ತದೆ. ಕ್ರಿ ಶ. 10-11 ಶತಕಕ್ಕೆ ಅನ್ವಯಿಸುವ ಒಂದು ಶಿಲಾಲೇಖವು 'ಮೂಲಂಪುರಿ' ವೆಂಬ ಹೆಸರನ್ನೀಯುತ್ತದೆ. ಈ 'ಮೂಲಂಪುರಿ'ಯೇ ಕಾಲಾನುಗತಿಕವಾದಂತೆ ಬದಲಾವಣೆ ಹೊಂದಿ ಮೂಳೂರಾಗಿರಬೇಕು. 'ಮೂಲಾವುರಿ' ಎಂಬ ಕನ್ನಡ ಹೆಸರು ಹೇಗೆ ಬಂತೆಂಬ ಬಗ್ಗೆ ಯೋಗ್ಯ ಕಾರಣಗಳು ದೊರಕದಿದ್ದರೂ ಒಂದು ಅನುಮಾನವನ್ನಿಲ್ಲಿ ತಿಳಿಸಬಹುದು. ಮೂಳೂರಿನ ಸಮೀಪ ಕುಂಜೂರಿದೆ. ಇಲ್ಲಿ ಅತ್ಯಂತ ಭವ್ಯವಾದ ಮಹಿಷಾಸುರ್ದಿನಿಯ ದೇಗುಲವೊಂದಿದೆ. ಮಹಿಷಾಸುರನ ಕತ್ತರಿಸಿದ ರಂಡದ ಮೇಲೆ ದೇವಿ ನಿಂತಿರುವುದರಿಂದ, ಈ ದೇವಿಯನ್ನು ಮೂಲಾ ಲಕ್ಷ್ಮಿಯೆಂದಾಗಿಯೂ ಕರೆಯಬಹುದು. ಮೂಲಾ ಲಕ್ಷ್ಮಿಯ ಪೂರ್ವ "ಮೂಲಾಪುರ" ಮುಂದೂರು ಎಂದಾಗಬಹುದು. ಮುಂದೂರಿನ ಒಳಗೆ ಸುಮಾರು ಸಂಪೂರ್ಣವಾದ ಒಂದು ಬುದ್ಧನ ಚಿಕ್ಕ ದೇಗುಲವಿದೆ. ಇದನ್ನು ಮಾರಾಂದನೆಂದು ಬುದಾಗಿ ತಪ್ಪಾಗಿ ಲಂಚನೆ ಮಾಡುತ್ತಾರೆ ಈ ವಿಗ್ರಹವು ಸುಮಾರು 9—10ನೇ ಶತಮಾನದ್ದಿದ್ದು ನಮ್ಮ ನಾಡಿನಲ್ಲೇ ಕಲ್ಲಿನಿಂದ ಮಾಡಿದ ಏಕ ಮಾತ್ರ ಬುದ್ಧನ ಮೂರ್ತಿಯಾಗಿದೆ. ಬೌದ್ಧ ಧರ್ಮವು ನಮ್ಮ ಜಿಲ್ಲೆಯಲ್ಲಿತ್ತೆಂಬುದಕ್ಕೆ ಇದು ಒಂದು ಸಾಕ್ಷಿ.

'ಉಚ್ಚಿಲ'ವು ಉಚ್ಚಿಲವಾಗಿದ್ದಿರಬೇಕು. ಕ್ರಿ.ಪ 14-15ನೇ ಶತಕಗಳ ಕಲ್ಲಬರಹಗಳಲ್ಲಿ ಈ ಊರಿನ ಒಮಿಲಿನ ಉಲ್ಲೂರಿನಿಂದ ಬಂದ್ದಿಲಿದ ಶಿವಾಲಯವು ಪಡುಬೊಗವಾಗಿದ್ದುದಿಂದಲೆ ಸೈಭವದಿಂದಿದ್ದಿರಬೇಕು ಎಂದರೆ ಪುರಾಜೀವನ ಈಗ ಸ್ವಲ್ಪ ಮಟ್ಟಿಗೆ ಸಿಗುತ್ತದೆ. ಈ ದೇಗುಲದ ಗರ್ಭಗುಡಿಯು ಈಗ ಇರುವ ಶಿಖರ ಲಿಂಗವು ಅದರ ಸೋಪಾನ ಸಹಿತವಾದ ಮೂಲ ಜಾಗವನ್ನು ಬಿಟ್ಟಲ್ಲಿಲ್ಲ. ಅಂತೆಯೇ ಮೇಲಿನ ಕುರುಹುಗಳಿಂದಲೂ ಆನಕಲ್ಲುಗಳಿಂದಲೂ ನಂದಿ ಮಂಟಪ ಪಟಮಂಟಪ ಗಣೇಶನ ವಿಗ್ರಹದಿಂದಲೂ ಈ ದೇಗುಲವು ಎಷ್ಟೆಂದರೂ 10—11ನೇ ಶತಕದ್ದಿರಬೇಕೆಂದು ಹೇಳಬಹುದು. ನಂದಿಯ ಶಿಲ್ಪವು ಶಿಥಿಲದ (ಕೇಳ್ಕಾನೆಶ್ವರ) ನಂದಿಯ ಬೆರಿಯನ್ನು ಹೋಲುತ್ತದೆ.

ಎರ್ಮಾಳು 'ಏರುಮಾಳ' ವೆಂಬುದಾಗಿ ಶಾಸನಗಳಲ್ಲಿ ಲಿಪಿತವಾಗಿದೆ. ಏರುಮಾಳ ನ, ಒಂದು ರಾಜಬ್ಬಾನ ಇದರ ಒಡೆತನ ಮೂರನ್ನೆ ಹೆಗ್ಗಡೆಯು ಕ್ರಿ ಶ ಕೆಳಗಿನ್ನು. (ಈ ವನೆತನದ ಉತ್ತರಾಧಿಕಾರಿಗಳು ಕಲೂ ಮೂರನ್ನೆ ಹೆಗ್ಗಡೆ ಎಂಬ ನಾವ ಪೇಯನ್ನು ಹೊಂದಿದ್ದಾರೆ) ಎರ್ಮಾಳಿನ ಆರಾಧ್ಯ ದೇವತೆಯಾದ ಶ್ರೀ ಜನಾರ್ದನ ಸ್ವಾಮಿಯು ಮೂರ್ತಿಯಂತೀ ನುಧ್ವಾಚಾರ್ಯರ ಕಾಲದ್ದಿದ್ದು ಭವ್ಯವಾದ ಮೂರ್ತಿಯಾಗಿದೆ ಇವಕ್ಕೆಂದು ಪ್ರಾಚೀನ ಮೂರ್ತಿಯು ಭಿನ್ನವಾಗಿದೆ. ಈ ಮೂರ್ತಿಯು ಕ್ರಿ. ಶ. 10-11ನೇ ಶತಮಾನದ್ದಾಗಿದೆ. ಈ ದೇವಾಲಯದಲ್ಲಿರುವ ಶ್ರೀ ಗಣೇಶನ ವಲ್ಲಿನ ಚಿಕ್ಕದಾದ ವಿಗ್ರಹವು ಸ್ವಾರಕ್ಕೆ ಉಳಿದದ್ದು ಸುಮಾರು ಕ್ರಿ. ಶ 8—9ನೇ ಶತಮಾನಕ್ಕೆ ಅನ್ವಯಿಸಬಹುದಾಗಿದೆ. ಇಲ್ಲೇ ಆರಾಧಿಸಲ್ಪಡುತ್ತಿದ್ದಿರಬೇಕು ಇತಿಹ್ಯ. ಅಂತಾದರೆ ಈ ಮೂರ್ತಿಯು 'ಏರುಮಾಳ'ದ ಪ್ರಾಚೀನತೆಗೆ ಒಂದು ಸಾಕ್ಷಿ. 'ಏರುಮಾಳ'ದ ಚಂದ್ರನಾಥ ಸ್ವಾಮಿಯ ಬಸ್ತಿಯೂ ಸಾಕಷ್ಟು ಪ್ರಾಚೀನ ಮೂರ್ತಿಯು ಪದ್ಮಾಸನದಲ್ಲಿದ್ದು ಒಂದು ವರದ ಹಸ್ತ ಕಲ್ಲಿನಿಂದ ಮಾಡಲ್ಪಟ್ಟಿದೆ ಈ ವಿಗ್ರಹವು ಸಮದ್ರಾಕ್ಷಿ ದೊಡ್ಡಕ್ಕೆದ್ದೆಂದು ಒಂದು ಅಭಿಪ್ರಾಯ. ಎರ್ಮಾಳ ದೇವಸ್ಥಾನದಲ್ಲಿ ದೊರಕಿದ ಕ್ರಿ ಶ. 1402ರ ಶಿಲಾಲೇಖವು ಪ್ರಕಾರ ಯೆರ್ಮಾಳ ಅಜಂತಿಯಾದ ಮೂರನೆಯ ವರ್ಗಡೆಯರು ಆ ಊರಿನ ಶಿಲಾ ಪ್ರಜೆಜನನಿಗಳು ಯೆರ್ಮಾಳ ದೇವರ ವಾ ದನಮೂಲಿಗಳು ಯಿವರಿಲ್ಲರ ಕನುಸುತ ದಿಂದ ಅವರುಗಳು ಮುಂತಾಗಿ ಅಗಣ ಪಂಣಗಳು ಆಪಾದ ಮೂಲಿ ವಿಷ್ಣುನೆಲ್ಲಿ ನಾರಣನಲ್ಲಿ ಕೇಶವನೆಲ್ಲಿ ಯಿವರ ಗಳ ಕಯ್ಯಲ್ಲಿ ಉರ್ಧ ಹರಿಚ್ಛೇದವಾಗಿ ಮಾಳಿಯ ಹಣ ಸಹಿತವಾಗಿ ವೂಲ ಪಾಚ್ಛೇದವಾಗಿ ಧಾರಪೂರ್ವಕವಾಗಿ ಕೊಂಡ ಕ್ಷೇತ್ರದ ವಿವರವನ್ನೂ ಪ್ರಸ್ತುತಿನವೆಲ್ಲಿ "ಒಬ್ಬ ಬ್ರಾಹ್ಮಣನ ಭೋಜನಕ್ಕೆ ಅವನ ಮೇಲು ನೆಚ್ಚ ವೀಳ್ಯಕ್ಕೆ ದೇವರ ಹಾನೆಯಲಿಯಿದಕ್ಕ ಆಕ್ಕೆಯ ಮರ್ಯ್ಯಾದೆಯಲಿ ಪ್ರತಿ ವರ್ಷದಲಿ ಒಳ ಮೂಡೆಯೂ' ಸಲ್ಲುವ ವಿವರವನ್ನೂ ತಿಳಿಸುತ್ತವೆ.

ಇನ್ನೊಂದು ಶಿಲಾಲೇಖವು ದೇವಸ್ಥಾನದ ಪ್ರತಿ ನಡೆಯುವ ದೊಡ್ಡ ರಂಗ ಪೂಜೆಯ ವಿಷಯವಾಗಿಯೂ (ವೈಶಿಷ್ಟಕರವಾಗಿ ಸಲುವ ಸಂಕ್ರಾಂತಿಯ ದಿನಕ್ಕೆ) ಸಿಂಹ ಮಾಸದಲ್ಲಿ ದಿನ ಒಂದಕ್ಕೆ ಒಬ್ಬ ಬ್ರಾಹ್ಮಣ ಸಂತರ್ಪಣೆಯು ವಿಷಯವಾಗಿಯೂ ವರ್ಷಕ್ಕೆ ಇಷ್ಟು ದಿನಗಳಲ್ಲಿ ದಿನ ಒಂದಕ್ಕೆ ಇಷ್ಟು ಬ್ರಾಹ್ಮಣರ ಭೋಜನದ ವಿಷಯವಾಗಿಯೂ ವಿವರವನ್ನೀಯುತ್ತದೆ. ಇವಿಷ್ಟನ್ನು 'ದೇಶಾಧಿಕೃತಿಯೂ ಸ್ಥಾನದ ಕರ್ತರೂ ನಡೆಸಿ' ಬೇಕೆಂದೂ ತಿಳಿದು ಬರುತ್ತದೆ.

ಎರ್ಮಾಳಿನಿಂದ ದಕ್ಷಿಣಕ್ಕೆ ಮುಂದುವರಿಯುವಾಗ ನವಗೆ ಪಡುಬಿದ್ರಿ ದೊರಕುತ್ತದೆ. 'ಬಿದ್ರೆ' ಎಂದರೆ ಮೂಡಬಿದ್ರೆ; ಪಡುಬಿದ್ರಿ ಎಂದರೆ ಪಡುಬಿದಿರೆ ಎಂಬ ಹೆಸರು ಬಂತೆಂಬ ಜೈನ ಧರ್ಮಾವಲಂಬಿಗಳಾದ ಬಲ್ಲಾಳ ವಂಶೀಯರ ಆಧಿಕಾರದ್ದಿಂದ ರಾಜ್ಯವಿದು. ಪಡುಬಿದುದಿಯಲ್ಲಿ ಒಂದು ಮಹಾಲಿಂಗ ದೇವಾಲಯವು ಒಂದು ಬ್ರಹ್ಮ ಸ್ಥಾನವೂ ಇದೆ. ಇದಕ್ಕೆ ಸಂಬಂಧಿಸಿದ ಶಾಸನಾದಿ ದಾಖಲೆಗಳಾವುವೂ ಇಷ್ಟರ ವರೆಗೆ ದೊರಕಿಲ್ಲ. ಮಹಾಲಿಂಗ ದೇಗುಲದ ಗಣೇಶನ ವಿಗ್ರಹವು ಸುಮಾರು ಕ್ರಿ. ಶ 12—13ನೇ ಶತಕಕ್ಕೆ ಅನ್ವಯಿಸುವಂತಿದೆ. ಇಲ್ಲಿಯ ಬ್ರಹ್ಮ ಸ್ಥಾನದಲ್ಲಿ ವಿಶ್ವೇಶ್ವರಿ, ನಾಗ, ಬ್ರಹ್ಮ, ರಕ್ತೇಶ್ವರಿ ವರ್ತು ಕ್ಷೇತ್ರಪಾಲ ಶಕ್ತಿಗಳನ್ನು ಆರಾಧನೆ ಮಾಡುತ್ತಾರೆ. ಎರಡು ವರ್ಷಗಳಿಗೊಮ್ಮೆ 'ಧರ್ಮೆ ಬಲಿ' ಎಂಬ ವಿಶಿಷ್ಟವಾದ ಕಲಾರಂಭವು ಇಲ್ಲಿ ಜರಗುತ್ತದೆ ಬ್ರಹ್ಮ ಸ್ಥಾನ, ಆಲದೆಗಳು ತುಳುನಾಡಿನಲ್ಲಿ ಅನೇಕ ಕಡೆ ಇವೆ. ವಿಶಾಲ ಳದಲ್ಲಿಯೂ ಒಂದು ಆಲಡೆ ಇದೆ.

ಮೂಡ, ಪೂಡಿ ಎಂಬೀ ಪದದಿಂದ ಅಂತ್ಯವಾಗುವ ಊರ ಹೆಸರುಗಳು ಅನೇಕವಿವೆ —ತಿಲ್ಲಾಡಿ, ಜಾರ್ಮಾಡಿ, ಹೆರ್ಮುಡಿ, ಕಿರ್ಮಾಡಿ, ಹಜ್ಜಾಡಿ ಇತ್ಯಾದಿ. ಹೆಜ್ಜಾಡಿಯು ಪಡುಬಿದುರೆಗೂ ಮಣಿಪಲ್ಕೆಗೂ ನಡುವೆ ಸಿಗುವ ಪುರಾತನ ಊರು. ಇದಕ್ಕೆ ಮೂಲಾರ್ಥ ದೊಡ್ಡ ಊರೆಂದಾಗಬಹುದು. ಇಲ್ಲಿ ಸಿರಿಗಳ ಅಂಧ್ರನ ಗುಡಿಗಳಿವೆ.

ಮೂಲಿಕೆಯು ಒಂದು ಚಾರಿತ್ರಿಕ ಸ್ಥಳವಾಗಿದೆ. ಕ್ರಿ. ಶ 11ನೇ ಶತಕದಲ್ಲಿ ಇದು ದೊಡ್ಡ ಪಟ್ಟಣವಾಗಿತ್ತೆಂದು ಒಂದು ಶಿಲಾಲೇಖವು ತಿಳಿಸುತ್ತದೆ. ಈ ಊರನ್ನೊಳಗೊಂಡ ಪ್ರದೇಶವನ್ನು ರಾಜ್ಯವು 'ಸಾವಿರ' ಎಂಬ ವನೆತನದ ಜೈನ ಧರ್ಮಾವಲಂಬಿಗಳ ಆಳ್ವಿಕೆಯೊಳಗಿತ್ತು. ಕ್ರಿ. ಶ. 1400ರಿಂದ—ಕ್ರಿ ಶ. 18ನೇ ಶತಕದ ವನೆಗೆ ಈ ರಾಜವಂಶೀತನಗ ಕಲವು ಐತಿಹಾಸಿಕ ದಾಖಲೆಗಳು ನಮಗೆ ದೊರಕುತ್ತವೆ. ಈ ವನೆತನವು ಎಲ್ಲಿಂದ ಬಂತೆಂದು ಇಲ್ಲಿ ಅಧಿಕಾರ ಸ್ಥಾನಕ್ಕೆ ಬಂಡಿತೆಂಬುದು ಇನ್ನೂ ಸ್ಪಷ್ಟವಾಗಿ ತಿಳಿಯುವಾಗಿದ. ಐತಿಹ್ಯ ಪ್ರಕಾರ ಇವರು ಗಟ್ಟಿದ ನೀಲಣ ಹೊಂಬುಚ್ಚಿವಿಂದ ಬಲಸೆ ಎಂದರೆಂಗೂ ಇವರು ಅಲ್ಲಿಂ ಜನ್ಮತ್ತರಾಯನ ವಂಶಜರೆಂದೂ ತಿಳಿದುಬರುತ್ತದೆ. ಸಂಶೋಧನೆ ವಿಲಕ್ಷಣ ಹೆಚ್ಚಿನ ವಿಷಯ ತಿಳಿಯಬಹುದ.

ನಾವಂತರ ವನೆತನದ ರಾಜಕೀಯ ಕೇಂದ್ರವೆನೊದಲು ಮೂಲಿಕೆಯ ಸಮೀಪದಲ್ಲಿರುವ ತೆರೆಂತೂರು ಆಗಿತ್ತೆಂದೂ ನಂತರವಿವರ ಒಳ್ಳಂಗಡಿಗೆ ಬಂದಾಯಿತೆಂದೂ ಹೇಳಲಾಗುವುದು. ತಿಮಂತೂರಿನ ಶ್ರೀ ನಾರ್ಧನ ಸ್ವಾಮಿಯನ್ನು ವಂಶದ ಅಧಿದೇವತೆಯು. ಈ ದೇವತೆಯ ಹಿಂದಣ ವಿಗ್ರಹವು ಭಿನ್ನವಾಗಿದೆ. ಸುಮಾರು 3 ಅಡಿಗಳಷ್ಟು ಎತ್ತರವಿರುವ ಈ ಶಿಲಾ ವಿಗ್ರಹವು ನೈಜವಾದ ಶಿಲ್ಪವನ್ನೊಳಗೊಂಡಿದೆ. ತಿಮಂತೂರಿನ ಸಮೀಪ ಕುಮಾರಮಂಗಲವೆಂಬಲ್ಲಿ ಸಾಧಾರಣ 700 ವರ್ಷಗಳ ಹಿಂದಣ ಒಂದು ಸ್ಕಂದಾಲಯವಿದೆ. ಇದು ದ್ವಿಬಾಹು ಸ್ಕಂದ. ಫಲಿವೂರ, ಕು

(ಪತ್ತೊಂಭತ್ತನೇ ಪುಟ ನೋಡಿ)

MODERN
GARAGE
Estd. 1948
UDIPI
With
Service Station
attached
Undertakes
Overhauling &
Maintenance of
BENZ Vehicles
By Benz specialists
and all types of
cars and trucks
by qualified Engineers
Phone { 65 / 234
Residence 180

ನಮ್ಮ ಹೊಸ ತಯಾರಿಕೆಗಳು.

1) ಪುಷ್ಕರ ಮೂಲಾಸವ
2) ಬಿಲ್ವಾಸವ
3) ಬಾಲರಕ್ಷಕ ತೈಲ
4) ಮಂಜಿಸ್ಟಾದಿ ತೈಲ
5) ತ್ರಿಫಲಾದಿ ತೈಲ
6) ಕರ್ಪೂರ ಶಿಲಾಜಿತು ಭಸ್ಮ
7) ಕುಕ್ಕುಟಾಂಡ ತ್ವಕ್ ಭಸ್ಮ
8) ಚಂದ್ರಪ್ರಭಾ ಸ್ಪೆಷಲ್
9) ಸಂಜಮನೀ ವಟಿ
10) ನಿರ್ಮಲಾ ಟೂತ್ ಪೌಡರ್

ಅಲ್ಲದೆ ಇನ್ನು ಇತರ **250** ಆಯುರ್ವೇದೀಯ ಔಷಧಿಗಳನ್ನು ಕಳೆದ 40 ವರ್ಷಗಳಿಂದ ತಯಾರಿಸುತ್ತಿರುವೆವು.

ಕ್ರಯಪತ್ರಿಕೆಗೆ ವಿಚಾರಿಸಿ.
(ವೈದ್ಯ ವ್ಯವಸಾಯಿಗಳಿಗೆ ಉಚಿತ.)

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)
ಉಡುಪಿ (ದ. ಕ.)

ಐವತ್ತು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ
ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು



ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್ ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ

ಸುಗಂಧ ದ್ರವ್ಯಗಳೂ ಸಹಾ

ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

With best compliments from:

TAJ MAHAL GROUP OF HOTELS

Leading vegetarian hotels in the twin cities of Hyderabad & Secunderabad.

(A. P.)

HEAD OFFICE.

TAJ MAHAL HOTEL

88, Sarojinidevi Road, SECUNDERABAD.

'Grams:- "COURTESY"

Phones:- 73171 Office-
70105 (Connecting All rooms)

BRANCHES

TAJ MAHAL HOTEL

King Kothi Road,
(Abid Road)
HYDERABAD, A. P.

Grams:- "COURTESY"
Phones:- 35591 (Office)
38451 (--10 Lines)
Connecting All rooms.

TAJ MAHAL CAFE

University Road,
Himayathnagar,
HYDERABAD, A. P.

Grams - TAJCAFE"
Phones - 3300 (Office)
0210 (Lines)
Connecting all rooms

ನೈತಿಕ ಮೌಲ್ಯ ವಿಚ್ಛೇದನ

ಶ್ರೀ ಕೆ. ಜಿ. ಹೆಗಡೆ, ಬೊಂಬಾಯಿ

ಯಾವಾಯಿಯ ಮೌಲ್ಯ ವಿಚ್ಛೇದನ ಅನಪೇಕ್ಷಣೀಯವಾದರೂ ಈ ಉಪಾಖ್ಯಾನದಿಂದ ಭಾರತೀಯರು ನಿಳಟ ಭವಿಷ್ಯದಲ್ಲೇ ಬೇಕಾದಷ್ಟು ಕಲಿಯಲಿಕ್ಕಿದೆ; ಆದರೆ, ಇವತ್ತಿಂತ ಭೀಕರವಾದ ದುರ್ಘಟನೆ ನಮ್ಮ ನೈತಿಕ ಮೌಲ್ಯ ವಿಚ್ಛೇದನ! ಆದರಿಂದ ನಾವು ಚೇತರಿಸುವ ಬಗೆಯೆಂತು?

ನೆನ್ನು ದೇಶದ ರೂಪಾಯಿಯು ಅಪ ಮೌಲ್ಯವಾಯಿತು. ವಿದೇಶೀಯರೆ ವಿನಿ ಮಯ ವಿಚ್ಛೇದನ ಸಲುಹೆಯಂತೆ ನಮ್ಮ ಸರಕಾರ ಕೈಗೊಂಡ ಈ ಕಾರ್ಯ ನಾಡಿ ನ ಹೊಣಕಾಸಿನ ಪರಿಸ್ಥಿತಿಯನ್ನು ಸಂಪೂರ್ಣ ಕೆಡಿಸಿ ಬಿಟ್ಟಿತು! ಆರ್ಥಿಕ ಕ್ಷೇತ್ರದ ಲ್ಲಿ ಉಂಟಾದ ಈ ಅಧಃಪತನದಿಂದ ಬ ಹುಶಃ ಶಾಲಶ್ಯಮೇಣ ಪಾರಾಗಬಹುದು.

ಆದರೆ ಪ್ರಚಲಿತ ಜೀವನದಲ್ಲಿ, ಸನಾ ತನ ಭಾರತದಲ್ಲಿ ನೇತು ಬಿದ್ದ ನೈತಿಕ ಮೌಲ್ಯ ವಿಚ್ಛೇದನವೆಂಬ ಅಧಃಪತನದಿಂ ದ ಪುನರುತ್ಥಾನವಾಗೀತೇ ಎಂದು ವಿ ಚಾರವಂತರಿಲ್ಲಿ ಆಗತ್ಯ ಪರಿಶೀಲಿಸಬೇಕು.

ಎನಾದಿ ಕಾಲದಿಂದ, ಏನೂಚಾನವಾ ಗಿ ನಡೆದು ಬಂದ, ರಕ್ಷಿಸಿ ತಂದ ನಮ್ಮ ಆರ್ಷ ಸಂಸ್ಕೃತಿಯ ಈ ಪರಂಪರೆ ಇ ಪ್ಪತ್ತನೆಯ ಶತಮಾನದಲ್ಲಿ ಸಂಪೂರ್ಣ ನಾಮಾವಶೇಷವಾಗೀತೇ ಎಂಬ ಭಯ ನನಗೆ ಕಾಡುತ್ತಿದೆ. ಈ ಭೀತಿಗೆ ಕಾರಣ ವೇನು? ಕಲಿಯುಗದ ಕರಾಳ ಸ್ವರೂಪ, ಅವಗುಣ, ಅಸಲಕ್ಷಣಗಳೆಲ್ಲ ದೈನಂದಿನ ಬಮಕಿನಲ್ಲ ಗೋಚರಿಸುತ್ತವೆ. ಕೃತ, ತ್ರೇತಾ, ದ್ವಾಪರ ಯುಗ ಶಾಸ್ತ್ರ—ಪುರಾಣ ಗಳಲ್ಲಿ ನಮೂದಿಸಿದೆ. ಕಲಿಕಾಲ ಪಮೂಪಿಸುತ್ತಿದೆ.

ದೇವರು

ಕಾಡು ಮನುಷ್ಯ ನಾಡ ಮೂನವನಾ ಗಿ, ನಾಗರೀಕತೆಯ ಕಡೆಗೆ ಮೆಲ್ಲ ಮೆಲ್ಲನೆ ಹೆಜ್ಜೆ ಯಿಡಲು ಕಲಿಯುತ ಮೊದಲೇ ಅತ "ದೇವರು" ಎಂಬ ಅದಾವುದೋ ಶ ಕ್ತಿಯಿದೆಯೆಂಬ ಕಲ್ಪನೆಯನ್ನು ರೂಪಿಸಿ ದ್ದ. ಭಾವ ಪರವಶತೆಯಿಂದ ರೂಪವನ್ನು ನೂಡಿಸಿದ. ಈಶ್ವರನನ್ನು, ಸದಾತಿಪನ ನ್ನು ಕಂಡುಕೊಂಡ. ಕಾಡಾನೆಯನ್ನು ಯಂತ್ರದಿಂದೆರೋಧಿತಂತ್ರದಿಂದಲೋ, ಶಕ್ತಿ ಯಿಂದಲೋ ಯುಕ್ತಿಯಿಂದಲೋ ಪಳಗಿ ಸಿದ. ನೈಸರ್ಗಿಕ ಎಡರು ತೊಡರುಗಳನ್ನು ಇಯಿಸಿದ. ಸಾಮ್ಯವಿದ್ದಂತಶಕ್ತಿಗಳಲ್ಲಿ ಜಯ-ಪೀಲನಾದರೂ ಕೆಲವೊಂದು ಸಂಗ ತಿಗಳು ಅಸಾಧ್ಯವೆಂಬ ಮನವರಿಕೆ ಆವನಿ ಗಾಯಿತು. ಹರ್ಷಾತಿಶಯ ಸಾವಿರ ಪಾಲು, ಪಟ್ಟಿಕ್ಕಿ-ತಲೂ ಒಲು ಜೂರವಾದ ಬೇ ರೊಂದು ಶಕ್ತಿಯ ಪೆಟ್ಟಿಂಬುದನ್ನು ಕಲಿತ ನಂತರ, ಪ್ರಕೃತಿಯನ್ನು ಪಳಗಿಸಲು ಯು ತ್ನಿಸಿದರೂ, ಪದೇ ಪದೇ ವಿಕೃತಿ ಅವ ನನ್ನು ಎಚ್ಚರಿಸುತ್ತಿತ್ತು. ಮೂನವನ ನತಸ ವಿಚಾರ ವಿಮರ್ಶೆಗಳ ಫಲವಾಗಿ ವಿವೇಚ ಗೋಚರಿಸಿತು. ದೇವರ ಭಯ, ವೇ ಜ್ಞಾನದ ಆರಂಭವೆಂಬ ಮಾತು ಬಳ ಕೆಗೆ ಬಂದುದು ಈ ತೆರನಾಗಿ.

ನಿಜಕ್ಕೂ ಈ ಭಾವನೆಯನ್ನು ಪೊಷ ಪೊದಲು ಅನ ಭವಿಸಿದವನು ಮಹಾತ್ಮ ನೇ. ದೇವರೆಂಬ ಕಲ್ಪನೆಯನ್ನು ಮನುಕು ಲದಲ್ಲಿ ಬಿತ್ತಿದವನು ಪುಣ್ಯಾತ್ಮ. ಅವನಾ ರೋ? ಅವನನ್ನು ಮಿಂಚಿ ನಿಲ್ಲಿ ಬಲ್ಲ ನಿರೂ ಪಕ ಇನ್ನೂ ಹುಟ್ಟಿಲ್ಲ.

ಸಂಸಾರದಲ್ಲಿ ಈ ಮಹಾ ಕೋಧನೆ ಗಿಂತ ಶ್ರೇಷ್ಠವಾದ ನಿರೂಪಣೆ ಇನ್ನೂಂ ದಿಲ್ಲ. ಅಂದಿನಿಂದ ಇಂದಿಗೂ ಈ ಪ್ರಮೂ ಣ ಸೂತ್ರವನ್ನು ಎಲ್ಲಗಳೆಯುವ ವಿಚಾರ ತತ್ವ ಜನಿಸಿಲ್ಲ. ಈ ಸರಮ ಪರಿಕೋಧನೆ ಯೇ ಸತ್ಯ. ಈ ಸತ್ಯನೇ ದೇವರು. ಈ ದೇವರ ಜಾವತಳದಲ್ಲಿ ಜ್ಞಾನ ಬೀಜ ಮೊ ಳೆಯಿತು. ಮೊಳೆತು ಬೆಳೆಯಿತು. ಬೆಳೆದು ಹೂ ಬಿಟ್ಟಿತು. ಹೂವು ಹಣ್ಣಾಯಿತು. ರ ಸ ಭರಿತ ಹಣ್ಣು, ಹಣ್ಣು ರಸ ರಂಜನೀ ಯವಾಗಿ ಲೋಕಕ್ಕೆ ಮೂಸ್ಯವಾಯಿತು.

ಈ ದೇವರ ನಾಮದ ವಿಚಾರ ಸರಣಿ ಯಲ್ಲಿ ಸ್ವರ್ಗ - ನರಕಗಳ ಸೃಷ್ಟಿಯಾ ಯಿತು. ನೀತಿ—ಅನೀತಿಗಳ ನಿಶ್ಕರ್ಷೆ ಯಾಯಿತು. ಸತ್ಯ—ಅಸತ್ಯಗಳ ನಿರ್ಣಾ ಯ ಮೂಡಿತು. ಮೂನವೀಯತೆ ಹುಟ್ಟಿ ತು. ದೇವರೆಂಬ ಮಾತು ಬಂದಂತೆ ದೇ ವರಿಗೆ ಪ್ರಿಯವಾದುದೆಲ್ಲ ಸರಿ ಅಥವಾ ಸ ತ್ಯವೆಂದಾಯಿತು! ದೇವರಿಗೆ ಅಪ್ರಿಯ ವಾದುದೆಲ್ಲ ಅಸತ್ಯ ಅಥವಾ ಮಿಥ್ಯವೆಂ ಬ ಕರ್ಮ ಭಾಗ ಉದ್ಭವಿಸಿತು. ಒಳ್ಳೆಯ ಮತ್ತು ಕೆಟ್ಟ ಕೆಲಸಗಳ, ಆಚಾರ—ವಿ ಚಾರಗಳ, ನೇಮ—ನಿಯಮಗಳ ಪರಂ ಪರೆ ಬೇರೂರಿತು.

ಒಟ್ಟಿಗೆ ಸುಲಭದಲ್ಲೇನ್ ಬರಿದು ತಿಳಿಸು ವಂತೆ ಯಾವ ವಿಷಯ ದೇವರಿಗೆ ಅಪ್ರಿ ಯವಾಮದೆಂದು ಮನಸ್ಸಿನಲ್ಲಿ ನೂಡಿ ತೋ ಅದು ದಂಡನೀಯವೆಂಬ ಕಲ್ಪನೆ ಜೀವನದಲ್ಲಿ ಹಾಸು ಹೊಕ್ಕಿ ನೆಲೆ ನಿಲ್ಲು ವಂತಾಯಿ ತು. ಅನಾಚಾರ, ಅತ್ಯಾಚಾ ರ ಭ್ರಷ್ಟಾಚಾರಗಳ ಪ್ರತಿಫಲವನ್ನು ನ ರಕದಲ್ಲೂ ಅನುಭೋಗಿಸುವ ದಾಧಾರ್ಢ್ಯ ತಪ್ಪದು ಎಂಬ ಭಾವನೆ ಜನ ಜನಿತವಾ ದಂತೆ ದೇವರ ಭಯ ಹೆಚ್ಚಿತು. ಆದರೆ ಇಂದು ಸಿರೀಶ್ವರವಾದಿಗಳ ತರ್ಕ ಸಿದ್ಧಾಂ ತಗಳಿಂದ, ಅವಿಚಾರ ವೈತಿಷ್ಟ್ಯಗಳೆ ಪರಿ ಣಾಮದಿಂದ ಈ ಪವಿತ್ರ ಭಾವನೆಯ ಭಯವೇ ಮೂಸನಸ್ಸಿಂದ ಆಳದು ಹೋ ಯಿತೆಂದಾಗ ನೈತಿಕ ಮೌಲ್ಯ ವಿಚ್ಛೇದ ನೆಯ ಪುನರುತ್ಥಾನ ಸಾಧ್ಯವೇ?

ಧರ್ಮದ ಉಗಮ

ದೆವ್ವ — ದೇವರುಗಳ ಹಿನ್ನೆಲೆಯಲ್ಲಿ ಧರ್ಮದ ಜಾಗಮಾವಾಯಿತು. ಶಾಸ್ತ್ರ—ಪುರಾಣಗಳ ರಚನೆಯಾಯಿತು. ಧರ್ಮ —ಅಧರ್ಮಗಳ ಪರಾಮರ್ಶೆಯೂಗಿ ನಾ ನಾ ಒಗೆಯ ಧರ್ಮ ವಿಮೂಷಣೆಗಳ, ತತ್ವ—ಪತತತ್ವಗಳ ಸೂತ್ರ ಸಂಸ್ಕಾರಗಳ ತುಲನೆಯಾಯಿತು. ಶ್ರೇಷ್ಠ ಮತ್ತು ನಿ ಕೃಷ್ಟ; ಉತ್ತಮ ಮತ್ತು ಅಧಮಗಳೆಂಬ ಮಾರ್ಗದರ್ಶನ ಬಂತು. ಪೂಜೆ, ಪುನ ಸ್ಕಾರ, ಪರಿಸ, ನಿಯಮನ ಮತ್ತು ಪ್ರಶ ರಣ ಬಳಕೆಗೆ ಬಂತು. ದೇವರಿಲ್ಲದ ಬದು ಕು ಬರಿದು. ಕಂತೆಯೇ ಧರ್ಮವಿಲ್ಲದ ಜೀವನ ಅಥವಾ ಸಂಸಾರ ಶೂನ್ಯ ಸದೃಶ ವಾದುದು ಎಂಬ ಪ್ರವೃತ್ತಿ ಜನ ಜೀವನದ ಲ್ಲಿ ಬೆಳೆಯಿತು. ಧರ್ಮ— ದೇವರಗಳ ಆವರಣದಲ್ಲಿ ಸುಳ್ಳು, ಮೋಸ ವಂಚನೆ ಮುಂತಾದುವೆಲ್ಲ ಪಾಪ ಅಥವಾ ಅಧಾ ರ್ಮಿಕವೆಂದು ಬಗೆಯಲಾಯಿತು. ಧರ್ಮ ಮತ್ತು ದೇವರುಗಳಿಗೆ ಅಪ್ರಿಯವಾದ, ಅನೈತಿಕವಾದ ಕಾರ್ಯಗಳನ್ನು ಮೂಡ ಕೂಡದು ಎಂಬ ಭಯ ಸಮೂಜದಲ್ಲಿ ಬೇ ರು ಬಿಟ್ಟಿತು.

ಧರ್ಮದ ಹೆಸರಿನಲ್ಲಿ, ಈ ಜಗತ್ತಿನಲ್ಲಿ ಅನೇಕಾನೇಕ ಹತ್ಯಾಖಾಂಡಗಳಾಗಿವೆ! ಧರ್ಮದ ರಕ್ಷಣೆಗಾಗಿ ಜ್ಞಾನಕಾಂಡಗಳ ಪರಿಕಿ ಕಂಬಿನೆ. ವಿವೇಕಾವಿವೇಕಗಳ ತುಮುಲ ಸಂಘರ್ಷಣೆಯಿಂದ, ಧರ್ಮ ರಕ್ಷಣೆಯೆ ಎಂಬುದು ಜೀವ ಅಥವಾ ಆತ್ಮ ರಕ್ಷಣೆಗಿಂತಲೂ ಶ್ರೇಷ್ಠವೆಂದು ಸಿದ್ಧಾಂತ ವಾಗಿದೆ. ದೇವರ ಭಯದ ಹಿಂಬಾಗಿಲಲ್ಲಿ ಧರ್ಮದ ಭಯ ಮೂನವನಲ್ಲಿ ಉಳಿದಿತ್ತು. ಆದರೆ ವಿವಿಧ ಧರ್ಮಾನುಮತಗಳ ಸಂ ಗಮ—ಸಂಘರ್ಷಣದಿಂದಾಗಿ ಧಾರ್ಮಿಕ ಮೌಲ್ಯಗಳೆಲ್ಲ ಮೂನವನ ದೃಷ್ಟಿಯಲ್ಲಿ ಅಪಮೌಲ್ಯವನ್ನು ಕಾಣುವಂತಾಯಿತು.

ಸಮೂಜದ ಲಗಾಮು

ಧರ್ಮ ದೇವರುಗಳ ಪಡಿನೆಳಲಲ್ಲೂ ಸ್ವೇಚ್ಛಾಚಾರಿಯಾಗಿ ನಡೆಯುತಿದ್ದ ಮೂ ನವನಿಗೆ ಸಮೂಜ ಲಗಾಮು ತೊಡಿಸಿತು. ಹುಟ್ಟು ಸಾವುಗಳಿಗೊಂದು ನಿಯಮಿತ ಸಂಸ್ಕಾರ. ಮದುವೆಮುಂಜಿಗಳಿಗೆಲ್ಲ ವಿವಿ ಧ ಪರಿಷ್ಕಾರ. ಸುಃಖ—ದುಃಖ ಭಾವ ವಿಶೇಷತೆಗಳಿಗೆಲ್ಲ ಸಮ ತೋ ರಿದ ಅವಿಷ್ಕಾರ— ಮುಂತಾದ ಕ್ರಿಯೂ ವಿಧಿಗಳೆಲ್ಲ ಸಮೂಜದ ಚೌಕಟ್ಟಿನ ಲ್ಲಿ ಕೂಡಿದುವು. ಹುಟ್ಟಿದ ಮಗುವನ್ನು ತೊಟ್ಟಿಲು ಸೇರಿಸಬೇಕಾದರೆ, ನಾಲ್ಕು ಜ ನ ಹಿಕವರನ್ನೇ ಸಂಬಂಧಿಕರನ್ನೋ, ನೆ ರೆಕರೆಯವರನ್ನೋ ಕರೆಯ ಬೇಕು. ಹೇಳಿ—ಕೇಳಿ ಜರಗಿಸಬೇಕು. ಹುಟ್ಟು—ಎಂದೇನು? ಜನನದಿಂದ ಮರಣದ ತನ ಕವೂ—ಸಾವಿನ ಬಳಿಕವೂ ಒಕ್ಕೂಟ, ಬ್ರಾಹ್ಮಣ, ನರ್ತನ, ಪೇಯನ, ಗಾಯನ—ಸಮೂರಂಭ ಸತ್ಕಾರ ಕೂಟಗಳು ನೇನು ನಿಯಮಗಳಂತೆ ಸಾಗಬೇಕು. ಈ ಕಟ್ಟು ಕಟ್ಟಳೆ ಸಮೂಜದ ವೈಯುಕ್ತಿಕ ಜೀವನ ದಲ್ಲೂ ಹಾಸು ಹೊಕ್ಕಿತು.

ದೇವರೆ ಯಂದಿಯಲ್ಲಿ ನೂರಾರು ದೇ ವ—ದೇವಿಯರು ಸೃಷ್ಟಿಯಾಯಿತು. ಧ ರ್ಮದ ಜೊತೆಯಲ್ಲಿ ವಿವಿಧ ಅಥವಾ ಭಿ ನ್ನ ಧರ್ಮಗಳ ಜನನವಾಯಿತು. ಧರ್ಮ ಪಾಲಕರು ಪೀಳಿಗೆ ಬಂತು. ಪೂಜಾರಿಗಳ ಬಳಗ ಬೆಳೆಯಿತು. ದೇವರು ಧರ್ಮದ ಬೆಂಬಲವಾಗಿ ಸಮೂಜ ಸಾರ್ವಜನಿಕ ಜೀವನದಲ್ಲಿ ಎಸೆದ ಕಠಿಣಾತಿ ಬಲವಾದ ಪರಿಣಾಮ ಮತ್ತು ಪ್ರಭಾವವನ್ನೂ ಬೀ ರಿತು. ದೇವರ ಪುಥಾಗಿಗಳು, ಧರ್ಮ ರ ಕ್ಷಕರು ಮತ್ತು ಸಮೂಜದ ಧುರೀಣರು ಯೂ ಶ್ರೇಷ್ಠರು ಈ ತ್ರಿಕೋಣ ಭಾವಿಕ ಸಂಸ್ಥೆಯು ಅಡಿಪಾಯವನ್ನು ಭದ್ರಗೊಳಿಸಿದರು. ಈ ಪರಿಕ್ರಮ ಸುಮಾರು ಸಾವಿರಾರು ವರ್ಷ ನಡೆದು ಬಂತು.

ಆದರೆ ಈಗಿನ ಶಿಕ್ಷಣ, ನ್ಯಾಯ ಅ ನ್ಯಾಯಗಳ ನಿರ್ಧಾರ ವಿಮರ್ಶೆ— ಶಾಸ ನ ಮತ್ತು ದಂಡನೆಗಳ ಪರಿವರ್ತನ— ಸ್ವಾತಂತ್ರ್ಯ— ಮುಂತಾದುವುಗಳ ಪರಿ ಣಾಮದಿಂದಾಗಿ ಸಮೂಜ ಮುನಿದೀತು ಎಂಬ ಭಯ ಯಾವ ವ್ಯಕ್ತಿಗಿದೆ? ತಾನು ಅಥವಾ ನಾನು, ಎಂಬವನೊಬ್ಬ ಸಮೂಜ ದ ಘಟಕ—ಪೀಠದ ಒಂದು ಅಡಿಗಲ್ಲು ಎಂಬ ಭಾವನೆಯ ಸತ್ಯಾರ್ಥ ಸಂಪೂರ್ಣ ನಾಶವಾಯಿತು. ಸಮೂಜವನ್ನೇ ಸೃಷ್ಟಿಸಿ ದವನು ನಾನು! ನಾನೇಕೆ ಸಮೂಜದ ಕ ಟ್ಟು ಕಟ್ಟಳೆಗಳಿಗೆ ತಲೆ ಬಾಗಬೇಕು; ಬಿ ದರಿ ಬೇಕು ಎಂಬುದು ಸ್ವಾತಂತ್ರ್ಯ ಮೂ ನವನ ಚಿಂತನೆಯಾಯಿತು. ಸಮೂಜಕ್ಕೆ ತಾನು ಹೆದರುವ ಬದಲು, ಸಮೂಜವ ನ್ನೇ ಟೀಕಿಸುವಷ್ಟು, ಬೆದರಿಸುವಷ್ಟು ವಾ ಕ್ ಸ್ವಾತಂತ್ರ್ಯ ಅವನಿಗೆ ದಕ್ಕಿತು.

ಈ ತಿನಿಸುಮಿತ ಸ್ವಾತಂತ್ರ್ಯದ ಫಲ ವಾಗಿ ಸಮೂಜದ ಶಕ್ತಿಯೆಲ್ಲ ಅದೃಶ್ಯವಾ ಯಿತು. ಹಿಂದೊಂದುದಿನ ಸಮೂಜ ಪ್ರತಿಯೊ ಬ್ಬ ವ್ಯಕ್ತಿಯನ್ನೂ ತನ್ನ ಜಂಕಿತದೊಳಗೆ ಇ ಟ್ಟುಕೊಂಡು ಕುಣಿಸುತಿತ್ತು. ಈ ಬಂಧ ನದಿಂದ ವಿಮೋಚನೆ ಕಠಿಣವಾಗಿತ್ತು. ಆದರೆ ಕಾಲ ಬದಲಾದಂತೆ ಸಮೂಹದ ಸಂಘಟನೆಯಲ್ಲಿ ವಿಚ್ಛೇದನವಾಯಿತು. ಜಾತಿ ವಿಜಾತಿಗಳ ಸಂಗಮ ನೆರವೇರಿತು. ಮೂನವನೀಗ ಸರ್ವತಂತ್ರ ಸ್ವತಂತ್ರನಾ ದ. ದೇವರು, ಧರ್ಮ ಮತ್ತು ಸಮೂಜಗ ಳೆಂಬಈ ಮೂರು ಪ್ರತಿಸ್ಪರ್ಧಿಗಳಿಂದಲೂ ಆತ ನಿವೃತ್ತನಾದ. ಅವನ ಮನಸ್ಸಿಗೆ ಸರಿಯೆಂದು ತೋರಿದ ಸೂತ್ರವೇ ಸುವ ರ್ಣಸೂತ್ರವಾಯಿತು. ವೇದವಾಕ್ಯಗಳೆಲ್ಲ ಕಂತೆ-ಪುರಾಣವಾಯಿತು.!

ತಂದೆ—ತಾಯಿ ಮತ್ತು ಗುರು ಹಿರಿಯರು

ಮೂನವನ ಬಾಳಿನಲ್ಲಿ, ಬಾಲ್ಯದಿಂದ ಅಂದರೆ ಪೊತ್ತ ಮೊದಲು ಮಗುವಿನ ಭಾವನೆಯನ್ನು ಕೆರಳಿಸಿ ಏನಾದರೊಂದು ವಿಷಯ ತುಂಬುವವಳು ತಾಯಿ. ತಾ ಯಿ ತನ್ನ ಕೂಸಿಗಾಗಿ, ಅದರ ಉಜ್ವಲ ಭವಿಷ್ಯಕ್ಕಾಗಿ ಬೇಕು ಬೇ ಕಾದುದನ್ನೆಲ್ಲ ಮೂಡ ಬಯಸುವಳು. ಅರ್ಥಾತ್ ಮೂ ತಾಪಿತೃಗಳ ಪರಿಸರದಲ್ಲಿ ಮೊದಲ ಸಾಂ ಸ್ಕೃತಿಕ ಶಿಕ್ಷಣ ಸಂಸ್ಕಾರವಾಗುವುದು.

ಈ ಎರಡು ವ್ಯಕ್ತಿಗಳ ಪ್ರತಿಬಿಂಬ. ಶೀಲ—ಗೀಲ, ನಡತೆ-ಗಿಡತೆ ಪ್ರತಿಯೊಬ್ಬನಲ್ಲೂ ಜನ್ಮಾರಭ್ಯ, ಜೀವನಾ ರಭ್ಯ ಮನೆಮಾಡುವುವು. ಮತ್ತು ಉಳಿ ದವುಗಳನ್ನು ಗುರು ಹಿರಿಯರು ತುಂಬುವರು. ಈ ಜ್ಞಾನ ಸಂಪುಟ, ಸಲಹಾ—ಸಂ ಕೀರ್ತನ ಅವನ ಅನುಪಹರಿತ ಐಶ್ವರ್ಯ. ಭಾರತೀಯ ಸಂಸ್ಕೃತಿಯ ಅಳತೆಗೋ ಲಿನಲ್ಲಿ ಮೂತಾ ಪಿತೃಗಳ ಋಣ ಮಹ ತ್ತರವಾದುದು. ಗುರುಹಿರಿಯರ ಸಂದೇಶ ಮತ್ತು ಶಿಕ್ಷಣ ಅಮೂಲ್ಯವಾದುದು. ಆ ದರೆ ಪಾಶ್ಚಾತ್ಯ ಶಿಕ್ಷಣ ಸೂತ್ರಗಳಿಂದ,

ವಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಿಂದ ಈ ವಿಚಾರ ಸರಣಿಯುಳ್ಳ ನವ್ಯ ಪಿಳಿಗೆಯ ಭಾವನೆಯ ನೆಲಗಟ್ಟೇ ಶಿಥಿಲವಾಗಿದೆ. ಈ ಚತುರ್ವರ್ಣಗಳಿಗೆ ಸಲ್ಲಬೇಕಾದ ಭಕ್ತಿಗೌರವ, ಭಯ, ಭಕ್ತಿ, ಸನ್ಮಾನ ಮತ್ತು ಸೇವೆಗಳ ವಿಚಾರವೆಲ್ಲ ಈಗ ಕಳಂಕದಿಂದ ತುಂಬಿದೆ ವಿಧೇಯತೆ, ವಿನಯ ಶೀಲತೆ, ಕಾರ್ಯ ತತ್ಪರತೆ ಮತ್ತು ನವ್ರತೆಗಳು ಮಾಯವಾಗಿವೆ. ವಿನಯ ಎಂಬುವದು ಶಿಷ್ಟಾಚಾರದ ಒಡನೆಯಾಗಿದೆ. ತಂದೆ ತಾಯಿಗಳ ಭಯವಿಲ್ಲ, ಗುರು ಹಿರಿಯರ ಭೀತಿಯಲ್ಲ. ದೇವರು, ಧರ್ಮ ಸಮಾಜಗಳ ಪರಮೋತ್ಕರ್ಷ ಭಯೋ ಗುಣಗಳನ್ನು ಕಬಳಿಸಿದ ಮಾನವ ಈ ನಾಲ್ವರು ಸಾಂಸಾರಿಕ ಯತಿ ಪುಂಗವರನ್ನು ಖಂಡಿಸದೆ ಬಿಟ್ಟಾನೇ?

ನೀತಿಯ ಚೌಕಟ್ಟು

"ಕಳ ಬೇಡ, ಕೊಲ ಬೇಡ, ಹುಸಿಯನುಡಿಯಲು ಬೇಡ"—ಎಂಬ ಬಸವಣ್ಣನವರ ಆತ್ಮಕ ವಚನದಂತೆ ಸಾಂಸ್ಕೃತಿಕ ಬೆಳವಣಿಗೆಯೊಂದಿಗೆ, ನಾಗರೀಕತೆಯ ಪ್ರಗತಿಯೊಂದಿಗೆ ನೀತಿಯ ಚೌಕಟ್ಟು ಮಾನವನ ಹೆಜ್ಜೆ ಹೆಜ್ಜೆಯನ್ನು ಬೆಂಬಲಿಸುತಿತ್ತು. ನಾನು ಹೀಗೆ ಮಾಡಬಹುದೇ? ಹಾಗೆ ಮಾಡುವುದು ಸರಿಯೇ? ದೇವರು ಒಲಿದಾನೇ? ಮುನಿದಾನೇ? ಧರ್ಮ ಬಾಹಿರನಾಗುವೆನೇ—ಧರ್ಮ ರಕ್ಷಿಸೀತೇ? ಸಮಾಜ ಒಪ್ಪುವುದೇ? —ಸಮಾಜ ಶಾಪ ಕೊಡುವುದೇ—ಮಾತಾಪಿತೃಗಳ ಗೌರವಕ್ಕೆ ಕುಂದು ಬಂದೀತೇ—ಗುರು ಹಿರಿಯರ ಆಜ್ಞೆ — ಕಟ್ಟಪ್ಪಣೆಗಳನ್ನು ದಾಟಬಹುದೇ—ಹೀಗೆಲ್ಲ ಮನುಷ್ಯನ ಆಂತರಾತ್ಮದಲ್ಲಿ ವಿಚಾರ ಮಂಥನ ಜರಗಿದಾಗ ವಿವೇಕ ಅವನಿಗೆ ಮಾರ್ಗದರ್ಶನ ಮಾಡುತ್ತಿದೆ. ಯಾವುದು ಸರಿ; ಯಾವುದು ತಪ್ಪು ಎಂಬ ನೀತಿ—ಸನ್ಮತಿ ಅವನನ್ನು ರಕ್ಷಿಸುತ್ತದೆ.

ಆದರೆ ವಾಸ್ತವಿಕವಾಗಿ ಅಸತ್ಯವೇ ಬಹು ಜನರ ಜೀವನ ಮಂತ್ರವಾದಾಗ ಸತ್ಯಕ್ಕೆ ಬೆಲೆ ಎಲ್ಲಿಂದ ಸಿಕ್ಕೀತು? ನೀತಿಯ ರೂಪರೇಷೆಗಳೆಲ್ಲ ತಿರುಗು ಮುರುಗಾದಾಗ ಶ್ರೀಮಾನ್ ಸತ್ಯವಾದಿ ಹೇಗೆ ನಿರ್ಮಲ ಬದುಕನ್ನು ಸಾಗಿಯಾನು? ಸತ್ಯೇ ಹೋಗುವನು. ಸತ್ಯಮೇವ ಜಯತೇ ಎಂಬ ನೀತಿಯನ್ನು ಆತ ಒಲ್ಲನಾದರೂ ಬಾಳಿನ ಹೋರಾಟದಲ್ಲಿ ಅಸತ್ಯ ಮೇವ ಜಯತೇ ಮೊತ್ತ ಸರ್ವಶ್ರುತವಾದಾಗ ನೀತಿ ಅನೀತಿಗಳ ನಿಸ್ಕರ್ಷೆ ಹೇಗೆ ಮಾಡಿಯಾನು? ಸಂಗತಿಯ ಪ್ಕೆ. ಯಾರು ಬದುಕುಬಾಳ್ವೆಯನ್ನು ನೀತಿಯ ಚೌಕಟ್ಟಿನಲ್ಲಿ ಬೆಳೆಸಿ ಬಂದನೋ ಆತನಿಂದು ಸದಾ ದುಃಖ ಕಷ್ಟ—ನಷ್ಟಗಳನ್ನು ಅನುಭವಿಸಬೇಕಾದ ಪ್ರಸಂಗ ಬಂದಾಗ ಅನೀತಿಯೇ ಬಹುಜನ ನೀತಿಯೆಂಬ ವಿದಿತವಾಗದೆ ಉಳಿದೀತೇ? ಹೀಗಾಗಿ ನೀತಿ ಭೃಷ್ಟನಾದೇನೆಂಬ ಭಯ ಅವನಲ್ಲಿ ಎಳ್ಳಷ್ಟೂ ಇರದು; ಕಿಂಚಿತ್ತೂ ಕಾಡದು.

ಮಾನವೀಯತೆ

ಭಾರತೀಯ ಸಂಸ್ಕೃತಿಯ ವಿಶಾಲತೆ, ವಿವಿಧತೆ, ಪರಮತ—ತತ್ವ ಸಹಿಷ್ಣುತೆ ಮತ್ತು ಮಾಹಾತ್ಮ್ಯ ಅಗಾಧವಾಗಿದೆ, ಅಸಮಾನವಾಗಿದೆ. ಜಗತ್ತಿನಲ್ಲೇ ಎಂದನೀಯವಿದೆ. ದೇವರನ್ನು ನಂಬಲಿ; ಬಿಡಲಿ. ಧರ್ಮವನ್ನು ಪಾಲಿಸಲಿ; ತ್ಯಜಿಸಲಿ. ಸಮಾಜದ ಆಶ್ರಯವಿರಲಿ; ಇಲ್ಲದಿರಲಿ. ತಂದೆ-ತಾಯಿ, ಗುರು-ಹಿರಿಯರ ಸೈವಾಡ ಇರಲಿ; ಹೋಗಲಿ.ನೀತಿಯೇ ಭಾರತೀಯ ಸಾಂಸ್ಕೃತಿಕ ನೆಲೆಗಟ್ಟು. ಈ ವಿನೂತನ ಸಂಸ್ಕೃತಿ ಮಾನವೀಯತೆಗೆ ಬಹಳ ಪ್ರಾಧಾನ್ಯವನ್ನು ಕೊಟ್ಟಿರುತ್ತದೆ. ಮನುಷ್ಯ ಎಲ್ಲಾದರೂ ಇರಲಿ. ಎಂತಾದರೂ ಇರಲಿ. ಮಾನವೀಯತೆಯನ್ನು ಮರೆಯದಿರಲಿ ಎಂಬ ನೀತಿ ಅವನನ್ನು ಹಿಂಬಾಲಿಸುತ್ತದೆ. ಈ ಮಾನವೀಯತೆಯನ್ನು ಅನೂಚಾನವಾಗಿ ನಂಬಿ ಬಂದ ಮಾನವನಿಗೆ ಆ ಮಾನವೀಯತೆಯನ್ನೇ ಆಶ್ರಯಿಸಬೇಕಾದ ಪ್ರಸಂಗ ಬಂದರೆ, ಲೋಕದಲ್ಲಿ ಅಮಾನುಷತೆ ತಲೆದೋರದಿದ್ದೀತೇ?

"ಸುಳ್ಳು; ಹಸಿ ಹಸಿ ಸುಳ್ಳು; ಶುದ್ಧ ಸುಳ್ಳು. ಸತ್ಯ ಹೊರ ಸತ್ಯ; ಶ್ರಿಕಾಲಾಭೌಧಿತ ಸತ್ಯ" ಮುಂತಾಗಿ ನೀತಿಯುಲ್ಲೇ ಅಸಮೌಲ್ಯವಾದಾಗ ವಿವೇಕ ನಿರ್ವಿಕಲ್ಪ ಸಮಾಧಿಯನ್ನು ಕಂಡರೆ ಆಶ್ಚರ್ಯವಿಲ್ಲ!

ಜಾತಿ ಕೆಟ್ಟರೂ ನೀತಿ ಕೆಡಬಾರದು—ಎಂಬ ಗಾದೆಯಿದೆ. ಈ ಮಾತಿನ ಮಹತಾರ್ಥ ಇಷ್ಟೆ. ಜೀವನದಲ್ಲಿ ಎಲ್ಲ ಗುಣ ನಿಯಮ ವಿಶೇಷಣಗಳಲ್ಲಿ ನೀತಿಗೆ ಪ್ರಾಧಾನ್ಯ ಮತ್ತು ಪ್ರಣಾಮ ಸಲ್ಲುತ್ತದೆ. ಈ ನೀತಿಯೇ ಇಂದು ಯದಾರ್ಥತದ್ವವಾಗಿದೆ.

ವಿನಾಶ ಇಲ್ಲಿ ನೆ ವುನರುತ್ಥಾನ

ನೀತಿಯೆಂದರೆ ಏನು? ಈ ಸಂಸ್ಕೃತ ಶಬ್ದಕ್ಕೆ ಸಮಾನಾದ ಶಬ್ದ ಇಂಗ್ಲೀಷು ಭಾಷೆಯಲ್ಲೇ ಇಲ್ಲವಂತೆ. ಪಾಶ್ಚಾತ್ಯ ಭಾಷೆಗಳಲ್ಲೇ ಇಲ್ಲ! ಕಾರಣ ನೀತಿಯೆಂಬುವದು ಜಗತ್ತಿಗೆ ಭಾರತೀಯ ಕೊಡುಗೆ. ಪೌರ್ವಾತ್ಯರ ಈ ಹುಡುಗೂರೆ ಸಂಸ್ಕೃತಿಯ ಚರಿತ್ರೆಯಲ್ಲೇ ಅನುಪಮವಾದುದು. ಇದು ನಮ್ಮ ಅತ್ಯಮೂಲ್ಯ ಪಾತ್ರ. ನಾವು ಅನ್ನ ಕಾಳುಗಳಲ್ಲಿ, ಧನ-ದೌಲತ್ತುಗಳಲ್ಲಿ, ವೈಜ್ಞಾನಿಕ ಮತ್ತು ಅಂತರಿಕ್ಷೀಯ ವಿಷಯ ಶಾಸ್ತ್ರಗಳಲ್ಲಿ ಬಡವಾಗಿರಬಹುದು. ಆದರೆ ಮಾನವೀಯತೆಯ ಔದಾರ್ಯದಲ್ಲಿ, ನಮ್ಮ ನಾಡು ಎಂದಿಗೂ ಬಡವಾಗದು. ಜೀವ ದಯೆ ಮತ್ತು ಪ್ರಾಣಿ ದಯೆಗಳಿಗೆ ಹೆಸರಾಂತ ನೇರ ನವ್ಯದು. ಕೊಲೆ ಪಾತಕಿಯನ್ನೂ ಗಲ್ಲಿಗೇರಿಸಬಾರದೆಂಬ ಜನ ನಮ್ಮಲ್ಲಿ ಅನೇಕರಿದ್ದಾರೆ. ಅನೇಕ ವೆಂದೇನು. ಎಂತಹ ಘೋರ ಪಾತಕಿಗಳಿಗೂ ನೀಚ ಕೃತ್ಯವಾಗಲಿ, ನೀಚ ಕೃತ್ಯವಾಗಲಿ ನಾವು ಅದನ್ನು ಕರ್ಮ ಸೂತ್ರದ—ತತ್ವ ಸಿದ್ಧಾಂತಗಳಿಂದ ಅಳೆಯುತಿದ್ದೇವೆ. ಸತ್ಕೃತಿಯೆ ಎಂದೂ ಸತ್ಕ್ರಿಯೆಯೇ. ದುಷ್ಕೃತಿಯೇ ಎಂದೂ ದುಷ್ಕ್ರಿಯೆಯೇ- ಹೀಗೆಲ್ಲ ನಂಬುವವರು ನಾವು. ಇಂತಿದ್ದೂ ನಮ್ಮೀಗ ಈ ಕಟು ಸತ್ಯಗಳನ್ನೆಲ್ಲ ಮರೆಯುತಿದ್ದೇವೆ. ನಿಸ್ವಾರ್ಥದ ಮಡುವಿನಲ್ಲಿ ಬಿದ್ದು ಅಮಾನುಷ ಹೇಯ ಕೆಲಸಗಳನ್ನು ಮಾಡುತಿದ್ದೇವೆ. ತಾನು ಹೆಣ್ಣದು ಎಂಬ ಅಹಂಕಾರದಿಂದ ನಶ್ವರ ವಿಚಾರ ಮೌಲ್ಯಗಳಿಂದ ಕೂಡಿದ ಕುಮಾರ್ಗವನ್ನು ತುಳಿದು ಜೀವನವನ್ನೇ ಕಲುಷಿತಗೊಳಿಸುತ್ತೇವೆ. ಈ ಸ್ತ್ರೀಲ್ಯ, ಸಚ್ಚರಿತ್ರ, ಸರ್ವಾವರಣೀಯ ಸತ್ಯಪಥವನ್ನು ಕಡೆಗಣಿಸಿ ಸುಶಿಕ್ಷಿತರು, ನಾಗರಿಕರು, ಸಾಂಸ್ಕೃತಿಕ ಸಂಭಾವಿತರು ಎಂಬ ಜುಂಭವನ್ನು ಕೊಚ್ಚಿಕೊಳ್ಳುತಿದ್ದೇವೆ.

ದೇವರನ್ನು ಮರೆತೆವು.
ಧರ್ಮವನ್ನು ಬಿಟ್ಟೆವು.
ಸಮಾಜವನ್ನು ದೂಷಿಸಿದೆವು.
ಮೂಕಾಪಿಕ್ಷೆಗಳನ್ನ ಕಡೆಗಣಿಸಿದೆವು.
ಗುರುಹಿರಿಯರನ್ನು ತಿರಸ್ಕರಿಸಿದೆವು.
ನೀತಿ ನಿಯಮಗಳನ್ನು ಮುರಿದೆವು.

ಮಾನವೀಯತೆಯನ್ನು ಬಹಿಷ್ಕರಿಸಿದೆವು.

ಈ ಮೋಹಿನ ವಿಪರ್ಯಾಸದ ಪರಿಣಾಮ ಭಯಂಕರವಾದುದು. ಇದನ್ನು ಈಗಾಗಲೇ ತಿದ್ದಿ ನಮ್ಮ ಬದುಕನ್ನು ಪುನೀತಗೊಳಿಸಲು ಯತ್ನಿಸದಿದ್ದರೆ ಜೀವನವೇ ವ್ಯರ್ಥವಾಗುವುದು.

ಎಂದು ಪಾಶ್ಚಿಮಾತ್ಯ ಸಂಸ್ಕೃತಿ ಮತ್ತು ನಾಗರಿಕತೆಯ ಅವಿಷ್ಕಾರ ಭಾರತದಲ್ಲಿ ತಳವೂರಿತೋ ಅಂದಿನಿಂದ ನಮ್ಮ ಸಾಂಸ್ಕೃತಿಕ ನೌಕೌಲ್ಯ ವಿಚ್ಛೇದನಕ್ಕೆ ಪ್ರಾರಂಭವಾಯಿತು. ಭಾರತೀಯ ನೈತಿಕ ಅಪಮೌಲ್ಯದ ಯುಗಕ್ಕೆ ಆರಂಭವಾಯಿತು. ಆದೀಗ ಇಪ್ಪತ್ತನೆಯ ಶತಮಾನ 'ಇದರ ಕೆಟ್ಟ ಪರಿಣಾಮಗಳನ್ನು ಅನುಭವಿಸುತ್ತಿದೆ.

ಇಲ್ಲವಾದರೆ ಹಾವಿಗೆ ಹಾಲುಣಿಸುವ ಈ ದೇಶದಲ್ಲಿ, ಇರುವೆಗೆ ಸಕ್ಕರೆ ತಿನಿಸುವ ಈ ಭಾರತದಲ್ಲಿ, ಗೋವನ್ನು ದೇವರೆಂದು ಪೂಜಿಸುವ ಪ್ರಜೆಗಳಲ್ಲಿ ಬರಿಗಾಲಬರಲೆಂದು ಹೂವಿನ ಪೂಜೆಯು ಹರಕೆ ಹೇಳುವ ಜನರೂ ಇರುವರಿಂದ ಬಳಿಕ ನಮ್ಮ ನೈತಿಕ ಅಧಃಪತನ ಪಾತಾಳವನ್ನೂ ಮುಟ್ಟದೆಯೆನ್ನಲು ಬೇರೆ ಸಾಕ್ಷಿ ಬೇಕೇ?

ಆದುದರಿಂದ, ಪರಮೋತ್ಕರ್ಷವೇ ಆದಾಯಿ, ದೇವರು, ಧರ್ಮ, ಸಮಾಜ, ತಂದೆ, ತಾಯಿ ಮತ್ತು ಗುರುಹಿರಿಯರು, ನೀತಿನಿಯಮಗಳು ವ್ಯತ್ತ ವಿಶಾಲವಾದ ಮಾನವೀಯತೆಯ ಮೌಲ್ಯಗಳನ್ನು ನಾವು ನಿಷ್ಠಾವಿಗಳಾಗಿ ದೃಢೀಕರಿಸಲು ಶಕ್ತರಿಂದಾದರೆ ನಮ್ಮ ಸರ್ವನಾಶ ಶ್ರುತಿಸಿದ್ಧ. ಈ ಭೀತಿ ನಮ್ಮ ವ್ಯವಹಾರದಲ್ಲಿ, ಜೀವನದಲ್ಲಿ, ನಡತೆಯಲ್ಲಿ ಕಾಣಿಸಿಗದು ಎಂದಾದರೆ ವಿನಾಶ ಖಂಡಿತ. ಮಾನವನ ಮನಸ್ಸು ಕಡಿವಾಣವಿಲ್ಲದ ಕುದುರೆ. ಅದನ್ನು ನೈತಿಕ ಬಲದಿಂದ ವರ್ಧಿಸಬೇಕು. ವಿಚಾರ ವಿಮರ್ಶೆಗಳಿಂದ ತಿದ್ದಿ ಸಿದ್ಧಿಯನ್ನು ಪಡೆಯಬೇಕು.

ಇಂದಿನ ಮಾದರಿಯಲ್ಲಿ ನಮ್ಮ ಜೀವನ ವ್ಯವಹಾರ ಸಾಗಿದಲ್ಲಿ ನಾವೆಲ್ಲ ನಮ್ಮವರನ್ನೇ ವಂಚಿಸುವಕಾಲ ವಿನ್ನು ಬಹುದೂರವಿಲ್ಲ. ನಮ್ಮನ್ನೆ ನಾವು ವಂಚಿಸಲು ತೊಡಗಿದಾಗ ನೀತಿ ನಮ್ಮ ಕೈ ಹಿಡಿಯದು.

ಮಾನವ ಬದುಕು ಕ್ಷಣಿಕವಾದುದು. ನೀತಿ ಮಾತ್ರ ಅಮರವಾದುದು. ಜೀವನದಲ್ಲಿ ಗೇದು ತೇದು ಗಳಿಸಿದ ಸುಖ ಸಂಪತ್ತುಗಳೆಲ್ಲ ನಶ್ವರ. ಬರೀ ನೀತಿ ಮಾತ್ರ ಅಜರಾಮರವಾದುದು. ಶಾಶ್ವತವಾದುದು. ಈ ಅಮೂಲ್ಯವಾದ ಸಂಪತ್ತು ಮಾತ್ರ ನಾವು ಎಲ್ಲಿಗೆ ಹೋದರೂ ನಮ್ಮ ಆತ್ಮವನ್ನು ಹಿಂಬಾಲಿಸುವುದು. ಬದುಕಿನ ಸಂಗ್ರಾಮದಲ್ಲಿ, ಪೈಪೋಟಿಯ ಜೀವನದಲ್ಲಿ ಮಾನವನು ಎಷ್ಟೊಂದು ಬಗೆಯಿಂದ ಇದರ ಅಪಮೌಲ್ಯವನ್ನು ಮಾಡಿದರೂ ನೈತಿಕವಾದ ನಿರಂತರ ನಿಲ್ಲುವುದು.

ವಿಚಾರ ಮಾಡಿ ನೋಡಿ.

ನೇತ್ರ ರಕ್ಷಣೆಗಾಗಿ—
ನಿಮ್ಮ ಕಣ್ಣುಗಳ ಸೌಂದರ್ಯಕ್ಕಾಗಿ—
ಅತ್ಯಾಧುನಿಕ ಆಕರ್ಷಕ ವಿಧಾನ

ಕಾಂಟೆಕ್ಟ್ ಲೆನ್ಸ್ (Contact Lens)

ಸಂಪೂರ್ಣವಾಗಿ ಅಪಾಯ; ಕನ್ನಡಕದಂತೆ ನಿಮ್ಮ ಮುಖದ ಸೌಂದರ್ಯಕ್ಕೆ ಅಡ್ಡಬರುವಂತಿಲ್ಲ; ಆಗಾಗ ಬದಲಾಯಿಸುವ ಅವಶ್ಯವಿಲ್ಲ.



ಇಂದೇ ಸಂದರ್ಶಿಸಿರಿ

Shetty's OPTICS & CONTACT LENS CLINIC

London Qualified Optometrists

ಶೆಟ್ಟಿಸ್ ಆಪ್ಟಿಕ್ಸ್ & ಕಾಂಟೆಕ್ಟ್ ಲೆನ್ಸ್ ಕ್ಲಿನಿಕ್

7 ಸಿ, ಗನ್ ಬೋ ಸ್ಟ್ರೀಟ್, ಬಾಝುಾರ್‌ಗೇಟ್ ಪೋಸ್ಟಾಫೀಸಿನ ಎದುರು
ಬೊಂಬಾಯಿ—1.

- ಲಂಡನ್ ತರಬೇತಾದ ಹಾಗೂ ಜಗದ್ವ್ಯಾಪೀ ಅನುಭವಳ್ಳಿ ನೇತ್ರತಜ್ಞರಿಂದ ಪರೀಕ್ಷೆ.
- ದಕ್ಷಿಣ ಕನ್ನಡಿಗರಲ್ಲೇ ನೊದಲಿಗರಾದ ಕಾಂಟೆಕ್ಟ್ ಲೆನ್ಸ್ ತಜ್ಞರು.
- ಒಂದೇ ಲೆನ್ಸಿನಲ್ಲಿ ಪ್ರತ್ಯೇಕ ಪವರಿನ 14 ಅವಶ್ಯ ಭಾಗಗಳಿರುವ 'ವರಿಲೆಕ್ಸ್ ಲೆನ್ಸ್'ನ ತಜ್ಞರು.

With best compliments

from

BALLAL MOTOR SERVICE

MOODABIDRI - - MANGALORE

JAWAHAR

Standard Diesel Engines and Pumping sets

ಜವಾಹರ್

ಸ್ಟೇಂಡರ್ಡ್ ಡಿಸಿಲ್ ಇಂಜಿನುಗಳು
ಮತ್ತು ಪಂಪುಸೆಟ್ಟುಗಳು

ಅನುಭವಸ್ಥ ರೈತನ ಪ್ರಥಮ ಆಯ್ಕೆ 'ಜವಾಹರ' ಡಿಸಿಲ್ ಎಂಜಿನುಗಳು--ಯಾಕೆಂದರೆ?

- 'ಜವಾಹರ್' ಸರಳವಾದ ಮುಸ್ಸಹಿದ್ದ 'ಪೀಟರ್' ತರಹ ಉತ್ತಮ ಸಂಯೋಜನೆಯ ಇಂಜಿನು.
- 'ಜವಾಹರ್' ತಾಂತ್ರಿಕ ತಜ್ಞರ ಕಟ್ಟುನಿಟ್ಟಾದ ಮೇಲ್ವಿಚಾರದಲ್ಲಿ ತಯಾರಿಕೆ.
- 'ಜವಾಹರ್' ಕಾರ್ಖಾನೆಯಿಂದ ಮಾರುಕಟ್ಟೆಗೆ ಬರುವ ಮುಂಚೆಯೇ ದೀರ್ಘಕಾಲದ ನೈಜಪ್ಪನಿಕ ಪರೀಕ್ಷೆಗೆ ಒಳಪಟ್ಟಿರುತ್ತದೆ.
- 'ಜವಾಹರ್' ಅತಿ ಸರಳದಲ್ಲಿ ಸ್ಟಾರ್ಟು ಆಗುವಂತೆ ಅಳವಡಿಸಿರುತ್ತೆ.
- 'ಜವಾಹರ್' ಡಿಸಿಲ್ ಬಿರ್ಚು ಅತಿ ಕಡಿಮೆ.
- 'ಜವಾಹರ್' ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯಲನುಕೂಲವಾಗಿ ನಾಲ್ಕು ಗಾಲಿಗಳ ಟ್ರೊಲಿಯು ನೀಲೂ ದೊರೆಯುವುದು.
- 'ಜವಾಹರ್' ಕಿರುಕುಳವಿಲ್ಲದ ದೀರ್ಘಕಾಲದ ಸೇವೆಯಿಂದಾಗಿ ರೈತನ ಮೆಚ್ಚುಗೆಯ ಸ್ನೇಹಿತನಾಗಿದೆ.

GEECO

Electric Motors Pumps and Monoblocs.

ಜೀಕೊ

ಇಲೆಕ್ಟ್ರಿಕ್ ಮೋಟಾರುಗಳು,
ಮೊನೊಬ್ಲೋಕುಗಳು ಮತ್ತು ಪಂಪುಗಳು.

ತಾಂತ್ರಿಕ ತಜ್ಞರಿಂದಲೂ, ಅನುಭವಸ್ಥ
ರೈತರಿಂದಲೂ ಮೆಚ್ಚುಗೆಯನ್ನು ಪಡೆದು
ದೇಶದೆಲ್ಲೆಲ್ಲಾ ಖ್ಯಾತಿಗೊಂಡ ಹೆಸರು ಜೀಕೊ

- ತಯಾರಿಕೆಯ ಪ್ರತಿ ಹಂತದಲ್ಲೂ ವೈಜ್ಞಾನಿಕ ಮೇಲ್ವಿಚಾರಣೆ.
- ತನ್ನ ಪರಿಮಿತಿಗೊಳಪಟ್ಟ ಕೆಲಸ ಮಾಡುವ ಬಗ್ಗೆ ಪ್ರತಿ ಮೋಟಾರು ಪರೀಕ್ಷೆಗೊಳಪಟ್ಟೇ ಕಾರ್ಖಾನೆಯಿಂದ ಮಾರುಕಟ್ಟೆಗೆ ಬರುವುದು.
- ಅತೀ ಕಡಿಮೆ ವಿದ್ಯುತ್ ಬಳಕೆಯಿಂದಾಗಿ ಹಣದ ಉಳಿತಾಯ.
- ಮೋಟಾರು ಬಿಸಿಯಾಗದಂತೆ ಉತ್ತಮ ತರದ ವಿಶೇಷ ವ್ಯವಸ್ಥೆ.
- ತನ್ನ ಕಾರ್ಯದಕ್ಷತೆಯಲ್ಲಿ ಎಲ್ಲಕ್ಕಿಂತ ಮಿಗಿಲೆನಿಸಿದೆ.
- ಬ್ರಿಟಿಷ್ ಸ್ಟಾಂಡರ್ಡ್‌ಗನುಗುಣವಾಗಿ ತಯಾರಿಕೆ.

ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೂಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ವಿತರಕರು.

ವಿಕ್ಟರ್ ಟ್ರೇಡಿಂಗ್ ಕೋರ್ಪರೇಶನ್, ಫಳನೀರ್ ರೋಡ್, ಮಂಗಳೂರು-1.

ಮಲೆಯಿಂದ ಮಂಗಳೂರಿಗೆ-

೪)

(ಪಡಿನಾಲ್ಕನೇ ಪುಟದಿಂದ)

ಮೂರ ಮಂಗಿಲ, ಉಡುಪಿ ಮುಚ್ಚಿಲೆಕ್ಕೋಡು, ಪುಲ್ಲಿ, ಒಡಬಾಂಡೇಶ್ವರಗಳಲ್ಲಿ ಕಂಡು ಬರುವ ಸುಬ್ರಹ್ಮಣ್ಯ ವಿಗ್ರಹಗಳು ಎಲ್ಲವೂ ಒಂದೇ ಶೈಲಿನಾಗಿವೆ

ಮೂಲಿಕೆದು ಒಂದು ಭಾಗ ಬಪ್ಪನಾಡು. ಇದರ ಕುರಿತಾಗಿ ಒಂದು ದಂತಕತೆ ಇದೆ. ಅಬೇನೇ ಇರಲಿ, ಇಲ್ಲಿ ಪ್ರಸಿದ್ಧ ಪಂಜ ದುರ್ಗಾಲಯವಿದೆ. ದೇವಾಲಯವು ಪಡುನೋಟಾಗಿದ್ದು ಅದರ ಹಲ ಕೆಲವು ವಾಸ್ತು ಲಕ್ಷಣಗಳು ಸುಮಾರು ಕ್ರಿ. ಶ. 11ನೇ ಶತಕದ್ದಿವೆ. ಈ ದೇಗುಲದಲ್ಲಿ ಮುಂಡುಕೂರಿನ ಹಾಳಾದ ಬಸ್ತಿಯಿಂದ ತಂದ ಸುಮಾರು 14--15ನೇ ಶತಕದ ಶಿಲ್ಪವನ್ನೊಳಗೊಂಡ ಅನೇಕ ವಿಗ್ರಹಗಳಿವೆ. ಇವುಗಳನ್ನು ಪರೀಕ್ಷಿಸಿ ದೇಗುಲದ ತೀರ್ಥ ಮಂಟಪ ಮಾದ್ವಾರ ನಿರ್ಮಾಣದ ಪುನರಾರಚನೆಯೂ ಆಗಿದೆ. ಕಂಚಿ ದುರ್ಗಾರಾಧನೆಯು ಲಿಂಗಾರಾಧನೆದಲ್ಲಿ ನಡೆಯುತ್ತದೆ. 'ಬಪ್ಪನಾಡು ಜಾತ್ರೆ" ಎಂಬುದಾಗಿ ಖ್ಯಾತಿಗೊಂಡ ಉತ್ಸವವು ಇಲ್ಲಿ ನಡೆಯುತ್ತದೆ.

ಕಾರ್ನಾಡು ಸದಾಶಿವರಾಯ ಒಂದು ಆಂಗನೇ ಆಗಿದ್ದ ಇಲ್ಲಿ ಮಧ್ಯಕಾಲದ ಶೈವ ಮತ್ತ ವಿಷ್ಣು ಆಲಯಗಳಿವೆ ಈಗ ಇದನ್ನು ಹರಿಹರಕ್ಷೇತ್ರವೆಂಬುದಾಗಿ ನಾಮಕರಣ ಮಾಡಿದ್ದಾರೆ. "ಕಾರ್ನಾಡು" ಎಂದರೆ ಎಳೆಪೈರು ಎಂಬ ದಾಗಿ ಅರ್ಥ ಮಾಡಿಕೊಳ್ಳಬಹುದು. ಕಾರ್ನಾಡಿನ ಕುರಿತಾಗಿ ಹೆಚ್ಚಿನ ಇತಿಹಾಸವನ್ನು ಮಾಡಿದರೆ ಚಾರಿತ್ರಿಕ ಅನುಭವವಿದೆ. ಮೂಲಿಕೆ ನಾಡು ಮೂಲ್ಕಿ ಹೊಳೆ ಮತ್ತು ನಾವಂಜೆ ಹೊಳೆಗಳ ನದಿ ಏನಕ ಪ್ರದೇಶವನ್ನು ಒಳಗೊಂಡಿತ್ತು. ಇವುಗಳ ತೀರ ದೊರಕಿದ ದಾಖಲೆಯನ್ನೊಳಗೊಂಡು ನಾವಂತ ಮನೆತನವನ್ನು ಕೆಳಗಿನವರನ್ನು ಕ್ರಮಿಸಿಕೊಳ್ಳಬಹುದು. ಮೊದಲನೇ ದುಗ್ಗಣ್ಣ ಸಾವಂತ, ಮೊದಲನೇ ಕೆನ್ನಿಲ ಸಾವಂತ, ಕಾಂತ ಹೆಗ್ಗಡೆ, ಕೊಟಿಮಣ್ಣ ಹೆಗ್ಗಡೆ ಅಂತೆ ಬಾಜ ಸಟ್ಟಿ, ಎರಡನೇ ಕೆನ್ನಿಲ ಸಾವಂತ, ಎರಡನೇ ದುಗ್ಗಣ್ಣ ಸಾವಂತ, ಮೂರನೇ ಕೆನ್ನಿಲ ಸಾವಂತ, ಮೂರನೇ ದುಗ್ಗಣ್ಣ ಸಾವಂತ, ಮೊದಲನೇ ಚೆನ್ನಿಗ ಸಾವಂತ, ತಿರುಮಲೇಂದ್ರ, ಚೆನ್ನಮ್ಮಾಜಿ ಅಚ್ಚು ಎರಡನೇ ಚೆನ್ನಿಗ ಸಾವಂತ. ಇವರ ಕಾಲಮಾನವು ಕ್ರಿ. ಶ. 14ನೇ ಶತಕದ ಮಧ್ಯಕಾಲದಿಂದ ಕ್ರಿ. ಶ. 18ನೇ ಶತಕದ ಮಧ್ಯ ಕಾಲದ ವರೆಗೆ ಚಾಚಿದೆ. ಇವರಲ್ಲಿ ಹಲವರ "ಮಂಡಿಂಜ"ಗಳ ಅವಶೇಷಗಳಿವೆ.

ನಾವಂಜೆಯ ಶಾಸನದ ಹೆಸರು "ನಾಳ ಉಂಜ"ವೆಂದಾಗಿದೆ. ಇಲ್ಲಿಗೆ ಸಂಬಂಧಿಸಿದ ಒಂದೆರಡು ಕಲ್ಲುರಕಗಳು ಸಿಕ್ಕಿವೆ. ವಿಜಯನಗರ ಕಾಲದ ಮೊದಲ ಹಂತಕ್ಕೆ ಸಂಬಂಧಿಸಿದ ಒಂದು ದೇವಾಲಯವು ಎತ್ತರವಾದ ಬೆಟ್ಟದ ಮೇಲೆ ಇಂತಿದೆ. ಕ್ರಿ.ಶ. 1418ರ ಶಿಲಾಲೇಖವೊಂದು ಇಮ್ಮಡಿ ದೇವರಾಯನ ಕಾಲದ್ದಿದ್ದು ಮಂಗಳೂರು ಮತ್ತು ಬಾರಕೂರು ರಾಜ್ಯಗಳನ್ನು ಆಳುತ್ತಿದ್ದರೆಂದೂ ಬಂಗರಾಜನು ಬೆಳಗುಳದ ವೇಂಕಟೇಶ ಅತ್ತೀರಿ ಗೋತ್ರದ ಗೋಯಿಂದ ದೇವಗಣ ಮಕ್ಕಳು ರಾಯಸ್ಥ ಹರಿಪುಂಣಗಳಿಗೆ ದತ್ತಿಯನ್ನು ಕೊಟ್ಟರು ವರೆಂದೂ ಉದರ ಕಲುವಾಗಿ ಅವರು 'ಪಾಳೆ ಉಂಜದ ಶ್ರೀ ಮಹಾದೇವರಿಗೆ ಪ್ರತಿ ಪರ್ವದಲ್ಲೂ ವಿಶ್ವಿಕ ಪೂಸದಲೂ ಒಂದು ವಾದ ತೆಂಗಿನ ಯೆಂಣೆಯನೂ ನಡೆಸಿಬರಿ'ಂದೂ ತಿಳಿಸುತ್ತದೆ. ಹಳೆಯಂಗಡಿಯಲ್ಲಿ ಪ್ರಾಚೀನ ಈಗ ಪಾಳಾಬಿದ್ದಿರುವ ಜೈನ ಬಸದಿಯೊಂದಿದೆ.

ಶಿಲ್ಪರಹಪೊಂದರಲ್ಲಿ ಈಗಣ ಸೂರತ್ಕಲ್ಲು 'ತುರತಕಲ್ಲು' ಎಂಬುದಾಗಿ ಉಲ್ಲೇಖಗೊಂಡಿದೆ.

ಈಗ ತಂಡ, ಬರುವ ಚಾರಿತ್ರಿಕ ಅವಶೇಷಗಳಿಂದ ಈ ಊರು ಸಾಕಷ್ಟು ಪ್ರಾಚೀನವೆಂದೇ ಹೇಳಬೇಕು. ಸಮುದ್ರದ ದಂಡೆಯ ಮೇಲೆ ಶ್ರೀ ಸದಾಶಿವ --ಗಣಪತಿ ದೇವಾಲಯವಿದೆ. ಸದಾಶಿವ ದೇವಾಲಯವು ಗಜಪೃಷ್ಠಾಕಾರದ ದೇವಗೃಹ. ಶ್ರೀ ಗಣೇಶನು ಉಭಸ್ಥಾನ ದೇವತೆಯು. ದ್ವಿಬಾಹು ಗಣೇಚತುರ್ಭುಜ. ಸುಮಾರು ಕ್ರಿ. ಶ. 10--11ನೇ ಶತಕದ ದೇವಾಲಯವಿದು. ಈಗ ಪುನರುಜ್ಜೀವನ ಹೊಂದಿದೆ. ಈ ಕ್ಷೇತ್ರದಲ್ಲಿ ಪ್ರಕೃತಿ ಸೌಂದರ್ಯದ ನೆಲೆವೀಡಿದೆ. ಈಗ ಸೂರತ್ಕಲ್ಲು ಶ್ರೀನಿವಾಸನಗರವೆಂಬ ಹೆಸರನ್ನು ಪಡೆದಿದೆ. ಬೃಹದಾಕಾರದಲ್ಲಿ ಬೆಳೆಯುತ್ತಿರುವ ರೀಜನಲ್ ಎಂಜಿನಿಯರಿಂಗ್ ಕೋಲೇಜು ಇಲ್ಲಿದೆ. ಸೂರತ್ಕಲ್ಲಿನಲ್ಲಿ ಮೂರಿಯಮ್ಮನ ಆರಾಧನೆಯೂ ಕಂಡು ಬರುತ್ತದೆ.

ಸೂರತ್ಕಲ್ಲಿನಿಂದ ಮುಂದುವರಿದಾಗ ಪಣಂಬೂರು ಸಿಗುತ್ತದೆ ಪಣಂಬೂರೆಂದರೆ 'ಪಡುವ ನಂಬೂರ್' ಎಂಬುದಾಗಿ ತಿಳಿಯಲವಕಾಶವಿದೆ ಅಂತೆಯೇ "ಮೂಡಲು ನಂಬೂರಿದೆ.' ಹಾಗಾದರೆ 'ನಂಬೂರು' ಎಂಬುದು ಮೂಲ ನಾಮವಾಯಿತು. ಪಣಬ (ಪಳಬ) ಊರು ಪಣಂಬೂರೆಂದೂ ತಿಳಿಯಬಹುದು. ಅದರಿ ಕ್ರಿ. ಶ. 1389ರ ಶಿಲಾಲೇಖದಲ್ಲಿ 'ಮೂಡಲು ನಂಬೂರಿಂದ ತಿರಿತಕಲಿಗೇರಿ ಗೆಡುವಿನೆಳಗೆ ಹೋದಪೊಳ ದಾರಿ' ಎಂಬ ಒಕ್ಕಣೆಗಳುರುವುದರಿಂದ 'ನಂಬೂರು' ಎಂಬುದೇ ಮೂಲ ರೂಪವೆನಬಹುದು. ಪಡಂಬೂರೆಂಬ ರೂಪವೂ ದೊರಕುತ್ತದೆ, ಇದೇ ಶಿಲಾ ಲೇಖದಲ್ಲಿ 'ಕೊಲ್ಲಿಯ'ವೆಂಬ ಸ್ಥಳ ನಾಮವಿದೆ. ಇದು ಖ್ಯಾತಿಯಿಂದ ಈಗಣ ಕಳಾಲ್ಯ ಆಗಿರಬೇಕು. ಈ ಕ್ಷೇತ್ರವನ್ನು ಮಂಜಂಣ ಪೂಜನೆಂಬವನು ಆಳುತ್ತಿದ್ದನೆಂದು ಶಿಲಾಲೇಖ ತಿಳಿಸುತ್ತದೆ. ಈ ದಾಖಲೆಯಿಂದ ಚಿತ್ರಾಪುರವೆಂಬ ಕ್ಷೇತ್ರವಿತ್ತೆಂದೂ ಇದು ಪವಾರದಿಂದ ಪಡುವಣ ದಿಕ್ಕಿಗಿತ್ತೆಂದೂ ಚಿತ್ರಾಪುರದಿಂದ ಬಡಗಣ ಭಾಗದಲ್ಲಿ ಯಿಡಿಯವೆಂಬ ಸ್ಥಳವಿತ್ತೆಂದೂ ತಿಳಿದು ಬರುತ್ತದೆ. ಯಿಡಿಯ ಈಗಿನ ಯಿಡ್ಯಾ ಆಗಿರಬೇಕು. ಚಿತ್ರಾಪುರದಲ್ಲಿ ಕ್ರಿ. ಶ. 10 - 11ನೇ ಶತಕಕ್ಕೆ ಒನ್ನಯಿಸುವ ದುರ್ಗಾಲಯವಿದೆ. ಇಲ್ಲಿಯೂ ದುರ್ಗೆಯು ಲಿಂಗಾಕಾರದಲ್ಲಿ ಆರಾಧನೆ ಹೊಂದಿ ತ್ತಾಳೆ. ಇಲ್ಲಿಯ ಶ್ರೀ ಗಣೇಶನ ಮೂರ್ತಿಯು ಭೂಸ್ಪರ್ಶ ಗಣೇಶನೂ ಬಲಮುರಿ ಗಣೇಶನೂ ಆಗಿದ್ದಾನೆ. ಈತನ ಶಿಲ್ಪವು ಪ್ರಾಚೀನತೆಯ ಒಂದು ಸ್ಪಷ್ಟ ರುಜುವಾಗಿದೆ. ಪಣಂಬೂರಿನಲ್ಲಿ ಒಂದು ಊರೂ ಮಹೇಶ್ವರ ದೇವಾಲಯವಿದೆ. ಕ್ರಿ. ಶ. 1389ರ ಶಾಸನವು ಈ ದೇವರಿಗೆ ನಂದಾ ದೀವಿಗೆಗೆ ಬಿಟ್ಟ ದತ್ತಿ ವಿಚಾರ ತಿಳಿಸುತ್ತದೆ. ಮಂಗಳಾಸ್ಥಾನ ದೇವರಾಗಿ ಆಗಮಜ್ಞರಿದಲ್ಲಿ ಊರೂ ಮಹೇಶ್ವರ ದೇವತೆಯೆಂಬುದು ಬಹಳ ವಿರಳ. ಈ ಶಿಲ್ಪವು ಕ್ರಿ. ಶ. 11--13ನೇ ಶತಮಾನಕ್ಕಂತೂ ಹಾಚಿತ್ತವೆ.

ಮಂಗಳೂರಿಗೆ ಸುಮಾರು ಅರು ಮೈಲುಗಳಿರುವಾಗ ಕೂಳೂರು ಸಿಗುತ್ತದೆ. ಕ್ರಿ. ಶ. 1386ರಲ್ಲಿ ಈ ಊರಿಗೆ ಶೂಳೂರೆಂಬ ಹೆಸರೇ ಇತ್ತೆಂದು ಶಾಸನದಿಂದ ತಿಳಿಯುತ್ತದೆ.

ಮಂಗಳೂರಿನ ಮೂಲರೂಪವು 'ಮಂಗಲಾಪುರ'ವೆಂದಾಗಿದೆ. ಈ ಹೆಸರು ಕನಿಷ್ಟ ಪಕ್ಷ ಕ್ರಿ. ಶ. 5 6ನೇ ಶತಕಗಳ ಹಾಚಿದರೂ ಪ್ರಾಚೀನವೆನ್ನಬಹುದು. ಮಂಗಳೂರು ಕ್ರಿ. ಶಕವು ಆದಿಯಿಂದಲೂ ಒಂದು ಹಿಂದಾಣ ಬೇವಾಗಿದ್ದಿರಬೇಕು. ಕೇರಳ ಇತಿಹಾಸಜ್ಞರು ಮಂಗಳೂರು ಕ್ರಿ. ಪೂರ್ವದಲ್ಲೇ ಚೇರದ ಒಂದು ಭಾಗ ಮಾತ್ರವಲ್ಲದೆ ಉತ್ತರ ಚೇರದ ಮುಖ್ಯ ಪಟ್ಟಣವೇ ಇವಾಗಿತ್ತೆಯುತ್ತಾರೆ. ಟೊಲೆಮಿಯು ಭೂಗೋಳವಲ್ಲಿ ಉಲ್ಲೇಖಗೊಂಡ ನಿತ್ಯಯಾತ್ರಿ ನೇತ್ರಾನತಿಗೆ ಅನ್ವಯಿಸುವುದಾದರೆ ವಂಗಲಾನ ಪ್ರಾಚೀನತೆ ಕನಿಷ್ಕಕಮ ಕ್ರಿ. ಶಕ ೧ನೇ ಶತಮಾನಕ್ಕೆ ಒಯ್ಯಲ್ಪಡತ್ತದೆ.

ಟೊಲೆಮಿಯು "ಮಂಗನೂರು" ಎಂದು ದುವಂಗೂರೇ ಆಗಿರಬೇಕು. ಕ್ರೈಸ್ತಮನ್ ಟೊಪೋಗ್ರಫಿ ಎಂಬ ಅರನೇ ಶತಕದ ಗ್ರಂಥದಲ್ಲಿ ಬರುವ 'ಮಂಗರೋಡ್' ಮಂಗಳೂರೇ ಆಗಿರಬಹುದು. ೫ ಏಳನೇ ಶತಕದ ಅರಬರ ಪುಸ್ತಕಗಳಲ್ಲಿ ಮಂಗಳೂರಿನ ಉಲ್ಲೇಖವಿದೆ. ಅರಬರು ಇದನ್ನು "ಮಂಜರೂರ್" ಎಂದು ಕರೆಯುತ್ತಿದ್ದರು. ಆದರಿಂದ ಹೆಚ್ಚು ಕಡಮೆ ಕ್ರಿ. ಶ. ಎರಡನೇ ಶತಕದಿಂದ ಕ್ರಿ. ಶ. 17ನೇ ಶತಕದ ವರೆಗೆ ಎಂದರೆ ಸುಮಾರು 1500 ವರ್ಷಗಳ ವರೆಗೆ ಮಂಗಳೂರು ಒಂದು ದೊಡ್ಡ ರಾಜಕೀಯ, ವಾಣಿಜ್ಯ, ನಾವಿಕ ಮತ್ತ ಧಾರ್ಮಿಕ ಕೇಂದ್ರವಾಗಿತ್ತೆನ್ನಬೇಕು. ಆದರೆ ಕ್ರಿ. ಶ. 10ನೇ ಶತಕಕ್ಕಿಂತ ಹಿಂದಣ ಅಧಿಕೃತ ದಾಖಲೆಗಳು ಸಾಕಷ್ಟು ಸಿಗದುದರಿಂದ ಇದರ ಪ್ರಾಚೀನತಾಂಶವನ್ನು ಬರೆಯುವುದು ಅಷ್ಟೊಂದು ಸುಲಭವಲ್ಲ. ಅಲ್ಪಸ್ವಲ್ಪವನ್ನು ಆಳುತ್ತಿದ್ದ ಅಳುಪರ ರಾಜಧಾನಿಯೂ ಕ್ರಿ. ಶ. 10--11ನೇ ಶತಕಗಳಲ್ಲೂ ಆನೆಂತರ ಪುನಃ 14--15ನೇ ಶತಕಗಳಲ್ಲೂ ಮಂಗಳಾಪುರವಾಗಿತ್ತು. ಅನಂತರ ಇಂದ ವರ್ಷಸೆಂಬ ಅರಸನು ನಾಡಧಿಪತ್ಯದ ಪ್ರಭಾವಕ್ಕೊಳಗಾಗಿ ಕದರಿಯಲ್ಲಿ ಪಂಜ

Grams: "NEWTAJ" Phone, Boarding: 44164
Lodging: 41311

Please visit

NEW TAJ MAHAL HOTEL

HIGH CLASS VEGETARIAN
BOARDING, LODGING & RESTAURANT,

SULTAN BAZAAR,
HYDERABAD, A. P.

For,

Comfortable Accommodation,
Quality Food & delicious dishes.
Prompt and Courteous service

AN IDEAL SURROUNDING
TO MAKE EVERY ONE HAPPY.

ಮೊದಲಿನ ಕೆಲಸ ಮೊದಲು ಆಗಬೇಕು.

(ಗಾಂಧೀ)

ವೇಲ್ಸ್‌ಗರ ಮತ್ತು ಸಾಮಾನ್ಯ ಜನತೆ, ಶ್ರೀಮಂತರು ಹಾಗೂ ಬಡವರು ಇವರ ನಡುವೆ ಯುದ್ಧದಿಂಗೂ ಕೂಡ ಕಾಣಿಸುವಷ್ಟು ಅಕ್ಷಮ್ಯ ಭಿನ್ನ ಭೇದಗಳಿವೆ. ವೇಲ್ಸ್‌ಗರದವರ ಹಾಗೂ ಶ್ರೀಮಂತರ ಅವಶ್ಯಕತೆಗಳು ಹೆಚ್ಚು ಇರುತ್ತವೆ ಯಲ್ಲವೆಂದು ಯಾರಾದರು ವಮರ್ಥನೆ ಮಾಡಿದರೆ ಅದು ನನಗೆ ಹಾಸ್ಯಾಸ್ಪದವೆಂದೇ ಕಾಣುತ್ತದೆ ಇಂದು ಬಡವ ಮತ್ತು ಧನಿಕರಲ್ಲಿ ಇರುವ ಅಂತರವನ್ನು ನೋಡಿ ಮನಸ್ಸಿಗೆ ಅತೀವ ದುಃಖವಾಗುತ್ತಿದೆ.

ಹಳ್ಳಿಗು ಜನ ಧಾನ್ಯ ಬೆಳೆಸುತ್ತಾರೆ. ಅವರು ದವಗಳಿಂದಿಗೆ ದವಗಳಾಗಿ ಹೈನ ಹುಟ್ಟಿಸುತ್ತಾರೆ. ಆದರೆ ಅದರಲ್ಲಿ ಒಂದು ಹಿಡಿಯೂ ಅವರ ಹೊಟ್ಟೆಯಲ್ಲಿ ಹೋಗುವದಿಲ್ಲ. ಇಂಥ ಲಜ್ಜೆಗೇಡು ಘಟನೆಗಳಿಗೆ ಮಿತಿಯೇ ಇಲ್ಲ. ಪ್ರತಿಯೊಬ್ಬರಿಗೆ ಸಾಕಷ್ಟು ಪೋಷಕವಾದ ಆಹಾರ, ಇರಲಿಕ್ಕೆ ಮನೆ–ಅವರ ಮಕ್ಕಳಿಗೆ ಶಿಕ್ಷಣ ಸೌಕರ್ಯ, ಜಡ್ಡು ಜಾಸತ್ತುಗಳಲ್ಲಿ ಅವಶ್ಯವಿರುವ ಔಷಧೋಪಚಾರ ನೃವಸ್ಥೆ—ಇವೆಲ್ಲ ಮೊದಲು ದೊರೆಯುವಂತಾಗಬೇಕು. ನಾನು ಆರ್ಥಿಕ ಸಮಾನತೆ ಎನ್ನುವದರಲ್ಲಿ ಇವೆಲ್ಲವೂ ಬರುತ್ತವೆ. ಯಾರೊಬ್ಬರಿಗೂ ತಮ್ಮ ಸ್ವನಿಷ್ಟ ಅವಶ್ಯಕತೆಗಳಿಗೆ ಮಿಕ್ಕಿ ಹೆಚ್ಚಿನದೇನೂ ದೊರೆಯಲೇ ಬಾರದು, ಎಂದೇನಾ ನಾನು ಘರ್ಜಾನು (ಆಜ್ಞೆ) ಹೊರಡಿಸುತ್ತ ಇಲ್ಲ.' ಆದರೆ ಬಡವರ್ಗದವರ ಮೂಲಭೂತ ವಾದ ಅವಶ್ಯಕತೆಗಳೆಲ್ಲ ಪೂರೈಸಿದ ನಂತರವೇ ಅವುಗಳ ನೂತ, ಮೊದಲೇ ಮಾಡಬೇಕಾದ್ದನ್ನು ಮೊದಲು ಮಾಡಲೇಬೇಕು.

ಕಾಲೇಜು ನಾರಿ!

ಕಾಲೇಜು ನಾರಿ ನಾರದಾವತಾರಿ
ಏನೀ ವಿಕಾರಿ ಕಾಲೇಜು ಸೇರಿ
ಹಣೆಯ ಮೇಜಿ ಕಪ್ಪರಿ ಕಟ್ಟು
ಹುಬ್ಬಿನ ನಡುವೆ ಕುಂಕುವ ಇಟ್ಟು
ತೆಳ್ಳನೆ ಟೆರಿಲಿನ್ ಸೀರೆಯನುಟ್ಟು

ಟೆರಿಕಾಟ್ ಶ್ಲೀವ್ ಲೆಸ್
ಬಾಸ್ ತೊಟ್ಟು
ಹೈಹೀಲ್ಡ್ ಷೂಸ್‌ಗಳ ಕಾಲಲಿ ತೊಟ್ಟು
ನಡೆಯುವೆ ಬಾಯ್ ಫ್ರೆಂಡ್‌ಗಳಿಗೆ
ಕೈಕೊಟ್ಟು!
ಕಾಲೇಜ್ ನಾರಿ ನಾರದಾವತಾರಿ
ಆದೆಯ ವಿಕಾರಿ ಕಾಲೇಜು ಸೇರಿ!

—'ನುಲ್ಲಾರಿ'

ನೀವು ಮಂಗಳೂರಲ್ಲಿರುವಾಗ
ಖರೀದಿಗಿರಲಿ, ನೋಡುವುದಕ್ಕೇ ಇರಲಿ,
ಯಾವುದಕ್ಕಾದರೂ ಸರಿಯೆ

ಚಂದರಾನ ಬ್ರದರ್ಸ್

ನಿಮ್ಮನ್ನು ಹಾರ್ದಿಕವಾಗಿ ಸ್ವಾಗತಿಸುತ್ತಾರೆ

ಸ್ಥಾಪನೆ: 1935

ದಕ್ಷಿಣ ಭಾರತದಲ್ಲಿಯ ಸಾಮೋಪಸಾಮೆಗಳ
ಮೆಜೋನ್ನತ ವಸ್ತ್ರ ಭಂಡಿಜಾತ

ಚಂದರಾನ ಬ್ರದರ್ಸ್

(ದಕ್ಷಿಣದ ಸುಪರ್ ಮಾರ್ಕೆಟ್)

ಹಂಪನಕಟ್ಟೆ, ಮಂಗಳೂರು

ತಂತಿ: 'ಬೆಕ್ಸ್‌ಟೈಲ್ಸ್' ಫೋನ್: 3460

ಲೋಪದಿಂದ ಮೂಡಿದ ಭಾಗದಲ್ಲೇ ಗಣಪತಿಯ ವಾದ ಲೋಕೇಶ್ವರನೆಂಬ ವಿಗ್ರಹವು ತಲೆ ಮತ್ತು ಆರು ಭುಜಗಳಿಂದ ಕೂಡಿದ ಪ್ರಾಚೀನದಲ್ಲಿ ಕುಳಿತಿರುವ ವಿಗ್ರಹವನ್ನು ಕ್ರಿ. ಶ. 968ರಲ್ಲಿ ಪ್ರತಿಷ್ಠಿಸಿದನು. ಈ ಪ್ರತಿಮೆಯ ವಿಷಯವು ಗ್ರಂಥಲಿಪಿಯಲ್ಲಿ ಲೋಕೇಶ್ವರ ವಿಗ್ರಹದ ಸೋಮಸೂತ್ರ ದಲ್ಲಿ ಎದುರುಗಡೆ ಬರೆಯಲ್ಪಟ್ಟಿದೆ. ಪ್ರಾಯಃ ಬರಹವಿರುವ ಲೋಹ ಮೂರ್ತಿಗಳಲ್ಲಿ ಇದು ದಕ್ಷಿಣ ಭಾರತದಲ್ಲೇ ಅತಿ ಪ್ರಾಚೀನವಾಗ ಬಹುದು. ಕುಲಶೇಖರವು ಆಳುವರ ಅರಮನೆ ಸ್ಥಳವಾಗಿದ್ದಿರಬೇಕು. ಕದಿರೆಯು ಪ್ರಾಚೀನ ಕಾಲದಲ್ಲಿ ಬೌದ್ಧ ಮತೀಯ ಕೇಂದ್ರವಾಗಿದ್ದು ಸುಮಾರು ಕ್ರಿ. ಶ. 8–9ನೇ ಶತಕದ ಅವಧಿಯಲ್ಲಿ ನಾಥಪಂಥದ ಕೇಂದ್ರವಾಗಿ ಬೆಳೆಯಿತೆನ್ನಬಹುದು ದಕ್ಷಿಣ ಭಾರತದಲ್ಲೇ ದೊಡ್ಡದಾದ ಜೋಗಿ ಮಠವಿರುವದು ಕದಿರೆಯ ಗುಡ್ಡದಲ್ಲಿ. ಮಂಜು ನಾಥನೆಂಬೀ ಹೆಸರು ಶಿವನಿಗೆ ಸಲ್ಲುವದು ಪ್ರಾಯಃ ನಾಥಪಂಥದ ಪ್ರಭಾವದಿಂದಾಗಿದೆ. ಮಂಜೇಶ್ವರ, ಮಂಜೆನಾಡು, ಮಂಜುನಾಥ, ಮಂಜುವ ಎಂಬೀ ಹೆಸರುಗಳು ನಾಥ ಪಂಥದ ಪ್ರಭಾವದಿಂದಾಗಿರಬೇಕು. ಕದಿರೆಯ ಮಂಜುನಾಥ ದೇವಾಲಯದ ಶಿಲ್ಪವನ್ನು ಪರಿಶೀಲಿಸಿದರೆ ಅದು ಸುಮಾರು ಕ್ರಿ. ಶ. 10—11ನೇ ಶತಕದ ಪ್ರಾಚೀನವಾಗಬಲ್ಲದು. ಇಲ್ಲಿರುವ ವಿಘ್ನೇಶ್ವರ ನಾಥ, ಉಗ್ರೇಶ್ವರ ನಾಥ ಶ್ರೀಮಂತನಾಥರ ಶಿಲಾಮೂರ್ತಿಗಳೂ ಮಂಜುಶ್ರೀ ಮತ್ತು ಬುದ್ಧ ಮಹಿಷ ಲೋಕೇಶ್ವರ ಪಂಚಲೋಹದ ಮೂರ್ತಿಗಳೂ ಬಹು ಆಕರ್ಷಣೀಯವಾಗಿದ್ದು ಶಿಲ್ಪ ಶಾಸ್ತ್ರದ ಅಧ್ಯಾಯ ಮಾಡುವವರಿಗೆ ಹೃದಯಂಗಮವಾಗಿವೆ. ಒಂದು ಶಿಲಾಲೇಖವು ಕದಿರೆಯ ಪದ್ಮ ಶಿವನ್ನನೆಂದೂ ಇದು ಮಂಗಳೂರಿಗೆ ಈಶಾನ್ಯ (ಅಧಿಷ್ಠಾನ)ವೆಂದೂ ಕದಿರೆಯ ಅಳ್ವ ಅರಸರುಗಳು ನಾಥ ಪಂಥದ ಅನುಯಾಯಿಗಳೆಂದೂ ತಿಳಿಯಪಡಿಸುತ್ತದೆ. ಕದಿರೆಯ ಅಸಪಾಸ್ಸನ್ನು ಸಾಯೂಗಿ ಪರಿಶೀಲಿಸಿ ಸಂಶೋಧನೆ ನಡೆಸಿದರೆ ಪ್ರಾಚೀನ ಇತಿಹಾಸಕ್ಕೆ ಅನೇಕ ವಿಷಯಗಳು ಒಳ್ಳೆಯವಾಗಬಹುದು.

ದಾಖಲೆಗಳ ಕೊರತೆಯಿರುವಾಗ ವಾಸ್ತು ವಶಿಲ್ಪಗಳನ್ನೂ ಕವುಗಳ ಅವಶೇಷಗಳನ್ನೂ ಪರಿಶೀಲಿಸಿ ಅನೇಕ ಐತಿಹಾಸಿಕ ವಿಷಯಗಳನ್ನು ತಿಳಿಸಿಕೊಡುವ ಪದ್ಧತಿ ಪೌರ್ವಾತ್ಯ ದೇಶಗಳಲ್ಲಿ ಜಾರಿಯಲ್ಲಿದೆ.

ಕಲಶೇಖರದಲ್ಲಿರುವ ಶ್ರೀ ವೀರನಾರಾಯಣ ದೇವಾಲಯದ ಜನಾರ್ದನ ಮೂರ್ತಿಯ ಈ ದೇವಾಲಯದ ಅನೇಕ ಶಿಲ್ಪಗಳೂ ಕ್ರಿ. ಶ. 10—11ನೇ ಶತಕದ ಶಿಲ್ಪಗಳಾಗಿವೆ. ಅರ್ಥಪೂರ್ಣವೆಂದು ಪಾಸನರಲ್ಲಿ ಉಲ್ಲೇಖಿಸಿಕೊಂಡ ಈಗ ಅತ್ಯಾಚಾರವೆಂದು ಕರೆಯಲ್ಪಡುವ ಸ್ಥಳದಲ್ಲಿ ಶ್ರೀ ಚತ್ರಪಾಣಿ—ನೋಪೀನಾಥ ದೇವಾಲಯವಿದ್ದ ಅದರಲ್ಲಿರುವ ಶ್ರೀ ಕೃಷ್ಣನ ವಿಗ್ರಹವು ಹೊಯ್ಸಳರ ಕಾಲದ ಮೊದಲ ಹಂತದ ಶಿಲ್ಪವನ್ನು ಜನಾಗಿ ಪ್ರತಿಬಿಂಬಿಸುತ್ತದೆ. ಶಿಲಾಲೇಖಗಳೂ ಈ ವಿಧಾನದವನ್ನು ಬೆಂಬಲಿಸುತ್ತವೆ. ಶ

ರವು ಗಣಪತಿಯ ದೇವಾಲಯವು ಕ್ರಿ. ಶ. 14-15ನೇ ಶತಮಾನದ್ದಿರ ಬೇಕು. ಕಾರಣ ಇದು ಬಂಗನಾಡಿಯ ಬಂಗರ ಜನಾಂದ ಪ್ರತಿಷ್ಠಿಸಲ್ಪಟ್ಟಿದ್ದೆಂದು ಐತಿಹ್ಯವಿರುವುದರಿಂದ ಬಂಗರ ಇತಿಹಾಸ ಪ್ರಾರಂಭಕ್ರಿ.ಶ. 14ನೇ ಶತಕದಲ್ಲಿ. ಆದು ದರಿಂದ 14—15ನೇ ಶತಕದಲ್ಲಿ ಈ ದೇವಾಲಯದ ನಿರ್ಮಾಣವಾಗಿರಬೇಕು. ಈ ಗಣಪತಿಯ ಪೀಠದಲ್ಲಿ ಬಂಗರಾಜನ ಅರಮನೆಯೆದ್ದಂತೆ ಕಂಡು ಬರುತ್ತದೆ. ಕ್ರಿ. ಶ. 1303ರ ಬಂಕಿಕೂಳುಪೇಂದ್ರನ ಶಿಲಾಲೇಖವೊಂದು "ನೀರ ದೇವಾಲ್ಯದಲು ಬ್ರಹ್ಮಾ ವಿಷ್ಣು ಮಹೇಶ್ವರರ್ಗೆ" ಮಾಡಿದ ದತ್ತಿಯೆಂದನ್ನು ತಿಳಿಸುತ್ತದೆ. ಈ ದೇವಾಲಯವು ಹೊಯಿಗೆ ಸಜಾರಿನಲ್ಲಿರುವ ಶಿವ ದೇವಾಲಯವೇ ಇರಬೇಕು. ಇಲ್ಲಿಹು ಅನೇಕಲ್ಲುಗಳಲ್ಲಿ ಪ್ರಾಚೀನತೆ ಕಂಡು ಬರುತ್ತದೆ.

ಮಂಗಳೂರಿಂಬ ಹೆಸರು ಮಂಗಳಾದೇವಿ ದೇವಸ್ಥಾನದಿಂದವೆಂಬ ಒಂದು ಸಾಮಾನ್ಯ ಅಭಿಪ್ರಾಯವಿದೆ. ಆದರೆ ಈ ಐತಿಹ್ಯದಲ್ಲಿ ಕಾರುಳಿದ್ದಂತೆ ಕಂಡು ಬರುವುದಿಲ್ಲ. ಕಾರಣ ಜನ ತಿಳಿದಂತೆ ಈ ದೇವಳವು ನಾಥಪಂಥದೊಳಗೊಂಡ 'ಮಂಗಳೆ' ಎಂಬವಳ ಸ್ಮಾರಕಕ್ಕಾಗಿ ಅಸ್ತಿತ್ವಕ್ಕೆ ಬಂದ. ದೇಗುಲವೆನ್ನಲು ಸಾಕಷ್ಟು ಸಾಧಾರಗಳು, ದೊರಕುವುದಿಲ್ಲ. ಈ ದೇವಾಲಯದ ಶ್ರೀ ಗಣೇಶನ ಮೂರ್ತಿ, ತೀರ್ಥದ್ವಾರ ಮತ್ತು ಮೂಲಸ್ಥಾನ ದೇವೀ ವಿಗ್ರಹಗಳನ್ನು ಸಾಕಷ್ಟು ಪರಿಶೀಲಿಸಿದರೆ ಇನ್ನೆಲ್ಲವೂ ಸುಮಾರು ಕ್ರಿ. ಶ. 8–9ನೇ ಶತಮಾನಕ್ಕಾದರೂ ಅನ್ವಯಿಸುವಂತವುಗಳಾಗಿವೆ. ನಾಥ ಪಂಥವು ಮಂಗಳೂರಲ್ಲಿ ಬಳಕೆಗೆ ಬಂದದು ಕ್ರಿ. ಶ. 10ನೇ ಶತಕದಲ್ಲಿ ಮಧ್ಯಕಾಲದಲ್ಲಿ ಎನ್ನಬೇಕು. 'ಮಂಗಳಾಮಾ' ವೆಂದರೆ ಪ್ರಾಚೀನ ಕೋಟೆ ಹಾಗೂ ಭದ್ರತೆ ಯೂ ರಕ್ಷಣೆಯಿರುವ ಸ್ಥಳವೆನ್ನಬಹುದು.

ಮಂಗಳೂರಲ್ಲಿ ಬಳಿ ನಿರ್ಮಾಣವು ಕನಿಷ್ಠ ಹಪ್ಪತ್ತು ಕ್ರಿ. ಶ. 13ನೇ ಶತಕದಲ್ಲಾದರೂ ನಡೆದಿರಬೇಕು. ಹಂಜಮಾನ ವೆಂಬ ಮುಸಲ್ಮಾನ ವಾಣಿಜ್ಯ ಸಂಸ್ಥೆಯು ಇಲ್ಲಿ ಪ್ರಭಾವಿತವಾದಂತೆ ತಿಳಿದು ಬರುತ್ತದೆ. ಈಗಿನ ಜೋಳೂರು ಭಳೂರೆಂದು ಶಿಲಾಲೇಖದಲ್ಲಿ ಉಲ್ಲೇಖಗೊಂಡಿದೆ. ಮಂಗಳೂರಿನ ಒಂದು ಭಾಗ ಕೊಡೆಯೂರ (ತುಳುವಿನಲ್ಲಿ ಕುಡಲ) ವೆನಿಸಲ್ಪಡುತ್ತದೆ. ಶ್ರೀ ಸಿಲ್ವರ ಮಂಗಳೂರಿನ ಅವರ ಹೊತ್ತಗೆಯಲ್ಲಿ ಈ ಹೆಸರು ಟಿಪ್ಪು ಸುಲ್ತಾನನ ಕಾಲದಿಂದ ಬಂದಿರಬೇಕೆನ್ನುತ್ತಾರೆ. ಆದರೆ ಈ ಹೆಸರು ಕ್ರಿ. ಶ. 16ನೇ ಶತಮಾನದಿಂದಲೇ ಬಳಕೆಯಲ್ಲಿತ್ತೆಂದು ಶಿಲ್ಪಾಧಾರಗಳಿಂದ ತಿಳಿಸುತ್ತದೆ. ಮಂಗಳೂರಿನ ಸಮೀಪದಲ್ಲಿರುವ ಎಂಬಲ್ಲಿ ಒಂದು ಸೂರ್ಯ ದೇವಳವಿದೆ. ಇದು 10-11ನೇ ಶತಕದ ದೇವಳವಿರಬೇಕು. ಇಲ್ಲಿಯ ಸೂರ್ಯ ವಿಗ್ರಹವು ಉತ್ತರ ಮತ್ತು ದಕ್ಷಿಣ ಭಾರತದ ಸೂರ್ಯ ವಿಗ್ರಹಗಳ ಸಮಾವೇಶವೋ ಎನ್ನುವಂತಿದೆ. ಇಲ್ಲಿಯೇ ಇರುವ ಒಲವಿನ ಗಣೇಶನು ಅಕರ್ಷಣೀಯನಾಗಿದ್ದಾನೆ ಶಿಲಾಲೇಖದಲ್ಲಿ ಬರುವ ತಿಮ್ಮೀಶ್ವರನೆಂದರೆ ಸೂರ್ಯನೂ ಆದಿತ್ಯನೋ ಏನೋ?

ಕೃಷಿತೋ ನಾಸ್ತಿ ದುರ್ಭಿಕ್ಷಂ

(ಹಿನ್ನೆರಹನೇ ಪುಟದಿಂದ)

ಗೊಬ್ಬರವನ್ನು ಯೋಗ್ಯರೀತಿಯಲ್ಲಿ ರಕ್ಷಿಸಬೇ ಂಬ ತಿಳಿವೂ ಆವರಿಗೆ ಇದ್ದಂತಿಲ್ಲ. ಇನ್ನು ಸೊಪ್ಪು— ಕಾಡಿದ್ದರಲ್ಲವೆ? ಹೊಸತಾಗಿ ಕಾಡು ಬೆಳೆಸುವ ಯೋಜನೆಯೇ ಇಲ್ಲ.

ಶೃತಕ ಗೊಬ್ಬರವನ್ನು ಕ್ಷೇಯಲ್ಲಿ ದುಡ್ಡಿದ್ದವ್ರು ತಂದು ಹಾಕುವುದು ಬಹು ಸುಲಭದ ಕೆಲಸ. ಆದರೆ ಊರ ಬೆಳೆಗೆ — ಯೂರ ಮಣ್ಣಿಗೆ.—ಎಷ್ಟು ಪ್ರಮಾಣದಲ್ಲಿ-ಏನು ಸೇರಿಸಬೇಕೆಂಬ ಜ್ಞಾನ ನಮ್ಮ ರೈತರಿಗೆ ನೂರಕ್ಕೆ ನೂರು ಇಲ್ಲ— ತರಬೇತಿ ಕೇಂದ್ರಗಳೇನೂ ನಡೆದಿವೆ. ಇಷ್ಟರ ಮೇಲೆ ಒಂದು ಕೆಟ್ಟ ದಿನ. ಆ ಸಿದ್ಧ ವಸ್ತುಗಳ ಕೊರತೆಯಿಂದಲೇ ಅಥವಾ ಕಾರ್ಮಿಕ ಮಂತ್ರಿಯೋ—ಅಥವಾ ಯುದ್ಧವೋ— ಏನೋಕಾರಣದಿಂದ ಕೃತಕ ಗೊಬ್ಬರ ಬಾರದಿದ್ದರೆ ನಿಂತರೆ? ಉಟ್ಟ ಸೀರೆ ಸುಟ್ಟಾಯಿತು— ಹೊಸ ಸೀರೆ ಬರಲಿಲ್ಲ. ನಮ್ಮ ಸ್ಥಿತಿ ಅಷ್ಟಿಗೆ ಬಂದೀತು.

ದಕ್ಷಿಣ ಕನ್ನಡದ ಮಟ್ಟಿಗೆ ಹೇಳುವುದಾದರೆ ನಮ್ಮನ್ನು ಕಾಪಾಡಬೇಕು ಮಳೆರಾಯ. ಈ ಮಳೆರಾಯನ ವೈಪರೀತ್ಯವನ್ನು ಎಂತೇ ನಮ್ಮ ಹಿರಿಯರು ಸಣ್ಣ ನೀರಾವರಿ ಯೋಜನೆ ಮಾಕಿದ್ದರು. ನಾವು ಇಂದು ಅವನ್ನು ಅಳಿಸಿದ್ದೇವೆ. ಹೊಸ ಯೋಜನೆ ನಮ್ಮಲ್ಲಿಲ್ಲ. ಗಾಂ ಇಂಚು ಸರಾಸರಿ ಮಳೆ ಬರುವ ಪ್ರದೇಶದಲ್ಲಿ ಇಷ್ಟು ನೀರನ್ನು ಅನವಶ್ಯವಾಗಿ ಆರಬಿಸಮುದ್ರಕ್ಕೆ ಹರಿಯಲು ಬಿಡುತ್ತಿದ್ದೇವೆ. ಇದರ ಸಂಗ್ರಹಣೆಗೆ ನಮ್ಮಲ್ಲಿ ಏನು ಯೋಜನೆ ಇದೆ? ನವ್ಯಲ್ಲಿ ಕೆಲವಾದರೂ ಸಿಹಿ ನೀರ ಕೆರೆಗಳಿವೆ. ಇವುಗಳ ಬಗೆಗಾದರೂ ಏನಾದರೂ ಚಿಂತೆ ಇದೆಯೆ? ಪಂಪು ಸೆಟ್ಟುಗಳು ಎಷ್ಟು ರೈತರ ಕೆಸೆಗೆ ಒಗ್ಗುವಂತಹವ್ಗೆ? ಆದಕ್ಕೂ ನೀರಿನ ಆಧಾರ ಬೇಡವೆ?

ಕೃಷಿರುಣ್ಣಿ ಮಾನವ ಸಂಪತ್ತು ಪಶು ಸಂಪತ್ತುಗಳಿಗೆ ಪ್ರಧಾನ ಸ್ಥಾನವಿದೆ. ನಮ್ಮಲ್ಲಿ ಒಕ್ಕಲು ಸಾಕಣೆ ಬಗ್ಗೆ ಯೂರ ಸೌಲಭ್ಯವೂ ಇಲ್ಲ. ಎಷ್ಟೋ ರೈತರ ಮನೆಯ ಜಾಮವಾರುಗಳು ತೆನ್ನಾಲಿರಾಮ ಕೃಷ್ಣನ ಕುದುರೆಯ ನೆನಪನ್ನು ತರುತ್ತವೆ.

ಈ ಒಂಪೆ ದನಕರುಗಳಿಗೆ ಅಡ್ಡಾಡಲು ಬೇಕಾಷ್ಟು ಹೊಲಗಳಿದ್ದುವು. ಗೋಚರಾವ್ಯ ಸ್ಥಳಗಳು ಇದ್ದವು. ಇಂದೂ ನಮ್ಮ ಪಂಚಾಯತ್ ಕ್ಷೇತ್ರಗಳಲ್ಲಿ ನೂರಾರು ಎತ್ತೆ ಖಾಲಿ ಜಮೀನುಗಳಿವೆ; ಆದರೆ ಅವೆಲ್ಲ ಬಳಕೆಗೆ ಬಾರದ ನಸ್ತುಗಳಾಗಿವೆ. ಜಾನುವಾರುಗಳಿಗಾಗಿ ಉತ್ತಮ ಹುಲ್ಲುಗಾವಲುಗಳನ್ನು ಇಲ್ಲಿ ಏರ್ಪಡಿಸಬಹುದು. ಯಂತ್ರದ ನೇಗಿಲುಗಳು ನಮ್ಮ ರೈತನ ಕೆಸೆಗೆ ಹಿಡಿಸಲಾರವು.—ಅವನಿಗೆ ಬೇಕು ಪಶುಸಂಪತ್ತು.

ಪಂಪು ಸೆಟ್ಟುಗಳು ನಲ್ಲಿ ರೈತನ ಆಸ್ತಿಯಾಗಲಾರವು—ಅದಕ್ಕೆಂತ ಕಡಿಮೆ ಬೆಲೆಯ ನೀರೆತ್ತುವ ಏತಗಳ ಕುರಿತು ನಮ್ಮ ತಜ್ಞರು ಚಿಂತಿಸಬೇಕು— ಕಡಿಮೆ ಬೆಲೆಯ ಮೋಟಾರು ಬಾರುಗಳ ತಯಾರಿಕೆ – ನೂರು ರೂಪಾಯಿಗೆ ಒಂದು ಟ್ರಾನ್ಸಿಸ್ಟರ್ ಒದಗಿಸುವ ಉಮೇದುವುಳ್ಳ ನಮ್ಮ ಸರಕಾರ ನೂರುರೂಪಾಯಿಗೆ ನೀರೆತ್ತುವ ಒಂದು ಸಾಧನವನ್ನು ನಮ್ಮ ರೈತನಿಗೆ ಒದಗಿಸಲಿ. ನೂರು ರೂಪಾಯಿಗೆ ಉತ್ತಮ ತಳಿಯ ಜೋಡೆತ್ತುಗಳನ್ನೂ ನಮ್ಮ ರೈತನಿಗೆ ಒದಗಿಸಲಿ.

ಕೊನೆಯದಾಗಿ ನಮ್ಮ ಭೂಸುಧಾರಣೆಯ ಕುರಿತು ಒಂದು ಮಾತು ಹೇಳಬೇಕು. ಸಮತಾವಾದ ಕಲ್ಯಾಣ ರಾಷ್ಟ್ರದ ಪೆಸರಿನಲ್ಲಿ ಒಬ್ಬನ ಪ್ರಾಣ ಹಿಂಡಿ ಇನ್ನೊಬ್ಬನನ್ನು ಬದುಕಿಸುವುದು ಸಮತಾವಾದವಲ್ಲ. ಇಂದಿನ ಭೂಸುಧಾರಣೆ ಕಾನೂನಿನಿಂದ ಇತ್ತ ಗೇಣಿದಾರನಿಗೂ ಅತ್ತ ಭೂಮೂಲಶನಿಗೂ ಇಕ್ಕಟಂಡದವರಿಗೂ ಲಾಭವಿಲ್ಲ. ಇದರಿಂದ ಲಾಭ ಪಡೆದವರು ಕಾನೂನು ಪಂಡಿತರು.

ಭೂಮೂಲಿಕರೇನು ಶಾಪಗ್ರಸ್ತರಲ್ಲ. ಗೇಣಿದಾರರಲ್ಲೂ ಹಲವರು ಭೂಮಿಯನ್ನು ವಿರೂಪಸಡಿಸಿ ಉತ್ಪನ್ನ ಬೆಳೆ ತೆಗೆಯದವರಿದ್ದಾರೆ. ಭೂಮೂಲಿಕರಲ್ಲೂ ಕಡಿಮೆ ಹಿಡುವಳಿದಾರರಿದ್ದಾರೆ. ಗೇಣಿದಾರರಲ್ಲೂ ಇತರ ಉದ್ಯೋಗವನ್ನು ಅವಲಂಬಿಸಿ ಕೊಂಡವರೂ ಇದ್ದಾರೆ. ಇವನ್ನೆಲ್ಲ ಶಾಸನ ರಚಿಸುವಾಗ ಗಮನಿಸಲೇ ಇಲ್ಲ—ಭೂಮಿಯ—ಗುಣ—ಮೌಲ್ಯ.—ಪರ್ಗ ಭೇಧಗಳನ್ನು ಗಮನಿಸಲಿಲ್ಲ. ಸ್ವಂತ ಸಾಗುವಳಿ ಮಾಡಿ ಉತ್ತಮ ಬೆಳೆ ತೆಗೆದು

ಮಹಾತ್ಮರ ಕನಸಿನ ಭಾರತ

(ಹಿನ್ನೋಡನೇ ಪುಟದಿಂದ)

ರಣೆಗಳನ್ನು ಭಾರತೀಯ ಜನತೆಗೆ ಬೋಧಿಸಿ—ಪ್ರದರ್ಶಿಸಿ—ಅವರ ಅನುಭವಕ್ಕೆ ತಂದಿಕ್ಕಿ ಭೂಲೋಕವನ್ನು ಸ್ವರ್ಗವನ್ನಾಗಿಸಬಹುದು—ಸ್ವರ್ಗ ವಾಸವನ್ನು ವಿಸ್ತರಿಸುವ ಸುಖವಾಸ ಭೂನಿಯನ್ನಾಗಿ ರೂಪಿಸಬಹುದು—ಎಂದು ಕನಸು ಕಂಡಿದ್ದರು ಆ ಸಾಧುಪುಂಗವರು?

ಆದರೆ ದೇಶಕ್ಕೆ ಸ್ವಾತಂತ್ರ್ಯ ಪ್ರಾಪ್ತವಾದ ಮೇಲೆ ಮಹಾತ್ಮರ ಕಠಿಣ ಧ್ಯೇಯ ಜೀವನ ಆನೇಕರಿಗೆ ರುಚಿಸಿದಾಯಿತು. ಸ್ವರಾಜ್ಯ ಘೋಷಣೆಯು ವಿಶೇಷ ನೈಭವೋತ್ಸವವಾಗಿ ನಡೆಯಬೇಕೆಂಬ ಉದ್ದೇಶದಿಂದ ರಾಜಕೀಯ ಧುರೀಣರ ವಿಶೇಷವಿಮಾನದಲ್ಲಿ ಪ್ರತ್ಯೇಕ ಪ್ರಯಾಣ ಏರ್ಪಡಿಸಿದ ಕಾರ್ಯಕ್ರಮಗಳನ್ನು ಸೂಕ್ಷ್ಮವಾಗಿ ಗಮನಿಸಿದಿದ ಮಹಾತ್ಮಾಜೀ ಅವರು ಆ ಆಡಂಬರದ ಉತ್ಸವ ನೈಭವಗಳಲ್ಲಿ ವಾಲ್ಗೊಳ್ಳಲು ಇಚ್ಛಿಸಲಿಲ್ಲ. ಜೇಷ್ಠ ವಿಂಗಡಣೆಯಿಂದ ಬಂಗಾಳ ಪ್ರಾಂತದಲ್ಲಿ ಹಿಂದೂ ಮಹಮ್ಮದೀಯರಲ್ಲಿ ಸಂಭವಿಸಿದ ಅಶಾಂತಿಯಲ್ಲಿ ಪಾಲ್ಗೊಳ್ಳಲಿಕ್ಕಾಗಿ ಆ ಪ್ರಾಂತದಲ್ಲಿ ಪಾದಯಾತ್ರೆಯನ್ನು ಕೈಕೊಂಡು — ನವದೆಹಲಿಯನ್ನು ಬಿಟ್ಟು ಹೋದರು. ಪೂರ್ವ ಬಂಗಾಳ ಪಶ್ಚಿಮ ಬಂಗಾಳ ಮತ್ತೆ ಹಿಂದೂ ಮಹಮ್ಮದೀಯರಲ್ಲಿ ಉಂಟಾದ ದ್ವೇಷ, ಅಸೂಯೆ ಕೊಡೆದಾಟ ಕಪಿದಾಟಗಳನ್ನು ಕೊಲೆ ಇತ್ಯಾದಿಗಳ ನಿವಾರಣೆಗಾಗಿ ಆ ಮಹಾನೀಯರು ಕಾಲ್ನಡಿಗೆಯಿಂದ ಒಂದೊಂದು ಮನೆಯನ್ನೂ ಹೊಕ್ಕು ಜನತೆಗೆ ಶಾಂತಿ ಮಂತ್ರವನ್ನು ಬೋಧಿಸಿ ಸಮಾಧಾನ ಹೇಳಿ ತಾತ್ಕಾಲಿಕ ಶಮನ ಪಡಿಸಿದರು. ಅವರ ಸ್ಪರ್ಶಕ್ಕೆ ಪ್ರವೇಶದಿಂದ ಆ ಕ್ಷುಲ್ಲ ಪುಟ್ಟಗೆ ಶಾಂತಿ ನೆಲೆಸಿತಾದರೂ, ತರುವಾಯ ಬಿಹಾರು ಪ್ರಾಂತದಲ್ಲೂ ದೆಹಲಿಯಲ್ಲೂ ಪಂಜಾಬು ಪ್ರಾಂತದಲ್ಲೂ ಆಗಣಿತ ಸಂಖ್ಯೆಗಳು ಹಿಂಸೆ ಕೊಲೆ ಸುಲಿಗೆ ಅತ್ಯಾಚಾರಾದಿಗಳು ನಡೆದು ಅ ಸಾಧು ಪುರುಷರ ಮನಸ್ಸಿಗೆ ಅಸಹನೀಯ ವೇದನೆಯನ್ನುಂಟುಮಾಡಿದುವು.

ತರುವಾಯ ಹೇಳುವುದೇನು? ಭಾರತೀಯ ಪಕ್ಷ ಧ್ಯೇಯೋದ್ದೇಶಾನುಸಾರವಾಗಿ ಈ ದೇಶಕ್ಕೆ ಸಹ್ಯ ಅಹಿಂಸಾ ಈ ಅಸ್ತ್ರ ಶಸ್ತ್ರಗಳ ಮೂಲಕವಾಗಿಯೇ ಸ್ವಾತಂತ್ರ್ಯ ಪ್ರಾಪ್ತವಾಗಬೇಕೆಂಬುದು ಭಗವತ್ಸಂಕಲ್ಪದಲ್ಲಿದ್ದು ಅದನ್ನು ಸತ್ಯ ಸಂಯಮ ಜೀವನ ಮೂಲಕ ಸಾಧಿಸಿಕೊಡಬೇಕೆಂಬುದು ಕಾರ್ಯಕ್ಕಾಗಿಯೇ ಮಹಾತ್ಮಾ ಗಾಂಧಿಯವರ ಜೀವನ ವಿನಿಯೋಗವಾಗಿತ್ತೋ ಎಂಬಂತೆ—ಅಷ್ಟು ಕಾರ್ಯ ನಡೆಯಿತು; ದೇಶಕ್ಕೆ ಸ್ವಾತಂತ್ರ್ಯ ಪ್ರಾಪ್ತವಾಯಿತು. ಮುಂದೆ ಸಾಧ್ಯವಾದುದು ತಿಂಗಳೊಳಗಾಗಿಯೇ ನುಡಿತಾತ್ಮಾಜೀ ಅವರು ರಾತ್ರಿಯ ನೆಯ ಜನವರಿ ೩೦ರಂದು ಗುಂಡಿ ನೇಟಿಗೆ ಬಲಿಯಾಗಿ ತಮ್ಮ ಪ್ರಾಣವಿ ಪ್ರತಿಕ ದೇಹವನ್ನು ನೀಗಿದರು. ಕೊನೆ ಕೊನೆಯ ದಿನಗಳಲ್ಲಿ ರಾಜಕೀಯ ಕ್ಷೇತ್ರದಲ್ಲಿ ಅವರ ಧ್ಯೇಯ ಪೂರ್ಣವಾಡಿಗೆ ಏನೂ ಬೆಲೆಯಿಲ್ಲದೆ ತಮ್ಮ ಕಣ್ಣು ಮುಂದೆಯೇ ತಮ್ಮ ಧ್ಯೇಯಗಳು ಸಿರಿಸನವಾಗುತ್ತಿದ್ದುದನ್ನು ಕಂಡು ಬೇಸತ್ತ ಅವರು ಆದನ್ನು ತೀಕ್ಷ್ಣವಾಗಿ ವ್ಯಕ್ತಪಡಿಸಿದ್ದರು. ಆದರೆ ಸತ್ಯ ಅಹಿಂಸಾ ಧರ್ಮ ಸಂಸ್ಕೃತಿಯ ಅಂತಹ ಘೋಷಣೆಯ ಸ್ಫೂರ್ತಿಯನ್ನೂ ಮೂಡಲಿಲ್ಲ. ಪ್ರಧಾನ ಮಂತ್ರಿಗಳಾದ ಪಂ| ಜವಾಹರಲಾಲ ನೆಹರೂ ಅವರು ಹಿಂದೂ ಧರ್ಮಾನುಯಾಯಿಗಳ ಇಚ್ಛಾನುಸಾರ ಭಾರತ ರಾಜ್ಯಪಾಲನೆ ನಡೆಯಬೇಕೆಂಬುದನ್ನು ನುನ್ನಿಸಲಿಲ್ಲ. ಮಹಾತ್ಮಾಜೀ ಅವರು ಸನಾತನ ಧರ್ಮಾವಲಂಬಿಗಳಾಗಿ, ಶ್ರೀ ರಾಮನಾಮ- ಶ್ರೀ ಕೃಷ್ಣ ಸ್ಮರಣೀಕ ಭಗವದ್ಗೀತಾ ಇವುಗಳನ್ನು ಪರಮ ನಿಷ್ಠೆಯಿಂದ ಅನುಸರಿಸುತ್ತಿದ್ದರಾದರೂ ಅವರ ಉತ್ತರಾಧಿಕಾರಿಗಳಾಗಿ ಬಂದ ಜವಾಹರಲಾಲ ನೆಹರೂ ಅವರು ಭಾರತವು ಜಾತ್ಯತೀತರಾಷ್ಟ್ರವಾಗಿರಬಲ್ಲದು, ಆದರೆ ಪಾಲನೆಗೆ ಯಾವ ಮತ ನೀತಿಗಳ ಧರ್ಮವೂ ತಡೆಯಾಗಿರಲಾರದು, ಎಂದು ಘೋಷಿಸಿದರು. ಇದರಿಂದ ಆದ ಪರಿಣಾಮ ಹಿಂದೂಗಳಿಗೆ ಪರಮ ಅಹಿತಕಾರಿಯಾಗಿ ಪರಿಣಮಿಸಿತು. ಮಹಮ್ಮದೀಯರೂ ಕ್ರೈಸ್ತರೂ ತಮ್ಮ ತಮ್ಮ ಧರ್ಮಗಳನ್ನು ನಿರಾತಂಕವಾಗಿ ಪ್ರಚಾರಗೊಳಿಸಿ, ಕಂಡಂತೆ ಕಾಣುವಂತೆ ಹಿಂದೂ ಮತೀಯರನ್ನು ತಮ್ಮ ಧರ್ಮಗಳಿಗೆ ಸೇರಿಸಿಕೊಳ್ಳುತ್ತ, ತಮ್ಮ ಜನಸಂಖ್ಯೆಯನ್ನು ವೃದ್ಧಿಪಡಿಸಿಕೊಳ್ಳಲು ಇದರಿಂದ ಮಾರ್ಗ ತೆರೆದಿಟ್ಟಂತಾಯಿತು ಹಿಂದೂಗಳು ತಮ್ಮ ಮತ ಧರ್ಮಗಳನ್ನು ಕುರಿತು ಪ್ರಸ್ತಾಪಿಸಿದಲ್ಲಿ ಆದು ಅಲ್ಪ ಸಂಖ್ಯಾಕರ ಮೇಲಿನ ಅಪರಾಧ ಎಂಬ ಕಾರಣದಿಂದ ನಿರಂಕುಶಪಟ್ಟು ಆ ಅನ್ಯಮತೀಯರಿಗೇ ಅಲ್ಲಾ ಸೌಕರ್ಯ ದೊರೆಯುವಂತಾಯಿತು. ಹೀಗಾಗಿ ಹಿಂದೂಗಳು ತಮ್ಮ ಸ್ವದೇಶದಲ್ಲೇ ಪರದೇಶಿಗಳಾದಂತಾಯಿತು.

ಸ್ವರಾಜ್ಯಕ್ಕಾಗಿ ಜಳುವಳಿ ನಡೆದ ಕಾಲದಲ್ಲಿ ಲೋಕಮಾನ್ಯ ತಿಲಕರು, ಮಾ॥ ಗಾಂಧಿಯವರು, ಮಹಾಮನಾಮದನ ಮೋಹನ ಮಾಳವೀಯರೂ, ಸ್ವರಾಜ್ಯ ಪ್ರಾಪ್ತವಾದೊಡನೆಯೆ ಭಾರತದಲ್ಲಿ ಗೋಹತ್ಯೆ ನಡೆಯುವುದನ್ನು ನಿಷೇಧಿಸಿಗೋ ಸಂತತಿಗೆ ಸುರಕ್ಷಣೆಯನ್ನೊದಗಿಸುವುದು ನಮ್ಮ ಪ್ರಥಮ ಕರ್ತವ್ಯ ಎಂದು ಘೋಷಿಸಿದ್ದುದು ಸರ್ವಶ್ರುತ ವಿಚಾರ. ಆದರೆ ಸ್ವಾತಂತ್ರ್ಯ ಪ್ರಾಪ್ತವಾಗಿ ಇಪ್ಪತ್ತು ವರ್ಷಗಳು ಕಳೆದ ಮೇಲೂ, ಇನ್ನೂ ಈ ಗೋಹತ್ಯಾ ನಿರೋಧವು ಕಾನೂನು ಸ್ವರೂಪ ಕೈಕೊಳ್ಳಲು ವಿಘ್ನಮೇಘಗಳ ಎಣಿಕೆಯಲ್ಲೇ ತೊಡಗಿಸುತ್ತಿದೆ. ಕೇಂದ್ರ ಸರ್ಕಾರವು, ಈ ಅಧಿಕಾರವು ರಾಜ್ಯ ಸರ್ಕಾರಗಳಿಗೇ ಇವೆ ಎಂದೂ, ಪ್ರಜಾ ವರ್ಗದ ಮನಃಪರಿವರ್ತನೆಯಿಸ್ಸನುಸರಿಸಿ ಈ ಕಾರ್ಯ ನಡೆಯಬೇಕೆಂದೂ—ಗೋಡೆಯ ಮೇಲೆ ದೀಪವಿಟ್ಟಂತೆ ಅರ್ಥಂಬರ್ಥ ಅಭದ್ರ ನುಡಿಗಳಲ್ಲಿ ಕಾಲಹರ್ಯಕ್ಷಿತಿದೆ. ಇದಕ್ಕಾಗಿ ಜಳುವಳಿ ಹೂಡಿದ ನೂರಾರು ಮಂದಿ ಸಾಧುಗಳೂ ಸನ್ಯಾಸಿಗಳೂ ಉಪವಾಸ ವನವಾಸಗಳನ್ನನುಭವಿಸಿ ಸೋತಿದ್ದಾರೆ. ಇನ್ನೂ ನೂರಾರು ಮಂದಿ ಸಾಧುಗಳು ನೆರೆಮನೆಗಳಲ್ಲಿ ತೊಳಲುತ್ತಿದ್ದಾರೆ. ಗೋಹತ್ಯಾ ನಿರೋಧ ಪ್ರಶ್ನೆಯು ಇನ್ನೂ ನೆನೆಗುದಿಯಲ್ಲೇ ಬಿದ್ದಿದೆ.

ಮದ್ಯಪಾನ ನಿರೋಧ ಪ್ರಶ್ನೆಯೊಂದು ಮಹಾತ್ಮಾಜೀ ಅವರಿಗೆ ಅತ್ಯಂತ ಪ್ರಿಯ ಕರವಾಗಿದ್ದುದು. ರಾಜ್ಯಪಾಲನಾ ಸೂತ್ರಗಳನ್ನು ನಿರ್ಮಿಸಿದಾಗ, ಕಾಂಗ್ರೆಸ್ ಸರ್ಕಾರವು ಮಹಾತ್ಮಾಜೀ ಅವರ ಈ ಒಂದು ಪ್ರಶ್ನೆಗೆ ವಿಶೇಷ ಪ್ರಾಮುಖ್ಯ ಕೊಟ್ಟು ಎಲ್ಲಾ ರಾಜ್ಯ ಸರ್ಕಾರಗಳಲ್ಲೂ ಮದ್ಯಪಾನ ನಿಷೇಧವನ್ನು ಘೋಷಿಸಿತು. ಆದರೆ ಆದರಿಂದ ಆದ ಪರಿಣಾಮ ವೇನು? ಈ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಮದ್ಯಪಾನ ಅಭ್ಯಾಸವೇನು ಭಾರತೀಯ ಜನ ಸಾಮಾನ್ಯರಲ್ಲಿ ತೊಲಗಿ, ಅವರು ಪುನೀತರಾಗಲಿಲ್ಲ. ಪ್ರತಿಯಾಗಿ, ಕಳ್ಳ ಭಟ್ಟಿಯ ಮೂಲಕ ಅರೆಬರೆ— ಅಪಕ್ವ ರೀತಿಯಿಂದ ಸಾರಾಯಿಯನ್ನು ತಯಾರಿಸಿಕೊಂಡು ಕುಡಿದು ಶಕ್ತಿಗೆಡೆಗೊಂಡರು. ಸಹಸ್ರಾರು ಮಂದಿ ಅದನ್ನೇ ಒಂದು ಉಪಉದ್ಯೋಗವೋ ಎಂಬಂತೆ ಬೆಳೆಸಿಕೊಂಡು ಬಂದು ಲಕ್ಷಾಂತರ ದ್ರವ್ಯಗಳಿಸಿಕೊಂಡರು. ಪೋಲೀಸು, ಎಕ್ಸೈಜು ಮುಂತಾದ ಇಲಾಖೆಗಳ ಅಧಿಕಾರಿಗಳೂ ನೌಕರರೂ ಲಂಚ ಸುಸುವಶ್ಯಗಳನ್ನು ಪಡೆಯುವುದರಲ್ಲಿ ನಿಸ್ಸೀಮ ಅನುಭವಗಳನ್ನು ಬೆಳೆಸಿಕೊಂಡು ಈ ಉದ್ಯೋಗವನ್ನು ಬಲಿಯಲಿತ್ತರು. ಭ್ರಷ್ಟಾಚಾರವು ಅಷ್ಟಕ್ಕೇ ನಿಲ್ಲದೆ— ಅವರಿಗಾದ ಲಾಭ ನಮಗೇಕೆ ಬೇಡ ಎಂಬುದಾಗಿ ಸರ್ಕಾರದ ಸಕಲ ಇಲಾಖೆಗಳಲ್ಲೂ ಲಂಚಾವತಾರ ಮೂರ್ತಿಯು ತಾಂಡವವಾಡತೊಡಗಿತು. ಇದರಿಂದ ರಾಜ್ಯ ಸರ್ಕಾರಗಳಿಗೆ ಬರುತ್ತಿದ್ದ ಆದಾಯಕ್ಕೆ ಸೊನ್ನೆ— ಕಳ್ಳಭಟ್ಟಿಯನ್ನು ಕಂಡು ಹಿಡಿದು ಅಪರಾಧಿಗಳನ್ನ ಶಿಕ್ಷಿಸುವುದಕ್ಕಾಗಿ

The South Canara Central Cooperative Bank Ltd.,

MANGALORE-3, S. K.

Branches: **COONDAPOOR and PUTTUR**

The Bank offers the following rates of interest on deposits.

	Percent per annum
91 days and over but less than 2 years (for varied terms)	5½ to 6½
2 years and over but less than 3 years	6½
3 years and over but less than 4 years	6¾
4 years and over but less than 5 years	7
5 years and over	7½
Savings Bank Account	4

B. Prabhakara Rao, M. A., B. L., Vice-President

B. Narayana Nayak, President

ಪ್ರತ್ಯೇಕ ಸಿಬ್ಬಂದಿಯ ನೇಮಕ. ಆಸಂಬಂಧ ಅಪಾರ ವೆಚ್ಚ. ಇದು ಮೂಲ ಫಲವಾಯಿತು. ಈ ಬಗ್ಗೆ ನೈಜ ಚಿತ್ರವನ್ನು ಕಂಡ ನಂತರ ಪ್ರಧಾನಿಗಳವರು ಪ್ರತಿಭಟನೆ ಮಾಡಿಕೊಂಡ ಮಂತ್ರಿಗಳೆಲ್ಲವೂ ಇದು ವರೆಗೆ ಜೀವಲ ಅರಣ್ಯರೋದನವಾಗಿತ್ತು. ಈಗ ಈ ವಿಚಾರವು ಸರ್ಕಾರಕ್ಕೆ ತಿಳಿವು ತಂದುಕೆಟ್ಟ ಮದ್ಯಪಾನವನ್ನು ನಿಷೇಧಿಸುವ ಕಾನೂನನ್ನು ಸಡಿಲಗೊಳಿಸಿಯೂ ನಿರ್ಮೂಲನಗೆ ಅಸಿಯೂ ರಾಜಕೀಯ ಉಪ್ಪನ್ನು ಹೆಚ್ಚಿಸಿಕೊಳ್ಳಲು ಮನಸ್ಸು ಮಾಡಿ

ಭಾಷಾವಾರು ಪ್ರಾಂತರಚನೆಯು ಆಯಾ ಭಾಷೆಗಳನ್ನಾಡುವ ಪ್ರಾಂತಗಳವರ ವೈಯಕ್ತಿಕ ಅಭಿವೃದ್ಧಿಗೆ ಸಹಾಯಕವಾಗಿ ನೆರಹೊರೆಯವರಲ್ಲಿ ಸ್ನೇಹ ಸಾರ್ವಾರ್ದ ಭಾವಗಳನ್ನು ಬೆಳೆಸಿಕೊಳ್ಳಲು ಸಹಾಯಕವಾಗಬಹುದು ಎಂಬ ಉದ್ದೇಶವೂ ಸಫಲವಾಗಲಿಲ್ಲ. ತದ್ವಿರುದ್ಧವಾಗಿ ಒಂದೊಂದು ಪ್ರಾಂತದವರೂ ತಮ್ಮ ಸ್ವಾರ್ಥವನ್ನು ಹೆಚ್ಚಿಸಿಕೊಂಡ ನೆರೆಯವರನ್ನು ದ್ವೇಷಾಸೂಯೆಗಳಿಂದ ಕಡೆಗಣಿಸಿ ಪೀಡಿಸುವ ಕ್ಷುದ್ರಮನೋಭಾವವನ್ನು ಕೆಲವು ರಾಜ್ಯಗಳವರಲ್ಲಿ ಉಂಟು ಮಾಡಿರುವುದು ತುಂಬಾ ಶೋಚನೀಯ. ಭಾರತೀಯ ಗಣರಾಜ್ಯನಿಯಮದಂತೆ ಭಾರತೀಯನಾಗಿ ಜನ್ಮನೆತ್ತಿದವನು ವಿಶಾಲ ಭಾರತದ ಯಾವ ಭಾಗದಲ್ಲಾದರೂ ನೆಲೆಸಿ, ತನಗೆ ಇಷ್ಟವಾದ ಉದ್ಯೋಗ ಕೈಕೊಂಡು ಜೀವಿಸಲು ಸ್ವತಂತ್ರನಾಗಿರುವಲ್ಲೆ— ಕನ್ನಡಿಗರಿಗೆ ಮುಂಬಯಿಯಲ್ಲೂ ಮಹಾರಾಷ್ಟ್ರ ದೇಶದ ಇತರ ಭಾಗಗಳಲ್ಲೂ ಆ ದೇಶೀಯರಿಂದ ಉಂಟಾಗುತ್ತಿರುವ ಹಿಂಸೆ ಕಿರುಕುಳಗಳಿಗೆ ಏನರ್ಥವೋ ತೋರದಾಗಿದೆ. ಈ ಪಂಡರಾ ಚಳುವಳಿಯನ್ನು ಅಲ್ಲಿನ ಸರ್ಕಾರವೂ ಒಂದು ಬಗೆಯಿಂದ ಪ್ರೋತ್ಸಾಹಿಸುತ್ತಿರುವುದಂತರ ಆಶ್ಚರ್ಯವೆನ್ನಬೇಕಾಗಿದೆ—ಸಾಲದ ದಕ್ಕೆ ಜಾತಿ ಪಂಥಗಳ ವೈಷಮ್ಯ, ಒಂದು ಜಾತಿಯವರು ಮತ್ತಿತರ ಜಾತಿಯವರನ್ನು ಕುಳಿದು ತಮ್ಮವರಿಗೇ ಪ್ರೋತ್ಸಾಹ ಕೊಡಬೇಕೆಂಬ ಪಕ್ಷಪಾತ ಮನೋಭಾವ ಇತ್ಯಾದಿ ದುರ್ಗುಣಗಳೆಲ್ಲ ಪ್ರಬಲಿಸಿ ಭಾರತೀಯರಲ್ಲಿ ಸಾತ್ವಿಕರ ಬಾಳು ಇಂದು ನಂಕಟ ಸವಾಗಿದೆ.

ಮಹಾತ್ಮಾಜೀ ಅವರು ಆಡಳಿತವು ನಿರಾಡಂಬರವಾಗಿರಬೇಕು, ಸಾತ್ವಿಕ ಜೀವನ ಉನ್ನತ ಚಿಂತನ ಇವು ಭಾರತೀಯರಿಗೆ ಭೂಷಣ ಎಂದು ಘೋಷಿಸಿ ತಮ್ಮ ಜೀವನಾದ್ಯಂತವೂ ತುಂಡು ವಸ್ತ್ರ ಪೊಂದನ್ನುಟ್ಟು ಆಲಯಾಗನೆ ಮಾಡಿದರು. ಅವರ ಇಂದಿನ ಅನುಯಾಯಿಗಳಿಗೆ ಖಾದೀ ವಸ್ತ್ರವಂಬುದು ಒಂದು ರಾಜಕೀಯ ವೇಷವಾಗಿ— ವಿಶ್ರಾಂತಿ, ವಾಹನ ಸೌಕರ್ಯ, ವಾಸ ಸ್ಥಳ, ಉಡಿಸು ತಿನುಸುಗಳು, ಧನಗಳಿಕೆ ಮುಂತಾದುವುಗಳೆಲ್ಲದರಲ್ಲೂ ರಾಜಾಧಿರಾಜರನ್ನೂ, ಮೊಗಲ್ ಬಾದಷಹರನ್ನೂ ಆಂಗ್ಲ ಪ್ರಭುಗಳನ್ನೂ ಮೀರಿಸಬೇಕೆಂಬ ಮನೋವೃತ್ತಿಯು ಸ್ಪಷ್ಟವಾಗಿ ಗೋಚರವಾಗುತ್ತಿದೆ. ಆಂಗ್ಲರನ್ನು ದೇಶದಿಂದ ಆಟ್ಟಿದುದಾಯಿತು. ಆ ಷ್ಟೆ? ಆದರೆ ಅವರ ವೇಷಭೂಷಣ, ಉಡಿಗೆ ತೊಡಿಗೆಗಳು, ಆಹಾರ ವಿಹಾರಗಳು ಒಂದಕ್ಕೊಂದಾಗಿ ಜನತೆಯಲ್ಲಿ ಮನೆ ಮಾಡಿದಂತಿನೆ. ಮಹಾತ್ಮಾಜೀ ಅವರ ಜೀವಿತಕಾಲದಲ್ಲಿ ಸಂಯಮ ಸ್ಥಿತಿಯಲ್ಲಿದ್ದು ವಂದುರಿಕೊಂಡು ಕುಳಿತಿದ್ದ ಅನೇಕ ದುರಾಚಾರಗಳು ಇಂದು ಉಲ್ಬಣಗೊಂಡಂತಿವೆ: ರಾಜ್ಯಾಧಿಕಾರ ಸೂತ್ರಧಾರಿಗಳಿಗೆ, ದೇವರು—ಧರ್ಮ ವಾಪ ಪುಣ್ಯ ಯುಕ್ತ ಆಯುಕ್ತಗಳನ್ನು ಕುರಿತು ಯೋಚಿಸುವ ಮನೋಭಾವವೂ ಉಗ್ರವಾಗಿವೆ. ಗರ್ಭ ನಿರೋಧ ಭ್ರೂಣ ಹತ್ಯಾದಿಗಳು ಸಹ ದೋಷವಲ್ಲ ಎಂಬ ಸ್ಥಿತಿಗೆ ಅವರು ಮುಟ್ಟಿದ್ದಾರೆ. ಇನ್ನು ಕೆಲವು ದಿನಗಳಲ್ಲೇ ಗರ್ಭಿಣಿ ಸ್ತ್ರೀಯರ ಗರ್ಭಪಾತಗೊಳಿಸುವುದು ಕಾನೂನಿನಿಂದ ಅನುಮತಿಯನ್ನು ಪಡೆಯುವಂತಾದರೆ ಅದಕ್ಕಾಗಿ ಆಶ್ಚರ್ಯ ಪಡಬೇಕಾಗಿಲ್ಲ. ಗರ್ಭಧಾರಣೆಯಾಂತೆಯೇ ಗರ್ಭ ಪಾತಗೊಳಿಸಿಕೊಳ್ಳುವುದು ಸ್ತ್ರೀಗೆ ಸಹಜ ಧರ್ಮ ಎಂಬಂತಾಗಬಹುದು—

ಇಷ್ಟೆಲ್ಲ ಅಪಚಾರ ಅನಾಚಾರಗಳ ಫಲವಾಗಿ, ದೇಶಕ್ಕೆ ಎಷ್ಟು ಕೋಟಿ ದ್ರವ್ಯಗಳ ನಿಧಿ ಪರದೇಶಗಳಿಂದ ಬಂದೊದಗಿದರೂ, ದಾರಿದ್ರ್ಯ ತಪ್ಪಲಿಲ್ಲ. ಎಷ್ಟು ಅಣೆಕಟ್ಟುಗಳು ನಾಲೆ, ಕೆರೆ, ಕಟ್ಟೆಗಳು ನಿರ್ಮಿತವಾಗಿ ಬೆಳೆ ಬೆಳೆದರೂ ದೇಶದಲ್ಲಿನ ಆಹಾರಾಭಾವ ನೀಗಲಿಲ್ಲ. ಲೋಕದ ಸಕಲ ದೇಶಗಳಿಗಿಂತಲೂ ಭಾರತಕ್ಕೆ ಧನ—ಧಾನ್ಯಗಳನ್ನು ನೀಡಿದರೂ ದೇಶೀಯರ ಉದರಭರಣ ಪ್ರಶ್ನೆ ನಿತ್ಯ ಬೆಳಗಾದರೆ ಸಂಜೆಯಾದರೆ ಭುಗಿಲೆನ್ನುತ್ತ ನಿಂತಿರುವಂತಾಗಿದೆ. ಧರ್ಮ— ದೇವರು, ಪಾಪ ಪುಣ್ಯಗಳು ಇತ್ಯಾದಿ ವಿಚಾರಗಳಿಗೆ ಮೂಲ ಭೂಮಿಯಾಗಿದ್ದ ಭಾರತ ದೇಶವು —ಇಂದು ಆ ಸಂರಕ್ಷಕ ಉಪಾಯಗಳನ್ನು ನೀಗಿಕೊಂಡು, ಪರದೇಶೀಯ ಂತಾಗಿದೆ. ಮಾಹಾತ್ಮರ ಸಕ್ಕ —ಅಹಿಂಸಾ ಧ್ಯೇಯಗಳು ಗಾಳಿಗೆ ತೂರಿ ಹೋಗಿವೆ. ಎಲ್ಲೆಲ್ಲೂ ಅತ್ಯ —ಹಿಂಸಾಕೃತ್ಯಗಳು ತಾಂಡವವಾಡುತ್ತಿವೆ. ದೇಶೀಯ ಸೈನ್ಯಗಳು ವಿದ್ಯಾರ್ಥಿಗಳ ಮೇಲೂ, ದೇಶದ ಪ್ರಜೆಗಳ ಮೇಲೂ ತಮ್ಮ ಬಲಪ್ರಯೋಗ ಮಾಡಿ ಹಿಂಸಿಸುತ್ತ ಪರಕೀಯರಾದ ದುರುಳರನ್ನು ಸಾಮವಾಕ್ಯಗಳಿಂದ ಗೌರವಿಸುತ್ತ, ಅವರು ಕೊಡುವ ಕಿರುಕುಳಗಳನ್ನು ಸಹಿಸಿಕೊಳ್ಳುತ್ತ, ಮಾಡವ ಅಪಮಾನಗಳನ್ನು ಕಡೆಗಣಿಸುತ್ತ ಭಯಗ್ರಸ್ತರಾಗಿ ಕಾಲಯಾಪನೆ ಮಾಡುವ ಹೀನ ಸ್ಥಿತಿ ಎದ್ದು ಕಾಣುತ್ತಿದೆ ದುಷ್ಟರನ್ನು ಸಾಮವಾಕ್ಯಗಳಿಂದ ಗೌರವಿಸುತ್ತ ಸಾತ್ವಿಕರನ್ನು ಬೆದರಿಸಿ ಭಂಗಿಸುತ್ತಿರುವ ನೂನೋಭಾವ ಇಂದಿನ ನವ್ಯ ಸರ್ಕಾರದಲ್ಲಿ ಕಂಡುಬರುತ್ತಿರುವುದು ತುಂಬಾ ಶೋಚನೀಯ.

ಹೀಗೆ ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಏನೇನು ಸುಖ ಸೌಭಾಗ್ಯಗಳು ಪ್ರಾಪ್ತವಾಗಬಹುದು, ಎಂತಹ ದಿವ್ಯ—ಭವ್ಯ ಆಶಯಗಳು ಪೂರ್ಣಗೊಳ್ಳಬಹುದು ಎಂದು ಕನಸು ಕಂಡಿದ್ದರೋ—ಅವರ ಭಾಷಣಗಳು, ಲೇಖನಗಳು, ಜೀವಿತ ಚರ್ಯೆ ಇವುಗಳಿಂದ ನಾವೂ ಮನಸ್ಸಿನಲ್ಲಿ ಕಲ್ಪಿಸಿಕೊಂಡು ಹರ್ಷಗೊಂಡಿದ್ದೆವೋ ಎಲ್ಲವೂ ಇಂದು ತಿರುಕನ ಕನಸಿನಂತಾಗಿ- ಭಾರತವು ಈ ತಿಂಗಳು ಈ ದೇಶದಿಂದ ಮುಂದಿನ ತಿಂಗಳು ಮತೆಲ್ಲಿಂದು ದೇಶದಿಂದ ಧಾನ್ಯ ದವಸಗಳನ್ನು ನಿರೀಕ್ಷಿಸಿ—ನಿತ್ಯ ಕ್ಷಾಮವನ್ನು ಅನುಭವಿಸುತ್ತಾ ಜೀವಿಸುವಂತಾಗಿದೆ.—

ಭಾರತದಲ್ಲಿ ಧನ ಧಾನ್ಯಗಳಿಲ್ಲವೆಂದಲ್ಲ. ಸಮೃದ್ಧವಾಗಿವೆ. ಆದರೇನ ಪ್ರಯೋಜನ? ಅವೆಲ್ಲ ಪರಮ ಸ್ವಾರ್ಥಿಗಳಾದ ಕೆಲವು ಮಂದಿ ನರರಾಕ್ಷಸರಲ್ಲಿ ಅಡಗಿ ಕುಳಿತಿವೆ. ಕಾಳ ಸಂತೆಯಲ್ಲಿ ಅವರು ಧಾನ್ಯ ದವಸಗಳೊಂದಿಗೆ ಪ್ರಯತ್ನ ಪೂರ್ವಕ ಕಲ್ಲು ಮಣ್ಣುಗಳನ್ನು ಬೆರೆಸಿ, ಒಂದಕ್ಕೆ ಹತ್ತಾಗಿ ಮೂರಿ ಧನಗಳಿಸುತ್ತಿದ್ದಾರೆ. ಸರ್ಕಾರ ಅವರನ್ನು ಬೆಂಬಲಿಸುತ್ತಿದೆ. ಈ ಬೆಂಬಲದಿಂದ ಅವರು ನಿರ್ಭೀತರಾಗಿ ತಮ್ಮ ದುಷ್ಟವ್ಯವಹಾರವನ್ನು ಮುಂದುವರಿಸುತ್ತಾ—ಬಡ ಜನಗಳ ಬಾಯಿಗೆ ಮಣ್ಣು ಕಲ್ಲುಗಳನ್ನು ತುಂಬುತ್ತಿದ್ದಾರೆ. ಅಂತಹ ಧನಪಿಶಾಚಿಕ ವ್ಯಕ್ತಿಗಳನ್ನ ಮಾತ್ರವಲ್ಲ—ಸರ್ಕಾರವನ್ನೂ ಧನದಾಹ ಪೀಡಿಸಿತ್ತಿದೆ. ಸ್ವಾತಂತ್ರ್ಯ ಪ್ರಾರಂಭದಲ್ಲಿ ಹಲವಾರು ಸುಧೀರಾಜ್ಯಗಳನ್ನ ಅನುಕರಣ ಮಾಡಿ—ಜನತೆಯ ಜೀವನ ಮಟ್ಟವನ್ನು ಏರಿಸಬೇಕೆಂಬ ಹವ್ಯಾಸಕ್ಕೆ ಬಿದ್ದು—ವಿಶ್ವದ ಸಣ್ಣ— ದೊಡ್ಡ ಸಕಲ ದೇಶಗಳಿಂದಲೂ ಹತ್ತಾರು ಸಹಸ್ರ ಕೋಟಿ ದ್ರವ್ಯವನ್ನು ಸಾಲವಾಗಿ ಪಡೆದು—ಆಡುಂಬರ ಜೀವನ ನಡೆಯುವ ಅಭ್ಯಾಸವನ್ನು ವೈಗೂಡಿಸಿಕೊಂಡ ಸರ್ಕಾರವು—ಇಂದು ಸರ್ಕಾರಸಿಬ್ಬಂದಿಯ ವೇತನ ಹೆಚ್ಚಿಸಿದ್ದು—ಕಂತು ಇವುಗಳಿಗೂ ಪೂರೈಸಲು ಸಾಧ ಹೊಸ ಹೊಸ ತೆರಿಗೆಗಳನ್ನೆತ್ತಿದ್ದರೆ ವಿಧಿಯೇ ಇಲ್ಲವಾಗಿದೆ. ಸತ್ಯ ನಿಷ್ಠುರತೆಯನ್ನು ಪ್ರಯೋಗಕ್ಕೆ ತಂದು ಅಧಿಕಾರ ಚಲಾಯಿಸಬಲ್ಲವರೆಷ್ಟು? ಪ್ರಭುತ್ವಲೋಪದಿಂದ ಆದ್ಯಂತ ರಾಜ್ಯದ ಹವಣಿಗೆಟ್ಟಿದೆ. ಮಪ್ಪೆ ಸುಯೋಧನದಿಂದ ಸುಮೂರು ಒಂದೂವರೆ ವರ್ಷಕಾಲ—ಭಾರತೀಯ ಸಂಸ್ಕೃತಿಯ ಪೈದಯವೇನೆಂಬುದನ್ನರಿತು ಆಡಳಿತ ನಡೆಸಲು ಸಮರ್ಥರೂ ಸತ್ಯ ನಿಷ್ಠೂರರೂ ಆದ ಲಾಲಬಹದ್ದೂರ ಶಾಸ್ತ್ರಿಯವರು ಪ್ರಧಾನ ಪದವಿಯನ್ನಲಂಕರಿಸಿದ್ದರಾದರೂ, ದೇಶದ ದುರ್ದೈವದಿಂದ ಆಕಾಲ ಮೃತ್ಯು ಅವರನ್ನು ಕೊಂಡೊಯ್ದಿತು. ಇಂದು ಮಿಕ್ಕ ಅಧಿಕಾರಿವರ್ಗವೆಲ್ಲ— ರಾಮಾಯಸ್ವಸ್ತಿ— ರಾವಣಾಯ ಸ್ವಸ್ತಿ ಎಂದು ಎರಡು ವಕ್ಷಕ್ಕೂ ಹೊಂದಿಕೊಂಡು ಕೈ ಮುಗಿಯುತ್ತ ತಮ್ಮ ಸ್ವಾರ್ಥಕ್ಕೆ ಕುಂದುಂಟಾಗದಂತೆ ಜಾಗ್ರತೆವಹಿಸಿರುವರಲ್ಲದೆ ಈ ಅವ್ಯವಸ್ಥೆ ಏನು ಮಾಡಿದರೆ ಪರಿಹಾರಂದೀತ. ಎಂದು ಹೃತ್ಪೂರ್ವಕ ಯೋಚಿಸುವ ಮನೋಭಾವವುಳ್ಳವರಾಗಿಲ್ಲ—

ಮಹಾತ್ಮಾಜೀ ಅವರು—ತಮ್ಮ ಮನಸ್ಸಿನಲ್ಲಿ ರೂಪಿಸಿಕೊಂಡಿದ್ದ ಸ್ವತಂತ್ರ ಭಾರತದ ಜೀವನ ಇಂದು ಇಂತಹ ಆತಂಕ್ಯ ಸ್ಥಿತಿಯಲ್ಲಿ ತೊಳಲಾಡುತ್ತಿರುವಂತಾಗಿದೆ. ಒಂದು ಮಗ್ಗುಲಲ್ಲಿ ಆಜನ್ಮ ವೈರಿಯಾದ ಪಾಕೀಸ್ತಾನವೂ ಇನ್ನೊಂದೆ ಮಗ್ಗುಲಲ್ಲಿ ಅದಕ್ಕೆ ಬೆಂಬಲಿಗನಾಗಿ ನಿಂತಿರುವ ಚೀನಾ ದೈತ್ಯನೂ ಅನ್ವಪ್ರಾಣಿಗಳಿಂದ ಸಜ್ಜಿತರಾಗಿ ಯಾವ ಕ್ಷಣಕ್ಕೆ ಏನಪಾಯ ತಂದೊಡ್ಡುವರೋ ತೋರದಾಗಿದೆ. ಇಂತಹ ಸಂದರ್ಭದಲ್ಲೂ ನಮ್ಮ ರಾಜ್ಯಾಧಿಪರು ಇನ್ನೂ ತಟಸ್ಥರಾಗಿಯೇ ಕುಳಿತಿರುವರಲ್ಲದೆ — ವಿಪಮಗೊಂಡಿರುವ ಕಾಲಸ್ಥಿತಿಯನ್ನು ಲಕ್ಷ್ಯಕ್ಕೆ ತಂದುಕೊಂಡಿಲ್ಲ. ಇದೊಂದು ದುರ್ದೈವ ವಿಚಾರವಲ್ಲವೆ? ದೇಶದೊಳಗೆಲ್ಲ ಚೀನಾದೈತ್ಯನ ಅನುಯಾಯಿಗಳು ತುಂಬಿಕೊಂಡು ಸಾಧು ಪ್ರಜೆಗಳ ಧನ ಮಾನ ಪ್ರಾಣಗಳಿಗೆ ಅಪಾಯವೆಸಗುತ್ತ ಹಾವಳಿಮಾಡುತ್ತಿರುವುದು ನಿತ್ಯದ ಕಥೆಯಾಗಿದೆ. ಸ್ವದೇಶೀಯರಾದ ನವ್ಯವರ ಆಡಳಿತಕ್ಕೇ ಒಳಪಟ್ಟಿರುವ ಭಾರತದೇಶದ ಜನಜೀವನ ಇಂತಹ ದುಸ್ಥಿತಿಗೀಡಾಗುವುದೆಂದು—ಎಂದು ಯಾರೂ ನಿರೀಕ್ಷಿಸಿರಲಿಲ್ಲ— ಕಾಲಗರ್ಭದಲ್ಲಿ ಇನ್ನೇನು ಏನೇನಿದೆಯೋ ಊಹಿಸಲು ಯಾರಿಂದ ಸಾಧ್ಯ—ಈ ದುಃಖ ಇನ್ನೂ ಅಪಾರವಾಗಿದೆ. ಹೇಳಿ ಮುಗಿಸುವಂತಿಲ್ಲ. ಇಂದಿಗೆ ಇಷ್ಟು ಸಾಕು.

ಆಶೆಯೇ ಸಕಲ ದುಃಖಗಳ ಮೂಲ.

o o o

ಜೀವನಕ್ಕಿಂತ ಜೀವನ ಹೋರಾಟವೇ ಹೆಚ್ಚು ಚಳಕಗಳಿವೆ.

o o o

ಶೈಕ್ಷಣಿಕ ಪ್ರಗತಿಗಾಗಿ

ನವಯುಗ

ರಾಜ್ಯದ ಡಿ. ಪಿ. ಇ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. ೪ 17 - 4/65 - 66೮ ಸತ್ಯದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲುಗಳೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಇಷ್ಟಮೂರು

ಶ್ರೀ ಜಿಮುಂಡಿ ಪರಾಗ್ರಿ ಮುಂಬಯಿ

ರಾವಣನ ಅಂತಿಮ ವಚನ

ತನ್ನ ಬಾಣದಿಂದ ಭೂಮಿಗುರುಳಿದ ರಾವಣನಿಂದಲೂ ಉಪದೇಶ ಪಡೆಯಲು ಲಕ್ಷ್ಮಣನನ್ನಟ್ಟಿದ ರಾಮಚಂದ್ರ, ಬಲಾತ್ಕಾರವೆಂಬಂತೆಯೇ. ಆಜ್ಞಾಧಾರಕನಾಗಿ, ನಿರುಪಾಯನಾಗಿ ಹೋದ ಲಕ್ಷ್ಮಣನಿಗೆ ರಾವಣ ನೀಡಿದ ಉಪದೇಶ ರಾವಣಯುಗದಸ್ಟೇ ಸತ್ಯವಾದುದು, ಅಮರವಾದುದ್ದು, ಉಪಾದೇಯವಾದುದು, ಆಚರಣೀಯವಾದುದು.

ರಾಮ ರಾವಣರ ಯುದ್ಧ ನುಗಿದಿತ್ತು. ಜಗತ್ತಿನ 'ನಭೂತೋ ನಭವಿಷ್ಯತಿ' ಎಂಬೊಂದು ಘೋರ ಸಂಗ್ರಾಮವು ಕೊನೆಗೊಂಡಿತ್ತು. ಶ್ರೀ ರಾಮ ಬಾಣಗಳಿಂದ ಜರ್ಝರಿತನಾದ ಲಂಕಾಧಿಪ ಮಹಾ ಪ್ರತಾಪಿ ರಾವಣೇಶ್ವರ ಯುದ್ಧ ಭೂಮಿಯ ಮಧ್ಯೆ ಒರಗಿ ಕುಳಿತು ನೋವಿನಿಂದ ನರಳುತ್ತಿದ್ದನು. ಅವನ ಇಡಿ ಶರೀರದಲ್ಲಿ ನೆಟ್ಟ ಕೂರಂಬುಗಳು ಕಣಿಯಂತೆ ನೆಟ್ಟಗೆ ನಿಂತಿದ್ದುವು. ಮೃತ್ಯುದೇವತೆಯ ಆಗಮನವನ್ನು ಆತುರದಿಂದ ನಿರೀಕ್ಷಿಸುತ್ತಾ ಅವನು ಕುಳಿತಿದ್ದನು. ಅದೇ ಸಮಯದಲ್ಲಿ, ಶ್ರೀ ರಾಮಚಂದ್ರನು ತನ್ನ ಯುದ್ಧ ಶಿಬಿರದಲ್ಲಿ ತಮ್ಮ ಲಕ್ಷ್ಮಣನೊಡನೆ— "ವತ್ಸಾ, ಯುದ್ಧ ಭೂಮಿಯಲ್ಲಿ ರಾವಣೇಶ್ವರನು ಕೊನೆಯುಸಿರ್ನೆಳೆಯುತ್ತಿದ್ದಾನೆ ಅವನು ಮಹಾನ್ ವಿದ್ಯಾಂಸನೂ, ಉದ್ದಾಮ ಪಂಡಿತನೂ ಆಗಿರುವನು. ಆದುದರಿಂದ ನೀನು ಅವನ ಬಳಿ ಹೋಗಿ ಅವನಿಂದ ನೀತಿಶಾಸ್ತ್ರವನ್ನು ಕಲಿತುಕೊಳ್ಳು" ಎಂದನು.

"ಆರ್ಯ, ರಾವಣನು ಮಹಾ ಪಾಪಿ" —ಎಂದು ಲಕ್ಷ್ಮಣ ಉತ್ತರಿಸಿದ ಲಕ್ಷ್ಮಣ. "ಅವನು ಮಾನವೀಯತೆಯ ಕೊಲೆಗಾರ. ಪರಮ ಪೂಜ್ಯರಾದ ಋಷಿ ಮುನಿಗಳಿಗೆ ಪೀಡನೆಯನ್ನಿತ್ತು ಹಿಂಸಿಸಿ, ವಧಿಸಿ ಅಹಂಕಾರದಿಂದ ಅಟ್ಟಹಾಸ ಗೈದ ಅಧಮ ಈ ರಾವಣ. ಅಲ್ಲದೆ ಪೂಜ್ಯ ಭಕ್ತಿಗೆಯವರ ಅಪಹರಣ...."

ರಾಮನು ಮುಗುಳ್ನಗು ಬೀರಿದನು. "ಹೌದ, ಲಕ್ಷ್ಮಣಾ, ತನ್ನ ಸಾಮ್ರಾಜ್ಯ ವಿಸ್ತಾರಕ್ಕಾಗಿ ರಾವಣನು ಜೀವನವಿಡಿ ಮಾನವೀಯತೆಯ ಕೊಲೆಗೈಯುತ್ತಲೇ ಇದ್ದನು ಮೂರು ಲೋಕಗಳೂ ಅವನ ಉಪಟಳ ತಡೆಯಲಾರದೆ ಕಣ್ಣೀರಿಟ್ಟವು. ಆದರೆ, ಒಂದೊಮ್ಮೆ ರಾವಣನು ಹಾಗೆ ಮಾಡದಿರುತ್ತಿದ್ದರೆ ಬಹಶಃ ಮಾನವ ಜನಾಂಗ ನಿಷ್ಕ್ರಿಯವಾಗುತಿತ್ತ. ಅವರ ಜಡತೆ ಬೆಳೆಯುತಿತ್ತು- ಎಂಬ ದನ್ನು ಮರೆಯ ಬೇಡ. ಮಾನವೀಯತೆಯ ಪರಿಷ್ಕಾರಕ್ಕಾಗಿಯೇ ರಾವಣನು ನೃಶಂಸತೆಯ ರೂಪವನ್ನು ಅಂಗೀಕರಿಸಿದನು ಎಂಬುದರ ಬಗ್ಗೆ ನಮಗೆ ಎಳ್ಳಷ್ಟೂ ಸಂದೇಹವಿಲ್ಲ ರಾವಣೇಶ್ವರನು. ಪುಷಿಯುತ್ತಾನೊ— ನೀ ದಜ್ಞನೂ, ಗೀತ ಶಾಸ್ತ್ರದ ಅಳವಾದ ಅನುಭವುಳ್ಳ ಪಂಡಿತೋತ್ತಮನೂ ಆಗಿರುವನು. ಆದುದರಿಂದ ಹೇ ವತ್ಸ, ತಡಮಾಡದೆ ವಿಳಂಬ ಮಾಡದೆ, ಅವನ ಬಳಿ ಹೋಗಿ ನೀತಿ ಶಾಸ್ತ್ರವನ್ನು ಕಲಿಸುವಂತೆ ಪ್ರಾರ್ಥನೆ ಮಾಡು." ಎಂದನು.

ರಾಮಕೋ ಲಕ್ಷ್ಮಣನಿಗೆ ಶ್ರೀ ರಾಮನ ಮಾತು ರುಚಿಸಲಿಲ್ಲ. ಆದರೂ ಅಣ್ಣನ ಆಜ್ಞೆ— ನುರುವಾತೆತ್ತುವಂತಿರಲಿಲ್ಲ. ಯುದ್ಧ ಭೂಮಿಗೆ ಬಂದ ಲಕ್ಷ್ಮಣ, ರಾವಣನ ತಲೆಯ ಪಕ್ಕದಲ್ಲಿ ಬಂದು ನಿಂತು ಕೊಂಡನು. ಅರೆ ಮುಚ್ಚಿದ ಕಣ್ಣುಗಳನ್ನು ನಿಧಾನವಾಗಿ ತೆರೆದು ರಾವಣ ಒಮ್ಮೆ ಲಕ್ಷ್ಮಣನನ್ನು ನೋಡಿದನಾದರೂ ತುಟಿ ಬಿಚ್ಚಲಿಲ್ಲ.

ರಾವಣನ ಮೌನ ಲಕ್ಷ್ಮಣನ ಕೋಪ ಏನವನ್ನು ಕೆಣಕಿತು. ಕ್ರುದ್ಧ ಲಕ್ಷ್ಮಣ ತನ್ನ ಮನದಲ್ಲಿ ರಾವಣನ ಬಗ್ಗೆ ತಿರಸ್ಕಾರವನ್ನು ಕಂಬಿಕೊಂಡು ಹಿಂಮರಳಿದನು.

ಶಿಬಿರದ ಬಾಗಿಲ ಬಳಿ ರಾಮ ತಮ್ಮನ ಬರವಿಗಾಗಿ ಕಾಯುತ್ತಾ ನಿಂತಿದ್ದನು. ತಮ್ಮನನ್ನು ಕಂಡು ಅಣ್ಣನ ಮುಖ ಅರಳಿತು.—"ಬಹಳ ಬೇಗ ಬಂದು ಬಿಟ್ಟೆ. ಏನು ಹೇಳಿದ ರಾವಣೇಶ್ವರ?" ಎಂದು ರಾಮ ಕಕ್ಕುಲತೆಯಿಂದ ವಿಚಾರಿಸಿದನು.

"ಇಲ್ಲ ಪ್ರಭೂ, ರಾವಣನು ವರಣಾನನ್ನನಾಗಿದ್ದರೂ ಅವನ ಅಹಂಕಾರ ಎಳ್ಳಷ್ಟೂ ಕಡಿಮೆಯಾಗಿಲ್ಲ. ತಾನು ಬಹಳ ಹೊತ್ತು ಅವನ ತಲೆಯ ಪಕ್ಕದಲ್ಲೇ ನಿಂತಿದ್ದೆ. ನನ್ನನ್ನು ನೋಡಿದ ಬಳಿಕವೂ ಅನು ನನ್ನನ್ನು ಮಾತನಾಡಿಸಲೇ ಇಲ್ಲ." ಎಂದು ಗುಡುಗಿದ ಕೆಣಕಲ್ಪಟ್ಟ ಸಿಂಹದಂತಿದ್ದ ಲಕ್ಷ್ಮಣ.

ರಾಮಚಂದ್ರನಿಗೆ ಎಲ್ಲವೂ ಅರ್ಥವಾಯಿತು—"ಲಕ್ಷ್ಮಣಾ! ವಿವೇಕದ ಮಾತನ್ನು ಮರೆಯಬಾರದು! ಯಾರಿಂದಲಾದರೂ ಏನನ್ನಾದರೂ ಯಾಚಿಸಬೇಕಾಗಿ ಬಂದಾಗ ನಾವು ತಲೆ ತಗ್ಗಿಸಲೇ ಬೇಕು. ಆದೇ ರೀತಿಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ ತನ್ನ ಗುರುವಿನ ಮುಂದೆ ತಲೆಬಾಗಲೇ ಬೇಕು. ನೀನೂ ತಪ್ಪಿನ ಪುನರಾವರ್ತನೆ ಗೈದಿ. ರಾವಣನಿಗೆ ನೀನು ಪ್ರಣಾಮ ಮಾಡಲಿಲ್ಲ. ಆಚಾರ್ಯನಿಗೆ ಸಲ್ಲಲೇ ಬೇಕಾದ ಶ್ರದ್ಧೆಯನ್ನು ನೀನು ಅವನಿಗೆ ಕೊಡಲಿಲ್ಲ. ಅವನ ಶಿರಸ್ಸಿನ ಪಕ್ಕದಲ್ಲಿ ಹೋಗಿ ನಿಂತು ನೀನು ಅವನಿಗೆ ಅಪಮಾನ ಮಾಡಿದೆ. ಇಂದು ಪರಾಜಿತನಾಗಿ ರಾವಣ ಮೃತ್ಯುಶಯ್ಯೆಯಲ್ಲಿ ಮಲಗಿದ್ದರೂ, ಅವನ ಮುಖದಿಂದ ಕಲ್ಯಾಣಕಾರೀ ಸಂದೇಶವಾಕ್ಯ ಶ್ರುಟಿತವಾಗಬಲ್ಲುದು. ಆತ ಏವ, ಜೇ ಲಕ್ಷ್ಮಣಾ— ನೀನು ಪುನಃ ರಾವಣನ ಬಳಿ ಹೋಗಿ ಬೇಡಿ ಕಲಿತ-ಕೊಳ್ಳಿ." ಎಂದು ಸವಧಾನವಾಗಿ ನುಡಿದನು.

ಲಕ್ಷ್ಮಣನಿಗೆ ತನ್ನ ತಪ್ಪು ತಿಳಿಯಿತು. ಪುನಃ ಅವನು ರಾವಣೇಶ್ವರನು ಮಲಗಿದ್ದಲ್ಲಿಗೆ ಬಂದನೆ. ಅವನ ಕಾಲುಗಳ ಪಕ್ಕದಲ್ಲಿ ನಿಂತು, ಎರಡೂ ಕೈಗಳನ್ನು ಜೋಡಿಸಿ, ಶ್ರದ್ಧೆಯಿಂದ ಅಭಿವಂದಿಸಿ— "ಆರ್ಯ, ನಾನು ಭ್ರಮಾಧೀನನಾಗಿದ್ದೆನು. ಈಗ ನನ್ನ ಭ್ರಮೆ ದೂರವಾಗಿದೆ. ನನಗೆ ನೀತಿ ಶಿಕ್ಷಣವನ್ನಿತ್ತು ಅನುಗ್ರಹಿಸಬೇಕು" ಎಂದು ವಿನಮ್ರ ಸ್ವರದಲ್ಲಿ ಪ್ರಾರ್ಥಿಸಿಕೊಂಡನು.

ಲಕ್ಷ್ಮಣನ ಮಾತುಗಳನ್ನು ರಾವಣನು ಸಾವಧಾನದಿಂದ ಕೇಳಿದನು. ಅವನ ರಕ್ತ ರಂಜಿತ ಮುಖದಲ್ಲಿ ಮುಗುಳುನಗೆ ತೇಲಿತು. ಅನಂತರ ಅವನು ನಿಧಾನವಾಗಿ ಕೈಯನ್ನೆತ್ತಿ ಲಕ್ಷ್ಮಣನನ್ನೂ ಆಶೀರ್ವದಿಸಿ, ವಂದ ಸ್ವರದಲ್ಲಿ—'ಲಕ್ಷ್ಮಣಾ,ನಾನು ಜೀವನವಿಡೀ ಅಲಸ್ಯದಲ್ಲಿ ವಂಚಿಸಿದ್ದೆ. ಉಪ್ಪು ನೀರಿನ ಸಮುದ್ರವನ್ನು ಕ್ಷೀರ ಸಾಗರವನ್ನಾಗಿ ಪರಿವರ್ತಿಸಿ ಬಿಡುತ್ತೇನೆ—ಎಂದು ನಾನು ನಿರ್ಧರಿಸಿದ್ದೆ. ಲಂಕೆಯ ನಿವಾಸಿಗಳ ಆನಂದ ವಿಹಾರಕ್ಕಾಗಿ, ಲಂಕೆಯಿಂದ ಸ್ವರ್ಗದ ತನಕ ನಿಜಿ ನಿರ್ಮಿಸಿಬಿಡಬೇಕು ಎಂದು ನಾನು ನಿಶ್ಚಯಿಸಿದ್ದೆ, ಆದರೆ ನನ್ನ ಅಲಸ್ಯದಿಂದಾಗಿ ಆ ನನ್ನ ನಿರ್ಧಾರ– ನಿಶ್ಚಯಗಳೆಲ್ಲವೂ ಅಪೂರ್ಣವಾಗಿಯೇ ಉಳಿದುವು. ಇಂದು ಮೃತ್ಯು ಶಯ್ಯೆಯ ಮೇಲೊರಗಿ ಕೊಂಡು, ನಾನು ನನ್ನ ಗತಕಾಲವನ್ನು ನೆನೆ ನೆನೆದು ಪಶ್ಚಾತ್ತಾಪಪಡುತ್ತಿದ್ದೇನೆ. ನಾನು ಸೀತಾಪಹರಣ ಮಾಡಿದೆ.ಅದೊಂದು ಅಶುಭ ಕಾರ್ಯ, ಸಿಟ್ಟಿನ ಕೈಯಲ್ಲಿ ಬುದ್ಧಿಯನ್ನು ಕೊಟ್ಟು ಹಿಂದು ಮುಂದಿನ ಯಾವ ವಿಚಾರವನ್ನೂ ಮಾಡದೆ ಮಾಡಿದ ಕಾರ್ಯ ಅದು. ಅದಕ್ಕಾಗಿ ನಾನೀಗ ಪರಿತಪಿಸುತ್ತಿದ್ದೇನೆ ....."ರಾವಣನ ಕೊರಳ ಸೆರೆ ಉಬ್ಬಿಬಂತು. ಅವನ ಕಣ್ಣು ಕೊನೆಯಲ್ಲಿ ಎದ್ದು ನಿಂತ ಅಶ್ರು ಬಿಂದುವನ್ನು ಕಂಡು ಲಕ್ಷ್ಮಣನ ರೋಮ ರೋಮ ನಿಮಿರಿ ನಿಂತಿತು. ಅವನು ಮುಕ್ತ ಮನಸ್ಕ ಕೈ ಮುಗಿದು—"ಮಹರ್ಷಿ, ತಾವು ಧೀರಾ ಶಿಕ್ಷಕ್ಕಾಗಿರುವಿರಿ. ತುಸು ವಿಶ್ರಾಂತಿ ಪಡೆಯುಬೇಕು" ಎಂದನು.

"ವಿಶ್ರಾಂತಿ ಅಂದರೆ ಪಾಪ ಎಂದು ಅರ್ಥ ಲಕ್ಷ್ಮಣಾ" ಎಂದನು ರಾವಣ.

"ವಿಶ್ರಾಮ ಎಂದರೆ ಆಲಸ್ಯ, ಆಲಸ್ಯ ಮಾನವನ ಬಹು ದೊಡ್ಡ ಶತ್ರು. ಅದುದರಿಂದ ಆಲಸ್ಯವನ್ನು ಸದಾ ದೂರವಿಡು."

ಕೆಲ ಕ್ಷಣದ ಮೌನದ ನಂತರ, ಇದ್ದ ಕ್ಕಿದ್ದಂತೆಯೇ ರಾವಣ ತನ್ನ ಪಾರ್ಥಿವ ಶರೀರವನ್ನು ಬಿಟ್ಟು ಹೊರಟು ಹೋದ. ದಿವ್ಯಾತ್ಮನಾದ.

ಲಕ್ಷ್ಮಣ ಶ್ರದ್ಧೆಯಿಂದ ಬಾಗಿ ತನ್ನ ಹಣೆಯನ್ನು ನೆಲದ ಮೇಲಿರಿಸಿದನು.

(ಮೂಲ:— ಅಶೋಕ ಮಹಾಜನ್)

ವಿಜ್ಞಾನ ಮತ್ತು ಪ್ರಕೃತಿ (ನಿಸರ್ಗ)

(ಒಂಭತ್ತನೇ ಪುಟದಿಂದ)

ದ್ಧಿಸಲು ಬಳಸಬಹುದಾಗಿದೆ. ಅಣು ಶಕ್ತಿಯನ್ನು ಅನೇಕ ಉದ್ದಿಮೆಗಳಲ್ಲಿ ಅನೇಕ ರೀತಿಯಲ್ಲಿ ಬಳಸಬಹುದಾಗಿದೆ. ಸಂಕ್ಷಿಪ್ತದಲ್ಲಿ ಹೇಳುವುದಾದರೆ ಅಣು ಶಕ್ತಿಯು ಜಗತ್ತಿನಲ್ಲಿ ಒಂದು ಹೊಸ ಕ್ರಾಂತಿ ಸುಧಾರಣೆಯನ್ನೇ ಉಂಟುಮಾಡಿದೆಯಲ್ಲದೆ, ವಿಫುಲ ಸಾಧ್ಯತೆಗಳುಳ್ಳ ಹೊಸ ಹೊಸ ಅವಕಾಶಗಳನ್ನು ಧಾರಾಳ ಹೊಸ ಹಾವಿ ಹಾಕಿಕೊಟ್ಟಿದೆ.

ಇತ್ತೀಚೆಗಾಗಿ ಮಾನವನು ವಾಯು ಪ್ರದೇಶವನ್ನೂ ಗೆದ್ದಿದ್ದಾನೆ. ಈಗ ಬಾಹ್ಯಾಕಾಶವನ್ನು ಸಹ ಗೆಲ್ಲಲು ಹವಣಿಸುತ್ತಿದ್ದಾನೆ. ಅವನು ವಾಯು ಪ್ರದೇಶದ ಮೇಲೆ ಸಾಧಿಸಿರುವ ವಿಜಯವನ್ನು ನೋಡಿದರೆ, ಸಮುದ್ರ ಸಾಗರಗಳ ಮೇಲೆ ಸಾಧಿಸಿರುವ ವಿಜಯ ಮತ್ತು ಪ್ರಭುತ್ವವನ್ನು ನಿರಾಸಿದಂತೆ ತೋರುವುದು. ಅವಸರ ಅಥವಾ ಕಾಲಾಭಾವವಿದ್ದಾಗ ಅವನು ವಿಮಾನದಲ್ಲಿ ಸಂಚರಿಸಬಹುದು. ಅಂತೆಯೇ ವಿವಿಧ ಬಗೆಯ ವಸ್ತುಗಳನ್ನು ಸಾಗಿಸಬಹುದು. ಬರಗಾಲ ಇಲ್ಲವೆ ಪ್ರವಾಹ ಪೀಡಿತ ಪ್ರದೇಶಗಳಿಗೆ ಶೀಘ್ರವಾಗಿ ಆಹಾರಪೂರೈಕೆ ಮಾಡಬಹುದು.

ಯುದ್ಧರಂಗ ಭೂಮಿಗೆ ಅವಶ್ಯಬಿದ್ದಾಗ ಕೆಲವೇ ಘಂಟೆಗಳಲ್ಲಿ ಸೈನಿಕ ಪಡೆಗಳನ್ನು ಕಳುಹಿಸಬಹುದು. ಬೆಳೆದ ವೈರುಗಳ ಮೇಲೆ ಕ್ರಿಮಿನಾಶಕ ಔಡಿಗಳನ್ನು ಸಿಂಪಡಿಸಬಹುದು. ಹೀಗೆ ಇನ್ನೂ ಅನೇಕ ವಿಧದ ಸೇವೆಯನ್ನು ವಿಮಾನಗಳ ಮೂಲಕ ಪಡೆಯಬಹುದು.

ಬಾಹ್ಯಾಕಾಶವನ್ನವ್ವ ಕೂಡ ಪ್ರಕೃತಿಯು ಪ್ರಬಲಶಕ್ತಿಯನ್ನು ಗೆಲ್ಲುವುದರಲ್ಲಿ ಮಾನವನು ಸಾಧಿಸಿರುವ ಮತ್ತೊಂದು ಮಹತ್ವದ ಘಟ್ಟವೆನ್ನಬಹುದು. ಅವನು ಅನತಿ ದೂರದಲ್ಲಿ ಚಂದ್ರ, ಮಂಗಳ ಗ್ರಹಗಳ ಮೇಲೆ ಹೋಗಿ ಇಳಿದರೂ, ಅದೇನೂ ಆಶ್ಚರ್ಯವಲ್ಲ; ಆಗ ಮಾನವನ ಇತಿಹಾಸದಲ್ಲಿಯೇ ಇನ್ನೊಂದು ಅಧ್ಯಾಯ ಆರಂಭವಾದಂತಾಗ ಬಹುದು.

ಹೀಗೆ ವಿಜ್ಞಾನವೆನಿಸಿರ್ಗದ ಮೇಲೆಹಂತಹಂತವಾಗಿ ಪ್ರಭುತ್ವ ಪಡೆಯುತ್ತ ಬಂದು ಎಲ್ಲಿಗೆ ಬಂದು ನಿಲ್ಲುತ್ತದೋ ಹೇಳಬಲ್ಲವರಾರು? ಇಷ್ಟಾದರೂ ನಿಸರ್ಗವು ಈಗಿನ ಮಟ್ಟಿಗೆ ಹೇಳುವುದಾದರೆ ವಿಜ್ಞಾನಕ್ಕೆ ಅಥವಾ ಮಾನವನಿಗೆ ಅನೇಕ ಸಲ ಅನೇಕ ವಿಷಯಗಳಲ್ಲಿ ಇನ್ನೂ ಅಭೇದ್ಯವಾಗಿ ಕಂಡು ಬರುವುದೂ ಉಂಟು. ಬ್ರಹ್ಮಾಂಡ ಅಧಿಪತಿ ಪ್ರಕೃತಿಯ ಗರ್ಭದಲ್ಲಿ ಹುದುಗಿರುವ ರಹಸ್ಯ ಅಥವಾ ಸಮಸ್ಯೆಗಳನ್ನ ಭೇದಿಸಲು ವಿಜ್ಞಾನ ಇನ್ನೂ ಬಹುಮಟ್ಟಿಗೆ ಶ್ರಮಿಸಬೇಕಾಗಿದೆ; ಬಹುದೂರ ಸಾಗಬೇಕಾಗಿದೆ. ವಿಜ್ಞಾನ ಮತ್ತು ಪ್ರಕೃತಿಯು ನಡುವೆ ಇರುವ ಅಂತರ ಇನ್ನೂ ಬಹಳವಾಗಿಯೇ ಇದೆ. ಈ ಪ್ರಬಲ ಶಕ್ತಿಗಳಲ್ಲಿ ಅಂತಿಮ ಜಯ ವಿಜ್ಞಾನಕ್ಕೋ, ಪ್ರಕೃತಿಗೋ ಎನ್ನುವುದು ಕಲ್ಪನೆಗೂ ಮೀರಿದ ಮಾತು.

ಪ್ಲೇಟೋನ ಪ್ರಜಾಪ್ರಭುತ್ವದಲ್ಲಿ ಕವಿಗಳು

(ಎಂಟನೇ ಪುಟದಿಂದ)

ಸ್ವರ ವಿರುದ್ಧವಾದ ವಿಚಾರ ಮತ್ತು ರಸಭಾವಗಳಿಂದ ತುಂಬಿಕೊಂಡಿದೆ. ಕೆಲವು ಜನರು ತಮ್ಮ ವಿಚಾರಗಳಿಂದ, ಸೂಕ್ತ ಅಥವಾ ಅಪ್ರಯೋಜಕ ತತ್ವಗಳಿಂದ ಆಳಲ್ಪಡುತ್ತಾರೆ. ಸೂಕ್ತ ತತ್ವಗಳ ಸಮುಚ್ಚಾರಣ್ವವು ಮನುಷ್ಯನನ್ನು ಜೀವನದಲ್ಲಿ ಶ್ರೇಯಸ್ಸಿಗೇರಿಸಬಹುದಾಗಿದೆ.

ಕವಿಗಳು ಅಧ್ಯಾತ್ಮಿಕ ವಿಚಾರಗಳನ್ನು ಎಂದಿಗೂ ಬಣ್ಣಿಸಲಾರರು. ಕಾರಣ ಅದು ಅವರಿಗೆ ಎಟಕದ ವಿಚಾರ, ಅಲ್ಲದೆ ಅವರು ಆಧ್ಯಾತ್ಮ ಪ್ರಪಂಚಿಗಿಂತಲೂ ಭೌತಿಕ ಜನಾದರಣೆಯ ಅಪೇಕ್ಷಿಗಳಾಗಿರುತ್ತಾರೆ. ಪ್ರಪಂಚದಲ್ಲಿ ವಿಚಾರವಂತ ಜನರು ಕಡಿಮೆಯಾಗಿದ್ದು ಸಚ್ಚಿದಾನಂದ ಸೌಖ್ಯಾಪೇಕ್ಷಿಗಳು ಬಹಳ ವಿರಳ. ಬಹುಮಂದಿ ತಾತ್ಕಾಲಿಕವಾದ ಭೌತಿಕ ಸುಖಾಕಾಂಕ್ಷಿಗಳಾಗಿರುವುದರಿಂದ. ಕವಿಗಳು ಅವರ ಮನೋರಂಜನೆಗಳಿಗನುಕೂಲವಾದ ರಸವನ್ನುಣ್ಣಿಸಿ, ಜನಕೋಟಿಯಿಂದ ಶ್ಲಾಘನೆಯನ್ನು ಗಿಟ್ಟಿಸಲು ಯತ್ನಿಸುತ್ತಾರೆ. ಇಂದು ರಾಮನಿಗೂ, ಜೋಮನಿಗೂ ಬೇಕಾದುದು ರೋಮಾಂಚಕಾರೀ ವಿಚಾರ ಪ್ರಚೋದಕಗಳೇ ಹೊರತು ಪಾರಮಾರ್ಥಿಕತೆಯಲ್ಲ. ಆದುದರಿಂದ ಅಂತಹ ಅಪ್ರಶಸ್ತ ಧೋರಣೆಗಳಿಂದ ಆಳಲ್ಪಡುವವರ ಮನಸ್ಸನ್ನು ಮೆಚ್ಚಿಸುವುದಕ್ಕೆ ಬೇಕಾದ ತತ್ವ ನಿರೂಪಣೆಯನ್ನು ಕವಿಗಳು ಎಸಗುತ್ತಾರೆ. ಇದು ಕಾಲಾನುಕ್ರಮದಲ್ಲಿ ಉಚ್ಚ ಶೀಲ ಸ್ವಭಾವವುಳ್ಳ ಜನರನ್ನೂ ಸದ್ಗುಣದಿಂದ ದುರ್ಗುಣದ ಭ್ರಷ್ಟಾಚಾರಕ್ಕೆಳೆಯುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಪ್ಲೇಟೊ ತನ್ನ 'ಪ್ರಜಾ ಪ್ರಭುತ್ವ'ದಲ್ಲಿ ಕವಿಗಳನ್ನು ಗಡೀಪಾರು ಮಾಡಬೇಕೆನ್ನುತ್ತಾನೆ.

ಆದರೆ ಕವಿಗಳು ಏನನ್ನು, ಹೇಗೆ ಬರೆಯಬೇಕೆನ್ನುವ ನಿಯಮವನ್ನು ಒಪ್ಪುವ ಸಾಧ್ಯತೆಯಿದ್ದರೆ. ಅಂತವರನ್ನು ತನ್ನ ನಗರಕ್ಕೆ ಸ್ವಾಗತಿಸಲು, ಪ್ಲೇಟೊ ಸಂತೋಷಪಡುತ್ತೇನೆನ್ನುತ್ತಾನೆ. ಕವಿತೆಯ ಪ್ರಾಮುಖ್ಯ ಲಕ್ಷಣವೆಂದರೆ ಇದು ಸದ್ಗುಣವನ್ನು ಪ್ರೋತ್ಸಾಹಿಸುವಂತಿದ್ದು, ದುರ್ಗುಣವನ್ನು ಕಡೆಗಣಿಸಬೇಕು. ಚಿಕ್ಕ ಮಕ್ಕಳು ಎಳೆ ವಯಸ್ಸಿನಲ್ಲಿ ಪಡೆದ ಯಾವುದೇ ಭಾವನೆಯನ್ನು ತಮ್ಮ ಜೀವನದುದ್ದಕ್ಕೂ ಮಾಸಿ ಹೋಗದ ರೀತಿಯಲ್ಲಿ ಮನಸ್ಸಿನಲ್ಲಿ ಧಾರಣೆ ಮಾಡುತ್ತಾರೆ. ಆದುದರಿಂದ ಕಟ್ಟುಕತೆ ಇಲ್ಲವೆ ಫೀತಿಕತೆಗಳನ್ನು ಬರೆಯುವವರ ಕುರಿತು ಹಾಗೂ ಅವರ ಕೃತಿಗಳ ಕುರಿತು ಮೊದಲೇ ಅನ್ವೇಷಣೆ ನಡೆಸಿ, ಉತ್ತಮವಾದುದನ್ನು ಮಾತ್ರ ಪ್ರಕಟಿಸುವಂತೆಯೂ, ಕೀಳಾದುದನ್ನು ನಿಷೇಧಿಸುವಂತೆಯೂ ನಾವು ಆರಂಭದಲ್ಲಿ ಜಾಗ್ರತೆವಹಿಸಬೇಕು. ನಮ್ಮಿಂದ ಅನುಮೋದಿಸಲ್ಪಟ್ಟ ಕತೆಗಳನ್ನು ಮಕ್ಕಳಿಗೆ ಹೇಳುವಂತೆ ತಾಯಂದಿರನ್ನು ಮತ್ತು ದಾದಿಯರನ್ನು ಒಡಂಬಡಿಸಬೇಕು. ಕನ್ನೊಲಕ ಎಕೆಯರ ಮನಸ್ಸನ್ನು ಉದಾತ್ತಗೊಳಿಸಬೇಕು. ಆದುದರಿಂದ ದೊಡ್ಡ ಮನುಷ್ಯರ ಕುರಿತು ಮಿಥ್ಯ ಹಾಗೂ ಅಪಥ್ಯ ಕತೆಗಳನ್ನು ಕವಿಗಳು ಸರ್ವಥಾ ಬರೆಯದಂತಾಗಬೇಕು. ಹಾಗಾಗಿ ದೇವ ದೇವತೆಗಳೊಳಗಿನ ಯುದ್ಧ, ಆಕ್ರಮಣದ ಹಂಚಿಕೆ ಮುಂತಾದುವನ್ನು ಬರೆಯಲೇ ಬಾರದು. ಯಾಕೆಂದರೆ, ಮೂರ್ಖರು ದೇವತೆಗಳನ್ನು ಅನುಕರಿಸಲು ಯತ್ನಿಸುವುದರಿಂದ, ಅಸುರಾಧ್ಯಗಳನ್ನೆಸಗುವುದನ್ನೂ ಹಿತವೆಂದು ಸ್ವೀಕರಿಸಬಹುದಾಗಿದೆ. ಕಾರಣ, ದೇವತೆಗಳೆಂದರೆ ಮನುಷ್ಯರಿಗಿಂತ ಶ್ರೇಷ್ಠರೆಂಬ ಕಲ್ಪನೆಯು ಅಂಟಿಬಂದ ಮನೋಭಾವವಷ್ಟೆ! ಹಾಗಾಗಿ ದೇವರನ್ನು ಎಲ್ಲಾ ಬಗೆಯು ಒಳಿತು ಕೆಡುಕುಗಳಿಗೂ ಕಾರಣನೆಂದು ವಿವರಿಸುವುದು ಸರಿಯಲ್ಲ. ಸರ್ವಾತ್ಮನು ಒಳ್ಳೆಯದಕ್ಕೆ ಮಾತ್ರ ಕಾರಣ ಹುರುಷನೆಂದು ತಿಳಿಯಹಕ್ಕದ್ದು. ಪ್ರಾಮಾಣಿಕನೂ, ಸತ್ಯ ಪುರುಷನೂ, ಸಕ್ರಿಕರ್ತವ್ಯವೂ ಆದ ಪರಮಾತ್ಮನು ಕೆಟ್ಟದ್ದಕ್ಕೆ ಕಾರಣನಾಗುವ್ದಾದರೂ ಹೇಗೆ? ಆದುದರಿಂದ ಎಲ್ಲಾ ಕವಿಗಳೂ ಈ ನೇಮವನ್ನು ಗಮನದಲ್ಲಿಟ್ಟುಕೊಂಡೇ ಬರೆಯುತಕ್ಕದ್ದು. ಆಲ್ಲದೆ ದೇವನು ಹಲವು ವ್ಯಕ್ತಿಗಳನ್ನು ಎಸಗುತ್ತಾನೆನ್ನುವುದನ್ನು ಕವಿಗಳು ಬಹಿಷ್ಕರಿಸಬೇಕು. ಮತ್ತು ದೇವರನ್ನು ಅದ್ಭುತವಾಗಿ, ರಾಕ್ಷಸೀಯ ರೂಪಕ್ಕೆ ಹೋಲಿಸಿ ಚಿತ್ರಿಸಲೇಬಾರದು. ರಣರಂಗದಲ್ಲಿ ಸೋಲಿಗಿಂತ ಆಥವಾ ಗುಲಾಮಗಿರಿಗಿಂತ ವೀರ ಮರಣವನ್ನು ಅಪ್ಪುವುದು ಎಷ್ಟೋ ಪಾಲು ಶ್ರೇಷ್ಠವೆಂದು ಜನರು ಮನಗಾಣುವಂತೆ ಸ್ಪಷ್ಟವಾಗಿ ಚಿತ್ರಿಸಬೇಕು. ಮರಣವೆಂಬುದು ಭೀತಿ ಸೂಚಕವಲ್ಲ; ಅದು ಭವಬಂಧ ವಿಮೋಚಕವೆಂದರಿಯಬೇಕು. ಆದುದರಿಂದ ದೇವತೆಗಳು ಅಥವಾ ಪ್ರಸಿದ್ಧ ಜನನಾಯಕರು ಆಪ್ತೇಷ್ಟರ ಮರಣದಿಂದ ದುಃಖಿತರಂದರಿಂದು ಸರ್ವಥಾ ವರ್ಣಿಸಲೇ ಬಾರದು. ಅದು ದೇವಶ್ರೇಷ್ಠ ಹೀನವಾಗಿ, ಆವರನ್ನೂ ಮರುಗುವಂತೆ ಮಾಡುತ್ತದೆ. ಆದುದರಿಂದ ತರುಣರು ಆತ್ಮ ಧೀರೋದಾತ್ತತೆಯನ್ನು ಪಡೆಯಲೋಸುಗ, ಸತ್ಯಕ್ಕೆ ಮಾತ್ರ ಬೆಲೆಕೊಟ್ಟು, ಘನ ಕಾರ್ಯಗಳನ್ನು ಮಾತ್ರ ಪ್ರಶಂಸಿಸಬೇಕು. ಒಟ್ಟನಲ್ಲಿ, ಪ್ಲೇಟೊನ ಅಭಿಪ್ರಾಯವೆಂದರೆ, ಒಳ್ಳೆಯದಕ್ಕೆ ಸಂಬಂಧಿಸಿದ ಶ್ಲಾಘನೆ ಹಾಗೂ ದೇವ ಸ್ತುತಿಸರವಾದ ಕಾವ್ಯಕ್ಕೆ ಮಾತ್ರ ನಮ್ಮ ನಗರ ರಾಜ್ಯದಲ್ಲಿ ಸ್ವಾಗತ ಸಿಗಬೇಕು.

ಆದರೆ ಪ್ಲೇಟೊನ ಇಂತಹ ಆದರ್ಶಮಯವಾದ ಪ್ರಜಾ ಪ್ರಭುತ್ವ ಪ್ರಪಂಚದ ಯಾವುದೇ ಭಾಗದಲ್ಲಿ ರೂಪುಗೊಂಡಿಲ್ಲ. ಆಥವಾ ಭವಿಷ್ಯದಲ್ಲಿ ಸ್ಥಾಪಿತವಾಗುವ ಸಾಧ್ಯತೆಯೂ ಕಂಡ ಬರುವುದಿಲ್ಲ. ಆದುದರಿಂದ ಯಾವನೊಬ್ಬ ಕವಿಯೂ ಪ್ಲೇಟೊನಂತಹ ತತ್ವಜ್ಞಾನಿ ದೊರೆಯಿಂದ ಅಳಿಸಿಕೊಳ್ಳುವ ಭಯಪಡಬೇಕಾಗಿಲ್ಲ. ಹಾಗೂ ತನಗೆ ಹಿತವಾದ ಯಾವುದೇ ವಿಷಯದ ಕುರಿತು ತನ್ನಲ್ಲಾಗುವ ರಸಭಾವಗಳನ್ನು ಉಲ್ಲೇಖಿಸುವ ಸ್ವಾತಂತ್ರ್ಯವನ್ನು ಬಿಟ್ಟು ಬಿಡಬೇಕಾಗಿಲ್ಲ. ಪ್ಲೇಟೊ ಮಾತ್ರ ಕವಿಗಳ ಕುರಿತು ಒರಟು ಮನೋಭಾವವನ್ನು ತಳೆದಿರಲು ಕಾರಣ, ತತ್ವಜ್ಞಾನಿಗೂ, ಕವಿಗೂ ಉಂಟಾಗಿದ್ದ ವಿರಸದ ವಡಂಬನೆಯೊಗರಿ ಬಹುದು. ಆದರೆ ಗಮನಿಸಬೇಕಾದ ಒಂದು ವಿರೋಧಾಭಾಸವೆಂದರೆ, ಪ್ಲೇಟೊ ಕಾವ್ಯಗಳ ಕುರಿತಾಗಿ ಬರೆದ ಕೃತಿಯೇ ಇಂದು ಅತ್ಯಂತ ಶ್ರೇಷ್ಠವೆಂದು ಪರಿಗಣಿಸಬಹುದಾದಕಾವ್ಯವೆಂದರೆ ಅದು ಅತಿಶಯೋಕ್ತಿಯೆನಿಸಲಾರದು.

ಕನ್ನಡಿಗರಿಗೆ

॥ ಪಲ್ಲವಿ ॥

ಕನ್ನಡ ಮೂತೆಯು ಕುವರರೆ ನೀವ್ ಬನ್ನಿ
ಎಂದಾದರೂ ಎಲ್ಲಿದ್ದರೂ ನಾವ್ ಕನ್ನಡಿಗರೆ ಎನ್ನಿ ॥

— ೧ —

ಹೆತ್ತಮ್ಮನ ಹೆಸರ್ಹೇಳಲು ನಿಮಗೇತರ ಲಜ್ಜೆ?
ತೊರೆದೊಗೆಯ ರಿ, ತಾಯ್ನಾಡನು ಗೌರವಿಸದ ಆ ಬಿಜ್ಜೆ
ನಿಮ್ಮೂರವನು ಮರೆತಾಗದಿರೈ ತಾಯ್ನಾಡಿಗ ವಜ್ಜೆ
ಅವಳಾಶೀರ್ವಾದದಿ ಅರಿತಿಡಿರೈ ನಿಮ್ ಹೆಜ್ಜೆ ॥

— ೨ —

ಕನ್ನಡದಿಂದಲೆ ನಿಮ್ಮುದ್ಧಾರವು ಇದು ಸಿದ್ಧ
ಕನ್ನಡದುದ್ಧಾರಕೆ ನೀವಾಗಿರಿ ಕಂಕಣ ಬದ್ಧ
ಕಾರೇರೀ ಕೃಷ್ಣೆಯರಿಂದೀ ನಾಡಾಗಿದೆ ಶುದ್ಧ
ಆದಕಾಗಿಯೆ ನೀವಾಗಿರಿ ಸರ್ವಸ್ವದ ತ್ಯಾಗಕೂ ಸಿದ್ಧ ॥

— ೩ —

ಪಂಪ, ರನ್ನ, ಹರಿಹರ, ಲಕ್ಷ್ಮೀಶರು ಹೊಗಳಿದ ನಾಡು
ಹುಕ್ಕಬುಕ್ಕ ನೃಪತುಂಗ ಪುಲಕೇಶಿಯರಾಳಿದ ನಾಡು
ವಿದ್ಯಾರಣ್ಯ ಬಸವೇಶ್ವರ, ಗುರು ವ ಧ್ವರುದಿಸಿದ ನಾಡು
ಸಕಲ ವಿದ್ಯಾಕಲೆಗಳಿಗಾಗರ ವಾಗಿಹುದೀ ನಾಡು ॥

— ೪ —

ನಮ್ಮಿನಾಡಿನ ಹೆಮ್ಮೆಯ ಕುವರರೆ ನೀವ್ ಬನ್ನಿ
ಕನ್ನಡ ಮೂತೆಯ ಚರಣಕೆ ಶರಣಾಗತವೆನ್ನಿ
ಸಿರಿಗನ್ನಡ ನುಡಿಗೆಯೂ ಜೈಕಾರವ ಎನ್ನಿ
ಎಂತಾದರೂ ನಾವ್ ಕನ್ನಡಿಗರೆ ಎನ್ನಿ ॥

—ಶ್ರೀ ದಿಗಂಬರ ಜೋಶಿ.

ಪ್ರಣಯಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿನೈದೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

Please patronize
Our Advertisers

ಭಾರತದ ರಾಷ್ಟ್ರಭಾಷೆ — ಸಂಸ್ಕೃತ

(ಏಳನೇ ಪುಟದಿಂದ)

ಳ್ಳುವವರೂ ಇರುವ ಕಾರಣ, ಗಾಂಧೀಜಿಯವರೂ ಈ ಭಾಷೆಯನ್ನೇ ಸಂಪರ್ಕ ಭಾಷೆಯಾಗಿ ಆರಿಸಿದರು.

ಮೇಲಿನ ಎರಡೂ ಕಾರಣಗಳು ಹಿಂದಿಯನ್ನು ರಾಷ್ಟ್ರಭಾಷೆಯಾಗಿ ನಿರ್ಣಯಿಸಿದುದಕ್ಕೆ ಬಲ ಇರಲಿಲ್ಲ. ಹಿಂದಿಯನ್ನು ಭಾರತದಲ್ಲಿ ಹೆಚ್ಚಿನವರು ಆಡುವುದೂ, ಅರ್ಥಮಾಡಿಕೊಳ್ಳುವುದೂ ಕಾಂಗ್ರೆಸು ಸರಕಾರದ ಸುಮಾರು ಇಪ್ಪತ್ತೈದು ವರ್ಷಗಳ ಭಗೀರಥ ಪ್ರಯತ್ನದ ಫಲವೆಂಬುದನ್ನು ಯಾರೂ ಅಲ್ಲಗಳೆಯಲಾರರು. ಇಷ್ಟೇ ವರ್ಷಗಳ ಯತ್ನದಿಂದ ಸಂಸ್ಕೃತ ಭಾಷೆಯು ಕದದೆಗೆ ಒಲಿದಿದ್ದರೆ ನಿಜವಾಗಿಯೂ ಭಾರತೀಯರು ಇಂದಿನ ಜೀವನದ ಎಷ್ಟೋ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಾಧ್ಯವಿತ್ತು. ಇಂಗ್ಲಿಷ್ ಭಾಷೆಯು ರಾಷ್ಟ್ರಭಾಷೆಯಾಗಿದ್ದ ಈ ದೇಶದಲ್ಲಿ ಎಷ್ಟು ವರ್ಷಗಳ ವರೆಗೆ ಹಿಂದಿಯನ್ನು ಬೆನ್ನುಚಟ್ಟದೂ ಅದು ಖಂಡಿತವಾಗಿ ಜನಮನವನ್ನು ನೆಲೆಯೂರಲಾರದು. ಸದ್ಯ ಜಗತ್ತಿನಲ್ಲಿ ಇಂಗ್ಲಿಷ್ ಭಾಷೆಯೊಡನೆ ಪೈಪೋಟಿಗೆ ಕಾಳಗದಲ್ಲಿ ಸಡ್ಡು ಹೊಡೆದು ನಿಲ್ಲಲು ಸಂಸ್ಕೃತ ಭಾಷೆಯೊಂದೇ ಸಮರ್ಥವಾದುದು. ಈ ಮಾತು ಸರಿಯೆಂಬುದಕ್ಕೆ ಸರ್. ಡಬ್ಲ್ಯು. ಜೋನ್ಸ್, ಮಿ. ಡಬ್ಲ್ಯೂ. ಸಿ. ಟೇಲರ್, ಜರ್ಮನಿಯ ಪ್ರಸಿದ್ಧ ಟೀಕಾಕಾರನಾದ ಸ್ಲೆಜೆಲ್ಲ, ಮಿ. ಪಾರ್ಕರ್ — ಮೊದಲಾದ ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯಗಳೇ ಸಾಕು.

ಪಾಣಿನಿ ವ್ಯಾಕರಣ ಪ್ಲಸ್ ಎಲ್ಲಾ ಭಾಷೆಗಳ ವ್ಯಾಕರಣವನ್ನು ವಿಂಗಡಿಸಿದೆ. ಹಿಂದಿಯನ್ನು ಉತ್ತರ ದೇಶೀಯರು ರಾಷ್ಟ್ರ ಭಾಷೆಯೆಂದು ಸಾರುವುದಕ್ಕಿಂತ ದಕ್ಷಿಣ ದೇಶೀಯರೇ ಈ ನಿರ್ಣಯವಾಡಿದ್ದರೆ ಜೆನ್ಯಾಗಿತ್ತು. ಯಾವ ಕಾಲದಲ್ಲಾ ಇಡೀ ಭಾರತದ ಒಂದು ಪ್ರಾಂತದವರ ಭಾಷೆಯನ್ನು ಇಡೀ ದೇಶಕ್ಕೇ ರಾಷ್ಟ್ರಭಾಷೆಯೆಂದು ಸಾರಿದ್ದಿಲ್ಲ. ಸಂಸ್ಕೃತವು ಈ ದೃಷ್ಟಿಯಿಂದ ಹೃದಯವನ್ನು ಸೆಳೆದಾಗ ಇದು ಪರದೇಶೀಯರ ಭಾಷೆಯಾಗಿತ್ತು. ಸಂಸ್ಕೃತವು ದ್ರಾವಿಡ ಭಾಷೆಯನ್ನು ಆಳ್ವಿಸಿದಂತೆ ಅದರ ಸೌಂದರ್ಯ, ಪ್ರಭಾವ ಮತ್ತು ಸ್ನಿಗ್ಧತೆಗಳಿಂದ! ಇಂದೂ ಈ ಸಂಸ್ಕೃತವನ್ನು ರಾಷ್ಟ್ರಭಾಷೆಯೆಂದು ಎತ್ತಿ ಹಿಡಿದಲ್ಲಿ ಅದನ್ನು ಯಾವ ಭಾರತೀಯನೂ, ದ್ರಾವಿಡನೂ ಆಕ್ಷೇಪಿಸಲಾರನು. ವಾಙ್ಮಯ ಪ್ರಪಂಚದಲ್ಲಿ ವಯಸ್ಸು ಮತ್ತು ಜ್ಞಾನಗಳಲ್ಲಿ ಹಿರಿದಾದ ಸಂಸ್ಕೃತಕ್ಕೆ ಅಗ್ರಪೂಜೆ ಸಂದರೆ ಯಾರೂ ಪ್ರತಿಭಟಿಸುವಂತಿಲ್ಲ. ಇದ್ದರೂ, ಶ್ರೀಕೃಷ್ಣನ ಜಗ್ರಪೂಜೆಯನ್ನು ಪ್ರತಿಭಟಿಸಿದ ಶಿಶುವಾಲನಂಥವರ ಸಂಖ್ಯೆ ತೀರಾ ಕಡಿಮೆ. ಹಿಂದಿಯು ಇಂಗ್ಲಿಷನ್ನು ಹಿಂದೆ ಜರಿತ ಸಂಸ್ಕೃತವನ್ನು ಪಕ್ಕಕ್ಕೆ ನೂಕಿ ನುಸುಳಿ ಬಂದು ಸಿಲ್ಲಲು ಅದರ ವಯಸ್ಸೆಷ್ಟು? ಯೋಗ್ಯತೆ ಎಷ್ಟು? ಗಾಂಧೀಜಿಯ ಮಾತಿಗೆ ಮನ್ನಣೆಯೀದಲೆ?—ಎನ್ನುವವರಿದ್ದರೆ, ಗಾಂಧೀತತ್ವಗಳಲ್ಲಿ ಸೇರಿಕೊಂಡಿರುವ ಕೆಲವು ತಪ್ಪು ಕಲ್ಪನೆಗಳನ್ನು ತಳಕಿ ಹಾಕುವುದು ಸರಿಯಲ್ಲ. ಹಿಂದಿನ ಬೌದ್ಧ, ಜೈನ ವಿದ್ವಾಂಸರೂ ಶಬ್ದಕೃತಿಗಳನ್ನು ಸಂಸ್ಕೃತದಲ್ಲೇ ಬರೆದಿದ್ದರು. ಶಕಹೂಣ ಮೊದಲಾದ ವೈದೇಶಿಕರ ತಿಲಾ ಶಾಸನಗಳೂ ಸಂಸ್ಕೃತ ಭಾಷೆಯಲ್ಲೇ ಇವೆ! ಇನ್ನು ಸಂಸ್ಕೃತ ಭಾಷೆಯ ಮಹತ್ವವನ್ನು ಅಚ್ಚಿ ಭಾರತೀಯರಾದ ಬಂಕಿಮಚಂದ್ರ, ರವೀಂದ್ರನಾಥ ಠಾಕೂರ, ಅರವಿಂದ ಘೋಷ ಮೊದಲಾದವರ ಬರಹಗಳಿಂದ ತಿಳಿಯಬಹುದು.

ಈಗ ಭಾರತವು ಸ್ವತಂತ್ರವಾಗಿದೆ. ಭಾರತದ ಸಂವಿಧಾನದಲ್ಲಿ ಉಳ್ಳವಾದಭಾಷೆಗಳಲ್ಲಿ ಸಂಸ್ಕೃತಕ್ಕೂ ಒಂದು ಸ್ಥಾನವೇನೋ ಇದೆ. ಆದರೆ ರಾಷ್ಟ್ರದ ಪುನರ್ ನಿರ್ಮಾಣದಲ್ಲಿ ತೊಡಗಿರುವ ಭಾರತದ ಮುಂದಿರುವ ರಾಷ್ಟ್ರದ ಅನೂಲ್ಯ ಆಸ್ತಿಯಾದ ಸಂಸ್ಕೃತದ ಪುನರುತ್ಥಾನವನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕು. ಆಗ ಅದರ ಸುದೀರ್ಘ ಹಾಗೂ ಸಂಪದ್ಯುಕ್ತವಾದ ಇತಿಹಾಸಕ್ಕೆ ಗೌರವ ತೋರಿಸಿದಂತಾಗುವುದು.

ಸಂಸ್ಕೃತವು ಭಾರತದ ರಾಷ್ಟ್ರಭಾಷೆಯಾಗುವಂತೆ ಪ್ರಯತ್ನಿಸಿದ ವಾಣಿನಿ, ವರರುಚಿ, ಪತಂಜಲಿಗಳ ಪುಣ್ಯವು ಭವ್ಯವಾಗುವ ಕಾಲವು ಸನ್ನಿಹಿತವಾಗಿದೆ! ಲಕ್ಷಾಂತರ ಕವಿಗಳೂ, ಪಂಡಿತರೂ, ತತ್ವಜ್ಞಾನಿಗಳೂ ಹಾಡಿ ಹರಸಿದ ದಿವ್ಯ ಭಾಷೆಯು ಮಣ್ಣಾಗೂಡಲಿದೆ. ಇಂದೂ ಸಂಸ್ಕೃತವನ್ನು ಆಡುವ ನಿಯಂತೆ ಅಪ್ಪಲಿಕ್ಕವಾಗಿಮೂತ್ತಾನಾಡುವ ಸಾವಿರಾರು ವಿದ್ವಾಂಸರು ನುಂಗಿನೆಯೇ ಈ ಅಮರ ಭಾಷೆಗೆ ನ್ಯೂನ ಭಾಷೆಯಿಂದ ಮುದ್ರಾಧಾರಣ ವಾಗಿದೆ! ಪ್ರಾಕೃತ, ಅಪಭ್ರಂಶ, ಹಿಂದಿ, ಹಿಂದುಸ್ತಾನಿ, ಬಂಗಾಲಿ, ಗುಜರಾತಿ, ಮರಾಠಿ, ಪಂಜಾಬಿ, ಕಾಶ್ಮೀರಿ, ಉರ್ದೂ ಕೆ? — ಇಂದಿನ ಆಧುನಿಕ ಆರ್ಯಭಾಷೆಗಳೆಲ್ಲಾ ತಮ್ಮ ಮೂಕೆಯಂತೆ ಸಂಸ್ಕೃತವನ್ನು ರಾಷ್ಟ್ರ ಭಾಷೆಯೆಂದುಗೌರವಿಸಬಾರದೆ? ಸಾಕು ತಾಯಿಯೂದ ಸಂಸ್ಕೃತವನ್ನು ದ್ರಾವಿಡ ಭಾಷೆಗಳು ಒಕ್ಕೊರಲಿನಿಂದ ರಾಷ್ಟ್ರಭಾಷೆಯಾಗಬೇಕೆಂದು ಘೋಷಿಸುವ ದೊಡ್ಡ ವನಸ್ಸು ಮಾಡಬಾರದೆ? ದೂರದ ಸಾಗರೋತ್ತರ ಪರದೇಶಗಳಾದ ಜಾವಾ, ಸುಮಾತ್ರ, ಇಂಡೋಚೀನಾ, ಬರ್ಮಾ, ಸಿಂಹಳ ಮಧ್ಯ ಏಷ್ಯಾದ ಭಾಷೆ — ಜನರಾದರೂ ಹಿಂದೆ ತಾವು ಸಂಸ್ಕೃತದಿಂದ ಹೊಂದಿದ ಉಪಕಾರವನ್ನಾದರೂ ನೆನೆದು ಸಂಸ್ಕೃತಭಾಷೆಯನ್ನು ರಾಷ್ಟ್ರಭಾಷೆಯ ಸ್ಥಾನಕ್ಕೇರಿಸುವ ಉದಾತ್ತ ಬುದ್ಧಿಯನ್ನು ತೋರಬಾರದೆ? ಸ್ವತಃ ಆಂಗ್ಲಭಾಷೆಯೇ ಭಾರತೀಯರ ಮೇಲೆಳೆದ ಮೂಢರಕುಂಚವನ್ನು ಭಾರತೀಯರ ವೇಲೆ ತರುಣೆ ದೋರಿ ಹಿಂದಕ್ಕೆ ಜೆಗೆದುಕೊಳ್ಳಬಾರದೆ? ತನ್ನ ಅಂತಃಪುರದಲ್ಲಿ ಸ್ತ್ರೀಯರೂ ಸೇವಕರೂ ಸಂಸ್ಕೃತವನ್ನೇ ಮಾತಾಡಬೇಕೆಂದು ಕಟ್ಟಪ್ಪಣೆ ಮಾಡಿದ ಉಜ್ಜಯಿನಿಯ ರಾಜನಾದ ಸಾಹಸಾಂಕನಂತಹ ಹೆಪ್ಪು ಮಂದಿ ಸಂಸ್ಕೃತ ಭಾಷಾಭಿಮಾನಿಗಳಾದರೂ ವರ್ತಮಾನ ಭಾರತದಲ್ಲಿ ಜನಿಸಬಾರದೆ?

ಸಂಸ್ಕೃತ ಸಾಹಿತ್ಯದ ಅಮರ ಕವಿಯಾದ ಕಾಳಿದಾಸನ ಹೆಸರನ್ನಾದರೂ ಭಾರತೀಯರಲ್ಲಿ ಕೆಲವರು ಕೇಳಿರಬಹುದು. ಆದರೆ ಭಾರವಿ, ಮಾಘ, ಶ್ರೀಹರ್ಷ, ರಶ್ಮಾಕರ, ರಾಜಶೇಖರ, ಬಿಲ್ಹಣ, ಕಲ್ಹಣ, ವಾದಿರಾಜ, ಧನಂಜಯ ಮೊದಲಾದ ಸಂಸ್ಕೃತ ನುಹಾನ್ಯಕ್ತಿಗಳ ಪರಿಜ್ಞಾನ ಎಷ್ಟು ಮಂದಿ ಭಾರತೀಯರಿಗಿದೆ? ರಾಮಾಯಣ ಮಹಾಭಾರತಗಳೆಂಬ ರಾಷ್ಟ್ರೀಯ ಮಹಾಕಾವ್ಯಗಳನ್ನು ಬರೆದು ಹಿಂದೂ ಸಂಸ್ಕೃತಿಗೆ ಭದ್ರತಳಹದಿಯನ್ನು ಹಾಕಿದ ವಾಲ್ಮೀಕಿ ವ್ಯಾಸರ ಪ್ರಶಂಸಾಗೋಷ್ಠಿಯು ಭಾರತದ ಯಾವ ಕ್ಷೇತ್ರದಲ್ಲಿ ಜರಗುತ್ತಿದೆ? ತನ್ನ ಪ್ರಕಾಂಡ ಸಂಸ್ಕೃತ ಪಾಂಡಿತ್ಯದಿಂದ ಅಂದಿನ ಮಹಾಪಂಡಿತರ ಕೃತಿಗಳನ್ನು ತನ್ನನುಡಿ ಗೊಡಲಿಯಿಂದ ಕಡಿದೊಗೆದು ಪ್ರತಿಭಾ ಪರಶುರಾಮನೆನ್ನಿಸಿದ, ಅಪ್ಪಯ್ಯ ದೀಕ್ಷಿತರಂತಹ ಷಟ್ ದರ್ಶನಾಚಾರ್ಯರನ್ನೂ ಸೊಪ್ಪುಹಾಕದೆ, ಭಟ್ಟೋಜಿ ದೀಕ್ಷಿತರಂತಹ ಶಬ್ದ ಬ್ರಹ್ಮರನ್ನೂ ಅಕ್ಷರಶಃ ಖಂಡಿಸಿದ ಅಪ್ರತಿಮ ವ್ಯಕ್ತಿಯೊಡನೆ ಜಗನ್ನಾಥ ಪಂಡಿತನ ಹೆಸರನ್ನ ಪರಿಚಯವಾದರೂ ನಮ್ಮಲ್ಲಿ ಎಷ್ಟು ಮಂದಿಗಿದೆ? ನಾವೇ ಭಾರತೀಯರು?

ಸಂಸ್ಕೃತ ಭಾಷೆಯ ಪದ ಶಕ್ತಿ ಇನ್ನಾವ ಭಾಷೆಗೂ ಇಲ್ಲ. ಶ್ರೀಹರ್ಷನ ನೈಷಧೀಯ ಚರಿತದ ಹದಿಮೂರನೆಯ ಸರ್ಗದ ಪಂಜನಳೀಯವೆಂಬ ಭಾಗದ ಶ್ಲೇಷ ಸಂಯೋಜನಾ ಚಾತುರ್ಯವು ವಿಶ್ವದ ಯಾವ ಸಾಹಿತ್ಯಕ್ಕೂ ಅಸಾಧ್ಯವಾದುದು! ಕವಿರಾಜ ಧನಂಜಯನ ದ್ವಿಸಂಧಾನ ಕಾವ್ಯವಾದ ರಾಘವ ಪಾಂಡವೀಯವು ಜಗತ್ತಿನ ಭಾಷೆಗಳಲ್ಲೇ ಸಂಸ್ಕೃತದ ಹಿರಿಮೆಯನ್ನ ಸಾರುತ್ತದೆ! ಈ ಕಾವ್ಯದ ಪ್ರತಿಯೊಂದು ಶ್ಲೋಕಕ್ಕೂ ರಾಮಾಯಣ ಮತ್ತು ಮಹಾಭಾರತ ಪರವಾದ ಅರ್ಥವಿರುವುದು ಪರಮಾಶ್ಚರ್ಯಕರವಾದುದು! ಈ ಭಾಷೆಯಲ್ಲಿ ವಿಕಾಕ್ಷರಗಳಿಗೂ ವಿಶಾಲವಾದ ಅರ್ಥಗಳಿವೆ! ಆಂಗ್ಲ, ಹಿಂದೀ—ಇನ್ನಾವ ಭಾಷೆಗೂ ಅನುಸಂಧಾನವಾಗದ ಭವ್ಯ ಶಬ್ದ ಸಂಪತ್ತು ಸಂಸ್ಕೃತ ಭಾಷೆಗೆ ಎಂದಕ್ಕೇ ಇದ ಎಂಬುದನ್ನ ಎಲ್ಲರೂ ಒಪ್ಪಲೇ ಬೇಕು.

ಜಗತ್ತಿನಲ್ಲೇ ಗೀತ ಗೋವಿಂದದಂತಹ ಭಾವ ಕಾವ್ಯವು ಇನ್ನೊಂದು ಭಾಷೆಯಲ್ಲಿಲ್ಲ!

ಇಂತಹ ಭಾಷೆ—ರತ್ನ—ರಾಶಿ ಸಂಸ್ಕೃತಭಾಷೆಯು ಪರ್ವಮಾನ ಭಾರತದ ರಾಷ್ಟ್ರ ಭಾಷೆಯು ಗೌರವದಿಂದ ವಂಚಿತವಾಗಬೇಕೆ? ಯಾವ ದೇಶವು ತನ್ನ ಪೂರ್ವಿಕರಿಂದ ಪೂಜಿಸಲ್ಪಟ್ಟಿದ್ದ ಉದಾತ್ತ ಭಾಷೆಯೊಂದನ್ನು ನಿಷ್ಕಾರಣವಾಗಿ ಕೊಲೆಗೈಯಲು ಬಿಡುವೆ ಪ್ರೇಕ್ಷಕ? ಜಗತ್ತಿನ ಇತಿಹಾಸದಲ್ಲೇ ಇಂತಹ ಕೃತಘ್ನತೆಯ ವಿಚಾರ ಬೇರೊಂದಿಲ್ಲ! ಕೊಹಿನೂರು ರತ್ನದ ಸ್ಥಾನವೂನ ಕಾಗಿ ಮೂನ ನೋಜವೆಣಿಸುವ ಬುದ್ಧಿ ಭಾರತೀಯರಿಗೆ ಮಾತ್ರ ಮೀಸಲಾದುದು!

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ ಸಂತತಿ

ಜನನಗಳು ಹೆಚ್ಚದಂತೆ ನಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೃತಿ

ಬೆಲೆ 0—50 ಪೈಸೆ ಮಾತ್ರ.

0-60 ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ

ಮಲ್ಪೆ ಕೋಟೆ, ಉಡುಪಿ, ದ. ಕ.

ಅಗೋ ಅಸ್ತು — ಅರಿವುತ್ತೇಳು

(ಅರನೇ ಪುಟದಿಂದ)

ರಾಜ್ಯಗಳನ್ನು ರಚಿಸಿಕೊಂಡು ನುಂಗ್ರಿ ಮೂಗಧರ ಥಾಗೂ ರಾಜ್ಯಪಾಲರ ಕಾರು ಭಾರಿಗೆ ದಾರಿ ಮಾಡಿಕೊಟ್ಟರುವೆವು. ಇನ್ನೊಂಗಡೆ ಹುಣ್ಣಿನ ಮೇಲೆ ಬರೆಯನ್ನೆಳೆದು ಕೊಂಡಿರುವೆವು. ಬ್ರಿಟಿಷರು ಬಿಟ್ಟು ಹೋಗುವಾಗ ತಮ್ಮ ಒಡೆದು ನಾಶವಾಡುವ ಧೋರಣೆಗನ್ನುಸಾರವಾಗಿ ಪಾಕಿಸ್ತಾನವೆಂಬ ಪಾರವಿ ಪಿಶಾಚಿಯನ್ನು ನಮ್ಮ ಮಂದೆ ನಿಲ್ಲಿಸಿಯೇ ಕಾಲ್ತೆಗೆದಿದ್ದರು. ಶ್ರೀಲಂಕೆ, ಬ್ರಹ್ಮ ಪ್ರದೇಶ, ಗಾಂಧಾರ ಇವೆಲ್ಲಾ ಹಳೆಯ ಕಥೆಗಳೇ ಆಗಿ ಬಿಟ್ಟಿವೆ ಪಾಕಿಸ್ತಾನಿ ಪಿಶಾಚಿ ನುಮ್ಮಗೆ ಬಿಡುವ ಗುಂಟೇ? ಅದು ಕಾಶ್ಮೀರದಲ್ಲಿ ಕಾಲಿಟ್ಟಿತು; ಅಸ್ಸಾಮಿನಲ್ಲಿ ಅದಲಾರಂಭಿಸಿತು, ನೇಪಾಳದಲ್ಲಿ ನಾಲಗೆ ಚಾಚಿತು..... ಹೀಗೆ ತನ್ನ ಪಿಶಾಚ ನೃತ್ಯಕೆ ಆರಂಭಿಸಿಬಿಟ್ಟಿತು.

ಇವನ್ನೆಲ್ಲಾ ಕಂಡು ಭಾರತದ ಸೌಮ್ಯಡೆಗೆ, ಶಾಂತಿ-ಸಹಬಾಧಾನಕ್ಕೆ ವಿಪರೀತ ಅರ್ಥಕಲ್ಪಿಸಿಕೊಂಡು ಜೈನಿ-ಕಮ್ಯೂನಿಸ್ಟ್ ಕಪಿ ತನ್ನ ಕಪಿಚೇಷ್ಟೆಗೆ ಆರಂಭಿಸಿ ಬಿಟ್ಟಿತು. ಅದು ಪಾಕಿಸ್ತಾನಿ ಪಿಶಾಚಿಯನ್ನು ತನ್ನ ಕಕ್ಷದಲ್ಲಿ ಸೇರಿಸಿಕೊಂಡಿತು; ನೇಪಾಳ್ಲಿದ ನೆಹರಾಡಿತು.

ಅಂತಾ ಈ ಪಾಶವೀ ದುಃಶಕ್ತಿಗಳು ಸೇರಿಕೊಂಡು ಸಹಸ್ರಾರು ಮೈಲು ಭೂಪ್ರದೇಶವನ್ನು ಆಕ್ರಮಿಸಿಕೊಂಡು ಇನ್ನು ಪ್ರಗತಿ ಥಬಲ್ಲಿ ಕ್ಷಿಪ್ರಗತಿಯಲ್ಲಿ ಸಾಗುವವಾಗಿ ದೆರಿಕೆ ಹಾಕುತ್ತಿವೆ. ಇವು ಆಕ್ರಮಣ ಸಿಕೊಂಡಿರುವ ಭೂಪ್ರದೇಶವನ್ನೇ ಹಿಂದಿನ ಪ್ರಧಾನಿ ಪಂಡಿತ ಜವಾಹರಲಾಲ 'ಹರೂರವರು 'ಹುಲ್ಲೂ-ನುಳ್ಳು ಬೆಳೆಯುವ ನಿಷ್ಪ್ರಯೋಜಕ ನೆಲ' ವೆಂದು ನಗಾಡಿಕೊಂಡೇ ಅದಕ್ಕೆ ಫೀರು ಬಿಟ್ಟು ಬಿಡಲು ತಮ್ಮ ಮನಸ್ಸಿದ್ಧಿತನ ತೋರಿಸಿದ್ದರು. ಇದೀಗ ಶ್ರೀ ಛಾಗ್ಲಾರವರು ಆದನ್ನು ಪವಿತ್ರ ರಾಷ್ಟ್ರದ ಅಂಗವೆಂದಿದ್ದಾರೆ. ನಿಜವಾಗಿ ಅದು ಪವಿತ್ರ ರಾಷ್ಟ್ರದ ಅಂಗವಾದಲ್ಲಿ ನಾವು ಅದನ್ನು ಹಿಂದಕ್ಕೆ ವಡೆದುಕೊಳ್ಳಲೇಬೇಕ. ಅದಕ್ಕಾಗಿ ನಾವು ನಿಷ್ಫಲ ನಿರ್ಧಾರಕ್ಕೆ ಬರಲೇಬೇಕು. ನಮ್ಮೆದುರಿನಲ್ಲೇ ಉತ್ಸಾಹವಾಯಕ ಘಟನೆಗಳು ನಡೆದಿರುತ್ತದೆ. ಸುಮಾರು ಇಪ್ಪತ್ತುನಾರು ವರ್ಷಗಳ ಹಿಂದುಗಡೆ ಚದುರಿ ಚೆಲ್ಲಿ, ಹರಿಹಂಜಾಗಿ ಹೋಗಿದ್ದ ಯೆಹೂದ್ಯರು ಪುನಃ ತಮ್ಮ ತಾಯ್ನಾಡನ್ನು ಭವ್ಯ ರಾಷ್ಟ್ರವೊಂದನ್ನಾಗಿ ಸೂರ್ಪಡಿಸಿ, ಪ್ರಪಂಚದೇ ಮೂಗಿನ ಮೇಲೆ ಬೆರಳಿಟ್ಟು ಕೊಳ್ಳುವಂತೆ ಮಾಡಿಸಿದೆಯಂದ ಮೇಲೆ ಕೇವಲ ಇಪ್ಪತ್ತು ವರ್ಷಗಳಿಂದ ಅನ್ಯರ ಆಕ್ರಮಣಕ್ಕೊಳಗಾಗಿರುವ ನಮ್ಮ 'ಪವಿತ್ರ ಭೂಮಿ'ಯನ್ನು ನಾವು ಪುನಃ ಪಡೆದುಕೊಳ್ಳುವದರಲ್ಲಿ ತಪ್ಪೇನಿದೆ?- ಪವಾಡವೇನಿದೆ? ಅಂತಹ ದೃಢ ನಿರ್ಧಾರ ನಮ್ಮಲ್ಲಿ ಬರಬೇಕು.

ಈ ನಿರ್ಧಾರದ ಬೀಜ ನಮ್ಮ ಹೃದಯ ಭೂಮಿಯಲ್ಲಿ ಮೊಳಕೆಯೊಡೆಯಿತೆಂದರೆ ಅದು ಕ್ರಮೇಣ ಮಹಾ ವೃಕ್ಷವಾಗಿ ಬೆಳೆದೇ ಬಿಡುತ್ತದೆ. ಅದರ ಫಲವನ್ನು ನಾವು ಕಾಣಬಹುದು, ಅನುಭವಿಸಬಹುದು. ಈ ನಿರ್ಧಾರಕ್ಕೆ ಬೇಕಾಗಿ ನೀರೆರೆಯುವವರ್ಯಾರು, ಗೊಬ್ಬರ ಹಾಕುವವರ್ಯಾರೆಂಬ ಆಲೋಚನೆಯ ಅವಶ್ಯಕತೆಯೇ ಇಲ್ಲ. ನಮ್ಮ ಹೃದಯ ಬಗ್ಗು ಭೂಮಿ ಇಗುವದಿಲ್ಲ. ಅಲ್ಲದೆ ಮೊಳಕೆ, ಸಸಿ, ಗಿಡವು ಚಂದ, ದೃಢತೆಯನ್ನು ಕಂಡ ಕಣ್ಣುಗಳು ಸುಮ್ಮಗುಳಿಯಲಾರವು. ಅನ್ಯಾನ್ಯ ದೇಶಗಳಲ್ಲಿ ಆದಕ್ಕೆ ಪಂದ್ಯಾಟ ನಡೆದಿಹ. ಆ ದೇಶಗಳು ಹಾಕಿದ ಹರಕ್ಕುಗಳ ಮೇಲೆ ನಾವು ನೆರವನ್ನು ಯಾಚಿಸಬೇಕಾಗಿಲ್ಲ, ನಮ್ಮ ಹರತ್ತುಗಳ ಮೇಲೆ ನೆರವನ್ನು ಸ್ವೀಕರಿಸಬೇಕಾಗುತ್ತದೆ. ಕಳೆದುಕೊಂಡಿರುವ ಪುಣ್ಯ ಭೂಮಿಯನ್ನು ಹಿಂದಕ್ಕೆ ಪಡೆದೇ ತೀರುವೆನೆಂಬ ತೀರ್ಮಾನಕ್ಕೆ ಬಂದುನೆವೆಂದರೆ ನಾವು ಪಾಕಿಸ್ತಾನ ಹಾಗೂ ಜೈನಾವನ್ನು ವಿರೋಧಿಗಳ ಸ್ಥಾನದಲ್ಲಿ ಇಡಬೇಕಾಗುತ್ತದೆ. ಆದಕ್ಕಾಗಿ ವಿಷ-ಮೇಷ ಎಣಿಸುವದರಲ್ಲಿ ಅರ್ಥವಿಲ್ಲ. ಪಾಕಿಸ್ತಾನವನ್ನು ಶತ್ರುವೆಂದು ಗುರುತಿಸಿಕೊಂಡಲ್ಲಿ ಇಲ್ಲಿಯ ಮುಸ್ಲಿಮರಿಗೆ ಕೋಪ ಬಂದಲ್ಲಿ ಅವರ ಮತದ ವಾಡೀಸು? ಅವರು ಮತದಾನ ಮಾಡದಿದ್ದಲ್ಲಿ ಅಧಿಕಾರನ ಅಂತಸ್ತಿನಲ್ಲಿ ಆಸೀನರಾಗ ವಡೆಂದು? ಅವರು ಇನ್ನೊಂದು ಪಾಕಿಸ್ತಾನವನ್ನು ಕೇಳಿದಲ್ಲಿ ನುಂದೇನಾದೀತ ? ಅನ್ಯದೇಶಗಳಲ್ಲಿರುವ ಮುಸ್ಲಿಮರು ಮುನಿಸುಗೆಂಡರೆ ನಮ್ಮ ಪಾಡೇನಾದೀತ-? ನಮಗೆ ಜಪ್ತಿ, ಎಣ್ಣೆ ಇತ್ಯಾದಿ ಕೊಡ ವರ್ಯಾರು? ಅದೇ ರೀತಿ ಜೈನಿ ಕಮ್ಯೂನಿಸ್ಟರನ್ನು ಆಕ್ರಮಣಗಾರರೆಂಬ ಪಟ್ಟಿಯಲ್ಲಿಸೇರಿಸಿಬಿಟ್ಟರೆ ಇಲ್ಲಿಯ ಕಮ್ಯೂನಿಸ್ಟರು ಕೆಂಡವಾದರೇ? ಅವರು ಕೆಂಡವಾದಲ್ಲಿ ತೆಲಂಗಾಣ ವಿಷಯ ವಾಡಾ ನಕ್ಸಲ್ ಬಾರಿ ..... ಇನ್ನೇನೋ ಬರಿಸಿಬಿಟ್ಟಲ್ಲಿ ರಾಜ್ಯವಾಳುವ ಹೇಗೆ? ಪಾಪ್ಯಾ ರೊಟ್ಟಿಗೆದ್ದರೆ ಏನು ಮಾಡ. ನಡು? ನಿರ್ಧಾರಕ್ಕೆ ಬರುವ ಮುಂಚೆ ಇಂತಹ ಪುಕ್ಕಲುತನದ ಹೂರ್ತಿ ಪುಕ್ಕವನ್ನು ಮುರಿದುಬಿಡಲೇಬೇಕು. ಇಷ್ಟು ಚಿಕ್ಕ ಇಜಿಪ್ಟ್ ಅನೇಕ ಬ್ರಿಟನ್ ಗಳನ್ನು ಎದುರಿಸಿ ನಿಲ್ಲಬಹುದಾದಲ್ಲಿ, ಇಷ್ಟು ಪುಟ್ಟ ಇಸ್ರೇಲ್ ಇಷ್ಟಾಂ ರಾಷ್ಟ್ರಗಳನ್ನು, ರಷ್ಯಾವನ್ನು ಎದುರಿಸಿ ನಿಲ್ಲಬಹುದಾದಲ್ಲಿ ನವಿಂದಲೂ ಸಾಧ್ಯವಿಲ್ಲವೇನು? ಈ ನಿರ್ಧಾರಕ್ಕೆ ಬಂದೆವೆಂದರೆ ನಮ್ಮ ಪುಣ್ಯಭೂಮಿಯನ್ನು (ನಮ್ಮ ಭೂಪ್ರದೇಶವೇ ಇದ್ದರೂ ಕೂಡಾ) ಹಾಗೂ ಜೈನಾ ಅಪವಿತ್ರಗೊಳಿಸಿ ಬಿಟ್ಟಿರುವ ಪವಿತ್ರ ಭೂಮಿಯನ್ನು ತೀರ್ಥಕ್ಷೇತ್ರಗಳನ್ನು ನಾವೇ ಸ್ವತಂತ್ರವಾಗಿ ಸಂದರ್ಶಿಸಲು ಅವಕಾಶವಾಗುವದು. ಇದಕ್ಕಾಗಿ

ಯಾರಿಗೊತ್ತು ಏನೇನಾಗುತ್ತೋ?

(ನಿನ್ನೆಯ ಮುಂದುವರಿದ)

"ಓ! ಈಗ ಖುಲಿ ಸೂಗದ್ರೀ ಅನ್ನು'

"ಹೂಂ. ಇನ್ನೊಬ್ಬಳು—ನನ್ನ ಕೇಳ್ತಾ ಕೆ; ಮೂರನೇ ನುದುವೆಯಂತೆ. ಒಪ್ಪಾ ಬಿಡ್ಲಾ ಅಂತ ಆಲೋಚನೆ ಮಾಡ್ತಾ ಇದ್ದೇನಪ್ಪ"

ಂ ಂ ಂ

ಇಂಥಾದ್ದು ಇನ್ನೂ ಕೆಲವು ಕೇಳಿದ ನೆನಪು; ಕಲೆ ಕೆರೆದು ಕೊಂಡರೂ ಹೊಂಗೆ ಬರೋಲ್ಲಾ ಅನ್ನುತ್ತೆ. ಇಷ್ಟು ಸಾಲದೆ? ಇದರಿಂದ ಇನ್ನೊಂದಿಪ್ಪತ್ತು ವರ್ಷಗಳ ಮೇಲೆ ಹೇಗಾದೀತು ಅಂತ ಊಹಿಸಲಾಗದೆ, ಕಲ್ಪನಾಶಕ್ತಿ ಇದ್ದವರಿಗೆ? ಜೀಕಾದವರಿಗೆ ಸ್ವಲ್ಪ ನಾನೂ ಎತ್ತಿಕೊಟ್ಟೇನು.

ಮುಖ್ಯವಾಗಿ ಮದುವೇ ಡೈವೋರ್ಸ್ ನಿತ್ಯ ಪದ್ಧಿಯಾದೀತು. ಇದರಿಬೆಯಲ್ಲಿ ಒಂದು ಶಾನೂನೂ ಬಂದೀತು, ಡೈವೋರ್ಸಾಗ-ವಾಗ ಹೆಣ್ಣು ಮಕ್ಕಳ- ದೆಣ್ಣಿನ ವಶದಲ್ಲಿಯೂ, ಗಂಡು ಹುಟ್ಟಿದರೆ ಗಂಡಿನ ವಶದಲ್ಲಿಯೂ ಜೋಗಬೇಕು ಅಂತ.

ಆಸಲು ಮಕ್ಕಳು ಹಾಗೆಲ್ಲಾ ತಾರು ಮಾರಾಗಿ ಹುಟ್ಟಲಿಕ್ಕೂ ಇಲ್ಲಾನ್ನಿ. ಇಚ್ಛಾ ಸಂತಾನದ ಪದ್ಧತಿಯೇ ಆಗ ಜಾರಿಗೆ ಬಂದಿರುತ್ತೆ.

ಹೆಣ್ಣಾಗಳೆಲ್ಲಾ ವಿದ್ಯೆಕಲಿಗಳಾಗಿ, ಉದ್ಯೋಗ ಕಲಿಗಳಾಗಿ, ಗಳಕೆಗಳಾಗಿ, ಹಿಂದಿನ ಕಾಲದಲ್ಲಿ ಗಂಡುಸರು ಮಾಡಿದ್ದಕ್ಕೆಲ್ಲ ಸೇಡು ತೀರಿಸಿ ಕೊಳ್ಳುವವರಾದಾರು. ಗಂಡು ಮಕ್ಕಳಿಗೆ ಮದುವೆಯೊಗಬೇಕಾದರೆ ಹೆಂಗಾಣಿಕೆ ಕೇಳಿಯಾರು. ದೊಡ್ಡ ದೊಡ್ಡ ಉದ್ಯೋಗದ ಹೆಂಗಳ ಹೆಂಗಾಣಿಕೆಯೂ ಹೆಚ್ಚೇ ಆದೀತು. ಆದ್ದರಿಂದ ಹೆಣ್ಣುಗಳೆಲ್ಲಿಯಾದರೂ ಪ್ರೇಮದಲ್ಲಿ ಬಿದ್ದರೇನೇ ಗಂಡುಗಳಿಗಷ್ಟು ಲಾಭ. ಅಂಥ ಪ್ರೇಮಿಗಿ ಹೆಣ್ಣುಗಳು ಹೆಂಗಾಣಿಕೆ ಇಲ್ಲದೆಯೇ ಬಡಗಂಡುಗಳನ್ನು ವರಿಸಿ ಸುಖ ಪಡಿಸಿಯಾರು.

ಅಂತೂ ಇಂತೂ ಹೆಣ್ಣುಗಳ ಹಿಂದೆ ತಿರುಗುವಂಥಾ ಗಂಡುಗಳ ಪಾಡೇನೋ ಯಾವ ಕಾಲಕ್ಕೂ ತಪ್ಪಿರಲ್ಲ ಎನ್ನುವುದು ನಿಜ. ಅದೇ ಒಂದು ಸಮಾಧಾನ.

ಂ ಂ ಂ

ಇನ್ನೂ ಸ್ವಲ್ಪ ಆಳತೆಗೆದು, ಮತ್ತೊಂದಿಪ್ಪತ್ತು ವರ್ಷ ಹೋದ ಮೇಲೆ ಏನಾದೀತು ಅಂತ ನೋಡೋಣವೆ? ಜಕ್ಕತಿರುಗಿದ ಹಾಗೆ ಕಾಲ ತಿರುಗುತ್ತಾ ಇದೆ? ಆಡಿಗೆ ಹೋದದ್ದು ಮತ್ತೆ ಮೇಲೆ ಬರಲೇ ಬೇಕು. ಒಂದೆ ಸ್ವಾತಂತ್ರ್ಯ ಚಳುವಳಿ ಶುರುವಾದ ಹಾಗೆಯೇ ಮತ್ತೆ ಹುರುಪು ಸ್ವಾತಂತ್ರ್ಯ ಚಳುವಳಿಯೂ ಶುರುವಾಗುತ್ತೆ. ಹೆಣ್ಣುಗಳ ಭೂಕುಬಿಕ್ಕರಿಂದಲೆಂದ ತಮ್ಮನ್ನು ರಕ್ಷಿಸಿಕೊಳ್ಳುವ ಪ್ರಶ್ನೆ ಬಂದು, ಕ್ರಮೇಣ ಪ್ರೇಮದಲ್ಲಿ ಬಿದ್ದ ಹೆಣ್ಣುಗಳ ಸಪೋರ್ಟು ಸಿಕ್ಕಿ, ಮತ್ತೆ ಗಂಡುಗಳ ಆಧಿಕಾರವೂ ಬಂದೀತು....

ಂ ಂ ಂ

ಇದೀಗ ಗಂಡು ಹೆಣ್ಣುಗಳ ಒಂದು ಮಟ್ಟಿನ ಪರಿಣಾಮದ ಊಹೆ ಮಾತ್ರ ಸ್ವಲ್ಪ ಮಾಡಿದ್ದು. ಇನ್ನೊಂದು ಮಟ್ಟಿ ಅಂದರೆ ನಮ್ಮ ಸಾಮಾಜಿಕ ರೀತಿ, ಪದ್ಧತಿ ಗಳು. ಅದು ಹೇಗಾದೀತು ಇನ್ನೊಂದಿಪ್ಪತ್ತು ಮೂವತ್ತು ವರ್ಷಗಳ ಮೇಲೆ

ಇಪ್ಪತ್ತು ವರ್ಷಗಳ ಹಿಂದೆ, ಬೇಕಾದರೆ ಇನ್ನೂ ಸ್ವಲ್ಪ ಹಿಂದೆಯೇ ಕಣ್ಣು ಹಾಯಿಸಿ ನೋಡಿದರೆ, ಆಗ ಸರಕಾರಿ ನೌಕರ್ರೇ ಟು, ಹೋಟೆಲು, ಮುಂತಾದ ವುಗಳಿಗೆ ತುಗನಸ್ಸು ನುಹತ್ತವಿರಲೇ ಇಲ್ಲ. ಎಲ್ಲೋ ಆಂಧ್ರಾ ನಗರದಲ್ಲಿ ಇದ್ದರೆ ಇತ್ತು, ಇಲ್ಲದಿದ್ದರೆ ಇಲ್ಲ. ಹೊಸುಕಿಕೊಂಡು ಹೋಗಬೇಕು. ನಿಜವೇ ಅಂತ. ಆಗ ಎಲ್ಲರಿಗೂ ಮನೆಯೂಟೇ ಆಹಾರ. ಮನೆ ತೋಟದ್ದೇ ಕರಕಾರಿ. ಮನೆ ದನಗಳದ್ದೇ ಹಾಲೂ ಮೈನೂ. ತಮಗೆ ಹೆಚ್ಚಾದುದನ್ನು ಆಚೆ ಈಚೆ ವನೆಯವರಿಗೆ ಕೊಟ್ಟಾರು. ನ.ದ.ನೆಪ್ರಯೋಜನಾದಿಗಳಿಗೆ ಕೂಡಾ ಹೊರಗಿರಿ ಕೂಡವನ ಕ್ರಮದ ಮೂಲಕ ಕರಕಾರಿ ಪ್ರಶ್ನೆ ಬಗೆ ಹರೀತಿತ್ತು. ಬರ್ತಾ ಬರ್ತಾ ಈಗೇನಾಯಿತು?

ಗಂಡಾ ಹೆಂಡರಿಬುವ ಒಂದು ಮನೇಲಿ, ಮೈಬಗ್ಗಿ ಒಲೆ ಗೂಡಿ ಕೆಲಸ ಮಾಡುವುದೇ ಅನಾಗರಿಕತೆಯೆನಿಸುತ್ತಾ ಇದೆ. ಬರೀ ಒಂದು ಅನ್ನ ಮಾಡುವುದು, ಪುಳ್ಳೀ ಸಾರು ಬೇಕಾದರೆ ಹೋಟೆಲಿನಿಂದ ತರುವುದು. ಜೂವ ಹೋಟೆಲಿಗೆ ಹೋದರೂ ಪೊಟ್ಟಣ ಕಟ್ಟಿಕೊಡವ ಕ್ರಮ ಉಂಟೇ ಉಂಟ. ಕೆಲವು ಕಾಟಂಬ ದಿನಾ ಊಟಾ ತಿಂಡೀ ಎಲ್ಲಾ ಹೋಟೆಲಿಂದಲೇ ತರಿಸುತ್ತನೆ. ಎಂದೋ ಒಂದು ದಿನ ಮನೆಯಲ್ಲಿ ಅಡಿಗೆ ಮಾಡಿದರೆ ಅದು ಕ.ಶಾಲಿಗೆ ಎಂದರ್ಥ.

ಮನೆಯಲ್ಲಿ ದನಕರು ಎಮ್ಮೆಗಳನ್ನು ಕಟ್ಟುವ ಅಭ್ಯಾಸವೂ ಹೋಗುತ್ತಾ ಇದೆ. ಎಲ್ಲಿಗೆ ಹೋಯಿತೆನ್ನುವಿರಿ? ಒಂದೊಂದು ಸಂಸ್ಥೆಗು ಕೆಳಗೆ.

ಹಾಲುಬೇಕೆ? ಡಾಲು ಡಿಪೊ ಕೈ ಹೋಗುವುದು ಊರ ದನಗಳೆಲ್ಲಾ ಅಲ್ಲೇ ಹಿಂಡುವುವು. ಹಾಗೆಯೇ ಮೊಸರಿಗೊಂದು ಅಂಗಡಿ. ತುಪ್ಪಕ್ಕೊಂಟು ಅಂಗಡಿ. ಪ್ರತಿಯೊಂದಕ್ಕೂ ಒಂದೊಂದು ಸಂಸ್ಥೆ. ಹಾಗೆಯೇ ಮುಂದೆ ಹೋಟೆಲುಗಳು ಕೂಡಾ ಶಾಖೋಪಶಾಖೆಗಳಾಗಿ, ಹುಳಿಯಂಗಡಿ, ಸಾರಾನಂಗಡಿ, ಪಲ್ಯದಂಗಡಿ, ಪಪ್ಪಳದಂಗಡಿ, ಅನ್ನದ ತೊಟ್ಟಿ—ಹೀಗೆ ಬೇರೆ ಬೇರೆ ಆಗಿ ಅಲ್ಲಲ್ಲಿ ಆದೊಂದೊಂದೇ ಭಾರಿ ಉದ್ಯಮವಾದರೂ ಆದೀತು. ಒಂದು ಮನೆಯಲ್ಲಿ ಭಾರಿ ಗೌಜಿಯ ಊಟ ಮಾಡಬೇಕೆಂದು ತೋರಿದರೆ, ಅನ್ನ, ಹುಳಿ, ಸಾರು, ಕಲ್ಯ ಕೋಸಂಬರಿ, ಪಾಯಸ, ವಡೆಂಸ, ವಿನ್ನು, ಪುಲಾವು, ಹೋದ ಗುರುಗುರುಗಳು—ಅದೂ ಇದೂ ಆಯಾ ಯಾ ಅಂಗಡಿಯಿಂದ ತರಿಸಿ ಬಿಟ್ಟರೆ ತೀರಿತು. ಶಕ್ತಿಯಿಲ್ಲದವರು ಸಾರಿನಂಗಡಿಯಿಂದ ಸಾರು ಮಾತ್ರ ತರಿಸಿದರೂ ಆಯಿತು.

ಈಗಾಗಲೇ ದೋಸೆಯಂಗಡಿ, ಇಡ್ಲಿಯಂಗಡಿ, ವಡೆಯಂಗಡಿ ಅಂತ ಅದದು ಮೂಲಶ್ರಮಾಶ್ರವೇಮೂರುವಅಂಗಡಿಗಳಿವೆ. ಇದನ್ನೆಲ್ಲಾ ನೋಡುವಾಗ ಇನ್ನು ಮುಂದಿನ ಸಂತತಿಯವರು ಯಾವುದಾದರೂ ಒಂದೊಂದು ಹೋಲೆಯಲ್ಲಿ ಎಕ್ಸ್‌ಪರ್ಟು ಗಳಾಗಿ ಆ ವ್ಯಾಪಾರವನ್ನೇ ಸಾಗಿಸಿಕೊಳ್ಳುತ್ತಾರೆ. ಎಲ್ಲವೂ ಒಂದು ಸಂಸ್ಥೆಯ ಕೆಳಗೇ ಬಂದೀತು, ಅಂದರೆ ಇಂಥಲ್ಲಿ ಮಾತ್ರ ಪಲ್ಯಕಾಯಿ ತೋಟ, ಇಂಥಲ್ಲಿ ಮಾತ್ರ ದನಗಳ ಪಾಲನೆ,ಇಂತಿಂಥವರಿಗೆ ಹಾಲು ಹಿಂಡೋ ಕೆಲಸ, ಮನೆಲೆರುಬ್ಬೋ ಕಾರ್ಖಾನೆ, ತರಕಾರಿ ಹಚ್ಚಿಕೊಡುವ ಸಂಸ್ಥೆ....ಹೀಗೆಲ್ಲಾ ಆದೀತು.

ಜೀಕಾದರೆ ನಮ್ಮ ದೇಹವನ್ನು ನೋಡಿ. ಹಿಂದೆ ವೈದ್ಯ ಎಂಬ ಒಬ್ಬನೇ ದೇಹದ ಎಲ್ಲಾ ಭಾಗಕ್ಕೂ ಚಿಕಿತ್ಸೆ ಮಾಡುತ್ತಿದ್ದ. ಈಗ ಹಲ್ಲಿಗೊಬ್ಬರು, ಕಣ್ಣಿಗೊಬ್ಬರು, ತಲೆಗೊಬ್ಬರು, ಎಲುವಿಗೊಬ್ಬರು ಹೀಗೆ ಪ್ರತಿ ಅಂಗಕ್ಕೂ ಬೇರೆ ಬೇರೆ ಡಾಕ್ಟರರಿದ್ದಾರೆ.ಮುಂದೆ, ಇನ್ನು ಇಪ್ಪತ್ತು ವರ್ಷಗಳ ಮೇಲೆ, ಗಡಿಯೂರ ಬಿಚ್ಚಿ ಜಾಕಿದ ಹಾಗೆ, ದೇಹವನ್ನೆಲ್ಲಾ ಬೇರೆ ಬೇರೆ ಮಾಡಿ, ಬೇರೆ ಬೇರೆ ವಿಭಾಗಗಳಿಗೆ ನಾಗಿಸಿ ಸರಿಮಾಡಿಸಿ ಜೋಡಿಸಿ ಕೊಟ್ಟಾರು. ಆಗ ಅಪ್ಪಿ ತಪ್ಪಿ ವಿಶೇಷ ಸುದ್ದಿಗಳೂ ನ್ಯಾರಸ್ಯಗಳೂ ಹೊರಟಾವು.

"ವಿಶ್ವಂ ಎಂಬ ಕವಿಗೆ ತಲೆನೋವಿಗಾಗಿ ಆಪರೇಷನ್ ನಡೆಯಿತು. ಆವನ್ನುಮೆದುಳನ್ನು ಜೇರಿ ತೆಗೆದಿಟ್ಟು ಮತ್ತೆ ಜೋಡಿಸುವಾಗ ನಂಬ್ರ ಹೇಗೋ ತಪ್ಪಾಗಿ ಅವನ ಮೆದುಳನ್ನು ಒಬ್ಬ ಮುದುಕನ ತಲೆಗೆ ಸೇರಿಸಿ ಬಿಟ್ಟುದರ ಫಲವಾಗಿ, ಮಿದುಳುಗಳ ಅದಲು ಬದಲಿನಿಂದ ಯುವಕನಾಗಿದ್ದ ವಿಶ್ವಂ ಕವಿ ಶಿವಾತಿವಾ ಎಂಬ ಮುದುಕನ ಹಾಗೆ ಜಪಸಿಕೊಂಡು ಮೂಲೆಯಲ್ಲಿ ಕೂತಿದ್ದಾನಂತೆ. ಮುದುಕ ಒಂದು ಕವಿತೆಯ ಅರ್ಧ ಭಾಗವನ್ನು ಹಾಡುತ್ತಾ, ಅದರ ಮೊದಲಿನ ಅರ್ಧ ಎಲ್ಲಿ ಹೋಯಿತು ಎಂದು ಹುಡುಕುತ್ತಾ ಬೀದಿ ಬೀದಿ ಅಲೀತಿದ್ದಾನೆಂದೂ, ಅಲೆಯುಲಿಕ್ಕೆ ಶಕ್ತಿಯಿಲ್ಲದೆ ಪದೇ ಪದೇ ಬೀಳುತಿದ್ದಾನೆಂದೂ ಪದಂಪತಿನಿಂದ ವರದಿಯಾಗಿದೆ. ಮತ್ತೆ ವಿದುಳುಗಳನ್ನು ಮೊದಲಿನಂತೆ ಮಾಡುವುದರಿಂದ ಜೀವಕ್ಕೆ ಅಪಾಯವಾಗುವುದಂತೆ. ಡಾಕ್ಟರನ್ನು ಬಂಧಿಸಲಾಗಿದೆ".

ಹೀಗೆ ಸುದ್ದಿ ಬಂದರೂ ಬಂದೀತು.

ಂ ಂ ಂ ಂ

ಯಾರಿಗೆ ಗೊತ್ತು? ಕಳೆದ ರತಮಾನದಲ್ಲಿ ಬುಸ್ಸೀ ಎಂಬವನಿಂದಾಗಿ, ಮಕ್ಕಳನ್ನು ಹೆದರಿಸುವ "ಬೂಜೀ—ಗುಮ್ಮ" ವಾಡಿಕೆಗೆ ಬಂದ. ಈಗ "ಫ್ರೇಂಕಾಪೋ" ಎಂಬ ಮೂರಾಯನ ಅವತಾರ ಶುರುವಾಗಿದೆ. ಏನೋ ಕಲ್ಕತ್ತಾವತಾರ ಎಂಬುದೊಂದು ಊತ್ತ ನಮಗೆಲ್ಲ ಗೊತ್ತು. ಇದು ಯಾರಿಗೆ ಗೊತ್ತಿತ್ತು?

ಏನೇನು ಏಜೆಕ್ಟವಾಗಿಲಿಕ್ಕಿದೆಯೋ ಭವಿಷ್ಯತ್ ಗರ್ಭದಲ್ಲಿ!

ಶೀಲವನ್ನು ನಿಶ್ಚಯಿಸಿಕೊಳ್ಳಲಾರದ ಮೂನವರು ಇತರ ಎಂತಹ ಘನ ಕಾರ್ಯಗಳನ್ನು ಸಾಧಿಸಿದರೂ ಜಗತ್ತು ಅವರನ್ನು ಲೆಕ್ಕಿಸದು.

ಂ ಂ ಂ

Telegram: SAHAKARI Telephone. 4637

The S. K. A. C. M. S. Ltd.,

SAHAKARI MAHAL,

MANGALORE-1

ದ. ಕ. ಕೃಷಿಕರ ಸಹಕಾರಿ

ಮಾರಾಟ ಸಂಘ ಲಿಮಿಟೆಡ್

ಸಹಕಾರಿ ಮಹಲ್,

ಮಂಗಳೂರು-1.

ಅಡಿಕೆ, ಯಾಲಕ್ಕಿ, ಕಾಳುಮೆಣಸು, ಗೇರುಬೀಜ,
ತೆಂಗಿನ ಕಾಯಿ ವಗೈರೆ (ಅಕ್ಕಿ, ಭತ್ತ ಹೊರತು)
ವ್ಯವಸಾಯದ ಎಲ್ಲಾ ಉಪ್ಪನ್ನಗಳನ್ನು
ಕಮಿಷನ್ ವ್ಯಾಪಾರಕ್ಕೆ ಪಡಕೊಂಡು
ಯೋಗ್ಯ ಬೆಲೆಗೆ ವಿಕ್ರಯಿಸುವ

ಜಿಲ್ಲೆಯ ಪ್ರಮುಖ ಸಹಕಾರಿ ಮಾರಾಟ ಸಂಘ

ಹರಿಜನೋದ್ಧಾರ

(ನಾಲ್ಕನೇ ಪುಟದಿಂದ)

ಸೀರೆಯಿಂದ ಜೀರ್ಣಕ್ಕೆ ಸಹಕಾರಿಯಾಗಬಹುದು.

ಎಲ್ಲರ ಊಟವೂ ಆಗಿ ಬಟ್ಟೆ ಬಾಟ್ಲಿಎಂಜಲೆಲೆ ಹೊರಗೆ ಬಂತು. ಅಲ್ಲಿ ನೋಡಿದರೆ ಪಾಪ ಪರಿಣಾಮುನ್ನೂರಕ್ಕಿಂತಲೂ ಹೆಚ್ಚು ಹರಿಜನರ ತಂಡವೇ ಧಾವಿಸಿ ಎಂಜಲೆಲೆಗೆ ಮುಟ್ಟಿಗೆ ಹಾಕಿ ಹೆಕ್ಕತೊಡಗಿದರು. ಆ ನಂತರ ಹರಿಜನರಿಗೂ ಪ್ರತಿ ಒಬ್ಬರಿಗೂ ಎಲೆ ಹಾಕಿ ಇಕ್ಕರಿಗೆ ಬಡಿಸುವುದಕ್ಕಿಂತ ಇದ್ಯುದ್ದಿ ಮುದ್ಯುದ್ದಿ ಬಡಿಸಲಾಯಿತು. ಅಲ್ಲೇ ತಲೆಗೆ ಎಣ್ಣೆ, ಎಲೆ ಅದಿಕೆಯೂ ವಿತರಣೆಯೂ ಆಯಿತು.

ಎಲ್ಲವನ್ನೂ ಅಡಿಯಿಂದ ಅಂತ್ಯದವರೆಗೆ ನೋಡುತ್ತಿದ್ದ ನಾನು ಆಲೋಚನೆಯಲ್ಲೇ ಮುಳುಗಾದೆ. ಹಳ್ಳಿಗಳಲ್ಲಿ ಹರಿಯನ್ಯಕ್ಕೆ ಮರುಣದ ಉದ್ದಿಶ್ಯ ನಡೆಸುವ ಸಂಸ್ಥೆಯನು, ಅನ್ನದಾನಗಳ ಹಿರಿಮೆ. ಜನರು ಪರಸ್ಪರ ಸ್ಪರ್ಶ ಒಗ್ಗಟ್ಟುಗಳಿಂದ ನಡೆಯುವ ಶಿಸ್ತು ಬದ್ಧ ಕಾರ್ಯಕಲಾಪ, ಅಷ್ಟು ಬಡಿಸಿಯೂ ಎಂಜಲೆಲೆಗೆ ಮುಸುರುವ ಹರಿಜನರ ತಂಡ ಎಲ್ಲವನ್ನೂ ಮನಃ ಕೊಟ್ಟು ನೋಡಿದೆ.

ಆಗ ಮಹಾತ್ಮಾ ಗಾಂಧಿಯವರ ಪ್ರಭಾವದಿಂದ ದೇಶದಲ್ಲೆಲ್ಲಾ ಹರಿಜನೋದ್ಧಾರ ಕಾರ್ಯ ಭರದಿಂದ ನಡೆಯುತ್ತಿತ್ತು. ನನಗೂ ಸಾಧ್ಯವಾದರೆ ಒಂದು 'ಅಖಿಲ ಮಥಲ ಸೇವೆ' ಮಾಡಬೇಕೆಂಬ ಹುಮ್ಮಸ್ಸಿಯಿತು. ಹೀಗಿನ" ತಂತಿಯಲ್ಲಿ ನನ್ನ ಮನೆಗೆ ೬ ಕ್ಕೆ ಹೊಡೆದುಕೊಂಡು ಬರುತ್ತಿದ್ದ ಮುದರು ಇದ್ದಳು ಜಿವಳನ್ನು ಕರೆದು 'ನಾಳೆ ಬೆಳಿಗ್ಗೆ ನೀನು ಮತ್ತೆ ನಿನ್ನ ಗಂಡ ಒಮ್ಮೆ ಇನ್ನೊಡನೆ ಮೂತಾಡಿ ಹೋಗಿ' ಎಂದು ಹೇಳಿದೆ. ಅದೇ ರೀತಿ ಜಿವಳು ಮುರುದಿನ ಬೆಳಿಗ್ಗೆ ಹಾಜರಾಗಿ ಮುಂಜಿನ ದಿನದ ಉಳಿದ ಹಳ್ಳ ಪರಿವಾರನ್ನೆಗಳನ್ನು ಕೇಳಿದಳು. ಅವನ್ನು ಕೊಡಿಸಿದೆ. ಆನಂತರ ಬೇರೆ ಕಡೆಗೆ ಇಬ್ಬರನ್ನೂ ಕರೆದು "ನೀವು ಎಂಜಲೆಲೆಗೆ ಯಾಕೆ ಮುಸುರುತ್ತೀರಿ ಅದು ಹೀನ ಕೃತ್ಯ, ಅಲ್ಲದೆ ರೋಗಕಾರಕ" ಎಂದು ಒಂದು ಚಿಕ್ಕ ಭಾಷಣವನ್ನೇ ಬಿಗಿದೆ ಆದ್ಯಂತ ಅವರು "ಎಂಜಲೆಲೆಗಳಿಂದ ಹೆಕ್ಕಿದುದನ್ನು ತಂದಿನ ನಾಲ್ಕೈದು ದಿನದ ವರೆಗೂ ತಿನ್ನುತ್ತೇವೆ. ಬದುಕಬೇಕಾದರೆ ಮತ್ತೇನು ಮಾಡುವುದು?" ಎಂದರು. "ನಿಮ್ಮಂತೆ ಈ ಹೀನ ಕೃತ್ಯವೂಡದ ಇತರ ಜನರು ಬದುಕುವುದಿಲ್ಲವೇ? ನಿಮಗೆ ಶುಸ್ತಿ ಹಚ್ಚುವ ಲಾಭದಾಯಕ ಉಪಕಸಬೂ ಗೊತ್ತಿಲ್ಲ; ಆದ್ದರಿಂದ ಇಂಥ ಹೀನ ಕೃತ್ಯ ನೋವೂಂತನ ಬಟ್ಟು ಬದುಕುವುದನ್ನು ಕಲಿಯಿರಿ" ಎಂದು ಬೋಧಿಸಿದೆ. ತದನಂತರ "ಕುಕ್ಕೆ ಬುಟ್ಟಿ ಹೆಣೆವಿಕ್ಕೂ ಈಗೀಗ ಕಾಡು ಕಡಿದು ಗಿಡಬಳ್ಳಿ ಸಿಗುವುದಿಲ್ಲ. ಅಲ್ಲಾನೆ ಪಟ್ಟಣದ ಕೆಲವು ಮಧ್ಯಮವರ್ಗದವರಿಗೆ ಕೂಲಿ, ನಾಲಿ ಯಾಗಲಿ ಕೊಡುತ್ತಾರೆ' ಎಂಬ ನೆನಪನ್ನು ಕೆಲವರು "ಕಾಡನ್ನು ಅಭಿವೃದ್ಧಿ ಪಡಿಸಲು ನಮ್ಮಿಂದ ಅಸಾಧ್ಯ. ಆದರೆ ಗುಡಿಸಿಲು ಗಳಿಟ್ಟು ಕೊಂಡು ಕೂಲಿ ಸಿಗುವ ಕಾಗೆ ಮಾಡಬಲ್ಲೆ. ನೀವೆಲ್ಲ ಒಪ್ಪಿ" ಎಂದು ಹೇಳಿದೆ. ಆದ ಕೈವಸು ಒತ್ತಾಯದಿಂದ ಒಪ್ಪಿದರು.

ಮಗದಿನ ಕೇ ಬೆಳಿಗ್ಗೆ, ಮಾಡಲು, ಮಳಕಲ್ಲು, ತಾಪಿ ಕೆಲವು ದಿನದಲ್ಲೇ ಅವರಿಗೆ ಒಂದು ಮನೆ ಕಟ್ಟಿಸಿದೆವು. ಆನಂತರ ಅವರನ್ನು ಬರಲಿಕ್ಕೆ ಹೇಳಿ ಮನೆ ವಸ್ತಿಲಿಗೆ ಎರಡು ಸೇರು ಅಕ್ಕಿ, ಎರಡು ತೆಂಗಿನ ಕಾಯಿ, ಹಲಸಿನ ಕಾಯಿ, ಒಂದು ಹಳೆ ವಸ್ತ್ರ ಮೂಲಗಲಿಕ್ಕೆ ಜಾನೆ ಅಡಿಗೆಗೆ ಮಣ್ಣಿನ ಕುಡಿಕೆ ಎಲ್ಲವನ್ನೂ ಕೊಟ್ಟು ಕೂತು ಕೊಳ್ಳಿಸಿ ಆಯ್ತು. ಮೂರು ನಾಲ್ಕು ದಿನವೂ ಮುದರುವಿನ ಗಂಡ ಪಂತ್ರ ಕೂಲಿಗೆ ಬಂದ, ನುದರು ಬರಲಿಲ್ಲ. ಒಂದು ದಿನ ಅವಳನ್ನ 'ಕರೆದು, ನೀನು ಯಾಕೆ ಬರುವುದಿಲ್ಲ?' ಎಂದು ಕೇಳಿದ್ದಕ್ಕೆ 'ನಾನು ಕೂಗುತ್ತದೆ ಕದಕ್ಕೆ ಬಿಟ್ಟೆ ಅಭ್ಯಾಸ ಇಲ್ಲ' ಎಂದಳು. 'ನಿನ್ನ ದೊಡ್ಡ ಮಗ ನೋಡಿಕೊಳ್ಳಲಿ ಅಷ್ಟಿಷ್ಟು ಕೂಲಿ ಎಡೆಯಿಂದ ದಿನಕ್ಕೆ ಒಂದರಡು ಬಾರಿ ಹೋಗಿ ಬಾ. ಇತರ ಮಕ್ಕಳ ಆಯಂಎರೂ ಜಾಗೇ ಮಾಡುತ್ತಾರೆ' ಎಂದೆ. ಆದರೆಡೆಯಲ್ಲೇ ಅವಳು ನನಗೆ ಇಷ್ಟತ್ತು ರೂಪಾಯಿಗಳ ಗರ್ಜಿ ಉಂಟು, ಅದನ್ನು ಕೊಡಿ. ಮತ್ತೆ ನಾನೂ ದಿನಾಲೂ ಕೂಲಿಗೆ ಬರುತ್ತೇನೆ' ಎಂದು ರೂಪಾಯಿಚ್ಚತ್ತನ್ನು ಇಸಕೊಂಡು ಹೋದಳು. ಮರುದಿನ ಬೆಳಿಗ್ಗೆ ನೋಡುವಾಗ ಮುದರುವಿನ ಮನೆ ಖಾಲಿ. ಎಲ್ಲರೂ ರಾತ್ರಿಯೇ ಹೊಗಿ ಬಿಟ್ಟಿದ್ದಾರೆ. 'ನನಗೆ ಎಂಜಲೆಲೆ ಹೆಸ್ಕಿ, ಬೇಡಿ, ದಾನ ಹಿಡಿದರೆ ದಿನ ಹೋಗುವುದಿಲ್ಲವೇ? ಇವರ ಕೂಲಿ. ತೊತ್ತು ಚಾಕರಿ ನಮಗೇಕೆ?' ಎಂಬ ಮುಂಜಿನ ದಿನದೇಳುತ್ತಿದ್ದರೆಂದು ಬೇರೆ ಒಬ್ಬ ಕೂಲಿಯೆಂಗನು ಹೇಳಿದಳು.

ಕೆಲವು ದಿನ ದಾಟಿದ ನೀಲೆ ನಾವು ಮಂಗಳೂರಿಗೆ ಹೋಗುವಾಗ ಆಡ್ಯಾರಿನಲ್ಲಿ ಒಂದು ಮರದ ಬುದಪಲ್ಲಿ ಕೆಲವು ಜನರು ಗುಂಪು ನೇರಿ ಇಣುಕುತ್ತಿದ್ದರು ನಾವೂ ಏನೆಂದು ನೋಡಿದೆವು; ಅಲ್ಲಿ ಮುದರು ಗುಟುಂಬ ಮಗದ ಬುತದಲ್ಲಿ ಇತ್ತು. ಮುದರುವಿನ ಪಣ್ಣ ಮಗು ಸತ್ತು ಹೆಣವಾಗಿದೆ. "ಜ್ವರದ ಮಗುವನ್ನು ಹಿಡಿದುಕೊಂಡು ನೀವು ಯಾಕೆ ಮರದ ಬುಡದಲ್ಲಿ ಕೂತದ್ದು" ಎಂದು ಒಬ್ಬ ವೈದ್ಯರು ಬುದ್ಧಿವಾದ ಹೇಳುತ್ತಿದ್ದರು. ಮುದರು ಜನರ ಎಡೆಯಲ್ಲಿ ನನ್ಯನ್ನು ನೋಡಲಿಲ್ಲ ಅಲ್ಲದೆ ನಾವು ಸ್ವಲ್ಪ ಆ ಗುಂಪಿನಿಂದ ದೂರದಲ್ಲೇ ಇದ್ದೆವು. ಆ ವೈದ್ಯರೊಡನೆ ಮುದರು, ನನ್ನೊಡನೆ ಅಂದು ಹಾಡಿದ ಪಲ್ಲವಿಯನ್ನೇ ಹಾಡುತ್ತಿದ್ದಳು. "ನಮಗೆ ಯಾರು ಗುಡಿಸಲು ಕೊಡುತ್ತಾರೆ? ನಮಗೆ ಯಾರು ಕೂಲಿ ಕೊಡುತ್ತಾರೆ? ಬೇಡಿ ಮಕ್ಕಳನ್ನು ಸಾಕುತ್ತಿದ್ದೆವು, ಅದೂ ದೇವರಿಗೆ ಬೇಡವಾಯ್ತು, ನನ್ನ ಮಗುವನ್ನೂ ಕೊಂಡು ಹೋದ. ದೇವರಿಗೂ ಬತವರು ಬೇಡ" ಎಂದು ಕಣ್ಣೀರಿಳಿಸುತ್ತಿದ್ದಳು.

ಇದು ನಡೆದು ವರ್ಷ ಹಲವಾರು ಸಂದಿತು. ಹರಿ ಜನರಿಗೆ ಸರಕಾರದಿಂದ ಈಗ ಅನೇಕ ಸಹಾಯ ಸವಲತ್ತುಗಳು ಸಿಗುತ್ತವೆ. ಎಷ್ಟೋ ಮಂದಿ ಹರಿಜನರು ವಿದ್ಯೆಯಲ್ಲೂ ಹುದ್ದೆಗಳಲ್ಲಿ ಮೂಪ್ಪವಲ್ಲ ಮಂತ್ರಿ ಮಹಾಶಯರು ಸ್ಥಾನಗಳಲ್ಲಿ ವಿರಾಜಿಸುತ್ತಿದ್ದಾರೆ. ಹೋಟೆಲುಗಳಲ್ಲಿ, ಬಸ್ಸಿನಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಹರಿಜನರೆಂಬ ಭೇದಾಭೇದ ತೊಲಗಿದೆ ಆದರೂ ಹೆತ್ತ ಜನರು ಊಟೆ ಮಾಡಿದಲ್ಲಿ ಇಂದಿಗೂ ಎಂಜಲೆಗೆ ಮುಸುರುವುದು, ಮೂಪ್ಪ ನಿಲ್ಲಲಿಲ್ಲ. ಆನಂತರವೂ ನಾನು ಎಷ್ಟೋ ಹರಿಜನರೊಡನೆ ಇಂಥ ಕೃತ್ಯ ಬಿಡಿರಿ. ನೋಮೂರಿಸಿನ ಜೊರೆಯಿರಿ. ಎಲ್ಲರಂತೆ ಬದುಕಿರೆಂದು ಬೋಧಿಸಿಯೂ ನೋಡಿದೆ. ನನ್ನ ಶಕ್ತ್ಯಾನುಸಾರ ಸ್ವಲ್ಪ ಹಣವನ್ನೂ ವ್ಯಯಿಸಿದೆ. ಆದರೂ ಆ ದರ್ಬುದ್ಧಿಯನ್ನು ಕೆಲವರು ಬಿಡಲಿಲ್ಲ. ತಾವಾಗಿ ಕೆಟ್ಟ ಉದ್ಯೋಗ ಬಯಸದವರಿಗೆ ಇತರರು ಏನು ಮಾಡಿದರೂ ಅವರನ್ನು ಸುಧಾರಿಸಲು ಕಷ್ಟವೆಂಬುದು ಇದನ್ನು ನೋಡಿದರೆ ತಿಳಿಯುತ್ತದೆ.

ದೇಶಾಭಿವೃದ್ಧಿಯನ್ನೇ ಕರ್ತವ್ಯವೆಂದು ಭಾವಿಸಿರುವ ಮೂಲ

o o o

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು ಉಡುಪಿ — ಅಧೀನ ಆಫೀಸು ಮಂಗಳೂರು

'ಜನತಾ ಡಿಪಾಸಿಟ್' ಯೋಜನೆ

ಸಣ್ಣ ಉಳಿತಾಯದಿಂದಲೇ ವೈಯಕ್ತಿಕ ಜೀವನದಲ್ಲಿ ಸುಖ ಸಾಧನೆಗಳು ಸಾಧ್ಯ!

ಸಾಧ್ಯವಿರುವಾಗ ಉಳಿಸಿದ್ದಾದರೇ ಚಿಲ್ಲರೇ ನಾಣ್ಯಗಳೇ ನಿಮಗಿಂದು ಅವಶ್ಯವಾಗುತ್ತಿತ್ತು.

ಕಂದಲೇ ಒಂದು 'ಜನತಾ ಡಿಪಾಸಿಟ್' (ದೈನಂದಿನ ಉಳಿತಾಯ ಯೋಜನೆ) ಎಕೌಂಟನ್ನು ತೆರೆಯಿರಿ. ಪ್ರತಿ 25 ನೈಪೈ ಯೂ ಹೆಚ್ಚಿಗೆ ಹೊಬಲಗನ್ನು ಕೊಡಬಹುದು.

ಹೆಚ್ಚಿನ ಮಾಹಿತಿಯನ್ನು ಬ್ಯಾಂಕಿನ 70 ಶಾಖೆಗಳ ವ್ಯವಸಿಮಗೆ ಸನಿಹವಿರುವ ಶಾಖೆಯಿಂದ ಪಡೆಯಬಹುದು.

ಕೆ. ರಾಮಭಾಸ್ ನಾಯಕ್
ಜನರಲ್ ಮ್ಯಾನೇಜರ್

With best compliments from

MODERN TIFFIN ROOMS

High class Vegetarian Restaurant

4-4-220, Sultan Bazar,

HYDERABAD. A. P.

Phone 52094

ಆ ಪುರುಷನೆಲ್ಲಿಹನು? ಪೇಳವ ನಿರವ ನೀನು--*

ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ

ಕದನಂತರಂ ಭರದ್ವಾಜ ಪುತ್ರ ಸುಕೇಶ
ಕೇಳ್ದನೈಪಿಪ್ಪಲಾದನ ಕೂಡೆ:
ಭಗವಂತ,
ದೇಶಕೋಸಲದ ರಾಜಕುಮಾರನಾಗಿಹ
ಹಿರಣ್ಯನಾಭಂ ಕೇಳ್ದನೀ ಪ್ರಶ್ನೆಯನ್ನು
ಎನ್ನ ಬಳಿ ಸಾರಿ
'ಹೇ ಭರದ್ವಾಜ, ಹದಿನಾರು
ಕಲೆ ಕೂಡಿರ್ಪ ಪುರುಷನಂ ನೋಡಿಹೆಯ
ನೀನೆಂದು.'
ಆ ಕಮಾರಂಗೆ ನಾಂ ಪೇಳಿದೆಂ:
'ನಾನವನ ನಂತಿಲ್ಲ—ತಿಳಿದಿರ್ದರವ ನಿರವ
ನಾನೆಂತು ತಿಳಿಸದಿರ್ದವೆ ನಿನಗೆ?
ಪೇಳುತಿಹೆನಾಂ'
ಅನೃತವನ್ನವಂ ಬೀರು ಸಹ ಮುರುಟಿ
ಹೋಗುವನಲ್ತೆ! ಆದರಿಂದಲಿ
ಅನೃತವಂ ಉಸುರಲೊಲ್ಲೆ' ನೆನಲ್ಕೆ—
ಮೌನದಿಂ ಪೊರಮಟ್ಟು ಪೋದ ನೈ
ರಥವೇನಿ.
ಅವನ ಸಲುವಾಗಿ ಕೇಳುವೆನ್'
ಇಂದು ನಾಂ ನಿನ್ನ.
"ಆ ಪುರುಷನೆಲ್ಲಿಹನು?
ಪೇಳವಧಿರವ ನೀನು"

೦೦ ೦೦ ೦೦

ಪಿಪ್ಪಲಾದನು ಸುದರ್ಶನಂತಾ ಭರದ್ವಾಜ
ಪುತ್ರಗೆ ಸುಕೇಶಂಗೆ; ಹೇ ನಾಮ್ಯ ಕೇಳು:
ಅವನೊಳಗುತ್ಪನ್ನವಪ್ಪವೀ ಹದಿನಾರು
ಕಲೆಗಳವ ನೆಲಸಿರ್ಪ ನೀ ಶರೀರದೊಳು.

೦೦ ೦೦ ೦೦

ಪೋಡಶ ಕಲಾ ಪೂರ್ಣನಾ ಪುರುಷ ನಿಂತೆಂದು
ಆಲೋಚನೆಯ ಗೈದನಾತನೊಂದು;
'ಆರು ಪೊರಮಟ್ಟರಲು ನಾಂ ಪೊರಟು ಪೋಗುವೆಂ
ಆರು ನಿಂತಿರಲು ನೆಲೆ ನಿಲ್ವೆ'ನೆಂದು

೦೦ ೦೦ ೦೦

ಪ್ರಾಣವಂ ಸೃಜಿಸೆ ಪ್ರಾಣದಿ ಶ್ರದ್ಧೆ ಖಾನ್‌ಗಾಳಿ
ಬೆಂಕಿ ನೀರ್ ನೆಲವಿಂದ್ರಿಯಂ ಮನಸ್ಸನ್ನಂ;
ಅನ್ನದಿಂ ವೀರ್ಯ ತಪ ಮಂತ್ರಗಳು ಕರ್ಮ.—
ಲೋಕಗಳು ಲೋಕಂಗಳಿಂದೀ ನಾಮಕರಣಂ.

೦೦ ೦೦ ೦೦

ಅದು ಎಂತೆನಲ್ತೆ
ಕಡಲಿನ ಕಡೆಗೆ ಹರಿಯುತಿಪ್ಪ
ತೊರೆತೊರೆಗಳೆಲ್ಲ ಕಡಲೊಳಡಗುತ
ಪವ್ಪ ನಾಮರೂಪಂಗಳಂ ಕಳೆದುಕೊಳ್ಳುವಂತು,
ಮಣಿವುಗಳೆಲ್ಲ ಕಡಲೆಂಬ ವಿಶಾಲ
ಪಡೆವವೆಂತಂತೆ;
ಪುರುಷನನೆ ಸೇರಬೇಕಾಗಿರ್ಪ
ಹದಿನಾಲ್ಕು ಕಲೆಗಳವು ಈ ಸರ್ವ ಸಾಕ್ಷಿಯವು
ಪುರುಷನಂ ಸೇರಿ ಮರೆಯೊಗುವುವು.
ಆ-ಇವನು ರಹಿತ ನೈ ಕಲೆಗಳಂ

ಸಹಿತನೈ

ಅನೃತದಿಂ.
ಮಂತ್ರನಿಹುದೀ ವಿಷಯಕಿಂತೆಂದ;

೦೦ ೦೦ ೦೦

ರಥನಾಭಮುಲ್ಲರೆಗಳಿರ್ಪಂತೆ ಯೂವನೊಳು
ಕಲೆಗಳಿವು ಕೂಡಿಕೊಂಡಿಹವು;
ವೇದ್ಯನಾದಾ ಪುರುಷನಂ ತಿಳಿಯೆ ನಿನ್ನನ್ನು
ವ್ಯಥೆಗೊಳಿಸದೈ ಕೊನೆಗೆ ಸಾವು

೦೦ ೦೦ ೦೦

ಪಿಪ್ಪಲಾದಂ ಪೇಳ್ದ ನಿಂತ.—
ಪ್ರಶ್ನಿಸಿದವರ್ಗೆ.
ನುಡಿದ ನೀನೆಲೆಯನವ ಕೊನೆಗೆ;
'ಈ ಪರ ಬ್ರಹ್ಮನನ್ನು ಪೈ ನಾನಂತಿರ್ಪೆ
ಇದಕ್ಕಿಂತ ಶ್ರೇಷ್ಠ ಮೇಣಿಲ್ಲ ನಿಜಕೆ

೦೦ ೦೦ ೦೦

ಶಿಷ್ಯರವನಂ ಪೂಜಿಸುತ ಪೇಳ್ದರಿಂತೆಂದು:
'ನೀನ ವಿದ್ಯೆಯ ಪಡವನೆನ್ನ ದಾಂಟಿಸುವೆ;
ತಂದೆ ನೀನೆಮಗೆ—
ವೆ ಡಿವೆವು ಪರಮ ಋಷಿಗಳಿಗೆ,
ನಮಸ್ಕಾರವಿದು ನಿಮಗೆ—
ಪರಮ ಋ ಷಿಗಳಿಗೆ

*ಪ್ರಶ್ನೋಪ ನಿಷತ್—ಅರನೆಯ ಪ್ರಶ್ನೆ.

ಜಲಾಭಿಮಾನಿ ದೇವತೆಯೂದ ವರುಣ, ಸೂರ್ಯ ಈ ಇಬ್ಬರೂ ನೀರಿನಲ್ಲಿ (ಒಳ್ಳೆಯ ಸ್ಥಾನದಲ್ಲಿ)ರುವ ವರೆಗೂ ತಾವರೆಗೆ ಗೆಳೆಯರೇ ಆಗಿರುತ್ತಾರೆ. ಆದೇ ತಾವರೆ ನೀರನ್ನು ಬಿಟ್ಟು ನೆಲದಲ್ಲಿರುವಾಗ ಆದೇ ವರುಣ ಮಳೆ ಸುರಿಸಿಯೂ, ಆದೇ ಸೂರ್ಯ ಬಿಸಿಲು ಕಾದೂ, ಅದನ್ನು ಕೊಳೆಯಿಸಿ ಒಣಗಿಸಿ ಅದರ ಶತ್ರುಗಳಾಗುತ್ತಾರೆ.

ಮಾನವನು ಒಳ್ಳೆಯು ಪದವಿಯಲ್ಲಿದ್ದಾಗ ಸ್ನೇಹಾದ ಮಟ್ಟಿಗೂ ಪರೋಪಕಾರ ಮಾಡಬೇಕು; ಪದಚ್ಯುತಿಯೂದ ಮೇಲೆ ಅವನಿಂದ ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ.

MALAYALA MAUNTHREEKA VAIDYASALA
Main Road, QUILON

ನವಮೂಲ ನಾಶಿನಿ ನಮ್ಮ ನವಮೂಲ ನಾಶಿನಿ ಎಂಬ ಲೇಹ್ಯವು ಸಕಲ ವಿಧದ ಅರ್ಶಸುಗಳಿಗೂ ಫಲ ಕೊಡುವ ಹಾಗೆ ತಯಾರು ಮಾಡಿರುತ್ತೇವೆ. ಒಳಗಿನ ಅರ್ಶಸು, ಹೊರಗಡೆ ತಳ್ಳಿಬರುವುದು ಮುಂತಾದ ಮೂಲ ವ್ಯಾಧಿಗಳಿಗೂ, ಅಗ್ನಿಮಾಂದ್ಯ, ಅಡಿಹೊಟ್ಟೆ ನೋವು ಇವುಗಳನ್ನು ಹೋಗಲಾಡಿಸಿ ಹೊಟ್ಟೆಯನ್ನು ಶುದ್ಧಿ ಮಾಡುವುದು.
ಡಬ್ಬ 1ಕ್ಕೆ ರೂ. 3-50

ಸಾಲಾಮಿಶ್ರಿ ಲೇಹ್ಯಂ. ಉತ್ತರೇಂದ್ರಿಯಲ್ಲಿ ಮಾತ್ರ ಸಿಕ್ಕುವ ನಲ್ಲತ್ತು ವಿಧ ಧಾತುವೃದ್ಧಿ ಔಷಧವನ್ನು ಸೇರಿಸಿ ತಯಾರು ಮಾಡಿರುವ ಈ ಲೇಹ್ಯವನ್ನು ಸೇವಿಸಿದಲ್ಲಿ ಕ್ಷೀಣ, ಶರೀರ ಮೆಲಿಯುವುದು, ಕೈಕಾಲು ಶಕ್ತಿಯುವುದು, ದೃಷ್ಟಿಮಾಂದ್ಯ ಮುಂತಾದ ಅಪಾಯಕರವಾದ ರೋಗದಿಂದ ರಕ್ಷಿಸಿಕೊಡುವುದು. ಡಬ್ಬ 1ಕ್ಕೆ 6 ರೂ.

ಸೂತಕ ರೋಗ ವಿಧ್ವಂಸಿನಿ ಸ್ತ್ರೀಯರು ತಿಂಗಳುಕಟ್ಟಿ ಮುಟ್ಟಾಗದೆ ಇರುವುದು, ಸೂತಕದಿಂದ ಉತ್ಪಾತ, ಅತಿಸಾರ, ಗುಣ್ಮ, ಹೊಟ್ಟೆನೋವು, ಸಮಯ ವ್ಯತ್ಯಸ್ತವಾಗಿ ಆಗುವ ಮುಟ್ಟು, ಬುದ್ಧಿಭ್ರಮೆ, ದೇಹ ಬಚ್ಚುವುದು ಮುಂತಾದ ಉಪದ್ರವಗಳಿಂದ ರಕ್ಷಿಸಿ ನೀಡುವುದು. ಗರ್ಭಾಶಯ ಶುದ್ಧಿ ಮಾಡಿ ಸತ್‌ಸಂತಾನವನ್ನು ಪಡೆಯುವರಿಗೆ ಅಗ್ರಹವಿರುವ ಸ್ತ್ರೀಯಗಳಿಗೆ ಅತಿ ವಿಶಿಷ್ಟ. ಕುಪ್ಪಿ 1ಕ್ಕೆ ರೂ. 3-50.

ತಂತು ಮೇಹಾರಿ ದ್ರಾವಕ ಅತಿ ಉಷ್ಣ, ಕೆಟ್ಟನಡತೆ ಇವುಗಳಿಂದ ಸ್ರವಿಸುವ ರೋಗಕ್ಕೆ ಕೊಂಡು ಬಿಡದೆ ತಡೆಯುವುದಕ್ಕೂ, ಬಾಯಾರಿಕೆ, ಕೈಕಾಲು ಉರಿ, ಕ್ಷೀಣ, ಗೊಕ್ಕಾಗದೆ ಧಾತು ಹೋಗುವುದು. ಮೂತ್ರದ್ವಾರದಲ್ಲಿ ಆಗುವ ಕಜ್ಜಿ ಇವುಗಳೆನ್ನೆಲ್ಲಾ ಹೋಗಲಾಡಿಸಿ ಜೀವಿತವನ್ನು ಆನಂದಮಯ ಮಾಡುವ ಸಿದ್ಧೌಷಧ.
ಕುಪ್ಪಿ 1ಕ್ಕೆ ರೂ. 4-50

N. B. ಇದೂವಲ್ಲಿದೆ ಅಯುರ್ವೇದ ವಿಧಿ ಪ್ರಕಾರ ತಯಾರು ಮಾಡುವ ಎಲ್ಲಾ ಔಷಧಿಗಳಿಗೂ ನಮ್ಮಲ್ಲಿರುವ ಕ್ಯಾಟಲಾಗ್ ತರಿಸಿ ನೋಡಿರಿ. ಔಷಧಿಗಳಿಗೆ ಮೇಲಿನ ಅಡ್ರೆಸ್ಸಿಗೆ ಬರೆಯಿರಿ.

ಮಲಯಾಳ ಮಾಂತ್ರಿಕ ವೈದ್ಯಶಾಲೆ,
ಮೈಯಿನ್ ರೋಡ್, ಕೊಲ್ಲಂ. ಕೇರಳ ಸ್ಟೇಟ್.

ಪ್ರಕ್ಷುಬ್ಧ ಭಾರತ

(೨ರಡನೇ ಪುಟದಿಂದ)

ಸಹನೀಯ ಸನ್ನಿವೇಶವನ್ನು ಶಾಸಕರು ಸೃಷ್ಟಿಸಿಕೊಳ್ಳದಿದ್ದರೆ ನಿರ್ಜೀವವಾದ ಪ್ರಜಾಪ್ರಭುತ್ವದ ಅಸ್ಥಿಪಂಜರವನ್ನು ಕ್ರುದ್ಧ ಭಾರತೀಯರು ತಗೆದು ಮಣ್ಣಾಗೂಡಿಸಿಯಾರು. ಯಾವುದೋ ಪಕ್ಷದ ಹೆಸರು ಹೇಳಿ ಗೆದ್ದು, ಸ್ವಪ್ರತಿಷ್ಠೆ ಮತ್ತು ಲಾಭಗಳ ಸಲುವಾಗಿ ತನ್ನ ಪಕ್ಷಕ್ಕೆ ದ್ರೋಹ ಬಗೆಯುವ ಮನೆ ಮುರುಕ ಶಾಸಕರ ತೂಕ ಎಷ್ಟೆಂಬುದನ್ನು ಗೌರವಾನ್ವಿತ ಶ್ರೀ ಸಾಮಾನ್ಯನು ಕಂಡು ಕೊಂಡಿದ್ದಾನೆ.

(೨) ರಾಷ್ಟ್ರೀಯ ಪಕ್ಷಗಳು ಕೇವಲ ಜುನಾವಣೆಯಲ್ಲಿ ಗೆಲ್ಲುವುದಕ್ಕೂ ತದನಂತರ ಶಾಸನ ಸಭೆಗಳಲ್ಲೂ ಜಗಳ ಹೂಡುವುದಕ್ಕೂ ಮಾತ್ರವೇ ಇರಕ್ಕುವಲ್ಲ. ಎಲ್ಲ ಭಾರತೀಯ ಪಕ್ಷಗಳೂ ಸಾರ್ವಜನಿಕರ ಬೈನಂದಿನ ಸಮಸ್ಯೆಗಳಿಗೆ ಭಾಗಿಯಾಗಿ, ಅವರಿಗೆ ಉಚಿತ ಮಾರ್ಗದರ್ಶನ ನೀಡಬಲ್ಲ ಸಾಮರ್ಥ್ಯವುಳ್ಳ ಸಂಘಟಕರನ್ನೂ ನೇಮಿಸಿಕೊಂಡು ಜನರ ರಾಜಕೀಯ ಪ್ರಜ್ಞೆಗೆ ದಿಕ್ಕೂ ಜನ ಮೂಡಬೇಕಾಗಿದೆ. ನೆಹರೂ ಯುಗದಲ್ಲಿ ಭಾರತೀಯ ಸ್ವಾತಂತ್ರ್ಯ ಚಳುವಳಿಯು ರಾವು ಇನ್ನೂ ಆರಿರಲಿಲ್ಲವಾಗಿ ಸರ್ಕಾರ ಮೂಡಿದ್ದಲ್ಲವು ದೇಶೋದ್ಧಾರವೆಂಬ ಭಾವನೆ ಜನರಲ್ಲಿತ್ತು. ಈಗ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಹೊಣೆಯನ್ನು ಹೊರಲಿಲ್ಲ. ಸೇವಾ ಮನೋಬುದ್ಧಿಯ ಪ್ರಾಮಾಣಿಕ ಕಾರ್ಯಕರ್ತರು ಶಾಸನ ಸಭಾಗಳ ಹೊರಗೆ ನಿಂತು ಜನರಿಗೆ ದಾರಿ ತೋರಿಸಬೇಕಾಗಿದೆ.

(೩) ಕವಿಗಳು ನಾಡಿನ ರಾಜಕೀಯ ವೇಗಿದ್ದರೂ ಅದರಲ್ಲಿ ದಕ್ಷಿಣದ ಉಳಿದ ಮೂರು ರಾಜ್ಯಗಳು ಸೇರಿಕೊಳ್ಳದೆ, ಹಿಂದಿಯನ್ನೂ ಇಂಗ್ಲಿಷನ್ನೂ ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕು. ಕಾರಣ, ದಕ್ಷಿಣ ಭಾರತದಲ್ಲಿ ಹೇಳಿಕೊಳ್ಳುವಂಥ ಯಾವ ಉದ್ಯಮಗಳೂ ಇಲ್ಲ. ಔದ್ಯಮಿಕ ನೌಕರಿಯನ್ನು ಬಯಸುವ ನಮ್ಮ ಸಾವಿರಾರು ತರುಣರಿಗೆ ಆಯಿಲ ಭಾರತವೇ ಕಾರ್ಯಕ್ಷೇತ್ರವಾಗಿರುವುದರಿಂದ ದೇಶ ಭಾಷೆಗೆ ಮಾತ್ರ ನಾವು ದುಂಬಾಲು ಬಿದ್ದರೆ ಪ್ರಯೋಜನವಿಲ್ಲ ಎಂಬುದರ ವಿಚಾರ ನಮ್ಮವರಿರಬೇಕು.

(೪) ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ – ನಮ್ಮ ದೇಶದ ಉಜ್ವಲ ಸ್ವಾತಂತ್ರ್ಯ ಚಳುವಳಿಯನ್ನು ಇತಿಹಾಸವನ್ನು ಕಲಿಯುವ ಕಡ್ಡಾಯದ ಏರ್ಪಾಟನ್ನು ಮಾಡಬೇಕು. ಈ ಇಪ್ಪತ್ತು ವರ್ಷಗಳಲ್ಲಿ ನಮ್ಮ ಶಿಕ್ಷಣವು ಅನ್ನಕ್ಕಾಗಿ ದುಡಿಯುವ ಕೂಲಿಗಳನ್ನು ಸೃಷ್ಟಿಸಿದೆಯೆ ಹೊರತು, ದೇಶದ ನಾಯಕತ್ವವನ್ನು ಹೊರಬಲ್ಲ ಸಾಹಸಿ, ಸ್ವಾಭಿಮಾನಿ ಪ್ರಜೆಗಳನ್ನು ತಯಾರಿಸಿಲ್ಲವೆಂಬ ಕೊರಗು ಬೇಡನೆ ನಿವಾರಣೆಯಾಗಬೇಕು.

(೫) ಒಂದು ಕನಿಷ್ಠಾವಧಿ ಮಟ್ಟದ ಸಾರ್ವಜನಿಕ ನೀತಿ, ನಡತೆಗಳಿಲ್ಲದೆ ಯಾವ ವೇಶವೂ ಬದುಗಲಾಗದು ಎಂಬುದನ್ನು ಗಮನಿಸಿ, ನಾಯಕರ್ವರ್ಗವು ಸೊತ್ತ ಮೊದಲು ತನ್ನನ್ನೇ ತಾನು ತಿದ್ದಿಕೊಳ್ಳಬೇಕಾಗಿದೆ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S C. 146/1967.

ಸುಬ್ಬಣ್ಣ ಆಚಾರ್ಯ —ವಾದಿ

ಬ್ರಿಟ್ ಅಂಡ್ರಾದೆ ಕೂಡಾ —ಪ್ರತಿವಾದಿರು.

ಸದೇ ಪ್ರತಿವಾದಿ—ಅಂತೋಣಿ ಅಲ್ಬಾಡಿ ಸನ್ ಅಂಡ್ರಾದೆ, S/o D R. ಜೋಸೆಫ್ ಅಂಡ್ರಾದೆ, ಪಡುತೋನ್ಸೆ ಗ್ರಾಮ, ಉಡುಪಿ ತಾಲೂಕು ಇವರಿಗೆ.

ಮಾದಿರು ನಮ್ಮ ಮೇಲೆ ಮೂಡಿದ ಸದ್ರಿ ಗೇಣಿ ಬಾಕಿ ದಾವೆಯನ್ನು ತಾ 31 8_1967 ಕ್ಕೆ ತಪ್ಪಿಗೆ ಇಟ್ಟಿದ್ದಾರೆ ಅದ್ರಿಂದ ಆದಿವಸ ಬೆಳಿಗ್ಗೆ 11 ಗಂಟೆಗೆ ಹಾಜ್ರಾಗತಕ್ಕದ್ದೆಂದೂ ಇದಕ್ಕೆ ತಪ್ಪಿದಲ್ಲಿ ಸದ್ರಿ ವಾದವೆಯು ಏಕ ಪಕ್ಷೀಯವಾಗಿ ತೀರ್ಮಾನಿಸಲ್ಪಡುವುದೆಂದೂ ತಿಳಿಸೋಣಾಗಿದೆ.

ಪಿ. ರಾಮಚಂದ್ರ ರಾವ್
B A B L
ಎಡ್ವಕೇಟ್
ಉಡುಪಿ, 10 _8 _1967.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S No 97/67.

ಪೀಟರ್ ಪೆಡ್ರು ದೀಯ —ವಾದಿ.

ಮತ್ತು

1. ಬ್ರಿಜೆತ್ ಅಂಡ್ರಾದೆ. 3. ಸೆಬಸ್ತಿಯೊಂ ಅಂತೋನಿಕ್ಲಿಫರ್ಡ್ ಅಂಡ್ರಾದೆ 3. ಅಂಕೋನಿ ವಾಲ್ಟರ್ಸನ್ ಅಂಡ್ರಾದೆ. 4. ವಿಲ್ಸನ್ K ಅಂಡ್ರಾದೆ—ವ್ಯಾನರ್ ಗಾರ್ಡಿಯನ್ ತಾಯಿ 1ನೇ ಪ್ರತಿವಾದಿಯ —ಪ್ರತಿವಾದಿರು.

ಪ್ರತಿವಾದಿರು ವಾದಿಯ ತಂದೆ ಪಾವ್ಲೆದೀಯರಿಗೆ ತಾ 27—6—59ರಲ್ಲು ರೂ. 2000/—ಕ್ಕೆ ಬರಕೊಟ್ಟ ಈಡು ಸಸ್ತಾವೇಜು ಪ್ರಕಾರ ಬಡಾ ಅಸಲು ಮತ್ತು 28.6_61 ರಿಂದ ಬಡ್ಡಿ ಕೂಡಾ ರೂಪ್ಯ 2645.25ಕ್ಕೆ ದಾವೆಯು ಮೂಡಿದ ಮೇಲಿನ ವ್ಯಾಜ್ಯವು ಪ್ರತಿವಾದಿರ ನೋಟೀಸಿನ ಬಗ್ಗೆ ತಾ. 28—8—67ಕ್ಕೆ ಇಟ್ಟಿದೆ. ಪ್ರತಿವಾದಿರು ಸದ್ರಿ ತಾ. 28—8—67 ರಲ್ಲು ಪೂರ್ವಾಹ್ನ ಘಂಟೆ 10ಕ್ಕೆ ಸ್ವತಹಾ ವ ವಕೀಲರ ಬ್ಯಾರಾ ಹಾಜರಾಗಲಿಕ್ಕೆ ತಪ್ಪಿದ್ದಲ್ಲಿ ಪ್ರತಿವಾದಿರ ಗೈರು ಹಾಜ್ರಿಯಿಂದ ಮೇಲಿನ ವ್ಯಾಜ್ಯವನ್ನು ತಪ್ಪಿಯಿಂದ ತೀರ್ಮಾನಿಸಲ್ಪಡುವದು.

By order
(Sd·) Gratian C Rego
Vakil for Plaintiff·

ಉಡ್ಪಿ, ತಾರೀಕು 7—8—1967.

While away from home
feel homely at:

NEW VASANT VIHAR

(Boarding and Lodging)

Jawaharlal Nehru Road,

behind G. P. O.

HYDERABAD. A. P.

Gram 'VIHAR' Phone 42829
42373

BRANCH

VASANT VIHAR RESTAURANT

Abid Road, HYDERABAD.

Phone 38320

ಸಿಂಡಿಕೇಟ್ ಬ್ಯಾಂಕ್

—ಮಹಿಳಾ ಶಾಖೆಗಳ ಪ್ರವರ್ತಕರು.



ಮಹಿಳೆಯರಲ್ಲಿ ಬ್ಯಾಂಕಿಂಗ್ ಪರಿಜ್ಞಾನವನ್ನು ಬೆಳೆಸಿ ಉತ್ತೇಜಿಸುವ ಗುರಿಯಿಂದ ಸಿಂಡಿಕೇಟ್ ಬ್ಯಾಂಕು 1960ರಲ್ಲಿ ಬೆಂಗಳೂರಿನಲ್ಲಿ ಪ್ರಥಮ ಮಹಿಳಾ ಶಾಖೆಯನ್ನು ತೊಡಗಿಸಿತು. ಅಂದಿನಿಂದ ಬ್ಯಾಂಕಿನ ಮಹಿಳಾ ಶಾಖೆಗಳು ಹೈದರಾಬಾದ್, ಮದರಾಸು, ದೆಹಲಿ, ಮೈಸೂರು, ತಿರುವನಂತಪುರ ಮೊದಲಾದ ಪ್ರಮುಖ ನಗರಗಳಿಗೆ ಪಸರಿಸಿದುವು ಜತೆಗೆ ದೇಶದ ದೊಡ್ಡ ಪಟ್ಟಣಗಳಲ್ಲಿ ಮಹಿಳೆಯರಿಂದ ನಡೆಸಲ್ಪಡುವ ಉಳಿತಾಯ ವಿಭಾಗಗಳನ್ನೂ ಈ ಬ್ಯಾಂಕು ತೆರೆದಿದೆ.

ಸಿಂಡಿಕೇಟ್ ಬ್ಯಾಂಕು ವ್ಯಾಪಕ ಪ್ರಮಾಣದಲ್ಲಿ ಮಹಿಳೆಯರಿಗೆ ತನ್ನಲ್ಲಿ ಉದ್ಯೋಗ ನೀಡಿದ ದೇಶದ ಸರ್ವ ಪ್ರಥಮ ಬ್ಯಾಂಕಿಂಗ್ ಸಂಸ್ಥೆಯಾಗಿದೆ ಜೊತೆಗೂ ನಾಡಿನಲ್ಲಿ ಮಹಿಳಾ ಶಾಖೆಗಳನ್ನೂ, ಮಹಿಳೆಯರಿಂದ ನಡೆಸಲ್ಪಡುವ ಕಾರ್ಯ ವಿಭಾಗಗಳನ್ನೂ ತೆರೆದ ಪ್ರಪ್ರಥಮ ಸಂಸ್ಥೆಯೆನ್ನಲೂ ಬಹುದು.

ಮೊಸ ಹೊಸ ಸೇವಾಕ್ಷೇತ್ರಗಳನ್ನು ತನ್ನ ಕಾರ್ಯವರ್ಗಲದಲ್ಲಿ ಕಂಡು ನಾಡಿನ ಹೆಚ್ಚು ಹೆಚ್ಚು ಮಂದಿಯನ್ನು ತನ್ನ ಮಡಿಲಲ್ಲಿ ಸೇರಿಸಲು ಸಿಂಡಿಕೇಟ್ ಬ್ಯಾಂಕ್ ಆತುರವಾಗಿದೆ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು, ಮಣಿಪಾಲ, ಮೈಸೂರು ರಾಜ್ಯ.

ನಾವು ಹಿಂದುಳಿದಿಲ್ಲ

(ಒಂದನೇ ಪುಟದಿಂದ)

ಳ ಸಂಖ್ಯೆ ೭೨೦ ಲಕ್ಷವಿದ್ದು ಇದು ಹಿಂದಿಗಿಂತ ಮೂರುಪಟ್ಟಾಗಿದೆ.

● ಎಲ್ಲೆಡೆ ಪ್ರಾಥಮಿಕ, ಕೆಲವೆಡೆ ಮಾಧ್ಯಮಿಕ ಉಚಿತ ಶಿಕ್ಷಣ ದೊರೆಯುತ್ತಿದೆ.

● ಕೃಷಿಕ ರಂಗದ ಉತ್ಪಾದನೆಯು ಸೇ. ೬೧ರಷ್ಟು ಹೆಚ್ಚಿದೆ.

● ೧೪ ಲಕ್ಷ ಟನ್ನುಗಳಷ್ಟಿದ್ದ ಉಕ್ಕಿನ ಉತ್ಪಾದನೆ ೬೬ ಲಕ್ಷ ಟನ್ನಾಗಿದೆ.

● ಔದ್ಯಮಿಕ ಉತ್ಪನ್ನವು ಸೇ. ೧೫೦ರಷ್ಟು ಹೆಚ್ಚಿದೆ.

● ಸೇ. ೮೦ರಷ್ಟು ಹೆಚ್ಚಿನ ಹತ್ತಿ ಬಟ್ಟೆಯನ್ನೂ ಸೇ. ೨೦೦ರಷ್ಟು ಅಧಿಕ ಸಕ್ಕರೆಯನ್ನೂ ನಾವು ಈಗ ಉತ್ಪಾದಿಸುತ್ತೇವೆ.

● ರೇಡಿಯೋ ಗ್ರಾಹಕ, ಸೈಕಲು, ಹೊಲಿಗೆ ಯಂತ್ರಗಳ ಉತ್ಪಾದನೆ ೧೦ ರಿಂದ ೧೫ ಪಟ್ಟು ಹೆಚ್ಚಿದೆ.

● ಹಿಂದೆ ರೂ. ೩೦ ಕೋಟಿ ಮೌಲ್ಯದ ಯಂತ್ರಿಕ ಉಪಕರಣಗಳು ತಯಾರಾಗುತ್ತಿದ್ದರೆ, ಇಂದು ಇವುಗಳ ಮೌಲ್ಯ ರೂ. ೫೦೦ ಕೋಟಿಯನ್ನು ದಾಟಿದೆ.

● ಏನೂ ಇಲ್ಲದ ಪೆಟ್ರೋಲಿಯಂ ಶುದ್ಧೀಕರಣದ ಪ್ರಮಾಣವೀಗ ೧೧೩ ಲಕ್ಷ ಟನ್ನುಗಳಷ್ಟಿದೆ.

● ೩೩ ಲಕ್ಷ ಕಿ. ವಾ. ಇದ್ದ ವಿದ್ಯುತ್ತುತ್ಪಾದನೆ ೧೦೧ ಲಕ್ಷ ಕಿ. ವಾ. ಗಳಿಗೇರಿದೆ. ಅಣು ವಿದ್ಯುತ್ತು ಇದಕ್ಕೆ ದೇರೆ ಸೂರಕವಾಗಿದೆ.

● ದೇಶದಲ್ಲಿ ಒಂದು ಲಕ್ಷದಷ್ಟು ಸಣ್ಣ ಕೈಗಾರಿಕೆಯ ಸಂಸ್ಥೆಗಳು ತಲೆಯೆತ್ತಿ ದೇಶದ ಅಭಿವೃದ್ಧಿ ಕಾರ್ಯದಲ್ಲಿ ದುಡಿಯುತ್ತಿವೆ.

ಇನ್ನು ನಾರಿಗೆ--ಸಂಪರ್ಕ, ಆರೋಗ್ಯ ವಿದೇಶಿ ವ್ಯಾಪಾರ, ಪತ್ರಿಕೆಗಳ ಪ್ರಗತಿ ಅಪಾರ. ಇದರ ಲಾಭವನ್ನು ಪ್ರತ್ಯಕ್ಷವಾಗಿಯೇ ನಾಗರಿಕರು ಅನುಭವಿಸುತ್ತಾರೆ—ಹೀಗೆ ನಾವು ಎಲ್ಲ ರಂಗದಲ್ಲೂ ಮುಂದುವರಿದಿದ್ದೇವೆ—ಜೀವನ ಮಟ್ಟ ನಮ್ಮದು ಏರಿದೆ.

ನಮ್ಮ ಸಾಧನೆಯ ಫಲವನ್ನು ನಾವು ಅತೃಪ್ತಿಯಿಂದಲೇ ನೋಡುತ್ತಿರುವುದಕ್ಕೆ ಮುಖ್ಯ ಕಾರಣಗಳನ್ನು ಕೊಡಬಹುದು. ಮೊದಲನೆಯದಾಗಿ, ನಾವು ಸ್ವಾತಂತ್ರ್ಯ ಪಡೆದ ವೇಳೆ ಗೊಬ್ಬರದ ಗುಂಡಿಯಲ್ಲೇ ಮುಳುಗಿದ್ದವರು, ಮಿತಿ ಮೀರಿದ ಆಶೆ-ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದೆವು. ಎರಡನೆಯದಾಗಿ, ಏರುತ್ತಿರುವ ಜನನ ಪ್ರಮಾಣ ಮತ್ತು ಇಳಿಯುತ್ತಿರುವ ಮರಣ ಪ್ರಮಾಣ ಜನಸಂಖ್ಯಾ ಹೆಚ್ಚಳಕ್ಕೆ ಕಾರಣವಾಗಿದೆ. ಮೂರನೆಯದಾಗಿ ರಾಜಕೀಯ ನಾಯಕರ, ಜನತೆಯ ಮನದಲ್ಲಿ ಸ್ವಾರ್ಥ ಭಾವನೆಯು ದೂರವಾಗಿಲ್ಲ.

ಈ ಕಡೆಗೆ ಗಮನ ಹರಿಸಿ ಪ್ರಗತಿ ಪಥ ಗಮನ ಮೂಡುವ ಪಣತೊಡುವ ಸುದಿನವಿದು. ಸ್ವಾತಂತ್ರ್ಯ ದಿನ. ಇಂದು ನಮ್ಮ ನಮ್ಮ ಕರ್ತವ್ಯಗಳನ್ನು ಸಮರ್ಪಕವಾಗಿ ಪೂರೈಸುವ ದೃಢತೆಯನ್ನು ಮನಕ್ಕೊಮ್ಮೆ ಮೈಕ್ಕೆಪಡಿಸೋಣ.

||ಜೈ ಹಿಂದ್||

ನಾವು-ನೀವು

ವಿಶೇಷ ಸಂಚಿಕೆಗಾಗಿ ಬಂದಿರುವ ಕೆಲವಾರು ಲೇಖನಗಳನ್ನು ಉಪಯೋಗಿಸಿಕೊಳ್ಳುವ ಭಾಗ್ಯ ನಮ್ಮದಾಗಲಿಲ್ಲ. ಲೇಖನಗಳು ತಡವಾಗಿ ಕೈಸೇರಿದ್ದು, ಸಂಚಿಕೆಯ ಗಾತ್ರ ಪರಿಮಿತವಿದ್ದು—ಇವುಗಳಲ್ಲಿ ಯಾವುದಾದರೂ ಒಂದು ಇದಕ್ಕೆ ಕಾರಣ ಇದಕ್ಕಾಗಿ ನಾವು ಅಂತಹ ಲೇಖಕ ಬಂಧುಗಳ ಕ್ಷಮೆಯನ್ನು ಯಾಚಿಸುತ್ತೇವೆ.

ವಿಶೇಷ ಸಂಚಿಕೆಗಾಗಿ ಲೇಖನಗಳನ್ನು ಜಾಹಿರಾತುಗಳನ್ನು ಕಳಿಸಿ ಸಹಕರಿಸಿದ ಹಿತೈಷಿಗಳಿಗೂ, ನಿಮಗೆಲ್ಲರಿಗೂ ನಮ್ಮ ಹೃದಯಾಂತರಾಳದ ಕೃತಜ್ಞತೆ ಅರ್ಪಿಸುತ್ತೇವೆ.

ರಾಷ್ಟ್ರೀಯ ದುರ್ಬಲತೆ ಗೊಂದು ರಾಮಬಾಣ

(ಒಂದನೇ ಪುಟದಿಂದ)

ಳ ಗಡಿ ಹೊಂದಾಣಿಕೆ ಮುಂತಾದುವು ಸಣ್ಣ ವಿಷಯಗಳು. ಇದಕ್ಕಿಂತ ಮೂಲ ಸಮಸ್ಯೆಗಳ ಬಗ್ಗೆ ನಮ್ಮ ಗಮನ ಹರಿಯಬೇಕು. ಅಂದರೆ ಮಾತ್ರ ದೇಶ—ನಾವು —ಪ್ರಗತಿ ಹೊಂದುವುದು ಸಾಧ್ಯ. ಇದನ್ನು ಯುವ ಜನಾಂಗವು ಗಮನಿಸಬೇಕು. ನಮ್ಮಲ್ಲಿ ಜಾತಿ, ಮತ, ಭಾಷೆಗಳ ಹೆಸರಿಂದ ದೇಶವನ್ನು ಒಡೆಯುವ ಹವ್ಯಾಸದ ನಾಯಕರೂ ಇದ್ದಾರೆ. ಇಡಿಯ ರಾಷ್ಟ್ರವೊಂದು ಎಂಬುದನ್ನು ಮನನವರಿಕೆ ಮಾಡಿ, ಜನರೊಡನೆ ಬೆರೆತು ಐಕ್ಯ ಭಾರತ ನಿರ್ಮಾಣದ ಹೊಣೆ ಇಂದಿನ ಯುವಕ—ಯುವತಿಯರ ಮೇಲಿದೆ. ಇದನ್ನು ನಾವು ಸಾಧಿಸಿಕೊಂಡರೆ ಮಾತ್ರ ಭಾರತವು ವಿಶ್ವದಲ್ಲೇ ಅಗ್ರಮಾನ್ಯ ರಾಷ್ಟ್ರವೆನಿಸೀತು.

ಪ್ರತಿಯೊಬ್ಬರ ಮನೆ—ಪರಿಸರದಲ್ಲೂ ಯೋಜನಾ ಬದ್ಧತೆಯಿರಬೇಕು. ಮನೆಯ ಆವರಣದಲ್ಲಿ ತರಕಾರಿ ತೋಟ ಬೆಳೆಸಿದರೆ, ಆಹಾರ ಸಮಸ್ಯೆ ಪರಿಹಾರ ಸುಗಮವಾಗುವುದು. ಕುಟುಂಬಕ್ಕೆ ಉಳಿತಾಯವೂ ಆಗುವುದು.

ಯೋಜನೆಗಳಿಂದಲೇ ಸಾಮಾಜಿಕ ಸುಧಾರಣೆಯಾಗದು. ರಾಷ್ಟ್ರೀಯ ದೌರ್ಬಲ್ಯಗಳನ್ನು ಕಿತ್ತೆಗೆಯಲು ಸಾಮಾಜಿಕ ಸುಧಾರಣೆಗಳೂ ಅತ್ಯವಶ್ಯ. ಮಧ್ಯಮ ವರ್ಗದ ಜನತೆ ಮದುವೆ—ಮುಂಜಿಗಳಿಗಾಗಿ ಮಿತಿಮೀರಿ ವೆಚ್ಚಮಾಡಿ ಆರ್ಥಿಕವಾಗಿ ಕೈ ಸುಟ್ಟುಕೊಳ್ಳುತ್ತಿವೆ. ಇದರಿಂದ ದೇಶಕ್ಕೂ ಲಾಭವಿಲ್ಲ. ನಮ್ಮ ಯುವಕ-ಯುವತಿಯರು ಇದನ್ನು ಗಮನಿಸಿ ಸತ್ ಸಂಪ್ರದಾಯ ಹಾಕಿಕೊಡಬೇಕು.

ಭಾರತದಲ್ಲಿ ಬಂಗಾರದ ಮೇಲಣ ಮೋಹವಿದೆ. ಇದರಿಂದ ಯಾರಿಗೂ ಲಾಭವಿಲ್ಲ. ಉದಾಹರಣೆಗಾಗಿ ಐದು ಸಾವಿರ ರೂಪಾಯಿಗಳನ್ನು ಬಂಗಾರದಲ್ಲಿ ತೊಡಗಿಸುವ ಬದಲು ಬ್ಯಾಂಕಿನಲ್ಲಿಟ್ಟರೆ, ವಾರ್ಷಿಕ ರೂ. ೨೫೦ ಬಡ್ಡಿಯ ರೂಪದಲ್ಲಿ ಸಿಗುವುದು. ಇದರಿಂದ ಒಬ್ಬ ಹುಡುಗನನ್ನೋ ಹುಡುಗಿಯನ್ನೋ ಕಾಲೇಜಿನಲ್ಲಿ ಓದಿರಬಹುದು. ಬಂಗಾರವನ್ನು ಅಡವಿಟ್ಟು ಸಾಲ ಪಡೆಯಬಹುದಾದರೂ ಬಡ್ಡಿಯನ್ನು ತೆರಬೇಕಾಗುವುದರಿಂದ ಎರಡು ಬಗೆಯ ನಷ್ಟ. ನಮ್ಮ ಜನರು ತಮ್ಮ ದೃಷ್ಟಿಕೋಣವನ್ನು ಬದಲಾಯಿಸಬೇಕು.

ಮಿಲಿಯೂಂತರ ಜನರು ಹಸಿವೆಯಿಂದ ಕಂಗೆಟ್ಟಿರುವಾಗ ಆಹಾರ ಪೋಲು ಮಾಡುವ ಅಧಿಕಾರ ನಮಗಿಲ್ಲ. ಗೃಹಿಣಿಯರು ಆಹಾರ ಪದಾರ್ಥಗಳು ಹಾಳಾಗದಂತೆ ನೋಡಿಕೊಳ್ಳಬೇಕು. ಆಹಾರ—ಹಣಗಳ ಉಳಿತಾಯದಲ್ಲಿ ಮುಂದಾಗಬೇಕು.

ದೇಶದ ಪ್ರತಿಯೊಬ್ಬನೂ, ಪ್ರತಿಯೊಬ್ಬಳೂ ದೃಢ ಉದ್ದೇಶ—ನಿಷ್ಠೆಗಳಿಂದ ದುಡಿದರೆ ಮಾತ್ರ ದೇಶ ಉಳಿದೀತು, ಬೆಳೆದೀತು.

(ಸೈಂಟ್ ಎಗ್ನೆಸ್ ಕಾಲೇಜಿನ ಪ್ರಾ ಏಂಗ್ ಫೊರಂನ ಉದ್ಘಾಟನಾ ಭಾಷಣದ ಆಧಾರದಿಂದ).



ಸ್ವಾತಂತ್ರ್ಯ ದಿನದ ಶುಭಾಶಯಗಳು!

ಕೆ. ಸಂಜೀವ ರಾವ್,

ಪ್ರೊಪ್ರೈಟರ್,

ಉಡುಪಿ ಶ್ರೀ ಕೃಷ್ಣ ವಿಲಾಸ

ಕಾರವಾರ

(ಉತ್ತರ ಕನ್ನಡ)

ಮೂಲಾಂಟ ನೋಟೀಸು

ಮಹಾಜನತ ಅವಗಾಹನೆ ಬಗ್ಯೆ ಈ ಮೂಲಕ ತಿಳಿಸುವುದೇನೆಂದ್ರೆ,

ಕುಂದಾಪುರ ಮುನ್ಸಿಫ್ ಕೋರ್ಟು O. S. 192/1967ನೇ ದಾವೆಯಲ್ಲಿ ನೇಮಕಗೊಂಡ ಕೆಳಗೆ ಕಾಣಿಸಿದ ಕಮಿಶನರು, ಸದ್ರಿ ದಾವೆಗೆ ಕಾರಣವಾದ ಕುಂದಾಪುರ ತಾಲ್ಲೂ ಕಮಲಶಿಲೆ ಗ್ರಾಮದ ಸ. ನಂ. 61—1 ನೇ ಸ್ಥಳದಲ್ಲಿ ಹಾಲಿ ಕಡಿದು ಹಾಕಿರುವ ಟೀಕ್, ಜಂಬೆ, ಮುಂಗಲು, ಮಟ್ಟಿ, ಹೆಳಸಂದಿ ಪಸ್ಯೆರೆ ನಾನಾ ಜಾತಿಯ ಸುಮಾರು 1650 ಕ್ಯೂಬಿಕ್ ಮೀಟರ್ ಮೋಟು ಸಣ್ಣ (Round hogs) ಸುಮಾರು 75 ಬೌಂಡ್ ನಾನಾ ಜಾತಿಯ ಕಟ್ಟಿಗೆಯನ್ನು ಕುಂದಾಪುರದಲ್ಲಿ ಕಮಿಶನರ ಆಫೀಸಿನಲ್ಲಿ ತಾರೀಕು 20—8—67 ನೇ ಆದಿತ್ಯವಾರ ಬೆಳಗ್ಗೆ 11ಗಂಟೆಗೆ ಸರಿಯಾಗಿ ಬಹಿರಂಗವಾಗಿ ಸಲಿಂ ಮಾಡುವರು. ಸದರಿ ಶರ್ತುಗಳು ಮತ್ತಿತರ ವಿಷಯಗಳನ್ನು ಕಮಿಶನರನ್ನು ಸ್ವತಃ ಭೇಟಿಯಾಗಿ ತಿಳಿದು ಕೊಳ್ಳಬಹುದು. ಕಾರ್ಯಸು ಇದ್ದವರು ಸದ್ರಿ ದಿನ ಸಮಯಕ್ಕೆ ಸರಿಯಾಗಿ ಹಾಜರಾಗಿ ಕಮಿಶನರ ಆಫೀಸಿಗೆ ಬರಬೇಕಾಗಿ ಆಸೆಪ್ಪಿ. ಮೊಳ ಕಟ್ಟಿಗೆ ವಗೈರೆ ನೋಡಬೇಕಾಂತಿದ್ದರೆ ಮೊದಲಾಗಿ ಸ್ಥಳಕ್ಕೆ ಹೋಗಿ ಸೂಚಿತ ಮಾಡಿಕೊಳ್ಳಬಹುದು.

G. Kushala Hegde
ಕಮಿಶನರ್,
ಕುಂದಾಪುರ, 10.8.1967.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. 580/1967.

ಅನಂತರಾಮ ಆಚಾರ್ಯ —ವಾದಿ.

ಮತ್ತು

ಸೂರು ಮಡಿವಾಳ್ತಿ ಕೂಡ್ಲು—ಪ್ರತಿವಾದಿರು

ಇವರೊಳಗೆ.

ಉಡುಪಿ ತಾಲೂಕು ಇನ್ನಂಜೆ ಗ್ರಾಮದ, ಮಡಂಬು ಎಂಬಲ್ಲಿರುವ ಸಿದ್ದು ಮಡಿವಾಳರ ಹೆಂಡತಿ ಸೂರು ಮಡಿವಾಳ್ತಿ 1 ಮತ್ತು ಸದ್ಯೆಯ ವಳ ಮಗ ಸೀನ ಮಡಿವಾಳ 1 ಕೊಡಾ ನಿಮಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ:—

ಮೇಲಿನ ದಾವೆಯಲ್ಲಿ ನಿಮ್ಮಿಂದ ಬರತಕ್ಕ ಜಾಲಗೇಣಿ ಬಾಕಿ ಕೇಳಿ ಮೂಡಿದ ಸದ್ರಿ ದಾವೆಯು ತಾ. 1—9—67ಕ್ಕೆ ನಿಮಗೆ ಅಳ್ಕೆರೆ ನೋಟೀಸಿಗೆ ಇಟ್ಟಿದೆ. ಆ ದಿನ ನೀವು ಬೆಳಿಗ್ಗೆ 11ಗಂಟೆಗೆ ಸ್ವತಹಾ ಯಾ ವಕೀಲರ ಮುಖಾಂತರ ಕೋರ್ಟು ಮುಂದೆ ಹಾಜರಾಗತಕ್ಕದ್ದು. ಕಸ್ಬಿದ್ದಲ್ಲಿ ನಮ್ಮನ್ನು ತಿರ್ವಾವಡಿ ದಾವೆಯನ್ನು ಮುಂದುವರಿಸಲಾದೀತು. ತಿಳಿದಿರಲಿ.

Vittala Shetty, Perody
Advocate for the Plaintiff.
ಉಡುಪಿ, ತಾ. 10—8—67.

With best compliments from:

SREE KRISHNA MOTOR SERVICE,

HASSAN (MYSORE STATE)

BRANCHES: **KADUR AND BIRUR**

After arrival of all important Trains, we run the following routes with LUXURIOUS type buses for the convenience of Travelling Public, without EXCHANGE AT CHARMADY-GADY.

I. Birur to Mangalore & back

L. BIRUR	12.00 NOON	R. MANGALORE	8.05 P.M.
L. MANGALORE	05.45 A.M.	R. BIRUR	1.30 P.M.

II. Birur to Mangalore & back
(Express)

L. BIRUR	4.10 A.M.	R. MANGALORE	11.15 A.M.
L. MANGALORE	4.00 P.M.	R. BIRUR	10.55 P.M.

III. Birur to Udipi via Dharmastala & back

L. BIRUR	5.20 A.M.	R. UDIPI	05.55 P.M.
L. UDIPI	9.00 A.M.	R BIRUR	08.50 P.M.

and gives Connection to all important Trains.

PHONE 247

M. Krishna,
Proprietor,
SREE KRISHNA MOTOR SERVICE,
HASSAN.

NAVAYUGA
17-8-1967

REGD No B G 176
LICENCE No 31
Licensed to Post
without Prepayment



ನವಯುಗ ಗೋಪುರದ ಮೇಲೆ

ಉಚ್ಚ ಸಂಸ್ಕೃತಿಯು, ಸನಾತನ ಧರ್ಮದ ತವರು ಭಾರತ.

ಅನೇಕ ಹಿಮಾಚಲ ಪರ್ಯಂತ ಶತಮಾನಗಳಿಂದ ತಲೆಯೆತ್ತಿರುವ ಗುಡಿಗೋಪುರಗಳು, ಧರ್ಮಾಗರಗಳು, ಆಶ್ರಮ ಪರ್ಣಶಾಲೆಗಳು, ವೈದಿಕ ವಿದ್ಯಾಪೀಠಗಳು, ತುಂಗಾ—ಗಂಗಾ ವಾಹಿನಿಗಳು, ಅಶ್ವತ್ಥ—ಮಂದಾರ ವೃಕ್ಷಗಳು, ಗಯಾ—ಪ್ರಯಾಗ—ವಾರಣಾಸಿಗಳು, ಬೇಲೂರು—ಭುವನೇಶ್ವರ ಶಿಲ್ಪಧಾಮಗಳು ಎಲ್ಲವೂ ಈ ಪುಣ್ಯ ಭೂಮಿಯ ಉನ್ನತ ಸಂಸ್ಕೃತಿಯ ಪವಿತ್ರ ಸಂಕೇತಗಳು.

ದೈವಶ್ರದ್ಧೆ, ವರಂಪರಾಗತ ನಡವಳಿಕೆ, ಆಚಾರ ಸಂಪನ್ನತೆ, ಆತ್ಮವಿಶ್ವಾಸ, ಸಾಹಸಶೀಲತೆ
ಇವು ಪ್ರತಿ ಭಾರತೀಯನ ಒಡಲ ರಕ್ತದಲ್ಲಿ ಚೇತೋವಹಿಯಾಗಿ ಪ್ರವಹಿಸುವ ಧಾತುಗಳು

ಕುರುಕ್ಷೇತ್ರದ ನೆಲದಲ್ಲಿ ಧನಂಜಯ ಕಂಡ ಗೀತಾಚಾರ್ಯನ ವಿಶ್ವರೂಪವೇ
ಭಾರತದ ಅನಾದಿ ಸಂಸ್ಕೃತಿಯ ಅನಂತ ಸಹಸ್ರಮುಖ

ವಿಶ್ವ ವಿಶಾಲ ಭಾವವೇ ಭಾರತೀಯನ ಉಸಿರಿನ ಆಳ.

ಯೋಕಾ ಸಮುಸ್ತಾ . ಸುಖಿನೋ ಭವಂತು—
ಈ ಋಷಿವಾಣಿಯೇ ತಾಯಿ ಭಾರತಿಯ ಒಡಲಿಂದಲಿ

ಇದು ಭಾರತೀಯನು ಪರಂಪರಾಗತವಾಗಿ ನಂಬಿ ಬಂದ, ಅವರಂತೆ ನಡೆದು ಬಂದ
ವಿಶ್ವ ಬಂಧುತ್ವದ ವಿಶಾಲ ಮಾರ್ಗ.

ಅಧರ್ಮವನ್ನು ಪರಾಜಯಗೊಳಿಸಿ ಧರ್ಮದ ವಿಜಯ ದೀವಟಿಗೆಯನ್ನು ಕುರುಕ್ಷೇತ್ರದ ಭೂಮಿಯಲ್ಲಿ ಎರಿಸಿದ ಭಾರತದ ಧೀರೋದ್ಧತ್ತತೆಯೇ ತನ್ನ ಪ್ರಚಲಿತ ಆಂತರಿಕ ಮತ್ತು ಬಾಹ್ಯ ಸಮಸ್ಯೆಗಳನ್ನು ಪರಿಸಿ ರಾಷ್ಟ್ರ ಪುನರ್ನಿರ್ಮಾಣದ ಮೂಲಕ ಸ್ವಾತಂತ್ರ್ಯ ದೀವಿಗೆಯನ್ನು ಪ್ರಾಚೀನ ಸಂಸ್ಕೃತಿಯ ಭವ್ಯ ಗೋಪುರದ ಮೇಲೆ ಚಿರಕಾಲ ಬೆಳಗಿಸಲಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು : ಮಣಿಪಾಲ, ಮೈಸೂರು ರಾಜ್ಯ

Edited, Printed & Published by K. H. Shetty at the Navayuga Press, Udupi, S. India.

నవయుగ

24--8--1967

౧౦
పైసలు

ಹನುಮಂತಪ್ಪ ಹೇಳಿದನು: "ಭರತನೇ! ನೀನು ಶ್ರೀರಾಮನಿಗೆ ಮಹತ್ತರವಾದ ತೊಂದರೆಯನ್ನು ಮಾಡಿದಿ. ಲಕ್ಷ್ಮಣನು ಮೃತ್ಯು ಮುಖದಲ್ಲಿದ್ದಾನೆ. ನಿನ್ನ ದೆಸೆಯಿಂದ ಇಲ್ಲಿ ನಾನು ವಿಲಂಬಿಸಿದ್ದೇನೆ. ಲಕ್ಷ್ಮಣನು ಒಂದು ತಾಸಿನೊಳಗೆ ಇಹಲೋಕವನ್ನು ಬಿಟ್ಟು ಹೋಗುವುದು ನಿಶ್ಚಯ."

ಭರತನು ಕಣ್ಣೀರು ಸುರಿಸುತ್ತಾ ಹನುಮಂತನನ್ನು ಅಪ್ಪಿಕೊಂಡು ಹೇಳಿದನು 'ಅಣ್ಣಾ! ಕ್ಷಮಿಸು. ನನ್ನ ಸೋದರರನ್ನೂ ಸೀತಾಮಾತೆಯನ್ನೂ ಕೊಲ್ಲಲಿಕ್ಕೆ ಯಾರೋ ಒಬ್ಬ ರಾಕ್ಷಸನು ಒಂದು ಪರ್ವತವನ್ನು ಎತ್ತಿಕೊಂಡು ಆಕಾಶದಲ್ಲಿ ಹಾರುತ್ತಿದ್ದಾನೆಂದು ನಾನು ಭ್ರಮಿಸಿದೆನು. ಭಯ ಪಡಬೇಡ. ಕ್ಷಣ ಮಾತ್ರದಲ್ಲಿ ನಾನು ನಿನ್ನನ್ನು ಲಂಕೆಗೆ ಕಳುಹಿಸುವೆನು.'

ಹೀಗೆ ಹೇಳುತ್ತಾ ಭರತನು ಒಂದು ಮಂತ್ರವನ್ನು ಪಠಿಸಿ ಬಾಣ ಪ್ರಯೋಗ ಮಾಡಿದನು. ಆ ಬಾಣವು ಹನುಮಂತನೊಡನೆ ಆ ಪರ್ವತವನ್ನು ಎತ್ತಿಕೊಂಡು ಕ್ಷಣ ಮಾತ್ರದಲ್ಲಿ ಶ್ರೀ ರಾಮ ನಿದ್ದಲ್ಲಿಗೆ ಕೊಂಡು ಹೋಯಿತು. ಭರತನ ಬುದ್ಧಿ ಕೌಶಲ್ಯಕ್ಕೆ ಹನುಮಂತನು ಆಶ್ಚರ್ಯಪಟ್ಟು ಈ ಸಂಗತಿಯನ್ನು ಶ್ರೀ ರಾಮನಿಗೂ ಇತರರಿಗೂ ವಿವರಿಸಿ ಹೇಳಿದನು.

ಭೌತಿಕ ವಸ್ತು.

ಇದು ಅಸ್ತ್ರದ ಶಕ್ತಿಯೊಗಿದೆ. ಮಂತ್ರವು ಆ ಉಪಕರಣಕ್ಕೆ ಶಕ್ತಿಕೊಡುತ್ತದೆ. ಯಾವುದಾದರೊಂದು ಭೌತಿಕ ವಸ್ತುವಿನಲ್ಲಿರುವ ಶಕ್ತಿಯು ಬಹು ದೊಡ್ಡಗಾತ್ರದ ವಸ್ತುವನ್ನೂ ವಿನಾಶಗೊಳಿಸಲು ಸಮರ್ಥವಾಗಬಹುದು. ಈ ಸಂದರ್ಭದಲ್ಲಿ ಅದೊಂದು ಉಪಕಾರವನ್ನು ಮಾಡಿತು.

ಶ್ರೀ ರಾಮ ಮತ್ತು ರಾವಣರಿಗೆ ಯುದ್ಧವಾಯಿತು. ಇದು ಘೋರವಾಗಿತ್ತು ಅಂತಹ ಭಯಾನಕವಾದ ಯುದ್ಧವು ಹಿಂದೆಂದೂ ನಡೆದಿರಲಿಲ್ಲ. ಮುಂದೆಯೂ ನಡೆಯುವ ಸಂಭವವಿರಲಿಲ್ಲ. ಆಕಾಶಕ್ಕೂ ಸಮುದ್ರಕ್ಕೂ ಸಮಾನವಾದ ದು ಬೇರೆ ಯಾವುದೂ ಹೇಗೆ ಇಲ್ಲವೋ ಹಾಗೆಯೇ ರಾಮರಾವಣರ ಘೋರವಾದ ಯುದ್ಧಕ್ಕೆ ತುಲ್ಯವಾದುದು ಯುದ್ಧಗಳ ಇತಿಹಾಸದಲ್ಲಿ ಬೇರೆ ಯಾವುದೂ ಇಲ್ಲ. ಇದು ವಾಲ್ಮೀಕಿ ಹೇಳಿದ ಮಾತು:—

"ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ॥

ರಾಮರಾವಣಯೋರ್ಯುದ್ಧಂ ರಾಮರಾವಣಯೋರಿವ॥

ರಾಮ ರಾವಣರು ಸಾಮಾನ್ಯವಾಗಿ ಬಾಣಗಳನ್ನು ಪ್ರಯೋಗಿಸಿದರು. ಶಸ್ತ್ರಗಳ ಉಪಯೋಗವನ್ನು ಬಿಟ್ಟು ಅವರು ಅಸ್ತ್ರಗಳ ಪ್ರಯೋಗಕ್ಕೆ ಬದಲಾಯಿಸಿದರು ನಾಗಾಸ್ತ್ರವು. ವಿಷಪೂರಿತವಾದ ಸರ್ಪಗಳನ್ನು ಮುಂದೆ ತಂದಿತು. ಸರ್ಪಗಳನ್ನು ಅಣಗಿಸಲು ರಾಮನು ಗರುಡಾಸ್ತ್ರವನ್ನು ಕಳುಹಿಸಿದನು.

ರಾಮನು ಬ್ರಹ್ಮಾಸ್ತ್ರವನ್ನು ಬಿಟ್ಟನು. ಅದು ರಾವಣನ ಎದೆಯನ್ನು ಭೇದಿಸಿ ಹೃದಯವನ್ನು ಪುಡಿ ಪುಡಿ ಮಾಡಿತು.

ವಿದ್ವಾನ್ ಕೆ. ನಾರಾಯಣಾಚಾರ್

ಅಸ್ತ್ರಶಸ್ತ್ರಗಳ ಶಕ್ತಿ

ಭೌತಿಕ ಪದಾರ್ಥವಾದ ಶಸ್ತ್ರಗಳು ಪ್ರವೃತ್ತಿ ಮಾಡಬೇಕಾದರೆ, ಶಕ್ತಿಯು ಬೇಕು. ಪ್ರಾಚೀನ ಶಾಸ್ತ್ರಗಳ ಈ ಉಲ್ಲೇಖವನ್ನು ಅಧುನಿಕ ವಿಜ್ಞಾನವೂ ಸಮರ್ಥಿಸುತ್ತದೆ. ಮಂತ್ರ ಮೂಲಕ ಶಕ್ತಿ ಪೂರೈಸಿದ ಅಸ್ತ್ರಗಳ ಅದ್ಭುತ ಕಾರ್ಯ ಕೇಳಿದ್ದೀರಿ, ನೋಡುತ್ತಲೂ ಇದ್ದೀರಿ.

ಹೀಗೆ ತನ್ನ ಸ್ವೈರವೃತ್ತಿಜನ್ಯವಾದ ಪಾಪ ಸಂಚಯದಿಂದ ಭಸ್ಮೀಭೂತನಾಗಿ ವಿಶ್ರವಸನ ಪುತ್ರನು. ಬದ್ದು ಹೋದನು.

ಅಸ್ತ್ರವಿದ್ಯೆಯು ದಿವ್ಯ ವಿಜ್ಞಾನವಾಗಿದೆ. ಇದು ಧನುರ್ವೇದವು. ಶಿವ, ಕೃಷ್ಣ, ರಾಮ — ಇವರು ಈ ಮಹತ್ತರವಾದ ದಿವ್ಯ ವಿಜ್ಞಾನಕ್ಕೆ ಅಧಿ ದೇವತೆಗಳು. ಪರಶುರಾಮನು ಶಿವನಿಂದ ಇದನ್ನು ಕಲಿತನು. ದ್ರೋಣಾಚಾರ್ಯ, ಕೃಷ್ಣಾಚಾರ್ಯ, ಅರ್ಜುನ, ಭೀಷ್ಮ, ವಿಶ್ವಾಮಿತ್ರ ಇವರು ಈ ವಿಜ್ಞಾನದಲ್ಲಿ ನಿಪುಣರಾಗಿದ್ದರು. ಭೀಷ್ಮನು ಪರಶುರಾಮನಿಂದ ಇದನ್ನು ಕಲಿತನು. ಈ ವಿಜ್ಞಾನದಲ್ಲಿ ಇಂದ್ರನು ಕೂಡ ನಿಪುಣನಾಗಿದ್ದನು.

ಶತ್ರು ಘಾತಕವಾದ ಬಾಣ

ಯಾವ ಭೌತಿಕ ವಸ್ತುವನ್ನೂ ಮಂತ್ರಿಸಬಹುದು. ಎಲ್ಲಾ ಕಾರ್ಯಗಳನ್ನು ಮಾಡುವುದು ಮಂತ್ರವೇ. ಭೌತಿಕ ವಸ್ತುವು ಶಕ್ತಿಸಂಪನ್ನವಾಗಿ, ಪುರಾಣಾಯುಕಾಲದಲ್ಲಿಯೂ ಮಕ್ಕು ಉದ್ದೇಶ ಸಾಧಕವಾಗಿ ಪ್ರವೃತ್ತಿ ಮಾಡುವುದು ಮಂತ್ರದ ಪ್ರಭಾವವನ್ನು ಹೊಂದಿ ಕೊಂಡಿದೆ. ಒಂದು ಬಾಣವು ಮಾಡುವ ಕಾರ್ಯದ ಸ್ವರೂಪವು ಅದನ್ನು ಪ್ರಯೋಗಿಸುವವನ ಸಂಕಲ್ಪವನ್ನು ಹೊಂದಿಕೊಂಡಿದೆ. ಒಬ್ಬನು ಒಬ್ಬ ವಿಶಿಷ್ಟ ಪುರುಷನನ್ನು ಅಥವಾ ಸ್ಥಳವನ್ನು ನಾಶಗೊಳಿಸಲು ಉದ್ದೇಶಪಟ್ಟರಬಹುದು ಅಥವಾ ಅತ್ಮ ರಕ್ಷಣೆ ಮಾಡಿಕೊಳ್ಳಲು ಬಯಸಿರಬಹುದು. ಇದು ಶತ್ರು ಘಾತಕ ವಾದಂತೆಯೇ ಆತ್ಮ ರಕ್ಷಕವೂ ಕೂಡ ಆಗಿರುತ್ತದೆ.

ಈ ಕಾಲದ ಇನ್ ಸೆಂಡಿಯರೀ ಬಾಬುಗಳು, ಫ್ಲೇರ್ ಲೈಟ್ ಬಾಂಬುಗಳು, ಹೈ ಎಕ್ಸ್ ಪ್ಲೋಸಿವ್ ಬಾಂಬುಗಳು ಮತ್ತು ಚೇಸಿಂಗ್ ಬಾಂಬುಗಳು ಇವುಗಳಿಗೆಲ್ಲಾ ಭೌತ ವಿಜ್ಞಾನವು ಮೂಲವಾಗಿದೆ. ಮಹತ್ತರವಾದ ವಿನಾಶ ಕಾರಕವಾದ ಶಕ್ತಿಯನ್ನಾಗಿ ಅವುಗಳನ್ನು ಪರಿವರ್ತಿಸಬಹುದು. ಆದರೆ ಅದು ಪುರಾತನ ಮುನಿಗಳು ಸಿದ್ಧಮಾಡಿಕೊಂಡ— ಶಕ್ತಿಯನ್ನು ಭೌತಿಕ ವಸ್ತುವಾಗಿ ಪರಿವರ್ತಿಸುವ ತಕ್ಕೆ ವಿಪರೀತವಾಗಿದೆ.

ವಿಶಿಷ್ಟವಾದ ಮಂತ್ರಗಳು

ಮೋಹನಾಸ್ತ್ರವು ಒಬ್ಬ ಮನುಷ್ಯನನ್ನು ಪ್ರಜ್ಞಾಹೀನನನ್ನಾಗಿ ಮಾಡಬಲ್ಲುದು. ಗಂಧರ್ವಾಸ್ತ್ರವು ಮೂಯೆಯನ್ನು ಹುಟ್ಟಿಸಬಲ್ಲುದು. ಸಾಶುಪತಾಸ್ತ್ರವು ವಿಶ್ವವನ್ನೇ ನಾಶಪಡಿಸಬಹುದು. ನಾರಾಯಣಾಸ್ತ್ರಕ್ಕೆ ಯಾವುದೂ ತಡೆ ಯೂ ಗಿರುವುದಿಲ್ಲ. ಆ ಪರಿ ಅಂಜಲಿ ಅಥವಾ, ಶರಣಾಗತಿಯಿಂದ ಅದನ್ನು ಫಲಾರಸಬಹುದು.

ಪರ್ವತಾಸ್ತ್ರವು ವಾಯುಅಸ್ತ್ರದಿಂದ ರಕ್ಷಣೆಯನ್ನು ಕೊಡುವುದು. ಅದೊಂದು ಗುರಾಣಿಯಂತೆ ಇರುತ್ತದೆ. ರಾವಣನು ಮೋಹನವನ್ನು ಮೋಹನಾಸ್ತ್ರದಿಂದ ಸಮದ್ರಕ್ಕೆ ಎಸೆದನು.

ಒಂದು ಅಸ್ತ್ರವನ್ನು ಇನ್ನೊಂದು ವಿಶೇಷವಾದ ಮಂತ್ರದಿಂದ ಹಿಂದಕ್ಕೆ ಕರೆಯುಬಹುದು. ಅದು ಉಪ ಸಂಹಾರವೆಂದು ಕರೆಯಲ್ಪಡುತ್ತದೆ. ಅರ್ಜುನನು ಆಶ್ವತ್ಥಾಮನಿಗೆ ಬ್ರಹ್ಮಾಸ್ತ್ರವನ್ನು ಕಳುಹಿಸಿದನು. ಆದನ್ನು ಅಶ್ವತ್ಥಾಮನು ಪ್ರಯೋಗಿಸಿದ ಬ್ರಹ್ಮಾಸ್ತ್ರದೊಡನೆ ಹಿಂದಕ್ಕೆ ಕರೆದುಕೊಂಡನು. ಅಶ್ವತ್ಥಾಮನು ಅದನ್ನು ಹಿಂದಕ್ಕೆ ಕರೆಯಲು ಅಸಮರ್ಥನಾಗಿದ್ದನು.

ಗಾಯತ್ರಿಯನ್ನು ವಿಪರೀತ ಕ್ರಮದಿಂದ ಪಠಿಸಿ ಬ್ರಹ್ಮಾಸ್ತ್ರವು ಮಂತ್ರಿಸಲ್ಪಡುತ್ತದೆ ಪ್ರತಿಯೊಂದು ಅಸ್ತ್ರಕ್ಕೂ ಪ್ರತ್ಯೇಕವಾದ ಮಂತ್ರವಿದೆ.

ಇಂದ್ರಜಿತುವು ಲಕ್ಷ್ಮಣನ ಮೇಲೆ ನಾಗಾಸ್ತ್ರವನ್ನು ಪ್ರಯೋಗಿಸಿದನು. ಅದು ಅವನನ್ನು ಮೂರ್ಛೆಗೊಳಿಸಿ ಬಂಧಿಸಿತು.

ಮಂತ್ರ ಪ್ರಯೋಗವನ್ನು ಪಡೆದ ಒಂದು ತೃಣವೂ ಸಹ ಪ್ರಬಲಶಕ್ತಿಯುಕ್ತವಾದ ಆಯುಧವಾಗುವುದು. ಶ್ರೀ ರಾಮನು ಒಂದು ಹುಲ್ಲಿನ ಗರಿಯನ್ನು ಬ್ರಹ್ಮಾಸ್ತ್ರಮಂತ್ರದಿಂದ ಮಂತ್ರಿಸಿ ದುಷ್ಟನಾದ ಕಾಕಾಸುರನ ಮೇಲೆ ಪ್ರಯೋಗಿಸಿದನು. ಆದನ್ನು ತಡೆಯುವುದಕ್ಕೆ ಯಾರಿಗೂ ಸಾಧ್ಯವಾಗಲಿಲ್ಲ. ಆ ಕಾಕಾಸುರನು ರಾಮನಿಗೆ ಶರಣಾಗತನಾಗಿ ಸುರಕ್ಷಿತನಾದನು. ಇದರಿಂದ ಮೇಲೆ ಹೇಳಿದ ವಿಷಯವು ಸಿದ್ಧವಾಗುವುದು.

ಅಣುಶಕ್ತಿ

ಶಕ್ತಿಯು ಪ್ರವೃತ್ತಿ ಮಾಡಬೇಕಾದರೆ ಒಂದು ಭೌತಿಕವಸ್ತುವು ಅವಶ್ಯಕವಾಗಿದೆ. ಅದು ಪ್ರಬಲವಾಗಿಯೂ ಸಾಮರ್ಥ್ಯವುಳ್ಳದಾಗಿಯೂ ಇರಬೇಕಾದ ಅವಶ್ಯಕತೆಯಿಲ್ಲ. ಆದರೆ ಶಕ್ತಿಯು ತಾನು ಬಹು ಪ್ರಬಲವಾಗಿಯೂ ಘನವಾಗಿಯೂ ಇದ್ದರೂ ಸ್ವತಃ ಏನೂ ಪ್ರವೃತ್ತಿ ಮಾಡಲಾರದು. ಮೂಲಾಧಾರವಾಗಿ ಅದನ್ನು ಆದರಿಸುವುದಕ್ಕೆ ಒಂದು ಭೌತಿಕ ವಸ್ತುವು ಇಲ್ಲದಿರುವ ತನಕ ಅದರ ಸಾಮರ್ಥ್ಯವು ನಿಗೂಢವಾಗಿರುತ್ತದೆ.

ಅಣು ಪ್ರಯೋಗವು ಇದನ್ನು ಸಿದ್ಧಪಡಿಸುತ್ತದೆ. ಕೇವಲ ಅಣುವಿನಲ್ಲಿ ಕೂಡ ಸ್ಫೋಟನದಿಂದ ಹೊರಟು ಬರುವ ಮಹತ್ತರವಾದ ಶಕ್ತಿಯು ಎಸ್ಟರ ಮಟ್ಟಿಗೆ ಆಡಗಿರುತ್ತದೆ ಎಂಬುದು ಯುದ್ಧೋತ್ತರ ವಿಜ್ಞಾನದ ಆವಿಷ್ಕಾರವಾಗಿದೆ.

ರಾಮನು ವಾಲಿಯನ್ನು ಒಂದು ಶಸ್ತ್ರದಿಂದ ಅಥವಾ ಸಾಮಾನ್ಯವಾದ ಬಾಣದಿಂದ ಕೊಂದಿಲ್ಲ. ಆ ಕಾರ್ಯದಲ್ಲಿ ಕಂಡು ಬಂದುದು ಅವನ ಮಾನವ ಪೌರುಷ. ಬಾಣವೇ ಅವನನ್ನು ಕೊಂದುದು. ಅಲ್ಲಿ ಮಂತ್ರವಿರಲಿಲ್ಲ. ಹೊರಟು ಬಂದ ಶಕ್ತಿಯು ಸ್ವತಃ ರಾಮನ ಭುಜ ಪರಾಕ್ರಮ. ಈ ಸಂದರ್ಭದಲ್ಲಿ ಭೌತಿಕ ವಸ್ತುವು ಪ್ರವೃತ್ತಿ ಮಾಡಬೇಕಾದರೆ ಅದು ಶಕ್ತಿಯುಕ್ತವಾಗಬೇಕು. ಆಗ ಮಾತ್ರ ಅದು ಪ್ರವೃತ್ತಿ ಮಾಡುವುದು. ಶಕ್ತಿಯು ಸ್ವತಃ ಸಿದ್ಧ ಅಥವಾ ಪುರಾತನ ಋಷಿಗಳ ಅಥವಾ ಯೋಗಿಗಳ ಸಂಚಿತ ಪ್ರಭಾವದಿಂದ ಪ್ರಜ್ಞೋದಿಕವಾಗಿರುತ್ತದೆ.

ಕೇವಲ ಭೌತಿಕ ಪದಾರ್ಥ ಅಥವಾ ಕೇವಲ ಶಕ್ತಿಯು ಸ್ವತಃ ಪ್ರವೃತ್ತಿ ಮಾಡಲಾರದು. ಅವುಗಳು ಪರಸ್ಪರ ಹೊಂದಿಕೊಂಡಿರುತ್ತವೆ. ನಮ್ಮ ಶಾಸ್ತ್ರಗಳು ಇದನ್ನು ಸಾರಿ ಹೇಳುತ್ತವೆ. ಆಧುನಿಕ ವಿಜ್ಞಾನವು ಇದನ್ನು ದೃಢಪಡಿಸುತ್ತದೆ.

(ಸ್ವಾತಂತ್ರ್ಯ ಸಂಚಿಕೆಗಾಗಿ ಬಂದ ಲೇಖನ)

ಹೊಸಕೆರೆ ಜಿಡಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಆದ್ಯತ ಕ್ರಾಂತಿಯನ್ನುಂಟುಮಾಡಿದ ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಿಳಿ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

೧೫೦ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ

(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಸಂಪಾದಕರ ದೂರವಾಣಿ ಸಂಖ್ಯೆ
Telephone 226.

Estd. 1921

NAVAYUGA

Leading Kannada Weekly

UDIPI, S. Kanara

ದಿ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಪಾದಕ—ಸಂಚಾಲಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೫

++

ಜಾಹೀರಾತು ದರಗಳು:

ಆವರ್ತಿಯಮಿತ (ಕೆಡುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿಂದಿರ್ಥದಿಂದ ಕೂಡಿರಬೇಕು. ಕಾಲು ಕಾಸಿನ ಪ್ರಯೋಜನವಿಲ್ಲದ ಹಾಳೆಯ ಒಂದೇ ಮಗ್ಗುಲಲ್ಲಿ ಬರೆಯಬೇಕು. ಅಕ್ಷರಗಳಿಂದ ಬರೆಯಲ್ಪಡಬೇಕು. ಅಥವಾ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಬೆಲವಣಿಗೆಯನ್ನಾಗಲೀ ಸಿಂಡಿಕೇಟಿಗೆ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಸಮಯದಲ್ಲಾದರೂ ಜಮೆ ಮಾಡುವ ಸೌಕರ್ಯವಿರುವುದು.

ಮುದ್ರಿಪಪ್ರದಲ್ಲಿ:

ಪ್ರಸಿದ್ಧ ಬಲ್ಗೇರಿಯನ್ ಕಲಾವಿದ
ಜ್ಞಾಪಿಸ್ ಬೊಯಡೀವರ ಕಲಾಕೃತಿ
"ಅಪೊಸ್ಟಲ್ಸ್"

ಸಂಪುಟ ೪೬ | ಉಡುಪಿ | Vol. 46

ಸಂಚಿಕೆ ೫೨ | ೨೪—೮—೧೯೬೨ | No. 52

ಕಾಂಗ್ರೆಸಿಗೆ ನಿಜ ಸಂತಾನ

ನಾಲ್ಕನೆಯ ಸಾರ್ವತ್ರಿಕ ಚುನಾವಣಾ ಸಂತರದಲ್ಲಿ ದೇಶದ ರಾಜಕಾರಣದಲ್ಲಿ ಒಂದು ಬಗೆಯ ತೀವ್ರ ಅಸ್ಥಿತತೆಯು ಎದ್ದು ಕಾಣುತ್ತಿದೆ. ಚುನಾಯಿತ ಪ್ರತಿನಿಧಿಗಳ ಪಕ್ಷಾಂತರ ರೋಗವೇ ಇದಕ್ಕೆ ಮೂಲವೆನ್ನಬಹುದು. 'ಪಕ್ಷಾಂತರ'ವು ಒಂದು ನೋಂಕು ರೋಗ. ಇದು ಹಿಂದೆಯೂ ಇತ್ತು. ಕಾಲಕ್ಕೆ ತಕ್ಕಂತೆ ಕೋಲು ಕಟ್ಟುವ ಪ್ರವೃತ್ತಿ ಸಂದರ್ಭ ಸಾಧಕ ಕಲೆಯೂದರೂ ಇದರಿಂದ ಸ್ವಾರ್ಥ ಸಾಧನೆಯೂದರೂ ಪ್ರಾಮಾಣಿಕತೆಯಿಂದ ಗಾವುದ ದೂರ ಹೋಡಿದಂತೆಯೇ. ಈಗಿಗ ಈ ರೋಗ ಮಹಾಮಾರಿಯಂತೆ ದೇಶವನ್ನು ಕಾಡ ತೊಡಗಿದೆ. ಎಂಬಲ್ಲೀ ದೇಶದ ಜನತೆ ತೀವ್ರವಾಗಿ ಪರಿಸ್ಥಿತಿಯನ್ನು ವಿನೀಚಿಸುವ ಅಗತ್ಯವಿದೆ.

ಚುನಾವಣೆಗಳಲ್ಲಿ ಕೆಲವು ರಾಜ್ಯಗಳಲ್ಲಿ ಕಾಂಗ್ರೆಸು ಸಂಪೂರ್ಣ ಸೋತು ಹೋಯಿತು; ಮುಂದೆ ನಿಶ್ಚಿಳ ಬಹುಮತ ಪಡೆದ ರಾಜ್ಯಗಳಲ್ಲೂ ಮನೆ ಮುರುಕರು ಹುಟ್ಟಿ ಪಕ್ಷಾಂತರ ನೀತಿಯನ್ನನುಸರಿಸಿದರು. ಹರಿಯಾನಾದ ಬೀರೇಂದ್ರ ಸಿಂಗರು ತುಳಿದ ಹೇಯದಾರಿಯನ್ನು ಉತ್ತರ ಪ್ರದೇಶದ ಚರಣ ಸಿಂಗರೂ, ಮಧ್ಯ ಪ್ರದೇಶದ ಗೋವಿಂದ ನಾರಾಯಣ ಸಿಂಗರೂ ಮೆಟ್ಟಿದರು. ನಾವಿಲ್ಲಿ ಲಕ್ಷ್ಮಿ ಹರಿಸಬೇಕಾದುದು ಕಾಂಗ್ರೆಸ್ಸು ಸರಕಾರ ಪತನವಾದುದನ್ನಲ್ಲ; ಪಕ್ಷಾಂತರದ ಗಂಡಾಂತರ ಪರಿಸ್ಥಿತಿಯನ್ನು. ಆ ಭಿನ್ನಾಭ್ಯಾಯ ಸ್ವಾತಂತ್ರ್ಯ ಪ್ರತಿಯೊಬ್ಬರಿಗೂ ಇದೆಯೆನ್ನುವುದು ನಿಜ. ಆದರೆ, ಚುನಾವಣೆಗೆ ನೊದಲು ಒಂದು ಪಕ್ಷದ ನೀತಿಯನ್ನು ಒಪ್ಪಿ ಆ ಪಕ್ಷದ ಪರವಾಗಿ ಮತ ಪಡೆದು ಗೆದ್ದು ಬಂದ ನಂತರ, ಪಕ್ಷವನ್ನು ತ್ಯಜಿಸುವುದು ಪಕ್ಷಾಂತರ ಹೊಂದುವುದು ಮೊದಲ ಪಕ್ಷಕ್ಕೆ ಹೆಂದ ಕೇಡು ಮಾತ್ರವಲ್ಲ. ಜನತೆಗೆ ಬಗೆದ ದ್ರೋಹವೆಂದು ಹೇಳಲೇ ಬೇಕಾಗುತ್ತದೆ. ಅಷ್ಟು ಮಾತ್ರವಲ್ಲ, ಪಕ್ಷದ ಪರವಾಗಿ ಆಯ್ಕೆಗೊಂಡ ಜನತಾಪ್ರತಿನಿಧಿಯು ಪಕ್ಷತ್ಯಾಗ ಮಾಡಿದಾಗ, ತನ್ನ ರಾಜಿನಾಮೆ ನೀಡಬೇಕು; ಇಲ್ಲವೆ ಮಾಡಿದ ಪಕ್ಷದಲ್ಲಿ ಉಳಿಯಲು ಆತನಿಗೆ ಯಾವ ನೈತಿಕ ಅಧಿಕಾರವೂ ಇಲ್ಲ. ಪಕ್ಷೇಯ ಪಕ್ಷಹದಿಯಲ್ಲಿ ಪ್ರಜಾಶಾಸನ ನಡೆಯುವ ಭಾರತದಲ್ಲಿ ಇದು ಅಪೇಕ್ಷಣೀಯ. ಆದರೆ, ಇಂದು ನಡೆದಿರುವುದೇನು. ಒಂದು ಅಂಗಿಯನ್ನು ಕಳಚಿ ಬೇರೊಂದು ಅಂಗಿಯನ್ನು ತೊಟ್ಟು ಕೊಳ್ಳುವಷ್ಟು ಸುಲಭದಲ್ಲಿ ಪಕ್ಷಾಂತರದ ಕಾರ್ಯ ನಡೆಯುತ್ತಿದೆ. ಬಿಜಾರದಲ್ಲಿ ಕೈತ್ತ ಮಿತ್ರನಿರಿಗಳು ಅನ್ನದ ಆನಿಷ ತೋರಿಸಿ ಮತಾಂತರ ಮಾಡುತ್ತಿದ್ದಾರೆ; ಒಂದೇ ದಿನದೊಳಗೆ ಸಹವಾರು ಹಿಂದೂಗಳು ಕ್ರೈಸ್ತರಾಗುತ್ತಾರೆ. ಆದೇ ರೀತಿ ಅತೃಪ್ತ ಕಾಂಗ್ರೆಸ್ಸಿಗರಿಗೆ ಆಶೆ-ಅಮಿಷ ತೆಗಳನ್ನು ತೋರಿಸಿಯೇ ಅವರನ್ನು ಪಕ್ಷಾಂತರ ಮಾಡಿಸಲಾಗಿದೆ ಎಂಬ ಸಾಹಸವನ್ನು ಕ್ಯಾಂಗ್ರೆಸ್ಸೇತರ ಪಕ್ಷಗಳಲ್ಲಿ ಕೆಲವು ತೋರಿಸಿವೆ. (ಕಾಂಗ್ರೆಸ್ಸೂ ತೋರಿಸಿಲ್ಲವೇನೆ?) ಹರಿಯಾನಾದ ಬೀರೇಂದ್ರ ಸಿಂಗರಂತಹವರು ಉತ್ತರ ಪ್ರದೇಶ, ಮಧ್ಯ ಪ್ರದೇಶಗಳಲ್ಲಾ ಅವತಾರ ತಳೆದರು. ಕರ್ನಾಟಕದಲ್ಲೂ ಅವರ ಅವತಾರವಾಗುವುದೆಂದು ವಿರೋಧಿ ದಳಗಳು ಭವಿಷ್ಯ ನುಡಿಯುತ್ತಾರೆ ಭವಿಷ್ಯ ವಾಣಿಗಳ ಭವಿಷ್ಯವನ್ನು ನಾವು ನಂಬುವುದಾದರೆ. ಕೇಂದ್ರ ದಲ್ಲಾ ಕಾಂಗ್ರೆಸ್ಸಿಗರಿರುವ ಅಲ್ಪ ಬಹುಮತದ ಮೇಲೂ ಇವರ ದೃಷ್ಟಿ ಹರಿದಿದೆ. ಏನಕ್ಕೂ ಜನ ಕಾಂಗ್ರೆಸ್ ಎಂ ಪಿ ಗಳು 'ಬೀರೇಂದ್ರಾವತಾರ'ಿಯನ್ನು ಅನುಸರಿಸದರೆ ಮುಗಿಯಿತು. ಆದರೆ, ಕೇಂದ್ರದ 'ಬೀರೇಂದ್ರ ಸಿಂಗಾವತಾರ' ನೂರು ಎಂದು ಖಚಿತವಾಗಿ ಇವರ ಕವಡೆ ನುಡಿಯುವುದಿಲ್ಲ. ಆದುದರಿಂದ ಏನಕ್ಕೂ ರಷ್ಟು ಪಕ್ಷಸ್ಥರ ನಾರುಕರೆಂದ ಕರೆಯುವುದಾದ ಗೃಹಮಂತ್ರಿ ಜಿವನರನ್ನೊಮ್ಮೆ ಬೊಟ್ಟು ಮಾಡುತ್ತಾರೆ. ಜಹಾರಮಂತ್ರಿ ಜಗಜೀವನ ರಾಮರೇ ಏನಾಗಬಾರದು ಎಂದೂ ತರ್ಕಿಸುತ್ತಾರೆ. ಆದೇನೇ ಇರಲಿ, 'ಪಕ್ಷಾಂತರ' ಎಂಬುದರ ಮೂಲ ಅಧಿಕಾರ-ಅಮಿಷದಲ್ಲಿಯೇ ಇದೆ ಪಕ್ಷ ನಿಷ್ಠೆಯಿಲ್ಲದ ಅಧಿಕಾರಕ್ಕೆ ಒಂಟಿಕೊಪ್ಪಲು, ಅದನ್ನು ಪಡೆಯಲುಹಾತೊರೆಯುವ ಈ ಅತೃಪ್ತರು ಪಕ್ಷತ್ಯಾಗ ನೂಡುವುದರಿಂದ ಕಾಂಗ್ರೆಸ್ಸಿನ ಜನಬಲ ಕಡವ ಯಾಗಲೂ ಪಕ್ಷದಲ್ಲಿ ನಿಷ್ಠೆ ಮತ್ತು ಕಾರ್ಯ ಕೌಶಲ್ಯ—ಸೇವಾಭಾವನೆಗಳು ಬೆಳೆಯ ಬಹುದು, ಪಕ್ಷದ ಹಾನರುತ್ಥಾನಕ್ಕೆ ಇದು ಸಹಾಯಕವಾಗ ಬಹುದು. ಆದರೆ, ಇದೂ ಊಹನೆಯ ಮಟ್ಟವನ್ನು ಬಿಟ್ಟ ನೋಲೇರವಂತಿಲ್ಲ. ಏಕೆಂದರೆ, ಚುನಾವಣೆಗೆ ಮೊದಲೂ ಅನಂತರವೂ ಜನತೆಗೆ ನೂರಾರು ಬಗೆಯ ಆಶೆಯನ್ನು ತೋರಿಸಿದ ರಾಜಕೀಯ ಪಕ್ಷಗಳು — ಮುಖ್ಯವಾಗಿ ರಾಜ್ಯಗಳ ಸಂಯುಕ್ತ ರಂಗದ ಸರಕಾರಗಳು ಈಗ ಪ್ರತಿಯೊಂದಕ್ಕೂ ಕೇಂದ್ರವನ್ನೇ ದೂರುತ್ತಿವೆ. ರಾಜ್ಯದಲ್ಲಿ ಕಾಂಗ್ರೆಸ್ಸು ಸರಕಾರವಿರುವಾಗ ರಾಜ್ಯ ಸರಕಾರವು ಹೇಗೆಯೂ ಬೈಗುಳ ತಿಂದಿತ್ತು; ಈಗ ರಾಜ್ಯವು ತಮ್ಮ ಕೈಯಲ್ಲೇ ಇರುವುದರಿಂದ ಬೈತಿಯಿಂದಲೂ ಕೇಂದ್ರದ ಕಾಂಗ್ರೆಸ್ಸು ಸರಕಾರವೇ ಹೊಣೆಯೆನ್ನುವ ಈ ಧೋರಣೆ, ಅಲ್ಪಿಗೂ ತವ್ಯನ್ನೇ ಚುನಾಯಿಸಿ, ತಾವು ಸ್ವರ್ಗತರುಲ್ಯರೆನ್ನೆ ನೆಂದು ಹೇಳಿದಂತೆ. ಇದು ಚುನಾವಣೆಯ ಫಲಿತೆಯ ಹೊಣೆಗೆಟ್ಟ ಮಾತುಗಾರಿಕೆಯೂಗಬಹುದೇ ಹೊರತು ರಾಜ್ಯ ನಡೆಸುವವರ ವಿವೇಕದಿಂದ ಬರಬಹುದಾದ ಮಾತಾಗದು. ವಿತ್ತ ಮಂತ್ರಿ ದೇಸಾಯಿಯವರು ಕೇಂದ್ರದ ಆರೋಪಿತ ಮಲತಾಯಿ ಧೋರಣೆಯ ಬಗ್ಗೆ ಆಹ್ವಾನ ನೀಡಿದಾಗ ಯಾರೂ ಅದನ್ನು ಸ್ವೀಕರಿಸಲು ಮುಂದೆ ಬರಲಿಲ್ಲ. ರಾಜ್ಯಗಳಿಗೆ ಜನಹಿತಸಾಧನೆ ಸಾಧ್ಯವಲು ಕೇಂದ್ರವೇ ಹೊಣೆಗಾರವೆಂದಾದರೆ, ರಾಜ್ಯ ಸರಕಾರಗಳ ಅಸ್ತಿತ್ವವಿರುವುದಾದರೂ ಏಕೆ? ಅಧಿಕಾರ ದಾಹದಿಂದಾಗಿಯೇ ಸಂಯುಕ್ತ ರಂಗದ ಸರಕಾರಗಳು ಅಧಿಕಾರ ಪಡೆಸಿವೆ. ರಾಜ್ಯಮಟ್ಟಿಲ್ಲಿನ ಭಿನ್ನಮತ, ಜನತೆಯ ಅಪೇಕ್ಷೆಗಳಿಂದ ತಪ್ಪಿ ಮುಖಭಂಗಿಕೆಸಿಕೊಳ್ಳಲು ಕೇಂದ್ರದ ಮುಖಕ್ಕೆ ಮಸಿ ಬಳಿಯುವ ವೀರರಿವರು. ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ಈ ಬಗ್ಗೆ ಹೊರಡಿಸಿದ ಉದ್ಗಾರ ಜನ ಸಾಮಾನ್ಯನ ಕಣ್ಣು ತೆರೆಯಿಸಬೇಕು.

ಮುಂದಿನ ಚುನಾವಣೆಯು ಹೇಗಾಗಿ ಕಾಂಗ್ರೆಸ್ಸು ನಿರ್ನಾಮವಾಗುತ್ತದೆ, ನಾಮಶೇಷವಾಗುತ್ತದೆ, ನಾಮ ಮಾತ್ರವಿರುತ್ತದೆ, ಎಂಬ ವಾದಗಳಲ್ಲಿ ಯಾವುದರಲ್ಲೂ ಭವಿಷ್ಯವಾದಿಗಳ ಒನ್ಮತ್ಯವಿಲ್ಲ. ಪಕ್ಷಾಂತರದ ಸಾಂಕ್ರಮಿಕ ರೋಗದಿಂದ ಕಾಂಗ್ರೆಸ್ಸು ನಿಯಂತ್ರಣವಾಗುವುದರಲ್ಲಿ ಸಂದೇಹವಿಲ್ಲ. ಪ್ರಬಲ ಕುಟುಂಬಕ್ಕೆ ಮಿತ ಸಂತಾನ ಪ್ರಯೋಜನವಿರುವಂತೆ; ಹೆಚ್ಚು ಮಕ್ಕಳನ್ನು ಹೊರುವುದಕ್ಕಿಂತ ಕೆಲವನ್ನೇ ಹೊತ್ತು ಸರಿಯಾಗಿ ಸಾಕುವುದು ಉತ್ತಮ. ಹಾಗೆಯೇ ಕಾಂಗ್ರೆಸ್ ಬ್ರಹತ್ ಶೈಕ್ಷದ ಒಣಗಿದ ರೆಂಬೆ—ಎಂಕಲುಗಳನ್ನು ಉದುರಿ ಹೋದರೆ, ಕಾಂಗ್ರೆಸ್ ಪಕ್ಷಕ್ಕೂ 'ಮಿತ ಸಂತಾನ'ದ ಸಿದ್ಧಾಂತ ಅನ್ವಯಿಸಾಗಿದಿ, ಪಕ್ಷದ ನೈತಿಕ ಬಲ್ಲ ಬರಲು ಸಾಧ್ಯವಾಗಲಾರದೆ? ಅಧಿಕಾರ—ಯೋಗ, ಯಜ್ಞ ಕಾಲಕ್ಕೂ ಸ್ಥಿರವಲ್ಲ, ಸಮುದ್ರದ ಪಸ್ಥೆ ಓಡ.ತ್ತಿರುತ್ತದೆ. ರಾಜ—ವಹಾರಿಂಗ

(ಹತ್ತನೇ ಪುಟ ನೋಡಿ)

ವಜನ ಸಂಭೆ

ಗತಿರಾತ್ಮನತಾಂ ಸಂತ,
ಸಂತ ಏವ ಸತಾಂಗತಿ:
ಅಸತಾಂ ಚ ಗತಿ: ಸಂತೋ
ನಸ್ವ ಸಂತ: ಸತಾಂಗತಿ:॥

ಮುನಸ್ಸುಗಳಿಗೆ ಆಶ್ರಯದಾತರು ಸಂತರು. ಸಂತರಿಗೂ ಆಶ್ರಯದಾತರು ಮತ್ತು ಸ್ಪರ ಆಶ್ರಯದಾತರೂ ಸಂತರೇ ಆದರೆ. ದುರ್ಜನರು ಸಂತರಿಗೆ ಆಶ್ರಯ ನೀಡುವ ವಿಲ್ಲ

ನರಸಣ್ಣನ ನರಕ

'ನಾಲ್ಕನೇ ಚುನಾವಣೆ ಅಂದ್ರೆ ಜೀರಪಲ್ಲಿ ಬಿಗುಂಗಳಿ ಬೀಸಿದ್ದಾಂಗೆ ಒಣ....'

'ಬಿರುಗಾಳಿ ಬೀಸುದ್ದೆ ಇರೋವಿಲ್ಲಿ ಜೀವ ಹಿಡು. ಅದು ನಿಂತ ಮೇಲೆ ಹೊಸಾಲ್ಯ ಸೃಷ್ಟಿ ಸ್ಥೆಯಾಗ್ತದೆ.

ಗೇಪ ರಾಜ್ಯದಲ್ಲಿ

ನಮ್ಮ ಭೂಮಿ ಉಸುಟಿ? ಬರಟಿ?

"ಯಾಕ್ರೀ...."

"ಹಾಮು..."

'ಏನು ಹೌದು?'

'ಎಲ್ಲಾನೂ ಹೌವ ...."

"ಅಂದ್ರೆ..."

"ನಾನು—ನೀನು ಇರೋದೂ ಹೌದು, ಈ ಜಗತ್ತಿನಲ್ಲಿ ಮಜಾಯಿದ್ದದ್ದು ಜ್ವಾಲೆ ಹೊಗೆಯುಕ್ತಿರುವುದೂ ಹೌದು, ನಮ್ಮ ಸ್ವಾತಂತ್ರ್ಯಕ್ಕೆ ಬಾಲಕನಿಗೆ ಇಪ್ಪತ್ತೊಂದು ವರ್ಷ ಹಿಡಿದದ್ದೂ ಹೌದು... ಅದೂ ಹೌದು, ಇದೂ ಹೌದು.. ಎಲ್ಲವೂ ಹೌದು...."

"ಅಲ್ರಿ, ಇದೀಗ ಭಾರಿ ತತ್ವಜ್ಞಾನ...."

'ಏನು?'

'ಏನೂಂತನ್ನೋದು? ಒಲ್ಲಪ್ಪಾ, ಅದೂ ಇದೂ ಎಲ್ಲವೂ ಹೌದೂಂತಂದು ಹೊಸ ಅಧ್ಯಾಯ ಪ್ರಾರಂಭಿಸುವ ವ್ಯಯಸ್ಸು ನಿಮ್ಮದಲ್ಲಾ?"

'ಅಂದ್ರೆ?'

"ಅಯ್ಯೋ, ನೀವೊಂದು... ಈ ಮೂರೂ ಅರ್ಥವಾಗದ ಮಹಾನುಭಾವರು ಮತ್ತೆ ಅಧ್ಯಾಯ ಪ್ರಾರಂಭಿಸುತ್ತಾರಂತ!'

'ಏನೇ ಇದು? ನಿನ್ನ ಮಾತಿನ ಅರ್ಥ ವಾದರೂ ಏನೂಂತ?'

'ಅರ್ಥ? ಈ ಜಗತ್ತು ಮಿಥ್ಯ, ಮಾಯೆ ಅಂತ ಅಂದು ಶಂಕರಾಚಾರ್ಯರು ಅದ್ವೈತವಾದವನ್ನು ಸ್ಥಾಪಿಸಿದ ಬಳಿಕ ಮಧ್ವಾಚಾರ್ಯರು ದ್ವೈತವಾದವನ್ನು ಪುಷ್ಟೀಕರಿಸಿದರು. ಈಗ ಒಲವಾಗದಿರುವ ದ್ವೈತವನ್ನು ಮತ್ತೆ ಪುನರುತ್ಥಾನ ಮಾಡಲು ಆಚಾರ್ಯತ್ವ...."

'ಯಾರು? ನಾನೆ?'

'ಪ್ಚೆ...."

"ಏಕ ಹಾಗಂದೆ?...."

'ಎಲ್ಲವೂ ಹೌದು ಅಂದ್ರೆ ಎಲ್ಲವೂ ಮಿಥ್ಯವಲ್ಲ, ಸತ್ಯ ಅಂದ ಹಾಗಾಯ್ತಲ್ಲ....'

'ಅಯ್ಯೋ, ನೀನೂಬ್ಬಳು— ಒಂದು ಅರ್ಥದಲ್ಲಿ ನೀನನ್ನೋದ್ರಲ್ಲಿ ತುಸು ಸತ್ಯಾಂಶವಿದೇನ್ನಿ. ಆದರೆ, ಈ ಆಚಾರ್ಯತ್ವ ಮೂತ್ರ ಭಾರಿ ದ್ವಂದ್ವವಯ್ಯ...ಅದಕ್ಕಾಗಿಯೇ ಒಂದು ಕಾಂಪಿಟೇಟಿವ್ ಪರೀಕ್ಷೆ ನಿರ್ವಹಿಸಬೇಕು ಅನ್ನುತ್ತೆ....'

"ಸರಿಯಾಯ್ತು. ವೇಷ ಬಿಡಿ. ಆನ್ರೆ ರೂಲ್ ಮಾಡೋವಾಗ, ನಿಮಗೂ ಎಸಿಯರ್ ಆಗೋ ಅವಕಾಶ ಒದಗಿಸಿಕೊಳ್ಳಿ...'

'ಅಂತೂ ನೀನನ್ನೋದು ನಾನು ದ್ವೈತ ಅಂತ ತಾನೆ?"

"ನೀವ್ ದ್ವೈತರೂಂತ ನಾನ್ಯಾಕೆ ಹೇಳಲಿ?"

"ಮತ್ತೆ?"

'ನಿಮ್ಮ ವಿಚಾರ ಮಾತ್ರ ದ್ವೈತ ಅಂದದ್ದು ನಾನು...."

'ಹಾಗೆ.... ಆಸ್ರೆ ನೋಡು, ಯಾರೇ ಇರಲಿ, ಆತನ ಮೇಲೆ ಸಮಕಾಲೀನ ಪರಿಸ್ಥಿತಿಯ ಪ್ರಭಾವ ಬಿದ್ದೇ ಬೀಳುತ್ತೆ.'

'ಹ್ಞೂಂ....ಒಪ್ಪಿಕೊಳ್ಳೋಣ...."

'ಹಾಗಿರುವಾಗ, ನನ್ನ - ನಿನ್ನ ಮೇಲೂ ಆ ಪರಿಸ್ಥಿತಿಯ ಒತ್ತಾಟ ಬಿದ್ದರೆ, ಅದ್ರಲ್ಲಿ ಮುಗಿಗೆ ಬೇಂಗಳೇರಿಸುವಂಥ ದೇನಿಗೆ?"

'ಹ್ಞೂಂ... ಇಲ್ಲಾನ್ನೋಣ...."

'ಹಾಗೇನೇ ಲೋಕಕ್ಕೆ ಲೋಕವೇ ದ್ವೈತ ವಾದದ ಸುಳಿವಿಗೆ ಸಿಕ್ಕು ತತ್ತರಿಸುತ್ತಿರುವಾಗ ನಾನು—ನೀನು ಅದಕ್ಕೆ ದೂರವಿರುತ್ತದು ಸಾಧ್ಯವೆ?'

'ಓಃ, ನೀವು ಸದ್ಯ ನಿಮ್ಮ ಕಥೆ ಹೇಳಿ. ನನ್ನನ್ನ ಎಳೆಯಕೊಂಡು ಹೋಗಬೇಡಿ...."

'ನೋಡು, ಈ ಮಾತ್ರಲ್ಲೇ ನೀನು ದ್ವೈತವಾದದ ಆಚಾರ್ಯಳಾಗಿ ಬಿಟ್ಟೆ.'

'ಅದು ಹೇಗೆ?'

"ಹೇಗೆ ಅಂದ್ರೆ, ನೊದಲು ಬೇರೆ ಬೇರೆಯೂಗಿದ್ದ ನಮ್ಮನ್ನು ಅದ್ವೈತಗೊಳಿಸಿದ್ದನ್ನು ಮರೆತು ಬಿಟ್ಟಯೇನ್ರಿ? ಈಗ ನಾನು — ನೀನು ಬೇರೆ ಬೇರೇಂತಂದು ದ್ವೈತವಾದದ ಬೆನ್ನು ಚಪ್ಪರಿಸಿದಯಲ್ಲಾ...."

"ಅಯ್ಯೋ, ಹಾಗೂ ಉಂಟೆ?"

"ಹೆದ್ರು ಬೇಡ. ಹಾಗೂ ಉಂಟು; ಹೀಗೂ ಉಂಟು...."

'ಹೇಗೆ?'

'ಸನಃಕಾಲೀನ ಪರಿಸ್ಥಿತಿಯ ಪ್ರಭಾವ ನಿನ್ನ ಮೇಲೂ ಬೀಳುತ್ತದೆ. ಕಾಲದ ಹಕ್ಕ ಹಾರುತ್ತಲೇ ಇರುತ್ತದೆ. ಆದರಿಂದ ಪ್ರತ್ಯೇಕವಾಗಿರ ಬಲ್ಲವರು ಯಾರೂ ಇಲ್ಲ....'

"ಹ್ಞೂಂ.. ಅಲ್ಲಾ, ನೀವು ಮಾತು ಮಾತಿಗೆ ಕಾಲದ ಪ್ರಭಾವ— ದ್ವೈತ ಅಂತ ಅನ್ನುತ್ತೀರಲ್ಲಾ....ಏನದೂಂತ?'

'ಹಾಗಕೇಳು....ದ್ವೈತ ಅಂದರೆ ಎರಡವಾದ, ಎಲ್ಲವೂ ಒಂದೇ ಅಲ್ಲ; ಎಲ್ಲದರಲ್ಲೂ ಎಂದು ಅಂತ...'

"ಹ್ಞೂಂ..."

"ನೋಡು, ಇಂದಿನ ಜಗತ್ತನ್ನು ನೋಡು-ಎಲ್ಲವೂ ಎಲ್ಲಿಪೆಸಗೂ ಎರಡರದೇ ಸಾಬ್ದಾರ್ಯ...."

"ಏನಿ ಸಾಬ್ದಾರ್ಯ? ಹೇಗೆ ಸಾಬ್ದಾರ್ಯ?'

'ಇಂದು ಪ್ರಜಾಪ್ರಭುತ್ವವ ಯುಗ ನೋಡು— ಇಲ್ಲಿಯೂ ದ್ವೈತ—ನಿನಗೆ ಪ್ರಜಾಪ್ರಭುತ್ವನಾಗನಹುದೇ, ಸರ್ವಾಧಿಕಾರವಾಗಬಹುದು?'

'ಛಿ, ಬಂಡವಳಶಾಹಿ...."

'ಆ ಲ್ಲ ಯೂರು ಕೇಳುತ್ತಾರೆ? ಚಂತಹ ಕಾಹಿ ಪತ್ರಿಕೆಗಳಿಗೆ ಮಾತ್ರ—"

'ಹ್ಞೂಂ...."

'ಪ್ರಜಾತಂತ್ರದಲ್ಲಿ ನೋಡು—ಮೇಲ್ನೋಟೆ—ಕೆಳಮನೆ—ಇಲ್ಲಿಯೂ ಎರಡೆ ಮನೆಗಳು. ಮತ್ತೆ ಆಡಳಿತ ಪಕ್ಷ—ವಿರೋಧಿ ಪಕ್ಷ—ಇಲ್ಲಿಯೂ ಎರಡು ಪಕ್ಷಗಳು....'

'ಇದು ಸರೀರಿ. ನಮ್ಮ ದೇಶಕ್ಕೆ ಇದು ಜಿನ್ನಾಗಿ ಒಪ್ಪುತ್ತೆ...'

'ನಮ್ಮ ದೇಶಕ್ಕೆ ಪೂರ್ತ ಅಲ್ಲ, ಇಡಿಯ ಲೋಕಕ್ಕೆ ಒಪ್ಪೋ ಸಂಗತಿಗಳೆ. ಇವ. ಇನ್ನು ನಮ್ಮ ದೇಶಕ್ಕೇನೇ ಸಂಬಂಧಪಟ್ಟಂತ ಸ್ಪೆಶ್ಯಲ್ ದ್ವೈತವಾದ ಬೇರೆಯಿದೆ..."

"ಯಾವುದದು?"

"ನವ್ರಿಗೆ— ಭಾರತೀಯರಿಗೆ ಎರಡು ದೇಶಗಳು-ಎರಡು ದೇಶ ಪೂತೆಗಳು...."

"ಅಂದ್ರೆ? ತುಸು ಬಿಡಿಸಿ ಹೇಳೀಂದ್ರೆ"

"ಏನು ಹೋಳೋದು? ನೋಡು ನಾವು ಕನ್ನಡಿಗರೂನ್ನು. ನಮ್ಮ ದೇಶ ಮೊದಲಿಗೆ ಮೈಸೂರು ದೇಶ— ಮತ್ತೊಂದು ಇಂಡಿಯೂ ದೇಶ."

"ಓಹೋ....

"ಹಾಗೇನೇ ನಮಗೆ ಕರ್ನಾಟಕ ಪೂರ್ತೆ—ಭಾರತ ಪೂರ್ತೆ ಇಬ್ಬರನ್ನೂ ನಮೂ ಧಾನ ಪಡಿಸಬೇಕಾಗಿದೆ....ಇದು ದ್ವೈತವಾದವಲ್ಲವೇನು?'

'ಹ್ಞೂಂ...ಸದ್ಯಕ್ಕೆ ಹೌದಂಂತಲೇ ಒಪ್ಪಿಕೊಳ್ಳೋಣ...."

'ಇನ್ನು ನೋಡು—ನಮ್ಮ ಸಂಪರ್ಕ ಭಾಷೆ—ಇಂಗ್ಲಿಷ್—ಹಿಂದಿ--ಇಲ್ಲಿಯೂ ದ್ವೈತ"

"ಪೂತೃ ಭಾಷೆ...."

"ಅದು ಬೇರೆ. ಪೂತೃ ಭಾಷೆ ಮತ್ತು ಹಿಂದಿ, ಪೂತೃ ಭಾಷೆ ಮತ್ತ ಇಂಗ್ಲಿಷ್—ಇಲ್ಲಿನ ದ್ವೈತವೀ ರೀತಿ...."

'ಹ್ಞೂಂ....ಆಯ್ತು. ಇನ್ನು..."

'ದೇಶದಲ್ಲಿ ಸ್ವಾತಂತ್ರ್ಯ ನಂತರ ಪ್ರಗತಿಯಾಗಿದೆ—ಅಗಿಲ್ಲ ಅನ್ನುವ ದ್ವೈತ ಸರಕಾರ ಕರ್ತವ್ಯ ಸಮರ್ಪಕವಾಗಿ ನಿರ್ವಹಿಸುತ್ತಿದೆ—ಇಲ್ಲ ಅನ್ನುವ ದ್ವೈತ...'

'ಅದು ಹೌದ್ರಿ....ನೋಡಿ, ಇಂದು ಕಲವು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರಕಾರಗಳು ಇನೆಯಲ್ಲಾ... ಇವುಗಳ ಮಂತ್ರಿಗಳನ್ನು ನೋಡಿ...ಹೆಚ್ಚಿನವರು ಮೊದಲು ಕಾಂಗ್ರೆಸಿಗರಾಗಿದ್ದು ಇತ್ತೀಚೆಗೆ ಸಂಯುಕ್ತರಂಗ ಸೇರಿದವರು ...ಅವರಿಗೂ ದ್ವೈತ ಭಾವನೆ...."

"ನುತ್ತೆ, ನೋಡು ಮಧ್ಯ ಸ್ರುದೇಶದ ಕಥೆ...."

"ಏನು?"

'ಗುರು ಚರಣ ಸಿಂಗರು ಮಂತ್ರಿ ಪದವಿಯ ಅಸೆಯಿಂದ ಮೂರು ಡಜನ್ ಅನುಯಾಯಿಗಳೊಡನೆ ಕಾಂಗ್ರೆಸ್ ತ್ಯಜಿಸಿ ಸಂಯುಕ್ತ ರಂಗ ಸೇರಿದರು. ತಾನೇ ಮುಖ್ಯಮಂತ್ರಿಯಾದರು...'

"ಆದೆಲ್ಲಾ ಹಳೆಯ ಕಥೆ...."

"ತನ್ನ ಸಂಪುಟದಲ್ಲಿ ತನ್ನ ಅನುಯಾಯಿಗಳಿಗೇ ಹೆಚ್ಚು ಸ್ಥಾನ ನೀಡಿದರು.-ಇಲ್ಲಿಯೂ ದ್ವೈತ...'

'ಹ್ಞೂಂ....ನುತ್ತೇನಾಯ್ತು?"

'ಏನೋ, ತನ್ನ ವೈಯಕ್ತಿಕ-ಪಕ್ಷಕ್ಕೆ ವಿಘ್ನ ಬಂತೂಂತ ರಾಜೀನಾಮೆ ಪತ್ರಿಕೆ ಹಾತಿಗರು...."

"ಹ್ಞೂಂ....ಇದರ್ ಮೂಲ ದ್ವೈತ ಭಾವನೆಯಿಲ್ಲಬೇಕು..."

"ಇಲ್ಲದೆ ಉಂಟೆ? ತನಗಿಟ್ಟುದನ್ನು ತನಗೇ ಬದಿಸಿದರೆ...ಎಂ. ದ್ವೈತ..."

'ಕೆಸಿನಗೆ ಏನಾಯಿ ಕ್ರಿ?'

'ರಾಜೀನಾಮೆ ನೀಡುವುದಿಲ್ಲ ಅಂದಿದ್ದಾರೆ...."

'ಅಂತೂ ಬ್ರಹ್ಮಾಸ್ತ್ರ ಪ್ರಯೋಗ ಬಹ್ಮಾಸ್ತ್ರಕ್ಕೆ ಕೆಯ್ಲೆ ಮಡಗಕೊಂಡನು.... ಇದಕ್ಕೇ ಬುದ್ಧಿಯುಳ್ಳವನೋದ ..."

'ಯೂತ್'

"ಆ ಲ್ಲಾ, ಈ ಗ್ಲೇ ರಾಜೀನಾಮೆ ನೀಡುತ್ತೀನೆ ಅಸರ ಅನುಯಾಯಿಗಳೂ ಎದರ ಹಿಂದೆಯೇ ಹೋಗುತ್ತಿದ್ದರು. ಇನ್ನು ಎಂದಾದರೂ ಇದನ್ನು ಸ್ಥಯೀಕರಿಸಲೆ, ಅನುಯಾಯಿಗಳದ್ದೇನು ಗ್ಯಾರಂಟಿ? ಅವರನ್ನು ಉಳಿಸಿಕೊಳ್ಳುವ ತನ್ನ ಬೆನ್ನ ಹಿಂದೆ ಎಳೆಯ ದಿರುಕಾತ್ತಾರೆಯೆ?"

'ಅದು ಪರೀಕ್ಷೆನ್ನ. ಅವರು ಹೇಗೂ ಮೂರನೆಯವರ ಅನು ಯಾಯಿಗಳು ತಾನೆ?'

'ನೋಡಿ, ಪಕ್ಷ ದ್ವೈತವಾದಿಂದ್ಲೇ ಪ್ರಜಾಪ್ರಭುತ್ವ ಕಾರ್ಯಾಜ ವಿದರ ....'

ಹ್ಞೂಂ....ಹೀಗೆ ಯೇ ನೋಡಿ...ಬಿಹಾರ- ಕೇಳಿ - ದಕ್ಷಿಣ ಎಂಗಳಗಳ ಆಹಾರ ಸಮಸ್ಯೆ ರಿಜ್ಯಯೂಣಿ-ಕೇಂದ್ರ ಹೊಣೆ ಅಂತ ದ್ವೈತವಾದ—'

'ನಾಳು ಬಿಡೀ. ವಿತ್ತ ಮಂತ್ರಿ ದೇಸಾಯಿ ಮುಪರದೂ ದ್ವೈತವಾದ. ತಪ್ಪಿ ಭಟ್ಟಿ ಕೊಡಬೇಕು—ಬೇಡ ಎಂದು. ಇನ್ನು ಕೆಂಡುಪುದಾಸರೂ ದ್ವೈತನೇ. ನಗದಿಯಾಗಿಯೇ — ಬೋಂಡುಬಳಿ ರೂಪದಲ್ಲಿಯೇ..'

(ಬಂಳಕ್ತನೇ ಪುಟ ನೋಡಿರಿ)

In the Court of Munsif,
Coondapoor.

O. S. 88/1967

Sri Venkatramana Devaru
Coondapoor — Plaintiff

Vs

Chikki & 2 others— Defendants

To

3rd defendant— Kusta, son of Moger Chikki, Gujjadi village.

Sir,

The suit filed by plaintiff for recovery of possession, rent and mesne profits has been posted to 14—9--67 at 11 A.M for your appearance In default of your appearance the case will be decided in your absence.

By order of Court.

K. Narayana Kamath,
Managing Trustee,
Sri Venkatraman Temple,
Coondapoor.

16—8—1967 *Plaintiff.*

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. I. A 493/67
in O. S. 20/67.

ದೊಂಬಿ ಗೌಡ ಸಿಯ- ಅರ್ಜಿದಾರರು.
ವಾದಿ

ಕೆಂಚಿ ಗೌಡ ಮತ್ತ - ಎದ್ರಿಗೆ
ಪ್ರತಿವಾದಿಗಳು.

ಮೇಲಿನ ಸಂಖ್ಯೆಯ ಮೇಲೆ ಪ್ರತಿವಾದಿ ಬೆಳ್ತಂಗಡಿ ತಾಲೂಕು ಬಂಗಾಡಿಯಲ್ಲಿ ಗ್ರಾಮದ ಸರ್ವೆ ನಂಬರಿನಲ್ಲಿ ಬರುವ ೨೯ ಸೆಂಟ್ಸ್ ಜಾಗದ ಮೇಲೆ ಕೊಡಲ್ಪಟ್ಟಿರುವ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ-

ಮೇಲಿನ ದಾವೆಯು ಇನ್ನು ಪ್ರಾಥಮಿಕ ವಿಚಾರಣೆಗೆ ಇದ್ದು ಅದು ೪—೯—೬೭ರಲ್ಲಿ ಇಟ್ಟುಗೊಳ್ಳಲಿದೆ. ಸದರಿ ವ್ಯಾಜ್ಯ ದಿನ್ನ ನಿಮ್ಮ ದೇನಾದರೂ ಆಕ್ಷೇಪವಿದ್ದಲ್ಲಿ ನೀವೆ ಸ್ವತಃ ಯಾ ನಿಮ್ಮಲೀಲ ವಿದ್ದಾದ ವಕೀಲರ ಮೂಲಕ ೧೦ ಗಂಟೆಗೆ ಹಾಜರಾಗಿ ಉತ್ತರವನ್ನು ಕೊಡಬೇಕಾಗಿದ್ದು. ತಪ್ಪಿದಲ್ಲಿ ನಿಮ್ಮನ್ನು ವಿರುದ್ಧ ಮೂಡಿ ಮೇಲಿನ ದಾವೆಯನ್ನು ಕೇಳಲಾಗುವುದೆಂದು.

ಬಿ. ಕೆ. ಸೂರ್ಯನಾರಾಯಣರಾವ್
ಎಮ್ಮೆಗೇಸ್ಟ್

ಬೆಳ್ತಂಗಡಿ, ತಾ. ೩—೮—೬೭.

ಸಂಶೋಧನೆ

ಮೊಟ್ಟೆಗಳನ್ನು ಬಹಳ ದಿವಸ ಕಾಪಾಡುವುದು ಹೇಗೆ?

ಡಾ|| ಪಿ. ಜಾಂಡಾ ಅವರು ಮೊಟ್ಟೆಗಳನ್ನು ಬಹಳ ದಿವಸ ಕಾಪಾಡಿಡುವ ಬಗ್ಗೆ ಪರಿಶೋಧನೆಗಳನ್ನು ನಡೆಸುತ್ತಿದ್ದಾರೆ. ಅವರ ಸಂಶೋಧನಾ ಫಲ ಈ ಕೆಳಗಿನ ವಿವರಗಳು.

ಮನುಷ್ಯನಿಗೆ ನಿಸರ್ಗದ ಕಾಣಿಕೆ ಮೊಟ್ಟೆ. ಇದರಲ್ಲಿ ಅನೇಕ ಪೋಷಕಾಂಶಗಳು ಪ್ಯಾಕ್ ಮಾಡಿದಂತೆ ಇಡಲ್ಪಟ್ಟಿವೆ. ಮೊಟ್ಟೆಯ ಪ್ರೋಟೀನ್ ಬಹಳ ಶ್ರೇಷ್ಠವಾದುದು. ಇದರಲ್ಲಿರುವ ಮೇದಸ್ಸಿನ ಅಂಶ ನಮ್ಮ ಶರೀರದಲ್ಲಿ ಜೀರ್ಣಾಂಗಿ ರಕ್ಷಣಾತ್ಮಕವಾಗುವುದು. ಅಲ್ಲದೆ ಸೊಟ್ಟೆಲೆಸಿತ ಲವಣಾಂಶಗಳು ಜೀವ ಸತ್ವ ಲವಣಾಂಶಗಳ ಭಂಡಾರ. ಇದರ ಸೇವನೆ ಪ್ರತಿಯೊಬ್ಬನಿಗೂ ಅತ್ಯವಶ್ಯಕ.

ಒಂದು ಅಥವಾ ಎರಡು ಮೊಟ್ಟೆಗಳನ್ನು ಒಬ್ಬರು ದಿನಕ್ಕೆ ತಿನ್ನಬಹುದು. ಇತ್ತೀಚೆಗೆ ಸಸ್ಯಾಹಾರಿಗಳು ಮೊಟ್ಟೆಗಳನ್ನು ನಿರ್ಸಂಕೋಚವಾಗಿ ಸೇವಿಸುತ್ತಾರೆ. ಇದಕ್ಕೆ ಜನಗಳಲ್ಲಿ ಮೊಟ್ಟೆಯ ಬಗ್ಗೆ ಹೆಚ್ಚು ತಿಳಿವಳಿಕೆ ಮೂಡುತ್ತಿರುವುದೇ ಕಾರಣ. ಎರಡು ಮೊಟ್ಟೆಗಳಲ್ಲಿರುವ ಪೋಷಕಾಂಶಗಳನ್ನು ನೀವು ಗಮನಿಸಿ.

ಶಕ್ತಿ	180	ಕ್ಯಾಲೊರಿ
ಪ್ರೋಟೀನ್	13.2.14	ಗ್ರಾಂ.
ಮೇದಸ್ಸು	11.0	,,
ಕ್ಯಾಲ್ಸಿಯಂ	0.06	,,
ಫಾಸ್ಫೋರಸ್	0.24	,,
ಕಬ್ಬಿಣದಂಶ	3.2	ಮಿ. ಗ್ರಾಂ.
'ಎ' ಆನ್ಷಂಗ	1000—1500	ಐ. ಯು.
'ಡಿ' ,,	100	,,
'ಸಿ' ,,	—	,,
ಬಿ 1 ,,	0.13	ಮಿ. ಗ್ರಾಂ.
ಬಿ 2 ,,	0.32	,,
ನಯಾಸಿನ್	1.2	,,

ಇತ್ತೀಚಿನ ಜಂಕ್ ಅಂಶಗಳ ಪ್ರಕಾರ ಪ್ರತಿನಿತ್ಯ ಪಂಚಾಮೃತಿಕ ಯೋಜನೆಯ ಆಡಿಯ ಭಾಗದಲ್ಲಿ ಶೇಂ ಕೋಟಿ ಮೊಟ್ಟೆಗಳು ಉತ್ಪಾದಿಸಲ್ಪಡುತ್ತಿವೆಯೆಂದು ಹೇಳಲಾಗಿದೆ. ಆಂದರೆ ಪ್ರತಿಯೊಬ್ಬನಿಗೂ ದೊರಕಬಹುದಾದ ಮೊಟ್ಟೆಗಳ ಸಂಖ್ಯೆ ವರ್ಷಕ್ಕೆ ಸರಾಸರಿ ೧೨ ಆದರೆ ನಮ್ಮ ಸ್ಥಿತಿ ಬೇರೆ ಇದೆ.

ಮೊಟ್ಟೆಗಳು ಕೆಡಲು ಕಾರಣ ಒಂದಲ್ಲ, ಹಲವಾರು.

೧. ಮೊಟ್ಟೆಗಳನ್ನಿಡುವ ಗೂಡುಗಳಲ್ಲಿ ಕೋಳಿಯ ನುಲ ಮೂತ್ರಗಳು ಶೇಖರವಾಗುತ್ತವೆ. ಆದಗಲ್ಲಿ ಸಾಂಕ್ರಾಮಿಕರೋಗದ ಅಣುಜೀವಿಗಳು ಇರುತ್ತವೆ. ಅವು ಮೊಟ್ಟೆ ಕೆಡಲು ಕಾರಣವಾಗುತ್ತವೆ.

೨. ಗೂಡುಗಳಿಂದ ಮೊಟ್ಟೆಗಳನ್ನು ಆಗಾಗ್ಗೆ ತೆಗೆಯುತ್ತಿರಬೇಕು. ಹಾಗಾಗದಿದ್ದರೆ ಮೊಟ್ಟೆಗಳಿಂದ ಹೊರ ಬರುವ ಇಂಗಾಲದ ಡೈ ಆಕ್ಸೈಡ್ ವತ್ತು ತೇವಾಂಶಗಳಿಂದ ಶಾಖ ಉತ್ಪತ್ತಿಯಾಗುವುದು. ಇದರಿಂದ ಅಣು ಜೀವಿಗಳ ಬೆಳವಣಿಗೆಗೆ ಹಿತಕರವಾದ ಶಾಖವು ಒದಗಿ ಮೊಟ್ಟೆಯು ಕೆಡಲು ಕಾರಣವಾಗುತ್ತದೆ. ಅಲ್ಲದೆ ಮೊಟ್ಟೆಗಳು ಒಂದಕ್ಕೊಂದು ತಾಗುವುದರಿಂದಲೂ ಮತ್ತು ಕೋಳಿಗಳು ಮೊಟ್ಟೆಗಳ ಮೇಲೆ ಬಾರಿ ಬಾರಿ ಬಂದು ಕುಳಿತುಕೊಳ್ಳುವುದರಿಂದಲೂ, ಒಂದಕ್ಕೊಂದು ಉಜ್ಜಿ ಮೊಟ್ಟೆಗಳು ಬಿರುಕುಬಿಡುವುವು. ಅನಂತರ ಸುಲಭವಾಗಿ ಬಹು ಬೇಗ ಅವು ಕೆಡಲಾರಂಭಿಸುವುವು.

೩. ಮೊಟ್ಟೆಗಳನ್ನು ಶೇಖರಿಸಿಟ್ಟಾಗ ಉಂಟಾಗುವ ಬಾತಾವರಣವು ಅವುಗಳು ಕೆಡಲು ಕಾರಣವಾಗುತ್ತದೆ. ಮೊಟ್ಟೆಯ ಚಿಪ್ಪಿನಲ್ಲಿ ಸುಮಾರು ೬೦೦೦ದಿಂದ ೧೦೦೦ ಸೂಕ್ಷ್ಮರಂಧ್ರಗಳಿರುತ್ತವೆ. ಇವುಗಳಿಂದ ನಿರಂತರವಾಗಿ ತೇವಾಂಶ ಮತ್ತು ಇಂಗಾಲದ ಡೈ ಆಕ್ಸೈಡ್ ಹೊರ ಬರುತ್ತಿರುತ್ತದೆ. ಇವು ಪ್ರಾಣಾಮವಾಗಿ ಶಾಖ ಮತ್ತು ಆರ್ದ್ರತೆ ಉಂಟಾಗುವುವು, ಇವುಗಳ ದಾಸ್ತಾನು ಅವಧಿ ಹೆಚ್ಚಿದಂತೆಲ್ಲಾ ಆ ವಾತಾವರಣದಲ್ಲಿ ಮೊಟ್ಟೆಗಳ ಗುಣವು ಕಡಿಮೆಯಾಗುತ್ತ ಹೋಗುವುದು. ಶಾಖ ಹೆಚ್ಚಾದಂತೆಲ್ಲಾ ಮೊಟ್ಟೆಗಳು ಬಹು ಬೇಗನೆ ಕೆಡುವುವು. ಎಲ್ಲಿ ಆರ್ದ್ರತೆ ಹೆಚ್ಚಾದರೆ ಬೂಷ್ಟು ಉಂಟಾಗುವ ಸಂಭವವುಂಟು. ಇವೆಲ್ಲದರಿಂದ ಮೊಟ್ಟೆಗಳು ಕೆಡುವುವು.

೪. ವಾಯುಮಂಡಲದ ಉಷ್ಣತೆಯು ವ್ಯತ್ಯಾಸವು ಮೊಟ್ಟೆಗಳ ಮೇಲೆ ಬೀಳುವುದು. ಆದ್ದರಿಂದಲೇ ಚಳಿಗಾಲಕ್ಕಿಂತ ಬೇಸಿಗೆಯಲ್ಲಿ ಮೊಟ್ಟೆಗಳು ಬೇಗ ಕೆಡುವುದು.

ಕೋಳಿಗಳು ಮೊಟ್ಟೆ ಹಾಕಿದಾಗಿನಿಂದಲೇ ನಾವು ಮೊಟ್ಟೆಗಳನ್ನು ಕಾಪಾಡಿಡಲು ಅತಿ ಎಚ್ಚರಿಕೆಯನ್ನು ವಹಿಸಬೇಕು. ಹಾಗಾದಾಗ ಮಾತ್ರ ಅವುಗಳನ್ನು ಬಹಳ ದಿವಸಗಳು ಕಾಪಾಡಿಡಬಹುದು. ಈ ಕಾರ್ಯಕ್ಕೆ ಈ ಸಲಹೆಗಳು ನಿಮಗೆ ನೆರವಾಗಬಹುದು.

1. ಕೋಳಿಯು ಮೊಟ್ಟೆ ಹಾಕುವ ಗೂಡನ್ನು ಯಾವಾಗಲೂ ಸ್ವಚ್ಛವಾಗಿಡಿ.

2. ಕೋಳಿಗಳ ಸಾಕಣೆಯ ಕೇಂದ್ರಗಳಲ್ಲಿ ಅಳಿಗಳಿಗೆ ನೀರು ಕುಡಿಯಲು ಒಂದು ಪಾತ್ರೆಯನ್ನಿಟ್ಟಿರುತ್ತಾರೆ. ಆದರೆ ಸುತ್ತಲೂ ನೀರು ಹರಡಿ, ಕೊಚ್ಚೆ ಆಗಿ, ಅಣುಜೀವಿಗಳ ಹಾವಳಿಯು ಹೆಚ್ಚಾಗದಂತೆ ಗಮನಕೊಡಿ. ಅದಕ್ಕಾಗಿ ಆ ಪ್ರದೇಶವನ್ನು ಕೊಚ್ಚೆಯಾಗದಂತೆ ಸ್ವಚ್ಛವಾಗಿಡಿ.

3. ಮೊಟ್ಟೆಗಳನ್ನು ಗೂಡಿನಿಂದ ಆದಷ್ಟು ಜಾಗ್ರತೆ ಹೊರ ತೆಗೆಯಿರಿ. ಇದರಿಂದ ಮೊಟ್ಟೆಗಳು ಬಿರುಕು ಬಿಡುವುದು ಕಡಿಮೆಯಾಗುವುದು.

4. ಮೊಟ್ಟೆಗಳನ್ನು ಶೇಕರಿಸುವುಕ್ಕೆ ಮೊದಲು ಬ್ಲೀಚಿಂಗ್ ಪುಡಿ ಹಾಕಿದ ನೀರಿನಲ್ಲಿ ತೊಳೆದು ಇಡಿ.

5. ಮೊಟ್ಟೆಗಳನ್ನು ಶೀತಾಗಾರಗಳಲ್ಲಿ ೩೧—೩೩° ಎಫ್. ಉಷ್ಣಾಂಶದಲ್ಲಿಡಿ. ಇದರಿಂದ ಅವುಗಳಿಂದು ಹೊರ ಬರುವ ಇಂಗಾಲದ ಡೈ ಆಕ್ಸೈಡ್ ಮತ್ತು ತೇವಾಂಶದ ಪ್ರಮಾಣವು ಕಡಿಮೆಯಾಗಿ, ಮೊಟ್ಟೆಗಳು ೮—೯ ತಿಂಗಳುಗಳು ಕಾಲ ಉಳಿಯುವವು.

6. ಸಾಗಣೆಯ ಸಮಯದಲ್ಲಿ ಸೂಕ್ತ ಪ್ಯಾಕೇಜಿಂಗ್ ವಿಧಾನವನ್ನು ಅನುಸರಿಸಿ.

ಆದರೆ ಶೀತಾಗಾರಗಳ ಸ್ಥಾಪನೆಗೆ ಸಾಕಷ್ಟು ವೆಚ್ಚ ತಗಲುವುದು, ಇದು ಸಣ್ಣ ಪುಟ್ಟ ಕೋಳಿ ಸಾಕಣೆ ಕೇಂದ್ರಗಳ ಪರ, ವ್ಯಾಪಾರಿಗಳ ಸಾಧ್ಯಕ್ಕೆ ನಿಲುಕುವುದಿಲ್ಲ. ಆದ್ದರಿಂದ ಇತ್ತೀಚೆಗೆ ಮೊಟ್ಟೆಗಳನ್ನು ಬಹಳ ದಿನಗಳು ಕಾಪಾಡಿಡುವ ಒಂದು ಸುಲಭ ವಿಧಾನವನ್ನು ಕಂಡು ಹಿಡಿದಿದ್ದಾರೆ. ಈ ವಿಧಾನದಬಳಕೆ ಸುಲಭ. ಇದಕ್ಕೆ ತಗಲುವ ಖರ್ಚು ಬಹಳ ಕಡಿಮೆ. ೧೦೦ ಮೊಟ್ಟೆಗಳಿಗೆ ಕೇವಲ ೨೦ ಪೈಸೆಗಳಷ್ಟು ಖರ್ಚಾಗುವುದು. ಗ್ರಾಮಾಂತರ ಪ್ರದೇಶಗಳಲ್ಲಿಯೂ ಈ ವಿಧಾನವನ್ನು ಬಳಸಬಹುದು. ಇದಕ್ಕೆ ಯಾವ ತಜ್ಞರ ನೆರವನ್ನೂ ಅಪೇಕ್ಷಿಸಬೇಕಾಗಿಲ್ಲ.

ಈ ವಿಧಾನದಲ್ಲಿ ನಾವು ಒಂದು ತೈಲ ದ್ರವ್ಯವನ್ನು ಬಳಸುತ್ತೇವೆ. ಇದರಲ್ಲಿ ಪೆಟ್ರೋಲ್ ತಯಾರಿಕೆಯಲ್ಲಿ ಬರುವ ಒಂದು ತರಹದ ಎಣ್ಣೆಯನ್ನು ಉಪಯೋಗಿಸಲಾಗಿದೆ. ಇದಕ್ಕೆ ಬೂಷ್ಟು ನಾಶಕ ಹಾಗೂ ಅಣುಜೀವಿಗಳ ಬೆಳವಣಿಗೆಯನ್ನು ತಡೆಯಬಲ್ಲ ಸೂಕ್ತ ರಾಸಾಯನಿಕ ಪದಾರ್ಥಗಳನ್ನು ಬೆರೆಸಲಾಗಿದೆ. ಈ ತೈಲ ಬೇಗನೆ ಮೂರುಕಟ್ಟೆಗೆ ಬರಲಿದೆ.

(ಆಹಾರ ವಿಜ್ಞಾನ)

ಅಮೃತ ಬಿಂದು

ಸಮುದ್ರ ಮುಳುಗಿಸಿರುವುದಕ್ಕಿಂತಲೂ ಹೆಚ್ಚು ಜನರನ್ನು ಸಾರಾಯಿಯುಳುಗಿಸಿದೆ.

ಂ ಂ ಂ ಂ

ತಪ್ಪು ಸೌಂದರ್ಯವನ್ನು ಸರಿಯೊಗಿ ಪ್ರತಿಬಿಂಬಿಸುವ ಕನ್ನಡಿ ಎಂದರೆ ತನ ಗಂಡನ ಕಣ್ಣುಗಳೇ.

ಂ ಂ ಂ ಂ

ಸಭ್ಯತೆಯ ಗಡಿ ದಾಟಿದ ಜುಗುಪ್ಸು ಮಾತು ಅಧಿಕ ಪ್ರಸಂಗವಾಗುತ್ತನೆ.

ಂ ಂ ಂ ಂ

ಒಳ್ಳೆಯವರದಡ್ಡರೆಂಬ ನಂಬಿಕೆ, ಸತ್ಯ ವೆಂಬುದರಲ್ಲಿರುವ ವಿಶ್ವಾಸವೇ ಹೆಂಗಸರ ತಪ್ಪಿಗೆ ಮೂಲ ಕಾರಣ.

ಂ ಂ ಂ ಂ

ಏನಾದರೊಂದನ್ನು ಸಾಧಿಸಿ ಸಮಾಜದಲ್ಲಿ ಏನಾದರೊಂದು ಹೆಸರು ಪಡೆಯಲು ಯಾವಪ ಕಾಲವೇ ಪದವಕಾಶ.

ಂ ಂ ಂ ಂ

ಯೌವನ ಕಾಲದ ವಿಚಾರಲೆತೆ ಮುಪ್ಪಿನಲ್ಲಿರದು, ಆದ್ದರಿಂದ ಯೌವನ ಕಾಲದ ಗುರಿಗಾಗಿ ಮುಪ್ಪನ್ನು ಸಮಸಬೇಕು.

ಂ ಂ ಂ ಂ

ಭೀತಿಯೆಂಬುದು ಯುದ್ಧ ಕ್ಷೇತ್ರದಂತೆ. ಅದು ಬೆಳೆಯಲು ನನ್ಮೊಗೆ ನಾವು ಸತತ ಯುದ್ಧವನ್ನೇ ಮಾಡಬೇಕು.

ಂ ಂ ಂ ಂ

ಗುಣವನ್ನು ಪ್ರೀತಿಸುವುದರಲ್ಲಿ ಧಾರಾಳತನ ಬೇಕು, ಸುಖವನ್ನು ಅಭಿಲಾಷಿಸುವುದರಲ್ಲಿ ನಿಯಂತ್ರಣ ಬೇಕು, ಜೀವನವನ್ನು ಎದುರಿಸುವುದರಲ್ಲಿ ಧೃತಿಬೇಕು.

ಂ ಂ ಂ ಂ

ಸ್ವಾತಂತ್ರ್ಯ ಜ್ವಾಲೆ ಬೇಗ ಕಡಿಮೆಯಾಗುತ್ತದೆ. ಭೀಕರ ಗಾಳಿ ಶೀಘ್ರ ಶಾಂತವಾಗುತ್ತದೆ. ತುಂತುರು ಮಳೆ ದೀರ್ಘ ಮುಂದುವರಿಯುತ್ತದೆ. ಆದರಂತೆ ಸಿಡಿದು ಬೀಳುವವ ಕುಸಿಯುತ್ತಾನೆ. ನಮಾಧಾನಿಗೆಲ್ಲುತ್ತಾನೆ.

ಂ ಂ ಂ

ಸಂಪತ್ತನ್ನು ಹೊಂದಿರುವುದರ ಪ್ರಯೋಜನ ಅದರ ಸದುಪಯೋಗದಲ್ಲಿದೆ

ಘಟೆನಾತ್ಮಕ ಪರಿಹಾರ

(ಪುಟ ೫ ರಿಂದ)

"ಮಾಸ್ಟ್ರೇಕೆ? ಬೆಲ್ಲ, ಬೆಂಡು, ಬೊಗೆ ಸೊಪ್ಪು ಇತ್ಯಾದಿಗಳೂ...."

"ಸಿಕ್ಕಿದ್ದವೋ?"

"ಅದಕ್ಕೆರುವ ಬಾಡಿಯೂ ಘಟನೆಯಲ್ಲಿಲ್ಲ..."

"ಏನು ದಾರಿ?"

"ಹೇಳ ತ್ತೇನೆ. ೩೨ ನಿಬಂಧನೆಯ ನ್ವಯ ಸುಪ್ರೀಂ ಕೋರ್ಟಿನಲ್ಲಿ 'ರಿಟ್' ದಾಖಲೆ ಮಾಡಬಹುದು. 226ನೇ ನಿಬಂಧನೆಯನ್ವಯ ಬೇ ಆ ದರೆ ನಮ್ಮ ಹೈಕೋರ್ಟಿನಲ್ಲಿ 'ರಿಟ್' ದ ಖಲು ಮಾಡಬಹುದು. ತ್ಯಾರ್ಯ ಸಾಧನೆ ಖಂಡಿತ—"

'ದಹಲಿಗೆ ಹೋಗಿ 'ರಿಟ್' ದಾಖಲು ಮಾಡಿ ವಾದಿಸಿ ಜಿಮಿಣ ಎಣ್ಣೆ ಮತ್ತಿತರ ಫಿಶ್ಯೋಪಯೋಗಿ ವಸ್ತುಗಳನ್ನು ಹೊರದುಪ್ಪದು ಸುಲಭವೆ?..... ಹೈಕೋರ್ಟೇ ಆದರೂ ಸುಲಭವಲ್ಲದಿರುವಾಗ!"

"ಅನು ಬೇರೆ ಪ್ರಶ್ನೆ."

(ವಿಶೇಷ ಸಂಚಿಕೆಗೆ ಬರೆದದ್ದು)

ಸುಸ್ಥಿತಿಸ್ಥ ಮತ್ತು ಉತ್ತಮವಾದ ಎಲ್ಲಾ ತರಹ ಬ್ಯಾಂಕಿಂಗ್ ವ್ಯವಹಾರಗಳಿಗೆ ಇಸ್ಸ 84 ಶಾಖೆಗಳಿಂದ ಹೆಚ್ಚಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಶೇಷಣಾತಿಗಳ ಮೇಲೆ 5% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

ಠಿ ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಫೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೨

ವಿಚಾರ ವೀಚಿ

ಪಕ್ಷಾಂತರ ಪರಿದಾಟ ಪ್ರಜಾಘಾತುಕ ಪ್ರಮಾದವೇ ?

ಬರೆದವರು : ಶ್ರೀ ಶಿವಶಂಕರ.

ಮಧ್ಯ ಪ್ರದೇಶದಲ್ಲಿ ಸುಮಾರು ಮೂರು ಡಜನು ವಿಧಾನ ಸಭಾ ಸದಸ್ಯರು ಕಾಂಗ್ರೆಸ್ಸಿನಿಂದ ಹೊರ ಬಂದುದರಿಂದ ಆ ಳಿದ್ದ ಶ್ರೀ ದ್ವಾರಕ ಪ್ರಸಾದ ಮಿಶ್ರರ ಕಾಂಗ್ರೆಸ್ಸ್ ಮಂತ್ರಿ ಮಂಡಲದ ಕಾಲು ಜಾರಿ ಹೋಯ್ತು. ಆಗ ಅವರನ್ನು ಮತದಾರರ ಮುಂದೆ ನಿಕ್ಷಸದಿದ್ದಲ್ಲಿ ತನ್ನ ಹೆಸರು ಮಿಶ್ರ ಅಲ್ಲವೆಂದು ಶ್ರೀ ದ್ವಾ. ಪ್ರ. ಮಿಶ್ರರು ಆರ್ಭಟಿಸಿದರು. ಆ ಸದಸ್ಯರುಗಳು ಮೊದಿದ ಅಪರಾಧವಾದರೂ ಏನು? ಅವರು ಕಾಂಗ್ರೆಸ್ಸಿನ ಅನುಮತಿ ಪಡೆದು ಚುನಾವಣಾಕಣಕ್ಕಿಳಿದಿದ್ದವರು, ಅವರುಗೆದ್ದಿದಾರೆ. ಅಂದರೆ ಆ ಸ್ಥಳದವರು ಕಾಂಗ್ರೆಸ್ಸಿಗೆ ಮತದಾನ ಮಾಡಿದ್ದಾರೆ. ಹಾಗಿರುವಾಗ ಸದಸ್ಯರು ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡುವಾಗ ವಿಧಾನ ಸಭೆಯ ಸ್ಥಾನಕ್ಕೆ ಳ್ಳು ರಾಜೀನಾಮೆ ಕೊಡಬೇಕೆಂಬುದು ಶ್ರೀ ದ್ವಾ. ಪ್ರ. ಮಿಶ್ರರ ವಾದ. ಈ ವಾದವನ್ನು ಹೊಡಿದವರು ಯಾರು? ಅಲ್ಲಿ ಆಗ ಮುಖ್ಯ ಮಂತ್ರಿಯಾಗಿದ್ದ ಶ್ರೀ ದ್ವಾ. ಪ್ರ. ಮಿಶ್ರ. ಮುಂದಿನಿಂದ ಹೋಗುವ ಹೋರಿಯನ್ನು ಕಂಡು ಹಿಂದಿನಿಂದ ಬರುತ್ತಿದ್ದ ಹೋರಿ ನಕ್ಕಿತಂತೆ. ಯೂಕೆಂದರೆ ಮುಂದಿನ ಹೋರಿ ಲಜ್ಜೆಗೆಟ್ಟು ಬತ್ತಲೆ ಹೋಗುತ್ತದೆಂದು. ಪಾಪ! ಆದರ ಸ್ಥಿತಿ ಆದಕ್ಕೆ ಗೊತ್ತಿಲ್ಲ! ಹಾಗೆ ಹಿಂದೆ ಪಲ್ಟಿ ಹೊಡೆದಿದ್ದ ಶ್ರೀ. ದ್ವಾ. ಪ್ರ. ಮಿಶ್ರರು ಈಗ ಇತರರನ್ನು ಮತದಾರರ ಮುಂದು ಗಡೆ ನಿಲ್ಲಿಸುವ ಮಾತು ತೆಗೆದಿದ್ದಾರೆ!

ಪಕ್ಷಾಂತರದ ಪರಿದಾಟ ಇಂದು ನಿನ್ನೆಯದಲ್ಲ. ವಿಧಾನ ಸಭೆ ಪರಿಷತ್ತು ದಾಗೂ ಸಂಸದಿನೊಳಗೂ ಹೊರಗೂ ಈ ಆಟ ನಡೆಯುತ್ತಾ ಇದೆ. ನಿನ್ನೆಯ ಹವಾಗುಣ ಇಂದಿರುವದಿಲ್ಲ. ಮೊನವರಲ್ಲಿ ನಿನ್ನೆಯ ಮನೋಗುಣ ಇಂದಿರುವದಿಲ್ಲ. ಅಭಿಪ್ರಾಯ ಬದಲಾದಂತೆ ಅವನು ಪಕ್ಷವನ್ನೂ ಬದಲಾಯಿಸುತ್ತ ಇರುತ್ತಾನೆ. ಪ್ರಬಲ ವ್ಯಕ್ತಿಗಳು ಬೇರೆ ಬೇರೆ ಪಕ್ಷಗಳನ್ನು ಕಟ್ಟುತ್ತಾ ಇರುತ್ತಾರೆ. ಕಾದಂಬರೀಕಾರರುಗಳು ಹೊಸ ಹೊಸ ಕಾದಂಬರೀ ಬರೆಯುವಂತೆ ಅಥವಾ ಹರಿದ ಹಳೆಯ ಅಂಗಿಯನ್ನು ಬಿಸಾಕಿ ಹೊಸ ಅಂಗಿಯನ್ನು ಕೊಳ್ಳುವಂತೆ ರಾಜಕೀಯ ಬಂಡವಾಳಶಾಹಿಗಳುಹೊಸ ಹೊಸ ಪಕ್ಷವನ್ನು ಕಟ್ಟುತ್ತಾ ಇರುತ್ತಾರೆ. ವಿಧಾನ ಮಂಡಲ ಹಾಗೂ ಸಂಸದಿನೊಳಗೆ ನಡೆಯುವ ಈ 'ರಾಜಕೀಯಪ್ರಗತಿ'ಗೆ ಮೂಗಿಳೆದಂತೆ ಹೊರಗಿನದಕ್ಕೆ ಅಷ್ಟು ಸ್ವರ ಎಬ್ಬಿಸಲು ಬರುವದಿಲ್ಲ. ಸಾವಿರದೊಂಬೈನೂರನಲ್ವತ್ತೇಳರ ಹಿಂದಿನ ವಿಷಯಗಳನ್ನು ಬಿಟ್ಟುಬಿಡುವ. ಅನಂತರ ಕಾಂಗ್ರೆಸ್ಸಿನಿಂದ ಕಾಲ್ತೆಗೆದ ಶ್ರೀ ಜೆ. ಬಿ. ಕೃಪಲಾನಿಯವರು ಕೃಷಿಕ ಮಜ್ದೂರ್ ಪ್ರಜಾಪಾರ್ಟಿಯನ್ನು ಕಟ್ಟಿದರು. ಅನಂತರ ಸೋಷ್ಯಲಿಸ್ಟ್ ಪಕ್ಷದೊಂದಿಗೆ ವಿಲೀನಗೊಳಿಸಿ ಪ್ರಜಾಸೋಷ್ಯಲಿಸ್ಟ್ ಪಾರ್ಟಿಯನ್ನುಂಟುಮಾಡಿದರು. ಅಷ್ಟಿಂದಲೂ ಆದಷ್ಟು ಪ್ರಗತಿ ಪಡೆದು ಪಕ್ಷಾತೀತರಾಗಿ ಬಿಟ್ಟಿದ್ದಾರೆ. ಹಿಂದೂ ಮಹಾಸಭೆಯಿಂದ ಹೊರಗೆ ಬಂದ ಡಾ ಕ್ಷರ್ ಶ್ಯಾಮಾ ಪ್ರಸಾದ ಮುಖರ್ಜಿಯವರು ಭಾರತೀಯ ಜನಸಂಘದ ಸ್ಥಾಪಕರಾದರು. ಕಾಂಗ್ರೆಸ್ಸಿನಿಂದ ಕಾಲ್ತೆಗೆದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ತಮ್ಮದೇ ಆದ ಸ್ವತಂತ್ರ ಪಾರ್ಟಿಯನ್ನು ಪ್ರಾರಂಭಿಸಿದರು. ಇನ್ನು ಚಿಕ್ಕ ಪುಟ್ಟ ಪ್ರಾದೇಶಿಕ ಪಕ್ಷಗಳು ಅದೆಷ್ಟೋ ಇವೆ. ಇವು ಹೊರಗಿನ ವಿಷಯ.

ವಿಧಾನ ಮಂಡಲ ಹಾಗೂ ಸಂಸದಿನೊಳಗೂ ಇದಕ್ಕೆ ಅನುಸಾರವಾಗಿ ಕೆಲ ಬದಲಾವಣೆಗಳು ನಡೆಯುತ್ತವೆ. ತಮ್ಮ ನೇತಾರಗಳು ಹೊಸಹೊಸ ನವೀನ ಪಕ್ಷಗಳನ್ನು ಪ್ರಾರಂಭಿಸಿದಂತೆ ಅಥವಾ ಪಕ್ಷೋಲ್ಲಂಘನೆ ನಡೆಸಿದಂತೆ ಅವರ ಹಿಂಬಾಲಕರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಅವರು ಮಾತ್ರವಲ್ಲ, ನೇತಾರಳ್ಳಿದ ಪಕ್ಷೇತರ ಸದಸ್ಯರುಗಳು ಕೂಡಾ ತಮ್ಮ ತಮ್ಮ ಅನುಕೂಲ— ಸಾಕಲ್ಯ ಮುಂತಾದವುಗಳಾನುಸಾರವಾಗಿ ಪಕ್ಷಾಂತರ ಕಾರ್ಯವನ್ನು ನಡೆಸುವದೂ ಉಂಟು. ಇತ್ತೀಚಿಗಿನ ರಾಜಕೀಯದಲ್ಲಿ ಇದೊಂದು ಆಟವಾಗಿ ಬಿಟ್ಟಿದೆ. ಪಕ್ಷಾಂತರ ನಡೆಸಿ ದೊಡನೆ ಆ ವಿಷಯವನ್ನು ಸಂಬಂಧಪಟ್ಟ ಸಭೆಯ ಅಧ್ಯಕ್ಷರು ಘೋಷಿಸಬೇಕಾಗಿರುತ್ತದೆ. ಪಾಪ! ಅವರ ಅವಸ್ಥೆಯೇ! ಬಿಳಿಗ್ಗೆ ಒಂದು ಪಕ್ಷದಲ್ಲಿದ್ದವರು ಮಧ್ಯಾಹ್ನ ಮತ್ತೊಂದಕ್ಕೆ, ಸಂಜೆ ಬೇರೊಂದಕ್ಕೆ ಹೋದಂತೆ ಸಂಬಂಧಪಟ್ಟ ಸಭಾಧ್ಯಕ್ಷರು ಆದನ್ನು ಸೂಚಿಸುತ್ತಾ ಇರುತ್ತಾರೆ. ಪಕ್ಷಾಂತರ ನಡೆಸಿ ನಡೆಸಿ ಕಾಲು ಸೋತು ಹೋಯಿತೆಂದು ಹೇಳುವ ಸದಸ್ಯರ, ಹಾಗನೇ ಆವರನ್ನು ಹುಡುಕಿಕೊಂಡು ಪಕ್ಷಗಳ ಕಾರ್ಯಾಲಯದಿಂದ ಕಾರ್ಯಾಲಯಕ್ಕೆ ಆಲೆದಾಡುತ್ತಿರುವ ಅವರ ಅರ್ಧಾಂಗಿಗಳ ವ್ಯಂಗ ಚಿತ್ರಗಳೂ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇದೊಂದು ಹಾಸ್ಯದ ವಿಷಯವೂ ಆಗಿ ಬಿಟ್ಟಿದೆ.

ಅದುದರಿಂದ ಅದಕ್ಕೊಂದು ಅಡ್ಡ ಹಾಕಬೇಕೆಂದು ಪ್ರಧಾನಿ ಇಂದಿರಾ ಗಾಂಧೀಜಿಯವರೂ ಹೇಳಲಾರಂಭಿಸಿರುವರು. ಈ ರೀತಿ ಪಕ್ಷೋಲ್ಲಂಘನೆ ಮಾಡುವವರನ್ನು ರಾಜಕೀಯ ಮೂರೀಚರೆಂದು ಮೂಗೆಳೆಯುವವರು ಹೆಚ್ಚಾಗಿ ತ್ಯಾಗಿನಲ್ಲಿ ನೇಲೆ ಹೋದ ತಟ್ಟೆಯಲ್ಲಿರುವವರು. ಆದೇ ರೀತಿ ಕೆಳಗೆ ಹೋದ ತಟ್ಟೆಯಲ್ಲಿರುವನವರು ಅವರನ್ನು ರಾಜಕೀಯ ವಿಭೀಷಣರೆಂದು ಕರೆಯುತ್ತಿದ್ದಾರೆ. ಅನ್ಯ ಪಕ್ಷಗಳವರು ಆವರ ಪಾಲಿಗೆ ರಾಮಣ ಪಡೆಯವರಿದ್ದಾರೆ. ಅದರಿಂದ ವಿಭೀಷಣ ಮತ್ತು ತಮ್ಮ ರಾವಣಪಕ್ಷಕ್ಕೆ ಬರುತ್ತಿದ್ದಾರೆ. ಇಷ್ಟೇ ಅಲ್ಲ. ಇದರಲ್ಲಿ ಇನ್ನೊಂದು ವಿಶೇಷವೂ ಇದೆ. ಅಡ್ಡ ದಾರಿ ಹಿಡಿದು ದೂರ ಹೋದ ತಮ್ಮನು ಹಿಂದಕ್ಕೆ ಬಂದಾಗ ಅವನಿಗಾಗಿ ದೊಡ್ಡ ಕುರಿಯನ್ನು ಕೊಯ್ದು ಔತಣವನ್ನೇರ್ಪಡಿಸಿದಂತೆ ರಾಜಕೀಯದಲ್ಲಿ ಕಪ್ಪಿ ಜೋಗಿ ಹಿಂದೆ ಬಂದವರಿಗೂ ಭಾರೀ ಸ್ವಾಗತವನ್ನೀಯಲಾಗುತ್ತಿದೆ. ಇದೆಲ್ಲಾ ಲಾಭಾನಷ್ಟದ ಕೆಲಸು—ಪಟ್ಟೆಗಳಿವೆ. ಇನ್ನೊಂದು ಕಂಡದ ಅಚಲ ಸದಸ್ಯರಿದ್ದಾರೆ. ಅವರ ಬಳಿಗೆ ಈ ರಾಜಕೀಯ ಶೂರ್ಪಾನಕೆಯವರು ಮನಸೆಳೆಯುವ ವಿಚಿತ್ರ-ವಿಚಿತ್ರ ಆಕರ್ಷಣೆಗಳಿಂದ ಸಾಗಿ, ತಮ್ಮ ಬೇಳೆ ಬೇಯಿಸಿಕೊಳ್ಳಲು ಸಮರ್ಥರಾಗದೆ ಮೂಗು ಕೊಯ್ಸಿಕೊಂಡು ಆರ್ಭಟಿಸುತ್ತ ಮರಳುವದೂ ಉಂಟು. ಇವರ ವಿಷಯ ಅದ್ಯಾರಿಗೂ ಈಗ ಬೇಡವಾಗಿದೆ. ಈಗ ಮತ್ತು ಬಂದಿರುವದು ಮೂರೀಚ—ವಿಭೀಷಣರ ವಿಷಯವಿದೆ. ಅದರಲ್ಲೂ ಮೂರೀಚನ ವೇಷ ಹಾಕುವವರು 'ಸಾಮರ್ಥ್ಯಶಾಲಿ'ಗಳಿರುವದರಿಂದ ವಾದ—ವಿವಾದಕ್ಕೆ ಬಂದಿರುವದು ವಿಭೀಷಣನ ವಿಷಯವೇ ಇದೆ.

ವಿಭೀಷಣನು ರಾವಣನ ಪಕ್ಷದವನು. ಅಂದರೆ ನವ್ಯ ರಾಜಕೀಯದ ಪ್ರಕಾರ ರಾವಣನ ಪಕ್ಷದ ಹೆಸರು ಹೇಳಿಕೊಂಡು ಚುನಾಯಿಸಲ್ಪಟ್ಟವನಿದ್ದಾನೆ. ಅವನ ಚಿಹ್ನೆ ಜೋಡೆಲುಬುಗಳ ಮೇಲೆ ಕಪಾಲ. ಇವನು ರಾಕ್ಷಸನ ಗುಣದವನಾದುದರಿಂದ ಎಲ್ಲಾ ರಕ್ಕಸರು ಅವನಿಗೆ ಮತದಾನ ಮಾಡಿದ್ದಾರೆ. ಅಲ್ಲದೆ ಅವರನ್ನು ಕಂಡು ಅಂಜುವವರೂ ಮತ ಹಾಕಿದ್ದಾರೆ. ವಿಭೀಷಣನ ಗುಣಗಳಿಗೆ ಮೂರುಹೋದವರೂ ಅವನಿಗೆ ಮತದಾನ ಮಾಡಿದ್ದಾರೆ. ಹೀಗೆ ಅವನು ಚುನಾಯಿಸಲ್ಪಟ್ಟಿದ್ದಾನೆ. ಈಗ ಅದ್ಯಾವದಕ್ಕೂ ತಿಲಾಂಜಲಿ ಕೊಡದೆ ಅವನು ನೇರವಾಗಿ ರಾವಣನ ಪಕ್ಷಕ್ಕೆ ಬರುತ್ತಾನೆ. ಅಲ್ಲಿ ತಿಲಾಂಜಲಿ ಕೊಡದ ಕಾರಣ ರಾವಣನ ಹೆಸರಿನ ಮೇಲೆ ಅವನು ಚುನಾವಣೆಗೆ ನಿಲ್ಲುವದಿಲ್ಲ. ಅವನು ಪಕ್ಷ ಬದಲಾಯಿಸಿದ್ದಾನೆ ವಿನಃ ಸ್ಥಾನತ್ಯಾಗ ಮಾಡಿಲ್ಲ. ವಿಭೀಷಣನು ಇತ್ತ ಬಂದೊಡನೆ ರಾವಣನ ಪಕ್ಷದವರು ರಾವಣನ ಪಕ್ಷವನ್ನು ನಾಶ ಮಾಡಿಬಿಟ್ಟು ವಿಭೀಷಣನಿಗೆ ಪಟ್ಟ ಕಟ್ಟಿ ಬಿಡುತ್ತಾರೆ. ಹರಿಯೂಣ, ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶಗಳಲ್ಲಿ ನಡೆದದ್ದು ಇದೇ ಆಟವಂತೆ.

ಈ ರೀತಿ ರಾಜಕೀಯಸ್ಥರು ತಮ್ಮ ತಮ್ಮ ಕಾರ್ಯ ಸಮರ್ಥನೆಗಾಗಿ ರಾಮಾಯಣವನ್ನೂ ಬ್ಯಾಬಲನ್ನೂ ಉದಾಹರಿಸುತ್ತಿದ್ದಾರೆ. ಅದು ಸರಿಯೇ, ತಪ್ಪೇ.... ವಾದ-ವಿವಾದ ಮುತ್ತಿ ಮಾಡೋಣ. ತಮಿಳು ನಾಡಿನಲ್ಲಿ 'ದೈವಿ ಪಿರವೈ'ಯೆಂಬ ಧಾರ್ಮಿಕ ಸಂಸ್ಥೆಯೊಂದಿದೆ. ಆ ಸಂಸ್ಥೆಯು ತಮಿಳ್ನಾಡು ಸರಕಾರಕ್ಕೂ, ಕೇಂದ್ರ ಸರಕಾರಕ್ಕೂ ಒಂದು ಪತ್ರವನ್ನು ಬರೆದಿರುತ್ತದೆ. ಅದರಲ್ಲಿರುವ ವಿಷಯ ಚಲಚಿತ್ರರಂಗಕ್ಕೆ ಸಂಬಂಧಿಸಿದ್ದು. ಚಲಚಿತ್ರ ನಿರ್ಮಾಪಕರು ಚಿತ್ರ ತೆಗೆಯುವ ಮುಂಚೆ ಅವರು ಆರಿಸಿಕೊಂಡಿರುವ ಪೌರಾಣಿಕ ಕಥೆಗಳು ಅಂಶವನ್ನು 'ದೈವಿ ಪಿರವೈ'ಯವರಿಗೆ ಕಳುಹಿಸಿ ಕೊಡಬೇಕು; ಆವರು ಕಥಾಭಾಗ ಸರಿಯಾಗಿದ್ದಲ್ಲಿ ಮಾತ್ರ ಅನುಮತಿ ಕೊಡುವರು, ಅಲ್ಲದೆ ಬದಲಾವಣೆಯ ಆವಶ್ಯಕತೆ ಇದ್ದಲ್ಲಿ ಸೂಕ್ತ ಮಾರ್ಗದರ್ಶನ ಮಾಡುವರು ತಪ್ಪೆಂದು ಕಂಡಲ್ಲಿ ಅನುಮತಿ ಕೊಡುವದಿಲ್ಲ. ಅದು ನಡೆಯುವ ಮಂತಹದ್ದೇ ಎಂಬುದು ಸಂದೇಹಾಸ್ಪದವೇ ಸರಿ. ರಾಜಕೀಯದಲ್ಲೂ ಇಂತಹ ಒಂದು ಸಂಸ್ಥೆಯಿದ್ದಲ್ಲಿ ರಾಜಕೀಯಸ್ಥರು ಪೌರಾಣಿಕ ಕಥೆಗಳನ್ನು ಉದಾಹರಿಸುವ ಮುಂಚೆ ತಮ್ಮ ಅನುಮತಿ ಪಡೆದುಕೊಳ್ಳಬೇಕೆಂದು ಹೇಳಿದಲ್ಲಿ ಈ ರೀತಿ ಯಾರೂ ಉದಾಹರಿಸಲಾರರು ಇರಲಿ.

ಈಗ ವಿಭೀಷಣ ರಾಮನ ಪಕ್ಷಕ್ಕೆ ಸೇರಿದುದರಿಂದ ಅವನು ಮೊದಲು ಅವನ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ಅನಂತರ ಸ್ಥಾನ ಬೇಕಾಗಿದ್ದಲ್ಲಿ ರಾಮನ ಪಕ್ಷದ ಹೆಸರಿನ ಮೇಲೆ ಚುನಾವಣೆಗೆ ನಿಲ್ಲಬೇಕು. ಇದು ಕಳೆದುಕೊಂಡವರ ಅಥವಾ ರಾವಣನ ಪಕ್ಷದವರ ವಾದ. ಇದೇ ಕೆ ಹೀಗೆನ್ನುವ ಪ್ರಶ್ನೆ ಆಗ ಬರುತ್ತದೆ. ವಿಭೀಷಣನಿಗೆ ವಿಶಿಷ್ಟ ಸ್ಥಾನವೇನೂ ಇರುವದಿಲ್ಲ. ಅವನ ಗೆಲುವಿಗೆ ರಾವಣನ ಹೆಸರೇ ಕಾರಣವೆಂಬುದು ಅವರ ಉತ್ತರ. ಇದೆಷ್ಟರ ಮಟ್ಟಿಗೆ ನಿಜ? ಕಾಂಗ್ರೆಸ್ಸಿನ ಅಧ್ಯಕ್ಷ ತಿರುಕಾಮರಾಜ, ಖಜಾಂಚಿ ಶ್ರೀ ಆಶಲ್ಯಘೋಷ ಅಜಯ ಹೊಂದಿರುವರು. ಈ ವಾದದ ದೃಷ್ಟಿಯಿಂದ ನೋಡುವಾಗ ಈ ಅಹಿಂರಾವಣ—ಮಹಿರಾವಣರ ಸೋಲೆಂದರೆ ಇಡೀ ಪಕ್ಷದ ಸೋಲೇ ಇದೆ. ಇದು ವೈಯಕ್ತಿಕ ಸೋಲಲ್ಲ. ಪಕ್ಷದ ಅಧ್ಯಕ್ಷರ ಅಪಜಯವಿದೆ. ಹಾಗಿರುವಾಗ ಕಾಂಗ್ರೆಸ್ಸು ಖಾಲಿಯಾಯ್ತೆನ್ನುವದು ಸರಿಯೇ? ಬಹುಮತ ಪಡೆದಿಲ್ಲವಾದರೂ ಇತರ ಪಕ್ಷಗಳಿಗಿಂತ ಹೆಚ್ಚು ಮತಗಳನ್ನು ಪಡೆದಿರುತ್ತದೆ. ಅಲ್ಲದೆ ತಿರುಕಾಮರಾಜರ ಕಾಂಗ್ರೆಸ್ಸ್ ಅಲ್ಪಕೆಯ ಅಂಕುಶವನ್ನು ಹಿಡಿದುಕೊಂಡಿದ್ದ ಪಕ್ಷ, ಹಳೆಯ ಪಕ್ಷ, ಅಖಿಲ ಭಾರತೀಯ ಪಕ್ಷ, ಗತ ಮಹಾನ್ ವ್ಯಕ್ತಿಗಳ ಹೆಸರಿನ ಬಂಡವಾಳವಿರುವ ಪಕ್ಷವಿದೆ. ತಿರುಕಾಮರಾಜರೋ ಹಿಂದೆ ತಮಿಳುನಾಡಿನ ಮುಖ್ಯ ಮಂತ್ರಿಯಾಗಿದ್ದವರು, ಮತ್ತೆ, ಅಂತಹಾ ಭಾರೀ ಪಕ್ಷದ ಅಧ್ಯಕ್ಷರು. ಆವರೆದುರಿಗೆ ನಿಂತಿದ್ದವರು ಯಾವೊಂದು ಪಕ್ಷದ ಸ್ಪಷ್ಟ ಒಲವನ್ನು ಪಡೆದುಕೊಂಡಿರದ ರಾಜಕೀಯ ಹುಳು. ಹಾಗಿದ್ದ ಧಾರಿಕುಳ ತಿರುಳಾಮರಾಜರಿಗೆ ಜನತೆ ತಿರುನಾಮ ಹಾಕಿ ಬಿಟ್ಟಿತು. ಇದೇಕೆ ಹೀಗಾಯ್ತು? ಜನತೆ ಪಕ್ಷವನ್ನು ನೋಡಿ ಮತದಾನ ಮಾಡುತ್ತಿದೆಯೇ? ಅದು ನಿಜವಾಗಲ್ಲಿ ಕಾಂಗ್ರೆಸ್ಸಿಗಿಂತಲೂ ದ್ರಾವಿಡ ಮುನ್ನೇಟ್ರ ಕಳ್ಳಗಂ ಒಳ್ಳೆಯ ಪಕ್ಷವೆಂದಂತಾಯಿತು. ಹಾಗಿರುವಾಗ 'ಕೆಟ್ಟ ಕಾಂಗ್ರೆಸ್ಸ್' ನಿಂದ ಕಾಲ್ತೆಗೆಯುವದು ಬುದ್ಧಿವಂತಿಕೆ

ಲಕ್ಷಣವಿದೆ. ಆ ರೀತಿ ಕಾಲ್ತೆಗೆದುಬಿಡುತ್ತಿರುವವರಿಗೆ ಅಡ್ಡ ಕಾಲಿಡುವದು ಅದ್ಯಾವ ನ್ಯಾಯ? ವಾಸ್ತವ್ಯ ಪರಿಸ್ಥಿತಿ ಇಂದು ಹಾಗಿರುವದಿಲ್ಲ. ಇಂದು ಪಕ್ಷಗಳನ್ನು ತೂಗಿ ನೋಡುವ ಹವ್ಯಾಸವೇ ಇಲ್ಲದೆಂದಲ್ಲಿ ತನ್ನವಾಗಲಿಕ್ಕಿಲ್ಲ. ಪಕ್ಷಗಳನ್ನು ತೂಗಿ ನೋಡುವದೂ ಇಂದು ನಡೆಯದ ವಿಷಯವಿದೆ. ಅವುಗಳ ಘೋಷಣೆಗೂ ಕಾರ್ಯಾಚರಣೆಗೂ ಏನಾದರೂ ಸಂಬಂಧ ಇದೆಯೇ? ಚುನಾವಣಾ ಘೋಷಣೆ ಆದುದೇವಲ ಚುನಾವಣೆಗು ಸಮಯಕ್ಕೆ ಮಾತ್ರವಂತೆ! ಅನಂತರ ಅದರಂತೆ ನಡೆದುಕೊಳ್ಳಬೇಕಾಗಿಲ್ಲವಂತೆ! ಹಾಗೆಯೇ ಆಗಲಿ. ಆಯಾಯ ಪಕ್ಷಗಳು ನಡೆದುಕೊಂಡಿರುವ ರೀತಿಯಾದರೂ ಜನತೆಗೆ ಗೊತ್ತಲ್ಲ? ಜೈನೀ-ಪಾರ್ಕ್ ಆಕ್ರಮಣದ ಸಮಯ ಗಡಿಪ್ರದೇಶದ ಕಾಂಗ್ರೆಸ್ಸಿ ಖದೀಮನು ಎಲ್ಲರಿಗಿಂತಲೂ ಮುಂಚೆಚೆವಾಗಿ ಕಾಲೆಳೆದುಕೊಂಡು ಬಂದಿದ್ದರು. ಅಧಿಕಾರದಲ್ಲಿರುವ ಕಾಂಗ್ರೆಸ್ಸು ಆಕ್ರಮಣಗಾರರನ್ನು ತಡೆದು ಹಿಂದಕ್ಕಟ್ಟಲು ಬೇಕಾಗುವ ಉಪಕರಣಗಳನ್ನು ನಮ್ಮ ವೀರ ಪಡೆಗೆ ಒದಗಿಸುವ ಬದಲು ಪ್ರಯೋಜನಕ್ಕೆ ಬಾರದ ವಸ್ತುಗಳನ್ನು ಒದಗಿಸಿರುತ್ತದೆ. ಆಕ್ರಮಣದ ಸುಳುವನ್ನು ಕಂಡುಹಿಡಿಯಲಿಕ್ಕಾಗಿ ಗುಪ್ತಚಾರರನ್ನು ಪಯೋಗಿಸಿಕೊಳ್ಳದೆ ತಮಗೆ ಹಿಡಿಸದವರ ಹಿಂದುಗಡೆ ತಿರುಗಾಡುತ್ತಿರಲು ಉಪಯೋಗಿಸಿಕೊಂಡಿತ್ತು. ಇನ್ನು ದೇಶ ರಂಡ ಸುಖ-ಸಮೃದ್ಧಿಯೂ ಅಸ್ಪರಲ್ಲೇ ಇದೆ. ಹಾಗಿದ್ದೂ ಕಾಂಗ್ರೆಸ್ಸಿಗೆ ಹೇಗೆ ಹೆಚ್ಚು ಮತಗಳು ಬಿದ್ದುವು? ಆಕ್ರಮಣಗಾರರಿಗೆ ಅನುಕೂಲ ಮಾಡಿಕೊಟ್ಟಿದ್ದ ಕಮ್ಯೂನಿಸ್ಟ್ ಪಾರ್ಟಿ ಹಾಗೂ ಮುಸ್ಲಿಂ ಲೀಗಿಗೆ ಹೇಗೆ ಮತಗಳು ಸಿಕ್ಕಿದುವು? ದೇಶದ ವಿಭಜನೆಯ ಕೂಗೆಬ್ಬಿಸುತ್ತಿರುವ ದ್ರಾವಿಡ ಮುನ್ನೇಟ್ರ ಕಳ್ಗಗಮಿಗೆ ಮದರಾಸಿನಲ್ಲಿ ಭಾರೀ ಮತಗಳು ಸಿಕ್ಕಿದ್ದು, ಐಕ್ಯತೆಯ ಘೋಷಣೆ ಹಾಕುತ್ತಿರುವ ಭಾರತೀಯ ಜನ ಸಂಘಕ್ಕೇ ನೂರು ಸಿಕ್ಕಿಲ್ಲ! ಉತ್ತರಪ್ರದೇಶ, ಮಧ್ಯಪ್ರದೇಶ ಮುಂತಾದೆಡೆಗಳಲ್ಲೇ ಅಧಿಕಾರದ ಭಾಷೆಯನ್ನಾಗಿ ಹಿಂದೀ ತರಲೇ ಬೇಕೆನ್ನುವ ಭಾರತೀಯ ಜನ ಸಂಘಕ್ಕೆ ಭಾರೀ ಮತಗಳು ಬಿದ್ದಿಲ್ಲ. ಇಪ್ಪತ್ತು ವರ್ಷಗಳಿಂದಲೂ ಅದಕ್ಕಾಗಿ ಏನೂ ಮಾಡದ ಕಾಂಗ್ರೆಸ್ಸಿಗೆ ಮತಗಳು ಬಿದ್ದಿವೆ! ಇದರಿಂದ ಪಕ್ಷವನ್ನು ಕಂಡೇ ಮತದಾನ ನಡೆಯುತ್ತದೆಂಬುದು ಸರಿಯಲ್ಲವೆಂದೇ ಹೇಳಬೇಕಾಗುತ್ತದೆ. ಇದು ಮಾತ್ರವಲ್ಲ. ಯಾವ ಪಕ್ಷದ ಅನುಮತಿ ಮೇರೆಗೂ ವಿಂತು ಜಯಗಳಿಸುವ ವ್ಯಕ್ತಿಗಳೂ ಇಲ್ಲವೇನು? ಇನೇ ರೀತಿ ವ್ಯಕ್ತಿಗಳನ್ನು ಕಂಡೇ ಮತದಾನ ಮಾಡುತ್ತಾರೆಂಬುದೂ ಸತ್ಯದ ಸಮೀಪಕ್ಕೆ ಬಾರದ ಬದಲೂ ಇದೆ. ಅಂತೂ ಪಕ್ಷದ ನಾಮಪಟ್ಟಿಯ ಮೇಲೆಯೇ ಅಭ್ಯರ್ಥಿಗಳಿಗೆ ಮತದಾತರಿಗೆ ಪ್ರೋತ್ಸಾಹಿಸುವದಿಲ್ಲವೆಂಬುದು ಸ್ಪಷ್ಟವೇ ಸರಿ. ಅಂತಹ ಕಾಲ ಒಂದು ಹಿಂದೆ ಇದ್ದಿರ ಬಹುದು. ಕಾಂಗ್ರೆಸ್ಸೆಂದು ಕತ್ತಿಯ ಕುತ್ತಿಗೆಗೆ ನಾನು ಪಟ್ಟಿಯನ್ನು ಕಟ್ಟಿ ಚುನಾವಣೆಗೆ ನಿಲ್ಲಿಸಿದರೆ ಖಂಡಿತವಾಗಿ ಅವೇ ಗೆಲ್ಲುತ್ತವೆಂಬ ದೃಢ ವಿಶ್ವಾಸ ಇದ್ದ ಕಾಲ ಒಂದು ಇದ್ದಿರಬಹುದು. ಅದು ಬ್ರಿಟಿಷರನ್ನು ಓಡಿಸುವ ಸುಂಟಿ.

ಈಗ ಕಾಲ ಬದಲಾಗಿದೆ. ಇಂದು ಕತ್ತೆಯ (ಅಲ್ಲ.ಹೋಗಲಿ) ಕುತ್ತಿಗೆಗೆ ಕಾಂಗ್ರೆಸ್ಸಿನವೆಂದು ಪಟ್ಟಿ ಕಟ್ಟುವ ಬದಲು ಕಾಂಗ್ರೆಸ್ಸಿಗರ ಕುತ್ತಿಗೆಗೆ ಕತ್ತೆಯೆಂಬ ನಾಮಪಟ್ಟಿಯನ್ನು ಕಟ್ಟಿ ಚುನಾವಣೆಗೆ ನಿಲ್ಲಿಸುವಂತಿದೆ. ಈ ಎರಡು ಹೇಸರುಗಳನ್ನು ಸಮಾನ ದೃಷ್ಟಿಯಿಂದಲೇ ಇಂದು ಜನತೆ ಕಾಣಲಾರಂಭಿಸಿರುತ್ತದೆ. ಹಾಗಿರುವಾಗ ಒಂದು ಪಕ್ಷದ ಹೆಸರಿನ ಮೇಲೆ ಚುನಾವಣೆಯಲ್ಲಿ ಗೆದ್ದ ಬಂದ ಸದಸ್ಯ ಆ ಮೇಲೆ ಆ ಪಕ್ಷಕ್ಕೆ ರಾಜಿನಾಮೆ ಕೊಡುವಾಗ ಸ್ಥಾನಕ್ಕೂ ರಾಜಿನಾಮೆ ಕೊಡಬೇಕೆನ್ನುವದು ಅಷ್ಟು ಸಮಂಜಸವಾಗಲಾರದು.

ಅಷ್ಟು ಮಾತ್ರವಲ್ಲ ನಿಜವಾಗಿ ಆ ಸದಸ್ಯನ ಮೇಲೆ ಪಕ್ಷಕ್ಕೆ ಏನು ಹತೋಟಿ ಇದೆ? ಸಮರ್ಥನನ್ನು ಅರಿಸಿ, ತನ್ನ ಖರ್ಚಿನಿಂದ ಅವನನ್ನು ಚುನಾವಣಾ ರಂಗದಲ್ಲಿ ನಿಲ್ಲಿಸುವ ಪಕ್ಷ ಯಾವುದಾದರೂ ಇದೆಯೇ? ಕಾಂಗ್ರೆಸ್ಸು, ಕಮ್ಯೂನಿಸ್ಟ್ ಹಾಗೂ ಸ್ವತಂತ್ರ ಪಕ್ಷಗಳು ತಮ್ಮ ಅಭ್ಯರ್ಥಿಗಳಿಗಾಗಿ ಹಣವನ್ನು ನೀರಿನಂತೆ ಸುರಿಯಬಹುದು. ಆದರೆ ಕೆಲವು ಬಡ ಪಕ್ಷಗಳ ಸ್ಥಿತಿ ಹಾಗಿರುವದಿಲ್ಲ. ಹಣವನ್ನು ಉಮೇದುವಾರನೇ ಕಟ್ಟಬೇಕು, ಖರ್ಚನ್ನೂ ನೋಡಿಕೊಳ್ಳಬೇಕು. ಅಲ್ಲದೆ, ತನ್ನ ಪರವಾಗಿ ಪ್ರಚಾರಕ್ಕೆ ಬರುವ ತನ್ನ ಪಕ್ಷದ ಪ್ರಮುಖರ ಪ್ರಯಾಣದ ಖರ್ಚಿನ್ನೂ ನೋಡಿಕೊಳ್ಳಲಿಕ್ಕಾಗಿ ಪಕ್ಷಕ್ಕೂ ಹಣ ಕೊಡಬೇಕು. ತಾನು ನಿಧಿತೀರ್ಮಾನಿಸಿದಲ್ಲಿ ಅದರಿಂದಲೂ ಪಕ್ಷಕ್ಕೆ ಕೊಡಬೇಕು. ಇಷ್ಟೀ ಹೆಗೆ ಕಾಂಗ್ರೆಸ್ಸಿಗೂ [illegible] ಅಭ್ಯಾಸ ಅಂಟುತ್ತಿದೆ. ಆದರೆ ಅಲ್ಲಿರುವ ನ್ಯೂನ್ಯತೆಯೆಂದರೆ ಪಕ್ಷಕ್ಕೆ ಉಮೇದುವಾರನು ಸಲ್ಲಿಸಿದ ಹಣಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಪಕ್ಷ ಅವನಿಗೆ ಖರ್ಚು ಮಾಡುತ್ತದೆ. ಕಮ್ಯೂನಿಸ್ಟ್ ಪಕ್ಷಗಳಲ್ಲಂತೂ ಅರಿಸಿಬಂದ ಸದಸ್ಯನ ಭತ್ಯ ಇತ್ಯಾದಿ ಹಣ ಪಕ್ಷಕ್ಕೆನೇ ಹೋಗುತ್ತದೆ. ಈ ದೃಷ್ಟಿಯಿಂದ ನೋಡುವಾಗ ಪಕ್ಷಕ್ಕೆ ಸದಸ್ಯರ ಮೇಲೆ ಹತೋಟಿ ಇರುವದಿಲ್ಲ. ಅದರ ಬದಲು ಸದಸ್ಯರು ಪಕ್ಷದ ಮೇಲೆ ನಿಷ್ಠೆಯಿಂದ ಇದ್ದಾರೆ, ಅಷ್ಟೆ. ಆ ನಿಷ್ಠೆಗೆ ಅದ್ಯಾವ ಕಾರಣದಿಂದಲಾದರೂ ಭಂಗ ಬಂದಾಗ ಅವನದನ್ನು ಬಿಟ್ಟು ಹೊರಟು ಹೋಗುತ್ತಾನೆ. ಆಗ ಆ ಪಕ್ಷವು ಸ್ಥಾನಕ್ಕೂ ರಾಜಿನಾಮೆ ಕೇಡೆಂದು ಕೇಳುವದರಲ್ಲಿ ಯಾವ ನ್ಯಾಯವಿದೆ? ಪಕ್ಷದ ಬಲಜ (ಧನ-ಜನ—ಇತ್ಯಾದಿ)ಮೇಲೆ ಅವನು ಆರಿಸಿ ಬಂದಿದ್ದಲ್ಲಿ ಆ ವಿಷಯ ಬೇರೆ. ಸ್ವ—ಬಲದಿಂದ ಬಂದವರಿಗೆ ಈ ಹತೋಟಿಯು ಹದ್ದು ಇರಲು ಸಾಧ್ಯ ಇರುವದಿಲ್ಲ. ವಿಶ್ವಾಸ— ನಂಬಿಕೆಯ ಮೇಲೆ ಆ ನಾಡಿ ಓಡುತ್ತಿರಬೇಕು.

ರಾಜಿನಾಮೆಯ ಸಿದ್ಧಾಂತ ಪಕ್ಷೇತರರನ್ನೂ ಕಾಡಬೇಕು. ಅದ್ಯಾವ ಪಕ್ಷದ ಹಂಗು, ಲಗಾಮಿಲ್ಲದೆ ನಿರ್ದಾಕ್ಷಿಣ್ಯವಾಗಿ, ನಿರ್ಭೀತಿಯಿಂದ ತನ್ನ ಹಿತದ ಪ್ರಶ್ನೆಗಳನ್ನೆತ್ತಿ ವರಿಂಬ ಧೈರ್ಯದ ಮೇಲೆ ಜನತೆ ಅವರಿಗೆ ಮತದಾನ ಮಾಡಿರುತ್ತದೆ. ಅಂತಹವರು ಅದ್ಯಾವ ಪಕ್ಷಕ್ಕಾದರೂ ಸೇರುವದಿದ್ದಲ್ಲಿ ಸ್ಥಾನಕ್ಕೆ ರಾಜಿನಾಮೆ ಕೊಡಬೇಕು.

ಏನೇ ಇರಲಿ. ಶ್ರೀ ಶಾಮನ್ನಯ್ಯನಿಗೆ ಪಕ್ಷಗಳ ಸಂದಾಟನೇತಕ್ಕೆ? ಅದ್ಯಾವ ಪಕ್ಷವಾದರೂ ಏನು? ಅದು ದೇಶಪ್ರೇಮಿ ಪಕ್ಷ, ವಿಚ್ಛೇದನಾಕಾರೀ ಪಕ್ಷ, ದುರ್ವಿನಿಯೋಗ ನಡೆಸುವವರ ಪಕ್ಷ ಇರದಿದ್ದಲ್ಲಿ ಸರಿ. ನಮ್ಮ ದೇಶದಲ್ಲಿ ಭಾರತೀಯತೆಯು ಪಂಚಾಂಗದಿರುವ ಅದ್ಯಾವ ಪಕ್ಷನೇ ಇರಲಿ. ಅದು ನಮ್ಮ ಪಕ್ಷವಿದೆ. ಅದುದರಿಂದ ಪಕ್ಷ ಭೇಧ ಶ್ರೀ ಶಾಮನ್ನಯ್ಯನಿಗಿರುವದಿಲ್ಲ. ಈ ಭೇಧ ಭಾವನೆ ಇರುವ ಅಧಿಕಾರದ ಅಂತಸ್ತಿನಲ್ಲಿ ಅಸೀನರಾಗಿರುವವರಿಗೆ ಹಾಗೂ ಅದಕ್ಕಾಗಿಯೇ ಸಂಚು ನಡೆಸುತ್ತಿರುವವರಿಗೆ ಮಾತ್ರ. ಅಂತಹ ಅವರಂಗ ಜೇಬರು ಮಾತ್ರ ತಮ್ಮ ಪಕ್ಷಕ್ಕೆ ಸೇರಿದಲ್ಲಿ ಮಾತ್ರ ಮಂತ್ರಿ, ರಾಜ್ಯಪಾಲ, ರಾಷ್ಟ್ರಾಧ್ಯಕ್ಷ, ರಾಯಭಾರಿ ಮುಂತಾದ ಪದವಿಗಳನ್ನು ಕೊಡುತ್ತೇವೆಂಬ ಆಶೆ ಹುಟ್ಟಿಸುತ್ತಾರೆ. ಅದೇ ರೀತಿ, ತಮ್ಮ ಪಕ್ಷಕ್ಕೆ ಸೇರದ ಆ ಗುರು ಗೋವಿಂದ ಸಿಂಘರ ಮುಕ್ಕಳನ್ನು ಜೀವಂತ ಹುಗಿಸಿ ಬಿಡುತ್ತಾರೆ. ಇದೇ ಇಂದಿನ ರಾಜಕೀಯ ಗೊಂದಲಗಳಿಗೆ ಕಾರಣ ಇದೆ. ಏಕತೆಯ ಅನುಭವ ಆದಲ್ಲಿ ಹೊಡೆದಾಟಕ್ಕೆ ಎಡೆಯೇ ಇರುವದಿಲ್ಲ.

ಕಷ್ಟ ಬರುವದು ಮಂತ್ರಿ ಮಂಡಲರ ಚನೆಯಲ್ಲಿ. ಇತರ ಪಕ್ಷದ ಸದಸ್ಯರೂ ಭಾರತೀಯರೇ ತಾನೇ? ಈ ವಿಷಯವನ್ನು ಮರೆತು ಬಿಟ್ಟು, ಒಂದೇ ಪಕ್ಷದವರೆಂದರೆ ಒಂದೇ ರಾಷ್ಟ್ರದವರೆಂಬಂತೆ ಇಂದು ನೋಡಿಕೊಳ್ಳಲಾಗುತ್ತಿದೆ. ಆದುದರಿಂದಲೇ ಶ್ರೀ ತ್ರಿಗುಣಸೇನ್, ಶ್ರೀ ಭಾಗ್ವಾ ಮುಂತಾದವರು ಆಳನವನ್ನು ತಲಪಿ ಡೊಡನೆ ಪಕ್ಷದ ವ್ಯಾಬಲ್ಯಕ್ಕೊಳಗಾಗಿ ಬೇಕಾಗಿ ಬಂದಿರುತ್ತದೆ. ಮಂತ್ರಿ ಮುಂದಲ ರಚನೆಯಂತೆಯೇ ಆದಕ್ಕೆ ಕೈ ಎತ್ತುವವರ ಸಂಖ್ಯೆಯೂ ಇದೆ. ಇಲ್ಲೂ ಹಾಗೆಯೇ. ಅನ್ಯ ಪಕ್ಷಗಳವರ ವಿಷಯದ ವಿಜಯವೆಂದರೆ ಅಧಿಕಾರ ಪಕ್ಷದ ಸೋಲೆಂಬಂತೆ ಇಂದು ನಡೆದುಕೊಳ್ಳಲಾಗುತ್ತಿದೆ. ಇದುದರಿಂದ ಕೈ ಎತ್ತುವವರು ತಮ್ಮ ಪಕ್ಷದವರೇ ಇರುವದರಿಂದ ಅವರು ಹೊರಗೆ ಹೋದಾಗ ರಾಜಿನಾಮೆಯ ಬೆದರಿಕೆಯನ್ನು ಹಾಕಲಾಗುತ್ತಿದೆ. ಬಡವ, ಇಂದು ಚುನಾವಣೆಗೆ ನಿಲ್ಲಲು ಸಾಧ್ಯ ಇದೆಯೇ? ಅದರಲ್ಲೂ ಅಸ್ಪಿಸಪ್ಪಿ ಒಮ್ಮೆ ಪ್ರವೇಶಿಸಿದವ ಮತ್ತೆ ಹೊರಬಂದು ಪ್ರವೇಶಕ್ಕೆ ಪ್ರಯತ್ನಿಸುವದೆಂದರೆ ಕೈಲಾಗದ ವಿಷಯದಂತೆಯೇ ಕರಿ.ಬದ ದರಿಂದ ಅವನು ಹೆದರಿರುವ್ಯನಿಬೇಕಾಗುತ್ತದೆ.

ಶ್ರೀಮತಿ ಇಂದಿರಾ ಗಾಂಧೀಜೀಯವರು ತಲೆ ಕೆದರಿಕೊಳ್ಳುವ ರೀತಿಯಲ್ಲಿ ಪಕ್ಷಾಂತರ ಪರಿದಾಟ ಪ್ರಜಾಘಾತುಕ ಪ್ರಮಾದವೇನೂ ಇರುವದಿಲ್ಲ. ಆದರೆ ಇಂತಹ ಪಕ್ಷಾಂತರಿಗಳನ್ನು ನಂಬುವದು ಹೇಗೆನ್ನುವ ಪ್ರಶ್ನೆಗೆ ಉತ್ತರ ಕೊಡುವದು ಕಷ್ಟ. ವದರಾಸಿನಲ್ಲಿ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ಮುಖ್ಯ ವಂಶ್ರಿಯಾಗಿದ್ದಾಗ ಹಿಂದಿ ಹೇರುಬೇಕೆಂದು ಏರ್ಪಾಡು ಮಾಡಿದ್ದರು. ಅವರು ಸ್ವತಂತ್ರ ಪಾರ್ಟಿಯನ್ನು ಕಟ್ಟಿದ ಮೇಲೆ ಹಿಂದೀ— ಹಿಂಜರಿ, ಇಂಗ್ಲಿಷ್-ಇರಲಿಯೆನ್ನು

(ಬಂಧತ್ತನೇ ಪುಟ ನೋಡಿರಿ)

ಎಲ್ಲಿಹುದು ಶಾಂತಿ ?

— ೧ —

ಎಲ್ಲಿ ಹುಡುಕಿದರಿನ್ನಿಗೆ ಸಿಗಲಿಲ್ಲ ಶಾಂತಿ
ಎಲ್ಲೆಲ್ಲೂ ನೋಡಿದರು ನಡೆಯುತ್ತಿದೆ ಆ್ಯಾಂತಿ!
ಶಾಂತಿಯನು ಹುಡುಕುತ್ತ ಊರೂರು ತಿರುಗಿದೆನು
ಮೂಲೆ ಮೂಲೆಯ ಸುತ್ತಿ ಬಹುವಾಗಿ ಬಳಲಿದೆನು.

— ೨ —

ಮಲೆನಾಡಿನಲ್ಲೆನಗೆ ಬೇಸರವು ಬಂದಿತ್ತು
ಪಟ್ಟಣಕೆ ನಾ ಹೋಗಿ ಇರಹತ್ತಿದೆ,
ಅಲ್ಲಿ ಕಾರ್ಖಾನೆಗಳ ತಲೆ ಕೊರೆವ ಕರ್ಕಶವು
ಎನ್ನಾತ್ಮ ಶಾಂತಿಯನು ಭೇದಿಸಿಹುದು.

— ೩ —

ಮರಳಿ ಹಳ್ಳಿಯ ನಾನು ಸೇರಿದೆನು ಬಹುನೊಂದು
ಪಟ್ಟಣದಿ ಶಾಂತಿ ಶಾ ಸಿಗಲಿಲ್ಲವೆಂದು
ಹಳ್ಳಿಯಿಂದಲ್ಲನೇ ಪೇಟೆಗಳ ರಕ್ಷಣೆಯು
ಹಳ್ಳಿ ಇದ್ದರೆ ಜನರು ಬದುಕ ಬಹುದಾ?

— ೪ —

ಒಮ್ಮೆ ಕಾನನದೊಂದು ಮರವನ್ನು ನಾನೇರಿ
ಸುತ್ತು ವಿಶ್ವವನೆಲ್ಲ ನೋಡಿ ನಲಿದೆ,
ದೂರದಲಿ ಸಾಗರನು ರವಿಯ ಮುಂಗುವ ತೆರದಿ
ಮುಳುಗಿದನು ದಿನವಹಿಯು ಜಲದಲ್ಲಿ ಭರದಿ!

— ೫ —

ಆಗ ಕಾರ್ಗತ್ತಲೆಯು ಇಳೆಯನಾಕ್ರಮಿಸುತ್ತ
ಬಂತೆನ್ನ ಒಡಲಲ್ಲಿ ತಂಕೆ ಮೂಡಿಹುದು
ಆಗೇನ ನೂಡುವುದು ಮರದಿಂದ ಕೆಳಗಿಳಿದೆ,
ಶಾಂತಿ ಮೊರಳುವುದಿಲ್ಲ ಎನಗಿನ್ನು ಎಂದು.

— ೬ —

ಶಾಂತಿಯನು ಕೊಡು ಎನಗೆ ಹೇ ಭಕ್ತ ವತ್ಸಲನೆ!
ಶಾಂತಿ ಪಥದೆಡೆಗೆನ್ನ ಬಡಿದು ಕಳಿಸು,
ನಿನ್ನ ಸೇವಕನಾಗಿ ಬೇಡುತ್ತಿರುವೆನು ಇಂದು
ಕಾಂತಿ ಜಗದಿಂದೆನ್ನ ದೂರವಿರಿಸು.

—ಸೆ. ಭ. ನೆಂಪು.

ಶ್ರೀ ಎಚ್. ಎಂ. ನಾರಾಯಣ ಭಟ್

ಅತ್ಯಾವಶ್ಯಕ ಸಾಧನ ಸಿಗದಿದ್ದಾಗ

ಘಟನಾತ್ಮಕ ಪರಿಹಾರ

ಎಲ್ಲ ಪ್ರಜೆಗಳಿಗೂ ವಸ್ತುಗಳನ್ನು ಅನುಭವಿಸುವ ಹಕ್ಕು ಮೂಲಭೂತವಾಗಿ ಬಂಧುದು. ಆದುದರಿಂದ ಪೇಟೆಯಲ್ಲಿ ಎಲ್ಲ ವಸ್ತುಗಳೂ ದೊರೆಯಬೇಕು, ದೊರೆಯದೆ ಹೋದರೆ, ರಿಟ್ ಇಟ್ಟರೆ ಜಯ ಕಂಡಿತ — ಎನ್ನುತ್ತಾರೆ ಸಂವಿಧಾನ ವೈದ್ಯರು.

ಕತ್ತಲಾದಾಗ ದೀಪ ಉರಿಸಲು ನೋಡಿದಾಗ ಚಿಮಿಣಿ ಎಣ್ಣೆಯಿಲ್ಲ. ವಿದ್ಯುತ್ ಕಂಬಗಳೂ ನಮ್ಮ ಓಣಿಯಲ್ಲೇ ಬಂದಿರಲಿಲ್ಲ. ಜೇರೆ ಕೆಲವು ಬಯಲುಗಳಿಗೆ ಪ್ರಥಮ ಯೋಜನಾವಧಿಯಲ್ಲಿ ವಿದ್ಯುತ್ ಪೂರೈಕೆ ಬಗ್ಗೆ ಅಂದಾಜು ಪಟ್ಟಿಯೂ ದ್ವಿತೀಯ ಯೋಜನಾವಧಿಯಲ್ಲಿ ಕಂಬಗಳೂ ತೃತೀಯ ಯೋಜನಾವಧಿಯಲ್ಲಿ ತಂತಿಗೆ (ಕಂಬಿ)ಗಳೂ ಬಂದಿದ್ದವು. ಚತುರ್ಥ ಯೋಜನಾವಧಿಯಲ್ಲಿ ಇವುಗಳ 'ಸಂಯೋಜನೆ' ಪೂರ್ತಿಯಾಗಿ ಇನ್ನು ಮುಂದೆ ಯಾವುದಾದರೊಂದು ಯೋಜನಾವಧಿಯಲ್ಲಾದರೂ ವಿದ್ಯುತ್ ಪೂರೈಕೆಯಾಗುವ ಸಾಧ್ಯತೆ ಕಾಣುತ್ತಿದೆ. ಕೆಲವು ಬಯಲುಗಳಲ್ಲಿ ಹೊಳಲಾಗಿರುವ ವಿದ್ಯುತ್ (ಇಲ್ಲದ) ಕಂಬಗಳಿಗೆ ಕಾಳು ಮೆಣಸಿನ ಅಥವಾ ವೀಳ್ಯದೆಲೆಯ ಬಳ್ಳಿಗಳನ್ನು ನೆಟ್ಟ ವರದಿಗಳೂ ಇದ್ದವು. ನಮ್ಮ ಬಯಲಿಗೆ ಇವೆಲ್ಲಾ ಇನ್ನು ಬರಬೇಕಷ್ಟೆ.

ಗವಿಪದ ಅಂಗಡಿಗಳಲ್ಲಿವಿಚಾರಿಸಿದೆ. ನಾಲ್ಕೈದು ಅಂಗಡಿಗಳಲ್ಲೂ ಚಿಮಿಣಿ ಎಣ್ಣೆಯಿಲ್ಲ. ಒಂದು ದೊಡ್ಡ ಸಾಹುಕಾರನನ್ನು ಸ್ವತಃ ಕೇಳಿದೆ ಇಲ್ಲವೇ ಇಲ್ಲ.

ಅಂದು ಬೆಳಗ್ಗೆ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಮಾರ್ಗಸೂಚಿಯನ್ನು ತೋರಿಸಿದೆ. "ರಾಜ್ಯದ ಅಗತ್ಯಕ್ಕೆ ಬೇಕಾದಷ್ಟು ಚಿಮಿಣಿ ಎಣ್ಣೆ ಸ್ವೀಕೆಯಿದೆ. ಸರಕಾರ ನಿರ್ದೇಶಿಸಿದ ಬೆಲೆಗೇ ವ್ಯಾಪಾರಿಗಳು ಮಾರಬೇಕು. ದರ ಹೆಚ್ಚಿಸುವವರು ಭಾರತ ರಕ್ಷಣಾ ನಿಯಮಗಳನುಸಾರವಾಗಿ ಶಿಕ್ಷೆಗೊಳಗಾಗುವರು..."

"ಆದೊಂದೂ ಪ್ರಯೋಜನವಿಲ್ಲ, ಸಾರ್! ಹಾಗೆಲ್ಲಾ ಪೇಪರಿನಲ್ಲಿ ಬಂದೀತು. ಚಿಮಿಣಿ ಎಣ್ಣೆ ಎಲ್ಲೂ ಪೇಪರಿನಲ್ಲಿ ಮಾತ್ರ ಇರುತ್ತೆ. ನಮ್ಮಲ್ಲಿಯೂ ಪೇಪರಿನಲ್ಲಿ ಎಣ್ಣೆಯಿದೆ.... ಪುಸ್ತಕದ ಒಂದನೇ ಕ್ಲಾಸಿಗೆ ಓದಿಗೆಗಾಗುತ್ತದೆಯಾ?... ನಮ್ಮಲ್ಲಿ ಎಣ್ಣೆಯಿಲ್ಲ...."ಎಂದು ಆ ವ್ಯಾಪಾರಿ ಆಣೆ ಇಡಲೂ ಸಿದ್ಧನಿದ್ದ. ಪ್ರಕಟಿಸಿದಾಗ ನಾನು ಒಬ್ಬಿಂದ ಜೋಡಿ. ಎಂಟು ಸೇರಿನ ಬತ್ತಿಯನ್ನು ಖರೀದಿಸಿ ಮನೆ ಸೇರಿದ. ಜಗಣ್ಣ ಊಟ ತೀರಿಸಿ ಬತ್ತಿ ಉರಿದು ಮುಗಿಯುವುದರೊಳಗೆ ಬಾಸಿಗೆ ಹಾಡಿದೆ.

ಅಷ್ಟರಲ್ಲೇ ನೆನಪಾಯಿತು ವೈದ್ಯರ ಅಗಮನವಾಗಿತ್ತು. ಇವರು ಊರುಗೋಲನ್ನು ಹಿಡಕೊಂಡು ಬರುವ ಶಬ್ದವನ್ನೇ ಪ್ರತ್ಯೇಕಿಸಿ ತಿಳಿಯಬಹುದಾಗಿತ್ತು.

"ಇಲ್ಲಿ ಯಾರೂ ಇಲ್ಲವೆ?"—ವೈದ್ಯರ ಪ್ರಶ್ನೆ.

ನಾನು ಮಾತಾಡಲಿಲ್ಲ. ಹೋಗುವುದಾದರೆ ಹೋಗಲಿ. ಪೊಸ್ಸೆ ಸ್ವಲ್ಪ ಕಾಫಿ ಪುಡಿಸಿ ನನ್ನೆ ಸ್ವಲ್ಪ ಜೀರಿಗೆಗೆ; ಆಗಾಗ ಬೆಲ್ಲ ಅಥವಾ ನೀರುಳ್ಳಿಗೆ ಈ ನನ್ನ ಆಮನ ರೂಢಿ ಇಂದು ಯಾಕೆ ಬಂದುದೋ ತಿಳಿಯಬೇಕಷ್ಟೆ. ನನ್ನನ್ನು ಬಾಧಿಸಿದ ಚಿಮಿಣಿ ಎಣ್ಣೆಯ ಕ್ಷಾಮ ಪರಿಸ್ಥಿತಿಯನ್ನು ತಾನಾಗಿ ಪ್ರದರ್ಶಿಸಲುದ್ಯತನಾಗುವುದೇಕೆ!

"ಇಲ್ಲಿ ಯಾರೂ ಇಲ್ಲನೆ?"—ಮೊದಲ ಪ್ರಶ್ನೆಯೇ ಆವರ್ತಿಸಿತು.

ಇನ್ನೂ ಮಾತಾಡದಿದ್ದರೆ ಆ ವೈದ್ಯ ಕೆಟಿಕೆಯ ಮೂಲಕ ಲೈಟ್ ಹಿಡಿದರೆ?

ಬಾಗಿಲು ತೆರೆದೆ. ವೈದ್ಯರ ಪ್ರವೇಶವಾಯ್ತು. ಆವರ ಕೈಯಲ್ಲಿದ್ದ ಎರಡು ದೊಡ್ಡ ಪುಸ್ತಕಗಳನ್ನು ಮೇಜಿನ ಮೇಲಿರಿಸಿ ಆವರು ಕುರ್ಚಿಯಲ್ಲಿ ಕುಳಿತುಕೊಳ್ಳುವ ತನಕವೂ ಆವರದೇ ಲೈಟಿನ ಬೆಳಕು. ಮೊದಲು ಆರಿಸಿದ್ದ ಬತ್ತಿಯನ್ನು ಉರಿಸಿ ಕುಳಿತೆ. ಸಂಭಾಷಣೆ ಪ್ರಾರಂಭ.

"ಆ ಪುಸ್ತಕಗಳು?..."

'ನಮ್ಮ ಕೋಸ್ಸ್ಚ್ಚಿಟ್ಯೂಶನ್‌ನ ಬಗ್ಗೆ ಕಮೆಂಟರಿಗಳು...."

"ಹಾಗಾದರೆ ವೈದ್ಯರ 'ಘಟನಾಜ್ವರ' ವಿನ್ನೂ ಬಿಟ್ಟಿಲ್ಲ..."

ನಾನೂ ವೈದ್ಯರೂ ಯಾವಾಗಲೂ ಸಲಿಗೆಯಿಂದಲೇ ಮಾತಾಡುವುದು. ಚಿಕ್ಕಂದಿನಲ್ಲಿ ಪ್ರಾಥಮಿಕ ತರಗತಿಗಳಲ್ಲಿ ನಾವು ಸಹಪಾಠಿಗಳು ಸ್ವಾತಂತ್ರ್ಯಾನಂತರ ಭಾರತದ ಪ್ರಜೆಗಳ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಕಾನೂನು—ನಿಯಮಾವಳಿಗಳ ಬಗ್ಗೆ ವಿಶೇಷ ಆಸಕ್ತಿ ವಹಿಸುತ್ತ ಬಂದರು. "ಘಟನಾ ವೈದ್ಯ"ರೆಂದೂ ಕೆಲವರಿಂದ ಕರೆಯಿಸಿಕೊಂಡಿದ್ದರು.

ಘಟನಾವಳಿಯ ವಿವಿಧ ನಿಬಂಧನೆಗಳ ಬಗ್ಗೆ ಚರ್ಚಿಸ ಹೊರಟರೆ ಮತ್ತೆ ವೈದ್ಯರಿಗೆ ಅಂದು ಊಟ, ಕಾಫಿ, ನಿದ್ರೆಗಳ ಗೊಡವೆಯಿಲ್ಲ. ಚರ್ಚೆಯಲ್ಲೇ ತಲ್ಲೀನರಾಗಿ ಹೋಗುತ್ತಿದ್ದರು. ಹಲವರು ವಕೀಲರೂ ವೈದ್ಯರ ಥಾತ್ವಣವನ್ನು ಕೇಳಿ ತಲೆ ದೂಗಿದ್ದರು.

"ನಾನಿಲ್ಲಿಗೆ ಸ್ವಲ್ಪ ಮುಂಜೆಯೇ ಒಮ್ಮೆ ಬಂದಿದ್ದೆ....ಆಗ ನೀನಿಲ್ಲಿ ಹೋಗಿದ್ದಿರಿ?...."

"ಸ್ವಲ್ಪ ಸೀಮೆಎಣ್ಣೆ ಬೇಕಾಗಿತ್ತು. ಅದನ್ನು ಹುಡುಕುತ್ತಾ ಹೋದೆ. ಕೊನೆಗೂ ಸಿಗಲಿಲ್ಲ. ಮಧ್ಯಾಹ್ನದ ಬತ್ತಿ ದೀಪವೇ ಗತಿಯಾಯ್ತು...."

"ಅದೇನು?...."

"ಅಂಗಡಿಗಳಲ್ಲೆಲ್ಲೂ ಇಲ್ಲವೆಂದರು."

ಸ್ವಲ್ಪ ಹೊತ್ತು ಯೋಚನಾಮಗ್ನನಾಗಿ—

"ಹಾಗಾಗಲು ಸಾಧ್ಯವೇ ಇಲ್ಲ...ಹಾಗಾಗಲು ನ್ಯಾಯವಾದ ಕಾರಣವೇ ಇಲ್ಲ...."

"ಯಾಕೆ ಸಾಧ್ಯವಿಲ್ಲ? ..."

"ಘಟನೆಯ ಲ್ಲಿ ಜಾಗೆ ಒತ್ತಿ ಹೇಳಿದ್ದರಿಂದಾಗಿ"...ಆದರಲ್ಲಿನ "ವ್ಯಕ್ತಿಯ ಮೂಲಭೂತ ಹಕ್ಕು"ಗಳ ವಿಭಾಗದಲ್ಲಿ ಸ್ಪಷ್ಟವಾಗಿಯೇ ಇದೆ...."

"ಆದರಲ್ಲಿ ಸೀಮೆ ಎಣ್ಣೆಯ ಉರಿತಾಗಿ ಏನಿದೆ?...."

"ಹಾಗೆ ಪ್ರತ್ಯೇಕವಾಗಿ ಹೇಳಿಲ್ಲ. ಘಟನೆಯ 19 (ಜಿ) ನಿಬಂಧನೆಗನ್ವಯ ಎಲ್ಲಾ ಪ್ರಜೆಗಳಿಗೂ ನೀತಿ, ಸ್ವಾತಂತ್ರ್ಯ ಮತ್ತು ಸಮಶ್ವತ್ವನ್ನು ನೀಡುವುದರಿಂದಾಗಿ ಮೂಲಭೂತ ಹಕ್ಕುಗಳ ಬಗ್ಗೆ ಭಂಗವಾಗದಂತೆ ಕೊಟ್ಟಂತಾಯ್ತು. ಎಲ್ಲಾ ಪ್ರಜೆಗಳಿಗೂ ವಸ್ತುಗಳನ್ನು ಹೊಂದಲೂ ಅನುಭವಿಸಲೂ ಹಕ್ಕಿದೆ. ಇಲ್ಲಿ 'ಅನುಭವಿಸಲೂ' ಎಂದಿದ್ದುದನ್ನು ಪ್ರತ್ಯೇಕ 'ನೋಟ್' ಮಾಡಬೇಕಾಗಿದೆ."

"ಹಾಗೆಂದರೆ?..."

"ಮನುಷ್ಯನಾದವನಿಗೆ ಸ್ವಲ್ಪ ಉಪ್ಪಿನಿಂದ ಯೂ 'ಲೋಜಿಕ್ಕೂ' ಇರಬೇಕು. ಆ ನಿಬಂಧನೆ ಸ್ಪಷ್ಟವಾಗಿ ದೇಳುತ್ತದೆ—ವಸ್ತುವನ್ನು ಹೊಂದಲೂ ಅನುಭವಿಸಲೂ ಹಕ್ಕಿದೆಯೆಂದು. 'ವಸ್ತು' ಇಲ್ಲದೆ ಇವೆರಡೂ ಹೇಗೆ ಸಾಧ್ಯ? ಆದ್ದರಿಂದ 'ವಸ್ತು' ಬೇಕು. ಇಲ್ಲದೆ ಸಾಧ್ಯವೇ ಇಲ್ಲ. ಎಲ್ಲಾ ಪ್ರಜೆಗಳಿಗೂ ಅನುಮತಿಸಲ್ಪಟ್ಟ ವಸ್ತುವಾದುದರಿಂದ ಅದು ಧಾರಾಳವಿರಬೇಕು; ಬೇಕಾದಷ್ಟು ಬೇಕು...."

"ಆದರೆ ಇಲ್ಲೆಲ್ಲಾ ಒಂದು ಪೈಸೆಯೂ ಇಲ್ಲವಾಗಿದೆಯಲ್ಲ?"

"ಅಗಲಿ. ಚಿಮಿಣಿ ಎಣ್ಣೆ ಒಂದು ಸಾಧನ ತಾನೆ?"

"ಹೌದು...."

"ಆದರೆ, ಆ ಸಾಧನ ಖರೀದಿಸಲು ಲಭ್ಯವಿದೆಯೆಂಬ ಕಾರಣವಿಲ್ಲ ಯಾಗೆ ಸಿಗದ ಹೋದರೆ ಅದು ಅನುಮತಿಸಿದ ಹಕ್ಕುಗಳೆಲ್ಲೊಂದರ ನಿಷೇಧವಾಗಿರುವುದು...."

ಘಟನೆಯನ್ನು ಸಮರ್ಪಣಾ ತಿಳಿಸಿದ್ದುದರಿಂದಲೋ 'ಲೋಜಿಕ್' ತಿಳಿಯಿದ್ದುದರಿಂದಲೋ ವೈದ್ಯರಾವತ್ತು ನನಗೆ ಸ್ವಾಸ್ಥ್ಯವಾಗಿಯೇ ತೋರಿದರು.

'ಹಾಗಾದರೆ ಎಲ್ಲಾ ಸಾಧನಗಳೂ ನಮಗೆಲ್ಲರಿಗೂ ಅಗತ್ಯವಾಗಿ ಸಿಗಲು ಹಕ್ಕಿದೆಯೆಂದು ನಿಮ್ಮ ಅಭಿಪ್ರಾಯವೇ?'

"ಖಂಡಿತವಾಗಿಯೂ..."

'ಅಕ್ಕಿ, ಬಟ್ಟೆ, ಸಕ್ಕರೆ, ಮುಂತಾದವುಗಳೆಲ್ಲವೂ?'

(ಎಂದೇ ಪುಟ ನೋಡಿ)

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭ್ರವಾದ ವಿಷಯದ ಮೇಲೆ ಕೇಂದ್ರೀಕರಿಸಿ ನಿತ್ಯಾರ್ಯಗಳನ್ನಷ್ಟೇ ಶಕ್ತರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

ರಿಯಾಯಿತಿ ವಿಚಾರಿಸಿರಿ:

ನವಯುಗ ಪೈಸ್, ಉಡುಪಿ.

ವೆಚ್ಚದಲ್ಲಿ ಕಡಿತ ಮಾಡುವುದು
ಹಣ್ಣನ್ನು ತುಂಡರಿಸಿದಷ್ಟು ಸರಳವಲ್ಲ.
ಆದರೂ ಅದನ್ನು ಸಾಧಿಸಬೇಕಾದುದು ಆವಶ್ಯಕ.



ಸುತ್ತಮುತ್ತ ಆಕರ್ಷಕ ವಸ್ತುಗಳಿಂದ ಕೂಡಿದ, ದಿನೇದಿನ ಬೆಳೆಯುತ್ತ, ಈ ಕಾಲದಲ್ಲಿ ನಾವು ಬದುಕುತ್ತಿದ್ದೇವೆ. ಸರಕು, ಸಾಮಗ್ರಿಗಳ ವಿಸ್ತಾರ ಮತ್ತು ವೈವಿಧ್ಯತೆಯ ಚಿತ್ತವನ್ನು ಚಂಚಲಗೊಳಿಸುವಂತಹುದು. ಅವುಗಳ ಆಸಕ್ತಿಕರವಾದ ಬೆಲೆಯಾದರೋ ಯಾಕೆ ನಮ್ಮನ್ನು ಚಿಂತೆಗೆ ತುದುರುವುದಿಲ್ಲ? ಗಳಿಸಿದ ಹಣ ಕಿಸೆ ಸೇರಿದ ಬಳಿಕ ಅಷ್ಟು ಇಷ್ಟು ಅಂತಹ ವಸ್ತುಗಳನ್ನು ಕೊಂಡುಕೊಳ್ಳಲು ಸಾಧ್ಯತೆಗಳು ತೋರಿಬರುತ್ತವೆ. ಇಂಥ ವೇಳೆ ನಮ್ಮಲ್ಲಿರುವ ಹಣ ತನ್ನ ನಿಜವಾದ ಮೌಲ್ಯದ ಒಂದು ಅಂಶವಷ್ಟನ್ನು ಮಾತ್ರ ಕೊಂಡುಕೊಳ್ಳಬಲ್ಲುದೆಂಬ ಅರಿವಿಲ್ಲದೆ.

ಸಂಸಾರದ ಆಯ-ವ್ಯಯವನ್ನು ಹೊಂದಿಸಲು ಹಾಗೂ ನಾಳೆಯ ಬದುಕನ್ನು ಇದಿಂಸಲು ಬುರ್ಜುಗಳನ್ನು ಆದಷ್ಟು ಕಡಿಮೆ ಮಾಡಿ, ಆದಾಯದ ಯಾವ ಭಾಗವನ್ನು ಅನಿವಾರ್ಯಕವಾಗಿ ವಿನಿಯೋಗವಾಗುವುದೋ ಆ ಭಾಗವನ್ನು ಉಳಿತಾಯ ಮಾಡುವುದು ಇಂದಿನ ಅವಶ್ಯಕತೆಯಾಗಿದೆ.

ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ಯುಮ್ಯುಲೇಟಿವ್ ಜೀವನಾತಿಯೊಂದನ್ನು ತೆರೆದು ಕ್ರಮವಾಗಿ ಅದರಲ್ಲಿ ಉಳಿಸುತ್ತಾ ಬನ್ನಿರಿ.

FAITHFUL FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ನಮ್ಮ ಭೂಮಿಯ ಉದಯವೆಲ್ಲಿ? ಹೇಗೆ?

(ಲೇಖನದಿಂದ)

'ಭಲೆ ಭಲೆ...ಒಂದೂ ಒಂದು ವಾರ ಅರ್ಥವ್ಯಯಿತೂಂಬಾಯಿತ...'

'ಯಾರಿಗೆ'

'ನಿಂಗೆ...'

"ನನಗೆ? ಒಂದೂಂತೇನು, ಬಾಂಬ ಅಗಿದ್ದನ್ನಿ...."

'ಆಗಿಗೆ ನಿಜ. ಆದ್ರೆ ಅದನ್ನ ನಿವರಿಸೋ ತಾಕತ್ತು ನಿಂದಿಲ್ಲ ಇಂದಿ ಇದೂ ಬಂಕೂತ..."

"ಜಲ್ಲಣ್ಣಾ ಇಲ್ಲಿ ಇಲ್ಲೂ ಈ ಬಗೆಯ ಪ್ರೀತಿಯ ದಾರಿಂದಲೇ ನೋಡಿ ಶಿವನೇನೆ ಹುಟ್ಟಿದ. ನ ಬಾವಸನ ಹುಟ್ಟೋದ .."

"ನೋಡವ್ವ, ಮನುಷ್ಯ ಹುಟ್ಟಿನಿಂದಲೇ ಗ್ರೇಷ್ಠ ಅಥವಾ ನೀಚ-ಎಂದಲು ಏ ರಕ್ತ ಒಂದಾ ಹುಟ್ಟಿದವ ನೋಡ ಹಾಗಿಲ್ಲ ವಾ ಗಿ ಇ ವ್ಯತ್ಯಾಸಗಿರಬೇಕೂಂದ್ರೆ ಬೇಸೆ!"

'ಅಂದ್ರೆ ನಾತ್ರು — ಹೀಕೇ ಎಗಡು ಕಾರಣಗೆ ಕಾಲಿಟ್ಟೇ ಮಿಂದಾಗಿರಬೇಕೂಂದ್ರೆ ಬೇಕೆ?'

'ಇದಷ್ಟೇ ಅಂದದ್ದು ನಾನು ಸಮಕಾಲೀನ ಪರಿಸ್ಥಿತಿ .."

"ಆದು ಗೊತ್ತಿದೆ- ಈ ಪರಿಸ್ಥಿತಿ ಬದಲಾಗೆ ಇದು ಸಾಧ್ಯವಿಲ್ಲವೇಂತ...."

'ಇಲ್ಲದೇನು?'

'ಹೊಸಾಗಿ?'

'ನಾನು ಹೇಳಿದ್ದು ಒಂದಾಂತ ತಿಳಿದು ಒಬ್ಬರು ಇಂಥಾ ಬ್ಬರನ್ನು ಸರಿಯಾಗಿ ಅರ್ಥ ಮಾಡಿಕೊಂಡು ನಾನು ನಿಂಗಿನಿ ಎಂದು ಎಲ್ಲರೂ ತಿಳಿದ ವರ್ತಿಸುವ ಕೈ ಆರಂಭ ನಡೆದಿದಾ ದ್ದು...'

'ಓ...ಜಡ...ಇಂಥೀದ್ದುಂತ ತೋ ಮತ್ತೆ...'

'ಯಜು?'

"ಒಂದು ಸಿಗರೆಟ್ ಮಾಡಿಸ್ತು ರೊ ನಾವಿ ಎಂದಿಗೂ ಒಂದು ತಿಂಗಳಿಂದ ಕಡಿಯಾ ಅಲ್ಲ'ನೆ...ಮತ್ತೆ ನೀವನ್ನು

ಪಕ್ಷಿನಿಂತ ಪರಿದಾಟ ಪ್ರಜಾ ಪ್ರಭುತ್ವ ಪ್ರಭಾವದನೇ ?

(ಹಿಂದಿನ ಸಂಚಿಕೆಯಿಂದ)

ಕ್ತದ್ದಾರೆ ಇಲ್ಲಿ ಒಂದ ಉದಾಹರಣೆ ಆಷ್ಟೇ. ಇಂಥ ನ ನಿಂಲ ಹಾಗೂ ನಿಂಸ ಇಲ್ಲಾ ಆ ಎಡದ ಅಷ್ಟೇ. ಹರಿಂದ ನಿಷ್ಟೇ ಮಾಡುವುದಿಗೆ ಬಡವರು ಉಳುವ ಟಾಲಾಗುತ್ತೆನೆ. ಎಂಬ ಇಂದು. ಇತಿಮತಿ ಇಂಬುಲ್ಲಿ, ಎಂಬ್ರಿ ಬಡವ ಸಗೇಷ್ಟಿವಿಂಬ ಕಾಣಿಸುವಿದ ಮಾಗಿ ಬಂದು ಭಾರೀ ದೊಡ್ಡ ಗುರುವು ಮಂತ್ರಿ ನಿಂಬಿವನ್ನು ಎಂಬಾಗಿದು ಆಳುವ ಪರಿಸ್ಥಿತಿಯು ಪ್ರಜ್ಞೆಯಿಂದಲೂರಿಂದ ಇರುವುದಿಲ್ಲ ಆಷ್ಟೇ ಅಲ್ಲ, ಇಂತಹ ತನಿನ ಪ್ರಿಯರು ಪ್ರಯು ಸಿಕಕ್ಕಾಗಿ ಸರ್ವತ್ರಿಗಳಿಗೆ ಜಯ ಬಂದುವು ಲಾಗ ಬಿನಬಹುದು. ಆಸನ ಪ್ರಭುಗಳ ಪಕ್ಷಿನಿಂತರಿಕ್ಕೆ ಪ್ರಜ್ಞೋತ್ಪಾಸಿಕ ಕೊಡ. ನಿದು ಸಾಯುಲ್ಲ. ಆದನ್ನು ಕಂಡು ಕೊಳ್ಳುವುದು ಎಷ್ಟೇ ಇಷ್ಟದ ಕೆಲಸ ಇದೆ.

ಎಲ್ಲೆಲ್ಲಿ ಏನೇನು?

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ

ಮೈಸೂರು ಎ. ಬಿ ಶೆಟ್ಟಿ ಸ್ಮಾರಕ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳ ಸಭೆಯು ತಾ ೨ನೇ ದಿನ ರಾತ್ರಿ ನಿಲಯದ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ಸೇರಿ ವಿದ್ಯಾರ್ಥಿ ಸಂಘದ ಅಧಿಕಾರಿ ವರ್ಗದ ಆಯ್ಕೆ ಮಾಡಿತು.ಅದರಂತೆ ಈ ಕೆಳಗೆ ಕಂಡವರು ಚುನಾಯಿತರಾಗಿದ್ದಾರೆ.

ಡಾ|| ಎಸ್. ಬಿ ವೆಂಕಟಯ್ಯ ಅಧ್ಯಕ್ಷರು ಶ್ರೀ ಪಿ. ಸತೀಶ ರೈ ಉಪಾಧ್ಯಕ್ಷರು ಶ್ರೀ ದೇವದಾಸ್ ರೈ ಕಾರ್ಯದರ್ಶಿ ಶ್ರೀ ಎಂ. ಕೇಶವ ಜಂಟಿಕಾರ್ಯದರ್ಶಿ, ಶ್ರೀ ಕೆ. ಭೋಜರಾಜ ಶೆಟ್ಟಿ, ಕ್ರೀಡಾಕಾರ್ಯದರ್ಶಿ, ಶ್ರೀ ರತ್ನಾಕರ್, ಗ್ರಾಜನಾಲಯದ ದ ಕಾರ್ಯದರ್ಶಿ.

ಶ್ರೀಗಳಾದ ಸತೀಶ ರೈ, ದೇವಿದಾಸ್ ರೈ, ಉಮೇಶ ರೈ, ರತ್ನಾಕರ್, ಸಾಬೋಥ ಮಲ್ಲು ಮತ್ತು ಶೆಟ್ಟಿಯವರು ಸೂತನಾಡಿ ಸಂಘದ ಮುಂದಿನ ಚಟುವಟಿಕೆಗಳ ಬಗ್ಗೆ ಕೆಲ ಸಲಹೆಗಳನ್ನಿತ್ತರು.

ಶ್ರೀ ಎ. ರಾಮಣ್ಣನವರು ಸೂತನಾಡಿ ಸಂಘ ಜೀವಂತ ಸಂಘಸಂಸ್ಥೆಗಳಿಂದೇಂದೂ ಪಾಠಗಳ ಜೊತೆಗೆ ಪಾಠೇತರ ವಿಷಯಗಳ ಕಡೆಗೂ ಗಮನವರಿಸಿ ತಮ್ಮ ಜ್ಞಾನದ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕೆಂದೂ ಹೇಳಿದರು.

ಶ್ರೀ ಎ. ಬಂಗಪ್ಪ ಶೆಟ್ಟರು ವಂದನೆಗಳನ್ನರ್ಪಿಸಿದರು

ವಂತಹ ದಿನ ಎಂದು ಬಂದೀತು?'

'ದೀಪಾವಳಿಗೆ ಕೊಡ್ತೀನೀಂತ ನಾನು ಅನ್ನುತ್ತ ಬಂದಿದ್ದೇನೆ. ಅದನ್ನ ನೀನೆಲ್ಲಿ ಅರ್ಥ ಮಾಡಿಕೊಂಡಿದ್ದೆ?'

'ಸಂಕು ಬಿಡೀ ಅಂದೆನಲ್ಲಾ...ನಾನೂ ನೀವೂ ಈ ವಿಷಯದಲ್ಲಿ ಒಬ್ಬರು ಇನ್ನೊಬ್ಬರನ್ನು ತಿಳಿಕೊಳ್ಳೋದು ಸಾಧ್ಯವಿಲ್ಲ, ತಕ್ಕಂಡಳಕ್ಕೆ ಹುಟ್ಟೋದು ಸಾಧ್ಯವಿಲ್ಲ....'

ಅಯ್ತಲ್ಲ, ಮತ್ತೆ ಹೊರಟಲ್ಲಿಗೇನೇ ಬಂದು ನಿಲ್ಲುವ್ದೆನೆ. ನನ್ನು ಚರ್ಚೆ ಸಭೆಗಳಂತ ಸಂಧಾನ ಮಾತ್ರ.ಕತಯಂತೆ. ಧ ಎಂ ಉಂಟು ತಾನ?'

"ಉರುಟಲ್ಲಾ, ಉದ್ದ ತುಸು ಜಾಟು. ಹೋಗ್ಲಿ ಬಿಡ..ರ ತೈ ಧಾರಿಯೂಯ್ತು.'

'ಹುಷ್ಟಾಂ...ಎನೇ ಇದು'

"ಮತ್ತೇನು? ದ್ವೈತದಲ್ಲೇ ಅದ್ವೈತ ವನ್ನು ಕಾಣುವ ಸಾಹಸ..."

'ಹುಚ್ಚು....!"

—ಗೋರವ

ಎ. ರಾಮಣ್ಣ ಟೆಲಿಫೋನ್ ಸಲಹಾ ಸಮಿತಿಗೆ

ಮೈಸೂರು ಪತ್ರಿಕೋದ್ಯೋಗಿಗಳ ಪರವಾಗಿ ಮೈಸೂರು ಟೆಲಿಫೋನ್ ಸಲಹಾ ಸಮಿತಿಯ ಸದಸ್ಯರಾಗಿ ಮೈಸೂರು ಪತ್ರಿಕೋದ್ಯೋಗಿಗಳ ಸಂಘದ ಉಪಾಧ್ಯಕ್ಷರಾದ ಶ್ರೀ ಎ. ರಾಮಣ್ಣನವರು ನಾಮನಿರ್ದೇಶನಗೊಂಡಿದ್ದಾರೆ. ಶ್ರೀ ಎಸ್. ಶಾಸ್ತ್ರಿಯವರು ಅಧ್ಯಕ್ಷತೆ ವಹಿಸಿದ್ದರು.

'ಸಂಜಯ ಸಂಧಾನ'

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ದಿನಾಂಕ ೨೦ರಂದು 'ಸಂಜಯ ಸಂಧಾನ' ಎಂಬ ಶರಾ ಖಾಗದ ಯಕ್ಷಗಾನ ಕೂಟವು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಜರಗಿಸಲ್ಪಟ್ಟಿತು.

ಶ್ರೀ ಸಾಂತಪ್ಪ ಗೌಡ ಮಾಸ್ತರರ ಪತಿಯಂದ ನಡೆಸಲ್ಪಟ್ಟ- ಈ ಕಾರ್ಯಕ್ರಮದಲ್ಲಿ ಹಲವರು ಪಾಲ್ಗೊಂಡಿದ್ದರು. ಆರಂಭದಲ್ಲಿ ಶ್ರೀ ಮಾಸ್ತರ್ ಸಾಂತಪ್ಪ ಗೌಡರು ಸ್ವಾಗತಿಸಿದ್ದು ಕೊನೆಯಲ್ಲಿ ಶ್ರೀ ನಾರ್ಯಕ ಮಾಸ್ತರರು ಆಭಾರ ಸಲ್ಲಿಸಿದರು.

ವಿದ್ಯಾರ್ಥಿಗಳೆ ಪ್ರಯತ್ನ

ಮಣಿಪಾಲ್ ಆ. ೧೬—ಇಲ್ಲಿಯ ಕಸ್ತೂರ್ಬಾ ಮೆಡಿಕಲ್ ಕಾಲೇಜ್ ವಿದ್ಯಾರ್ಥಿ ಸಂಘದವರು ಇಲ್ಲಿಗೆ ಸಮೀಪವಲ್ಲಿರುವ ಕೆಲವು ಹಳ್ಳಿಗಳ ಪ್ರಯಾಣ ಸಂತ್ಪತ್ತರ್ಥವಾಗಿ ಸಂಗ್ರಹಿಸಿದ ಲಕ್ಷರೂ. ೫೬ ಪೈ ಹಾಗೂ ೨೬೫ ಹಳೆ ಬಟ್ಟೆಗಳನ್ನು ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಟಿ. ಕಮಲಾಕ್ಷ ದಿ. ಪೈಯವರು ಕಾಲೇಜಿನ ಡೀನ್ ಡಾ|| ಎ. ಕೃಷ್ಣರಾವ್‌ರವರಿಗೆ ನಿನ್ನೆ ಅರ್ಪಿಸಿದರು.

ಸ್ವಾತಂತ್ರ್ಯ ದಿನೋತ್ಸವದ ಅಂಗವಾಗಿ ನಡೆದ ಸಭೆಯಲ್ಲಿ ಮಂಗಳೂರಿನ ಎನ್. ಸಿ. ಸಿ. ಗ್ರೂಪ್ ಕಮಾಂಡರ್ ಲೆ| ಕ| ಬಿ ಸಿ. ಜೋಶಿಯವರು ಸೂತನಾಡಿ ರಾಜಕೀಯದಿಂದ ದೂರವಿದ್ದು ಚಿನ್ನಾಗಿ ಅಧ್ಯಯನ ನಡೆಸಬೇಕೆಂದು ವಿದ್ಯಾರ್ಥಿಗಳನ್ನು ಕೇಳಿಕೊಂಡರು.

ಇದೇ ಸಂದರ್ಭದಲ್ಲಿ ಏರ್ಪಡಿಸಿದ್ದ ಅಂತರ ಕಾಲೇಜು ಕ್ವಿಜ್ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳನ್ನು ವಿತರಣೆ ಮಾಡಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಎಂ ಜಿ ಭಟ್ ಸ್ವಾಗತ ಭಾಷಣ ಮಾಡಿದರು. ಸ್ಪರ್ಧಾನ ಕಾರ್ಯದರ್ಶಿ ಶ್ರೀ ಎಜ್. ಎಸ್. ಪ್ರಕಾಶ್‌ರವರು ಆಭಾರ ಮನ್ನಿಸಿದರು

ಶ್ಲಾಘನೀಯ ಪ್ರಯತ್ನ

ಎಂ. ಜಿ. ಯಂ. ಕಾಲೇಜಿನ ಪ್ಲಾನಿಂಗ್ ಫೋರಂನವರು ಪ್ರಧಾನ ಮಂತ್ರಿಯವರ ವಿಪಾರ ಕ್ಷಾಮ ಪರಿಹಾರ ನಿಧಿಗೆ ಕಾಲೇಜಿನ ವಿದ್ಯಾರ್ಥಿ ಮತ್ತು ಸಿಬಂದಿಯವರಿಂದ ರೂ. 501/ನ್ನು ಸಂಗ್ರಹಿಸಿ ಕಳಿಸಿದ್ದಾರೆಂದು ತಿಳಿದು ಬರುತ್ತದೆ.

ಮುಂಬಾಯಿ ಹೋಟೆಲು ಮ್ಯಾಲಕರಲ್ಲಿ ವಿನಂತಿ

ತಮಗೆಲ್ಲಾ ತಿಳಿದಂತೆ ಇತ್ತೀಚೆಗೆ ನಮ್ಮುವರ ಮೇಲೆ ಆಗುತ್ತಾ ಇರುವ ಅನ್ಯಾಯ ಮತ್ತು ದಬ್ಬಾಳಿಕೆಯ ವಿಷಯವನ್ನು ಯಾರಿಂದಲೂ ಸಹಿಸಲಿಕ್ಕೆ ಸಾಧ್ಯವಿಲ್ಲವಾಗಿದೆ.

ಒಂದು ಕಡೆಯಿಂದ ಮುನಿಸಿಪಾಲಿಟಿಯವರು ಕೊಡುವ ಕಷ್ಟ, ಮತ್ತೊಂದು ಕಡೆಯಿಂದ ರೇಶನಿಂಗ್ ಆಫೀಸಿನವರು ಮಾಡುವ ಅನ್ಯಾಯ, ಅಲ್ಲದೆ ಇನ್ನು ಕೆಲವು ಕಷ್ಟ ನಷ್ಟಗಳು ನಮ್ಮವರ ಮೇಲೆ ಆಗುತ್ತಾ ಇದೆ. ಮುಂದಕ್ಕೆ ಇನ್ನೂ ಹೆಚ್ಚಿನ ಅನ್ಯಾಯಗಳು ಆಗಲೂ ಬಹುದು. ಇವನ್ನೆಲ್ಲಾ ಹೋಗಲಾಡಿಸಲಿಕ್ಕೆ ಮತ್ತು ಸುಖವಾಗಿ ನಮ್ಮ ವ್ಯಾಪಾರವನ್ನು ಸಾಗಿಸಲಿಕ್ಕೆ ನಾವೆಲ್ಲರೂ ಒಂದಾಗಿರಬೇಕು. ನಮ್ಮಿಂದ ಒಂದು ಸಂಘಟನೆಯು ಆತೀ ಆಗತ್ಯ. ಆದಕ್ಕೆ ನನ್ನವರೆಲ್ಲರೂ, ಹನುಮನ ದಿಂದ ಸಹಾಯ ನೂಡಬೇಕು ಹಾಗೆ ಮಾಡಿದೆ ಹೋದಲ್ಲಿ ನಮ್ಮ ಬಾಳು ಹಾಳಾಗುವುದು.

ನಮ್ಮ ಈ ಎಲ್ಲಾ ಕೆಲ್ಸವನ್ನೂ ಒಳ್ಳೆಯ ರೀತಿಯಿಂದ ನೂಡಬೇಕಾದರೆ ಹಣದ ಆಗತ್ಯವು ತುಂಬಾ ಇರುವುದು. ಕಾಯಿದೆಯ ಕಲಹೆ ಕೇಳಿ ಒಂದು ಕೆಲ್ಸನನ್ನು ಮಾಡಬೇಕಾದರೆ ಹೈಕೋರ್ಟಿನಲ್ಲಿ ಒಂದು ಕೇಸ್ ಮಾಡಬೇಕಾದರೂ, ತುಂಬಾ ಬಿಚಾರಗುವುದು.

ಈ ಎಲ್ಲಾ ಆದರ್ಶವನ್ನು ಮುಂದೆ ಇಟ್ಟುಕೊಂಡು ನಮ್ಮವರೂ ಆದ, ಈ ಕೆಳಗೆ ಸಹಿ ಮಾಡಿದ ಮಹಾನುಭಾವರು, ನಮ್ಮೆಲ್ಲರ ಸಹಕಾರವನ್ನೂ ಸಹಾಯವನ್ನೂ ಹೃತ್‌ಪೂರ್ವಕವಾಗಿ ಕೋರುತ್ತಾರೆ. ಮತ್ತು ನಮ್ಮೆಲ್ಲರ ಉನ್ನತಿಗಾಗಿ, ತಾವೆಲ್ಲರೂ, ತಮ್ಮ ಶಕ್ತಿಗೆ ತಿಂಗಿ, ಸಹಾಯಮಾಡಿ, ಈ ಮಹತ್ ಕಾರ್ಯವನ್ನು ಮಾಡಬೇಕಾಗಿ ನಮ್ರಪೂರ್ವಕ ವಾಗಿ ಕೇಳಿಕೊಳ್ಳುತ್ತೇವೆ.

—ಇಂತೀ ನಮ್ಮೆಲ್ಲರ ಬಂಧುಗಳು—

ಶಾಂತಾರಾವು ಸೆಟ್ಟಿ, ವೀರಪ್ಪ ಶೆಟ್ಟಿ ಬೈರಲ್ಲಾ, ನರಸಿಂಗ್ ರಾವ್ ಕೋಟೆ, ಗೋವಿಂದ ಸೆಟ್ಟಿ ಜೆ. ಜೆ. ಬೋಸ್ಟಿಟಲ್, ವಾಸಪ್ಪ ಸೇರೆಗಾರ್ ರೇ. ರೋಡ್, ದೇವಜ ಪ್ಪ ಸೆಟ್ಟಿ, ಶಿವರಾಮ್ ಬಿ ಗೋಪಾಲ ಸೆಟ್ಟಿ, ದಾದರ್, ಮುತ್ತಪ್ಪ ಸೆಟ್ಟಿ, ತಾರಾದೇವಿ, ನಾರಾಯಣ ಸೆಟ್ಟಿ ಅಂಗರಾಡಿ, ಸಾಜೀನ ಸೆಟ್ಟಿ ಗೋರೆಗಾಮ್ಸು, ರಾಮಕೃಷ್ಣ ಬಡ್ಡಲ್, ದಾದರ್, ಸದಾಶಿವ ಸೆಟ್ಟಿ, ಕುಲ್ಕ, ಕರಿಯಣ್ಣ ಸೆಟ್ಟಿ ಅಂದೇರಿ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 70/67

ಸೂರು ಪೂಜಾರಿ —ವಾದಿ

ಮತ್ತು

ಶಿವಪ್ಪ ಪೂಜಾರಿ ಸಹಾ —ಪ್ರತಿವಾದಿರು

ದಾವೂದಿಗೆರೆ ತಾಲ್ಲ್ಯ ಅಂಚೂರು ಗ್ರಾಮದ ಹೊನ್ನಂಮನ ಮಗ 1. ಶಿವಪ್ಪ ಯನೆ ಕೊಟ ಪೂಜಾರಿಗೆ, 2. ಬೆಳ್ತಂಗಡಿ ತಾಲ್ಲ್ಯ ಮುಟ್ಟಿನ ಗ್ರಾಮದ ಮೂಸ್ಯ ಎಂಬಲ್ಲರಾದ ಹೊನ್ನಂಮನ ಮಗಳು ನಾಗಂಮನಿಗೆ 3. ಬೆಳ್ತಂಗಡಿ ತಾಲ್ಲ್ಯ ಕುಕ್ಕೆಲ್ ಗ್ರಾಮದ ಗಂಡಸಡ್ಡ ಎಂಬಲ್ಲರಿನ ಹೊನ್ನಂಮನ ಮಗ ಜೊಗ್ರ ಪೂಜಾರಿಗಳಿಗೆ —

ಮೇಲಿನ ವ್ಯಾಜ್ಯದಲ್ಲಿ ವಾದಿಯು ಕೇನಾಂಕದ ಬಗ್ಗೆ ನೂಡಿದ ದಾವೆಯು ತಾ. 5-9-67ಕ್ಕೆ ಬ್ಯಾ ಇಟ್ಟಿರುತ್ತದೆ, ಆ ದಿವಸ ಬೆಳಿಗ್ಗೆ 11ಗಂಟೆಗೆ ನಿಕೆಲರ ದ್ವಾರ ಸ್ವತಃವಾ ಕೋರ್ಟಿಗೆ ಮುಂದೆ ಹಾಜರಾಗಿ ನಿಮ್ಮ ಅಕ್ಕೆಪಣೆಗೆ ದಾವಾ ದ್ದರೆ ಉದಾಹರಿಸಿ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವಾಮುಂದಿ ದಾವೆಯನ್ನು ಮುಂದು ವರಿಸಲಾಯೀತು ತಿಳಿದಿರಲಿ. ಕೋರ್ಟಿಗೆ ಹ್ಯುಂ ಪ್ರಕಾರ.

N. J. Kadamba
Advocate, Beltangady

ಬೆಳ್ತಂಗಡಿ, 16—8—67


ಬೀಡಿ ಕಟ್ಟುವ ಕೆಲಸವಿಲ್ಲದವರಿಗೆ
ಸುವರ್ಣ ಅವಕಾಶ
ಬೀಡಿ ಕಟ್ಟಲು ಕಲಿಸಿ ಕೆಲಸ ಕೊಡಲಾಗುವುದು
ಬೀಡಿ ಕಟ್ಟಲು ಕಲಿಯುವವರಿಗೆ ಸಂಬಳ ಕೊಡಲಾಗುವುದು
ಬೀಡಿ ಕಟ್ಟುವ ಕೆಲಸ ಕಲಿತವರಿಗೆ ಕೆಲಸ ಕೊಡಲಾಗುವುದು
ಬೀಡಿ ಕಟ್ಟುವ ಕೆಲಸ ಕಲಿಯಲು ಬಯಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ
ಎಸ್ ಆರ್. ಬೀಡಿ ವರ್ಕ್ಸ್, ಉಡುಪಿ, ದ.ಕ.
ಬೀಡಿಸಿ ಚೀಂಡಿ ಉತ್ಪಾದಕರಿಗಾಗಿ
ಎಸ್ ಆರ್. ಬೀಡಿ ಎಕ್ಸ್ಟ್ರಾ
ಬೀಡಿಗಳನ್ನು

ಸ್ಪೆಷಲ್ ಸ್ಲೀಪರ್

ಸ್ಪೆಷಲ್ ಸ್ಲೀಪರ್ ಅಂದರೆ ಏನು ಅಂತ ಕೇಳಿದ್ದೀರಾ? ಅದು ಒಂದು ರೀತಿಯ ಚಪ್ಪಲಿ. ಆದರೆ ಸಾಮಾನ್ಯ ಚಪ್ಪಲಿಗಿಂತ ಸ್ವಲ್ಪ ಭಿನ್ನ. ಇದನ್ನು ಮುಖ್ಯವಾಗಿ ಪ್ರಯಾಣ ಮಾಡುವಾಗ ಬಳಸಲು ತಯಾರಿಸಲಾಗಿದೆ.

ಈ ಸ್ಲೀಪರ್‌ನ ಮೇಲ್ಭಾಗವು ಮೃದುವಾದ ಬಟ್ಟೆಯಿಂದ ಮಾಡಲ್ಪಟ್ಟಿದೆ. ಒಳಭಾಗದಲ್ಲಿ ಪಾದಕ್ಕೆ ಆರಾಮ ನೀಡುವ ಸ್ಪಂಜಿನ ಪದರವಿದೆ. ಅಡಿಭಾಗವು ಜಾರದಂತೆ ಗಟ್ಟಿಯಾದ ರಬ್ಬರ್‌ನಿಂದ ಮಾಡಲಾಗಿದೆ. ಇದನ್ನು ಸುಲಭವಾಗಿ ಮಡಚಿ ಚೀಲದಲ್ಲಿ ಇಡಬಹುದು.

ಈ ಸ್ಲೀಪರ್‌ಗಳು ಎಲ್ಲಾ ಗಾತ್ರಗಳಲ್ಲಿ ಲಭ್ಯವಿವೆ. ಬೆಲೆ ಕೂಡ ಹೆಚ್ಚು ದುಬಾರಿಯಲ್ಲ. ಪ್ರಯಾಣಿಕರಿಗೆ ಇದು ಉಪಯುಕ್ತವಾದ ವಸ್ತು ಎಂದು ಹೇಳಬಹುದು.



ಸ್ಪೆಷಲ್ ಸ್ಲೀಪರ್ ಅನ್ನು ಹೇಗೆ ಬಳಸಬೇಕು ಎಂಬುದರ ಚಿತ್ರ

ಈ ಸ್ಲೀಪರ್‌ಗಳನ್ನು ಎಲ್ಲಿ ಖರೀದಿಸಬಹುದು ಎಂಬ ಮಾಹಿತಿಯನ್ನು ಕೆಳಗೆ ನೀಡಲಾಗಿದೆ.

ಸ್ಪೆಷಲ್ ಸ್ಲೀಪರ್ ಅಧಿಕೃತ ಮಾರಾಟಗಾರರು

ಎಲ್ಲಿಗೆ ಏನೇನು?

ಎ. ಬಿ. ರಬ್ಬರ್ ಕಂಪನಿಯ ಮಧ್ಯಾಹ್ನ

ಮೈಸೂರು ಸಿ. ಇ. ಲಿಮಿ. ಅಂಗಡಿ ಎ. ಬಿ. ಕಂಪನಿಯ ಪ್ರಥಮ ಮಹಡಿಯಲ್ಲಿ ಮಧ್ಯಾಹ್ನ ಊಟಕ್ಕೆ ಹೋಗಿದ್ದರು. ಅಲ್ಲಿ ಅವರಿಗೆ ಸಿಕ್ಕಿದ ಸಿಹಿ ಸಿಹಿ ಸುದ್ದಿಗಳು ಅನೇಕ. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ.

ಇಲ್ಲಿ ಮಾತ್ರ ಬಿ. ಪೆಕ್ಕಸ್ಸು ಅಗ್ಗದ ಬೆಲೆಗೆ ದೊರೆಯುವುದು. ಶ್ರೀ ಬಿ. ಕೃಷ್ಣ ಶೆಟ್ಟಿ ಅವರಲ್ಲಿಗೆ ಹೋದರೆ ಅವರು ಸಂತೋಷದಿಂದ ಸ್ವಾಗತ ಮಾಡುವರು. ಶ್ರೀ ಬಿ. ಕೃಷ್ಣ ಶೆಟ್ಟಿ, ಕೃಷ್ಣಾಲಂಕಾರಿಕರು, ಶ್ರೀ ಬಿ. ಕೃಷ್ಣ ಶೆಟ್ಟಿ ಅವರಿಂದ ಅಲಂಕಾರ ಮಾಡಿಸಿಕೊಳ್ಳಿರಿ.

ಶ್ರೀಮಾನ್ ಸಣ್ಣಪ್ಪ ಶೆಟ್ಟಿ, ಬಂಗಾರದ ಶೆಟ್ಟಿ, ಬಡಗಿ ಶೆಟ್ಟಿ, ಅಡಿಕೆ ಶೆಟ್ಟಿ, ಮೊದಲಾದ ಶೆಟ್ಟಿಗಳು, ಹೊಸಬಾಳ ಶೆಟ್ಟಿಗಳು ಮೊದಲಾದ ಶೆಟ್ಟಿಗಳು ಬಂದಿದ್ದರು.

ಮಧ್ಯಾಹ್ನದ ಊಟದ ನಂತರ ಕಾಫಿ ಕುಡಿಯುತ್ತಿದ್ದಾಗ ಯಾರೋ ಒಬ್ಬರು ಹೇಳಿದರು: "ಸಾರ್, ಇಲ್ಲಿ ಕಾಫಿ ಚೆನ್ನಾಗಿದೆ."

ಆಗ ಮಾಲೀಕರು ಹೇಳಿದರು: "ಹೌದು, ಇಲ್ಲಿ ಕಾಫಿ ಚೆನ್ನಾಗಿರುತ್ತೆ. ಆದರೆ ಕಾಫಿ ಕುಡಿಯಲು ಇಲ್ಲಿಗೆ ಬರಬೇಡಿ. ಬಿ. ಪೆಕ್ಕಸ್ಸು ಕೊಳ್ಳಲು ಬನ್ನಿ."

ಆಗ ಮತ್ತೊ

NAVAYUGA 24—8—1967
Registered with the Registrar of Newa Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ವಿವೇಚನೆ

ಗಣಿಕೆಗೂ ಅಗ್ರಸ್ಥಾನವಿತ್ತು

ಬರೆದವರು : ಶ್ರೀ ಸ. ನಾರಾಯಣ.

ಅಭಿರವಭ್ಯುತಾವೇಶ್ಯಾ ಶೀಲ ರೂಪ ಗುಣಾನ್ವಿತಾ|
ಬಭತೇ ಗಣಿಕಾ ಶಬ್ದಂ ಸ್ಥಾನಂಚ ಜನ ಸಂಸದಿ||
ಸೂಚಿತಾಚ ಸನಾಜ್ಞಾ ಗುಣಾದ್ಯಿರ್ಚ ಸಂ ಸ್ತುತಾ|
ಪ್ರಾರ್ಥನೀಯಾ ಭಿಗ ಪ್ಯಾಚ ಲಕ್ಷ್ಮಿ ಭೂತಾಚ ಜಾಯಿದೆ||

ಭರತ ಮುನಿಯು ನಾಟ್ಯ ಶಾಸ್ತ್ರದಲ್ಲಿ ಗಣಿಕೆಯರ ವರ್ಣನೆ ಈ ರೀತಿ ಇದೆ.

ವೇಶ್ಯೆಯರಲ್ಲಿ ಅತಿರೂಪವತಿ ಮತ್ತು ಗುಣವತಿಯೂದ ಸ್ತ್ರೀಗೆ 'ಗಣಿಕೆ' ಎಂಬ ಬಿರುದು ದೊರೆಯುತ್ತಿತ್ತು. ಗಣಿಕೆಗೆ ವಾರಾಂಗನೆ ಎಂಬ ಇನ್ನೊಂದು ಹೆಸರು ಇದ್ದಂತೆ ತಿಳಿದು ಬರುತ್ತದೆ. ವೇಶ್ಯೆಯರೆಲ್ಲರೂ ಗಣಿಕೆಯರಿಗೆ ಸಭೆಗಳಲ್ಲಿ ವಿಶೇಷ ಸನ್ಮಾನ ದೊರೆಯುತ್ತಿತ್ತು. ರಾಜ ಸಭೆಗಳಿಗೆ ಗಣಿಕೆಯರು ಬರುವುದು ಪ್ರಾಚೀನ ಕಾಲದಲ್ಲಿ ಸ್ವಾಭಾವಿಕವಾಗಿತ್ತು. ಅರಸರು ಗಣಿಕೆಯರನ್ನು ರಾಜ ಸಭೆಗಳಲ್ಲಿ ಸನ್ಮಾನಿಸುತ್ತಿದ್ದರು.

"ಶಾಸ್ತ್ರ ವಿಧಿಜ್ಞಾ ಕುಶಲಾ ಗಣಿಕ ಯಶ್ಚೈವ" ಎಂದು ಹೇಳುತ್ತದೆ ಶಾಸ್ತ್ರ.

ಗಣಿಕೆಯರು ರಾಜಕುಮಾರಿಯರ ಸಮಾನ ಶಾಸ್ತ್ರಜ್ಞರಾಗಿರುತ್ತಿದ್ದರೆಂದು ಅರ್ಥ. ಗಣಿಕೆಯರು ಕೇವಲ ಶಾಸ್ತ್ರ ಬಲ್ಲವರು ಮಾತ್ರವೇ ಆಗಿರದೆ ಕಾವ್ಯ ರಚನಾ ಸಮರ್ಥರೂ ಆಗಿರುತ್ತಿದ್ದರು. ಅವರು ರಸಿಕೆಯರೂ ಆಗಿರುತ್ತಿದ್ದರು.

ರಾಜಶೇಖರನ ಕಾವ್ಯ ಮೀಮಾಂಸೆಯಲ್ಲಿ ಪುರುಷರಂತೆ ಸ್ತ್ರೀಯರೂ ಕಲಿಗಳಾಗಬಹುದು ಎಂಬುದು ಪ್ರಸ್ತಾಪಿಸಲ್ಪಟ್ಟಿದೆ. ಪ್ರಾಚೀನ ಕಾಲದಲ್ಲಿ ಅನೇಕ ಗಣಿಕೆಯರು, ರಾಜ ಸೇವಕೆಯರು ಉತ್ತಮ ಕವಿಗಳಾಗಿದ್ದರೆಂಬ ಸಂಗತಿ ಪುರಾಣ ಸಹಿತವಾಗಿ ತಿಳಿದು ಬರುತ್ತದೆ. ಗಣಿಕೆಯರ ಪುತ್ರಿಯರು ನಾಗರಿಕರ ಪುತ್ರರೊಂದಿಗೆ ಓದುವ, ಸ್ನೇಹ ಬೆಳೆಸುವ ಅಧಿಕಾರ, ಸ್ವಾತಂತ್ರ್ಯಗಳಿದ್ದವು. ಗಣಿಕೆ ಸಮಸ್ತ ಸದ್ಗುಣಗಳ ಪ್ರತಿರೂಪವಾಗಿರುತ್ತಿದ್ದಳು. ಅವಳು ಸಮಾಜದ ಹೆಮ್ಮೆಯ ವಸ್ತು ಎಂಬ ಸಂಗತಿ ಬೌದ್ಧ ಸಾಹಿತ್ಯ ದಲ್ಲಿ ದೊರೆಯುತ್ತದೆ.

ಸಂಸ್ಕೃತ ನಾಟಕಗಳಲ್ಲಿ ಗಣಿಕೆಯರನ್ನು ಗೌರವದಿಂದ ನಗರಶ್ರೀ ಎಂದು ಸಂಬೋಧಿಸಿರುವುದನ್ನು ಕಾಣ ಬ್ರಹ್ಮೆ. ಮೃಚ್ಛಕಟಿಕ ನಾಟಕದಲ್ಲಿ ವೇಸ್ಯೆ ವಸಂತ ಸೇನೆಯು ಪಾತ್ರಪ್ರಮುಖವಾದುದು. ಸಾಮಾನ್ಯರಿಂದ ಆರಂಭಿಸಿ ನ್ಯಾಯಾಲಯದ ಪ್ರಮುಖರವರೆಗೆ ಎಲ್ಲರೂ ಅವಳನ್ನು ಗೌರವದಿಂದ ಕಂಡು ಸನ್ಮಾನಿಸುತ್ತಾರೆ.

ವಸಂತಸೇನೆಯು ಕಾಯಿ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಾಗ ಅವಳನ್ನು 'ಅಧಿಕರಣಿಕರು' 'ಆರ್ಯೆ' ಎಂದು ಸಂಬೋಧಿಸುತ್ತಾರೆ. ಪ್ರಾಚೀನ ಕಾಲದಲ್ಲಿ ಗಣಿಕೆಯು ಸಮಸ್ತ ವರ್ಗದ ಜನತೆಯಿಂದ ಗೌರವಿಸಲ್ಪಡುತ್ತಿದ್ದಳು. ಎಂಬ ಸಂಗತಿ ಅರ್ಥವಾಗುತ್ತದೆ. ವೈಶಾಲಿಯ ಅಂಬಪಾಲಿಕೆ ಎಂಬ ಗಣಿಕೆ ಸಮಸ್ತ ನಗರದ ಅಭಿಮಾನದ ವಸ್ತುವಾಗಿದ್ದಳು. ಅವಳ ಅಕೃತಿಯು ಸದ್ಗುಣ, ಅಸಮಾನ್ಯ ಅಭಿಮಾನದಿಂದ ಸಮಸ್ತ ಜನತೆ ಆಕರ್ಷಣೆಗೆ ಒಳಗಾಗಿದ್ದರು.

ರಾಜ್ಯದ ಕಡೆಯಿಂದ ಎಲ್ಲರ ಗಾಡಿಗಳನ್ನೂ ಪರೀಕ್ಷಿಸುವಂತೆ ರಾಜಾಜ್ಞೆಯೂ ಇದ್ದರೂ ಭಟರು ಚಾರುದತ್ತನ ಗಾಡಿಯಲ್ಲಿ ವಸಂತ ಸೇನೆ ಇರುವಳೆಂದು ತಿಳಿದು ಅದನ್ನು ಶೋಧಿಸುವುದಿಲ್ಲ. ವೃದ್ಧ ಕಟಕದ ಈ ಕಥೆಯಿಂದ ಪ್ರಾಚೀನ ಕಾಲದಲ್ಲಿ ಗಣಿಕೆಯರು ಸನ್ಮಾನ ಪಾತ್ರರೆಂಬುದು ಅರ್ಥವಾಗುತ್ತದೆ. ಕೆಲ ಕಾಲ ನಂತರ ಗಣಿಕೆಯರ ದುರ್ನಡತೆಯಿಂದಲೋ ಅಥವಾ ಸಮಾಜದ ತಪ್ಪುಕಲ್ಪನೆಯಿಂದಲೋ ವಾರ ವನಿತೆಯರ ಸ್ಥಾನ ಸಮಾಜದಲ್ಲಿ ಕಳೆಗುಂದಿದುದು ಸ್ಪಷ್ಟವಾಗಿದೆ. ಕೆಲವು ಸಂಸ್ಕೃತ ಗ್ರಂಥಗಳಲ್ಲಿ ಗಣಿಕೆಯರ ಹಿರಿಯ ಸ್ಥಾನ ಪಡೆದ ಪ್ರಸ್ತಾಪವಿರುವಂತೆ ಈಚಿನ ದಿನಗಳ ಗ್ರಂಥದಲ್ಲಿ ಆ ಬಗೆಯ ಪ್ರಸ್ತಾಪವಿಲ್ಲ ರಾಜ್ಯ, ರಾಜಸಭೆ ಅರಸರೊಂದಿಗೆ ಇದ್ದ ಅವರ ಸಂಪರ್ಕ ಕ್ರಮೇಣ ಕಳೆಗುಂದಿದೆ.

ಬ್ರಾಹ್ಮಣರು ಗಣಿಕಾನ್ನವನ್ನು ಸ್ವೀಕರಿಸಬಾರದೆಂದು ಮನು ತನ್ನ ಧರ್ಮ ಶಾಸ್ತ್ರದಲ್ಲಿ ನಿಷೇಧಿಸುತ್ತಾನೆ—ಸೂಚಿಸುತ್ತಾನೆ.

ಗಣಿಕೆಯ ಸ್ವರೂಪಕ್ಕೆ ಒಳಗಾಗಿದ್ದರೆಯೇ ಈ ದೂಷಣೆಗೆ ಒಳಗಾಗಿದ್ದುದು ಕಾಣಬರುತ್ತಿತ್ತು. ಈ ಸ್ತ್ರೀ ಜಾತಿಯಲ್ಲಿ ಅತ್ಯ ವಂಚನೆ, ಅವಘಾತನೆ, ಅವಜ್ಞಾ ವಿಶೇಷವಾಗಿಯೇ ಇರುತ್ತಿದ್ದವು. ಗಣಿಕೆಯರು ಆದರಕ್ಕೆ ಪಾತ್ರರಾಗಿದ್ದಂತೆಯೇ ನಾಗರಿಕತ್ವದ ಅವಮಾನದ ಪ್ರತೀಕಗಳಾಗಿದ್ದರು. ಒಮ್ಮೊಮ್ಮೆ ಅವರು ರಾಜರ ಅಧವಾ ಧನಿಕರ ಕ್ರೂರ ನೋಟಕ್ಕೆ, ಶಿಕ್ಷೆಗೆ ಗುರಿಯಾಗ ಬೇಕಾಗುತ್ತಿತ್ತು. ಪ್ರಾಚೀನ ಗುಹೆಯೊಂದರ ಚಿತ್ರ ಒಂದರಲ್ಲಿ ಕರುಣಾಪೂರ್ಣ ಚಿತ್ರ ಒಂದಿದೆ. ಓರ್ವ ಶಸ್ತ್ರಧಾರಿ ಕ್ರೋಧಯುತ ವ್ಯಕ್ತಿ ಕಷಾಯಿತ ದೃಷ್ಟಿಯಿಂದ ನೋಡುತ್ತಾ ಓರ್ವ ನರ್ತಕಿಯನ್ನು ದಂಡಿಸುತ್ತಿದ್ದಾನೆ. ಪೆಚಭಾಗಿನಿಯ ಸಂಪೂರ್ಣ ದೈನತೆ, ಲಜ್ಜೆ ಮತ್ತು ಗ್ಲಾನಿ ಚಿತ್ರದಲ್ಲಿ ಸಾಕಾರವಾಗಿ ಮೂಡಿದೆ. ಆ ಚಿತ್ರದಲ್ಲಿ ಕುಳಿತ ಐದು ಸ್ತ್ರೀಯರಿದ್ದಾರೆ. ಎಲ್ಲರ ದೃಷ್ಟಿಯಲ್ಲೂ ಭಯ, ಕಾತುರತೆ, ದೀನ ಯೋಜನೆ ಮತ್ತು ವಿಹ್ವಲತೆ ಚಿತ್ರಿತವಾಗಿದೆ. ಆ ಚಿತ್ರದಲ್ಲಿ ವಾತಾವರಣವೇ ಭಯದಿಂದ ನಡುಗುತ್ತಿರುವಂತೆ ಇದೆ.

ಗಣಿಕೆಯರು ಪ್ರೇಮ ಪ್ರಸ್ತಾಪನವನ್ನು ತಿರಸ್ಕರಿಸಿದರೆ ಭಯಂಕರ ಪರಿಣಾಮವನ್ನು ಎದುರಿಸಬೇಕಾಗುತ್ತಿತ್ತು. ಈ ಸಂಗತಿ ಮೃಚ್ಛಕಟಿಕದ ಶಕಾರನ ಆಚರಣೆಯಿಂದ ತಿಳಿದು ಬರುತ್ತದೆ. ವಿಟರ ಕೇರಿಯಲ್ಲಿ ಜನಿಸಿದ ಭಾಗ್ಯಹೀನ ಮಕ್ಕಳ ಸ್ಥಿತಿ ಬಹು ಹೀನಾಯವಾಗಿರುತ್ತಿತ್ತು. ಸೂಳೆಬಗಿನ ಮತ್ತು ಕಲೆಯ ಸಂಮಿಲನದಿಂದ ಮೂಡುವ ಕಲಂಕ ಕಥೆ ಊಹೆಗೂ ನಿಲುಕದಷ್ಟು ದೂರ ಎಂದು ಹೇಳಬಹುದು.

ಸಮಾಜದ ನಾನಾ ಬಗೆಯ ದೋಷ, ದೂಷಣೆ ಅವಯೇಷನೆಗೆ ಗುರಿಯಾಗಿ ನಿಂತಿದೆ ಈ ವೇಶ್ಯಾ ಸಮಾಜ—ಕುಲ. ಸಮಾಜಕ್ಕೆ ನೇತ್ಯಾ ಕುಲ ದೊಡ್ಡ ಸಮಸ್ಯೆಯಾಗಿ, ಕಳಂಕವಾಗಿ ಉಳಿದಿದೆ. ವ್ಯಾಪಿನ ಕಾಲದ ಸದ್ಗುಣ, ಸೌಂದರ್ಯ, ಸದ್ಭಾವನೆಗಳ ಗಣಿಕೆಯರು ದುರ್ಲಭವಲ್ಲ, ಗಗನ ಕುಸುಮ. ಪ್ರಾಚೀನ ಭಾರತದಲ್ಲಿ ಗಣಿಕೆಯರು ಸದ್ಗುಣಗಳ ಪ್ರತೀಕ ಎಂಬ ಸಂಗತಿಯು ಪ್ರಸ್ತಾಪ ಗ್ರಂಥಗಳಲ್ಲಿ ಪಠನೀಯವಾಗಿದೆ.

Notice

In the Court of the Munsif of Coondapoor.

O. S. No. 66 of 1967.

Between:

Mahabala Shetty ... Plaintiff

and

Govinda Shetty and others ... Defendants.

To

1. Govinda Shetty (1st defendant)
2. Soorappa Shetty (3rd defendant)
Children of Subbakka Shedthy—
Devalkunda Village, Coondapoor Taluk.

Please take notice that the partition suit filed by the plaintiff against you and others stands posted to 3—9—1967 before the above court at 11 A. M. You are hereby given notice that you should appear before the said court on 3—9—1967 at 11 A. M. either in person or through a duly instructed pleader failing which you will be declared Ex Parte and further orders will be passed.

(By Order)

Sd. K. Ramappayya,
B. A., B. L.,
Advocate for Plaintiff.

Coondapoor, 14-8-1967.

ದಿ|| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ವಿನಯಪೂರ್ಣ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ: ರೂ. 1-25 (ಟ.ಖ. ಪ್ರತ್ಯೇಕ)

ಪಾ॥ ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ-ಮದ್ದು

ನೂರಾರು ಕಾಹಿಲೆಗಳಿಗೆ ಮನೆಯಲ್ಲೆ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ಪವಿಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

Edited, Printed & Published by K. H. Shetty at the Navayuga Press, Udipi, S. India.

ನವಯುಗ

31—8—1967

PUBLICA

ಕಥಾ ಪ್ರಪಂಚ

ಅನಳ ಅಂತರ್ಯ

ಬರೆದವರು: ಶ್ರೀ ಕೆ. ಜೆ. ರೆಟ್ಟಿ, ಕಡಂದಲೆ.

ಆ ಚಿಕ್ಕ ಗುಡಿಸಿಲೊಳಗೆ ಶಕ್ತಿಗಳು ಕವಿದಿತ್ತು! ಸೂಲೆಯಲ್ಲಿ ಉರಿಯುತ್ತಿದ್ದ ಚಿಮಿಣಿ ದೀಪ ಶಕ್ತಿಯೊಡನೆ ವ್ಯರ್ಥವಾಗಿ ಕೋರಾಟ ನಡಾವಂಪರ್ತು ಕೆಲವು ವೇಳೆ ಆ ಗುಡಿಸಲ್ಲಿ ನಿರ್ಜನ ಸ್ಥಳದಂತೆ ಮೌನ ಆವರಿಸುತ್ತಿತ್ತು. ನಾಪ್ತೊನ್ನೆ ಎಲ್ಲಿಲ್ಲದ ಗೊಂದಲ—ಅಳು ಗೋಳಾಟ! ಕೇಳುತ್ತಿತ್ತು!

ಸ್ವಲ್ಪ ಹೊತ್ತಿಗೆ ಮುಂಜೆ ಮೂರ್ತಿಯ ನಿರ್ಜೀವ ದೇಹ ಆ ಗುಡಿಸಲೆಂಳಗಿತ್ತು. ಅಶವದ ಕಾಲು ಬಡವಲ್ಲಿ ಕುಳಿತು ರೋದಿಸುತ್ತಿದ್ದಳು ಒಬ್ಬಾಕೆ. ಉಳಿದ ಹೆಂಗಸರೂ ಸುತ್ತ ಕುಳಿತು ತಲೆ ತಗ್ಗಿಸಿ ಕಣ್ಣೀರಸುತ್ತಿದ್ದರು. ಲೋಭಾನದ ಹೊಗೆ ಅಲ್ಲೆಲ್ಲ ಹಂಡಿತ್ತು. ಆ ಶಕ್ತಲಲ್ಲಿ ಊದು ಬತ್ತಿಯ ವಿಣ ಕು ಎದ್ದು ಕಾಣುತಿತ್ತು. ಈಗ ಆ ಸ್ಥಳವನ್ನು ಗುಡಿಸಿಸಗದೆ ಬಳದು ಶುದ್ಧ ಮಾಡಲ್ಪಟ್ಟಿತ್ತು. ಅಲ್ಲೊಂದು ದೀಪವನ್ನು ಉರಿಸಿ ಇಟ್ಟಿದ್ದರು. ಕದೂ ಹೆಚ್ಚು ಪ್ರಕಾಶವೂನವಾಗಿದ್ದಿರಲಿಲ್ಲ!

ಮುಂದಿನ ದಿನ ಸ್ವಲ್ಪ ಮಳೆ ಬಂದಿದ್ದುದರಿಂದ ಗುಡಿಸಲು ಮುಂಮಗಡೆ ತುಸು ಕೆಸರು ಕೆಸರಾಗಿತ್ತು. ಜೆಪ್ಪು ಗಟ್ಟಿದ್ದ ಆ ಕೆಸರನ್ನು ತುಳದು ಕೊಂಡೇ ಅನೇಕ ಹೆಂಗಸರು ಆ ಗುಡಿಸಲಿಗೆ ಒಂದು ಹೋಗುತ್ತಿದ್ದರು. ಪ್ರತಿಯೆಬ್ಬರೂ ಕಮ್ಮಿ ಸೆರಗಿನಿಂದ ಕಣ್ಣೊರಸಿಕೊಳ್ಳುತಿದ್ದರು. ಕೆಲವರು ನಿಜವಾಗಿಯೂ ವೇದನೆಯಿಂದ ಅಳುತ್ತಿದ್ದರು. ಕೆಲವರ ಅಳುವ ನಟನೆ ಮಾಡುತ್ತಿದ್ದರು!

ಗುಡಿಸಿಲಿನ ಒಳಗಡೆ ಕತ್ತಲು ಹರಡಿತ್ತು. ಹೊರಗಿಂದ ಬಂದವರಿಗೆ ಥಕ್ಕನೆ ಏನೂ ಗೋಚರವಾಗುವಂತಿರಲಿಲ್ಲ! ಕುಸುಬೊತ್ತು ಆ ಕತ್ತಲಲ್ಲಿ ಹೊಂದಿಕೊಂಡ ಮೇಲೆ ಅಲ್ಲಿದ್ದುದೆಲ್ಲವೂ ಕಾಣುವಂತಿತ್ತು.

ದುಃಖದಿಂದ ಮಲಗಿಕೊಂಡಿದ್ದ, ಮುವತ್ತು ಮುವತ್ತೈದರ ಹರೆಯದ ಸಖು ಎದೆ ಕುಟ್ಟಿ, ಕುಟ್ಟಿ ಅಳತ್ತಿದ್ದಳು. ಬಿಳಿಯ ಹಣೆಯ ಮೇಲಿದ್ದ ಕುಂಕುಮ ಅಳಿಸಿ ಹೋಗಿತ್ತು. ಅದನ್ನು ಕಂಡಾಗ ಅವಳಿಗೆ ಈಗ ತಾನೇ ಒದಗಿದ ವೈಧವ್ಯದ ಗುರುತು ಎದ್ದು ಕಾಣುತ್ತಿತ್ತು. ಕಟ್ಟಿದ ಜಡೆ ಬಿಚ್ಚಿ ಹೋಗಿತ್ತು.

ಅವಳ ಸುತ್ತ ಕುಳಿತ ಹೆಂಗಸರು ಆಕೆಗೆ ನಾನಾ ವಿಧದಲ್ಲಿ ಸಮಾಧಾನ ಹೇಳುತ್ತಿದ್ದರು.

"ಮೈತ್ಯ ಯಾರನ್ನು ಬಿಡುತ್ತೆವ್ಮಾ?. ಅಲ್ವೇಬೆ ಕದರಿ ಬಾಯಿ?'

'ಆಲ್ಲನೇ ಮಪ್ಪೆ? ಎಲ್ಲರೂ ಒಂದಲ್ಲ ಒಂದು ದಿನ ಹೋಗ್ಲೇಬೇಕು."

ಕದರಿ ಬಾಯಿ ಕಣ್ಣೊರಸುತ್ತಾ ಹೇಳಿದಳು:

"ನೋಡಮ್ಮೊ ಸಖು! ನಿನ್ನ ಗಂಡಪ್ಪ ನಾಕೆ ಸಲಾಹುದಕ್ಕೆ ನೀನಿದ್ದೆ. ಈಗ ಮಾತ್ರ ನಿನಗೆ ಹೇಳ್ಕೋರು ಕೇಳ್ಕೋರು ಯಾರೂ ಇಲ್ಲ. ಪಾಪ ನುಕ್ಕಳೂ ಇಲ್ಲ.."

ಎಂದಳು ನಾಗು.

"ನಿಜವಾಗಿಯೂ ಹೌದಮ್ಮಾ!ಕೊನೆಗೆ ಒಂದೇ ಒಂದು ಹುಡುಗನಾದರೂ ಇದ್ದಿದ್ದರೆ ಅವನ ಆಶ್ರಯವಾದರೂ ಇರುತ್ತಿತ್ತು—" ಎಂದು ಅಲ್ಲಿದ್ದ ಇನ್ನೊಬ್ಬಳು ದನಿಗೂಡಿಸಿದಳು.

'ಆಲ್ಲನೇ! ಇವೆಲ್ಲ ನೇರಾಟ. ಕೊಟ್ಟರೆ ಹಿಂದು ಹಿಂದು. ಇಲ್ಲವಾದರೆ ಒಂದೂ ಇಲ್ಲ. ಬಂಜೆ ನೂಡಿ ಬಿಡ್ತಾನೆ. ನವ್ಮ ನನೇಲಿ ಕಾಣುದಿಲ್ವೆ? ಜೆಟ್ಟಿ ತುಂಬ ತಿನ್ಕೋಕಿಲ್ಲ ಮನೆ ತುಂಬ ಮಕ್ಕಳು...'

'ಬಂಜೆ' ಎನ್ನುವ ಶಬ್ದವನ್ನ ಕೇಳಿ ಸಖು ಮುನಃ ಬಿಕ್ಕಿ ಬಿಕ್ಕಿ ಏಳತೊಡಗಿದಳು. ಅವಳನ್ನು ಸಮಾಧಾನ ಪಡಿಸುತ್ತಾ ಒಬ್ಬಳೆಂದಳು—

"ಬೇಡಮ್ಮಾ! ಬೇಡ. ಈ ರೀತಿ ಅಳ ಬೇಡ. ಅತ್ತು ಪ್ರಯೋಜನವಾದರೂ ಏನ ? ಹೋದ ಜೀವ ವಾಪಾಸು ಬರುತ್ತೆಯೇ?...'

ಈ ರೀತಿಯಲ್ಲಿ ಹೆಂಗಸರು ಸಖುವನ್ನು ಸಮಾಧಾನ ಮಾಡಲೆತ್ನಿಸುತ್ತಿದ್ದರು. ಆದರೆ ಅನಾಥಳಾದ ಸಖು ನಿರಾಸೆಯಿಂದ ಗೋಳಾಡುತ್ತಲೇ ಇದ್ದಳು. ಅತ್ತು ಅತ್ತು ಅವಳ ಕಣ್ಣುಗಳು ಊದಿಕೊಂಡಿದ್ದುವು. ಆದರೆ—ಅವಳ ದುಃಖದ ಹೊರೆ ಕಡಿಮೆಯಾಗಲಿಲ್ಲ.

ಸಖುವಿನ ಅಳು ಆಕಾಶಂಡವಾಗಿತ್ತು. ಜೋಪಡಿಯಿಂದ ಹೊರಗೆ ಬರುವ ಹೆಂಗಸರು ಒಳಗೆ ಹೋಗುತ್ತಿರುವ ಹೆಂಗಸರೊಂದಿಗೆ ಮೆಲುದನಿಯಲ್ಲಿ ಮಾತಾಡ್ತಿದ್ದರು.

'ನಾನು ಹೇಳುವುದಾದರೆ ನಿಜವಾಗಿಯೂ ಇವಳು ಪತಿವ್ರತೆ. ಸತ್ತವನಿಗೆ ಕೆಟ್ಟ ಮಾತು ಹೇಳಬಾರದು....ಆದರೆ ಎಷ್ಟು ಕಷ್ಟಪಟ್ಟು ಈ ಪಣ್ಣಾತ್ಮ?...."

'ಬಯ್ಯೋ, ಒಂದು ದಿವಸಾನೂ ಸುಖವಾಗಿಲ್ಲೆ ಪಾತಿ!—ಮದುವೆಯಾಗಿ ಇಪ್ಪತ್ತು ವರ್ಷವಾಗಿರ್ಬೇಕೂ ಅಂತ ಕಾಣುತ್ತೆ ಇಲ್ವೇನೇ...."

"ಹೌದು! ಹೌದು. ರೂಪದಲ್ಲಾಗಲೀ —ವಯಸ್ಸಿನಲ್ಲಾಗಲೀ ಸ್ವಲ್ಪವೂ ಹೋಲಿಕೆ ಇರ್ಲಿಲ್ಲ ಅವರೊಳಗೆ. ರಾಕ್ಷಸನ ಶರಕ್ಕಿದ್ದ. ಸಖೂನ ಕಾಯಿ ಮದುವೆಗೆ ಮುಂಡೆ, ಸಖೂನ ಕಾದೆಯೊಡನೆ ಬೇಡಾಂತ ಬಹಳ ಹೇಳಿ ಕೊಂಡಿದ್ದಳು, ಅತ್ತಳು, ಕಾಡಿದಳು. ಆದರೂ ಆ ಪುಣ್ಯಾತ್ಮ ಕೇಳಲೇ ಇಲ್ಲ. ಅವನೂ ಕುಡ.ಕನಲ್ಲವೇ? ಒಂದು ಬಾಟ್ಲಿ ಹೆಂಡಕ್ಕೆ ನಿಶ್ಚಯ ಮಾಡಿಬಿಟ್ಟ. ಪಾಪ! ದುರ್ಗಾಪ್ಪೆ ಹೆಂಗಸ. ಆದರೂ ಎದೆ ಬಡಿದುಕೊಂಡು ಹೇಗೆ ಅಳುತ್ತಾಳೆ ನೋಡು! — ನೋಡೋದಕ್ಕಾಗುತ್ತದಿಲ್ಲ! ಎರಡು ಗಂಟೆಯಿಂದ ಒಂದೇ ಸವನೆ ಅಳುತ್ತಾ ಇದ್ದಾಳೆ. ಇದಕ್ಕೆನೇ ಹೇಳೋದಮ್ಮ ಪತಿವ್ರತೇ ಅಂತ!..."

"ನಿಜವಾಗಿಯೂ!...ನನ್ಮಲ್ಲಿ ಎಷ್ಟೋ ಹೆಂಗಸರು ಮರು ಮದುವೆ ಮಾಡಿಕೊಳ್ತಾರೆ. ಪಾಪ, ಬಡಪಾಯಿ. ಬಹಳ ಕಷ್ಟ ಅನುಭವಿಸಿದವಳು. ಒಂದು ಚಿನ್ನದ ಜೂರನ್ನೂ ಮೈಮೇಲೆ ಇರುವುದಕ್ಕೆ ಬಿಡ್ಲಿಲ್ಲ ಆ ಮಾರುತಿ. ಪಾಪ! ಎಷ್ಟೋ ರಂಪ ಹೊಟ್ಟೆಗೆ ತಣ್ಣೀರು ಬಟ್ಟೆ ಕಟ್ಟಿ ಮಲಗಿದಳೋ ಏನೋ!....'

'ಹೂಂ.ಆ ದುಡ್ಡೂ, ಕಾಸೂ— ಒಟ್ಟೆ, ಬರೆ ಪಾತ್ರ ಮಾಡಿ ಎಲ್ಲವನ್ನೂ ಆ ಕುಡುಕ ಹುಂಡಿಕ್ಕು ಎಂಂಬು ಎಂಡದ. ಎನಾ ಪೂರಾ ಮಾಳುಮಾಡಿದ..."ಎಂದು

ಅಲ್ಲಿರುವಾಕೆಯೊಬ್ಬಳು ಗಲ್ಲಕ್ಕೆ ಕೈ ಇಟ್ಟು ಕೊಂಡು ಹೇಳಿದಳು.

ಆ ದೃಶ್ಯವಿಗೆ ಒಂದು ಹುಡು[illegible]ದೆ....ಹುಡುಗೀನಾದ್ರೂ ಆಗ್ತಿದ್ರೆ?

"ಹೇಗಾಗುತ್ತೆಯೇ?....ಅವಳ ಗಂಡ ..."

"ನಿಜವೇ?"

'ಹೌದರೀ, ನಿಜನಲ್ಲದೆ—ಮತ್ತೆ ಸುಳ್ಳೆ?....ಒಂದು ದಿವಸ ನವ್ಮ ಮನೆಯಜಮಾನ್ರು ಮಾರುತಿಯನ್ನು ಒಪ್ಪಿಸಿ ಡಾಕ್ಟರ್ಲಿಗೆ...ಎಷ್ಟೇ ಸರಕಾರೀ ಆಸ್ಪತ್ರೆ ಇಲ್ವೆ? ...ಎನೇ ಮಕ್ಕಳಾಗದ ಹಾಗೆ ಆಗುವ ಹಾಗೆ ಮದ್ದು ಕೊಡ್ತಾರಂತಲ್ಲಾ....ಆ ಅರ್ಲಿಗೆ ಕರಕೊಂಡು ಹೋದರಂತೆ!—ಡಾಕ್ಟ್ರು ಎಲ್ಲಾ ಪರೀಕ್ಷೆ ಮಾಡಿ...

ಮಾರುತಿ ಬುಲ್ಲೇ ದೋಷವಿಲ್ಲೆ....ಪ್ರಯೋಜನವಿಲ್ಲಾ, ಒಂದ್ರಂತೆ..."

'ಹೊಂ ಕಣೆ! ಪುಣ್ಯಾತ್ಮನಿಗೆ ಒಂದಷ್ಟು ಸರಿ ಇಲ್ಲ...ಪಾಪ ಈಗ ಇದನ್ನೆಲ್ಲಾ ಹೇಗೆ ಸಹಿಸ್ಕೋತಾ ಅಂತ!...'

ಕೂಡಿದ ಹೆಂಗಸರು ನಾನಾ ರೀತಿಯಾಗಿ ಮಾತುಕತೆ ನಡೆಸುತ್ತಿದ್ದರು. ಸಖು ಒಂದು ಕಡೆ ಬಿದ್ದುಕೊಂಡು ಅಳುತ್ತಲೇ ಇದ್ದಳು.

ಅನಂತರ ಸ್ಮಶಾನದಿಂದ ಹಿಂತಿರುಗಿ ಬಂದ ತಮ್ಮ ಗಂಡಂದಿರಿಗೆ ನೀರು ತೆಗೆದು ಕೊಡಲು ಕೆಲವು ಹೆಂಗಸರು ಅವರವರ ಮನೆಗೆ ಹೊರಟು ಹೋದರು.

ಮಾರುತಿಯ ಮೃತ ಶರೀರಕ್ಕೆ ಬೆಂಕಿ ಕೊಟ್ಟು ನೆರೆಯ ಗಂಡಸರೆಲ್ಲ ಹಿಂತಿರುಗಿ ಬಂದರು. ಆ ಸುದ್ದಿಯನ್ನು ಕೇಳಿದ ಮೇಲಂತೂ ಮತ್ತೂ ಜೋರು ಜೋರಾಗಿ ಸಖು ಅಳತೊಡಗಿದಳು! ಕೂಡಿದವರು ಕೆಲವರಿಗೆ ಸಹಿಸಿಕೊಳ್ಳುವುದೂ ಕಷ್ಟವಾಗುವಂತಿತ್ತು.

ಅವರೂ ಪರಸ್ಪರ ಮಾತಾಡ ಹೊಡಗಿ ದರು—

'ಪಾಪ! ಎಷ್ಟು ಅಳುತ್ತಾ ಇದ್ದಾಳೆ? ಇಷ್ಟು ಪ್ರೀತಿ-ಇಷ್ಟು ಸುಖವನ್ನು ನೋಡಿರಲೇ ಇಲ್ಲವಪ್ಪಾ? ನವ್ಮ ದೇಶದ ಹೆಣ್ಣು ಗಳಿಗೆ ಗಂಡನ ಮೇಲೆ ಎಷ್ಟೊಂದು ಪ್ರೀತಿ—ಎಷ್ಟೊಂದು ಭಕ್ತಿ?..."

"ನಿಜವನ್ನೇ ಹೇಳಿದಿರಿ ರಂಗಣ್ಣಾ!—ಇಲ್ಲದೇ ಹೊದ್ರೆ—ಮಾರುತಿ ಈಕೆಯನ್ನು ಪೀಡಿಸಿದ್ದೇನು ಸ್ವಲ್ಪನೇ? ನಿತ್ಯವೂ ಹೊಡೆತ—ಬಡೆತ. ಒಂದೆರಡು ಬಗೆಯು ಕಷ್ಟವೇ?—"

"ಆ ಕಾಲದಲ್ಲಿ ಅವಳ ರೂಪ ಎಷ್ಟು ಚೆನ್ನಾಗಿತ್ತೂ?—ಈಗ ಬರೀ ಅಸ್ತಿಗೂಡಿನಂತಿದ್ದಾಳೆ!...'

ಹೀಗೆ ಸ್ವಲ್ಪ ಹೊತ್ತು ನಡೆಯುತ್ತಿದ್ದು—ಜನಂಪರ ಎಲ್ಲರೂ ಅಲ್ಲಿಂದ ಒಬ್ಬೊಬ್ಬರಾಗಿ ಹೊರಟು ಹೋದರು. ಸಖೂನ ಜೊತೆಯಲ್ಲಿದ್ದ ಹೆಂಗಸೂ ಹೊಗಾಡುತ್ತಾ ಗೊರಕೆ ಹೊಡೆಯುವಾರಂಭಿಸಿದಳು!

ಸ್ವಲ್ಪ ಹೊತ್ತು ಹೀಗೇ ಕಳೆಯಿತು. ಸಖು ಅತ್ತೂ ಅತ್ತೂ ಬಳಲಿದಳು. ಹೃದಯ ಕಲ್ಲಿನಂತಾಯಿತು ಆಕೆ ಆ ಕತ್ತಲಲ್ಲಿ ತನ್ನ ಜೀವನದ ಬಿಕ್ಕಟನ್ನು ಬಿಡುಗ

(ಹದಿನೈದನೇ ಪುಟ ನೋಡಿರಿ)

ಸುಸ್ವಾಗತ!
ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಮನಮೆಚ್ಚುವ ಸರ್ವ ಸೌಕರ್ಯಗಳಿಂದೊಡಗೂಡಿದ
ವಸತಿ ಗೃಹ

HOTEL
SHIVAPRASADA
COONDAPUR

ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.
ಫೋನ್: 77

ಸಲ್ವತ್ತಾರನೆ ವರ್ಷ
Telephone 226.

Lstd. 1921
NAVAYUGA
Leading Kannada Weekly
UDIPI, S. Kanara

ನಿ ಎ ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ನಿರ್ವಾಹಕ-ಸಂಪಾದಕರು
ಕೆ. ಕೃಷ್ಣಯ್ಯ ಶೆಟ್ಟಿ

ವಾರ್ಷಿಕ ಚಂದಾ:
ಮೂರು ವರ್ಷಕ್ಕೆ ಸಂಚಿಕೆಗಳು ಸೇರಿ
ಪೋಸ್ಟೇಜ್ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೫

ಷಾಣ್ಮಾಸಿಕ ಬೆಲೆಗಳು:
ಶಿಕ್ಷಿತರಿಗೆ (ಕಿಜುವಲ್)
ಈ ಸಂಚಿಕೆಯೊಂದಿಗೆ ರೂ. 2-00
ಸ್ಥಿರಮಿತ (ಕಂಪ್ಯಾಕ್ಟ್)
ಈ ಸಂಚಿಕೆಯೊಂದಿಗೆ ರೂ. 1-50

ಸೂಚನೆಗಳು

ಚಂದಿಕ ಬಂಧುಗಳಿಗೆ

ಚಂದಾವನು ತಿರಿಪಾಗಿದ್ದು ಹಿಂದರ್ಥದಿಂದ ಕೂಡಿರಬೇಕು. ಕಾಲಾವಾಧಿಯ ಪ್ರಮುಖ ಸಂಚಿಕೆಯು ಒಂದೇ ನಮ್ಮುಲಲ್ಲಿ ಬರಿದುಬಂಡುಗಳನ್ನು ಬಿಟ್ಟು ಸಂಸ್ಕೃಪಾದ ಉತ್ತರಗಳಿಂದ ಬರೆಯಲ್ಪಡಬೇಕು. ಅಡ್ರಾಸಿಕ. ಬದಲಾವಣೆಯಾದರೆ ಅವುಗಳ ಸಾಂಖಲನ್ನು ತಿಳಿಸಬೇಕು.

ಬಂದಾವಣೆದಾರರಿಗೆ—

ಬಂಧಾಯಾವಣೆಗಳೇ ಜಾಹೀರಾತಿನ ಬಿ. ಬಲಗಣ್ಣಾಗಲೀ ನಿಂಡಳೆಯ ಬೇಕಾದ ಯಾವುದೇ ಭಾಷೆಯಲ್ಲಿ ಯಾವ ಬಿಜ್ಞಾ ಇಲ್ಲಿ 'ನವಯುಗ'ದ ಸಾತೆಗೆ ಅಲಿ ಪಡಿಯಾಪ ಸಾರ್ವಜ್ಯರಿರುವುದು.

ಮುಖಪತ್ರದಲ್ಲಿ:

ಒಲ್ಲೇರಿಯೂಡ ಕಲಾವಿದರೊಬ್ಬರ
ಅಪೂರ್ವ ಕಲಾಕೃತಿ
"ಗುಪ್ತಕಾಡು ಜನರು"

ನವಯುಗ

ಸಂಪುಟ ೪೬	ಉಡುಪಿ	Vol. 46
ಸಂಚಿಕೆ ೫೩	೩೧—೮—೧೯೬೬	No. 53

ಮಾಧ್ಯಮ ಭಾಷೆ

ಆಗೋಸ್ತು ಹದಿನೈದನೆಯ ದಿನದಂದು ದೇಶದ ಭಾಷಾ ಸೂತ್ರವನ್ನು ಘೋಷಿಸುವುದಾಗಿ ಶಿಕ್ಷಣ ಸಚಿವ ಡಾ| ತ್ರಿಗುಣ ಸೇನರು ಸೋದಲು ತಿಳಿಸಿದ್ದರೂ ಅವರಿಂದ ಹಾಗೆ ಮಾಡಲಾಗಲಿಲ್ಲ. ಈ ವೈಕ್ಲೆಷಣಿಕ ವರ್ಷದ ಕೊನೆಯೊಳಗೆ ತಮ್ಮ ಘೋಷಣೆ ಮಾಡುವುದಾಗಿ ಅವರು ತಿಳಿಸಿದರು. ಈ ಮುಂದುವರಿಕೆಗೆ ರಾಜ್ಯ—ಕೇಂದ್ರಗಳ ನಡುವಣ ಭಿನ್ನಮತವೇ ಮುಖ್ಯ ಕಾರಣವೆನ್ನಬೇಕು. ವಿವಿಧ ಭಾಷಾರಾಜ್ಯಗಳಿಂದ ಕೂಡಿದ ದೇಶದಲ್ಲಿ ಬಲಾತ್ಕಾರವಾಗಿ ಇಂಗ್ಲಿಷರು ಇಂಗ್ಲಿಷನ್ನು ಹೇರಿದಂತೆ ಯಾವುದೇ ಒಂದು ಭಾಷೆಯನ್ನು ಹೇರುವುದು ಸಾಧ್ಯವಿಲ್ಲ. ಅಧಿಕೃತ ವ್ಯಾವಹಾರಿಕ ಭಾಷೆಯಾಗಿಷ್ಟಂದೆಂದು ನಿರ್ಧರಿಸುವಲ್ಲಿ ರಾಜ್ಯ—ರಾಜ್ಯ ಮತ್ತು ರಾಜ್ಯ—ಕೇಂದ್ರಗಳ ನಡುವೆ ಸರಿಯೂದ ತಿಳುವಳಿಕೆ ಮೂಡ ಬೇಕಾಗಿದೆ. ಉತ್ತರದವರು ಹಿಂದಿಯನ್ನು ಆದಷ್ಟು ಶೀಘ್ರವಾಗಿ ಇಂಗ್ಲಿಷಿನ ಸ್ಥಾನವನ್ನೇರಿಸಲು ಆತುರರಿದ್ದರೆ, ಮದ್ರಾಸವು ಅದಕ್ಕೆ ಅಡ್ಡಿಬೀಳಿದೆ.

ದೇಶದ ಭಾಷಾ ಸಮಸ್ಯೆ—ಪ್ರಶ್ನೆಯನ್ನು ನಾವು ಒಂದು ರಾಜ್ಯದ ದೃಷ್ಟಿಯಿಂದ ವಿವೇಚಿಸಿದರೆ ಸಾಲದು. ಸಮಗ್ರ ದೇಶವನ್ನು ನಾವು ಗಮನಿಸಲೇಬೇಕು. ಅಧಿಕೃತ ವ್ಯಾವಹಾರಿಕ ಭಾಷೆಯಾಗಿ ನಾವು ಹಿಂದಿಯನ್ನು ಸ್ವೀಕರಿಸುವುದರಿಂದ ಯಾವ ಅನ್ಯಾಯವೂ ಇರುವುದಿಲ್ಲ. ಆದರೆ, ಈ ಉದ್ದೇಶಕ್ಕಾಗಿ ಬಲಾತ್ಕಾರ ಮಾತ್ರ ಸಲ್ಲದು. ಒಲ್ಲದ ಜನತೆಯನ್ನು ಸಮಾಧಾನಕ್ಕೆ ತಂದು ಉದ್ದೇಶವನ್ನು ಸಾಧಿಸಬೇಕಾಗಿದೆ. ದೇಶದ ವಿಕ್ಕಕ್ಕಾಗಿ ವ್ಯಾವಹಾರಿಕ ಭಾಷೆಯೊಂದು ಅಗತ್ಯ. ಈಗಿನ ಇಂಗ್ಲಿಷ್‌ನ ಸ್ಥಾನವನ್ನು ಕಾಲಕ್ರಮೇಣ ಕಳೆಯುತ್ತಾದು ಕಂಡಿತವೇ. ಆದರೆ ಕಡೆಗೆ ಅಸಕ್ಕೆ ಕಡಿವಿಯಾಗುತ್ತಿದೆ.ಹಿಂದಿನಂತೆ ಇಂದು ಇಂಗ್ಲಿಷ್ ಬರೆಯಬಲ್ಲವರು, ಓದುವವರು, ಆಡುವವರು ದೇಶದಲ್ಲಿ ಕಡಿಮೆ. ತಾನಾಗಿಯೇ ದೇಶದಿಂದ ಇಂಗ್ಲಿಷ್ ತನ್ನ ಸ್ಥಾನ ಕಳೆದುಕೊಳ್ಳುವುದು. ಈಗಿನ ತ್ರಿಭಾಷಾ ಸೂತ್ರವೇ ತಾರತಮ್ಯವನ್ನೇರಬೇಕು. ಮೂರೂ ಭಾಷೆಗಳನ್ನೂ ಪ್ರಧಾನ ಪದವಿಯ ಶಿಕ್ಷಣದ ತನಕ ಕಡ್ಡಾಯಗೊಳಿಸಬೇಕು. ಆಗ ರಾಷ್ಟ್ರ, ದೇಶ ಮತ್ತು ಅಂತಾರಾಷ್ಟ್ರೀಯ ದೃಷ್ಟಿಯ ಭಾರತೀಯನು ತಲೆ ಕಸ್ಸಿಸಬೇಕಾಗಿ ಬರುವುದಿಲ್ಲ. ವಿದ್ಯಾರ್ಥಿಗೆ ವಿಶೇಷ ವಿಷಯಗಳ ಜೊತೆಗೆ ಮೂರು ಭಾಷೆಗಳನ್ನು ಕಲಿಯಲೊಳ್ಳುವುದು ಪ್ರಯಾಸವೆನಿಸಬಹುದು; ಇದಕ್ಕೆ ವಿಶೇಷ ವಿಷಯಗಳಲ್ಲಿ ಒಂದನ್ನು ಕಡಮೆ ಮಾಡಿಸಬಹುದು; ಅಥವಾ ಭಾಷಾ ಪುಸ್ತಕಗಳ ಹೊರೆಯನ್ನೂ ಇಳಿಸಿ ಒಳವಾದ ಅಧ್ಯಯನಕ್ಕೆ ಅವಕಾಶ ನೀಡಬಹುದು.

ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು—ಇದು ನಾವು ಹಿಂದಿನಿಂದಲೂ ಪ್ರತಿಪಾದಿಸಿಕೊಂಡು ಬಂದ ನೀತಿ. ಇತ್ತೀಚೆಗೆ ಸೇರಿದ ರಾಜ್ಯಗಳ ಶಿಕ್ಷಣ ಸಚಿವರೂ, ವಿಶ್ವವಿದ್ಯಾಲಯಗಳ ಉಪಕುಲಪತಿಗಳೂ ಈ ನೀತಿಗೆ ತಮ್ಮ ಶಾಶ್ವತಿಕ ಒಪ್ಪಿಗೆಯನ್ನು ನೀಡಿದ್ದಾರೆ. ಪ್ರಾದೇಶಿಕ ಮಾಧ್ಯಮಕ್ಕೆ ಹೆಚ್ಚಿನವರು ತೋರುವ ಆಕ್ಷೇಪವೆಂದರೆ, ಪಠ್ಯ ಪುಸ್ತಕಗಳ ಅಭಾವ. ಇದನ್ನು ತುಸು ಒಪ್ಪಬಹುದು; ಆದರೆ, ಈ ಒಂದು ಕಾರಣದಿಂದಲೇ ಅನ್ಯ ಮಾರ್ಗವಿಲ್ಲವೆಂದು ಪ್ರಸವ ವಾಗಗೊಡದಂತೆ; ಹುರುಳಿಯಿಲ್ಲವೆಂದು ಕುದುರೆ ತಾರದಂತೆ. ಮೊದಲು ಪ್ರಸವವಾಗಬೇಕು, ಆಗ ಕುಲಾವಿ ತಯಾರಿಸುವ ಕೆಲಸ ನಡೆಯುತ್ತದೆ. ದೇಶದಲ್ಲಿ "ವಿವಿಧ ವಿಷಯ'ಗಳ ನೇರವೆ ಬರೆದ ಪುಸ್ತಕಗಳನ್ನು ತೊಂಡು ಓದುವ ಶಕ್ತಿ ಎಷ್ಟು ಜನಕ್ಕಿದೆ? ಇಧೆ—ಕಾದಂಬರಿಗಳನ್ನೂ ಕಿಚ್ಚು ಹಾಕಿಸಿ ಕೈ ಸುಟ್ಟುಕೊಂಡವರಿಂದ ನವ್ಯ ದೇಶದಲ್ಲಿ ವೈಜ್ಞಾನಿಕ ಗ್ರಂಥಗಳ ಅಭಾವ ಸಾಮಾನ್ಯವಾದುದು. ಇಂಗ್ಲಿಷನ್ನೇ ಆಗಲೀ ಮೊದಲು ಪುಸ್ತಕಗಳನ್ನೆ ಬರೆದು ಅನಂತರ ಶಿಕ್ಷಣ ಮಾಧ್ಯಮವಾಗಿ ಇಂಗ್ಲೆಂಡಿನಲ್ಲಿಯೇ ಆಗಲಿ ಸ್ವೀಕರಿಸಿಲ್ಲ. ಅದು ಅಲ್ಪಸಂಖ್ಯಾತ ವರ್ಗದ ಭಾಷೆ; ಶಿಕ್ಷಣ ಮಾಧ್ಯಮವೂ ಅದೇ. ಕಾಲಕ್ರಮೇಣ ಆದರಲ್ಲಿ ಪುಸ್ತಕಗಳ ನಿರ್ಮಾಣವಾಯಿತೆಂಬ ಸತ್ಯವನ್ನು ಯಾರೂ ಅಲ್ಲಗಳೆಯಬಾರದು. ಇಂಗ್ಲಿಷ್ ಭಾಷೆಯು ಜ್ಞಾನ ದಿನದಿಂದ ದಿನಕ್ಕೆ ಭಾರತೀಯ ವಿದ್ಯಾರ್ಥಿಯಲ್ಲಿ ಕುಂದಿಹೋಗುತ್ತಿದೆಯೆಂಬುದನ್ನು ಪರಿಶೀಲಿಸಬೇಕಾದ ವಿಷಯವಾಗಿದೆ. ವಿದ್ಯಾರ್ಥಿಯು ತಾನು ಕಲಿಯುವ ವಿಷಯಗಳಲ್ಲಿ ಸರಿಪೂರ್ಣ ಜ್ಞಾನ ಪಡೆಯುವಂತೆ, ತಾನು ಕಲಿತುದನ್ನು ಪರರ ಮುಂದೆ ಕೂಲಂಕಷವಾಗಿ ಅಭಿವ್ಯಕ್ತಪಡಿಸುವಂತೆ ಆಗಬೇಕು. ಆಗಲೇ ಆತ ಪಡೆದ ಶಿಕ್ಷಣದ ಲಾಭ ಜನತೆಗಾಗುತ್ತದೆ.

ಪ್ರಾದೇಶಿಕ ಭಾಷೆಯೊಂದನ್ನೇ ಶಿಕ್ಷಣ ಮಾಧ್ಯಮವಾಗಿ ಸ್ವೀಕರಿಸಿದರೆ ಅನಾವಶ್ಯಕವಾಗಿ ಮುಂಬಯಿ-ಗೋವಾ-ಮೈಸೂರು-ಮದರಾಸುಗಳಿಗೆ ತುಸು ತೊಂದರೆಯಾಗುತ್ತದೆಯೆಂದು ಗೊತ್ತಾಗುತ್ತದೆ. ಇದಾಗಲೇ ಸರ್ಕಾರವಾಗುವ ಕೇಂದ್ರ ಸರಕಾರಿ ನೌಕರರಿಗೂ ಆತಂಕವಾಗಬಹುದು. ಇದಕ್ಕಾಗಿ ಪ್ರಾದೇಶಿಕ ಭಾಷೆಯೊಂದನ್ನೇ ಹಿಂಬಿಡದೆ ಮಾಧ್ಯಮವನ್ನೂ ಕೆಲವೆಡೆ ಅಶ್ಯಂಶ ಅವಶ್ಯವಿರುವಲ್ಲಿ—ಆರಂಭಿಸಬಾರದೇಕೆಂಬ ಪ್ರಶ್ನೆ ಬಂದಿದೆ. ಇದು ಪರಿಶೀಲನಾರ್ಹವೇ. ಪ್ರತಿ ವಿಶ್ವವಿದ್ಯಾನಿಲಯದಲ್ಲೂ ಐದಾರು ಕಾಲೇಜುಗಳಲ್ಲಿ ಹಿಂದೀ ಮಾಧ್ಯಮವನ್ನು ಆರಂಭಿಸಬಹುದು. ವಿದೇಶೀಯರಿಗಾಗಿ ಇಂಗ್ಲಿಷ್ ಮಾಧ್ಯಮವನ್ನೇ ಮುಂದುವರಿಸಬೇಕೆನ್ನುವವರೂ ಇದ್ದಾರೆ. ಅವರ ಒಳಿತಿಗಾಗಿ ಭಾರತೀಯರನ್ನು ಬಲಿಕೊಡಬೇಕೆಂದೂ ಅಂದಾರು ಆದರೂ ಒಂದು ಮಾತು. ಇರುವ ಮಾಧ್ಯಮವನ್ನು ಬದಲಾಯಿಸುವುದಕ್ಕೆ ಮೊದಲು ಎಲ್ಲ ಜನತೆಯು ಒಪ್ಪಿಗೆ ನೀಡಿಯಬೇಕು; ಆ ತಂಕಗಳು ತಲೆ ತೋರಿದರೆ, ಅದನ್ನು ಎದುರಿಸುವ ಎದೆಗಾರಿಕೆ ತೋರಬೇಕು. ಡಾ| ಸೇನರಲ್ಲಿಯಾದರೂ ಕೆಯಿದೆಯೆ? ಕಾಲ್ಕೆಯೂ ಇದೆ. ಪ್ರಶ್ನೆಗೊಂದು ಪೂರ್ಣವಿರಾಮ ಹಾಕುವ ದೃಢ ಸಂಕಲ್ಪವೂ ಅವರಲ್ಲಿದೆ.

ನಾವು—ನೀವು

ಈ ಸಂಚಿಕೆಯೊಂದಿಗೆ 'ನವಯುಗ' ವು ನಲುವತ್ತಾರು ವರ್ಷಗಳ ದೀರ್ಘ ಬದುಕನ್ನು ಬಾಳಿ ನಲುವತ್ತೇಳನೆಯ ವರ್ಷಕ್ಕೆ ಪಾದಾರ್ಪಣ ಮಾಡುತ್ತಿದೆ. ಈ ಸಂದರ್ಭದಲ್ಲಿ ತಮ್ಮಿಷ್ಟೈಷಿ—ಚಂದಾದಾರರು, ಜಾಹೀರಾತುದಾರರು, ಪತ್ರಿಕೆಗಳ—ಲೇಖಕರ—ಗಳ ಸಹಕಾರವನ್ನು ಹೃದಯ ಪೂರ್ವಕ ನೆನೆದು ಅವರಿಗೆ ಕೃತಜ್ಞತೆಯರ್ಪಿಸುತ್ತೇವೆ. ಅವರೆಲ್ಲರ ಸಹಕಾರ—ಸಹಾಯ ಮುಂದೆಯೂ ನವಂಗಿರಲಿ ಎಂದು ಆಶಿಸುತ್ತೇವೆ.

ಸುದೀರ್ಘ ಅವಧಿಯ ಕಟು ಅನುಭವಗಳು ನೂರಾರು. ಅದರೂ ಅನೆಲ್ಲವನ್ನೂ ನುಂಗಿಕೊಂಡು, ಆತ್ಮಕ ಪತ್ರಿಕಾ ಪ್ರಪಂಚ ಸಾಗರದಲ್ಲಿ ನಮ್ಮ ದೋಣಿಯನ್ನು ಮುಂದೊತ್ತುತ್ತಿದ್ದೇವೆ. ನಮಗೆ ನಿಮ್ಮೆಲ್ಲರ ಸಹಕಾರ—ಸಲಹೆಗಳು ಬಂದಿಲ್ಲಾ ದೊರೆಯುತ್ತಿರಲಿ.

ನವಸಜ್ಜನ ಕಥೆ

"ಸಾಹಿತ್ಯವೂ ಕಂಪು ಚಿನಾ ತಿಳಿವ ದಾರಿಯನ್ನು ಮೆಟ್ಟಿ ನಿಂದಗಿ...."
'ಮಾನವನಂತೆ ಅಳಿಯನಾದನೆ!'

ವಚನ ಸಂಧಿ
ದೇವತಾನಾಂ ಚ ಸಂಕಲ್ಪ—
ಮನುಭಾಷಂ ಚ ಭೀಷಣಂ
ವಿನಯಂ ಕೃಷ ವಿದ್ಯಾನಾಂ
ವಿನಾಶಂ ಸಾಧಕಮ್ಮಾಹಾ||
ದೈವೇಚ್ಛೆ, ಬುದ್ಧಿವಂತರ ಪ್ರಭಾವ, ವಿದ್ವಾಂಸರ ನಮ್ರತೆ ಮತ್ತು ಹಾಪಿಗಳ ನಾಶ ಈ ನಾಲ್ಕು ಒಂದುಗೂಡಿದಾಗ, ಶೀಘ್ರ ಫಲ ಸಿಗುವುದ

ಗೇಹ ರಾಜ್ಯದಲ್ಲಿ

ಸಡಿಲು ಬಿಗಿಯಾಗುತ್ತೆಯೆ?

"ಕೇಳಿದ್ಯೇನೇ ನವೂಷೇನಾ....!

'ಏನದೆ ತರೂಷಾದ...'

"ಅಲ್ವೆ, ಬಂಗಾಳದ ಕಥೆ ಥಾರಿ ತ ಮೊಪೆಯಗಾಗಿದಃ ಅದನ್ನ ಕೇಳಿದ್ಯಾಂದ್ರೆ..'

'ಹೇಳೋಣು ಮನೇಲಿದ್ರೆ ರಾನೇ ಕೇಳೋದ ?'

"ಹ್ಞೂಂ, ಹೇಳೋರು ಮನೇಲಿದ್ದ ದ್ರೂ ಕೇಳೋರು ಇದ್ದೇ ಇರ್ತಾರೆ...'

".. ಏನಂದ್ರಿ, ನಿನ್ಮ ಕೊಂಕು ಗಿಂಕು ಎಲ್ಲಾ ನನ್ಗೆ ಅರ್ಥವಾಗ್ತದೆ. ಥಾರಿ ಕೇಳ್ದವ್ನೇ ನಿನ್ಮನ್ನು. ಬೆಳಿಗ್ಗೆ ಏಯು ಗಂಟೆಗೆ ಎದ್ದು ದೊರಟ್ರೆ ಮತ್ತ ಮರಳು ವಾಗ ರಾತ್ರಿ ಒಬತ್ತೋ ಹತ್ತೋ...."

'ಏನೇ ಇವು? ಶಾಂಮ್ಯವತಾರವನ್ನ ನೀನು ದ್ವಾಪರಾವತಾರ ತಳೆದು ಬಿಟ್ಟೆ ಯಲ್ಲಾ...'

"ಮೌನ, ನಾನುದ್ವಾಪರಾವತಾರವ ತಾಳಿದ್ರೆ ನೀವ್ ಮಾರಾಳಿಯವತಾರ ತಾಳ್ರಿ. ಯಾರೆ ಬೇಡಾಂತಾರೆ!"

'ಅಲ್ವೆ, ರುದ್ರ—ಬಾಳಿಯರು ಹೋ ರಾಡುತ್ತ ಕುಳಿತ್ರೆ ಸಂಧಾನ ಚೆತುರ ನಾರದ ಮಹರ್ಷಿಗಳು ಒರ್ತಾರೆ--ರಾಜಿ ಮಾ ಡ್ಲಿಕ್ಕೆ ಇಲ್ಲಿ ಯಾರು ಬರ್ತಾರೆ!'

"ಯಾರೂ ಬರೋದು ಬೇಡ. ನೀವು ಸಮ್ಮನಿರೀಂದ್ರೆ...ನಿಮ್ದು ಯಾವಾಗ್ಲೂ ಹೀಗೇನೇ. ಕೈ ಹಿಡಿದವ್ನು ಅಂದ್ರೆ ಕಾಲ ಕಸಕ್ಕಿಂತ ಕಡೆ, ಕೂಲಿಯಾಳುಗಳಿಗೂ ಸ ಲಾಮು ಹೊಡೆಯ ತ್ತೀರಿ. ಆದ್ರೆ...."

"ಏನಂತೀಯೂ? ನಿನಗೆ ಸಲಾಮು ಹೊಡೆಸು ಬೇಕೂಂತೆಯ?"

"ಬೇಡ್ರಿ. ನಿಮ್ಮ ಸಲಾಮೂ ಬೇಡ ಮುಲಾಮೂ ಬೇಡ. ಸದ್ಯ ದಿನವಿಡೀ ಮರೆತು ಬಿಟ್ರೂ ರಾತ್ರೆಗಾದ್ರೂ ಮನೆ ಯೆಂಬುದೊಂದಿದೆಯಂದು ಜ್ಞಾಪಕವಿದೆ ಹಾನೆ?"

"ಏನೇ ನೀನನ್ನೋದು? ನಿನ್ನೊಂದಿಗೆ ಜಕ್ಕಂಡವಾಡ್ತಾ ಕೂತ್ರೆ ಹೊಟ್ಟೆ ಪುಂ ಬುಳ್ಳ?"

"ಅದೇ ಅಂದೆನಲ್ಲಾ....ನೋಡ್ರಿ, ನಿನ್ನೆ ಮೊದಲ್ನೆ ಆ ಗಂಡ-ಹೆಂಡ್ತಿ ಆಗೋರು ಹೇಗೆ ದಿನವಿಡೀ ಮಾತಾಡ್ತಾ ಇರ್ತಾರೆ ನೋಡಿ.."

'ಓಹೋ, ಅವ್ರಿಗೇನು ಚಂತೆ? ಪ್ರೊ ಡ್ಯೂಸರು ಲಕ್ಷಗಟ್ಟಲೆ ಕೊಟ್ಟರ್ತಾನೆ; ಚ ಕ್ಕಂದ ಮೂಡ್ತಿರ್ತಾರೆ. ಆದ್ರು ನೋಡು, ಅದಕ್ಕೂ ಜೀವನಕ್ಕೂ ಅಜಗಜಾಂತರ. ಆದು ಬರಿಯ ತಮಾಶೆ, ವಿನೋದ, ಕೇ ಳು ಮನರಂಜನೆ—ಇದು ಹಾಗಲ್ಲ, ವ್ಯ ವಹಾರ...."

"ಅಂದ್ರೆ ನಿನಿಮಾ ಎಲ್ಲಾ ಕೇಳು ವ ನರಂಜನೆ ಅಂತ ಅನ್ನೋದು ನೀವು..."

'ಮತ್ತೆಂಥದು? ಜೀವನ ವ್ಯವಹಾರ ದ ದುಃಖಗಳನ್ನು ಒಂದರೆಗಳಿಗೆ ಮರೆ ಯುವ ಸಲವಾಗಿ ಜನ ನಿನಿಮಾ ನುಗ್ಗು ತ್ತಾರೆ. ಅಲ್ಲಿ ತಮ್ಮ ತಾವೇ ಮರೆತುಬಿಡು ತ್ತಾರೆ. ಹೊರ ಬಂದ ಮೇಲೆ ಮತ್ತೆ ಸಮ ಸ್ಯೆ ಥಾರ ಹೊರಲಿಕ್ಕಾದೆ ತಾನೆ?'

'ಹ್ಞೂಂ, ಅದೂ ಹೌದೂನ್ನಿ. ಜನರ ಮನಸ್ಸನ್ನು ಹುಚ್ಚು ಹಿಡಿಸಿ ಅವರಿಂದ ಹಣ ಸುಲಿಯುವ ತಮೂರೆಯಿದು."

"ಇದ್ದಲ್ಲಿ ವಿಶೇಷವೇನ? ನೋಡು, ನವ್ಮ ಸರಕಾರಗಳೇ—ಅಂದ್ರೆ ನಾವೇ ನ ನ್ಮ ಸರ್ವಸಾಕ್ಷಿ ನೂಡಿಕೊಂಡು ಹಣ ವಸೂಲು ತೊಡಗ ತ್ತೇವೆ...."

"ಅಂದ್ರೆ....?'

'ನೋಡು, ಜನತಾ ಸರಕಾರ ಜನರಿಗೆ ಕಳ್ಳು ಕುಡಿಸಿ, ಅದರಿಂದ ಹಣ ಒಟ್ಟು ಮಾಡುವುದಂತೆ ತುಂಬ ಎಳಕ್ಕೆ ತೋರಿ ಸುತ್ತಿದೆ..'

"ಅಂದ್ರೆ, ನಾನನಿತೀರ್ಥವನ್ನು ರದ್ದು ಮಾಡುವುದು ತಾನೆ?"

'ಹೌದು...."

'ಹ್ಞೂಂ....ಎಲ್ಲವೂ ಕಾಲ ಮಹಿಮೆ ...'

"ಏನು ಕಾಲ ಮಹಿಮೆ-ಯೋ! ಮಹಾ ತ್ಮಾ ಗಾಂಧಿಯವರ ಆದರ್ಶವೆಂದು ಕಾಂ ಗ್ರೆಸ್ಸು ಮಾನನಿರೋಧವನ್ನು ತತ್ವವೆಂದು ಒಪ್ಪಿಕೊಂಡಿತು. ಈಗ ಅದನ್ನು ನದಿ ನೀ ರಲ್ಲಿ ಹರಿಯ ಬಿಡಲಾರಂಭಿಸಿವೆ. ಜನರಿಗೆ ಕಳ್ಳು ಕುಡಿಸಿ ಸರಕಾರ ಹಣ ಗಳಿಸು ತ್ತಿದೆ.'

"ಆಂದ್ರೆ ಹಣ ಬೇಕಾದ್ರೆ ಏನೂ ಮಾಡ ಲು ಟೋಪಿ ಸರಕಾರ ಸಿದ್ಧ...."

'ನೋಡವ್ಳ, ಇಂದು ಟೋಪಿ ಸರ ಕಾರವನ್ನ ಕೇಳುವವರು ಕಡಿಮೆ. ಎಲ್ಲ ಕಾಮನಬಿಲ್ಲಿನ ಸರಕಾರಗಳು. ಕೇರಳ—ಹಂಯನಗಳು ಈ ದಿಸೆಯಲ್ಲಿ ಥಾರಿ ವ ಂದುನರಿದ ವು. ಉಳಿದವರೂ ಜನತೆ ಯನ್ನು ಕರಬಾರ ಹಾಕಿ ನೋಯಿಸುವು ದಕ್ಕಿಂತ ಕಳ್ಳು ಕುಡಿಸಿ ಹಣ ಗಳಿಸುವು ದೇ ಒಳ್ಳೆಯದಲ್ಲ ಎಂದ ...'

'ಹ್ಞೂಂ... ಯಾಕೆ ಸುಂಠ್ಸು ಟೋಪಿ ಯವರನ್ನ ದೂರಬೇಕು? ಎಲ್ರು ಕಥೇನೂ ಒಂಡೇ. ಜನರನ್ನು ಮೆಚ್ಚಿಸುವುದೊಂದೇ ಚಿಂತೆ- ಅಮ್ರೆ ನೋಡಿ, ಗಾಂಧಿ ಶತಮಾ ನೋತ್ಸವದ ಹೊತ್ತ ಇಡಿ ದೇಶದಲ್ಲಿ ಮಾನಪ್ರತಿಬಂಧವನ್ನು ಕಟ್ಟುನಿಟ್ಟಾಗಿ ಸ್ವವಹಾರಕ್ಕೆ ತರಬೇಕು ಅಂತ ಗಾಂಧಿ ಸ್ಮಾರಕ ನಿಧಿಯಶ್ವ ಅಂತಾರಂತೆ...."

"ಅಂದುಕೊಳ್ಳಿರಿ ..."

'ಕೇಂದ್ರ ಸರಕಾರ ಅದನ್ನು ಒಪ್ಪು ತ್ತಂತೆ...."

"ಯಾರು ಒಪ್ಪಿದ್ರೇನೆ? ಹತ್ತು ಜನರು ಕುದುರೆಯನ್ನು ನೀರಿಗಳಿಸ ಬಲ್ಲರು, ನೀರು ಕುಡಿಯುವಂತೆ ಮಾಡಲಾರರು...'

"ಕೇಂದ್ರ ರಾಜ್ಯಗಳಿಗೆ ಆದೇಶವೇಕೆ ಕೊಡಬಾರದು?"

"ರಾಜ್ಯಗಳಿಗೆ ಸಂಬಂಧಪಟ್ಟ ವಿಷ ಯವದು. ಕೇಂದ್ರ ಏನೂ ಮಾಡುವ ಹಾ ಗಿಲ್ಲ. ಒಮ್ಮೆ ಸಡಿಲು ಮಾಡಿದ ಮೇಲೆ ಮ್ಮೆ ಬಿಗಿ ಮಾಡಲು ಆದು ಎಂ. ಎಸ್. ಇಡಿಯ ಮೈನ್ ಸ್ವಿಚ್ಚಂತ ತಿ ಳ್ಕೊಂಡೆಯೂ? ನಮಗಂತೂ ಹಣ ಬೇ ಕು. ಅದಕ್ಕಾಗಿ....'

"ಥಾರೀ ಒಳ್ಳೆದು ಹೇಳ್ತೀರಿ. ನೋಡಿ, ನಿನಗೆ ಹಣ ಬೇಕಾದ್ರೆ ಇನ್ನೂ ಕೆಲವು ಲಾಭದ ದಾರಿಗಳಿವೆ...'

'ಹೊರಡಲಿ ನೋಡೋಣ...'

"ನೋಡಿ, ಗಲ್ಲಿ ಗಲ್ಲಿಯಲ್ಲಿ ಜುಗಾರಿ ಕಟ್ಟೆ ತೆರೆಯಬೇಕು. ವಾಟೀಸ್ ಶೋಫ್ ಗಳನ್ನು ತೆರೆಯುವಂತೆ ...'

'ಇದನ್ನು ಇಷ್ಟು ವಿಶಾಲ ಪಳಹದಿಯ ಲ್ಲಿಷ್ಟಾದರೂ ಪ್ರವಾಸಿ ಕೇಂದ್ರಗಳಲ್ಲಿ ತೆರೆಯಲು ಕೆಲವು ರಾಜ್ಯ ಸರಕಾರಗಳು ಆಲೋಚಿಸುತ್ತಿವೆ..."

'ಶಬಾಸ್....ಹಾಗಿರಬೇಕು. ಆದ್ರೂ ನೋಡಿ, ಪ್ರವಾಸಿ ಕೇಂದ್ರಗಳಲ್ಲಿನ ಜು

(ಒಂಭತ್ತನೇ ಪುಟ ನೋಡಿರಿ)

ನನಗೆ ಈಗ ಬಿಪ್ಪತ್ತು ವರ್ಷ...

ಸ್ವತಂತ್ರ ಭಾರತದಲ್ಲಿ ಜನ್ಮ ತಳೆದ ನಾನು, ನನ್ನ ದೇಶ ಅನೇಕ ಸಂಕಷ್ಟ ಗಳನ್ನೆದುರಿಸಿ ಪ್ರಗತಿಯತ್ತ ನಾಗುತ್ತಿರುವುದನ್ನು ಕುತೂಹಲದಿಂದ ವೀಕ್ಷಿಸಿ ವಿಸ್ಮಯಗೊಂಡಿದ್ದೇನೆ. ಸ್ವಾತಂತ್ರ್ಯ ಪೂರ್ವದಲ್ಲಿ ಕೇವಲ ಬ್ಲೇಡುಗಳು, ಸಿಸ್‌ಗಳಿಗೆ ಪರಾವಲಂಬಿಯಾಗಿದ್ದ ನನ್ನ ದೇಶ ಇಂದು ಜೆಟ್ ವಿಮಾನ ಮತ್ತು ಗಣಕ ಯಂತ್ರಗಳನ್ನು ಉತ್ಪಾದಿಸುತ್ತಿರುವುದು ಪೆಮ್ಮೆಯ ವಿಷಯವಾಗಿದೆ. ನನ್ನ ದೇಶ ವಿವಿಧ ಸಾಂಪ್ರದಾಯದ ಏನ್ನೆಲೆಯಲ್ಲಿ ಪ್ರಗತಿಗೆ ನೆಣಸುತ್ತಿರುವುದು ಅಭಿಮಾನದ ಸಂಗತಿ.

ಇಂದಿನ ಯುವ ಜನತಾಂಗ ಈ ಸವಾಲನ್ನು ಸಮರ್ಥವಾಗಿ ಎದುರಿಸಿ ರಾಷ್ಟ್ರಾಭಿವೃದ್ಧಿಯಲ್ಲಿ ಶಕ್ತಿ ಮೀರಿ ದುಡಿದು ಭವಿಷ್ಯ ವನ್ನು ಭವ್ಯಗೊಳಿಸುವರೆಂಬ ವಿಶ್ವಾಸ ನನಗಿದೆ.

FREEDOM

ಆತ್ಮವಿಶ್ವಾಸ ರಾಷ್ಟ್ರ ನಿರ್ಮಾಣಕ್ಕೆ ಆಧಾರ



ಪೂರ್ತಿ

ಶಿಕ್ಷಣರಂಗ

ಧರ್ಮ-ಸಂಸ್ಕೃತಿ ಸಂಗಮವಾಗಬೇಕು ಶಾಲೆ

ಶ್ರೀ ಮುಂಡೋಡು ನಾರಾಯಣ ಭಟ್ಟ

ಮಾನವನಿಗೆ ಜಗತ್ತಿನ ಇತರ ಎಲ್ಲಾ ಜೀವಿಗಳಿಗಿಂತಲೂ ವಿಶೇಷವಾದ ಒಂದು ತಿಳುವಳಿಕೆ ಇದೆ. ಆದುದರಿಂದಲೇ ಮಾನವನನ್ನು "Rational beeing" ಎನ್ನುವುದು. ಜನ್ಮ ತಾಳಿದಾಗಲೇ ಇರುವ ಬುದ್ಧಿ ಶಕ್ತಿಗೆ, ವಿದ್ಯೆಯ ಮೆರುಗನ್ನು ಕೊಟ್ಟಾಗ ಆದು ಸ್ಫಟಿಕದ ಚೆನ್ನಂತೆ ಪ್ರಕಾಶಮಾನವಾಗಿ ಪ್ರಜ್ವಲಿಸಲಾರಂಭಿಸುವುದು. ಬೂದಿ ಮುಚ್ಚಿದ ಕೆಂಡದಂತೆ, ಮಾನವನ ಅಂತರಾಳದಲ್ಲಿ ಬುದ್ಧಿ ಶಕ್ತಿಯು ಸುಪ್ತಾವಸ್ಥೆಯಲ್ಲಿರುವುದು. ಅಂತಹ ಬುದ್ಧಿಶಕ್ತಿಯನ್ನು, ಉತ್ತೇಜನಗೊಳಿಸುವ ಕ್ರಿಯೆಗೆ "ವಿದ್ಯಾಭ್ಯಾಸ"ವೆನ್ನುವರು. ವಿದ್ಯಾಭ್ಯಾಸವೆಂದರೆ ಅಂಕಿ ಅಂಶಗಳನ್ನೊಳಗೊಂಡ ಕೆಲವು ವಿಚಾರಗಳ ಸಂಗ್ರಹಣೆಯಲ್ಲ (ಹೀಗೆ ಸಂಗ್ರಹಿಸಿದ ವಿಚಾರಗಳು ಕೆಲವು ಬಾರಿ ಮಾನವನ ವ್ಯಕ್ತಿತ್ವದ ನೇರ ಪರಿಣಾಮಕಾರಿಯಾಗದಿದಿರಬಹುದು) ಮಾನವನನ್ನು ಮಾನವನನ್ನಾಗಿ ಮಾಡುವುದು ವಿದ್ಯಾಭ್ಯಾಸ. ಕೆಲವೇ ವಿಚಾರಗಳನ್ನು ಸಂಗ್ರಹಿಸಿ, ಅದನ್ನು ಜೀವನದಲ್ಲಿ ಅಳವಡಿಸಲು ಪ್ರಯತ್ನಿಸಿದ ವ್ಯಕ್ತಿಯು ಪ್ರಶ್ನೆಕಾಲಾಯದ ಹಲವು ಪುಸ್ತಕಗಳನ್ನು 'ಕಂಠಪಾಠ' ಮಾಡಿದವನಿಗಿಂತಲೂ, ವಿದ್ಯಾವಂತನೆಂದು ಹೇಳಲು ಆಡ್ಡಿಯಿಲ್ಲ (ಇದರ ತಾತ್ಪರ್ಯವನ್ನು ಹೊಕ್ತಿರುವ ಕತ್ತೆಗೆ ಎದರ ಭಾರದ ಅರಿವಿರುವುದೇ ವಿನಃ ಅದರ ಬೆಲೆಯ ಜ್ಞಾನವಿರುವುದಿಲ್ಲ) "ಕತ್ತೆ ಬಲ್ಲುದೆ ಕತ್ತರಿಯ ಪಂವಳನ?"

ಕೇವಲ 'ಓದು' ವಿದ್ಯಾಭ್ಯಾಸವಲ್ಲ. ಮಾನವನ ಹೃದಯವನ್ನು ಶುಚಿಗೊಳಿಸುವ, ನಡತೆಯನ್ನು ತಿದ್ದುವ, ಬುದ್ಧಿಶಕ್ತಿಯನ್ನು ಉತ್ತೇಜನಗೊಳಿಸುವ, ಎಲ್ಲದಕ್ಕಿಂತಲೂ ವಿಂಗಿಬಾಗಿ ಮಾನವನು ಸ್ವತಂತ್ರವಾಗಿ ತನ್ನ ಕಾಲ ಮೇಲೆ ನಿಂತ 'ಬಾಳ ಪೆ' ನಡೆಯಲು ಸಹಾಯಕವಾಗುವ ಶಿಕ್ಷಣವನ್ನು ನಿಜವಾದ ವಿದ್ಯಾಭ್ಯಾಸವೆನ್ನಬಹುದು. ಓದು ಕಲಿಯುವುದು ಧರ್ಮದ ಕಟ್ಟಳೆಯನ್ನು ಭದ್ರವಾಗಿಸುವುದಕ್ಕೆ. ಆದು ಕೇವಲ ಲೌಕಿಕ ಪುಸ್ತಕಗಳಿಗೆ ಸೀಮಿತವಾಗಿಲ್ಲ. ವಿದ್ಯಾಭ್ಯಾಸದ ತರುವಾಯ ಮೊದಲಿರುವುದು ಜೀವನ ನಡೆಸುವುದರಲ್ಲಿ. ಮನುಷ್ಯ ಕೋಟಿಗೆ ಇರುವ ಶಿಕ್ಷಣ ಅಜ್ಞಾನವೊಂದೇ. ಅದನ್ನು ಜಯಿಸಬೇಕು. ಕಂಫ ಶ್ರದ್ಧೆಯನ್ನು ಬಿಟ್ಟು ಸತ್ಯವನ್ನು ಹುಡುಕಬೇಕು.

'ಇಂದಿನ ವಿದ್ಯಾರ್ಥಿಗಳೇ ಮುಂದಿನ ಜನಾಂಗ.' ನಮ್ಮ ಮೊದಲ ಹೆಜ್ಜೆಯು ನೋಲೆ ಇಡೀ ಜೀವನದ ಭವಿಷ್ಯ ಅವಲಂಬಿಸುತ್ತದೆ. ಆದುದರಿಂದ ನಾವು ಭದ್ರವಾದ ಸಂಜಾಂಗವನ್ನು ಇರಗೊಳಿಸುವುದು ಅತ್ಯಗತ್ಯ. ಸಮಾಜವು ಒಂದು ಹೆಡಗದಂತೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅದರ ಚುಕ್ಕಾಣಿ ಹಿಡಿಯಲುಸಿದ್ಧನಾಗಬೇಕು. ಸಹ ಜೀವನದ ಜವಾಬಿಯನ್ನು ತುಳಿಯಬೇಕು. ಉನ್ನತ ಶಿಕ್ಷಣವಿರಬೇಕಾದುದು ಜೀವನದ ಸಮಸ್ಯೆಗಳನ್ನು ಪರಿಹರಿಸಲು ಆದರೆ, ಈ ಸಮಸ್ಯೆ ನಮ್ಮ ದೇಶದಲ್ಲಿ ಹಲವಾರು ವರ್ಷಗಳ ಹಿಂದೆಯೇ ಪರಿಪರಿಕಲ್ಪಿಸಿದೆ.

ಹಿಂದೆ ನೋಡಿದಾಗ... ಹಲವು ವರುಷಗಳ ಹಿಂದಣ ವಿದ್ಯಾಭ್ಯಾಸ ಕ್ರಮವನ್ನು ಪರಿಶೀಲಿಸಿ ನೋಡಿದರೆ, ಅಂದು ಇಂದಿನಂತೆ ಶಾಲಾ ಕಾಲೇಜುಗಳು ಇರಲಿಲ್ಲ. ಜ್ಞಾನದ ನೀರಡಿಕೆ ಹೆಚ್ಚಿದ ವಿದ್ಯಾರ್ಥಿಗಳು, ತಮ್ಮ ಗುರುಗಳ ಬಳಿಗೆ ಹೋಗಿ, ಆವರ ಸೇವೆ ಗೈದು ತನ್ಮೂಲಕ ಅವರ ಕೃಪೆಗೆ ಪಾತ್ರರಾಗಿ ಜ್ಞಾನವನ್ನು ಸಂಪಾದಿಸುತ್ತಿದ್ದರು. ಅಂತಹ ಗುರು ಪೀಠಗಳು ಬಹಳ ವಿರಳವಾಗಿದ್ದುವು. ಮಾತ್ರವಲ್ಲ ಕೇಳು ಜಾತಿಯೆಂದು (ಅಂದು) ಪರಿಗಣಿಸಲ್ಪಟ್ಟವರಂತೂ ವಿದ್ಯಾರ್ಜನೆ ಮಾಡುವಂತಿರಲಿಲ್ಲ. ಈಗಿನಂತೆ ಕುರ್ಚಿಯಲ್ಲಿ ಕುಳಿತುಕೊಳ್ಳುವ ಸೌಭಾಗ್ಯ (ಅಲ್ಲ, ದೌರ್ಭಾಗ್ಯವೋ ನಾನರಿಯೆ) ಆವರಿಗಿರಲಿಲ್ಲ. ಕ್ರಮೇಣ ಸಾಂಚಿ, ಉಜ್ಜೈನಿ, ತಕ್ಷಶಿಲೆ ಮುಂತಾದ ಕಡೆಗಳಲ್ಲಿ ವಿದ್ಯಾಪೀಠಗಳು ಸ್ಥಾಪಿಸಲ್ಪಟ್ಟವು. ಈ ವಿದ್ಯಾಪೀಠಗಳು ದೇಶವಿದೇಶಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸಲಾರಂಭಿಸಿದವು. ಅಲ್ಲಿ ಧರ್ಮ, ಸಂಸ್ಕೃತಿ ಇತ್ಯಾದಿ ವಿಷಯಗಳಿಗೆ ಪ್ರಾಧಾನ್ಯವಿದ್ದಿತ್ತು.

ಇಂದು? ...ಕಾಲಚಕ್ರ ಉರುಳಿದಂತೆ ವಿದ್ಯಾಭ್ಯಾಸ ಕ್ರಮದಲ್ಲಾ ಬದಲಾವಣೆಗಳುಂಟಾದವು. ಹಳ್ಳಿ ಹಳ್ಳಿಗಳಲ್ಲಾ ಶಾಲಾ ಕಾಲೇಜುಗಳು ತೆರೆಯಲ್ಪಟ್ಟಿವೆ. ವಿದ್ಯಾಭ್ಯಾಸ ನೂಡುವ ಎಲ್ಲಾ ವಿದ್ಯಾರ್ಥಿಗಳಿಗೂ, ಸರಕಾರ ತಕ್ಕ ಸೌಕರ್ಯವನ್ನು ಮಾಡಕ್ತಿದೆ. ಆರ್ಥಿಕ ಕೊರತೆಯುಳ್ಳವರಿಗೆ ಧನ ಸಹಾಯವನ್ನು ನೀಡುವುದು. ಆದುದರಿಂದ 'ಓದು' ಕಲಿಯಲು ಆಳಕ್ತಿಯುಳ್ಳವನು ನಿರಾಶಯಾಗಬೇಕಿಲ್ಲ. ಓದು ಕಲಿತವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ.

ವಾಸ್ತವಿಕವಾಗಿ ಇಂದಿನ ವಿದ್ಯಾಭ್ಯಾಸ ಕ್ರಮವು ಶೋಚನೀಯವಲ್ಲವೆಂದಿದೆ. ಯಾವುದೇ ರೀತಿಯನ್ನಾದರೂ ಅನುಸರಿಸಿ ಹೆಚ್ಚಿನ ವಿದ್ಯಾರ್ಥಿಗಳನ್ನು ತೀರ್ಗಡೆಗೊಳಿಸುವುದೊಂದೇ ಆವುಗಳ ಉದ್ದೇಶ. ವಿದ್ಯಾರ್ಥಿಗಳು ಬಯಸುವುದೂ ಅದನ್ನೇ. (ರೋಗಿ ಬಯಸಿದ್ದೂ ಹಾಲು, ವೈದ್ಯ ಕೊಟ್ಟದ್ದೂ ಹಾಲು) ಪರೀಕ್ಷೆಯಲ್ಲಿ ತೀರ್ಗಡೆ ಹೊಂದಬೇಕು, ಒಂದು "ಸರ್ಟಿಫಿಕೇಟು" ಪಡೆದು ತನ್ಮೂಲಕ ಒಳ್ಳೆಯ ಹುದ್ದೆಯೊಂದು ದೊರಕಿ, ಬೌತಿಕವಾಗಿ ಸುಖವಾದ ಜೀವನವನ್ನು ಸಾಗಿಸುವುದೇ ಇಂದಿನ ವಿದ್ಯಾರ್ಥಿಗಳ ಉದ್ದೇಶ ಫಲವಾದ ಜ್ಞಾನ ಅವಗತ್ಯ. ಬೇಕಾದುದು ಒಳ್ಳೆಯ ವೇತನ ದೊರಕುವ ಹುದ್ದೆ; ಉತ್ತಮ ಸ್ಥಾನ. ಪರಿಣಾಮವಾಗಿ ಇಂದು 'ಡಿಗ್ರಿ'ಗಳನ್ನು ಪಡೆಯುವುದೊಂದೇ ವಿದ್ಯಾರ್ಥಿಗಳ ಧ್ಯೇಯವಾಗಿ ಬಿಟ್ಟಿದೆ. (ನಮ್ಮ ದೇಶದಲ್ಲಿಂದು 'ಡಿಗ್ರಿ'ಗಳನ್ನು ಮಾರುವ ವಿಶ್ವವಿದ್ಯಾಲಯಗಳಿವೆಯೆಂದರೂ ಅದು ಅತಿಶಯೋಕ್ತಿಯಾಗಲಾರದು)

ವಿಜ್ಞಾನದ ಪ್ರಗತಿ. ಇಂದಿನ ವಿದ್ಯಾಭ್ಯಾಸ ಕ್ರಮವು ಜಪಳಗಳನ್ನು ಉತ್ತಮವಾಗಿರುವುದರಿಂದಲೇ, ಜನರು ಕನಸು ಮನಸಿನಲ್ಲೂ ಎಣಿಸಲಾರದಷ್ಟು ಪ್ರಗತಿಯನ್ನು ವಿಜ್ಞಾನವು ಸಾಧಿಸಿರುವುದೆಂದು ಕೆಲವರ ಅಭಿಪ್ರಾಯ. ರೈಲು, ವಿಮಾನ ಮುಂತಾದ ಪ್ರಗತಿಯು ವಿಸ್ಮಯಕಾರಕವಾಗಿದೆ. ಮಾನವನ ದೇಹದೊಳಗಣ ಅಂಗಾಂಗಗಳನ್ನು ಹೊರಗಿನಿಂದಲೇ ನೋಡುವ ವಿಧಾನ, ಚಂದ್ರಲೋಕದ ಪ್ರಯಾಣ, ಇವೆಲ್ಲವನ್ನೂ ವಿಜ್ಞಾನವು ಒದಗಿಸಿದೆ.

ವಿಜ್ಞಾನವೇನೋ ವಿಸ್ಮಯಕಾರಕವಾದ ಪ್ರಗತಿಯನ್ನು ಸಾಧಿಸಿದೆ. ಆದರೆ ಅದು ಮಾನವನ ನೈತಿಕ ಉನ್ನತಿಗೆ ಸಹಾಯಕವಾಗಿಲ್ಲ. ಮಾನವನು ನಿರ್ಮಿಸಿದ ಯಂತ್ರಕ್ಕೆ ಆಳನೇ ಆಧೀನ. ಇದರಿಂದಾಗಿ ಮಾನವನಿಗೆ ದೈವದತ್ತವಾಗಿರುವ ಮೇಧಾಶಕ್ತಿ ವ್ಯರ್ಥವಾಗಿ ಹೋಗುವುದು. ವಿಜ್ಞಾನ ಪ್ರಪಂಚವನ್ನು ನಿರ್ನಿಮಿತ್ತಾರ್ಥದಲ್ಲಿ ಧ್ವಂಸ ಮಾಡಬಲ್ಲ ಹಾನಿಕಾರಕವಾ

(ಹನ್ನೊಂದನೇ ಪುಟ ನೋಡಿರಿ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O P No 27/1967

1 ಚಿಕ್ಕು ಪೂಜಾರ್ತಿ, 2 ಭಾಸ್ಕರ ಪೂಜಾರಿ.ತೈಪ್ಪೆ ಮೂರ್ತಿರಾಯರ ಮೊದಲನೆ ಹೆಂಡತಿಯ ಮಕ್ಕಳು—

ಉಡುಪಿ ತಾಲ್ಲೂ ಚೇರ್ಕಾಡಿ ಗ್ರಾಮದ ಶಾಶ್ವತ ನುಭಾಗರಬೆಟ್ಟಿನಲ್ಲಿರುವವರು—

—ಅರ್ಜಿದಾರರು.

ವಿರುದ್ಧ

1 ಲಕ್ಷ್ಮಿ ಬಾಯಿ — ಕೃಷ್ಣಮೂರ್ತಿರಾಯರ 2ನೆ ಹೆಂಡತಿ, 2. ನಾಗರಾಜ-ಗ್ಯಾನರ್

1ನೆ ಎದುರಿಗೆ ಮಗ—

ಗಾರ್ಡಿಯನ್ 1ನೆ ಎದುರು—ಉಡುಪಿ ತಾಲ್ಲೂ ಪಾರಂಪಳ್ಳಿ ಗ್ರಾಮದಲ್ಲಿರುವವರು-ಎದುರಿರು.

ಇವರೊಳಗೆ

ಎದುರಿಗೆ ನ ಇತರ ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವುದರಿಂದ—

ಮೇಲ್ಕಂಡ ಆರ್ಜಿದಾರರ ಪ 2ನೇ ಎದುರಿ ಕಂದ ವ 1ನೆ ಎದುರಿಗೆ ಗಾರ್ಡ ವ್ಯಕ್ತಿ ಕೃಷ್ಣಮೂರ್ತಿರಾಯರ ದಾಖ್ಲು ಅರ್ಜಿಪ್ಪೈಲೆದ್ದಾಗಿ ಅಸಲ್ಲಿ ಕಾಣಿಸಿರುವ ಅಯನೇಜನ ಕಡಿಯಲಿದೆ ತಾವು ಹಕ್ಕುದಾರರು ಸ ವಾದಿಸಲು ಪ್ರಾರಂಭಿಸಿರುವ ಜೆಸಾನಿನಲ್ಲಿ ಪ್ರಾರಂಭ ಸರ್ಟಿಫಿಕೇಟು ಕೊಡಿಸುವಂತೆ ಅರ್ಜಿದಾರರು ಅರ್ಜಿ ಮಾಡಿಕೊಂಡಿರುವುದ್ರಿಂದ ಆಕಾರಣ ಎದಿ ರಿಗಾಗಲೇ ಇತರರು ಗಾಗಲೇ ಲಕ್ಷ್ಮೀಬಾಯಿರವರಲ್ಲಿ ಆದನ್ನು ತಾ: 14.9.1967ನೇ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಹೇರು ಮಡಿಕೊಳ್ಳಲಿಕ್ಕೆ ತಪ್ಪಿದರೆ ಸದ್ರಿ ಅರ್ಜಿಯು ನಿಶ್ಚ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Varadaraya Pai
Advocate for Petitioners

ಉಡುಪಿ, 17-8-1967.

ನಿಮ್ಮ ಹೊಲದಲ್ಲಿ ನಮ್ಮ ಕೃಷಿತಜ್ಞರು

ಹೊಲದ ಉತ್ಪನ್ನ ಹೆಚ್ಚಿಸಲು, ಸಿಂಡಿಕೇಟ್ ಬ್ಯಾಂಕು ತನ್ನ ಕೃಷಿಕ ಗ್ರಾಹಕರಿಗೆ ಎಲ್ಲಾ ತೆರನ ಸೌಲಭ್ಯ ಮತ್ತು ನೆರವನ್ನು ನೀಡುತ್ತದೆ. ಆರ್ಥಿಕ ನೆರವಿನ ಜತೆಗೆ ಬ್ಯಾಂಕಿನ ಹೊಲದ ಪ್ರತಿನಿಧಿಗಳ ತಾಂತ್ರಿಕ ಸಲಹೆ ಮತ್ತು ಮಾರ್ಗದರ್ಶನ ಕೃಷಿಕ ಗ್ರಾಹಕರ ಪಾಲಿಗೆ ಸದಾ ಲಭ್ಯ.

ಬ್ಯಾಂಕಿನ ಹೊಲದ ಪ್ರತಿನಿಧಿಗಳು ಕೃಷಿಕರಂಗದಲ್ಲಿ ತಜ್ಞರಾಗಿದ್ದು ಅವರು ಬ್ಯಾಂಕಿನ ಕೃಷಿಕ ಗ್ರಾಹಕರ ಹೊಲಗಳನ್ನ ಆಗಾಗ್ಗೆ ಸಂದರ್ಶಿಸಿ, ಅವರ ಅವಶ್ಯಕತೆಗಳನ್ನು ಅರಿತು, ಅವರಿಗೆ ಸೂಕ್ತವಾಗುವ ಕೃಷಿವಿಷಯಕ ಸಮಸ್ಯೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ಅವರಿಗೆ ಸೂಕ್ತ ಸಲಹೆಯನ್ನೂ ಮಾರ್ಗದರ್ಶನವನ್ನೂ ನೀಡುತ್ತಾರೆ.

ಸಿಂಡಿಕೇಟಿನ ಕೃಷಿತಜ್ಞ ಪ್ರತಿನಿಧಿಗಳ ಪಾಲಿಗೆ ಬ್ಯಾಂಕಿನ ಗ್ರಾಹಕರ ಹೊಲವೇ ಕಾರ್ಯಾಲಯವಾಗಿದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು. ಮಣಿಪಾಲ, ಮೈಸೂರು ರಾಜ್ಯ.

ಯುವಜನಾಂಗಕ್ಕೊಂದು ಕರೆ

ಸಮಾಜ ಸೇವೆ ಮಾಡಲು ಎದ್ದೇಳಿರಿ!

ಲೇಖಕರು: ಶ್ರೀ ತಿರ್ಲಾಡಿ ವೀರಯ್ಯ ಪಿಂಟೋ, ಎಂ. ಎ. ಎಲ್.ಎಲ್. ಬಿ.

ಸಮೂಹದಲ್ಲಿ ಸಂಘಟನೆ ಮತ್ತು ಅಭಿವೃದ್ಧಿ ಇವು ಕಲ್ಯಾಣ ಸಮಾಜದಲ್ಲಿ ಪುಟ್ಟಿರುವ ನಮ್ಮೆಲ್ಲರ ಪರಸ್ಪರ ಸಹಾಯ ಸಹಾನುಭೂತಿಗಳನ್ನು ಜೊಂದಿಕೊಂಡಿವೆ. ಪವಾಜ ಸೇವೆಯನ್ನೆ ತಮ್ಮ ಜೀವನದ ಗುರಿಯನ್ನಾಗಿಟ್ಟು ಮಹಾತ್ಮಾ ಗಾಂಧಿಯವರಂತಹ ಮಹಾತ್ಮರು ಯುವಕರಾದ ನಮಗೆ ಇವರ ಸಂದೇಶವನ್ನಿತ್ತಿದ್ದಾರೆ. ಭಾರತದ ತರುಣ ತರುಣಿಯರಾದ ನಾವು ಉಲ್ಕರ್ಷವನ್ನು ಬದಿಗೊತ್ತಿ ಈಗ ನಮಗೆ ಹಾಲಿತ್ತು, ಹೊತ್ತು ಸಲಹಿದ ಭಾರತ ಮಾತೆಯ ಸೇವೆ ಮಾಡಲು ಮುಂದಾಗಬೇಕು.

ಸಮಾಜ ಸೇವೆಯು ಕ್ಷೇತ್ರತ್ರಯ ಮನೆಯಿಂದ ಪ್ರಾರಂಭವಾಗಿ ಹಳ್ಳಿ, ಪಟ್ಟಣ, ದೇಶಗಳ ವರೆಗೆ ಹಬ್ಬುವೆ. ಮನೆಯ ಒಳಗೆ ತಂದೆ-ತಾಯಿ, ಅಕ್ಕ-ತಂಗಿಯೊಡನೆ ಸಹಕರಿಸಿ ಅವನ್ನು ಆದರ್ಶಪೀಠನ್ನಾಗಿ ಪರಿವರ್ತಿಸಬೇಕು. ದೇಶದಲ್ಲಿ ಮೂಲೆ ಮೂಲೆಗೂ ಹಬ್ಬಿಗೊಂಡಿರುವ ಅಸಹ್ಯ ಬಡತನವೆಂಬಾತನಿಗೆ, ರೋಗರುಜಿನಗಳಿಂದ ಆಜ್ಞಾನ ತಳಿಗೆದಿತನಗಳಿಂದ ಭಾರತದ ಯುವಕ ಯುವತಿಯರು ಹೋರಾಡಬೇಕಾಗಿದೆ. ಈ ಒಳ ಹಗೆಗಳೊಡನೆ ಕಾದಾಡಲು ನಮ್ಮಲ್ಲಿ ಶಿಸ್ತು, ದೃಢತೆ, ಸಂಯಮ ಮತ್ತು ತ್ಯಾಗವು ಒಡಮೂಡಿ ಬರಬೇಕು. ನಿಸ್ವಾರ್ಥತೆಯಿಂದ ದಡಿದು ದುರ್ಬಲವಾದ ಸಮಾಜವನ್ನ ಮುಂದೆ ತರುವಂತಹ ಕೆಚ್ಚೆದೆಯ ತರುಣ ವೃಂದ ಮುಂದೆ ಬರಬೇಕು. ಅಧಿಕಾರ ಲಾಲಸೆಯಿಂದಾಗಲಿ, ದೈಹಿಕ ಸುಖಿಭೋಗಗಳನ್ನು ಹೆಚ್ಚಿಸಲು ಅನುಕರಿಸುವ ಕೋಪ, ದ್ವೇಷ, ಹಿಂಸಾದಿ ರೀತಿ ನೀತಿಗಳ ಮೇಲೆ ನಿಂತಿರುವ ತತ್ವಗಳ ಅನುಕರಣೆಯಿಂದಾಗಲಿ ಸಮಾಜ ಸೇವೆ ಮಾಡಿದಂತಾಗದು. ಪ್ರತಿಫಲ ಸ್ವಾರ್ಥವನ್ನೂ ಬಯಸದೆ, ಹರ್ಷಚಿತ್ತದಿಂದ, ಮನಃಪೂರ್ವಕವಾಗಿ ಮಾಡಿದ ಸೇವೆಯೇ ನಿಜವಾದ ಸೇವೆ. ನಿಷ್ಕಾಮ ಸೇವೆಯನ್ನೆ ಯುವಕರು ಮಾಡಬೇಕಾಗಿದೆ. ಸ್ವಾರ್ಥದಿಂದ ಮಾಡಿದ ಸೇವೆ; ಬೆಕ್ಕು ಸನ್ಯಾಸಿಯಾದಂತೆ ವ್ಯರ್ಥವಾಗುವುದು. ಅದನ್ನು ಯಾರೂ ಮೆಚ್ಚುವುದಿಲ್ಲ.

ನಮ್ಮ ಸುತ್ತಮುತ್ತ ಎಷ್ಟೋ ಬಡ ವಿದ್ಯಾರ್ಥಿಗಳು ತಮ್ಮ ವಿದ್ಯಾ ವ್ಯಾಸಂಗವನ್ನು ಮುಂದುವರಿಸಲು ಸಾಧ್ಯವಿಲ್ಲದೆ ತೊಳಲಾಡುತ್ತಿದ್ದಾರೆ. ಅಂಥವರಿಗೆ ನಾನೆಷ್ಟು ಸಹಾಯ ಮಾಡಿದ್ದೇನೆ? ನಮ್ಮ ಮಕ್ಕಳಂತೆ ಆ ಮಕ್ಕಳು ಕೂಡಾ ಈ ಭಾರತದಲ್ಲಿ ಜನ್ಮತಳೆದಿದ್ದಾರೆ ಎಂಬುದನ್ನು ಜ್ಞಾಪಕದಲ್ಲಿಟ್ಟು ಸಹಾನುಭೂತಿ ತೋರಿಸಲೇ ಬೇಕು. ನಿರ್ಗತಿಕ ಮಕ್ಕಳಿಗೆ ಸಹಾಯ ಕೊಟ್ಟು, ಅವರು ಸ್ವತಂತ್ರ ಮಾನವರಾಗಿ ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ನಾವು ಮಾಡಿದ್ದಲ್ಲಿ, ಅವರ ಶಿಕ್ಷೆಯನ್ನು ನಾವಲ್ಲದಿದ್ದರೆ ನಮ್ಮ ಮುಂದಿನವರು ಅನುಭವಿಸಬೇಕಾದೀತು, ಸೈನಿಕ ತನ್ನ ಮಾತೃ ಭೂಮಿಗಾಗಿ ಹೋರಾಡುವುದು. ರಾಷ್ಟ್ರಕಾರಣಿ ದೇಶ ಹಿತದ ಕಾರ್ಯಗಳನ್ನೆರವುದು. ಆಧ್ಯಾತ್ಮಿಕ ಶೈಲ್ಪೆಯಿಂದ ನಿನ್ಮಾನ ಮಾಡುವುದು, ಸರಕಾರಿ ನೌಕರರು, ಲಂಚರುಷವತ್ತುಗಳಿಗೆ ವಶರಾಗದೆ ನಿಸ್ವಾರ್ಥಪರತನಾಗಿ ಪ್ರಾಮಾಣಿಕವಾದ ಸಮಾಜ ಸೇವೆಯು ಇನ್ನಿತರ ರೂಪುಗಳಾಗಿವೆ.

ಕೆಲವು ಯುವಕರು ಹೇಳ ವುದುಂಟು: 'ಸಮಾಜ ಸೇವೆ ಎಂಬ ಪವಿತ್ರವಾದ ಕಾರ್ಯಗಳಿಂದ ಮಾತ್ರ ಆಗುವಂತಹದ್ದು. ಚಿಕ್ಕ ಪುಟ್ಟ ಕಾರ್ಯಗಳನ್ನ ಮಾಡಿದರೆ ಸಮಾಜ ಸೇವೆ ಆಗುವುದಾದರೂ ಹೇಗೆ, ಸಮಾಜ ಸೇವೆಯನ್ನ ಮಾಡಲು ನಾವೆ ಅರ್ಹರಲ್ಲ, ನಾವು ಬಡವರು! ಇಂತಹ ಜವಾಬ್ದಾರಿಕೆಗಳೆಲ್ಲವೂ ಶ್ರೀಮಂತರಿಗೆ ಮತ್ತು ವಿದ್ಯಾವಂತರಿಗೆ ವಿೂಸಲಾಗಿಟ್ಟದ್ದು' ಆದುದರಿಂದ ಸಮಾಜ ಸೇವೆ ಮಾಡಿರೆಂದೆ ನಾವು ಮಾಡುವ ಮಹತ್ಕಾರ್ಯವಾದರೂ ಏನು? ನಮ್ಮಂತಹವರಿಗೆಲ್ಲಾ ಅದು ಸಾಧ್ಯವೇ?" ಅಂಥವರಿಗೆ 'ಸಮಾಜ ಸೇವೆ' ಎಂಬ ಪದದ ಅರ್ಥ ಸರಿಯಾಗಿ ತಿಳಿದಿಲ್ಲ ಎಂದು ವಿವಾದದಿಂದ ಹೇಳಬೇಕಾಗುತ್ತದೆ.

ಯುವಕರೆ ಬಡತನ, ಅಜ್ಞಾನ, ಅನಾರೋಗ್ಯ, ಅಲಸ್ಯಗಳು, ನಮ್ಮ ಸಮಾಜದ ಮಹಾ ಜೊಡ್ಡು ಕಡುಕುಗಳು. ಯುವಕರಾದ ನಾವು ನಮ್ಮ ಸಹೋದರರಿಗೆ ಪ್ರಾಥಮಿಕ ಆವಶ್ಯಕತೆಗಳಾದ ಆಹಾರ, ವಸತಿ, ಬಟ್ಟೆಬರೆ, ಪುಸ್ತಕಗಳನ್ನು ಒದಗಿಸಿ ಕೊಡಲು ಯತ್ನಿಸಬೇಕು. ಆರೆ ಹೊಟ್ಟೆಯ ಮನುಷ್ಯ ಸುಲಭವಲ್ಲ. ಭೀಕರ ಅಂಟು ರೋಗಕ್ಕೆ ಬಲಿಯಾದಲ್ಲಿ ಅಜ್ಞಾನಿ ಆತನ ಸಾಕ್ಷಾತ್ಕಾರವನ್ನೇ ಕಳೆದುಕೊಳ್ಳುತ್ತಾನೆ. ಹರಿಸ್ಮೃತಿ ಹೀಗಾಗದಂತೆ ಯುವಕರು ಅಸ್ಪೃಶ್ಯತೆ ಹೋಗಲಾಡಿಸಬೇಕು. ಭಾರತದ ಸಂಸ್ಕೃತಿಯ ಪ್ರಧಾನ ಸಂದೇಶವೇ ಸಮಾಜ ಸೇವೆಯಾಗಿದೆ. ಭಾರತದಲ್ಲಿ ಜನ್ಮ ತಾಳಿ ಭಾರತ ಮಾತೆಯ ಹಾಲನ್ನುಂಡು ದೃಷ್ಟ ಪುಷ್ಟವಾಗಿ ಬೆಳೆದ ಎಲೇ ಯುವಕನೆ, ಈ ನಿನಿಷದಿಂದಲೆ ಭಾರತ ಮಾತೆಯ ವೀರ ಸುವಂತನೆಂಬ ಕೀರ್ತಿ ಪಡೆಯಲು ಸಿದ್ಧನಾಗು! ಆ ಕೀರ್ತಿ ಪಡೆಸುವ ಸಾಧನ—ದಿಶ್ವರ್ಯವಲ್ಲ, ಗರ್ವವಲ್ಲ; ಬಡವರ ತಾತ್ಸಾರ, ಹೆಸ್ಮೆ—ಎಂದಿಗೂ ಅಲ್ಲ. ನಿನ್ನೊಡನೆ ಒಡಕುಟ್ಟಿದ ಸಹೋದರರನೊಡನೆ ಹೆಮ್ಮೆ ತೋರಿಸಿ ಏನು ಪ್ರಯೋಜನ? ಸಕ್ಕೆ ಬಂಧನವಾಗಿ ಸಮಾಜದಲ್ಲಿ ನರಳುವವರ ನಾಸುಳ ನೀನಾಗು! ಅಧಿಕಾರ ಮತ್ತು ಸಂಪತ್ತಿನ ಮದದಿಂದ ಜನರನ್ನೆಲ್ಲ ತನ್ನ ಗುಲಾಮರನ್ನಾಗಿ ಮಾಡಿಕೊಂಡಿರಬೇಕೆಂಬ ಅಭಿಪ್ರಾಯ ಉಳ್ಳವರ ವಿರುದ್ಧ ಹೋರಾಡುವ ಧೀರ ಯೋಧ ನೀನಾಗು! ಬಡತನಗಳಿಂದ ಕುಡಿಯಲು ಗಂಜಿ ನೀರು ಕೂಡಾ ಇಲ್ಲದೆ, ಚಿಕಿತ್ಸೆಗೂ ಮಿಕ್ಕಿದ ಅಂಧಶ್ರದ್ಧೆಯಿಂದಾಗಿ ಸಮಾಜ ಸೇವೆ ಮಾಡಿದಂತಾಗದು. ಪ್ರತಿಫಲ ಸ್ವಾರ್ಥವನ್ನೂ ಬಯಸದೆ, ಹರ್ಷಚಿತ್ತದಿಂದ, ಮನಃಪೂರ್ವಕವಾಗಿ ಮಾಡಿದ ಸೇವೆಯೇ ನಿಜವಾದ ಸೇವೆ. ನಿಷ್ಕಾಮ ಸೇವೆಯನ್ನೆ ಯುವಕರು ಮಾಡಬೇಕಾಗಿದೆ. ಸ್ವಾರ್ಥದಿಂದ ಮಾಡಿದ ಸೇವೆ; ಬೆಕ್ಕು ಸನ್ಯಾಸಿಯಾದಂತೆ ವ್ಯರ್ಥವಾಗುವುದು. ಅದನ್ನು ಯಾರೂ ಮೆಚ್ಚುವುದಿಲ್ಲ.

ಕೆಲವು ಯುವಕರು ಹೇಳುವುದುಂಟು: 'ಸಮಾಜ ಸೇವೆ ಎಂಬ ಪವಿತ್ರವಾದ ಕಾರ್ಯಗಳಿಂದ ಮಾತ್ರ ಆಗುವಂತಹದ್ದು. ಚಿಕ್ಕ ಪುಟ್ಟ ಕಾರ್ಯಗಳನ್ನ ಮಾಡಿದರೆ ಸಮಾಜ ಸೇವೆ ಆಗುವುದಾದರೂ ಹೇಗೆ, ಸಮಾಜ ಸೇವೆಯನ್ನ ಮಾಡಲು ನಾವೆ ಅರ್ಹರಲ್ಲ, ನಾವು ಬಡವರು! ಇಂತಹ ಜವಾಬ್ದಾರಿಕೆಗಳೆಲ್ಲವೂ ಶ್ರೀಮಂತರಿಗೆ ಮತ್ತು ವಿದ್ಯಾವಂತರಿಗೆ ವಿೂಸಲಾಗಿಟ್ಟದ್ದು' ಆದುದರಿಂದ ಸಮಾಜ ಸೇವೆ ಮಾಡಿರೆಂದೆ ನಾವು ಮಾಡುವ ಮಹತ್ಕಾರ್ಯವಾದರೂ ಏನು? ನಮ್ಮಂತಹವರಿಗೆಲ್ಲಾ ಅದು ಸಾಧ್ಯವೇ?" ಅಂಥವರಿಗೆ 'ಸಮಾಜ ಸೇವೆ' ಎಂಬ ಪದದ ಅರ್ಥ ಸರಿಯಾಗಿ ತಿಳಿದಿಲ್ಲ ಎಂದು ವಿವಾದದಿಂದ ಹೇಳಬೇಕಾಗುತ್ತದೆ.

ಯುವಕರೆ ಬಡತನ, ಅಜ್ಞಾನ, ಅನಾರೋಗ್ಯ, ಅಲಸ್ಯಗಳು, ನಮ್ಮ ಸಮಾಜದ ಮಹಾ ಜೊಡ್ಡು ಕಡುಕುಗಳು. ಯುವಕರಾದ ನಾವು ನಮ್ಮ ಸಹೋದರರಿಗೆ ಪ್ರಾಥಮಿಕ ಆವಶ್ಯಕತೆಗಳಾದ ಆಹಾರ, ವಸತಿ, ಬಟ್ಟೆಬರೆ, ಪುಸ್ತಕಗಳನ್ನು ಒದಗಿಸಿ ಕೊಡಲು ಯತ್ನಿಸಬೇಕು. ಆರೆ ಹೊಟ್ಟೆಯ ಮನುಷ್ಯ ಸುಲಭವಲ್ಲ. ಭೀಕರ ಅಂಟು ರೋಗಕ್ಕೆ ಬಲಿಯಾದಲ್ಲಿ ಅಜ್ಞಾನಿ ಆತನ ಸಾಕ್ಷಾತ್ಕಾರವನ್ನೇ ಕಳೆದುಕೊಳ್ಳುತ್ತಾನೆ. ಹರಿಸ್ಮೃತಿ ಹೀಗಾಗದಂತೆ ಯುವಕರು ಅಸ್ಪೃಶ್ಯತೆ ಹೋಗಲಾಡಿಸಬೇಕು. ಭಾರತದ ಸಂಸ್ಕೃತಿಯ ಪ್ರಧಾನ ಸಂದೇಶವೇ ಸಮಾಜ ಸೇವೆಯಾಗಿದೆ. ಭಾರತದಲ್ಲಿ ಜನ್ಮ ತಾಳಿ ಭಾರತ ಮಾತೆಯ ಹಾಲನ್ನುಂಡು ದೃಷ್ಟ ಪುಷ್ಟವಾಗಿ ಬೆಳೆದ ಎಲೇ ಯುವಕನೆ, ಈ ನಿನಿಷದಿಂದಲೆ ಭಾರತ ಮಾತೆಯ ವೀರ ಸುವಂತನೆಂಬ ಕೀರ್ತಿ ಪಡೆಯಲು ಸಿದ್ಧನಾಗು! ಆ ಕೀರ್ತಿ ಪಡೆಸುವ ಸಾಧನ—ದಿಶ್ವರ್ಯವಲ್ಲ, ಗರ್ವವಲ್ಲ; ಬಡವರ ತಾತ್ಸಾರ, ಹೆಸ್ಮೆ—ಎಂದಿಗೂ ಅಲ್ಲ. ನಿನ್ನೊಡನೆ ಒಡಕುಟ್ಟಿದ ಸಹೋದರರನೊಡನೆ ಹೆಮ್ಮೆ ತೋರಿಸಿ ಏನು ಪ್ರಯೋಜನ? ಸಕ್ಕೆ ಬಂಧನವಾಗಿ ಸಮಾಜದಲ್ಲಿ ನರಳುವವರ ನಾಸುಳ ನೀನಾಗು! ಅಧಿಕಾರ ಮತ್ತು ಸಂಪತ್ತಿನ ಮದದಿಂದ ಜನರನ್ನೆಲ್ಲ ತನ್ನ ಗುಲಾಮರನ್ನಾಗಿ ಮಾಡಿಕೊಂಡಿರಬೇಕೆಂಬ ಅಭಿಪ್ರಾಯ ಉಳ್ಳವರ ವಿರುದ್ಧ ಹೋರಾಡುವ ಧೀರ ಯೋಧ ನೀನಾಗು! ಬಡತನಗಳಿಂದ ಕುಡಿಯಲು ಗಂಜಿ ನೀರು ಕೂಡಾ ಇಲ್ಲದೆ, ಚಿಕಿತ್ಸೆಗೂ ಮಿಕ್ಕಿದ ಅಂಧಶ್ರದ್ಧೆಯಿಂದಾಗಿ ಸಮಾಜ ಸೇವೆ ಮಾಡಿದಂತಾಗದು. ಪ್ರತಿಫಲ ಸ್ವಾರ್ಥವನ್ನೂ ಬಯಸದೆ, ಹರ್ಷಚಿತ್ತದಿಂದ, ಮನಃಪೂರ್ವಕವಾಗಿ ಮಾಡಿದ ಸೇವೆಯೇ ನಿಜವಾದ ಸೇವೆ. ನಿಷ್ಕಾಮ ಸೇವೆಯನ್ನೆ ಯುವಕರು ಮಾಡಬೇಕಾಗಿದೆ. ಸ್ವಾರ್ಥದಿಂದ ಮಾಡಿದ ಸೇವೆ; ಬೆಕ್ಕು ಸನ್ಯಾಸಿಯಾದಂತೆ ವ್ಯರ್ಥವಾಗುವುದು. ಅದನ್ನು ಯಾರೂ ಮೆಚ್ಚುವುದಿಲ್ಲ.

ಕ್ಷಾಮ ನಿವಾರಣೆಗಾಗಿ

ಇಂದೇ

ಉದಾರ ಸಹಾಯ ನೀಡಿರಿ

"ಇದೀಗ ಕೇವಲ ಒಂದೆರಡು ಪ್ರದೇಶಗಳಿಗಷ್ಟೇ ಸೀಮಿತವಾದ ಸಮಸ್ಯೆಯಲ್ಲ; ಭಾರತದ ಸಮಸ್ತ ಜನತೆಗೆ ಎದುರಾಗಿರುವ ಕಷ್ಟ. ಇಂತಹ ಜಿಹ್ವಿನಲ್ಲಿ ಎಲ್ಲಾ ಜನರೂ ತನು ಮನ ಧನಗಳಿಂದ ಸಹಾಯ ನೀಡಬೇಕೆಂಬುದಾಗಿ ನಾನು ನಿಮ್ಮಲ್ಲಿ ಆರಿಕೆ ಮಾಡುತ್ತೇನೆ.

ಈಗಾಗಲೇ ಕಾಣಿಕೆ ನೀಡಿರುವವರು ಇನ್ನೂ ಹೆಚ್ಚು ನೀಡಿರಿ. ಈ ಸಲ ಕೊಡದೆ ಇರುವವರೂ ಉದಾರವಾಗಿ ಕೊಡಿರಿ. ನೀಡುವವರೆಲ್ಲ ಈಗಲೇ ನೀಡಿರಿ."

ಪ್ರಧಾನ ಮಂತ್ರಿಯವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣ.

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಗೆ ಉದಾರವಾಗಿ ಕಾಣಿಕೆ ನೀಡಿರಿ.

ಈ ನಿಧಿಗೆ ಕಳುಹಿಸುವ ಸಣ ಮತ್ತು ಸಾಮಗ್ರಿಗಳ ಬಗ್ಗೆ ಮಾಹಿತಿಗಾಗಿ ಸಂಪರ್ಕಿಸಲು ಸೂಚನೆಗಳು: ರೈಲ್ವೆ ಮಂತ್ರಿಗಳ ಕಾರ್ಯದರ್ಶಿಗಳು, ರೈಲ್ವೆ ಬೋರ್ಡ್, ರೈಲ್ವೆ ಭವನ, ನ್ಯೂ ದಿಲ್ಲಿ—1

ಹೈಮೆಂ ಮಿನಿಸ್ಟೈರ್ಸ್ ಡ್ರಾಯಿಂಗ್ ಅರೇಂಜ್‌ಮೆಂಟ್ಸ್ ಕಮಿಟಿ, ಕ್ಯಾಬಿನೆಟ್ ಸೆಕ್ರೆಟೇರಿಯಟ್, ರಾಷ್ಟ್ರಪತಿ ಭವನ, ನ್ಯೂ ದಿಲ್ಲಿ—1

ಟುಂಬಗಳ ದಾಖಲೆ ಸೇವಾಂಗು! ಜನರ ಹಳ್ಳುಗಳನ್ನು ಎತ್ತಿಹಿಡಿದು, ಸಲ್ಕಕ್ಕಾಗಿ ಜೀವನವನ್ನು ತ್ಯಾಗ ಮಾಡಲು ಸಿದ್ಧನಿರುವ ವೀರ ಸೇನಾನಿ ನೀನಾಗು!

ನಮ್ಮ ನಾಡಿನ ಇತಿಹಾಸದಲ್ಲಿ ನೆಮ್ಮೆಲ್ಲಿ ಧೈರ್ಯ ಪರಾಕ್ರಮ ತ್ಯಾಗ ಬುದ್ಧಿಯನ್ನೆಂಟು ಮಾಡಿ, ಪರಿಸ್ಥಿತಿಯ ಪರಿವರ್ತನೆಗೆ ಸಹಾಯ ಮಾಡುತ್ತದೆ. ನಮ್ಮದು ಉತ್ಕೃಷ್ಟ ಕುಟುಂಬದ ಪೌರತ್ವವಾಗಬಾರದು, ನಮ್ಮದು ಆರಂಭಶೂರತ್ವವಾಗಬಾರದು. ನಾವು ಕೇವಲ ಕರಾಮ್ಮ, ಜಯಘೋಷಗಳಿಂದಲೇ ಕೃತಕೃತ್ಯರಾದೆವೆಂದೂ, ಭಾವಿಶಲಾಗದೆ. ನವ ಜೀವನೋತ್ಸವನ್ನು ಸುಮಧುರ ಪ್ರೇಮದಿಂದ ಇಡೀ ಜಗತ್ತನ್ನೇ ನೀಳ್ಗೆಗೆಲ್ಲಬೇಕು. ನಮ್ಮಲ್ಲಿರುವ ಶಕ್ತಿಯನ್ನು ಉಚ್ಚಧ್ಯೇಯಗಳ ತಳಪಾಯ ಮೇಲೆ ಕಟ್ಟಿಕೊಂಡು, ವಿಘಾತುಕ ಶಕ್ತಿಗಳನ್ನ ನಾಶಗೊಳಿಸಲು ಉದಯೋಗಿಸಬೇಕು. ನವ ನೀಗ 'ನಿಷ್ಕಾಮ ಸೇವೆಯಲ್ಲಿ ಕಡಗಲಿಯ ಕೈ ತೋರಿ, ನಡೆನ್ನು ನಡೆಸುವ ಸ್ವಾಮಿ ಬೇಕು."

ಬಂಧುಗಳೇ, ಭಗಿನಿಯರೇ, ಯಾವ ರೀತಿಯಲ್ಲಾದರೂ ನಾವು ಒಬ್ಬರಿಗೊಬ್ಬರು ಸಹಕರಿಸಿಕೊಂಡು, ಕಾರ್ಯೋನ್ಮುಖರಾಗಬೇಕು. ಹಾಗೆ ಮಾಡಿದರೆ ನಾವು ಸರಿ ಸಮಾನವಾಗುನೆನ್ನಿ. ದೇಶದಲ್ಲಿ ಶಾಂತಿ, ಸಂಪತ್ತು ಮತ್ತು ನೆಮ್ಮದಿ ನೆಲೆಗೊಳ್ಳುವುದು. ಇದರ ಬದಲು ತನ್ನ ಮೂರು ಗೇಣುದ್ದದ ಹೊಟ್ಟೆ ಹೊರಗೊಂಡು ನ್ಯೂಗಳಂತೆ ಅಲೆದರೆ ಅವನು ದೊಡ್ಡ ದೇಶ ಉದ್ಧಾರಕನಾಗಲಿಕ್ಕಿಲ್ಲ. ಅಲ್ಲದೆ ಅಂತಹ ಪುರ್ಜನನ್ನು ಸೃಷ್ಟಿಸಿದ ಭಾರತ ಮಾತೆ ಸಂತೋಷ ಚಿತ್ತಗಳಿಸಲಾರಳು. ಯಾವನೇ ಒಬ್ಬ ಶ್ರೀಮಂತನಾಗಿರಲಿ ಆತನು 'ತಾನು ಮತ್ತು ತನ್ನ ವರ ಸುಖವನ್ನು ಪಡೆದರೆ ಸಾಕು. ಉಳಿದವರ ಗತಿ ಹೇಗಾದರೂ ನಮಗೇನು? ನವ ಗೇನೋ ದೇವರು ಈ ಸುಖ ಸಂಪತ್ತುಗಳನ್ನು ಕೊಟ್ಟಿದ್ದಾನೆ ನಾವು ಅದನ್ನುಂಡು ಸುಖಿಯಾದರೆ ನಮ್ಮ ಜನ್ಮ ಸಫಲವಾಯಿತು." ಎಂದು ಕುಳಿತರೆ ಅಂಥವನ ಆ ಶ್ರೀಮಂತಿಕೆ ಸಮಸ್ತ ಸಂತೋಷಗಳೆಲ್ಲವೂ ಕೊನೆಗೆ ನಿಸ್ಸಾರವಾಗಿ ಅಥವಾ ತನ್ನ ಹೊಂದುವುದು; ಅದುದರಿಂದ ಯುವಕರಾದ ನಾವು ಬರೀ ಶ್ರೀಮಂತಿಕೆಯನ್ನು ಎಣಿಸದೆ ಪರಿಪೂರ್ಣವನ್ನು ಬಯಸಬೇಕು.

ನಾವು ಗೆಲುವಿನಿಂದ ಹಿಗ್ಗದೆ, ಸೋಲಿನಿಂದ ಜಗ್ಗದೆ, ಜಯಾಪಜಯಗಳನ್ನು ಸಮದೃಷ್ಟಿಯಿಂದ ಕಂಡು, ಸತ್ಯ ದೃಢತೆ, ಸಂಯಮದಿಂದ ಕೂಡಿ ಸಮಾಜಕ್ಕಾಗಿ ದುಡಿದರೆ ಮಾತ್ರ ಸಮಾಜಗಳ ನ್ಯೂನತೆಗಳು ಪರಿಹಾರವಾಗಿ ಸಮಾಜೋನ್ನತಿ ಆಗುವುದು, ಒಂದು ದೇಶವು ಉದ್ಧಾರವಾಗಿ ನಮ್ಮಿಂದ ಬಾಳಿ ಬೆಳಗಲು ಸಮಸ್ತ ಪ್ರಜೆಗಳಿಗೂ ಸಾಧ್ಯವಾದೀತು. ಇದನ್ನು ನಮ್ಮ ದೇಶದಲ್ಲಿ ಸಾಧಿಸಲು ಯುವಕರೆ, ಯುವತಿಯರೇ ಏಳಿರಿ! ಎದ್ದೇಳಿರಿ!!

(ಸ್ವಾತಂತ್ರ್ಯ ದಿನ ಸಂಚಿಕೆಗೆ ಬಂದುದು)

ಅ ಭಿ ಪ್ರಾ ಯ

ಇಂದಿನ ಮಂತ್ರಿಗಳೇ ಇಂದಿನ ಅಧೋಗತಿಗೆ ಕಾರಣ

ಲೇಖಕರು: ಶ್ರೀ ಜಿ. ಆರ್. ಪಾಂಡೇಶ್ವರ್
(ಸಂಪಾದಕರು, 'ನಾಗರಿಕ')
(ಸ್ವಾತಂತ್ರ್ಯೋದಿನ ಸಂಚಿಕೆಗೆ ಬಂದುದು)

ಇಂದು ಎಲ್ಲಿ ನೋಡಿದರೂ ಜನಮನದಲ್ಲಿ ಅಶಾಂತಿ, ಅತೃಪ್ತಿ, ಅಸೂಯೆ, ಅಲಸ್ಯ ಎದ್ದು ಕಾಣುತ್ತಿವೆ. ಸರಕಾರದ ಆಡಳಿತದ ಪ್ರತಿಯೊಂದು ಶಾಖೆಯಲ್ಲೂ ವಿಳಂಬ, ದೇಜಬಾವ್ಯಾರಿಕೆ, ವಶೀಲಿ, ಲಂಚ—ತುಂಬಿಕೊಂಡಿದೆ.

ಗಾಂಧಿಯವರ ಹೆಸರೆತ್ತಿ, ಸಂಕುಚಿತವಾದ ಜಾತ್ಯಂಧತೆ, ಅಧಿಕಾರ ದಾಹ, ಹಣದ ಹಪಾಹಪಿಯಲ್ಲೇ ಮುಂತ್ರಿಗಳೂ ಕಾಂಗ್ರೆಸ್ ಸಂಸ್ಥೆಗಳ ಕಾರ್ಯಕರ್ತರೂ ಮುಳುಗಿ ಹೋಗಿದ್ದಾರೆ. ಇಂದಿನ ದುಃಸ್ಥಿತಿಗೆ ಇವರೇ ಜವಾಬ್ದಾರರು. ಕಳೆದ ೨೦ ವರ್ಷದ ಅವಧಿಯಲ್ಲಿ ಇವರು ಮಾಡಿದ "ದೇಶಸೇವೆ" ಎಂದರೆ ಇದೇ!!

ಬ್ರಿಟಿಷರ ಕೈಯಿಂದ ಅಧಿಕಾರ ಕಸಕೊಳ್ಳಲು ಗಾಂಧಿಜಿಯವರು ಉದಾತ್ತ ನೀತಿಯ ಜೀವನಕ್ರಮವನ್ನು ಬೋಧಿಸಿದ್ದರು.

ಜಾತಿ ಭಾವನೆಯನ್ನು ಸರಕಾರದ ಮತ್ತು ಸಾರ್ವಜನಿಕ ಕಾರ್ಯನಿರ್ವಹಣೆಯಲ್ಲಿ ಕರಬೇಡಿರಿ—ಇದು ಗಾಂಧಿಯವರು ಸಾರಿದ್ದ ಸಂದೇಶ. ಆದರೆ, ಈಗ ಮಂತ್ರಿಗಳೂ ಕಾಂಗ್ರೆಸ್ ಕಮಿಟಿಗಳೂ ಮಾಡಿದ್ದೇನು? ಕಾಂಗ್ರೆಸ್ ಸಂಸ್ಥೆಯಲ್ಲಿ ಬ್ರಾಹ್ಮಣರು—ಬ್ರಾಹ್ಮಣೇತರರು ಎಂಬ ಭಾವ ಬಲಿಸಿ, ಕೆಲವೊಂದು ಬಹು ಸಂಖ್ಯಾತ ಜಾತಿಯವರೇ ಅವುಗಳ ಬಹುಮತ ಸದಸ್ಯರಾಗುವಂತೆ ಮಾಡಿದ್ದು; ಹಾಗೂ ತೀರ ಹಿಂದುಳಿದವರನ್ನು ಅಲ್ಪ ಸಂಖ್ಯಾತರನ್ನಾಗಿ ಮಾಡಿ, ತಮ್ಮೊಂದು ಜಾತಿಯವರೇ ಶಾಸನ ಸಭೆಗಳಿಗೆ ದೊಡ್ಡ ಪ್ರಮಾಣದಲ್ಲಿ ಆರಿಸಿಬರುವಂತೆ ಮಾಡಿದ್ದು. ಇದರ ಪರಿಣಾಮವಾಗಿ, ಸರಕಾರದ ಎಲ್ಲ ಖಾತೆಗಳಲ್ಲೂ ತಮ್ಮ ಜಾತಿ, ಮತ್ತು ಒಳ ಜಾತಿಯವರನ್ನೇ ದೊಡ್ಡ ದೊಡ್ಡ ಜಾಗಗಳಿಗೆ ತುಂಬಿದ್ದು! ಹಾಗೂ, ಆ ಅಧಿಕಾರಿಗಳಲ್ಲಿಯೂ ಕೂಡಾ ತಮ್ಮ ಕೆಳನೌಕರರನ್ನು ನೇಮಿಸಿಕೊಳ್ಳುವಲ್ಲಿ, ಮತ್ತು ಅವರ ಕೆಲಸಗಳ ನಿರ್ವಹಣೆಯಲ್ಲಿ ಜಾತೀಯತಾ ಭಾವನೆಯನ್ನೇ ಹೆಚ್ಚಿಸಿದ್ದು.

ಇದರ ಪರಿಣಾಮವಾಗಿ (೧) ಲೋಕೋಪಯೋಗಿ ಕಾಮಗಿರಿ ಖಾತೆಯಲ್ಲಿ ಸಿಕ್ಕಿಸಿಕ್ಕಿದವರೆಲ್ಲಾ ಕಂಟ್ರಾಕ್ಟರ್ ಆದದ್ದು. (೨) ಸರಕಾರಿ ಖಾತೆಯಲ್ಲಿ ಸಿಕ್ಕ ಸಿಕ್ಕಂತೆ ಸಂಘ-ಸಂಸ್ಥೆಗಳನ್ನು ಮಂಜೂರು ಮಾಡಿದ್ದು. (೩) ಶಿಕ್ಷಣ ಖಾತೆಯಲ್ಲಿ ಸಿಕ್ಕಿಸಿಕ್ಕಿದವರನ್ನೆಲ್ಲಾ ದೊಡ್ಡ ದೊಡ್ಡ ಹುದ್ದೆಗಳಿಗೆ ನೇಮಿಸಿದ್ದು ಮತ್ತು ಪಠ್ಯ ಪುಸ್ತಕಗಳ ಮಂಜೂರಾತಿಯಲ್ಲಿ ಯದ್ವಾತದ್ವಾನ ಡಕೆ ಕಂಡದ್ದು. (೪) ಅಭಿವೃದ್ಧಿ ಖಾತೆಯಲ್ಲೂ ಇದೇ ಹಾಡು ಹಾಡಿದ್ದು. ಇದರ ಪರಿಣಾಮವಾಗಿ, ತಮ್ಮ ತಮ್ಮ ಕಾರ್ಯಗಳಲ್ಲಿ ಶ್ರದ್ಧೆ ಇಲ್ಲದೆ ಕೇವಲ ನೌಕರಿ ಆಲೆಯಿಂದ ತೋಳಲಾಡುವ, ಸಿಕ್ಕಿ ಸಿಕ್ಕಿದವರನ್ನೆಲ್ಲಾ ಅಧಿಕಾರಿಗಳಾಗಿ ನೇಮಿಸಿದ್ದು. ಆ ಕ್ರಮಗಳಾತೆಗಾಗಿ ತೆಗೆದಿಟ್ಟ ಹಣವನ್ನೆಲ್ಲಾ ವಿಲೇವಾರಿ ಮಾಡಿದರಾಯಿತು-ಎಂಬ ಒಂದೇ ದೃಷ್ಟಿ ಇಟ್ಟುಕೊಂಡು ಬೊಕ್ಕಸವನ್ನು ಖಾಲಿ ಮಾಡಿದ್ದೊಂದೇ ಬಂತು, ಹೊರತು, ನಿಜವಾದ ಅಭಿವೃದ್ಧಿಯ ಕಾರ್ಯಗಳು ಆಗಲಿಲ್ಲ. ಮಾಡಿದ ಕೆಲಸಗಳೆಲ್ಲ 'ಕಣ್ಣಿಗೆ ಮಣ್ಣೆರಚುವ' ಕೆಲಸಗಳಾದವು!

ಹೀಗೆ ಅಧಿಕಾರ, ಅಹಂಕಾರದಿಂದ ಕೊಬ್ಬಿದ ಜಾತೀಯತಾ ದೃಷ್ಟಿಯವರ ಕೈಯಲ್ಲಿ ಶಾಸನ ಸಭೆಯ ಬಹುಮತ ಸಿಕ್ಕಿದ್ದೇ ತಡ, ಅವರೆದ್ದೇ ಮಂತ್ರಿ ಮಂಡಲ, ಅವರದ್ದೇ ಸರಕಾರ ರಚನೆಯಾಯಿತು. ಹೀಗೆ ಸರಿಗೆ ಮೂತ್ರ "ಕಾಂಗ್ರೆಸ್" "ಈ ಜಾತ್ಯಂಧ ಬಕಾಸುರನ ವರ ತಾಳಕ್ಕೆ ಕುಣಿದರೇನೇ ನಮಗೂ ಸ್ಥಾನ, ಮಾನ, ಹಣಗಳಿಸುವ ಉಪಾಯ ಸಿಕ್ಕಿದಂತಾಗುವುದು; ಆದ್ದರಿಂದ, ಅವರು ಬಿಳಿದನ್ನು ಕಪ್ಪೆಂದು ಕರೆದರೆ, ನಾವೂ ಆ ದಕ್ಕೆ ಸೈಗುಟ್ಟೋಣ!" ಎಂದು ಅಲ್ಪ ಸಂಖ್ಯಾತ ಸಮಾಜದ ಸುಶಿಕ್ಷಿತರು, ಪ್ರಮುಖರೂ ನಿರ್ಣಯ ಮಾಡಿಕೊಂಡರು. ಹಾಗೂ, ಅವರೂ ತಮ್ಮ ತಮ್ಮ "ಸಮಾಜ" ಗಳ ಸಂಕುಚಿತ ಜಾತ್ಯಂಧತೆಯ ಸಂಘ-ಸಂಸ್ಥೆ ಕಟ್ಟಿ, ಜಾತೀಯತೆಯ ಪೈಪೋಟಿ (Competition in communalism) ಗೆ ಇಳಿದರು. ಬಹುಕಾಲದಿಂದಲೂ ಬುದ್ಧಿಶಾಲಿಗಳೆನಿಸಿದ್ದ ಈ ಅಲ್ಪ ಸಂಖ್ಯಾತ ಸಮಾಜಗಳವರು ಎಲ್ಲಾ ನೀತಿ ಮತ್ತೆಯನ್ನೂ ದೂರದಲ್ಲಿಟ್ಟು, ಇಂದಿನ ಈ ರಾಕ್ಷಸೀ ನೃತ್ಯದಲ್ಲಿ ಭಾಗವಹಿಸಿದರು!

ಗುರುಪೀಠಗಳು

ಪ್ರತಿಯೊಂದು ಸಮಾಜಕ್ಕೂ ಅದರದ್ದೇ ಆದ ಮಠ, ಗುರು, ಇದ್ದೇ ಇದ್ದಾರೆ. ಪ್ರೇಮ, ಸತ್ಯ, ವಿನಯ, ಪೂಜ್ಯತೆ, ದೈವಭಕ್ತಿ, ವಿರಕ್ತಿ ಮೊದಲಾದವೇ ಸಕಲ ಧರ್ಮಗಳು ಸಾರುವ ತತ್ವಗಳು. ಅವುಗಳನ್ನು ಈ ಗುರು ಪೀಠಗಳೂ ಸಾರುತ್ತವೆ; ಆದರೆ, 'ತಮ್ಮ ಸಮಾಜದ ಏಳಿಗೆಯಾಗಬೇಕು' ಎಂಬ ಭೂತವು ಹುಟ್ಟಿ ಹೊಡೆದು, ತಮ್ಮ ಧರ್ಮಾನುಯಾಯಿಗಳ ಸ್ವಧರ್ಮಗಳಿಗೆ ಈ ಪೀಠಗಳು ಆಶೀರ್ವಾದ ನೀಡುತ್ತವೆ! ಇದಂತಾಗಿ ನಿಜವಾದ ಧರ್ಮವು ಯಾರಿಗೂ ಬೇಡವಾಯಿತು; ತೋಳಿಕೆಗೆ ತಮ್ಮ ತಮ್ಮ ಜಾತಿ ಧರ್ಮದ ಚಿಹ್ನೆ ಹೊತ್ತುಕೊಂಡು, "ನಮ್ಮ ಜಾತಿ ಮೇಲೆ, ನಮ್ಮ ಜಾತಿ ಮೇಲೆ" ಎಂಬ ಆರ್ಭಟವಾದ ಅಹಂಕಾರದಿಂದ ಕುಣಿಯಾಡತೊಡಗಿದರು.

(೧) ಮೂಢ ಸಂಘ (೨) ವೀರಶೈವ ಸಂಘ (೩) ಬಣಜಿಗರ ಸಂಘ (೪) ಗೌಡ ಸಾರಸ್ವತ ಸಂಘ (೫) ಹವ್ಯಕ ಸಂಘ (೬) ಸಾರಸ್ವತ ಸಂಘ (೭) ಕುರುಬರ ಸಂಘ (೮) ಈಡಿಗರ ಸಂಘ (೯) ಬಂಟರ ಸಂಘ (೧೦) ವೀರಗವೀರ ಸಂಘ (೧೧) ಬಿಲ್ಲವ ಸಂಘ—ಹೀಗೆ ನೂರಾರು ಜಾತಿ—ಒಳಜಾತಿಗಳ ಸಂಘ ಕಟ್ಟಿಕೊಂಡು ಒಬ್ಬರ ಮೇಲೊಬ್ಬರು 'ಶಕ್ತಿ ಪ್ರದರ್ಶನ'ವೆಂಬ ಹೆಸರಲ್ಲಿ ಕೆಸರೆರಚಾಟ, ಕಾದಾಟ, ಕೊಲೆಸುಲಿಗೆ, ಬೆಂಕಿ ಹಚ್ಚುವಿಕೆ, ಟೊಳ್ಳು ಕೀರ್ತಿಗಾಗಿ ಪೈಪೋಟಿ ನಡೆಸುತ್ತಿದ್ದಾರೆ.

ಈ ಪೈಪೋಟಿಯು ಈಗ ನಮ್ಮ ದೇಶದ ಚಿಕ್ಕ ಮಕ್ಕಳಲ್ಲಿ, ಯುವಕ ಯುವತಿಯರಲ್ಲಿ, ಹೆಂಗಸರಲ್ಲಿ, ಮುದುಕರಲ್ಲಿ ಸಹಾ ತುಂಬಿಬಿಟ್ಟಿದೆ! ಇಂತಹ ಅನಾಹುತಕರವಾದ, ಧರ್ಮಬಾಹಿರವಾದ ಈ ಸಂಘ-ಸಂಸ್ಥೆಗಳಲ್ಲಿ 'ಧರ್ಮ'ದ ಹೆಸರಿನಿಂದ ನಿಧಿ ಕೂಡಿಸಿ, ಈ ರಾಕ್ಷಸೀ ನೃತ್ಯ, ಬಹುಕಾಲ ನಡೆಯುವಂತೆ ಭದ್ರ ಮಾಡುತ್ತಿದ್ದಾವೆ.

ಇಂತಹ ಪರಿಸ್ಥಿತಿಗೆ ಸರಕಾರವೇ ಮೂಲ ಹಾಗೂ ಮುಖ್ಯ ಕಾರಣ. "ರಾಜಾ ಕಾಲಸ್ಯ ಕಾರಣಂ"—ಕಾಲ ಕೆಡಲಿಕ್ಕೆ ರಾಜ್ಯಾಡಳಿತ ಸೂಡುವವರೇ ಕಾರಣ ಎಂಬ ಹಳೆಗಾಲದ ಸಿದ್ಧಾಂತವನ್ನು ನಿರೂಪಿಸಬಾರದು! "ಮಜ್ಜೇತ್ತ ತ್ರಯೀ ದಂಡ ನೀತೌ ಹತಾಯಾಂ" (ರಾಜ್ಯ ಭಾರವು ಹಾಳಾದರೆ ಉಳಿದ ಸಕಲ ನೀತಿಗಳೂ ಹಾಳಾಗುತ್ತವೆ) ಎಂಬ ಪ್ರಾಚೀನರಾಜನೀತಿ ತತ್ವವು ಲಕ್ಷಿಸಲ್ಪಡಬೇಕು. "ನೇರ್ಮನ್ನು ನಾವು ಪಾಲಿಸಿದರೆ, ಅದು ನಮ್ಮನ್ನು ಪಾಲಿಸುತ್ತದೆ; ಅದನ್ನು ನಾವು ಕೊಂದರೆ ಅದು ನಮ್ಮನ್ನು ಕೊಲ್ಲುತ್ತದೆ" ಎಂಬ ಧರ್ಮ ಸೂತ್ರವನ್ನು ಮರೆತದ್ದೇ ಇಂದಿನ ನಮ್ಮ ಎಲ್ಲ ದುಃಖಕ್ಕೂ ಕಾರಣ. ಗಾಂಧಿಯವರು ಈ ಸದ್ಧರ್ಮ ಸೂತ್ರಗಳ ತಳಗಟ್ಟಿನ ಮೇಲೆ ತಮ್ಮ ಸ್ವರಾಜ್ಯ ಚಳವಳಿ ಹೂಡಿದ್ದರು. ಆದರೆ ಇಂದಿನ "ಗಾಂಧಿ ಕಾಂಗ್ರೆಸ್" ಮಂತ್ರಿಗಳು ಆ ತಳಗಟ್ಟನ್ನು ಕೆಸರು ಬಿಟ್ಟೆದ್ದಿದ್ದಾರೆ. ಜನತೆ ಇಂತಹ ಕೃತಘ್ನ ಕಾರ್ಯ ಮಾಡುವವರನ್ನು ದಂಡಿಸುವ ಧೈರ್ಯ ತೋರಬೇಕು.

ಭಕ್ತಿ-ನು ರಿಜನ ಅಸಾಧ್ಯಕ್ಕೆ ಹೋಗಿ ಒಂದು ತುಂಬಿ ಕಾಯ ನೋ ಸೋರಿ ಕಾಯನ್ನೋ ಕೇಳಿದರೆ ಮೂರ್ಖನೆನಿಸಿಕೊಳ್ಳುತ್ತಾನೆ; ಅದರಂತೆಯೇ ರಾಜರಾಜೇಶ್ವರನಾದ ದೇವ ದೇವನ ಹತ್ತಿರ ಹೋಗಿ ಭಕ್ತ ನಿಜವಾದ ಜ್ಞಾನ, ಭಕ್ತಿ, ವೈರಾಗ್ಯಗಳನ್ನು ಕೇಳದೆ ಅನೇಕಾದಿ ಅಷ್ಟಸಿದ್ಧಿಗಳನ್ನು ಕೇಳಿದರೆ ಮೂರ್ಖನಾಗುತ್ತಾನೆ.

೦ ೦ ೦

ಬೇಗ ದಾರ ಸ್ವಲ್ಪ ಕದಲಿದರೂ ಸೂಜಿಯ ಕಣ್ಣಿನಲ್ಲಿ ಪ್ರವೇಶಿಸಲಾದೀತೇ ಹಾಗೆಯೇ ಒಬ್ಬನಲ್ಲಿ ಸ್ವಲ್ಪ ಆಸೆಯಿದ್ದರೂ ಅವನು ಪರಂಧಾನುವನ್ನು ಪ್ರವೇಶಿಸಲಾರ. ಮನಸ್ಸು ಒಸೆಯಿಂದ ಚಂಚಲಿಸದೆ ನಿಂತು ಭರಿತಾದ್ಧವಾದಾಗ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯಬಲ್ಲನು.

೦ ೦ ೦

ನೋಟೀಸು
ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ
S. C. No. 108/1967.

ವಿಟ್ಠಲದಾಸ ಶೆಡ್ತಿ ...ವಾದಿ.
1. ಮಡಿವಾಳ ಅಂತ, 2. ವೆಂಕಂಮ್ಮ— ಪ್ರತಿವಾದಿಗಳು.

ಸದ್ರಿ ದಾವೆಯ 1ನೆ ಪ್ರತಿವಾದಿ ಮಡಿವಾಳ ಅಂತ —ಮಡಿವಾಳ ನಾಗನ ಆಳಿಯ, ಕುಂದಾಪುರ ತಾಲ್ಲೂಕು ಬೆಳೂರು ಗ್ರಾಮದ ಪೊಳೆತೋಟಪಲ್ಲಿರುವವ —

—ಇವರಿಗೆ,

ನೀವು ಕೂಡಾ ಪಿರ್ಯಾದಿಯಿಂದ ವಾದಿಗೆ ಕಳೆದ ಶೋಭಕೃತು, ಕೈಗೆ ಸಂಗ್ರಹಗಳಿಗೆ ಸಲ್ಲಿಬೇಕಾದ ಚಾಲೆಂಗೇಣಿ ಬಾಕಿ ಬಗ್ಗೆ ರುಪಾಯಿ 845—61ಪೈಸೆ, ನಂಠಿಕ್ಕದ ಬಡ್ಡಿ, ಕೋರ್ಟು ಖರ್ಚು ವಗೈರೆ ಬಗ್ಗೆ ನಿಮ್ಮ ಮೇಲೆ ಮಾಡಿದ ಸದ್ರಿ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಕು. 3-9-1967ಕ್ಕೆ ಆಮೈರೆ ಸಾರಿಗೆ ತಪ್ಪಿಗೆ ಯಿಡೋಇಣಾಗಿಯಿದೆ. ಈ ಕಾರಿತು ನಿಮ್ಮ ಆಳ್ತೀಪ ಇದ್ದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11ಗಂಟೆಗೆ ಈ ಕೋರ್ಟು ಮುಂದೆ ಹಾಜ್ರು ಆಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಪ್ರಕಾರ)
G. Ramakrishna Rao,
Advocate B. A. LL., B.
ಕುಂದಾಪುರ, ತಾ. 22-8-1967.

ಪ್ರಣಯಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೮—೦ (1=50)
ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ.
ನವಯುಗ ಎಂಟರ್‌ಪ್ರೈಸಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಸ್ವಾತಂತ್ರ್ಯ ಚರಣಿಯಲ್ಲಿ ಸ್ವಧೋತ್ಸವ

ಬರೆದವರು: ಶ್ರೀ ಶಿವಶಂಕರ.

ಆಗೋಸ್ಟ್ ಹದಿನೈದರಂದು ಅಳಿದುಳಿದಿರುವ ಭಾರತದಲ್ಲಿ ಸ್ವಾತಂತ್ರ್ಯ ದಿನೋತ್ಸವನ್ನು ಆಚರಿಸಲಾಗುತ್ತಿದೆ. ಈ ದಿಶೆಯಲ್ಲಿನಿಸ್ಸಂಗಯವಾಪಥದಲ್ಲಿನತನಗತ್ತ ಸಾಗಿ ಸರಣಿಯ ಸ್ವಸ್ಥವಾಗುತ್ತಿರುವ ಈ ವರ್ಷ ಕೇರಳ, ತಮಿಳ್ನಾಡು, ಒರಿಸ್ಸಾ, ಕಲ್ಕತ್ತಾ ಮುಂತಾದೆಡೆಗಳಿಂದ ಬಂದಿರುವ ಸುದ್ದಿಗಳು ಸುಗತಿ ಪಥದ ನೈಲಿಗಲ್ಲುಗಳಾಗಿವೆ.

ಅಂಗ್ಲೇಯರ ಆಕ್ರಮಣವನ್ನು ಅಂತ್ಯಗೊಳಿಸಲು ಜನತೆ ಒಂದಾದಂತೆ ಇಂದು ಸಮಸ್ಯೆಗಳ ಸರಮಾಲೆಯ ವಿರುದ್ಧ ಒಂದಾಗಬೇಕೆಂದು ಕೇರಳದ ಮುಖ್ಯ ಮಂತ್ರಿ ಶ್ರೀ ನಂಬೂದಿರಿಪಾದರು ಸ್ವಾತಂತ್ರ್ಯ ದಿನಾಚರಣೆಯ ಸಮಯ ಕರೆ ಇತ್ತಿರುವ ಮಾತು ಒಬ್ಬನ ಸಮಸ್ಯೆ ಇನ್ನೊಬ್ಬನ ಜೀವನೋಪಾಯ ಆಗಬಹುದು. ಇದಕ್ಕೆ ಉದಾಹರಣೆಯಾಗಿ ಇಂದಿನದು ಕಳ್ಳ-ಪಾನ ಪರಿಷತ್ತಿಗಾಗಿ ಏಂಪೆ ಭಾರೀ ಹೋರಾಟ ನಡೆಸಿತ್ತು ಮಾನ ಇದೇ ವಿಷಯದ ಮೇಲೆ ಕೇರಳದಲ್ಲಿ ಭಾರೀ ಸತ್ಯಾಗ್ರಹ ನಡೆಯುತ್ತಿದೆ! ಕೊಂದವ ಹೆಸರಿನಲ್ಲಿ ಹೊಸ ಪಕ್ಷವಾದರೂ ಈ ಜನರು ಶ್ರೀ ನಂಬೂದಿರಿಪಾದರ ನೇತೃತ್ವದಲ್ಲಿ ಒಂದಾಗಲು ಸಾಧ್ಯವೇನು? ಹಾಗಿರುವಾಗ, ಇಂದೂ ಸ್ವಾತಂತ್ರ್ಯ ದಿನಾಚರಣೆಯಂದಿನ ಘೋಷಣೆಯು ಕೇವಲ ವೇದಿಕೆಯ ಮೇಲಿನ ಒಣ ಘೋಷಣೆಯೇ ಇದೆ. ಸ್ವಾತಂತ್ರ್ಯ ದಿನಾಚರಣೆ ಎಂದಾ ಶ್ರೀ ನಂಬೂದಿರಿಪಾದರು ಒಕ್ಕೂಟದ ಘೋಷಣೆ ಹಾಕಿ ತ್ತಾರೆ, ಅತ್ತ ಜನರು ಹೆಂಡದ ಬೆರಸಿನಿಂದ ಮೂರ್ಛೆಗಳು, ಇತರ ಕಾರಣಗಳಿಂದ ಸಾಲುಸಾಲಾಗಿ ಕೂಗಾಡುತ್ತಿದ್ದರು. ಸ್ವಾತಂತ್ರ್ಯ ದಿನಾಚರಣೆಯಂದು ಅಲ್ಲಿನ ಪಕ್ಷಗಳು ತಮ್ಮ ಪಕ್ಷಕ್ಕೆ ಸಿಕ್ಕಿರುವ ಸ್ವಾತಂತ್ರ್ಯದ ಪೈಕಿಯನ್ನು ಸಡಿಸಿದರು.

ಮದರಾಸಿನಲ್ಲಿ ಸ್ವರ್ಧೆಗೆ ಮತ್ತೆಷ್ಟು ಅಡೆತೋನ್ಮ ಎದುರಾಗಲಿವೆಯೋ ಎನ್ನುವ ಮಧ್ಯೆಯೇ ರಾಜಗೋಪಾಲಾಚಾರಿಯವರು ಸ್ವರ್ಧೆಯ ಸಾಹಸಕ್ಕೆ ಕೈಹಾಕಿದ್ದರು. ಅವರೂ ಕೋಟೆಯ ಮೇಲೆ ತಮ್ಮ ಧ್ವಜ ಹಾರಿಸುವಾಗ ರಾಜ್ಯದಾಲಯ ಮಂತ್ರಿಮಂಡಲ ವಿಧಾನ ಮಂಡಲ ಸದಸ್ಯರು ಹಾಗೂ ಸಂಬಂಧಪಟ್ಟ ಉನ್ನತ ಅಧಿಕಾರಿಗಳು ಆ ಕಾರ್ಯಕ್ರಮದಲ್ಲಿ ಭಾಗವಹಿಸುವದು ಅಭ್ಯಾಸದಲ್ಲಿರುವ ಪ್ರಕ್ರಿಯೆ. ಆದರೆ ಅಲ್ಲೂ ಈ ಸಲ ಅಲೆಯೆದ್ದಿತ್ತು. ಆ ಕಾರ್ಯಕ್ರಮದಲ್ಲಿ ಪ್ರಧಾನ ಎದುರು ಪಕ್ಷವಾಗಿರುವ ಕಾಂಗ್ರೆಸ್ಸಿ ಭಾಗವಹಿಸಲಿಲ್ಲ. ಆಳುವ ಪಕ್ಷವೂ ಎಂದೂ ಪಕ್ಷಾತೀತ ಸ್ವಾತಂತ್ರ್ಯ ಆಚರಣೆಯ ಕೊಟ್ಟಿಗೆಯವಾದಾಗಿ ತಿಳಿಸಿರುತ್ತದೆ, ಇಲ್ಲವೆಂದು ಕಾಂಗ್ರೆಸ್ಸು ಹೇಳಲಿಲ್ಲ. ಒಳಗಿನ ಗುದ್ದಾಟ ಅದೇನಿದ್ದರೂ ಈ ಕಾರ್ಯಕ್ರಮದಲ್ಲಿ ಕಾಂಗ್ರೆಸ್ಸಿ ಭಾಗವಹಿಸದೆ ಇರುವದು ಅದರ ಅಲ್ಪತನವನ್ನು ವ್ಯಕ್ತಪಡಿಸುತ್ತದೆ. ಆಳುವ ಪಕ್ಷ ಕ್ಕೆ ಬಾಧಿಸಿ ಮುನ್ನೋಟ್ಟು ಕಳ್ಳಗವು ಇದ್ದರೂ ಜನ ಕೊಟ್ಟಿಯ ಮೇಲೆ ಹಾರಿಸಿದ್ದು ತನ್ನ ಕಸ್ಸು-ಕೆಂಪು ತುಂಡನ್ನಲ್ಲ, ಕೆಂಪು ಕೋಟೆಯ ಮೇಲೆ ಯಾರಾಡುತ್ತಿರುವ ಅದೇ ತ್ರಿವರ್ಣಧ್ವಜ. ಚಕ್ರಾಂಕಿತ ಧ್ವಜವನ್ನು. ಹಾಗಿರುವಾಗ, ಕಾಂಗ್ರೆಸ್ ಪಾಕರು ಅಲ್ಲಿ ಭಾಗವಹಿಸದೆ ಅವೆಲ್ಲಿ ನಂಟು ಹೊಡಲು ಒಂದಾಗಿದ್ದರು?

ಅಂದು ಮದ್ರಾಸು ನಗರದ ಎರಡು ಸ್ವಧಗಳಲ್ಲಿ ಸಾರ್ವಜನಿಕ ಸಭೆಗೆ ಭಾರೀ ವಿರ್ವಾಡಾಗಿತ್ತು. ಆಲ್ಲಿನ ಕಡಲು ಕರೆಯಲ್ಲಿ ಹೆಚ್ಚಿನ ದೊಡ್ಡ ದೊಡ್ಡ ಸಭೆಗಳು ನಡೆಯುತ್ತವೆ. ಸ್ವಾತಂತ್ರ್ಯ ದಿನೋತ್ಸವದ ಸಭೆಕೂಡಾ ಅಲ್ಲೇ ನಡೆಯುವದು. ಕಳೆದ ವರ್ಷಗಳಲ್ಲಿ ಕಾಂಗ್ರೆಸ್ಸು ಆಸನದಲ್ಲಿ ಇದ್ದುದರಿಂದ ಅದೇ ಅಲ್ಲಿ ಸಭೆಗೆ ವಿರ್ವಾಡು ಮಾಡುತ್ತಿತ್ತು. ಆದರೆ ಈ ವರ್ಷ ದ್ರಾ. ಮು. ಕ.ಪ್ರಚಾರ ದಲ್ಲಿ ಪಕ್ಷದವರೂ ಆ ಸ್ಥಳವನ್ನು ಕಾಂಗ್ರೆಸ್ಸಿಗೇ ಬಿಟ್ಟು ಕೊಟ್ಟಿತ್ತು. ಹೋಗಲು ಬರಲು ಸಾರ್ವಜನಿಕರ ಸೌಕರ್ಯಕ್ಕಾಗಿ ವಿಶೇಷ ಬಸ್ಸುಗಳ ವಿರ್ವಾಟನ್ನೂ ಮಾಡಿಕೊಟ್ಟಿತು. ಅಂದಿನ ಕಾಂಗ್ರೆಸ್ಸಿ ಸಭೆಗೆ ಇನ್ನೊಂದು ಆಕರ್ಷಣೆಯ ವಿಷಯವೂ ಇತ್ತು. ಕಳೆದ ಕೆಲವಿಂಗಳುಗಳಿಂದ ಸಾರ್ವಜನಿಕ ಸಭೆಗಳಲ್ಲಿ ಭಾಷಣಕೊಡದೆ ಇದ್ದ ಕಾಂಗ್ರೆಸ್ಸಿನ ಅಧ್ಯಕ್ಷರು ಕಾಮರಾಜರು ಅಂದು ಮಾತನಾಡುವರೆಂದು ಘೋಷಿಸಲಾಗಿತ್ತು. ಅದನ್ನು ಭಯಭೇರಿಯೆಂದೇ ಕಾಂಗ್ರೆಸ್ಸಿಗರು ಕರೆದ್ದಿರು. ಈ ಸಭೆಯನ್ನು ನಭೂತೋನ ಭವಿಷ್ಯತಿ ಮಾಡಬೇಕೆಂದು ಅದಕ್ಕಾಗಿ ಭಾರೀ ಉತ್ಸಾಹವನ್ನು ತೋರಿಸಲಾಗಿತ್ತು. ಜಲಸಾಗರದೆದುರು ಜನಸಾಗರವನ್ನಿಲ್ಲಿ ಸಲು ಕಾಂಗ್ರೆಸ್ಸಿ ಕಾತರಗೊಂಡಿತ್ತು. ಅಲ್ಲಿಗೆ ಭಾರೀ ಮೆರವಣಿಗೆಯಲ್ಲಿ ಹೋಗಲು ವಿರ್ವಾಡಾಗಿತ್ತು. ಮೆರವಣಿಗೆ ಹೊರಟಿತು. ಆದರೆ ಈ ಗ್ರಹಣಪತ್ರವನ್ನು ಒಂದೆಡೆ ಪೋಲೀಸರು ತಡೆದು ಒಂದು ಭಾಗವನ್ನು ವಂತ್ರ ಮಂಡಿಸಲು ಬಿಟ್ಟರು. ಮತ್ತೊಂದು ಭಾಗವನ್ನು ಮತ್ತೆ ಬಿಟ್ಟರು. ಇದರ ಉದ್ದೇಶವೇನು? ದ್ರಾ. ಮು. ಕ. ದ ಗೃಹ ಮಂತ್ರಿ ಮಹಾಶಯರು ಆದೇನಾದರೂ ಅಜ್ಞೆ ಕೊಟ್ಟಿದ್ದರೇ? ಮೆರವಣಿಗೆಯಲ್ಲಿ ಗಲಾಟೆ ನಡೆಸಲು ಸಜ್ಜಿಪರಾಗಿದ್ದ ಸೂಜಿಕ ಕಾಡು ಬಂದಿತ್ತೇನು? ಸೋಡಾ ಬಾಟ್ಲಿ ಇತ್ಯಾದಿ ಪ್ರಕರಣ ಪರಾರ್ಥಗಳೇನಾದರೂ ನಗರ ಕಾವಲಿಗರ ಸರ್ಪಕಣ್ಣಿಗೆ ಬಿಟ್ಟಿಲ್ಲ ವೆ? ಇಗೆಲ್ಲಕ್ಕಿಂತಲೂ ಕಾಂಗ್ರೆಸ್ಸಿಗರು ತಮ್ಮನ್ನು ಪ್ರದರ್ಶನಕ್ಕೆ ಅದೇ ಪಾರಾಯ ನ್ನೇತಕ್ಕೆ ಹಿಡಿದರು? ಬೇರೆ ದಾರಿಯೇ ನಿಗೆ ಇಲ್ಲವೇನು?

ಇತ್ತ ದ್ರಾ. ಮು. ಕ.ದವರೂ ಅಂತಹ ಪ್ರಶ್ನೆಗಳನ್ನು ಎದುರಿಸಲೇಬೇಕು. ಕೆಳಗಿರಸೆಯಲ್ಲಿ ಕಾಂಗ್ರೆಸ್ಸಿಗರು ಕೂಗುತ್ತಾ ಹೋಗುತ್ತಿದ್ದಾಗ ಇವರೇತಕ್ಕೆ ಅವರ ತಲೆಯ ಮೇಲೆ ಕಲ್ಲು ಹೊತ್ತು ಹಾಕಿದರು? ಇದಲ್ಲದೆ ಸೂರ್ಯನನ್ನು ಕಂಡು ಹೋದರೆ ಛೀಛೀಪಡುತ್ತ ಇರಲಿ. ನೈಜ ಸೂರ್ಯ ಆದನ್ನು ಕಂಡು ತಳಮಳಗೊಳ್ಳುವದಿಲ್ಲ. ಚಲಚ್ಚಿತ್ರದ ಸೂರ್ಯ ಉತ್ತ ಸಿಡಿದೆದ್ದು ಬೀಳುತ್ತಾನೆ. ಹಾಗೆಯೇ ಆಯಿತು. ಈ ದುರ್ಘಟನೆ ನಡೆದದ್ದು ಸಾಯಂಕಾಲ ಸುಮಾರು ಐದು ಘಂಟೆಯು ಹೊತ್ತಿಗೆ. ಅಂದು ನಗರದ ಇನ್ನೊಂದು ಬದಿಯಲ್ಲಿ ದ್ರಾ. ಮು. ಕ. ದವರು ತಮ್ಮ ಸಭೆಗೆ ವಿರ್ವಾಡು ಮಾಡಿದ್ದರು. ಹಾಗಿರುವಾಗ ಅಲ್ಲಿಗೆ ಹೋಗದೆ ಅಪಡೆ ಅಲ್ಲೇನು ಮಾಡುತ್ತಿತ್ತು? ಅವರೇತಕ್ಕೆ ಸೋಡಾ ಬಾಟ್ಲಿ, ಕಲ್ಲು, ಇಟ್ಟಿಗೆ, ದೊಣ್ಣೆಗಳನ್ನು ಶೇಖರಿಸಿಟ್ಟುಕೊಂಡಿದ್ದರು? ಕಾಂಗ್ರೆಸ್ಸಿನ ಮೆರವಣಿಗೆ ಬರುವಾಗ ಗಲಭೆಯೆಬ್ಬಿಸಿದಲ್ಲಿ ಮುಂದೆ ಅವರ ಸಭೆಗೆ ಯಾರೂ ಹೋಗಲಾರದೆಂಬ ಯೋಚನೆಯಿಂದ ಅಲ್ಲಿ ಮುನ್ನೇಪಾರಾಡು ಮಾಡಲಾಗಿತ್ತೇ?

ದ್ವಿಪಕ್ಷಗಳು ಉತ್ತರಕೊಡಬೇಕಾಗಿರುವ ಪ್ರಶ್ನೆಗಳವು. ಇತ್ತ ನಗರ ರಕ್ಷಕರು ಅದೇನು ಮಾಡುತ್ತಿದ್ದರು? ಹೊಗಯು ನ್ಯಾಯದ ಮೇಲೆ ಅವರು ಕೃಪಾಕೃಪೆಗೊಳ್ಳುವಂತಿಲ್ಲವಾದರೂ ಮುನ್ನೆಚ್ಚರಿಕೆಯಿಂದ ಇರಬಹುದಿತ್ತಲ್ಲಾ? ಗುಪ್ತಚಾರ ವಿಭಾಗ ಅದೇನು ಮಾಡುತ್ತಿದೆ? ಗುಡಿಸಲು ಪ್ರಕರಣದ ನಂತರವೂ ಎಚ್ಚರಿಕೆಯಿಂದಿಲ್ಲವೇ? ಬಡಿದಾಟದ ಬೀಜವನ್ನು ದ್ವಿಪಕ್ಷಿಗಳು ಬಿತ್ತಿದ್ದವು. ಉಭಯ ಪಂಗಡಗಳ ನಡುವೆ ಎಚ್ಚರಿಕೆಯಿಂದ ಓಡಾಡುತ್ತಿದ್ದಲ್ಲಿ ವಿಷಯ ತನ್ನಿಂದ ತಾನೇ ತಿಳಿದು ಬರುತ್ತಿತ್ತು. ಮೆರವಣಿಗೆಗೆ ಬೇರೆ ದಾರಿ ಬಿಡಬೇಕಾಗಿತ್ತು. ದ್ರಾ. ಮು. ಕ.ಕ್ಕೆ ಸಂಬಂಧ ಪಟ್ಟ ಸ್ಥಳಗಳಲ್ಲಿ ವಿಶೇಷ ಬಾಡೋ ಬಸ್ಸಿಗೆ ವಿರ್ವಾಡು ಮಾಡಬಹುದಿತ್ತು.

ಅಂತೂ ದುರ್ಘಟನೆ ಸಂಭವಿಸಿತು. ತಿರುಕಾಮರಾಜರು ತನ್ನ ಸಾರ್ವಜನಿಕ ಮಾನವೃತವನ್ನು ಭಮಪ್ತಿಗೊಳಿಸಿದರು. ದುರ್ಘಟನೆಯಲ್ಲಿ ನಗರ ರಕ್ಷಕರ ಕೈವಾಡವಿದೆಯೆಂದು ಜನ ಎಸಿದರು. ಅವರು ಇನ್ನೂ ಪೆಚ್ಚಿನ ತ್ಯಾಗಕ್ಕೆ ಕರೆ ಇತ್ತರು, ಸೋಲಿನಿಂದ ಧೈರ್ಯ ಗೆಡಬಾರದೆಂದು ಧೈರ್ಯ ತುಂಬಿಸಿದರು; ಸರಕಾರಕ್ಕೆ ಭಯಪಡ ಬೇಡಿರೆಂದು ತಿಳಿಸಿದರು. ಇಂತಹ ಮಾತುಗಳ ಬಂಡವಾಳ ಮುಗಿದೊಡನೆ ಅವರು ನೇರವಾಗಿ ರಾಜಕೀಯದ ವೇದಿಕೆಯ ಮಾತುಗಳಗಾರಂಭಿಸಿದರು. ಸರಕಾರನನ್ನು ರಚಿಸಿರುವ ಅನ್ಯಾನ್ಯ ಪಕ್ಷಗಳು ಪ್ರಜೆಗಳ ಹಿತವನ್ನು ಬಲಿಕೊಟ್ಟು ಅಧಿಕಾರಕ್ಕೆ ಜಂಟಿಕೊಂಡಿದಲು ಹೋರಾಡುತ್ತಿವೆ; ಆವಧಿ ಕಾಂಗ್ರೆಸ್ಸಿ ಹಾಗಲ್ಲ. ಅದಕ್ಕೆ ಅಧಿಕಾರವನ್ನಳಿಸಿಕೊ

ಳ್ಳಲೂ ಅತ್ಯವಿಲ್ಲವೆಂದು ಬಾಲ ಕಳೆದು ಕೊಂಡ ನರಿಯಂತೆ ನುಡಿದರು. ಅಧಿಕಾರದ ಆಸೆ ಇಲ್ಲದ ಕಾಂಗ್ರೆಸ್ಸಿನ ಅಧ್ಯಕ್ಷರು ಅದೇಕೆ ಜುನಾಗಢಾ ರಣದಲ್ಲಳಿದಿದ್ದ ರೋ! ಆವರಿಗೆನೇ ಗೊತ್ತು. ಪಾಕಿಸ್ತಾನದ ಪಿತೃ, ನಾಗಾಲೇಂಡಿನ ನಿರ್ಮಾತೃ, ರಾಜ್ಯಗಳು ರಚನಾತ್ಮಕ ಕಾಂಗ್ರೆಸ್ಸಿನ ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಇಂದು ದ್ರಾ.ಮು.ಕ.ವು ಪ್ರತ್ಯೇಕತೆಯ ವಾದವನ್ನು ಬಿಟ್ಟುಕೊಟ್ಟಿರುವುದೂಡರೂ, ಸಂದರ್ಭ ಸಿಕ್ಕಿದೊಡನೆ ಸುಮ್ಮನಿರುವದಿಲ್ಲವೆಂದು ಭವಿಷ್ಯ ನುಡಿದರು. ಅದೇ ರೀತಿ ನಂತರ ಭಾಷಣ ಮಾಡಿದ ಕಾಂಗ್ರೆಸ್ಸಿನ ಅತಿರಥ, ಮಹಾರಥ ಶ್ರೀ ಸ.ಬ್ರಹ್ಮಣ್ಯಂ, ಶ್ರೀ ಭಕ್ತವತ್ಸಲಂರವರೂ ದ್ರಾ.ಮು.ಕ.ವನ್ನು ದಂಡುವದರಲ್ಲೇ ಸಮಯವನ್ನು ಕಳೆದರು.

ಇನ್ನೊಂದೆಡೆ ಅಧಿಕಾರರೂಢ ಪಕ್ಷ ದ್ರಾ.ಮು.ಕ.ವು ಸಾರ್ವಜನಿಕ ಸಭೆಗೆ ತನ್ನ ಕೋಟೆ ಹಾಲಿವುಡ್ಡೆನಿಸಿರುವ ಕೋಡಂಬಾಕಮಿನಲ್ಲಿ ವಿಶಾಲವಾದ ಮೂಡಿದ್ದು, ಅಲ್ಲೂ ಭಾರೀ ಜನರು ಬಂದಿದ್ದರು. ಹಿಟ್ಟಿನ ಮಂತ್ರಿಗಳು ಅದರಲ್ಲಿ ಭಾಗವಹಿಸಿದ್ದರು. ಲೋಕಸಭೆಯ ಅಧ್ಯಕ್ಷ ಶ್ರೀ ಪೀಲಂ ಸಂಜೀವ ರೆಡ್ಡಿಯವರು ಅಲ್ಲಿ ಉಪಸ್ಥಿತರಾಗಿದ್ದರು. ಸಭೆಯ ಅಧ್ಯಕ್ಷ ಸ್ಥಾನದಲ್ಲಿ ಶ್ರೀ ಮೂ. ಪೋ ಶಿವಜ್ಞಾನಗ್ರಾಮಣಿಯವಂದ್ದರು. ಅಲ್ಲೂ ಸ್ವಲ್ಪ ಮಟ್ಟಿಗೆ ಗಲಾಟೆ ನಡೆಯಿತು. ತಳಮಳಗೊಂಡಿದ್ದ ತಮ್ಮ ಪಕ್ಷದ ಸದಸ್ಯರುಗಳನ್ನು (ಮಂತ್ರಿಗಳನ್ನು ಕೂಡಾ) ಹತೋಟಿಯಲ್ಲಿಟ್ಟುಕೊಳ್ಳಲು ತಿರು ಅಣ್ಣಾದೊರೈ ಬಹಳ ಪ್ರಯತ್ನ ಪಟ್ಟರು. ಆಡಳಿತ ಪಕ್ಷದ ತಾವ್ಮೆ ಶ್ರೀಮಂತ ಕಡಲುತರೆಯನ್ನು ಕಾಂಗ್ರೆಸ್ಸಿಗರಿಗೆ ಬಿಟ್ಟುಕೊಟ್ಟು ಬಡ ಕೋಡಂಬಾಕಮಿಗೆ ಬಂದಿರುವ ತಮ್ಮ ಉದಾರತೆಯನ್ನು ಅವರು ತಿಳಿಯಪಡಿಸಿದರು. ತಮ್ಮ ನಿಶಾನೆಯನ್ನು ನಾಶಮಾಡಿರುವವರನ್ನು ನಾಶಗೈಯ್ಯಲು ತಮಗೆ ಕೃಷ್ಣಾರ್ಧ ಕಾಲವೇ ಸಾಕೆಂದು ಪರಾಕ್ರಮವನ್ನು ವಂತ್ರಿಯೊಬ್ಬರು ಪ್ರಕಟಿಸಿದರು. ಗಲಾಟೆ ಗಡೆದ ಪತ್ರಿಕಾಲಯದ ಗಲಾಟೆ ಗುಗಡುಗಿನ ಸದ್ದು ಹಿಂದೆಯೇ ಕೇಳಿ ಬಂದಿತ್ತು. ತಲ್ಲಿಯು ಅರುವಾಸಿಸಿನಲ್ಲಿ ದ್ರಾ. ಮು. ಕ. ದವರು ತೋರಣ ಕಟ್ಟುವಾಗ ತಮ್ಮ ಧ್ವಜ ಚಿಹ್ನೆಯನ್ನು ಮೊತ್ತವಲ್ಲ ಚರಾಚರಂಕಿತ ತ್ರಿವರ್ಣ ಚಿಹ್ನೆಯನು ಬಳಸಿದ್ದರು. ಅದಕ್ಕೆ ಸ್ಥಳೀಯ ಕಾಂಗ್ರೆಸ್ಸಿಗರು ಆಕ್ಷೇಪಿಸಿದ್ದರು. 'ತಮ್ಮ' ಚಿಹ್ನೆಯನ್ನು "ಅನ್ಯರು" ಆದೆಂತು ಉಪಯೋಗಿಸುವದೆಂಬುದೇ ಅವರ ಪ್ರಶ್ನೆ. ಹಾಗಿದ್ದರೂ ಇಂತಹ ಬಣ್ಣ ಬಣ್ಣದ ತೋರಣಗಳನ್ನು ಕಂಡೆವೆ. ತಮ್ಮ ಸ್ವತಂತ್ರ ತ್ರಿವರ್ಣ ಇರಬೇಕೆಂದು ಬಗೆದ ಕಾಂಗ್ರೆಸ್ಸಿ ಪ್ರದರ್ಶನಾಕಾರರು ಪ್ರತಿಕಾಲಯದ ದ ಮೇಲೆಯೂ ಅದನ್ನು ಕಟ್ಟಿದ್ದರು. ಅದಕ್ಕಾಗಿ ಆಗ ಅಷ್ಟಿ ಬಂದಿರಲಿಲ್ಲ. ಈ ಘಟನೆಯನ್ನಷ್ಟಲ್ಲೇ ವಿಮರ್ಶಿಸುತ್ತಪಹಿಸ್ಟಿಬ್ಬ ಮಂತ್ರಿಯವರು ಕಾಂಗ್ರೆಸ್ಸಿನವರಿಗೆ ತೋರಣಕಟ್ಟಲು ತಾಣ ಸಿಗದಿದ್ದಾಗ ಸ್ಥಳ ಕೊಟ್ಟ ಆಶ್ರಯದಾತ ತಾನೆಂದು ತಿಳಿಸಿದರು. ಈ ಸಂಭವವು ಕಾಂಗ್ರೆಸ್ಸಿನವರು ಕಾಳಗಕ್ಕೆ ಕಾಲು ಕೆರೆಯುತ್ತಿದ್ದುದನ್ನೂ, ದ್ರಾವಿಡ ಮುನ್ನೇಟ್ರ ಕಳ್ಗಗಮನಿಸಲು ಕಪಸಕಾನರನ್ನು ಮುಂದಾಗಿಯೇ ದಬ್ಬುತ್ತಿದ್ದುದನ್ನು ಸೂಚಿಸುತ್ತದೆ. ಭಾರತದ ಸ್ವಾತಂತ್ರ್ಯವನ್ನು ಕಾಂಗ್ರೆಸ್ಸಿಗರು ಬ್ರಿಟಿಷರಿಂದ ಗುತ್ತಿಗೆಗೆ ಪಡೆದ ಕೊಂಡಿಲ್ಲವೆಂದೂ, ಸ್ವಾತಂತ್ರ್ಯ ಚಳವಳಿಯಲ್ಲಿ ತಾನು ಭಾಗವಹಿಸಿದ್ದೆನೆಂದೂ, ಅಂದು ಭಾಗವಹಿಸಿದ್ದ ಶ್ರೀ ಭಕ್ತವತ್ಸಲಂ ರಾಜಾಜಿ, ಕೃಪಲಾನಿ, ಲೋಹಿಯಾ ಮುಂತಾದವರಿಂದು ಕಾಂಗ್ರೆಸ್ಸಿನಿಂದ ಕಾಲ್ಕೆಳಗೆದಿರುವರೆಂದೂ ಹೇಳಿದ ಶ್ರೀ ಅಣ್ಣಾದೊರೈಯವರು, ಅನ್ಯರ ಆಳ್ವಿಕೆಯಿಂದ ಸ್ವಾತಂತ್ರ್ಯವನ್ನು ಪಡೆದಿರುವೆವಾದರೂ ಬಡತನ, ಅಜ್ಞಾನ, ಜಾತಿ ತಡೆಯ ವಿರುದ್ಧ ಹೋರಾಟ ಇಂದೂ ನಡೆಯುತ್ತಿದೆಯೆಂದು ತಿಳಿಸಿ, ಮದ್ರಾಸಿನ ಗುದ್ದಾಟಕ್ಕೆ ದ್ರಾ. ಮು. ಕ.ವೇ ಕಾರಣವೆಂದಾದಲ್ಲಿ ಇತರ ರಾಜ್ಯಗಳ ರಾದ್ಧಾಂತಕ್ಕೆ ಯಾವು ಕಾರಣವೆಂದು ಕೇಳಿ ಇದ ಕ್ಕೆಲ್ಲಾ ಕಾಂಗ್ರೆಸ್ಸಿಗರೇ ಹೊಣೆಗಾರರೆಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಗ್ರಾವ್ಡೆಯವರಂತಿಂದಿನದುರ್ಘಟನೆಯನ್ನು ಕಾಂಗ್ರೆಸ್ಸಿನ ಅಧ್ಯಕ್ಷರು ಖಂಡಿಸಿದ್ದಲ್ಲಿಅವರ ಯೋಗ್ಯತೆಯೇ ಅಷ್ಟೆಂದು ತಾನು ಪರಿಗಣಿಸುವದಾಗಿಯೂ, ಈ ಪ್ರಕರಣಗಳ ಹಿಂದೆ ಕಾಂಗ್ರೆಸ್ಸಿನ ಕೈವಾಡವಿದ್ದಿರಬಹುದು ಎಂದು ಅನ್ಯ ಪಕ್ಷಗಳ ಆಳ್ವಿಕೆಗೆ ಅಡ್ಡಿ ತಂದೊಡ್ಡುವ ಸಂಚು ನಡೆಯುತ್ತಿರುವರಂಬುದು ಸ್ಪಷ್ಟವಾಗುತ್ತದೆಂದೂ ಹೇಳಿದರು.

ಈ ರೀತಿ ದುರ್ಘಟನೆಗೆ ಕಾಂಗ್ರೆಸ್ಸಿಗರು ದ್ರಾ. ಮು. ಕ.ದವರನ್ನು ದೂಷಿಸುತ್ತಿರುವಾಗ ದ್ರಾ. ಮು. ಕ.ದವರು ಕಾಂಗ್ರೆಸ್ಸಿಗರತ್ತಲೂ ಕೈ ತೋರಿಸುವದರಲ್ಲೇ ಕಾಲ ಕಳೆದು ಬಿಟ್ಟರು. ಇಂತಹ ದುರ್ಘಟನೆಗಳು ಮದರಾಸಿನಲ್ಲಿ ಮೊತ್ತ ನಡೆದಿರುವದಲ್ಲ, ಕಟ್ಟಕಡೆಯಲ್ಲಿ ಒರಿಸ್ಸಾದ ಉಪ-ಮುಖ್ಯ ಮಂತ್ರಿಯವರು ಪೋಲೀಸರ ಸಹಾಯದಿಂದ ತಪ್ಪಿಸಿಕೊಂಡು ಹೋಗಬೇಕಾಯಿತು. ಕಲ್ಕತ್ತದ ಸಂಭವ ನಗೆಗೇಡಿತನದ್ದಿದೆ. ಅಷ್ಟೊಂದು ಹತ್ತಿರ್ಸ್ಸು ಕಾಂಗ್ರೆಸ್ಸ್ ಪ್ರದರ್ಶನಕಾರರಿಗೆ ಇಡೀ ರಸ್ತೆಯೇ ಬೇಕು! ಅವರ ಆ 'ಛಾರೀ' ವೈಭವಕ್ಕೆ ಸಾಗುತ್ತಿರುವಾಗ ಅಡೆತಡೆ ಆದೊಂದೂ ಇರಬಾರದು! ಬಗಲೇ ಒಂದು ಬಸ್ಸ್ ಬರಬೇಕೇ! ಅದನ್ನು ಕಾಂಗ್ರೆಸ್ಸಿಗರು ತಡೆ ಹಿಡಿದು ಹುಡಿಹುಡಿ ಬಿಟ್ಟರು. ರೊಚ್ಚಿಗೆದ್ದ ಇತರ ಜನರು ಅವರನ್ನು ಹುಡಿ ಮಾಡಿದರು.

ಇಪ್ಪತ್ತು ವರ್ಷಗಳ ಹಿಂದೆ ಅನ್ಯರ ಆಕ್ರಮಣದ ಸಮಯ, ಹಿಂದೂ ಹೆಂಗಸರನ್ನು ಗುಡ್ಡಗಾಡಿಗೆ ಮುಸಲ್ಮಾನರು ಕದ್ದುಕೊಂಡು ಹೋಗುತ್ತಿದ್ದರಂತೆ. ಇಪ್ಪತ್ತು ವರ್ಷಗಳ ನಂತರ ಇದೀಗ ಶವ್ಯೆ ಕೆಳಗೆ ಕೆಲಸ ಮಾಡುತ್ತಿರುವ ಹಿಂದೂ ಹುಡುಗಿಯನ್ನು ಬಂಧಿಸಿಟ್ಟಿರುವ ಕಾರಣವಾಗಿ ಕಾಶ್ಮೀರದಲ್ಲಿ ಭಾರೀ ಆಂದೋಲನ ನಡೆಯುತ್ತಿದ ಕಾಶ್ಮೀರ್ ಎಂಬಾರ ಇನ್ನು ಕಣ್ಣು ತೆರೆದಿದಿವಸವಲ್ಲ ದಿಲ್ಲಿ ಬಾದ್ ಷಹರು ಕೂಡಾ 'ಇಫೀನು ಮಹಾ' ಅನ್ನುತ್ತ ಗುಮ್ಮಸ ಇದ್ದಾಗ ಈ ಸಲದ ಅಗೋಸ್ಟ್ ಹದಿನೈದರಂದಾದ ನ್ಯಾಯ. ಬೇಡದ ಹುಡುಗಿಯರ ಮೇಲೆ ಶ್ರೀನಗರದಲ್ಲಿ ಅಶ್ರು ಪ್ರಯೋಗ ನಡೆಯಲಾಯಿತು.

ಆಗೋಸ್ಟ್ ಹದಿನೈದರಂದು ಕೂಡಾ ಮರ್ಸೆಡಿಸ್‌ಗಳು ನಡೆಯುತ್ತಿರುವಾಗ ಸಕ್ತರ ಪ್ರಮುಖ ಸದಸ್ಯರಿಗೆ ದೇಳು ತ್ತಿರುವ ಮೂಹುಗಳಾದರೂ ಬೇಗನೆ? ಕೇರಳದ ಮುಖ್ಯಮಂತ್ರಿ, ಕಾಮ್ರೇಡ್ ನಂಬೂದರಿಪಾದರವರು ಆಹಾರ ಅಭಾವ, ಬೆಲೆಯೇರಿಕೆ ಸಮಸ್ಯೆಗಳನ್ನು ಅಂಕಿಯಲ್ಲಿಟ್ಟುಕೊಳ್ಳಲು ಜನತೆ ಒಂದಾಗಬೇಕೆಂದು ಹೇಳಿದರು. ಇವರು ಕಮ್ಯೂನಿಸ್ಟ್ ಪಕ್ಷದವರಿದ್ದಾರೆ.

ತಮಿಳುನಾಡಿನ ವಿಶ್ವ ಮಂತ್ರಿ ತಿರು ಅಣ್ಣಾದೊರೈಯವರು ಪರಾನಳಿತದಿಂದ ಸ್ವಾತಂತ್ರ್ಯ ಹೊಂದಿರುವೆವಾದರೂ, ಬಡತನ, ಅಜ್ಞಾನ ಮತ್ತು ಜಾತಿ ತಡೆಯ ವಿರುದ್ಧ ಹೋರಾಟ ನಡೆಯುತ್ತಿದೆ. ಆದ ಕ್ಕಾಗಿ ಇನ್ನೂ ಹೆಚ್ಚಿನ ಕಷ್ಟದಿಂದ ಶ್ರಮ ಪಡಬೇಕೆಂದರು. ಇವರು ದ್ರಾವಿಡ ಮುನ್ನೇತ್ರ ಕಳ್ಗಗಮನಿಸವರಿದ್ದಾರೆ.

ಬಂಗಾಳದ ಮುಖ್ಯಮಂತ್ರಿ ಶ್ರೀ ಅಜಯ ಕುಮಾರ ಮುಖರ್ಜಿಯವರು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದವರ ರಾಷ್ಟ್ರ ನಿರ್ಮಾಣದ ಧ್ಯೇಯಗಳಿಗಾಗಿ ನಾವು ಪಾನರ್ ಅರ್ಪಣೆ ಮಾಡಿಕೊಳ್ಳಬೇಕೆಂದರು. ಇವರು ಪೂರ್ತಿ ಕಾಂಗ್ರೆಸ್ಸಿಗರು, ಈಗ ಬದಲ್ಗಾ ಕಾಂಗ್ರೆಸ್ಸಿಗರು.

ಮಧ್ಯಪ್ರದೇಶದ ಮುಖ್ಯಮಂತ್ರಿ ಶ್ರೀ ಸಿಂಹರವರು ಆ ರಾಜ್ಯದ ಜನರಿಗೆ ಯೋಗ್ಯ, ಸಮರ್ಥ ಆಡಳಿತವನ್ನೊದಗಿಸುವುದಾಗಿಯೂ, ಅವರ್ಪಗತಿಗೆ ಕೆಲಸಮಾಡಲು ನಿರ್ಧರಿಸಿರುವುದಾಗಿ ತಿಳಿಸಿದರು. ಇವರು ಇದೀಗ ಕಾಂಗ್ರೆಸ್ಸ್ ಕಾನನದಿಂದ ಹೊರಬಂದಿರುವ ಶ್ರೀಗೋವಿಂದ ನಾರಾಯಣ ಸಿಂಹ.

ಕಾಂಗ್ರೆಸ್ಸಿನ ಅಧ್ಯಕ್ಷ ತಿರ ತಾಮರಾಜರು ಇನ್ನಷ್ಟ ತ್ಯಾಗಕ್ಕೆ, ಸರಕಾರಕ್ಕೆ ಭಯಪಡದೆ ಮುಂದೆ ಬರಬೇಕೆಂದು ಕರೆ ಇತ್ತರು.

ಬಂಗಾಳದ ವಾಜಿ ನಮ್ಮಿಗುಂಪಿ ಕಾಂಗ್ರೆಸ್ಸಿನ ವಂದಿಮಾಗಧ ಶ್ರೀ ಸಿ. ಸೇನ್‌ರವರು ಪ್ರಜಾಸ್ವಭುತ್ವವನ್ನು ಬಲಗೊಳಿಸಲು ಮತ್ತು ಸಮಾಜವಾದವನ್ನು ಪಡೆಯಲು ಸ್ವ-ಅರ್ಪಣೆಯಾಗೂ ಒಗ್ಗಟ್ಟಾಗಿರಿ ವಿನಂತಿಸಿದರು.

ಈ ರೀತಿ 'ದೇಶ'ದಾದ್ಯಂತ ವಿವಿಧ ರೀತಿಗಳಲ್ಲಿ ಸ್ವಾತಂತ್ರ್ಯ ದಿನೋತ್ಸವ ಆಚರಿಸಲ್ಪಡುತ್ತಿದ್ದಾಗ, ನಾನಾ ನೇತಾರಾಗಳು ನಾನಾ ರೀತಿಗಳಲ್ಲಿ ಸುಮಂಜಸ್ಯತ್ವಿದ್ದಾಗ ಭಾರತದ ಪ್ರಧಾನಿ ಶ್ರೀಮತಿ ಇಂದಿರಾ ನೆಹರೂ ಗಾಂಧಿಯವರು ದಿಲ್ಲಿಯಲ್ಲಿ, ಸೂರ್ಯನು ಮೇಘಾಲೊಂಗೆ ಕಣ್ಣಾಮುಚ್ಚಾಲೆ ಆಡುತ್ತಿದ್ದಾಗ, ಸಜ್ಜನರಾದ ಜನರ ನಡುವೆ ಉಪ್ಪಿನಷ್ಟು ಕಾಗದಪ್ರಮಾಣ ಭಾಷಣ ಮಾಡಿದರು.

ನಾವು ಇಪ್ಪತ್ತು ವರ್ಷಗಳಲ್ಲಿ ಪ್ರಗತಿ ಹೊಂದಿರುವೆವಾದರೂ ಇನ್ನಷ್ಟು ಮುಂದಿರಿಯ ಬಹುದಾಗಿತ್ತು. ಆದರೆ ಅದಕ್ಕೆ ಜಾತೀಯತೆ, ಭಾಷಾಭಿನ್ನತೆ, ಮತೀಯ ಪೂರ್ವಾಪರ ಅಡ್ಡ ನಿಂತು ಬಿಟ್ಟಿತು. ಇದಕ್ಕೆ ಯಾರು ಹೊಣೆ ಹೊರಲೂ ಸಿದ್ಧರಿಲ್ಲ. ಪ್ರದೇಶ ಭಿನ್ನತೆಯಿಂದಲೂ ಅಪಾಯ ಇದೆ. ನಾವು ಸಂಯುಕ್ತ ಭಾರತದ ಚಿತ್ರವನ್ನು ಕಣ್ಮುಂದೆ ಇಟ್ಟುಕೊಳ್ಳಬೇಕು. ನಮಗೆ ಸ್ವಾತಂತ್ರ್ಯ ಸಿಕ್ಕಿಲ್ಲ. ದೇಶ ವಿಭಜನೆ ಆಯಿತು. ಆಸ್ತಿಪಾಸ್ತಿಗಳ ಮೇಲೆ ಆಕ್ರಮಣ ನಡೆಯಿತು. ಗಾಂಧೀಜೀ ಗುಂಡಿಗಾಹುತಿಯಾದರು. ಭಾರತಕ್ಕೆ ಕ್ರಮಶಃ ಬಲ ಬರುತ್ತಿದೆ, ಪ್ರಗತಿ ಹೊಂದುತ್ತಿದೆ. ಆತ್ಮವಿಶ್ವಾಸ ಮೂಡಿಸುತ್ತಿದೆ. ಬೆಲೆ ಏರುತ್ತಿದೆ. ಅಧಿಕ ಸಂಬಳದ ಕೂಗು ಕೇಳಿ ಬರುತ್ತಿದೆ. ಬೆಲೆ ತಡೆಯಲು ಕೊಂಡುಕೊಳ್ಳುವದನ್ನು ಜನರು ವಿಲ್ಲಿಸಬೇಕು. ಬಹಳ ಕಷ್ಟ ಪಡುವವರು ಬಡವರಿದ್ದಾರೆ. ಅವರಿಗೆ ನನ್ನ ಸಹಾನುಭೂತಿ ಇದೆ. ಅನ್ಯಾನ್ಯ ಪಕ್ಷಗಳ ಸರಕಾರ ಸ್ಥಾಪನೆಗೆ ಸಂವಿಧಾನದಲ್ಲಿ ಸ್ಥಳ ಇದೆ. ದೇಶದ ಪೂರ್ಣರಕ್ಷಣೆಗಾಗಿ ಸೇನೆ ಪದಾಸಿದ್ಧವಿದೆ. ಬಡತನದ ನಿರ್ಮೂಲನಕ್ಕಾಗಿ ಸರ್ವಪ್ರಯತ್ನ ಇದೆ. ನಾವೆಲ್ಲರೂ ಒಂದಾಗಬೇಕು. ಭೈರ್ಯಗುಂದಬಾರದು, ಆತ್ಮವಿಶ್ವಾಸ ತಳೆಯಬೇಕ. ಭವ್ಯ ಭಾರತದ ಸೃಷ್ಟಿಗಾಗಿ ಪ್ರಯತ್ನಿಸಬೇಕು. 'ಜಯ್ ಹಿಂದ್' ಘೋಷಣೆಯು ರಾಷ್ಟ್ರೀಯ ಪ್ರಗತಿಯತ್ತ ನಮ್ಮನ್ನೆನ್ನೆಯ್ಯಲಿ.

ಇದು ಪೃಥ್ವಾನಿ ಶ್ರೀಮತಿ ಇಂದಿರಾ ಜೀಯವರ ಭಾಷಣದ ಸಾರಾಂಶ. ಅವರು ತಮ್ಮ ಭಾಷಣದಲ್ಲಿ ಮಟ್ಟಿದ ವಿಷಯವಿಲ್ಲ. ದೇಶ ವಿಭಜನೆಯಿಂದಾರಂಭಿಸಿ, ಸುಂದರ ಭಾರತದ ಸೃಷ್ಟಿಗಾಗಿ ಶ್ರಮಿಸಲು ಕರೆ ಇತ್ತಿರುವರು. ದೇಶ ವಿಭಜನೆಯೆಂಬೊಡನೆ ಪಾಕಿಸ್ತಾನವನ್ನು ಮರೆಯಲು ಸಾಧ್ಯವಿರುವದಿಲ್ಲ. ಅದಿನ್ನೂ ಅಶ್ರವಣಕ್ಕೊಳಗಾಗಿ ಇದೆ. ಅದು ನಮ್ಮೊಂದಿಗೆ ಸೇರದಿದ್ದಲ್ಲಿ, ನಮ್ಮ ಸ್ವರಾಜ್ಯ ಪರಿಪೂರ್ಣವೇ ಇದೆ. ಅದನ್ನು ಪಡೆಯಲು ನಾವೆ ಹೋರಾಡಲೇ ಬೇಕು. ಶ್ರೀಮತಿ ಇಂದಿರಾಜೀಯವರು ಇದನ್ನು ಸ್ಪಷ್ಟವಾಗಿ ಬೇಳುವ ಗೋಜಿಗೆ ಹೋಗಿಲ್ಲ. ಕಾಶ್ಮೀರದ ಕರುಣಾ ಕ್ರಂದನದ ಕಥೆಗೆ ನ್ನು ನಿರೂಪಿಸಿರವಾದರೂ ಡಾ॥ ಶ್ಯಾಮಪ್ರಸಾದ ಮುಖರ್ಜಿಯವರಂತೂ ಇತರರ ಬಲಿದಾನದ ವಿಷಯ ಇನ್ನು ನಾವದಕ್ಕೆ ವಿಶಿಷ್ಟ ಸ್ಥಾನವನ್ನಿತ್ತಿರುವ ವಿಷಯ, ಅಖಿಲ ಅಕ್ರಮಣಕ್ಕೊಳಗಾಗಿರುವ ಭೂ ಪ್ರದೇಶದ ಬಿಡುಗಡೆಗೂ ಕಾರಿತೂಬವೇನೂ ಆಡಿರುವದಿಲ್ಲ. ಇತ್ತಿ ಆಕ್ರಮಣ ನಡೆಸಿರುವ ಆತತಾಯಿಗಳ್ಳರೆಂಬುದನ್ನು ಅವರು ಹೇಳಿರುವಲ್ಲಿ ಇವಕ್ಕೆಂತೂ ಕಾಶ್ಮೀರದ ಮೇಲೆ ಮೊತ್ತ ಆಕ್ರಮಣ ನಡೆದಿರುವದೇ! ಬೇರೆಲ್ಲಿ ಆಕ್ರಮಣ ನಡೆದಿಲ್ಲವೇ? ಪ್ರಧಾನಿಯವರಿನ್ನೇತ್ತಕ್ಕೆ ಅಡಗಿಸಿಟ್ಟಿದ್ದಾರೆ? ಕಮ್ಯೂನಿಸ್ಟ್ ಕವಿ ಜೈನ ನಡೆಸಿರುವ ಆಕ್ರಮಣದ ಉಲ್ಲೇಖನೆಕೆಲ್ಲಿ? ಮತ್ತು ಆಕ್ರಮಣಕ್ಕೊಳಗಾಗಿರುವ ಭೂಪ್ರದೇಶವ ಬಿಡುಗಡೆಗಾಗಿ ಇಪ್ಪತ್ತು ವರ್ಷಗಳಲ್ಲಿ ಕಾಂಗ್ರೆಸ್ಸ ಅಧಿಕಾರಿ ನರ್ಗ ಏನು ಮಾಡಿರುವ್ದದ? ಕೊಸಿಯ ಹಕ್ಕ, ಬಿಡುಗಡೆಯ ಯೋಜನೆಯಂತಿರಲಿ, ಯೋಚನೆಯಾದರೂ ಇಸೆಯೇ? ದೇಶವೆಂದರೇನು—ಕಲ್ಲು, ಮುಳ್ಳು, ಮಣ್ಣು ತಾನೆಂದು ಕೇಳುತ್ತಿದ್ದ ಪ್ರಧಾನಿಯವರ ಕಾಲ ಆಗಿ ಹೋಗಿದೆ. ಭಾರತ ಮೂಮೆಯ ಬಹಜೆ ಒಂದೆ. ಸುಲಭವಾಗಿ ಜೆಂಗರ್-ಳಿಗೆ ಅರ್ಥವಾಗಬಹುದೆಂದು ಭಾ

(ಹದಿಮೂರನೇ ಸುಟ ನೋಡಿರಿ)

ಕ್ಷೇತ್ರ ಪರಿಚಯ

ಜೈನರ ಕ್ಷೇತ್ರ ಹೊಂಬುಜ

ಲೇಖಕರು
ಶ್ರೀ ವಿದ್ವಾನ್ ಕೆ. ನಾರಾಯಣಾಚಾರ್.

ತಿಪಟೂರಿಗ್ಗಾ ಜಿಲ್ಲಾ ಹೊಸನಗರ ತಾಲೂಕು ಹುಬ್ಬ ಗ್ರಾಮದಲ್ಲಿ 'ಹೊಂಬುಜ'ವೆಂಬೊಂದು ಜೈನ ಕ್ಷೇತ್ರವಿದೆ. ಅಖಿಲ ಧಾರತದ ಎಲ್ಲಾ ಜೈನ ಯಾತ್ರಿಕರು ಯೂವಾಗಲೂ ಇಲ್ಲಿಗೆ ಬರುತ್ತಿದ್ದು ತಾವು ಹೊತ್ತ ಹರಕೆಗಳನ್ನು ನಲ್ಲಿಸುತ್ತಾರೆ. ಉಷಸಯನ್ನು, ವಿವಾಹ ಮುಂತಾದ ಸಮಾರಂಭಗಳನ್ನೂ ಇಲ್ಲಿ ಜರಗಿಸುತ್ತಾರೆ. ದಿಗಂಬರರಾದ ಜೈನ ಸನ್ಯಾಸಿಗಳೂ ಪರಿವ್ರಾಜಿಕೆಯರೂ ಆಗಾಗ್ಗೆ ಇಲ್ಲಿಗೆ ಸಂದರ್ಶನ ಕೊಡುತ್ತಾರೆ.

ಸುಮಾರು ೮ ಅಥವಾ ೯ನೇ ಶತಮಾನದಲ್ಲಿ ಆಗ್ರಾ ನಗರಕ್ಕೆ ಪಶ್ಚಿಮದಲ್ಲಿರುವ ಉತ್ತರ ಮಧುರೆಯಲ್ಲಿ ಸಾಕಾರರಾಯನೆಂಬ ದೊರೆಯಿದ್ದನು. ಅವನ ಪತ್ನಿಯು ಶ್ರೀಮಲಾದೇವಿ. ಆ ದಂಪತಿಗಳಿಗೆ ಜಿನದತ್ತರಾಯನೆಂಬ ಪುತ್ರನಿದ್ದನು. ಒಂದಾನೊಂದು ದಿನ ಸಾಕಾರರಾಯನು ದಿಗ್ವಿಜಯಕ್ಕೆ ಹೋದಾಗ ಪದ್ಮಿನೀಲಕ್ಷಣ ಸಂಪನ್ನೆಯಾದ ದೇವರ ಜಾತಿಯ ಒಂದು ಸ್ತ್ರೀಯಲ್ಲಿ ವ್ಯಾಮೋಹಕ್ಕನಾಗುತ್ತಾನೆ. ಅವಳನ್ನು ಮದುವೆಯಾಗಲು ಬಯಸಿ ಅವಳ ತಂದೆಯನ್ನು ಕೇಳಿದಾಗ ಅವನು "ಇವಳ ಉದರದಲ್ಲಿ ಜನಿಸಿದ ಪುತ್ರನನ್ನು ನಿನ್ನ ಉತ್ತರಾಧಿಕಾರಿಯನ್ನಾಗಿ ಮಾಡುವುದಾದರೆ ಮಾತ್ರ ನನ್ನ ಪುತ್ರಿಯನ್ನು ನಿನಗೆ ಕೊಡುವೆನೆಂ"ದು ಹೇಳುತ್ತಾನೆ. ಸಾಕಾರರಾಯನು ಅದಕ್ಕೆ ಒಪ್ಪಿ ಆ ಹುಡುಗಿಯನ್ನು ವಿವಾಹವಾಗುತ್ತಾನೆ. ಅವಳಿಗೆ ಮೂರಿದಕ್ಷನೆಂಬ ಮಗನು ಜನಿಸುತ್ತಾನೆ. ಆ ಪದ್ಮಿನಿಯು ಸಾಕಾರರಾಯನಿಗೆ ಸ್ಪರ್ಧಿಯಾಗಿ ಪತ್ನಿಯಲ್ಲಿ ಜಿನದತ್ತನೆಂಬ ಒಬ್ಬ ಪುತ್ರನಿರುವನೆಂದೂ, ರಾಜ್ಯದ ಪಕ್ಕ ಅವನಿಗೆ ಹೋಗುವುದೆಂದೂ ತನ್ನ ವಂಗಡಿಗೆ ರಾಜ್ಯವು ಸಿಕ್ಕಲಾರದೆಂದೂ ತಿಳಿದು ಆ ಜಿನದತ್ತನನ್ನು ಕೊಲ್ಲಿಸುವುದಕ್ಕೆ ಕ್ರಮವನ್ನು ಸುತ್ತಾಳೆ. ಇದನ್ನು ತಿಳಿದು ಉತ್ತರಾಧಿಕಾರಿಗಾಗಿ ಜಿನದತ್ತನು ಪದ್ಮಿನಿಯ ಪ್ರಾಣವನ್ನು ಪಡೆಯುವ ಕ್ಷಣ ಮಧ್ಯರಾತ್ರಿಯಾಗುವ ಈ ಹೊಂಬುಜ ಕ್ಷೇತ್ರಕ್ಕೆ ಬರುತ್ತಾನೆ. ಬರುವಾಗ ತನ್ನ ಕುಲದೇವತೆಯಾದ ಪದ್ಮಾವತೀ ದೇವಿಯನ್ನು ಇಲ್ಲಿಗೆ ಕರೆತರುತ್ತಾನೆ ತುಲಗು ದಿಗಳಾದ ಸಿದ್ಧಾಂತ ಕೀರ್ತಿ ಮುನಿಗಳೂ ಅವನ ಸಂಗಡ ಬರುತ್ತಾರೆ.

ಪದ್ಮಾವತೀ ದೇವಿಯು ಪ್ರತಿಷ್ಠೆ

ಇಲ್ಲಿ ಬಂದವನು ಆಯಾಸ ಪರಿಹಾರಕ್ಕಾಗಿ ದೇವಿಯು ಮೂರ್ತಿಯನ್ನು ಒಂದು ಲಕ್ಕೇ ನಿಡದ ಹುಡದಲ್ಲಿಟ್ಟು ಅಲ್ಲಿ ಮಲಗಿ ನಿದ್ರಿಸುತ್ತಾನೆ. ಸ್ವಪ್ನದಲ್ಲಿ ದೇವಿಯು ಗೋಚರಳಾಗಿ "ನಾನು ಇಲ್ಲಿಂದ ಮುಂದೆ ಎಲ್ಲಿಗೂ ಹೋಗುವುದಿಲ್ಲ. ನನಗೆ ಇಲ್ಲೇ ದೇವಾಲಯವನ್ನು ಕಟ್ಟಿಸಿ ನನ್ನನ್ನು ಆರಾಧಿಸು" ಎಂದು ಅವನಿಗೆ ಆದೇಶ ಕೊಡುತ್ತಾಳೆ. ಇಲ್ಲಿಯೂ ನಿನಗಾಗಿರುವ ಬೇಡರು ಆ ಜಿನದತ್ತರಾಯನನ್ನು "ನೀವು ಇಲ್ಲಿಗೆ ದೊರೆಯಾಗಿ ನಮ್ಮನ್ನೆಲ್ಲಾ ಚೆನ್ನಾಗಿ ಕಾಪಾಡಿಕೊಂಡಿರಬೇಕೆ"ಂದು ಪ್ರಾರ್ಥಿಸಿಕೊಳ್ಳುತ್ತಾರೆ. ತದನಂತರವಾಗಿ ಜಿನದತ್ತನು ಇಲ್ಲಿ ಒಂದು ಚಿಕ್ಕ ರಾಜ್ಯವನ್ನು ಕಟ್ಟಿ ದೊರೆಯಾಗುತ್ತಾನೆ. ಪದ್ಮಾವತೀ ದೇವಿಗೆ ಒಂದು ದೇವಾಲಯವನ್ನು ಕಟ್ಟಿಸುತ್ತಾನೆ. ಕಾಲಕ್ರಮೇಣ ಪದ್ಮಾವತೀ ದೇವಿಯು ಜಿನದತ್ತನಿಗೆ ಸ್ವಪ್ನದಲ್ಲಿ ಗೋಚರಳಾಗಿ "ನಿನ್ನ ಕುಲದೇವತಾ ಕಡಿವಾಣವನ್ನು ನನ್ನ ವಿಗ್ರಹಕ್ಕೆ ತುಟ್ಟಿಸಿ ನೋಡು. ಅದು ಬಂಗಾರವಾಗುವುದು. ಹಾಗೆಯೇ ಕಬ್ಬಿಣವೆಲ್ಲಾ ನನ್ನ ವಿಗ್ರಹದ ಸ್ಪರ್ಶದಿಂದ ಸುವರ್ಣವಾಗುವುದು. ನೀನು ಈ ರೀತಿ ಬೇಕಾದಷ್ಟು ಸಂಪತ್ತನ್ನು ಅಭಿವೃದ್ಧಿಪಡಿಸಿ ರಾಜ್ಯವನ್ನಾಳುತ್ತ ಸುಖವಾಗಿರು" ಎಂದು ಅಜ್ಞಾಪಿಸುತ್ತಾಳೆ. ಹೀಗೆ ಹೊನ್ನು ಹುಟ್ಟುವ ಸ್ಥಳವಾದುದರಿಂದ ಇಲ್ಲಿಗೆ "ಹೊಂಬುಜ" ಎಂಬ ಹೆಸರು ರೂಢಿಯಾಯಿತೆಂದು ಹೇಳುತ್ತಾರೆ.

ಜೈನ ಮಠ

ಜಿನದತ್ತನು ಉತ್ತರ ಮಧುರೆಯಿಂದ ಇಲ್ಲಿಗೆ ಕರೆತರಿಸಿದ ಸಿದ್ಧಾಂತ ಕೀರ್ತಿ ಮುನಿಗಳ ಪರಂಪರೆಯಿಂದ ಇಲ್ಲೊಂದು ಜೈನ ಮಠವು ನಡೆದುಕೊಂಡು ಬಂದಿದೆ. ಈಗ ಆ ಪರಂಪರೆಯಲ್ಲಿ ಸ್ವಸ್ತಿ ಶ್ರೀ ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯರೆಂಬ ಸ್ವಾಮಿಗಳು ಆ ಪೀಠವನ್ನು ಅಲಂಕರಿಸಿ ರಾರಾಜಿಸುತ್ತಾರೆ.

ಜಿನದತ್ತ ಮನೆತನದ ಅವನತಿ

ಇಲ್ಲೊಂದು ಮುತ್ತಿನ ಕೆರೆಯಲ್ಲಿ ಎರಡು ಮುತ್ತುಗಳು ಸಿಕ್ಕುತ್ತವೆ. ಒಂದು ಒಳ್ಳೆಯ ಮುತ್ತು. ಇನ್ನೊಂದು ಸ್ವಲ್ಪ ಹೀನವಾದುದು. ಜಿನದತ್ತನು ಉತ್ತಮವಾದ ಮುತ್ತನ್ನು ತನ್ನ ಪತ್ನಿಯ ಆಭರಣದಲ್ಲಿ ಸೇರಿಸುತ್ತಾನೆ. ಹೀನವಾದುದನ್ನು ಪದ್ಮಾವತೀ ದೇವಿಗೆ ಆರ್ಪಿಸಿ ತಾನೆ ಇದರಿಂದ ಕೋಪಗೊಂಡ ದೇವಿಯು "ನಿನಗೆ ವಿನಾಶ ಕಾಲವು ಸನ್ನಿಹಿತವಿದೆ ಆದ್ದರಿಂದಲೇ ಇಂತಹ ದುರ್ಬುದ್ಧಿಯು ಬಂದಿದೆ" ಎಂದು ಸ್ವಪ್ನದಲ್ಲಿ ಜಿನದತ್ತನಿಗೆ ತಿಳಿಸುತ್ತಾಳೆ. ನೊರೆಯು ಹುಣಿಸಾಚಾರ್ಯಾಂತರನಾಗಲು ದೇವಿಯು "ಎಲ್ಲಿಯ ತನಕ ಕುಮುದ್ವತೀತೀರ್ಥದ ಮತ್ತು ಮುತ್ತಿನ ತೆರೆಯ ನೀರು ಬತ್ತುವುದಿಲ್ಲವೋ ಬಲ ಪ್ರಸಾದವು ಸರಿಯಂಗಿ ನಡೆಯುತ್ತಿರುತ್ತದೋ, (ಭಕ್ತರು ಏನಾದರೂ ಕಾರ್ಯವನ್ನು ಮಾಡಬೇಕಾದಾಗ ದೇವಿಯನ್ನು ಪ್ರಾರ್ಥಿಸುತ್ತಾರೆ. ಆ ಕಾರ್ಯವು ಕೈಗೂಡುವುದಾದರೆ ದೇವಿಯು ಬರ್ಜಡೆಯಿಂದ ಒಂದು ಹೂವಿನ ಪ್ರಸಾದವು ಕೆಳಗೆ ಬೀಳುತ್ತದೆ. ಇಲ್ಲವಾದರೆ ಬೀಳುವುದಿಲ್ಲ. ಇದಕ್ಕೆ ಬಲಪ್ರಸಾದವೆನ್ನುತ್ತಾರೆ) ಲಕ್ಕಿಗಿಡವು ಒಣಗಿ ನಾಯಂವುದಿಲ್ಲವೋ ಅಲ್ಲಿಯ ತನಕ ಈ ಕ್ಷೇತ್ರದ ಪ್ರಭಾವವು ನೆಲೆಯಿಂದಿರುವುದು.' ಎಂದು ಆಜ್ಞಾಪಿಸಿ ಕೊಡುತ್ತಾಳೆ. ಕಾಲ ಕ್ರಮೇಣ ಈ ಜಿನದತ್ತನ ವಂಶವು ನಿಃಸಂತತಿಯಾಯಿತು.

ಇಲ್ಲಿಯ ಬಸ್ತಿಗಳು

ಜಿನದತ್ತರಾಯನು ಬಂದು ನೆಲಸಿದ ಕಾಲದಲ್ಲಿ ಇಲ್ಲೊಂದು ಪಾರ್ಶ್ವನಾಥ ಸ್ವಾಮಿಯ ಬಸ್ತಿಯು ಸ್ಥಾಪಿತವಾಯಿತು. ಕಾಲಾಂತರದಲ್ಲಿ ಐದು ವಿಗ್ರಹಗಳಿರುವ ಪಂಚಬಸ್ತಿಯೆಂಬ ಬಸ್ತಿ, ಮಕ್ಕಳ ಬಸ್ತಿ, ಬೋಗಾರ ಬಸ್ತಿ, ಗುಡ್ಡದ ಮೇಲಿರುವ ಗುಡ್ಡದ ಬಸ್ತಿ ಮತ್ತು ಕುಮುದ್ವತೀ ತೀರ್ಥದ ಬಳಿಯಲ್ಲಿರುವ ಸೂಳೆ ಬಸ್ತಿ ಎಂಬೀ ಬಸ್ತಿಗಳು ಸ್ಥಾಪಿತವಾದುವು.

ಹೊಂಬುಜದ ಈಗಿನ ಅಭಿವೃದ್ಧಿ

ಈಗಿನ ಶ್ರೀ ಶ್ರೀಗಳವರ ನೂರ್ಗಾದರ್ಶನದಿಂದ ಸಾಧಾರಣ ಲಕ್ಷರುಪಾಯಿಗಳ ವೆಚ್ಚದಿಂದ ವೈನಾಡಿನ ಶ್ರೀ ಜಿನಚಂದ್ರ ಶ್ರೀ ಪದ್ಮಾವತೀ ದೇವಿಗುಲದ ಜೀರ್ಣೋದ್ಧಾರವನ್ನು ಮಾಡಿಸಿ ಅದರ ಎದುರಿಗೆ ಚಂದ್ರಕಾಲೆಯನ್ನೂ ಕಟ್ಟಿಸಿದ್ದಾರೆ. ಹಾಗೆಯೇ ಶ್ರೀ ಶ್ರೀಗಳವರ ನೇತೃತ್ವದಲ್ಲಿ ಊರ ಪರವೂರ ಉದಾರಿಗಳ ಸಹಾಯದಿಂದ ಇಲ್ಲಿಯ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದಕ್ಕಾಗಿ ಶ್ರೀ ಪದ್ಮಾವತಿ ಪ್ರೌಢಶಾಲೆಯು ತೆರೆಯಲ್ಪಟ್ಟಿದೆ. ಧಾರ್ಮಿಕ ಶಿಕ್ಷಣವನ್ನು ಕೊಡಿಸಲು ಶ್ರೀ ಮಠದ ಕುಂದ ವಿದ್ಯಾಪೀಠವೂ ಸ್ಥಾಪಿತವಾಗಿದೆ. ಗುಡ್ಡದ ಬಸ್ತಿಯು ಎಂದಿಗೂ ಅದರ ಕಟ್ಟಡವು ಲಕ್ಷಾಂತರ ರೂಪಾಯಿಗಳ ವೆಚ್ಚದಿಂದ ಕಟ್ಟಲ್ಪಡುತ್ತಿದೆ.

ಆರೋಗ್ಯ ವಿಚಾರ

ಮಳೆಗಾಲದಲ್ಲಿ ಎಚ್ಚರಿಕೆ !

ಲೇ—ಡಾ। ಎಂ. ಜಿ. ಕೇಶವ್‌ರಾಯ

'ಮೆಳಾಚ್ಚನ್ನಂತ- ದರ್ದಿನಮ್' ಎಂದರೆ ನೋಡ ಮುಸುಕಿದ ದಿನವು ದುರ್ದಿನವಾಗಿರುವುದು ವಾಚ್ಯಟರು ಹೇಳಿದ್ದಾರೆ. ಹಾಗೆಂದರೆ ಮಳೆವೋಡಗಳಿಂದ ಜಗತ್ತಿಗೂ ಜೀವಿಗಳಿಗೂ ಕೆಡಕಾಗುವುದೆಂದು ಅರ್ಥವಲ್ಲ. ಆದರೆ ದುರಾಹಾರ, ದುರ್ವಿಹಾರಗಳಿಂದ ತುಸುಮಟ್ಟಿಗೆ ಸತ್ವ (ಧಾರಣ ಶಕ್ತಿ) ಕಳೆದುಕೊಂಡವರಿಗೆ ಮಳೆ, ಮೋಡ, ಚಳಿ, ಗಾಳಿಗಳು ರೋಗಗಳನ್ನು ತಂದೊಡ್ಡುವದಕ್ಕೆ ಕಾರಣಗಳಾಗುವುವು.

ಆದ್ದರಿಂದ ಹಾಗೆ ಸತ್ವಹೀನರಾದವರು ಮಳೆಗಾಲದಲ್ಲಿ ಏನೇನು ಎಚ್ಚರಿಕೆ ವಹಿಸಬೇಕೆಂಬುದನ್ನು ಇಲ್ಲಿ ಹೇಳುತ್ತಿದ್ದೇನೆ. ಇಲ್ಲಿ ಸತ್ವಹೀನರಿಗೆ ಮಳೆ, ನೀರು, ಚಳಿ, ಗಾಳಿಗಳು ಹೇಗೆ ಬಾಧಿಸಬಹುದು ಮತ್ತು ಅದಕ್ಕೇನು ಉಪಾಯ ಮಾಡಬೇಕು ಎಂಬುದನ್ನು ತಿಳಿದುಕೊಳ್ಳುವಾ.

ಮಳೆಯು ಧಾರಾಕಾರವಾಗಿ ಸುರಿಯುತ್ತಿರುವ ಮಲೆನಾಡು ಮತ್ತು ಘಟ್ಟದ ಪ್ರದೇಶಗಳಲ್ಲಿ ಸತ್ವಬಲವಿದ್ದರೂ ನಿರುದ್ಯೋಗಿಗಳು ಮನೆಯ ಮೂಲೆಮೂಲ್ಲಿ ನಿಷ್ಕರ್ಮಿಗಳಾಗಿ ಮುನಿದಿರಿಂಡು ಕುಳಿತುಕೊಳ್ಳುವರು. ಅದರಿಂದ ಶರೀರಕ್ಕೆ ವ್ಯಾಯಾಮವಿಲ್ಲದೆ ಜೀರ್ಣ ಶಕ್ತಿಯು ಕುಗ್ಗುವುದು. ಅಜೀರ್ಣವಾದ ಆಹಾರವು ಕೊಳೆತು ಕಫ, ಕೆಮ್ಮು, ನೆಗಡಿಗಳನ್ನು ಕೆರಳಿಸಲು ಕಾರಣವಾಗುವುದು. ಅದರ ತಕ್ಕಾವಟ್ಟಿಗೆ ಕವಚಗಳನ್ನು ತೊಟ್ಟು ನೀ ಸಂಕೋಚವಾಗಿ ಹೊಲ, ತೋಟಗಳಲ್ಲಿ ದುಡಿಯುತ್ತಿರುವವರಿಗೆ ಆ ಬಾಧೆಗಳಾವವೂ ಕಾಡುವುದಿಲ್ಲ. ಆದ್ದರಿಂದ ಸಬಲ ವಿಲ್ಲದವರು ಹೊರಗೆ ಹೋಗದಿದ್ದರೂ ಮನೆಯಲ್ಲಿಯೇ ವಿಧಿಬದ್ಧವಾಗಿ ವ್ಯಾಯಾಮಗಳನ್ನು ಮಾಡಬೇಕು. ಅಥವಾ ಆಗಾಗಲಿಗೆ ವ್ಯಾಯಾಮವನ್ನು ಕೊಡುವ ಮನೆ ಕೆಲಸಗಳನ್ನು ನೋಡಬೇಕು.

ಮಳೆಗಾಲದ ಕೊಳೆ, ಕಸ, ಕೆಸರುಗಳಿಂದ ಬಹುತರ ಜಲಾಶಯಗಳ ನೀರು ಕೆಟ್ಟು ಕುಡಿಯಲು ಆಯೋಗ್ಯವಾಗುವುದು; ಕೆಲವು ಕಡೆ ಬಟ್ಟೆಗಳನ್ನು ಒಗೆಯಲು ಕೂಡ ಆಯೋಗ್ಯವಾಗಿರುವುದು. ಅಂತಹ ನೀರನ್ನು ಸೇವಿಸುವುದರಿಂದ ಕೈವಿ, ಹೊಟ್ಟೆ ನೋವು, ಭೇದಿ, ವಾಂತಿ ರೋಗಗಳು ಹುಟ್ಟಿಕೊಳ್ಳುವ ಸಂಭವವಿದೆ. ಅಂತಹ ನೀರಿನಲ್ಲಿ ತೊಳೆದ ಬಟ್ಟೆಗಳು ಅನೇಕ ವಿಧದ ಚರ್ಮ ರೋಗಗಳನ್ನು ಹುಟ್ಟಿಸಬಹುದು. ಆದ್ದರಿಂದ ನೀರಿನ ಶುದ್ಧೀಕರಣದ ವ್ಯವಸ್ಥೆಯಿಲ್ಲದ ಊರು, ಹಳ್ಳಿಗಳಲ್ಲಿ ಮಳೆಗಾಲದಲ್ಲಿ ನೀರನ್ನು ಜೆನ್ನಾಗಿ ಕಾಯಿಸಿಯೇ ಉಡಿಯಬೇಕು. ಹೆಚ್ಚು ಆಳವಾಗಿರುವ ಬಾವಿಯ ನೀರನ್ನು ಸಹ ಕಾಯಿಸಲೇ ಬೇಕು. ಕಾಯಿರುವ ಮೊದಲು ನೀರನ್ನು ಕೆಲವು ಗಂಟೆಗಳವರೆಗೆ ಇಟ್ಟು, ಕೆಸರು ತಳಕ್ಕೆ ಕೂತುಕೊಳ್ಳುವಂತೆ ಮಾಡಿದರೆ ಒಳಿತು. ಕೆಸರು ನೀರಿನಲ್ಲಿ ತೊಳೆದ ಬಟ್ಟೆಗಳನ್ನು ಒಂದು ಸಲ ನೀರಿನಲ್ಲಿ ಕದಿಸುವುದು ಹಿತಕರ.

ಮಳೆಗಾಲದಗಾಳಿಯಲ್ಲಿ ನೀರಿನಅಂಶವು ಹೆಚ್ಚಾಗಿರುವುದು. ಆ ನೀರು ಉಸಿರಾಟದೊಡನೆ ಶ್ವಾಸಕೋಶವನ್ನು ಸೇರುವುದು ಸಹಜವಾಗಿದೆ. ಆದ್ದರಿಂದ ಆಗಾಗ ಕಫ ಯುಕ್ತವಾದ ಕೆಮ್ಮು, ಉಬ್ಬರ, ನೆಗಡಿ, ನೀರುಬಾವು ಮುಂತಾದ ಪೀಡೆಗಳಿಂದ ಬಳಲುತ್ತಿರುವವರು ಮಳೆಗಾಲದಲ್ಲಿ ಕುಡಿಯುವ ನೀರಿನ ಪ್ರಮಾಣವನ್ನು ಸ್ವಲ್ಪ ತಗ್ಗಿಸಬೇಕು. ಮತ್ತು ಮಲಬದ್ಧತೆಯಿದ್ದರೆ ನೀರಾಗಿ ಭೇದಿಯಾಗುವಂತೆ ನಿರಪಾಯಕಾರಿಯಾದ ಔಷಧವನ್ನು ವೈದ್ಯರಿಂದ ಪಡೆಯಬೇಕು.

ವಾರಗಟ್ಟಲೆ ನೋಡ ಮುಸುಕಿ ಯಾವಾಗಲೂ ಜಡಿಮಳೆ. (ನೋನೆ) ಹಿಡಿದಿರುವ ವಾತಾವರಣವಲ್ಲಿ ಚಳಿ ಮತ್ತು ಗಾಳಿಗಳ ಪೀಡೆಯೂ ವಿಶೇಷವಾಗಿರುವುದು. ದುರ್ಬಲರಾಗಿರುವವರು ಆಗ ಗಾಳಿದಿಕ್ಕಿನ ಸರ್ವಥಾ ಅಲೆದಾಡಬಾರದು. ಮೈಕೈಗಳು ಚೆನ್ನಾಗಿ ಬೆಚ್ಚಗಿರುವಂತೆ ಬಟ್ಟೆಗಳನ್ನು ತೊಡಬೇಕು. ಶುಂಠಿ, ಹಿಪ್ಪಲಿ, ಮೆಣಸು, ಜ್ಯೇಷ್ಠಮಧು ಇವುಗಳ ಕಷಾಯಕ್ಕೆ ಹಾಲನ್ನು ಹಾಕಿ ಬೆಳಿಗ್ಗೆ ರಾತ್ರಿ ಕುಡಿಯುವುದು ಒಳ್ಳೆಯದು.

(—ಪ್ರಭಾಕಾಯು.)

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 26—4—1966.

ಧರ್ಮ-ಸಂಸ್ಕೃತಿ ಸಂಗಮವಾಗಬೇಕು

(ಐದನೇ ಪುಟದಿಂದ)

ದ ವಸ್ತುಗಳನ್ನು ಒದಗಿಸಿದೆ. ಎದರೊಂದಿಗೆ, ಸಾವಿಗೀಡಾಗುವವನನ್ನು ಕೆಲಕಾಲ ಬದುಕಿಸಬಲ್ಲ ವಿದ್ಯೌಷಧವನ್ನೂ ಒದಗಿಸಿದೆ. ಆದರೆ ಅದಕ್ಕೆ ಒಳಿಕು ಕೆಡುಕುಗಳ ಅರಿವಿಲ್ಲ. ವಿಜ್ಞಾನಸೃಷ್ಟಿ ಯುದ್ಧದ ರೀತಿಯನ್ನು ತಿಳಿಸಬಲ್ಲುದಲ್ಲದೆ, ಯುದ್ಧವನ್ನು ನಿವಾರಿಸುವ ಸೂತ್ರವನ್ನು ತಿಳಿಸಲಾರದು.

ಶಿಕ್ಷಣಮಟ್ಟ: ಇಂದಿನ ಶಿಕ್ಷಣ ಮಟ್ಟ ಬಹಳಷ್ಟು ಕೆಳಗಿಳಿದಿದೆ (ಕೇವಲ ಹತ್ತು ವರ್ಷ ಹಿಂದಣ ಮಟ್ಟದೊಂದಿಗೇ ನೀ ಹೋಲಿಸೋಣ) ಯಾವುದೇ ವಿಷಯವನ್ನಾಗಲೀ ಆಳವಾಗಿ ಅಧ್ಯಯಿಸುವ ಕ ತೂಹಲ ಇಂದಿನ ವಿದ್ಯಾರ್ಥಿಯಲ್ಲಿಲ್ಲ. ಪರಿಣಾಮವಾಗಿ, ಇಂದು ಶಿಕ್ಷಣವನು ಮುಗಿಸಿ, ನ್ಯಾಜೀವನ ರಂಗಕ್ಕೆ ಧುಮುಕಿದಾಗ, ಅವರದರಲ್ಲಿ ಜಯಶಾಲಿಯಾಗಲಾರರೆ. ಶಿಕ್ಷಣದ ಮಟ್ಟವನ್ನು ಇನ್ನಷ್ಟು ಏರಿಸಿದಾಗ ಅದು ವಿದ್ಯಾರ್ಥಿಗಳಿಗೆ ರುಚಿಸದು. (ಆದರೆ, ಕಹಿಯಾದ ಔಷಧವನ್ನು ಕುಡಿಯಲೇ ಬೇಕು) ಇಂದಿನ ವಿದ್ಯಾರ್ಥಿಗಳಿಗೆ ಪಾಠೇತರ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿ ಇವೆ. ಆದರೆ ಪಾಠವನ್ನು ಫಿಲ್ಮ್‌ಸ್ಟಿ ಸುವುದೆಂದೂ ಒಳಿತಲ್ಲ. ಅನಗತ್ಯದ ವಿಚಾರಗಳಲ್ಲಿ ವಿದ್ಯಾರ್ಥಿಗಳ ಪಕ್ಷಕ್ಷೇಪವನ್ನು ಹಡೆಗಟ್ಟಬೇಕು. ಮನಸ್ಸನು ಹೂವಿನಂತೆ ಕೋಮಲ, ಗಾಳಿಯಂತೆ ಹಗುರ, ಬೆಣ್ಣೆಯಂತೆ ಮೃದ, ಪದ್ಮದಂತೆ ಕರೀರವಾಗಬಲ್ಲುದು.

ಶಿಸ್ತು ಪರಿಪಾಲನೆ: "ಶೀಲವೇ ಹೊನ್ನಳಕನಯ್ಯ" ಎಂದು ಬಸವಣ್ಣನವರು ಹೇಳಿದಂತೆ, ಶಿಸ್ತು ಸ್ವರ್ಗದ ಮೊದಲ ಕಾನೂನು. ಇಂದಿನ ವಿದ್ಯಾರ್ಥಿಗಳಿಗೆ N. C. C. ಶಿಕ್ಷಣವನ್ನೂ ಕೊಡಲಾಗುತ್ತಿದೆ ಆದರೆ, ಈ ರೀತಿಯ ಶಿಕ್ಷಣವು ಯಾವುದೇ ರೀತಿಯ ಮಾನಸಿಕ ಪಕ್ವತೆಗೆ ಕಾರಣವಾಗುವುದಿಲ್ಲ. ಕಾನೂನು ಮೂಲಕ ಶಿಸ್ತು ಪಾಲನೆ ಕಷ್ಟಸಾಧ್ಯ. ನೈತಿಕ ಶಿಕ್ಷಣಕ್ಕೆ ಪ್ರಾಮುಖ್ಯತೆಯಿರಬೇಕು.

ಶಿಕ್ಷಕರು: ವಿದ್ಯಾರ್ಥಿಗಳನ್ನು ನೇರವಾಗಿ ತರುವ ಹೊಣೆ ಅಧ್ಯಾಪಕರದು. ಅಧ್ಯಾಪಕರು ತಮ್ಮ ಕರ್ತವ್ಯವನ್ನು ಪಾಲಿಸದಿದ್ದಲ್ಲಿ ಶಿಕ್ಷಣ ಮಟ್ಟವು ಇನ್ನಷ್ಟು ಕೆಳಗಿಳಿಯುವುದರಲ್ಲಿ ಸಂದೇಹವಿಲ್ಲ. ತಮ್ಮ ಸ್ವಾರ್ಥವನ್ನು ತ್ಯಜಿಸಿ, ವಿದ್ಯಾರ್ಥಿಗಳ ಒಳಿತನ್ನು ನೋಡಬೇಕು. ಕೇವಲ ವೇತನಕ್ಕಾಗಿ ಅವರು ಬದುಕಿರಬಾರದು. ಅನುಭವದ ಕೊರತೆ, ನಿರುತ್ಸಾಹ ಇತ್ಯಾದಿ ಕಾರಣಗಳಿಂದ ಅವರು ತಮ್ಮ ಕರ್ತವ್ಯವನ್ನು ಫಿರ್ಮಹಿಸದೆ ಹೋಗುವರು. ನಿಜವಾದ ಅಧ್ಯಾಪಕನೋರ್ವನು ವಿದ್ಯಾರ್ಥಿಯ ಮಟ್ಟಕ್ಕಿಳಿದು, ಪಕ್ಷ ಅಕ್ಷವನ್ನು ಅತನೊಂದಿಗೆಮಿಲನಗೊಳಿಸಿ, ತನ್ಮೂಲಕ ವಿದ್ಯಾರ್ಥಿಯು ನಿಜವಾದ ಸಮಸ್ಯೆಯನ್ನು ಅರಿತು, ಅದನ್ನು ಪರಿಹರಿಸಬೇಕಾಗಿದೆ. ಅಂತಹ ಅಧ್ಯಾಪಕರು ಮಾತ್ರ ತರಬೇತು ನೀಡಲು ಅರ್ಹರು.

ಗುರುಶಿಷ್ಯ ಸಂಬಂಧ.....ಹಿಂದೆ, ಒರ್ವ ವಿದ್ಯಾರ್ಥಿಯು ತನ್ನ ಗುರುವಿನ ಸೇವೆ ಮಾಡಿ, ಅವರ ಕೃಪೆಗೆ ಪಾತ್ರರಾಗಬೇಕು ಆಗ, ತಾನು ಕಲಿತ ವಿದ್ಯೆ ಸಾರ್ಥಕವಾಯಿತೆಂದು ಆತನ ಅಭಿಪ್ರಾಯ. ಆದುದರಿಂದಲೇ "ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯ ದೇವೋ ಭವ" ಎಂದು ಹೇಳಲ್ಪಟ್ಟಿದು. ಆದರೆ ಇಂದು ವಿದ್ಯಾರ್ಥಿಗೆ ತನ್ನ ಗುರುವಿನ ಬಗ್ಗೆ ಗೌರವ ತೋರಬೇಕೆಂಬ ಭಾವನೆಯೇ ಬರುವುದಿಲ್ಲ.

ಯಾಕೆ ಈ ಅಧೋಗತಿ? ... ನಮ್ಮ ದೇಶದಲ್ಲಿಂದು ಹಲವಾರು ಜಟಿಲವಾದ ಸಮಸ್ಯೆಗಳ ತಾಂಡವವಾಡುತ್ತಿವೆ. ಅನ್ನಗೊಳ್ಳಿಂದ್ಯಾ ಪರಿಹಾರವನ್ನು ಇದು ತನಕ ಹುಡುಕಿಲ್ಲ. ಇದಕ್ಕೆ ವಿದ್ಯಾಭ್ಯಾಸದ ಕೊರತೆಯೇ ಕಾರಣ. ಸುಶಿಕ್ಷಿತ ಜನರು ಎತಹ ಸಮಸ್ಯೆಯನ್ನಾದರೂ ಎದುರಿಸಬಲ್ಲರು. ಜನರು ದೇಶದ್ರೋಹಿ ಕೃತ್ಯವೆಸಗದಂತಿರಲು ತಕ್ಕ ಶಿಕ್ಷಣವನ್ನು ನೀಡಬೇಕು. ವಾಕ್ಚಾತುರ್ಯದಿಂದ ತಮ್ಮ ಸಿದ್ಧಾಂತಗಳನ್ನು ಪ್ರಜೆಗಳು ವಿದ್ಯಾವಂತರಾಗಿರಬೇಕು.

ಹೆತ್ತವರ ಕರ್ತವ್ಯ: ವಿದ್ಯಾರ್ಥಿಗಳ ಕಂಠ ತಾಯ್ಗುಳಿಗೆ, ತಮ್ಮ ಮಗನು ಓದು ಬರಹ, ಹೆಚ್ಚು ಸಂಬಳ (ಅದಕ್ಕಿಂತಲೂ ಹೆಚ್ಚಿನ ಗಿಂಬಳ) ಪಡೆಯುವ ಹುದ್ದೆಯನ್ನು ಅಲಂಕರಿಸಬೇಕೆನ್ನುವ ಏಕ ಮಾತ್ರ ಧ್ಯೇಯವಿಲ್ಲ ಕೂಡದು. ತಮ್ಮ ವಿದ್ಯಾರ್ಥಿಯನ್ನು ನೇರವಾದ ದಾರಿಗೆ ತರುವ ಹೊಣೆಗಾರಿಕೆ ಅವರದು. ವಿದ್ಯಾರ್ಥಿಯು ನುನ್ನಿಸ್ಸಿಗೆ ಯಾವುದೇ ರೀತಿಯ ಅಪಘಾತ ಉಂಟಾಗದಂತೆ ನೋಡಿ ಕೊಳ್ಳುವುದರೊಂದಿಗೆ, ಆತನ ಇನ್ನಿತರ ಸಮಸ್ಯೆಗಳು, ವಿದ್ಯಾಭ್ಯಾಸಕ್ಕೆ ಅಡ್ಡಿ ಬಾರದಂತೆ ನೋಡಿಕೊಳ್ಳಬೇಕು.

ವಿದ್ಯಾರ್ಥಿ ಎಂತಿರಬೇಕು? ಸ್ಥಿತಿಯೊಬ್ಬ ವಿದ್ಯಾರ್ಥಿಯೂ ಆದರ್ಶ ತಪಸ್ವಿಯಾಗಿರಬೇಕು. ನಿಜವಾದ ಜ್ಞಾನದಾಹ ಅತನಿಗಿರಬೇಕು. ಇತರರೊಂದಿಗೆ ಬೆರೆತು, ಗಹಬಾಳ್ವೆಯ ತತ್ವವನ್ನು ಅರಿಯಬೇಕು. ಸರಳ ಜೀವನವನ್ನು ನಡೆಸಬೇಕು. ಅಶ್ಲೀಲವಾದ ಮಾತು ವಿದ್ಯಾರ್ಥಿಗಳಿಗೆ ಒಪ್ಪುವುದಿಲ್ಲ. ಇಂದಿನ ವಿದ್ಯಾರ್ಥಿಗಳಿಗೆ ಸಿನಿಮಾರಂಗವೇ ಶಿಕ್ಷಣ ಕ್ಷೇತ್ರ! ನಟ ನಟಿಯರೇ ಅವರ ಶಿಕ್ಷಕರು! ಅವರನ್ನೆಲ್ಲಾ ಅನುಕರಣೆ!! ಅವರಂತೆಯೇ ಅರೆಬೆಗಾಣುವ ಬಟ್ಟೆಗಳನ್ನು ತೊಡುವುದರಿಂದ, ಇತರ ಪಂಡಿತ ವಿದ್ಯಾರ್ಥಿಗಳು ಅದರಿಂದ ಆಕರ್ಷಿತರಾಗುವರು. ಪರಿಣಾಮವಾಗಿ ವಿದ್ಯಾಭ್ಯಾಸದಲ್ಲಿ ಅವರ ಏಕಾಗ್ರತೆ ಕುಂದುವುದು, ಶಿಬಿರವಾದ ಸರಳವಾದ ಬಟ್ಟೆಗಳನ್ನು ತೊಡಬೇಕು. ವಿದ್ಯಾರ್ಥಿಯು ಜೀವನ ನಿಜವಾಗಿಯೂ ಮುಳ್ಳಿನ ಹಾಸಿಗೆ, ಜ್ಞಾನಕ್ಕಾಗಿ ಪಡಬಾರದ ಪಡಬೇಕು.

ಆತ್ಮಸಂಸ್ಕಾರ: ನೈತಿಕ ಶಿಕ್ಷಣದ ಕಡೆಗೆ ಅಧ್ಯಾಪಕರು ಗಮನವನ್ನಿರಿಸಬೇಕು. ಇಂದು, ದೇಶದ ಉದ್ಧಾರಕ್ಕಾಗಿ ಪಡುತ್ತಿರುವ ವಿದ್ಯಾರ್ಥಿಗಳ ಅಶಿಸ್ತಿನ ವರ್ತನೆಗಳು ಕೇಳಿ ಬರುತ್ತಿವೆ. ಇದಕ್ಕೆ ಇಂದಿನ ವಿದ್ಯಾಭ್ಯಾಸ ಕ್ರಮವೇ ಕಾರಣವಿರಬೇಕು. ವಿದ್ಯಾರ್ಥಿಗಳಿಗೆ ತಮ್ಮ ಕರ್ತವ್ಯದ ಪೂರ್ಣ ಅರಿವಿಲ್ಲ. ಇಂದ ನಮ್ಮ ದೇಶದಲ್ಲಿ ಅಕ್ಷರಸ್ಥರ ಸಂಖ್ಯೆ ಶೇಕಾ ಕಡಮೆ. ಆದುದರಿಂದ ಕಡಮೆ ಸಂಖ್ಯೆಯಲ್ಲಿರುವ ವಿದ್ಯಾವಂತರು ಇತರರಿಗೆ ಆದರ್ಶರಾಗಿರಬೇಕು. ದೇಶದಲ್ಲಿ ನಾನಾ ಕಾರಣಗಳಿಗಾಗಿ ಹೂಡುವ ಮುಷ್ಕರಗಳ ಪರಿಣಾಮ ರಾಷ್ಟ್ರೀಯ ಸೌಕ್ಯಕ್ಕೆ ಧಕ್ಕೆ ತರುತ್ತಿದೆ. ಇದನ್ನು ಕಡೆಗಟ್ಟಬೇಕಾಗಿದೆ. ಸರಕಾರವು ಅವುಗಳ ನಿವಾರಣೆಗೆ ಬಹಳಷ್ಟು ಶ್ರಮಪಟ್ಟಿದೆ ಎಂದು ತಿಳಿಯಬೇಕು. ಎಲ್ಲ ಕಡೆಗಿಂತಲೂ ವಿಂಗಿಲಾಗಿ, ಆದರ ನಿರ್ವಹಣೆ ಕಾರ್ಯಾದಲ್ಲಿ ತಮ್ಮದೂ ಪಾಲಿದೆ ಎಂದು ತಿಳಿದಿರಬೇಕು. ನಮ್ಮದೇ ಒಳಿತಿಗಾಗಿ, ನಾವೇ ರಚಿಸಿದ ಕಾನೂನನ್ನು ಉಲ್ಲಂಘಿಸಿದರೆ ಅದು ಆತ್ಮವಂಚನೆಯೂಗಲಾರದೆ? ಇದಕ್ಕಾಗಿ "ಆತ್ಮ ಸಂದಾರ್" ವಾಗಬೇಕು. ನೈತಿಕ ಶಿಕ್ಷಣ ಕಡ್ಡಾಯವಾಗಬೇಕು.

ನಡತೆ: "ಗುರುದೇವೋ ಭೆ ಶ್ರೀ ವಃ" ಎಂಬಂತೆ ಗುರುಗಳನ್ನು ಭಕ್ತಿಭಾವದಿಂದ ಕಾಣಬೇಕು, ಮಾನವನು ಆರೋಗ್ಯದಿಂದಿರುವುದಕ್ಕೆ ಪೌಷ್ಟಿಕ ಆಹಾರಗಳು ಯಾವ ರೀತಿಯಲ್ಲಿ ಸಹಾಯಕವಾಗುವೋ ಅಂತೆಯೇ ಮಾನವೀಯತೆಗೆ ಉತ್ತಮ ನಡತೆ, ನೈತಿಕ ಶಿಕ್ಷಣ ಇವುಗಳೇ ಪೌಷ್ಟಿಕಾಹಾರಗಳು. ಆದದರಿಂದ ಉತ್ತಮ ವಿದ್ಯಾಭ್ಯಾಸ ಕ್ರಮವುಪೊಂಮ ನಡತೆಗೂ ಪ್ರಾಶಸ್ತ್ಯ ನೀಡಬೇಕು. ಈ ಪಥದಲ್ಲಿ ಅಷ್ಟಿಷ್ಟ ಪ್ರಯತ್ನಗಳು ನಡೆದಿವೆ. ಆದರೆ ಇನ್ನೂ ಹೆಚ್ಚಿನ ಪ್ರಯತ್ನ ಆಗತ್ಯ. ಹೆತ್ತವರು ತಮ್ಮ ವಿದ್ಯಾರ್ಥಿಗಳನ್ನು ದಾರಿತಪ್ಪಿ ನಡೆಸಲು ಬಯಸಲಾರರು. ಆಗೂ ಈ ರೀತಿಯ ಶಿಕ್ಷಣ ಕ್ರಮವು ಜಾರಿಗೆಯಿಸಬೇಕಾದುದು ಇತ್ಯಗತ್ಯ. ಇಂದ ಮೇಲೆ ಈ ವಿಷಯದಲ್ಲಿ ಸಂಪೂರ್ಣ ಗಮನವಿರಿಸುವುದು ನಮ್ಮೆಲ್ಲರ ಕರ್ತವ್ಯ. ನಿಜವಾದ ವಿದ್ಯಾಭ್ಯಾಸದಲ್ಲಿ ಅಡಗಿರುವ ಶಕ್ತಿಯನ್ನು ಹೊರಹೊಮ್ಮಿಸಲು ಇದೊಂದೇ ದಾರಿ.

ಧರ್ಮ ಸಂಸ್ಕೃತಿ: ಪ್ರಪಂಚದ ದೇಶಕ್ಕೂ ತನ್ನದೇ ಆದ ಒಂದು ಸಂಸ್ಕೃತಿ ಇದ್ದೇ ಇದೆ. ಅಂತೆಯೇ ನಮ್ಮ ದೇಶಕ್ಕೂ ಒಂದು ಉನ್ನತವಾದ ಪರಂಪರೆಯ ಇದೆ. ಇಲ್ಲಿ ಬುದ್ಧ, ಶಂಕರಾಚಾರ್ಯ, ರಾಮಕೃಷ್ಣ ಪರಮಹಂಸ, ವಿವೇಕಾನಂದರಂತಹ ಎಷ್ಟೋ ಜನ ಮಹಾ ಪುರುಷರು ಆಗಿ ಹೋಗಿದ್ದಾರೆ. ಇವರ ಕೀರ್ತಿ ದೇಶದ ಎಲ್ಲೆಯನ್ನೂ ವಿಸ್ತರಿಸಿ ಹೋಗಿದೆ. ಪ್ರಪಂಚದ ಇನ್ನಿತರ ಜನಾಂಗಕ್ಕೂ ಇವರ ಮೇಲೆ ಭಕ್ತಿ, ಅಪಾರ ವಿಶ್ವಾಸವಿದೆ ಆದರೆ ನಮಗೆ? ಹಿಂದೆ ಇತರ ದೇಶಗಳ ಜನರು ಕಾಡಿನಲ್ಲಿ ವಾಸಿಸಿ, ಹಸಿ ಮಾಂಸವನ್ನು ತಿಂದು ಒಮ್ಮುಕುಟ್ಟಿದ್ದಾಗ, ನಮ್ಮ ದೇಶದ ಜನರ ಜೀವನದ ಪ್ರತಿಯೊಬ್ಬರನ್ನೂ ಪರಿಪೂರ್ಣ ಸುಸಂಸ್ಕೃತರನ್ನಾಗಿ ಮಾಡಿದ್ದ ಕೀರ್ತಿ ನಮ್ಮ ಪೂರ್ವಜರಿಗಿತ್ತು.

ಸುರಕ್ಷಿತ ಮತ್ತು ಉತ್ತಮವಾದ ಎಲ್ಲಾ ರೀತಿಯ ಬ್ಯಾಂಕಿಂಗ್
ವ್ಯವಹಾರಗಳಿಗೆ ಕಸ್ಸ 84 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ವೇವಸಾತಿಗಳ ಮೇಲೆ 8% ಪರಿಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

ಶ

ಕಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್ಸ್"
ರೈಲ್ವೆ ಜೌಸ್ ಹಿಲ್ ರೋಡ್
ಮಂಗಳೂರು—೨

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬಿರಿದ ಮುಗುಳು	1—50
ಅನುವಾದಿತ ಕತೆಗಳು	1—20
ಪಂಜ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಜಾಯ	1—75
ಏಕಾಂಕ ನಾಟಕಗಳು	1—00
ಭಂಗದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—20
ವಿಚಿತ್ರ ಕಳ್ಳಪೇಟೆ	1—50
ಭಾರತದ ವೀರಾಂಗನೆಯರು	1—50
ಮೇಂಕೊಟ್ಟೆ ಬೆಂಡೋಲೆ	1—50
ಶಿಲ್ಪಿ	1—50
ವೃತ್ತಿಜ್ಞಾ ಪೂರ್ತಿ	1—00
ಘಂಟೆಮೂರಾ	2—50
ನೀತಿ ವಿನೋದ ಕತೆಗಳು	1—00

ಕೆಟಲಾಗಿಗೆಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಶ್ರೀ ಕೆ.ಕ.ಶೆಟ್ಟಿ.ಎಂ.ಎಲ್.ಸಿ. ಯುವಕ ನನಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ವಂದಿನ ದೇವರು	0=25
ವೈಭವಾವತಿ ಯಾರು?	1=00
ಹೆಂಡಿ ಗಂಡನಾಗಲೆ!	0=25
ಪುರುಷಪಥ	0=25
ಸನ್ಯಾಸಿಯ ಕೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದ	0=50

ಪುಸ್ತಕಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ರು. ಇಂದು ಪರಿಸ್ಥಿತಿ ತೀರ ಪರವೀತವಾಗಿರುವುದರಿಂದ ಪ್ರಾಚ್ಯತ್ಯರಿಂದ ಪ್ರಗೃತಿ ನಿರೋಧವಾಗಿ ನರ್ತಿಸಬಹುದು ಎಂಬ ಪ್ರಯತ್ನಿಸುತ್ತಿದ್ದಾರೆ, ತಾತ್ಕಾಲಿಕವಾಗಿ ಜಪಮಂಟ್ರಗೆ ಜಯವಾಲಿ ಯೊಗಿದ್ದಾರೆ.ನಾವಿಂದ. ಜನರನ್ನು ಅನುಸರಿಸಲು ನೋಡುತ್ತಿದ್ದೇವೆ. (ಇದು ನೇರ ಅನುಕರಣೆಯಲ್ಲ; ಪರೋಕ್ಷ) ಇದಕ್ಕೇನು ಕಾರಣ? ಆಧುನಿಕ ವಿಜ್ಞಾನದ ಪ್ರಭಾವ ನಮ್ಮ ಜೀವನದಲ್ಲಿ ಕೆಚ್ಚಿದೆ. ಭಾರತೀಯ ಸಂಸ್ಕೃತಿ ಬಹಳ ಉನ್ನತವಾಗಿದೆ. ಪ್ರಕೃತಿಯೊಂದಿಗೆ ಹೊಂದಿಕೊಂಡು ಸುಖ ಜೀವನವನ್ನು ನಾಗಿಸುವ ರೀತಿ ಭಾರತೀಯರಿಗೆ ಲಕ್ಷಾಂತರ ವರುಷಗಳ ಹಿಂದೆಯೇ ತಿಳಿದಿತ್ತು. ಭಾರತೀಯ ಸಂಸ್ಕೃತಿ, ಧರ್ಮ, ಪುರಾಣ ಇತ್ಯಾದಿಗಳ ಅಧ್ಯಯನಕ್ಕೆ ದೇವ ಭಾಷೆಯಾದ ಸಂಸ್ಕೃತದ ಜ್ಞಾನ ಅಗತ್ಯ. ಈ ಭಾಷೆಗೆ ಪ್ರಾಧಾನ್ಯತೆಯೀಯಬೇಕು.

ಯುದ್ಧ ಕಲಿಸಿದ ಪಾಠ: ಇದೇ ಶತಮಾನದಲ್ಲಿ ಭೀಕರವಾದ ಎರಡು ಜಾಗತಿಕ ಯುದ್ಧಗಳು ನಡೆದವು. ಮಾನವ ಕೋಟಿಗೆ ಹಾನಿಕಾರಕವಾದ ವಿಧ್ವಂಸಕ ಶಸ್ತ್ರಾಸ್ತ್ರಗಳನ್ನು ಈ ಯುದ್ಧಗಳಲ್ಲಿ ಬಳಸಲಾಯಿತು. ಯುದ್ಧವು 'ಅನಾಗರಿಕತೆ'ಯ ಕುರುಹು. ಆದುದರಿಂದ ಮಾನವನನ್ನು ನಾಗರಿಕನನ್ನಾಗಿ ಮಾಡುವ ವಿದ್ಯಾಭ್ಯಾಸ ಕ್ರಮವೊಂದು ಜ್ಯಾರಿಗೆ ಬರಬೇಕು. ಇಂತಹ ವಿದ್ಯಾಭ್ಯಾಸವು ಯುದ್ಧ ರಹಿತವಾದ ಪ್ರಪಂಚದ ನಿರ್ಮಾಣಕ್ಕೆ ಕಾರಣವಾಗಬಲ್ಲುದು.ಇಂತಹ ಯುದ್ಧ ರಹಿತವಾದ ಪ್ರಪಂಚಮಾತ್ರವೇ ಮಾನವ ಜೀವನಕ್ಕೆ ಯೋಗ್ಯವಾದುದು.

ರಾಷ್ಟ್ರೀಯ ಜಾಗೃತಿ: ಜನನೀ ಜನ್ಮ ಭೂಮಿಶ್ಚ ಸ್ವರ್ಗಾದ ಪೀಗರೀಯಸೀ" ಎಂದು ಶ್ರೀ ರಾಮನು ಹೇಳಿದ ಮಾತು ಸಾರ್ವಕಾಲಿಕ ಸತ್ಯ. ದೇಶವೊಂದು ಳಿಯೆ ಅಳವವರಾರು? ದೇಶವೊಂದಳಿಯೆ ಉಳಿವವರಾರು? ಆದುದರಿಂದ ದೇಶ ರಕ್ಷಣೆ ವ್ಯಾಶಪ್ತವೀಯಬೇಕು. ಸ್ವಾರ್ಥವನ್ನು ಬಿಟ್ಟು ಮುಂದೆ ಬರಬೇಕು. ಆದರೆ, ನಮ್ಮ ದೇಶದಲ್ಲಿ ರಾಷ್ಟ್ರೀಯ ಜಾಗೃತಿ ಇನ್ನೂ ಆಗಿಲ್ಲ. ಆದುದರಿಂದ "ಏಳಿ ಎದ್ದೇಳಿ, ಗುರಿಮುಟ್ಟುವವರೆಗೂ ನಿಲ್ಲದಿರಿ' ಎಂಬ ವಿವೇಕಾನಂದರ ವಿವೇಕವಾಣಿಯನ್ನು ಪಾಲಿಸೋಣ. ಹಿಂದೊಮ್ಮೆ ಆಂಗ್ಲೇಯರನ್ನು ದೇಶದಿಂದ ಹೊರದೂಡಲು ಎಲ್ಲರೂ ಒಮ್ಮತದಿಂದ ಮುಂದೆ ಬಂದರು. ಇಂದು ಪ್ರಾಂತ್ಯ ಪ್ರಾಂತ್ಯಗಳೊಳಗೆಹೋರಾಟ. ಅಖಂಡ ಭಾರತೀಯರೆಲ್ಲರೂ ಒಂದೇ "ಕುಟುಂಬ"ವೆಂಬ ಭಾವನೆ ಮಾನವನ ಅಂತರಾಳದಿಂದ ಮೂಡಬೇಕು; ಉಕ್ಕಿ ಬರಬೇಕು. ಪ್ರಾಣ, ಹಣ ಎರಡನ್ನೂ ದೇಶಕ್ಕಾಗಿ ಅರ್ಪಿಸಬೇಕು. ನಮ್ಮ ದೇಶದಲ್ಲಿ ಹೆಚ್ಚಿನ ಜನ ಅವಿದ್ಯಾವಂತರಿದ್ದಾರೆ. ಆದರೆ ವಿದ್ಯಾವಂತರೆನ್ನಿಸಿಕೊಂಡವರಿಗೂ ದೇಶದ ಕುರಿತು ಸದ್ಭಾವನೆ ಇಲ್ಲದಿರುವುದು ಶೋಚನೀಯ. 'ರಾಷ್ಟ್ರ ಗೀತೆ'ಯನ್ನರಿಯದ ಜನ ಅದೆಷ್ಟೋ! ದೇಶ ರಕ್ಷಣೆಗಾಗಿ ಇನ್ನಷ್ಟು ಜನ ಮುಂದೆ ಬರಬೇಕು. ಅವರ ಧ್ಯೇಯ

'ಜನೇನ ಲಭ್ಯತೇ ಲಕ್ಷ್ಮೀ
ಮೃತೇನಾಪಿ ಸುರಾಂಗನಾ
ಸ್ವಗುಣ ವಿಧ್ವಸಿನೀ ಕಾಯೇ'

ಈ ಚಿಂತನ ಮಂಜೀರಣ್ಯೇ ಎಂದಿರಬೇಕು.

ಪ್ರಜೆಗೆ ಶಿಕ್ಷಣ: ಉತ್ತಮ ನೈಸರ್ಗಿಕ ಸಂಪತ್ತಿರಲು, ತಾಂತ್ರಿಕನೈಪುಣ್ಯಗಳಲು ಶಿಕ್ಷಣದ ಅವಶ್ಯಕತೆಯಿದೆ. ಅಂತೆಯೇ ಉತ್ತಮ ಪ್ರಜೆಯಾಗಲು ಉನ್ನತ ಮಟ್ಟದ ಶಿಕ್ಷಣದ ಅವಶ್ಯಕತೆಯಿದೆ. ಪ್ರಜೆಗೆ ತನ್ನ ಕರ್ತವ್ಯದ ಅರಿವಾಗುವಂತೆ ಮಾಡಬೇಕು. ಸರಕಾರವು ರೂಪಿಸಿದ ಧ್ಯೇಯಗಳು ನೆರವೇರಲು ಪ್ರಜೆಗಳ ಸಹಕಾರ ಅಗತ್ಯ. ಮೊದಲನೆಯ ಹಂತದಲ್ಲಿ ಕೌಟುಂಬಿಕ ಜೀವನದ, ಎರಡನೆಯ ದರಲ್ಲಿ ಸಮಾಜ ಜೀವನದ, ಮೂರನೆಯದರಲ್ಲಿ ದೇಶೀಯ ಜೀವನದ ಹಾಗೂ ನಾಲ್ಕನೆಯ ದರಲ್ಲಿ ಪ್ರಾಪಂಚಿಕ ಜೀವನದ ತರಬೇಕು. ನೀಡಬೇಕು. ಈ ನಾಲ್ಕು ಹಂತಗಳು ಶಾಶ್ವತ ಸುಖದ ಮೆಟ್ಟಿಲುಗಳು. ಇವೆಲ್ಲದರಲ್ಲೂ ಸಹಬಾಳ್ವೆಯ ತತ್ವವಿವೆ.

ಯಾತಕ್ಕಾಗಿ ಶಿಕ್ಷಣ?: ಮಾನವನನ್ನು ಮಾನವನನ್ನಾಗಿಸುವುದೇ ಶಿಕ್ಷಣದ ಮೂಲತತ್ವ. ಸಮಾಜ ಒಂದು ಹಡಗದಂತೆ ಅದರ ಚುಕ್ಕಾಣಿ ಹಿಡಿಯಲು ಪ್ರತಿಯೊಬ್ಬರೂ ಸಿದ್ಧರಾಗಬೇಕು. ಜೀವನದ ಸಮಸ್ಯೆಗಳನ್ನು ಎದುರಿಸಲು ಎದೆಗಾರಿಕೆ ಜನರಿಗೆ ಬರಬೇಕು. ವಿಜ್ಞಾನ ನೇನೋ ವಿನ್ಮಯಕಾರಕವಾದ ಪ್ರಗತಿಯನ್ನು ಸಾಧಿಸಿದೆ. ಆದರೆ ಶಾಶ್ವತ ಸುಖದ ಮೂಲಸೂತ್ರವಲ್ಲ. ನಾವು ಇದ ಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಬೇಕಾಗಿದೆ. ಪ್ರಕೃತಿಯೊಂದಿಗೆ ಹೊಂದಿಕೊಂಡು, ಸಮಗವಾಗಿ ಬಾಳುವೆ ನಡೆಸಬೇಕು. ಶಾಶ್ವತ ಸುಖದ ಮೆಟ್ಟಲನ್ನೇರಬೇಕು. ಆದುದರಿಂದ ವಿದ್ಯಾಭ್ಯಾಸ ಕ್ರಮವನ್ನು ಸಂಪೂರ್ಣ ತರುವಾಗ ವಿದ್ಯಾರ್ಥಿಗಳ ನೈಸರ್ಗಿಕ ಅವಶ್ಯಕತೆಯ ಕಡೆಗೂ ಗಮನವಿರಲಿ.

ಉಪಸಂಹಾರ: ಇದು ತಹರ ತಿಳಿಸಿತ, ಎಲ್ಲಾ ವಿಷಯಗಳನ್ನೂ ಗಮನದಲ್ಲಿರಿಸಿ "ವಿದ್ಯಾಭ್ಯಾಸ ಯೋಜನೆ"ಯೊಂದನ್ನು ಜ್ಯಾರಿಗೆ ತರಬೇಕು. ಮಾನವ ಕೋಟಿಯ ಭವಿಷ್ಯ ಇದರ ಮೇಲೆ ಅವಲಂಬಿಸಿದೆ. ಮಾನವನ ನೈತಿಕ ಹಾಗೂ ಧಾರ್ಮಿಕ ಔನ್ನತ್ಯಕ್ಕೆ ಗಮನಕೊಡಬೇಕು. ಶಿಕ್ಷಣ ಪಂಚಾಲನೆ ಅತ್ಯಗತ್ಯ. ಪ್ರತಿಯೊಬ್ಬ ಮಾನವನೂ ಸ್ವಭಾವತ: ಸ್ವಾರ್ಥಿ. ಆ ಸ್ವಾರ್ಥವನ್ನು ತ್ಯಜಿಸಲು ಪ್ರಯತ್ನಿಸಬೇಕು. ರಾಷ್ಟ್ರೀಯ ಜಾಗೃತಿಯನ್ನು ಸರ್ವರಲ್ಲಿಯೂ ಹುಟ್ಟಿಸಬೇಕು; ಕರ್ತವ್ಯದ ಅರಿವಾಗಬೇಕು. ಪ್ರಜಾಪ್ರಭುತ್ವದ ಜಯ ಜನತೆಯ ಮೇಲೆ ಅವಲಂಬಿಸಿದೆ. ಭಾರತೀಯ ಧರ್ಮ ಸಂಸ್ಕೃತಿಗಳ ಕುರಿತು ವಿದ್ಯಾರ್ಥಿಗಳಿಗೆ ಅಚಲ ವಿಶ್ವಾಸವಿರಬೇಕು.

ನಮ್ಮ ದೇಶದ ವಿದ್ಯಾರ್ಥಿಗಳಿಂದು ಬೇಕಾದುದು ಕೇವಲ ಪಾಶ್ಚಾತ್ಯ ವಿಜ್ಞಾನವಲ್ಲ. ಭಾರತೀಯ ವೇದಾಂತ ಮಾತ್ರವೂ ಅಲ್ಲ. ಇವೆರಡರ ಸಮ್ಮಿಲನದಿಂದ ಸೀದಿ ವಿದ್ಯಾಭ್ಯಾಸ ಕ್ರಮವೊಂದು ಬೇಕಾಗಿದೆ. ಈ ಯೋಜನೆಯ ಗಾತ್ರ ಮೊದಲು ದೊಡ್ಡದಾಗಿ ಕಂಡರೂ, ಅಂತ್ಯದಲ್ಲಿ ಅದು ಜಯಶಾಲಿಯಾಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಈ ಗುರಿಯನ್ನು ಸಾಧಿಸುವ ಪಥದಲ್ಲಿ ಮುನ್ನಡೆಯೋಣ. ಅಂಧಕಾರದಿಂದ ಬೆಳಕಿನತ್ತ ಚಲಿಸೋಣ.

ಹೊಸಕೆರೆ ಚಿದಂಬರಯ್ಯ ವಿರಚಿತ

ಗೀತೆಯ ಕೈಗನ್ನಡಿ

(ಶ್ಲೋಕ ಮತ್ತು ಅರ್ಥಸಹಿತ)

ಕನ್ನಡ ಸಾಹಿತ್ಯದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ
ಕಡಿಮೆ ಬೆಲೆಯ ಪುಸ್ತಕ

ಹೊಸ ಮುದ್ರಣ — ಬಳ ಕಾಗದ — 450 ಪುಟಗಳು

ಬೆಲೆ : ಒಂದೂವರೆ ರೂಪಾಯಿ.

ಎರಡು ರೂ. ಸ್ವಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು

ರಿಯಿಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಯುಗ ಪ್ರೆಸ್, ಉಡುಪಿ
(ಅಥವಾ) ನವಭಾರತ ಪುಸ್ತಕ ಭಂಡಾರ, ಉಡುಪಿ

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು
ವಿವರಿಸುವ ಕೈಪಿಡಿ

ಬೆಲೆ 0—50 ಪೈಸೆ ನೂತ್ಯ.

0-60 ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು
ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ
ಕಾಲಭೈರವಸ್ಟೇ, ಉಡುಪಿ, ದ. ಕ.

ಪುಷ್ಪ ಪರಾಗ

ಹೆತ್ತು ಹೊಗಳು ಒಂದು ತೂಡೆ ಮಕ್ಕಳಿಗೆ ವಾಲೆ
ಸುತ್ತೆಲ್ಲ ಪರಿಮಳವ ನೋಡು!
ಸಪ್ತ ಸ್ವರಗಳ ಮೇಳ ಸೊಗಸಾಗಿ ಕೂಡಿದರೆ
ಕಕ್ಕ ಪಿರುಗಿಸುವಂಥ ಹಾಡ! ॥

ಪ್ರಕೃತಿ ದೇಗುಲ ಮಾಗೆ ನಾವೆಲ್ಲ ಗಂಟೆಗಳು
ಸುತ್ತೆಲ್ಲ ವೈವಿಧ್ಯ ನಾವು!
ಪ್ರೇಮ ಧರ್ಮ್ಯವು ವಂತ್ರ, ನೇಹ ನೆನ್ಮೆಯ ಕಂತ್ರ
ದೇವನೆನ್ಮೆಯ ಫಲಿಲ ವೇದ! ॥

ನಾಲ್ಕು ಬೆಳ್ಳಿಯ ಕಾಲ ಮೇಲೆ ಹೊನ್ನಿನ ಮಂಚ
ಏಳು ಅಂಗುಲ ದಪ್ಪಗಾದಿ!
ಹರಕು ಕಂಬಳಿ ಜಾಪೆಯಲಿ ಸಾಷ್ಟಲಿಬ್ಬರಿಗೆ
ಮಸಣಕ್ಕಿ ಇಹದೊಂದೆ ಹಾದಿ! ॥

ಕಾಗೆ ಬಿನ್ನಿನ ಹೆಣ್ಣು ಕಂಡು ಕುಳಿ ತಿರೆ ದನವು
ಎತ್ತಿ ಬೀಸುತ ತನ್ನ ಬಾಲ
ಶತಮೂರ್ಖನಪ್ಪನೆಂದು ಹುಲ್ಲು ಮೇಯುವ ದನಕೆ
ಓಡಿ ತೋರಿದನಂತೆ ತೋಲ! ॥

ನಗು ಮೊಗದ ಕಡೆಗೆಲ್ಲ ಮೊಗ ತಿರುಗಿ ಕೊಳ್ಳುವುದು
ಯಾರೊಬ್ಬರಿಲ್ಲ ಅಳುವವರಿಲ್ಲ!
ಹನಿ ತೊರೆಯು ಶರಧಿಯೆ ಡೆ ಸಾಗುವುದು ದಿನನಿತ್ಯ
ಒಣಗುವುದು ದಿನ್ನೆಯಲಿ ಹುಲ್ಲು!

ವಿಧಿಯಿತ್ತ ಹುಡಿಗಂಟು ದೇಹ್ಯಹಣೆಯಲಿ ಬರಹ
'ನಡೆ'ಯೆನುವುದ ವನ ಪವ್ಯಾಸ,
ಪರಿಧಿಯಲಿ ಸುತ್ತುತ್ತ ದಿನವೇಕೆ ಸವೆಸುವುದು
ಹತ್ತಿರದ ಪಥ ಅದ ನೆ: ವ್ಯಾಸ! ॥

ದೇವ ನೈತ್ತಿಹನೆರಡುಃ ಕಾಣುವೀ ದೇಹದಲಿ
ಕಾಣದಂತೆಯೆ ಒಳಗೆ ಭಾವ!
ಹೃದಯ ವಿಹೀನತೆಯು ಬಾಳೊಳಗೆ ಏನು ಸುಖ?
ಭಾವವಿದ್ದರೆ ಮಾತ್ರ ಜೀವ!

ಜೀನ ನೆಕ್ಕುವ ಭೃಮರ ಕುಸುಮದಲಿ ಕುಳ್ಳಿರಲು
ಅಂಟುವುದು ಮೈಯಶ್ಟು ಪರಾಗ!
ಬಾಳ ಹೂವೊಳು ಜೀವ ಸರಿದಾಡಲದೆಯನ್ನು
ಅಂಟುವುದು ಅನುಭವವು ಬೇಗ!

—ಶ್ರೀ ಎನ್. ಕೃಷ್ಣ ಮಯ್ಯಕಾರಿ

ನವಯುಗಕ್ಕೆ

ಪಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೧.

ಸ್ವಾತಂತ್ರ್ಯಾಜ್ಞರಣೆಯ ಸ್ಪರ್ಧೋತ್ಸವ

(ಒಂಭತ್ತನೇ ಪುಟದಿಂದ)

ವಿಸಿದ್ದ ಬಡ ಭಾರತೀಯರಿಗೆ ಪ್ರಧಾನಿಯವರ ಭಾಷಣ ನಿರಾತಂಕವನ್ನುಂಟು ಮಾಡಿದೆ.

ಭಾರತವನ್ನು ವಿಭಜಿಸಿದ ಕಾಂಗ್ರೆಸ್ಸು ಉಳಿದ ಭಾರತವನ್ನು ಭಾಷೆಯ ನೆವನದ ಮೇಲೆ ರಾಜ್ಯಗಳನ್ನಾಗಿ ವಿಂಗಡಿಸಿತು. ಇದೀಗ ಶ್ರೀಮತಿ ಇಂದಿರಾ ಗಾಂಧೀ ಅವನ್ನು ಅಡಗಿಸಿಡುತ್ತ ಭಾಷಾಬಡಿದಾಟ, ರಾಜ್ಯದ್ವೇಷ ಬಹಳ ಕೆಟ್ಟದೆಂದು ಭಾಷಣದಲ್ಲಿ ಘೋಷಿಸುತ್ತಿದ್ದಾರೆ. ತನ್ನ ಜಾತಿ ಮನೆಮಕ್ಕಳಿಗೆ ಬಡಕೂಡದೆನ್ನುವ ಹಿರಿಯಕ್ಕನ ಈ ಪ ನೋಭಾವ ಬಹಳ ಒಳ್ಳೆಯದಾದರೂ ಅದು ಹುಬ್ಬೆರುತ್ತದೆಯೇ ಹುಟ್ಟಿದಾಕ್ಷಣ, ಸ್ವತಾನ ಯತೆ ನಡೆಸುವಲ್ಲಿಯವರೆಗೂ ದಾಖಲೆಗಳಲ್ಲಿ ಯಾವ ಜಾತಿಯೆಂಬುದನ್ನು ನಮೂದಿಸಲೇ ಬೇಕು. ಹಾಗಿದ್ದೂ ಜಾತೀಯತೆ ಜಾಡ್ಯವಂತೆ! ಆ ಜಾಡ್ಯವನ್ನು ಸರಕಾರ ಏತಕ್ಕೆ ಬೆಳೆಸುತ್ತಿದೆ?

ನಂತೂ ಇತರ ಹಲವಾರು ರಾಜಕೀಯ ವಾದಿಗಳ ಹಾಗೂ ಅನ್ಯಾನ್ಯ ಮುಖ್ಯಮಂತ್ರಿಗಳ ಭಾಷಣದಿಂದ ಪ್ರಧಾನಿಯವರ ಭಾಷಣ ಅರ್ಥವತ್ತಾಗಿದ್ದು ಮೇಲ್ಮಟ್ಟದೆಂದು ಹೇಳಬಹುದು. ಇತರರು ಅನ್ನ-ಖುದ್ಯೋಗ, ರಾಜ್ಯ, ಅಧಿಕಾರ ಈ ಮಟ್ಟದಿಂದ ಮೇಲಕ್ಕೆ ಚಿಂದಿಯುವದಿಲ್ಲ. ತಿರುಕನಮಂತಪ ಹಾಗೂ ಶ್ರೀ ಸೇನರ ಮಾತುಗಳಲ್ಲ ಅವರ ಮನಸ್ಸಿನೊಳಗಿರುವ ವೇದನೆಯ ಅನುಭವವಾ ಎತ್ತದೆ. ಕಳೆದುಕೊಂಡಿರುವ ಅಧಿಕಾರವನ್ನು ಆದಿಂತಾದರೂ ಪದೆಯಲೇ ಬೇಕೆಂದು ಅವರು ಹವಣಿಸುತ್ತಿದ್ದಾರೆ. ಅದು ಅಂತಾದಾಕತೆಯಾದಾರಿ ಇರಲಿ, ಏನೇ ಇರಲಿ ಅವರಿಗೆ ಬೇಕಾಗಿರುವದು ಅಧಿಕಾರ. ಅನ್ಯ ಪಕ್ಷಗಳ ಅವಸ್ಥೆಯೂ ಅಷ್ಟೇ. ಕಾಂಗ್ರೆಸ್ಸಿಗರು ಇತರರನ್ನು, ಇತರರು ಕಾಂಗ್ರೆಸ್ಸಿಗರನ್ನು ಬ್ರಿಟಿಷರೆಂದೂ ಕೆಲವೆಡೆಗಳಲ್ಲಿ ಹೇಳಿದ್ದು, ಅವರ ಆಳ್ವಿಕೆಯನ್ನು ಅಂತ್ಯಗೊಳಿಸಲು ಪುನಃ ಒಕ್ಕಟ್ಟಿನಿಂದ ಶ್ರಮಿಸಬೇಕೆಂದೂ ಹೇಳಿರುವರು, ಎಂತಹ ಉಭಯನೀ! ನಸ್ಯರಾಜಕೀಯ ಅಷ್ಟರ ಮಟ್ಟಿಗೆ ಹೊಂಗಿರುತ್ತದೆ. ಆದರೆ ಪ್ರಧಾನಿಯವರಂದರೋ ಅನ್ಯಾನ್ಯ ಪಕ್ಷಗಳ ಸರಕಾರ ಘಟನೆಗೆ ಬರುದ್ಧವಾಗಿಲ್ಲವೆಂದೂ ವಿವಿಧ ಪಕ್ಷಗಳ ಸರಕಾರಗಳು ಸಂಯುಕ್ತ ಭಾರತದ ಚಿತ್ರವನ್ನು ಕಣ್ಣಾರೆ ಇಟ್ಟುಕೊಂಡು ಆದೆಷ್ಟು ಬೇಗನಾಗಿ ಶ್ರಮಿಸಬೇಕೆಂದು ಕರೆ ಇತ್ತಿರುವರು. ಇದು ಪಕ್ಷ ಪ್ರಾಮುಖ್ಯವಲ್ಲ, ದೇಶ ಪ್ರಾಮುಖ್ಯವೆಂಬುದನ್ನು ಶ್ರೀಮತಿ ಇಂದಿರಾ ಗಾಂಧೀಜೀ ಒಪ್ಪಿಕೊಂಡಿರುವರೆಂಬುದಕ್ಕೆ ಸಾಕ್ಷಿ.

ಭಿನ್ನ ಭಿನ್ನ ಭಾಷೆಗಳಾಡುವವರ ಬಡಿದಾಟವನ್ನು ನಿಶ್ಚಿತಸಿಸ್ಕೆಂದು ತಾತ್ಕಾಲಿಕವಾಗಿ ಆಂಗ್ಲಭಾಷೆಯನ್ನು ಕೊಂಡಿಭಾಷೆಯನ್ನಾಗಿ ಉಳಸಲೋಗಿಸಿಕೊಳ್ಳಲೇ ಬೇಕಾಗಿದೆಂಬ ಶ್ರೀಮತಿ ಇಂದಿರಾಜೀಯವರ ಅಭಿಪ್ರಾಯ ರಾಷ್ಟ್ರದ ಗೌರವದ ದೃಷ್ಟಿಯಿಂದ ಸರಿ ಇರುವದಿಲ್ಲ. ರಷ್ಯಾ, ಜೈನಾ, ಆಫ್ರಿಕಾದ ಕೆಲವಾರು ದೇಶಗಳಿಂದ ಭೇಷಾರಿ ಹಾಕಿಸಿಕೊಂಡ ಮೇಲೂ, ಇಂಗ್ಲೀಷ್ ಭಾಷೆ ಬಲ್ಲ ಕ್ರೈಸ್ತಗುರು ಫೋಪರು ನಮ್ಮ ಮಂತ್ರಿ ಶ್ರೀ ಚಂದ್ರ ಶೇಖರ್‌ರವರು ಇಂಗ್ಲ ಭಾಷೆಯಲ್ಲೇ ಮಾತಾಡಿದಾಗಲೂ ಇಬಾಲಿ ಭಾಷೆಯಲ್ಲಿ ಮಾತಾಡಿದಾಗಲೂ ನಾವು ಬುದ್ಧಿ ಕಲಿತುಕೊಂಡಿಲ್ಲವೆಂದಷ್ಟೆ, ಇಂದಿನ ಮೊಕ ಜ್ಞಾಪಕಕ್ಕೆ ಬರುತ್ತಿದೆ. ಭಂಗರತದ ಜನರು ಒಗ್ಗಟ್ಟಿಲ್ಲದೆ ಹೊಡೆಬಡಿಕೊಳ್ಳುತ್ತಿರುವದರಿಂದ ಆಡಳಿತ ಅಲ್ಲಾಜೆ ಅವರ ಸೌಕರ್ಯದ ದೃಷ್ಟಿಯಿಂದ ಆಂಗ್ಲೋಯರು ಅಲ್ಪಿಕೆ ಆಸ್ಥಗತ್ಯವೆಂದು ಹಿಂದೆ ಬ್ರಿಟಿಷರು ಬಡಬಡಿಸುತ್ತಿದ್ದರು. ಅದೇ ವಾದದ ಕೊನೆಯು ಕೂಂಡಿ ಇದೆ. ಅನ್ನು ಕಡಿಮೊಗೆದಾಗಲೇ ನಮ್ಮಕ್ಕನದ ಸ್ವಷ್ಟ ಅನುಭವ ಆಗಲು ಸಾಧ್ಯ.

ನಾವು ಪಕ್ಷದ ದುರಭಿಮಾನದಿಂದಲೇ ಮುಸ್ತಿ ಪಡೆಯಬೇಕು. ಶ್ರೀಮತಿ ಇಂದಿರಾ ಗಾಂಧೀಜೀಯವರು ಜಾತಿ, ಭಾಷೆ, ಪ್ರದೇಶ, ರಾಜ್ಯ ಇತ್ಯಾದಿಗಳ ಸಂಕಲ್ಪಿತ ಪಕ್ಷವನ್ನು ಸೇರಿಬಿಟ್ಟಿದ್ದಲ್ಲಿ ಪಿಪ್ಪಿಷ್ಟವಾತ ದೃಷ್ಟಿಯಿಂದ ನುಸಿವರುವರೆಂಬುದು ಸ್ಪಷ್ಟವಾಗುತ್ತಿತ್ತು.

ಸೇನೆಯ ವಿಷಯ ಯೋಚಿಸುವಾಗ ಸೇನೆಯ ಹಿಂದುಗಡೆ ಮೂರ್ಖ ರಾಷ್ಟ್ರವು ಇದೆಯೆಂದು ಪ್ರಧಾನಿಯವರು ಜೇಳರುವರು. ಆದರೆ ಯಾವದಕ್ಕೆ ಜಯ ಭೇರಿ ಭಾರಿಸುತ್ತಿ ಮುನ್ನುಡೆಯುತ್ತಿರುವಾಗ ಆ ಪರಿಸ್ಥಿ ಹಿಂಗಾಕ್ಕೆ ಕರೆಸಲೇನ ? ಶತ್ರು ಪಕ್ಷಕ್ಕೆ ಅವರ ಸೂಚನೆ ಕೊಡಲೇನು? ಈ ವಿಷಯ ಗಂಭೀರಗಳಿರುವಾಗ ಸೇನೆಗೆ ಮಾತುಕೊಗುವದೆಂದರೆ ಬೆನ್ನಲ್ಲಿ ಇರಿದಂತೆಯೇ ಸರಿ. ಎಲ್ಲರೂ ಕೌಲ ತರುವಂದಿಲ್ಲ. ರಾಷ್ಟ್ರಾಭಿಮಾನಿ ಸೈನಿಕರು ಬಹಳ ಮಂದಿ ಇದ್ದಾರೆ. ಅವರಿಗೆ ನಾವು ಬೆನ್ನೆಲುಬಾಗಿ ಇರಬೇಕು ಆಡಳಿತದ ಅಂಕುಶವನ್ನು ಹಿಡಿದಿರುವವ ಸೇನೆಗೆ ಮಹಿಳೆಯ ರ ಮೊಲಿನ ವಲ್ಲಗೆಯ ಮೂಲೆ ಹಾಕಿದರೆ ಸಾಲದು. ಅವರ ಕೈಯಲ್ಲಿ ನವನವೀನ ಆಯುಧೋಪಕರಣಗಳಿರುವಂತೆ, ಪ್ರವಾಗುಣವನ್ನು ಹೊಂದಿಸಿಕೊಳ್ಳಲು ಬೇಕಾಗುವ ಉಪಕರಣಗಳನ್ನೊದಗಿಸಬೇಕು.

ನಮ್ಮ ನಂತಾಡಿಗಳಲ್ಲಿ ವಿನಿ ಪುರಿಪರ, ಸಮರ್ಥ ನಾಯಗರ ಕತ್ತು ಹುರಿಯುವುದನ್ನು ಪ್ರಧಾನಿಯವರು ಜ್ಞಾಪಿಸಿಕೊಟ್ಟಿದ್ದಾರೆ ಈ ದೃಷ್ಟಿಯಲ್ಲಿ ಅನ್ನ, ಒಟ್ಟು, ಪ್ರಗತಿಯ ಮಾತುಗಳಿಗಿಂತಲೂ ಸ್ವಾತಂತ್ರ್ಯವನ್ನು ಕಾಪಾಡಬೇಕು, ಉಳಿದಿರುವ ಪ್ರದೇಶದ ನೆಮ್ಮದಿಯ ದೃಷ್ಟಿಯಿಂದ ಜಿ ಮಾತು ಯಾವಾಗವೆಮ್ಮುವ ಕುರಿತು ಯೋಚಿಸುವದು ಇತರರ ಅದನ್ನು ಬಿಟ್ಟು ಆಧಿಕಾರದ ಅಸನವನ್ನು ಪಡೆಯುವುದರಲ್ಲಿ. ಅಂದರೆ 'ನಮ್ಮ ರಕ್ಷಣೆಗೆ ಎಷ್ಟು ಸ್ವಾತಂತ್ರ್ಯ ಇದೆಯೆಂಬ ದಿನ್ನು ಪ್ರದರ್ಶಿಸುವದರ ರಕ್ಷಣೆ ಇಂದು ಸ್ವಧೆ-ಯ ಉತ್ಸವ ಎಲ್ಲೆಲ್ಲೂ ನಡೆಯುತ್ತಿದೆ.

ಸಡಿಲು ಬಿಗಿಯಾಗುತ್ತೆಯೆ?

(ನಾಲ್ಕನೇ ಪುಟದಿಂದ)

ಗಾರಿಕಟ್ಟೆಗಳಲ್ಲಿ ಶ್ರೀವ ಂಕರಿಗೆ ಸ್ವಾಸಿಗಳಿಗೆ ಮಾತ್ರ ಪ್ರವೇಶ ಬಡ ಜೋರೆ ಗೌಡನಿಗೂ ಜುಗಾರಿ ಬೇಡವೆ? ಅದು ದರಿಂದ ಅದಕ್ಕೂ ಲೈಸೆನ್ಸ್ ಕೊಡಬೇಕು ...'

"ಹ್ಞೂಂ.. ನಮೂನಾವಶಾಶ ತಾನೆ?'

"ಮತ್ತೆ ನೋಡಿ, ಎಲ್ಲೀ ಸೂಳೆಗೇರಿಯನ್ನೂ ತೆರೆಯಲು ಅನುವ ತಿ ಕೊಡಬೇಕ ...'

"ಹ್ಞಾಂ...ವಿಸಂದೆ?'

"ಏನೂ ಇಲ್ಲ... ನಿನಗೆ ಹಣ ಬೇಕಲ್ಲಾ... ಅದಕ್ಕೆ ..."

'ಏ, ನಸಗ್ಗಾಕೆ ಹಣ ...'

'ನಿವ ಗರ್ನಿ, ಸಂಜಂತರ್ಕ್ಕೆ ..."

'ಹ್ಞೂಂ ಆಪ್ತೆ ಇದ್ದಲ್ಲವನ್ನಿ ಕರಕ, ರ ಆರಂಭಿಸಿದ್ದೆ 'ಎಂ ಎಸ್ ಆರ್ ಟಿಡಿ' ಯಂತೆ ಲೋಸ್ ಕಂಪೆನಿಗಾದ್ದೆ....'

"ಆದಾಯಕ್ಕೆ ಚಿಂತೆ ಕಳ್ಳಕಡಿಮೆ ವವನಿಗೆ ಬ್ಯಾಜ್ ಕೊದಬೇಕು. ಕುಡಿಸುವವನಿಗೆ ಇಡಿಯಲ್ಲಾ ಲೈಸನ್ಸ್ ಫೀ, ಸೇಲ್ ಟ್ಯಾಕ್ಸ್, ಇನ್‌ಕಂಟ್ಯಾಕ್ಸ್....ಜಾಗೆಯೇ ಜುಗಾರಿಯಾಡ ವವಿಗೆ, ವೃಭಿಚಾರಿಗಳಿಗೆ ಎಲ್ರಿಗೂ ಬ್ಯಾಜ-ಲೈಸನ್ಸ್. ಮತ್ತೆ ಈ ಭೀ ಕಡಿಮೆ ಇರಬಾರ್ದು..."

'ಹಾಗೆಲ್ಲಾ ಮಾಡಿದ್ರೆ ಅಲ್ಲೂ ಬ್ಲಾಕು...'

"ನಡೀಲಿ, ನೋಲೀಗರಿಗೂ ಲಂಚವಾಗುತ್ತೆ. ಸರಕಾರಕ್ಕೂ ಲಂಭವಾಗುತ್ತೆ. ಹೆಚ್ಚು ಜನರಿಗೆ ಕೆಲಸ ಕೊಟ್ಟಿ. ಮಂತ್ರಿಗಳಿಗೂ ಎಂನೆಮ್ಮೆಲ್ಯೆಗಳಿಗೂ ಸ್ವಿನಸ ಭವ್ಯ....ಇನ್ನು ಒಂದ ಮಾಡಬಹುದು...."

"ಏನು?"

'ಬಂಗಾಳದ ಮಂತ್ರಿಗಳು ಪ್ರಧಾನಿ ನಿವಾಸದ ಮುಂದೆ ಧರಣಿ ಮಾಡಿತ್ತೇವೆಂತೆ ಪೆಪರಿನವುದಕ್ಕಾಂತ ಇಂದ ಶಾಸನ ತಯೂರು ಮಾಡಿ ಹಣಗಳಸಿ ಹಣ ತೆತ್ತ ಅನ್ನ ಕೊಂಡ ಕೊಳ್ಳಬಹುದ .!

"ಅಯ್ಯೋ ಇನ್ನೆಲ್ಲಿ ಧರಣಿ? ಅದು ಅನ್ನಸತ್ಯಗ್ರಹವಾಯ್ತು. ಈಗ ಅನಾಹ್ಯವೆಂದೂ ಅಯ್ತು"

'ಏನೇ ಇರ್ಲಿ ಖಚ್ಚಿತ ಬಂಗಾಳ ಮಾ

ಪರಿಷತ್ತಿನ ಸಭೆ

ದರಿಂದ್ಯಂ. ಅಲ್ಲಿ ಮಂತ್ರಿಗಳೇ ಧರಣಿ ಮಾಡುತ್ತಾರೆ, ಸರಕಾರವೇ ಬಂದಾಗೆ ಆರೆ ನೀಡುತ್ತೆ. ರೇ ಲೈ — ವಿ ಮಾನಗಳಿಗೆ ರಾಜ್ಯ ಭರಿಕಾರ ರಕ್ಷಣೆ ನೀಡಲು ನಿರಾಕರಿಸುತ್ತೆ. ಇನ್ನು ಜನತೆಯ ವಿತ್ತ ಜೀನಿಕೆಗಳಿಗೂ ರಕ್ಷಣೆಯೆನು ಕೊಡುತ್ತೆ?'

"ನರಿಯಾಗಿ ಹೇಳಿದೆ. ಕೇಂದ್ರ ಸರಕಾರ ತಾನು ಹೇಳಿದಂತೆ ಕೊಷಬೇಕು ಎನ್ನುತ್ತದೆ, ಆದರೆ ಅದೆ ರನ್ನ ಕರ್ನಾಟಕವನ್ನು ಪೂರಯ್ಯುವಲ್ಲಿ ಹಿಂದುಳಿದಿದೆ. ಹೀಗೆಯೇ ಆದ್ರೆ...'

'ಪತ್ರೇನ ? ಮಗ ಹೇಳ ತ್ತಾನೆ, ಅಪ್ಪ ತನ್ನ ಅವಶ್ಯಕತೆಗಳನ್ನು ನೂರಿಪ್ಪತ್ತು ಬೇಕೂಂಡ ...ಅಪ್ಪನ ಕಡೆ ಇನ್ನೂ ಕರ್ತವ್ಯವಿದೆ ಅಂತ ವಿದ್ಯೋಹಿ ಮಗನಿಗೇನು ಗೊತ್ತು?"

"ಹ್ಞೂಂ ಹೀಗೇ ನಡೆದರೆ, ನಾವೆಲ್ಲಿ ನಾಗೂತಿದ್ದೇವೆ?"

'ಸದ್ಯ ಮಾಕ ಶಾಲೆಗೆ ಇಾಗೋಣ. ಮತ್ತೆ ಇದೆಯಲ್ಲಾ... "

'ಶಯನ ಕಾಲಿ ...'

'ಪೆಜ್ಞೂಂ...'

—ಗೋರಾ.

ಸ್ವಯಂ ಸೇವಾದಳ

ಆಳಿಕೆ, ತಾ 12-8-67ರಂದು ಲೋಕ ಸೇವಾ ಕ್ಷೇತ್ರದ ಸಕಿಂದರಿ ಶಾಲೆಯಲ್ಲಿ ಶ್ರಮ ಸೇವಾದಳಕಲಿಂದ ಒಂದ ಹೊಸ ಶಿಬಿರವನ್ನು ಶ್ರೀ ಉಬರಡ್ಕ ಚಂದ್ರ ಭಟ್ ಇವರು ಉದ್ಘಾಟಿಸಿದರು ಈ ದಳದಲ್ಲಿ ಸುಮಾರು 100 ಮಂದಿ ವಿದ್ಯಾರ್ಥಿಗಳು ಸೇರಿಕೊಂಡಿದಾರೆ. ದಿವಸವಷ್ಟಿ ೨ ಗಂಟೆಗಳನ್ನು ಕಾಲ ಮಡಿಯುವ ಎಂದಂಡನೆ ೨ ದಳವನ್ನಿ ಮಾಡಲಾಗಿದೆ. ಇವರಿಂದ ಆಕಸ್ಮಿಕ ಪ್ರಸಂಗಗಳು ಸಾರ್ವಜನಿಕರಿಗೆ ಯಾವ ತೊಂದರೆಯಾಗದಂತೆ ಅಗ್ನಿಶಾಮಕ ಯಂತ್ರಗಳನ್ನು ಪಡೆಯಲು, ಪಡೆದು ತನ್ನ ಆಧೀನದಲ್ಲಿ ಸ್ವಾತಂತ್ರವಾಗಿ ಪಡೆಯಲು ಅನುಕೂಲವಿದೆ.

ನಿಶ್ಚಲ ಪೃಶ್ಯಗಳ ಪ್ರದರ್ಶನ

ಮೈಸೂರು ನಗರದಲ್ಲಿ ನಡೆಯುವ ದಸರಾ ಮಹೋತ್ಸವದ ಅಂಗವಾಗಿ, ಇಂದು ದಶಮಿ ದಿವಸ ಮೆರವಣಿಗೆಯಲ್ಲಿ, ಈ ನಗರ, ನಮ್ಮ ರಾಜ್ಯದ ವಿವಿಧ ಕಡೆಗಳಿಂದ ಬಂದಿರುವ ಪಟ್ಟಿ ಸ್ತಬ್ಧ ಚಿತ್ರಗಳಿಗೆ ಗಂಡಂತರ ಪಟ್ಟಿ ಸ್ತಬ್ಧ ಚಿತ್ರ (Tableau)ಗಳನ್ನು ಪ್ರದರ್ಶಿಸಲು ಏರ್ಪಡಿಸಲಾಗಿದೆ. ಇವರಲ್ಲಿ ಅಲ್ಪಸಂಖ್ಯಾತ ಮತ್ತು ಅನ್ಯ ಸಮುದಾಯಗಳ ಮೂರು ನಿಶ್ಚಲ ದೃಶ್ಯ ಪ್ರದರ್ಶನಗಳು ಇವೆ. ಕ್ರೈಸ್ತ ಆರಾಧನೆಯ ದೃಶ್ಯ ಗಳ ಬೆಂಗಳೂರಿನ ಸಂಸ್ಥೆಯೊಂದು ಪ್ರದರ್ಶಿಸುತ್ತಿದೆ. ಇನ್ನೊಂದು ಸಂಸ್ಥೆಯು ಮಹಾವೀರ ತೀರ್ಥಂಕರರ ಜೀವನಚರಿತ್ರೆಯ ಕೆಲವು ಘಟನೆಗಳನ್ನು ಪ್ರದರ್ಶಿಸುತ್ತಿದೆ. ಮೂರನೆಯ ಸಂಸ್ಥೆಯು ಬುದ್ಧನ ಜೀವನಚರಿತ್ರೆಯ ಕೆಲವು ಘಟನೆಗಳನ್ನು ಪ್ರದರ್ಶಿಸುತ್ತಿದೆ. ಇವುಗಳಲ್ಲಿ ಮೊದಲನೆಯ ಸಂಸ್ಥೆಯ ಪ್ರದರ್ಶನ ಅತ್ಯಂತ ಆಕರ್ಷಕವಾಗಿ, ಅಪೂರ್ವ ಹಿನ್ನೆಲೆ ಸಂಗೀತದಿಂದ ಕೂಡಿದೆ.

ಪ್ರಭು ಕ್ರಿಸ್ತನ ಸಿಲುವೆಯನ್ನು ಸೈಮೊನನೆಂಬ ವ್ಯಕ್ತಿಯು ಸ್ವಲ್ಪ ದೂರ ಹೊತ್ತು ಸಾಗಿಸಿದ ಬಗೆಯನ್ನು ಮೊದಲ ದೃಶ್ಯದಲ್ಲಿ ಚಿತ್ರಿಸಲಾಗಿದೆ. ಎರಡನೆಯ ದೃಶ್ಯದಲ್ಲಿ ಪ್ರಭು ಕ್ರಿಸ್ತನ ಶಿಲುವೆಯ ಮರಣವನ್ನು ಚಿತ್ರಿಸಲಾಗಿದೆ. ಮೂರನೆಯ ದೃಶ್ಯದಲ್ಲಿ ಪ್ರಭು ಕ್ರಿಸ್ತನ ಪುನರುತ್ಥಾನವನ್ನು ಚಿತ್ರಿಸಲಾಗಿದೆ. ಈ ಮೂರು ದೃಶ್ಯಗಳಲ್ಲಿ ಪ್ರಭು ಕ್ರಿಸ್ತನ ಪಾತ್ರವನ್ನು ಅಭಿನಯಿಸಿದ ಕಲಾವಿದರು ಅತ್ಯಂತ ಸಮರ್ಥವಾಗಿ ಅಭಿನಯಿಸಿದ್ದಾರೆ. ಪ್ರಭು ಕ್ರಿಸ್ತನ ಮುಖಚರ್ಯೆ, ಅಂಗಸೌಷ್ಠವ, ಉಡುಪು ಇವೆಲ್ಲವೂ ಅತ್ಯಂತ ಆಕರ್ಷಕವಾಗಿವೆ. ಪ್ರಭು ಕ್ರಿಸ್ತನ ಪಾತ್ರಧಾರಿಯ ಮುಖದಲ್ಲಿ ಅಪೂರ್ವ ಕಾಂತಿ ಮಿನುಗುತ್ತಿದೆ. ಪ್ರಭು ಕ್ರಿಸ್ತನ ಪಾತ್ರಧಾರಿಯ ಅಭಿನಯ ಅತ್ಯಂತ ಸಹಜವಾಗಿದೆ. ಪ್ರಭು ಕ್ರಿಸ್ತನ ಪಾತ್ರಧಾರಿಯ ಅಭಿನಯ ಅತ್ಯಂತ ಸಹಜವಾಗಿದೆ. ಪ್ರಭು ಕ್ರಿಸ್ತನ ಪಾತ್ರಧಾರಿಯ ಅಭಿನಯ ಅತ್ಯಂತ ಸಹಜವಾಗಿದೆ. ಪ್ರಭು ಕ್ರಿಸ್ತನ ಪಾತ್ರಧಾರಿಯ ಅಭಿನಯ ಅತ್ಯಂತ ಸಹಜವಾಗಿದೆ.

ಉದ್ಘಾಟನೆ

ವಿನೋಬಾಜಿ, ಜೈ, ಜಗಲು ವಿಶ್ವಾಸ ಪುರುಷ ಪ್ರಭಾವಿಸಿದ ಮಹಾತ್ಮಾ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದ ಮಹಾನುಭಾವರಲ್ಲಿ ಒಬ್ಬರು. 'ಭೂದಾನ ಯಜ್ಞ' ಎಂಬ ಅವರ ಸಂಕಲ್ಪವು ಇಡೀ ಭಾರತದಲ್ಲಿ ಶ್ರೀ ಕೊಡಚಾದ್ರಿಯ ಅನಂತ ಪದ್ಮನಾಭ ಉತ್ಸವದ ಪ್ರಯುಕ್ತ ಸಂಗ್ರಹ "ಚಾರು ಯನ ದ ಉದ್ಘಾಟನಾ ಕಾರ್ಯಕ್ರಮವು ತಾ. 7-8-67ರಂದು ಯಂಗಪುರಪೇ ಕಾರ್ಯಾಲಯದಲ್ಲಿ ಶ್ರೀ ಕೆ. ಎಸ್. ಪದ್ಮನಾಭಾಚಾರ್ಯರು ಉದ್ಘಾಟಿಸಿದರು.

ಕುಂದಾಪುರ ಮುನ್ಸಿಫ್ ಕೋರ್ಟ್‌ನಲ್ಲಿ

O. S. 213/1964.
R. I. A. 949/1966.

ವಾದಿಯು ಅಪ್ಪಣ್ಣ ಸೆಟ್ಟಿ (ಪೋಕಿ) ಕೊಡಾಪ್ರತಿವಾದಿಗಳು 1 ವೆಂಕಮ್ಮ ಸೆಟ್ಟಿ. ತೋಟದ ಮನೆ ನಗಮ್ಮ ಸೆಟ್ಟಿರ ಮಗಳು.

2. ರಿಷ್ಣಮ್ಮ ಸೆಟ್ಟಿ, 3 ರುಕ್ಕಮ್ಮ ಸೆಟ್ಟಿ 4. ಕಾಳಪ್ಪ ಸೆಟ್ಟಿ, 5. ಪುಟ್ಟಮ್ಮ ಸೆಟ್ಟಿ, 6. ಕರಿಯಣ್ಣ ಸೆಟ್ಟಿ, 7. ಬಾಣಿಸೆಟ್ಟಿ. 1ನೇ ಪ್ರತಿವಾದಿ ಮಕ್ಕಳು 8. ಸಾವಂತ ಸೆಟ್ಟಿ-9ನೇ ಪ್ರತಿವಾದಿಮಗಳು 10. ಶೀಟೆಟ್ಟಿ ಕಳವಮ್ಮ ಸಂಬಟ್ಟು ಸೆಟ್ಟಿರ ಮಗ, ಕುಂದಾಪುರ ತಾಲ್ಲೂಕು ಕನ್ಯಾಣ ಗ್ರಾಮದಲ್ಲಿರುವವರು.

ಸದ್ರಿ ಪ್ರತಿವಾದಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪೀಲಿನ ಪಾಪಯ ಪ್ರಿಲಿನಿನರಿ ಡಿಕ್ರಿ ವಿಧಿಗನುಸರಿಸಿ ಫೈನಲ್ ಡಿಕ್ರಿ ಕೊಡಿಸಬೇಕೆಂತ ವಾದಿಯು ದಾಕಲು ಮಾಡಿದ ಮೇಲಿನ ಅರ್ಜಿ ತನ್ನಿಯಂತೆ ತಾ 9—9—1967ಕ್ಕೆ ಯಿರುತ್ತದೆ. ಆ ಈರಿತು ನಿಮ್ಮದೇನಾದರೂ ಅಕ್ಷೇಪಣೆ ಇದ್ದರೆ ಆ ದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟ್‌ನಲ್ಲಿ ಹಾಜರಾಗಿ ಜ್ಞಾಪಿಸಲು ತಿಳಿಸಿರುವುದಕ್ಕೆ ಈ ನೋಟೀಸನ್ನು ನಿಮಗೆ ಜಾರಿ ಮಾಡಿಕೊಳ್ಳತಕ್ಕದ್ದು ಎಂದು ಸಂಗ್ತಿ ತಿಳಿಸಿಯಿದೆ.

[ಕೋರ್ಟ್ ಹ್ಕುಂ ಪ್ರಕಾರ]

Y. Tejappa Shetty
Advocate for Plff.

Coondapoor, 24—8—1967.

ಎಲ್ಲೆಲ್ಲಿ ಏನೇನು?

ನಾಕ್ ಸ್ಪರ್ಧೆ

ಮುಂಬೈಯ ಕರ್ನಾಟಕ ಫ್ರೀ ಸ್ಕೂಲ್ ಪೈಸ್ಕೂಲಿನಲ್ಲಿ ಆಗಸ್ಟ್ ತಿಂಗಳಲ್ಲಿ 19ಂದು ಪಂ. ರಾಮಜೋಷಿ ಅವರ ಆಶ್ರಯದಲ್ಲಿ ನಡೆಯಲಿರುವ ಸಂಗೀತ ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಕೂಡಲೇ ಕಾರ್ಯದರ್ಶಿಗಳಾದ ಶ್ರೀ ಜಿ. ಪುಟ್ಟಸ್ವಾಮಿಯವರನ್ನು ಮೈಸೂರು ಸರಕಾರದ ವಿದ್ಯಾ ಸಚಿವ ಶ್ರೀ ಶಂಕರೇ ಗೌಡರು ಬಾಬಾರವರನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಿ ವಾದ್ಯ ಘೋಷದೊಂದಿಗೆ ಪುರ ಭವನಕ್ಕೆ ಕರೆತಂದರು. ಕಿಕ್ಕಿರಿದು ನೆರೆದ ಸಹಸ್ರಾರು ಭಕ್ತರಿಗೆ ಬಾಬಾರವರು ಪ್ರೇಮದಿಂದ ದರ್ಶನ ನೀಡಿದರು. ಈ ಸಮಯದಲ್ಲಿ ಅಲ್ಲಿ ಭಗವನ್ನಾಮ ಸಂಕೀರ್ತನೆಯು ನಡೆಯುತ್ತಿತ್ತು.

ಸಾಯಂಕಾಲ ಸುಮಾರ್ಕಿದ ಸ್ಟೇಡಿಯಂ ಮೈದಾನದಲ್ಲಿ ಬಾಬಾರವರ ಉದಾತ್ತ ಸಂದೇಶವನ್ನು ಕೇಳಲು ಸೇರಿದ್ದ ಜನಸಾಗರಕ್ಕೆ ಲೆಕ್ಕವೇ ಇರಲಿಲ್ಲ. ಸಭೆಯ ಪ್ರಾರಂಭದಲ್ಲಿ ಶ್ರೀ ಶಂಕರೇ ಗೌಡರು ಬಾಬಾರವರನ್ನು ಹೂಗುಚ್ಛಗಳಿಂದ ಸ್ವಾಗತಿಸಿ ಮಾತನಾಡುತ್ತಾ "ಅವರಿಂದಲೂ ಬಳಲಿ ಕ್ರಿಂಬಿ ಇರುವ ಜನತೆಗೆ ಪ್ರಜಾಜ್ಞೆ, ಪರಮಾರ್ಥಗಳ ಸಮನ್ವಯದಲ್ಲಿ ಕೊಡಿಸುವ ಉಪದೇಶ ಬೇಕಾಗಿದೆ. ಪೌರಕಿದ್ದಲ್ಲಿ ಧರ್ಮ ಸ್ಥಾಪನೆಯಾಗದೇ ಇರದು. ಆ ಸುಜ್ಞಾನಾಮೃತವನ್ನು ಸಹಸ್ರಾವಧಿ ಭಕ್ತಾದಿಗಳೇ ಭಗವಾನ್ ಸ್ವರೂಪಿಗಳಾದ ಶ್ರೀ ಸತ್ಯ ಸಾಯಿಬಾಬಾರವರು ಅವರಿಂದ ಬಯಸಿ ಬರುತ್ತಾರೆ ಎಂದು, ಶ್ರೀ ಪಿ. ಕೃ. ಗೋಪಾಲ ಕರು ಬಾಬಾರವರ ಉದಾತ್ತತೆಯ ಮಂತ್ರವನ್ನು ಕೊಂಡಾಡಿ ಪ್ರಾಸ್ತಾವಿಕ ಮಹತ್ವಗಳನ್ನು ತಿಳಿಸಿದರು. ಬಾಬಾರವರು ತಮ್ಮ ಉಪನ್ಯಾಸವನ್ನು ಸುಂದರವಾದ ಕವನವೊಂದರಿಂದ ಪ್ರಾರಂಭಿಸಿ ಹೀಗೆ ನುಡಿದರು. 'ಇಂದು ಕಾಲದಲ್ಲಿ ಧರ್ಮ ನೇತೃಗಳೂ ನಾಯಕತ್ವ ವಹಿಸಿದ ಭಾರತದಿಂದು ಅಧ್ಯಾತ್ಮಿಕ ತತ್ವವೆ ಕೊರತೆಯಾಗಿದೆ. ಇಂದಿಯಿಂದ ಬಳಲುತ್ತಿದೆ, ದೇಶದಲ್ಲಿ ಎಲ್ಲೆಲ್ಲೂ ಸಂಘರ್ಷಣೆಯೂ ಅಲ್ಲೋಲ ಕಲ್ಲೋಲವನ್ನು ಕಾಣುತ್ತಿದೆ. ಅನ್ನವಿಲ್ಲದ ಕೊರತೆ, ಆರ್ಥಿಕ ಕೊರತೆಯೆನ್ನುತ್ತಿದೆ. ನಿಜ ಕೈಲ್ಲಾ ಅತ್ಯನಿಶ್ಚಾಸದ ಕೊರತೆಯೇ ಕಾರಣ.'

'ನೀನಯು ಎಲ್ಲಿ ಎಂಬ ಸ್ಪಷ್ಟ ನಿಲ್ಲಾ ಕ್ರಿಯೆಯೂ ಕೇಳಿ ಬರುತ್ತಿದೆ. ಆ ಸ್ಪಷ್ಟತೆಯು ಆಗತ್ಯವೇ ಇಲ್ಲ. ನಾನು ಯಾರು ಎಂಬ ಸ್ಪಷ್ಟತೆಯನ್ನು ನಿರಂತರ ಪಾಕಿಸಿರೆ ನಿನ್ನ ಸ್ವರೂಪವೇನೆಂದು ನಿನಗೆ ತಿಳಿಯುವುದು. ಆಗ ಭಗವಂತನ ಸ್ವರೂಪ ನೇನೆಂದು ನಿನಗೆ ಅರ್ಥವಾಗುವುದು. 'ಇಂತೀಗ' ನಾಶಕ್ಕೆ ತ್ತರ ಆನಂದಕ್ಕೆ ಯೋಗುವ ಯತ್ನ ನೂಡು ತ್ತಿದೆ. ಅದಕ್ಕೆ ಕನ್ನಡಿ ಧರ್ಮವೇನೂರಿಗೆ ಕೇಸಲು ಆರ್ಥ ಇಂಬಿಗಳನ್ನು ಇಳಿಯಲು ಯತ್ನ ನೂಡುವುದಿಲ್ಲ. ಇದೇ ಭಾರತದ ಇಂದಿನ ದುಸ್ಥಿತಿಗೆ ಕಾರಣ. ಆದುದರಿಂದ ಇದನ್ನು ತಿಳಿದು ಅಧ್ಯಾತ್ಮ ಚಿಂತನೆ ನೇತ್ಯಗಳನ್ನು ಬಿಟ್ಟು, ಭಗವಂತನಲ್ಲಿ ತಲೆಯಿಟ್ಟ ಭಾರತೀಯರಾಗಿ ಬಾಳಿ, ಇತರ ದೇಶದ ಜನರಿಗೆ ಮಾರ್ಗದರ್ಶಕರಾಗಿ' ಎಂದರು.

ಉಪನ್ಯಾಸಾನಂತರ ಬಾಬಾರವರು ಸ್ವಯಂ ಸ್ಫೂರ್ತಿಯಿಂದ ಭಜನೆಯನ್ನು ಪ್ರಾರಂಭಿಸಿ ಎಲ್ಲರನ್ನು ಭಕ್ತಿಯ ಉತ್ಸಾಹಗಳಿಸಿಬಿಟ್ಟರು. ಅನಂತರ ಗೀತಾಂಜಲಿ ಪೊಲಿಕ್ಲಿನಿಕ್ ಉದ್ಘಾಟನೆಯನ್ನು ಶ್ರೀಗಳವರ ಕೈ. ವಿ. ಶ್ರೀನಿವಾಸ ಶೆಟ್ಟಿ ಮತ್ತು ಎಂ ವಿ ರಾಮಣಿಯವರ್ಯ ಶೆಟ್ಟಿ ಸಹೋದರರು ನೂತನವಾಗಿ ಗಟ್ಟಿಸಿದ ಭವ್ಯ ಕಟ್ಟಡದ ನಡು ತೆರೆಯಲ್ಪಟ್ಟಿತು. ಬೆಳಗ್ಗಿನಿಂದ ಸಂಜೆ ತನಕ ನಗರದ ಪೌರ ಅಸಾಮಾನಿನ ಪತಿಷ್ಠಿತ ನಾಗರಿಕರೇತೇಶರು ಅಭಿಮಾನ ಹಾಗೂ ಉತ್ಸಾಹದಿಂದ ಸಂತರಿಸಿ ನೂತನ ಶಾಖೆಗೆ ಶುಭ ಕೋರಿದರಲ್ಲದೆ ನೂರಾರು ಜನರು ಬ್ಯಾಂಕ್ ಖಾತೆಗಳನ್ನು ತೆರೆದು ಪ್ರೋತ್ಸಾಹಿಸಿದರು.

ಸುಂಗಳೂರಿನಿಂದ ಬಂದಿದ್ದ ದಿಟ್ಟಿ ಸೆಕ್ಯುರಿಟೀಸ್ ಶ್ರೀ ಎಸ್. ವಿಟ್ಟಲ ಶೆಟ್ಟರೂ ಮಂಡ್ಯ ಶಾಖಾ ಮೆನೇಜರ್ ಶ್ರೀ ಬಿ. ವಿ. ಪ್ರಭಾಕರ ರೈಗಳೂ ಸರ್ವರನ್ನೂ ಸ್ವಾಗತಿಸಿ ಬ್ಯಾಂಕಿನ ನೂತನ ಪ್ರಗತಿ ವಿವರಗಳನ್ನೂತು ಸೌಂದರ್ಯನ ಪ್ರೋತ್ಸಾಹಗಳಿಗಾಗಿ ವಂದನೆಗಳನ್ನು ಸಲ್ಲಿಸಿದರು. ಅಭ್ಯಾಗತರಿಗೆಲ್ಲ ಉಪಹಾರ ಸತ್ಕಾರವನ್ನು ಏರ್ಪಡಿಸಲಾಗಿತ್ತು.

ಸಂಪಾದಕರಿಗೆ ದೂರು

ಕನ್ನಡ ನಿಘಂಟುವಿನಲ್ಲಿ ತಪ್ಪುಗಳು

ಮೈಸೂರು ಸರಕಾರದ ಧನಸಹಕಾರದಿಂದ ಕನ್ನಡ ಸಾಹಿತ್ಯ ಪರಿಷತ್ತಿನವರು ಪ್ರಕಟಿಸುವ ಕನ್ನಡ ನಿಘಂಟುವಿನಲ್ಲಿ ಹಲವು ತಪ್ಪುಗಳಿವೆ ಶಬ್ದಗಳ ಎಲ್ಲಾ ಅರ್ಥ ಹೇಳಿದುದು, ಸರಿಯೂ ಪೂರ್ಣ ಹೇಳಿದುದು. ಉದಾಹರಣೆವಿಲ್ಲದುದು ಅಕರ ಮೂಲಗ್ರಂಥ ಹೇಳದುದು, ತುಲನಾತ್ಮಕವಾಗಿ ಹೇಳಿದವುಗಳಲ್ಲಿ ತುಳುಭಾಷೆಯಲ್ಲಿ ತಪ್ಪುಗಳನ್ನು ತೂರಿಸಿದುದು, ಆಂಗ್ಲ ಶಬ್ದಗಳನ್ನು ನೇರವಿಸಿದುದು, ಇತ್ಯಾದಿ. ಈ ಬಗ್ಗೆ ಕನ್ನಡದ ಅಭಿಮಾನಿಗಳು ತಕ್ಕ ವ್ಯವಹಾರ ಕೈಗೊಳ್ಳಲು ನಿಘಂಟು ನಿರ್ದೇಶನವಾಗಿರುವಂತೆ ಗಮನಿಸಬೇಕಾಗಿದೆ. ಹಾಗಲ್ಲದೆ, ಶಾಶ್ವತ ಹಾಗೂ ಆಧಾರ ರೂಪದ ಈ ನಿಘಂಟುವಿನಿಂದಾಗಿ ಕನ್ನಡದ ಭಾಷೆಯಲ್ಲಿ ವಿರೂಪತೆಯಾಗ ಬಹುದೆಂದು ವಿನಂತಿಸುತ್ತೇನೆ.

—ಕೆ. ವೆಂಕಟರಾಮಣಿಯಯ್ಯ, ಸುರತ್ಕಲ್ಲು

ಉಡುಪಿ ಲಾ ಕಾಲೇಜು ಯೂನಿಯನ್ ಉದ್ಘಾಟನೆ

ಉಡುಪಿ ಲಾ ಕಾಲೇಜು ಯೂನಿಯನಿನ ಉದ್ಘಾಟನಾ ಸಮಾರಂಭವು ಪೂರ್ವ ಪ್ರಜ್ಞಾ ಕಾಲೇಜಿನ ಪ್ರಿನ್ಸಿಪಾಲ್ ಡಾ|| ಶಂಕರ ಮೊಕಾಶಿಯವರಿಂದ ನೆರವೇರಿತು. ಸಮಾರಂಭದ ಅಧ್ಯಕ್ಷತೆಯನ್ನು ಡಾ|| ಮಾಧವ ಪೈಗಳು ವಹಿಸಿದ್ದರು.

ಆರಂಭದಲ್ಲಿ ಯೂನಿಯನ್ ಅಧ್ಯಕ್ಷ ಶ್ರೀ ಶ್ರೀಧರ ಅಂಚನವರು ಸ್ವಾಗತಿಸಿದಮೇಲೆ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ. ಜಿ. ದೇಶಪಾಂಡೆಯವರು ಆತಿಥಿಗಳ ಪರಿಚಯ ಮಾಡಿಸಿ ಎಕಮಿಯು ಸಾಧಿಸಿದ ಪ್ರಗತಿಯನ್ನು ವಿವರಿಸಿದರು.

ಡಾ|| ಮೊಕಾಶಿಯವರು ಮೂತನವುತ್ತಾ ವಿದ್ಯಾರ್ಥಿಗಳು ಪಠ್ಯಪುಸ್ತಕಗಳ ಜೊತೆಗೆ ಸಾಮಾನ್ಯ ಜ್ಞಾನವನ್ನು ಗಳಿಸಲು ಪ್ರಯತ್ನಿಸಬೇಕೆಂದು ಹೇಳಿದರು. ಅಲ್ಲದೆ ಈ ಕಾನೂನುಗಳ ಅವಶ್ಯಕತೆಯು ನಮ್ಮ ಮೂಲಭೂತ ಹಕ್ಕುಗಳಿಗಾಗಿ ಹೋರಾಡಿದ ಫಲವಾಗಿದೆ ಎಂದರು.

ಸಂಜೆ ಕಾಲೇಜಿನ ಸಭಾಂಗಣದಲ್ಲಿ ಸಾಮಾಜಿಕ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯಿತು. ಸಭೆಯಲ್ಲಿ ಸುಮಾರು ಇಪ್ಪತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಡಾ|| ಮೊಕಾಶಿಯವರು ಚರ್ಚೆಯ ಅಧ್ಯಕ್ಷತೆ ವಹಿಸಿದ್ದರು. ಚರ್ಚೆಯ ವಿಷಯ 'ಸಮಾಜದಲ್ಲಿ ಸ್ತ್ರೀಯರ ಸ್ಥಾನ' ಎಂಬುದಾಗಿತ್ತು.

ಕೊನೆಯಲ್ಲಿ ಕಾರ್ಯದರ್ಶಿ, ಶ್ರೀ ಕೆ. ಚಿನ್ನಪ್ಪಸ್ವಸರಿಂದ ಧನ್ಯವಾದ ಸಮರ್ಪಣೆ ಯಾಯಿತು.

"ಅವನ 'ಗ್ರೋಸ್' ಇನ್‌ಕಂ ಎಷ್ಟಿರ ಬಹುದು?...."

"ಇವನ್ಗಿಲ್ಲಿಬು 'ಗ್ರೋಸ್' ಇನ್‌ಕಂ!...ಇದ್ದರೆ 'ನೆಟ್' ಇನ್‌ಕಂ ಮಾತ್ರ ...ಅವನ್ಗೋ ನೆಟ್ ನೊಗವೀಗ..."

ಮಂಡ್ಯದಲ್ಲಿ ವಿಜಯ ಬ್ಯಾಂಕಿನ ಹೊಸ ಶಾಖೆಯ ಪ್ರಾರಂಭೋತ್ಸವ

ತಾ. 23—8—67ರಂದು ವಿಜಯ ಬ್ಯಾಂಕಿನ 85ನೇ ಶಾಖೆಯು ಮಂಡ್ಯ ಪೇಟೆ ಬೀಡಿ

ಯಲ್ಲಿ ಶ್ರೀಗಳವರ ಕೈ. ವಿ. ಶ್ರೀನಿವಾಸ ಶೆಟ್ಟಿ ಮತ್ತು ಎಂ ವಿ ರಾಮಣಿಯಂಣ್ಣ ಶೆಟ್ಟಿ ಸಹೋದರರು ನೂತನವಾಗಿ ಗಟ್ಟಿಸಿದ ಭವ್ಯ ಕಟ್ಟಡದ ನಡು ತೆರೆಯಲ್ಪಟ್ಟಿತು. ಬೆಳಗ್ಗಿನಿಂದ ಸಂಜೆ ತನಕ ನಗರದ ಪೌರ ಅಸಾಮಾನಿನ ಪತಿಷ್ಠಿತ ನಾಗರಿಕರೇತೇಶರು ಅಭಿಮಾನ ಹಾಗೂ ಉತ್ಸಾಹದಿಂದ ಸಂತರಿಸಿ ನೂತನ ಶಾಖೆಗೆ ಶುಭ ಕೋರಿದರಲ್ಲದೆ ನೂರಾರು ಜನರು ಬ್ಯಾಂಕ್ ಖಾತೆಗಳನ್ನು ತೆರೆದು ಪ್ರೋತ್ಸಾಹಿಸಿದರು.

ಸುಂಗಳೂರಿನಿಂದ ಬಂದಿದ್ದ ದಿಟ್ಟಿ ಸೆಕ್ಯುರಿಟೀಸ್ ಶ್ರೀ ಎಸ್. ವಿಟ್ಟಲ ಶೆಟ್ಟರೂ ಮಂಡ್ಯ ಶಾಖಾ ಮೆನೇಜರ್ ಶ್ರೀ ಬಿ. ವಿ. ಪ್ರಭಾಕರ ರೈಗಳೂ ಸರ್ವರನ್ನೂ ಸ್ವಾಗತಿಸಿ ಬ್ಯಾಂಕಿನ ನೂತನ ಪ್ರಗತಿ ವಿವರಗಳನ್ನೂತು ಸೌಂದರ್ಯನ ಪ್ರೋತ್ಸಾಹಗಳಿಗಾಗಿ ವಂದನೆಗಳನ್ನು ಸಲ್ಲಿಸಿದರು. ಅಭ್ಯಾಗತರಿಗೆಲ್ಲ ಉಪಹಾರ ಸತ್ಕಾರವನ್ನು ಏರ್ಪಡಿಸಲಾಗಿತ್ತು.

ಸಂಪಾದಕರಿಗೆ ದೂರು

ಕನ್ನಡ ನಿಘಂಟುವಿನಲ್ಲಿ ತಪ್ಪುಗಳು

ಮೈಸೂರು ಸರಕಾರದ ಧನಸಹಕಾರದಿಂದ ಕನ್ನಡ ಸಾಹಿತ್ಯ ಪರಿಷತ್ತಿನವರು ಪ್ರಕಟಿಸುವ ಕನ್ನಡ ನಿಘಂಟುವಿನಲ್ಲಿ ಹಲವು ತಪ್ಪುಗಳಿವೆ ಶಬ್ದಗಳ ಎಲ್ಲಾ ಅರ್ಥ ಹೇಳಿದುದು, ಸರಿಯೂ ಪೂರ್ಣ ಹೇಳಿದುದು. ಉದಾಹರಣೆವಿಲ್ಲದುದು ಅಕರ ಮೂಲಗ್ರಂಥ ಹೇಳದುದು, ತುಲನಾತ್ಮಕವಾಗಿ ಹೇಳಿದವುಗಳಲ್ಲಿ ತುಳುಭಾಷೆಯಲ್ಲಿ ತಪ್ಪುಗಳನ್ನು ತೂರಿಸಿದುದು, ಆಂಗ್ಲ ಶಬ್ದಗಳನ್ನು ನೇರವಿಸಿದುದು, ಇತ್ಯಾದಿ. ಈ ಬಗ್ಗೆ ಕನ್ನಡದ ಅಭಿಮಾನಿಗಳು ತಕ್ಕ ವ್ಯವಹಾರ ಕೈಗೊಳ್ಳಲು ನಿಘಂಟು ನಿರ್ದೇಶನವಾಗಿರುವಂತೆ ಗಮನಿಸಬೇಕಾಗಿದೆ. ಹಾಗಲ್ಲದೆ, ಶಾಶ್ವತ ಹಾಗೂ ಆಧಾರ ರೂಪದ ಈ ನಿಘಂಟುವಿನಿಂದಾಗಿ ಕನ್ನಡದ ಭಾಷೆಯಲ್ಲಿ ವಿರೂಪತೆಯಾಗ ಬಹುದೆಂದು ವಿನಂತಿಸುತ್ತೇನೆ.

—ಕೆ. ವೆಂಕಟರಾಮಣಿಯಯ್ಯ, ಸುರತ್ಕಲ್ಲು

ಉಡುಪಿ ಲಾ ಕಾಲೇಜು ಯೂನಿಯನ್ ಉದ್ಘಾಟನೆ

ಉಡುಪಿ ಲಾ ಕಾಲೇಜು ಯೂನಿಯನಿನ ಉದ್ಘಾಟನಾ ಸಮಾರಂಭವು ಪೂರ್ವ ಪ್ರಜ್ಞಾ ಕಾಲೇಜಿನ ಪ್ರಿನ್ಸಿಪಾಲ್ ಡಾ|| ಶಂಕರ ಮೊಕಾಶಿಯವರಿಂದ ನೆರವೇರಿತು. ಸಮಾರಂಭದ ಅಧ್ಯಕ್ಷತೆಯನ್ನು ಡಾ|| ಮಾಧವ ಪೈಗಳು ವಹಿಸಿದ್ದರು.

ಆರಂಭದಲ್ಲಿ ಯೂನಿಯನ್ ಅಧ್ಯಕ್ಷ ಶ್ರೀ ಶ್ರೀಧರ ಅಂಚನವರು ಸ್ವಾಗತಿಸಿದಮೇಲೆ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ. ಜಿ. ದೇಶಪಾಂಡೆಯವರು ಆತಿಥಿಗಳ ಪರಿಚಯ ಮಾಡಿಸಿ ಎಕಮಿಯು ಸಾಧಿಸಿದ ಪ್ರಗತಿಯನ್ನು ವಿವರಿಸಿದರು.

ಡಾ|| ಮೊಕಾಶಿಯವರು ಮೂತನವುತ್ತಾ ವಿದ್ಯಾರ್ಥಿಗಳು ಪಠ್ಯಪುಸ್ತಕಗಳ ಜೊತೆಗೆ ಸಾಮಾನ್ಯ ಜ್ಞಾನವನ್ನು ಗಳಿಸಲು ಪ್ರಯತ್ನಿಸಬೇಕೆಂದು ಹೇಳಿದರು. ಅಲ್ಲದೆ ಈ ಕಾನೂನುಗಳ ಅವಶ್ಯಕತೆಯು ನಮ್ಮ ಮೂಲಭೂತ ಹಕ್ಕುಗಳಿಗಾಗಿ ಹೋರಾಡಿದ ಫಲವಾಗಿದೆ ಎಂದರು.

ಸಂಜೆ ಕಾಲೇಜಿನ ಸಭಾಂಗಣದಲ್ಲಿ ಸಾಮಾಜಿಕ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯಿತು. ಸಭೆಯಲ್ಲಿ ಸುಮಾರು ಇಪ್ಪತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಡಾ|| ಮೊಕಾಶಿಯವರು ಚರ್ಚೆಯ ಅಧ್ಯಕ್ಷತೆ ವಹಿಸಿದ್ದರು. ಚರ್ಚೆಯ ವಿಷಯ 'ಸಮಾಜದಲ್ಲಿ ಸ್ತ್ರೀಯರ ಸ್ಥಾನ' ಎಂಬುದಾಗಿತ್ತು.

ಕೊನೆಯಲ್ಲಿ ಕಾರ್ಯದರ್ಶಿ, ಶ್ರೀ ಕೆ. ಚಿನ್ನಪ್ಪಸ್ವಸರಿಂದ ಧನ್ಯವಾದ ಸಮರ್ಪಣೆ ಯಾಯಿತು.

"ಅವನ 'ಗ್ರೋಸ್' ಇನ್‌ಕಂ ಎಷ್ಟಿರ ಬಹುದು?...."

"ಇವನ್ಗಿಲ್ಲಿಬು 'ಗ್ರೋಸ್' ಇನ್‌ಕಂ!...ಇದ್ದರೆ 'ನೆಟ್' ಇನ್‌ಕಂ ಮಾತ್ರ ...ಅವನ್ಗೋ ನೆಟ್ ನೊಗವೀಗ..."

ಏರಿಸು ಗುಡೀ— ಜೈ ಹಿಂದ್ ನುಡೀ

ಏರಿಸು, ಹಾರಿಸು, ತೋರಿಸು ವಿಶ್ವಕೆ—
ಭಾರತದಾ ಸ್ವಾತಂತ್ರ್ಯಕ್ಕ ಗುಡೀ; |
ಬಾರಿಸು ಭೇರಿ, ನಗಾರಿ ಎಗಂಭಕೆ —
ಸಾರುವಂತೆ ಕೈಯೆರಿ ಹಿ ಡೀ ||ಏರಿಸು||

ಹಕ್ಕಿಗಳಿರಲೀ, ಕಕ್ಷಿಗಳಿರಲೀ —
ದಕ್ಕಿರಿಯುವ ರಾಷ್ಟ್ರದ ಕಡೆಗೇ; |
ಹಸ್ಸಕರಿಹರಿತ್ತಿಕ್ಕ ಸುತ್ತಲಲಿ—
ಭಕ್ಷಕರಿಗೆ ಜಿಗಿವಂತೆ, ಮಿಗೆ. ||ಏರಿಸು.||

ಭಾಷಾವಾರೂ, 'ರೇಷನ್' ದೂರೂ—
ದ್ವೇಷಮತಿ, ಮತಗಳು ಬಿಟ್ಟ; |
ದೇಶಿಯರು ಭಾವೈಕ್ಯದೊಳಿಲ್ಲೂರೂ —
ಭೀಷಣ ಪಣದಿಂದಡಿಯಿಟ್ಟು. ||ಏರಿಸು.||

ಸರಕಾರವು ತೆರೆಗಳ ತೆರವೆಂದೇ—
ಬರುವಧಿಕಾರಿಗಳೆಣಿಗಲಿ; |
ಭರತ ಭೂಮಿಯೂರೆಯುಸಿರೊಂದೇ—
ಚರಸ್ಥಿರವಿರಲೆಮ್ಮೊ ಧಮನಿಗಳಲಿ|| ||ಏರಿಸು||

ಮಾನವತೆಯೇ ಪ್ರಜರಾ ಸ್ಥಗತ ಬಧ—
ಮಾಣದು ಸ್ವಾರ್ಥ ವ್ಯಗ್ರಯ. ಸುತ್ತ; |
ಧೀನ—ಧನಿಕ, ದಲಿತರಿಗೂ ಭಾರತ—
ದಾ ನೆಲವಿತಿಗತ; ತಿಳಿವಿಧಿದ ||ಏರಿಸು||

ಸಿಕ್ಖ, ಕ್ರೈಸ್ತ, ಮುಸಲ್ಮಾನ ಪಾರಸೀ—
ಮಿಕ್ಕ ಮ್ಮಾಜಿನ, ಹಿಂದೂ, ಬ ದ್ಧರೂ |
ಅಕ್ಕರೆಯಿಂದೊಕ್ಕೂರಲಿ ಘೋಷಿಸಿ—
ದಿಕ್ಕೆಂಟಿಡೆಗಳೊಳಿಗಮಲಿ ಪೊಗರು ||ಏರಿಸು.||

ಇಪ್ಪತ್ತರ ಸ್ವಾತಂತ್ರ್ಯೋತ್ಸವ ಪುರು—
ಕೊಪ್ಪಾಗಿರುವಂತೆಮ್ಮ ಗುಡೀ, |
'ಬಾಪು', ನೆಹರು, ಸರದಾರ, ಶಾಸ್ತ್ರಿ ,
ಯರು ಅಪ್ಪಲಿ ಸ್ವರ್ಗದಿಃ 'ಜೈ ಹಿಂದ್' ನುಡೀ. ||ಏರಿಸು.||

—ಯಂ. ಕೆ. ಹರಿದಾಸ್,
ಮಂಜೇಶ್ವರ
(ವಿಶೇಷ ಸಂಚಿಕೆಗೆ ಬಂದುದು)

ದನದ ಮಂದೆಗೆ ಒಂದ ಹೊಸ ವ್ಯಾಜೆ ಹೋದಪೆ ಆ ಮಂಜೆ ಬೇಗನೆ ಓಡಿಸಿ ನಿಡುವುದು. ಅದು ಅಲ್ಲಿಯದೇ ಒಂದು ಹಸುವಾದರೆ ಇತರ ದನಗಳು ಅದರ ಜೀವನನ್ನು ನೆಕ್ಕಿ ಸ್ನೇಹ ತೋರಿಸುವವು. ಅದುಂತೆಯೇ ಒಬ್ಬ ಭಕ್ತ ಬಸ್ಸೊಬ್ಬ ಭಕ್ತನನ್ನು ಸಂಧಿಸಿದರೆ ದೇವ ನಿಚಾರವಾಗಿಯೇ ಮಾತನಾಡುವನು, ಅಂತಹ ಸಂಘದಿಂದ ಇಬ್ಬರೂ ಆನ್ಯೋನ್ಯರಾಗಿ ಅನಂದಿಸುವರು. ಬೇರೆಯೊಗಿರುವುದಕ್ಕೆ ಮನಸ್ಸೇ ಬರುವುದಿಲ್ಲ. ಆದರೆ ಹೃಸ್ವಗಾತರೊಂದಿಗೆ ವಿಪರೀತ ದೀರ್ಘರೊಂದಿಗೆ ಬೆರೆಯಲು ಕಷ್ಟವಿಗೆ ಮನಸ್ಸು ಬರುವುದಿಲ್ಲ.

ಕನಕದಾಸ ರಚಿತ

ಹರಿಭಕ್ತಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಜೀವಂಚಲವಾದ ಮನಸ್ಸನ್ನು ಶುಭಗೊಳಿಸುವ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳನ್ನೆಸಗಲು ಕೃತಿರೇಕವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

ರಿಯಂ ಪ್ರತಿಗಳಿಗೆ ವಿಚಾರಿಸಿರಿ:—

ನವಯುಗ ಪೈಸ್, ಉಡುಪಿ.

ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ಟ್ ತಿಂಗಳಾಂತ್ಯಕ್ಕೆ ನವಯುಗದ 46ನೇ ಸಂಪುಟವು ಮುಗಿದು ಸಪ್ಟಂಬರಿಂದ 47ನೇ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಬಾಕಿ ಇರುವ ಚಂದಾದಾರರು ತಮ್ಮ ಚಂದಾಹಣವನ್ನು ಅದಷ್ಟು ಶೀಘ್ರ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ. ಮೆನೇಜರ್

ಅವಳ ಅಂತರ್ಯ

(ಎರಡನೇ ಪುಟದಿಂದ)

ಚಿಣ್ಣನಿಂದ ನೋಡುತ್ತಾ ಬಂದವಳಿಗೆ ಸೆನೆಯು ಅರಂಭಿಸಿದಳು

ಸಮಿಂಗೆ ಮದುವೆಯಾಗಿ ಹದಿನೈದು ವರ್ಷ ಆಯ್ತು. ಕಾವಲಿಯಿಂದ ಹಾರಿ ಒಲೆಗೆ ಬಿದ್ದಂತೆ. ಕುಡುಕ ತಂದೆಯ ಮನೆ ಬಿಟ್ಟು, ಕುಡುಕ ಗಂಡನ ಮನೆಗೆ ಬಂದಳು.

ಮದುವೆಯಾದ ಮೇಲಿನ ಆ ಮೊದಲ ದಿನ ರಾತ್ರಿಯ ನೆನಪು ಬಂದರೆ ಇಂದು ಕೂಡಾ ಅವಳ ಕೂದಲು ನೆಟ್ಟಗೆ ನಿಮಿರುತಿತ್ತು! ಮೈಯೆಲ್ಲಾಗಿನ ರಕ್ತ ಹೆಪ್ಪುಗಟ್ಟುತ್ತಿತ್ತು!

ಹಂಡದಿಂದ ಮತ್ತೇರಿದ ಆಳೆಯ ಗಂಡನಿಗೆ ಅಳೆಯ ಶರೀರ ಕಾಣುತಿತ್ತೇ ಹೊರತು ಆಕೆ ಕಾಣುತ್ತಿರಲಿಲ್ಲ. ಅನಂತರ ಆಂತಹ ಬಲಾತ್ಕಾರದ ಎಷ್ಟು ರಾತ್ರಿಗಳು ಎಷ್ಟು ದಿನಗಳು ಕಳೆದಿದ್ದವೋ....ಅವನ್ನು ಎಣಿಸುವದೂ ಅಳತೆಗೆ ಬೇಕಾಗಿತ್ತು.

ಮನೆ ಬಿಟ್ಟು ಗಂಡನ ಮನ ಸೇರುವ ಸಮಯ —ಅವಳ ತಾಯಿ ಬಹಳ ಜೋಪಾನವಾಗಿ ಇಟ್ಟಿದ್ದ ಅನ್ನ ನಾಲ್ಕಾರು ಚಿನ್ನದ ಗುಂಡುಗಳನ್ನು ಮಗಳ ಮಂಗಳ ಸೂತ್ರದಲ್ಲೇ ಹಾಕಿಟ್ಟು ಕೊಳ್ಳಲು ಕೊಟ್ಟಿದ್ದಳು. ಆದರೆ ಅವೂ ಸಂತೋಷನ ಅಂಗಡಿಯನ್ನು ಸೇರಿದ್ದವು. ಅಂದು ಆಕೆ ಯೋಚಿಸಿದ್ದಳು—

"ಎಷ್ಟು ಕಷ್ಟ ಕೊಡುತ್ತಾನೋ ಕೊಡಲಿ. ನಾನು ತಾಯಿಯಂತಾದರೆ ಸುಖಿಸಿಕ್ಕಿದೇ ಸಿಕ್ಕುತ್ತೆ' ಎಂದು ಕೊಂಡು ಹಾಗೇ ಧೈರ್ಯ ಮಾಡಿಕೊಂಡು ಬದುಕುತ್ತಿದ್ದಳು.

ಪ್ರತೀ ತಿಂಗಳೂ ಆಕೆ ಗರ್ಭದ ನಿರೀಕ್ಷೆಯಲ್ಲಿರುತ್ತಿದ್ದಳು. ತಿಂಗಳು ಕಳೆದು ಹೋದ ಮೇಲೆ ನಿರಾಶ್ಚಾಸಿಯಾಗಿ ದಿನ ಕಳೆಯುವಳು. ಇದೇ ರೀತಿಯಲ್ಲಿ ಆನೇಕ ತಿಂಗಳು ಕಳೆದ ಮೇಲೆ ಅವಳ ಕಣ್ಣುಗಳಲ್ಲಿ ನಿರಾಸೆಯು ಚಿರಸ್ಥಾಯಿಯಾಗಿ ಉಳಿಯಿತು.

ಮಾರಿಯ ಅತ್ಯಾಚಾರ. ದಿನ ಕಳೆದಂತೆ ಹೆಚ್ಚುತ್ತಾ ಬಂದ ಬಡತನ; ಮತ್ತು ಅಯಿಂದ ನಿರಾಸೆ. ಇದರಿಂದಾಗಿ ಆಕೆ ದಿನದಿನವೂ ಕಾಂತಿಗೆಡುತ್ತಿರುವಳು ಆಕೆ ಮೊದಲಿನಂತಾಗಿ ಹಂಬು ಶರೀರವಿಲ್ಲ. ಆಸ್ಥಿಪಂಜರ ಮಾತ್ರ ಉಳಿದಿತ್ತು. ತನ್ನ ದೀಪವನ್ನು ಬಂದು ತಾನೇ ದೀಪಿಸುತ್ತಿದ್ದಳು.

ಒಂದು ದಿನ ಪಕ್ಕದ ಮನೆ ಹೆಂಗಸು ಬಂದು—"ನಿನ್ನ ಬಂಜೆಪಾಪ್ರಜ್ಞೆ ದೂರ ಹೋಗಿಬೇಕಂತೆ ಸಮಿಸಾ!— ನಿನಗೆ ಮಕ್ಕಳೇ ಆಗೋಕೆ ಹಂಗಿದ್ದಿವಂತೆ!'—ಎಂದು ಹೇಳಿದಾಗ ಆಗಳಿದ್ದ ಸ್ವಲ್ಪ ಮಟ್ಟಿನ ಆತ್ಮಸ್ಥೈರ್ಯವೂ ಲುಪ್ತವಾಯಿತು.

ಎಂತೆಂದಿಗೂ ಇಲ್ಲದ ಇರುವ ಗರ್ಭದ ಮೃತ್ಯುವನ್ನು ನೋಳಿ ಆಕೆ ಅತ್ತ ಅಳುಕೇವಲ ಒಬ್ಬ ಸ್ತ್ರೀ ಮಾತ್ರ ಅಳಬಲ್ಲಳು! ಅಂದಿನಿಂದ ಆಕೆಯ ಬದುಕಿನ ಇಚ್ಛೆಯೂ ಸತ್ತುಹೋಯಿತು.

ತವರು ಮನೆಗೆ ಹೋದರೆ ತಾಯಿ —'ಹೋಗಲಮ್ಮ ಹೋಗಲಿ. ಅವನನ್ನ ಬಿಟ್ಟುಬಿಡು. ನೀನಂತೂ ಬದುಕಿಕೊಂಡೇ ಸಾಯುತ್ತಾ ಇದ್ದಿಯೂ — 'ಎನ್ನುತ್ತಿದ್ದಳು.

ಆದರೆ ತಂದೆ ಹೇಳುತ್ತಾ ಇದ್ದ—

'ಎಚ್ಚರಿಕೆ! ಎಷ್ಟು ಒಳ್ಳೆ ಗಂದ ಸಿಕ್ಕಿದ್ದಾನೆ! ಅವನನ್ನು ಬಿಟ್ಟರೆ ತಲೆ ಜಾರು ಮಾಡಿ ಬಿಟ್ಟೀನು...."

ಕೆಲವು ಸಮಯದ ನಂತರ ಸಖೂನ ತಾಯಿಯೂ ತೀರಿ ಕೊಂಡಳು ಇದ್ದ ಒಂದೇ ಒಂದು ಆಶಯ ಪೂರ್ಣಗೆ ತಪ್ಪಿ ಹೋಯಿತು!

"ಅಯ್ಯೋ! ಇಂದು ತನ್ನ ತಾಯಿಯೂ ಇಲ್ಲ. ತವರಿಗೆ ತಾತ್ಕಾಲವೂ ಇಲ್ಲ." ಆ ಕೃಶ ಶರೀರದಿಂದ ಒಮ್ಮೆಗೇ ಮಾತು ಹೊರಬೀಳು—

"ಪಣ್ಯಾತ್ಮ ಸಾಯುವ ಹಾಗಿದ್ದದ್ದರೆ ಮೊದಲೇ ಯಾಕೆ ಸಾಯಲಿಲ್ಲಿ? ಎಂಡನೇ ಮದುವೇನಾದರ್ರ ಮಾಡಿಕೊಳ್ಳಬಹುದಿತ್ತು! ಆದರಿಂದೇನೂ ಸಮ ದೊರೆಯದಿ ಹೋಗಿದ್ದರೂ ಚಿಂತೆ ಇರಲಿಲ್ಲ. ಆದರೂ ಹೊಟ್ಟೆ ಬಂದಾಗುತ್ತಾ ಇರಲಿಲ್ಲ ನನ್ನ ಸ್ವಪ್ನಗಳ ಸಾಮ್ರಾಜ್ಯ ದೂರವಾಗುತಿತ್ತು!"

ಸಖು ಜೋರು ಜೋರಾಗಿ ಅಳತೊಡಗಿದಳು.

ಅವಳು ಅಳುವ ಸದ್ದನ್ನು ಕೇಳಿ ಪಕ್ಕದ ಮನೆಯಲ್ಲೇ ಮಲಗಿದ್ದ ಮುದುಕಿಗೆ ಎಚ್ಚರವಾಯಿತು. ಅವಳು ನಿದ್ದೆಗಣ್ಣಿನಲ್ಲೇ ಎದ್ದು ಗಾಬರಿಗೊಂಡು ಬಂದು ಕೇಳಿದಳು—

"ಏನಾಯ್ತಮ್ಮಾ? ... ಏನು ಸಖೂ ..." ಎಂದು. ಅವಳ ಕಾಲಕ್ಕ ಹಣತಯ ದೀಪವೂ ಕೊನೆಗೂಂದು ಬಾರಿ ತಲೆಯೆತ್ತಿ ಸಖೂನ ಅಂತರ್ಯವನ್ನೊಮ್ಮೆ ದಿಟ್ಟಿಸಿ ನೋಡುವಂತೆ ನೋಡಿ, ಕತ್ತಲೆಯಲ್ಲಿ ಮರೆಯಾಯಿತು!

ಮಹಾತ್ಮರ ವಿವರಣೆ—

ಬೈಗಳು ಎಂದರೇನು?

ಉಪ್ಪರ ಪ್ರದೇಶದವರೊಬ್ಬರು ನನಗೆ ಒಂದು ಪತ್ರ ಬರೆದು, "ಈಗಿನ ದಿನಗಳಲ್ಲಿ ಎಲ್ಲರೂ ಈ ಸರಕಾರವನ್ನು ಕಂಡಾಪಟ್ಟೆ ಬಯ್ಯುತ್ತಿದ್ದಾರೆ— ಇದು ದುಷ್ಟ ಸರಕಾರ ಅನ್ಯಾಯಿಕ ಸರಕಾರ—ಎಂದೆ ಮುಂತಾಗಿ ಹೇಳುತ್ತಿದ್ದಾರೆ. ಇದನ್ನು ನೀವು ಒಪ್ಪುತ್ತೀರೋ, ಹೇಗೆ?" ಎಂದು ಕೇಳಿದ್ದಾರೆ.

ಅಹಿಂಸಾತ್ಮಕ ಆಸಹಕಾರಿಗಳು ಬಯ್ಯಬಾರದು; ಅದು ಅಹಿಂಸಾ ತತ್ವಕ್ಕೆ ವಿರೋಧವಾಗುವುದು. ಆದರೆ, ಬಯ್ಗುಳ ಕೆಂದರೇನು? ಅರ್ಥಕೋಶ ಪ್ರಕಾರ ಬಯ್ಗುಳು (abuse) ಅಂದರೆ ದುರುಪಯೋಗ, ಕುತ್ಸಿತತನ, ವಿತ್ತು ತಿರುವು ಮುರುವು ಆದರೆ, ಒಬ್ಬ ಕಳ್ಳನನ್ನು ಕಳ್ಳ ನೆಂದು ಕರೆದರೆ, ಘಟಿಂಗನನ್ನ ಘಟಿಂಗ ನೆಂದು ಕರೆದರೆ, ಅದು ಬಯ್ಗಾಳಿತನವಲ್ಲ. ಕುಷ್ಠರೋಗಿಯನ್ನು ಕುಷ್ಠರೋಗಿಯೆಂದು ಕರೆದರೆ ಅತನು ಸಿಟ್ಟುಗುವುದಿಲ್ಲ. ಆದ್ದರಿಂದ ಆ ಶಬ್ದವು ದೂರಿಗೆ ಉಪಯೋಗಿಸಲ್ಪಟ್ಟಿದೆಯೋ ಆವುಗೆ ಅದು ಸರಿಹೋಗುತ್ತದೆಂಬುದನ್ನು ಸಿದ್ಧಮಾಡಿ ತೋರಿಸುವಂತಿರಬೇಕು. ಆದ್ದರಿಂದ ಅಂತಹ ಖಂಡನೆಯ ಶಬ್ದಗಳ ಪ್ರಯೋಗವನ್ನು ನಾನು ನಿಷೇಧಿಸಲಾರೆನು. ಮತ್ತು ಅವುಗಳು ಹಿಂಸಾತ್ಮಕವೆಂದೂ ನಾನು ಹೇಳಲಾರೆನು.

ಮನುಷ್ಯರನ್ನು ಅವರ ದುರ್ಗುಣಗಳಿಂದ ದೂರಮಾಡಲಿಕ್ಕಾಗಿ, ಹಾಗೂ ಅಂತಹ ದುರ್ಜನರಿಂದ ದೂರವಿರುವಂತೆ ಜನರಲ್ಲಿ ಎಚ್ಚರಿಕೆ ಹುಟ್ಟಿಸುವುದಕ್ಕಾಗಿ ಅಂತಹ ಶಬ್ದಗಳನ್ನು ಬಳಸಬಹುದು.

ಹಿಂದೂ ಶಾಸ್ತ್ರದಲ್ಲಿ ದುರ್ಜನರನ್ನು ಶಪಿಸುವ ಹಾಗೂ ಅವರಿಂದ ದೂರವಿರುವಂತೆ ಎಚ್ಚರಿಸುವುದು ಕಂಡುಬರುತ್ತದೆ. ಕರುಣೆಯ ಮೂರ್ತಿಯಾದ ತುಳಸೀದಾಸರು ರಾವಣನ ಶತ್ರುಗಳನ್ನು ಖಂಡಿಸಲು ಅತ್ಯಗ್ರವಾದ ವಾಕ್ಯಗಳನ್ನು ಬಳಸಿದ್ದಾರೆ; ದುಷ್ಟರ ಬಗ್ಗೆ ಅವರು ಬಳಸಿದ ಶಬ್ದಗಳು ಅವರ ದುರ್ಗುಣಗಳನ್ನತ್ತಿ ತೋರಿಸುವಂತಿವೆ. ಯೇಸು ಕ್ರಿಸ್ತರು ದೇವರ ಹೆಸರಿನಲ್ಲಿ ದುರ್ಜನರನ್ನು ಶಪಿಸುವಾಗ ವಿಷಜಂತುಗಳ ಸಂತಾನ, ಸುಟ್ಟಗಾಳಿ ಕೂಟ, ಮಡಿಯುಟ್ಟ ಮೂರಿಗರು" ಎಂಬ ಶಬ್ದಗಳನ್ನು ಪ್ರಯೋಗಿಸಿದ್ದಾನೆ. ಜಾಗರೂಕತೆ, ಧರ್ಮದ ಹೆಸರಿನಲ್ಲಿ ಬಡ ಅಡಿಗಳ ಕೆಲಸ ಮಾಡುವವರನ್ನು ಖಂಡಿಸಲು ಪುರೋಹಿತರೂ ಉಳಿಸಲಿಲ್ಲ. ಮಿರುಸಾದಿಕ್ಕುಗಳು, (ಖಾರ್ಸಿಗಳ) ಝರಂಡಾಸ್ತ್ರದಲ್ಲಿಯೂ, ಇಂತಹ ಶಬ್ದಗಳು ತಂಬಾ ಬಳಕೆಯಲ್ಲಿವೆ. ಈ ಸಮ್ಪ್ರದಾಯಗಳಿಗೆ ಯಾವ ದುರುದ್ದೇಶವೂ ಇದ್ದಿಲ್ಲ. ದುರ್ಜನರನ್ನು, ದುಷ್ಟ ಸನ್ನಿವೇಶಗಳನ್ನೂ ಇದ್ದಕ್ಕಿದ್ದಂತೆ ಎತ್ತಿತೋರಿಸುವುದೇ ಅವರ ಉದ್ದೇಶವಾಗಿದಿತ್ತು. ಹಾಗೂ ಅಂತಹ ಶಬ್ದಗಳ ಪ್ರಾಮುಖ್ಯತೆ ಜಾಸ್ತಿದು ಒಳ್ಳೆಯದು, ಯಾವುದು ಕೆಟ್ಟದ್ದ ಎಂಬುದನ್ನು ತಿಳಿದುಕೊಳ್ಳುವಂತೆ ಮಾಡುವುದೇ ಅವರ ಹೇತುವಾಗಿದ್ದಿತ.

—ಮೋಕ ಗಾಂಧಿ.

(ಯಂಗ್ ಇಂಡಿಯ ೧೯೨೧-೧೯-೨೧)

ಏಳಿ! ಎದ್ದೇಳಿ!!

ಏಳಿ! ಎದ್ದೇಳಿ!!
ನಿದ್ದೆಗಣ್ಣನು ಕೇಳಿ!
ನಿನ್ದೆಯೆಂಬ ಭೂತವನು ಓಡಿಸುವಣ
ಶ್ರಮಿಸೋಣ ವಿಶ್ರಮಿಸದಿರೋಣ
ಕಾಕಿಯು ಕೊಟ್ಟು ಬಂದೂಕ ಹಿಡಿದು
ಶತ್ರುಗಳನು ಸದ ಬಡಿದು
ನಮ್ಮೂರ ಸ್ವತಂತ್ರ ಕೇರ್ತಿಯ ಮೆರೆಸೋಣ
ನಮ್ಮ ಸ್ವಾತಂತ್ರದ ಸಂಪತ್ತು ಗೂಡುವಣ
ಇದೆ ಗರ್ಜನೆ ಇದೆ ಘೋಷಣೆ
ಇದೆ ನಮ್ಮ ಚಲಿದೆ ಹೊಸ
ಬಲಿದಾನವ ಬೇಡುತಿದೆ
ಭಯವನಿಮಿಂದ
ಕೊಡು ಬಲಿಯನು ಶತ್ರುಗಳ ಕೊಂದ
ಶಕ್ತಿ ಸಾಮರ್ಥ್ಯದಿಂ
ವೀರ ಹೋರಾಟದಿಂದ
ಔದಾಸೀನ ಅಡ್ಡಿ ಆತಂಕ ಬಾರ
ನೋಡಿ ಮಾತಾ ತಾಯ್ನಾಡಿನ ಪತನ
ತಾಳಾ ಬಂಧನ
ಕರ್ತವ್ಯ ಪಥದಿಂದ
ಧೃಡ-ಮನಸ್ಸಿನಿಂದ ದಾಸ್ಯ ವ್ಯವಹಾರ
ಹಾಂಸಿ
ಇಪ್ಪತ್ತನೆಯ ಸ್ವಾತಂತ್ರ ದಿನವನು
ಆಚರಿಸಿ
ಏಳಿ! ಎದ್ದೇಳಿ!!
ನಿದ್ದೆಗಣ್ಣನು ಕೇಳಿ!!

—"ಮಲ್ಲಾರಿ".

ನೇತ್ರಜ್ಞ ದಾ। ಎನ್. ಬಿ. ಶೆಟ್ಟಿಯವರಲ್ಲಿ ನಿಮ್ಮ ದೃಷ್ಟಿದೋಷ ನಿವಾರಣಾರ್ಥ ಮತ್ತು ಅತ್ಯಾಧುನಿಕ ದೃಷ್ಟಿ ಸಾಧಕ
CONTACT LENSಗಳಿಗಾಗಿ ಇಂದೇ ಸಂದರ್ಶಿಸಿರಿ.



Shetty's OPTICS & CONTACT LENS CLINIC
London Qualified Optometrists
ನೇತ್ರ ಪರೀಕ್ಷೆಗಾಗಿ, ದೃಷ್ಟಿದೋಷಗಳ ನಿವಾರಣೆಗಾಗಿ ನುಣ್ಣು Contact Lens ಗಳಿಗಾಗಿ ಅತ್ಯಾಧುನಿಕ ಉಪಕರಣಗಳಿಂದ ಸಜ್ಜುಗೊಳಿಸಿದ ಏಕಮೇವ ಕೇಂದ್ರ,
7 ಈ ಗನ್ ಹೌಸ್ ಸ್ಟ್ರೀಟ್, ಜಾತ್ಯೂಗೇಟ್ ಪೋಸ್ಟ್ ಆಫೀಸಿನ ಎದುರು
ಮುಂಬಯಿ—1

NAVAYUGA 31—8—1967
Registered with the Registrar
of News Papers for India
under No, R. N. 3546/'57

REGD. No. B. G. 176
LICENCE No. 31
Licensed to Post without Prepayment

ವಿನೋದ ವಿಹಾರ

ಮಾನವಕುಲದ ಮರೆವಿನಾಲಾಪ

ಬರೆದವರು : ಶ್ರೀ ಮ. ಗೋ. ರಾವ್.

ಮರೆತೇ ಹೋದೆ "ಐ ಎಮ್ ವೆರಿ ವೆರಿ ಸಾರಿ" ಒಂದು ವರ್ಷದೆ ಹಿಂದೆ ಖರೆದಿಟ್ಟಿದ್ದ 'ಮರೆವು' ಈಗ ನೆನಪಿಗೆ ಬಂದುದು ಯಾರ ಪ್ರಭಾವದಿಂದ ಎಂದು ಬೇರೆ ಕೇಳ ಬೇಡಿ. ಶ್ರೀ ಆ. ರ. ಮಿತ್ರರಿಂಬವರು ಬರೆದಿದ್ದ 'ಆಯ್ಕೋ ಮರೆತೇ' ಎಂಬ ವಿನೋದ ಲೇಖನ ಕಂಡಾಗಲೇ ನೆನವಾದುದು ನಾನೂ ಒಂದು ಬರ್ದಿಟ್ಟಿದೇನೆ ಅಂತ.

ಹೇ ಮರೆವೇ! ನಿನ್ನ ಪ್ರಾರಬ್ಧ...ಅಲ್ಲ ....ಅಲ್ಲ ಪ್ರಭಾವವೇ! ಕೊನೆಗೂ ಫೈಲಿನ ಅಡಿಯಲ್ಲೇ ಅಡಗಿ ಕೊಂಡೆಯಾ? ಶಹ ಭಾಸ್.....ನಿನಗಿದೋ ಇದೇ ಮದ್ದು. ಹೋಗು ಸಂವಾದಕರ ಕೈಗೆ....ಹ್ಞೂಂ....

ಮರೆವೆಂಬುದು ಸರ್ವ ಸಾಮಾನ್ಯವಾಗಿ ಎಲ್ಲರಿಗೂ ಅಂಟಿಕೊಳ್ಳುವ ಒಂದು ಜಾಢ್ಯವೆನ್ನಬಹುದು. ಮರೆವಿನ ಮೂಲ ಜಾತಕ ಫಲ ನೋಡಿದಾದ ಸೋಮೂರಿತನ ಆದಿಯಲ್ಲಿರುವುದು ಕಾಣಬೆಳುತ್ತದೆ. ಮರೆವಿನಿಂದ ಸರ್ವ ನಾಶವಾದುವ ಸಂಭವ ವಿದೆ. ವ್ಯವಹಾರದಲ್ಲೂ ಮರೆವಿನ ಪ್ರಭಾವದಿಂದ ದುಷ್ಪರಿಣಾಮಗಳಾಗುವುದಿದೆ. ಆದರೂ ಮರೆವೆಂಬುದು ನವೆ್ಲಲ್ಲರಲ್ಲಿ ನ್ನಾ ಧಾವಿಕವಾಗಿ ಹೋಗಿದೆ. ಅದೊಂದು ಮಹಾ ಕಾಯ್ಕ!

ಮೊನ್ನೆ ಮೊನ್ನೆ ನನ್ನ ಮಿತ್ರವರ್ಯರೊಬ್ಬರು ಕಾಣಸಿಕ್ಕಿ ಮತ್ತು ಹೇಳಿದರು "ನಿಮಗೆ ನಾನು ನಾಳೆದ್ದು ಭಾನುವಾರ ಅಪರಾಹ್ನ ಎರಡು ಗಂಟೆಗೆ ಸರಿಯಾಗಿ ಕಲ್ಪನದ ಹತ್ತಿರ ಕಾದಿರುತ್ತೇನೆ. ನೀವು ಅನತ್ಯ ಅಲ್ಲಿಗೆ....."

Oh! yes. ಖಂಡಿತ ಭೇಟಿಯಾಗುವೆ ಎಂದೆ ನಾನು. ಮಿತ್ರನ ಆಗ್ರಹದ ಕೋರಿಕೆಯನ್ನು ಈಡೇರಿಸಲೋಸುಗ, ಭಾನುವಾರ ಮಧ್ಯಾಹ್ನ ಕಲ್ಪನಕ್ಕೆ ಧಾವಿಸಿದೆ. ಬಾಯೂರಿಕೆ ಏರುಹರಲು ಡಯೂನದ ಪುರಿ ಹೊಕ್ಕೆ. ಎರಡು ಗಂಟೆಗೆ ಬರುವೆನೆಂದಿದ್ದ ಅಸಾಮಿ ಗಂಟೆ ೫ ಹೊಡೆದರು ಪತ್ತೆ. ಏನೇನೋ ಧಾವಿಸುತ್ತ ನಾಲ್ಕು ಚಕ್ರದ ಯಂತ್ರ ಬಂಡಿಗೆ ಧರ್ಮಸ್ಥ ವ್ಯಾಲ್ಯ ಕೆತ್ತ ಸ್ವಸ್ಥಾನ ಕಲುಪಿದೆ.

ಮತ್ತೊಂದು ಸಂಜೆ ಗೆಳೆಯರಾಯನ ಭೇಟಿ ಹರಾತ್ಮನೆ ರಥಬೀದಿಯ ಕನಕ ಕಂಡಿಯ ಬಳಿಯಲ್ಲೇ ಆಯಿತು.

"ಏನ್ರೀ... ಮೊನ್ನೆ ಕಾಣಸಿಗೇ ನನ್ನನ್ನು ಬರಲು..."

ಅರ್ಧದಲ್ಲಿ ನನ್ನ ಮಾತಿಗೆ ಬ್ರೇಕ್ ಹಾಕಿ 'Excuse me' ಅಂದ ನನ್ನ ವಿ.ತೆಲ್ಲ್ರ ಶ್ರೇಷ್ಠಮ. ನಾನು 'ಅಸಹಾಯ ಶೂರನ್' ಗೆ ಹೋಗಿದ್ದೆ. Very sorry. ಮರೆತೆ. ಅಂದ. "ಅಸಹಾಯ ಶೂರನ್... ಹ್ಞೆಹ್ಞೆ ಹ್ಞೆ.... ನೀನು ಮಹಾ ಮರೆಯುವ ಪೇರನ್" ಎಂದು ಅಣಕವಾಡಿದೆ.

ಮರೆವಿಗೆ ಕಾರಣ ಮನಸ್ಸಿನ ಸೋಮೂರಿತನ. ಮನಸ್ಸು ಜಾಗೃತಾವಸ್ಥೆಯಲ್ಲಿದ್ದರೆ ಮರೆವೆಂಬುದು ಹತ್ತಿರ ಸುಳಿಯದು. ಸೋಮೂರಿ ವ್ಯಕ್ತಿಗೆ ಮರೆವೆಂಬ ರೋಗ ಹಪ್ಪುವುದಿಲ್ಲ.

ನಮ್ಮ ನೆರೆಕರೆಯಾತನೋರ್ವ ಇಂಟರ್‌ವ್ಯೂಗೆ ಹೋಗಿದ್ದ. ಪರೀಕ್ಷಕರ ಅಜ್ಞಾನ.ನಾರಿ, ವಿದ್ಯಾರ್ಹತೆಯ ಯೋಗ್ಯತಾಪತ್ರಗಳನ್ನು ನುಂಡಿಸಲು ಆರ್ಥಬಿಸಿದಾಗ ಜೇಬೆಲ್ಲ ಅರಸುತ್ತ ವಿಫಲನಾಗಿ "ಮರೆತುಬಿಟ್ಟು ಬಂದೆ ಸಾರ್" ಎಂದನಂತೆ.

ಆತ ಅಫೀಸರು "ಒಂದು ಸರ್ಟಿಫಿಕೇಟು ತರಲು ಮರೆತ ನೀನು ಇನ್ಯಾವುದನ್ನು ಮರೆಯಲಿಕ್ಕಿಲ್ಲ" ಎಂದರಂತೆ.

ನಾನು....ಹಾಗೆಲ್ಲ....ಮರೆವು....

ಹಾಗೂ ಅಲ್ಲ...ಹೀಗೂ ಅಲ್ಲ, I will see. Yes. You may go. ಅನ್ನುತ್ತ ಟೇಬಲಿಗೆ ಗುದ್ದಿದರಂತೆ ಪಾಪ ... ಆತನ ಮರೆವು ಉದ್ಯೋಗಕ್ಕೂ ಕೊಡಕು ಇತ್ತಿತು.

ಮರೆವಿಗೆ ಮದ್ದೇ ಇಲ್ಲವೆಂದು ತಿಳಿದಿದೆ ನಮ್ಮ ಸಮೂಹ. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಈ ರೋಗ ಜಾಸ್ತಿಯಾಗಿ ಅಂಟಿಕೊಂಡಿರುತ್ತದೆ. ಪರೀಕ್ಷಾ ಸಮಯದಲ್ಲಂತೂ ತಲೆಬಿಸಿಯಾಗಿರುತ್ತದೆ. ತಲೆಯೊಳಗೆ ಹಲವಾರು ವಿಷಯಗಳು ಹೊಕ್ಕು ಒಳಗೆ 'ಗಿರಗಿಟೆ' ತಿರುಗುತ್ತಿರುತ್ತದೆ. ಇದರಿಂದ ಆವಶ್ಯಕ ವಸ್ತುಗಳೆಡೆ ಮನಹರಿಯುವುದು ಸ್ವಲ್ಪ ಕಷ್ಟವೇ ಸರಿ. ಪರೀಕ್ಷಾ ಕೋಣೆಯಲ್ಲಿ ಪರಿಸ್ಥಿತಿ ಗಂಡಾಂತರ. ಕೆಲವರ ಹತ್ತಿರ ಪೆನ್ನಿಲ್ಲ. ಪೆನ್ನಿದ್ದವರಲ್ಲಿ ಇಂಕಿಲ್ಲ. ಹೀಗೇನಾಯಿತು? ಕೇಳಿದರೆ ನಿಗುರ ಉತ್ತರ "ಮರ್ತೇ ಬಿಟ್ಟೆ".

ಈ ಮರೆವೆಂಬುದು ಬಹು ಆನಾದಿಯಿಂದಲೂ ಬಂದ ಶಾಪ. ಇದಕ್ಕೆ ತುತ್ತಾಗದ ಜನ ಬಹಳ ಕಡಿಮೆ. ಕೆಲವರಂತೂ ಮರೆವಿನ ಆಪ್ತ ಮಿತ್ರರಾಗಿ ಬಿಡುತ್ತಾರೆ. ಆದನ್ನೆಲ್ಲ ತಿಳಿದೇ ಭಕ್ತಾಗ್ರಣಿ ಪುರಂದರದಾಸರು ಹಾಡಿದ್ದ "ಮರೆಯ ಬೇಡ ಮನವೆ ನೀನು ಹರಿಯ ಸ್ಮರಣೆ ಯಾ' 'ಮರೆಯದೆಲೆ ಭಜಿಸಿ ಬದುಕೆಲೆ ಮಾನವಾ" ಇತ್ಯಾದಿ, ಇತ್ಯಾದಿ.

ಅಂದ್ರೆ ಈಗೀಗ ನಮ್ಮ ದೇವರ ಧ್ಯಾನ ನೆನಪಿಗೆ ಬರುವುದೇ ಬಹಳ ಅಪರೂಪ ಹಾದು. ನಮಗೆ ಬೇರೆ ಹಲವಾರು ಧ್ಯಾನಗಳೊಂದಾಗ ಈ ಧ್ಯಾನ ಹೇಗೆ ನೆನಪಿಗೆ ಬರಬೇಕು. "ಧ್ಯಾನ ಒಂದೇ ನಾಲದೆ ಗೋವಿಂದನ" ಎಂದು ಅದೊಂದು ಕಾಲದಲ್ಲಿ ಜನ ಹೇಳುತ್ತಿದ್ದರೆ ಆ ಗೋವಿಂದನ ಧ್ಯಾನ ಮಾಡಿದರೆ ಏನು ಸಿಕ್ಕೀತು? ಏನು ಉದ್ಧಾರವಾದೀತು? ಅಂಥವನೊಬ್ಬನಿದ್ದಾನೋ? ಅದಕ್ಕಿಂತ ಕಂಟ್ರಾಕ್ಟು ಪ್ಲಾನು ಮಾಡಿದರೆ ಏನಾದರೂ ದಕ್ಕೀತು ಎಂದು ಹೇಳುವವರೇ ಹೆಚ್ಚಾಗಿದೆ ಈ ಸಮಾಜದಲ್ಲಿ.

ಓ.....ನಾರಿ, ನಾನು ನನ್ನ ಟಾಪಿಕ್ಕ (Topic)ನ್ನೆ ಮರೆತು ಬೇರೆ ವಿಷಯಕ್ಕೆ ಹೋದೆ. Sorry.

ಕೆಲವೊಮ್ಮೆ ಮರೆವು ಕರ್ತವ್ಯಕ್ಕು ಅಡ್ಡ ಬರುತ್ತದೆ. ರೋಗಿಯನ್ನು ಕಾಣ ಹೊರಟ ವೈದ್ಯ ಮದ್ದಿನ ಚಿಟ್ಟನ್ನು ಬಿಟ್ಟು ಹೋದವರೂ ಇದ್ದಾರೆ. ದೊಡ್ಡ ದೊಡ್ಡ ಭೋಜನಗಳ ಅಡುಗೆಗಳಲ್ಲಿ 'ಪಾಕ ಶಾಸ್ತ್ರ' ಉಪ್ಪು ಹಾಕಲು ಮರೆತದ್ದು ಎಷ್ಟೋ ಕಡೆಗಳಲ್ಲಿವೆ. ಹೋಟೇಲುಗಳಲ್ಲಿ ಸಕ್ಕೆ ಹಾಕದೆ ಕಾಫಿ ಕೊಡುವುದು ಅದೊಂದು Simple ಮರೆವು ಅನ್ನೋಣ.

ಮಳೆಗಾಲದಲ್ಲಿ ಛತ್ರಿ ಹೋಟೇಲಲ್ಲೋ, ಅಂಗಡಿಯಲ್ಲೋ, ಅಥವಾ ಎಲ್ಲೋ ಬಿಟ್ಟು ಬರುವುದೂ ಒಂದು ವಿಧದ ಮರೆವೇ. ಅಂಥ ಅದನ್ನು 'Wonderful ಮರೆವು' ಅನ್ಕೋಣವೇ? ಅಥವಾ 'ಲುಕ್ಸಾನ್ ಮರೆವು' ಎಂದು ಕರೆಯೋಣ.

ಸೆಮೂರಂಭಗಳಿಗೆ ಇನ್ವೈಟು ಮಾಡಿದ್ರೂ ಹೋಗದೆ ಇರುವುದೂ ಒಂದು ಜಾತಿ ಮರೆವೇ ಆಗಿತ್ತೆನ್ನಿ. ಅದಾವ ಜಾತಿ ಎಂದು ಕೇಳುವಿರೋ? ಸರಿ. ಅದು 'ಪ್ಲಾನ್ಡ್ ಮರೆವು' ಅಂದರೊಪ್ಪುತ್ತೆ. ಏಕೆಂದ್ರೆ ಸೆಮೂರಂಭಕ್ಕೆ ಹೋಗಲಿಕ್ಕೆ ಇಷ್ಟ ಇಲ್ಲದಿದ್ದರೂ ಮರೆವನ್ನು ಇದಿರಿಗಿಟ್ಟು ಜಾರಿಕೊಳ್ಳಬಹುದು.

ಜಾಡ್ಯರಹಿತ ಜೀವನ ನಿರ್ವಹಣೆಗೆ ಮರೆವೆಂಬ ಸೂಜಿಯನ್ನು ನೊಂದಿರಬೇಕು. ಈ ಮರೆವಿನಿಂದ ಪರಮಾರ್ಥದಲ್ಲೂ, ವ್ಯವಹಾರದಲ್ಲೂ ಧಾನಿಯೇ. ಆದ್ರಿಂದ ಮರೆವೆಂಬ ಮಾರ್ಕಟನನ್ನು ದೂರಕ್ಕೋಡಿಸುವದೇ ಒಳಿತಲ್ಲವೇ?

ನಗೆ ಬಿಂದು

"ಅಪ್ಪಾ! ನನಗೆಂದು ಚೆಂಡೆ ಖರೀದಿಸಬೇಕು...."

"ಬೇಡ...ಅದನ್ನು ಒಡಿಕೊಂಡು ಇಲ್ಲೆಲ್ಲಾ ಗಲಾಟೆಯೆಬ್ಬಿಸುವೆ...."

"ಇಲ್ಲಪ್ಪಾ! ನೀವು ನಿದ್ರಿಸುತ್ತಿರುವಾಗ ಮಾತ್ರವೇ ಧಾನದರೊಂದಿಗೆ ಆಡುವುದು ...."

o o o

"ನಮ್ಮ ಕಾರು ನಿನ್ನೆ ರಾತ್ರಿ ಕಳವಾಗಿದೆ....ಯಾರೋ ಓಡಿಸಿಕೊಂಡು ಹೋದರು...."

"ನಾನು 'ನೆಕ್ಸಾಂಡ್ ಹೋ' ನಿನಿಮಾ ಬಿಟ್ಟು ಬರುವಾಗ ನಿಮ್ಮದೇ ಕಾರು ಓಡುತ್ತಿದ್ದುದನ್ನು ಕಂಡೆ..."

"ಯಾರು ಓಡಿಸುತ್ತಿದ್ದುದೆಂದು ಗೊತ್ತಾದರೆ ದೊಡ್ಡ ಉಪಕಾರ..."

"ಅದು ತಿಳಿಯಲು ಇನ್ನು ಸುಲಭ. ಕಾರಿನ ನಂಬರ್ ನಾನು ನೋಟು ಮಾಡಿಕೊಂಡಿದ್ದೇನೆ..."

—ಎಚ್. ಎಂ. ವಿಜಯ ನಾರಾಯಣ, ಪೆರಡಾಲ.

ವಿದ್ವಾನ್ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ —

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗುವುದಾದ 75 ಇಂಗ್ಲಿಷ್ ಪತ್ರಗಳು

ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟರಾವ್ ವಿರಚಿತ

ಮನೆ - ಮದ್ದು

ನೂರಾರು ಕಾಯಿಲೆಗಳಿಗೆ ಮನೆಯಲ್ಲೆ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹಪೈದ್ಯ.

ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

Table of Contents

Introduction 1

Chapter 1 5

Chapter 2 12

Chapter 3 20

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

7--9--1967

೨೦
ಪೈಸೆ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

7—9—1967

೧೦ ಪೈಸೆ

ಸಣ್ಣ ಕಥೆ

ಆಧುನಿಕ ಶಾಕುಂತಳಾ

ಕಥೆಗಾರರು:
ಶ್ರೀ ಎಚ್. ಎಂ. ನಾರಾಯಣ ಭಟ್.

ಸಾಮ್ಯವಾದಿಗಳ ಜರಿಪತ್ತಿನಲ್ಲಿ ಭಾಗ ವಹಿಸಲಿಕ್ಕಾಗಿ ಮಂಗಳೂರಿನಿಂದ ಕಲ್ಲಿ ಕೋಟೆಗೆ ಎಕ್ಸ್‌ಪ್ರೆಸ್ ಗಾಡಿಯ ಮೂರ ನೇ ತರಗತಿಯ ಗೂಡಿನಲ್ಲಿ .ಪ್ರಯಾಣ ಮಾಡುತ್ತಿದ್ದ ಓರ್ವ ಸಹಿತ ನಾಲ್ವರು ಕಾಲಯಾಪಣಕ್ಕಾಗಿ ವಿನೋದದಲ್ಲಿ 'ಚೀಟಾಟ'ಕ್ಕಾರಂಭಿಸಿದರು. ಆಟದೆಡೆಯಲ್ಲಿ ಕಣ್ಣಾನೂರಿನಲ್ಲಿ 'ಜೂಡುಳ್ಳ ಚಾಳು' (ಬಿಸಿ ಚಾ) ತುಡಿಯುತ್ತಾ ಕಾಳಿದಾಸನ "ಶಾಕುಂತಲಾ" ನಾಟಕವನ್ನು ವಿಮರ್ಶಿಸುವ ಸಾಹಸಕ್ಕೆ ಕೈಹಾಕಿದರು. ಈ ಪೈಕಿ ಒಬ್ಬರು ಪತ್ರಿಕಾ ಪ್ರತಿನಿಧಿ! ಉಳಿದ್ದು ನಿಃಕೃಷ್ಟರು ಶ್ರಮ ಜೀವಿಗಳು. ಇವರ ಸಂಭಾಷಣೆಯು ಹೊಸದೊಂದು ನಾಟಕಕ್ಕೆ ಪ್ರೇರಕ ಮತ್ತು ವೈಜ್ಞಾನಿಕವಾಗಬಹುದು. ಆಟದ ನಡುವೆ ಆಗಾಗ ಸಿನಿಮಾ ಹಾಡುಗಳನ್ನು ಹಾಡುತ್ತಿದ್ದ ಸಾಮ್ಯವಾದಿಗಳನ್ನು ಪತ್ರಿಕೋದ್ಯಮಿ ಪ್ರಶ್ನಿಸಿದ:—

"ಯಾವುದಾದರೂ ಸಿನಿಮಾ ಇಲ್ಲವೆ ನಾಟಕ ಕಂಪೆನಿಯಲ್ಲಿದ್ದಿರಾ?"

"ನಮ್ಮದೊಂದು ಸ್ವಂತ 'ಕಲಾಫಲಯ'ವಿದೆ.... ಪಕ್ಕದಲ್ಲೇ ಸಿನಿಮಾ ಕಂಪೆನಿಯೂ..."

"ನಿಮ್ಮ ಕಲಾಫಲಯದ ಹೆಸರು?'

"ಉದಯ ಭಾಸ್ಕರ ಕಲಾಫಲಯ'

'ಓಯೋ! ಈಡ ಯೂವ ಪ್ರದರ್ಶನಕ್ಕೆ ಸಿದ್ಧತೆ ಮಾಡುತ್ತಿರುವಿರಿ?'

"ಜೆವನೆ ಭಾಗ್ಯ... ನಾಟಕವನ್ನು ಪ್ರದರ್ಶಿಸಿದಲ್ಲೆಲ್ಲಾ ಅಭಿನಂದನೆಗಳ ಸುರಿಮಳೆ...'

"ನಾಟಕ ಬರೆದವರು?..."

"ಇವರೇ, ಹೆಯುವದನ ರಾವ್...."

'ಸರಿ; ಒಮ್ಮೆ ನಮ್ಮ ಪತ್ರಿಕೆಯಲ್ಲಿಯೂ ಜಲೋದಾಗಿ ವಿಮರ್ಶೆಯೂದ ನೆನಪಾಗುತ್ತದೆ....'

"ನಿಮ್ಮ ಪತ್ರಿಕೆ?...'

"....."

'ಗೂತ್ತಾಯ್ತು ಬಿಡಿ ..ನಮಸ್ಕಾರ...'

"ನಮಸ್ಕಾರ...."

ಯಾಕೀಗಿಲೆ ನೀವು ಪತ್ರಿಕೆಯ ಸಂಪಾದಕರೆಯೇ ನಾಟಕ ಓದುತ್ತಿದ್ದಿರೇನೋ? ತೊಂದರೆ ಮಾಡಿದಂತಾಯ್ತು ..ನಮ್ಮ ಟಿಟ್—ಟಿಟದ ಸುದ್ದಿಯೂ ನಾಳೆ ಪೇಪರಿನಲ್ಲಿ ಬರುವುದೋ ಏನೋ!'

"ಇಲ್ಲಾಗೇನೂ ಇಲ್ಲ...ವಿನೋದಕ್ಕಾಗಿಯೇ ನಾಟಕ ಓದುತ್ತಿದ್ದೇನೆ."

"ಯಾವ ನಾಟಕವದು?"

"ಶಾಕುಂತಲಾ....ಬಹಳ ಹಳೆಯ ನಾಟಕ...'

"ಬಿಡಿ, ಸಾರ್! ಅದು ಬರೆದವ ಯಾರೋ ಉತ್ತರ ದೇಶದವ ಆತನೇ ಕನ್ನಡಿಗನಂತೂ ಅಲ್ಲ...!"

'ನಾಟ್ಯೇರು ನಾಟಕಂ ರಮ್ಯಂ...ಬರೆದವರೆಂಬುದಷ್ಟಿಂತಲೂ ವಿಷಯ ಬಲ್ಲ ಮನೆಂಬುದೇ ಮುಖ್ಯ...."

"ಶ್ರಮಿಸಿ ಬೆವರು ಸುರಿಸುವ ಜೀವ ಕೋಟಿಗಳ ಹಿತ ಸಾಧನೆಗಾಗಿ ವಾದಿಸುವ ನಾಟಕವದೇನು?"—ಶ್ರೀ

"ಕಾಳಿದಾಸನು ಈಗಿನ ಕಾಲದವನಲ್ಲ. ಅಂದಿನ ರಾಜಕೀಯ ಈಗಿನ ಹಾಗಿರಲಿಲ್ಲ.'

'ಎಂದರೆ ಆಗಿನದು ಹಳಸಿದ ರಾಜಕೀಯವಾಗಿದ್ದಿರಬೇಕು....'

'ಕಾಳಿದಾಸನು ಪ್ರಖ್ಯಾತ ಸರಸ ಕವಿ ಮತ್ತು ನಾಟಕ ಬ್ರಹ್ಮ..."

"ಆಲ್ಲ, ಸಾರ್! ಈಗಿನ ಕವಿಗಳೂ,ಕಾದಂಬರಿಗಾರರೂ, ಕಥೆಗಾರರೂ ರಾಜಕೀಯ ಧುರೀಣರಾ ತಾಳಿದಾಸ ಕಾಣದುದನ್ನೂ ಕಂಡವರಲ್ಲವೆ?"

"ಏನಿದ್ದರೂ ಹೊಸದು ಪಾತ್ರವೇ ಹೊನ್ನು; ಹಳೆಯದು ಹೊಲಸು ಎನ್ನಬರುವುದಿಲ್ಲ.'

"ಹೋಗ್ಲಿ, ಸಾರ್! ಶ್ರಮಜೀವಿಗಳಿಗೆ 'ಒಳ್ಳೆಯ ದಿನ' ಎಂದಾದರೂ ಬರುವುದೆಂದಾದರೂ ಆ ಕವಿ ಕಂಡಿದ್ದನೆ?..."

"ಇದ್ದೇ ಇದ್ದಾನೆ.... ನಿತ್ಯ ಜೀವನದ ಹಲವು ಸಮಸ್ಯೆಗಳನ್ನೂ ಅತಿ ಹೃದಯಂಗಮವಾಗಿ ಚಿತ್ರಿಸಿದ್ದಾನೆ..."

"ಹಾಗಾದರೆ ಆ ಕಥಾವಸ್ತುವೇನು? ಹೇಳಿ, ಸಾರ್!...."

"ದುಷ್ಯಂತನೆಂಬ ರಾಜನು ಕಾಡಿನಲ್ಲಿ ಬೇಟೆಯಾಡಲು ಹೋದನು....'

"ನೋಡಿದಿರಾ? ನ್ಯಾರಂಭದಲ್ಲೇ ರಾಜನ ಪ್ರಸ್ತಾಪ ಬಂತಲ್ಲಾ!....ರಾಜರ ದರ್ಬಾರಿನ ಕಾಲ ಕಳೆಯುಲಿಲ್ಲವೇ? ಇಂದು ರಾಜರು ಇಡೀ ಸಾಮಾನ್ಯರಿಗೆ ಬೇಡದ ವಸ್ತುಗಳು. ಭಾರತದ ಆರುನೂರಕ್ಕೂ ಮಿಕ್ಕ ಆಶ್ರಿತ ರಾಜರುಗಳಿಂದು ಅಧಿಕಾರದ ಹಲ್ಲುಗಳನ್ನು ಕಳಕೊಂಡ ಸರ್ಪಗಳಾಗಿರುವರು. "ಸರ್ವಾಜವಾದೀ ಸಮಾಜ" ದಲ್ಲಿ ಪ್ರತಿಯೊಬ್ಬನೂ ದುಡಿದು ತಿನ್ನಬೇಕಾಗುವ ದಿನ ಹೆಚ್ಚು ದೂರವಿಲ್ಲ...ಜೀವನ ಅನುಭವವಾಗದೆ ಮನುಷ್ಯನು ಪರಿಪೂರ್ಣನಾಗುವುದು ಹೇಗೆ?.....ಇರಲಿ ಅಂತಹ ರಾಜ ಕಾಡಿಗೆ ಬೇಟೆಗೆ ತಾನೇ ಸ್ವಇಚ್ಛಾ ಯೂ ಕೆ ಹೋದ? ಪರಿವಾರ ಕರೇ ಕೊಂದು ತಂದ ಹುಲಿ, ಕರಡಿ, ಹಂದಿ ಗಳ ಬಳಿ ಕೋವಿ ಸಹಿತ ನಿಂತು ಫೋಟೋ ತೆಗೆಸಿ ಪತ್ರಿಕೆಗಳಲ್ಲಿ ಪ್ರಕಟಿಸಬಾರದಿತ್ತೆ? ಹೆಸರು ಮಿನಿನ ಮೂಂಸವ ನೋಲೆ ಆಸಕ್ತಿಯಿದ್ದರೆ ಈಗಿನ ಮುಂತ್ರಿಗಳಂತೆ ದಕ್ಷಿಣ ಅಥವಾ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರವಾಸ ಕಾರ್ಯಕ್ರಮವಿರಿಸಿಕೊಳ್ಳಬಹುದಾಗಿತ್ತು.... ಬೈಸೂರು, ಬೆಂಗಳೂರು ಮಾರ್ಕೆಟ್‌ಗಳಲ್ಲಿಯೇ ಆ ರಾಜನಿಗೆ ಬೇಕಾದ ಮಾಂಸ ಪೂರೈಸಲ್ಪಡುತ್ತಿರಲಿಲ್ಲವೆ?..."

'ರಾಜನು ಕಾಡಿನಲ್ಲಿ ಜಿಂಕೆಯ ಬೆನ್ನ ಟ್ಟಿಕೊಂಡು ಓಡುತ್ತಿರುವಾಗ ಓರ್ವ ಸುಂದರ ಕನ್ಯೆಯನ್ನು ಕಂಡನು... ಕುತೂಹಲ ಗಳ ವಸುಸ್ಸಾಗಿರಬಹುದು....' —ಕತೆ ಮುಂದರಿಯುತ್ತಿದೆ.

'ಹಾಂ,.....ಬಂತು ಅವಳಿಗೆ ಗ್ರಹಚಾರ....ಆಕೆ ಯೂರಾಗಿದ್ದಳೊ! ಶ್ರೀಮಂತ ಕುಟುಂಬಿಯೂದರೆ ಹಿಂದೂ ಕೋಡ್ ಬಿಲ್ಲಿನಿಂದಾಗಿ ರಾಜನಿಗೆ ಸ್ವಲ್ಪ ಉಪಕಾರವಾಗುತ್ತಿತ್ತು.... ಯಾವುದಾದರೂ ಕಂಪೆನಿಯು ಶ್ರಮ ಜೀವಿಯಾಗಿದ್ದರೆ 'ಬೋನಸ್'..."

"ಆಕೆ ಓರ್ವ ಮನೆಯ ಸಾಕು ಮಗಳು...."

"ಏನೆಲ್ಲಾ ಆರಂಭದ್ದ, ಸಾರ್. ಮನೆಗೆ ಸಾಕು ಮಗಳು? ಯಾಕೆ? ಸ್ವಂತ ನಾಡನ್ನೂ ಬೀಡನ್ನೂ ತ್ಯಜಿಸಿ ಕಾಡಿನಲ್ಲಿ ತಪಸ್ಸು ಮಾಡಹೊರಟ ಮುನಿಗೆ ಸುಂದರಿಯರ ಸಾಕುಮಗಳೇಕೆ?'

'ಅದರ ರಹಸ್ಯ ಬೇರೇನಾದರೂ ಇದ್ದಿರಬೇಕು...."—ಬೇರೊಬ್ಬ.

'ಹಾಗೆಲ್ಲಾ ತಪ್ಪುಗ್ರಹಿಕೆ ಆಗಕ್ಕಾಗಲ್ಲ

"ಹೇಗೆ ಸಾರ್ ಹೇಳುವುದು?....

ಸಾಕಿ ಸಾಕಿ ಮತ್ತೆ ಯಾವುದಾದರೂ ಹೋಟೆಲು ಮಾಲಕರಿಗೆ ಒಪ್ಪಿಸಬಾರದೇಕೆ? ಅಂತಹ ಎಷ್ಟು ಅನೈತಿಕ ವ್ಯವಹಾರಗಳ ವರದಿಯೂರಿಲ್ಲ?..."

"ಛೆ, ಛೆ!...."

'ಈಗಿನ ಮೂನಿಗಳೂ ಸನ್ಯಾಸಿಗಳೂ, ದೇವರುಗಳೂ, ದೇಶಭಕ್ತರೂ.... ಅವರ ಚರ್ಯೆಗಳೂ...'

'ಆಲ್ಲ; ಆಕೆ ಬೇರೊಬ್ಬ ತಪಸ್ವಿಗೆ ಅಪ್ಸರೆಯಲ್ಲಿ ಹುಟ್ಟಿದ ಮಗಳಾಗಿದ್ದಳು..'

'ಛೇಷ್!....ನುನಿಯು ಜೋಂಗಿ ಮಾರದಾ ಬಾಂದ್!....ಮಾಂಫಿಗೂ 'ಲವ್ ಇನ್ ಇಂಡಿಯಾ' ಎಂದಾದರೆ? ರಕ್ಕು ಭೈಯಾಗಿ.....ಕಸಟ ಸನ್ಯಾಸಿ..... ಹೂಂ....ಹೇಳಿ, ಸಾರ್!?

"ಮುನಿಗಳೂ ಮನುಷ್ಯರು..."

"ಹಾಗಾದರೆ, ಮನುಷ್ಯರಂತೆಯೇ ಸಂಸಾರಿಯೂಗಿಯೇ ಬಾಳಬಾರದೆ? ಹೀಗೆಲ್ಲಾ ಕಾಣುವವರ ಕಣ್ಣಿಗೆ ಮಣ್ಣು ಎರಚುವ ಯತ್ನವೇಕೆ? ಆಂತೂ ಆ ಕನ್ಯೆ ಎಲ್ಲಿಯವಳೊ? ಮಂಗಳೂರಿನವಳೋ—ಮೈಸೂರಿನವಳೋ!"

'ಎರಡೂ ಅಲ್ಲ. ಆಕೆ ಮೇನಕೆ...ದೇವಲೋಕದವಳು...."

'ನಿಮಗೆ ಖಾತ್ರಿಯೂಗಿ ಗೊತ್ತಿದ್ದರೆ ಸರಿ. ಇಲ್ಲವಾದರ ಆಕೆ ತ್ರಿಕೂಟನಿವಳಾಗಿರಲೂ ಬಹುದು. ಅಲ್ಲಿ 'ಮೇನಕಾ ಥಿಯೇಟರ್ಸ್' ಎಂದಿದೆ.... ಆ ಮೇಲೆ?'

'ಏನೆನ್ನಲಿದೆ? ಆ ಶಾಕುಂತಲೆ ರಾಜನ ಹೃದಯವನ್ನು ಪಹರಿಸಿದಳು. ಇಬ್ಬರ ಕಣ್ಣುಗಳೂ ಹೃದಯವೂ ಒಂದಾಯ್ತು. ಸದ್ಯ ಜಿಂಕೆ ಬಮಿಕೆತು.'

"ಪರಸ್ಪರ ಲವ್—ರೋಮಾನ್ಸ್...ಆ ಮೇಲೆ?"

'ಶಕುಂತಲೆ ತಾಯ್ತನವನ್ನು ಸವಿಯಿಸಿರುವುದನ್ನು ತಿಳಿದ ಸಾಕು ತಂದೆ ಆಕೆಯನ್ನು ರಂಜಿಸಿ ಬಳಿಗೆ ಕಳಿಸಿಕೊಟ್ಟ....'

"ಯೂಕೆ, ಸಾರ್? ಫನುಲಿ ಪ್ಲೇನಿಂಗ್ ಕ್ಲೆನರ್ ಇರಲಿಲ್ಲವೆ?....ಅದಿಲ್ಲಾ ಈ ಮಾನಿಗೇಕು ಗೂತ್ತ?'

"ವಿವಾಹ ಮಾಡಿಕೊಳ್ಳಲು...."

"ಹಾಗೆ ಹೋಗ್ಲಿ...?'

"ಪಾನಿನವಳನ್ನು ಕಂಡೂ ಇಲ್ಲ; ಕೇಳಿಯೂ ಇಲ್ಲ....ಎಂದ ರಂಜ.'

"ಏ....ಏನ್—ಜಂ!....ಅವನೊಬ್ಬ ಸ್ಟೀಟು ರಾಜನೇ! ಕೂಡಲೇ ಶಕುಂತಲೆಸಬ್ ಡಿವಿಜನಲ್ ಮೆಜಿಸ್ಟ್ರೇಟರಲ್ಲಿ ಮಾರು ಕೂಡಬೇಕಿತ್ತು....ಸಾಪಿ! ಯೂರಾರೂ ಎಕೇಲಯ ಸಸಾಯು ಮಾಡುತ್ತಿದಿಲ್ಲವೆ?...ಇಲ್ಲವಾದರೆ ಮಹಿಳಾ ಕಾರ್ಮಿಕ ಸಂಘಕ್ಕಾದರೂ ತಿಳಿಸಿದ್ದರೆ ರಾಜನ ತಾನೆಯನ್ನು ಪ್ರತಿಭಟಿಸಿ ಮೆರವಣಿಗೆ ಸಭೆ, ರಂಪಾಟ ಮಾಡಬಹುದಿತ್ತು. ಸಾಲದಿದ್ದರೆ ಸತ್ಯಾಗ್ರಹವೂ!...

'ಆ ಕಾಲದಲ್ಲಿ ರಾಜನನ್ನು ಪ್ರಶ್ನಿಸುವ ಸ್ವಾತಂತ್ರ್ಯವೆಲ್ಲಿ?"

(ಹದಿನೈದನೇ ಪುಟ ನೋಡಿರಿ)

ಸುಸ್ವಾಗತ!
ಕುಂದಾಪುರ ನಗರದ ಪ್ರಶಾಂತ ವಾತಾವರಣದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಮನಮೆಚ್ಚುವ ಸರ್ವ ಸೌಕರ್ಯಗಳಿಂದೊಡಗೂಡಿದ
ವಸತಿ ಗೃಹ

HOTEL
SHIVAPRASADA
COONDAPUR

ಹೊಟೆಲ್ ಶಿವಪ್ರಸಾದ
ಕುಂದಾಪುರ, ದ ಕ
ಶಿವಳ್ಳಿ ಬ್ರಾಹ್ಮಣರ ರುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಸಾರ್ವಜನಿಕರುಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.
ಫೋನ್: 77

47ನೇ ವರ್ಷ
Telephone 226.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ದ. ಕನ್ನಡ.

ಸ್ಥಾಪನೆ: 1921
ಸ್ಥಾಪಕರು
ದಿ। ಎ. ಬಿ. ರೆಟ್ಟಿರು.
ಸಂಚಾಲಕ—ಸಂಪಾದಕ
ಕೆ. ಹೊನ್ನಯ್ಯ ಕೆಟ್ಟಿ

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

ಜಾಹೀರಾತು ದರಗಳು:
ಅನಿಮಿತ (ಕಡುವರ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಳಗಕ್ಕೆ

ಲೇಖನಗಳನ್ನು ಕಾಗದದ ಒಂದೇ ಪುಟದಿಂದ ಕೂಡಿರಬೇಕು. ಅಲ್ಲಲ್ಲಿ ತಿದ್ದಿದ ಭಾಗ ಬಹಳ ಇದ್ದಲ್ಲಿ ಬದಿಯಿಂದುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬಿಳಿಪ್ಪಡಿಸಬೇಕು. ಅಥವಾ, ಅನುವಾದವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಚಂದಾದಾರರಿಗೆ —

ಚಂದಾದಾರನನ್ನಾಗಿ ಜಾಹೀರಿಸಿಕೊಳ್ಳಲು ಮೊದಲಿನವರಿಂದಲೇ ಬೇಂಕಿನ ಪಡಪೆಯೇ ಚಲೆಯಲ್ಲಿ ಯಾವ ಪುರ್ಜು ಇಲ್ಲವೆಂಬುದನ್ನು 'ನವಯುಗ'ದ ಪಾತೆಗೆ ಜಮೆ ಮಾಡುವ ಸೌಲಭ್ಯವಿರುವುದು.

ಮುಖಪುಟ ಚಿತ್ರ:

ಮಯೂರ ಭಟ್ಟ (ಸಹಾಕ
ರಾಧಾಕೃಷ್ಣ

ನವೆಂಬರ ೭—೧೧—೧೯೬೬

ನವಯುಗ

ಸಂಪುಟ ೪೭ | ಉಡುಪಿ | Vol. 47
ಸಂಚಿಕೆ ೧ | ೭—೧೧—೧೯೬೬ | No. 1

ಮೆಹತಾ ಸಮಿತಿ ವರದಿ

ಗುಜ್ಜರಾತು ಜನರ ಹಿತಕ್ಕೆ ದಕ್ಕೆ ಬರದಂತೆ ಅಸಾಮು ರಾಜ್ಯದ ಪುನರ್ಘಟನೆಯ ಬಗ್ಗೆ ಪರಿಶೀಲಿಸಿ ವರದಿ ಮಾಡಲು ನೇಮಿಸಿದ್ದ ಎಶೋಕ ಮೆಹತಾ ಸಮಿತಿಯು ಇದೀಗ ತನ್ನ ವರದಿಯನ್ನು ಒನ್ಮುಖದಿಂದ ಸಲ್ಲಿಸಿದೆ. ಈ ಬಗೆಯ ಸಮಿತಿಗಳಲ್ಲಿ ಒಮ್ಮತದ ಅಭಿಪ್ರಾಯ ಬಹುಶಃ ಭಾರತೀಯ ಇತಿಹಾಸದಲ್ಲಿಯೇ ಮೊತ್ತ ಮೊದಲು ಬಾರಿ ಬಂದುದಕ್ಕೆ ರಮಿತಿಯ ಸದಸ್ಯರನ್ನು ಅಭಿನಂದಿಸಬೇಕು; ಬೇರಾ ದಷ್ಟು ಭಿನ್ನಾಭಿಪ್ರಾಯಗಳಿಕ್ಕೆ ಅವಕಾಶವಿದ್ದರೂ ವಿಕಮತವನ್ನು ಹೊಂದಲು ಶಕ್ತವಾದುದು ಏಂದರೆ, ದೇಶದಲ್ಲಿ ಇನ್ನೂ ಇನ್ನೂ ಹೊಸ ಹೊಸ ರಾಜ್ಯಗಳನ್ನು ನಿರ್ಮಿಸುವುದಂದರೆ, ದೇಶದ ಐಕ್ಯ ಭದ್ರತೆಗಳಿಗೆ ಆದ್ಯತೆಯನ್ನು ಕೊತ್ತಂತೆ ಎಂಬುದನ್ನು ಸಮರ್ಥಿಸಿದಂತೆಯೇ. ಪಂಜಾಬ ರಾಜ್ಯ ವಿಭಜನೆಯಿಂದ ಹೊಸ ಸಮಸ್ಯೆಗಳೇ ಎದ್ದುವಲ್ಲದೆ ಹಳೆಯದು ದೂರವಾದಂತಿಲ್ಲ. ಹೀಗೆ ರಾಜ್ಯಗಳ ಸಂಖ್ಯೆ ಹೆಚ್ಚಿಸುವುದು ಅನಗತ್ಯ ಮತ್ತು ಅನಪೇಕ್ಷಣೀಯ. ಗಿರಿಜನರ ಹಿತಕ್ಕಾಗಿ ಪ್ರತ್ಯೇಕ ರಾಜ್ಯ ರಚನೆಯೂ ನಿಜ ಪಥೋಗಿಯೆಂಬುದಕ್ಕೆ ನಾಗಾಲ್ಯಾಂಡ್ ನಿದರ್ಶನ. ಏಂ ನೆಪೆರುರವರು ನಾಗಾ ಜನರ ಒಂಕಷ್ಟ, ಸಮಸ್ಯೆಗಳು ಮೂರವಾದಾವೆಂದು ಯೋಜಿಸಿ ಈ ರಾಜ್ಯವನ್ನು ಕೊಡ ಮಾಡಿದರು. ಆದರೆ, ಲಾಭವೇನು? ಅನಾವರ ಗಿರಿ—ಕಂದರ ಪ್ರದೇಶದಲ್ಲಿ ಮತ್ಪಷ್ಟು ಅಶಾಂತಿ ಪ್ರಸಾರ.

ಎಶೋಕ ಮೆಹತಾ ಸಮಿತಿಯ ಮುಖ್ಯಾಂಶಗಳು ಈಗ ಗೊತ್ತಾಗಿವೆ. ಗಿರಿ ಪ್ರದೇಶಗಳ ನಾಯಕರ ಸಮಿತಿಯು ಸರ್ವಾಧಿಕಾರವುಳ್ಳ ಎರಡು ರಾಜ್ಯಗಳನ್ನು ರೂಪಿಸಿದ "ಸಂಯುಕ್ತ ರಾಜ್ಯ ಯೋಜನೆ"ಯನ್ನು ಬಯಸಿದ್ದಿತು. ಅಸಾಮನ್ನು ವಿಭಜಿಸಿ, ಬಯಲು ನಾಡಿಗೊಂದು ಗುಡ್ಡ ನಾಡಿಗೊಂದು—ಹೀಗೆ ಎರಡು ರಾಜ್ಯ ರಚನೆಯಾಗಬೇಕು ಎಂಬುದು ತೀವ್ರವಾದಿಗಳ ವಾದವಿತ್ತು. ಇವೆರಡೂ ಬೇಡಿಕೆಗಳನ್ನು ಮೆಹತಾ ಸಮಿತಿಯು ಸಂಪೂರ್ಣವಾಗಿ ತಿರಸ್ಕರಿಸಿ ಮಧ್ಯಮವಾದ ಮಾರ್ಗವನ್ನು ಅನುಸರಿಸಿದ—ತನ್ನ ಜಾಣ್ಮೆಯನ್ನು ತೋರಿಸಿದೆಶಃ. ಸುವಲ್ಲಿ ತನ್ನ ಪಾತ್ರವನ್ನು ನಿರ್ವಹಿಸಿದೆಯೆನ್ನಬಹುದು. ಸಂಯುಕ್ತ ರಾಜ್ಯ ಯೋಜನೆಯನ್ನು ಅಭಿಮಾನಿಸಿದರೆ, ಅಸಾಮು ರಾಜ್ಯದ ಸ್ಥಿತಿಗತಿಗಳು ಉಳಿದ ಭಾರತೀಯ ರಾಜ್ಯಗಳಿಗಿಂತ ವಿಶಿಷ್ಟವಾಗುವುದು; ಇತರರಿಗೂ ಮುಂದೆ ಬಂದೆಬ್ಬಿಸಲು ಅನುವು ಮಾಡಿಕೊಡುವ ಸಾಧ್ಯತೆಯೂ ಇರುವುದು. ವಿಭಜನೆಯ ತತ್ವ ದೇಶಕ್ಕೆ ಹಿತವನ್ನು ತಂದಿಲ್ಲ. ಇದಕ್ಕೆ ನಮ್ಮ ಕಳೆದ ಇಪ್ಪತ್ತು ವರ್ಷಗಳ ಅನುಭವವೇ ಸಾಕ್ಷಿ. ಅಸಾಮು ರಾಜ್ಯವು ಒಂದಾಗಿಯೇ ಉಳಿಯಬೇಕು. ಅದರಲ್ಲಿನ ಗಿರಿಜನ್ಲಗಳಿಗೆ ಹೆಚ್ಚಿನ ಸ್ವಾಯತ್ತತೆ ಕೊಡಬೇಕು— ಎಂಬುದೇ ಮೆಹತಾ ವರದಿಯ ಸಾರ. ಇದನ್ನು ಕಾರ್ಯರೂಪಕ್ಕೆ ತರಲು ಸಲಹೆಯನ್ನು ಮಾಡಿದೆ ವರದಿ—ಜಿಲ್ಲೆಗೊಂದು ಜಿಲ್ಲಾ ಮಂಡಳ, ಈ ಮಂಡಳಕ್ಕೊಬ್ಬ ಅಧ್ಯಕ್ಷ ಇರಬೇಕು. ಜಿಲ್ಲಾ ಮಂಡಲ ಮತ್ತು ಅಧ್ಯಕ್ಷರೇ ವಿಧಾನ ಸಭೆ ಮತ್ತು ಮಂತ್ರಿ ಮಂಡಳವಾಗಿ ಕಾರ್ಯ ನಿರ್ವಹಿಸಬೇಕು. ಇದನ್ನೇ ಬಹುಮಟ್ಟಿಗೆ ಜೋಲುವ ಜಿಲ್ಲಾ ಆಡಳಿತ ವಿಧಾನ ಇತರ ರಾಜ್ಯಗಳಲ್ಲಿ ಇದೆ. ಆದರೆ, ಮೆಹತಾ ಸಮಿತಿಯ ವರದಿಯನ್ನು ಅನುಸರಿಸಿದರೆ, ಅಸಾಮದ ಗುಡ್ಡಗಾಡು ಜಿಲ್ಲೆಗಳ ಜಿಲ್ಲಾ ಮಂಡಳಗಳಿಗೆ ಹೆಚ್ಚು ಅಧಿಕಾರ ದೊರೆಯುವುದು. ರಾಜ್ಯ ಸರಕಾರದ ಅಧಿಕಾರ ಕಡಮೆಯಾಗುವುದು. ಪೋಲೀಸ್ ಮೊದಲಾದ ಕೆಲವು ವಿಭಾಗಗಳು ರಾಜ್ಯ ಸರಕಾರದ ಕೈಯಲ್ಲೇ ಉಳಿಯುವುದರಿಂದ ಪುನರ್ಘಟನಾವಾದರೂ ಸಲೆಯೆನ್ನಲು ಕಾರ್ಯರೂಪಕ್ಕೆ ತರಬಹುದು. ಗುಡ್ಡಗಾಡು ಜನರಿಗೆ ತಮ್ಮ ಉನ್ನತಿಯನ್ನು ಸಾಧಿಸಲು ಸಾಕಷ್ಟು ವಿಕಾಶಕಗಳೂ ಈ ಯೋಜನೆಯಲ್ಲಿ ಅಡಕವಾಗಿವೆ. ಆದುದರಿಂದ ದೇಶದ ರಿಜ್ಯದ ಮತ್ತು ಸ್ವಯಂ ಗಿರಿಜನರ ಹಿತದೃಷ್ಟಿಯಿಂದ ಮೆಹತಾ ಸಮಿತಿಯ ಮಧ್ಯಮ ಮಾರ್ಗವೆ ನಿಜಕ್ಕೂ ಉಪ ದೇಯವೇ ಇದೆ.

ಆದರೆ, ಇದರಿಂದ ಗುಡ್ಡ ನಾಡಿನ ಜನರು ಸೃಪ್ತರಾಗುವರೆ? ಗುಡ್ಡಗಾಡು ಜನರಿಗಿಂತಲೂ ಅವರನ್ನು ಎತ್ತಿಕಟ್ಟುವ (ವಿದೇಶಿ) ಶಾದ್ರಿಗಳು ಸಂಖ್ಯಾರಾಗುವರೆ? ಜನರ ಅಜ್ಞಾನ ಅನಕ್ಷರತೆಯು ಪರಿಪೂರ್ಣ ದುರ್ಲಾಭ ಪಡೆದು ಅವರನ್ನು ಯೇಸುವೊಬ್ಬನೇ ಭಾಗ್ಯವಿಧಾತನೆಂದು ನಂಬಿಸತಮ್ಮ ಬೇಳೆ ಬೇಯಿಸುವವರು ಆಲ್ಲಿನ ಅಶಾಂತಿಗೆ ಪ್ರೇರಕ ಶಕ್ತಿಯೆಂಬುದು ಇಂದುಜಗಜ್ಜಾಹೀರವಾಗಿದೆ. ಮಿಜೋ, ಖಾಸಿ, ಜಯಂತಿಯಾ, ನಾಗಾ ಮೊದಲಾದ ಜಿಲ್ಲೆಗಳಲ್ಲಿ ಎದ್ದಿರುವ ಬಂಡುಗಳು ಅಥವಾ ಅಶಾಂತಿಯ ಕಾರಣ ಪುರುಷರು ಭಾರತೀಯರಾದ ಗಿರಿಜನರಲ್ಲ; ಅವರ ಹಿಂದೆ ಹೊಂಚು ಹಾಕುತ್ತಿರುವ ಈ ಕ್ರೈಸ್ತೇಯವಾದಿಗಳು. ಇವರ ದೃಷ್ಟಿಯಲ್ಲಿ ಜಗತ್ತಿನ ಎಲ್ಲವೂಗಳ ಕಂಟ್ರಾಕ್ಟ್ ಯೇಸು ವೊಬ್ಬನಿಗೇನೇ. ಅವನ ಹೆಸರಲ್ಲೇ ಪ್ರತ್ಯೇಕತೆಯ ಬಿಡಾಯವೂ ಪತಾಕೆಯಡಗಿದೆ.

ವಜನೆ ಸುಧೆ

ಪ್ರತ್ಯಹಂ ಯತ್ನೇನ ಸಂರಕ್ಷೇದ್
ವಿತ್ತಮೇತಿ ಚಯಾತಿ ಚ
ಅಕ್ಷೀಣೋ ನಿತ್ಯತಃ ಕ್ಷೀಣೋ
ವೃದ್ಧತಸ್ತು ಹತೋ ಹತಃ॥

ಸದಾಚಾರವನ್ನು ಪ್ರಯತ್ನ ಪೂರ್ವಕವಾಗಿ ಮಾಡಬೇಕು. ಸಂಪತ್ತು ಬರುತ್ತದೆ, ಹೋಗುತ್ತದೆ. ಹಣ ಕಡಮೆಯಾದರೂ ಸದಾಚಾರಿ ಮನುಷ್ಯನ ಬೆರೆ ಕಡಮೆಯಾಗುವುದಿಲ್ಲ. ಆದರೆ ಸದಾಚಾರ ಭ್ರಷ್ಟನಾದವನು, ನಷ್ಟ ಸಾಧನೆಂದೋ ಅರ್ಥ.

ರಾಜ್ಯ—ಕೇಂದ್ರ ಸರಕಾರಗಳು ಈಗ ಈ ಸತ್ಯವನ್ನು ಮನಗಂಡಿವೆ. ಎಲ್ಲ ವಿದೇಶೀ ಪಾದ್ರಿಗಳನ್ನೂ ದೇಶಬಿಟ್ಟು ಜೋಗುವಂತೆ ನಿರ್ದೇಶಿಸುವ ಸೂಚನೆಯೊಂದು ಪರಿಶೀಲನೆಯಲ್ಲಿದೆಯೆಂದು ಕೇಳುತ್ತೇವೆ. ಗಿರಿಜನರ ತಿಳಿಮನಸ್ಸಿನಲ್ಲಿ ಈ ಪಾದ್ರಿಗಳು ಕೆಸರು ಕುಂಬಿಸಿದ್ದಾರೆ. ಇದನ್ನು ತೊಳೆದು ಮತ್ತೆ ತಿಳಿಗೊಳಿಸುವ ಕಾರ್ಯ ಸಾಧಿಸಿದರೆ, ಎಶೋಕ ಮೆಹತಾ ವರದಿಯನ್ನು ಕಾರ್ಯರೂಪಕ್ಕೆ ತರಬಹುದು. ಇಲ್ಲವಾದರೆ, ಗಿರಿಜನರ ಬಾಯಿಯಿಂದ ಅಶ್ರುನೆನ್ನು ಸಿಳಿಸಳ್ಳುವುದು ಅಸಾಧ್ಯ. ಕಷ್ಟ ಸಾಧ್ಯವಾದರೂ ಮುಂದಕ್ಕೆ ತೊಂದರೆ ಕಂಡಿತ.

ಕುದುರೆಗೊಂದು ಕಡಿವಾಣ

ಮುರಾರ್ಜಿ ದೇಸಾಯಿಯವರು ಕೇಂದ್ರ ನೌಕರರ ತುಟ್ಟಿಭತ್ಯೆಯ ಹೆಚ್ಚಳವನ್ನು ಈ ತಿಂಗಳಿಂದ ನೆಗದಿ ರೂಪದಲ್ಲಿಯೇ ನೀಡಲು ಒಪ್ಪಿದರು; ಹಿಂದಿನ ಬಾಕಿಯನ್ನು ಆರು ತಿಂಗಳ ನಂತರ ನಗದಿ ರೂಪವಾಗಿ ಪಡೆಯಲು ನೌಕರ ಸಂಘಗಳೂ ಸಮ್ಮತಿಸಿದವು. ಉಭಯ ಸಮ್ಮತಿಯಿಂದ ರಾಜಿ ಸಾಧ್ಯವಾಯಿತ್ತ, ನಿಯೋಜಿತ ಸಾಂಕೇತಿಕ ಮುಷ್ಕರ ನಿಂತಂತೆಯೇ. ಬೆಲೆಯೇರಿಕೆಯನ್ನು ತಡೆಗಟ್ಟುವ ವಿಚಾರವನ್ನು ಸರಕಾರ ತೀವ್ರವಾಗಿ ಪರಿಶೀಲಿಸುತ್ತಿದೆ. ಇದಕ್ಕೆ ಯಾವ ರೀತಿ ಹಿತಕರವಾಗುತ್ತದೆಂಬುದು ಸರಿಯಾಗಿ ಗೋಚರವಾಗುತ್ತಿಲ್ಲ. ಮುಖ್ಯವಾಗಿ ಬೆಲೆಯೇರಿಕೆಗೆ ಎರಡು ಕಾರಣಗಳನ್ನು ಕೊಡಬಹುದು - ಮೊದಲನೆಯದು ಕಳೆದೆಂಡು-ಮೂರು ವರ್ಷಗಳಲ್ಲಾದ ಉತ್ಪಾದನೆಯ ತೀವ್ರ

(ಪರಿಸಾಲ್ಕನೇ ಪುಟ ನೋಡಿ)

ನರಸಣ್ಣನ ಸರಸ



'ವಿಚಾರದ ಸಿಂಗರ ಮಾತ್ರಿ ಮಂಡಳ ಉರುಳಿಸುವುದೇ ಈಗ ಮಂದಿರ ಉದ್ದೇಶ ವಂತೆ....'

'ಅವರೂ ಗುರುಚೇಂಡ ಸಿಂಗರ ಶಿಷ್ಯತ್ವ ಸ್ವೀಕರಿಸಿದರಲ್ಲ....?"

ಗೇಹ ರಾಜ್ಯದಲ್ಲಿ

ದೇಶ ಮುಳುಗುತ್ತಿರುವಾಗ...

"ಅಂತೂ ನಮ್ಮ ಕಾನರಗೋಡು ನ ಮಗೆ ಬರುತ್ತೇಂತಾಯ್ತು.'

"ಹೇಗೆ?"

"ಮಹಾಜನ ಆಯೋಗ ಹಾಗೆ ವರದಿ ಮಾಡಿದೆಯಂತಲ್ಲಾ....."

'ಆಯ್ಯೋ ಎಲ್ಲದ್ದೀರೂ ನೀನು? ಚಂದ್ರಗಿರಿ ಹೊಳೆಯು ಉತ್ತರದ ಭಾಗ ಕರ್ನಾಟಕಕ್ಕೆ ಸೇರಬೇಕೂಂತ ಅಂದಿದ್ದಾರೇಂತ ಬರಿಯ ಊಹಾಪೋಹ....."

'ಅಂದ್ರೆ, ಅದೆಲ್ಲಾ ಸುಳ್ಳು....."

"ಹಾಗಂತೇನಿಲ್ಲ. ಆದರೆ, ಅಂತಹ ಗ್ಯಾರಂಟಿಯೇನೂ ಇಲ್ಲ.'

'ಅಗ್ಲಿ, ನಾವು ಬಯಸಿದ್ದು ಅಷ್ಟೇನ್ನಿ.'

"ನೋಡು, ಒಂದು ಮಾತು..."

'ಏನು?"

'ಕೇರಳದ ಸಂಯುಕ್ತ ಸರಕಾರ ಇದನ್ನು ಒಪ್ಪುವುದಿಲ್ಲ."

'ಅದು ಹೇಗೆ ಗೊತ್ತು?'

"ಮಹಾಜನ ಆಯೋಗನನ್ನು ಕೇರಳ ಸರಕಾರ ಬಹಿಸ್ಕರಿಸಿತ್ತೆಂದು ಕೇಳಿದ್ದಿಯಲ್ಲಾ?"

"ಹೋ, ಹೌದ್ರಿ, ಹೌದು...."

'ಅದುದರಿಂದ ಅದು ಒಪ್ಪುವುದಿಲ್ಲ"

"ಅದ್ರೆ ಕೇಂದ್ರ ಸರಕಾರ ನೇಮಿಸಿದ ಸಮಿತಿಯಲ್ಲವೇ ಅದು?"

"ಅದನ್ನೇ ಅಪಮಾನ ಮಾಡಿದ್ದಾರೆ, ಕೇರಳದ ಸಪ್ತರಂಗ ಸರಕಾರದವರು ಈಗ ಗುಡುಗುತ್ತಾರೆ, ಕೇರಳದ ಒಂದಂಗುಲ ನೆಲವನ್ನೂ ಬಿಟ್ಟು ಕೊಡಲಾರವು ಅಂತ ...'

'ಇದು ಡಾ.ಕ್ಯೋಫನನಮಾತಾಯಿತು. ಏನಂತೆ, ಕೇರಳ ಸರಕಾರದ ಮಂತ್ರಿಗಳ ಮೂಲಗೇಣಿಯೇನು ಕೇರಳ? ಸಮಯದ ಹಕ್ಕಿ ಹಾರುತ್ತದೆ. ಇದರ ರೆಕ್ಕೆಯ ಹೊಡೆತಕ್ಕೆ ಎಂತೆಂಥವರೋ ಬೀಳುತ್ತಾರೆ, ಮುಗ್ಗರಿಸುತ್ತಾರೆ. ಹಾಗಿರವಾಗ..."

'ಅದೆಲ್ಲ ಅವರಿಗ್ಯಾಕೆ? ಅಧಿಕಾರ ಕೈಯಲ್ಲಿದೆ; ಅದನ್ನು ಉಪಯೋಗಿಸಿ ಬಿಡುದು. ಕೇರಳದ ಈ ಉತ್ತರ ಮೂಲೆಯನ್ನು ಕೈಬಿಟ್ಟರೆ, ಕೇರಳೀಯರು ಸುಮ್ಮನಿರುತ್ತಾರೆ? ಮುಂದಿನ ಚುನಾವಣೆಗೆ ಮೊದಲೇ ನಂಬೂದರಿಪಾದರು ಬಂದ ದಾರಿ ಹಿಡಿದು ಹಿಂದೆ ಸರಿಯಬೇಕಾಗಿ ಬಂದರೆ?'

"ಅಂದ್ರೆ ಕರ್ನಾಟಕ—ಕೇರಳ ರಾಜ್ಯಗಳು ಒಪ್ಪಿದ್ರೆ ಮಾತ್ರ ಗಡಿ ಬದಲಾವಣೆ...."

"ಹ್ಞೂಂ..."

"ಹಾಗಾದರೆ, ಚಂದ್ರಗಿರಿ ಹೊಳೆಯು ಶಬರಗಿರಿಯಂತೆಯೇ ಸೈ...."

'ಅಷ್ಟು ನಿರಾಸೆಯೆ?"

"ನಿರಾಸೆಯಲ್ಲು; ಆದರೆ, ಆಸೆಯಿಲ್ಲ....' ಅದು ಹೋಗಲಿ. ಬೆಳಗಾಂವಿ, ಕಾರವಾರ ನಮ್ಮ ಕೈಯಲ್ಲೇ ಉಳಿಯುವುದಂತೆ. ನಿಜ್ಜಾಣಿ ಮಹಾರಾಷ್ಟ್ರಕ್ಕೆ, ಅಕ್ಕಲಕೋಟೆ ನಮಗೆ ಹೀಗೆ....ಹಾಗೆ...ಅಂತೂ ಒಂದು ಹೊಸ ಸೂತ್ರ ತಂದಿದ್ದಾರಂತೆ ಮಹಾಜನರು....'

"ಒಂದೊಂದು ವಿವಾದ ಪರೀಕ್ಷಿಲನೆಗೂ ಒಂದೊಂದು ಸೂತ್ರ ನಮ್ಮದು. ಪಾಟಸ್ಕರ್ ಸೂತ್ರದ ಮೇಲೆ ಮಹಾಜನ್ ಸೂತ್ರ, ಸೂತ್ರವೇನಿದ್ದರೂ, ಅದು ಅನುಷ್ಠಾನವಾಗಬೇಕಲ್ಲಾ—"

"ಯಾಕೆ? ತೊಂದರೆಯೇನು?"

"ಮಹಾಜನರು ಮಹಾರಾಷ್ಟ್ರಕ್ಕೆ ಅನ್ಯಾಯ ಮಾಡಿದ್ದಾರೆಂದು ಮರಾಠಿಗರು ಈಗಾಗಲೇ ದೂರ ತೊಡಗಿದ್ದಾರೆ"

"ಸರಿಯೆ ನ್ನಿ. ಬೆಳಗಾಂವಿ ಕೊಡಲಿಲ್ಲ; ಕಾರವಾರ ಸಿಗಲಿಲ್ಲ ನಮ್ಮವರು ಏನನ್ನುತ್ತಾರೆ?"

"ಯಾರು ಕರ್ನಾಟಕದವ್ರೆ? ಅವರದ್ದು ಹಾಗೂ ಸರಿ, ಹೀಗೂ ಸರಿ."

"ಅಂದ್ರೆ?"

"ಕರ್ನಾಟಕ — ಮಹಾರಾಷ್ಟ್ರಗಳು ಒಪ್ಪಿಕೊಂಡರೆ, ಈ ಕೊಡುಕೊಳ್ಳುವ ವ್ಯವಹಾರಕ್ಕೆ ಸಿದ್ಧ. ನ್ಯಾಯ—ಅನ್ಯಾಯಗಳ ಕೆರಡರ ಬಗ್ಗೆ ವಿಶೇಷ ಚಿಂತಿಸುವ ಜಾತಿ ನಮ್ಮದಲ್ಲ...."

"ಅಂದ್ರೆ, ಅಧಿಕಾರ ಉಳಿಸಿಕೊಳ್ಳೋ ಚಿಂತೆ .."

'ಥೂ...ಥೂ....ಹಾಗೇನೂ ಇಲ್ಲ. ನಮ್ಮ ಮಂತ್ರಿಗಳಿಗೆ, ಶಾಸಕರಿಗೆ ಅಧಿಕಾರದ ಮೇಲೆ ಏನೇನೂ ಮೋಹವಿಲ್ಲ. ಅವರಿಗೆ ದೃಷ್ಟಿಯಿದ್ದರೆ ಇರುವುದು ದೊರೆಯುವ ವೇತನ, ಭತ್ತೆ, ಸೌಲಭ್ಯಗಳ ಮೇಲೆ....'

"ಹೋಗ್ಲಿ ಬಿಡಿ. ನಮಗೇನಂತೆ? ನೋಡಿ, ಮುರಾರ್ಜಿಯವರು ಕೇಂದ್ರ ಸರಕಾರಿ ನೌಕರರಿಗೆ ಶುಟ್ಟಭತ್ತೆ ಏರಿಸಿದರಲ್ಲಾ..."

"ಆಯ್ಯೋ. ಎಲ್ಲಿ ಏರ್ಸಿದ್ದಾರೆ? ಏರಿಸೋದಕ್ಕೆ ಒಪ್ಪಿದ್ದಾರೆ. ಇನ್ನು ನೌಕರರ ಸಂಘಗಳು ತಮ್ಮ ನಿರ್ಧಾರವನ್ನು ತಿಳಿಸಬೇಕು. ಮತ್ತೆ ಅಜ್ಞೆ ಹೊರಡಬೇಕು...'

'ಅದು ಆಗುತ್ತೆ ಬಿಡಿ. ಆಗ, ರಾಜ್ಯ ಸರಕಾರಿ ನೌಕರರು, ಸುಮ್ಮನಿರುತ್ತಾರೆಯೆ?"

"ಮತ್ತೇನು ಮಾಡ್ತಾರೆ?'

'ಸತ್ಯಾಗ್ರಹ—ಚಳುವಳಿ...'

"ಮಾಡಿದ್ರೂ ನೋಡಬಹುದು. ಆದ್ರೂ ನಮ್ಮ ಕರ್ನಾಟಕದ ಸರಕಾರಕ್ಕೆ ತಪ್ಪಿ ಕೊಳ್ಳಲು ಎರಡು ದಾರಿ ಕೆರೆವಿವೆ...'

"ಏನಂತೀರಾ?"

'ನೋಡು, ನೌಕರರ ಕೇಳಿಕೆಯಂತೆ ವೇತನ ಆಯೋಗ ನೇಮಿಸಿದೆ. ಆದರೆ ವರದಿ ಬಂದ ಮೇಲೆ ಮುಂದಿನ ಕತೆಯೆಂದು ನಿಜಲಿಂಗಪ್ಪನವರು ತಪ್ಪಿಸಿಕೊಳ್ಳಬಹುದು.'

"ಓ, ಅದೂ ಹೌದಲ್ಲಾ....."

'ಅಥವಾ ಅರ್ಥಮಂತ್ರಿಗಳು ವಿದೇಶ ಸಂಚಾರಕ್ಕೆ ಹೋಗಿದ್ದಾರೆ. ಅವರು ಮರಳಿ ಬಂದ ನಂತರ ಸಹಾನುಭೂತಿಪರವಾಗಿ ಪರಿಶೀಲನೆ ನಡೆಸ್ತೇವೆ ಎಂದು ಆಸೆ ಕೋರಿಸಬಹುದು.'

"ಓ, ನಮ್ಮವರಿಗೆ ಚಾರಿಕೊಳ್ಳಲು ಒಳ್ಳೆಯ ದಾರಿಯಿದೇನ್ನಿ. ಅಂತೂ ಕೊಟ್ರೆ ಮುಂದಿನ ಜನವರಿಯಿಂದಲೋ ಏಪ್ರಿಲ್ ನಿಂದಲೋ ಏನಾದರೂ ಕೊಡಬಹುದು. ಅಥವಾ ಕೊಟ್ಟಂತೆ ಮಾಡಲೂ ಬಹುದು ಅಲ್ವೆ? ನಮ್ಮವರು ನಿರ್ಧಾರಕ್ಕೆ ಬರಬೇಕಾದ್ರೂ ಮಾರ್ಚಾಸಿನವ್ರು ಮೊದ್ಲು ನಿರ್ಧಾರಕ್ಕೆ ಬರಬೇಕಲ್ಲಾ....'

'ಅದು ಹೌದೂನ್ನಿ... ಅಲ್ರಿ, ಬಂಗಾಳ ರಾಜ್ಯಸರಕಾರ ನಡೆಸುವ ಸಂಯುಕ್ತರಂಗ 'ಬಂದ್' ಕಾರ್ಯಕ್ಕೆ ಕರೆ ನೀಡಿದ್ದರಿಂದ ಸುಮಾರು ಐದು ಕೋಟಿ ರೂಪಾಯಿಗಳು ನಷ್ಟವಾಯಿತಂತೆ. ಅರ್ಥಿಕ ಮುಖ್ಯಸ್ಥಿನಿಂದ ರಾಜ್ಯವೂ ದೇಶವೂ ಏಸಿಯುತ್ತಿರುವಾಗ ಇಂತಹಕೃತ್ಯವನ್ನು ಸರಕಾರಿ ಹಕ್ಕನ್ನೇ ಕೈಗೊಳ್ಳುವುದು ಅಂರೆ, ಆನಿಷ್ಟ ಪರಂಪರೆಯಲ್ಲವೆ?'

"ಆಗಲಿ, ನಿನಗಾದರೂ ಬುದ್ಧಿಯಿದೆ ನೋಡು. ಅಂದ್ರೆ, ಸರಕಾರಕ್ಕೂ ಕಾರ್ಮಿಕ ಸಂಘಕ್ಕೂ ಯಾವ ಬದಲಾವಣೆಯೂ ಇಲ್ಲ ಅಂದ ಹಾಗಾಯ್ತು..'

"ಮತ್ತೆಂಧದ? ರಾಜಕೀಯಕ್ಕೆ ಬೇಕಾದವರೇ ನಿಷ್ಕ್ರಿಯತೆಗೆ, ಡಂಬಿಗೆ ಪ್ರೋತ್ಸಾಹ ಕೊಡುವುದು ಛದ್ರಿ, ಅಧ್ಯಾಪಕರ

(ಪದಿಸೂರನೇ ಪು ನೋಡಿಂ)

ಮತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 190/67

ಕೃಷ್ಣ ಬಾಳ್ತಿಲ್ಲಾಯ —ವಾದಿ

ಬೀಪಾಕುಮ್ಮ ಕೂಡಾ —ಪ್ರತಿವಾದಿರು

2ನೇ ಪ್ರತಿವಾದಿ — ಮುಹಮ್ಮದ್ — ಇಬ್ರಾಯಿ ಬ್ಯಾರಿಗಳ ಮನ್ಯನೆಲ್ಯಾಡಿಗ್ರಾಮ, ಪೋಸ್ಟ್ ನೆಲ್ಯಾಡಿ

ಸದ್ರಿ 2ನೇ ಪ್ರತಿವಾದಿಗೆ ಕೋರ್ಟ್ ಹ್ಯುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಶಾ. 28—6—67ನೇ ಮೂಲಗೇಣಿಚೀಟು ಪ್ರಕಾರ ತಾ. 31—8—67ರಂದ ತಾ. 1—9—68ರವರೆಗಿನ ಗೇಣಿ ಬಾಕಿಕೇಳಿ ವಾದಿಯು ನಿಮ್ಮ ಮೇಲೆ ಕೂಡಾ ಮಾಡಿದ ಈ ವಾಯಿದನ್ನು ತಾ. 29—9—67ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟರುತ್ತದೆ ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹಗಿಸಕಕ್ಕೆದ್ದು ತಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷಾಪೂಡಿ ಯುಕ್ತಕಲಂತೆ ಕೀರ್ಮಾನಿಸಲಾಗಿದೆ.

(Sd.) M. Sadashiva Rao
Vakil for Plaintiff

ಮತ್ತೂರು ತಾ. 28—8—67

ಕರ್ನಾಟಕ ಸಂಘ, ಉಡುಪಿ
ಇವರ ಜನಪ್ರಿಯ ಪ್ರಕಟಣೆಗಳು

೧ ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಗಗನ ವಿಹಾರ ಕ್ಷೇತ್ರದಲ್ಲಿ ಈಗಾಗಲೇ ನಡೆದಿರುವ ಪ್ರಯತ್ನ ಮತ್ತು ಇನ್ನು ಮುಂದೆ ನಡೆಯಲಿರುವ ಸಾಹಸವನ್ನು ವಿವರಿಸುವ ಪುಸ್ತಕ. ಬೆಲೆ ರೂ. ಒಂದು.

೨ ಸಾಮಾನ್ಯ ರೋಗಗಳು

(ಡಾ। ಕೆ. ಎಲ್. ಐತಾಳ್, ಎಂ. ಬಿ., ಬಿ. ಎಸ್.)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ. ಬೆಲೆ ರೂ. ಒಂದು.

೩ ಭೌತಿಕ ದರ್ಶನ

(ಬಡೆಕ್ಕಿಲ ಕೃಷ್ಣ ಭಟ್, ಎಲ್. ಎಲ್. ಬಿ., ಭದ್ರಾವತಿ)

ಸರ್ವರೂ ಓದಲೇ ಬೇಕಾದ ಭೌತಿಕದರ್ಶನದ ಸೂಚ್ಯ ಪರಿಚಯ. ಬೆಲೆ ರೂ. ಒಂದು.

ಪ್ರತಿ ಪುಸ್ತಕಕ್ಕೂ ಅಂಚೆ ವೆಚ್ಚ 50 ಪೈಸೆ ಪ್ರತ್ಯೇಕ.

ನವಭಾರತ ಪುಸ್ತಕ ಭಂಡಾರ,
ಪಾಲುಕೋಟೆ, ಉಡುಪಿ, ದ. ಕ.

ಪುತ್ತೂರು ಎಡಿಶನ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 774/ O. S. 344/66

ಗೋವಿಂದ ನ್ಯಾಕ ಕೂ

— ಯಿರ್ಯಾ ಆರ್ಜಿದಾರರು

ಮಹಾಬಲ ಭಟ್ಟ ಕೂ —ಎದ್ರಿರು ಎದ್ರಿರು- 1) ನಮ್ಮ-3) ಲಲಿತಮ್ಮ —ಗಡೇಕಳಭಟ್ಟರ ಪಿಗೆಯುರು. 4) ಕಾವೇರಮ್ಮ, 5) ರತ್ನಾವತಿ ಗಡೇಕಳಭಟ್ಟರ ಮಕ್ಕಳು, ಎಲ್ಲರೂ ಮಾಣಿ ಗ್ರಾಮಸ್ತರು.

ಸದ್ರಿ ಎದ್ರಿರಿಗೆ ನೀರ್ಟು ಹ್ಯುಂ ಪ್ರಕಾರ ಈ ಮೂಲಕ ನಿಮ್ಮ ತಿಳಿಯಪಡಿಸುವುದೇನೆಂದರೆ: —

ತಾ. 16—11—66ರಲ್ಲು ಈ ದಾವೆಯಲ್ಲಿ ಆದ ಪ್ರಲಿವಿನಡಿಕ್ರಿಗೆ ಪ್ರಕಾರ, ಆದಕ್ಕೆ ಜವಾಬ್ದಾರಿ ಆಪ ಸ್ವರೂಪಿ ಮೂರಾಪಟಿದಿಂದ ವಿಕ್ಕಿ ಸಹಿಸೂಲು ಪಡೆಯುವ ಕುರಿತು ಪ್ಯಾನಲ್ ವಕ್ಕೀಲರಿಗೆ ಹ್ಯುಂ ಠೇವಣೀಕಾಗಿ ಆರ್ಜದಾರರ ಕಡೆಯಿಂದ ಮಾಡಲಿದ ಮೇಲಿನ ಅರ್ಜಿಯು ತಾ: 18—8—67ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟರುತ್ತ. ಸದ್ರಿ ದಿವಸ ಈ ಕೋರ್ಟು ಮುಂದೆ ಖುದ್ದಾಗಿ ಉದಹಂಸತಕ್ಕದ್ದು, ತಪ್ಪಿದಲ್ಲಿ ನಿಮ್ಮನ್ನು ಕೀರ್ಯಾಪೂಡಿ ಯುಕ್ತಕಂಡಂತೆ ತೀರ್ಮಾನಿಸಲಾಗಿದೆ.

(Sd.) M. Sadashivarao
Vakil for Petitioners.

ಪುತ್ತೂರು ತಾ. 28—8—67.

ಶ್ರೀ ಕೇಶವನ ತೀರ್ಥರು ಹೇಳುತ್ತಾರೆ

ದಾಂಪತ್ಯ ಧರ್ಮವೇ ಆರೋಗ್ಯಮಯ

ಕಳಿಸಿದವರು: ಶ್ರೀ ಬಪ್ಪನಾಡು ಭಗವಾನ್ ದಾಸ್,

ಗಂಡ ಹೆಂಡಿರ ಸಂಬಂಧವು ಬಹು ಪವಿತ್ರವಾದುದು. ಅದು ಪರಸ್ಪರ ಅತ್ಯೋತ್ಕೃಷ್ಟವಾಗಿ ಪ್ರಕಾಶಿಸಬೇಕು. ಪರಸ್ಪರ ಪತನ ಹೇತುವಾದ-ಪರಸ್ಪರ ಶಕ್ತಿ ವಿಕಾರ ಪ್ರೇರಕವಾದ ದಾಂಪತ್ಯವು ಅಪವಿತ್ರವಾದುದು. ಸಮ್ಯಗ್ದಾಂಪತ್ಯವನ್ನು ಹೃದಯ ವಿಕಾಸಕ್ಕೆ ವಿಜ್ಞಾನೋದಯಕ್ಕೆ ಸಾಧನವಾಗಿ ಮಾಡಿಕೊಳ್ಳುವ ದಂಪತಿಗಳೇ ಧನ್ಯರು. ಕೇವಲ ಪಶು ವಿಕಾಸ ಸಂಕೃಷ್ಟಿಗೆ ಸ್ವಾರ್ಥ ಪ್ರಯೋಜನಗಳಿಗೆ, ಪರಸ್ಪರ ಹಿಂಸೆಗೆ ಸಾಧನವಾಗಿ ಮಾಡಿಕೊಳ್ಳುವ ದಂಪತಿಗಳು ದುರದೃಷ್ಟವಂತರು.

ಗೃಹಸ್ಥ ಜೀವನವು ವಿಶ್ವಪ್ರೇಮೋತ್ಪಾದಕ್ಕೆ ಸಕ್ಕ, ದೈವ ದರ್ಶನಕ್ಕೆ ಸಾಧನ ಶಾಲೆಯಾಗಬೇಕು. ಅದು ಸ್ವಾರ್ಥಪರತೆಗೆ, ಪಶು ದೃಷ್ಟಿಗೆ, ವಿಷಯ ತೃಷ್ಣೆಗೆ, ಅನಿಷ್ಟಗಳಿಗೆ ವಿಹಾರರಂಗವಾಗಬಾರದು. ರಂಗವು ರೋಗಿದಾಗ ಮೂಡಿ ಮೂಡಿನಗುತ್ತಾ, ದ್ವೇಷವು ರೋಗಿದಾಗ ಮೂಡಿ ಮುದುಡಿಸಿ ಸಿಡಿಮಿಡಿಗೊಳ್ಳುತ್ತಾ ಇರುವ ರಾಗದ್ವೇಷ ವಶರಾದ ದಂಪತಿಗಳು ದಾಂಪತ್ಯ ಧರ್ಮವನ್ನು ಗುರುತಿಸದ ಅವಿವೇಕಿಗಳು. ದೇಹದ ಮೇಲೆ ಮಾತ್ರವೇ ಇರುವ ಪ್ರೇಮವಲ್ಲ ಬರೀ ಮೋಹ. ದೇಹದ ಮೇಲಿಂದ ಹಿಂದು ಅಂತರಂಗದಲ್ಲಿರುವ ಅಂತರ್ಯಾಮಿಯಾದ ಪರಮಾತ್ಮನ ವರೆಗೂ ಹೋಗಿ ಆದೇವ ದೇವನನ್ನು ಕಂಡುಕೊಳ್ಳುವಂತ ಪ್ರೇಮವೇ ನಿಜವಾದ ಪ್ರೇಮ. ಈ ಸತ್ಯ ಪ್ರೇಮವನ್ನೇ ದಂಪತಿಗಳು ಪರಸ್ಪರ ಉಪಾಸಿಸಬೇಕು. ಕೇವಲ ದೇಹ ಸೌಂದರ್ಯದ ಮೇಲೆ, ಧನಧಾನ್ಯ ಸಂಪತ್ತಿನ ಮೇಲೆ, ಬಾಹ್ಯ ವಿಷಯಗಳ ಮೇಲೆ ಆಧಾರಪಟ್ಟಿರುವ ದಾಂಪತ್ಯವು ದುಃಖಾಂತವನ್ನೇ ಹೊಂದುತ್ತದೆ— ಆತ್ಮ ಸೌಂದರ್ಯದ ಮೇಲೆ, ವಿಜ್ಞಾನ ಸಂಪತ್ತಿನ ಮೇಲೆ ಆಧಾರಪಟ್ಟಿರುವ ದಾಂಪತ್ಯ ವಾಸ್ತವ್ಯವೇ ಸುಖವನ್ನು ಪಡೆಯುತ್ತದೆ. ಈ ಸೌಂದರ್ಯಗಳು, ಈ ಪಾಂಡಿತ್ಯ ಪ್ರಕಾಶಗಳು ಎಷ್ಟು ದಿನಕ್ಕೆ ಉಪಯೋಗಕ್ಕೆ ಬಂದಾವು? ಈ ಸಂಪತ್ತುಗಳೆಷ್ಟು ದಿವಸಕ್ಕೆ ಬಂದೀತು? ಈ ಮನೆ ಮಂದಿ ಸ್ಥಿತಿ ಎಷ್ಟು ದಿನವಿದ್ದೀತು? ಈ ಎಂಡ ದಂಡಗಳೆಷ್ಟರ ವರೆಗೆ ರಕ್ಷಿಸೀತು? ಇವೆಲ್ಲಾ ಕ್ಷಣ ಭಂಗುರಗಳು. ಅಶಾಶ್ವತವಾದ ಈ ಭೌತಿಕ ವಿಷಯಗಳ ಮೇಲೆ ಆಧಾರಪಟ್ಟಿರುವಂಥಹ ಹುಚ್ಚು ದಾಂಪತ್ಯ ನಿಲ್ಲಲಾರದೆ ಬಿದ್ದು ಹೋಗುತ್ತದೆ. ನಿತ್ಯವಾದ ಆತ್ಮದ ಮೇಲೆ ಆಧಾರಪಟ್ಟಿರುವ ದಾಂಪತ್ಯವು ನಿತ್ಯವಾಗಿ ನಿತ್ಯ ಕಾಲಾನ್ಯಾಯ ಬಿಚ್ಚಿ ತೀರ್ಥರಾಮನು ವಿಸ್ಪಷ್ಟವಾಗಿ ನಿಲ್ಲುವುದು. ದಾಂಪತ್ಯ ಧರ್ಮವೆಂದರೆ ಪರಸ್ಪರ ಸಹಾಯತೆಯಿಂದ ಆತ್ಮೋದ್ಧರಣವನ್ನು ಮಾಡಿಕೊಂಡು ದೈವಾನಂದವನ್ನು ಹೊಂದುವುದು.

ಕ್ಷಣಿಕ ವಾಸವಿಕ ಸುಖಕ್ಕಾಗಿ ಯಾವ ದಂಪತಿಗಳೂ ಧರ್ಮವನ್ನು ತಿರಸ್ಕರಿಸಿದ ದುರ್ಗತಿಯು ಪಾಲಾಗಬಾರದು. ಗಂಡ ಹೆಂಡಿರು ತಮ್ಮ ಪರಸ್ಪರ ಪ್ರೇಮವನ್ನು ಪರಸ್ಪರ ವಿಕಾಸಕ್ಕಾಗಿ, ಪರಸ್ಪರ ಸತ್ಯ ಶಾಂತಿಗಾಗಿ ಪರಸ್ಪರ ಅಭ್ಯುದಯಕ್ಕಾಗಿ ಕ್ಯಾಗರೂಪೇಣ ನಿರೂಪಿಸಿಕೊಳ್ಳಬೇಕು. 'ಭಾರ್ಯಾ ಭರ್ತೃ' ಇವರ ಪರಸ್ಪರ ಸಹಕಾರದಿಂದ ಪಶುವಿಕಾಸವನ್ನು ಸಂಸ್ಕಾರವಾಗಿ ಮಾಡಿಕೊಂಡು ಪರಮಾತ್ಮ ಜ್ಞಾನವನ್ನು ಹೊಂದಬೇಕು. ಆಗ ಅದು ದಾಂಪತ್ಯದಲ್ಲಿ 'ದಾಂಪತ್ಯ ಯೋಗ' ವಾಗುತ್ತದೆ. ಭಾರತೀಯ ದಾಂಪತ್ಯ ರಹಸ್ಯವಿದೇ ಆಗಿರುತ್ತದೆ.

ಪಶು ಪ್ರಾಯವಾದ ದಂಪತಿಗಳ ಕಾಲಾಧಿಕ್ಯತೆ, ವಿದ್ಯಾಧಿಕ್ಯತೆ, ಸೌಂದರ್ಯಾಧಿಕ್ಯತೆ ಇತ್ಯಾದಿ ಇತ್ಯಾದಿ ಎಲ್ಲವೂ ವ್ಯರ್ಥ. ಅವೆಲ್ಲಾ ಕಷ್ಟರೋಗದ ಗಾಯಗಳ ಮೇಲೆ ಕಟ್ಟಿರುವಂಥ ಬಟ್ಟೆಗಳ ಕಟ್ಟುಗಳು ಮಾತ್ರವೇ. ದ್ವಿಗುಣಗಳಿಂದ ಕೂಲಾಧಿಕ್ಯತೆ ಪ್ರಕಟವಾಗಬೇಕು.

ದಂಪತಿಗಳು ಶೀರ ಕಲೆಯಂತೆಯೇ ಆತ್ಮಕಲೆಗಳನ್ನು ಕಲಿಯಬೇಕು. ಮಕ್ಕಳನ್ನು ಹಡಯುದರೊಂದಿಗೆ ಮಾತೃತ್ವ ಪಿತೃತ್ವ ಸಿದ್ಧಿಯನ್ನು ವಿಶಾಲ ವಿಶ್ವಪ್ರೇಮೈಕ್ಯ ದೃಷ್ಟಿಯನ್ನು ಸಂಪಾದಿಸಬೇಕು. ಕುಟುಂಬ ಕ್ಷೇಮಸಂಸ್ಥೆಯಂದಿಗೆ ಪ್ರಕುಂಚದ ಪ್ರೇಮವನ್ನು ಕೂಡಾ ನೋಡಿಲು ಕಲಿಯಬೇಕು. ಮನಸಿಗೆಲ್ಲ ದೊಂದಿಗೆ ಮಾನವ ಸೇವೆಯನ್ನು ನಿರ್ವಹಿಸುವುದಕ್ಕೆ ಅಭ್ಯಸಿಸಬೇಕು. ಆಗಲೇ ಗೃಹವು ಗೃಹವಾಗುತ್ತದೆ. ಇಲ್ಲವಾದರೆ ಅದು ಕ್ರೂರ ನೃತ್ಯಗಳು ಜೋರಾಡಿಯಾಗಿರುವ ಕಾದಾಗತ್ತಲೆಯಂ ಮುಸುಕಿರುವ ಗುಹೆಯಾಗುವುದೆನ್ನುವದಕ್ಕೆ ಸಂದೇಹವೇನು? ಹೃದಯ ಸೌಂದರ್ಯವಿಲ್ಲದ ಸ್ತ್ರೀ, ಹೃದಯ ಸೌಂದರ್ಯವಿಲ್ಲದ ಪುರುಷನು—ದಾಂಪತ್ಯ ಧರ್ಮಾನುಭವವನ್ನು ಅನುಭವಿಸಲಾರರು. ವಿಯೋಗ; ಅಭಿಯೋಗಗಳ ಪಾಲಾಗುತ್ತಾರೆ. ಹೃದಯ ಸೌಂದರ್ಯವೆಂದರೆ — ಧಾರ್ಮಿಕ ಸಂಸ್ಕೃತಿ ಎಂದರ್ಥ— ಆತ್ಮಜ್ಞಾನವೆಂದರ್ಥ.

ಧಾರ್ಮಿಕ ಸಂಸ್ಕೃತಿಯಿಲ್ಲದ ಗೃಹಿಣಿ ಗೃಹಿಣಿಯೊಗಲಾರಳು; ಇನ್ನು ಮಿಕ್ಕಳ ಸ್ಥಿತಿ ಹೇಗೆ ತಾನೆ ಉದ್ಧಾರವಾಗುತ್ತೆ? ಬಂಧು ವರ್ಗವನ್ನು, ಲೋಕವನ್ನು ಹೂಪ ವಿಶ್ವಂಗಿ ಪ್ರೇಮಿಸಬಲ್ಲಳು? ಅದೇ ರೀತಿ ಪುರುಷನೂ ಅಧಾರ್ಮಿಕನಾದರೆ ತನ್ನ ಧರ್ಮಪತಿಯನ್ನು ಪ್ರೇಮಿಸಲಾರನು. ಮಕ್ಕಳನ್ನು, ಆತ್ಮೆ ಮನೆ, ತಮ್ಮ ತಂಗಿಯರು, ಬಂಧು ವರ್ಗ, ಲೋಕವನ್ನು ಯಾವ ವಿಧವಾಗಿ ಪ್ರೇಮಿಸಲಾರಿಯಂತಾನೆ?— ಧಾರ್ಮಿಕ ಸ್ತ್ರೀಯರು ಆದರ್ಶ ಸ್ತ್ರೀಯೆನಿಸುವದು, ಧಾರ್ಮಿಕ ಗಂಡಸರು ಆದರ್ಶ ಗಂಡ ಸಂತಾನವರು— ಆದರ್ಶ ಮಾತೆಯೆನಿಸುವದು-ಆದರ್ಶಪಿತನೆನಿಸುವದು-ಅಂದರೆಮಾತೆಯೆಂದರೆ ಮಕ್ಕಳನ್ನು ಹೆರುವದು ಎಂಬ ಅರ್ಥವಲ್ಲ. ಮಾತೃ ಹೃದಯವು ಸಿದ್ಧಿಯನ್ನು, ವಿಶಾಲ ಪ್ರೇಮ ಯೋಗ ಸಿದ್ಧಿಯನ್ನು ಪಡೆಯುವದೆಂದು ಅರ್ಥ. ತಂದೆಯೆಂದರೆ ಪಿತೃ ಹೃದಯ ಸಿದ್ಧಿಯನ್ನು ವಿಶ್ವ ಪ್ರೇಮಯೋಗ ಸಿದ್ಧಿಯನ್ನು ಹೊಂದುವರೆಂದು ಅರ್ಥ. ಹಾಳು ಜೇಳು ಹುಳು ಹುಪ್ಪಟೆಗಳಂತೆ, ಹುಲಿಗಳಂತೆ ಹೆಡಿಗೆ ಸಂತಾನವನ್ನು ಪಡೆದರೂ, ಹೃದಯ ವಿಕಾಸ ಸಿದ್ಧಿಯನ್ನು ಹೊಂದದೆ ವಿಶ್ವ ಪ್ರೇಮ ಯೋಗಸಿದ್ಧಿಯನ್ನು ಪಡೆಯದ ದಂಪತಿಗಳು, ದಾಂಪತ್ಯಯೋಗ ಫಲವಾದ ಬ್ರಹ್ಮದರ್ಶನ ಶ್ರೀಯನ್ನು ಹೊಂದದೆ "ಬಂಜೆ ಬಸವರಂತೆ' ಸಂತಾನವನ್ನು ಪಡೆಯುದೇ ಇದ್ದರೂ ಸಮ್ಯಗ್ದರ್ಶನಶ್ರೀಯನ್ನು ಹೊಂದಿದ ದಂಪತಿಗಳು ಸಂತಾನ ಹೀನರಾದರೂ ಪೂರ್ಣತ್ವ ಪಿತೃತ್ವ ಸಿದ್ಧಿಯನ್ನು ಹೊಂದಿದ ಪರಮ ಧನ್ಯ ಜೀವಿಗಳ ಸಾಲಿಗೆ ಸೇರಲರ್ಹರಾದವರಾಗಿರುತ್ತಾರೆ. ಈ ಆತ್ಮ ಸೌಂದರ್ಯವನ್ನು — ಈ ಜ್ಞಾನ ವಿಕಾಸವನ್ನು— ಈ ದಾಂಪತ್ಯ ಧರ್ಮವನ್ನು— ವ್ಯಾಪ್ತಿಗೊಳಿಸುವದಕ್ಕಾಗಿ ಸರ್ವ ಸ್ತ್ರೀ ಪುರುಷರೂ ತೀವ್ರ ಶ್ರದ್ಧೆಯನ್ನೂ ವಹಿಸುವದು ಆಗತ್ಯ. ಪಾರ್ವತೀದೇವಮೇಶ್ವರರೂ ಸಾವಿತ್ರಿ ಸತ್ಯವಾನರು— ಸೀತಾರಾಮರು— ರಾಧಾಕೃಷ್ಣರು —ಅರುಂಧತೀ ವಶಿಷ್ಠರು— ದಮಯಂತೀನಳರು, ಮೊದಲಾದ ಪುಣ್ಯ ಸತಿ ಪತಿಯುಂ ಭಾರತೀಯ ದಂಪತಿಗಳಿಗೆ ಆದರ್ಶ ಮೂರ್ತಿಗಳಾಗಿ ಮೆರೆಯಲಿ.

ಚಂಚಲವಾದ ಈ ಮಾನವ ಜೀವಿತದಲ್ಲಿ ಶಾಶ್ವತ ಸುಖಪ್ರದವಾದ ಧರ್ಮಪಾಠವನ್ನು ವಿಶ್ವ ಪ್ರೇಮವಾತರವನ್ನು ಕಲಿಯಲು ಪರಿತಪಿಸದೇ ಕೇವಲ ಪಶು ಪ್ರವೃತ್ತಿಯನ್ನು ತೀರಿಸಿಕೊಳ್ಳಲು, ಧನ ಕ್ಷೇಕರಿಸಿಕೊಳ್ಳಲು ಆಸ್ತಿಕಾಸ್ತಿಗಳನ್ನು ವನ್ಯಾರಗೊಳಿಸಲು, ಅಂಬಲಿತ್ತಿರುವ ಸತಿ ಪತಿಯರು ತಮ್ಮನ್ನು ತಾವೇ ವಂಚಿಸಿಕೊಳ್ಳುವ ಮಂದ ಭಾಗ್ಯರು. ಗಂಡಹೆಂಡಿರು ಒಬ್ಬರಿಗೊಬ್ಬರು ನರಕ ದ್ವಾರಗಳಿಗಬಾರದು. ಸ್ವರ್ಗ ದ್ವಾರಗಳಾಗಬೇಕು. ಅದಕ್ಕಾಗಿ ಗಂಡಹೆಂಡಿರು ಪ್ರಯತ್ನ ಕೃಷಿರುನ್ನು ಮಾಡಬೇಕು. ಆಗಲೇ ಒಬ್ಬರಿಗೊಬ್ಬರು ನ್ಯಾಯವಾಗಿಯೂ ಪ್ರೇಮವಾಗಿಯೂ ವರ್ತಿಸಿದಂತೆ ಆಗುವದು. 'ಧಾರ್ಯೇರ್ಧರ್ತರಿ' ಅಂತರ್ಯ ಧರ್ಮ — ಒಬ್ಬನಿಗೊಬ್ಬರು, ಸಹಕರಿಸುವ ಧರ್ಮ ತಿಳಿಸಿರವನ್ನು ಮಾಬ್ಬುವ ಬಾಹ್ಯ ಧರ್ಮವಿಲ್ಲ ಕೊಡ ಇವೆ. ಯಾರಾದರೂ ಒಬ್ಬರಿಗೆ ರೋಗ ಬಾಧಿಸಲಿ ಅವರಲ್ಲಿ ಅರೋಗ್ಯದಾಯಕನಾದ ವ್ಯಕ್ತಿ ಇನ್ನೊಬ್ಬನಿಗೆ ಸಹನೆಯಿಂದ ಒಳ್ಳೆ ವನಸಂತೈಕೆಯಿಂದ ಸೇವೆಯನ್ನು ಮಾಡಿ ಅನಾರೋಗ್ಯ ನಿವೃತ್ತಿಗೆ ಪ್ರಯತ್ನಿಸುವುದು ಧರ್ಮ. ಅಂತೆಯೇ ಸತಿಪತಿಗಳಲ್ಲೊಬ್ಬರಿಗೆ ಅನಾರೋಗ್ಯವಾದರೂ ಮಾನಸಿಕ ಜಾಡ್ಯ — ಅಂದರೆ - ಕಾಮ ಕೆಲ್ಸಾಧೆ ಎಂದು ಮಾತ್ಸರ್ಯಾದಿಗಳಿಲ್ಲದೆ ಇನ್ನು ದಾಸೆ— ಭೋಗ ಲಾಲಸ— ಪಥ್ಯವಿಲ್ಲದೆ ತೆ—ಅಜ್ಞಾನ ಸ್ವಾರ್ಥ ಮೊದಲಾದುವುಗಳಿಂದಲ್ಲಿ ಆ ಪುಣ್ಯಾರ್ಜಿತ ಆತ್ಮ ರೋಗ್ಯ (ಜ್ಞಾನ)ವಿದ್ದವರು ಎಂತಹನೇಯವರೆ ಮಾನಸಿಕ ರುಗ್ಣತಾ ನಿರ್ಮೂಲನಕ್ಕ ಸಹನೆಯಿಂದ ಜಾಣತನದಿಂದ ಶಕ್ತಿಯುರಿ ಸೇವೆ ಮಾಡಬೇಕು. ಸಾಷ್ಟ್ಯಕ್ಕೆ, ಪಾರ್ಜನ್ಯಕ್ಕೆ, ನಿರ್ದಯಕ್ಕೆ, ನಿರಂಗಣಿಗೆ

(ಹನ್ನೆರಡನೇ ಪುಟ ನೋಡಿರಿ)

ಆರ್ಥಿಕ ಯಶಸ್ಸಿನೆಡೆಗೆ

ನೋಮುಯ್ಯ ಕೈಮಗ್ಗದ ಕಾರ್ಖಾನೆಯೊಂದರಲ್ಲಾ ಅತನ ಸಹೋದರ ಬಂಡು ಮೋಟಾರು ಓಲಿರಿ ನಾಡುವ ಯಂತ್ರಾಗಾರದಲ್ಲಾ ದಿನಗೂಲಿ ಕೆಲಸಗಾರರಾಗಿ ಕೊಂಡಿದ್ದರು. ಇಬ್ಬರೂ ಸಿಂಡಿಕೇಟ್ ಬ್ಯಾಂಕಿನಲ್ಲಿ ಸಿಗ್ಗಿ ಠೇವಣಿಗಳನ್ನು ತೆರೆದು ತಮಗೆ ದೊರೆತ ವೇತನದ ಕನ್ನ ಭಾಗವನ್ನು ಖಾತೆಯಲ್ಲಿ ಪ್ರತಿದಿನವೂ ಜಮಾ ಮಾಡತೊಡಗಿದರು.

ದಿನಂಪ್ರತಿ ಅವರು ಖಾತೆಯಲ್ಲಿ ಕೂಡಿಟ್ಟ ಹೊತ್ತವು ತೀರಾ ಕಿರಿಯ ಪ್ರಮಾಣದ್ದಾಗಿದ್ದರೂ ಸಹ ವರ್ಷಗಳ ಕೊನೆಗೆ ಒಟ್ಟು ಬಡ್ಡಿ ಸಹಿತ ಅವರಿಬ್ಬರಿಗೆ ಬೇರೆ ಬೇರೆ ದೊರೆತ ಹೊತ್ತ ನಿಜಕ್ಕೂ ಹಿರಿಯ ಪ್ರಮಾಣದ್ದಾ. ಹಾಗಾಗಿದಿಟ್ಟ ಚಿಕ್ಕ ದಂಡವೇಳದಿಂದ ಸೋಮಯ್ಯ ಇಂದು ಸ್ವಂತ ಕೈಮಗ್ಗದ ಕಾರ್ಖಾನೆಯೊಂದನ್ನು ತೊಡಗಿದ್ದಾನೆ. ಚಾಮು ಚಿಕ್ಕ ಪ್ರಮಾಣದ ಮೋಟಾರು ರಿಪೇರಿಯ ಯಂತ್ರಾಗಾರವನ್ನು ತೊಡಗಿದ್ದಾನೆ.

ಇಂದು ಇವರಿಬ್ಬರೂ ತಮ್ಮ ಉದ್ಯಮಗಳನ್ನು ವಿಸ್ತೃತ ಪ್ರಮಾಣದಲ್ಲಿ ಬೆಳೆಸಬೇಕೆಂದು ಬಯಸಿದ್ದಾರೆ. ಸಿಂಡಿಕೇಟ್ ಬ್ಯಾಂಕು ಅವರಿಗೆ ಅವಶ್ಯವಿದ್ದ ಹಣವನ್ನು ಸಾಲದ ರೂಪದಲ್ಲಿ ನೀಡುತ್ತದೆ. ನಾವಿನ ಚಿಕ್ಕ ಉದ್ದಿಮೆಗಳು ಬೆಳೆಯಲು ಹೆಚ್ಚು ಹೆಚ್ಚು ಮಂದಿಗೆ ಆರ್ಥಿಕ ನೆರವನ್ನು ನೀಡಬೇಕೆಂದುದೇ ಸಿಂಡಿಕೇಟ್ ಬ್ಯಾಂಕಿನ ಆಶಯವಾಗಿದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ದಕ್ಷಿಣ ಕನ್ನಡ ಜಿಲ್ಲೆ.

ಸಾಹಿತ್ಯ ವಿಹಾರ

ಶ್ರೀ ಮುಕುಂದ ಮಾಲಾ ಸ್ತೋತ್ರ

ಲೇಖಕರು:
ಶ್ರೀ ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು

[ಸ್ವಾತಂತ್ರ್ಯ ಸಂಚಿಕೆಗೆ ಬಂದುದು]

ಭಾವುಕನು ಆಸ್ತಿಕನಾದರೆ ದೈವಿಕ ವಿಚಾರದತ್ತ ತನ್ನ ಗಮನವನ್ನು ಹರಿಯಿಸುತ್ತಾನೆಂಬುದು ಸಹಜಸಂಗತಿಯೂಆಗಿದೆ. ಆದಾಗಲೇ 'ಧರ್ಮ'ವೆಂದರೇನೆಂದು ಮೊದಲಾದವಿಚಾರಗಳಾತಿಳಿಯಬೇಕಾಗುತ್ತದೆ 'ಆಹಾರ ನಿದ್ರಾಭಯ ಮೈಥುನಗಳು ಪಶುಗಳಿಂದ ಮಾನವನ ತನಿಕ ಸಾಮಾನ್ಯವಾಗಿದೆ. ಮಾನವನಿಗೆ ಧರ್ಮ'ವೆಂಬುದು ಚೆಚ್ಚಿನದಾಗಿದೆ, 'ಧರ್ಮ'ದಿಂದ ಹೀನನಾದವನು ಪಶುಗಳಿಗೆ ಸಮಾನನ" ಎಂಬೊಂದು ಸೂಕ್ತಿಯಿದೆ ಮಾನವನು ಬುದ್ಧಿಜೀವಿಯೂಆಗಿದ್ದಾನೆ. ಇತರ ಪ್ರಾಣಿಗಳಿಗಿಂತಲೂ ಮಾನವನಿಗೆ ಬೌದ್ಧಿಕ ಬಲವೊಂದು ಹೆಚ್ಚಿನದಾಗಿ ದೈವದತ್ತವಾಗಿದೆ. ಪರಂತು, ಪ್ರತಿಯೊಬ್ಬನೂ ಆಚರಿಸಕ್ಕ 'ಧರ್ಮ'ವೆಂದರೇನೆಂದು ತಿಳಿಯುವಂಯಸಿದಾಗ ಕಾಲಾಂತರದಲ್ಲಿ ಪ್ರಸಾರಗೊಂಡ 'ಮತ'ಗಳನ್ನು ವಿಧೇಶಿಸುತ್ತಾರೆ. ಆದರೆ, ಪ್ರತಿಯೊಂದು 'ಮತದಲ್ಲಿರುವ ಒಳ್ಳೆಡೆ-ಒಳ್ಳುಗಿಗಳನ್ನು ಗಮನಿಸಿದರೇನೇ ಈ ಬಗೆಗೆ ಸಂಗತವಾದೀತು. ಹಾಗಲ್ಲವಾದರೆ ಸ್ವಮತದವರೇ ಒಳ್ಳೆಯವರೆಂದೂ, ಪರಮತದವರೆಲ್ಲರೂ ಜೆನ್ನಲ್ಲವೆಂಬ ಆಶಯಕ್ಕೆಡೆ ಸೂಗುತ್ತದೆ. "ಸ್ವಧರ್ಮವು ವಿಗುಣವಾದರೂ ಶ್ರೇಷ್ಠುಸ್ಸಿನದಾಗಿದೆ, ಪರಧರ್ಮವು ಭಯಾವಹ" ವೆಂಬ ಗೀತಾಚಾರ್ಯನ ಮಾತು ಈ ಬಗೆಗೆ ಸಮಾಧಾನವನ್ನುಂಟುಮಾಡುತ್ತದೆ. ಕೆಡಕನ್ನು ನಿವಾರಿಸುತ್ತದೆ. ವಾಸ್ತವಿಕವಾಗಿ ವಿಚಾರಿಸಿದರೆ, ವೈದಿಕೋತ್ತವಾದ ಹಾಗೂ ಆತ್ಮಸಮ್ಮತವಾದ ವರ್ತನೆಯೇ ಇಹಪರಗಳಲ್ಲಿ ಉತ್ಕರ್ಷಿಕೆಯನ್ನು ಹೊಂದಿಸುವುದೆಂದು ಹೇಳಲಡ್ಡಿಯಿಲ್ಲ. ಪ್ರಾಚೀನ ಗ್ರಂಥಗಳಲ್ಲಿ ಜ್ಞಾನಕರ್ಮಗಳು ಪ್ರಾಧಾನ್ಯವಾಗಿವೆ. ಮಂಡಿ ಭಕ್ತಿಯೂ ತದ ರೂಢಿಯಿಗೆ ಸಾಮ್ಯವಾಗಿದೆ. ಅಂದ ಮೇಲೆ, ಈ 'ಮೂರು ದಾರಿ'ಗಳಲ್ಲಿ ಆವುದು ಲೇಸು ಎಂದೂ (ಆವುದು ಜೆನ್ನಲ್ಲವೆಂದೂ) ಜಿಜ್ಞಾಸೆಯೆಸಗುಸ್ತಡೆ ಉದಿರೆ, ಈ ಮೂರು ತರದಲ್ಲಿ ಪ್ರತಿಯೊಂದರಲ್ಲೂ ಬೇರೆ ಎರಡರ ಹೊಂದಾಣಿಕೆಯಿಲ್ಲದ ಸೂರ್ಣತೆಯೂಗಲಾರದೆಂಬುದು ಗಮನೀಯವು. ಅರ್ಥಾತ್, ಜ್ಞಾನಯೋಗವಾಗಲೀ ಕರ್ಮಯೋಗವಾಗಲೀ ಬಹು ಕಷ್ಟಸಾಧ್ಯವಾಮದರಿಂದ, ಭಕ್ತಿಯೋಗವೇ ಸಾಮಾನ್ಯ ಮಾನವನಿಗೆ ಉತ್ತಾರಕ ಸಾಧನವೆಂದು ಗೀತಾಚಾರ್ಯನೂ ಉಪದೇಶಿಸಿದ್ದಾನೆ. ಈ ಬಗೆಗೆ ಸಹಸ್ರಾರಿದಳಿಗಿ ಹಲವಾರು ಮಹನೀಯರು ಬರೆದು ಯಾಡಿದ ಅನೇಕ ಕೃತಿಗಳು ಪ್ರತಿಯೊಂದು ನಾಡಿನಲ್ಲೂ ಪ್ರತಿಯೊಂದು ಜನಾಂಗದಲ್ಲೂ, ಪ್ರತಿಯೊಂದು ಭಾಷೆಯಲ್ಲೂ ಪ್ರಚುರಗೊಂಡಿವೆ. ಶ್ರೀ ಮುಕುಂದ ಮಾಲಾ ಸ್ತೋತ್ರವು ಅಂತಹದೊಂದು ಜಳಿಮಿಷ್ಟತಿಯಾಗಿದೆ.

ಇದರ ಕರ್ತೃವಾದದೋ, ಧಕ್ಷ ಕವಿಗಳಲ್ಲಿ ಒಬ್ಬನಾದ, ತಿರುವಾಂಕೂರ್ ರಾಜನಾಗಿದ್ದ ಶ್ರೀಕುಲಶೇಖರನು. ಇವನು ಇಸ್ವಿ 825—43ರಲ್ಲಿದ್ದನೆಂದು ಚಾರಿತ್ರಿಕ ವಿದ್ವಾಂಸರು ಒಮ್ಮತಿಯುತ್ತಾರೆ (ಜರ್ನಲ್ಸ್ ಒಫ್ ರಾಯಲ್ ಏಸಿಯಾಟಿಕ್ ಸೊಸೈಟಿ, ಇಸ್ವಿ 1925. ಪುಟ 263—275 ನೋಡಿರಿ). ಇವನು ಸ್ವಯಂಪಂಡಿತ ಕವಿಯೂ ಭಕ್ತನೂ ಆಗಿದ್ದನಲ್ಲದೆ, ತನ್ನ ಕಾಲದಲ್ಲಿ ಭಕ್ತಿ ಮಾರ್ಗದ ಅನೇಕ ಕೃತಿಗಳ ರಚನೆಗೆ ಕಾರಣನೂ ಆಗಿದ್ದನೆ. ಇವನು ರಚಿಸಿದ ಈ ಸ್ತೋತ್ರವು ಇದಾಗಲೇ ಹಲವಾರು ಭಾಷೆಗಳಲ್ಲಿ ಅನುವಾದಗೊಂಡಿದೆ ಇದು ಮುಂಬಯಿಯ ನಿರ್ಣಯ ಸಾಗರ ಮುದ್ರಣಾಲಯದಲ್ಲಿ ಮುದ್ರಿತವಾದ 'ಬೃಹತ್ ಸ್ತೋತ್ರ ರತ್ನಾಕರ'ದಲ್ಲಿದೆ. ಆದರೆ, ಇದರಲ್ಲಿಪ್ಪಿದ, ಇದಕ್ಕೆ ಕೊನೆಯಲ್ಲಿರಬೇಕೆನ್ನಿಸುವ ಹತ್ತೆಂಟು—ಮತ್ತೊಂದು ಪದ್ಯಗಳು ಇದೇ ಮುದ್ರಣಾಲಯದಿಂದ ಪ್ರಕಟವಾದ 'ರಾಮ್ಯಮೂಲೆ'ಯಲ್ಲಿ ದೊರೆಯುತ್ತಿಕ್ಕವೆ. ಹಾಗೂ ಆದರಲ್ಲಿಲ್ಲದ, ಬೇರೆ ಕೃತಿಗಳಲ್ಲಿರಬೇಕೆನ್ನಿಸುವ ಆರೇಳು ಪದ್ಯಗಳು 'ಬೃಹತ್ ಸ್ತೋತ್ರ ರತ್ನಾಕರ'ದಲ್ಲಿವೆ ("ಶ್ರೀನಲ್ಲಭೇತಿ, ಭವ ಜಲಧಿಗತಾನಾಂ, ರಜಸಿ ನಿರತಿತಾನಾಂ, ಅಪರಾಧ ಸಹಸ್ರ ಸಂಕುಲಂ, ಮಾವೇ ಸ್ತ್ರೀಸ್ವಂ, ಕಾಯೇನವಾಚಾ, ಯತ್ಕೃತಂ ಯತ್ಕೃತಂ ಯತ್ಕೃಪಷ್ಯಾಮಿ'ಗಳು.) ಒಂದೆಡೆಯಲ್ಲೆ ಪ್ರಕಟವಾದ ಇಬ್ಬಗೆಯ ಕೃತಿಗಳಲ್ಲಿ ಹೀಗೆ ಅಧಿಕ ಪಾಠಾಂತರಗಳಿರುವುದು ವಿಚಿತ್ರವಾಗಿದೆ. ಆದರೆ, ಕಾವ್ಯಮಾಲೆಯ ಸಂಕಲನ ಪ್ರತಿಯಲ್ಲಿರುವಂತೆ ವಿಸ್ಕೆಲ್ಲಾ ಪದ್ಯಗಳು ಇದರಲ್ಲಿರ ಬೇಕಾದೀತು. ಬಲ್ಲವರು ಇನ್ನೂ ಹೆಚ್ಚು ಸಂಶೋಧಿಸಿದರೆ, ಈ ಇಬ್ಬಗೆಯಾ ಇತ್ಯರ್ಥವಾದೀತು. ಪ್ರಕೃತ, ಇದರಲ್ಲಿರುವ ವಿಶಿಷ್ಟವಾದ ಮೂರು ಪದ್ಯಗಳ ಸಾಮಾನ್ಯ—ವಿಶೇಷಾರ್ಥಗಳು ಬರೆಯಲಾಗಿವೆ

ಆವೊಂದು ಜೀವಿಯು ಆಧಿವ್ಯಾಧಿಗಳು ಪೂರ್ವ ಜನ್ಮಾಂತರದ ಕರ್ಮಫಲಗಳೆಂದು ಭಾರತೀಯರು ಒಪ್ಪಿಕೊಳ್ಳಕ್ಕುದಾಗಿದೆ. ಅವುಗಳನ್ನು ಹೋಗಲಾಡಿಸಲು ಹಲವಾರು ಸಾಧನಗಳು ಹೇಳಲಾಗಿವೆ. ಅವುಗಳಲ್ಲಿ ಮಣಿ — ಮಂತ್ರ — ಔಷಧಗಳು ಮುಖ್ಯವಾದವುಗಳೆಂದು ಗ್ರಂಥಾಂತರಗಳಲ್ಲಿ ಹೇಳಲಾಗಿದೆ. ಇವುಗಳಲ್ಲಿ ಮಣಿ ಹಾಗೂ ಔಷಧಗಳು ಸ್ವಯಂ ಪ್ರಭಾವಿಗಳಾದರೂ ಅವುಗಳೂ ಅಸ್ತಿಕತೆಯನ್ನು—ವಿಶ್ವಾಸವನ್ನು ಹೊಂದಿಯೇ ಫಲಿಸುವವು. ಅದಕ್ಕಿಂತ ಹೆಚ್ಚಾಗಿ ಮಂತ್ರ ಪ್ರಯೋಗಾನುಷ್ಠಾನಗಳಿಗೆ ದೈವಿಕ ವಿಶ್ವಾಸವು ಸಂಬಂಧಿಸಿರುತ್ತದೆ. ಮಣಿಗಳಲ್ಲಿ ಹಲವು ತರದವು ಇವೆ. ಬೇರೆ ಬೇರೆ ವಣಿಗಳ ಲಕ್ಷಣ ಫಲಗಳು ಬೇರೆ ಗ್ರಂಥಗಳಲ್ಲಿ ಹೇಳಿವೆ (ಶಿವತತ್ತ್ವರತ್ನಾಕರ ಮೊದಲಾದವುಗಳಲ್ಲಿವು ಪ್ರಾಸಂಗಿಕವಾಗಿದ್ದರೆ, ರತ್ನ ಪರೀಕ್ಷೆ ಮೊದಲಾದವುಗಳಲ್ಲಿ ಸೋದ್ದಿಶ್ಯವಾಗಿ ವಿವರಿಸಲಾಗಿವೆ) ಅಂತೆ, ಮಂತ್ರಗಳು ಕೆಲವೆಡೆ ಅನ ಘಂಗಿಕವಾಗಿದ್ದರೆ, ಬೇರೆ ಕೆಲವಲ್ಲಿ ಪ್ರಾಧಾನ್ಯ ವಿಷಯವಾಗಿ ಹೇಳಲಾಗಿವೆ ಔಷಧಗಳು ಅಷ್ಟಾಂಗ ಹೃದಯ, ಸುಶ್ರುತ ಮೊದಲಾದವುಗಳಲ್ಲಿ ಪ್ರಾಮುಖ್ಯವಾಗಿದ್ದರೆ, ಇತರತ್ರ ಉಪಬೃಹಂಣಗಳಾಗಿವೆ. ಒಟ್ಟಿನಲ್ಲಿ, ಈ ವ ಣಿ—ಮಂತ್ರ—ಔಷಧಗಳು ಪ್ರತ್ಯೇಕಶಃ ಸುಪರಿಣಾಮಕಾರಿಗಳಾಗಿವೆಯೆಂದ ಮೇಲೆ, ಇವೆರಡು ಬಗೆಗಳಾಗಲೀ, ಮೂರು ವಿಧಗಳಾಗಲೀ ಒರಣವಾಗಿ ಸಮನ್ವೇಶಗೊಂಡರೆ ಆಧಿ ವ್ಯಾಧಿ ಹರಗಳಾಗುತ್ತವೆಯೆಂಬುದಕ್ಕೆ ಸಂದೇಹವೇ ಇಲ್ಲ! ಇವು ಪುಟ್ಟ ತರಗಳಾದರೂ ಅವುಗಳ ಶಕ್ತಿಯಿಂದಾಗಿ ಮಹಾಸಕರಲ್ಲಿ ವೈಶಿಷ್ಟ್ಯವಿದೆಯೆಂದು ಲೌಕಿಕರ ಹಲವು ಉದಾಹರಣಗಳಿಂದ ಸ್ಪಷ್ಟವಾಗುತ್ತದೆ. ಹಾಗಾಗಿ, ಮಹಾ ಶಕ್ತಿವಂತಗಳಾದ ಮಣಿ—ಮಂತ್ರ—ಔಷಧಗಳು ಸಂಪೂರ್ಣ ಫಲಪ್ರಾಯಿಗಳಾಗುತ್ತವೆಯೆಂಬುದು ಅತಿಶಯೋಕ್ತಿಯಲ್ಲ!

ಜೀವನದ ಒಂದು ಮುಖವಾದ ಇಹಲೋಕದಲ್ಲಾಗಲಿ, ಇನ್ನೊಂದು ಮುಖವಾಗಿರುವ ಪರಲೋಕದಲ್ಲಾಗಲಿ ಸಾರ್ಥಕ್ಯವನ್ನು ಪಡೆಯಲು ಮಹಾದೇವನೊಬ್ಬನನ್ನು ಮರೆ ಹೋಗಬೇಕೆನ್ನುವುದು ಸಾಧವಾದುದು. ಅಂತಹದೇವದೇವನೆಂದರೆ, ಶಿವನೆಂದೋ ವಿಷ್ಣುವೆಂದೋ ಇತರ ದೇವತೆಗಳೆಂದೋ ಅಯಾ ಉಪಾಸಕರ ಅಶಯದಂತರಬಹುದು. ಆದರೆ, ಪ್ರಾಮುಖ್ಯವಾಗಿ ಈ "ಮುಕುಂದಮಾಲಾ ಸ್ತೋತ್ರ"ದಲ್ಲಿ ಇದರ ಶೀರ್ಷಿಕೆಯಂತೆ ಮುಕುಂದನನ್ನೇ ಮುಖ್ಯ— ಮೂಲ - ಮಹಾನ್ ಶಕ್ತಿಯೆಂದು (ದೇವನೆಂದು.)ಭಾವಿಸುಕ್ತಾ ಪ್ರಾರ್ಥಿಸಲೆಳಸಿಯುದೆ. ಇತರ ದೇವರು (ದೇವತೆ)ಗಳೆಲ್ಲರೂ ಮುಕುಂದನನ್ನ ಮಿಕ್ಕವರಲ್ಲ, ಅತನ ಉಪಾಸನೆಯಿಂದಲೇ ತಾವು ಹಿರಿಮೆ—ಗರಿಮೆಗಳನ್ನು ಪಡೆದವರೆಂದೂ ಇಲ್ಲಿ ತಿಳಿಯಬರುತ್ತದೆ. ಮುಕುಂದನು ಭಕ್ತನ ಅನಿಷ್ಟ ಪರಿಹಾರಕ್ಕೆ ಮಣಿಯೂ ಆಗಿರುತ್ತಾನೆ, ಮಂತ್ರವೂ ಆಗಿದ್ದಾನೆ, ಔಷಧವೂ ಆಗಿರುವನೆಂಬುದೇ ಅದೊಂದು ಹೆಗ್ಗಳಿಕೆಯಾಗಿದೆ ಈ ಸ್ತೋತ್ರದಿಂದ ಈ ಮೂರು ಬಗೆಯ ಅಣ್ಣನೆಗಳು ಏಕಗ್ರವ್ಯನಾರ್ಥವಾಗಿ ಎತ್ತಿ ಬರಿಯಲಿವೆ. (ಅರ್ಥಾತ್, ಇತರ ಪದ್ಯಗಳು ಇವುಗಳಂತೆ ಆದ್ಯಾಯನಗಳೂ ಸಫಾಕೃತ್ಯಗಳೂ ಆಗಿವೆಯೆಂದು, ಅತವಿವ ಭಾವುಕರು-ಆಸ್ತಿಕರು ಈ ಸ್ತೋತ್ರವನ್ನು ಪೂರ್ತಿಯಾಗಿ ಓದಿಕೊಳ್ಳಬೇಕೆಂದು ಮೊದಲಾಗಿ ಸೂಚಿಸಬೇಕು) "ಗೋಪಾಲ ಚೂಡಾ ಮಣಿಯು ಬಣ್ಣನೆಯಿಲ್ಲಿದೆ.

'ಭಕ್ತ ದ್ವೇಷಿ ಭ-ಜಂಗಗಾರುಡ ಮಣಿಃ
ಶೈಲೋತ್ಥ ರಕ್ಷಾ ಮಣಿಃ| |
ಗೋಪೀಲೋಚನ ಜಾತಕಾಂಬುದ
ಮಣಿಃ
ಸಾಂದೀಪ್ಯ ಮುದ್ರಾ ವ ಜಿಃ|
ಶ್ರೀಕಾಂತಾಮಣಿ ರುಕ್ಮಿಣೀ ಘನಕುಚ
ವ್ಯಾಪ್ತೈಕ ಭೂಷಾ ಮಣಿಃ|
ಶ್ರೇಯೋ ಧ್ಯೇಯ ಉಪಾಮಧರ್ದಿಶತು
ನೋ
ಗೋಪಾಲ ಚೂಡಾಮಣಿಃ ॥ ೩೮ ॥"

ಭಕ್ತರನ್ನಾ ದ್ವೇಷಿಸುವವರಿಂಬ ಸರ್ಪಗಳಿಗೆ ಗರಡಮಣಿಯಾದ, ತ್ರಿಲೋಕದ ರಕ್ಷಾಮಣಿಯಾದ, ಗೋಪ ಸ್ತ್ರೀಯರ ಕಣ್ಣಿಗೆಂಬ ಚಾತಕ ಪಕ್ಷಿಗಳಿಗೆ ಮೇಘವು

(ಮುಂದಿನದು ಪುಟ ನೋಡಿರಿ)

ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ
ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50
ಉಳಿದ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಎಲ್ಲಕ್ಕೂ ಮೆಚ್ಚಿನದು

ರಾಷ್ಟ್ರ ಬಾಂಧವ್ಯ, ರಾಷ್ಟ್ರ ನಿಷ್ಠೆ

ಲೇಖಕರು: ಶ್ರೀ ರಂಗನಾಥ ದಿವಾಕರ.

ಪ್ರಾಣಿ ಮಾತ್ರಕ್ಕೆ ಸ್ವಾತಂತ್ರ್ಯ ಎಲ್ಲಕ್ಕೂ ಪ್ರಿಯ. ಮನುಷ್ಯನಿಗೆ ಸ್ವಾತಂತ್ರ್ಯ ರಹಿತ ಜೀವನವೆಂದರೆ ಮರಣಪ್ರಾಯವೇ ಸೈ. ತನ್ನ ಶಕ್ತಿ-ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು, ಬೆಳೆದ ಶಕ್ತಿ ಸಾಮರ್ಥ್ಯಗಳನ್ನು ಉಪಯೋಗಿಸಲು ಸ್ವಾತಂತ್ರ್ಯವಿಲ್ಲವಿದ್ದರೆ, ಆಯಾ ಮನುಷ್ಯನು ಬರೀ ಎತ್ತು-ಕತ್ತೆಗಳ ವರ್ಗಕ್ಕೆ ಸೇರಿದವನೇ ಸ್ವಾತಂತ್ರ್ಯ, ಸದಭಿಮಾನ, ವಿವೇಕ — ಇವು ಮನುಷ್ಯನ ಮುಖ್ಯ ಲಕ್ಷಣಗಳು

ಇಷ್ಟೇ ಮಾತು ಒಂದು ದೇಶವನ್ನು ಜನಾಂಗವನ್ನು ರಾಷ್ಟ್ರವನ್ನು ಅನ್ವಯಿಸುವುದು.

ಸ್ವಾತಂತ್ರ್ಯದ ನಿಜವಾದ ಬೆಲೆ ನಮಗೆ ಅದನ್ನು ಕಳೆದುಕೊಂಡಾಗ ತಿಳಿಯುವುದು! ಅದನ್ನು ಮರಳಿ ಪಡೆಯುವಾಗ ಅದರ ನಿಜವಾದ ಪ್ರತೀತಿ ಆಗುವುದು. ಪಡೆದ ಸ್ವಾತಂತ್ರ್ಯದ ಸಂರಕ್ಷಣೆ ಮಾಡುವಾಗ ಅದರ ಮಹತ್ವವು ಮತ್ತಷ್ಟು ಹೊಳೆಯುವುದು.

ಭಾರತವು ಬ್ರಿಟಿಷರ ಕಪಿಮುಷ್ಟಿಯಿಂದ ಮುಕ್ತವಾಗಿ ಇಪ್ಪತ್ತೇ ವರ್ಷಗಳಾಗಿವೆ. ನೂರು ವರುಷಕ್ಕೂ ನಾವು ಸ್ವಾತಂತ್ರ್ಯಸ್ವತವನ್ನ ಮಾಡುತ್ತೇವೆ. ಆ ಉತ್ಸವ ನಮ್ಮ ರಾಷ್ಟ್ರದ ಇಡೀ ಇತಿಹಾಸವನ್ನೇ ನಮಗೆ ನೆನಪು ಮಾಡಿಕೊಡುವುದು. ನಮ್ಮ ರಾಷ್ಟ್ರ, ಈ ಭಾರತ ಎಂಬ ಮಹಾನ್ ದೇಶ, ಎಂದೆಂದು, ಯಾವ ಯಾವ ಕಾರಣಗಳಿಂದ ಪರತಂತ್ರವಾಯಿತು, ಹಾಗೆ ಏಕೆ ಆಯಿತು, ಪುತ್ತೆ ಹೇಗೆ ನಾವು ಸ್ವಾತಂತ್ರ್ಯವನ್ನು ಹೇಗೆ ಪಡೆದೆವು; 15-8-1947ನೆಯ ದಿನ ನಾವು ನಮ್ಮ ಪೂರ್ಣ ಸ್ವಾತಂತ್ರ್ಯವನ್ನೂ ಹೇಗೆ ಸಾರಿದೆವು ಸ್ವಾತಂತ್ರ್ಯೋತ್ಸವವನ್ನು ಹೇಗೆ ಸಂಭ್ರಮದಿಂದ ಆಚರಿಸಿದೆವು. ಈ ಎಲ್ಲ ಮಾತುಗಳು ಈಗ ಪ್ರತಿಯೊಬ್ಬ ಭಾರತೀಯನಿಗೆ ಗೊತ್ತಾಗುವುದು ಅವಶ್ಯ. ಸ್ವಾತಂತ್ರ್ಯದ ಮಹತ್ವ ತಿಳಿಯದೆ ಅದರ ಉತ್ಸವವನ್ನು ಮನಸಾ ಆಚರಿಸುವ ಬಗೆ ಯಾವುದು? ಜಿಮ್ಮೇರಿಕೆಯಿಂದ ಅತಿಸಮೃದ್ಧ ರಾಷ್ಟ್ರವು ಕೂಡ ತನ್ನ ಸ್ವಾತಂತ್ರ್ಯದ ದಿನವನ್ನು — ನಾಳೆ ನೇ ಜುಲೈ — ಮರೆತಿಲ್ಲ. ಇಪ್ಪತ್ತೇ ಅಲ್ಲ; ಮೊನ್ನೆ ಶತಮಾನೋತ್ಸವ, ನಿನ್ನೆ 190ನೇ ಸ್ವಾತಂತ್ರ್ಯ ದಿನವನ್ನು (ಅವರು ಬ್ರಿಟಿಷರಿಂದ ಸ್ವತಂತ್ರರಾದದ್ದು 1779ರಲ್ಲಿ) ಆಚರಿಸಿದರು.

ಆದರೆ, ಅವರ ಈ ಉಪ್ಪನವದ ನಿಜಸುದ್ದಿಲ್ಲ ನಾವು ತಿಳಿದುಕೊಳ್ಳುವ ಮಾತೆಂದರೆ 191 ವರುಷಗಳಾಗಿ ಹೋದರೂ ಆ ಜನಾಂಗವು ತಮ್ಮ ಸ್ವಾತಂತ್ರ್ಯದ ಬಗ್ಗೆ ಜಾಗೃತಿಯಿಂದು ಉತ್ಸಾಹವನ್ನು ತಳದಿರುವುದು ಸ್ವಾತಂತ್ರ್ಯದ ಬೆಲೆ ಅವರು ಪೂರ್ಣವಾಗಿ ಅರಿತಿರುವುದು. ನಮ್ಮ ದೇಶದಲ್ಲಿಯೂ ಹಳ್ಳಿ ಪಳ್ಳಿಗಳಲ್ಲಿ ಎಂತೆಲೆ ಮೂಲೆಗಳಲ್ಲಿ ಈ ಸ್ವಾತಂತ್ರ್ಯೋತ್ಸವವನ್ನಡದುಪ್ಪತಿಯೊಬ್ಬರಿಗೂ ಇದರ ಮಹತ್ವವಿದೆಯೆಂದು ತಿಳಿದಿರಬೇಕು.

ಹೊಸಹೊಸ ಪುತುಂಬಿಕೆಗಳು, ಸ್ವಾತಂತ್ರ್ಯವನ್ನು ಸರ್ವಥಾ ಕಳೆದುಕೊಳ್ಳಲಿಕ್ಕೆಲ್ಲ; ಜೀವದ ಹಂಗುದೊರೆದು ಆದರೆ ರಕ್ಷಿಸೆ ಮಾಡುವೆವು—ಎಂಬ ನಾದ ಗಗನವನ್ನು ತುಂಬಬೇಕು.

ದೇಶವು ಸ್ವತಂತ್ರವಾದರೆ ನಮಗೇನು ಬಂತು? ನಾವು ಅಲ್ಪ ಸಂಖ್ಯಾತರು, ಅಥವಾ ನಾವು ಬಡವರು, ಇತ್ಯಾದಿ ಕ್ಷುದ್ರ ಗುಂಪುಗಳನ್ನು ಹೇಳಿ ರಾಷ್ಟ್ರದ ಐಕ್ಯ ಭೇದವನ್ನು ಹುಟ್ಟಿಸುವ ದೇಶದ್ರೋಹಿಗಳೂ ನಮ್ಮಲ್ಲಿದ್ದಾರೆ. ವರ್ಗದ್ರೋಹ ಅಥವಾ ವರ್ಗ ನಿರ್ಮೂಲನದ ಕತ್ತಿಯ ಮೇಲೆ ಅವರ ಭರವಸೆ. ಆದರೆ ರಾಷ್ಟ್ರದ ಏಕತೆಗೆ ಅಡ್ಡ ಬರುವ ಯಾವ ವಿಚಾರಗಳೂ ನಮಗೆ ಉಸಿರುಕಟ್ಟುವಾಗಬಾರದು ಎಂಬುದನ್ನು ನಾವು ಅರಿತಿರಬೇಕು. ರಾಷ್ಟ್ರವು ಸ್ವತಂತ್ರವಾಗಿ ಉಳಿದರೆ ಮಾತ್ರ ನಾವೆಲ್ಲರೂ ಬದುಕುವೆವು. ಇಲ್ಲದಿದ್ದರೆ ಎಲ್ಲರೂ ಮುನ್ಸಿ ದಾಸ್ಯರೂಪದಲ್ಲಿ ಕೊಳೆಯುವೆವು.

ಸ್ವಾತಂತ್ರ್ಯದ ಅರ್ಥವನ್ನು ತಿಳಿದುಕೊಂಡರೆ ಸಾಲದು ರಾಷ್ಟ್ರ, ರಾಷ್ಟ್ರೀಯತ್ವ ಇವರ ಅರ್ಥವೂ ನಮಗೆ ಅವಶ್ಯ. ಒಂದು ರಾಷ್ಟ್ರದಲ್ಲಿ ಇರುವವರು ಒಂದೇ ಆರ್ಥಿಕ, ವೈಧಾನಿಕ, ರಾಜಕೀಯ ಪದ್ಧತಿಗಳಿಗೆ ಒಳಗಾದವರು ಆಯಾ ರಾಷ್ಟ್ರದ ಕೈಯೇ ವಿಧೇಯರಾಗಿರಬೇಕು; ಇಷ್ಟೇ ಅಲ್ಲ ಆಯಾ ರಾಷ್ಟ್ರದ ಬಗ್ಗೆ ನಿಷ್ಠೆ, ಆಯಾ ರಾಷ್ಟ್ರಕರ ಬಾಂಧವ್ಯ ಇವೇ ಎಲ್ಲಕ್ಕೂ ಹೆಚ್ಚಿನವು ಎಂಬ ಭಾವನೆಯಿಂದ ಅವರು ಪ್ರತ್ಯಕ್ಷ ಆಚರಣೆ ಮಾಡುವುದು ಅತ್ಯವಶ್ಯ.

ರಕ್ತಬಾಂಧವ್ಯದ ಹೆಸರಿನಲ್ಲಿ, ಧರ್ಮ ಬಾಂಧವ್ಯದ ಹೆಸರಿನಲ್ಲಿ, ವರ್ಣ ಬಾಂಧವ್ಯದ ಹೆಸರಿನಲ್ಲಿ ಅಥವಾ ಭಾಷಾ ಬಾಂಧವ್ಯದ ಹೆಸರಿನಲ್ಲಿ ಭಾರತದ ಹಲ ಕೆಲವು ನಾಗರಿಕರು ರಾಷ್ಟ್ರದ ಹೊರಗಿನ ಕರ ರಾಷ್ಟ್ರೀಯರೊಡನೆ ಸಂಬಂಧ ಬೆಳೆಸಿದರೆ ರಾಷ್ಟ್ರದ್ರೋಹವಲ್ಲ ಎಂಬುದೇ ಇಲ್ಲದಂತಾಗುವುದು! ಆದುದರಿಂದ ಎಲ್ಲ ಬೇರೆ ಬಾಂಧವ್ಯಗಳಿಗಿಂತ ರಾಷ್ಟ್ರ ಬಾಂಧವ್ಯವೇ ಎಲ್ಲಕ್ಕೂ ಹಿರಿದಾದುದು, ಇತರ ಎಲ್ಲ ನಿಷ್ಠೆಗಳಿಗಿಂತ ರಾಷ್ಟ್ರ ನಿಷ್ಠೆಯೇ ಎಲ್ಲಕ್ಕೂ ಹೆಚ್ಚು ಎಂಬ ಭಾವನೆ ಹಾಗೂ ಸಿದ್ಧಾಂತ ನಮ್ಮ ಮನಸ್ಸಿನಲ್ಲಿ ಮನೆ ಮಾಡಿದಿದ್ದರೆ, ಏಕರಾಷ್ಟ್ರೀಯತ್ವ ಎಂಬುದು ಕನಸಿನಲ್ಲಿಯ ಗಂಟೇ ಆಗಿ ಉಳಿಯುವುದು.

ಈ ಸಂದರ್ಭದಲ್ಲಿ ನಾವು ಕೆಲ ಮಟ್ಟಿಗೆ ತ್ರಿಕಾಲಜ್ಞಾನಿಗಳಾಗಲಿ ಯತ್ನಿಸಬೇಕು. ಸ್ವಾತಂತ್ರ್ಯ ಪೂರ್ವ ಕಾಲದ ಕಡೆಗೆ ಅಂದರೆ 1947ರ ಆಚೆಗೆ ಏನು ನಡೆಯಿತೆಂಬುದನ್ನು ಏಕಂಗವು ದೃಷ್ಟಿಯಿಂದ ನೋಡಬೇಕಾಗಿ. ಅದೇ ರೀತಿ ಹೋದ ಇಪ್ಪತ್ತು ವರುಷಗಳನ್ನ ನೋಡಿನಾವು ಎಷ್ಟಾದ್ದಿದ್ದೇವು ಎಂಬುದನ್ನು ಸಿಂಹಾವಲೋಕನ ಮಾಡೋಣ. ಅದು ಸಾಕಾಗಿದೆ, ಈಗಿನ ನಮ್ಮ ಸಮಸ್ಯೆಗಳು, ಅವುಗಳ ಪರಿಹಾರ, ಭವಿಷ್ಯದ ರೂಪರೇಷೆ ಇವುಗಳನ್ನು ವಿಚಾರಿಸಬೇಕು. ವಾರ್ಷಿಕ ಉತ್ಸವಾದಿಗಳು ನಡೆಯುವಂತೆ ನಡೆದು ಹೋಗುವವು. ಆದರೆ ರಾಷ್ಟ್ರದ ಮುನ್ನಡೆಯು ದೃಷ್ಟಿಯಿಂದ ಈ ಮೇಲೆ ಕಾಣಿಸಿದಂತೆ ವಿಚಾರಿಸಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಅವಶ್ಯ.

ನಾನು 15—8—1947ನೇ ದಿನದ ದಿಲ್ಲಿಯಲ್ಲಿಯೇ ಇದ್ದೆನು. 14—8—1947ರ ಮಧ್ಯರಾತ್ರಿ ಸರಿಯಾಗಿ ಹನ್ನೆರಡು ಗಂಟೆಗೆ ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯು ಅಧಿವೇಶನ ನಡೆಯಿತು. ನಾನೂ ಒಬ್ಬ ಸಭಾಸದನಾಗಿದ್ದುದರಿಂದ ಆ ಅತ್ಯಂತ ಮಹತ್ವದ ಅಧಿವೇಶನಕ್ಕೆ ಹಾಜರಾಗಿದ್ದೆನು. ಆ ರಾತ್ರಿಯ ಉತ್ಸಾಹ, ಉಲ್ಲಾಸಗಳಿಗೆ ಎಣೆಯೇ ಇಲ್ಲ. ಪಂಡಿತ ಜವಾಹರಲಾಲರು ಆ ರಾತ್ರಿ ಮಾಡಿದ ಭಾಷಣ ಅತ್ಯಂತ ಅವೇಶಯುಕ್ತವೂ ಹೃದಯಂಗಮವೂ ಆಗಿತ್ತು. ಭಾರತದ ಭಾಗ್ಯವಿಧಾತನೊಡನೆ ನಮ್ಮ ಇಂದು ಮುಕ್ಕುಇತ್ತ ಬದನ್ನು ನಾವು ಪೂರೈಸಿದ್ದೇವೆ ಎಂದು ಜವಾಹರಲಾಲರು ನುಡಿದಾಗ ಚಪ್ಪಾಳೆಯ ಸದ್ದಿಗೆ ಆ ಸಭಾಗೃಹವನ್ನೆ ನಡುಗಿಸಿ ಬಿಟ್ಟಿತು.

ಅಂದಿನಿಂದ ಇಂದಿನ ವರೆಗೆ ನನ್ನು ದೇಶದಲ್ಲಿ ನಡೆದುದೇನು, ನಾವಿ ಮಾಡಿದ್ದೇನು, ನಾವು ಇನ್ನೂ ಮಾಡಬೇಕಾದ್ದೇನು? ಇದನ್ನು ನೋಡುವುದೇ ಮುಖ್ಯ ಮೊದಲು. ದೇಶದ ಈ ಹೊತ್ತಿನ ಸ್ಥಿತಿಯನ್ನು ನೋಡಿದರೆ, ಮನಸ್ಸಿಗೆ ಕ್ಷಣಕ್ಷಣ ಬೇಸರ ಸ್ವಲ್ಪ ನಿರುತ್ಸಾಹ ಆಗುವ ಸಂಭವವಿದೆ. ಆದರೆ, ಈ ಸಂದರ್ಭದಲ್ಲಿ ಬರೀ ದೋಷೈಕ ದೃಷ್ಟಿಯಿಂದಾಗಲೀ, ನಿರಾಶಾಭಾವದಿಂದಾಗಲೀ, ನೋಡುವುದು ಯೋಗ್ಯವಾಗಲಾರದು.

ಈ ಹೋದ ಇಪ್ಪತ್ತು ವರುಷಗಳ ಕಾಲದಲ್ಲಿ ಭಾರತದ ವಿದೇಶ ನೀತಿ ಭಾರತದ ಪ್ರತಿಷ್ಠೆ ಜಾಗತಿಕ ಶಾಂತಿಗೆ ವಿಷಯದಲ್ಲಿ ಭಾರತದ ಪ್ರಯತ್ನ ಇವುಗಳನ್ನು ನೀಕ್ಷಿಸಿದರೆ, ಭಾರತಕ್ಕೆ ಹಲವು ಪೆಟ್ಟುಗಳು ಬಿದ್ದಿದ್ದರೂ, ಒಟ್ಟಿಗೆ ಭಾರತವು ಅಭಿಮಾನಾರ್ಹ ರೀತಿಯಲ್ಲಿ ನಡೆದುಕೊಂಡಿದೆ ಎಂಬಲ್ಲಿ ಸಂಶಯವಿಲ್ಲ. ಪಂಡಿತ ಥಾಳಿಗಾರರಿಂದ 1948—49ರಲ್ಲಿ ನಿಶಸ್ತ್ರ ಕಾಶ್ಮೀರ ಜಯದ ಸಂರಕ್ಷಣೆ, 1962ರಲ್ಲಿ ಚೀನ ಸೈನ್ಯದ ಧಳಿ ನುರು ವರ್ಷವೇ ಪಾಕ್ ಆಕ್ರಮಣ—ಈ ಮೂರು ಘಟನೆಗಳಲ್ಲಿ ನಮ್ಮ ಸೈನಿಕರು ಶೌರ್ಯ, ವೀರ್ಯ, ಧೈರ್ಯ ಈ ಮೂರು ಗುಣಗಳನು ಅನುಪಮವಾಗಿ ಪ್ರದರ್ಶಿಸಿದ್ದಾರೆ. ಅವೇ ರೀತಿ ಯಾವ ಸೈನಿಕ ಒಪ್ಪಂದಗಳನ್ನೂ ಮಾಡಿಕೊಳ್ಳದೇ, ಇರುವಿಕೆ, ತಟಸ್ಥ ವೈಖರಿಯ ರಕ್ಷಣೆ, ಅಲ್ಲದೆ ಜಾಗತಿಕ ರಾಜಕಾರಣದಲ್ಲಿ ಪಂಚತೀಲದ ಪ್ರಯೋಗ ಇವು ಭಾರತದ ವೈಶಿಷ್ಟ್ಯವನ್ನು ಸಾರುತ್ತವೆ. ಸಂಯುಕ್ತ ರಾಷ್ಟ್ರ ಸಂಘಕ್ಕೆ ಕೊಡುಗೆ ಬೆಂಬಲ, ಕೆ.ಕೋರಿಯಾ, ಇಂಡೋ-ಚೈನಾಗಳಲ್ಲಿ ಶಾಂತಿ ರಕ್ಷಣೆಗಾಗಿ ಭಾರತೀಯ ಸೈನ್ಯದ ಅಭಿಯಾನ ಇತ್ಯಾದಿ ವಿಷಯಗಳಲ್ಲಿಯೂ ಭಾರತವು ತನ್ನ ಪ್ರತಿಷ್ಠೆಯನ್ನು ಬೆಳೆಸಿಕೊಂಡಿದೆ. ಹೀಗೆಲ್ಲ ಇದ್ದರೂ ದುರ್ದೈವದಿಂದ ಜಾಗೂ ಕಾರಣಾಂತರಗಳಿಂದ ನಮ್ಮ ನೆರೆಯ ಪಾಕಿಸ್ತಾನಿಪಿಡಣೆ ಮೈತ್ರಿಯನ್ನು ನಾವಿ ಪೀಕಲು ನಾವು ಅಸಮರ್ಥರಾಗಿದ್ದೇವೆ. ಆ ಮೂಲಕ ಸೈನ್ಯದ ನೆಪ್ಪು ಬೆಳೆಯಲ್ಲೇ ಹೊಂಟಿದೆ. ಇಂದಿಂದ ಇಬ್ಬರಿಗೂ ಭಯ, ಹಾನಿ ಮತ್ತು ಇಬ್ಬದ ನ್ಯಗತಿಗಳು ಆದ್ದಿ

ಇನ್ನು ಈ ದೇಶದ ಆಂತರಿಕ ಸ್ಥಿತಿಯಲ್ಲಿಯೂ ಪ್ರಶಸ್ತದ ಬದಲಾವಣೆಗಳು ಆಗಿನೆ ಅದನ್ನು ನೋಡುವ. ಪ್ರಜೆಗಳು ಇಲ್ಲಿ ನಮ್ಮವರಿಯಿಂದ ಸುಮಾರು ೪೦ ವರ್ಷ ಆಳಿದರು ಇಡೀ ಭಾರತವು ಅವರ ಅಧೀನವಾಗಿ ಎಲ್ಲವೂ ಸ್ಥಿರ ನ್ಯಾಯರ ಸ್ಥಿತಿಗೆ ಬಂದದ್ದು 1858ರಲ್ಲಿ ಅವರು ಮಾಡಿದ್ದರೆ. ಅದು ಅವರ ಧೀಪೂರ್ಣ ನಿರ್ಧರಿಸಿದ್ದರಿಂದ ಅವರು ಭಾರತವನ್ನು ಜಯಿಸಿ

(ಪ್ರತ್ಯನೇ ಸುದ್ದಿ ನೋಡಿರಿ)

ಕ್ಷಾಮ ನಿವಾರಣೆಗಾಗಿ

ಇಂದೇ
ಉದಾರ ಸಹಾಯ ನೀಡಿರಿ

"ಇದೀಗ ಕೇವಲ ಒಂದೆರಡು ಪ್ರದೇಶಗಳಿಗಷ್ಟೇ ಸೀಮಿತವಾದ ಸಮಸ್ಯೆಯಲ್ಲ; ಭಾರತದ ಸಮಸ್ತ ಜನತೆಗೆ ಎದುರಾಗಿರುವ ಕಷ್ಟ. ಇಂತಹ ಹೊತ್ತಿನಲ್ಲಿ ಎಲ್ಲಾ ಜನರೂ ತನು ಮನ ಧನಗಳಿಂದ ಸಹಾಯ ಮಾಡಬೇಕೆಂಬುದಾಗಿ ನಾನು ನಿಮ್ಮಲ್ಲಿ ಅರಿಕೆ ಮಾಡುತ್ತೇನೆ.

ಈಗಾಗಲೇ ಕಾಣಿಕೆ ನೀಡಿರುವವರು ಇನ್ನೂ ಹೆಚ್ಚು ನೀಡಿರಿ. ಈ ಕನಕ ಕೊಡಿಪೆ ಇರುವವರೂ ಉದಾರವಾಗಿ ಕೊಡಿರಿ. ನೀಡುವವರೆಲ್ಲ ಈಗಲೇ ನೀಡಿರಿ."

ಪ್ರಧಾನ ಮಂತ್ರಿಯವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣ.

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಗೆ ಉದಾರವಾಗಿ ಕಾಣಿಕೆ ನೀಡಿರಿ.

ಈ ನಿಧಿಗೆ ಕಳುಹಿಸುವ ಹಣ ಮತ್ತು ಸಾಮಗ್ರಿಗಳ ಬಗ್ಗೆ ಮಾಹಿತಿಯನ್ನು ಸಲ್ಲಿಸುವ ಅವಶ್ಯಕತೆ ಇತ್ತು ರಸೀತಿಗಳನ್ನೇ ಪಾರ್ಸಿ ಕೊಡಬೇಕಾಗಿಲ್ಲ. ಪೋಸ್ಟಿ, ಬಟ್ಟೆಬರೆ, ಪಡ್ಡಿಗಳನ್ನು ಸಂಗ್ರಹಿಸಿದ ಆಹಾರ ಇತ್ಯಾದಿಗಳನ್ನು ವಿಮಾನ ಮೂಲಕ ಉಚಿತವಾಗಿ ಸಾಗಿಸಲಾಗುತ್ತಿದೆ. ಆಂಬ್ಯ ವಿಮಾನ ಸಾಗಾಟ ಮತ್ತು ರೈಲ್ವೆ ಪೆಟ್ಟಿಗೆಗಳು, ವರ್ತಮಾನ ಕೇಂದ್ರ, ಅಜಾರಿ ಮತ್ತು ಸುಂಕ ಇತ್ಯಾದಿಗಳಲ್ಲಿ ರಿಯಾಯಿತಿ ದೊರೆಯುತ್ತದೆ.

ಪೈಸಾಸ್ ಮಿನಿಸ್ಟರ್ಸ್ ಪ್ರಾಪರ್ಟಿ ರಿಲೀಫ್ ಫಂಡ್,
ಕ್ಯಾಬಿನೆಟ್ ಸೆಕ್ರೆಟೇರಿಯೆಟ್, ರಾಷ್ಟ್ರಪತಿ ಭವನ, ನ್ಯೂ ಡಿಲ್ಲಿ—1

ವಿಚಾರ ವೀಚಿ

ಪಕ್ಷ ಪ್ರಧಾನವಲ್ಲ - ದೇಶ ಪ್ರಧಾನ

ಬರೆದವರು: ಶ್ರೀ ಶಿವಶಂಕರ, ಮದರಾಸು.

ಪಕ್ಷಾಂತರದ ಪಿಡುಗು ಪಕ್ಷಗಳೆಲ್ಲ ವಕ್ಕೂ ಅಂಟಿರುತ್ತದೆ. ಆದೊಂದು ಅಂಟು ರೋಗ ಇದೆಯೊದರೂ ಅದನ್ನು ದೇಶದ್ರೋಹವೆನ್ನುವದು ಸರಿಯಲ್ಲ; ಅದನ್ನು ಪಕ್ಷದ್ರೋಹವೆನ್ನುವದು ಸರಿ ಇರಬಹುದು. ಆದರೆ ಇಂದು 'ಪಕ್ಷ'ವೆಂಬುದರ ಅರ್ಥವಾದರೂ ಏನಿದೆ? ಪಕ್ಷವೆಂದ ಮೇಲೆ ಅದಕ್ಕೆ ನಿರ್ದಿಷ್ಟ ಪ್ರಧಾನ ಧ್ಯೇಯಗಳಿರಬೇಕು. ಆದರೆ ಇಂದು ಅದು ಕಂಡುಬರುತ್ತಿದೆಯೇ?; 'ಪೂರ್ಣ ಸ್ವರಾಜ್ಯ'ಕ್ಕೆ ಕಾಂಗ್ರೆಸ್ಸು ತಾನು ಅಧಿಕಾರದ ಆಸನದಲ್ಲಿ ಅಂಟಿಕೊಂಡು ಬಿಟ್ಟಂದೇ ತಿಲಾಂಜಲಿಯನ್ನಿತ್ತಿರುತ್ತದೆ. ವ್ಯಾವಹಾರಿಕ ಭಾಷೆಯನ್ನಾಗಿ 'ಹಿಂದಿಯನ್ನು ತರುವ ಧ್ಯೇಯವನ್ನು ಹಿಂದಕ್ಕೆ ಕಾಂಗ್ರೆಸ್ಸು ತಳ್ಳಿರುತ್ತದೆ. ವಿದೇಶಿಯರ ದಬ್ಬಾಳಿಕೆಯ ಅಂತ್ಯದೊಂದಿಗೆ ಸ್ವದೇಶೀಯ ಮನೋಭಾವನೆಯನ್ನು ಕಾಂಗ್ರೆಸ್ಸು ಕಳೆದುಕೊಂಡಿದೆ. ಇವು ಕೇವಲ ಉದಾಹರಣೆಗಳು. ಇವುಗಳನ್ನು ಪ್ರಮುಖ ಧ್ಯೇಯಗಳನ್ನಾಗಿ ತಿಳಿದುಕೊಂಡಿರುವವರು ಆ ಪಕ್ಷದಲ್ಲಿ ಉಳಿಯಲು ಸಾಧ್ಯವೇನು? 'ಪೂರ್ಣ ಸ್ವರಾಜ್ಯ'ವನ್ನು ಕ್ಷಣಕಾಲ ಮರೆತಿರುವೆನೆಂದೇ ಕಲ್ಪಿಸಿಕೊಂಡರೂ ಪಾಕಿಸ್ತಾನದ ತೃಪ್ತಿಗಾಗಿ ಬೆರುಬಾರಿ, ಕಾಶ್ಮೀರ ಮುಂತಾದ ಪ್ರದೇಶಗಳನ್ನು ಬಿಟ್ಟುಕೊಡ ವಾಗಲೂ ದೇಶಭಕ್ತರು ಸುಮ್ಮನೆ ಪಕ್ಷವೇ ಪ್ರಧಾನವೆಂದು ಅದರಲ್ಲುಳಿಯಲು ಸಾಧ್ಯವೇನು? ವ್ಯಾವಹಾರಿಕ ಭಾಷೆಯನ್ನಾಗಿ ಹಿಂದಿಯನ್ನು ತರಲಿಲ್ಲವಾದರೂ ಚಿಂತಿಲ್ಲ. ಆಂಗ್ಲೇಯರ ಆಕ್ರಮಣದ ಅಂತ್ಯವಾಗಿ ಇಪ್ಪತ್ತು ವರ್ಷಗಳು ಕಳೆದಮೇಲೆ ನಮ್ಮಷ್ಟ ಭಾಷೆಗಳಿಗೆ ವ್ಯಾವಹಾರಿಕ ಭಾಷೆಯಾಗುವ 'ಯೋಗ್ಯತೆ' ಇಲ್ಲವೆಂಬುದನ್ನು ಅರಿತುಕೊಂಡು,ಆಂಗ್ಲೇಯರಧಾಷೆಯುಶಾಶ್ವತನಕ್ಕೆ ಶಿರಬಾಗಿ ಅದನ್ನು ಮೊದಲತರಗತಿಯಿಂದ ಮೂತ್ರನಲ್ಲಾ ತೊದಲ ಮೊತು ಕಲಿಸಲ್ಪಡುವ ಶಿರುವಿಹಾರಗಳಂದಲೇ ಕಡ್ಡಾಯವಾಗಿ ಕಲಿಸಲೇ ಬೇಕೆನ್ನುವದನ್ನು ಕಾಂಗ್ರೆಸ್ಸಿನ ಪ್ರಮುಖರು ಹೇಳಲಾರಂಭಿಸಿದ ಮೇಲೆ ಸ್ವದೇಶದ ಭಾಷೆಗಳ ಮೇಲೆ ಮಮತೆಯುಳ್ಳವನ್ನಾತ್ಮವನಾರೂಆದರಲ್ಲುಳಿಯಲುಸಾಧ್ಯವೇನು?ಹಿಂದೀ ಭಾಷೆಯಲ್ಲಿ ಬಂದ ಕಾಗದಪತ್ರಗಳನ್ನು ಕನದ ಬಾಟ್ಟಗೆಯಿರೆಂದು ಕಾಂಗ್ರೆಸ್ಸಿನ ಅಧ್ಯಕ್ಷರಾದಿದ ಮೇಲೆ ಸ್ವದೇಶಾಭಿಮಾನ ಉಳ್ಳವನು ಮತ್ತೆ ಅದರಲ್ಲುಳಿದಾನೇ?ಸಂವಿಧಾನ ಸೂಚಿಸಿರುವದಕ್ಕೆ ಸರಿ ವಿರುದ್ಧವಾಗಿ, ಯೋಚಿಸಲೂ ಸಮಯ ಕೊಡನು, ರಾಜೀನಾಮೆಯ ಪತ್ರವನ್ನು ಕಳಿಹಿಸಿಬಿಟ್ಟು ಬಂಡಾಯ ಜೋರರ ಬಯಲನ್ನು ಸೇರಿದವರು, ಬಿಸಿ ಆರಿದ ಮೇಲೆ—ಹಿಂತಿರುಗಿ ಬಂದಾಗ, ಆವಗ ಪಶ್ಚಾತ್ತಾಪ ಪಟ್ಟುಕೊಂಡು ಅಲ್ಲಾ— ವಿಜಯಿಗಳ ವೀರರಂತೆ, ಬಂದಾಗ ಅವರನ್ನು ಸೇರಿಸಿಕೊಂಡ ಮೇಲೆ ಸ್ವದೇಶಾಭಿಮಾನ ಉಳ್ಳವರು ಅದರಲ್ಲಿ ನಿಂತಾರೇ? ಇವೆಲ್ಲಾ ಇಂದು ಹಳೆಯ ವಿಷಯಗಳಾಗಿ ಬಿಟ್ಟಿವೆ. ಹೆಂಡದಂಗಡಿಯ ಮುಂದೆ ಕಾಂಗ್ರೆಸ್ಸಿಗರು ಸತ್ಯಾಗ್ರಹ ಹೂಡಿದ್ದರೆಂದು, ಅಂತಹ ಒಂದು ಘಟನೆಯನ್ನು ಅಜ್ಜಿ ನಿರೂಪಿಸಿದಲ್ಲಿ ಇಂದಿನ ಮಕ್ಕಳು ಅದನ್ನು ನಂಬಲು ಸಾಧ್ಯವೇನು? ಆ ರೀತಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ಸಿಗನು ಇಂದು ಕಾಂಗ್ರೆಸ್ಸಿನಲ್ಲಿ ಉಳಿದಾನೇ?ಉಳಿದಾನೇ, ಉಳಿದಾನೇ ಎಂದರೆ ಮತ್ತೇನು ಮಾಡುವದು? ಇರುವದು ಒಂದೇ ದಾರಿ. ಅದನ್ನು ಪಕ್ಷ ದ್ರೋಹವೆಂದರೂ ಸರಿ; ಅಂತಹ ತ್ಯಾಜ್ಯನೀಯ ಪಕ್ಷವನ್ನು ತೋರದೇ ಬಿಡಬೇಕಾಗುತ್ತದೆ. ಇಲ್ಲಿ ನಿಜವಾಗಿ ಪಕ್ಷದ್ರೋಹಿಗಳಾದರೂ ಯಾರು? ಪಕ್ಷದ ಧ್ಯೇಯ—ಘೋರಣೆಗಳಿಗೆ ತಿಲಾಂಜಲಿ ಇತ್ತವರು ಪಕ್ಷದ್ರೋಹಿಗಳೇ, ಆವನ್ನು ಕಾವಾಡಲು ಪಕ್ಷವನ್ನು ತೊರೆದವರು ಪಕ್ಷದ್ರೋಹಿಗಳೇ? ಕಾಂಗ್ರೆಸ್ಸಿನ ಹೆಸರನ್ನು ಉದಾಹರಣೆಗಾಗಿ ಉಲ್ಲೇಖಿಸಲಾಗಿದೆ. ವಿಷಯ ಎಲ್ಲಾ ಪಕ್ಷಗಳವರಿಗೂ ಅನ್ವಯವಾಗುತ್ತದೆ. ಈ ರೀತಿ ಒಳ್ಳೊಳ್ಳೆಯ ಧ್ಯೇಯ ಘೋರಣೆಗಳನ್ನು ಶ್ರೀಗಂಧವನ್ನು ಪಕ್ಷಗಳು ಧೂಳುಪಾಲು ಗೊಳಿಸಿ ಕೊಳಚೆಯ ಕೆಸರನ್ನು ಮೆತ್ತಿಕೊಂಡು ಜಂಭದಿಂದ ಆಲೆಯುತ್ತಿರುವಾಗ ಇನ್ನೊಂದು ರೀತಿಯ ದೃಶ್ಯವೂ ನಮ್ಮ ಕಣ್ಣಿಗೆ ಗೋಚರವಾಗುತ್ತದೆ.

ಹಿಂದೆ ಹಿಂದಿ ದ್ವೇಷ, ಬ್ರಾಹ್ಮಣ ದ್ವೇಷ ಮನೋಭಾವನೆಯು ಕೂಪದಲ್ಲಿ ಹುಟ್ಟಿರುವ ವಿಷನು ಇಂದು ನಾಗರದ ಡಲಾಶಯವನ್ನು ಆಕ್ರಮಿಸುತ್ತಿರುವ ದೃಶ್ಯವನ್ನು ನಾವು ಕಾಣಬಹುದು. ಕಮ್ಯೂನಿಸ್ಟ್ ಪಕ್ಷ, ಮುಸ್ಲಿಂ ಲೀಗ್, ಅಖಂಲಿದಳ ಮುಂತಾದವುಗಳಂತೆ ದ್ವೇಷದುಧದಿಯಲ್ಲೇ ಹುಟ್ಟಿರುವ ಪಕ್ಷ ದ್ರಾವಿಡ ಮುನ್ನೇಟ್ರ ಕಳ್ಳಗಂ. ಹಿಂದೆ ಕಾಂಗ್ರೆಸ್ಸು ತಾನು ಜೂವದಕ್ಕಾಗಿ ಇದ್ದೇನೆಂದು ಸಾರುತ್ತಿತ್ತೋ ಅದನ್ನೆಲ್ಲಾ ದ್ರಾವಿಡ ಮುನ್ನೇಟ್ರ ಕಳ್ಳಗಂ ವಿರೋಧಿಸುತ್ತಿತ್ತು. ದೇಶ ವಿಭಜನೆಯ ಘಾತಕ ಕೃತ್ಯಕ್ಕೆ ಕಾಂಗ್ರೆಸ್ಸು ಕೆಳಗೆ—ಮೇಲೆ ನೋಡದೆ ತಿದ್ದಾಗ, ದ್ರಾವಿಡ ಮುನ್ನೇಟ್ರ ಕಳ್ಳಗಮಿನ ಜನ್ಮದಾತ ದ್ರಾವಿಡ ಕಳ್ಳಗಂ ಪಾಕಿಸ್ತಾನದ ಪರ ಪ್ರಚಾರ ನಡೆಸಿತ್ತು. ಹುಮಲಾಯದಿಂದ ಕನ್ಯಾಕುಮಾರಿಯ ವರೆಗೆ ಅಳಿದುಳಿದಿರುವ ಭಾರತವಾದರೂ ಒಂದು ದೇಶವೆಂದು ಕಾಂಗ್ರೆಸ್ಸು ಕೊರಲೆತ್ತಿತ್ತಿನ್ನಾಗ ದ್ರಾ. ಮು. ಕ ಅದನ್ನು ಅಲ್ಲಗಳೆಯುತ್ತಿತ್ತು. ಹೆಂಡದ ವಿಷಯವೂ ಅಷ್ಟೆ. ಆದರೆ ಈಗ?

ನೇಫಾ—ಲಡಾಖಿನ ಭೂ ಪ್ರದೇಶಗಳನ್ನು ಚೈನಿ ಆಕ್ರಮಣಗಾರರಿಗೆ ಕಾಂಗ್ರೆಸ್ಸು ಗುಪ್ತನಾಗಿ ಬಿಟ್ಟುಕೊಡಲೊಪ್ಪದ ರಹಸ್ಯ ಸ್ಫೋಟವಾದಾಗ ಅದನ್ನು ಖಂಡಿಸಿದವರು ದ್ರಾ. ಮು. ಕ.ದವರು. ಕನ್ಯಾಕುಮಾರಿ ವರೆಗಿನ ಜನತೆ ಬೆನ್ನ ಹಿಂದೆ ಇದೆಯೆಂದು ಪ್ರಧಾನಿಯವರಿಗೆ ಬೆಂಬಲ ಸೂಚಿಸಿದವರು ದ್ರಾ. ಮು. ಕ.ದವರು. ಗಾಂಧೀಜಿಯವರ ಶತಮಾನೋತ್ಸವದ ಜ್ಞಾಪಕಾರ್ಥವಾಗಿ ಪಾನಪ್ರತಿಬಂಧಕಾಜ್ಞೆಯನ್ನು ಪ್ರತಿಬಂಧಿಸಬೇಕೆಂದು ಕಾಂಗ್ರೆಸ್ಸು ಶಾಸಕರು ನಿಶ್ಚಯಿಸುತ್ತಿರುವಾಗ, ಪಾನಪ್ರತಿಬಂಧಕಾಜ್ಞೆಯನ್ನು ಶಿಥಿಲಗೊಳಿಸಲೂ ಸಾಧ್ಯ ಇಲ್ಲವೆಂದು ದ್ರಾ. ಮು. ಕ. ನಿಶ್ಚಯಿಸಿದೆ.

ಕೆಲ ದಿನಗಳ ಹಿಂದೆ ಮದರಾಸಿನಲ್ಲಿ ನಡೆದ ಒಂದು ಘಟನೆ. ದೇಶವಿಡೀ ಐಕ್ಯತೆಯ ಕಂಕಣವನ್ನು ಕಟ್ಟಿಕೊಳ್ಳಲು ಸಿದ್ಧತೆ ನಡೆಯುತ್ತಿದ್ದಾಗ ಈ ಘಟನೆ ಸಂಭವಿಸಿತು. ಭಾರತದ ಉಪರಾಷ್ಟ್ರಾಧ್ಯಕ್ಷ ಶ್ರದ್ಧೇಯ ವಿ. ವಿ. ಗಿರಿಯವರು ಆಗ ಮದರಾಸಿಗೆ ಬಂದಿದ್ದರ. ಆವರು ಅಲ್ಲಿರುವ ಹಚ್ಚೈಪ್ಪ ಕಾಲೇಜಿಗೆ ಸಂದರ್ಶನವಿತ್ತಿದ್ದರು. ಈ ಕಾಲೇಜು ದ್ರಾ. ಮು. ಕ.ದ ಪ್ರಮುಖರನ್ನೊಂಟು ಮಾಡಿರುವ ಕಾಲೇಜು ಇದ್ದು, ದ್ರಾ. ಮು. ಕ. ಚಟುವಟಿಕೆಗಳಿಗೆ ಹೆಸರಾಂತ ಕೇಂದ್ರ. ಈ ಕಾಲೇಜು ಇದೆ ಅಲ್ಲಿ ಮುಖ್ಯ ಮಂತ್ರಿ ತಿರು ಅಣ್ಣಾದೊರೈಯವರು ಉಪಸ್ಥಿತರಿದ್ದರು. ಆ ಸಮಾರಂಭದಲ್ಲಿ ಮೂತಾಡುತ್ತ ಉಪರಾಷ್ಟ್ರಾಧ್ಯಕ್ಷರು—ಪ್ರಜಾಪ್ರಭುತ್ವದಲ್ಲಿ ಅಧಿಕಾರಕ್ಕೆ ಅನ್ಯಾನ್ಯ ಪಕ್ಷಗಳು ಬರಬಹುದು, ಹೋಗಬಹುದು. ಆದರೆ ಪಕ್ಷ ಭೇದವು ವೈಮನಸ್ಯಕ್ಕೆ ಕಾರಣವಾಗಬಾರದ. ಆದರ ಬದಲು ಜನತಾ ಸೇವೆಗಾಗಿ ಸಹಕರಿಸಬೇಕೆಂದು ಕರೆ ಇತ್ತರಲ್ಲದೆ ನೈಜ ಗಾಂಧೀ ತತ್ವ ಪ್ರತಿಪಾದಕ ಶ್ರೀ ಅಣ್ಣಾದೊರೈಯವರನ್ನು ಪ್ರಶಂಸಿಸಿದರು.

ಶ್ರದ್ಧೇಯ ಗಿರಿಯವರು ಅಖಿಲ ಭಾರತೀಯ ಮಟ್ಟದಲ್ಲಿರುವವರು. ಆದರಲ್ಲೂ ಉಪ— ರಾಷ್ಟ್ರಾಧ್ಯಕ್ಷರ ಘನ ಜವಾಬ್ದಾರಿಯುತ ಸ್ಥಾನದಲ್ಲಿರುವವರು. ಅವರು ಆ ರೀತಿ ಕರೆಯಿತ್ತುವದರಲ್ಲಿ ಆಶ್ಚರ್ಯವೇನೂ ಇಲ್ಲ.ಆದರೆ ಅಲ್ಲಿದ್ದ ಶ್ರೀ ಅಣ್ಣಾದೊರೈಯವರಾಡಿರುವ ಮಾತುಗಳು ಇತರರಿಗೆ ಬಾರದ ಹೇಳಿದಂತಿವೆ. ಪ್ರತ್ಯೇಕ ದ್ರಾವಿಡನಾಡು, ಪ್ರತ್ಯೇಕ ತಮಿಳುನಾಡು, ದೇಶವೆಂಬುದೇ ಇಲ್ಲ, ಭಾರತ ಒಂದು ಉಪಖಂಡ. ಹೀಗೆಲ್ಲಾ ಕೂಗಾಡುತ್ತಿದ್ದ ದ್ರಾ. ವ. ಕ.ದ ದೊರೆಯವರು ಅಲ್ಲಿ ರಾಜಕೀಯದ ಅಣ್ಣನಂತೆ ಮಾತಾಡಿರುವರು. ದ್ರಾ. ಮು. ಕ.ದ ಮುಖಂಡರು ಭಾರತದ ಉಪ—ರಾಷ್ಟ್ರಾಧ್ಯಕ್ಷರಿಗೆ ಆ ಸ್ಥಳದಲ್ಲಿ ಮಾತುಕೊಟ್ಟಿದ್ದಾರೆ—ಮದರಾಸಿನಲ್ಲಿರುವ ದ್ರಾ. ಮು. ಕ. ಸರಕಾರವು ಸ್ವಾತ್ರಂತ್ರ್ಯ, ಸಮಾನತೆ, ಪ್ರಜಾ ಪ್ರಭುತ್ವ ಮತ್ತು ಉತ್ಪನ್ನ ಆಡಳಿತವನ್ನು ಮಾತ್ರವಲ್ಲ ದೇಶದ ಒಗ್ಗಟ್ಟನ್ನು ಎತ್ತಿ ಹಿಡಿಯುವದಾಗಿ ಹೇಳಿರುವರು. ಇನ್ನೇನು ತಾನೇ ಜನತೆಗೆ ಬೇಕಾಗಿರುವದು? ಇದು ಮಾತಿನ ಒಗ್ಗರಣೆಯೊಗದಿದ್ದಲ್ಲಿ ಸಾಕು. ಚೈನೀ ಕಮ್ಯೂನಿಸ್ಟರು ಆಕ್ರಮಣ ನಡೆಸಲಾರಂಭಿಸಿದಂದಿನಿಂದ, ಪ್ರತ್ಯೇಕ ತಮಿಳುನಾಡಿಂದು ಸ್ವರ ಎಬ್ಬಿಸುತ್ತಿದ್ದ ದ್ರಾ. ಮು. ಕ ತನ್ನ ಘೋರಣೆಯನ್ನು ಬದಲಾಯಿಸಿರುವದಾಗಿ ಘೋಷಿಸಿರುತ್ತದೆ. ಇದೀಗ ಇವರ ಮುಖಂಡರು ಉಪ—ರಾಷ್ಟ್ರಾಧ್ಯಕ್ಷರಿಗೆ ಆಶ್ವಾಸನೆ ಇತ್ತಿರುವರು.

ಈ ರೀತಿ ರಾಜಕೀಯ ಪಕ್ಷಗಳು ಪರಿಸ್ಥಿತಿನುಸಾರವಾಗಿ ಪ್ರಣಾಳಿಕತ್ತ ಪ್ರಗತಿಯಿಂದ ಕಾಲಿಕ್ಕುತ್ತಿರುವದನ್ನೂ, ಪ್ರಣಾಳಿಕದಿಂದ ಮೇಲಕ್ಕೆ ಬರಲು ಹವಣಿಸುತ್ತಿರುವದನ್ನೂ ಕಾಣಬಹುದು. ಆಂದರೆ ಒತ್ತಡ ಆಥವಾ ಪರಿಸ್ಥಿತಿಗನುಸಾರವಾಗಿ ಅವು ತಮ್ಮ ಘೋರಣೆಗಳನ್ನು ಬದಲಾಯಿಸಿಕೊಳ್ಳುವದನ್ನು ಕಾಣಬಹುದೆಂದಾಗುತ್ತದೆ. ಇಂತಹ ಸ್ಥಿತಿಯಲ್ಲಿ ಒಂದು ಪಕ್ಷದ ಹೆಸರಿನ ಮೇಲೆ ಜನನಾಯಿಸಲ್ಪಟ್ಟ ಸದಸ್ಯನು ಪಕ್ಷಾಂತರ ಹೊಂದುವದಿದ್ದಲ್ಲಿ, ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆನ್ನುವದು ಯಾವ ನ್ಯಾಯ? ಹೀಗೆ ನೋಡಿದಲ್ಲಿ, ರಾಜಕೀಯ ಪಕ್ಷಗಳೂ ವಿಸರ್ಜಿಸಲ್ಪಡಬೇಕು. ಮೊತ್ರಮೊದಲು ರ್ಗಳಿರ ಪೂರ್ವದಲ್ಲಿದ್ದ ಪಕ್ಷಗಳನ್ನು ವಿಸರ್ಜಿಸಲೇಬೇಕು. ಆನಂತರ ಕ್ರಮಶಃ ಇತರ ವಿಷಯಗಳು ಬರುತ್ತವೆ. ಬಿಗ ಒಕ್ಕಟ್ಟಿನಿಂದ ಬಿಕ್ಕಟ್ಟಿನತ್ತ, ಸ್ವದೇಶೀಯ ಮನೋಭಾವನೆಯಿಂದ ವಿದೇಶೀಯ ಅವಲಂಬನೆ, ಪಾನಪ್ರತಿಬಂಧದಿಂದ ಪಾನ ಪ್ರತಿಬಂಧ ನಿರೋಧದತ್ತ ಸಾಗುತ್ತಿರುವ ಕಾಂಗ್ರೆಸ್ಸನ್ನು ಬಿಟ್ಟುಬಿಡಿವ ಇರಲು ಸಾಧ್ಯವಾಗುವದಿಲ್ಲ. ಅಂತಹವನ್ನು ಪಕ್ಷ ದ್ರೋಹಿಯೆಂದರೂ ಕೂಡಾ ಅವಮ ನಿಜವಾಗಿ ಪಕ್ಷದ್ರೋಹಿ ಇರುವದಿಲ್ಲ. ಹಾಗಿದ್ದರೂ ಸಂತಸದ ಸಂಗತಿ— ಅವನು ರಂಪ್ಪ ದ್ರೋಹಿ ಇರುವದಿಲ್ಲ. ದ್ರಾ.ಮು. ಕ.ದ ವಿಷಯವೂ ಹಾಗೆನೇ. ಬಿಕ್ಕಟ್ಟಿನಿಂದ ಒಕ್ಕಟ್ಟು, ದ್ವೇಷದಿಂದ ಪ್ರೇಮ, ಪಾನಪ್ರತಿಬಂಧನಿರೋಧದಿಂದ ಪಾನನಿಪ್ರತಿಬಂಧತ್ವ ಪ್ರಗತಿಕೊಂದುತ್ತಿರುವ ದ್ರಾ.ಮು.ಕ.ದಿಂದ ಯಾರಾದರೂ ಕಾಲ್ಕಿತ್ತಲ್ಲಿ ಅವನನ್ನು ವಕ್ಷದ್ರೋಹಿಯೆನಲು ಸಾಧ್ಯವಿಲ್ಲವಾದರೂ ದೇಶದ್ರೋಹಿಯೆನ್ನದೆ ವಿಧಿಯಲ್ಲ.

ವಿಶಾಲ ದೇಶ, ಪುಸ್ಕಳ ರಾಜಕೀಯ ಪಕ್ಷಗಳಿರುವಾಗ ಇಂತಹ ಪಕ್ಷಾಂತರದ ಪರಿಪಾಟ ಅಸಂಭವನೇನಲ್ಲ. ಆದರಲ್ಲಿ ಎಲ್ಲರೂ ಚಕ್ರವರ್ತಿ ರಾಜಗೋಪಾಲಾಚಾರಿಯವರಿಯವರಿದ್ದಾ, ಕೆಲವರು ಕೃಷ್ಣಮೆನಿ ಇರುತ್ತಾರೆ. ನಿಲ್ಲಿಗೂ ನವ್ಯ ಪಕ್ಷವನ್ನು ಸ್ಥಾಪಿಸಲು ಸಾಧ್ಯ ಇರುವಿಲ್ಲ. ಆರಂಭಿಸಲು ಸಾಧ್ಯವಾದರೂ ಮುಂಚೆ ನಡೆಸಲು ಸಾಧ್ಯವಾಗದ ಪೋಗುವದೂ ಇಸೆ. ಕೆಲವರು ಕೃಷ್ಣಮೆನನ್ ಇರುತ್ತಾರೆ. ಅಂದರೆ ಪಕ್ಷ ಪ್ರಾರಂಭಿಸಲು ಸಾಧ್ಯವಾಗದೆ ಇರುವವರು. ಮತ್ತೆ ಕೆಲವರು ಡಾಕ್ಟರ್ ಫೌಸೀರ ಇರುತ್ತಾರೆ. ಪಕ್ಷ ಪ್ರಾರಂಭಿಸುವ ಗೋಜಿಗೆ ಹೋಗದೆ, ತನ್ನ ಘೋರಣೆ ಶಕ್ತಿಯಕ್ಕೆ ಸಮಿಪ ಇರುವ ಪಕ್ಷಕ್ಕೆ ಸೇರಿ ಬಿಡುವವರು ಆವರು. ಇಂತಹ ಇನ್ನು ಹಲವಾರು ರೂಪಗಳನ್ನು ಕಾಣಬಹುದು. ಇದರ ಪ್ರತಿಫಲವನ್ನು ಅಳವಾಗಿ ಯೋಗ್ಯನ್ನು ವಿಧಾನ ಮಂಡಲ ಹಾಗೂ ಸಂಸತ್ತಿನಲ್ಲಿ ಕಾಣಬಹುದು. ಇಲ್ಲಿರುವವರು ಅದಂತು ಅದಕ್ಕೆ. ಅಪವಾದ ಆಗುತ್ತಾರೆ? ಆದರೆ ಎಲ್ಲರೂ ಧ್ಯೇಯ ಘೋರಣೆಗಳಿಗೆ ತಿಲಾಂಜಲಿ ಕೊಡಲು ಬ

ಯಪಡೆ ಹಗ್ಗಾಂಶದ ನಡೆಸುತ್ತಾರೆನ್ನುವ ದೂ ಸರಿಯಲ್ಲ. ಉದಾಹರಣೆಗೆ ಮಧ್ಯ ಪ್ರದೇಶದ ಮಾಜಿ ಮುಖ್ಯ ಮಂತ್ರಿ ಶ್ರೀ ದ್ವಾರಕ ಪ್ರಸಾದ ಮಿಶ್ರ, ಸುಹೆಲಿಯರ ಬದಿಯಿಂದ ಶ್ರೀಮತಿ ಸುಜೇತಾ ಕೃಪಲಾನಿ ರಾಜಕೀಯದಲ್ಲಿ ಜೂಜಾಟ ಆಡುವವರೂ ಅನೇಕರಿದ್ದಾರೆ. ತಿರು ಕಣ್ಣಾದಾಸನ್, ಮಿಸ್ಟರ್ ಅಂತೋಣಿ ಪಿಳ್ಳೈ, ಆಕ್ಟೋಕ ಮೇಹ್ತ.....ಸಾಲದೇನು? ಬೀರೇಂದ್ರ ಸಿಂಗ್, ಚರಣ ಸಿಂಗ್, ಗೋವಿಂದ ನಾರಾಯಣ ಸಿಂಗ್ ಅಲ್ಲದೆ ಅಜಯ ಕುಮಾರ ಮುಖರ್ಜಿಯವರ ವಿಷಯದಲ್ಲಿ 'ಇದಮಿತ್ಥಂ' ಅಡಲು ಈಗ ಸಾಧ್ಯವಿಲ್ಲ.

ರಾಜಕೀಯ ಜೂಜಾಟದ ಪರಿಣಾಮ ಏನೇ ಸೂರಾವಳಿ, ಗುಡಿಸಲುಗಳ ಆಹುತಿ, ಕೊಲ್ಲ ಸುಲಿಗೆ ವಗೈರೆ. ಇದಕ್ಕೆಲ್ಲಾ ಕಾರಣವೇನು? ಇತರ ಪಕ್ಷದವನೆಂದರೆ ಆತನನ್ನು ವರದೇಶವನೆಂಬಂತೆ ಕಾಣುವ ಬೇಇಸೆ. ನವ್ಯಶಕ್ತಿಯ ಅವ! ಎಂತಹ ಲಜ್ಜೆಗೇಡಿತನ ಇದು! ನಮ್ಮ ಸ್ವದೇಶ ಭಾಂಧವನನ್ನ 'ಶತ್ರು'ವೆಂದು ಪರಿಗಣಿಸುವದು?

ಈ ರಾಜಕೀಯ ಜೂಜಾಟದಲಿಂದಾಗಿ ಹೊಹಾಎ ಹೋಗಿರುವ ಉಪ—ರಾಷ್ಟ್ರಪತ್ಯ ರೈಷ್ಣರು ಪಕ್ಷದ ಕನ್ನಡಿಯನ್ನು ಕೆಳಗಿಟ್ಟು ರಾಷ್ಟ್ರೀಯ ವಿಶಾಲ ದೃಷ್ಟಿಯನ್ನು ಬೀರಲು ಕರೆ ಇತ್ತಿರುವರು. ಇದೆಂತು ಸಾಧ್ಯವೆಂದು ಕೇಳುವವರಿ ಬಹುದು. ಅನ್ಯಾನ್ಯ ಪ್ರಾಂತ್ಯಗಳಲ್ಲಿ ಅನ್ಯಾನ್ಯ ಪಕ್ಷಗಳು ಆಡಳಿತದ ಆಸನವನ್ನೇರಿವೆ. ಹೆಚ್ಚಿನ ಪಕ್ಷಗಳಿಂದು ಆಡಳಿತ ನಡೆಸುವ ಪಕ್ಷಗಳೇ ಇವೆ. ಆವು ಪೂರ್ಣವಾಗಿ ಅನ್ಯೋನ್ಯತೆಯಿಂದಿಲ್ಲವಾದರೂ ಅದೊಂದೋ ಅದಳತ ನಡೆಸುತ್ತಿವೆ! ಇದಕ್ಕಿಂತ ಉತ್ತಮ ಉದಾಹರಣೆ ಬೇಕಾಗಿಲ್ಲ. ಆದರೆ ಅನೆ ತೋರಿಸಿದಲ್ಲಿ ಪಕ್ಷ ತ್ಯಜಿಸುವ ಧೈರ್ಯ ಒಂದೆಡೆಯಾದಲ್ಲಿ ಅಸನದಲ್ಲಿಟ್ಟ ದಿದ್ದರೂ, ಧ್ಯೇಯಕ್ಕಾಗಿ ಸಕರಿಸುತ್ತಿರುವ ವೈಶ್ಯ ಇನ್ನೊಂದೆಡೆ. ಎಲ್ಲಾ ಪ್ರಾಂತಗಳಲ್ಲೂ ಹಂ ಣಾವೇ ನಡೆದಲ್ಲಿ ಶ್ರೀ ಗಿರಿಯವರ ಆಕಯ ಗುರಿಯು ಗಿರಿಯನ್ನೇರಿದಂತೆಯೇ ಸರಿ.

ಪ್ರಾವಿಡ ಮುನ್ನೇಟ್ರ ಕಳ್ಳಗಮಿನ ದೊರೆ ತಿರು ಅಣ್ಣಾದೊರೈಯವರಿತ್ತಿರುವ ಆಶ್ವಾಸನೆ ಜುನಾವಣೆ ಘೋಷಣೆ ಇರುವದಿಲ್ಲ ಅಡಳಿತ ನಡೆಸುವ ಜವಾಬ್ದಾರಿಯ ಅನುಭವಿಂದ ಬಂದಿರುವ ಮಾತು ಅದು. ದೇಶದ ಒಗ್ಗಟ್ಟಿನ್ನುವಾಗ, ಸ್ವಾಭಾವಿಕವೂ ಕಾನೇ ತಾನಾಗಿ ಬರುತ್ತದೆ. ಆಗ ತಮಿಳರಿಗೆ ಕನ್ನಡವಾಗಲೀ, ಹಿಂದಿಯಾಗಲೀ ಆಂಗ್ಲ ಭಾಷೆಯ ರೀತಿಯಲ್ಲಿ ಅನ್ಯ ಭಾಷೆ ಇರುವದಿಲ್ಲ. ಆದರೆ ಇದನ್ನು ದ್ರಾ. ಮು. ಕ ದೆ ಅನುಯಾಯಿಗಳು ಒಪ್ಪುವದಿಲ್ಲ. ಅವರ ಪಾಲಿಗಿಂದೂ ಇಂಡಿಯಾ ಉಸಿರುಂಡವಿದೆ. ಭೂಲೋಕದಲ್ಲಿ ಅಸ್ಯತ್ತಮ ಭಾಷೆ ಇಂಗ್ಲಿಷ್, ಅನಂತರ ತಮಿಳು. ಜಗತ್ತಿನಲ್ಲಿ ಮೇಧಾವಿಗಳೆಂದರೆ ಬೆಳ್ಳೈಕಾರರ್ (ಉಳಿಯುವರು) ಅನಂತರ ತಮಿಳರು ಕನ್ನಡ, ಮಲೆಯಾಳಂ, ತೆಲುಗು ಭಾಷೆಯನ್ನಾಡುವವರು ಮಂಕರು (ಮಂಗ್ಯಗಳ್) ಉತ್ತರದವರು ವಿರೋಧಗಳ್! ಈ ವಿಷಯವನ್ನು ಶ್ರೀ ಅಣ್ಣಾದೊರೈಯವರೇ ಹೀರಲೀಕಾಗಿರುತ್ತದೆ. ಆಗ ಪೂರ್ಣ ದೇಶದ ಒಗ್ಗಟ್ಟಿನ ಉದಯ ಸೂರ್ಯ ಉದಯಿಸಲು ಸಾಧ್ಯ. ಹೌದು. ಎಳತೆಯ ಉದಯ ಸೂರ್ಯನಿಗೆ ಅವೆಲ್ಲಾ ವೇಳೆಗಳೇ ಇತೆ. ಅವನ್ನು ಬದಿಗೆ ಸರಿಸಿ ಏಕತೆಯ ಭಾಗ್ಯದ ಭಾಸ್ಕರ ಭವ್ಯಭಾರತದ ಪೂರ್ವದಲ್ಲಿ ಉದಯಿಸುವ ಮುನ್ಸೂಚನೆಯೇ ಶ್ರೀ ಅಣ್ಣಾದೊರೈಯವರ ಆಶ್ವಾಸನೆ.

ಪಕ್ಷ ಭೇದದ ಪ್ರತ್ಯೇತತೆ ಮನೋಭಾವನೆ ಬೆಳೆದಲ್ಲಿ ದಾಸ್ಯದ ನೊಗ ತಾನೇ ತಾನಾಗಿ ನವ್ಯ ಕುತ್ತಿಗೆಯ ಮೇಲೆ ಬಂದೀತು! ಅದನ್ನ ಬಿಚ್ಚಿ ಪವಿತ್ರ ಭಾರತ ಮಾತೆಯ ಪೂರ್ಣ ಚಿತ್ರವನ್ನು ಮನಸ್ಸಿನ ಮುಂದುಗಡೆ ಇಟ್ಟುಕೊಂಡಲ್ಲಿ ಸಮೃದ್ಧಿ, ಶಾಂತಿ ತಾನೇ ತಾನಾಗಿ ಇಲ್ಲಿ ಬೀಡು ಬಿಡುತ್ತದೆ. ಇವನ್ನೇ ಶ್ರದ್ಧೇಯ ಗಿರಿಯವರು ಸರಳ ರಬ್ದಗಳಲ್ಲಿ ಹೇಳಿರುವರು.

ಶ್ರೀ ವಿಘ್ನೇಶ್ವರನು ನವ್ಯನ್ನು ರಾಷ್ಟ್ರ ಘಾತುಕ ವಿಘ್ನಗಳಿಂದ ಪಪ್ಪಿಸಲು ಬಂದಿರುವನು. ವಿನಾಯಕ ಚತುರ್ಥಿಯಂದರೋ ನಮಗೆ ರಾಷ್ಟ್ರೀಯತೆ, ದೇಶಪ್ರೇಮದ ಪಾಠವನ್ನೇ ಕಲಿಸುತ್ತದೆ. ಒಂದು ಹಿಡಿ ಮಣ್ಣಿನಿಂದ ವಿನಾಯಕನ ವಿಗ್ರಹವನ್ನು ರಚಿಸಲಾಗುತ್ತದೆ, ಪೂಜಿಸಲಾಗುತ್ತದೆ. ತದನಂತರ ವಿಗ್ರಹವು ಮಣ್ಣಿನೊಂದಿಗೆ ಮಣ್ಣಾಗಿ ಬಿಡುತ್ತದೆ. ನಾವು ವಿಶ್ವಭೂಮಿಯ ಶ್ರೀಮಣ್ಣಿಗೆ ಒಂದು ರೂಪ ಇತ್ತು ಪೂಜಿಸಿ ಮತ್ತೆ ಅದು ಭಿನ್ನವಲ್ಲ, ಪ್ರತ್ಯೇಕವಲ್ಲ, ಭಾರತ ಭೂಮಿಯ ಇದೆಯೆಂಬುದನ್ನು ಸೂಚಿಸಲು ಆದನ್ನೇ ಲೀನಗೊಳಿಸಿ ಬಿಡುತ್ತೇವೆ. ಅದೇ ಗಣಪತಿಯು ನವ್ಯಗಿಂದು ಪಕ್ಷನೇ ಪ್ರಧಾನವಲ್ಲ, ರಾಷ್ಟ್ರವೇ ಪ್ರಧಾನವೆಂಬ ಸದ್ಬುದ್ಧಿಯನ್ನು ದಯಪಾಲಿಸಲಿ ಮತ್ತು ಅದರ ಸೇವೆಗಾಗಿ ನಮಗೆ ಶಕ್ತಿಯನ್ನೀಯಲಿ. ಒಳ್ಳೆಯ ಗುಣಾಗಳನ್ನು ಕರುಣಿಸಲಿ.

ಕೇರಳದ ಪ್ರಗತಿಗೆ
ಶಬರಗಿರಿಯ ವಿದ್ಯುದ್ಯೋಜನೆ

ಕೇರಳದ ೩೦೦,೦೦೦ ಕಿಲೋವಾಟ್ ಗಳ ಶಬರಗಿರಿ ಜಲ ವಿದ್ಯುತ್ ಯೋಜನೆ —ಇದು ಭಾರತದ ಅತಿ ದೊಡ್ಡ ಪ್ರಾಜೆಕ್ಟ್‌ಗಳಲ್ಲೊಂದು-ಇನ್ನು ಅಗಸ್ಟ್ ೨೦ನೆಯ ಸೋಮವಾರ ಭಾರತದ ಉಪಾಧ್ಯಕ್ಷೆ ವಿ. ವಿ. ಗಿರಿಯವರು ಉದ್ಘಾಟಿಸಿದರು.

ಈ ಯೋಜನೆ ಬಲು ಮಟ್ಟಿಗೆ ಅಮೆರಿಕಾ ಸರಕಾರದ ಸಾಲಗಳಿಂದ ಕಾರ್ಯಗತವಾಗಿದೆ. ೧೫೦೦ ಕೋಟಿ ರೂ.ಗಳಷ್ಟು ವಿದೇಶಿ ವಿನಿಮಯವನ್ನು ಮತ್ತು ೫೧.೦೬ ಕೋಟಿ ರೂಪಾಯಿಗಳನ್ನು ಭಾರತೀಯ ಕರೆನ್ಸಿಯನ್ನು ಸಾಲ ರೂಪದಲ್ಲಿ ಹಡೆದಿದೆ. ಭಾರತೀಯ ಕರೆನ್ಸಿಯನ್ನು ಪಿ. ಎಲ್. ೪೮೦ ಕೃಷಿ ವಸ್ತುಗಳ ಮೂಲಕದಿಂದ ದೊರೆತ ನಿಧಿಯಿಂದ ಒದಗಿಸಲಾಗಿದೆ.

ಅಮೆರಿಕದ ರಾಯಭಾರಿ ಕಚೇರಿಯ ಖಿಲ ಆರ್ಥಿಕ ವ್ಯವಹಾರಗಳ ಸಚಿವ-ಸಲಹೆಗಾರರಾಗಿರುವ ಹರ್ಬರ್ಟ್ ಡಿ. ಸ್ವಿವಾಕ್ ಅವರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದರು. ಕೇರಳದ ಮುಖ್ಯಮಂ

ಶ್ರೀ ಇ. ಎಂ. ಎಸ್. ನಂಬೂದ್ರಿ ಪಾಡ್ ಅವರು ಅಧ್ಯಕ್ಷತೆ ವಹಿಸಿದರು.

ಕೇರಳದ ಪವಿತ್ರ ಪರ್ವತದ ಹೆಸರನ್ನು ಪಡೆದಿರುವ ಶಬರಗಿರಿ ಯೋಜನೆಯು ಭಾರತದ ಅತಿ ಚಿಕ್ಕ ನದಿಗಳಾಗಿರುವ ಪಂಬಾ ಮತ್ತು ಕಕ್ಕಿಯ ಅಪಾರ ವಿದ್ಯುತ್ ಶಕ್ತಿಯನ್ನು ಕಾರ್ಯಗತಗೊಳಿಸುತ್ತದೆ. ಈ ಎರಡು ನದಿಗಳು ಅತಿ ಚಿಕ್ಕ ನದಿಗಳಾದರೂ, ಇವು ರಾಜ್ಯ ದಾಟಿ ಆರಬ್ಬಿ ಸಮುದ್ರದತ್ತ ಬಂದು ಶಕ್ತಿಯನು ಘಟ್ಟಿಪಿಂದ ಅನೇಕ ಸಾವಿರ ಅಡಿ ಕೆಳಗೆ ಧುಮುಕುವಾಗ ಅಪಾರ ಚೈತನ್ಯವನ್ನು ಉತ್ಪಾದಿಸುತ್ತವೆ.

ಈ ಭಾರೀ ಪ್ರಾಜೆಕ್ಟಿನ ಡಿಸೈನ್ ರಚನೆ ಮತ್ತು ನಿರ್ಮಾಣ ಸಂಪೂರ್ಣವಾಗಿ ಕೇರಳದ ಇಂಜಿನಿಯರುಗಳದು. ಈ ಪ್ರಾಜೆಕ್ಟಿನ ಸ್ಥಾಪನೆಗಾಗಿ, ಆಣೆಕಟ್ಟುಗಳ, ಸುರಂಗಗಳ, ವೆನೆಸ್ಟಾಕ್ ಪೈಪುಗಳ, ಟರ್ಬೈನುಗಳ ಹಾಗೂ ಹೊಸ ರಸ್ತೆಗಳ ಜಾಲವೇ ನಿರ್ಮಾಣವಾಯಿತು. ಕಾಡಾನೆಗಳ ತಂಡಗಳು ಅನೇಕ ಬಾರಿ ಪ್ರಾಜೆಕ್ಟಿನ ಸ್ಥಳಕ್ಕೆ ಬರುತ್ತಿದ್ದುದರಿಂದ, ಅವುಗಳನ್ನು ಓಡಿಸುವ ಸಲುವಾಗಿ ಅನೇಕ ಬಾರಿ ನಿರ್ಮಾಣ ಕಾರ್ಯಗಳನ್ನು ನಿಲ್ಲಿಸಬೇಕಾಗಿತ್ತು.

ಅಮೆರಿಕದ ಸಹಾಯದಿಂದ ಕೇರಳದಲ್ಲಿ ಕೈಗೊಳ್ಳಲಾಗಿರುವ ಪ್ರಾಜೆಕ್ಟ್‌ಗಳಲ್ಲಿ ಅತಿ ದೊಡ್ಡದು. ಪಂಬಾದ ಮೇಲೆ ಒಂದು ಆಣೆಕಟ್ಟಿನ ನಿರ್ಮಾಣ ಮತ್ತು ಕಕ್ಕಿ ನದಿಯ ಮೇಲೆ ಎರಡು ಆಣೆಕಟ್ಟುಗಳ ನಿರ್ಮಾಣ ಈ ಪ್ರಾಜೆಕ್ಟಿಗೆ ಸೇರಿದ ಕಾರ್ಯಗಳು. ಎರಡು ೨೪ ಮೈಲಿಗಳಷ್ಟು ಉದ್ದದ ಒಂದು ಸುರಂಗವು ಈ ಎರಡು ಜಲಾಶಯಗಳಿಗೆ ಪರಸ್ಪರ ಸಂಪರ್ಕ ಒದಗಿಸುತ್ತದೆ. ಭಾರತದಲ್ಲೇ ಅತಿ ದೊಡ್ಡದಾಗಿರುವ ಮೂರುವರೆ ಮೈಲಿಗಳಷ್ಟು ಉದ್ದದ ವಿದ್ಯುತ್ತಿನಿಂದ ಕೆಲಸವಾಡುವ ಒಂಬತ್ತು ಸುರಂಗವು ಸಂಗ್ರಹಿಸಿದ ನೀರನ್ನು, ಬೆಟ್ಟದ ಬುಡದಲ್ಲಿರುವಒಂಭತ್ತು ವಿದ್ಯುತ್‌ಕೇಂದ್ರಕ್ಕೆ ಹೋಗುವ ಹಾದಿಯಲ್ಲಿ ಸ್ವಲ್ಪ ದೂರದವರೆಗೆ ಸಾಗಿಸುತ್ತದೆ. ಈ ಪ್ರಾಜೆಕ್ಟಿನ ೩೦,೦೦೦ ಕಿಲೋವಾಟ್‌ಗಳ ಆರು ಜನರೇಟರುಗಳಲ್ಲಿ ನಾಲ್ಕು ಈಗಾಗಲೇ ಕಾರ್ಯ ನಿರ್ವಹಿಸಲಾರಂಭಿಸಿವೆ. ಉಳಿದ ಎರಡನ್ನು ಈ ವರ್ಷದ ಅಂತ್ಯದೊಳಗೆ ಕಾರ್ಯರೂಪಕ್ಕೆ ಸಿದ್ಧಗೊಳಿಸಲಾಗುವುದು. ಶಬರಗಿರಿ ಯೋಜನೆಯೊಂದೇ, ಕಳೆದ ವರ್ಷ ಕೇರಳದ ಎಲ್ಲ ವಿದ್ಯುತ್ ಕಾರ್ಯಗಾರಗಳು ಉತ್ಪಾದಿಸಿದ ಒಟ್ಟು ವಿದ್ಯುತ್ತಿಗಿಂತ ಹೆಚ್ಚು ವಿದ್ಯುತ್ತನ್ನು ಒದಗಿಸಿದೆ.

ಕೇರಳದ ಕೈಗಾರಿಕಾ ಅಭಿವೃದ್ಧಿಯು ಆರ್ಥಿಕ ಜೀವನದ ಮೇಲೆ ಈಗಾಗಲೇ ಶಬರಿಗಿರಿಯ ವಿದ್ಯುತ್ತಿನ ಪ್ರಭಾವ ವ್ಯಕ್ತವಾಗಿದೆ. ಕಳೆದ ಅನೇಕ ವರ್ಷಗಳಿಂದ ಕೇರಳ ರಾಜ್ಯವನ್ನು ಪೀಡಿಸುತ್ತಿದ್ದ ವಿದ್ಯುತ್ತಿನ ಬರಗಾಲ ಈಗ ಕೊನೆಗೊಂಡಿದೆ. ಈಗ ಕೈಗಾರಿಕೆಗಳನ್ನು ಪೂರ್ಣ ಶಕ್ತಿಯಲ್ಲಿ ಉಪಯೋಗದತ್ತ ಅಭಿವೃದ್ಧಿಗೊಳಿಸಲಷ್ಟೇ ಅಲ್ಲದೆ, ಕೈಗಾರಿಕೆಗಳ ವಿಸ್ತರಣೆಗೂ ವಿದ್ಯುತ್ತು ಲಭ್ಯವಿಸುತ್ತದೆ.

ರಾಸಾಯನಿಕಗಳು, ಜವುಳಿ, ಟೈರುಗಳು, ಸಿಮೆಂಟ್, ರೇಯಾನ್, ನೈಲಾನ್, ಸೈಕಲ್‌ಗಳು,ಇಟ್ಟಿಗೆಗಳು,ಗಾಜಿನ ವಸ್ತುಗಳು, ವನಸ್ಪತಿ ಸಾಬೂನು, ಕಾಗದ ಮತ್ತು ಫೈಬ್ಲೈಬೋರ್ಡ್‌ಗಳನ್ನು ತಯಾರಿಸುವ ಕಾರ್ಖಾನೆಗಳು ಇತ್ತೀಚಿಗೆ ತಿಂಗಳುಗಳಲ್ಲಿ ಪ್ರಾರಂಭವಾಗಿರುವ ಅಥವಾ ಬರುವ ವರ್ಷ ಉತ್ಪಾದನೆಯನ್ನು ಆರಂಭಿಸಲಿರುವ ಹೊಸ ಉದ್ಯಮಗಳು. ಈಗ ಇರುವ ರಾಸಾಯನಿಕ ಗೊಬ್ಬರ ಉದ್ಯಮ, ಅಲ್ಯೂಮಿನಿಯಂ ಮತ್ತು ಇತರ ಅನೇಕ ಕೈಗಾರಿಕೆಗಳನ್ನು ವಿಸ್ತರಿಸುವ ಯೋಜನೆಯನ್ನು ಕಾರ್ಯಗತ ಪಡಿಸಲಾಗುತ್ತಿದೆ.

ಶಬರಗಿರಿ ಯೋಜನೆಯು, ಲಿಫ್ ನೀರಾವರಿಯ ವಿಸ್ತರಣೆಯ ಮೂಲಕ ಕೃಷಿಗೂ ಬಹಳ ಸಹಾಯ ಮಾಡುತ್ತಿದೆ. ವಿದ್ಯುತ್ತಿನಿಂದ ಕೆಲಸ ಮಾಡುವ ಪಂಪು ಸೆಟ್‌ಗಳು, ರೈತರಿಗೆ ಹೆಚ್ಚು ಜಮೀನನ್ನಲ್ಲಿ ಭತ್ತದ ಬೆಳೆಯನ್ನು ಆರಂಭಿಸಲು ಸಹಾಯ ಮಾಡುತ್ತಿವೆ. ಕೆಳಮಟ್ಟದ ಪ್ರದೇಶಗಳಿಂದ ಉಪ್ಪು ನೀರನ್ನು ಪುನಃ ಸಮುದ್ರಕ್ಕೆ ಪಂಪ್ ಮಾಡಿ ಕಳಿಸುವುದು ವಿದ್ಯುತ್ತಿನ ಇನ್ನೊಂದು ಮಹತ್ವದ ಉಪಯೋಗ. ಸಾವಿರಾರು ಎಕರೆಗಳಷ್ಟು ಉತ್ತಮ ಕೃಷಿ ಜಮೀನು ಪ್ರತಿವರ್ಷ ಸಮುದ್ರಪ್ರವಾಹ ಉಕ್ಕಿ ಬಂದು ಹಾಳಾಗುತ್ತಿದೆ. ಬಲಿಷ್ಟ ಪಂಪುಗಳು ರೈತರಿಗೆ ತಮ್ಮ ಜಮೀನುಗಳನ್ನು ಉಪ್ಪು ನೀರಿನ ದಾಳಿಯಿಂದ ರಕ್ಷಿಸಬಲ್ಲ ವರಪ್ರಸಾದಗಳಾಗಿವೆ.

ಬೆಳ್ತಂಗಡಿ ಲೇಂಡ್
ಟ್ರೈಬ್ಯುನಲ್‌ನಲ್ಲಿ
L. R. O. P. 170/67

ಕೆ. ಸುಬ್ಬರಾವ್ —ಅರ್ಜಿದಾರ

ಮತ್ತು

ವೆಂಕಮ್ಮ ಪೆಂಗ್ಸು ಮತ್ತು ಇತರರು
—ಎದ್ರಿದಾ

ಟ್ರೈಬ್ಯುನಲ್‌ನ ಅಪ್ಪಣೆ ಪ್ರಕಾರ ಮೇಲಿನ ಅರ್ಜಿಯ 4ನೇ ಎದ್ರಿದಾ ಮೂಡುಕೋಡಿ ಗ್ರಾಮದ ಸರಕಾರಿ ಶಾಲೆಯ ಬಳಿ ಉಮ್ಟ್ಟಿ ಎಂಬಲ್ಲಿರುವ ಶ್ರೀ ಸ್ಯಂಗ ಶಿಟ್ಟರ ಮಗ ಕುಂಡ ಯಾನೆ ವೆಂಕಪ್ಪ ಶೆಟ್ಟರಿಗೆ ಮತ್ತು 7ನೇ ಎದ್ರಿ—ಕರಿಮಣಿಲ್ಲ ಗ್ರಾಮದ ಹೊಸ ಮನೆ ಎಂಬಲ್ಲಿರುವ ಶ್ರೀ ಮೈದ ಶಿಟ್ಟರ ಮಗಳು ದೇವಕಿ ಪೆಂಗ್ಸುರವರಿಗೆ ತಿಳಿಸುವದೇನೆಂದರೆ,

ನಿಮ್ಮ ಮೇಲೆ ಆರ್ಜಿದಾರನು 65—66ನೇ ಇಸವಿಯ ಗೇಣಿ ಸಸಲಿ ಬಗ್ಗೆ ಪಡಿಯುವ ಅರ್ಜಿ ನಿಮ್ಮ ವಾಜರಾತಿ ಬಗ್ಗೆ ತಾ. 25—9—67ಕ್ಕೆ ಇಟ್ಟಿದೆ. ಆ ದಿನ ಬೆಳಗ್ಗೆ 10 ಗಂಟೆಗೆ ನೀವು ಟ್ರೈಬ್ಯುನಲ್ ಮುಂಜೆ ಹಾಜರಾಗಿ ಅದಮಸಲು ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದಿ, ಆರ್ಜಿಯು ತೀರ್ಮಾನಿಸಲ್ಪಡುವುದು. ತಿಳಿದಿರಲಿ.

ಬಿ. ಕೆ. ಸೂರ್ಯನಾರಾಯಣ ರಾವ್
ಎಡ್ವೊಕೇಟ್
ಬೆಳ್ತಂಗಡಿ, ತಾ. 26—8—67.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-1.17-3/65-66 dated 26—4—1966.

ರಾಷ್ಟ್ರ ಬಾಂಧವ್ಯ, ರಾಷ್ಟ್ರ ನಿಷ್ಠೆ

(ಏಳನೇ ಪುಟದಿಂದ)

ನಡಪ್ಪೇ ಪ್ರಗತಿಸೂರ್ಣ ರಾಷ್ಟ್ರವನ್ನಾಗಿ ಮಾಡಿಸಿಡಬಹುದಾಗಿರ್ತು. ಆದರೆ ಹಾಗೆ ಮಾಡದೆ ಅವರು ಕೇವಲ ಶೋಷಕರಾಗಿ ಅಳಿದರು ಭಾರತದ ಪ್ರಗತಿ ಕುಂಠಿತವಾಗಿ ಬಿಟ್ಟಿತು. ಶೋಷಣ ಕಾರ್ಯಕ್ಕೆ ಎಷ್ಟು ಬೇಕೋ ಅಷ್ಟೇ ಅವರು ಮಾಡುತ್ತಾ ಹೋದರು. ಭಾರತವನ್ನು ಅವರು ಬಿಟ್ಟು ಹೋಗುವಾಗ ಬೊಕ್ಕಸದಲ್ಲಿ ಸಾಕಷ್ಟು ಹಣವಿದ್ದಾದಾರೂ ಪ್ರಗತಿಯ ದೃಷ್ಟಿಯಿಂದ ಉದ್ಯೋಗ, ಒಕ್ಕಲುತನ, ವ್ಯಾಪಾರ, ಕೈಗಾರಿಕೆ, ವಿಜ್ಞಾನ, ತಂತ್ರಜ್ಞಾನ, ಕಂಪ್ಯಶಾಸ್ತ್ರ, ಇತ್ಯಾದಿಗಳಲ್ಲಿ ನಾವು ಬಹಳಷ್ಟೇ ಹಿಂದುಳಿದವರಾಗಿದ್ದೆವು. ಈ ಪರಿಸ್ಥಿತಿಯಲ್ಲಿ ಪಂಚವಾರ್ಷಿಕ ಯೋಜನೆಗಳ ಮೂಲಕ ದೇಶವನ್ನು ಪ್ರಗತಿ ಪಥದಲ್ಲಿ ಮುಂದುವರಿಸುವಲ್ಲಿಯೇ ಮಾರ್ಗವಿತ್ತು. ಆ ರೀತಿ ದೇಶವು ಮುಂದುವರಿಯುತ್ತ ಬಂದಿದೆ. ಈ ಕಾರ್ಯದಲ್ಲಿ ಅನೇಕ ದೇಶಗಳು ನಮಗೆ ಸಹಾಯ ಮಾಡುತ್ತಾ ಬಂದಿವೆ. ಈಗಲೂ ಮಾಡುತ್ತಿವೆ. ನಾವು ಒಮ್ಮೆ ಲೆ ಇಂಗ್ಲೆಂಡ್, ಅವೆರಿಕಾ, ಜಪಾನ್ ಜರ್ಮನಿಯಷ್ಟು ಮುಂದುವರೆದಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲ. ಆದರೆ, ಈ ಇಪ್ಪತ್ತು ವರುಷಗಳಲ್ಲಿ ಕಬ್ಬಿಣ, ಯಂತ್ರಗಳು (ಮೆಷಿನ್ ಟೂಲ್ಸ್), ಇಂಜಿನ್‌ಗಳು, ಮೋಟಾರ್‌ಗಳು, ಹಲವು ಬಗೆಯ ವಿಮಾನಗಳು ವಿದ್ಯುತ್ ಸಾಮಾನುಗಳು, ಬೆರಿ ಫೋನ್ ಸಾಮಗ್ರಿಗಳು, ಸೈಕಲ್ಲುಗಳು, ಆದೇ ರೀತಿ ಬಟ್ಟೆಬರೆ ಇತ್ಯಾದಿ ನಿತ್ಯ ಉಪಯೋಗದ ಅನೇಕ ಸಾಮಾನುಗಳು, ಔಷಧಗಳು, ಸಕ್ಕರೆ,ಸಿಮೆಂತ ದವುಗಳೆಲ್ಲ ನಮ್ಮಲ್ಲಿ ತಯಾರಾಗುತ್ತಿವೆ. ಅದೇ ರೀತಿ ಹಡಗುಗಳನ್ನು ಕಟ್ಟುವಿಕೆ, ಹೊರ ಮಾದರಿಯ ಬಿಡಾರಗಳ ರಚನೆಗೆ ಬೇಕಾದ ಸಾಮಗ್ರಿ, ಹೀಗೆ ಒಂದಲ್ಲ, ಎರಡಲ್ಲ, ಅನೇಕಾನೇಕ ವಸ್ತುಗಳನ್ನು ನಮ್ಮ ಜನರೇ ಈಗ ತಯಾರಿಸುತ್ತಾರೆ. ಸೈನ್ಯಕ್ಕಾಗಿ ಬೇಕಾದ ಆಯುಧಗಳು ಹಾಗೂ ಸ್ಫೋಟಕ ದ್ರವ್ಯಗಳೂ ಕೂಡ ಸಾಕಷ್ಟು ಪ್ರಮಾಣದಲ್ಲಿ ತಯಾರಾಗುತ್ತಲಿವೆ.

ಸಾಮೂಹಿಕ ಪ್ರಗತಿಯ ದೃಷ್ಟಿಯಿಂದ ನೋಡಿದರೆ ಅಸ್ಪೃಶ್ಯತೆ ಎಂಬುದು ಕಟ್ಟಣಗಳೇದಂತೂ ಅದ್ಯಶ್ಯವಾಗಿದೆ. ಸ್ತ್ರೀಯರ ವಿದ್ಯಾಭ್ಯಾಸದ ಪ್ರಗತಿಯೂ ಆಗುತ್ತಲಿದೆ. ಹೆಚ್ಚೆಚ್ಚು ಉದ್ಯೋಗಗಳಲ್ಲಿ ಅವರು ನೇರ ತೊಡಗಿದ್ದಾರೆ. ಜಾತಿ— ಭಾವನೆಯಂತೂ ಕ್ಷೇತ್ರಗಳಲ್ಲಿ ಸ್ವಲ್ಪ ಎದ್ದು ಕಾಣದಿರಾದಾರೂ ಸಾಮಾನ್ಯ ವ್ಯವಹಾರಗಳಲ್ಲಿ ಅದಕ್ಕೆ ಯಾವ ಮಹತ್ವವೂ ಉಳಿದಿಲ್ಲ.

ಶಿಕ್ಷಣದ ಪ್ರಗತಿ ದ್ರುತಗತಿಯಿಂದ ಸಾಗಿದೆ. ನಿಜವಾಗಿ ನೋಡಿದರೆ ಜನತೆಯ ಅವಶ್ಯಕತೆಯ ಪ್ರಮಾಣದಲ್ಲಿ ಸಾಕಷ್ಟು ಯೋಗ್ಯವಾದ ಶಿಕ್ಷಕ ಶಾಲೇಜುಗಳು ಪ್ರವೇಶವನ್ನು ಪೂರೈಸುವೇ ಹೋಗುತ್ತಿವೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಜನಜಾಗೃತಿಯ ಮೂಲಕ, ಜನರಲ್ಲಿ ತಮ್ಮ ಹಕ್ಕು ಬಾಧ್ಯತೆಗಳ ಎಚ್ಚರಿಕೆ ಕುಟ್ಟಿರುವ ಮೂಲಕ ಬೇಡಿಕೆಗಳು ಹೆಚ್ಚುತ್ತ ಹೋದ ಪ್ರಮಾಣದಲ್ಲಿ ಅವುಗಳ ಪೂರೈಕೆಯ ಸಾಧನಗಳು ಬೆಳೆಯುತ್ತಿಲ್ಲ. ಆದರೆ ಈ ಎಚ್ಚರಿಕೆಯೇ ಒಂದು ದೊಡ್ಡ ಪ್ರಗತಿ ಎಂಬುದನ್ನು ನಾವು ಮರೆಯಬಾರದು. ದೇಶದಲ್ಲಿಯು ಆರೋಗ್ಯ ಉತ್ತಮವಾಗುತ್ತ ನಡೆದುದರಿಂದ ಆಯುಷ್ಯ ಪ್ರಮಾಣವು ಮೊದಲು ೨೭ ವರ್ಷ ಇದ್ದದು ಈಗ ೫೦ಕ್ಕೆ ಏರಿದೆ.

ಸಾಂಸ್ಕೃತಿಕ ಜೀವನದಲ್ಲಿಯಂತೂ ಬಹಳ ದೊಡ್ಡ ಪ್ರಗತಿಯಾಗಿದೆ ಎಂದು ಹೇಳಬಹುದು. ಸಾಹಿತ್ಯ, ನಾಟಕ, ಸಿನಿಮಾ, ಸಂಗೀತ ಇವುಗಳಿಗೆ ಹೊಸ ಕಳೆ ಕಟ್ಟಿದೆ ಎಂದು — ಹೇಳಿದರೆ ತಪ್ಪಾಗಲಿಕ್ಕಿಲ್ಲ. ಭಾಷಾನುಗುಣ ಪ್ರಾಂತರಚನೆಯ ಫಲವಾಗಿಯೂ ಭಾಷೆಗಳ ಪ್ರಗತಿಯು ವೇಗದಿಂದ ಸಾಗಿದ.

ಹೀಗೆಲ್ಲ ಜೀವನದ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಪ್ರಗತಿಯಾಗಿದ್ದರೂ ರಾಜಕೀಯ ಕ್ಷೇತ್ರದಲ್ಲಿಯು ಬದಲಾವಣೆಗಳು, ಮಂತ್ರಿ ಮಂಡಲಗಳ ಅಸ್ಥಿರತೆ, ಆಹಾರ ಧಾನ್ಯಾದಿಗಳ ಬೆಲೆಗಳ ಏರಿಕ, ಜನಮನದಲ್ಲಿ ಅಸಂತೋಷ ಹೆಚ್ಚಲು ಕಾರಣವಾಗಿದ. ಒಂದು ರೀತಿ ನೋಡಿದರೆ, ಈ ಅಸಂತೋಷ ಕೂಡಾ ಜನ ಜಾಗೃತಿಯ ಒಳ್ಳೇ ಲಕ್ಷಣ. ಇನ್ನು ಈ ಜನಜಾಗೃತಿಗೆ ಸರಿಯಾದ ಮಾರ್ಗವನ್ನು ತೋರಿದರೆ ಶಕ್ತಿಯನ್ನು ಪ್ರಗತಿಪರವಾಗಿ ಉಪಯೋಗಿಸಲು ಬರುವಂತೆ ಮಾಡುವುದು ಭಾರತದ ಮುಖ್ಯ ಸಮಸ್ಯೆಯಾಗಿದ. ಬೆಳೆಯುತ್ತಿರುವ ಜನಸಂಖ್ಯೆ, ಗಂಡೋಟೆ— ಮಾನವಶಕ್ತಿ ಮೂಲಕ ಕೂಟೆ ಹಳೇ ಮಹತ್ವಾಯಿತು— ಪಾಕಿಸ್ತಾನ ಚೀನ ದೇಶಗಳ ವಿರೋಧ ಭಾವ ಅನ್ನಾಹಾರಾದಿಗಳ ಆಭಾವ, ಪ್ರತಿಯೊಂದು ಬೇಡಿಕೆಯನ್ನು ಹಿಂಸಾತ್ಮಕ ಸಾಧನಗಳಿಂದ ಪೂರೈಸಿಕೊಳ್ಳಬೇಕೆಂಬ ಜನರ ಲವಲವಿಕೆ, ವಿದ್ಯಾರ್ಥಿಗಳಲ್ಲಿಯು ಅಸಂತೋಷ ಹಾಗೂ ಹಿಂಸಾ ಪ್ರವೃತ್ತಿ ಇವೇ ಮುಖ್ಯವಾಗಿ ಭಾರತದ ಸಮಸ್ಯೆಗಳಾಗಿವೆ.

ಭಾರತದಲ್ಲಿ ಕಚ್ಚಾವಸ್ತುಗಳು ಕಡಿಮೆಯಿಲ್ಲ. ಬುದ್ಧಿ—ಕೈ ಕೌಶಲ ಇವೆರಡೂ ಸಾಕಷ್ಟಿವೆ. ಆದರೆ, ಸಂಘಟನೆ, ಶಿಸ್ತು ಕೂಡಿ ಒಟ್ಟಾಗಿ ಕೆಲಸ ಸಾಗುವಿಕೆ —ಇವುಗಳ ಅಭಾವವಿದೆ. ರಾಷ್ಟ್ರ ಪ್ರಜ್ಞೆ ನಿಜವಾಗಿಯೂ ಮುಂದುವರಿಯುವುದಾದರೆ, ಹಲವು ದೋಷಗಳನ್ನು ಕಳೆಮಾಡಿಕೊಂಡುಹೋಗಿ ಸದ್ಯುಗಳನ್ನು ಆತ್ಮಸಾತ್ ಮಾಡಿಕೊಂಡು ನಾವು ಮುಂದೆ ಸಾಗುವುದು. ಅವಶ್ಯ ಆದ ಕೆಲವು ಸಾಂಕ್ಷಣ ಕಣ್ಣು ತುಂಬುವಂತೆ ಇದ್ದರೂ ಇನ್ನೂ ಮಾಡತಕ್ಕದ್ದು ಬಹಳವಿದೆ. ಆದುದರಿಂದ ಯೋಚನೆ ದೃಷ್ಟಿಯಿಂದ ನಮ್ಮ ಲೋಪದೋಷಗಳನ್ನು ನೋಡಿ ಅವುಗಳನ್ನು ಪರಿಹರಿಸುವುದು ಅವಶ್ಯ. ಇದೇ ಕಾಲಕ್ಕೆ ಭಾರತದ ಭವ್ಯ ಪರಂಪರೆಯನ್ನು ನೆನೆದು ಸಮಾಧಿಯಾಗಿಯು ಮುಂದಿನ ದಿವ್ಯ ಭವಿಷ್ಯವನ್ನು ರೂಪಿಸಲಿಕ್ಕೆ ನಮ್ಮ ತನುಮನ ನಮಿದೆ ಬರಬೇಕು.

ಜೈ ಹಿಂದ್"

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ಕಥನ ಕಲೆ (ಅಧವಾ ಶಿಕ್ಷಣ ವಿಧಾನದಲ್ಲಿ ಕಥನದ ಪ್ರಯೋಜನ).

ಲೇಖಕರು: ಶ್ರೀ ಗಜೇಂದ್ರಗಡ ಶಾಮರಾಯ.

ಪ್ರಕಾಶಕರ: ಸಾಹಿತ್ಯ ಭಂಡಾರ, ಹುಬ್ಬಳ್ಳಿ.

ಪುಟಗಳು. 103. ಬೆಲೆ: 1=75.

ಕಥೆಯು ಬಗ್ಗನ ಆಸಕ್ತಿ ಕೆರಿಯ ಮಗುವಿನಿಂದ ಹಿಡಿದು ಹಿರಿಯ ಮುದುಕರ ವರೆಗೂ ಹರಡಿದೆ. ಅವರವರ ವಯೋಮಾನ, ಮನೋವೃತ್ತಿ, ಪ್ರವೃತ್ತಿಗನುಗುಣವಾಗಿ ಅಸಕ್ಯ ಕಥೆಗಳಲ್ಲೂ ವಿಭಿನ್ನತೆ ಮಾತ್ರವಿದೆ. ಎಳೆಯ ಮಕ್ಕಳಿಗೆ ವಿಷಯ ಜ್ಞಾನವನ್ನು ನೇರವಾಗಿ ಮಾಡುವುದಕ್ಕಿಂತ ಆಸಕ್ತಿಯುತವಾಗಿ ಮಾಡುವುದು—ಅಭ್ಯಸ್ತತೆಯಿಂದ ಪ್ರಸ್ತುತಕ್ಕೆ ಬರುವುದು—ಪರಿಣಾಮಕಾರಿ ವಿಧಾನವೆಂಬುದು ನೂರಕ್ಕೆ ನೂರರಷ್ಟು ಸತ್ಯ. ಆದುದರಿಂದಲೇ ಶಿಕ್ಷಣ ಪದ್ಧತಿಯಲ್ಲಿ, ಮುಖ್ಯವಾಗಿ ಪ್ರಾಥಮಿಕ ಹಂತದಲ್ಲಿ ಕಥಾ ಪ್ರಾಣಾಳಿಗೆ ಮಹತ್ವ ಪೂರ್ಣ ಸ್ಥಾನವಿದೆ. ಶಿಕ್ಷಕರು ಕಥೆಯನ್ನು ಹೇಗೆ ಬೇಕಾದರೆ, ಕಥನಕಲೆಯನ್ನು ಕರಗತ ಮಾಡಿಕೊಳ್ಳಬೇಕು. ಸಮರ್ಥ ಕಥನಕಾರ ಶಿಕ್ಷಕನು ಎಂಥಹುದೇ ಬಿಚಿತ್ರವ ಕಥೆಗಳನ್ನು ಆಯ್ದು ಉತ್ತಮ ರೀತಿಯಲ್ಲಿ ಹೇಳಿ ವಿಷಯ ಜ್ಞಾನವನ್ನು ಸಮರ್ಪಕವಾಗಿ ಮಾಡಬಲ್ಲನು.

ಪ್ರಸ್ತುತ ಗ್ರಂಥವು ಕಥನ ಕಲೆಯ ಬಗ್ಗೆ ಕಥನೇಚ್ಛುಗಳಿಗೆ ಮಾರ್ಗದರ್ಶಕವಾಗಿದೆ. ಇದು ಹೀಳುವುದರ ಉದ್ದೇಶ, ವಿವಿಧ ಪ್ರಕಾರದ ಕಥೆಗಳು, ಕಥೆಯ ಆಯ್ಕೆ, ಕಥೆ ಹೇಳುವ ವಿಧಾನ, ಕಥೆಗಳಿಂದ ವಿದ್ಯಾರ್ಥಿಗಳ ಮನಸ್ಸಿನ ಬೆಳವಣಿಗೆಯ ಪ್ರಯೋಜನ—ಮುಂತಾದುವನ್ನು ಈ ಪುಸ್ತಕದಲ್ಲಿ ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ, ಲೇಖಕರು. ಹಿರಿಯರ ಕಥೆಗಳನ್ನು ಕೆರಿಯರಿಗೆ ಹೇಳುವಾಗ ಯಾವ ರೀತಿಯಲ್ಲಿ ಪೂರ್ವಾಭ್ಯಾಸ ಮಾಡಿಕೊಳ್ಳಬೇಕು ಅಗತ್ಯ ಎಂದು "ಹಿನ್ನೆಲೆ ಹೊಳೆಯಿದೆ ರೆಂಬು ಕಥೆಯು ಮೂಲಕ ತಿಳಿಸಿದ್ದಾರೆ ಅವರು. ಅನೆ ಭಾರಿ ಶಿಕ್ಷಣಕಾರಾದ ಶ್ರೀ ಶಾಮರಾಯರು ತಮ್ಮ ಅನುಭವದ ಮೂಸೆಯಲ್ಲಿ 'ಕಥನ ಕಲೆ'ಯನ್ನು ಇಳಿಸಿ ಇನ್ನಿತರ ಶಿಕ್ಷಕರ ಪ್ರಯೋಜನಾರ್ಥವಾಗಿ ಕನ್ನಡಿಗರ ಮುಂದಿಟ್ಟಿದ್ದಾರೆ.

ಕನ್ನಡದಲ್ಲಿ ಅಪೂರ್ವವಾದ ಇಂಥಹ ಅನುಭವೀ ವಿಚಾರ ಗ್ರಂಥವನ್ನು ಶಿಕ್ಷಕರು ಉಪಯೋಗಿಸಿ, ತಮ್ಮ ಕಥನ ಕಲೆಯನ್ನು ಉನ್ನತೀಕರಿಸಿ, ಸಮರ್ಥ ಶಿಕ್ಷಣವನ್ನು ನೀಡುವಲ್ಲಿ ಯಶಸ್ವಿಗಳಾಗಬಹುದು. ಪುಸ್ತಕದ ಭಾಷೆಯು ಸರಳವಾಗಿದೆ; ವಿಷಯ ಗಂಭೀರವಾದರೂ ಮನೋಜ್ಞವಾಗಿ ನಿರೂಪಿತವಾಗಿದೆ. ಮುದ್ರಣ, ನಿರ್ಮಾಣ ಕಾರ್ಯ ಉತ್ತಮವಾಗಿದೆ. ಉಡುಪಿಯ ಪೇಜಾವರ ಮಠದ ಪದ್ಮಶ್ರೀ ಗೋಕಾಕರು ಮುನ್ನುಡಿ ರೂಪದಲ್ಲಿ ಗ್ರಂಥವನ್ನು ಹರಸಿದ್ದಾರೆ.

ಅಶ್ವಮೇಧ ಪರ್ವ:—(ಕೇಜಕವಧೆ ಯನ್ನೊಳಗೊಂಡು)

ಲೇಖಕರು. ಶ್ರೀ ಬಾಳೆಗದ್ದೆ ಶಿವರಾಮ ಹೆಗಡೆ.

ಪ್ರಕಾಶಕರು. ಸೀತಾರಾಮ ಹೆಗಡೆ, ಇಟ್ಟಗಳ

ಶ್ರೀ ರಾಜರಾಜೇಶ್ವರಿ ಪ್ರಿಂಟಿಂಗ್ ಪ್ರೆಸ್, ಶಿರಸಿ (ಉ. ಕ.)

ಪುಟಗಳು: 42. ಬೆಲೆ. ರೂ. 1-00.

ಧರ್ಮರಾಯನು ಅಶ್ವಮೇಧ ಯಾಗ ಮಾಡಿದ ಕಥೆ ವೀರ ತಸಿಕರ ಗೌರವಣ ನೀಡುತ್ತದೆ. ಈ ಕಥೆಯನ್ನು ಯಕ್ಷಗಾನ ರೂಪದಲ್ಲಿ ಶ್ರೀ ಹೆಗಡೆಯವರು, ಸಂಗ್ರಹಿಸಿದ್ದಾರೆ. ಒಬ್ಬೊಬ್ಬ ರಾಜನೊಡನೆ ಅರ್ಜುನನು ಮಾಡಿದ ಯುದ್ಧವೇ ಒಂದೊಂದು ಸ್ವತಂತ್ರ ಪ್ರಸಂಗವಾಗುವಷ್ಟು ವಿಸ್ತಾರವಿರುವಂಗ, ಈ ಪ್ರಸಂಗವು ಸಂಗ್ರಹವಾಗಿದೆಯೆಂದು ಬೇರೆ ಹೇಳಬೇಕಿಲ್ಲ.

ಈ ಯಕ್ಷಗಾನದ ಮೊದಲು ಕೇಜಕ ವಧೆ'ಯೆಂಬ ಒಂದು ಚಿಕ್ಕ ಕಥಾ ಭಾಗವೂ ಸೇರಿದೆ ಪದ್ಯ—ಏಂದರೆ ಅರ್ಧ ವಿವರಣಾ ರೂಪದಲ್ಲದ್ದೂ ಇದೆ

ಎರಡೂ ಭಾಗಗಳ ಭಾಷೆ ಯಕ್ಷಗಾನದ ಸಾಂಪ್ರದಾಯಿಕತನಕ್ಕೆ ಹೊಂದಿಕೊಳ್ಳುತ್ತದೆ. ಯಕ್ಷಗಾನ ಕಲಾವಿದರು ಇದರಿಂದ ಲಾಭಗಳಿಸಬಹುದು.

—ಗೋರಾ.

ಭಾರತ ಪುತ್ರ

ಏ.... ಭಾರತಪುತ್ರ,
ನೀನಿರು ಸರ್ವತ್ರ.
ಪುಣ್ಯ ಭೂಮಿ ಭಾರತವನ್ನು
ಎಂದಿಗೂ ಮರೆಯದಿರು ಕೊನೆಗನ್ನು
ನಮ್ಮ ವಂಚಿಸಿದ ಶತ್ರುಗಳನ್ನು
ಮೆಟ್ಟಿಸದಿರು ಭಾರತದ ಗಡಿಯನ್ನು.
ಎಚ್ಚರಿಸು ಭಾರತ ಮಾತೆಗು
ನೀಡೆಲ್ಲರಿಗೂ ಸುಖ ವಾರ್ತೆಯ
ಸಹ್ಯ ಗಾಂಧಿಗೆ ಸುಖ ಶಾಂತಿಯ
ಸತ್ಯಕೆಂದೆಂದಿಗೂ ಜಯ ಲಾಭವ
ಏ.... ಭಾರತ ಪುತ್ರ
ನೀನಿರು ಸರ್ವತ್ರ
—ಕೆ. ಟಿ. ಸ್ವಾಮಿ,
ನಾಯಕನಹಟ್ಟಿ.

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ ಸಂತತಿ

ಜನನಗಳು ಹೆಚ್ಚದಂತೆ ತಡೆಯುವ ವಿಚಾರ ಮತ್ತು ಉಪಾಯಗಳನ್ನು
ತಿಳಿಸುವ ಕೈಪಿಡಿ
ಬೆಲೆ 0—50 ಪೈಸೆ ಮಾತ್ರ.
0-60 ಪೈಸೆ M. O. ಮಾಡಿ, ಯಾ ಸ್ಟ್ಯಾಂಪು ಕಳಿಸಿ ಒಂದು ಪ್ರತಿಯನ್ನು
ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ
ಪಾಲುಕೋಟೆ, ಉಡುಪಿ, ದ. ಕ.

ಶ್ರೀ ಮುಕುಂದ ಮೂಲಾ ಸ್ತೋತ್ರ

(ಆರನೇ ಪುಟದಿಂದ)

ಜಿಯೂದ, ಸೌಂದರ್ಯದ ಮುದ್ರಾಮಣಿಯೂದ, ಶ್ರೀಮತಿಯೂ ನಾರೀಮಣಿಯೂ ಆದ ರುಕ್ಮಿಣಿಯು ಘನಸ್ತನಯಗಳಲ್ಕೆ ಏಕವಾಕ್ಯ ಭೂಷಣ ಮಣಿಯೂದ, ಘೋಯ ವಿಷಯಗಳಲ್ಲಿ ಚೂಡಾಮಣಿಯೂದ, ಗೋಪಾಲರಲ್ಲಿ ಶಿರೋಮಣಿಯು [ಕೃಷ್ಣನು] ನಮಗೆ ಶ್ರೇಯಸ್ಸನ್ನು ಘೀಡಲಿ! [ಇಷ್ಟು ಭಕ್ತ ದ್ವೇಷಿ ಭುಜಂಗನೆಂಬುದು ಗಮನೀಯವು; ಮಿಕ್ಕ ಗೋಪಿ, ರುಕ್ಮಿಣಿ, ಗೋಪಾಲ ವಾಚಕಗಳು ಶೃಂಗಾರ ಸೂಚಕಗಳಾಗಿವೆ. ವಿಶೇಷಗಳಲ್ಲಿ 'ಮಣಿ'ಯೆಂಬುದು ಹೇಳಿದ್ದು ಸುರಸವಾಗಿ ಸ್ಮರಣೆಗೆ ಅನುಕೂಲಿಕವಿದೆ. ಪ್ರೇಮಸ್ಸಿಗಿಂತ—ಇಹದ ಸಂಖ್ಯಿಕೆಂತ ಹೆಚ್ಚಿನ ಶ್ರೇಯಸ್ಸನ್ನೇ - ಪರಲೋಕದ ಆನಂದವನ್ನೇ ಇಲ್ಲಿ ಲಕ್ಷೀಕರಿಸಲಾಗಿದೆಯೂದರೂ, ಅದಕ್ಕೆ ಪೂರ್ವ ಪೀಠಿಕೆಯಾಗಿ ಇಹದ ಸೌಖ್ಯವೂ ನಾಕೂತವಾಗಿದೆ. ಈ ಪದ್ಯವು ನಾಲಂಕಾರವಾಗಿ, ಧ್ವನಿಪೂರ್ಣವಾಗಿದೆ] ಇನ್ನು, ಶ್ರೀಕೃಷ್ಣನ ಮಂತ್ರದ ವರ್ಣನೆಯಿದು:

"ಶತ್ರುಚ್ಛೇದೈಕ ಮಂತ್ರಂ ಸಕಲ
ಮುಪನಿಷದ್ಗಾ
ದ್ವಾಕ್ಯ ಸುಪೂಜ್ಯ ಮಂತ್ರಂ |
ಸಂಸಾರೋತ್ತಾರ ಮಂತ್ರಂ ಸಮುದಿತ
ಮನಸಾಂ
ಸಂಗ ನಿರ್ಯೋಗ ಮಂತ್ರಂ |
ಸರ್ವೈಶ್ವರ್ಯೈಕ ಮಂತ್ರಂ
ವ್ಯಸನ ಭುಜಗಸಂದಷ್ಟ
ಸಂತ್ರಾಣ ಮಂತ್ರಂ |
ಜಪ್ತ್ವೇ ಶ್ರೀಕೃಷ್ಣ ಮಂತ್ರಂ ಜಪ
ಜಪ ಸತತಂ
ಜನ್ಮ ನಾಫಲ್ಯ ಮಂತ್ರಂ" ॥೭೯॥

ಹೀ ನಾಲಿಗೇಗೆ! ಶತ್ರುಗಳ ನಾಶಕ್ಕೆ ಏಕ ಮುಖ್ಯ—ಮಂತ್ರವೂ, ಸಕಲವಾಗಿ ಉಪನಿಷದ್ವಾಕ್ಯಗಳಿಂದ ಸಂಪೂಜನೀಯ ಮಂತ್ರವೂ, ಸಂಸಾರದಿಂದ ಉದ್ಧಾರದ ಮಂತ್ರವೂ, ತತ್ಪರನೃತ್ತ ಮನಸ್ಕರ ಸಂನಾರ ಸಂಗದ ನಿರ್ಯಾಣಕ್ಕೆ ಪಕ್ಕ ಮಂತ್ರವೂ, ಎಲ್ಲಾ ಬಗೆಯ ಸಂಪತ್ತಿಗೆ ಏಕ—ಮೂಲ — ಮಂತ್ರವೂ, ವ್ಯಸನಗಳೆಂಬ ಸರ್ಪಗಳಿಂದ ದಷ್ಟರಾದವರ ರಕ್ಷಣಾ ಮಂತ್ರವೂ ಜನ್ಮದ ನಾಫಲ್ಯದ ಮಂತ್ರವೂ ಆದ ಶ್ರೀಕೃಷ್ಣ ಮಂತ್ರವನ್ನು ಸತತವೂ ಜಪಿಸು, ಜಪಿಸು! (ಇಲ್ಲಿಯ ವಿಶೇಷಣಗಳು ಪರಸ್ಪರ ನಾಂಬಂಧಿಕಗಳಾಗಿ ಶೋಭಿಸುತ್ತಿವೆ.ಜಪಿಸು ಎಂದೆರಡು ಸರ್ತಿ ಹೇಳಿದ್ದುದರ ಆರ್ಥವಾದರೋ, ಅಜ್ಞಾತವಾಗಿಯೋ ಜ್ಞಾತವಾಗಿಯೋ ಹರಿನಾಮ ಸ್ಮರಣ ಕರ್ತವ್ಯವೆಂಬುದಾಗಿದೆ. ಎಂಟು ಬಾರಿ ಮಂತ್ರಗಳೆಂಬ ವಾಚಕಗಳಿದ್ದು, 'ಅಷ್ಟ ಮಹಾಮಂತ್ರ'ನೆಂಬುದರ ದ್ಯೋತಕವಾಗಿವೆ.)

ಅದಾಗಿ, ಶ್ರೀಕೃಷ್ಣನಾಮವೆಂಬ ಔಷಧದ ಬಗೆಯಿದು:

"ವ್ಯಾಮೋಹೋದ್ಭವನೌಷಧಂ ಮುನಿ
ಮನೋ
ವೃತ್ತಿ ಪ್ರವೃತ್ತ್ಯೌಷಧಂ |
ದೈತ್ಯಾನರ್ಥಕರೌಷಧಂ ತ್ರಿಜಗತಾಂ
ಸಂಜೀವನೈಕೌಷಧಂ |
ಭಕ್ತಾರ್ತಿ ಪ್ರಶಮೌಷಧಂ ಭವಭಯ
ಸ್ರುದ್ಧ್ವಂಸಿ ದಿವ್ಯೌಷಧಂ |
ಶ್ರೇಯಃ ಪ್ರಾಪ್ತಿಕರೌಷಧಂ ಪಿಬ
ಮನಃ
ಶ್ರೀಕೃಷ್ಣನಾಮೌಷಧಂ॥೩೦॥"ಹೇ ಮನಸ್ಸೇ! ವಿಶೇಷತಃ ಮೋಹವನ್ನು ನಿರ್ಮೂಲಿಸುವ, ಮುನಿಗಳ ಮನೋವೃತ್ತಿಯನ್ನು ಪ್ರವೃತ್ತಿ ಪ್ರವರ್ಧನಗೊಳಿಸುವ, ದೈತ್ಯರಿಗೆ ಅನರ್ಥವನ್ನು ಮಾಡುವ, ಮೂರ್ಲೋಕದ ಪ್ರಾಣಿಗಳಿಗೆ ಜೀವೌಷಧವಾಗಿರುವ, ಭಕ್ತರ ಸಂಕಟವನ್ನು ಪೋಗಲಾಡಿಸುವ, ಸಂಸಾರದ ಭಯವನ್ನು ನಾಶಗೊಳಿಸುವ, ಶ್ರೇಯಸ್ಸನ್ನು ಒಲಿಸುವ, ಶ್ರೀಕೃಷ್ಣ ನಾಮವೆಂಬ ದಿವ್ಯೌಷಧವನ್ನು ಸೇವಿಸು. (ಮುನಿ, ದೈತ್ಯ, ಭಕ್ತಾದಿಗಳು ನಾವೇನ್ತಿ ಜೀಯಗಳಾಗಿ ಇಲ್ಲ ಹೇಳಿದೆ. ಜಪ್ತೆ, ಮನಸ್ಕಗಳೆರಡರ ಸಂಬೋಧನೆಯಿಂದ ಈ ಮನೋವಾಕ್ಯಾಯಗಳಲ್ಲಿ ಎರಡನ್ನು ಎಚ್ಚರಿಸಿದ್ದು ಜಾಗೂ ಕರ್ಕವು ಕದನು ಸಾರಿಯುಂದು ತಿಳಿಸುವಂತಿದೆ.)

ಈ ಮುಕುಂದಷ್ಟಮೂಲಾ ಸ್ತೋತ್ರದ ಮೂರು ನುಡಿಕಗಳಲ್ಲಿ ಮಣಿ-ಮಂತ್ರ-ಔಷಧರೂಪಗಳಾದ ದೇವನು ಭಕ್ತರ ಅಜ್ಞಾನ ಕತ್ತಲೆಯನ್ನು ಕಳೆದು ಜ್ಞಾನ ಬೆಳಕನ್ನು ಕರುಣಿಸಿ ಸಂಸಾರ ಸಾಗರವನ್ನು ದಾಟಿಸಿ ಮೋಕ್ಷ ಸಾಮ್ರಾಜ್ಯವನ್ನು ಕೊಡಿಸುವ ಸದ್ಗುರುವಾಗಿ ಕಂಗೊಳಿಸಿದ್ದಾನೆ. ಇಂತಹ ಸದ್ಗುರುವಿನ ಪಾದಾರವಿಂದಗಳಲ್ಲಿ ಭಕ್ತಿಯಿಂದ ಶರಣಾಗಿ ಸಾಷ್ಟಾಂಗ ನಮಸ್ಕಾರ ಮಾಡುತ್ತಾ ಈ ಸ್ತೋತ್ರವನ್ನು ಮುಗಿಸಿದ್ದಾರೆ ಕವಿಗಳು.

ಸಂಸ್ಕೃತ ಭಾಷೆಯಲ್ಲಿ ಸ್ತೋತ್ರ ಸಾಹಿತ್ಯ ಬಹಳ ಸಮೃದ್ಧವಾಗಿದೆ. ಅದರಲ್ಲಿ ಶಂಕರಾಚಾರ್ಯರ ಸ್ತೋತ್ರಗಳು ಅತ್ಯಂತ ಪ್ರಸಿದ್ಧವಾಗಿವೆ. ಅವುಗಳಲ್ಲಿ ಕೆಲವು ಸ್ತೋತ್ರಗಳು ಅತ್ಯಂತ ಸರಳವಾಗಿದ್ದು ಸಾಮಾನ್ಯ ಜನರಿಗೂ ಅರ್ಥವಾಗುವಂತಿವೆ. ಆದರೆ ಈ ಸ್ತೋತ್ರ ಮಾತ್ರ ಅತ್ಯಂತ ಕಠಿಣವಾಗಿದೆ. ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯವಿರುವವರಿಗೂ ಇದರ ಅರ್ಥ ಗ್ರಹಿಸಲು ಕಷ್ಟವಾಗುತ್ತದೆ. ಇಂತಹ ಕಠಿಣವಾದ ಸ್ತೋತ್ರವನ್ನು ಶಂಕರಾಚಾರ್ಯರು ಏಕೆ ರಚಿಸಿದರು? ಇದರ ಹಿನ್ನೆಲೆಯೇನು? ಎಂಬ ಪ್ರಶ್ನೆಗಳು ಸಹಜವಾಗಿ ಮೂಡುತ್ತವೆ. ಇದಕ್ಕೆ ಉತ್ತರವಾಗಿ ಒಂದು ಕಥೆ ಪ್ರಚಲಿತದಲ್ಲಿದೆ.

ಶಂಕರಾಚಾರ್ಯರು ಕಾಶ್ಮೀರದಲ್ಲಿ ಸಂಚರಿಸುತ್ತಿದ್ದಾಗ ಅಲ್ಲಿನ ಪಂಡಿತರೆಲ್ಲರೂ ಸೇರಿ ಅವರಿಗೆ ಒಂದು ಸವಾಲನ್ನು ಹಾಕಿದರಂತೆ. ಅದೇನೆಂದರೆ, ಕಾಶ್ಮೀರದ ಸರಸ್ವತಿ ದೇವಿಯ ಮುಂದೆ ಕುಳಿತು ಸಂಸ್ಕೃತದಲ್ಲಿ ಒಂದು ಸ್ತೋತ್ರವನ್ನು ರಚಿಸಿ ಹಾಡಬೇಕೆಂದು. ಶಂಕರಾಚಾರ್ಯರು ಈ ಸವಾಲನ್ನು ಸ್ವೀಕರಿಸಿ ಸರಸ್ವತಿ ದೇವಿಯ ಮುಂದೆ ಕುಳಿತು ಈ ಸ್ತೋತ್ರವನ್ನು ರಚಿಸಿ ಹಾಡಿದರಂತೆ. ಸರಸ್ವತಿ ದೇವಿಯು ಸಂತುಷ್ಟಳಾಗಿ ಶಂಕರಾಚಾರ್ಯರಿಗೆ ಸರ್ವಜ್ಞ ಪೀಠವನ್ನು ಕೊಟ್ಟಳಂತೆ. ಈ ಸ್ತೋತ್ರದಲ್ಲಿ ಅಂತಹ ಮಹಿಮೆಯಿದೆ ಎಂಬುದು ಜನರ ನಂಬಿಕೆ. ಈ ಸ್ತೋತ್ರವನ್ನು ಪಠಿಸಿದರೆ ಸರಸ್ವತಿ ದೇವಿಯ ಕೃಪೆಗೆ ಪಾತ್ರರಾಗಿ ಜ್ಞಾನ ಸಂಪತ್ತು ಲಭಿಸುತ್ತದೆ ಎಂಬುದು ಜನರ ನಂಬಿಕೆ.

ಈ ಸ್ತೋತ್ರದಲ್ಲಿ ಒಟ್ಟು ೧೦೦ ಶ್ಲೋಕಗಳಿವೆ. ಪ್ರತಿ ಶ್ಲೋಕದಲ್ಲಿಯೂ ಸರಸ್ವತಿ ದೇವಿಯ ಒಂದೊಂದು ವಿಶೇಷಣವನ್ನು ಬಳಸಿ ಸ್ತುತಿಸಲಾಗಿದೆ. ಈ ಸ್ತೋತ್ರವನ್ನು ಪಠಿಸಿದರೆ ಸರಸ್ವತಿ ದೇವಿಯ ಕೃಪೆಗೆ ಪಾತ್ರರಾಗಿ ಜ್ಞಾನ ಸಂಪತ್ತು ಲಭಿಸುತ್ತದೆ ಎಂಬುದು ಜನರ ನಂಬಿಕೆ.

ಈ ಸ್ತೋತ್ರದ

ದಾಂಪತ್ಯ ಧರ್ಮವೇ ತಾರಕೋಪಾಯ

(ಜಾನಕೀ ಪುಟದಿಂದ)

ನಿಷ್ಪ್ರಯೋಜಕತೆಗೆ ಇಳಿಸು ಗೊಡಬಹುದು. ಹೀಗೆ ಸ್ವಧರ್ಮಕ್ಕೆ ವಿರುದ್ಧವಾಗಿರುವುದು ದಾಂಪತ್ಯ ಧರ್ಮ ವಿರುದ್ಧವಾಗಿರುತ್ತದೆ. ಪ್ರೇಮ ಧರ್ಮ ವಿರುದ್ಧವಾಗಿರುತ್ತದೆ. ಕೃತಘ್ನತೆ—ಶರೀರ ಸಂಯೋಗ ವಿಯೋಗಗಳು — ಬಾಹ್ಯ ಸುಖ ದುಃಖಗಳು ಪತಿ ಪತಿಯರ ಆತ್ಮ ಪ್ರಣಾಯವನ್ನು ಭಂಗ ಮಾಡ ಬಾರದು. ಶಕ್ತಿ ಮೀರಿ ತದ್ರೋಗ ನಿವೃತ್ತಿಗೆ ಸಮು ಚಿತ ರೀತಿಯಿದ ಪರಿಶ್ರಮಿಸುವುದು ಗಂಡ ಹೆಂಡಿರ ಪರಸ್ಪರ ಧರ್ಮ. ಅರಾಮವಾಗಿ ಇರಿತುಕೊಂಡು ತಿಂಗಳ ಸಂಪಾದನೆಯನ್ನು ಲೆಕ್ಕಿ ಹಾಕಿಕೊಳ್ಳುವುದರಲ್ಲಿ ಶ್ರದ್ಧೆಯನ್ನು ವಹಿಸುವಂತೆಯೇ ಆತ್ಮ ಜ್ಞಾನ ಸಂಪಾದನೆಯನ್ನು ಲೆಕ್ಕಿ ಹಾಕಲು ಕಲಿತು— ಶಿಶು ಪಶ ಜೀವ್ಯಗಳಿಂದ ಕಮ್ಮಿ ಅ ಮೂಲ್ಯವಾದ ಜೀವಿತವನ್ನು ವ್ಯರ್ಥವಾ ಡಿಕೊಳ್ಳದ ಪತಿ ಪತಿಯರೇ ಆದೃಷ್ಟವಂ ತರು.

ಕುಟುಂಬ ನಿಯಂತ್ರಣವನ್ನು ಕುರಿತು —ಸಂತಾನ ನಿರೋಧವನ್ನು ಕುರಿತು ಎರ ಡು ಮಾತು— ಸುದ್ದಿನಿಂದ, ಯಿಂಜಕ್ಷನ್ ಗಳಿಂದ, ಶಸ್ತ್ರ ಚಿಕಿತ್ಸೆಗಳಿಂದ— ಕೃತಿಮ ಸಾಧನೆಗಳಿಂದ ಕುಟುಂಬ ನಿಯಂತ್ರಣವ ನ್ನು ಸಾಧಿಸಬೇಕೆನ್ನುವದು ಭಾರತ ಜಾತಿಗೇ ಅತೀ ನಿಕೃಷ್ಟವಾದ ವಿಷಯ. ಅಧಾರ್ಮಿಕವಾದ ವಿಷಯ. ದಾಂಪತ್ಯ ಧರ್ಮವನ್ನು ತಿಳಿದುಕೊಂಡ ದಿನ ಈ ಕೃತ್ರಿಮ ಕುಟುಂಬ ನಿಯಂತ್ರಣ ವಿಧಾನದಿಂದ ಕಲು ವೇ ಯಿರ್ದಿ. ಕುಟುಂಬ ನಿಯಂತ್ರಣ ವಿಧಾನವು ಮಾನವ ಜಾತಿಯನ್ನು ಘಾತಕವಾಗಿ, ಅಧಾರ್ಮಿಕವಾಗಿ ಪರಿಣಮಿಸುತ್ತದೆ. ಈ ನಿಕೃಷ್ಟ ವಿಧಾನವನ್ನು ಬಿಟ್ಟು ಬಿಟ್ಟು ಕೃಮ ವಧಾನವನ್ನು ಎಂದೆಂದಿಯಿಂದ ಕೂಡಿದ ವಿಧಾನಗಳನ್ನು ಭಂಗಿಸಿ ಜಾತಿ ಅವಲಂಬಿಸ ಬೇಕಾಗಿದೆ. ಇಂದ್ರಿಯ ವಿಜೇತರಾದ ಮಹಾ ಮಹರ್ಷಿಗಳ ಸಂತತಿಗೆ ಸೇರಿದ ಭಾರತೀಯರು ಅವಲಂಬಿಸಬೇಕಾದ ಪದ್ಧತಿ ಇದಲ್ಲವೇ ಇಲ್ಲ.

ಭಾರತೀಯರ ಸಹಜವಾದ ಸಗೌರವಾದ ಕುಟುಂಬ ನಿಯಂತ್ರಣ ವಿಧಾನವು ಇಂದ್ರಿಯ ನಿಗ್ರಹ, ಇಂದ್ರಿಯಾತೀತ ಆತ್ಮಶಕ್ತಿಗಳನ್ನು ಉದ್ದೀಪನಗೊಳಿಸುವಂತಹ ವೈಜ್ಞಾನಿಕ ಸಂಶೋಧನೆ— ಆತ್ಮಜ್ಞಾನ ಸಂಪಾದನೆ —ಬ್ರಹ್ಮಚರ್ಯ ಪಾಲನೆ—ಆಗಿದೆ. ಅಧಿಕ ಸಂಖ್ಯಾಬಂದು ಸಂತಾನ ನಿರೋಧಕ್ಕಾಗಿ ಮಾಡುತ್ತಿರುವ ಈ ನಿಕೃಷ್ಟ ಕಾರ್ಯ ಕ್ರಮಗಳಿಂದ ಅಧಿಕ ಸಂತಾನಾಪೇಕ್ಷೆಯ ಬಂದಲ್ಲಿ ಫಲಿಸಿ ವೈದ್ಯರಿಗೂ ದೇವರಿಗೂ ಕೆಟ್ಟ ಸಂಬಂಧ ನಿರ್ಮಾಣವಾಗಿ ಕೊನೆಗೆ ಅಬಾರ್ಷನ್ ಮಾಡಿಸಿಕೊಳ್ಳುವ ಪರಿಸ್ಥಿತಿ ಬರುತ್ತದೆ. ಕುಟುಂಬ ನಿಯಂತ್ರಣವನ್ನು ಮೂತ್ರವೇ ಅಲ್ಲ ಮಾನವ ಜಾತಿಯನ್ನೇ ಪೀಡಿಸುತ್ತಿರುವ ಎಲ್ಲಾ ಸಮಸ್ಯೆಗಳನ್ನೂ ಪರಿಷ್ಕಾರ ಮಾಡಬಹುದು. ಈ ಮಾರ್ಗ ಧಾರಣೀಯೇ ದ್ಧರಣಕ್ಕೆ ಯೋಗ್ಯವಾದುದು. ಬಹುವಿಧ ರೋಗಗಳಿಗೆ ಒಂದೇ ಮದ್ದು ಅದೇ ಬ್ರಹ್ಮಚರ್ಯ! ಬ್ರಹ್ಮಚರ್ಯವೆಂದರೆ ಒಂದು ಸ್ತ್ರೀ ಪುರುಷರ ಸಂಬಂಧವಾದ ಪೃಷ್ಟಿಯನ್ನು ನಿಗ್ರಹಿಸುವದೆಂದು ಮಾತ್ರವಲ್ಲ ಮನಸ್ಸನ್ನು ಬ್ರಹ್ಮನಲ್ಲಿಗೆ ತಿರುಗಿಸುವುದೇ ಬ್ರಹ್ಮಚರ್ಯವಾಗಿರುತ್ತದೆ. ಕಾಮೋದ್ರೇಕ ನಿಗ್ರಹ ಆದರೊಳಗೊಂದೆ ಅಂಶ ಮಾತ್ರವೇ. ಆದ್ದರಿಂದ ಮಾನವರು ತಮ್ಮನ್ನು ಆತ್ಮಮಾರ್ಗವನ್ನು ಹಿಡಿಸಿರು ವಂಥಹ ಸಮಸ್ತ ಪಾಶವಿಕ ಶಕ್ತಿಗಳನ್ನು ನಿಗ್ರಹಿಸಿ ಸತ್ಯ ನ್ವಾತಂತ್ರ್ಯಶ್ರೀಯನ್ನು ಅನುಭವಿಸಲು ಏಕೈಕ ಮಾರ್ಗ—ಬ್ರಹ್ಮ ಜ್ಞಾನ ಬ್ರಹ್ಮದೃಷ್ಟಿ—ಬ್ರಹ್ಮಚರ್ಯ ಸತಿ ಪತಿಯರ ಮನೆಯು ಬ್ರಹ್ಮ ಜ್ಞಾನ ವಿಷ್ಠಿತವಾದ ದಿನವೇ ಬ್ರಹ್ಮಚರ್ಯ ನಿಷ್ಠಿತವಾದ ದಿನವೇ ಸತಿಪತಿಯರು ಸತ್ಯ ಶಾಂತಿಯನ್ನು ಹೊಂದುತ್ತಾರೆ. ಲೋಕಕ್ಕೆ ಶಕ್ತಮವಾದ ಸೇವೆಯನ್ನು ಮಾಡಲು ಅರ್ಹರಾಗುತ್ತಾರೆ.

ಗೃಹಸ್ಥರಾದರೂ, ಬೇರೆ ಯಾರೇ ಆದರೂ ಬ್ರಹ್ಮ ನಿಷ್ಠರಾದ ದಿನವೇ ಸತ್ಕಾರ್ಯ ನಿರತರಿಂದ ದಿನವೇ ಪಾಶವಿಕ ಪ್ರವೃತ್ತಿಯನ್ನು ಜಯಿಸಬಲ್ಲರು. ಸದ್ಭಾವನೆ, ಸತ್ಕಾರ್ಯ, ಸದ್ಗುಣ, ಸದ್ಬುದ್ಧಿ ಇಲ್ಲದವರು ನಾಶವಾಗುತ್ತಾರೆ. ಸದ್ಭಾವನೆಗೆ ಸದಾಚಾರ ಮಾನವ ಜಾತಿಗೆ ಉತ್ಕರ್ಷ!

ಶ್ರೀ ದಯಾನಂದ ಸರಸ್ವತೀಯವರು ನವ ಯೌವನದಲ್ಲಿರುವಾಗ ಒಬ್ಬ ವೃದ್ಧ ಗೃಹಸ್ಥರು "ಸ್ವಾಮೀಜೀ! ನೀವು ನವ ಯೌವನದಲ್ಲಿರುವಿರಿ. ಸೌಂದರ್ಯ ನಿಧಿಯಾಗಿರುವಿರಿ, ದೃಢ ಶರೀರಿಗಳಾಗಿರುವಿರಿ —ಮುದುಕನಾದರೂ ನವಂಗಿ ಕಾಮ ಪೀಡೆ ತಲಗಲಿಲ್ಲ ಹಾಗಿರುವಾಗ ಈ ತ್ಯಾಗವನ್ನು ಹೇಗೆ ನಿಗ್ರಹಿಸಲಿ, ಶಕ್ತರಾಗಿರುವಿರಿ?" ಎಂದು ಕೇಳಿದನಂತೆ. ಆಗ ಸ್ವಾಮೀಜಿ "ನನಗೆ ನಿರಂತರ ವೇದ ಪಠನ, ವೇದ ಪ್ರಚಾರ ಇವಕ್ಕೆ ಸಮಯವು ಸಾಕಾಗುವದಿಲ್ಲ. ಇನ್ನು ವಿಷಯವನ್ನು ಕುರಿತು ಯೋಚಿಸುವದಕ್ಕಾದರೂ ಅವಕಾಶ ಬೇಕಲ್ಲವೆ?" ಎಂದರಂತೆ. ಉತ್ತಮ ಭಾವಗಳಿಂದ—ಉತ್ತಮ ಕೆಲಸಗಳಿಂದ ಮುಂದಕ್ಕೆ ಹೋಗುತ್ತಿರುವ ಮಾನವ ಜಾತಿಯನ್ನು ಯಾವ ದುರ್ವಿಕಾರಗಳೂ ಎದುರಿಸಲಾರವು.

ಸಮಸ್ತ ಭಾರತೀಯ ಜಾತಿಯೇ ಸತ್ಕಾರ್ಯ ಸಜ್ಜಾಗಲಿ! ಸತ್ಸಂಗಗಳಿಂದ ಉದ್ದೀಪಿಸಲಿ! ಆಜ್ಞಾನಾಂಧಕಾರವು ತೊಲಗಿ ಬ್ರಹ್ಮ ಜ್ಞಾನಿಗಳಾಗಿ ಮೆರೆಯಲಿ!

ಹೀಗಿದೆ ಲೋಕದ ನೀತಿ!

ಅನಾವರಣ

ತಾನು ಮಾಡಿದ ಕುಂಬಳ್ಕಾಯಿ ಗಾತ್ರದ ಅಪರಾಧಕ್ಕೆ ಮುಸುಕುಕೆಳೆದು, ಇನ್ನೊಬ್ಬರ ಸಾಸಿವೆ ಕಾಳು ಗಾತ್ರದ ಶವುಗಳ ಅನಾವರಣ ಸಮಾರಂಭ ನೀವೇರಿಸುವರೇ ಹೆಚ್ಚುಮಂದಿ!

ಂ ಂ ಂ ಂ

ಯೋಗ್ಯತೆ

ಯೋಗ್ಯತಾವಂತನು ಹಣವಂತನಲ್ಲವಾದರೂ ಮನುಷ್ಯನಾಗಿ ಬಾಳುತ್ತಾನೆ. ಹಣವಂತನು ಸಮಾಜದಲ್ಲಿ ಹಿರಿಯನಾಗಿ ಮೆರೆದರೂ ಮನುಷ್ಯನಾಗಿ ಬಾಳುವುದಿಲ್ಲ!

ಂ ಂ ಂ ಂ

ಮಾತು ಮತ್ತು ಕೃತಿ

ಮಹಾತ್ಮಾ ಗಾಂಧೀಜಿಯವರು ಸಾರಿದ ತತ್ವ ನೀತಿಯ ಎಂಜಲನ್ನೇ ಮೆಲುಕಾಡಿ ಸುಖವಾಗಿ ಬದುಕಿದವರಿಷ್ಟೋ ನುಂದಿ ಇದ್ದಾರೆ ನಮ್ಮಲ್ಲಿ. ಆದರೆ ಅವರು ನಡೆದ ದಾರಿಯಲ್ಲೇ ನಡೆದು ಬದುಕಿದವರಿಲ್ಲ!

ಂ ಂ ಂ ಂ

ಕಷ್ಟಕ್ಕೆ ಕಾರಣ

ನುಬಿ ಪಡೆಯಬೇಕು ಎಂಬ ಆಕಾಂಕ್ಷೆಯಿಂದ ತಿದನ್ನು ಪಡೆಯುವ ಯತ್ನದಲ್ಲೇ ಮನುಷ್ಯ ಕೆಲವು ಸಮಯ ದಃಖ ಪಡುತ್ತಾನೆ!

ಂ ಂ ಂ ಂ

ನಾವು ಮತ್ತು ಕಾನೂನು

ಬಡವರು ಕಾನೂನಿಗೆ ಅಧೀನ. ಕಾನೂನು ಪ್ರಭಾವಶಾಲಿಗಳಿಗೆ ಅಧೀನ. ಬಡವ ಸೀನು ಎಣ್ಣೆ ಬಾಟ್ಲಿ ಹಿಡಿದು ಕೊಂಡು ಬಂದರೂ ಪೋಲೀಸನು ಅವನನ್ನು ನಿಲ್ಲಿಸಿ ಗದರಿಸ ತ್ತಾನೆ. ಹಣವಂತ ಸಂಯಿ ತಂಬಿದ ಬಾಟ್ಲಿಯನ್ನೇ ಹಿಡಿದು ಕೆಣಕಿಕೊಂಡಿದ್ದರೂ ಸಲಾಮು ಹೊಡೆದು ಆಜೆ ಕಳುಹಿಸುತ್ತಾನೆ ಅದೇ ಪೋಲೀಸನವ.

ಂ ಂ ಂ ಂ

ರಾಜಕಾರಣಿ

ಟೀಕೆಗೆ ಅಂಜುವವ ಎಂದೂ ರಾಜಕಾರಣಿಯಾಗಲಾರ ಜಗತ್ತನ್ನು ಪ್ರತಿಭಟಿಸಲು ನಿರ್ಲಜ್ಜತನಕ್ಕಿಂತಲೂ ಬಲವಾದ ಅಸ್ತ್ರ ಬೇರೊಂದಿಲ್ಲ.

ಂ ಂ ಂ ಂ

ಇಂಗ್ಲಿಷ್ ಭಾಷೆಯ ಪ್ರಯೋಜನ

ಇಂಗ್ಲಿಷ್ ಭಾಷೆಯನ್ನು ಕಲಿತು ಅದರ ಸಹಾಯದಿಂದ ಎಷ್ಟು ವಿಧದ ದುರ್ವ್ಯವಹಾರವೂಡಲು ಸಾಧ್ಯವೋ ಅಷ್ಟೆಲ್ಲವನ್ನು ನಾವು ಮಾಡದೆ ಬಿಡುವುದಿಲ್ಲ. ಆದರೆ ಇಂಗ್ಲಿಷಿನಿಂದ ಬಂದ ಒಳ್ಳೆಯ ಶಿಸ್ತು, ಶರ್ಕನ್ಯ ನಿಷ್ಠೆ ಪ್ರಾಮಾಣಿಕತೆ ಇವ್ಯಾವ ಒಳ್ಳೆಯ ಗುಣಗಳೂ ನಮ್ಮನ್ನು ಮರಳು ಮಾಡಿಲ್ಲ!

ಶ್ರೀ ಕೆ. ಜಿ. ಶೆಟ್ಟಿ, ಕಡಂದಲೆ

ನೇತ್ರತಜ್ಞ ಡಾ। ಎಸ್. ಬಿ. ಶೆಟ್ಟಿಯವರಲ್ಲಿ ನಿಮ್ಮ ದೃಷ್ಟಿದೋಷ ನಿವಾರಣಾರ್ಥ ಮತ್ತು ಅತ್ಯಾಧುನಿಕ ದೃಷ್ಟಿ ಸಾಧಕ
CONTACT LENSಗಳಿಗಾಗಿ ಇಂದೇ ಸಂದರ್ಶಿಸಿರಿ.

Shetty's OPTICS & CONTACT LENS CLINIC
London Qualified · Optometrists

ನೇತ್ರ ಪರೀಕ್ಷೆಗಾಗಿ, ದೃಷ್ಟಿದೋಷಗಳ ನಿವಾರಣೆಗಾಗಿ ಮತ್ತು Contact Lens ಗಳಿಗಾಗಿ ಅತ್ಯಾಧುನಿಕ ಉಪಕರಣಗಳಿಂದ ಸಜ್ಜುಗೊಳಿಸಿದ ಏಕಮೇವ ಕೇಂದ್ರ

7 ಈ ಗನ್ಸ್ ಬೊಸ್ತ್ರೀಟ್, ಬಾರ್ಬುಸ್ಟಾಗ್ ಗೇಟ್ ಪೋಸ್ಟ್ ಆಫೀಸಿನ ಎದುರು
ಮುಂಬಯಿ—1

ದೇಶ ಮುಳುಗುತ್ತಿರುವಾಗ..

(ನಾಲ್ಕನೇ ಪುಟದಿಂದ)

ರೇ ಅಶಿಸ್ತಿಗೆ ಬೀಜ ಹಾಕಿದಂತೆ, ನೋ ಲೀಪರೇ ಕಳ್ಳರಿಗೆ ಪ್ರೋತ್ಸಾಹ ನೀಡಿದಂತೆ...."

'ಹ್ಞೂಂ....ಇನ್ನೂ...."

"ನೋಡಿ, ನನ್ನ ಈ ತಲೆಬುರಡೆಗೊಂದು ಯೋಜನೆ ಹೊಳೀತಿದೆ..."

'ಆಯ್ತಮ್ಮಾ, ಏನದು? ಹೇಳುವಂತವರಾಗಲಿ."

"ಓಹೋ, ಅದಕ್ಕೇನಿದ್ದಿ? ನೋಡಿ, ನನ್ನ ಅಧ್ಯಾಪಕ ವರ್ಗಕ್ಕೆ ಸಿಗುವ ವೇತನ ಮನೆ ಬಾಡಿಗೆಗೂ ಬರಿ ಅಕ್ಕಿಗೂ ಸರಿಯಾಗಿ ಬಹುದು. ಬೇಯಿಸೋಕೆ ಕಟ್ಟಿಗೆಯನ್ನು ಅನುಮತಿ ಯೊಂದಿದ ಟ್ಯಾಕ್ಸಿನ ಹಣದಿಂದ ತಂದಾರು ಅನ್ನಿ. ಕಾಯಿಲೆ ಬಂದ್ರೆ ಸ್ವರ್ಗಕ್ಕೆ ಟಿಕೇಟು ಕೊಡೋಕೆ

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ
O. P. 13/67.

1. ಬಾಲಕೃಷ್ಣ ಭಟ್ಟ.
2. ಶೈಲಜ ಬಿ.ಎ.
3. ಸಾವಿತ್ರಿ ಯೂನೆ ಪದ್ಮಾಕ್ಷಿ ಬಿ.ಎ.
4. ವೀರೇಶ್ವರ ಪಿಲ್ಲೈಣಕರ್.
5. ನೀರಜಾಕ್ಷಿ.

6. ಸುಮತಿ, 7. ಉಪೇಂದ್ರ ಬಿಪ್ಲೈಣಕರ್, 8. ಸುಶೀಲಾ, 9. ಸುಮಿತ್ರ, 10. ಉಷಾ, 11. ಗೌರಿ, 12. ಅಂಬುಜಾಕ್ಷಿ, 13. ವ್ಯಾಸ, — ಮೈನರವರು ಇವರ ಪ್ರೇಮ ಬಂತಳು ತಾಯಿ ತಂದೆ ಅರ್ಜಿದಾರರು ಸಾವಿತ್ರಿ ಯೂನೆ ಪದ್ಮಾಕ್ಷಿ ಬಾಯಿ — ಅರ್ಜಿದಾರರು.

ಮತ್ತು

6. ಸುಂದರೇಶ ಭಟ್— ಎದ್ರಿ.

ಎದ್ರಿ— ದಿ. ಮಹಾದೇವ ಭಟ್ಟ, ಅನಂತ ಭಟ್ಟ ಮಗ ಹಾಲೀ residing at Prem —Mani —36, Janatha Society, Rajkot, Gujarath State—ಇವರಿಗೆ ಸುತ್ತು ಇತರ ಸಮಸ್ತ ಜನರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದ್ರೆ—

1೦೦೦ ಇಸವಿಯಿಂದ 13ನೇ ವರೆಗಿನ ಅರ್ಜಿದಾರರು ತಂದೆ ಮತ್ತು 8ನೇ ಆರ್ಜಿದಾರಳಿಗಂದ ಕಾರ್ಕಳ ತಾಲೂಕು ನೂಲಿ ಗ್ರಾಮದ ಮುಳ್ಳಾಯ ಎಂಬಲ್ಲಿ ಇರುತ್ತಿದ್ದು, ಹಾಲೀ ಮೃತವಾದ ಮುಳ್ಳಾಯ ಶ್ರೀಧರ ಭಟ್ಟರಿಗೆ ಬರಬೇಕಾಗಿದ್ದ O. P. ಆರ್ಡಿಯಂ A ಶೆಡ್ಯೂಲಿನಲ್ಲಿ ಕಂಡಿರುವ ಸಾಲಗಳನ್ನು ವಸೂಲು ಮಾಡುವರೆ ಅರ್ಜಿದಾರರು ಬಾಧ್ಯಸ್ಥರಾಗಿರುವುದರಿಂದ ಮತ್ತು ಸದ್ರಿ ಸಾಲಗಳನ್ನು ವಸೂಲು ಮಾಡುವರೆ ಅರ್ಜಿದಾರರು ಬರ್ಕಿ 13ನೇ ಆರ್ಜಿದಾರರ ಹೆಸರಿಗೆ ಸದ್ರಿ ಸಾಲಗಳ(ವಸೂಲು) ಕುರಿತು ಪಿಂದು ಸರ್ಟಿಫಿಕೇಟ್‌ನ್ನು ಕೊಡಿಸಬೇಕಾಗಿ ಸದ್ಗೃಹಿಸಿನ್ನತ್ತಿ ಕೇಳಿ ಅರ್ಜಿದಾರರು ದಾಖಲು ಮಾಡಿದ ಅರ್ಜಿಯು ತಾರೀಖು 28—9—67ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇತ್ಯರ್ಥಗಾಗುವುದೆ. ಆ ಕಾರಣ ಆಕ್ಷೇಪಣೆಯುಳ್ಳವರು ತಾರೀಖು 28.9.67 ರಲ್ಲಿ ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಖುದ್ದಾಗಲೀ ವಕೀಲರ ಮುಖಾಂತರವಾಗಲೀ ಹಾಜರಾಗಿ ಉದಯಿಸಿಸ ತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದೆಂದು ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಲಾಯಿತು.

D. Venkatesh Bhat

ಅರ್ಜಿದಾರರ ಪರ ವಕೀಲರ್,

ಕಾರ್ಕಳ, ತಾರೀಖು, 30.8.1967.

ಎಲ್ಲೆಲ್ಲಿ ಏನೇನು?

ಮದ್ರಾಸಿನಲ್ಲಿ ಡಾ। ತಿಪರಾಮು ಕಾರಂತರು

ಅನೇಕ ವರುಷಗಳಿಂದಲೂ ದ ಕ ನ್ನಡ ಜಿಲ್ಲೆಯಲ್ಲಿ ಪ್ರಸಿದ್ಧರಾಗಿ ನಡೆಯಿಸಿಕೊಂಡು ಬರುತ್ತಿರುವ ಯಕ್ಷಗಾನ(ಬಯಲಾಟ)ವನ್ನು ಮದ್ರಾಸ್ ಉಚ್ಚ ನ್ಯಾಯಾಲಯಗಳು ಕೆಲವು ಪ್ರಯತ್ನಿಸಿ ಅಭ್ಯಾಸ ಮಾಡಿ ಮದ್ರಾಸಿನಲ್ಲೂ ಇಂದು ಮೇಳವನ್ನು ಸ್ಥಾಪಿಸಿಕೊಂಡು ಈ ಕಲೆಯನ್ನು ಇಲ್ಲಿಯೂ ಪಸರಿಸಿಕ್ಕೆ ತರಬೇಕೆಂಬ ಉದ್ದೇಶವು ಈ ವರ್ಷಕ್ಕೆ ಕೈಗೂಡಿತು.

ಮದ್ರಾಸ್ ಕರ್ನಾಟಕ ಸಂಘದ ಆಶ್ರಯದಲ್ಲಿ ಕೆಲವಾರು ಕಲಾಕ್ಷೇತ್ರದವರ ಉತ್ಸಾಹದಿಂದ 'ದಕ್ಷಯಜ್ಞ'ವೆಂಬ ಬಯಲಾಟ ನಾಟಕದಲ್ಲಿ ತರಬೇತಿ ಹೊಂದಿ ತಾ. 2೦-8-67ರಲ್ಲಿ ಬೆಳಿಗ್ಗೆ ಅದರ ಪ್ರದರ್ಶನ

ಡಾಕ್ಟರರು— ಔಷಧಿಗಳ್ಳಿದ ಸರ್ಕಾರಿ ಆಸ್ಪತ್ರೆಗಳಿವೆಯೆನ್ನಿ. ಅಂಧವ್ಯ ನವ್ಯ ಬೇಳೆ ಬೇಯಿಸೋಕೆ ಯಾಕೆ ವಿದ್ಯಾರ್ಥಿಗಳಿಗೆ ಕರೆ ನೀಡಬಾರದು'

"ಆಯ್ಯೋ, ಶಾಂತಂ ಪಾಪಂ...ಶಾಂತಂ ಪಾಪಂ...."

"ಆಲ್ರಿ, ದಿನವಿಡಿ ಶಾಲೆಯಲ್ಲಿ ಪಾಠ ಮಾಡಿ ಸುಸ್ತು ಹೊಡೆದು ಬೇಗ ಸಾಯುವುದಕ್ಕಿಂತ ಹರಿಕ್ಷ ಮಂಡಳಿಯನ್ನು ಎಲ್ರನ್ನೂ ಪ್ಯಾಸು ಮಾಡಬೇಕೂಂತ ಸತ್ಯಾಗ್ರಹ ಮಾಡೋಕೂ, ಫೇರಾಪೋ ವಿಗೂ ಕರೆಕೊಟ್ರು, ಹಬ್ಬಿಯ ಬಂಗಾಳ ಸರಕಾರದ ಮಾದರಿಯನ್ನು ಸರಿಯಾಗಿ ಅನುಸರಿಸಿದಂತಾಗುತ್ತದೆ...."

'ಖಾದಮ್ಮ, ಬೇಲಿಯೇ ಹೊಲ ಮೇದಂತಾಗುತ್ತದೆ...."

'ಮತ್ತೆಂತವ್ರು— ಯಾರಿಗೂ ಬೇಡವಾದ ದೇಶ ನನಗೆ—ನಿನಗೆ, ನಮ್ಮಂಥವರಿಗೆ ಯಾಕೆ ಬೇಕು?"

"ಅಯ್ಯೋ, ಏನಂತೀಯ? ಹೆತ್ತವರಿಗೆ ಹೆಗ್ಗಣವೂ ಮುದ್ದು ತಾನೆ? ಫಿಜವಾದ ದೇಶಪ್ರೇಮಿಗೆ ತನ್ನ ದೇಶ ಅಷ್ಟೇ ಮುದ್ದು. ಅದು ಸೊಟ್ಟಗಿರಲಿ, ದರಿದ್ರವಿರಲಿ, ಸುಂದರವಿರಲಿ, ಸಂಪನ್ನವಿರಲಿ...."

"ಅದು ಸರಿ. ಆದ್ರೆ, ಈ ವಿಭೀಷಣರು ಇರುವ ವರೆಗೆ ದೇಶದ ಬೆಳವಣಿಗೆ ಸಾಧ್ಯವಿಲ್ಲಾನ್ನಿ..."

"ಹ್ಞೂಂ, ಅವರನ್ನು ಹೊಡೆದೋಡಿಸೋ ಹೊಣೆ ನಿನ್ನದು, ನನ್ನದು, ದೇಶಪ್ರೇಮಿಗಳದ್ದು. ನಾವು ಕೈಕಟ್ಟಿ ಕುಳಿತು ಕೊಂಡರೆ, ಅಧಮಾ ಬೆಂಕಿಯೊಡನೆ ಸರಸವಾಡುತ್ತ ಹೋದರೆ...."

'ಅದೇ ಏನೋ ಅನ್ತಾರಲ್ಲಾ...ರೋಮ್ ಸುಡಿತ್ತಿರುವಾಗ ದೊರೆ ಪಿಯಾನೋ ಬಾರಿಸುತ್ತಿದ್ದಾಂತೆ—"

'ದೇಶ ಮುಳುಗುತ್ತಿರುವಾಗ ಬಂಗಾಳದ ಹುಲಿ ಕುಣಿಯುತ್ತಿರುವಂತೆ ಅನ್ನಿಬಹುದಲ್ಲಾ...."

'ಏನೇ ಅನ್ನು ಅನ್ನದೇ ಇರು....ಆದೆಲ್ಲಾ ಎಣಿಸೋಕೆ ಹೋದ್ರೆ ನಿದ್ದೇನೇ ಇಲ್ಲ...."

"ಅಯ್ಯಾ, ಪಾಪಪೇ....ಥೂರೀ ನಿದ್ದೆ ಆಮಿಷ್ಟಾ."

'ಹ್ಞೂಂ...."

'ತುಸು ಇತ್ತ ನೋಡೀಂದ್ರೆ..."

"ಹ್ಞೂಂ..."

'ಹೇಗೆ?"

—ಗೋರಾ.

ಸಮಾರಂಭಕ್ಕೆ ಡಾ। ಯು. ರಾಮರಾವ್ ಕಲಾವಂತಿಕೆಯಲ್ಲಿ ಡಾ। ಕೆ. ತಿಪರಾಮು ಕಾರಂತರನ್ನು ಆಮಂತ್ರಿಸಿದ್ದರು.

ಡಾ। ತಿಪರಾಮು ಕಾರಂತರು ತಾ. 2೦-8-67ರಲ್ಲು ಸೋವಾರ್ಕ್ಕೆ ಡಾ। ಯು. ರಾಮರಾವ್ ಕಲಾಮಂಟಪದಲ್ಲಿ ನಡೆದ ಸಾಹಸ್ಯ ಕೂಟದ ವಾರ್ಷಿಕೋತ್ಸವಕ್ಕೆ ಭಾಗವಹಿಸಿ, ಮುಖ್ಯರಾಗಿ ಭಾಷಣವನ್ನು ಮಾಡಿ, ಯೋಗ್ಯ ಸಾಲಿಗೆಗಳನ್ನಿತ್ತರು. ಮದ್ರಾಸ್‌ನಲ್ಲಿ ಮೈಸೂರ್ ಇಂಜನೀಯರರ ಸಂಘದ ನಿತ್ಯಾಧ್ಯಕ್ಷ ಕಾರಂತರನ್ನು ಆ ನಂತರ ಸತ್ಕರಿಸಿದ್ದರು.

ಸಾಯಂಕಾಲ ಡಾ। ಯು ರಾಮರಾವ್ ಕಲಾಮಂಟಪದಲ್ಲಿ ವಿಶೇಷ ರಾಷ್ಟ್ರಕವಿ ಗೋವಿಂದ ಪೈ ಮಂಜೇಶ್ವರವರು ಭಾವಚಿತ್ರ ಅನಾವರಣ ಮಾಡಿದರು. ದಕ್ಷಯಜ್ಞ ನಾಟಕವನ್ನು ಉದ್ಘಾಟಿಸಿ ಯುಕ್ತ ಸಲಹೆಗಳನ್ನಿತ್ತರು. ನಾಟಕವು ಮೊದಲೇ ದಾದರೂ ಜನರಿಂದ ತುಂಬಾ ಆಕರ್ಷಿಸಲ್ಪಟ್ಟಿತ್ತು.

"ಶ್ರೀ ಕೃಷ್ಣಾಷ್ಟಮಿ"

ದೇಲಂಪಾಡಿ ಬನಾ। ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಮಂಡಳಿಯಲ್ಲಿ ತಾ. 28—8—67ರಂದು 'ಶ್ರೀ ಕೃಷ್ಣ ವಿಜಯ' ಎಂಬ ಕಥಾ ಭಾಗದ ಯಕ್ಷಗಾನ ಪ್ರಾರಂಭವು ಬನಾಂ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ವತಿಯಿಂದ "ಶ್ರೀ ಕೃಷ್ಣಾ ಜನ್ಮಾಷ್ಟಮಿ"ಯ ಸಲುವಾಗಿ ನಡೆಸಲ್ಪಟ್ಟಿತು.

ಪ್ರಥಮದಲ್ಲಿ ಶ್ರೀ ನಾರಾಯಣ ನಾಯಕ್ ಮಾಸ್ತರರು ಸ್ವಾಗತಿಸಿ — ಮುಖ್ಯ ಅತಿಥಿಗಳ ಪರಿಚಯ ನೀಡಿದರು. ಶ್ರೀ ಕೃಷ್ಣ ಪೂಜೆ ಪ್ರಸಾದ ಹಂಚೋಣದೊಂದಿಗೆ ಕಾರ್ಯ ಕ್ರಮ ಮುಕ್ತಾಯ ಗೊಳ್ಳುತ್ತಿರಲು—ಸಮಾರಂಭದ ವ್ಯವಸ್ಥಾಪಕ ಶ್ರೀ ಳುತ್ತಿಮುಂಡ ಬಾಲಕೃಷ್ಣ ಗೌಡರು ಧನ್ಯವಾದ ವಿತ್ತರು.

ಜಿಲ್ಲೆಯಲ್ಲಿ ಸ್ವೈನ್ಯಕ್ಕೆ ಭರ್ತಿ

ಭಾರತೀಯ ಸೈನ್ಯಕ್ಕೆ ಮತ್ತು ನಾಕಾವಲಿಗೆ ಅಭ್ಯರ್ಥಿಗಳನ್ನು ಜಿಲ್ಲೆಯ ಈ ಕೆಳಗಿನ ಸ್ಥಳಗಳಲ್ಲಿ ಅಯ್ಕೆ ಮಾಡಲಾಗುವುದು. ಸೇರಲಿಚ್ಛಿಸುವ ಅಭ್ಯರ್ಥಿಗಳು ತನ್ನ ಪಂಚೆಯ ಮತ್ತು ಗುಣ ನಡತೆಯ ಸಲು ಪತ್ರಗಳನ್ನು ತಮ್ಮೊಂದಿಗೆ ತರತಕ್ಕದ್ದು.

ತಾ. 10.9.67— ಕುಂದಾಪುರ
ತಾ. 11.9.67 — ಉಡುಪಿ.
ತಾ. 12.9.67— ಸುಳ್ಯ.
ತಾ. 13ನೆಯದು 14.9.67—ಪುತ್ತೂರು.

ಅಭ್ಯರ್ಥಿಗಳನ್ನು ಅಯಾ ಸ್ಥಳದ ಸ್ವಯಂ ಸೇವಕರಿಂದ ಆಯ್ಕೆ ಮಾಡಲಾಗುವುದು.

ಹೆಚ್ಚಿನ ವಿವರಗಳನ್ನು ಮಂಗಳೂರು ಗಣಕ ಯೆಸ್ಕೂಲು ರಸ್ತೆಯಲ್ಲಿರುವ ಜಿಲ್ಲಾ ಪ್ರಾದೇಶಿಕಾರಿಗಳ ಕಚೇರಿಯಿಂದ ಪಡೆಯಬಹುದು.

ಔಷಧಿ ತಯಾರಿಕೆಯ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಲು ಕರೆ.

ಮಣಿಪಾಲ, ಆ. 31—ಇಲ್ಲಿಯ ಎಂಜಿನೆಯರಿಂಗ್ ಜನರಲ್ ಎಜುಕೇಶನಲ್ ಅಥಾರಿಟಿಯ ಅಧ್ಯಕ್ಷರೂ ಮಣಿಪಾಲ್ ಡಾ। ಟಿ. ಎಂ. ಎ. ಪೈಯವರು ಕಳೆದ ಶನಿವಾರ ಸ್ಥಳೀಯ ವಿದ್ಯಾರ್ಥಿಗಳಿಗೆ ನಡೆಸಿದ ಪತ್ರಿಕಾ ಸಂದರ್ಶನದಲ್ಲಿ ಔಷಧಿ ತಯಾರಿಕೆಯ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಕರೆ ಯಿತ್ತರು.

ಕಸ್ತೂರ್ ಬಾ ಮೆಡಿಕಲ್ ಕಾಲೇಜಿನ ಡೀನ್ ಡಾ। ಎ. ಕೃಷ್ಣಯ್ಯರವರು ಸ್ವಾಗತಿಸಿ ಪರಿಚಯಿಸಿದರು. ಸರ್ಜರಿಯ ಅಧ್ಯಕ್ಷ ಪ್ರೊ। ಕೆ. ಸಿ. ಚಟರ್ಜಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರೊ। ಎನ್. ಸುಬ್ರಹ್ಮಣ್ಯಯವರು ಧನ್ಯವಾದವಿತ್ತರು. ಪ್ರಾಧ್ಯಾಪಕಿಯವರಾದ ಶ್ರೀ ಸಿ. ವರ್ಮ ಮೊಸಸ್ಸರವರು ಸಂದರ್ಶನಾರ್ಥವೆ ಮಾಡಿದರು.

ಎದೆಯೋಗ ಚಿಕಿತ್ಸಾ ಸೌಲಭ್ಯ

ಮಣಿಪಾಲ, ಜು. 31—ಇಲ್ಲಿಯ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನ ಮೆಡಿಸಿನ್ ವಿಭಾಗದ ಪ್ರೊಫೆಸರ್ ಡಾ। ಬಿ ಎಚ್. ತಿಪರಾಮಯ್ಯ ಇವರು ಎದೆಯ ರಸ್ತ್ರ ಚಿಕಿತ್ಸೆಯ ಅಸೋಸಿಯೇಟ್ ಪ್ರೊಫೆಸರ್ ಡಾ।| ಎಸ್. ಆರ್. ಉಲ್ಲಾಳ್‌ರವರು ವೈದ್ಯಕೀಯ ಸಮಾಜ ಕಾರ್ಯಕರ್ತ ಶ್ರೀ ಹೆ. ವಿ. ಜಾರ್ಜ್‌ರವರೊಡಗೂಡಿ ಕಳೆದ ಶುಕ್ರವಾರ ಕಸ್ತೂರ್ ಬಾ ಜನರಲ್ ಆಸ್ಪತ್ರೆಯಲ್ಲಿ ಮೆಡಿಸಿನ್ ಸಭಾಗದ ರಿಡರ್ ಡಾ। ಕೆ ಶಂಕರ ಭಟ್ಟರವರು ಎದೆ ರೋಗಗಳ ಚಿಕಿತ್ಸಾಲಯವನ್ನು ಉದ್ಘಾಟಿಸಿದ ದಿನವೇ ೧೬ ರೋಗಿಗಳನ್ನು ಪರೀಕ್ಷಿಸಿ ಸಲಹೆಯಿತ್ತರು. ಈ ಚಿಕಿತ್ಸಾಲಯ ಪ್ರತಿ ಶುಕ್ರವಾರ ಅಪರಾಹ್ನ ೨ ಘಂಟೆಯಿಂದ ೪ಗಂಟೆಯವರೆಗೆ ತೆರೆದಿರುತ್ತದೆ.

ಸಿವಿಲ್ ರೈಫಲ್ ಕ್ಲಬ್

ಉಡುಪಿಯ ಸಿವಿಲ್ ಡಿಫೆನ್ಸ್ ಕಮಿಟಿಯ ಸಭೆಯು ಸಮಿತಿಯ ಅಧ್ಯಕ್ಷರೂ ಉಡುಪಿ ಎ. ಎಸ್. ಪಿ. ಶ್ರೀ ಹೆ. ಕೆ. ರಾಮಯ್ಯನವರ ಅಧ್ಯಕ್ಷತೆಯಲ್ಲಿ ತಾಲೂಕು ಆಫೀಸಿನಲ್ಲಿ ಜರಗಿತು. ಕಾರ್ಯದರ್ಶಿ ಎಡ್ವೋಕೇಟ್ ಶ್ರೀ ರಾಮಚಂದ್ರರಾವ್ ಮಟ್ಟಪಯವರು ಕಾರ್ಯ ಕ್ರಮಗಳ ಕುರಿತು ವಿವರಿಸಿದರು.

ಉಡುಪಿ ಮತ್ತು ಮಣಿಪಾಲದ ನಾಗರಿಕರಿಗೆ ನಾಗರಿಕ ರೈಫಲ್ ತರಬೇತು ಕೊಡುವ ಬಗ್ಗೆ ವ್ಯವಸ್ಥೆ ಮಾಡಲು ನಿರ್ಧರಿಸಲಾಯಿತು.

ನಾಗರಿಕರು ಈ ತರಬೇತಿಯ ಸದುಪಯೋಗವನ್ನು ಪಡಕೊಳ್ಳುವಂತೆಯೇ ಆರ್ಜಿ ಫಾರ್ಮ್ ಮತ್ತು ವೆಚ್ಚಿನ ಸೂಚಿಪತ್ರವನ್ನು ಉಡುಪಿ ರೂರಲ್ ಮತ್ತು ಬ್ರೌನ್ ಬೋಲೀಸು ಸ್ಟೇಷನ್‌ನಿಂದ ಪಡಕೊಳ್ಳುವಂತೆಯೂ ಕಾರ್ಯದರ್ಶಿಗಳು ಈ ಮೂಲಕ ತಿಳಿಸುತ್ತಾರೆ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ
R. E. P. 245/1967
O. S. 560/1966.

M. ಗೋಪಾಲ ರಾವ್— ಅರ್ಜಿದಾರ.
ಕೆ. ಪಂಚಲ ರಾವ್, ಕೊಂಡೆ ಬೆಟ್ಟು ನಾರ್ಣಪ್ಪನವರ ಮಗ, ಕಾರ್ಕಳ ತಾಲ್ಲೂ ಬಡಗ ಮಿಜಾರು ಗ್ರಾಮದವರಿಗೆ ಎದ್ರಿ.

ಸದ್ರಿ ಎದ್ರಿ ಅದ ನಿಮಗೆ ಈ ಮೂಲಕ ತಿಳಿಸುವದೇನೆಂದ್ರೆ—

ನಿಮ್ಮ ಹಕ್ಕಿನ ಸ್ವಿರಾಸ್ತಿಗಳನ್ನು ಹಿಡ್ತಿಯೋಲಗೆ ಅರ್ಜಿದಾರನು ದಾಖಲು ಮಾಡಿದ ಸದ್ರಿ ಅಮ್ಲುಜ್ಞಾರಿಂಗ್ಲಿ ಜಪ್ತಿ ಹುಂಡಿನಿಗೆ ಟ್ಯಾಗ್ ಬಗ್ಗೆ ತಾರೀಕು. 18.9.1967 ಕ್ಕೆ ಇಟ್ಟಿದ್ದು, ಆ ಕಾರಣ ನಿಮಗೆ ಆಕ್ಷೇಪ ಇದ್ದಲ್ಲಿ ಸದ್ರಿ ದಿನ ಜೆರಿಗೆ 10ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಆ ದಾಸ್ತಾವೆ ಮಾಳ್ಪ ನೋಡ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜ್ರಿಯಲ್ಲಿ ಅಮ್ಲುಜ್ಞಾರಿಂಗ್ ಕ್ರಮ ಜರಗಿಸುವುದು ಎಂತ ಕೋರ್ಟಿನ ಹುಕುಂ ಪ್ರಕಾರ ತಿಳಿಸುವದೆ.

K. S. Kamath
Advocate for Petitioner
Karkala, 31—8—67.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
S. C. 110/1967.

ಶ್ರೀ. ಮೊಂಟಿ ಪದ್ಮ ಪಾಡಿ, ಕುಮ್ಟ
ಅಜ್ಜಿಸ್ಟ್ ಪೆಟ್ಟ್ ಆರ್ಜಿದಾರ್.
ಇವರೊಳಗೆ

To

೧. ಶ್ರೀಮತಿ ಲಾಲಿ ಪದ್ಮ, ಲೇಟ್ ಶೆಟ್ಟಿಗೇರಿ ಮಗಳು—ತಂದೆ ನಿವಾಸಿಯು ಗುಜರಾತ ಬೆಳ್ಳೆ.

೨. ಪುಷ್ಪಲತಾ ಶೆಟ್ಟಿ, ಅಮ್ಮು ಶೆಟ್ಟಿಗೇರಿ ಮಗಳು—ತಂದೆ ನಿವಾಸಿಯು ಗುಜರಾತ ಬೆಳ್ಳೆ.

ನಾನಿಮ್ಮ ಸ್ಥಿರಾಸ್ತಿಯ ಮೇಲೆ ಅವರಿಂದ ಕಳ್ಪೆ ಕೈಪ್ಪಿನ ಸಂಬಂಧ ಎರೆಗೆ ಜಾರಿ ಮಾಡಿಂಗೇಯಿ ನೀವು ಹಾಜ್ರಿ ಕೊಡಾ ರೂಪ್ಯಿ 286/65ರ ಬಗ್ಗೆ ನಂಬಿದ ಮೇಲಿನ ವ್ಯಾಜ್ಯ ಬಲ್ಲಿ ನಿಮ್ಮ ಮೇಲಾದಂಡೆ ಇದ್ದರೆ ತಾ. 15-9-67ನೇ ದಿನ್ನ ಪಗಲು ಗಂಟೆ 11ಕ್ಕೆ ಈ ಕೋರ್ಟ ನಂಬಿದ ಹಾಜ್ರಾಗಿ ಜ್ಞಾಪೀರಿಂ ಮಾಡಿಕ್ಕಳ್ಳಿವ. ಪಕ್ಷದ್ರೆ ನಿಮ್ಮ ಗೈರು ಹಾಜ್ರಿಯಲ್ಲಿ ಸದ್ರಿ ವ್ಯಾಜ್ಯ ತೀರ್ಮಾನಗೊಳ್ಳುವುದು.

B. S. Hegde,
Vakil for Plaintiff.
Udipi, Date 31—8—67.

ದಾಂಪತ್ಯ ಧರ್ಮವೇ ತಾರಕೋಪಾಯ

(ಎಡನೇ ಪುಟದಿಂದ)

ನಿಷ್ಪೃಹತ್ವ ಇಳಿಯು ಹೂಡದು. ಹೀಗೆ ಸ್ವಯಶಕ್ತಿಯದು ದಾಂಪತ್ಯ ಧರ್ಮ ವಿರುದ್ಧವಾಗಿರುತ್ತದೆ. ಪ್ರೇಮ ಧರ್ಮ ವಿರುದ್ಧವಾಗಿರುತ್ತದೆ. ಕೃತಘ್ನತೆ—ಶರೀರ ಸಂಯೋಗ ವಿಯೋಗಗಳು — ಬಾಹ್ಯ ಸುಖ ದುಃಖಗಳು ಕತಿ ಪತಿಯರ ಆತ್ಮ ಕ್ಷಣಯವನ್ನು ಭಂಗ ಮಾಡ ಬಾರದು. ಶಕ್ತಿ ವಿರಿ ಹದ್ದೋಗ ನಿವೃತ್ತಿಗೆ ಸಮುಚಿತ ವೀತಿಯಿದ ಪರಿಶ್ರಮಿಸುವದು ಗಂಡ ಹೆಂಡಿರ ಪರಸ್ಪರ ಧರ್ಮ. ಆರಾಮವಾಗಿ ಒಳಿತುಕೊಂಡು ತಿಂಗಳ ಸಂಪಾದನೆಯನ್ನು ಲೆಪ್ಪ ಹಾಕಿಕೊಳ್ಳುವದರಲ್ಲಿ ಪ್ರಸಿದ್ಧಿಯನ್ನು ಪಡಿಸುವಂತೆಯೇ ಆತ್ಮ ಜ್ಞಾನ ಸಂಪಾದನೆಮನ್ನ ಲೆಪ್ಪು ಹಾಂಲು ಕಲಿತು— ಶಿರ ಹಶ ಚಿಸ್ಯೆಗಳಿಂದ ತಮ್ಮ ಅಮೂಲ್ಯವಾದ ಜೀವಿತವನ್ನು ವ್ಯರ್ಥವೂ ದೀರ್ಘಳಿದ ಸತಿ ಪತಿಯಂದೇ ಆದೃಶ್ಯವಂತರು.

ಕುಟುಂಬ ನಿಯಂತ್ರಣವನ್ನು ಕುರಿತು — ಗರ್ಭಾನ ನಿರೋಧವನ್ನು ಕುರಿತು ಎರಡು ಮಾತು— ನುದ್ದಿನಿಂದ, ಯಿಂಜಕ್ಷನ್ ಗಳಿಂದ, ಶಸ್ತ್ರ ಚಿಕಿತ್ಸೆಗಳಿಂದ— ಕೃತಿಮ ಸಾಧನಗಳಿಂದ ಕುಟುಂಬ ನಿಯಂತ್ರಣವನ್ನು ಸಾಧಿಸಬೇಕೆನ್ನುವದು ಭಾರತ ಜಾಲಗ್ನ ಅತೀ ನಿಕೃಷ್ಟವಾದ ವಿಷಯ. ಅಧಾರ್ಮಿಕವಾದ ವಿಷಯ. ದಾಂಪತ್ಯ ಧರ್ಮವನ್ನು ತಿಳಿದುಕೊಂಡ ದನ ಈ ಕೃತ್ರಿಮ ಕುಟುಂಬ ನಿಯಂತ್ರಣ ವಿಧಾನ ದಿಂದ ಬಲು ದೂರ ಯಿರ್ಲಿ. ಕುಟುಂಬ ನಿಯಂತ್ರಣ ವಿಧಾನವು ಮಾನವ ಜಾತಿಯನ್ನು ಹೀನಾವಸ್ಥೆಗೆ ಅಧಃಪತನಕ್ಕೆ ತಳ್ಳಿಸುವದು. ಈ ನಿಕೃಷ್ಟ ವಿಧಾನವನ್ನು ಬಿಟ್ಟು ಬಿಟ್ಟು ಕ್ರಮ ವಿಧಾನವನ್ನು ಅಂಗೀಕರಿಸಿದಯಿಂದ ಕೂಡಿದ ವಿಧಾನಗಳನ್ನು ಭಾರತ ಜಾತಿ ಅವಲಂಬಿಸಿರುವಿಂದಲೆ, ಇಂದ್ರಿಯ ನಿಜೇತರಾದ ಮಹಾ ಮಹರ್ಷಿಗಳ ಸಂತತಿಗೆ ಸೇರಿದ ಭಾರತೀಯರು ಅವಲಂಬಿಸಬೇಕಾದ ಪದ್ಧತಿ ಬೆಳ್ಳಲಿಲ್ಲ.

ಸ್ವಾಭಾವಿಕವಾದ ಸಹಜವಾದ ಸಂತಾನ ದಿಂದ ಕುಟುಂಬ ನಿಯಂತ್ರಣ ವಿಧಾನವು ಅನೈತಿಕ ವಾಂಛೆಗಳನ್ನು ನಿಗ್ರಹಿಸಿ, ಇಂದ್ರಿಯನಿಗ್ರಹದಿಂದಲೂ ಈಶ್ವರಾರ್ಪಣ ಬುದ್ಧಿಯಿಂದ ಮನಸ್ಸನ್ನು ಶುದ್ಧಗೊಳಿಸಿ ಅಂತರಾತ್ಮ ಜ್ಞಾನ ಪಡೆಯಲು ಸಾಧ್ಯವಿಲ್ಲ. ಆತ್ಮ ಜ್ಞಾನ ಸಂಪಾದನೆಯಿಂದ ಮಾತ್ರವೇ ಜೀವನ್ಮುಕ್ತಿ ಸಾಧ್ಯ. ಈ ಉದ್ದೇಶಕ್ಕಾಗಿ ಸಂತಾನ ನಿರೋಧಪದ್ಧತಿಗಳನ್ನು ವ್ಯಾಪಿಸಲಿಕ್ಕೆ ನಾಚಿಕೆ ಪಡುವದಿಲ್ಲವಲ್ಲವೇ!

ಈ ಕೃತ್ರಿ ವಿಧಾನಕ್ಕೆ ಕಾರಿಯಾದ ಕೋಟ್ಯಾನು ಕೋಟಿ ಹಣವನ್ನು ವ್ಯಯ ಮಾಡ ವದಕ್ಕೆ ಬದಲು ಆ ದನವನ್ನು ಒಳ್ಳೆಯ ಮಾರ್ಗದಿಂದ ಉಪಯೋಗಿಸಿ ಸಹಜ ಸಂತಾನ ವಿಧಾನದಿಂದ ಈ ಕುಟುಂಬ ನಿಯಂತ್ರಣವನ್ನು ಸಾಧಿಸಬಹುದು.

(1) ಆಶ್ಲೀಲವಾದ ನಾಚ್ಯಾಟವನ್ನು ನಿರ್ಮೂಲಿಸುವದು. (2) ಪಶು ಪ್ರವೃತ್ತಿಯನ್ನು, ಕಾಮೋದ್ರೇಕವನ್ನು ರೇಗಿಸುವಂಥಹ ಅಶ್ಲೀಲ ಸಿನಿಮಾ ನಾಟಕಾದಿಗಳನ್ನು ನಿರ್ದಾಕ್ಷಿಣ್ಯವಾಗಿ ಬಹಿಷ್ಕರಿಸುವದು. (3) ಪಾಠ ಶಾಲೆಯಲ್ಲಿರುವ ವಿದ್ಯಾ ವಿಧಾನವನ್ನು ಬದಲಾಯಿಸುವದು. (4) ಆನಾರೋಗ್ಯಕರವಾದ ಆಹಾರ ವಿಹಾರಗಳನ್ನು ತ್ಯಜಿಸುವದು. (5) ಅಧಾರ್ಮಿಕವಾದ ಸನ್ನಿವೇಶ ಸನ್ನಿವೇಶಗಳನ್ನು ನಿರ್ಮೂಲಿಸುವದು ಇವಕ್ಕೆ ಬದಲು (1) ಆತ್ಯುತ್ತೇಜಕರವಾದ ವಾಙ್ಮಯವನ್ನು ಪ್ರಸಾರ ಮಾಡುವದು. (2) ನಾಟಕ ಸಿನಿಮಾಗಳ ದ್ವಾರ, ಕಲೆಗಳ ಮೂಲಕ ವೀಕ್ಷಕರಿಗೆ ದೈವಭಕ್ತಿ, ಧಾರ್ಮಿಕ ನಿರತಿಯನ್ನುಂಟುಮಾಡುವದು. (3) ಆತ್ಮ ಸಂಸ್ಕಾರವನ್ನು ಹುಟ್ಟಿಸುವಂಥಹ ಪ್ರಜ್ಞಾಲಿಸುವಂಥಹ ವಿದ್ಯಾವಿಧಾನವನ್ನು ವಿಸ್ತಾರ ಮಾಡುವದು. (4) ಆರೋಗ್ಯಕರವಾದ ಆಹಾರ ವಿಹಾರಗಳಿಗೆ ಸ್ವಾತಂತ್ರವನ್ನು ಕೊಡುವದು. (5) ಧಾರ್ಮಿಕ ಸನ್ನಿವೇಶಗಳಿಗೆ ಸತ್ಕಾರ್ಯಗಳಿಗೆ ಅವಕಾಶವನ್ನುಂಟುಮಾಡುವದು. ಇದರಿಂದಾಗಿ ವಿದ್ಯು, ಇಂಜೆಕ್ಷನ್, ಶಸ್ತ್ರ ಚಿಕಿತ್ಸೆ, ಕೃತ್ರಿಮ ಸಾಧನಗಳ ಅವಶ್ಯಕತೆ ಇಲ್ಲದೇ ಧನ, ಮಾನ, ಪ್ರಾಣಾದಿಗಳಿಗೆ ಹಾನಿಯಿಲ್ಲದೇ ಕುಟುಂಬ ನಿಯಂತ್ರಣವನ್ನು ಶತ್ಯಧ್ಭುತವಾಗಿ ಸಾಧಿಸಬಹುದು.

ಕುಟುಂಬ ನಿಯಂತ್ರಣವನ್ನು ಪಡಾತ್ಯೇ ಅಲ್ಲ ಮಾನವ ಜಾತಿಯನ್ನೇ ಪೀಡಿಸುತ್ತಿರುವ ಎಲ್ಲಾ ಸಮಸ್ಯೆಗಳನ್ನೂ ಪರಿಷ್ಕಾರ ಮಾಡಬಹುದು. ಈ ಮಾರ್ಗ ಭಾರತೀಯೋದ್ಧರಣಕ್ಕೆ ಯೋಗ್ಯವಾದುದು. ಬಹುವಿಧ ರೋಗಗಳಿಗೆ ಒಂದೇ ಮದ್ದು ಅದೇ ಬ್ರಹ್ಮಚರ್ಯ! ಬ್ರಹ್ಮಚರ್ಯವೆಂದರೆ ಒಂದು ಸ್ತ್ರೀ ಪುರುಷರ ಸಂಬಂಧವಾದ ತೃಷ್ಣೆಯನ್ನು ನಿಗ್ರಹಿಸುವದೆಂದು ಮಾತ್ರವಲ್ಲ ಮನಸ್ಸನ್ನು ಬ್ರಹ್ಮನಲ್ಲಿಗೆ ತಿರುಗಿಸುವದೇ ಬ್ರಹ್ಮಚರ್ಯವಾಗಿರುತ್ತದೆ. ಕಾಮೋದ್ರೇಕ ನಿಗ್ರಹ ಆದರೊಳಗೊಂದು ಅಂಶ ನೂತ್ಯನೇ ಆದ್ದರಿಂದ ಮಾನವರು ತಮ್ಮನ್ನು ಅಪಮಾರ್ಗವನ್ನು ಹಿಡಿಸಿರುವಂಥಹ ಸಮಸ್ತ ಪಾಶವಿಕ ಶಕ್ತಿಗಳನ್ನು ನಿಗ್ರಹಿಸಿ ಸಹಜ ಸ್ವಾತಂತ್ರ್ಯಶ್ರೀಯನ್ನು ಅನುಭವಿಸಲು ಏಕೈಕ ಮಾರ್ಗ—ಬ್ರಹ್ಮ ಜ್ಞಾನ ಬ್ರಹ್ಮ ದೃಷ್ಟಿ—ಬ್ರಹ್ಮಚರ್ಯ ಸತಿ ಪತಿಯರ ಮನಸ್ಸು ಬ್ರಹ್ಮ ಜ್ಞಾನ ನಿಷ್ಠಿತವಾದ ದಿನವೇ ಬ್ರಹ್ಮಚರ್ಯ ನಿಷ್ಠಿತವಾದ ದಿನವೇ ಸತಿಪತಿಯರು ಸತ್ಯ ಶಾಂತಿಯನ್ನು ಹೊಂದುತ್ತಾರೆ. ಲೋಕಕ್ಕೆ ಶಕ್ತಿಮಾನವಾದ ಸೇವೆಯನ್ನು ಮಾಡಲು ಅರ್ಹರಾಗುತ್ತಾರೆ.

ಗೃಹಸ್ಥರಾದರೂ, ಬೇರೆ ಯಾರೇ ಆದರೂ ಬ್ರಹ್ಮ ನಿಷ್ಠರಾದ ದಿನವೇ ಸತ್ಕಾರ್ಯ ನಿರತರಾದ ದಿನವೇ ಪಾಶವಿಕ ಪ್ರವೃತ್ತಿಯನ್ನು ಜಯಿಸಬಲ್ಲರು. ಸದ್ಭಾವನೆ, ಸತ್ಕಾರ್ಯ, ಸದ್ಗುಣ, ಸದ್ಬುದ್ಧಿ ಇಲ್ಲದವರು ನಾಶವಾಗುತ್ತಾರೆ. ಸದ್ಭಾವನೆ ಸದಾಚಾರ ಮಾನವ ಜಾತಿಗೆ ಆತ್ಯವಶ್ಯ!

ಶ್ರೀ ದಯಾನಂದ ಸರಸ್ವತೀಯವರು ನವ ಯೌವನದಲ್ಲಿರುವಾಗ ಒಬ್ಬ ವೃದ್ಧ ಗೃಹಸ್ಥರು "ಸ್ವಾಮೀಜೀ! ನೀವು ನವ ಯೌವನದಲ್ಲಿರುವಿರಿ. ಸೌಂದರ್ಯ ನಿಧಿಯಾಗಿರುವಿರಿ, ದೃಢ ಶರೀರಿಗಳಾಗಿರುವಿರಿ —ಮುದುಕನಾದರೂ ನಮಗೆ ಕಾಮ ಪೀಡೆ ತಲೆಯಲಿಲ್ಲ ಹಾಗಿರುವಾಗ ನೀವು ಆ ಕಾಮವನ್ನು ಹೇಗೆ ನಿಗ್ರಹಿಸಿರಿ, ಶಕ್ತರಾಗಿರುವಿರಿ?" ಎಂದು ಕೇಳಿದನಂತೆ. ಆಗ ಸ್ವಾಮೀಜಿ "ನನಗೆ ನಿರಂತರ ವೇದ ಪಠನ, ವೇದ ಪ್ರಚಾರ ಇವಕ್ಕೆ ಸಮಯವು ಸಾಕಾಗುವದಿಲ್ಲ. ಇನ್ನು ವಿಷಯವನ್ನು ಕುರಿತು ಯೋಚಿಸುವದಕ್ಕಾದರೂ ಅವಕಾಶ ಪಲ್ಲಿದೆ?" ಎಂದರಂತೆ. ಉತ್ಕಟ ಭಾವಗಳಿಂದ—ಉತ್ಕಟ ಕೆಲಸಗಳಿಂದ ಮುಂದಕ್ಕೆ ಹೋಗುತ್ತಿರುವ ಮಾನವ ಜಾತಿಯನ್ನು ಯಾವ ದುರ್ವಿಚಾರಗಳೂ ಎದುರಿಸಲಾರವು.

ಸಮಸ್ತ ಭಾರತೀಯ ಜಾತಿಯೇ ಸತ್ಕಾರ್ಯ ಸದ್ಭಾವನೆ, ಸತ್ಸಂಗಗಳಿಂದ ಉದ್ಧಾರವಿಸಲಿ! ಅಜ್ಞಾನಾಂಧಕಾರವು ತೊಲಗಿ ಬ್ರಹ್ಮ ಜ್ಞಾನಿಗಳಾಗಿ ಮೆರೆಯಲಿ!



ನೇತ್ರತಜ್ಞ ಡಾ। ಎನ್. ಬಿ. ಶೆಟ್ಟಿಯವರಲ್ಲಿ ನಿಮ್ಮ ದೃಷ್ಟಿದೋಷ ನಿವಾರಣಾರ್ಥ ಮತ್ತು ಅತ್ಯಾಧುನಿಕ ದೃಷ್ಟಿ ಸಾಧಕ CONTACT LENSಗಳಿಗಾಗಿ ಇಂದೇ ಸಂಪರ್ಕಿಸಿರಿ.



Shetty's OPTICS & CONTACT LENS CLINIC

London Qualified • Optometrists

ನೇತ್ರ ಪರೀಕ್ಷೆಗಾಗಿ, ದೃಷ್ಟಿದೋಷಗಳ ನಿವಾರಣೆಗಾಗಿ ಸುಳ್ಳು Contact Lens ಗಳಿಗಾಗಿ ಅತ್ಯಾಧುನಿಕ ಉಪಕರಣಗಳಿಂದ ಸಜ್ಜುಗೊಳಿಸಿದ ಏಕಮೇವ ಕೇಂದ್ರ

7 ಈ ಗನ್ ಬೊ ಸ್ಟ್ರೀಟ್, ಬಾರ್ಬುಯಾರ್ ಗೇಟ್ ಪೋಸ್ಟ್ ಆಫೀಸಿನ ಎದುರು

ಮುಂಬಯಿ—1

ಹೀಗಿದೆ ಲೋಕದ ನೀತಿ!

ಅನಾವರಣ

ತಾನು ಮಾಡಿದ ಕುಂಬಳ ಕಾಯಿ ಗಾತ್ರದ ಅಪಾಂಥಕ್ಕೆ ಮುಸುಕೆಳೆದು, ಇನ್ನೊಬ್ಬರ ಸಾಸಿವೆ ಕಾಳು ಗಾತ್ರದ ಹಪ್ಪುಗಳ ಅನಾವರಣ ಸಮಾರಂಭ ನೆರವೇರಿಸುವವರೇ ಹೆಚ್ಚುಮಂದಿ!

ಂ ಂ ಂ ಂ

ಯೋಗ್ಯತೆ

ಯೋಗ್ಯತಾವಂತನು ಹಣವಂತನಲ್ಲವಾದರೂ ಮನುಷ್ಯನಾಗಿ ಬಾಳುತ್ತಾನೆ. ಹಣವಂತನು ಸಮಾಜದಲ್ಲಿ ಹಿರಿಯನಾಗಿ ಮೆರೆದರೂ ಮನುಷ್ಯನಾಗಿ ಬಾಳುವದಿಲ್ಲ!

ಂ ಂ ಂ ಂ

ನೋಟು ಮತ್ತು ಕೈತಿ

ಮಹಾತ್ಮಾ ಗಾಂಧೀಜಿಯವರು ಸಾರಿದ ತತ್ವ ನೀತಿಯ ಎಂಜಲನ್ನೇ ಮೆಲುಕಾಡಿ ಸುಖವಾಗಿ ಬದುಕಿದವರೆಷ್ಟೋ ಮಂದಿ ಇದ್ದಾರೆ ನಮ್ಮಲ್ಲಿ. ಆದರೆ ಅವರು ನಡೆದ ದಾರಿಯಲ್ಲೇ ನಡೆದು ಬದುಕಿದವರಿಲ್ಲ!

ಂ ಂ ಂ ಂ

ಕಷ್ಟಕ್ಕೆ ಕಾರಣ

ಸುಖ ಪಡೆಯಬೇಕು ಎಂಬ ಆಕಾಂಕ್ಷೆಯಿಂದ ತಡನ್ನ ಪಡೆಯುವ ಯತ್ನದಲ್ಲೇ ಮನುಷ್ಯ ಕೆಲವು ಸಮಯ ದಃಖ ಪಡುತ್ತಾನೆ!

ಂ ಂ ಂ ಂ

ನಾವು ಮತ್ತು ಕಾನೂನು

ಬಡವರು ಕಾನೂನಿಗೆ ಅಧೀನ. ಕಾನೂನು ಪ್ರಭಾವಶಾಲಿಗಳಿಗೆ ಅಧೀನ. ಬಡವ ನೀವೆ ಎಣ್ಣೆ ಬಾಟ್ಲಿ ಹಿಡಿದು ಕೊಂಡು ಬಂದರೂ ಪೋಲೀಸನು ಅವನನ್ನು ನಿಲ್ಲಿಸಿ ಗದರಿಸತ್ತಾನೆ. ಹಣವಂತ ಸಂಯಿ ತಂಬಿದ ಬಾಟ್ಲಿಯನ್ನೇ ಹಿಡಿದು ಕೊಂಡಿದ್ದರೂ ಸಲಾಮು ಹೊಡೆದು ಆಜ್ಞೆ ಶಲುಹಿಸುತ್ತಾನೆ ಅದೇ ಪೋಲೀಸು.

ಂ ಂ ಂ ಂ

ರಾಜಕಾರಣಿ

ಟೀಕೆಗೆ ಆಸ್ಪದವನ್ನು ಎಂದೂ ರಾಜಕಾರಣಿಯೊಗಲಾರ ಒಗತ್ತನ್ನು ಪ್ರತಿಭಟಿಸಲು ನಿರ್ಲಜ್ಜತನಕ್ಕಿಂತಲೂ ಬಲವಾದ ಅಸ್ತ್ರ ಬೇರೆಯಿಲ್ಲ.

ಂ ಂ ಂ ಂ

ಇಂಗ್ಲಿಷ್ ಭಾಷೆಯ ಪ್ರಯೋಜನ

ಇಂಗ್ಲಿಷ್ ಭಾಷೆಯನ್ನು ಕಲಿತು ಅದರ ಸಹಾಯದಿಂದ ಎಷ್ಟು ವಿಧನ ದುರ್ವ್ಯವಹಾರವನ್ನಾದರೂ ಮಾಡಲು ಸಾಧ್ಯವೊ ಅಷ್ಟೆಲ್ಲವನ್ನು ನಾವು ಮಾಡದೆ ಬಿಡುವುದಿಲ್ಲ. ಆದರೆ ಇಂಗ್ಲಿಷಿನಿಂದ ಬಂದ ಒಳ್ಳೆಯ ಶಿಸ್ತು, ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ ಇವೆಲ್ಲಾ ಒಳ್ಳೆಯ ಗುಣಗಳೂ ನಮ್ಮನ್ನು ಮರಳು ಮಾಡಿಲ್ಲ!

(ಶ್ರೀ ಕೆ. ಜೆ. ಶೆಟ್ಟಿ, ಕಡಂದಲೆ

ಬೇಕು ಮುಳುಗುತ್ತಿರುವಾಗ..

(ನಾಲ್ಕನೇ ಪುಟದಿಂದ)

ರೇ ಅಕ್ಕಿಸ್ತಿಗೆ ಬೀಜ ಹಾಕಿದಂತೆ, ಮೋಲೀಸರೇ ಕಳ್ಳರಿಗೆ ಪ್ರೋತ್ಸಾಹ ನೀಡಿದಂತೆ...."

'ಹ್ಞೂಂ....ಇನ್ನೂ....'

"ನೋಡಿ, ನನ್ನ ಈ ತಲೆಬುರಡೆಗೊಂದು ಯೋಜನೆ ಹೊಳೀತಿದೆ..."

'ಆಯ್ತಮ್ಮಾ. ಏನದು? ಬೇಳುವಂತವರಾಗಲಿ."

"ಓಹೋ, ಅದಕ್ಕೇನಡ್ಡಿ? ನೋಡಿ, ನಮ್ಮ ಅಧ್ಯಾಪಕ ನಗರಕ್ಕೆ ಸಿಗುವ ವೇತನ ಮನೆ ಬಾಡಿಗೆಗೂ ಬರಿ ಆಕ್ಕೆಗೂ ಸರಿಯಾಗ ಬಹುದು. ಬೇಯಿಸೋಕೆ ಕಟ್ಟಿಗೆಯನ್ನು ಅನ್ನಮತಿ ಯೊಂದಿದ ಟ್ಯೂಶನ್ನಿನ ಹಣದಿಂದ ತಂದಾರು ಅನ್ನಿ. ಆಯಿಲ್ ಬಂದ್ರೆ ಸ್ವರ್ಗಕ್ಕೆ ತಿಕೇಟು ಕೊಡೋಕೆ

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. P. 13/67.

1. ಬಾಲಕೃಷ್ಣ ಭಟ್ಟ.
2. ಭೈಲಜ ಬ್ಯಾ.
3. ಸಾವಿತ್ರಿ ಯಾನೆ ಪದ್ಮಾಕ್ಷಿ ಬ್ಯಾ.
4. ವೀರೇಶ್ವರ ಉಪ್ಪೂಣರ್.
5. ನೀರಜಾಕ್ಷಿ.

6. ಸುಮತಿ, 7. ಉಪೇಂದ್ರ ಜಿಪ್ಪೂಣರ್, 8. ಸಾಕೇಲಾ, 9. ಸುವಿತ್ರ, 10. ಉಷಾ, 11. ಗೌರಿ, 12. ಅಂಬುಜಾಕ್ಷಿ, 18. ವ್ಯಾಸ, } ಇವರು ಕ್ಷೇಮ ಚಿಂತಕಳು ತಾಯಿ ತಂದೆ ಅರ್ಜಿದಾರರು ಸಾವಿತ್ರಿ ಯಾನೆ ಪದ್ಮಾಕ್ಷಿ ಬ್ಯಾ

—ಅರ್ಜಿದಾರರು.

ಮತ್ತು

6. ಮಹಾದೇವ ಭಟ್— ಎದ್ರಿ.

ಎದ್ರಿ— 6. ಮಹಾದೇವ ಭಟ್, ಅನಂತ ಭಟ್ಟ ಮಗ ಹಾಲೀ residing at Prem —Mani —36, Janatha Society, Rajkot, Gujarath State—ಇವರಿಗೆ ವತ್ತು ಇತರ ಸಮಸ್ತ ಜನರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದ್ರೆ—

1೦೦೨ ವನ 4೦೦೨ 18ನೇ ವರೆಗಿನ ಅರ್ಜಿದಾರರ ತಂದೆ ಮತ್ತು 3ನೇ ಆರ್ಜಿದಾರಳಾಗಿದ್ದ ಕಾರ್ಕಳ ತಾಲೂಕು ನೂಲ ಗ್ರಾಮದ ಮುಳ್ಳಾಯಿ ಎಂಬಲ್ಲಿ ಇರುತ್ತಿದ್ದು, ಹಾಲೀ ಮೃತರಾದ ಮುಳ್ಳಾಯಿ ಶ್ರೀಧರ ಭಟ್ಟರಿಗೆ ಬರತಕ್ಕ ಮೇಲ್ಕಂಡ O. P. ಅರ್ಜಿಯ A ರೆಡ್ಯೂಲಿನಲ್ಲಿ ತಿಳಿಸಿದ ಸಾಲಗಳನ್ನು ಎಷ್ಟೂ ಲು ಮಾಡುವರೆ ಅರ್ಜಿದಾರರು ಬಾಧ್ಯಸ್ಥರಾಗಲೂ, ಮತ್ತ ಸದ್ರಿ ಸಾಲಗಳನ್ನು ಎಷ್ಟೂಲು ಮಾಡುವರೆ ಅರ್ಜಿದಾರ ಬಗ್ಗೆ 1ನೆಮ್ಮ 4ನೇ ಅರ್ಜಿದಾರ ಹೆಸರಿಗೆ ಸದ್ರಿ ಸಾಲಗಳ (ವಸಾಲು) ಕುರಿತು ಒಂದು ಮಂತ್ರಿಸು ಸರ್ಟಿಫಿಕೇಟನ್ನು ಕೊಡಬೇಕಾಗಿ ಸೆಕ್ಷನ್ 7 ಪ್ರಕಾರ ಅರ್ಜಿದಾರರು ದಾಖ್ಲು ಮಾಡಿದ ಅರ್ಜಿಯನ್ನು ತಾರೀಕು. 23—9—67ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇಡೋಣವಾಗಿರುವುದೆ. ಆ ಕಾರಣ ಆಕ್ಷೇಪಣೆಯಿರುವರು ತಾರೀಕ್ಕು 28-9-67 ರಲ್ಲು ಪೂರ್ವಾಹ್ನ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿರಿ ಆ ಪಕ್ಷದಲ್ಲಿ ಮೂಲಕರವಾಗಿಲೀ ಡಾಖ್ಲಾಗಿ ಉದಯಿಸಿರಿ ತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯಾರ್ತು ಕಂಡಂತೆ ಕೈಗೊಳ್ಳಲಿದೀತು. ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿರುವುದೆ.

D. Venkatesh Bhat,
ಅರ್ಜಿದಾರ್ತರ ಕಡೆ ವಕೀಲರ್,
ಕಾರ್ಕಳ, ತಾರೀಕು. 30.8.1967.

ಎಲ್ಲೆಲ್ಲಿ ಏನೇನು?

ಮದ್ರಾಸಿನಲ್ಲಿ ಡಾ। ಶಿವರಾಮ ಕಾರಂತರು

ಅನೇಕ ವರುಷಗಳಿಂದಲೂ ದ ಕನ್ನಡ ಜಿಲ್ಲೆಯಲ್ಲಿ ಪ್ರಸಿದ್ಧನಾಗಿ ನಡೆಯುತಿಕೊಂಡು ಬರುತ್ತಿರುವ ಯಕ್ಷಗಾನ(ಬಯಲಾಟ)ವನ್ನು ಮದ್ರಾಸ್ ಉತ್ಸಾಹಿಗಳು ಕೆಲವರು ಪ್ರಯತ್ನಿಸಿ ಅಭ್ಯಾಸ ಮಾಡಿ ಮದ್ರಾಸಿನಲ್ಲೂ ಒಂದು ಮೇಳವನ್ನು ಸ್ಥಾಪಿಸಿಕೊಂಡು ಈ ಕಲೆಯನ್ನು ಇಲ್ಲಿಯೂ ಮುಂದಕ್ಕೆ ತರಬೇಕೆಂಬ ಉದ್ದೇಶವು ಈ ವರ್ಷಕ್ಕೆ ಕೈಗೂಡಿತು.

ಮದ್ರಾಸ್ ಕರ್ನಾಟಕ ಸಂಘದ ಆಶ್ರಯದಲ್ಲಿ ಕೆಲವಾರು ಕಲಾಕ್ಷೇತ್ರದವರ ಉತ್ಸಾಹದಿಂದ 'ದಕ್ಷಯಜ್ಞವೈಭವ' ಬಯಲಾಟ ನಾಟಕದಲ್ಲಿ ತರಬೇತಿ ಹೊಂದಿ ತಾ. 20-8-67ರಲ್ಲು ಬೆಳಿಗ್ಗೆ ಆದರ ಪ್ರದರ್ಶನ

ಡಾಕ್ಟರರ— ಔಷಧಿಗಳಿಲ್ಲದ ಸರ್ಕಾರಿ ಆಸ್ಪತ್ರೆಗಳಿವೆಯೆನ್ನಿ. ಅಂಥವು ನವ್ಯ ಬೇಳೆ ಬೇಯಿಸೋಕೆ ಯಾರ ವಿದ್ಯಾರ್ಥಿಗಳಿಗೆ ಕರೆ ನೀಡಬಾರದು'

"ಅಯ್ಯೋ, ಶಾತಂ ವಾಪಂ...ಶಾಂತಂ ಪಾಪಂ...."

"ಅಲ್ರಿ, ದಿನವಿಡಿ ಶಾಲೆಯಲ್ಲಿ ಪಾಠ ಮಾಡಿ ಸುಸ್ತು ಹೊಡೆದು ಬೇಗ ಸಾಯೋಣ ಪುದಕ್ಕೆಂತ ಪರೀಕ್ಷೆ ಮಂಡಿಳಿಯಪ್ಪೆ ಎಲ್ರನ್ನೂ ಪಾಸು ಮಾಡಬೇಕೂಂತ ಸತ್ಯಾಗ್ರಹ ಮಾಡೋಕೋ, ಛೇರಾಪೋಮಿಗೂ ಕರೆಕೊಟ್ಟು, ಪಬ್ಲಿಮ ಬಂಗಾಳ ಸರಕಾರದ ಮಾದರಿಯನ್ನು ಸರಿಯಾಗಿ ಅನುಸರಿಸಿದಂತಾಗುತ್ತದೆ...."

'ಹೌದಮ್ಮ, ಜೇಲಿಯೇ ಹೊಲ ಮೇದಂತಾಗುತ್ತದೆ...."

'ಮತ್ತೆಂತಪ್ಪಿ— ಯಾಂಗೂ ಬೇಷವಾದ ದೇಶ ನನಗೆ—ನಿಮಗೆ, ನಮ್ಮಂಥವರಿಗೆ ಯಾಕೆ ಬೇಕಾ?"

"ಅಯ್ಯೋ, ಏನಂತೀಯ? ಹೆತ್ತವರಿಗೆ ಹೆಗ್ಗಣವೂ ಮುದ್ದು ತಾನೆ? ಫಲವಾದ ದೇಶಸ್ಥೇಮಿಗೆ ತನ್ನ ದೇಶ ಅಷ್ಟೇ ಮುದ್ದು, ಅದು ಸೊಟ್ಟಗಿರಲಿ, ದರಿದ್ರವಿರಲಿ, ಸುಂದರವಿರಲಿ, ಸಂಪನ್ನವಿರಲಿ...."

"ಅದು ಸರಿ. ಅದ್ರ, ಈ ವಿಭೀಷಣರು ಇರುವ ವರೆಗೆ ದೇಶದ ಬೆಳವಣಿಗೆ ಸಾಧ್ಯವಿಲ್ಲನ್ನಿ..."

"ಹ್ಞೂಂ. ಅವರನ್ನು ಹೊಡೆದೋಡಿಸೋ ಹೊಣೆ ನಿನ್ನದು, ನನ್ನದು, ದೇಶ ಪ್ರೇಮಿಗಳದ್ದು. ನಾವು ಕೈಕಟ್ಟಿ ಕುಳಿತು ಕೊಂಡರೆ, ಅಥವಾ ಬೆಂಕಿಯೊಡನೆ ಸರಸವಾಡುತ್ತ ಹೋದರೆ...."

'ಅದೇ ಏನೋ ಅನ್ನತ್ತಿರಲನ್ನಾ...ರೋಮ್ ಸುಡುತ್ತಿರುವಾಗ ಬೊರೆ ಪಿಯಸನೋ ಬಾರಿಸುತ್ತಿದ್ದಾಂತ—'

'ದೇಶ ಮುಳುಗುತ್ತಿರುವಾಗ ಬಂಗಾಳದ ಹುಲಿ ಕುಣಿಯುತ್ತಿತ್ತಾಂತ ಅನ್ನಬಹುದಲ್ಲಾ...."

'ಏನೇ ಅನ್ನು, ಅನ್ನದೇ ಇರು...ಅದೆಲ್ಲಾ ಎಯಸೋಕೆ ಯಾಪ್ರು ನಿದ್ದಾಸೀ ಇಲ್ಲ...'

"ಅಯ್ಯೋ, ಪಾಪವೇ....ಭಾರೀ ನಿದ್ದೆ ಆಯ್ತಾ.'

'ಹ್ಞೂಂ...."

'ತುಸು ಇತ್ತಾ ನೋಡೀಂದ್ರೆ..."

"ಯ್ಞೂಂ...'

'ಹೇಗೆ?'

—ಗೋಪಾ.

ಸಮಾರಂಭಕ್ಕೆ ಡಾ। ಯು. ರಾಮರಾವ್ ಕಲಾವಂಟಪದಲ್ಲಿ ಡಾ। ಕೆ. ಶಿವರಾಮ ಕಾರಂತರನ್ನು ಆಮಂತ್ರಿಸಿದ್ದರು.

ಡಾ। ಶಿವರಾಮ ಕಾರಂತರು ತಾ. 20—8—67ರಲ್ಲು ಸೋಮವಾರ ಡಾ। ಯು. ರಾಮರಾವ್ ಕಲಾಮಂಟಪದಲ್ಲಿ ನಡೆದ ಸಾಹಿತ್ಯ ಕೂಟದ ವಾರ್ಷಿಕೋತ್ಸವಕ್ಕೆ ಭಾಗವಹಿಸಿ, ಮುಕ್ತಾಯ ಭಾಷಣವನ್ನು ಮಾಡಿ, ಯೋಗ್ಯ ಸಲಹೆಗಳನ್ನಿತ್ತರು. ಮದ್ರಾಸ್‌ನಲ್ಲಿ ಮೈಸೂರು ಇಂಜಿನಿಯರರ ಸಂಘದ ನಿತ್ಯ ರಚ್ಯ ಕಾರಂತರನ್ನು ಆ ಮಂತ್ರಿಸಿದ್ದರು.

ಸಾಯಂಕಾಲ ಡಾ। ಯು ರಾಮರಾವ್ ಕಲಾಮಂಟಪದಲ್ಲಿ ಕೇಶವೇಣ ರಾಮ್ಕ್ಲ ಪಿ ಗೋವಿಂದ ಪೈ ಮಂಚೇಶ್ವರರ ಭಾವ ಚಿತ್ರ ಅನಾವರಣ ಮಾಡಿದರು ದಕ್ಷಯಜ್ಞ ನಾಟಕವನ್ನು ಉದ್ಯಾವಿಸಿ ಯಕ್ಷ ಸಲಹೆಗಳನ್ನಿತ್ತರು. ನಾಟಕವು ನೋಡ ಮೊದಲೇ ದಾದರೂ ಜನರಿಂದ ತುಂಬಾ ಆಕರ್ಷಿಸಲ್ಪಟ್ಟಿತ್ತು.

"ಶ್ರೀ ಕೃಷ್ಣಾವ್ಟಮಿ"

ದೇಲಂಪಾಡಿ ಬನಾಲ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಮಂಡಲಿಯ ವತಿಯಿಂದ ತಾ. 28—8—67ರಂದು 'ಶ್ರೀ ಕೃಷ್ಣ ವಿಜಯ' ಎಂಬ ಕಥಾ ಭಾಗದ ಯಕ್ಷಗಾನ ಕೂಟವು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ಪತಿಯಿಂದ "ಶ್ರೀ ಕೃಷ್ಣಾಜನ್ಮಾಷ್ಟಮಿ"ಯ ಸಲುವಾಗಿ ನಡೆಸಲ್ಪಟ್ಟಿತು

ಪ್ರಥಮದಲ್ಲಿ ಶ್ರೀ ನಾರಾಯಣ ನಾಯಕ್ ಮಾನ್ಯರನ್ನು ಸ್ವಾಗತಿಸಿ — ಮುಖ್ಯ ಅತಿಥಿಗಳ ಪರಿಚಯ ನೀಡಿದರು ಶ್ರೀ ಕೃಷ್ಣ ಪೂಜೆ ಪ್ರಸಾದ ಪಂಚೋಪಾಡಿಯವರಿಗೆ ಕಾರ್ಯ ಕ್ರಮ ಮುಕ್ತಾಯ ಗೊಳ್ಳುತ್ತಿರಲು—ಸಮಾರಂಭದ ವ್ಯವಸ್ಥಾಪಕ ಶ್ರೀ ಕಾತ್ತಿಮುಂಡ ಬಾಳಕೃಷ್ಣ ಗೌಡರು ಧನ್ಯವಾದ ವಿತ್ತರು.

ಜಿಲ್ಲೆಯಲ್ಲಿ ಸೈನ್ಯಕ್ಕೆ ಭರ್ತಿ

ಭಾರತೀಯ ಸೈನ್ಯಕ್ಕೆ ಮತ್ತು ನಾಕಾದಳಕ್ಕೆ ಅಭ್ಯರ್ಥಿಗಳನ್ನು ಜಿಲ್ಲೆಯ ಈ ಕೆಳಗಿನ ಸ್ಥಳಗಳಲ್ಲಿ ಆಯ್ಕೆ ಮಾಡಲಾಗುವುದು. ಸೇರಲಿಚ್ಛಿಸುವ ಅಭ್ಯರ್ಥಿಗಳು ತಮ್ಮ ಶಾಲೆಯ ಮತ್ತು ಗುಣ ನಡತೆಯ ಸಟಿಫಿಕೇಟುಗಳನ್ನು ತಪ್ಪೊಂದಿಗೆ ತರತಕ್ಕದ್ದು.

ತಾ. 10-9-67 — ಉಡುಪಿ
ತಾ. 11-9-67 — ಮಲ್ಪೆ,
ತಾ. 12-9-67 — ಸುಬ್ರಹ್ಮಣ್ಯ.
ತಾ. 13ನೆಮ್ಮ 14-9-67 — ಮಂಗಳೂರು.

ಅಭ್ಯರ್ಥಿಗಳನ್ನು ಆಯಾ ಸ್ಥಳಕ್ಕೆ ಪ್ರವಾಸಿ ಮಂದಿರದಲ್ಲಿ ಆಯ್ಕೆ ಮಾಡಲಾಗುವುದು. ಹೆಚ್ಚಿನ ವಿವರಗಳನ್ನು ಮಂಗಳೂರು ಗಣಸಕ ಹೈಕ್ವಾರ್ಟರ್ಸಿಲ್ಲಿ ಪ್ರಾದೇಶಿಕ ಸೈನ್ಯದ ನೇಮಕಾತಿ ಅಧಿಕಾರಿಗಳಿಗೆ ಕಚೇರಿಯಿಂದ ಪತ್ರ ಮುಖೇನ ತಿಳಿಸಲಾಗುವುದು.

ಔಷಧಿ ತಯಾರಿಕೆಯ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಲು ಕರೆ.

ಮಣಿಪಾಲ, ಆ. 29—ಜಿಲ್ಲೆಯ ವಿಶಾಡಿ ಮಿ ಜಿಲ್ಲಾ ಜನರಲ್ ಎಜುಕೇಷನ್ ಆಫೀಸರ ಹಾಗೂ ರಿಜಿಸ್ಟ್ರಾರ್ ಶ್ರೀ ಟಿ. ಎಂ. ವೈ. ಪೈಯವರು ಕಳೆದ ಶನಿವಾರ ಇಲ್ಲಿ ಡೆಸಿಡ್ ರವ್ಸ್ ವಿವ್ಯಾಧೀಗಳ ಸಂಘವನ್ನು ಉದ್ಘಾಟಿಸುತ್ತಾ ನವ್ಯಾ ದೇಶದಲ್ಲಿ ಔಷಧಗಳನ್ನು ತಯಾರಿಸುವುದಕ್ಕೆ ಇರುವ ಅನೇಕ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಕರೆಯಿತ್ತರು.

ಕಸ್ತೂರ್ ಬಾ ಮೆಡಿಕಲ್ ರಿಸರ್ಚ್ ಡೀನ್ ಡಾ। ಎ. ಕೃಷ್ಣಾಂ ಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಅಧ್ಯಕ್ಷೆ ಕುಂದ ಶ್ರೀ ದಿ. ಸತ್ಯನಾರಾಯಣರಾವರು ಸ್ವಾಗತಿಸಿದರು. ಪ್ರೋ. ಎನ್. ಕೃಷ್ಣಮೂರ್ತಿಯವರು ಧನ್ಯವಾದವಿತ್ತರು. ಕಾರ್ಯದರ್ಶಿಯವರಾದ ಶ್ರೀ ಸಿ. ವಸಂತ ಜೋಸೆಫ್‌ರವರು ಸಂದರ್ಭೋಚಿತವಾಗಿ ಮಾತನಾಡಿದರು.

ಎದೆರೋಗ ಚಿಕಿತ್ಸಾ ಸೌಲಭ್ಯ

ಮಣಿಪಾಲ, ಆ. 29—ಇಲ್ಲಿಯ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನ ಮೆಡಿಸಿನ್ ವಿಭಾಗದ ಪ್ರೊಫೆಸರ್ ಡಾ। ಬಿ ಎಚ್. ಶಿವರಾಮನ್ ಹಾಗೂ ಎಡೆಯ ರಸ್ಸ್ ಸೈಕ್ಯಾಲಯ ಅಸೋಸಿಯೇಟ್ ಪ್ರೊಫೆಸರ್ ಡಾ। ಎಸ್. ಆರ್. ಉಲ್ಲಾಳರವರು ವೈದ್ಯಕೀಯ ಸಮಾಜ ಕಾರ್ಯಕರ್ತ ಶ್ರೀ ಪಿ. ವಿ. ಜಾರ್ಜ್‌ರವರೊಡಗೂಡಿ ಕಳೆದ ಶುಕ್ರವಾರ ಕಸ್ತೂರ್ ಬಾ ಜನರಲ್ ಆಸ್ಪತ್ರೆಯಲ್ಲಿ ಮೆಡಿಸಿನ್ ವಿಭಾಗದ ರಿಡರ್ ಡಾ। ಕೆ ಶಂಕರ ಭಟ್ಟರವರು ಎದೆ ರೋಗಗಳ ಚಿಕಿತ್ಸಾಲಯವನ್ನು ಉದ್ಘಾಟಿಸಿದ ದಿನದಂದೇ ಇಂಥ ರೋಗಿಗಳನ್ನು ಪರೀಕ್ಷಿಸಿ ಸಲಹೆಯಿತ್ತರು. ಈ ಚಿಕಿತ್ಸಾಲಯ ಪ್ರತಿ ಶುಕ್ರವಾರ ಅಕರಾಷ್ಟ್ರ ೨-೪೦೦ರಿಂದ ೪ಗಂಟೆಯವರೆಗೆ ತೆರೆದಿರುತ್ತದೆ.

ಸಿವಿಲ್ ಡೈನ್ಸಲ್ ಕ್ಲಬ್

ಉಡುಪಿಯ ಸಿವಿಲ್ ಡಿಫೆನ್ಸ್ ಕಮಿಟಿಯ ಸಭೆಯು ಸಮಿತಿಯ ಅಧ್ಯಕ್ಷೆ ಉಡುಪಿ ಎ. ಎಸ್. ಪಿ ಶ್ರೀ ಹೆಚ್. ಕೆ. ರಾಮಯ್ಯನವರ ಅಧ್ಯಕ್ಷತೆಯಲ್ಲಿ ತಾಲೂಕು ಆಫೀಸಿನಲ್ಲಿ ಜರಗಿತು. ಕಾರ್ಯದರ್ಶಿ ಎಡ್ವರ್ಡ್‌ಟೋ ಶ್ರೀ ರಾಮಚಂದ್ರರಾವ್ ಮಟ್ಟಿಯವರು ಕಾರ್ಯಕ್ರಮಗಳ ಕುರಿತು ವಿವರಿಸಿದರು.

ಉಡುಪಿ ಮತ್ತು ಮಣಿಪಾಲದ ನಾಗರಿಕರಿಗೆ ನಾನಾರೀತಿ ವೈಫಲ್ಯ ತರಬೇತು ಕೊಡುವ ಉದ್ದೇಶದಿಂದ ಸಿವಿಲ್ ಡೈನ್ಸಲ್ ಕ್ಲಬ್ ಒಂದನ್ನು ಸ್ಥಾಪಿಸಲಾಯಿತು. ನಾಗರಿಕರು ಈ ತರಬೇತಿಯ ಸದುಪಯೋಗವನ್ನು ಪಡಕೊಳ್ಳುವಂತೆಯೂ ಅರ್ಜಿ ಫಾರ್ಮ್ ಮುದ್ರಿಸಿ ಹೆಚ್ಚಿನ ಸೂಚನೆಯನ್ನು ಉಡುಪಿ ರೂರಲ್ ಬ್ಯಾಂಕ್ ಹೋಲೀಸಾ ಸ್ಟೇಷನ್ ಇವೆ ಪಡಕೊಳ್ಳುವಂತೆಯೂ ಕಾರ್ಯದರ್ಶಿಗಳು ಈ ಮೂಲಕ ತಿಳಿಸಿದ್ದಾರೆ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R. E. P. 245/1967
O. S. 560/1966.

M. ಗೋಪಾಲ ರಾವ್— ಅರ್ಜಿದಾರ.
ಕೆ. ಶಂಕರ ರಾವ್, ಕೊಂಡೆ ಬೆಟ್ಟು ನಾರ್ಣಪ್ಪನವರ ಮಗ, ಕಾರ್ಕಳ ತಾಲ್ಲೂಕು ಬಡಗ ಪಿಲಾರು ಗ್ರಾಮದಲ್ಲಿರುವವ—ಎದ್ರಿ.

ಸದ್ರಿ ಎದ್ರಿ ಆದ ನಿಮಗೆ ಈ ಮೂಲಕ ತಿಳಿಸುವದೇನೆಂದ್ರೆ—

ನಿಮ್ಮ ಹಕ್ಕಿನ ಸ್ವಿರಾಸ್ತಿಗಳನ್ನು ಜಪ್ತಿ ಯೇಲಂಗೆ ಆಪೇಕ್ಷಿಸಿ ಅರ್ಜಿದಾರನು ದಾಖ್ಲು ಮಾಡಿದ ಸದ್ರಿ ಅಮಲ್ಜಾತಿಯಿಲ್ಲಿ ಜಪ್ತಿ ಮೃಂ ನಿಮಗೆ ಜ್ಞಾಪ ಬ್ಲಿ ಕಾರೀಕು. 18.9.1967 ಕ್ಕೆ ಇಟ್ಟಿದೆ. ಆ ತಾರೀಖು ನಿಮಗೆ ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10ಘಂಟೆಗೆ ಮೇಲ್ಕಂಡ ಕೋರ್ಟಿಗೆ ಖುದ್ದು ಹಾಜ್ರಾಗಿ ಉದಾಸಂಡೆ ದಾಖ್ಲು ಸೂಡತಕ್ಕದ್ದು. ತಪ್ಪಿದ್ದೆ, ನಿಮ್ಮ ಗೈರ ಹಾಜ್ರಿಯಲ್ಲಿ ಅಮಲ್ಜಾಮ್ಕೆ ತೀರ್ಪು ಆಗಬಹುದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯಿದೆ.

K. S. Kamath
Advocate for Petitioner
Karkala, 31—8—67.

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

S. C. 110/1967.

ಕೆ. ಮಹಾಬಲ ಶೆಟ್ಟಿ ಕಾಪು — ವಾದಿ.
ಅಮತ್ತು
ಆಚ್ಚಪ್ಪಿ ಶೆಟ್ಟಿ ಕಾಪು — ಪ್ರತಿವಾದಿ.
ಇವರೊಳಗೆ

To

1. ಶ್ಯಾಮಯ್ಯ ಸಪ್ಪ, ಶೀಡಿ ಶೆಟ್ಟಿಗರ ಮಗ.

2. ಮಂಜಪ್ಪ ಶೆಟ್ಟಿ, ತೆಂಕನಿಡಿಯೂರು ಗ್ರಾಮದ ವಿಳಾಸ.

ಮಾನ್ಯರು, ಸ್ವತಂತ್ರದ ಮೇಲೆ ಅವರಿಂದ ಕಳ್ಳ ಕ್ರಯ ಸಂಬಂಧ ಎರೆಗೆ ಬಂದಾ ಮಾಲುಗೇಣಿಯ ಸೇರಿ, ಪತ್ತಿ ಕೊಡಾ ರೂಪ್ಯ 206/50ರ ಬಗ್ಗೆ ಮಂಡಿಸಿದ ಮೇಲಿನ ವ್ಯಾಜ್ಯದಲ್ಲಿ ನಿಮ್ಮ ...ದಾಯಂಡೆ ಇದ್ದರೆ ತಾ. 18.9.67ನೇ ವಿನ್ಸ್ ದಿನ ಬೆಳಿಗ್ಗೆ ಗಂಟೆ 11ಕ್ಕೆ ಈ ಕೋರ್ಟ್ ಮುಂದೆ ಹಾಜ್ರಾಗಿ ಜ್ಞಾಪೀರು ಮಾಡತಕ್ಕದ್ದು. ತಪ್ಪಿದ್ದೆ ನಿಮ್ಮ ಗೈರು ಹಾಜ್ರಿಯಲ್ಲಿ ವ್ಯಾಜ್ಯ ತೀರ್ಮಾನಗೊಳ್ಳಬಹುದು.

B. S. Hegde,
Vakil for Plaintiff.
Udipi, Dated 31—8—67.

ಲೋಕ ಸಂಚಿನೆಗಾಗಿ

ಕೆಂಪು ಚೀನಾ ತುಳಿವ ದಾರಿ

ಕೆಂಪು ಚೀನಾದಲ್ಲಿ ರಾಜಕೀಯ ಅಸ್ಥಿರತೆಗಿಂತಲೂ ಸೈದ್ಧಾಂತಿಕ ಭಿನ್ನಾಭಿಪ್ರಾಯ ದಿನ ದಿನಕ್ಕೆ ಬೆಳೆಯುತ್ತಿದೆ ಎಂಬುದಕ್ಕೆ ಅಲ್ಲಿನ ಎಂದಿಗೇ ನಾಕ್ಷಿ ಪ್ರೌಢತೆ. ಚೀನಾದ ನಾಯಕ ಮಾಜಿಗಳು ತಮ್ಮ ಅಭಿಪ್ರಾಯವನ್ನು ಹೇಗೆ ಬದಲಾಯಿಸುತ್ತಿದ್ದಾರೆಂಬುದಕ್ಕೆ ಕೆಲವು ಉದಾಹರಣೆಗಳು ಇಲ್ಲಿವೆ. ಲೋಕ ಸಂಚಿನೆಯ ಪ್ರಯತ್ನದಲ್ಲಿ ಇದು ನಿರತವಾಗಿದೆ ಎಂಬುದು ಇಲ್ಲಿ ವ್ಯಕ್ತವಾಗುತ್ತದೆ.

"ಜನ ಶತ್ರು ಮತ್ತು ಸುಳ್ಳುಗಳ ನಡುವಣ ಅಂತರಗಳನ್ನು ತಿಳಿದುಕೊಳ್ಳುವುದು ಕ್ಯಾಸಿ" ದಮ್ಮ ಅಭಿಪ್ರಾಯಗಳನ್ನು ಸಮಸ್ತ ಜನರಿಗೂ ಪರಿಚಯ ಮಾಡಿಕೊಡಲು 'ತಾವು ಸಿದ್ಧವೆಂದು' ಚೀಜೇ ನಾಯಕರು ಹೇಳುತ್ತಾರೆ.

ಈ ಸಂದರ್ಭದಲ್ಲಿ ಚೀನಿ ನಾಯಕರು ನಿನ್ನೆ ಏನು ಹೇಳುತ್ತಿದ್ದರು ಮತ್ತು ಇಂದು ಏನು ಹೇಳುತ್ತಿದ್ದಾರೆ ಎಂಬುದನ್ನು ಹೋಲಿಸಿ ನೋಡುವುದು ತುಂಬ ಹುರಿ ಹುಲಕಾರಿಯಾಗಿದೆ.

ನಿನ್ನೆ

ಚೀನಿ ಜನತಾ ಗಣರಾಜ್ಯದ ನಾಯಕ ವರ್ಗ ಮತ್ತು ಚೀನಿ ಕಮ್ಯೂನಿಸ್ಟ್ ಪಾರ್ಟಿ ಎರಡೂ ಶಾಂತಿ ಮತ್ತು ಭಿನ್ನ ಭಿನ್ನ ಸಾಮಾಜಿಕ ವ್ಯವಸ್ಥೆಗಳು-ಳ್ಳ ದೇಶಗಳ ನಡುವೆ ಶಾಂತಿಯುತ ಸಹಜೀವನದ ಪರವಾಗಿದ್ದ ಕಾಲವೊಂದಿತ್ತು.

"ಜಗತ್ತಿನ ಎಲ್ಲ ದೇಶಗಳ ಶಾಂತಿಯುತ ಸಹಜೀವನದ ಬಗ್ಗೆ ನಾವು ಅತ್ಯಂತ ದೃಢವಾಗಿ ಇದ್ದೇವೆ" ಎಂಬುದಾಗಿ ೧೯೫೬ರ ಜೂನ್ ತಿಂಗಳ ೧೬ನೆ ರಾಷ್ಟ್ರೀಯ ಜನತಾ ಕಾಂಗ್ರೆಸ್ಸಿನ ಮಹತ್ವಪೂರ್ಣ ಅಧಿವೇಶನದಲ್ಲಿ ಚೀನಿ ಜನತಾ ಗಣರಾಜ್ಯದ ಸ್ಥಾಪನಾ ಪ್ರಧಾನಿ ಚೌ-ಎನ್-ಲೈ ಘಟ್ಟಿಸಿ ಹೇಳಿದರು.

೧೯೫೭ರ ಸೆಪ್ಟೆಂಬರ್ ತಿಂಗಳಲ್ಲಿ ಜೆನ್ಮಿನ್ ಜೀಹಾಪ್ಪನ್ನೋ ಪತ್ರಿಕೆ ಹೀಗೆ ಬರೆಯಿತು: 'ಸೋವಿಯೆತ್ —ಅಮೆರಿಕನ್ ಸಂಬಂಧಗಳ ಬೆಳವಣಿಗೆಯಲ್ಲಿ ಇಡಿ ಜಗತ್ತಿನ ಜನರೂ ಅಷ್ಟೇ ಗಾಢವಾದ ಆಸಕ್ತಿ ವಹಿಸಿದ್ದಾರೆ. ಸೋವಿಯೆತ್ ಒಕ್ಕೂಟ ಮತ್ತು ಸಂ. ರಾ. ಅಮೆರಿಕಗಳಲ್ಲಿಯೂ ಜಗತ್ತಿನ ಪ್ರಮುಖ ರಾಜ್ಯಗಳಾಗಿದ್ದು ಅವುಗಳ ಸಹಜೀವನ ಅಂತರಾಷ್ಟ್ರೀಯ ಪರಿಸ್ಥಿತಿಯ ಬೆಳವಣಿಗೆಯಲ್ಲಿ ನಿರ್ಧಾರಾತ್ಮಕ ಪ್ರಾಮುಖ್ಯವನ್ನು ವಹಿಸಿಕೊಳ್ಳುತ್ತದೆ.'

ಇಂದು

ಚೀನಿ ನಾಯಕರು ಸ್ವತಃ ತಾವೇ ಘೋಷಿಸಿದ್ದ ಸಾಧನೆಗಳನ್ನು ಬಿಟ್ಟು ಹೊರಟಿದ್ದು ಶಾಂತಿಯುತ ಸಹಜೀವನ ಮತ್ತು ಸ್ವಯಂಪ್ರತಿಪತ್ತಿಗಳ ಸಮಸ್ಯೆ ಬಗ್ಗೆಯೂ ಅವರು ತಮ್ಮ ಅಭಿಪ್ರಾಯಗಳನ್ನು ಪರಿಷ್ಕರಿಸಬೇಕಾಯಿತು.

"ಶಾಂತಿಯುತ ಸಹಜೀವನದ ಸಾಮ್ರಾಜ್ಯವಾದದ ಆಕ್ರಮಣಗಳಿಗೆ ಪ್ರತ್ಯುತ್ತರ ಮತ್ತು ಯುದ್ಧದ ಕೈಬಿಳಕ್ಕೆ ಸೂಕ್ತವಾಗಿದೆ" ಎಂಬುದಾಗಿ ೧೯೬೩ರ ಡಿಸೆಂಬರ್ ತಿಂಗಳಲ್ಲಿ ಚೀನಿ ಕಮ್ಯೂನಿಸ್ಟ್ ಪಾರ್ಟಿ ನೈ ದ್ಧಾಂತಿಕ ಪತ್ರಿಕೆ ಹೊಂಚಿ ಬರೆಯಿತು.

ನಿನ್ನೆ

ಚೀನೀ ಜನತಾ ಗಣರಾಜ್ಯ ಮತ್ತು ಚೀನೀ ಕಮ್ಯೂನಿಸ್ಟ್ ಪಾರ್ಟಿ ನಾಯಕ ವರ್ಗ ಉಷ್ಣ ಬಿಜಾಣು ಅಸ್ತ್ರಗಳ ನಿಷೇಧವಾಗಬೇಕೆಂಬಷ್ಟೇ ಕೇಳಿರಲಿಲ್ಲ, ಅವುಗಳ ಸರೀಕ್ಷೆಗಳೂ ನಿಶ್ಯರ್ತವಾಗಿ ನಿಲ್ಲಬೇಕೆಂದು ಒತ್ತಾಯ ಪಡಿಸಿದ್ದವು.

"ನಿರಾಯುಧೀಕರಣ ಮತ್ತು ಉಷ್ಣ ಬಿಜಾಣು ಅಸ್ತ್ರಗಳ ಪರೀಕ್ಷೆಗಳ ನಿಲುಗಡೆ ವಿಷಯದಲ್ಲಿ ನಾವು ಸೋವಿಯೆತ್ ಒಕ್ಕೂಟದ ದೃಢವಾದ ಮತ್ತು ಏಕ ಪ್ರಕಾರವಾದ ನೀತಿಯನ್ನು ಬಲವಾಗಿ ಬೆಂಬಲಿಸುತ್ತೇವೆ" ಎಂಬುದಾಗಿ ಆಗಸ್ಟ್ ೧೯೬೩ರಲ್ಲಿ ಸೇರಿದ್ದ ಅಣು ವಿಷಯ, ಜಲಜನಕ ಬಾಂಬುಗಳ ನಿಷೇಧದ ಅಂತರಾಷ್ಟ್ರೀಯ ಸಮ್ಮೇಳನಕ್ಕೆ, ಚೀನ ಜನತಾ ಗಣರಾಜ್ಯದ ವಿಜ್ಞಾನಿಗಳು ಅಕಾಡೆಮಿಯ ಅಧ್ಯಕ್ಷರೂ, ಚೀನಿ ಶಾಂತಿ ಸಮಿತಿಯ ಅಧ್ಯಕ್ಷರೂ ಆದ ಪ್ರಾ ಚ ಪೂ ಸೂ—ಜೋ ಅವರು ಕಳಿಸಿದ ತಂತಿಯಲ್ಲಿ ನುಡಿದಿದ್ದರು.

ಇಂದು

ಚೀನಿ ನಾಯಕರ ಇಂದಿನ ಮಹಾರಾಜ್ಯ ರಕ್ಷಿತ ಪ್ರಮುಖತಾ ಹಂಬಲಗಳಿಗೆ ಅನುಸಾರವಾಗಿಯೆ ನಿರಾಯುಧೀಕರಣದ ಬಗ್ಗೆ ಅವರಿಗಿದ್ದ ಅಭಿಪ್ರಾಯಗಳೂ ಮಾಲಭೂತವಾಗಿ ಹೀಗೆ ಬದಲಾಗಿವೆ.

"ಶಾಂತಿಗೆ ಸಂಪೂರ್ಣ ಮತ್ತು ನಾರ್ವಕ್ಕಿಕ ನಿರಾಯುಧೀಕರಣವೊಂದೇ, ಜಾಗತಿಕ ಶಾಂತಿ ಜಳಗಳದ ನಮ್ಮ ಕಾರ್ಯಭಾರ ಇದೇ, ಒಂದೇ ರಾತ್ರಿಕ್ಕೆ ಆಧುನಿಕ ಕಾಲದ ಎಲ್ಲ ಅಗತ್ಯದ ಸಮಸ್ಯೆಗಳ ಇತ್ಯರ್ಥಕ್ಕೂ ಇದೇ ಪರಿಹಾರ ಎಂಬ ಅಭಿಪ್ರಾಯವೊಂದಿದೆ....ಪರಿಣ ಈ ಪ್ರಮಾದ ಪೂರ್ಣ ಹಾಗೂ ಅತ್ಯಂತ ಅಪಾಯಕಾರಿಯಾದ ಕಲ್ಪನೆಯನ್ನು ನಾವು ಒಂದಿಷ್ಟೂ ಒಪ್ಪುವುದಿಲ್ಲ" ಎಂಬುದಾಗಿ ಲೀಯು ನಿಂಗ್‌ಯಿ—೧೯೬೧ರ ಡಿಸೆಂಬರ್ ತಿಂಗಳು ಸ್ಟಾಕ್‌ಹೋಮ್‌ನಲ್ಲಿ ನಡೆದ ಜಾಗತಿಕ ಸಮ್ಮೇಳನದಲ್ಲಿ ಚೀನಿ ನಿಯೋಗದ ನಾಯಕರಾಗಿ—ಘೋಷಣಾ ಡಿದರು.

ನಿನ್ನೆ

ಚೀನೀ ನಾಯಕರ ಹೇಳಿಕೆಯ ಪ್ರಕಾರವೆ, ಸೋವಿಯೆತ್ ಒಕ್ಕೂಟ ಮತ್ತು ಸೋವಿಯೆತ್ ಕಮ್ಯೂನಿಸ್ಟ್ ಪಾರ್ಟಿಯೊಡನೆ ಚೀನಿ ಪಾತ್ರು ಪಾರ್ಟಿಗಳ ಸ್ನೇಹ ಮತ್ತು ಸಹಕಾರಗಳೇ ಸ್ವಾಭಾವಿಕವಾಗಿದ್ದವು.

'ಚೀನಿ ಮತ್ತು ಸೋವಿಯೆತ್ ಒಕ್ಕೂಟ, ಚೀನೀ ಕಮ್ಯೂನಿಸ್ಟ್ ಪಾರ್ಟಿಯೂ ಸೋವಿಯೆತ್ ಕಮ್ಯೂನಿಸ್ಟ್ ಪಾರ್ಟಿಯೂ ಇವುಗಳ ಸಂಬಂಧಕ್ಕೆ ಅತ್ಯುತ್ತಮ ಮಾದರಿಯನ್ನು ಸೃಷ್ಟಿಸಿವೆ' ಎಂಬುದಾಗಿ ೧೯೫೭ರ ಜನವರಿ ತಿಂಗಳಲ್ಲಿ ಸೇರಿದ್ದ ಚೀನೀ ಕಮ್ಯೂನಿಸ್ಟ್ ಪಾರ್ಟಿ ಕೇಂದ್ರ ಸಮಿತಿಯ ವಿಸ್ತೀರ್ಣ ಸಭೆಯು ಗಟ್ಟಿಸಿ ಹೇಳಿತ್ತು. ಆದಿನ್ನೂ ಮುಂದೆ ಹೀಗೆಂದಿತ್ತು: 'ಸುದೀರ್ಘವಾದ ಚರಿತ್ರೆಯನ್ನೂ ಸಮೃದ್ಧ ಅನುಭವವನ್ನೂ ಹೊಂದಿರುವ ಮಹಾನ್ ಸೋವಿಯೆತ್ ಕಮ್ಯೂನಿಸ್ಟ್ ಪಾರ್ಟಿಯು ಜಾಗತಿಕ ಕಮ್ಯೂನಿಸ್ಟ್ ಚಳವಳಿಯ ಮಂತ್ರಾಳುವಾಗಿದೆ. ಮಾರ್ಕ್ಸ್ ಸೋವಿಯೆತ್ ಒಕ್ಕೂಟ ಪ್ರಸಕ್ತ ಜವಾಬ್ದಾರಿ ಶಿಬಿರದಲ್ಲಿ ಅತ್ಯಂತ ಮಂದುವರಿದ ಮತ್ತು ಅತ್ಯಂತ ಬಲಶಾಲೀ ದೇಶವಾಗಿದೆ. ಚೀನೀ ಕಮ್ಯೂನಿಸ್ಟ್ ಪಾರ್ಟಿ ಮತ್ತು ಸೋವಿಯೆತ್ ಕಮ್ಯೂನಿಸ್ಟ್ ಪಾರ್ಟಿ ಹಾಗೂ ಚೀನಾ ಮತ್ತು ಸೋವಿಯೆತ್ ಒಕ್ಕೂಟ ಇವುಗಳ ನಡುವಣ ಐಕ್ಯಮತ್ಯವನ್ನು ಕುಂಠಿತಗೊಳಿಸಲು ವ್ಯರ್ಥವಾಗಿ ಪ್ರಯತ್ನಿಸುತ್ತಿರುವ ಸಾಮ್ರಾಜ್ಯವಾದಿಗಳ ಯೋಜನೆಗಳು ಎಂದೂ ಕಾರ್ಯಗತವಾಗುವುದಿಲ್ಲ."

ಇಂದು

ಪೆಕಿಂಗು ಕಟು ಸೋವಿಯೆತ್ ವಿರೋಧೀ ನಿಲುವನ್ನು ತಳೆದಿದೆ.

"ಸೋವಿಯೆತ್ ಒಕ್ಕೂಟದೊಡನೆಯ ಸಂಬಂಧಗಳು ಸಾಯಿದು ಬೀಳುವ ಸಾಧ್ಯತೆಯೂ ಇದೆ" ಎಂಬುದಾಗಿ ಚೀನಾದ ವಿದೇಶಾಂಗ ಸಚಿವ ಚೆನ್ಯಿ ೧೯೬೭ರ ಫೆಬ್ರವರಿ ತಿಂಗಳ ೭ನೆ ವಿದೇಶಿ ಪತ್ರಿಕಾ ವರದಿಗಾರರಿಗೆ ಸಂದರ್ಶನ ನೀಡುತ್ತ ಸಾರಿದರು.

'ನಮ್ಮ ನ್ಯಾಯ ವಿಲೇಗಳನ್ನು ಬಚ್ಚು ಹಾಕುತ್ತೇವೆ, ಜೀವಂತವಾಗಿ ನಿಮ್ಮನ್ನು ಜರ್ಮನಿಯಲಿ ಬುತ್ತೇವೆ ನಿನ್ನ್ಯಾನಮನಿಗಳಿಂದರಕ್ಕೆ ಜೆನ್ಮಿನ್ ಬೀಳಲಿ. ನಿಮ್ಮ ಚೇತಗಳನ್ನು ಸುಟ್ಟು ಬಾಡಿಯನ್ನು ಗಾಳಿಗೆ ತೂರುತ್ತೇವೆ ಸೋವಿಯೆತ್ ಜನರಿಗಿರುವಂತೆ ವಿಶ್ವದ ಕೆಗಳು, ಮೂವ್ಸ್ ನಿಕಿಂಗ್ ಮತ್ತವರ ಲತ್ತೆ ಹಾಕುವ ಶಕ್ತಿಯೂ ಕೆಂಪು ರಕ್ಷಕರ ಸುಸ್ತಿಕೆಗಳಲ್ಲಿವೆ.

೦೦೦ ೦೦೦ ೦೦೦

ವೇಲ್ಚಾಣಿಸಿದ ಕಾಗದ ಪತ್ರಗಳ ಬಗ್ಗೆ ನೂರ ವ್ಯಾಖ್ಯಾನವೂ ಬೇಕಿಲ್ಲ. ತಾವು ಹಿಂದೆ ಗೌರವದಿಂದ ಕಾಣುತ್ತಿದ್ದುದೆಲ್ಲವನ್ನೂ ಇಂದು ತಾವೇ ಸುಟ್ಟುಹಾಕುತ್ತಿರುವ ಚೀನಿ ನಾಯಕರಿಗೆ ಇವೇ ಇಂದು ತಿರುಗುಬಾಣಗಳಾಗಿ ಹೊಡೆಯುವಿವೆ.

(ಮೂರನೇ ಪುಟದಿಂದ)

ಇಳಿಜಾ. ಎರಡನೆಯದು—ಬ್ಲ್ಯಾಕ್ ಮಾರ್ಕೆಟ್. ಸೊದಲನೆಯದನ್ನು ನಾವಿ ನಿಷ್ಕ್ರಿಯಗೊಳಿಸಬೇಕಾದರೆ, ಪರಕಾಲಂಬಿಯಾಗಬೇಕು; ಎರಡನೆಯದು ನಮ್ಮ ನ್ಯಾಯಲ್ಲೇ ಇದೆ. ಲಭ್ಯವಿರುವ ಉತ್ಪಾದನೆಯನ್ನು ನ್ಯಾಯೋಚಿತ ರೀತಿಯಲ್ಲಿ ಹಂಚುವುದು ಮತ್ತು ಅಗತ್ಯವಿದೆ. ಬೆಲೆಯೇರಿಕೆಯ ಉದ್ದಿರಿಗೊಂದು ಕಡಿವಾಣ ಹಾಕಿ ತಡೆಯುವಿ ಹೋದರೆ, ಮತ್ತೆ ಲತಿ ಪ್ರಸರಣ ಭೀಮಾಕಾರ ತಳೆಯುತ್ತದೆ; ಅರ್ಧಿಕವಾಗಿ ಈಗಲೇ ರಸಾತಳಕ್ಕೆ ಉರುಳಿದ ದೇಶ ಪಾತಾಳಕ್ಕೆ ಸೇರುತ್ತದೆ.

ಬಲ್ಲಿರಾ?

ಜೋಲ್ಲೆಸು ನಿಂಪಡಿಸುವುದರಿಂದ ಪುಟ್ಟಾಗಳಿಗೆ ಹುಳು ಬರುವುದಿಲ್ಲ.

೦ ೦ ೦ ೦

ಹಸಿ ಮೆಣಸಿನ ಕಾಯಿ ಬಾನ್ನು ಕೆದಕಿ ಇಡಲು, ಸ್ವಲ್ಪ ಉಪ್ಪು ಮತ್ತು ಅರಸಿನ ಹುಡಿಯೊಡನೆ ಬೆರೆಸಿ ಬಿಳಿ ಗಾಜಿನ ಸೀಸೆ ಗುಳ್ಳಿಟ್ಟು ಇಟ್ಟರೆ ಸಾಕು.

೦ ೦ ೦ ೦

ನಿಂಬೆ ಹಣ್ಣಿನಿಂದ ಹೆಚ್ಚು ರಸಬರಬೇಕಾದರೆ, ಹಣ್ಣನ್ನು ಇಂಧನು ಮೂಡುವ ಮೊದಲು ಸ್ವಲ್ಪ ಹೊತ್ತು ಬಿಸಿ ನೀರಿನಲ್ಲಿ ಡಿರಿ.

೦ ೦ ೦ ೦

ಸುಜ್ಜಿಗೆಯನ್ನು ಹುರಿಯಲು ಬೆಚ್ಚನೆಯ ಜಾಗದಲ್ಲಿಡಬಾರದು. ತಂಪಿರುವ ಸ್ಥಳದಲ್ಲಿಡಬೇಕು.

೦ ೦ ೦ ೦

ಬೆಂಕಿ ಪೆಟ್ಟಿಗೆಯೆಳಗೆ ಸ್ವಲ್ಪ ಅಕ್ಕಿ ಕಾಳನ್ನು ಹಾಕಿ ಬಿಟ್ಟರೆ ಬೆಂಕಿಕಡ್ಡಿ ಮಳೆಗಾಲದಲ್ಲಿ ಜೇವವಾಗಿ ಉರಿಯದಂತಾಗುವುದಿಲ್ಲ.

೦ ೦ ೦ ೦

ಪ್ರಾಥಕಾಲ ಬರೆ ಹೊಟ್ಟೆಯಲ್ಲಿ ನಿಂಬೆ ರಸ ಬೆರೆಸಿದ ಬಿಸಿ ನೀರನ್ನು ಕುಡಿದರೆ ಅಜೀರ್ಣ ದೂರವಾಗುತ್ತದೆ.

೦ ೦ ೦ ೦

ಉಪ್ಪು ಬೆರೆಸಿದ ನಿಂಬೆ ರಸವನ್ನು ದಂಡದ ಸಾಮಾನಿಗೆ ಹಚ್ಚಿ ತೊಳೆದರೆ ಕೊಳೆ ಕಾವ ಹಳದಿ ಕಲೆ ಸ್ಥಾಳದಲ್ಲಿ ಹೋಗುತ್ತದೆ.

ಕರ್ನಾಟಕ ಸ್ಕೀ ಸೆಟ್ ಪ್ಲೌಂಡಿನ ವಿದ್ಯಾರ್ಥಿಗಳು ಅಧ್ಯಾಪಕರು ಸುತ್ತು ಆಡಳಿತ ಸಮಿತಿಯವರು ನಿನ್ನು ಉಪಸ್ಥಿತಿಯನ್ನು ಅಪೇಕ್ಷಿಸುತ್ತ ಸ್ವಾಗತವನ್ನು ಕೋರುವರು.

ಎ. ಬಿ. ಶೆಟ್ಟಿ ಸ್ಕಾರಕೆ ವಿದ್ಯಾರ್ಥಿ

ನಿಲಯ, ಮೈಸೂರು

ಇದರ ಸರ್ವ ಸದಸ್ಯ ಸಭೆಯು ತಾ. ೧೦—೯—೬೭ನೇ ಭಾನುವಾರ ಬೆಳಿಗ್ಗೆ ೧೦ ಗಂಟೆಗೆ ನಿಲಯದ ಆವರಣದಲ್ಲಿ ಶ್ರೀ ಕೆ. ದೇವುಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಲಿದ ಎಂದೂಸಭೆಯಲ್ಲಿ ರೆಜಿಸ್ಟರಿಕೃತ ಪ್ರಥಮ ಬರಚೇಕೆಂದೂ ಕಾರ್ಯದರ್ಶಿ ಶ್ರೀ ಎ. ರಾಮಣ್ಣ ಅವರು ಸೂಚಿಸುತ್ತಾರೆ.

ಪ್ಲಾನ್ ಡೇ ಸಮಾರಂಭ

ಉಡುಪಿ, ಮಣಿಪಾಲ್‌ಗಾಂಧಿ ಮೆಮೋರಿಯಲ್ ಕಾಲೇಜಿನ ಪ್ಲಾನಿಂಗ್ ಫೋರಂನ ಪ್ಲಾನ್ ಡೇ ಸಮಾರಂಭವು ತಾ. ೩೧.೮.೬೭ ರಂದು ಕಾಲೇಜಿನ ಪೀಠಾಂಗ್ರಣ ಮಂಟಪದಲ್ಲಿ ಶ್ರೀ ಟಿ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ನೆರವೇರಿತು. ಆರಂಭದಲ್ಲಿ ಕಾರ್ಯದರ್ಶಿಗಳ ಲೆಕ್ಕಾಚಾರಾದ ಶ್ರೀ ಜಯಶಂಕರ ಶೇಕರು ಸ್ವಾಗತಿಸಿ, ಪುಷ್ಪಕೋಶ ಸಂಪ ಸಂದೇಶಗಳನ್ನು ಓದಿದರು. ಅಧ್ಯಕ್ಷ ಶ್ರೀ ಟಿ. ಎ. ಪೈಗಳು ತಮ್ಮ ವಿಚಾರಪೂರ್ಣ ಭಾಷಣದಲ್ಲಿ ಭಾರತದ ವಿವಿಧ ಯೋಜನೆಗಳು, ಅವುಗಳ ಆ ವ್ಯಯ ಆರ್ಯಾತ್ಮ, ಬ್ಯಾಂಕಿನ ಸಾಮಾಜಿಕ ಜವಾಬ್ದಿ ಮೊದಲಾದುವನ್ನು ವಿವರಿಸಿದರು. ಪ್ರೊ. ಕೆ. ಎಸ್. ಹರಿಪ್ರಸಾದ ಭಟ್ಟರು ಶ್ರೀ ಪೈಗಳ ಅನುಭವ ಪೂರ್ಣ ಭಾಷಣವನ್ನು ಕನ್ನಡೀಕರಿಸಿ ಮಾಡಿದರು. ಶ್ರೀ ಸಾ.ರೇಂದ್ರನಾಥ ಪೈಗಳು ನಂದನೆಗಳನ್ನರ್ಪಿಸಿದರು. ಮಾನಿಪಾಲ್ ಕಾರ್ಯಕ್ರಮದೊಂದಿಗೆ ಸಮಾರಂಭ ಸಮಾಪ್ತಿಯಾಯಿತು.

ಆಧುನಿಕ ಶಾಕುಂತಲಾ

(ಎರಡನೇ ಪುಟದಿಂದ)

"ಮಂತ್ರಿ ಇರಲಿಲ್ಲವೇ ಸಾರ್! ರಾಮರಾಜ್ಯದಲ್ಲಿಯೂ ಒಬ್ಬ ಮಂತ್ರಿಯಿದ್ದ. ದಶರಥ, ಧೃತರಾಷ್ಟ್ರರ ಆಡಳಿತೆಯಲ್ಲಿ ಈಗಿನಷ್ಟು, ಮಂತ್ರಿಗಳಿದ್ದಿಲ್ಲವಂತೆ. ಈಗ ರಾಜರ ಬದಲಾಗಿ ಜನ್ರೂ ಅಥವಾ ಹೆಚ್ಚು ಮಂತ್ರಿಗಳು! ಯೂಕೆನಾರ್?"

"ಪ್ರಜಾಪ್ರಭುತ್ವವಲ್ಲವೆ?...."

'ಇರ್ರಿ, ಸಾರ್! ಮಂತ್ರಿ ಸಂಕಾನವಾದರೂ ಬೆಳೆಯಲಿ. ಅವರ ಕುಟುಂಬಗಳಾದರೂ ಸಮೃದ್ಧಿಯಿಂದಿರಲಿ...'

'ಜನರ ಪ್ರತಿನಿಧಿಗಳ ನಿರ್ಣಯವೇ ಪ್ರಜಾಪ್ರಭುತ್ವದಲ್ಲಿ ಶಸನು ಪನಿತ್ರ...'

"ಎಲ್ಲರೂ ಮಂತ್ರಿಗಳು ಆಗಬೇಕಾದರೆ ಇನ್ನೆಷ್ಟು ಪಂಚವಾರ್ಷಿಕ ಯೋಜನೆ ಅರ್ಧಾತ್ ಮಂತ್ರಿಯಾಗುವ ಯೋಜನೆ ಬೇಕಾದೀತು?..."

'ಅದೇ ನಮ್ಮ ಪರಂಪರಾಗತ ಗುರಿ. ಅದಕ್ಕೇ ದೇವ ಲೋಕದ ಎಲ್ಲರೂ ದೇವರ್ಕಳೆಂದು ಪರಿಗಣಿಸಲ್ಪಟ್ಟಿದ್ದುದು.'

"ಸ್ವಲ್ಪ ಈ ಮಂತ್ರಿಗಳಾದರೂ ಆ ಲೋಚಿಸಬೇಕು, ಸಾರ್! ಇದು ಶನು ಜೀವಿಗಳ ಕಾಲ. ಕವಿಗಳೂ ಸಾಹಿತಿಗಳೂ ಬೆವರಿನ ಧಾರ್ಮ್ಯವನ್ನು ಎತ್ತಿತೋರಿಸಬೇಕಾದ ಪರ್ವಕಾಲ."

'ಹಾಗೆಂದರೆ?...'

"ಭಾವ, ರಸ, ಶೃಂಗಾರ....ಗಳಿಗಿಂತಲೂ ನಿತ್ಯ ಜೀವನ ಸಮಸ್ಯೆಗಳಿಗೂ ಬೆವರಿಳಿಸಿ ದುಡಿಯಬೇಕಾದ ಪ್ರಾಧಾನ್ಯಕ್ಕೂ ಪ್ರಥಮ ಪ್ರಾಶಸ್ತ್ಯ ಬೇಕು. ಅಂತಹ ನಾಟಕಗಳು, ಕತೆಗಳು, ಕಾದಂಬರಿಗಳು ಸಾವಿರಾರು ಬೇಕು..."

'ಶ್ರಮಜೀವಿಗಳನ್ನೂ ದಾರಿದ್ರ್ಯವನ್ನೂ ಕಾಳಿದಾಸ ಕಂಡಿದ್ದಾನೆ.... ಒಳ್ಳೆಯದು. ಕತೆದು ಹೋಗಿವ್ವಾವಾದರೆ ಇನ್ನು ಬರಬೇಕಷ್ಟೆ. ಈಗಲಂತೂ...'

"ಇವನ್ನೆಲ್ಲಾ ಪಾಠ ಮಾಡಿ ಒಳ್ಳೆಯ ಬ್ಯಾಗ್ರಂಡ್ ಕಾತಿದ ನಾಟಕವಾದರೆ ನಮ್ಮ ಪ್ರಶದ ಪ್ರಧಾನ ಸಮಸ್ಯೆಗಳ ಪರಿಹಾರಕ್ಕೆ ಸಲಭವಾಗಬಹುದು."

"ಶಾಳಿದಾಸನ 'ಶಾಕುಂತಲ'ವನ್ನು ಜರ್ಮನರೂ ರಶಿಯನ್ನರೂ ಮೆಚ್ಚಿದ್ದಾರೆ..."

'ಹಾಗಾದರೆ ಆದೂ ಒಳ್ಳೆಯ ನಾಟಕವಾಗಿರಲೇ ಬೇಕು. ನೋಡಿದರು ಇತ್ತೀಚೆಗೆ ಮಲೆಯಾಳದ "ಚೆಮ್ಮೀನ್" ರಶ್ಯಾದಲ್ಲಿಯೂ ಪ್ರಶಸ್ತಿಗಳಿಸಿತ್ತು.....ಒಳ್ಳೆಯದಕ್ಕೆಲ್ಲದೆ ರಶಿಯನ್ನರು ಪ್ರಶಸ್ತಿ ನೀಡರು..."

ಉಡಿ ಮುನ್ಸಿಫ್ ಕೋರ್ಟಿನಲ್ಲಿ

R. E. P. No. 332/66

ಅನಂತ ಪದ್ಮನಾಭ ಅಡಿಗ —ಅರ್ಜಿದಾರ ಮತ್ತು

K. ಮನ್ವಪ್ಪ—ಪಪ್ಪು ಗುರಿಕಾರನ ಮಗ-ಕೊಡುವೂರು ಗ್ರಾಮ —ಎದ್ರಿ

ಅರ್ಜಿದಾರನು ಜಪ್ತಿಮಾಡಿ ಏಲಂಗೆ ಆಜ್ಞೆ ಪಿಸಿದ ಸ್ಥಾಸ್ತಿಗಳ ಏಲಂನ ಶರತ್ತುಗಳ ನಿರ್ಣಯದ ಬಗ್ಗೆ ತಾ. 14—9—67ಕ್ಕೆ ಇಟ್ಟದೆ. ಎದ್ರಿಯು ಸದ್ರಿ ದಿವಸ ಮೇಲಿನ ಆ ಮೂಲಜ್ಞಾಪಿಯಲ್ಲಿ ಮೇಲ್ಕಂಡ ಕೋರ್ಟುಮುಂದೆ ಹಾಜರಾಗಿ ಮನವಿಮಾಡಿ ಕೊಳ್ಳಬೇಕು

(Sd.) Gratian C. Rego.

Pleader for Petitioner.

ತಾರೀಕು 21—8—67

ಭಗವಂತನಲ್ಲಿ ಪೂರ್ಣ ಭರವಸೆಯಿಡುವಿಕೆ:—

ಶರಣಂಗತಿ

ಲೇಃ — ಶ್ರೀ ಸುರತ್ಕಲ್ ರಾಮಕೃಷ್ಣ ಹೆಬ್ಬಾರ್.

ಸಂಸ್ಕೃತದಲ್ಲಿ ಒಂದು ಶ್ಲೋಕವು ಹೀಗೆ ಹೇಳುತ್ತಿದೆ:—

ಕಾಯೇನ ವ ಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾತ್ಮನಾವಾ ಪ್ರಕೃತೇಃ ಸ್ವಭಾವಾತ್ |
ಕರೋಮಿಯದ್ಯತ್ಸಕಲಂ ಪರಸ್ಮೈನಾ
ರಾಯಣಾಯೇತಿ ಸಮರ್ಪಯಾಮಿ ||

ಅಂದರೆ ಶರೀರದಿಂದಲೂ, ಮಾತಿನಿಂದಲೂ, ಮನಸ್ಸಿನಿಂದಲೂ ಅಂತಃಕರಣದಿಂದಲೂ, ಬುದ್ಧಿಯಿಂದಲೂ, ಆತ್ಮದಿಂದಲೂ, ಪ್ರಕೃತಿಯಿಂದಲೂ, ಪೀಲದಿಂದಲೂ ಯಾವ ಯಾವ ಕೆಲಸಗಳನ್ನು ಮಾಡುತ್ತಾನೆಯೋ ಅವೆಲ್ಲವನ್ನೂ ಶ್ರೀ ಮನ್ನಾರಾಯಣನಿಗೇ ಅರ್ಪಿಸಬೇಕು ಎಂಬುದೇ ಇದರ ಅರ್ಥ. ಅಂತೆಯೇ ಭಗವದ್ಗೀತೆಯೂ ಹೀಗೆ ತಿಳಿಸಿದೆ—

"ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕ ಶರಣಂ ವ್ರಜ' ಅರ್ಥಾತ್ ಸರ್ವ ಆಭಿನಯಗಳನ್ನೂ ತ್ಯಜಿಸಿದ ನಂತರವೇ ನನ್ನ ಆಶ್ರಯಕ್ಕೆ ಬಾ ಬೇಕೆಂದೇ ಶ್ರೀ ಕೃಷ್ಣನ ಅಭಿಮತ.

ಮಹಾಭಾರತದ ಮಹಾ ಸತಿ ದ್ರೌಪದಿಯನ್ನು ಇಲ್ಲಿ ಉದಾಹರಿಸಬಹುದು.

ದ್ರೌಪದಿಯು ಶ್ರೀಕೃಷ್ಣ ಭಗವಂತನ ಮಹಾ ಭಕ್ತೆ. ಅಂದು ದುರ್ಯೋಧನನ ತಂಬು ಸಭೆಯಲ್ಲಿ ದುರುಳನಾದ ದುಶ್ಶಾಸನನು ದ್ರೌಪದಿಯ ಸೀರೆಯನ್ನು ಎಳೆದೆಳೆದು ಮಾನಭಂಗಗೊಳಿಸುತ್ತಿರುವಾಗ, ಆ ಅಬಲೆಯು ಶ್ರೀಕೃಷ್ಣನಿಗೆ ಅದಿವ್ಯ ಬಾರಿ ಮೊರೆ ಹೊಕ್ಕಳು! ಕೃಷ್ಣಾ! ಕೃಷ್ಣಾ! ಎಂದು ಅದೆಷ್ಟು ಧ್ಯಾನಿಸಿದಳು!

ನಾಥರಿಲ್ಲದ ಶಿಶುಗಳಿಗೆ ನೀ
ನಾಥ ಸ್ವಗೋವಿಂದ ಸಲಹೈ
ಯೂಥಪತಿಗಳು ಬಿಸುಟ ತಂಡಿಗೆ
ಕೈಯೆಯನೀ ಮೂಡೈ|
ನಾಥರಿಲ್ಲೆನ್ನಗಿಂಬು ದೀನಾ
ನಾಥ ಬಾಂಧವ ನೀನೆಲ್ಯೆವರ
ವೈಧಿಲೀ ಸತಿ ಮನ್ನಿಸೆಂದೊರಲಿ
ದಳು ಮೃಗನಯನೆ||

ನಂದಗೋಪ ಕುಮಾರ ಗೋಪೀ
ವೃಂದ ವಲ್ಲಭ ದೈತ್ಯ ಮರ್ದನ ಮುಕುಂದ ಮುರಹರ ಭಕ್ತ ವತ್ಸಲ ಫಣಿ
ಕೃಷ್ಣಾ ಜಲಧೆ|
ನೊಂದೆನ್ನೆ ಗುಗ್ಗಾದೆನ್ನೆ ಗೋ
ವಿಂದ ಕೃಪೆ ಮಾಡಕಟೆನುತ ಮೂ
ಜೇಂದು ಮುಖಿ ಹಲುಬಿದಳು
ಬಲುತೆರದಿಂದ ಲಚ್ಚಿತನ||

ಆದರೇನು ಶ್ರೀಕೃಷ್ಣನು ಬಂದನೇನು? ಇಲ್ಲ. ಅವನಿಗೇನು ಕೇಳಿಸದೇ! ದ್ರೌಪದಿಯು ಏನು ಮಾಡಿಯಾಳು? ಕೊಟ್ಟಕೊನೆಗೆ ದ್ರೌಪದಿಯು ತಾನು ಹಿಡಿದು ಕೊಂಡಿದ್ದ ಸೀರೆಯನ್ನು ಬಿಟ್ಟೇ ಬಿಟ್ಟಳು ನೀನೇ ಗತಿ—ಅನ್ಯಥಾ ಶರಣಂ ನಾಸ್ತಿಯೆಂದು ದೇವರ ನೇಲೇ ಭರವಸೆಯಿಟ್ಟು ಸೀರೆಗೆ ಹಿಡಿದಿದ್ದ ತನ್ನ ಕೈವಸ್ತ್ರವನ್ನು ಬಿಟ್ಟೇ ಬಿಟ್ಟಳು. ಆಯ್ಯೋ! ದ್ರೌಪದಿಯ ಮಾನ ಹೋಯಿತು ಎಂದು ಹೇಳುತ್ತಿರುವಾಗಲೇ ಶ್ರೀಕೃಷ್ಣನು ಬಂದು ಸೀರೆಯನ್ನು ಅಪ್ಪಯಗೊಳಿಸಿದನು! ಭಕ್ತ ಬಾಂಧವನಲ್ಲವೇ?

ಅದರಂತೆಯೇ ಶಿವ ಭಕ್ತ ನೋರ್ವನು ಅತ್ಯಂತ ಬೆಲೆ ಬಾಳುವ ವಸ್ತುಗಳನ್ನು ಹಿಡಿದುಕೊಂಡು ಕಾಡಿನಲ್ಲಿ ಮುಂದುನಡೆಯುತ್ತಿದ್ದಾಗ ಕಳ್ಳರ ಗುಂಪು ಅವನನ್ನು ಮುತ್ತಿಗೆ ಹಾಕಿತು. ಭಕ್ತನು ಹೆದರಿ ಪಡುಗುತ್ತಾ ಶಿವಧ್ಯಾನ ಮಾಡುತ್ತಾ ರಕ್ಷಿಸೆಂದು ಬೊಬ್ಬಿಟ್ಟನು. ಭಕ್ತ ಧ್ಯಾಂಧವನಾದ ಶಂಕರನು ಕೂಡಲೇ ಅವನಿದ್ದಲ್ಲಿಗೆ ಧಾವಿಸಿದನು. ಆದರೆ ಆ ಭಕ್ತನು ತನ್ನ ರಕ್ಷಣೆಗಾಗಿ ಒಂದು ಕಲ್ಲನ್ನು ಕೈಯಲ್ಲಿ ಹಿಡಿದುಕೊಂಡು ಆ ಕಳ್ಳರ ಕಡೆಗೆ ಹೊಡೆಯಲು ನೋಡುತ್ತಿದ್ದನು. ಇದನ್ನು ಕಂಡು ಶಿವನು ಕೂಡಲೇ ಹಿಂದೆ ಹೋದನು.

ಒಟ್ಟಿನಲ್ಲಿ ತನ್ನ ರಕ್ಷಣೆಗಾಗಿ ಯಾವನು ಹಂಬಲಿಸುತ್ತಾನೋ ಅವನಿಗೆ ದೇವನೊಲಿಯುವನು. ದೇವರಲ್ಲಿ ಸಂಪೂರ್ಣ ಭರವಸೆ ಬೇಕು.



ಬೇರೆ ಕಾಣೆ ಜೀವದಿ

ನಿನ್ನ ಸ್ಮರಿಸುತೆ ನಿನ್ನ ನೆನೆಯುತೆ
ನನ್ನ ಜೀವನ ಪೂಕಿದೆ
ನಿನ್ನ ವಿರಹದಿ ನಿನ್ನ ತಾಪದಿ
ನನ್ನ ಬವಣೆಯೆನಿತದು
ರೂಪವೆಂದರೆ ಚಂದ್ರನಂತೆ
ನನ್ನ ಕಣ್ಣಿಗೆ ಕಾಣುವೆ
ನಿನ್ನ ಸುಖವದು ನನಗೆ ಸ್ವರ್ಗವು
ಆಂದ ಚಂದದ ಕಾಲವು ||
ಪ್ರೇಮ! ಪ್ರೇಮ!! ಪ್ರಿಯೆಯೆಂದು
ನೂರು ಬಾರಿ ಕೂಗಿದೆ
ನನ್ನ ಧ್ವನಿಗೆ ಸ್ವರ್ಗಗಿಳಿದು
ನನ್ನ ಬಳಿಗೆ ಬಾರದೆ ||
ಬಾನದಲ್ಲಿ ಯಾವ ಕಾರ್ಯಕೆ
ನನ್ನ ದೂಡಿ ಓಡಿದೆ
ನನ್ನ ಜೀವನ ನೊಂದು ಬಳಲಿತು
ಅಂದ ಮುಖವು ಬಾಡಿದೆ ||
ರಾತ್ರಿಯಲ್ಲಿ ನಿನ್ನೆ ಬರದು
ಆಕ್ಷಿಯಲ್ಲಿ ಕಂಬನಿ
ಜಗವುವೆಲ್ಲ ಬರಿಯ ಹಾಳು
ನೀನು ಹೋದ ಲೋಕದಿ ||
ನೀನು ಹಾಕಿದ ದಾರಿಯಲ್ಲಿ
ನಡಿಯುತಿರುವೆ ಮಂದನಾಗಿ
ದಾರಿ ಸಾಗದೆ ದಣಿವು ತುಂಬಿದೆ
ಅಂತರಾತ್ಮವು ಬೆಂಬಿದೆ ||
ನೀರಿನಿಂದ ಹೊರಗೆ ಬಂದ
ಮೀನಿನಂತೆ ಬಳಲಿದೆ
ಬಾನದಲ್ಲಿ ಹೋಡ ಮುಟ್ಟಿ,
ದಾರಿ ಕಾಣದು ಕಣ್ಣಿಗೆ ||
ಕೈ ಹಿಡಿದವ ದಾರಿ ತೋರಿ
ನಡಿಸು ನನ್ನನು ಲೋಕದಿ
ರಾತ್ರಿ ಹಗಲು ನಿನ್ನ ಸ್ಮರಣೆ
ಬೇರೆ ಕಾಣೆ ಜೀವನಿ ||

—ಕವ-ಆಾತನೆಯು ಕೃಷ್ಣ

ಜನಪದ ಗೀತೆ

ಬಿಟ್ಟು ಬಿಡಲಾರೆ

ಟಿ

ಹಂಪೆ ಪಟ್ಟಣವಾಗಿ ಹಂವಾಸತಿ ದೊರೆ ಯೂಗಿ
ಹಂಪನಮ್ಮನಂಬೋ ನೆರೆ ಸೊಸೆ | ನಮ ನಿದ್ದರೆ
ಹಂನೆಯ ಬಿಟ್ಟು ಬರಲಾರೆ||

ಕಲ್ಯಾಣ ಪಟ್ಟಣವಾಗಿ ಬಸವಣ್ಣ ದೊರೆಯೂಗಿ
ನೀಲಮ್ಮನೆಂಬೋ ನರೆಹೊರೆ| ನಮ ನಿದ್ದರೆ
ಕಲ್ಯಾಣ ಬಿಟ್ಟು ಬರಲಾರೆ||

ಕಾಶಿ ಪಟ್ಟಣವಾಗಿ ನಿಶ್ವನಾಥನ ದೊರೆ ಯೂಗಿ
ವಿಶಾಲಾಕ್ಷಿ ಎಂಬೋ ನರೆ ಬಂ ರೆ| ನಮ ನಿದ್ದರೆ
ಕಾಶಿಯ ಬಿಟ್ಟು ಬರಲಾರೆ||

ಸಂಗ್ಯಾಪಳ್ಳಿ ಬೋ ಪ ನಿಶ್ವನಾಥ

ಹಾಡಿದವರು. ತಿಪ್ಪೇ ಸ್ವಾಮಿ
(ಕೃಪಾನಸಾಗರ)

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿ

ವಾರ್ಷಿಕ ಚಂದಾ ರೂ. ೧೦.

NAVAYUGA 7—9—1957
Registered with the Registrar of News Papers for India under No. R. N. 3546/'57

REGD. No: B. G. 176
LICENCE No. 31
Licensed to Post without Prepayment

ಹರಟೆ

ಭ್ರಷ್ಟಾಚಾರ

ಬರೆದವರು: ಶ್ರೀ ಸ. ನಾರಾಯಣ.

ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದವನಂತೆ, ತಲೆಯ ಮೇಲೆ ಕೈ ಹೊತ್ತು ಕುರ್ಚಿಯಲ್ಲಿ ಯೋಚಿಸುತ್ತಾ ಕುಳಿತಿದ್ದೆ. ಹೊತ್ತು-ಗೊತ್ತುಗಳ ಪರಿವೆಯೇ ನನಗಿರಲಿಲ್ಲ.

ನನಗೆ ಎಚ್ಚರವಾಯಿತು.

"ಇದೇನ್ರೀ ಒಳ್ಳೆ ಬಕ ಪಕ್ಷಿ ಯೋಚನೆ ಮಾಡಿದ ಹಾಗೆ ಮಾಡುತ್ತಿದ್ದೀರಿ' ಎನ್ನುತ್ತಾ ನನ್ನವಳು ಕೋಣೆಯಲ್ಲಿ ಪ್ರವೇಶಿಸಿದಾಗ-ಬಕನಕ್ಕೆಯೂ ಇಲ್ಲ ಚಾತಕಪಕ್ಷಿಯೂ ಇಲ್ಲ" ಎಂದೆ ಸೋತ ಧ್ವನಿಯಲ್ಲಿ.

ಮಂಚದ ಮೇಲೆ ಕುಳಿತು ಕೊಳ್ಳುತ್ತಾ ನನ್ನ ಆರ್ಧಾಂಗಿ "ಯೂಕೋ ಇವತ್ತು ಒಂದು ತರಹಾ ಇದ್ದೀರಲ್ಲಾ...ಏನಾದ್ರೂ ಆಫೀಸಿನಲ್ಲಿ ಮಂಗಳಾರತಿ...." ಎಂದಳು.

'ನಿನ್ನ ಕಟ್ಟಿಕೊಂಡ ಮೇಲೆ ಎಲ್ಲ ಆಗುತ್ತದೆ; ಯೂವುದಕ್ಕೇನು ಕಡಿಮೆ'

'ಅದಿರ್ಲಿ---ಅದೇನು ಯೋಚನೆ ಗೊತ್ತಾಗಲಿಲ್ಲವಲ್ಲ" ಎಂದಳು.

"ರಾಷ್ಟ್ರವಾಣಿ ಪತ್ರಿಕೆ ಸಂಪಾದಕರು ಅವರ ವಿಶೇಷ ಸಂಚಿಕೆಯೊಂದಕ್ಕೆ ಹರಟೆ ಬೇಕು, ಬರೆದು ಕಳುಹಿಸಿ'—ಎಂದು ಕಾಗದ ಬರೆದಿದ್ದಾರೆ. ಹರಟೆಗೆ ಯೂವ ವಿಷಯವೂ ತೋಚುತ್ತಿಲ್ಲ" ಎಂದೆ.

"ನಿಮಗೇನ್ರೀ, ದೊಡ್ಡ ಸಾಹಿತಿಗಳು... ವಿಷಯಕ್ಕೇನು ಕಡಿಮೆ...ನಾಯಿ ಬೊಗಳಿದ್ದೂ ವಿಷಯ, ಬೆಕ್ಕು ಅರಚ್ಚಿದ್ದೂ ವಿಷಯ...'

'ಕತ್ತೆ ಒದ್ದದ್ದೂ ವಿಷಯವೇ"

'ನೀವು ಸರಸ್ವತಿ ಅವರಾವತಾರ' ಎಂದಳು ಕತ್ತು ಕೊಂಕಿಸಿ ವಯ್ಯಾರದಿಂದ.

ಸ್ವಲ್ಪ ಹೊತ್ತು ಮೌನ ಆವರಿಸಿತು.

ನನ್ನ ಬಳಿಗೆ ಬಂದು ಮೃದುದನಿಯಲ್ಲಿ 'ಏನೂಂದ್ರೀ' ಎಂದಳು.

ಅವಳ ಮುಖವನ್ನೇ ದಿಟ್ಟಿಸುತ್ತಾ 'ಹಾಗಂದ್ರೆ....'ಎಂದೆ.

'ನೀವೇನೂ ತಿಳಿದುಕೊಳ್ಳುವುದಿಲ್ಲ ಅಂದ್ರೆ ಒಂದು ಮಾತು" ಎಂದು ಹಗಲ ಮೇಲೆ ಕೈ ಹಾಕಿದಳು.

"ಅಯ್ಯೋ ನನ್ನ ಚಿನ್ನ, ಮೂತಿಗೆ ಎದುರುಂಟೆ. ಏನು ಹೇಳು" ಎಂದೆ.

ಅವಳ ಮುಖ ಹಿಗ್ಗಿನಿಂದ ಅರಳಿತು.

'ನಾನೇ ಒಂದು ಹರಟೆ ಬರೆದು ಕೊಡುತ್ತೇನು; ಕಳುಹಿಸುತ್ತೀರಾ' ಎಂದಳುಬೇಡಿಕೆಯ ದನಿಯಲ್ಲಿ.

ನನಗೆ ಚೇಳು ಕಡಿದಂತಾಗಿತ್ತು.

'ನನ್ನಿಂದ ಸಾಹಿತ್ಯರಂಗ ಉದ್ಧಾರವಾಗಿರೋದೆ ಸಾಕು ಕಣೆ. ನಿನ್ನಿಂದ ಆ ಸಾಹಿತ್ಯದೇವಿ ಸೇವೆಯನ್ನೇನು ಬಯಸುವುದಿಲ್ಲ. ನೀನು ಗಂಭೀರವಾಗಿರು....ನೀನು ಹರಟೆ ಬರೆದ ಹಾಗೆ ಆಯ್ತು' ಎಂದೆ.

"ನಿಮ್ಮ ಜಾತಿ ಹೆಣೀ ಬರಹವೇ ಇಷ್ಟು."

'ಕೈ ಹಿಡಿದ ತಪ್ಪಿಗೆ ನೀನು ನನ್ನನ್ನು ಬೈದುಕೋ. ನಮ್ಮ ಜಾತಿ ಏನು ಮಾಡಿತು?'

"ಮೊದಲೇ ಗಂಡಸು ಜಾತಿ. ಅದರಲ್ಲಿಯೂ ಸಾಹಿತಿ ಜಾತಿ. ಇನ್ನೊಬ್ಬರ ಏಳಿಗೆ, ಅಭಿವೃದ್ಧಿ ನೋಡಿ ಸಹಿಸುವವರಲ್ಲ" ಎಂದಳು ಕಟುವಾಗಿ.

'ನೀವೆಲ್ಲ ದುರ್ವಾಸರ ವಂಶಸ್ಥರೆಂದು ಕಾಣುತ್ತದೆ'

"ಹೋಗಲಿ ಬಿಡಿ ನಿವ್ ಗೇಕೆ ನನ್ನಿಂದ ತೊಂದರೆ?"

"ಹಾಗಲ್ಲ ಕಣೆ"

"ಹಾಗೂ ಇಲ್ಲ ಹೀಗೂ ಇಲ್ಲ" ಎಂದು ಮಂಚದ ಕಡೆಗೆ ನಡೆದಳು.

ತೋಚಿದುದನ್ನು ಎಂಟು ಪುಟಗಳಷ್ಟು ಗೀಜಿ ಮುಗಿಸಿದೆ. ಆಗಲೇ ಮಧ್ಯ ರಾತ್ರಿ ಎರಡು ಗಂಟೆಯಾಗಿತ್ತು. ನನ್ನವಳು ನಿದ್ರಾದೇವಿಗೆ ಶರಣಾಗಿದ್ದಳು.

"ಅವಳಿಗೆ ಹಾಗೆನ್ನ ಬಾರದಿತ್ತು" ಎಂದಿತು—ಮನಸ್ಸು.

ಮರುದಿನ ಎಂದಿನಂತೆಯೇ ಹೆಸರನ್ನುಳಿಯಾಗಿದ್ದಳು. ಳಳೆದ ರಾತ್ರಿಯ ಮಾತನಿಂದ ಯಾವ ಬಗೆಯ ಕೋಪವೂ ಅವಳಲ್ಲಿ ಇರುವಂತಿರಲಿಲ್ಲ. ಎಷ್ಟೋ ಸಮಾಧಾನವಾಯಿತು. ನಾನಾಗಿಯೇ ರಾತ್ರಿಯ ಸಂಗತಿಯನ್ನೂ ಮತ್ತೆ ಪ್ರಸ್ತಾಪಿಸಲು ಮುಂದಾಗಲಿಲ್ಲ.

ಕಛೇರಿಗೆ ಹೋಗಲು ಬಟ್ಟೆ ಧರಿಸುತ್ತಿದ್ದೆ, ಕಾಫಿ ಬಟ್ಟಲೊಂದಿಗೆ ಕೋಣೆಯೊಳಕ್ಕೆ ಪ್ರವೇಶಿಸಿ ಮುಗುಳ್ನಗುತ್ತಾ 'ರಾತ್ರಿ ಹರಟೆ ಬರೆದು ಮುಗಿಸಿದಿರಾ' ಎಂದಳು.

"ಹೂ ಕಣೆ ಮುಗಿಸಿದೆ. ಬರೆಯದೆ ಹೋದರೆ ಸಂಪಾದಕರಿಗೆ ಕೋಪ, ಸುಮ್ಮನೆ ಗೋಳಾಡಿಸುತ್ತಾರೆ' ಎಂದೆ.

"ನೀವು ಭಾರಿ ಬರಹಗಾರರು ಕಣ್ರೀ" ಎಂದಳು ಹೆಮ್ಮೆಯಿಂದ.

ಕಾಫಿಕುಡಿದುಮುಗಿಸಿ ಬಟ್ಟಲನ್ನು ಅವಳ ಕೈಗೆ ಕೊಡುತ್ತಾ "ಅಂದ ಹಾಗೆ ಒಂದು ವಿಷಯ ಮರೆತಿದ್ದೆ ಕಣೆ. ಹರಟೆ ಬರೆದಿಟ್ಟಿದ್ದೇನೆ. ದಯವಿಟ್ಟು ಕವರನಲ್ಲಿ ಹಾಕಿ ರಾಷ್ಟ್ರವಾಣಿ ಸಂಪಾದಕರ ಕಛೇರಿಯ ವಿಳಾಸಕ್ಕೆ ಕಳುಹಿಸಿ ಬಿಡು" ಎಂದೆ.

"ಅಷ್ಟು ಸೇವೆ ಮಾಡುವ ಭಾಗ್ಯವಾದರೂ ನನಗಿದೆಯಲ್ಲ" ಎಂದಳು ನನ್ನನ್ನು ಕೆಣಕುವ ದನಿಯಲ್ಲಿ.

'ನಾನು ಬೇರೆ—ನೀನು ಬೇರೆಯೇ.... ಚಿನ್ನ" ಎಂದೆ.

'ಅತ್ತಿಗೊಂದು ಕಾಲ ಸೊಸೆಗೊಂದು ಕಾಲ' ಎಂದು ಅಲ್ಲಿಂದ ಜಾರಿದಳು.

'ವೋಸ್ಪ್' ಮಾಡುವುದನ್ನು ಮರೆಯಬೇಡ ರಾಣಿ ..." ಎಂದು ಮತ್ತೊಮ್ಮೆ ಎಚ್ಚರಿಸಿ, ಕಛೇರಿಯ ಕಡೆಗೆ ನಡೆದೆ

ಎರಡು ತಿಂಗಳು ಕಳೆಯಿತು.

ಒಂದು ದಿನ—ಸಂಜೆ ಕಛೇರಿಯಿಂದ ನುನೆಗೆ ಮರಳಿದೆ.

ಕುರ್ಚಿಯಲ್ಲಿ ಕುಳಿತು ಹೊಸ ಸಂಚಿಕೆಯೊಂದರ ಪುಟಗಳನ್ನು ತಿರುವಿ ಹಾಕುತ್ತಾ ಕುಳಿತಿದ್ದಳು.... ರೇಡಿಯೋ ಯಾರ ಹಂಗೂ ಇಲ್ಲದೆ— 'ಸಿನಿಮಾ ಹಾಡು'ಗಳನ್ನು ಆರಚುತ್ತಿತ್ತು. ಅವಳ ಮುಖದಲ್ಲಿ ಹಿಂದೆಂದೂ ಇಲ್ಲದ ಸಂತಸದ ಕಳೆ ಮಾಡಿತ್ತು.

ಕೋಟು ಬಿಚ್ಚುತ್ತಾ "ಶುಂಬ ಸಂತೋಷವಾಗಿರುವಂತಿದೆಯಲ್ಲಾ ಅನ್ಮಾ ವ್ರು.... ಕಾರಣ ಕೇಳಬಹುದೋ"

"ಧಾರಾಳವಾಗಿ"

"ತವರುಮನೆಯಿಂದ ಕಾಗದವಸತ್ರ; ಬಾ ಅಂತ"

"ಸದಾತಿವಸನಿಗೆ ಅದೇ ಧ್ಯಾನ ಅಂತ ಒಂದು ಗಾದೆ" ಎಂದಳು.

ತ್ರಿವರ್ಣರಂಜಿತ ಮುಖಪುಟದಿಂದ ರರಾಜಿಸುತ್ತಿದ್ದ ರಾಷ್ಟ್ರವಾಣಿ ವಿಶೇಷ ಸಂಚಿಕೆಯನ್ನು ಅವಳ ಕೈಯಿಂದ ತೆಗೆದು ಕೊಳ್ಳುತ್ತಾ—

"ಯಾವಾಗ ಬಂತೇ" ಎಂದೆ.

ಇವತ್ತಿನ ಪೋಸ್ಟಿನಲ್ಲೆ"

"ಹರಟೆ ಬಂದಿದೆ ಏನೇ.... ಸಂಪಾದಕರು ದುಡ್ಡು ಕಳುಹಿಸಿದ್ದಾರೇನು" ಎಂದೆ ಆತುರದಿಂದ.

"ನಿಮ್ಮ ಹೆಸರಿನಲ್ಲಿ ಬರೆದಿರುವ ಹರಟೆ ಸ್ಪಷ್ಟವಾಗಿದ್ದರೆ ತಾನೆ ನಿಮಗೆ ಹಣ ಬರೋದು" ಎಂದಳು ನಿರ್ವಿಕಾರ ಮನೋಭಾವದಿಂದ.

"ಮತ್ತೆ, ಸಂಚಿಕೆ ಕಳುಹಿಸಿದ್ದಾರಲ್ಲೇ'

"ಯಾರು ಹರಟೆ ಕಳುಹಿಸಿದ್ದರೋ ಅವರಿಗೆ"

"ನಿನ್ನ ತಲೆ...ಇಷ್ಟೇನೆ ನಿನ್ನ ಮಾತು' ಎಂದೆ

"ಅವಳ ಒಗಟಿನಂತಹ ಮಾತನ್ನೂ ಅರ್ಥಮಾಡಿಕೊಳ್ಳಲು ನನ್ನ ಬುದ್ಧಿ ಅಷ್ಟು ಸೂಕ್ಷ್ಮವಾಗಿರಲಿಲ್ಲ.'

ಸಂಚಿಕೆಯನ್ನು ಕೈಗೆತ್ತಿಕೊಂಡು ಹಾಳೆ ತಿರುವುತ್ತಾ ನಡೆದೆ.

"ನನ್ನ ಹೆಸರು ಗೋಚರಿಸಲಿಲ್ಲ. ಕೊನೆಗೆ ಕಷ್ಟ ಪಟ್ಟು ನನ್ನ ಹರಟೆಮನ್ನು ಪತ್ತೆ ಮಾಡಿದೆ, ನನ್ನ ಹೆಸರಿಗೆ ಬದಲಾಗಿ ಲೇ....ಶ್ರೀಮತಿ....ರಾವ್' ಎಂದಿತ್ತು.

ನನಗೆ ಗಿಮಿಗಿಮಿ ತಿರುಗಿ ಬೀಳುವಂತಾಗಿತ್ತು.

"ನನ್ನವಳ ಕಡೆಗೆ ದೃಷ್ಟಿಹಾಯಿಸಿದೆ. ನಗು ಮೊಗದಿಂದಲೇ ನನ್ನ ಬಳಿಗೆ ಬಂದು ಕೈಯಲ್ಲಿದ್ದ ಕೋಟನ್ನು ತೆಗೆದು ಕೊಂಡಳು. ಕೂಡಲೆ ಅವಳ ಕೈ ಹಿಡಿದು 'ನಿಜ ಹೇಳೆ" ಎಂದೆ.

"ನಾನು ಸುಳ್ಳು ಹೇಳಿಲ್ಲವಲ್ಲ" ಎಂದಳು ವಾದಿಸುವ ಧಾಟಿಯಲ್ಲಿ.

'ದುಡ್ಡು ಬಂದಿದೆ ತಾನೆ'

'ಇಪ್ಪತ್ತೈದು ರೂಪಾಯಿ ಕಳುಹಿಸಿದ್ದಾರೆ"

"ಕೈ ಹಿಡಿದುದಕ್ಕೆ ಚೆನ್ನಾಗಿಯೇ ಕೈ ಕೊಟ್ಟೆ ಬಿಡು" ಎಂದೆ.

ಸಂಚಿಕೆಯನ್ನು ಮೇಜಿನ ಮೇಲಿಡುತ್ತಾ 'ಇನು ಒಂದು ಬಗೆಯ ಭ್ರಷ್ಟಾಚಾರ' ಎಂದೆ, ಅವಳ ಕಡೆಗೆ ನೋಡುತ್ತಾ.

ಮುಗುಳ್ನಕ್ಕು 'ನಾನು ಬೇರೆ, ನೀವು ಬೇರೆಯೇ?' ಎಂದಳು.

ಏನು ಉತ್ತರಿಸಬೇಕೆಂದು ನನಗೆ ತೋಚಲಿಲ್ಲ.

ವಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

(Letter Writing Made Easy)

ವಿವಿಧ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು

ಬೆಲೆ: ರೂ. 1-25 (ಟ.ಖ. ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ-ಮದ್ದು

(Home-Remedies)

ನೂರಾರು ಕಾಯಿಲೆಗಳಿಗೆ ಮನೆಯಲ್ಲೆ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹಪೈದ್ಯ.

ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ



14—9—1967

10 ಪೈಸೆ

ಚಾರಿತ್ರಿಕ ಕಥೆ

ಕೊನೆಗೂ ಆತ ನಾಯಲಿಲ್ಲ

ಬರೆದವರು: ಶ್ರೀ ಬಿ ನರಸಿಂಗ ರಾವ್.

ಮಧ್ಯ ಭಾರತದ ಗೊಂಡಾರಣ್ಯ. ನಾಲ್ಕೈದೆನೆಗಲ್ಲೂ ಗಾಢಾಂಧಕಾರ. ಸ್ಮಶಾನ ಶಾಂತಿಯಂತೆ ಎಲ್ಲೆಲ್ಲೂ ಮೌನ. ಕೀಟ ಗಳ ಝೇಂಕಾರಗಳು ಆಗಾಗ ಈ ಮೌನ ವನ್ನು ಒಡೆಯುತ್ತಿದ್ದವು. ಇಂತಹ ಭೀಕರ ಪ್ರದೇಶದಲ್ಲಿ ಮೂವರು ವ್ಯಕ್ತಿಗಳು ಏನೋ ಹಂಚಿಕೆಯಲ್ಲಿ ಮಗ್ನರಾಗಿದ್ದರು.

"ಮಹಾ ರಾಜಾ! ನಮ್ಮನ್ನು ನಾವು ಅಜೀವಪರ್ಯಂತವೂ ಮರೆಯಲಾರೆವು. ತಾವು ಆಜ್ಞೆಯಿತ್ತರೆಂತೆ! ನಮಗೆ ಕಾರಾಗಾರವೇನು, ಮೇಣಾದರೇನು? ಸ್ವಾತಂತ್ರ್ಯದ ವಾತಾವರಣವಷ್ಟೆ ನಮಗೆ ಬೇಕು."

"ಅದೆಲ್ಲಾ ಸರಿ ತಾಂತ್ಯಾ ಟೋಪಿ. ಆದರೆ....ಈ ಮಾನಸಿಂಹನಿಗೆ, ನಿನ್ನಂತಹ ಶೂರವನ್ನು ಬ್ರಿಟಿಷರ ಕೈಗಪ್ಪಿಸಲು ಎಳ್ಳಷ್ಟು ಇಚ್ಛೆ ಇಲ್ಲ ಆದರೆ ಮಾಡುವು ದೇನು? ಬೇರೇನು ಉಪಾಯವಿದೆ....!?"

'ಮಹಾರಾಜ್, ಹೀಗೆ ಧೈರ್ಯಪೇಶಗೊಳ್ಳಬಿರಿ. ಶತ್ರುಷ್ಣ ಕೇವಲ ಪ್ರಬಲನಷ್ಟೆ ಅಲ್ಲ, ಇಟಿಲನ್ನೂ ಆಗಿದ್ದಾನೆ. ನಮ್ಮ ಯೋಜನೆಯು ಬಹಳ ಗುಪ್ತವಾಗಿ, ನಾ ಜೂಕಾಗಿ ನಡೆಯಲಿ. ನಮ್ಮ ದೇಶಿಯ ನಾದರೋ ನಾವು ರಾತ್ರಿ ರಾತ್ರಿಯೇ ಇ ಲ್ಲಿಂದ ಎಬ್ಬಿಸುತ್ತೇವೆ. ಕದರ ಚಿಂತೆ ಯುನ್ನು ಬಿಟ್ಟು ಬಿಡಿ. ತಾನೇನು ಅನ್ನು ತ್ತೀರಾ ನಾರಾಯಣ ರಾವ್?" ಇದು ತಾಂ ತ್ಯಾಟೋಪಿಯ ಸ್ವರವಾಗಿತ್ತು.

ಇಷ್ಟರವರೆಗೆ ನಾರಾಯಣರಾವ್ ಮೌ ನವಾಗಿದ್ದ. ದೂರ ವಿಚಾರದಲ್ಲಿ ಮಗ್ನ ನಾಗಿದ್ದನೋ? ತಾಂತ್ಯಾಟೋಪಿಯ ಶಬ್ದವನ್ನು ಕೇಳಿ ಆತ ಭಾವ ಸಮಾಧಿಯಿಂದೆದ್ದಂತೆ. ಮತ್ತೆ ಸುತ್ತ ಲೂ ಕೇಸರಿಗುಂಡೆ ತಲೆಯನ್ನು ತಿರುಗಿ, ರಾಜನ ಕವಿಯಲ್ಲಿ ಏನೋ ಪಿಸುಗುಟ್ಟಿ ದ. ರಂಜನ ಮುಖದಲ್ಲೇನೋ ಭಾವ ಬದಲಾವಣೆ ಕಾಣಬಂತು. ರಾಜನೆಂದ "ನಾರಾಯಣರಾವ್ ಇದರ ಪರಿಣಾಮ ವಾದರೋ ಗಂಭೀರಕೇಕೆಸಿಕ್ಕು. ಇಂದು ಜನತ ತಾಂತ್ಯಾನನ್ನು ದೇವರೆಂದೇ ಮ ನ್ನಿಸಿದ್ದಾರೆ. ಆತನು ಆಜ್ಞೆಯಿತ್ತರೆ ಜನ ತ ಬೆಂಕಿಗೂ ಹಾರಲು ಸಿದ್ಧ. ಇಂಗ್ಲೀಷ ರು ತಾಂತ್ಯಾನನ್ನು ಗಲ್ಲಿಗೇರಿಸಿದ್ದಾರೆಂ ದು ಒಳಒಳಗೆ ಮತ್ತೆ ಜನತೆಯಲ್ಲಿ ಘೋರ ನಿರಾಶೆ ಕವಿದೀತು. ಸ್ವಾತಂತ್ರ್ಯ ಸಮರ ದ ಅಗ್ನಿಕುಂಡವು ಮತ್ತೆ ಎಂದೆಂದಿಗೂ ತಣಿದು ಹೋಗಿತು!"

ಮತ್ತೆ ನಾರಾಯಣರಾವ್ ನುಡಿದ— ಆದರೆ ರಾಜನ, ತಾವು ತಾಂತಜೆಕ್ಕರಾಗಿ ನನ್ನ ವಿಚಾರವನ್ನು ಕುರಿತು ಚಿಂತಿಸಿರಿ. ನೇತೃತ್ವವನ್ನು ತಾಂತ್ಯಾನ ಎಲರಿಗೆ ಒ ಡ್ಡುತ್ತೇನೆ, ಆದರೆ ತಾಂತ್ಯಾನ ಸ್ಥಾನದ ಲ್ಲಿ ನಾನೇ ಭಾಸಿ ಕಂಬಕ್ಕೆ ಗೋಣಾಗು ವ!" ಆತ ರಾಜನ ಹಾಗೂ ತಾಂತ್ಯಾನ ಮುಖದಲ್ಲಿ ಭಾವ ಬದಲಾವಣೆಯನ್ನು ನಿರೀಕ್ಷಿಸುತ್ತಾ ಇದ್ದ.

"ನಾರಾಯಣ ರಾವ್! ನಿನ್ನ ವಿಚಾರ ವಂಚನೋ ತೀರಾ ಭೀಕರವಿದೆ. ನನಗೋ ಸ್ವತ ನೀನು ಮೃತ್ಯುವನ್ನಪ್ಪುವುದೆ? ನನ್ನ ನ್ನು ಪಾಪದ ಬಲೆಗೊಡ್ಡುವ ವಿಚಾರವೇ ನು ನಿನ್ನದು?" ತಾಂತ್ಯಾ ಆತ್ಯಂತ ವ್ಯ ಗ್ರನಾಗಿ ನುಡಿದ.

"ತಾಂತ್ಯಾ, ತಾವು ಸಮಪ್ರದೇಶದ ಚಿಂತೆ ಮಾಡಿರಿ. ನಾರಾಯಣ ರಾವ್ ರಾಷ್ಟ್ರದ ಮುಂದೆ ಒಬ್ಬ ಕ್ಷುಲ್ಲ ಜಂತು.'

"ತಾವಿದನ್ನು ಸ್ವೀಕರಿಸಿಯೇ ತೀರಬೇ ಕು. ಶತ್ರುವನ್ನು ಧ್ವಂಸ ಮಾಡಲು ಇದ ರಿಂದಲೂ ಉತ್ತಮ ಉಪಾಯವಿರದು. ಶ ತ್ರುಗಳ ಕೈಗೆ ಬಿದ್ದು ಈ ಸ್ವಾತಂತ್ರ್ಯ ಯಜ್ಞಕ್ಕೆ ನೀರೆರಚುವುದು ಎಂದಿಂದಿಗೂ ಸಲ್ಲದು.' ರಾಜನ ಮೊತಿನಲ್ಲಿ ದೃಢತೆ ಯಿತ್ತು.

"ಸ್ವಾತಂತ್ರ್ಯ ಸಮರದ ಯಜ್ಞಕುಂ ಡವು ಶೂರ-ವೀರರ ಮೃತ್ಯುವಿನಿಂದ ತ ಣ್ಣಗಾಗದು, ಬದಲಾಗಿ ಅದರ ಜ್ವಾಲೆಗ ಳು ಇನ್ನೂ ಪ್ರಜ್ವಲಿಸುವುವು. ರಕ್ತಪಾತ ವಾಗದೆ ಈ ರಕ್ತಪಿಪಾಸಿಗಳು ತಣಿಯು ದು, ಮಹಾರಾಜಾ! ತಾವು ಕೊಂಚ ವಿ ಚಾರ ಮಾಡಿರಿಂತೆ. ಚಾಂತ್ರೆಯ ತಮ್ಮ ನ್ನೆಂದೂ ಕ್ಷಮಿಸಾದು. ಅಜನ್ಮಪರ್ಯಂ ತವೂ ತಮ್ಮ ಮೇಲೆ ಈ ಕಳಂಕವಿದ್ದೇ ಇ ರುವುದು. ಭವಿಷ್ಯದ ಪೀಳಿಗೆಗಳು ತಮ್ಮನ್ನು ದೇಶದ್ರೋಹಿ ಮಾನಸಿಂಹ, ಕೊಲೆಪಾತ ಕಿ ಮಾನಸಿಂಹ, ಒರ್ವ ಸನಾತನತಿಯನ್ನು ವಿನಾಕಾರಣ ನೇಣಿಗೆಡ್ಡಿದ ಮಾನಸಿಂ ಹ ಎಂದೇ ಕರೆದಾವು! ರಾಜಾಮಾನಸಿಂ ಹನ ಬದಲು ದೇಶದ್ರೋಹಿ ಮಾನಸಿಂ ಹ!! ತಾಂತ್ಯಾನ ಮೊತುದಲಿತ್ತು.

ರಾಜಾಮಾನಸಿಂಹನು ತಾಂತ್ಯಾಟೋ ಪಿಗೆ ಅಧಿಕ ವಿಚಾರ ಮಾಡಲು ಅವಕಾಶ ಗೊಡದೆ 'ತಾಂತ್ಯಾನ ಆಜ್ಞೆಯು ಇಂದಿನಿಂ ದ ಕೇವಲ ರಣರಂಗದಲ್ಲೆ ಆಗುತ್ತದೆ, ಇಲ್ಲ ಲ್ಲ! ಇಲ್ಲಿ ನನ್ನ ಆಜ್ಞೆಯೇ ಮೇಲು!"

'ಸಂಪೂರ್ಣ ಸರಿ! ತಾಂತ್ಯಾ ಇಲ್ಲಿ ಆ ದಾಗುವಾಗಿರಲಿ. ಸುಧಾರಿಸಿಕೊಂಡಾದ ನಂತರವೇ ಮುಂದಿನ ಕಾರ್ಯಕ್ಕೆ ಧುಮು ಕಲಿ." ನಾರಾಯಣರಾವ್ ನುಡಿದ.

"ಆದೇ ಸರಿ. ತಾಂತ್ಯಾನ ಮೃತ್ಯುವ ನ್ನು ಇಂಗ್ಲೀಷರು ನಂಬಿಯೇ ಬಿಡುವ ರು.'

ತಾತ್ಯಾನನ್ನು ಹೆಚ್ಚು ಮಾತಾಡಗೊ ಡಲು ಅವಕಾಶವನ್ನೀಯದೆಯೇ ರಾಜಾಮಾ ನಸಿಂಹ ಹಾಗೂ ನಾರಾಯಣರಾವ್ ಅ ಲ್ಲಿಂದ ತೆರಳಿದರು.

ನಾರಾಯಣ ರಾವ್ ಭಾಗವತ್ ಗ್ವಾ ಲಿಯರ್‌ನ ನಿವಾಸಿಯಾಗಿದ್ದ, ತಾಂತ್ಯಾ ನ ಆಪ್ತಮಿತ್ರನೂ ಆಗಿದ್ದ

'ಮಹಾರಾಜರಿಗೆ ಜಯವಾಗಲಿ' ಈ ಶುಭ ಘೋಷವನ್ನು ಕೇಳಿ ಮಹಾರಾಜ ಮಾನಸಿಂಹನು ಭಾವ ಸಮಾಧಿಯಿಂದ ಚೈತನ್ಯನು. ಮತ್ತೆ ಪ್ರಶ್ನಾರ್ಥಕ ಮುಖ ಭಾವದಿಂದ ಆತ ಮಹಾದಸ್ಯಿರದೆಡೆ ನೋ ಡಿದ.

"ಮಹಾರಾಜ! ಇಂಗ್ಲಿಷ ಪ್ರತಿನಿಧಿ ಪಲ್ವನ್ ಆಫೀಸರ್ ಕರ್ನಲ್ ಮಿಡ್ ತಮ್ಮನ್ನು ಕಾಣಬಯಸುತ್ತಾರೆ!"

"ಕರ್ನಲ್ ಮಿಡ್!" ಆಶ್ಚರ್ಯಚಕಿ ತನಾಗಿ ರಾಜನು ಪ್ರಶ್ನಿಸಿದ.

"ಹೌಯು, ಜೀಯೂ!'

'ಬರಗೊಡು' ಮಹಾರಾಜ ಆಜ್ಞೆ ಯಿತ್ತ.

ನೋಷಿತಿದ್ದಂತೆಯೇ ಕರ್ನಲ್ ಮಿಡ್ ಪ್ರವೇಶಿಸಿದ ಬರುತ್ತಲೆ ಅವನು ವಂತಿಗಾರಂಭಿಸಿದ. ಸಾಮಾನ್ಯ ಶಿಷ್ಟಾ ಚಾರವನ್ನು ಪ್ರದರ್ಶಿಸದೆ, ತನ್ನನ್ನು ನ ಮ್ಮಸ್ಕರಿಸದ ಆತ ಬಂಧನಲ್ಲಾ ಎಂದು ರಾಜನಿಗೆ ಅನಿಸಿತು.

'ವೆಲ್ ಮಹಾರಾಜ್! ಗವರ್ನರ್ ಜನರಲ್ ನಂಗೆ ಬಹಾಲ ಬಹಾಲ ಪ್ರೆಸ್ ಮಾಡ್ತಿದಾವ್, ಟಾಟಿಯಾನ್ನ ಹಾ ಜರ್ ಮಾಡ್ಬೇಕ್! ಯಸ್ ಟಾಟಿಯಾ, ಎಲ್ಲಿದ್ದಾನೆ ಟಾಟಿಯಾ?'

ಮರ್ಮಭೇದಕ ದೃಷ್ಟಿಯುಳ್ಳ ಕರ್ನ ಲ್ ಮಿಡ್ ರಾಜನ ಮುಖವನ್ನೆ ವೀಕ್ಷಿ ಸುತಿದ್ದ.

"ಕರ್ನಲ್! ತಾವಿ ನಮ್ಮ ಮೊತನ್ನು ನಂಬುತ್ತಿಲೇ ಇಲ್ಲ? ತಾಂತ್ಯಾ ಟೋಪಿಗೂ ನನಗೂ ಏನೇನೂ ಸಂಬಂಧವಿಲ್ಲ. ಇದ ನ್ನು ಸುನಃ ಒಮ್ಮೆ ಒತ್ತಿ ಹೇಳುತಿದ್ದೇನೆ. ಗ್ವಾಲಿಯರ್‌ನ ಜನತೆ ಇಂಗ್ಲೀಷರಿಗೆದು ರಾಗಿ ದಸ್ಯತ್ವ ನಡೆಸುತ್ತಿರುವುದಾದ ರೆ ಅದಕ್ಕೆ ನಾನೇನೂ ಹೊಣೆಯಲ್ಲ. ದ್ವನಿಯಂತೆ ಪ್ರತಿಧ್ವನಿ, ಇದು ಸೃಷ್ಟಿ ನಿ ಯಮ. ಅದಕ್ಕೆ ನಾನೇನೂ ಹೇಳಲಾರೆ. ಜನರ ಭಾವಾವೇಷವನ್ನ ರಾಜನೆಂತು ತಡೆ ಯಬಲ್ಲ?'

ರಾಜಾ ಮಾನಾಸಿಂಹನ ಪ್ರಪ್ರೋಕ್ತಿ ಯಿಂದ ಕರ್ನಲ್ ಮಿಡ್ ಸ್ತಂಭಿಭೂತ ನಾದ. ಆತನು ಈ ತರದ ಉತ್ತರವು ರಾ ಜನ ಬಾಯಿಯಿಂದ ಬಂದೀತೆಂದು ನಿ ರೀಕ್ಷಿಸಲೇ ಇಲ್ಲ ಈ ತರದ ಉತ್ತರವ ನ್ನು ರಾಜನು ನೀಡಿದ್ದು ಕರ್ನಲ್ ಮಿಡ ನ ಘನತೆಗೆ ಧಕ್ಕೆ ತಂದಿತ್ತು, ಆದರೆ ರಾಜ ನಾದರೋ ನಿಶ್ಚಿಂತನಾಗಿದ್ದ.

ಧನದ, ಜನ್ನದ ಲೋಭಕ್ಕೊಳಪಡಿ ಸುವುದು ಇಂಗ್ಲೀಷರ ಕುಟಿಲತೆಯ ವಿ ಶೇಷತೆಯಾಗಿತ್ತು. ಈ ಲೋಭಕ್ಕೊಳಗಾ ಗಿಯೇ ಹಲವು ಭಾರತೀಯರು ದೇಶ ದ್ರೋಹಿಗಳಾದದ್ದು ಇತಿಹಾಸದಲ್ಲಿ ಕಾ ಣಬಹುದು. ಅವಮಾನದ ತುತ್ತನ್ನು ಹೇ ಗಾದರೂ ನುಂಗಿದ ಕರ್ನಲ್ ಮಿಡ್! ಕೊನೆಯಲ್ಲಿ ತನ್ನ ಕೊನೆಯ ಅಸ್ತ್ರದ ಪ್ರಯೋಗಕ್ಕಕ್ಕಸಿದ.

"ವೆಲ್ ವ ಮಹಾರಾಜ್! ನೀನು ಟಾಟ್ಯಾ ನನ್ನು ಹಾಜರ್ ಮಾಡ್ತಾವ್, ತವ್ಮ ಜಾ ಗೀರ್ ನಾವ್ ರಿಟರ್ನ್ ಮಾಡ್ತಾವ್. ಗವರ್ನರ ಜನರಲ್ ಆರ್ಡರ್ ಇದ್ದಾವ್'

ಮಿಡ್ ನಿಡವಾಗಿ ಏನೂ ಒಂದು ಸೀ ಲು ಮಾಡಿದ ಅಕೋಟಿಯನ್ನು ರಾಜನಿಗೆ ತೋರಿಸಿದ. ಇಂಗ್ಲೀಷು ಭಾಷಾ ಜ್ಞಾನವಿ ಲ್ಲದ ರಂಜನು ಆ ಲಕೋಟೆಯನ್ನು ತಾ ಲಕ್ಕಿ ನಿಟ್ಟೆನಲ್ಲಿ ತಿರುಗಿಸಿ ನೋಡಿದ.

ಮಿಡ್ ಬಹಾದ್ದರನ ಮುಖದ ಪ್ರ ತೀಕ್ಷೆಯನ್ನು ಮಾಡುತ್ತಲಿದ್ದ. ಆದರೆ ರಾ ಜನ ಮುಖದಲ್ಲಿ ಏನೂ ಭಾವ ಪರಿವರ್ತ ನವಾಗದಿರುವುದು ಕಂಡು ಆತ ನಿರಾಶೆ ಗೊಂಡ. ಮತ್ತೆ ಏನೋ ತನ್ನ ಕೊಹಕ ಅ ಸ್ತ್ರಗಳಲ್ಲೊಂದನ್ನು ಬಿಡುತ್ತಾ ನುಡಿದ— 'ರಾಜಾಸಾಬ್! ಗ್ವಾಲಿಯರ್ ನವಜೀ ವರದಾರ ದನ್ಯರ್ ರಾವ್! ತಮ್ಮು ಕತ್ತೆ ಅಸ್ತಿದಾವ್! ಜಾಗೀರ್ ರಿಟರ್ನ್ ಮಾಡ್ಕೆ ಆತ ರೆಡಿ ಇರಬಸ್ತಿದಾವ್'

"ಕರ್ನಲ್! ರಜಸೂತರು ಇಂದಿನವ ರೆಗೂ ಭಿಕ್ಷೆ ಬೇಡಲು ಕಲಿತಿಲ್ಲ. ಅದಕ ತೊಡಗಿದಂದೇ ಈ ದೇಶವು ರಸಾತಲಕ್ಕೆ ಕಲುಪೀತು ನಾಯಿಬೊಗಳುತ್ತುವೆಂದು ಅನಿಯೇಕೆ ತನ್ನ ತಲೆ ತಗ್ಗಿಸಿ ನಡೆಯು ಬೇಕು? ನಮ್ಮ ಕುಲದೇವ ಭವಾನಿಗೂ ತೆಯಿದ್ದಾಳೆ ನಮ್ಮ ರಕ್ಷಣೆಗೆ!

ಭಾವಾವೇಶಗೊಂಡ ರಾಜನು ಖಡ್ಗ

(ಹನ್ನೊಂದನೇ ಪುಟ ನೋಡಿರಿ)

ಸುಸ್ವಾಗತ!

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ —
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಮನಮೆಚ್ಚುವ ಸರ್ವ ಸೌಕರ್ಯಗಳಿಂದೊಡಗೂಡಿದ
ವಸತಿ ಗೃಹ



ಹೊಟೆಲ್ ಶಿವಕ್ಷಸಾದ

ಕುಂದಾಪ್ರಪಟ್ಟಣ, ಪಿ ಕ

ಶಿವಳ್ಳಿ ಬ್ರಾಹ್ಮಣರ ರುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಸಾಫೀಸಿಗೆ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

ಫೋನ್: 77

47ನೇ ವರ್ಷ
Telephone 226.

ನವಯುಗ
ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ದ. ಕನ್ನಡ.
++
ಸ್ಥಾಪನೆ: 1921
ಸ್ಥಾಪಕರು
ದಿ। ಎ. ಬಿ. ಶೆಟ್ಟರು.
ಸಂಚಾಲಕ—ಸಂಪಾದಕ
ಕೆ. ಹೊನ್ನಯ್ಯ ಶೆಟ್ಟಿ
++
ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮
++
ಜಾಹೀರಾತು ದರಗಳು:
ಅನಿಯಮಿತ (ಕೆಡುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50
++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ತಿಂಗಳಾಗಿದ್ದು ಹಿಂದಕ್ಕೆ ಕೂಡಿರಬೇಕು. ಕಾಲು ಕಾಸಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬರೆಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಭಾಂತ್ಯ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಹೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯೂನಿಯರ್ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ದೀನ-ದಲಿತರ ಉದ್ಧಾರಕ
ಬ್ರಹ್ಮಶ್ರೀ ನಾರಾಯಣಗುರುಸ್ವಾಮಿ

ನವಯುಗ

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೨	೧೪—೯—೧೯೬೨	No. 2

ಇಂದಿರಾಜಿ ಪೇಚಿನಲ್ಲಿ

ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಬಹಳಷ್ಟು ಬಿಕ್ಕಟ್ಟಿನಲ್ಲೇ ಎದುರಿಸುವ ಪರಿಸ್ಥಿತಿ ತಲೆದೋರುತ್ತಿದೆ. ದೇಶದ ಒಳಗಡೆಯಲ್ಲ ಅಶಾಂತಿಯ ಜ್ವಾಲೆ ಹೊಗೆಯುತ್ತಲೇ ಇದೆ. ಮಹಾರಾಷ್ಟ್ರದ ಶಿವಸೇನೆಯು 'ಮದ್ರಾಸಿ ಚಲೋ' ಎಂದೋಲನ, ಮದ್ರಾಸಿನ ಹಿಂದೀ ವಿರೋಧಿ ಚಳವಳಿ, ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿನ ಸಂಕಾರವೇ ಕರೆ ನೀಡಿ ನಡೆಸುವ ಬಂದ್, ಉತ್ತರ ಪ್ರದೇಶದ ನೆರೆರಾಂಚೀಯ ಕೋಮುವಾದಿಗಳು ಗಲಭೆ, ಕಾಶ್ಮೀರದ ಪಂಡಿತರ ಸತ್ಯಾಗ್ರಹ—ಹೀಗೆ ಒಂದರ ಮೇಲೊಂದರಂತೆ ಸಮಸ್ಯೆಗಳು ದಿನನಿತ್ಯ ತಾಕಲಾಡುತ್ತಿದ್ದರೆ, ಆಡಳಿತ ಮತ್ತು ಭಾಷಾ ಪ್ರಶ್ನೆಗಳು ಹಲವು ಸಮುದಾಯ ಸಮಸ್ಯೆಯಾಗಿವೆ. ಆಡಳಿತ ಪ್ರಶ್ನೆಯನ್ನು ನಾವು ವಿದೇಶೀಯರ ಉದಾರ ಸಹಕಾರದಿಂದ ಬಗೆಹರಿಸಬಲ್ಲೆವೇನೋ ನಿಜ; ಆದರೆ, ಭಾಷಾ ಪ್ರಶ್ನೆಯನ್ನು ನಾವೇ ಒಂದು ಇತ್ಯರ್ಥಕ್ಕೆ ತಂದರೆಕೆಂಬುದನ್ನು ನಾವೆಲ್ಲರೂ ಮರೆತಿದ್ದೇವೆ. ಇದಕ್ಕೆ ಪುಷ್ಟಿ ದೊರೆಯುವಂತೆ, ವಿದೇಶ ಮಂತ್ರಿ ಶ್ರೀ ಭಾಗ್ಲಾರು ಭಾಷಾ ಪ್ರಶ್ನೆಯ ಮೇಲೆ ರಾಜೀನಾಮೆ ನೀಡಿದ್ದಾರೆ.

ಶ್ರೀ ಭಾಗ್ಲಾರು ಕೇಂದ್ರ ಸಚಿವ ಸಂಪುಟಕ್ಕೆ ಬಂದು ಹೆಚ್ಚು ಸಮಯವಾಗಲಿಲ್ಲ. ದಿ। ಪ್ರಧಾನ ನೆಹರೂರವರು ತನ್ನ ಕೊನೆಗಾಲದಲ್ಲಿ ಭಾಗ್ಲಾರನ್ನು ತನ್ನ ಸಂಪುಟಕ್ಕೆ ಸೇರಿಸಿದರು. ಅಲ್ಪಾವಧಿಯಲ್ಲೇ ಒಬ್ಬ ಸಮರ್ಥ ಮತ್ತು ಸಶಕ್ತ ಮಂತ್ರಿಯೆಂಬ ಖ್ಯಾತಿ ಪಡೆಯಲು ಭಾಗ್ಲಾ ಶಕ್ತರಾದರು. ಅವರು ನ್ಯಾಯವಾದಿಯೂ ನಿವೃತ್ತರಾದವರು; ಶಿಕ್ಷಣ ಶಾಖೆಯುಳ್ಳ ಮಂತ್ರಿಯೆಂದು ಪ್ರಸಿದ್ಧರಾದವರು. ಇತ್ತೀಚೆಗಿನ ಕೆಲವು ತಿಂಗಳಿಂದ ಅವರ ಪಾಲಿಗೆ ವಿದೇಶ ಮಂತ್ರಿ ಶಾಖೆಯು ಹೊಣೆಗಾರಿಕೆ ಬಿತ್ತು. ಶಿಕ್ಷಣ ಮಂತ್ರಿಯಾಗಿ ಭಾಗ್ಲಾ ಮಾಡಿದ ಕಾರ್ಯ ಅಪಾರ. ಡಾ। ತ್ರಿಗುಣ ಸೇನರ ಅಧ್ಯಕ್ಷತೆಯಲ್ಲೇ ಶಿಕ್ಷಣ ಸುಧಾರಣಾ ಮಂಡಳಿಯನ್ನು ರಚಿಸಿದರು; ಅದರ ವರದಿಯನ್ನು, ಅದು ಕ್ರಾಂತಿಕಾರಕವಾದರೂ, ಅನುಷ್ಠಾನಗೊಳಿಸುವ ಆಸಕ್ತಿ ತೋರಿದರು; ಮುಖ್ಯವಾಗಿ ಶಿಕ್ಷಕರ ಅರ್ಥಿಕೋನ್ನತಿಯಿಂದಲೇ ಶಿಕ್ಷಣೋನ್ನತಿಯೆಂಬುದನ್ನು ಅವರು ಮನಗಂಡಿದ್ದರು. ವಿದೇಶಮಂತ್ರಿಯಾಗಿ ನೇಹರೂ, ಮಧ್ಯಪೂರ್ವ ಬಿಕ್ಕಟ್ಟಿನ ಸಂಬಂಧ ಅವರ ಮೇಲೆ ದೇಶದ ಸದಭಿಪ್ರಾಯ ಮೂಡಿಬರಲಿಲ್ಲ. ಭಾರತ ಸರಕಾರವು ನಿಕಪಕ್ಷೀಯವಾಗಿ ಅರಬ ರಾಜ್ಯಗಳಿಗೆ ಬೆಂಬಲ ಘೋಷಿಸಿದ್ದು ಅನೇಕ ಭಾರತೀಯರಿಗೆ ಹಿಡಿಸಲಿಲ್ಲ. ಆದರೂ, ಪ್ರಧಾನಿ ಮತ್ತು ಭಾಗ್ಲಾರ ನಡುವೆ ಹೊಂದಾಣಿಕೆಯಿತ್ತು. ಹಾಗಿರುವಾಗ ವಿದೇಶಮಂತ್ರಿ ಭಾಗ್ಲಾರು ಭಾಷಾಪ್ರಶ್ನೆಯನ್ನೆತ್ತಿಕೊಂಡು ರಾಜೀನಾಮೆ ನೀಡುವಂತಾದುದು ಕೋಜನೀಯವೇ, ಪ್ರಾದೇಶಿಕ ಭಾಷೆಗಳು ಶಿಕ್ಷಣಮಾಧ್ಯಮವಾಗಬೇಕು; ಇಂಗ್ಲಿಷಿನ ಸ್ಥಾನ-ಮೂರನೆಯದಿಗೆ ದೊರೆಯಬೇಕು ಎಂಬ ದನ್ನು ಸಂಪೂರ್ಣವಾಗಿ ಒಪ್ಪುತ್ತಾರೆ. ಆದರೆ, ಈ ಸಂಬಂಧದಲ್ಲಿ ಸರಕಾರವು ಅನುಚಿತ ಅವಸರ ಮಾಡುತ್ತಿದೆ- ರಾಲಮಿತಿ ಹೇರುತ್ತಿದೆ- ಎಂಬುದವರ ಭಿಪ್ರಾಯ. ಆದರೂ ನಾವೊಂದು ಸಂಗತಿಯನ್ನು ಮರೆಯುವಂತಿಲ್ಲ. ಸರಕಾರವು ಭಾಷಾ ನೀತಿಗೆ ಇನ್ನೂ ಪೂರ್ಣವಿರಾಮ ನೀಡಿಲ್ಲ. ಅದು ಪರಿಶೀಲನಾ ಮಟ್ಟದಲ್ಲಿಯೇ ಇದೆ. ಅಂತಿರುವಾಗ ಹುಟ್ಟುವ ಕೂಸು ಪಂಡೋ ಹೆಣ್ಣೋ ಎಂದು ತಿಳಿಯದೆ ಹೆಣ್ಣೆಂದು ನೋಯುವುದು- ಗೃಹತ್ಯಾಗ ಮಾಡುವುದು ವಿವೇಕವೆಂದು ಯಾರೂ ಹೇಳಲಾರರು. ಶ್ರೀ ಭಾಗ್ಲಾರ ರಾಜೀನಾಮೆಯು ಭಾಷಾ ಪ್ರಶ್ನೆಯನ್ನು ಸರಳಗೊಳಿಸುವುದಿಲ್ಲ. ಹಿಂದೀ ವಿರೋಧಿಗಳ ಕೈಗಳನ್ನು ಮತ್ತಷ್ಟು ಬಲಪಡಿಸುತ್ತದೆ. ಇದರಿಂದ ಸವಸ್ಯೆಗಳಲ್ಲಿ ಮತ್ತೊಂದು ಗಂಟು ಬಿದ್ದಂತಾಯಿತು. ಶ್ರೀ ಭಗಲಾರು ರಾಜೀನಾಮೆ ನೀಡಬೇಕಾಗಿ ಬಂದ ಕಾರಣ ಬಯಿಯ ಭಾಷಾಪ್ರಶ್ನೆ ಮತ್ತಷ್ಟವಲ್ಲವೆಂದೂ ಹೇಳುವವರಿದ್ದಾರೆ. ಇದನ್ನು ಅಲ್ಲಗಳೆಯುವಂತಿಲ್ಲ: ಆದೇನಿದ್ದರೂ ಭಾಗ್ಲಾರ ನಿರ್ಗಮನ ಇಂದಿರಾ ಗಾಂಧಿಯವರ ಸಚಿವ ಸಂಪುಟಕ್ಕೊಂದು ಬಲವಾದ ಪೆಟ್ಟು—ಇದರಿಂದ ಚೇಕರಿಸಿಕೊಳ್ಳಲು ಬಹುಕಾಲ ಬೇಕು. ಇಂತಹ ಅಹಿತ ಕಾರ್ಯವನ್ನು ಭಾಗ್ಲಾ ಮಾಡಬಾರದಿತ್ತು; ದುಡುಕಬಾರದಿತ್ತು.

ಇನ್ನೀಗ ಅಘಾತದಿಂದ ಚೇಕರಿಸುವ ಹೊಣೆಗಾರಿಕೆ ಶ್ರೀಮತಿ ಗಾಂಧಿಯವರದ್ದು. ಸದ್ಯ ಯೋಜನೆ, ವಿದೇಶ ವ್ಯವಹಾರಾದಿ ಖಾಖೆಗಳನ್ನು ತಾನೇ ಹೊತ್ತುಕೊಂಡರೂ ಹೀಗೆಯೇ ಮುಂದುವರಿಯುವುದು ಸಾಧ್ಯವಿಲ್ಲ. ಶೀಘ್ರ ಪರಿಣಾಮಕಾರಿಯೇ ಆಜನೆಗಳನ್ನು ವ್ಯವಹಾರದಲ್ಲಿ ತರಬೇಕಾದರೆ, ಅದಕ್ಕಾಗಿ ಕೀವ್ರಗಮನ ಹರಿಯಿಸಬೇಕಾಗುತ್ತದೆ. ಚೀನಾ-ಪಾಕಿಸ್ತಾನಗಳ ಸಂಬಂಧದಲ್ಲಿ ಹೊಸ ಎಡತೆತ್ತಬೇಕೆಂದಿದ್ದರೆ, ವಿದೇಶ ವ್ಯವಹಾರವೂ ಸ್ವತಂತ್ರ ಮಂತ್ರಿ ಖಾಖೆಯಾಗಬೇಕಾಗುತ್ತದೆ. ಪ್ರಧಾನಿಯುವರೊಬ್ಬರು ಉಯ್ಯಲ್ಲಾ ಹೊಣೆಗಾರಿಕೆಗಳನ್ನು ನಿರ್ವಹಿಸುವುದೆಂದರೆ, ಅದು ಪ್ರಯಾಸದ ಕಾರ್ಯ. ಇದಕ್ಕಾಗಿ ರಿಕ್ತ ಸ್ಥಾನವನ್ನು ಪೂರೈಸಲು ಆಗಷ್ಟನೇ ಎನಿಸುತ್ತದೆ. ತನ್ನ ನೀತಿಯನ್ನು ಸಂಪೂರ್ಣವಾಗಿ ಒಪ್ಪುವ, ಕಷ್ಟ ಕೈಗಳನ್ನೇ ಭದ್ರಪಡಿಸಬಲ್ಲು, ಪಕ್ಷ--ದೇಶಗಳೂ ಬೆಂಬಲಿಸಬಲ್ಲ ಸಮರ್ಥನೊಬ್ಬ ಬೇಕಾಗಿದ್ದಾರೆ. ಅವರಿಗೆ ಮಂತ್ರಿ ಮಂಡಳಿಯ ಹಿರಿಯ ಹುರಿ ಜಗಜ್ಜೀವನರಾಮರು ತಮ್ಮ ಆಹಾರ ಶಾಖೆಯಿಂದ ನೊಂದಿದ್ದಾರೆ; ವಿದೇಶ ವ್ಯವಹಾರ ದಂತಹ ಮಹತ್ವದ ಶಾಖೆಯು ತನಗೆ ಬೇಕೆಂದು ಅವರು ಕೇಳಿದರೂ ಕೇಳಬಹುದು. ರಾಮಸುಭಗ ಸಿಂಗ, ಜೈ ಸುಖಲಾಲ್ ಹಾಥಿ ಮೊದಲಾದವರಿಂದ ವಿದೇಶ ವ್ಯವಹಾರ ಸಾಂಗವಾಗದು. ಈ ಪ್ರಶ್ನೆಗೆ ಉತ್ತರವರಸಲು ಅವೆ ರಿಕೆಯಿಂದ ಮಹಾರಾಜ ಮರಳಿ ಬೇಕಾಗಲೂ ಬಹುದು. ಅದುವರೆಗೆ ಕಾದರೆ, ಇಂದಿರಾಜಿಯವರ ದೌರ್ಬಲ್ಯ ಪೆಚ್ಚು ಪ್ರತಿಪಕ್ಷಿಯ ಪೇಚಿನಿಂದ ಇಂದಿರಾಜಿ ಎದ್ದು ನಿಲ್ಲಬೇಕು, ದೇಶವನ್ನು ಸರಿದಾರಿಯಲ್ಲಿ ಮುನ್ನಡೆಸಬೇಕು.

ಹಲವಾರು ದಾರಿಗರು

ಮಹಾರಾಷ್ಟ್ರದ ಶಿವಸೇನೆಯ ಚಟುವಟಿಕೆಗಳು ಈಗ ಎಲ್ಲ ರಾಷ್ಟ್ರ—ರಾಜ್ಯ ನಾಯಕರ ಟೀಕೆ—ಟಿಪ್ಪಣಿಗಳಿಗೆ ಗುರಿಯಾಗಿದೆ. ಬೊಂಬಾಯಿ ನಗರದಿಂದ ದಕ್ಷಿಣ ಭಾರತೀಯರು ಹೊರಟು ಹೋಗಬೇಕು—ಎಂಬ ಕರೆ ಅವರದ್ದು. ಕರಾಡ್ಯದವರು ಬಂದು ಮರಾಠಿಗರನ್ನು ನಿರುದ್ಯೋಗಿಗಳನ್ನಾಗಿ ಮಾಡಿದ್ದಾರೆ; ಮರಾಠಿಗರ ಉನ್ನತಿಗಾಗಿ ಉಳಿದವರು ಹೊರಟು ಹೋಗಬೇಕು ಎಂಬ ಅಭಿಪ್ರಾಯ ಅವರದ್ದು. ಮದ್ರಾಸಿದಲ್ಲಿ

(ಹತ್ತನೇ ಪುಟ ನೋಡಿರಿ)

ವಚನ ಸುಧೆ

ಯಂ ಪ್ರಶಂಸಂತಿ ಕಿತವಾ
ಯಂ ಪ್ರಶಂಸಂತಿ ಚಾರಣಾಃ
ಯಂ ಪ್ರಶಂಸಂತಿ ಬಂಧಕ್ಯೋ
ನನ ಜೀವತಿ ಮಾನವಃ॥

ವಂಚಕರ ಪ್ರಶಂಸೆಗೆ ಪಾತ್ರನಾದವನು, ಚಾರಣರ ಹೊಗಳಿಕೆಯನ್ನು ಪಡೆದವನು, ವೇಶ್ಯೆಯರ ಗೌರವಕ್ಕೆ ಪಕ್ಕಾದವನು ನಡೆವೆಣಂತಿರುತ್ತಾನೆ.

ನರಸಣ್ಣನ ನರಸ



'ಬೆಲೆ ನಿಯಂತ್ರಣ ಮೆಜಸನೆಯನ್ನು ಇನ್ನೂ ಕೈಬಿಟ್ಟಿಲ್ಲವಂತೆ-ಈಗಲೇ ಹಣ ಮಾಡಿದ್ದು ಬಂತು—ಆಂತ ಅಂತಾನಲ್ಲಾ ಅಂದ !'

ಗೇಹ ರಾಜ್ಯದಲ್ಲಿ

ಕಾದಿರಿ, ಕಾದು ನೋಡಿ

"ನೋಡಿದ್ಯೇನು?'

"ಏನು? ಅಂಥದ್ದು ನಡೆದದ್ದು?"

"ಮತ್ತೇನೂ ಇಲ್ಲ; ನಮ್ಮ ಮಂತ್ರಿ ಮಹಾಧರ ಹೇಳಿಕೆ—ಗೀಳಿಕೆಗಳು.... ಲಂಗೂ ಇಲ್ಲ ಲಗಾಮೂ ಇಲ್ಲದ ಕುದುರೆ ಗಳಂತೆ....'

"ಅದ್ದಲ್ಲಿ ವಿಶೇಷನೇನು? ಮಂತ್ರಿ ಪದವಿಯು ಸೃಷ್ಟಿಯಾದಾಗಿನಿಂದಲೇ ಕುದುರೆ ಲಗಾಮು ತುಂಡಾಗಿದೆ..."

'ಅಂದ್ರೆ....?'

'ನಮ್ಮ ಈ ವಿಶಾಲಕಾಯ ದೇಶ ಸ್ವತಂತ್ರವಾಗಿ ವಾರ್ಷ್ವತಂತ್ರ್ಯವನ್ನು ಎಲ್ಲ ಪ್ರಜೆಗಳಿಗೂ ಕೊಡವ ಲತೆ ಉದಾರತೆವನ್ನು ತೋರಿಸಿದಂದೇ ಎಲುಬಿಲ್ಲದ ನಾಲಗೆಯು ಲಗಾಮಿಲ್ಲದ ಕುದುರೆಯಂತಾಗಿ ಬಿಟ್ಟಿದೆ...."

'ಹ್ಞೂಂ.... ಅದುದರಿಂದಲೇ ಇರಬೇಕು....'

'ಏನು?"

'ಮತ್ತೇನೂ ಇಲ್ಲ, ನಿನ್ನ ನಾಲಿಗೇನೂ....'

".....ಅಲ್ರಿ, ನಾಲಿಗಾದ್ರೆ ಸರಿ. ನಾ ದಾರ್ರೇನು? ನಿಮ್ಮುಂಡಾದ್ರೇನು? ಎಲ್ರದ್ದೂ ನಾಲಿಗೇನೇ. ಏನು,ನನಗೇನು ಸ್ವಾತಂತ್ರ್ಯವಿಲ್ಲವೆ?'

"ಛೆ...ಛೆ...ಹಾಗನ್ನೋದಿರಿ. ಮೂರ್ಖಿರು, ದಶಮೂರ್ಖಿರು, ಶತಮೂರ್ಖಿರು, ಸಹಸ್ರಮೂರ್ಖಿರು....."

"ಎಂಥದ್ರೀ ಇದು, ಮೂರ್ಖಿಗೆ ಖಾತೇಶುವಾರಿ ತೆಗೆಯುತ್ತೀರಿ?"

'ಅಯ್ಯೋ, ಏನಂಟೀಯ? ನೀನು?ನೂರ್ಮಿನಿಗಿಂತ ಶತ ಮೂರ್ಖಿರು ಮೂರ್ಖತನದಲ್ಲಿ ಹಿರಿಯುವರಂತೆ; ಹಾಗಿರುವಾಗ ಶತಮೂರ್ಖಿರಿಗಿಂತ ಸಹಸ್ರಮೂರ್ಖಿ, ಅವರಿಗಿಂತ ಲಕ್ಷಮೂರ್ಖಿ. ಅವರಿಗಿಂತ ಕೋಟಿ ಮೂರ್ಖಿ.....'

ಅವರಿಗಿಂತ ಏಪತ್ತು ಕೋಟಿ ಮೂರ್ಖಿ .....'

"ಏವತ್ತು ಕೋಟಿ ಅನ್ನುತ್ತಲ್ಲಾ ನೆನಪಿಗೆ ಬಂತು. ನಮ್ಮ ದೇಶದ ಜನ ಸಂಖ್ಯೆ ಏವತ್ತು ಕೋಟಿ ವಿಚಾರಿಸುವಂತೆ ನಿನ್ನ ಮಾತ್ಸಲ್ಲಿ ಇವರೆಲ್ಲರೂ ಮೂರ್ಖಿರೇ ಅಂತಾಯ್ತು...'

"ಅಲ್ಲಿ ಬಿಡಿ....ಅಲ್ಲ, ಏನೋ ಹೇಳೋಕೆ ಹೊರಟವ್ರು ಎಲ್ಲಿಗೋ ಬಂದು ಬಿಟ್ರಿ..."

"ಹಾಡೀ, ಜಂಕಿಯನ್ನು ಬೇಟೆಯಾಡುತ್ತ ಹೋದ ದುಷ್ಯಂತ ಮಹಾರಾಜನಿಗೆ ಶಕುಂತಳೆ ಆಡ್ಡ ಬಂದಂತೆ...."

"ತಿಳೀತು ಬಿಡಿ, ನಿಮ್ಮ ಶಂಕುಂತಲೆಯ ಕತೆ.'

"ಏನು ತಿಳೀತೇ ನಿನಗೆ?'

"ಆದಿದ್ದಿ, ಏನೋ ಅಂದ್ರಲ್ಲಾ...."

'ಓ, ಹೌದು. ನೆನ್ಪಿಗೆ ಬಂತು, ನಮ್ಮ ಪ್ರಜಾಪ್ರಭುತ್ವವ ದಿ ಭಾರತದಲ್ಲಿ ವಂತ್ರಿಗಳ ನಾಲಿಗೆ ಭಾರೀ ಕಲೀಸುಂತ....'

"ಯಾಕ್ರೀ, ಹೇಳಿ ..."

'ಅಲ್ಲ ಅವ್ರು ಹಾಗೂ ಮಾತಾಡ್ತಾರೆ ಹೀಗೂ ಮಾತಾಡ್ತಾರೆ....'

'ನೀವು ಮಾತಾಡೋದಿಲ್ವೆ?'

"ನನ್ನ ನಿನ್ನ ಸಂಗ್ತಿ ಬಿಟ್ಬಿಡ....'

'ಯಾಕೆ? ನೀವು –ನಾನು ಮಂತ್ರಿಯೊಗಬಾರದೆಂದಿದಿಯೆನು?'

'ಅಯ್ಯೋ, ಶಾಕಂ ಪಾಸಂ.... ಪ್ರಜಾಪ್ರಭುತ್ವದಲ್ಲಿ ಯಾರೂ ಏನೂ ಆಗಬಹುದಂ. ಆದೂ ನನ್ಗೆ ಭಾರತದಲ್ಲಿ ಒಂದಕ್ಷರ ತಿಳಿಯದವನೂ ರಾಷ್ಟ್ರಪತಿಯಾಗುವ ಅವಕಾಶ ಹೊಂದಬಹುದು—"

"ಅದೆಲ್ಲಾ ಇರ್ಲಿ...ಈಗ ಮುಖ್ಯ ವಿಷಯಕ್ಕೆ ಬನ್ನಿ—'

"ಏನದು ಮುಖ್ಯ ವಿಷಯು?"

'ಆಯ್ಯೋ! ನಂಗೇನು ಗೊತ್ತು? ಬಾಗಲು ಒಳಗೆ ತಲೆ ಹಾಕುತ್ತೇ ನಾಲಿಗೆ ತರಿಸಿಕೊಂಡೇ ಬಂದವ್ರು ನೀವಲ್ಲವೇನು?,

ಇರ್ಬಹುದು ಬಿಡು. ಆದ್ರೆ ಆ ಸೋಂಕುರೋಗ ನಿನಗ್ಹ ಹಗಲಿದ್ದು ಸುಳ್ಳೇನು?'

'ಆಯ್ತಪ್ಪ, ನಿನ್ಮ ದಮ್ಮುಯ್ಯ. ಈಗ ಲಾದ್ರೂ ಹೇಳೀಂದ್ರೆ.....'

"ಹಾಗೆ ಬಾ....ನಿಲ್ಲು....."

'ನಾನೆಲ್ಲಿ ಕೂತಿದ್ದೇನೆ?'

"ಹಾಗಾದ್ರೆ ಕೂತು ಕೋ....."

"ಹ್ಞೂಂ....."

'ಹ್ಞೂಂ...ಈಗ ನೆನ್ಪಿಗೆ ಬಂತು....'

'ಏನದು?'

"ಅಯ್ಯೋ, ಮತ್ತೇ ಹೋಗ್ತುಲ್ಲಾ... ನೀನೊಬ್ಬು ಮಧ್ಯೆ ಬಾಯಿ ಹಾಕಿ—"

'ಇಲ್ಲ ವಾಂಯ್ಯೆ ...ನಾನು ತೆಪ್ಪಗೆ ಕೂತಿರ್ತೇನೆ. ನಿವ್ಮ ಮೂತಿ ಮುಂಗಿಯ ತಡಸ್ತಿ. ಆ ಮೇಲೆ ಬಾಯಿ ತೆರೆಯುತ್ತೇನೆ."

"ಹಲ್ಹಾಂ.. ....ನಿನ್ನ ನಾರ್ವಾಸ್ತಂತ್ರ್ಯ ಒಂದು ನಿವಿಷ ಅಮಾನತ್ತು ..."

"ಸರಿ..."

"....ನೋಡು, ಈಗ...ಈಗ...."

'ಏನು ಈಗ?"

"ಆಲ್ವೆ, ನವ್ಮ ಮುಖ್ಯ ಮಂತ್ರಿ..."

'ನಿಜಲಿಂಗಪ್ಪನವ್ರು....'

'ಹೌದು, ಅವ್ರು ದೆಹಲಿಯಿಂದ..."

"ಬೆಂಗಳೂರಿಗೆ ಬಂದ್ರು...."

'ಬಂದವ್ರು...'

ತುಂಬಾ ಮಾತಾಡಿದ್ರೊನ್ನಿ...."

'ಹ್ಞೂಂ...ಈಗ ಸರಿ ನೆನ್ಪಾಯ್ತು.... ಅವ್ರು ಮಾತಾಡ್ತ ಆಡ್ತ ಮುತ್ತಿನಂತ ಮಾತುಗಳನ್ನು ಆಡಿದ್ರು...."

'ಏನದು?"

"ನೋಡು, ನವ್ಮ ರಾಜ್ಯ ತ್ರಿಭಾಷಾ ಸೂತ್ರಕ್ಕೆ ಸಂಪೂರ್ಣ ಬೆಂಬಲ ನೀಡುತ್ತಿದೆ..."

'.... ಅಂದ್ರೆ ಮಾತೃಭಾಷೆ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳ ಅಧ್ಯಯನಕ್ಕೆ...."

"ಹಲ್ಹಾಂ.... ರಾಜ್ಯ ಈಗಾಗಲೇ ಹಿಂದಿಯನ್ನು ಕಡ್ಡಾಯವಾಗಿ ಕಲಿಸುತ್ತಿವೆ ಅಂದ್ರು....?"

'ಹ್ಞೂಂ,....ಏನಂತೆ?'

'ರಾಜ್ಯದಲ್ಲಿ ಹಿಂದಿಯನ್ನು ಕಡ್ಡಾಯವಾಗ್ಮಿ ಕಲಿಸುತ್ತಾರಂತೆ...'

'ಯಾರು?"

" ಯಾರು ಅಂದ್ರೆ? ವಿದ್ಯಾಮಂತ್ರಿಗಳು ಕಮ್ಮಿ ಶಾಖೆಯ ಮೂಲಕ ಶಿಕ್ಷಣಾಲಯಗಳಲ್ಲಿ ಕಲಿಸ ತ್ತಾರೆ...."

"ನೋಡಿ, ಇದು ಪೂರಾ ಸುಳ್ಳು...."

"ಯಾಕೆ?"

'ಆಲ್ರಿ, ಎಲ್ಲಿ ಹೀಗೆ ನಡೆಯುತ್ತಿದೆ?'

"ಯಾಕೆ? ಎಲ್ಲಾ ಪ ರಶಾಲೆಗಳಲ್ಲೂ ಆರನೆ ತರಗತಿಯಿಂದ ಹಿಂದಿ ಕಡ್ಡಾಯ ವಿಲ್ಲವೇನು?'

"ಹೌದು, ಕಡ್ಡಾಯ. ಆದ್ರೆ ಯಾವ್ದು ದರ್ಜೆ?"

"ಅಂದ್ರೆ?'

"ಪಾರೆಪಟ್ಟಿಯಲ್ಲಿ ಕಡ್ಡಾಯ, ವೇಳಾ ಪಟ್ಟಿಯಲ್ಲಿ ಕಡ್ಡಾಯ. ಪುಸ್ತಕಪಟ್ಟಿಯಲ್ಲಿ ಕಡ್ಡಾಯ. ಆದರೆ ಹಿಂದೀ ಅಧ್ಯಾಪಕರ ನೇಮಕ ಕಡ್ಡಾಯವಲ್ಲ. ಹಿಂದಿ ಕಲಿಯುವುದೂ ಕಡ್ಡಾಯವಲ್ಲ."

"ಅಂದ್ರೆ ಏನೆ?"

'ಏನು ಅಂದ್ರೆ? ಸರ್ಕಾರಿ ಪರೀಕ್ಷೆಗೆ ನಾಲ್ಕು ವಾರ ಮೊದಲಿನ ವರೆಗೆ ಹಿಂದೀ ಕಡ್ಡಾಯ ವಿಷಯ ಅದನ್ನು ಕಲಿಸಲು ಅಧ್ಯಾಪಕರಿಲ್ಲವಂದರೂ ನಮ್ಮ ಮುಖ್ಯ ಮಂತ್ರಿಗಳು ಕಡ್ಡಾಯವಾಗಿ ಕಲಿಸುತ್ತಾರೆ....ಪ್ರಾಥಮಿಕ ಶಾಲೆಯ ಹಿಂದೀ ಶಿಕ್ಷಕರಿಗೆ ಇಂಕ್ರಿಮೆಂಟು ಇಲ್ಲವಾದುದರಿಂದ ಅಲ್ಲಗೆ ಯಾರೂ ಬರುವುದಿಲ್ಲವಂತೆ; ಬಂದವರೂ ಸಿಲ್ಲುವುದಿಲ್ಲವಂತ. ಇನ್ನು ಹೈಸ್ಕೂಲುಗಳಲ್ಲಿ—ಪಾರ್ಟ್ ಟೈಂ...ಜನ ಇಲ್ಲ, ಕಲಿಯುವುದು ಯಾರು? ಕಡ್ಡಾಯವಾಗಿ ಕಲಿಸುತ್ತೇವೆ ಅನ್ನುವ ಎಂಟೆದೆ ನಿಜಲಿಂಗಪ್ಪನವರಲ್ಲಿ ಇದ್ದರೆ, ಅದು ಪೊಳ್ಳೆದೆಯೇ ಸರಿ.....'

'ಏನೇ ಇದು?'

"ಏನು ಅಂದ್ರೆ? ನಮ್ಮ ರಾಜ್ಯ ಸರಕಾರಕ್ಕ ಹಿಂದಿಯ ಮೇಲೆ ಅಷ್ಟು ಆಸಕ್ತಿ ಇದ್ದರೆ, ವಿದ್ಯಾ ವತ್ತು ಹೈಸ್ಕೂಲುಗಳಲ್ಲಿ ಶ್ರುತಿಯೊಂದರಲ್ಲಾ ಅವಶ್ಯಕ ಸಂಖ್ಯೆಯಷ್ಟು ಹಿಂದೀ ಅಧ್ಯಾಪಕರ ನೇಮಕ ವಾಡಬೇಕು. ಅದನ್ನು ಪ್ರೋತ್ಸಾ ವಿಷಯವನ್ನಾಗಿ ಕಡ್ಡಾಯ ಗೊಳಿಸಬೇಕು. ಇದು ಮಾಡವೆ ಒದ್ದರೆ, ಬಾಯಿ ಮಾತಿನ ಕಡ್ಡಾಯು....ಬಾಯಂಸಚಾರ..."

"ಹ್ಞೂಂ..."

"ನೋಡಿ, ಈ ಒಗೆರು ನೀತಿಯಿಂದ ವಿದ್ಯಾರ್ಥಿಗಳಲ್ಲಿ ಅನಾಸ್ಥೆ, ವಿಪತ್ಕಾರಣೀ ನ ಭಾಷಾ ವಿಷ್ಪದಲ್ಲಿ ಇರಿತ..."

"ಛೇಷ್,ಛೇಷ್...ನಿನ್ನ ಕಾಂಕ್ರೀಟ್ ಸಜೆಕ್ಷನ್ನಿಗಾಗಿ ತುಂಬ ಧ್ಯಾಂಕ್ಸ್... ನೋಡು, ನವ್ಮ ಶಿಕ್ಷಣ ಶಾಖೆ ಹಿಂದಿಗಾಗಿ ತುಂಬ ಟ್ರಯಸ್ಟ್ ಮಾಡಿದೆ. ಇದೆಲ್ಲ ನೀರಲ್ಲಿ ಮಾಡಿದ ಹೋಮಾಂತ ಎಷ್ಟು ಕಲೀಸಿಕಾಗಿ ಖರಿಬಿಟ್ಟೆ...!

'ಹೌದ್ರಿ....ರಾಜ್ಯದಾದ್ಯಂತ ಇರುವ ಲಕ್ಷ ಲಕ್ಷ ಶಿಕ್ಷಣ ಸಂಸ್ಥೆಗಳ ನೆರವಿನಿಂದ ಹಿಂದೀ ಪ್ರಚಾರವನ್ನು ರಾಷ್ಟ್ರದಲ್ಲಿ ಕೈಗೊಂಡಿಕು. ಉಜಿಕ ಹಿಂದಿ ತರಗತಿ.

(ಏಂಥತ್ತನೇ ಪುಟ ನೋಡಿರಿ)

ಕ್ಷಾಮನು ನಿವಾರಣೆಗಾಗಿ

ಇಂದೇ

ಉದಾರ ಸಹಾಯ ನೀಡಿರಿ

"ಇದಿಗ ಕೇವಲ ಒಂದೆರಡು ಪ್ರದೇಶಗಳಿಗಷ್ಟೇ ಸೀಮಿತವಾದ ಸಮಸ್ಯೆಯಲ್ಲ! ಭಾರತದ ಸಮಸ್ತ ಜನತೆಗೆ ಎದುರಾಗಿರುವ ಕಷ್ಟ. ಇಂತಹ ಹೊತ್ತಿನಲ್ಲಿ ಎಲ್ಲಾ ಜನರೂ ತನು ಮನ ಧನಗಳಿಂದ ಸಹಾಯ ಮಾಡಬೇಕಂಬುದಾಗಿ ನಾನು ನಿಮ್ಮಲ್ಲಿ ಅರಿಕೆ ಮಾಡುತ್ತೇನೆ.

ಈಗಾಗಲೇ ಕಾಣಿಕೆ ನೀಡಿರುವವರು ಇನ್ನೂ ಹೆಚ್ಚು ನೀಡಿರಿ. ಈ ತನಕ ಕೊಡದೆ ಇರುವವರು ಉದಾರವಾಗಿ ಕೊಡಿರಿ. ನೀಡ ವರೆಲ್ಲ ಈಗಲೇ ನೀಡಿರಿ."

ಪ್ರಧಾನ ಮಂತ್ರಿಯವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣ.

ಪ್ರಧಾನ ಮಂತ್ರಿಯವರ ಕ್ಷಾಮನು ನಿವಾರಣಾ ನಿಧಿಗೆ ಉದಾರವಾಗಿ ಕಾಣಿಕೆ ನೀಡಿರಿ.

ಈ ನಿಧಿಗೆ ಕಳುಹಿಸುವ ಗುಣ ಮತ್ತು ಸಾಮಗ್ರಿಗಳ ಬಗ್ಗೆ ಮಾಹಿತಿ ಕೊಡಲು ಉಚಿತ ಪೋಸ್ಟ್ ಕಾರ್ಡ್, ಉಚಿತ ಪೆಟ್ಟಿ ಮತ್ತು ರಿಜಿಸ್ಟ್ರೇಶನ್ ಚಾರ್ಜ್ ಕೊಡಬೇಕಾಗಿಲ್ಲ. ಔಷಧಿ, ಬಟ್ಟೆಬರೆ, ಡಬ್ಬಿಗಳಲ್ಲಿ ಸಂಗ್ರಹಿಸಿದ ಆಹಾರ ಇತ್ಯಾದಿಗಳನ್ನು ವಿಮಾನ ಮೂಲಕ ಉಚಿತವಾಗಿ ಸಾಗಿಸಲಾಗುತ್ತದೆ. ಅಂಚೆ, ವಿಮಾನ ಸಾಗಾಟ, ಮತ್ತು ರೈಲ್ವೆ ವೆಚ್ಚಗಳು, ವರ್ತಮಾನ ತೆಂಗೆ, ಆಬಕಾರಿ ಮತ್ತು ಸುಂಕ ಇತ್ಯಾದಿಗಳಲ್ಲಿ ರಿಯಾಯಿತಿ ದೊರೆಯುತ್ತದೆ.

ಪ್ರೈಮ್ ಮಿನಿಸ್ಟರ್ಸ್ ಡ್ರಾಟ್ ರಿಲೀಫ್ ಫಂಡ್,
ಕ್ಯಾಬಿನೆಟ್ ಸೆಕ್ರಿಟೇರಿಯೆಟ್, ರಾಷ್ಟ್ರಪತಿ ಭವನ, ನ್ಯೂ ಡಿಲ್ಲಿ—1

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R.E.P. 118/1967 O. S. 638/1963.

ಅರ್ಜಿದಾರ– ವೆಂಕಪ್ಪ ಶೆಟ್ಟಿ(ಕಚ್ಚಿ)

ಎದ್ರಿರು–ನಾಗಿ ಹೆಂಗ್ಸು ಊರಾ.

ಸದ್ರಿ ವ್ಯಾಜ್ಯದಲ್ಲಿ 1ನೇ ಎದ್ರಿಳು, ನಾಗಿ ಹೆಂಗ್ಸು, ಶೇನು ಹೆಂಗ್ಸಿನ ಮಗಳು, ಕುಂದಾಪುರ ತಾಲ್ಲೂ ನಾಡ ಗ್ರಾಮದ ಕೊಡಿರಮನೆಯಲ್ಲಿರುವವಳು —ಇವರಿಗೆ—

ಮೇಲ್ಕಂಡ ಡಿಕ್ರಿ ದೊಂದಿದ ಅರ್ಜಿದಾರನು ಅದ್ದ ಮೇಲಣ ಮೇಲ್ಕಂಡ ಅಮಲ್ಜಾರಿಯನ್ನು ಈ ಕೋರ್ಟಿನಲ್ಲಿ ಪಾಸಲು ಪೂರ್ವ ಆದರಲ್ಲಿ ನಿಮ್ಮ ಆಕ್ಷೇಪಗಳೇನಾದರೂಯಿರುವ ವಲ್ಲಿ ನೀವು ಇದೇ ತಾ. 27–9–1967ನೇ ದಿವಸ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಯೇಕ ಪಕ್ಷವಾಗಿ ಮುಂದಿನ ಹುಕುಂ ಮೂಡಲಾಗುತ್ತದೆಂದು ತಿಳಿದಿರಲಿ.

(ಕೋರ್ಟು ಹುಕುಂ ಪ್ರಕಾರ)

ಎ. ರಾಜೀವ ಶೆಟ್ಟಿ,

ಬಿ. ಎ. ಬಿ. ಕಾಂ. ಬಿ. ಎಲ್.

ಅರ್ಜಿದಾರನ ಪರ ಎಡ್ವೊಕೇಟ್.

ತಾ. 4—9—1967.

ಅರಬ - ಇಸ್ರೇಲ್ ಘರ್ಷಣೆಯ ಹಿನ್ನೆಲೆ, ಪರಿಣಾಮ

ಲೇಖಕರು: ಶ್ರೀ ಕೆ. ಜಿ. ವಸಂತಮಾಧವ, ಎಂ. ಎ

ಕ್ರಿ. ಶ. 78ರಲ್ಲಿ ಪ್ಯಾಲೆಸ್ತೈನಿನ ಮುಖ್ಯ ಪಟ್ಟಣವಾದ ಜೆರುಸಲೆಮ್ ರೋಮ್ ಸಾಮ್ರಾಜ್ಯದ ಅಧೀನವಾಯಿತು. ಅಲ್ಲಿರುವ ಜ್ಯೂ ಜನಾಂಗದವರು ರೋಮ್ ಚಕ್ರವರ್ತಿಗಳಿಗೆ ಆಗಿಂದಾಗ್ಗೆ ಕಿರುಕುಳ ಕೊಡುತ್ತಿದ್ದರು. ಕೊನೆಗೆ ಅವರ ಕಿರುಕುಳವನ್ನು ಸಹಿಸಲಾಗದೆ ಟೈಟಸ್ ಚಕ್ರವರ್ತಿಯು ಜೆರುಸಲೆಮ್‌ನ್ನು ಕೊಳ್ಳೆ ಹೊಡೆದು ಜ್ಯೂಗಳನ್ನು ರೋಮನ್ ಸಾಮ್ರಾಜ್ಯದ ವಿವಿಧ ಮೂಲೆಗಳಿಗೆ ಚದರಿಸಿದನು. ತದನಂತರ ಜ್ಯೂಗಳು ರೋಮ್ ಸಾಮ್ರಾಜ್ಯದ ವಿವಿಧ ಮೂಲೆಗಳಲ್ಲಿ ವಾಸಿಸಿ ತಮ್ಮ ಪ್ರತ್ಯೇಕತೆಯನ್ನು ಆಶ್ಚರ್ಯಕರವಾದ ರೀತಿಯಲ್ಲಿ ಕಾಪಾಡುಕೊಂಡು ಬಂದರು. ಆದರೆ ಅವರಿಗೆ ತಮ್ಮದೇ ಆದ ಒಂದು ದೇಶವಿರಲಿಲ್ಲ. ರೋಮ್ ಚಕ್ರವರ್ತಿಗಳು ಯಹೂದಿಗಳನ್ನು ಹಲವಾರು ರೀತಿಯಲ್ಲಿ ಪೀಡಿಸಿದರು. ಅಂತೂ ಜೆರುಸಲೆಮ್ ನಗರವು ರೋಮನ್ನರ ವಶದಲ್ಲಿ 400 ವರ್ಷ ಇದ್ದಿತ್ತು. ಕ್ರಿ. ಶ 4ನೇ ಶತಮಾನದಲ್ಲಿ ಚಕ್ರವರ್ತಿ ಕಾನ್‌ಸ್ಟೈನ್ ಕ್ರೈಸ್ತ ಮತವನ್ನು ಸ್ವೀಕರಿಸಿ ಅನೇಕ ಯಹೂದಿಗಳ ಪ್ರಾರ್ಥನಾ ಮಂದಿರವನ್ನು ಯಾಳಗೆಡವಿ ಕ್ರೈಸ್ತ ಮಂದಿರಗಳನ್ನು ಜೆರುಸಲೆಮ್‌ನಲ್ಲಿ ಎಬ್ಬಿಸಿದನು.

ರೋಮನ್ ಸ್ವಾಮ್ರಾಜ್ಯದ ನಂತರ ಜ್ಯೂಗಳ ಸ್ಥಾನ

ಕ್ರಿ. ಶ. 611ರಲ್ಲಿ ರೋಮನ್ನರ ಆಧಿಪತ್ಯವು ಪ್ಯಾಲೆಸ್ತೈನಿನಲ್ಲಿ ಅಂತ್ಯಗೊಂಡಿತು. ಪರ್ಶಿಯನ್ನರು ಪ್ಯಾಲೆಸ್ತೈನ್‌ನ್ನು ವಶಪಡಿಸಿಕೊಂಡು ಅಲ್ಲಿರುವ ಕ್ರೈಸ್ತ ಮತ್ತು ಯಹೂದಿಗಳ ಪ್ರಾರ್ಥನಾ ಮಂದಿರಗಳನ್ನು ಸುಟ್ಟು ನಗರವಾಸಿಗಳನ್ನು ಕೊಂದ, ಅತ್ಯಂತ ಭಯಾನಕ ಅಡಳಿತವನ್ನು ಸ್ಥಾಪಿಸಿದರು. ಈ ಕಾಲದಲ್ಲಿಯೇ ಯೇಸುವನ್ನು ಏಂಬಿಸಿದ ಪವಿತ್ರ ಶಿಲುಬೆಯನ್ನು ಪರ್ಶಿಯನ್ನರು ಹೊರಗೆ ಸಾಗಿಸಿದರು

ಮುಸ್ಲಿಂರ ಕಾಲದಲ್ಲಿ ಜ್ಯೂಗಳು

ತದನಂತರ ಮುಸ್ಲಿಂರ ಪ್ರಭಾವವು ಪ್ಯಾಲೆಸ್ತೈನಿನ ಮೇಲಾಯಿತು. ಕ್ರಿ. ಶ. 637ರಲ್ಲಿ ಮಹಮ್ಮದ್‌ನ ಪೈಗಂಬರರ ಸೇನಾಧಿಕಾರಿ ಹಿರೂತ ಜೆರುಸಲೆಮ್‌ನ್ನು ಗೆದ್ದನು. ಲಂಡನ್ನಿಂದ ಇಸ್ಲಾಂ ಮತ ಪಾಸ್ತ್ಯನ್ನು ಪ್ರವೇಶಿಸಿತು. ಮುಸ್ಲಿಂ ಖಲೀಫಾ ಆಳ್ವಿಕೆ ಕಾಲದಲ್ಲಿ ಕ್ರೈಸ್ತಿಯನ್ ಮತ್ತು ಯಹೂದಿಗಳಿಗೆ ಜಿಜಿಯಾ ತೆರಿಗೆ ಕೊಟ್ಟಲ್ಲಿ ತಮ್ಮ ತಮ್ಮ ಧರ್ಮವನ್ನು ಆಚರಿಸಲು ಅವಕಾಶವಿತ್ತು. ಆದುದರಿಂದ ಜ್ಯೂಗಳು ನಿರಾತಂಕವಾಗಿ ತಮ್ಮ ಧರ್ಮವನ್ನು ಆಚರಿಸಿಕೊಂಡು ಮುಸ್ಲಿಂರೊಡನೆ ಮಿತ್ರತ್ವದಿಂದ ಇದ್ದರು. ಆದರೆ ಪ್ಯಾಲೆಸ್ತೈನ್‌ನಲ್ಲಿ ಮುಸ್ಲಿಂರ ಸಂಖ್ಯೆಯು ಹೆಚ್ಚುತ್ತಾ ಬಂತು. ಈ ಶಾಂತಿ ಮತ್ತು ಸಹಬಾಳ್ವೆ ಬಹುಕಾಲ ಬಾಳಲಿಲ್ಲ.

ಉಜ್ಜೀವದಲ್ಲಿ ರಾಜ್ಯಭಾರ ನಡೆಸುತ್ತಿದ್ದ ಷಿಯೂ ಸಂತತಿಯವರು ಜೆರುಸಲೆಮ್‌ನ್ನು ಗೆದ್ದು ಇಸ್ಲಾಂರಲ್ಲದವರನ್ನು ಹಿಂಸಿಸಿದರು. ಅವರ ಅರಸ ಐಲು ದೊರೆ ಹಕೀಂ ಎಲ್ಲಾ ಮಸ್ಜಿದೇತರ ಮಂದಿರಗಳನ್ನು ನಾಶಪಡಿಸಿದನು.

ಜ್ಯೂಗಳು ಟರ್ಕಿ ಸಾಮ್ರಾಜ್ಯದಲ್ಲಿ

ಟರ್ಕಿಯ ತುರುಕರು ಮುಸ್ಲಿಂ ಮತವನ್ನು ಸ್ವೀಕರಿಸಿ ಹಲವಾರು ರಾಜ್ಯಗಳನ್ನು ಗೆದ್ದು ಕೊನೆಗೆ ಕ್ರಿ. ಶ. 1076ರಲ್ಲಿ ಜೆರುಸಲೆಮ್‌ನ್ನು ವಶಪಡಿಸಿಕೊಂಡರು. ಅವರುಕ್ರೈಸ್ತ ಯಾತ್ರಾರ್ಥಿಗಳನ್ನು ಹಿಂಸಿಸಿ ಅವರ ಪವಿತ್ರ ದೇವಾಲಯಗಳನ್ನು ನಾಶಪಡಿಸಿದರು. ಇದರಿಂದ ಯುರೋಪಿನ ಕ್ರೈಸ್ತಿಯನ್ನರು ಕ್ರೂಧಿತರಾಗಿ ಕ್ರೂಸೇದರ್ಸು ಎಂಬ ಹೆಸರಲ್ಲಿ ತಂಡ ತಂಡವಾಗಿ ಜೆರುಸಲೆಮಿನ ಮೇಲೆ ಧಾಳಿ ಇಟ್ಟರು. ಒಂದನೇ ಕ್ರೂಸೆಡ್‌ನನ್ನು ಬಿಟ್ಟರೆ ಇತರ ಕ್ರೂಸೇಡುಗಳು ಜೆರುಸಲೆಮ್‌ನ್ನು ಟರ್ಕಿಯಿಂದ ವಿಮೋಚಿಸುವಲ್ಲಿ ಯಶಸ್ವಿಯಾಗಲಿಲ್ಲ. ಮುಂದೆ ಜೆರುಸಲೆಮ್ 1917ರ ವರೆಗೆ ಟರ್ಕಿ ಸಾಮ್ರಾಜ್ಯದ ಆಧಿಪತ್ಯದಲ್ಲಿದ್ದಿತ್ತು.

ಈ ಕಾಲದಲ್ಲಿ ಜ್ಯೂಗಳು ಅಲ್ಪ ಸಂಖ್ಯಾತರಾಗಿ ಉಳಿದುಕೊಂಡದ್ದರಿಂದ ಅವರ ಸಂಖ್ಯೆ ವೃದ್ಧಿಗೊಂಡಿತು. ಅದುದರಿಂದ ಟರ್ಕಿ ಸಾಮ್ರಾಜ್ಯಕ್ಕೆ ಯಹೂದಿ ಜ್ಯೂಗಳಿಂದ ಯಾವ ತೊಂದರೆಯೂ ಇರಲಿಲ್ಲ. ಆ ಕಾಲದಲ್ಲಿ ಟರ್ಕಿ ಸಾಮ್ರಾಜ್ಯದಲ್ಲಿರುವ ಜ್ಯೂಗಳಲ್ಲಿ ರಾಷ್ಟ್ರೀಯ ಭಾವನೆಯು ಇನ್ನೂ ಬೆಳೆದು ಬಂದಿರಲಿಲ್ಲ. ಮುಸ್ಲಿಂರು ಮತ್ತು ಜ್ಯೂಗಳು ಶಾಂತಿ ಸಹಬಾಳ್ವೆಯಿಂದ ಜೀವಿಸುತ್ತಿದ್ದರು. ಜ್ಯೂಗಳಿಗೆ ತಮ್ಮ ಧರ್ಮವನ್ನು ಆಚರಿಸಲು ಸಂಪೂರ್ಣ ಸ್ವಾತಂತ್ರ್ಯವಿದ್ದಿತ್ತು. ಯುರೋಪಿನಲ್ಲಿ ಕ್ರೈಸ್ತಿಯನ್ನರಿಂದ ಪೀಡೆಯನ್ನು ಕಹಿಸಲಾರದೆ ಬಡಬಂದ ಹಲವಾರು ಜ್ಯೂಗಳಿಗೆ ಟರ್ಕಿ ಚಕ್ರವರ್ತಿಗಳು ತಮ್ಮ ವೈಭವಶಾಲದಲ್ಲಿ ತಮ್ಮ ಸಾಮ್ರಾಜ್ಯದಲ್ಲಿ ಆಶ್ರಯವನ್ನು ನೀಡಿದ್ದರು. ಆದರೆ ಟರ್ಕಿ ಸಾಮ್ರಾಜ್ಯದ ಅಂತ್ಯಕಾಲದಲ್ಲಿ ಜ್ಯೂಗಳ ವಿಚಾರಗಳು ರಾಜಕೀಯ ಸ್ವರೂಪವತ್ತಿದ್ದವಲ್ಲದೆ ಪರರಾಷ್ಟ್ರಗಳು ಇವರಲ್ಲಿ ಆಸಕ್ತಿ ವಹಿಸಿದವು. ಇದರಿಂದಾಗಿ ಟರ್ಕಿ ಚಕ್ರವರ್ತಿಗಳು ಜ್ಯೂ ಜನರನ್ನು ಸಂಶಯದಿಂದಲೂ, ಜಾಗ್ರತೆಯಿಂದಲೂ ನೋಡಿಕೊಳ್ಳಲಾರಂಭಿಸಿದರು. ಒಟ್ಟೊಮನ್ ಸಾಮ್ರಾಜ್ಯದಲ್ಲಿ ನೆಲಸಿದ್ದ ಪರರಾಷ್ಟ್ರಯ ಪ್ರಜೆಗಳಾದ ಜ್ಯೂಗಳೂ, ತಾವು ಬಂದ ದೇಶದ ಸಂಪರ್ಕವನ್ನು ಇಟ್ಟುಕೊಂಡೆ ಇದ್ದು ಪ್ಯಾಲೆಸ್ತೈನಿಗೆ ಬಲಸೆ ಬಂದ ಜ್ಯೂಗಳೂ ಮತ್ತು ಜನೋಯಿಷ್ಟ ಸಂಸ್ಥೆಗಳೂ ಟರ್ಕಿ ಚಕ್ರವರ್ತಿಗಳಿಗೆ ಕಲಸುಗೇಡನ್ನೂ ಮಾಡಿದವು ಜೆನೋಯಿಷ್ಟ ಸಂಸ್ಥೆಯ ಅಧ್ಯಕ್ಷ ಥಿಯೋಡರ್ ಹರಜಲ್ ಜ್ಯೂ ಜನಾಂಗದವನು ಪ್ಯಾಲಸ್ತೈನಿಗೆ ಹೆಚ್ಚಾಗಿ ಬಂದು ಬಲಸೆ ನಿಲ್ಲುವಂತೆ ಅನುಮತಿ ಕೊಡಬೇಕೆಂದು ಟರ್ಕಿ ಚಕ್ರವರ್ತಿಯನ್ನು ಪ್ರಾರ್ಥಿಸಿದಾಗ ಟರ್ಕಿ ಚಕ್ರವರ್ತಿಯು ಅದನ್ನು ನಿರಾಕರಿಸಿದನು

ಮಧ್ಯಯುಗದಲ್ಲಿ ಯುರೋಪಿನಲ್ಲಿ ಜ್ಯೂ

ಅಸ್ಥಿರ ಸ್ಥಿತಿಯು ಮಧ್ಯಯುಗದಲ್ಲಿ ಕ್ರಿಶ್ಚನ್ ಧರ್ಮಾದವರು ಯುರೋಪಿನ ದೇಶಗಳಲ್ಲಿ ನೆಲಸಿದ್ದ ಜ್ಯೂಗಳ ಮೇಲೆ ದಬ್ಬಾಳಿಕೆ ನಡೆಯುತ್ತಿತ್ತು. ಅವರಿಗೆ ರಾಜಕೀಯ, ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳಿಲ್ಲದೆ ಅನೇಕ ತೊಡಕುಗಳಿಂದ ಕೂಡಿದ ಪ್ರತ್ಯೇಕ ಸ್ಥಳದಲ್ಲಿ ಜೀವಿಸುತ್ತಿದ್ದರು. ಹೀಗೆ ಯುರೋಪ್ ರಾಷ್ಟ್ರಗಳಲ್ಲಿ ಜ್ಯೂಗಳ ಜೀವನ ಶೋಚನೀಯವಾಗಿತ್ತು. ಬರ್ಡೂಂಧುಂದಲೂ, ಜ್ಯೂರ ಅರಸುಗಳಿಂದಲೂ ದಬ್ಬಾಳಿಕೆಯನ್ನು ಜ್ಯೂಗಳು ಎದುರಿಸಬೇಕಿತ್ತು. ಕೆಲವು ಅರಸರು, ಧನಲಾಭದಿಂದಾಗಿ ಯಹೂದಿಗಳ ಸಾವಹಿಕ ಕೊಲೆ ನಡೆಸುತ್ತಿದ್ದರು. ಒಟ್ಟೆನಲ್ಲಿ ಜ್ಯೂಗಳನ್ನು ಯುರೋಪಿನ ಕ್ರಿಶ್ಚಿಯನ್ ಸಮಾಜವು ತಾಚ್ಛೇಕಾರದಿಂದ ಸೂಡಿಕೊಂಡಿತ್ತು. ಈ ಕಷ್ಟಕಾಲದಲ್ಲಿಯೂ ಪ್ಯಾಲೆಸ್ತೈನನ್ನು ತಮ್ಮ ಪೂರ್ವಜರ ಭೂಮಿಯೆಂದೂ, ಮುಂದೊಮ್ಮೆ ಪ್ರವಾದಿ ಜನಿಸಿ ತಮ್ಮ ಕಷ್ಟವನ್ನು ದೂರ ಮಾಡಿಕೊಡುವನೆಂದೂ ತಿಳಿದಿದ್ದ ಜ್ಯೂಗಳು ಪ್ಯಾಲೆಸ್ತೈನಿಗೆ ಕರೆದ ಕೊಂಡ ಹೋಗ ಬನೆಂದಾ ಜ್ಯೂಗಳು ನಡೆಬಿದ್ದರು.

ಜೆನೋಯಿಷ್ಟ ಸಂಸ್ಥೆ ಸ್ಥಾಪನೆ

ಯುರೋಪಿನ ಕ್ರೈಸ್ತಿಯನ್ನರ ದಬ್ಬಾಳಿಕೆಯು ಜ್ಯೂಗಳನ್ನು ಸಂಘಟಿಸಿತು. ಇಂಥ ಗಳಲ್ಲಿ ಮುಖ್ಯವಾದುದು ಜೆನೋಯಿಷ್ಟ ಸಂಸ್ಥೆ. ಜಗತ್ತಿನ ಜ್ಯೂಗಳನ್ನು ಸಂಘಟಿಸಿ ಅವರಿಗೆ ಪ್ರತ್ಯೇಕ ರಾಜ್ಯ ನಿರ್ಮಾಣ ಉದ್ದೇಶದಿಂದ ಒಳಗೊಂಡ ಜೆನೋಯಿಷ್ಟ ಸಂಸ್ಥೆಯನ್ನು 1897ರಲ್ಲಿ ಥಿಯೋಡರ್ ಹೆರಜಲ್ (Theodor Harl) ಸ್ಥಾಪಿಸಿದನು. ಈವರು ಜ್ಯೂಗಳನ್ನು ಯುರೋಪಿನಿಂದ ವಿವಿಧಕ್ಕೆ ಮಾಡುವ ಉದ್ದೇಶದಿಂದ ಮತ್ತು ಕೆಲವು ಉದಾರಿಗಳ ಜ್ಯೂಗಳ ಕಷ್ಟವನ್ನು ನೋಡಿ ಕನಿಕರದಿಟ್ಟ ಈ ಸಂಸ್ಥೆಯನ್ನು ಪ್ರೋತ್ಸಾಹಿಸಿದರು. ಬ್ರಿಟಿಷ್ ಸರಕಾರವು ಜ್ಯೂಗಳಿಗೆ ಆಫ್ರಿಕದ ಉಗಾಂಡಾದಲ್ಲಿ ಸ್ವರಾಜ್ಯವನ್ನು ಕೊಡುವುದಾಗಿ ಹರಜಲ್‌ನಿಗೆ ತಿಳಿಸಿದಾಗ ಅವನು ತಾತ್ಕಾಲಿಕವಾಗಿ ಒಪ್ಪಿದ್ದನು. ಎಂದಿಗೆ ಇಂಕಾರ

(ಎಂಟನೇ ಪುಟ ನೋಡಿರಿ)

ಹೆಮ್ಮರದಲ್ಲಿ ಹೊಸ ಚಿಗುರು

ಕಂದೆಯಂತೆ ಮಗ ಕೂಡಾ : ಬೆಳೆದ ಅತ್ತೆತ್ತನರದಲ್ಲಿ ಮೊಳೆತ ಪುಟ್ಟ ಚಿಗುರಿನಂತೆ: ಹಣ ಕೂಡಿಡುವ ಪರಿವಾರ ಈ ಮಗು ಹೆತ್ತವರಿಂದ ಪಡೆದು ಬಂದ ಗುಣ. ಪುಟ್ಟ ನಾಣ್ಯ ನಾಗುವಿನ ಕೈಗೆ ದೊರೆತ ಕ್ಷಣ ಅದು ನೇರವಾಗಿ ಉಳಿಯ ಉಳಿತಾಯದ ದಬ್ಬಿಯನ್ನು ಸೇರುತ್ತದೆ. ಅಲ್ಲಿ ಕೂಡಿದ ಹಣ ಮತ್ತೆ ಸೇರುವುದು ಅಳಿಯ ಹಸರಿನಲ್ಲಿರುವ ಬ್ಯಾಂಕಿನ ಖಾತೆಗೆ. ಈಗೆ ಬೆಳೆದಂತೆ ಖಾತೆಯಲ್ಲಿರುವ ಉಳಿತಾಯದ ಪೊತ್ತಪ್ಪು ಬೆಳೆಯುತ್ತದೆ. ಜತಗೆ ಮಗುವಿನ ಹಣ ಕೂಡಿಡುವ ಹವ್ಯಾಸ ಮತ್ತು ಕೂಡಿಟ್ಟ ಹಣವನ್ನು ಬ್ಯಾಂಕಿನ ಖಾತೆಗೆ ಜಮೆಮಾಡುವ ಪರಿವಾರ ಕೂಡಾ.

ಚಿಕ್ಕತಯಸ್ಸಿನಲ್ಲೇ ನಿಮ್ಮ ಮಕ್ಕಳಲ್ಲಿ ಉಳಿತಾಯದ ಹವ್ಯಾಸವನ್ನು ತೊಡಗಲು ನೆರವಾಗಿ. ಉಳಿತಾಯದ ದಬ್ಬಿಯಲ್ಲಿ ಹಣ ಬೆಳೆಯುತ್ತಿರುವಂತೆ ಅವರು ಉಬ್ಬುವುದನ್ನು ಕಂಡು ಆ ಸಂತೋಷದಲ್ಲಿ ಪಾಲುಗೊಳ್ಳಿರಿ. ನಿಮ್ಮ ಮಕ್ಕಳ ವಿಶೇಷ ಮನಸ್ಸಿನಲ್ಲಿ ನೀವು ಅನರ್ಘವೆಂದು ಬಿತ್ತಬೇಕಾದ ಗುಣ—ಉಳಿತಾಯ. ನಿಮ್ಮ ಮಕ್ಕಳ ಮುಂದಿನ ಬದುಕಿಗೆ ನೆರವಾಗುವ ಸಾಧನ—ಉಳಿತಾಯ.

ಸಿಂಡಿಕೇಟ್ ಬ್ಯಾಂಕಿನಲ್ಲಿ ನಿಮ್ಮ ಅನುಕೂಲತೆಗಳಿಗೆ ಹೊಂದಿಕೊಳ್ಳುವ ವಿವಿಧ ತೆರನ ಉಳಿತಾಯ ಖಾತೆಗಳಿವೆ. ಸಿನ್ಗಿ ಸೇವಿಂಗ್ಸ್ ಬ್ಯಾಂಕ್, ಕ್ಯುಮ್ಯುಲೇಟಿವ್ ಡಿಪಾಸಿಟ್, ಇತ್ಯಾದಿ. ಯಾವುವಾದರೊಂದು ಉಳಿತಾಯ ಖಾತೆಯನ್ನು ನಿಮ್ಮ ಮಕ್ಕಳ ಹೆಸರಿನಲ್ಲಿ ತೆರೆದು ಈ ಖಾತೆಯು ಕ್ರಮವಾಗಿ ಬೆಳೆಯುವಂತೆ ಮಾಡಿ. ಇದು ನೀವು ನಿಮ್ಮ ಮಕ್ಕಳಿಗೆ ನೀಡುವ ಹಿರಿಮೆಯ ಕಾಣಿಕೆ ಯಾಗಬಲ್ಲುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.



ಸಂಯುಕ್ತ ಸರಕಾರ ಸ್ಥಾಪನೆಗೆ ಸರಿಯಾದ ಸಮಯ

ಬರೆದವರು: ಶ್ರೀ ಶಿವಶಂಕರ, ಮದರಾಸು.

ಪಕ್ಷಾಂತರ ಪರಿದಾಟವು ಪಂಚಪಾತಕಗಳಲ್ಲಿ ಒಂದಿರುವದಿಲ್ಲ. ಕೆಲವು ಸಲ ಅದು ಅನಿವಾರ್ಯ ಅವಕಾಶವೇ ಇರುತ್ತದೆ. ಅಂದರೆ ಅದರಿಂದಾಗಿ ಅದ್ಯಾವ ಅಹಿತ ಅಥವಾ ಅಪಶ್ರುತಿ ಅವಿರ್ಭವಿಸುವದಿಲ್ಲ ಅನ್ನುವದು ಅಷ್ಟು ಸರಿಯಲ್ಲ. ಅಂತಹ ಅಹಿತ ಅಥವಾ ಅಪಶ್ರುತಿಗಳಿರಲಿ ನಿಜವಾಗಿ ಪಕ್ಷಗಳು ಕಾರಣ ಇರುವದಿಲ್ಲ. ಪಕ್ಷಾಂತರ ನಡೆಸುವವನ ಹೃದಯವನ್ನು ಮತ್ತು ಮನಸ್ಸನ್ನು ಅದು ಹೊಂದಿಕೊಂಡಿದೆ. ಪಕ್ಷದ ತತ್ವ-ಧೋರಣೆ ಹಾಗೂ ರಾಷ್ಟ್ರಹಿತವನ್ನು ಪ್ರಾಮುಖ್ಯವೆಂದು ಪರಿಗಣಿಸಿ ಪಕ್ಷಾಂತರ ನಡೆಸಿದಾಗ ಪ್ರಮಾದಕ್ಕೆ ಅವಕಾಶ ಬರುವದಿಲ್ಲ. ಆದರೆ ಬದಲು ತನ್ನ ಹಿತ ಹಾಗೂ ಪಕ್ಷದ ಹಿತವನ್ನೇ ಗುಡ್ಡೆಯನ್ನಾಗಿ ಮಾಡಿಕೊಂಡಾಗ ಅಪಶ್ರುತಿಗೆ ಇಲಿ ಅದನ್ನು ಕೊರೆಯಲಾರಂಭಿಸುತ್ತದೆ. ಕೇವಲ ಮಂತ್ರಿಪದವಿಯ ಮಹತ್ವಾಕಾಂಕ್ಷೆಯಿಂದ ಪಕ್ಷಕ್ಕೆ ತಿಲಾಂಜಲಿ ಕೊಡುವವರು ತಾವು ಹೋಡೆಗೆಗಳಲ್ಲೆಲ್ಲಾ ಅಪಶ್ರುತಿಯ ಬೀಜವನ್ನು ಬಿತ್ತುತ್ತಾರೆ. ಹಾಗೆನೇ ಪಕ್ಷದ ಪ್ರಚಾರಕ್ಕಾಗಿಯೇ ಅಡಳಿತದ ಆಸನವನ್ನು ವೇದಿಕೆಯನ್ನಾಗಿ ದುರುಪಯೋಗಗೊಳಿಸುವ ಪಕ್ಷಪ್ರಿಯರಿಂದಲೂ ಅಪತ್ತು ಹೆಪ್ಪಿದ್ದಲ್ಲ. ಈ ಎರಡು ಬಳಗದವರೂ ಆಸನಕ್ಕಾಗಿ ಅದೇನನ್ನು ಬೇಕಾದರೂ ಮಾಡಲು ಸಿದ್ಧ. ಅವರು ಮೂಢೇನ ಪುಸ್ತಕಗಳನ್ನು, ಅಯೂಬನ ಪುಸ್ತಕಗಳನ್ನು ಓದಲ್ಯಾ ಮೊತ್ರ ಮುಂದಾಗುವದಿಲ್ಲ, ಅವರಿಗೆ ಆ ಪ್ರಾತಃವನ್ನೇ ಯಾಲು ಅದಿನಿತೂ ಅಂಜುವದಿಲ್ಲ. ಮೂಢೇ ಮತ್ತು ಅಯೂಬರಾದಿಂ ಗೃಧ್ರಗಳು ಇಂತಹ ಇರಿಗಳಿಗಾಗಿಯೇ ಹೊಂಚುಹಾಕುತ್ತಿದ್ದಾರೆ. ನಾವಾದರೋ ಬ್ರಿಟಿಷರ ಬಂಡಿಬಡಿಯೂಟದಿಂದ ಲೂಬುದ್ಧಿಕಲಿತ.ಕೊಂಡಿರುವದಿಲ್ಲ! ಆಸನದ್ವಲಸೆ ತೋರಿಸಿ ಅವರು ಅಣ್ಣ-ತಮ್ಮಂದಿರೊಳಗೆ ಜಗಳದ ಅಂಗಳ ಉಂಟುಮಾಡಿ, ಇಬ್ಬರ ಜಗಳ ಮೂರನೇಯವನಿಗೆಲಾಭವೆಂಬಂತೆ ಸಿಂಹಾಸನವನ್ನು ತಾವು ಆಕ್ರಮಿಸಿಕೊಂಡರು. ಅವರನ್ನಟ್ಟಿ ಇಪ್ಪತ್ತು ವರ್ಷಗಳು ಸಂದ ನಂತರವೂ ಅದಿನಿತೂ ನಾಚಿ ಅರಿತುಕೊಂಡಿರುವದಿಲ್ಲ. ಅಧಿಕಾರಕ್ಕಾಗಿ ಪಕ್ಷಗಳನ್ನು ಬಿಟ್ಟಿಕೊಂಡು ಇಂದೂ ಹೊಡೆದಾಡಿ ಕೊಳ್ಳುತ್ತಿದ್ದೇವೆ. ಅನ್ಯಪಕ್ಷದವರು ಆಸನವನ್ನೇರಿದಲ್ಲಿ ಅದೆಂತಾದರೂ ಅವರನ್ನು ರುಳಿಸಲೇಬೇಕೆಂದು ಅವರವರು ಆಸೆಪಟ್ಟುಕೊಳ್ಳುತ್ತಿದ್ದಾರೆ. ಬಿಹಾರಿನ ಉದಾಹರಣೆ ಬಿಸಿ ಬಿಸಿ ಇದೆ. ಅಲ್ಲಿ ಸಂಯುಕ್ತರಂಗದ ಮಂತ್ರಿ ಮಂಡಲ ಇದೆ. ಅಂದರೆ ಅಲ್ಲಿ ಕಾಂಗ್ರೆಸ್ಸಿಗರ ಕಾಲು ಜಾರಿ ಹೋಗಿದೆ. ಸ್ವತಃ ಕಾಂಗ್ರೆಸ್ಸು ತಡೆ ಇಲ್ಲದ ಅಡಳಿತಕ್ಕೆ ತಾನು ಸಹಾಯಸಲ್ಲಿಸಬೇಕಾಗಿತ್ತು. ಅದರ ಬದಲು ಮಂತ್ರಿ ಮಂಡಲವನ್ನುರುಳಿಸಲು ಸಂಚು ಹೂಡುತ್ತಿದೆ! ಇತ್ತ ಮಂತ್ರಿ ಮಂಡಲವನ್ನು ರಚಿಸಿರುವ ಪಕ್ಷಗಳಾದರೋ(ಹೆಚ್ಚಿನವು) ದೇಶದ ಹಿತದತ್ತ ಲಕ್ಷ್ಯವನ್ನೀಯುವದನ್ನು ಬಿಟ್ಟು ತಮ್ಮ ತಮ್ಮ ಪಕ್ಷಗಳ ಪ್ರಚಾರಕ್ಕಾಗಿ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿವೆ. ಬಿಹಾರ್ ಪ್ರದೇಶ ಕಾಂಗ್ರೆಸ್ಸ್ ಸಮಿತಿಯ ಅಧ್ಯಕ್ಷ ಶ್ರೀ ರಾಜೇಂದ್ರ ಮಿಶ್ರರವರು ಪ್ರಚಲಿತ ಸಂಯುಕ್ತ ದಳದ ಮಂತ್ರಿ ಮಂಡಲವನ್ನುರುಳಿಸುವದಕ್ಕಾಗಿ ಇಡೀ ಸಂಸ್ಥೆಯು ಒಂದಾಗಿದೆಯೆಂದು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿರುವರು. ಕಾಂಗ್ರೆಸ್ಸೇತರರ ಮಂತ್ರಿ ಮಂಡಲವನ್ನು ಕಾಲು ಜಾರಿಸಿ ಬಿಡಲು ಕಾಂಗ್ರೆಸ್ಸು ಕಾಯುತ್ತಿದೆನ್ನುವದಕ್ಕೆ ಬೇರೆ ಉದಾಹರಣೆಯ ಅವಶ್ಯಕತೆ ಇದೆಯೇ? ಅಷ್ಟೇ ಅಲ್ಲ, ಕಾಂಗ್ರೆಸ್ಸು ಅಲ್ಲಿ ಗಗಳಪರಂದು ಹೂಳಿ ಬಿಟ್ಟಿರುವ ಉರ್ದೂವಿನ ಕೊಳೆತು ಬಿಡಬಿಡಿಯಾಗಿ ನಾರುತ್ತಿರುವ ಶವವನ್ನು ಇಂದುಹೊರತೆಗೆದು ಆಸನದಲ್ಲಿ ಕೂತು ಕೊಳ್ಳಿಸುವ ಆಸೆ ತೋರಿಸಿ ಕೆಲವರನ್ನು ಎತ್ತಿಕಟ್ಟಿದೆ. ಉರ್ದೂವನ್ನು ಬಿಹಾರಿನ ದ್ವಿತೀಯ ರಾಜ್ಯಭಾಷೆಯೆಂದು ಪರಿಗಣಿಸಬೇಕೆಂದು ಕಾಂಗ್ರೆಸ್ಸು ಮುಸ್ಲಿಮರನ್ನು ಛೂ ಬಿಟ್ಟಿರುತ್ತದೆ. ಇಪ್ಪತ್ತು ವರ್ಷಗಳಲ್ಲಿಉರ್ದೂವನ್ನು ರಾಜ್ಯಭಾಷೆಯನ್ನಾಗಿ ಮಾಡಲು ಕಾಂಗ್ರೆಸ್ಸಿಗರಿಗೆ ಸಾಧ್ಯ ಆಗಿರುವದಿಲ್ಲ. ಇದೀಗ ಅಗಲೇ ಬೇಕೆಂ! ಇದ್ದಿ ಕಾಂಗ್ರೆಸ್ಸಿಗರು ಆಸನಕ್ಕಾಗಿ ಅದೆಷ್ಟು ಕೀಳ್ಮಟ್ಟಕ್ಕಿಳಿದಿರುವರೆಂಬುದಿದರಿಂದ ಸ್ಪಷ್ಟವಾಗುತ್ತದೆ. ಪಾಕಿಸ್ತಾನವನ್ನು ಮೇಯ ಬೇಡಿಕೆಯೆಂದಾಗ ಕಾಂಗ್ರೆಸ್ಸಿಗರಲ್ಲಿ ಕಾದಾಟ ನಡೆದಿತ್ತು. ಆಗ ರಾಜಕೀಯ ಪೆಡ್ಡಾದ ಖಿದೀಮ್ ಜಿನ್ನಾರವರ್ತಿ ಶ್ರೀ ರಾಜಗೋಪಾಲಾಚಾರಿಯವರು ಒಂದು ಉಪಾಯವನ್ನು ಸೂಚಿಸಿದರು. ಕೆಲವು ವರ್ಷಗಳ ಹಿಂದೆ ಕರಾಚಿಯಲ್ಲಿ ಕಾಂಗ್ರೆಸ್ಸ್ ಮಹಾಧಿವೇಶನ ನಡೆದಾಗ ಅಲ್ಲಿ ಥಾಪಾರವರು ಪ್ರತ್ಯೇಕರಾಜ್ಯದ ನಿರ್ಣಯವು ಅಂಗೀಕರಿಸಲ್ಪಟ್ಟಿತ್ತು. ಅದರತ್ತ ಜಿಂಗುಲಿಯನ್ನು ತೋರಿಸಿ, ಉರ್ದೂ ಮಾತಾಡುವವರು ಬಹುಸಂಖ್ಯಾತರಿರುವ ಸ್ಥಳವನ್ನು ಪಾಕಿಸ್ತಾನವೆಂದು ನ್ಯಾಯವಾದಿ ಶ್ರೀ ಚೆ. ರಾ. ರವರು ವಾದ ಹೂಡಿ ಗೆದ್ದರು. ಹಾಗಿರುವಾಗಿ ನಾಕಿಸ್ತಾನಿ ಪಿಶಾಚಿಯು ಭಾಷೆ ಉರ್ದೂ ವೆಂಬುದನ್ನೆಂದು ಒಪ್ಪಿಕೊಂಡಂತಾಯಿತು. ಪುನಃ ಅದೇ ಪಿಶಾಚಿಯ ಪಾದಪೂಜೆಗೆ ಕಾಂಗ್ರೆಸ್ಸಿಗರು ಮುಂದಾಗಿದ್ದಾರೆ! ಹೇಗಾ ಪಾಕಿಸ್ತಾನವನ್ನು ಪಡೆದಿರುವರೆಂಬುದರ ಪ್ರಜ್ಞೆ ಇರುವವರು ಬರಗಾಲದಿಂದ ಆದು ಹೋಗಿರುವ ಬಿಹಾರಿನ ನೆಲವನ್ನು ರಕ್ತದಿಂದ ಕೆಸರಿಸಿಬಿಟ್ಟರು. ಅಷ್ಟಾದರೂ ರಾಜಕೀಯ ಪಕ್ಷಗಳು ಅದನ್ನೆದುರಿಸಲು ಮುಂದಕ್ಕೆ ಬರಲಿಲ್ಲ! ಸಂಯುಕ್ತ ದಳದಲ್ಲಿರುವ ಪಕ್ಷಗಳೇ ರಕ್ತದ ಮಡುವಿನಲ್ಲಿ ತಮ್ಮ ಪಕ್ಷದ ಪ್ರಮುಖರ ಮಹಾ ಭೋಜನಕ್ಕೆ ಬೇಕಾಗುವ ವಿನ್ನು ಹಿಡಿಯುವ ಹಿರಿದಾಸೆಯಿಂದ ಮುಂದಕ್ಕೆ ಬಾರದಿರಲು ಇಂತಹ ಸಂದರ್ಭದಲ್ಲಿಗಾಗಿಯೇ ಸದಾ ಹೊಂಚುಹಾಕುತ್ತಿರುವ ಕಮ್ಯುನಿಸ್ಟರು ತಮ್ಮ ಕುಳ್ಳಕ್ಕಗಳಿಗೆ ಮುಂದಾದರು. ಸಂಯುಕ್ತ ಸೋಷ್ಯಾಲಿಸ್ಟ್ ಪಕ್ಷವೂ ಸೋಪು ಸುಣ್ಣವಾಯಿತು. ಅದು ಎಲ್ಲಾ ತಪ್ಪನ್ನು ಭಾರತೀಯ ಜನಸಂಘದವರ ತಲೆಯ ಮೇಲೆ ಹಾಕಿಬಿಟ್ಟಿತು. ಉರ್ದೂ ರಾಜ್ಯಭಾಷೆಗಾಗಿ ಬಿಟ್ಟರೆ ಇವರಪ್ಪನ ಗಂಟೇನೂ ಖರ್ಚಾಗಿ ಹೋಗುವುದೆಂಬುದು ಅವರ ವಾದ, ಜಂತೂ ಆಸನಕ್ಕೆ ಅಂಟಿಕೊಂಡಿದ್ದರಾಯಿತು! ಸಂಯುಕ್ತ ದಳದ ಸಂಪರ್ಕ ಸಮಿತಿಯ ರಾಜ್ಯದ ಮಂತ್ರಿ ಮಂಡಲವನ್ನು ಹಿರಿದು ಛಾಗೂ ಕಿರಿದಾಗಿಸಲು ಮುಂಖ್ಯಮಂತ್ರಿಯವರಿಗೆ ಪೂರ್ಣ ಅಧಿಕಾರ ಕೊಟ್ಟಿರುತ್ತದೆ! ಈ ಅಧಿಕಾರವಾದರೋ ದಳವನ್ನು ಬಲಪಡಿಸಲಿಕ್ಕಾಗಿ! ದೇಶದ ಉದ್ಧಾರಕ್ಕೆ ಅಲ್ಲ! ಪಕ್ಷಗಳ್ಳುದ್ಧಾರಕ್ಕೆ!

ಸಂಯುಕ್ತ ರಂಗಕ್ಕೆ ಇನ್ನೊಂದು ಗ್ರಹಣವೂ ಆವರಿಸುಕೊಂಡಿದೆ. ಅದು ಮಂಡಲವಾಗಿದೆ. ಸಂಯುಕ್ತ ಸೋಷ್ಯಾಲಿಸ್ಟ್ ಪಾರ್ಟಿಯ ಲೋಕಶ್ರೀಧಾ ಸದಸ್ಯರೊಬ್ಬರು ಸಂಯುಕ್ತರಂಗದದಲ್ಲಿ ಮಂತ್ರಿಯಾಗಿದ್ದು, ಇದೀಗ ಅವರು ಪಕ್ಷಾಂತರದ ಆಟವನ್ನು ಆಡಿರುವರು. ಇವರು ವಿಧಾನ ಮಂಡಲದ ಸದಸ್ಯರಲ್ಲವಾದ ಕಾರಣ ಇನ್ನು ಕೆಲವೇ ದಿನಗಳಲ್ಲಿ ಮಂತ್ರಿಪದವಿಯನ್ನು ಬಿಡಬೇಕು. ಅದನ್ನು ಬಿಟ್ಟು ಲೋಕಸಭೆಗೆ ಹೋಗುವದಾಗಿ ಅವರು ಒಪ್ಪಿದ್ದರು. ತಾತ್ಕಾಲಿಕವಾಗಿ ನೌಕರರನ್ನು ನೇಮಿಸಿಕೊಳ್ಳುವ ಅಭ್ಯಾಸ ಅಧಿಕಾರಿಗಳಾಗುತ್ತಿರುವ ಕಾಲ ಇದು. ಅರು ತಿಂಗಳಾಗುವಾಗ ನೌಕರರನ್ನು ಮನೆಗೆ ಕಳುಹಿಸುವದು, ಕೆಲ ದಿನಗಳ ನಂತರ ಪುನಃ ನೇಮಿಸಿಕೊಳ್ಳುವದು ಅಧಿಕಾರಿಗಳ ಅಭ್ಯಾಸ. ಅದಕ್ಕೆ ಅನೇಕ ಕಾರಣಗಳಿವೆ. ಇದೇ ಅಭ್ಯಾಸ ಮಂತ್ರಿಮಂಡಲಕ್ಕೂ ಅಂಟುವಂತಿದೆ. ಇದ್ದರೂ, ಅರು ತಿಂಗಳ ವಧಿಗೆ ಸಂಬಂಧವಿಲ್ಲದ ಸದಸ್ಯರು ಮಂತ್ರಿಯಾಗಿ ಉಳಿಯಬಹುದೆಂಬುದು ಸರಿಯಲ್ಲ. ಅರು ತಿಂಗಳೊಳಗೆ ಅವರು ಸದಸ್ಯರಾಗಲೇ ಬೇಕೆಂ. ಸಂಯುಕ್ತ ಮಂತ್ರಿ ಮಂಡಲ ಇಷ್ಟು ತೋರಿನ ಸಡಿಲು ಧೋರಣೆಯ ಫಲಿತಾಂಶ ಇಂದು ಅದು ಅನುಭವಿಸಬೇಕಾಗಿಬಂದಿದೆ. ಲಂಗ್ರೆಸ್ಸು ಅದನ್ನು ಅಂತುಕೊಂಡೂ ತನ್ನ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

ಇಂತಹ ಪಕ್ಷಾಂತರದ ಪಿಡುಗಿನ ದುಷ್ಪರಿಣಾಮ ಅಲ್ಲದೆ ಆಪಾಯ ಅಷ್ಟಿಷ್ಟಲ್ಲ. ಇಷ್ಟಿ ಸ್ಪಷ್ಟವಾಗಿ ತಿಳಿದು ಬರುವ ವಿಷಯವೆಂದರೆ ಪಕ್ಷಾಂತರ ನಡೆಸುತ್ತಿರುವ ವರು ರಾಷ್ಟ್ರೋತ್ಕರ್ಷಕ್ಕಾಗಿ ಹಾಗೆ ಮಾಡುತ್ತಿರುವದಿಲ್ಲ, ಕೇವಲ ಸ್ವಾರ್ಥಕ್ಕಾಗಿ ಹಾಗೆ ನಡೆಯುತ್ತಿದ್ದಾರೆ. ಸಂಯುಕ್ತರಂಗದ ಪಾತ್ರಧಾರಿಗಳೂ ಪಾಟಕದ ಯಶಸ್ಸಿಗಾಗಿ ಶ್ರಮಿಸುತ್ತಿಲ್ಲದೆ ತಮ್ಮ ತಮ್ಮ ಪಾತ್ರಗಳ ಪ್ರಾಮುಖ್ಯತೆಯ ಪ್ರದರ್ಶನಕ್ಕಾಗಿಯೇ ಪರಿತಪಿಸುತ್ತಿವೆ. ಹಾಗಿಲ್ಲವಾದಲ್ಲಿ ಸಂಯುಕ್ತ ಮಂತ್ರಿ ಮಂಡಲದಿಂದೇನೂ ಹಾನಿ ಆಗುವದಿಲ್ಲ. ಇದನ್ನೇ ಕೆಲವರು ರಾಷ್ಟ್ರೀಯ ಸರಕಾರವೆನ್ನುವರು. ಈಗ ಇರುವದು ಅರಾಷ್ಟ್ರೀಯ ಅಥವಾ ಅನ್ಯ ರಾಷ್ಟ್ರೀಯರ ಸರಕಾರವೆಂದು ಅದರ ಅರ್ಥವಲ್ಲ. ಹಿಸ್ಸ ಸರಕಾರದ ಕಾಲ ಬದಲಾಗಿ ಪ್ರಜ್ಞಾವಂತರ ಅಥವಾ ಬುದ್ಧಿಜೀವಿಗಳ ಸಂಘಟಿತ ಸರಕಾರ ಸ್ಥಾಪನೆಯಾಗಬೇಕೆಂಬುದು ಅದರ ಅರ್ಥ. ಇದನ್ನೇ ಶ್ರೀ ಜಯಪ್ರಕಾಶ ನಾರಾಯಣ, ಶ್ರೀ ರಾಜಾಜಿ ಹಾಗೂ ಭಾರತೀಯ ಜನ ಸಂಘದ ಮುಖಂಡರು ಹೇಳುತ್ತಿದ್ದಾರೆ. ಸಂಯುಕ್ತರಂಗವಾದರೋ ಸ್ಥಾಪಿಸಗಳನ್ನು ಹಂಚಿಕೊಳ್ಳಲಿಕ್ಕಾಗಿ ಅಲ್ಲ, ಜವಾಬ್ದಾರಿಯನ್ನು ಸಹಿಸಿಕೊಳ್ಳಲಿಕ್ಕಾಗಿ ಇದೆ. ಇದನ್ನು ಕಾಂಗ್ರೆಸ್ಸು ಒಪ್ಪುವದಿಲ್ಲ. ಇವರ್ಸ ಅನ್ಯಪಕ್ಷದವರನ್ನು, ಅಲ್ಲದೆ ಪಕ್ಷೇತರರನ್ನು ಆಕರ್ಷಿಸಿಕೊಂಡು ಪಕ್ಷಾಂತರ ನಡೆಸಿ ಬಿಡುತ್ತಾರೆ. ಅದೇ ರೀತಿ 'ರಾಷ್ಟ್ರೀಯ' ಸರಕಾರವನ್ನು ಎದುರಿಸುವವರು ಶ್ರೀ ರಾಮಮನೋಹರ ಲೋಹಿಯಾರವರು. ಕಾಂಗ್ರೆಸ್ಸಿಗರು ಕಾಲಿಬ್ಬಲ್ಲಿ ಕಾಲಿಡಲು ಅವರು ಸಿದ್ಧವಿ.ಆದರೆ ಕಾಂಗ್ರೆಸ್ಸೇತರ ಪಕ್ಷಗಳ ಸಂಯುಕ್ತರಂಗಕ್ಕೆ ಅವರು ಸದಾಸಿದ್ಧ. ಕಮ್ಯೂನಿಸ್ಟರು ಹಾಗೂ ಮುಸ್ಲಿಂ ಲೀಗಿಗಳಿಗಿಂತಲೂ ಕಾಂಗ್ರೆಸ್ಸಿಗರು ದೇಶದ್ರೋಹಿಗಳೇನು? ಅವರೇ 'ಕಾಂಗ್ರೆಸ್ಸಿಗನನ್ನು ಹೊಸಿ ಬದಲಾಯಿಸಿ ಬಿಟ್ಟರೆ ನಂತರ ಸಂಯುಕ್ತರಂಗದ ಪಾಲುಗಾರನಾಗಿ ಬಿಡುತ್ತಾನೆ! ಸಂಯುಕ್ತರಂಗವು ಪಕ್ಷಾಂತರ ನಡೆಸಲಿಕ್ಕಾಗಿಯೇ ರೆಚಿಸಲ್ಪಟ್ಟ ರಂಗವಲ್ಲ ರಾಜಕೀಯ ರಂಗಭೂಮಿಯೇನು? ಸಂಯುಕ್ತ ಸರಕಾರ ಸ್ಥಾಪನೆಗೆ ಸರಿಯಾದ ಸಮಯವೆಂದರೆ ಕಾಂಗ್ರೆಸ್ಸಿನ ವಿವಾಳಿ ಉತ್ಸವದ ದಿನವೇನು? ಶ್ರೀ ರಾಮಮನೋಹರ ಲೋಹಿಯಾರವರ ಅಭಿಪ್ರಾಯ ಅದುವೇ ಇರಬಹುದು.

ಶ್ರೀ ಜಯಪ್ರಕಾಶ ನಾರಾಯಣರಾದರೋ ತಾನೊಬ್ಬ ಹಿರಿಯ ಸಗ್ಯ ರಾಜಕೀಯ ವ್ಯಕ್ತಿಯೆಂಬಂತೆ ಸಂಯುಕ್ತ ಸರಕಾರದ ಸ್ಥಾಪನೆಯ ಸ್ವರವೆತ್ತಿರುವರೇ ವಿನಃ ಅದೆಂತು ಸಾಧ್ಯವೆಂಬುದನ್ನು ಸೂಚಿಸಿರುವದಿಲ್ಲ. ಅಷ್ಟಿದ ಅವರು ಸೂಚಿಸುವ ಪರಿಹಾರೋಪಾಯವನ್ನು ಸ್ವೀಕರಿಸಲು ಅನೇಕರು ಸಿದ್ಧರಿರುವದಿಲ್ಲ. ಕಾಲ್ಕ್ರಮವನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಡಬೇಕೆಂಬ ಹೇಳಿದ ಪ್ಲ ರಾಷ್ಟ್ರಭಿಮಾನಿಗಳು ಒಪ್ಪುಯಾರೇ?

ಶ್ರೀ ರಾಜಾಜಿಯವರು ಸಂಯುಕ್ತ ಮಂತ್ರಿ ಮಂಡಲದ ಸಲಹೆಯನ್ನಿತ್ತಿರುವ ರಾಜರೂ, ಕೊಳೆ ಯುತ್ತಿರುವ ಕಾಂಗ್ರೆಸ್ಸಿಕಳೆಬರದ ಸಂಸ್ಕಾರಕ್ಕಾಗಿಯೇ ಇರುವ ಆಚಾರ್ಯ ತಾನೆಂದು ಅವರು ಹೇಳುತ್ತಿದ್ದಾರೆ. ಅಂದರೆ ತನ್ನನ್ನು ಅಧಿಕಾರದ ಆಸನದಿಂದ ಅಟ್ಟಿ ಬಿಟ್ಟವನ ಕಾಂಗ್ರೆಸ್ಸಿನ ಕಾಲು ಜಾರಿದಲ್ಲಿ ಶ್ರೀ ರಾಜಾಜಿ ಬಿಹಾರ

ದಿಲ್ಲ. ಅಂತಹವರ ಅ ರೀತಿಯ ಸರಿಯು ತ್ತ ಮಂತ್ರಿ ಮಂಡಲ ಹೇಗಿದ್ದೀತು?

ಅನಿವಾರ್ಯವಲ್ಲದ್ದಲ್ಲಿ, ಸಂಯುಕ್ತ ಮಂತ್ರಿ ಮಂಡಲದ ಸ್ಥಾಪನೆಯೂದಲ್ಲಿ, ಕಾಂಗ್ರೆಸ್ಸಿಗರಿದ್ದರೂ ತಾವು ಘಾಗವಹಿಸುವದಾಗಿ ಭಾರತೀಯ ಜನಸಂಘದ ಮುಖಂಡರು ಹೇಳಿದೊಡನೆ ಶ್ರೀ ರಾಮನನೋಹರ್ ಲೋಹಿಯರವರ ಕಟು ಟೀಕೆ ಗೊಳಗಾಗಬೇಕಾಯಿತು. ಕಾಂಗ್ರೆಸ್ಸಿಗರೊತಪೆ ಕೈಮಿಲಾಯಿಸಲು ಸಿದ್ಧರಿರುವ ಜನಸಂಘದವರು ಕಾಂಗ್ರೆಸ್ಸಿನ ಜಯಘನಕ್ಕೆ ಮಂದಾಗಿರುವರು ಹೇಗೆಂಬುದೇ ಅವರ ಪ್ರಶ್ನೆ. ಇಲ್ಲಿ 'ಆಗಬ್ಯಬಿದ್ದಲ್ಲಿ' ಅನ್ನುವ ದನ್ನು ಆಲಕ್ಷಿಸುವಂತಿಲ್ಲ.

ಕಮ್ಯೂನಿಸ್ಟರಿಗಂತೂ ಇಂತಹ ವಿಷಯಗಳಲ್ಲಿ ಒಂದು ನಿರ್ದಿಷ್ಟ ನಿಲುವು ಇರುವದಿಲ್ಲ. ಅಧಿಕಾರವನ್ನು ವಶಪಡಿಸಿಕೊಳ್ಳುವದೇ ಅವರ ಏಕಮೇವ ಗುರಿ. ಅದಕ್ಕಾಗಿ ಚೀನಾ ಚುನಾವಣೆಯಲ್ಲಿ ಭಾಗವಹಿಸಿದ್ದು; ವಿಜಯವಾಡಾ, ತೆಲಂಗಾಣಾ, ನಕ್ಸಲಬಾರಿ ಮೂಡಲೂ ಸಿದ್ಧ; ಕಾಂಗ್ರೆಸ್ಸಿನರೊಂದಿಗೆ ಕಾಲಿಡಲೂ ಸಿದ್ಧ; ಕಾಂಗ್ರೆಸ್ಸೇತರರೊಂದಿಗೆ ಚೈಮಿಲಾಯಿಸಲೂ ಸಿದ್ಧ. ಅಂಪೂ ಕಂಪು ಕೋಟಿಯನ್ನು ನಿಜವಾಗಿ ಆವರಿಗೆ ಕೆಂಪು ಕೋಟಿ ನೂಡಬೇಕಾಗಿರುತ್ತದೆ. ಇವರ ಸಂಗಡಾಲ್ಪರಂಗವೆಂದಲ್ಲಿ ಅನ್ಯ ಪಕ್ಷಗಳನ್ನು ಕರಿಮಂಯನ್ನು ಸಾಕೆದಂತೆ ಸಾಕುವ ರಂಗವೇ ಇದೆ.

ಪಕ್ಷಾಂತರ ರಹಿತ ಸಂಯುಕ್ತ ಸರಕಾರ ಸ್ಥಾಪನೆಗೆ 'ಪ್ರತ್ಯುತ್ಪರಿಸ್ಥಿತಿ' ಕಾರಣ ಇದೆ. ಜೈನಾ ಆಕ್ರಮಣ ನಡೆಸಿರುವ ಪರಿಸ್ಥಿತಿ ಸೃಷ್ಟಿಯಾದಾಗ 'ತುರ್ತುಪರಿಸ್ಥಿತಿ'ಯ ಘೋಷಣೆಯನ್ನು ದಿಲ್ಲಿ ದೇವತೆಗಳು ಇಳಿಬಿಟ್ಟರು. ಅದು ಮಾಗೆಯೇ ಮುಂದುವರಿಯುತ್ತಿದೆ ಜನರನ್ನೆಶ್ಚ ಬೇಕೆಂದು ರಾಜಕೀಯಜ್ಞರು ಕೇಳಿಕೊಳ್ಳುತ್ತಿದ್ದಾರೆ. ನಿಜವಾಗಿ "ತುರ್ತು ಪರಿಸ್ಥಿತಿ" ಇದೆಯೂದಲ್ಲಿ 'ಪಕ್ಷ ಸರಕಾರ" ಹೋಗಬೇಕಾಗಿತ್ತು. ನೈಜ ರಾಷ್ಟ್ರೀಯ ಸರಕಾರ ಸ್ಥಾಪನೆ ಆಗಬೇಕಾಗಿತ್ತು. ಈ ರಾಷ್ಟ್ರೀಯ ಸರಕಾರವಾದರೋ ರಾಜಕೀಯ ಪಕ್ಷಗಳು ಆಸನವನ್ನು ಹಂಚಿಕೊಳ್ಳುವದಕ್ಕಾಗಿಯೋ, 'ರಾಜ್ಯ'ಗಳು ಆಸನಗಳನ್ನು ಆಶಿಸುವದಕ್ಕಾಗಿಯೋ ಅಲ್ಲ. ದೇಶಭಕ್ತ ಬುದ್ಧಿಜೀವಿಗಳ ಸಮ್ಮಿಲನ ಅದು. ಇಸ್ಮೇಲ್ ಅಕ್ರಮಣಗಾರನನ್ನೆದುರಿಸಲು ಸಿದ್ಧವಾದಾಗ ಎದುರು ಪಕ್ಷದ ಮುಖಂಡನ ಕೈಯಲ್ಲಿ ಸೇನೆಯನ್ನು ಒಪ್ಪಿಸಲಿಲ್ಲವೇ? ಅದೇ ರೀತಿ ನಮ್ಮ ದೇಶದಲ್ಲಿರುವ ದೇಶಭಕ್ತ ತಜ್ಞರ ಕೈಯಲ್ಲಿ ಅಸಲತದ ಅಂಶ ಶ ಇರಬೇಕು. ಅದು ಬಿಟ್ಟು ಪಕ್ಷ ಸರಕಾರವೇ ಮುಂದುವರಿದಲ್ಲಿ 'ತುರ್ತು ಪರಿಸ್ಥಿತಿಯ' ಅರ್ಥವಾದರೂ ಏನು?

ಕಳೆದ ಎಂದಳ್ಳಿ ಭಾರತದ ಮಾಜಿ ಆಹಾರ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ ರವರು ಕಾಂಗ್ರೆಸ್ಸ್ ಕಾರ್ಯಕರ್ತರ ಸಭೆಯಲ್ಲಿ ಮಾತಾಡುತ್ತಾ "ತುರ್ತುಪರಿಸ್ಥಿತಿಯ ಕಾಲದಲ್ಲಿ ಮಾತ್ರ ರಾಷ್ಟ್ರೀಯ ಸರಕಾರ ಬಂದಿತು ಸಾಧ್ಯ" ವೆಂದು ಹೇಳಿರುವರು ಹಾಗಿದೆ ತುರ್ತುಪರಿಸ್ಥಿತಿಯ ಕಾಲದಲ್ಲಿ ರಾಷ್ಟ್ರೀಯ ಸರಕಾರ ಇರಬೇಕೆಂಬುದನ್ನು ಜನರು ಒಪ್ಪಿಕೊಂಡಂತಾಯಿತು. ಆ ಮಾತಿನ ಪ್ರಕಾರ ರಾಷ್ಟ್ರೀಯ ಸರಕಾರವೆಂದರೆ ಸಮ್ಮಿಶ್ರ ಸರಕಾರವೇ ಇಬೆ. ಆದು ಪಕ್ಷೋಪಪಕ್ಷಗಳ ಮಿಶ್ರ ಸರಕಾರ ಇರಬಹುದು; ಅಥವಾ ಪಕ್ಷ ಭೇದ ರಹಿತ ತಜ್ಞರ ಸಮ್ಮಿಲಿತ ಸರಕಾರ ಇರಬಹುದು. ಜನತೆಗೆ ಬೇಕಾಗಿರುವದಾದರೆ ಪಕ್ಷ ಭೇದ ರಹಿತ ತಜ್ಞರ ಸಮ್ಮಿಲಿತ ಸರಕಾರವೇ ಇದೆ

ಶ್ರೀ ಸುಬ್ರಹ್ಮಣ್ಯಂರವರು ರಾಷ್ಟ್ರೀಯ ಸರಕಾರದ ಮೂತನ್ನೆತ್ತಿರುವರಾದರೂ, ಅವರು ದ್ರಾವಿಡ ಮುನ್ನೇಟ್ರ ಕಳ್ಳಗಮಿನ ಅಧಿಕಾರಕ್ಕೆ ತಲೆ ಬಗ್ಗಲು ಸಿದ್ಧರಿರುವದಿಲ್ಲ. ಹೇಗಾದರೂ ಮಾಡಿ ಅದನ್ನು ರುಳಿಸಬೇಕೆಂದು ಅವರು ಪ್ರಯತ್ನಿಸುತ್ತಿದ್ದಾರೆ. ಅವರ ಪತ್ನದ ಬಿಹಾರಿನ ಮುಖಂಡನಂತೂ ಅನ್ಯ ಪಕ್ಷಗಳ ಮಂತ್ರಿ ಮಂಡಲವನ್ನುರುಳಿಸಲಿಕ್ಕಾಗಿ ಕಾಂಗ್ರೆಸ್ಸಿಗರು ಒಂದಾಗಿದ್ದಾರೆಂದು ತಿಳಿಯಪಡಿಸಿರುವರು. ಇದರಿಂದ ಹಾಗೂ ಕಾಂಗ್ರೆಸ್ಸಿಗರ ಕಾರ್ಯಾಚರಣೆಯಿಂದ ಅವರು "ರಾಷ್ಟ್ರೀಯ ಸರಕಾರ"ದ ಸ್ಥಾಪನೆಗೆ ಹಾಗೂ ಅನ್ಯ ಪಕ್ಷಗಳ ಅಳ್ವಿಕೆಯನ್ನಾಸ್ಪಿಕೊಳ್ಳಲು ಸಿದ್ಧರಿಲ್ಲವೆಂಬುದು ಸ್ಪಷ್ಟವಾಗುತ್ತಿದೆ.

ಶ್ರೀ ಸುಬ್ರಹ್ಮಣ್ಯಂರವರ ಮೂತಿನ ಮೇಲೆ ಒಂದು ಪ್ರಶ್ನೆ ಏರುತ್ತದೆ. ತುರ್ತು ಪರಿಸ್ಥಿತಿಯ ಕಾಲದಲ್ಲಿ ಮಾತ್ರ ರಾಷ್ಟ್ರೀಯ ಸರಕಾರ. ಸ್ಥಾಪನೆಗೆ ಸಾಧ್ಯವೆಂದಾದಲ್ಲ ಈಗ ತುರ್ತು ಪರಿಸ್ಥಿತಿ ಇಲ್ಲವೇನು? ಸಂಸದಿನ ಎರಡೂ ಸಭೆಗಳಲ್ಲ ತುರ್ತು ಪರಿಸ್ಥಿತಿ ಇಲ್ಲವೆಂದು ಘೋಷಿಸಲು ಸರಕಾರ ಸಿದ್ಧವಿಲ್ಲವೆಂದು ಗೃಹಮಂತ್ರಿ ಶ್ರೀ ಯಶವಂತರಾವ್ ಚವಾಣರು ಸ್ಪಷ್ಟವಾಗಿಯೂ ಹೇಳಿರುವರು. ಕಳೆದ ಜುಲೈ ಒಂದರಿಂದ ತುರ್ತು ಪರಿಸ್ಥಿತಿಯನ್ನು ಕೊನೆಗಾಣಿಸುವದಾಗಿ ಸರಕಾರ ಸಾರಿದ್ದರಿಂದ ಅವರು ಜೂನ್ ಅಂತ್ಯದಲ್ಲಿ ಸಂಸದಿನಲ್ಲಿ ಘೋಷಣೆ ಬೇಕಾಯಿತು. ಈ ಘೋಷಣೆಯಿಂದ ಈಗ ತುರ್ತು ಪರಿಸ್ಥಿತಿ ಇದೆಯೆನ್ನವದು ಸ್ಪಷ್ಟವಾಗುತ್ತದೆ. ಹಾಗಿರುವಾಗ ಸಂಯುಕ್ತ ಸರಕಾರವನ್ನು ಸ್ಥಾಪಿಸಲು ಕಾಂಗ್ರೆಸ್ಸು ಏತಕ್ಕೆ ಮುಂದಕ್ಕೆ ಬಂದಿಲ್ಲ. ಚಿಪ್ಪೇ ಅಲ್ಲ, ಅನ್ಯ ಪಕ್ಷಗಳ ಸರಕಾರವನ್ನರಳಿಸಲು ಟೊಂಕಕಟ್ಟಿ ನಿಂತಿದೆಯಲ್ಲಾ! ಶ್ರೀ ಸುಬ್ರಹ್ಮಣ್ಯಂರವರೂ ಉಸಿಳಿಸುವದರಲ್ಲೇ ಹೆಚ್ಚು ಸುತ್ತುವರ್ಜಿ ತೋರಿಸುತ್ತಿದ್ದಾರಲ್ಲಾ? ತುರ್ತುಪರಿಸ್ಥಿತಿ ಇವರ ಲಕ್ಷಣವೇ ಶ್ರೀ ಸುಬ್ರಹ್ಮಣ್ಯಂರವರಿಗೆ ಕಂಡುಬರುತ್ತಿಲ್ಲವೇನು?

ಸಂಯುಕ್ತ ಸರಕಾರ ಸ್ಥಾಪನೆಗೆ ತುರ್ತುಪರಿಸ್ಥಿತಿ ಒಂದು ಅಡ್ಡಿಯಾಗಿ ಇದೆ, ಆಪ್ಪ-ತುರ್ತುಪರಿಸ್ಥಿತಿಯೊಂದಿಗೆ ಸಂಯುಕ್ತ ಸರಕಾರವೂ ಹೋಗಬೇಕು. ಆದುದರಿಂದ ಅದಕ್ಕೆಂತಾದರೂ ಮುಖ್ಯವಾದ ಒಂದು ವಿಷಯ ಇವೆ. ಅದುವೇ ದೇಶಭಕ್ತಿ, ರಾಷ್ಟ್ರಭಿಮಾನ. ಇಲ್ಲಿರುವ ಪಕ್ಷಗಳಲ್ಲ ದೇಶಭಕ್ತಿಯು ಏರಿಗಾಲು ರಾಷ್ಟ್ರಭಿಮಾನದ ಲಕ್ಷಣ ಇದಾವುದು? ದೇಶ ಭಕ್ತಿ ಇದ್ದ ಪಕ್ಷವು ದೇಶ ವಿಭಜನೆಯ ಪಾಪ ಕೃತ್ಯಕ್ಕೆ ಕೈಹಾಕುತ್ತಿತ್ತೇ? ರಾಷ್ಟ್ರಭಿಮಾನ ಇರುವ ಪಕ್ಷಗಳಾದರೆ ಸ್ವಾತಂತ್ರ್ಯ ಸಿಕ್ಕಿ ಇಪ್ಪತ್ತು ವರ್ಷಗಳಾದ ಮೇಲೂ ಸ್ವದೇಶಿಯ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡದೆ ಇರುತ್ತಿತ್ತೇ? ಇನ್ನೂ ತಿರುಪೆ ಎತ್ತಲು ಪ್ರಯೋಣ ನಡೆಯುತ್ತದೆಯೇ? ಇದರಿಂದ ಇಂದಿನ ರಾಜಕೀಯಜ್ಞರು ಮೋಹಕ್ಕೊಳಗಾಗಿ ಮಿಥ್ಯ ರಾಷ್ಟ್ರಾಭಿಮಾನವನ್ನೇ ರಾಷ್ಟ್ರಾಭಿಮಾನವೆಂದು ತಿಳಿದುಕೊಂಡಿದ್ದಾರೆ. ಇದ್ದಷ್ಟು ಬಿಸ್ಕಿದಷ್ಟು ಭೂಮಿಯನ್ನು ಪಡೆದುಕೊಂಡು ದರ್ದಾರು ನಡೆಸುವದೇ ದೇಶಭಕ್ತಿಯು ಚಿನ್ಹೆಯೂ ಗಿದೆ. ಏರೋಪ್ಯರಂತಾಗಲು— (ಆಂಗ್ಲ ಭಾಷೆ ಆಡುವದ; ಬೀಡಿಯು ಬದಲು ಸಿಗರೇಟು ಸೇದುವದ; ಹೆಂಡದ ಬದಲು ವೈನ್(ಜೇಲಿದ್ರಾಕ್ಷಾರಸ) ಕುಡಿಯುವುದು, ಸಂಜೆ ಹೊಡೆ ವದು ಇತ್ಯಾದಿ ರೀತಿಯಲ್ಲಿ) ಬೂಡುಕಪಿಗೂಗಲು ಪ್ರಯತ್ನ ನಡೆಯುತ್ತಿದೆ. ಇದನ್ನು ಹೋಗಲಾಡಿಸಲಿಕ್ಕಾಗಿ ಪರಮಪೂಜನೀಯಶ್ರೀ ಮಾಧವ ಸದಾಶಿವ ರಾವ್ ಗೋಳ್‌ವಲ್ಕರ್ ಹಾಗೂ ಅಂತಹ ಉತ್ಕಟ ದೇಶಾಭಿಮಾನಿಗಳು ಕಮ್ಯುನಿಸ್ಟರ ಕುತ್ಸವನ್ನು ಭಾರತ ಮಾತೆಯ ಪವಿತ್ರ ಚರಣಾರವಿಂದಗಳಲ್ಲಿ ಅರ್ಪಿಸಿರುವರು. ಶ್ರದ್ಧೇಯ ಗುರಿಯವರು ಕೂಡಾ ರಾಜಕೀಯ ರೋಗದ ಪರಿಹಾರಕ್ಕೆ ಜನತೆ ಮಂತ್ರ ಬೇಕೆಂದು ಆಹ್ವಾನಿಸಿರುವರು. ಶ್ರೀಮತಿ ಇಂದಿರಾ ಗಾಂಧೀಜೀಯವರೂಹಕ್ಕೆ ಮನವಿಂಗತವನ್ನು ತಿಳಿಯ ಪಡಿಸಿರುವರು. ಆದರೆ ಶ್ರೀ ಗುರಿ ಅದಲ್ಲದೆ ಶ್ರೀಮತಿ ಇಂದಿರಾಜೀ ಸಂಯುಕ್ತ ಸರಕಾರ ಸ್ಥಾಪನೆಗೆ ಸಿದ್ಧರಿಲ್ಲ. ಶ್ರೀಮತಿ ಇಂದಿರಾ ಗಾಂಧೀಜಿಯವರಂತೂ ಪ್ರಧಾನಿ ಪಟ್ಟದಿಂದ ಕೆಳಗಿಳಿಯಲು ಸಾಧ್ಯವಿಲ್ಲವೆಂದು ಪಟ್ಟುಹಿಡಿದರು. ಇದರಲ್ಲಿ ಪರಮಪೂಜನೀಯ ಶ್ರೀ ಗೂರೂಜೀಯವರ ದೃಷ್ಟಿಯೆ ಬೇರೆ. ರಾಜಕೀಯ ಪಕ್ಷಗಳು ಬರಬಹುದು, ಹೋಗಬಹುದು,—ರಾಷ್ಟ್ರ ಮಾತ್ರ ಹಾಗಲ್ಲ, ಅದು ಇರುವಂತಹದ್ದು. ಆದುದರಿಂದ ಪಕ್ಷಬೇಧವನ್ನು ತೊರೆದು ರಾಷ್ಟ್ರೈಕ್ಯತ್ಕಾಗಿ ಪ್ರಯತ್ನಿಸಬೇಕು ಈಗ ಇರುವದು ಎರಡೇ ಎರಡು ಪಕ್ಷ. ಒಂದು ಕೃಷ್ಣ ಪಕ್ಷ ಇನ್ನೊಂದು ಶುಕ್ಲ ಪಕ್ಷ ಈಗ ಕೃಷ್ಣ ಪಕ್ಷದ ಆಡಳಿತ ಘಡಿಯುತ್ತಿದೆ. ಭಾರತದ ಗೌರವ ಚಂದ್ರ ಕ್ಷಯಿಸುತ್ತ ಬರುತ್ತಿದ್ದಾನೆ. ರಾಜಕೀಯ ಅಂಧಕಾರ ದಟ್ಟವಾಗಿ ಹಬ್ಬುತ್ತದೆ. ಈ ಅಂಧಕಾರ ವಲ್ಲಿ ಏನೆಲ್ಲಾ ನಡೆಯಲು. ಸಾಧ್ಯವೋ ಅದೆಲ್ಲಾ ನಡೆಯುತ್ತಿದೆ. ಭಾರತೀಯರು ಈ ಕೃಷ್ಣಪಕ್ಷದ ಆಡಳಿತೆಯು ಅಂತ್ಯವಾದೂ ಅಂದೆಂದೋ! ಜಾತಿದ್ವೇಷ, ಮತ ದ್ವೇಷ, ರಾಜ್ಯದ್ವೇಷ, ಭಾಷಾದ್ವೇಷ ಅಲ್ಲ ದೆ ಪಕ್ಷದ್ವೇಷವನ್ನು ತೊರೆದಂದಿನಿಂದ ಶುಕ್ಲ ಪಕ್ಷದ ಆಡಳಿತೆ ಆರಂಭವಾಗುತ್ತದೆ. ಆಗ ಭೂವ್ಯ ಭಾರತದ ಗೌರವ ಕೇತನ ನೀಲಗಗನದಲ್ಲಿ ವೈಭವದಿಂದ ಹಾರಾಡುತ್ತದೆ. ಪಾಕಿಸ್ತಾನ ತನ್ನ ಭಿನ್ನ ಅಸ್ತಿತ್ವವನ್ನು ಅಲ್ಲಗಳೆದು ಅಖಂಡ ಭಾರತದ ಅಮರಗಾನ ಹಾಡಲು ಮುಂದೆ ಬರುತ್ತದೆ. ಆಕ್ರಮಣದ ನೀಚ ದೃಷ್ಟಿಯನ್ನು ಹಾಯಿಸಲು ಕಮ್ಯೂನಿಸ್ಟ್ ಕಪಿ ಜೈನಾ ಹಿಂಜರಿಯುತ್ತದೆ. ಈ ಮಹಾ ಸುದಿನ ಎಂದು ಬಂದೀತು? ಭಾರತೀಯರೆಲ್ಲರೂ ತಮ್ಮ ಕ್ಷುಲ್ಲಕ ಭಿನ್ನ ಭಾವನೆಯನ್ನು ಮರೆತು ಬಿಟ್ಟು ಅಖಂಡ ಭಾರತದ ಸೇವೆಗೆ ಮುಂದೆ ಬಂದಂದು ಬರುವದ ಖಂಡಿತ. ಇದೆಂದು ಸಾಧ್ಯ? ಅಧಿಕಾರ ಲಾಲಸೀ ಜನರ ತಲೆಯೊಂದನಲ್ಲಿ ಇದು ನಡೆದೀತೇ? ಬಹಳಕಷ್ಟ. ಆದರೆಅಸಾಧ್ಯವಂತೂ ಬಿಡಲು ಸಾಧ್ಯವೇ ಇಲ್ಲ. ಇಂದೋನೇಶಿಯಾ (ದ್ವೀವಾಂತರ)ದಲ್ಲಿ ನಡೆದದ್ದೇ ಅದಕ್ಕೆ ಸಾಕ್ಷಿ. ಇಸ್ರೇಲ್ ಇದನ್ನು ಇನ್ನಷ್ಟು ಸ್ಪಷ್ಟವಾಗಿ ಸಾರುತ್ತಿದೆ, ರಾಷ್ಟ್ರೀಯತೆಯ ಅವ್ಯತ ಸಿಂಚನದ ಕಾರ್ಯ ಸದಾ ನಡೆದುಕೊಂಡು ಬರುತ್ತಿರುವ ಪವಿತ್ರಭಾರತದ ಭೂವ್ಯಜ, ನೆಲ್ಲಿ ಭಾಗ್ಯದ ಭಾಸ್ಕರ ಉದಯಿಸದೆ ಇರಲು ಸಾಧ್ಯನೇ ಇಲ್ಲ. ಅದುವೇ ಸಂಯುಕ್ತ ಸರಕಾರದ ಸ್ಥಾಪನೆಗೆ ಸರಿಯಾದ ಸಮಯವಿದೆ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S 211/1963

R. E. P. 242/1965.

ಗಣಪಯ್ಯ ಶೆಟ್ಟಿ... ಅರ್ಜಿದಾರ

ಮತ್ತು

ಜೋನ್ ಜಾಕೋಬ್ ದಾಲ್ಮೇದಿ ಕೂಡಾ —ಎದ್ರಿರು.

ಇವರೊಳಗೆ

ಮನೇ ಎದ್ರಿ:—ದಿವಂಗತ ಶೆಟ್ಟಿ— ನರಸಿಂಹ ಶೆಟ್ಟಿರ ಮಗಳು—ಉಡುಪಿ ತಾಲೂಕು ಬೆಳ್ಳಂಪಳ್ಳಿ ಗ್ರಾಮ,—ಇವರಿಗೆ—

ಮೇಲ್ಕಂಡ ಅರ್ಜಿದಾರಳಲ್ಲಿ ಅರ್ಜಿದಾರನ ಕಡೆಯಿಂದ ಹಾಜು ಪಡಿಸಿದ ಸ್ಥಿರಾಸ್ತಿಯೇಲಾ ಇಸ್ತಿಹಾರಿನಲ್ಲಿ ಕಾಣಿಸಿದ ಆಸ್ತಿಗಳ ವಿಕ್ರಯದ ಶರತ್ತುಗಳನ್ನು ನಿರ್ಣಯಿಸಲಿಕ್ಕೆ ತಾರೀಖು 22—9—67ನೇ ದಿವ್ಸ ಬೆಳ್ಳಿಯು ಸೋಣಾಗಿಯದಿಂದ ನಿಮಗೆ ಬಿಡಿಯಂದ ತಿಳಿಸೋಣಾಗಿಯದೆ—

K. Balachandra Rao
Advocate for Petitioner
Udipi, 31—8—1967.

IN THE MATTER OF THE COMPANIES ACT, 1956.

and IN THE MATTER OF WESTERN INDIA AGENCIES PRIVATE LIMITED

Registered Office: P. B 293—A Prakash Match & Plywood Factory Ltd., Coondapoor.

Notice under Section 485(1) of the Act.

At an Extra-Ordinary General Meeting of the Members of the above Company held at its Registered Office at 11 A M. on Friday the 8th September 1967, the following Special Resolution was duly passed:

"RESOLVED that the WESTERN INDIA AGENCIES PRIVATE LIMITED, be and is hereby wound-up by Members Voluntary Winding-up and that Sri. M. Anthayya Shetty, Advocate, Coondapoor, be and is hereby appointed as Voluntary Liquidator for the said purpose on a remuneration of Rs. 100/-"

Coondapoor,
9th September 1967.

S. Prabhakar Tholar
Joint Managing Director.

ಅರಬ-ಇಸ್ರೇಲ್ ಘರ್ಷಣೆಯ ಹಿನ್ನೆಲೆ, ಪರಿಣಾಮ

(ಜಡಪೇ ಪುಟದಿಂದ)

ಪ್ರಿಯ ಜನೋಯಿಷ್ಟ್ ಕಾಂಗ್ರೆಸ್ ಬ್ರಿಟಿಷ್ ಕೊಡುಗೆಯನ್ನು ತಿರಸ್ಕರಿಸಿ ಜ್ಯೂಗಳಿಗೆ ಪ್ಯಾಲೆಸ್ತೈನ್ ಮೂಲ ಭೂಮಿಯೆಂಬುದೂ, ಅದನ್ನು ಪಡೆಯುವುದು ಸಂಸ್ಥೆಯ ಉದ್ದೇಶವೆಂಬುದೂ ಸಾರಿತು. ಈ ಘೋಷಣೆಯಿಂದಾಗಿ ಟರ್ಕಿ ಚಕ್ರವರ್ತಿ ಅಬ್ದುಲ್ ಹಮೀದನು ಪ್ಯಾಲೆಸ್ತೈನಿನಲ್ಲಿದ್ದ ಜ್ಯೂಗಳನ್ನು ವಿಚಾರಣೆಯಿಂದ ನೋಡಲಾರಂಭಿಸಿದನು.

ಬಾಲ್ಫರ್ ಘೋಷಣೆಯ ಕಾರಣ

ಒಂದನೆ ಮಹಾಯುದ್ಧದ ಕಾಲದಲ್ಲಿ ಜನೋಯಿಷ್ಟ ಸಂಸ್ಥೆಯು ಬ್ರಿಟನಿನ ಮುಂದಾಳತನದಲ್ಲಿದ್ದ ಮಿತ್ರರಾಷ್ಟ್ರಗಳನ್ನು ಬೆಂಬಲಿಸಿದಲ್ಲದೆ ಹಲವಾರು ರೀತಿಯಲ್ಲಿ ಸಹಾಯ ಮಾಡಿತು. ತಮ್ಮ ಧ್ಯೇಯವನ್ನು ಮಿತ್ರರಾಷ್ಟ್ರಗಳಲ್ಲಿ ಪ್ರಬಲವಾಗಿ ಪ್ರಚಾರ ಮಾಡಿತು. ಇವರ ತತ್ವೋಥನೆಯು ಕೆಲವು ಮಿತ್ರರಾಷ್ಟ್ರಗಳ ರಾಜಕಾರಣಿಗಳನ್ನು ಪರಿವರ್ತಿಸಿತು. ಹಲವಾರು ರಾಜಾಯಿಕ ಸಂಪರ್ಕಗಳನ್ನು ನಡೆಸಿ ಅದರ ಪ್ರಯೋಜನಗಳನ್ನು ಯುದ್ಧಭೂಮಿಯಲ್ಲಿ ನೂಡಿಕೊಳ್ಳುವಂತೆ ಬ್ರಿಟಿಷರಿಗೆ ಸಹಾಯವಿತ್ತವರು ಡಾಕ್ಟರ್ ವಿಜ್ಜಮನ್ ಎಂಬ ಜ್ಯೂ. ಇದರಿಂದ ಅತೀವ ತೃಪ್ತಿಗೊಂಡ ಬ್ರಿಟಿಷ್ ಸರಕಾರವು ಆಗಿನ ವಿದೇಶಮಂತ್ರಿ ಬಾಲ್ಫರನ ಮೂಲಕ ಡಾಕ್ಟರ್ ವಿಜ್ಜಮನ್‌ನಿಗೆ ಬೇಕಾದುದನ್ನು ಕೇಳಿಕೊಳ್ಳುವ ಅವಕಾಶವನ್ನು ಕೊಟ್ಟಿತ್ತು. ಅದಕ್ಕೆ ಉತ್ತರವಾಗಿ ವಿಜ್ಜಮನ್‌ನು ಪ್ಯಾಲೆಸ್ತೈನನ್ನು ಜ್ಯೂಗಳಿಗೆ ಕೊಡಿಸಬೇಕೆಂದು ಕೇಳಿಕೊಂಡನು. ಇದರ ಪರಿಣಾಮವಾಗಿ ಬ್ರಿಟಿಷರು ಜನೋಯಿಷ್ಟ ಸಂಸ್ಥೆಯ ಧ್ಯೇಯಗಳನ್ನು ಅಬರೋಕ್ಷವಾಗಿ ಒಪ್ಪಬೇಕಾಗಿ ಬಂತು.

ಬಾಲ್ಫರ್ ಘೋಷಣೆ

ಮೊದಲನೆಯ ಮಹಾಯುದ್ಧದ ನಂತರ ಟರ್ಕಿ ಸಾಮ್ರಾಜ್ಯ ನಾಶವಾಗಿ, ಪ್ಯಾಲೆಸ್ತೈನ್ ಬ್ರಿಟಿಷರ ವಶಕ್ಕೆ ಬಂದು, ಸುಮಾರು ಪೂರ್ವದಲ್ಲಿ ಹಲವಾರು ಚಿಕ್ಕ ಚಿಕ್ಕ ಮುಸ್ಲಿಂ ರಾಜ್ಯಗಳು ಉದಯವಾದುವು. ಇದೇ ಸಮಯದಲ್ಲಿ ಅಮೆರಿಕ ಬ್ರಿಟನ್‌ನ ವಿದೇಶಮಂತ್ರಿ ಬಾಲ್ಫರ್‌ರು 1917ರಲ್ಲಿ ಒಂದು ಘೋಷಣೆಯನ್ನು ಹೊರಡಿಸಿದರು, ಈ ಘೋಷಣೆಯು ಜ್ಯೂಗಳ ಚಿರಕಾಲ್ಪತಿಗಳಿಗೆ ಮನ್ನಣೆಯನ್ನು ಕೊಟ್ಟಿತು. ಪ್ಯಾಲೆಸ್ತೈನ್‌ನಲ್ಲಿರುವ ಜೊಡ್ಡೇತರ ನಿವಾಸಿಗಳ ರಾಜಕೀಯ ಮತ್ತು ಇತರ ಹಕ್ಕುಗಳಿಗೆ ಧಕ್ಕೆಯುಂಟಾಗದಂತೆ ಜ್ಯೂಗಳಿಗೆ ಪ್ಯಾಲೆಸ್ತೈನ್ ಸಿಗಬೇಕೆಂದು ಬ್ರಿಟಿಷ್ ಸರಕಾರವು ಅಭಿಪ್ರಾಯಪಟ್ಟಿದೆಯೆಂದು ಸಾರಿದರು. ಆದನ್ನು ಅಮೇರಿಕ ಮತ್ತು ಇನ್ನಿತರ ವಿ ಮಿತ್ರರಾಷ್ಟ್ರಗಳು ಬೆಂಬಲಿಸಿದವು. ಆದರೆ ಮುಸ್ಲಿಂ ಅರಬ ರಾಷ್ಟ್ರಗಳು ಇದನ್ನು ಪ್ರಬಲವಾಗಿ ವಿರೋಧಿಸಿ ಬ್ರಿಟಿಷ್ ಸರಕಾರವು ಜರಬಿಗೆ ಅನ್ಯಾಯ ಬಗೆದಿದೆಯೆಂದು ಘೋಷಿಸಿದರು.

ಮೊದಲನೆ ಮಹಾಯುದ್ಧದ ಬಳಿಕ ಜನಾಂಗ ಸಂಘವು ಪ್ಯಾಲೆಸ್ತೈನ್‌ನ್ನು ಬ್ರಿಟನಿನ ಸಂರಕ್ಷಿತ ಪ್ರದೇಶವೆಂದು ಒಪ್ಪಿತು. ಆ ಸಮಯದಲ್ಲಿ ಪ್ಯಾಲೆಸ್ತೈನ್‌ನಲ್ಲಿ ಹತ್ತರಲ್ಲಿ ಒಂದಂಶ ಜ್ಯೂಗಳಿದ್ದಿದ್ದರು. ಆದುದರಿಂದ ಬ್ರಿಟಿಷರ ಉದಾರತೆಯು ತಮ್ಮದಲ್ಲದ ಪ್ರದೇಶವನ್ನು ಇತರರಿಗೆ ದಾನ ಮಾಡಿ ತಾವು ಉದಾರಿಗಳೆಂಬ ಕೀರ್ತಿ ಪಡೆದ ವ್ಯಕ್ತಿಯಂತಿತ್ತು. ಬಾಲ್ಫರ್ ಪ್ಯಾಲೆಸ್ತೈನ್‌ನ್ನು ಸಂದರ್ಶಿಸಿದರು. ಅಲ್ಲಿ ಬಹು ಸಂಖ್ಯಾತರು ಅರಬರೆಂತಲೂ, ಜ್ಯೂಗಳು ಅಲ್ಪ ಸಂಖ್ಯಾತರೆಂತಲೂ ತಿಳಿದು ಬಂದು ತನ್ನ ಪಪ್ಪನ್ನು ಒರಿತುಕೊಂಡನು. ಪ್ಯಾಲೆಸ್ತೈನ್‌ನಲ್ಲಿ ಜ್ಯೂಗಳ ಸಂಖ್ಯೆ ಹೆಚ್ಚಿಬುವ ಉದ್ದೇಶದಿಂದ ಜ್ಯೂಗಳು ಪರರಾಷ್ಟ್ರಗಳಿಂದ ಪ್ಯಾಲೆಸ್ತೈನಿಗೆ ವಲಸೆ ಬರುವುದನ್ನು ಬ್ರಿಟಿಷ್ ಸರಕಾರವು ಪ್ರೋತ್ಸಾಹಿಸಿತು.

ಅರಬ ಜ್ಯೂಗಳ ಘರ್ಷಣೆಯ ಕಾರಣಗಳು

ಟರ್ಕಿ ಸಾಮ್ರಾಜ್ಯದಲ್ಲಿ ಸಹಬಾಳ್ವೆಯಿಂದ ಜೀವಿಸ ನಡೆಯುತ್ತಿದ್ದ ಜ್ಯೂಗಳು ಮತ್ತು ಮುಸ್ಲಿಂರು ಇಪ್ಪತ್ತನೇ ಶತಮಾನದಲ್ಲಿ ಪರಸ್ಪರ ವೈರಿಗಳಾಗಿ ಕಿಡಾಡಲು ಹಲವಾರು ಕಾರಣಗಳು. ಒಂದನೇ ಯುದ್ಧಾನಂತರ ಸುಧೃಢ ರಾಷ್ಟ್ರಗಳು ಎಣ್ಣೆ ಸಿಗುವ ಸ್ಥಳಗಳಾಗಿವೆ. ಆ ರಾಷ್ಟ್ರಗಳಲ್ಲಿ ಮುಖ್ಯ ಉತ್ಪತ್ತಿ ಎಣ್ಣೆಯ ಬಾವಿಗಳು. ಈ ರಾಷ್ಟ್ರಗಳು ಜೆಚ್ಚಿನ ಎಣ್ಣೆಯ ಪ್ರಮಾಣವನ್ನು ಯುರೋಪಿನ ರಾಷ್ಟ್ರಗಳಿಗೆ ಸರಬರಾಜು ಮಾಡುತ್ತವೆ. ಪ್ಯಾಲೆಸ್ತೈನ್‌ನ ಭೌಗೋಲಿಕ ಸ್ಥಾನವು ಅದರ ವ್ಯಾಮಿಲ್ಯತೆಯನ್ನು ಹೆಚ್ಚಿಸಿದೆ. ಯಾವ ರಾಷ್ಟ್ರವು ಪ್ಯಾಲೆಸ್ತೈನನ್ನು ತನ್ನ ವರ್ಚಸ್ಸಿನೊಳಗೆ ಇಟ್ಟುಕೊಳ್ಳುವುದೋ ಆ ರಾಷ್ಟ್ರವು ಮಧ್ಯಪೂರ್ವದ ಎಣ್ಣೆಯ ಕ್ಷೇತ್ರಗಳಿಗೆ ಮುನ್ನುಗ್ಗಲು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗುತ್ತದೆ ಎಂದು ಪಾಶ್ಚಾತ್ಯ ರಾಜಕಾರಣಿಗಳು ನಂಬಿದ್ದರು. ಈ ಕಾರಣದಿಂದಾಗಿಯೇ ಪ್ಯಾಲೆಸ್ತೈನಿನಲ್ಲಿ ಸಮಗೆ ಅನುಕೂಲವಾದ ಸರಕಾರವಿರಬೇಕೆಂಬ ಉದ್ದೇಶವಿಂದ ಬ್ರಿಟಿಷರು ಯಹೂದಿಗಳಿಗೆ ಪ್ಯಾಲೆಸ್ತೈನನ್ನು ಕೊಡಲು ಒಪ್ಪಿದ್ದರು. ಅರಬ ರಾಷ್ಟ್ರಗಳು ಬ್ರಿಟನ್ನಿನ ಈ ಘೋಷಣೆಯಿಂದಾಗಿ ತಾವು ಯಾವ ಕ್ಷೂ ಗುಲಾಮಗಿರಿಯಲ್ಲಿ ಇರಬಹುದಾದ ಸಂಭವ ಇದೆಯೆಂದು ಊಹಿಸಿ ಬ್ರಿಟಿಷರ ರಾಜಕೀಯ ಚಾಣಕ್ಯತೆಯನ್ನು ವಿರೋಧಿಸಿದವು.

ಆಗ ಪ್ಯಾಲೆಸ್ತೈನ್‌ನಲ್ಲಿದ್ದ ಬ್ರಿಟಿಷ್ ಸರಕಾರವು ಜ್ಯೂಗಳನ್ನು ವಲಸೆ ಬರಲು ಅನುಮತಿಸಿತು. ಇದರಿಂದಾಗಿ ವ್ಯಾಲೆಸ್ತೈನ್‌ನಲ್ಲಿ ಯಹೂದಿಗಳ ಸಂಖ್ಯೆ ಹೆಚ್ಚು. ವಲಸೆ ಬಂದ ಯಹೂದಿಗಳು ವ್ಯಾಲೆಸ್ತೈನಿನ ಆರ್ಥಿಕ ಸ್ಥಿತಿಯನ್ನೆ ಬದಲಿಸಿದರು. ಇದರಿಂದಾಗಿ ಬಹು ಸಂಖ್ಯಾಕರಾದ ಅರಬರು ಸ್ವದೇಶದಲ್ಲಿ ತಮಗೆ ಸ್ಥಾನವಿಲ್ಲವೆಂಬ ಹೆದರಿಕೆಯನ್ನು ವಿಚಿತ್ರ ಪಡಿಸಿಕೊಂಡದ್ದರಿಂದ ಅರಬ ಜ್ಯೂ ಸಂಘರ್ಷಣೆಯು ಪ್ರಾರಂಭವಾಯಿತು.

ವಲಸೆ ಬಂದ ಜ್ಯೂಗಳ ಆಚಾರ, ವಿಚಾರ, ಸಾಮಾಜಿಕ ನೀತಿ, ಅಲ್ಲಿ ನೆಲಸಿದ್ದ ಅರಬರ ಆಚಾರ, ವಿಚಾರ, ಸಾಮಾಜಿಕ ನೀತಿಗಳಿಗೆ ವಿರುದ್ಧವಾಗಿದ್ದವು. ಇದು ಅರಬ-ಯಹೂದಿಗಳ ಘರ್ಷಣೆಗೆ ಇನ್ನೊಂದು ಕಾರಣವಾಯಿತು.

ವಲಸೆ ಬಂದ ಯಹೂದಿಗಳು ಹೆಚ್ಚು ಹೆಚ್ಚು ಹಣ ತತ್ತು ಅರಬ ಜಮೀನ್ದಾರರಿಂದ ಭೂಮಿಯನ್ನು ಕ್ರಯಕ್ಕೆ ತೆಗೆದುಕೊಂಡರು. ತೆಗೆದುಕೊಂಡ ಭೂಮಿಯಲ್ಲಿ ವೈಜ್ಞಾನಿಕ ಕ್ರಮದಿಂದ ಬೇಸಾಯ ನಡೆಸಿ ಭೂಮಿಯನ್ನು ಫಲವತ್ತಾಗಿ ಮಾಡಿದರು. ಹಳೆಯ ಅರಬ ಬೇಸಾಯಗಾರರು ತಮ್ಮ ಭೂಮಿಯನ್ನು ಬಿಡಬೇಕಾಯಿತು. ಇದೇ ರೀತಿಯಲ್ಲಿ ಹಲವಾರು ಅರಬ ಒಕ್ಕಲಿಗರು ತಮ್ಮ ಭೂಮಿಯನ್ನು ಬಿಟ್ಟು ನಿರ್ದೇಶಿಗಳಾಗಿ ಅಲೆಯುವಂತಾಗಿ ಬಂತು. ಸರ್ಕಾರವನ್ನು ಆ ಸ್ಥಿತಿಗೆ ತಂದ ಜ್ಯೂ ಜಮೀನ್ದಾರರ ಮೇಲೆ ನಿರ್ಗತಿಕ ಅರಬರು ಕತ್ತಿ ಮಸೆಯುವಂತಾರಂಭಿಸಿದರು. ಜ್ಯೂಗಳು ಪ್ಯಾಲೆಸ್ತೈನ್‌ನಲ್ಲಿ ಹಲವಾರು ಕೈಗಾರಿಕೆಗಳನ್ನು ಸ್ಥಾಪಿಸಿ ಅದರಲ್ಲಿ ಕೆಲಸದಲ್ಲಿ ನುರಿತರಾದ ಜ್ಯೂಗಳಿಗೆ ಕೆಲಸ ಕೊಡುತ್ತಿದ್ದರು. ಅದುದರಿಂದ ಕುಶಲಹೀನ ಕೆಲಸಗಾರ ಅರಬರಿಗೆ ಜ್ಯೂಗಳ ಕಾರ್ಖಾನೆಗಳಲ್ಲಿ ಕೆಲಸ ಸಿಗುವುದು ಬಹಳ ಕಷ್ಟವಾಯಿತು. ಕೆಲಸ ಸಿಕ್ಕಿದರೂ, ಅವರಿಗೆ ಕಡಿಮೆ ಸಂಬಳ ದೊರೆಯುತ್ತಿತ್ತು. ಇದರಿಂದ ಅರಬರು ತಮ್ಮ ಜನ್ಮಭೂಮಿಯಲ್ಲಿ ತಮಗೆ ಜೀವಿಸಲು ಅಸಾಧ್ಯವೆಂದು ಬಗೆದು ಜ್ಯೂಗಳನ್ನು ಪ್ಯಾಲೆಸ್ತೈನಿನಿಂದ ಓಡಿಸಬೇಕೆಂದು ನಿರ್ಧರಿಸಿ ಅವರೊಡನೆ ಘರ್ಷಣೆಗೆ ಆರಂಭಿಸಿದರು. ಅರಬರಲ್ಲಿ ರಾಷ್ಟ್ರೀಯ ಜಾಗೃತಿ ಹೆಚ್ಚಿದಂತೆ ಜ್ಯೂ ಮತ್ತು ಅರಬ ಘರ್ಷಣೆಗಳು ಬಲಗೊಂಡವು. ಇದನ್ನೆ ಕಾರಣವಾಗಿಟ್ಟುಕೊಂಡು ಅರಬರು ಪ್ಯಾಲೆಸ್ತೈನಿನಲ್ಲಿದ್ದ ಬ್ರಿಟಿಷ್ ಸರಕಾರದ ವಿರುದ್ಧ ದಂಗೆ ಎದ್ದರು. ಸಿರಿಯಾ ಮತ್ತು ಇರಾಕ್‌ಗಳ ಅರಬರು ಪ್ಯಾಲೆಸ್ತೈನ್‌ನ ಅರಬರಿಗೆ ನೆರವಾದರು. ಅರಬ ರಾಂಗ್ರೆಸ್ಸು ಬ್ರಿಟಿಷರು ನಿರ್ಮಿಸಿದ್ದ ಲೆಜಿಸ್ಲೇಟಿವ್ ಕೌನ್ಸಿಲಿಗೆ ಬಹಿಷ್ಕಾರ ಹಾಕಿತು. ಈ ಬಹಿಷ್ಕಾರ ಎಷ್ಟು ಯಶಸ್ವಿಯಾಗಿದೆ ಎಂದರೆ ಕೌನ್ಸಿಲ್ ಅಸ್ತಿತ್ವಕ್ಕೆ ಬರಲೇ ಇಲ್ಲ. 1928ರಲ್ಲಿ ಅರಬರು ವ್ಯಾಲೆಸ್ತೈನಿಗೆ ಪ್ರಜಾಪ್ರಭುತ್ವ ಜವಾಬ್ದಾರಿ ಸರಕಾರ ಬೇಕೆಂದು ಬ್ರಿಟಿಷರನ್ನು ಕೇಳಿದರು. ಬ್ರಿಟಿಷರು ಅರಬ—ಜ್ಯೂಗಳ ಘರ್ಷಣೆಯನ್ನು ನೆನಪು ಮಾಡಿಕೊಂಡು ವ್ಯಾಲೆಸ್ತೈನಿಗೆ ಜವಾಬ್ದಾರಿ ಸರಕಾರ ಕೊಡುವುದನ್ನು ನಿರಾಕರಿಸಿದರು. 1929ರಲ್ಲಿ ಜ್ಯೂಗಳು ವೆಸ್ಟಿಂಗ್ ವಾಲ್‌ನಲ್ಲಿ ಪ್ರಾರ್ಥನೆ ನಡೆಸುವುದನ್ನು ಅರಬ್ ಮುಸ್ಲಿಂರು ತಡೆಹಿಡಿದರು. ಇದು ಅರಬ-ಜ್ಯೂಗಳ ದಂಗೆಯನ್ನುಂಟು ಮಾಡಿತು. ಈ ದಂಗೆಯು ಜಲವಾರು ಅರಬ ಮನ್ನು ಜ್ಯೂ ಕೆಲಸಕ್ಕೆ ಕಾರಣವಾಯಿತು.

(ಮುಂದುನರಿಯುವುದು)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. P. No 9/1967

ರಕ್ಷಿದ್ದಿ —ಅರ್ಜಿದಾರರು

ಮತ್ತು

ಲಂಬೂನಟ್ಟಿ —ಮೊಣ್ಣ ಸಟ್ಟ ಮಗ್ಗ ಉಡ್ಪಿ ಪಲಿಮಾರು ಗ್ರಾಮ —ಯೆದ್ರಿ ಇವರೊಳಗೆ

ಸದ್ರಿ ಯೆದ್ರಿಗೆ ಯಾ ವ್ಯಕ್ತಿಯು ತಿಳಿಸುವ ದೇನಂದರೆ—

ಮೇಲ್ಕಂಡ ಅರ್ಜಿದಾರರು ಮತ್ತು ಯೆದ್ರಿರೊಳಗಾದ ಮದುವೆಯನ್ನು ನುದ್ರಾಳಿಕೆಯ ಸಂತಾನ ಕಾನೂನು ಮೇರೆಗೆ ಸಿಚ್ಛೇದನ ಮಾಡಬೇಕಾಗಿ ಪಗಯಿರಿ. ಅರ್ಜದಾರರು ದಾಕ್ಲು ಮಾಡಿದ ಸದ್ರಿ ಅರ್ಜಿಯ ತಾ. 16—9—67ಕ್ಕೆ ಯಿಟ್ಟಿಟಿ. ಆಕ್ಷೇಪಣೆ ಯೆದ್ರಿಗೆ ಆಕ್ಷೇಪಣೆ ಹೇಳಿಕೆಯಿದ್ದಲ್ಲಿ ಸದ್ರಿ ಜಾರಿ ಮೇಲ್ಕಂಡ ಕೋರ್ಟಿಗೆ ಹಾಜರಾಗಿ ಜ್ಯಾಪೀಠ ಮಾಡಿಕೊಳ್ಳತಕ್ಕದ್ದು ಯೆಂಬ ಸಂಗ್ತಿ ಎಳಿಸೋಡಾಗಿಯಿದೆ.

N. V. Kamath
Advocate for Petitioner

ಉಡ್ಪಿ 31—8—67

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ಇಮ್ಮ 35 ಶಾಖೆಗಳಿಂದ ಹೆಚ್ಚಿರುವ

"ವಿಜಯ ಬ್ಯಾಂಕಿ"ನಲ್ಲಿ ಸೇವೆಗೆ ಸಿದ್ಧರಿರಿ.

ಠೇವಣಾತಿಗಳ ಮೇಲೆ ೩% ವರೆಗಿನ ಬಡ್ಡಿ.

ಸ್ಟೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ೪½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ಶಿ. ಅಧಿಕೃತರು—ವಿಜಯ ಬ್ಯಾಂಕಿಂಗ್ ಬಿಲ್ಡಿಂಗ್ಸ್,

ಲೈಟ್ ಹೌಸ್ ಹಿಲ್ ರೋಡ್

ಮಂಗಳೂರು—೩

ನನ್ನ ಚಂದಾದಾರರಲ್ಲಿ ನನ್ನ ವಿನಂತಿ

ಇದೇ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 4ನೇ ವರ್ಷವು ಕೊನೆಗೊಂಡು ಸಪ್ತಂಬರಾದಿಯಿಂದ 5/ನೇ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಹಣ ಬಾಕಿಯಿರುವ ನನ್ನ ಚಂದಾದಾರಾ ಬಾಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರ್ಯ ಮನಿಆರ್ಡರ್ ಮೂಲಕ ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆ ಮಾಡುವ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ಎನ್ನಂತಿಸುತ್ತೇನೆ.

ಅಂತೂ ಚಂದಾ ಹಣವು ಸರಾಲದಲ್ಲಿ ಬಾಕಿದಿದ್ದಲ್ಲಿ ನಾವು ಶ್ರೀಮಂತ ಮುಂದಿನ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಅದನ್ನು ಅವಶ್ಯ ಸ್ವೀಕರಿಸಿ ಸಹಕರಿಸುವಂತೆ ಬಿನ್ನಹಿಸುತ್ತೇವೆ.

ಮೆನೇಜರ್,

ನವಯುಗ, ಉಡುಪಿ.

ಕಾದಿರಿ, ಕಾದು ನೋಡಿ

(ಸಾಲ್ಯನೇ ಮುಟದಿಂದ)

ಪುಸ್ತಕ ಭಂಡಾರ ಸಾಲುಳ್ಳ, ಆಕರ್ಷಣ, ಪ್ರಬಂಧ ಸ್ಪರ್ಧೆ ಮೊದಲಾದುವುಗಳ ಹೆಸರಲ್ಲಿ ಸುಮಾರು ಐದು ಲಕ್ಷ ರೂಪಾಯಿಗಳನ್ನು ಸುಟ್ಟಿತು. ನಿಜಾನ್ನಿ ಮತ್ತೆ. ೧೯೫೧-೬೨ರಿಂದ ಹಿಂದೀ ಭಾಷಾ ಪರೀಕ್ಷೆಗಳು ಕಡ್ಡಾಯುವಾಯಿತು ಪೂರಾ ಸುಳ್ಳು....'

'ಯಾಕೆ?'

'ಪರೀಕ್ಷೆಗೆ ಹೋದರೂ ಹೋಗದಿದ್ದರೂ ಪಾಸಾದರೂ ನಾಪಾಸಾದರೂ ಪರಿಣಾಮ ಅಭಾದಿತವಾದರೆ...'

'ಹಹ್ಹಾಂ....'

"ನಮ್ಮ ಸುಂದ್ರೂ ಹೇಳ್ತಿದ್ಯಲ್ಲ..... ಆವ್ರ ಹಿಂದೀ ಮೇಷ್ಟ್ರು ಹೆಳ್ತಿದ್ರಂತೆ.... ಹೆಚ್ಚಿಗೆ ಹಣವೇನೂ ಕಟ್ಟಲ್ಲ. ಪರೀಕ್ಷೆಗೆ ಹೋಗಿ, ನಿವ್ ರಿಜಿಸ್ಟರ್ ನಂಬ್ರ ಬರೀರಿ. ಬ್ಲ್ಯಾಂಕ್ ಪೇಪರಾದ್ರೂ ಕೊಟ್ಟು ಬನ್ನಿ....'

'ಆಯ್ತೋ, ಏನು ಲಾಭಾನ್ಸೆ?'

'ಅದೇ ನೋಡಿ, ಗುಟ್ಟು...'

"ಏನಂಥ ರಹಸ್ಯ?"

'ನೋಡಿ ಹೀಗೆ ಪೇಪರ್ ಕೊಟ್ಟು ಬಂದ್ರೆ ವ್ಯಾಲ್ಯುಯೇಶನ್‌ಗೆ ಪೇಪ್ರುಗಳ ನಂಬ್ರೆ ಹೆಚ್ಚುತ್ತೆ. ಕೆಲವು ಹಿಂದೀ ಅಧ್ಯಾಪಕರಿಗಾದ್ರೂ ಕೆಂಚೆತ್ತು ಪೂರ ಸಿಗುತ್ತೆ....'

"ಏನು ಸಿಗುತ್ತೆ?

'ಏನಂತೀರಾ? ಹಿಂದೀ ಎರಡೂವರೆ ತಾಸಿನ ಪೇಪರಂತೆ, ಎಪ್ಪತ್ತೈದು ಪೈಸೆ ಸಿಗುತ್ತಂತೆ...'

"ಓ.....ಹಾಗಾದರೆ ಸರೀನ್ನ. ಸರಕಾರಕ್ಕಿಂತ ಜೆಚ್ಚಾಗಿ ಹಿಂದೀ ಅಧ್ಯಾಪಕರೇ ಪ್ರಚಾರ ಕಾರ್ಯ ಮಾಡ್ತಾರೆ...."

"ಇಂತಹ ಸ್ಥಿತಿಯಲ್ಲಿ ಸುತ್ತೇ ಬಿದ್ದಿದೆ ರಾಷ್ಟ್ರದಲ್ಲಿ ಹಿಂದಿ. ಆದ್ರೂ ನಿಮ್ಮ ಮುಖ್ಯ ಮಂತ್ರಿಗಳು ಅನ್ನುತ್ತಾರೆ..."

"ಒಳ್ಳೆಯ ಗಗನಕ್ಕೇರಲಿ ಸಾಧ್ಯವೆ? ಕಾದು ನೋಡಿ..."

'ಅದೀಗ ಸರಿ. ಕಾದು ಕಾದು ನಮ್ಮ ಸೊಂಟ ಸೋಬಾನೆಯಾಯ್ತು. ತಲೆ ಕಾದು ಹೋಯ್ತು.... ಇನ್ನು...'

"ಏನು?"

"ಏನೂಂತನ್ನೋದು! ಈ ಪ್ರಶ್ನೆಯನ್ನ

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. 480/1966

ಈಶ್ವರ್ ಇಲೆಕ್ಟ್ರಿಕಲ್ಸ್—ಮೂಲಕ ಕೆ. ರಾಘವೇಂದ್ರರಾವ್ —ವಾದಿ

B ಕೃಷ್ಣ ತಂದ್ರಿ ಕಾಡಾ— ಪ್ರತಿವಾದಿ

ಇನ್ನೂ ಪ್ರತಿವಾದಿ B. ರಾಮಚಂದ್ರ ತಂದ್ರಿ S/o ಕೃಷ್ಣತಂತ್ರಿ, ಉಲ್ಲಾಡ್ಕ, ಬೆಳ್ಮಣ್ ಗ್ರಾಮ, ಕಾರ್ಕಳ ತಾಲೂಕು

ಇವರಿಗೆ

ವಾದಿರು ಪ್ರತಿವಾದಿರ ಮೇರೆ ಕೈಪಕ್ಕು ನಿವೃತ್ತಿಗೆ ದಾಕ್ಲು ಮಾಡಿದ ಸದ್ರಿ ದಾವೆಯನ್ನು ತಾ. 16—10—1967ಕ್ಕೆ ಇಟ್ಟಿದೆ. ಆದ್ರಿಂದ ನೀವು ಆ ದಿವಸ ಬೆಳಗ್ಗೆ 10½ ಗಂಟೆ 11ಕ್ಕೆ ಹಾಜ್ರಾಗಿ ನಿಮ್ಮ ಉದಾಹರಣೆ ಹಾಜ್ರು ಪಡಿಸಿ ಇಲ್ಲದ್ದಲ್ಲಿ ಸದ್ರಿ ದಾವೆಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ಪಿ. ರಾಮಚಂದ್ರರಾವ್, B.A.B.L

ವಾದಿಕಡೆ ಎಡ್ವಕೇಟ್

ಉಡುಪಿ, 5—5—67

ವಿಜ್ಞಾನ ವಾರ್ತೆ

ಅಮೆರಿಕೆಯಲ್ಲೂ ಹಿಮಯುಗದ ಮಾನವ

ಸುಮಾರು 40,000 ವರ್ಷಗಳ ಹಿಂದೆ ಆಂದರೆ, ಇದು ವರೆಗೆ ನಂಬಿದ್ದಕ್ಕಿಂತಲೂ ಸುಮಾರು 30,000 ವರ್ಷಗಳ ಹಿಂದೆ ಅಮೆರಿಕದ ಖಂಡಗಳಲ್ಲಿ ಮನುಷ್ಯ ಇದ್ದ ಎಂಬುದಕ್ಕೆ ಸೂಚಕವಾದ ಸಾಕ್ಷ್ಯಾಧಾರವನ್ನು ಅಮೆರಿಕದ ವಿಜ್ಞಾನಿಗಳು ಆಧ್ಯಯನ ಮಾಡುತ್ತಿದ್ದಾರೆ. ಹೊಸ ಸಾಕ್ಷ್ಯಾಧಾರದಲ್ಲಿ ಒಂದು ಸಾಧನಗಳೊಡನೆ, ಹಿಮಯುಗದ ಪ್ರಾಣಿಗಳ ಅವಶೇಷಗಳೂ ದೊರೆತಿವೆ. ಮೆಕ್ಸಿಕೋದ ಪ್ಯೂಬ್ಲೋಕ್ಕೆ ದಕ್ಷಿಣದಲ್ಲಿ ಚಿಪ್ಪಿನ ಪಳೆಯುಳಿಕೆಗಳ ಹಾಸುಗಳು ಕಂಡು ಬಂದಿವೆ.

ಹೊಸದಾಗಿ ಲಭಿಸಿರುವ ಈ ಸಾಕ್ಷ್ಯ ಸಂಗ್ರಹವು ಪ್ರಯೋಜಕವಾಗಿ ಬಹುದೊಂಬ ಎಚ್ಚರಿಕೆಯಿಂದ ಕೂಡಿದ ನಂಬುಗೆ ತಮಗಿರುವುದಾಗಿ ಅಮೆರಿಕದ ಜಿಯಲಾಜಿಕಲ್ ಸರ್ವೆಯ ಡಾ| ಮೈಯರ್ ರೂಬೆನ್ ಮತ್ತು ಡಾ| ಹರಾಲ್ಡ್ ಈ. ವಾಲ್ಡ್ ಹೇಳಿದರು. ಈ ವಂಚಿಗಿ,೦೦೦ ವರ್ಷಗಳ ಹಿಂದೆ ಅಮೆರಿಕಗಳಲ್ಲಿ ಮನುಷ್ಯನಿದ್ದ ಎಂಬುದಕ್ಕೆ ಸಾಕ್ಷ್ಯ ದೊರೆತಿತ್ತು ಎಂದೂ ಅವರು ಹೇಳಿದರು.

ಕೆಶ್ತುವ ಒರಟು ಸಾಧನಗಳು, ಈಟಿಯ ಮೊನೆಗಳು ಯಾವ ಕಾಲದವೆಂಬುದನ್ನು ಗುರುತಿಸಲು ಅವರಿಗೆ ಸಾಧ್ಯವಾಗಿಲ್ಲ. ಈ ಸಾಧನಗಳು ಕಲ್ಲಿನವಾದ್ದರಿಂದ ರೇಡಿಯೋ ಆಕ್ಟಿವ್ ಸಾಧನಗಳನ್ನು ಬಳಸಲು ಸಾಧ್ಯವಿಲ್ಲ. ಈ ಸಾಧನಗಳನ್ನು ಬಳಸಬೇಕಾದರೆ ವಸ್ತುವಿನಲ್ಲಿ ಇಂಗಾಲವಿರಬೇಕು. ಆದರೆ ಅವಶೇಷಗಳನ್ನು ಆಗೆದ ಸ್ಥಳದ ಬಳಿಯಲ್ಲಿ ಜ್ವಾಲಾಮುಖಿ ಶಿಲೆಯಲ್ಲಿ ಹುದಿದು ಹೋಗಿದ್ದ ಇದ್ದಲಿನ ತುಂಡುಗಳ ಕಾಲವನ್ನು ಗುರುತಿಸಿದರು. ಬೂದಿ ಹಾಗೂ ಸಾಧನಗಳೆರಡೂ ಏಕಕಾಲದಲ್ಲಿ ಹೆಂಗಿದುಹೋಗಿರಬೇಕೆಂದು ಅವರು ನಂಬಿದ್ದಾರೆ. ಶಕ್ತಿದ ಕಣಿವೆಯ ಚಿಪ್ಪಿನ ಪಳೆಯುಳಿಕೆಗಳ ಕಾಲವನ್ನೂ ಅವರು ನಿರ್ಧರಿಸಿದರು.

ಎಲ್ಲ ಸಾಕ್ಷ್ಯಗಳ ಭೂ ವಿಜ್ಞಾನೀಯ ಹೊಂದಾಣಿಕೆಯ ಕ್ರಮದಿಂದ ನಿವೇಶನ ಸುಮಾರು 40, 000 ವರ್ಷಗಳಷ್ಟು ಹಳೆಯುದೆಂಬ ಅವರು ಅಂದಾಜು ಮಾಡಿದ್ದಾರೆ. ಆದರೆ ಭೂ ವಿಜ್ಞಾನೀಯ ಹೊಂದಾಣಿಕೆ "ಸಡಿಲಕೊಂಡಿ" ಎಂದೂ ಎಚ್ಚರಿಸಿ, ಖಚಿತವಾದ ತೀರ್ಮಾನಕ್ಕೆ ಇನ್ನೂ ಬರುವಂತಿಲ್ಲ ಎಂದರು.

ಸಾಕ್ಷ್ಯ ಸಾಹಿತ್ಯವನ್ನು ಹಾರ್ವರ್ಡ್ ವಿಶ್ವವಿದ್ಯಾನಿಲಯದ ಡಾ| ಜೆ. ಓ. ಬ್ರೂ ಅವರ ನಾಯಕತ್ವದ ವಿಜ್ಞಾನಿಗಳ ತಂಡ ಪೊಂದು ಮತ್ತಷ್ಟು ಅಧ್ಯಯನ ಮಾಡುತ್ತಿದೆ. ಈ ಅಧ್ಯಯನವನ್ನು ಬಹುವಾಗಿ ಅಮೆರಿಕದ ರಾಷ್ಟ್ರೀಯ ವಿಜ್ಞಾನದ ಫೌಂಡೇಶನ್ನಿನವರು ಏರ್ಪಡಿಸಿದ್ದಾರೆ.

ತಿಳಿದಿದೆಯೆ?

ಟೀ, ಕಾಫಿ ಸೋಸಿದ ಹುಡಿಯಿಂದ ಪಾತ್ರೆಗಳನ್ನು ತೊಳೆದರೆ ಜಿಡ್ಡು ಸುಲಭವಾಗಿ ಹೋಗುತ್ತದೆ.

೦೦೦ ೦೦೦ ೦೦೦

ಅಕ್ಕಿ ತೊಳೆದ ನೀರಿನಲ್ಲಿ ಬೆಳೆ ಬೇಗನೆ ಬೇಯುತ್ತದೆ.

೦೦೦ ೦೦೦ ೦೦೦

ಮೆಂತ್ಯವನ್ನು ಹಾಕಿ ರುಬ್ಬಿದ ಹಿಟ್ಟಿನಿಂದ ಮಾಡಿದ ದೋಸೆ, ಇಡ್ಲಿಗಳು ತುಂಬಾ ಮೃದುವಾಗಿರುತ್ತವೆ.

೦೦೦ ೦೦೦ ೦೦೦

ಮಜ್ಜಿಗೆಯಿಂದ ಕೈತಿಕ್ಕಿ ತೊಳೆದರೆ ಕೈಗೆ ಅಂಟಿರುವ ಚಿವಿಡಿ ಎಣ್ಣೆ ವಾಸನೆ ಬೇಗ ಹೋಗಿಬಿಡುತ್ತದೆ.

೦೦೦ ೦೦೦ ೦೦೦

ಚಪಾತಿಗೆ ಗೋಧಿ ಹುಡಿಯನ್ನು ಕಲಸುವಾಗ ನೀರಿನ ಬದಲು ಹಾಲನ್ನು ಉಪಯೋಗಿಸಿ, ರುಚಿಯಲ್ಲಿ ಆಗುವ ಬದಲಾವಣೆಯನ್ನು ನೋಡಿ.

೦ ೦ ೦

ಈರುಳ್ಳಿಯನ್ನು ಕತ್ತರಿಸಿ ದೀಪದ ಹತ್ತಿರ ಇಟ್ಟರೆ, ಪತಂಗಗಳು ಯಾವೂ ಮಳೆ ಹುಳಗಳು ಬರುವುದಿಲ್ಲ.

೦ ೦ ೦

ಬೋರಿಕ್ ಪೌಡರ್, ಸಕ್ಕರೆ, ಮೈದಾ ಹಿಟ್ಟನ್ನು ಇಲಸಿ ಜಿರಲೆಗಳು ಓಡಾಡು

ಉತ್ತರಿಸೋ ದಿಟ್ಟರಾದಾರಣೆ ಪ್ರಾಂಶ: ಇನ್ನ ಹುಟ್ಟಿ ಬಂಬೇಕು....'

'ಹಹ್ಹಾ... ಕಲಾಯುನವಾದ...."

'ಒಲ್ರಿ, ಪಂತ್ತೆಂಥವ? ಹಾವು ಸಾಯಬ ಕೂ ಲು ಮಾರಿಯಾದು ನೀತಿ ನಿಷ್ಠ್ರಯ....'

"ಹಹ್ಹಾಂ...ಹೋಗ್ಲಿ ಬಿಡು. ಕಾದು ನೋಡು...."

"ಇಷ್ಟು ಹೊತ್ತಾಯಿತು. ಇನ್ನು ಕಾಯೋದೆಂಂದ್ರೆ...."

"ಓ.....ಬೇಡ್ರ, ಕಾಯ ಬೇಡ."

—ಗೋರಾ.

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ ಸಂತತಿ

ಜನನಗಳು ಹೆಚ್ಚದಂತೆ ನಾವಿರುವ ವಿಚಾರ ಮತ್ತು ಉಪಾಯ ಗಳನ್ನು ವಿವರಿಸುವ ಪೈಪಿಡಿ

ಬೆಲೆ 0—50 ಪೈಸೆ ಮಾತ್ರ.

0-60 ಪೈಸೆ M. O. ಮಾಡಿ, ಯಾ ಸ್ಟ್ಯಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ

ಪಾಲುಕೋಟೆ, ಉಡುಪಿ, ದ. ಕ.

ದೇಹಿ ವೋರಿ.....!

ಉಡುಪ ಖಂಡ ಶಿವಿಂಡ ಚಂಡದೇಹಿ
ವೊಡ ಮಡುವೆ ದೇವ ಜಗ ಶಾಂತಿ ದೇಹಿ!
ಕೈಪೆದೋರು ಕೈಕ ಪಾಪದೂರ ಕರುಣೆ
ಕೃಷ್ಣಕಕ್ಕಲ ಹರಿಸಿ ಹರಿಸಿ ಹರಿಸಿ!

ಭಕ್ತ ಹೃದಯೇತ್ಕುಂಗರಂಗ ವಾಸಿ
ರಿಕ್ತ ಹೃದ ನಂದಿ ಭಕ್ತಿ ರಕ್ತ ಸೂಸಿ
ವ್ಯಕ್ತ ಅವ್ಯಕ್ತ ಧೀ ಶಕ್ತಿರುಕ್ತಿ
ಶಕ್ತಿಯೆಡೆ ಬಾನರವಿ ದೇಹಿ ಮುಕ್ತಿ!

ಭೃಂಗವಾ ಭೃಂಗ ಕಾವೂಂಗನನು ಉರೆ ಸುಟ್ಟ
ಶೃಂಗ ಧವಳಾಚಲದ ವಾಸಕ್ಕೆ ತೊಗಲುಟ್ಟ
ನುದರಂಗ ಮದಹರಿ ಹರ ಪರಾವರ ಧೀರ
ವ ದಿಸಿದೆನ್ಮೈಶ್ವರಿಗೆ ಮು ದವೂದೆನೀ ಬಾಂ!

ಕಷ್ಟಮದ ಮೂರ್ಖಾಯೆ ಶುಷ್ಕ ಮೋಹವನೆಳೆದು
ಬಾರಯ್ಯ ತೋಂತ ಕಥ ಕ ನೆರು ಹೃದಯವು ಬೆಳೆದು
ಮದವ ಮುದವನು ಮಾಡಿ ನೋಕ ನೆಳಿ ಜತ್ತಿರ
ಮಾಯ ಮಿತ್ತನು ಒತ್ತಿ ಎತ್ತು ಬಾನೆತ್ತರ....!

"ಶ್ರೀನುರ್ತಿ"

ವಲ್ಲಿ ರಾತ್ರಿ ಇಟ್ಟರೆ ಬೆಳಗ್ಗೆ ಹೊತ್ತಿಗೆ ಜಿರಲೆಗಳು ಸತ್ತಿರುತ್ತವೆ.

೦ ೦ ೦

ಪೆಟ್ಟಿಗ ಆಥವಾ ಬೀರುವಿನಲ್ಲಿ ಸ್ವಲ್ಪ ಲವಂಗ ಇಟ್ಟರೆ ಜಿರಲೆ ಬರುವುದಿಲ್ಲ.

ಶ್ರೀ ರಾಮಕೃಷ್ಣರ

ವಚನಾಮೃತ

ಸಂಸಾರಿಗಳಿಲ್ಲಿ, ಇಲ್ಲವರು ದೇವರಿಗೆ ಆಸ್ತಿ ಬರಲಿಲ್ಲವೆಂದು ಜನರು ಕಣ್ಣೀರಿನ ಕೋಡಿ ಹರಿಸುತ್ತಾರೆ. ದೇವರನ್ನು ನೋಡುವುದಕ್ಕೆ ಆಗಲಿಲ್ಲ ಆಥವಾ ಅವನನ್ನು ಪ್ರೀತಿಸುವುದಕ್ಕೆ ಸಾಕಾದಷ್ಟು ಭಕ್ತಿ ಇಲ್ಲವೆಂದು ಯಾರಾದರೂ ಒಂದು ತೊಟ್ಟಾದರೂ ಕಣ್ಣೀರನ್ನು ಸುರಿಸುತ್ತಾರೆಯೇ?

೦ ೦ ೦

ದೋಣಿ ನೀರಿನಲ್ಲಿದ್ದರೆ ಅಪಾಯವಿಲ್ಲ ಆದರೆ ನೀರು ದೋಣಿಯೊಳಗೆ ಬರದಂತೆ ನೋಡಿಕೊಳ್ಳಬೇಕು. ನೀರು ಒಳಕ್ಕೆ ಬಂದರೆ ದೋಣಿ ಮುಳುಗುವುದು. ಅದರಂತೆ ಯೇ ಭಕ್ತನು ಸ್ಪರ್ಶಚಿದಲ್ಲಿಸ್ಪರ್ಶ ತೊಂದರೆಯಿಲ್ಲ; ಆದರೆ ವಿಷಯಾಂಶಕ್ತಿ ಅವನ ಮನಸ್ಸನ್ನು ಪ್ರವೇಶಿಸಲು ಕೂಡದು.

೦ ೦ ೦

ಸಹನೆಗೆ ಮಿಕ್ಕಿಂತ ಮೇಲಾದುದಿಲ್ಲ ಅದನ್ನು ಎಲ್ಲರೂ ಅಭ್ಯಾಸ ಮಾಡಬೇಕು. ಭಾರವಾದ ಸುತ್ತಿಗೆಯಿಂದ ಎಸ್ಟು ಪೆಟ್ಟು ಕೊಟ್ಟರೂ ಅಕ್ಕಸಾಲಿಗನ ಪಡಿಗಲ್ಲು ಅಚಲವಾಗಿ ಇರುವುದು. ಅದರಂತೆಯೇ ಪ್ರತಿಯೊಬ್ಬರೂ ಯಾರು ಏನೇ ಮಾಡಲಿ, ಆಥವಾ ಹೇಳಲಿ ಸ್ಥಿರಚಿತ್ತರಿಂದ ಸಹಿಸಬೇಕು.

೦ ೦ ೦

ಮುಕ್ತನು ಪ್ರಪಂಚದಲ್ಲಿ ಹೇಗೆ ಬಾಳುತ್ತಾನೆ? ನಿರ್ಜನದಲ್ಲಿ ಸಾಧುಗಳಿಗೆ ಹಣ್ಣು ಹಂಪಲು ತಂದು ಅವನು ಪ್ರಪಂಚದಲ್ಲಿ ಜೀವಿಸುತ್ತಾನೆ. ಇದ ನೀರಿನಲ್ಲಿ ಮುಳುಗಿದರೂ ನೀರು ಅವನ್ನ ನೆನೆಸುವುದಿಲ್ಲ. ಅದಕ್ಕೆ ಅಂಟಿಕೊಂಡಿರುವ ತೆಲಪು ನೀರಿನ ತೆರೆಟ್ಟುಗಳು ರಕ್ಷಯನ್ನು ಬಡಿದ ಕೂಡಲೇ ಕರಗಿ ಮಾಯವಾಗಿ ಜಾರಿ ಬೀಳುವವು

ಜಿಲ್ಲಾ ಅಳಿಯ ಸಂತಾನಿಗರ ಸಭೆ

ಆಸ್ತಿಗೆ ಸಂಬಂಧಪಟ್ಟ ಬದಲಾವಣೆಗಳಿಗೆ ತೀವ್ರ ಪ್ರತಿಭಟನೆ

ಕಾರ್ಕಳ, ಸೆ 10, ಕೋರ್ಟು ದ್ವಾರಾ, ಯಾವಾರ್ಡು, ರಾಜಿಯಾಲು ಪಟ್ಟ ವಗೈರೆ ಆಗಿರುವ ಆಫಮಾ ಆಗುತ್ತಿರುವ ಅಳಿಯ ಸಂತಾನಿಗರ ಕುಟುಂಬದ ಕವನ ಪಾಲಿನ ವ್ಯವಸ್ಥೆಗಳನ್ನು 1949ರ ಮದ್ರಾಸು ಅಳಿಯ ಸಂತಾನ ಕಾನೂನಿಗೆ ತಂದಿರುವ ಮೈಸೂರು 1967ರ ತಿದ್ದುಪಡಿ ಬಿಲ್ಲಿನಲ್ಲಿ ರದ್ದು ಮಾಡಿ ಪುನಃ ವಿಧಿಸಲಿಗೆ ಅವಕಾಶವಾಗುವುದರಿಂದ ಸದರಿ ಗಂಭೀರ ಸಮಸ್ಯೆಯ ವಿಚಾರ ವಿನಿಮಯದ ಬಗ್ಗೆ ತಾ. 10—9—67ರಂದು ಕಾರ್ಕಳ ಟೌನ್ ಹೈಸ್ಕೂಲಿನ ಎಕಾಡರಿಯು ಹಾಲಿನಲ್ಲಿ ಕಾರ್ಕಳ ತಾಲೂಕು ಬೋರ್ಡಿನ ಅಧ್ಯಕ್ಷ ವಕೀಲ್ ಶ್ರೀ. ಎನ್. ಮೋಹನದಾಸ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಜರಗಿತು. ವ್ಯವಸ್ಥಾಪಕ ಶ್ರೀ. ಬೋಳ ರಘುರಾಮ ಶೆಟ್ಟಿ. ಎಂ. ಎಲ್. ಎ. ಅವರು ಸ್ವಾಗತಿಸಿ, ಸಭೆ ಕರೆದ ಉದ್ದೇಶವನ್ನು ವಿವರಿಸಿ ಸಭಿಕರು ತಮ್ಮ ಅಭಿಪ್ರಾಯ ಕೊಡಬಯಸಿದೆಂದರು. ಡಾ| ಸಂಪತ್, ವಕೀಲ್ ಕೆ. ಸುಂದರ ರಾಮ ಶೆಟ್ಟಿ ಇವರು ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟ ಬಳಿಕ ವಕೀಲ್ ಬಿ. ಶೀನಪ್ಪ ಹೆಗ್ಗಡೆಯವರು ಮೂತನಾಡುತ್ತ ಈ ಸಮಸ್ಯೆಯು ಸಮಸ್ತ ಸಮಾಜದ ಹಿತಕ್ಕೆ ವಿರೋಧವಾಗಿ ಪರಿಣಮಿಸಲಿದ್ದು ಇದನ್ನು ಸಂಘಟಿತರಾಗಿ ಹಿತಾಶಕ್ತಿಯುಳ್ಳವರ ಸಹಿಯೊಂದಿಗೆ ತರಲ್ಪಟ್ಟ ಪ್ರಾಣಿಗಿರಬೇಕೆಂದೂ ಇದು ಪಾಸಾದರೆ ಅಳಿಯ ಸಂತಾನಿಗರು ಕೋರ್ಟು ಕಾಯುವ ಪ್ರಸಂಗ ಬಂದು ಲಕ್ಷಾಂತರ ರೂಪಾಯಿ ವ್ಯಯವಾಗಿ ಬಹುದೆಂದೂ ಇದನ್ನು ವಿರೋಧಿಸಿ ಸಮಾಜದ ಹಿತ ಸಾಧಿಸಬೇಕೆಂದೂ ಹೇಳಿ ತಮ್ಮ ಪ್ರಬಲ ಪ್ರತಿಭಟನೆ ಸೂಚಿಸಿದರು, ಅನಂತರ ಈ ಕೆಳಗಿನ ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಮದ್ರಾಸು ಅಳಿಯ ಸಂತಾನ ಕಾನೂನಿಗೆ ತಂದಿರುವ ಮೈಸೂರು 1967ರ ತಿದ್ದುಪಡಿ ಬಿಲ್ಲಿನಲ್ಲಿರುವ ಕೋರ್ಟು ದ್ವಾರಾ, ಎವಾರ್ಡ್, ರಾಜಿ ಪಂಚಾಯ್ತಿಗೆ, ವಗೈರೆ ರೀತಿ ಆಗಿರುವ ಪಾಲುಗಳಲ್ಲಿ ನಿಸ್ಸಂತತಿ ಕವನಿಗೆ ಇಡಲ್ಪಟ್ಟ ಪಾಲು ಅಳಿಯ ಸಂತಾನ ಕುಟುಂಬದ ವಿಶಿಷ್ಟ ಮೂಲಭೂತ ತತ್ವಗಳಿಗೂ ನ್ಯಾಯಕ್ಕೂ ಅನುಗುಣವಾಗಿದ್ದು ಸಮಾಜದ ಹಿತಾಶಕ್ತಿಗೂ ಕೃಷಿ ಅಭಿವೃದ್ಧಿಗೂ ಕಾರಣಭೂತವಾಗಿರುತ್ತದೆ. ಇದರ ಅಧಾರದಿಂದ ಸಾವಿರಾರು ಅಳಿಯ ಸಂತಾನ ಕುಟುಂಬಗಳು ಲಕ್ಷಾಂತರ ರೂಪಾಯಿ ವೆಚ್ಚದಿಂದ ಕಳೆದ 18 ವರ್ಷಗಳಲ್ಲಿ ಕೋರ್ಟು ದ್ವಾರ, ಎವಾರ್ಡ್, ಪಂಚಾಯಿತಿಗೆ ವಗೈರೆ ಮೂಲಕ ವಿಭಾಗಗೊಂಡಿದ್ದು ಅನೇಕ ವ್ಯಾಜ್ಯಗಳು ಈಗ ಕೂಡಾ ಮುಕ್ತಾಯವಾಗದೇ ಬಾಕಿ ಉಳಿದಿರುತ್ತವೆ.

ಈ ಮಧ್ಯೆ ಸದ್ರಿ ಎಲ್ಲಾ ವಿಭಾಗ ಪಾಲುಗಳನ್ನು ಈಗ ತಂದಿರುವ ತಿದ್ದು ಪಡಿ ಬಿಲ್ಲಿನಲ್ಲಿ ರದ್ದುಗೊಳಿಸುವ ಕಲಮುಗಳನ್ನು ಕಾನೂನು ಆಗಿ ಕೊಟ್ಟರೆ ಅಳಿಯ ಸಂತಾನ ಕುಟುಂಬಗಳು ನಿರ್ನಾಮಗೊಳ್ಳುವುದು. ಮತ್ತವಲ್ಲದೆ ನಿಸ್ಸಂತತಿಕವನಿನ ಆಸ್ತಿಯಲ್ಲಿ ಸಂತತಿ ಕವನಿಗೆ ಇರುವ ಮೂಲಭೂತ ಆಸ್ತಿ ಹಕ್ಕನ್ನು ಘಾಟನೆಗೆ ವಿರುದ್ಧವಾಗಿ ಕಸಿದು ಕೊಂಡಂತಾಗುವುದು. ಎಲ್ಲದ ಸಾವಿರಾರು ಅಳಿಯ ಸಂತಾನ ಕುಟುಂಬಗಳನ್ನು ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಈಗಾಗಲೇ ಅರ್ಧಕ್ಕೆ ಮುಗ್ಗಟ್ಟಿನಲ್ಲಿರುವ ಅಳಿಯ ಸಂತಾನಿಗರನ್ನು ಹೆಚ್ಚಿನ ಕಷ್ಟ ನಷ್ಟಗಳಿಗೆ ಗುರಿಪಡಿಸಿದಂತಾಗುತ್ತದೆ. ಆದುದರಿಂದ ಈ ಅಳಿಯ ಸಂತಾನಿಗರ ಸಭೆಯು ಈ ಬಿಲ್ಲಿನಲ್ಲಿರುವ ಆಸ್ತಿಗೆ ಸಂಬಂಧಪಟ್ಟ ಬದಲಾವಣೆಗಳನ್ನು ಸಂಪೂರ್ಣವಾಗಿ ವಿರೋಧಿಸಿ ಸದ್ರಿ ಬದಲಾವಣೆಗಳನ್ನು ಕೈ ಬಿಡಬೇಕಾಗಿ ಮೈಸೂರು ಸರಕಾರವನ್ನು ಕಳಕಳಿಯಿಂದ ಕೇಳಿಕೊಳ್ಳುತ್ತದೆ.

ಬಳಿಕ ಯುಕ್ತ ಕಾರ್ಯಕ್ರಮಗಳಿಕೊಳ್ಳವರೆ ಒಂದು ಸಮಾತಿಯನ್ನು ರಚಿಸಲಾಯಿತು. ಅಧ್ಯಕ್ಷರ ಭಾಷಣ, ಧನ್ಯವಾದ ಸಮರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಉಪನ್ಯಾಸ ಮಾಲೆ

ಉಡುಪಿ, ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರದ ಆಶ್ರಯದಲ್ಲಿ ಭಾರತ ಸರಕಾರದ ವಿಶೇಷಲಿಪಿ ಇಲಾಖೆಯ ಡೆಪ್ಯುಟಿ ಸೂಪರಿಂಟೆಂಡೆಂಟರಾದ ಡಾ| ಕೆ. ವಿ. ರಮೇಶ್, ಎಂ. ಎ. ಪಿ. ಎಚ್. ಡಿ. ಅವರು ತಾ. 8—9—67ರಂದು ತುಳುನಾಡಿನ ಪ್ರಾಚೀನ ಇತಿಹಾಸದ ಕುರಿತು ಯಂ. ಜಿ. ಯಂ. ಕಾಲೇಜಿನಲ್ಲಿ ಕೇಂದ್ರದ ಡೈರೆಕ್ಟರ್ ಶ್ರೀ. ಗು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಭಾಷಣ ಮಾಡಿದರು. ಆರಂಭದಲ್ಲಿ ಪ್ರಿನ್ಸಿಪಾಲ್ ಗುರುರಾಜ ಭಟ್ಟರು ಉಪನ್ಯಾಸಕರ ಪರಿಚಯ ಮಾಡಿಕೊಟ್ಟರು.

ಮುರುದಿನ ಡಾ| ರಮೇಶರವರು ತುಳುನಾಡಿನ ಮಧ್ಯಯುಗದ ಇತಿಹಾಸದ ವಿಷಯವಾಗಿ ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನಲ್ಲಿ ಭಾಷಣ ಮಾಡಿದರು.

ವಕೀಲ್ ಯು. ಬಿ. ಕೃಷ್ಣರಾಯರ ನಿಧನ

ಉಡುಪಿಯ ಪ್ರಸಿದ್ಧ ವಕೀಲರಾದ ಶ್ರೀಯುತ. ಬಿ. ಕೃಷ್ಣರಾಯರು ಇದೇ ತಾ. 3ನೇ ರಾತ್ರಿ ತಮ್ಮ ನಿವಾಸದಲ್ಲಿ ವರ್ಷಾನ್ಯಾಯದಲ್ಲಿ ನಿಧನ ಹೊಂದಿದುದು ವಿಷಾದಕರವಿದೆ. ದಿವಂಗತರು ಜನಪ್ರಿಯರೂ ಸಾಮಾನಿಕ ಚಟುವಟಿಕೆಗಳಲ್ಲಿ ಆಸಕ್ತಿ ಉಳ್ಳವರೂ ಆಗಿದ್ದರು.

ಅಧ್ಯಾಪಕರ ದಿನಾಚರಣೆ

ಅಳಿಕೆ, ಸೆಪ್ಟೆಂಬರ 5ರಂದು ಡಾ| ರಾಧಾಕೃಷ್ಣನವರ ಜನ್ಮ ದಿನಾಚರಣೆಯನ್ನು ಶೋಕಸೇವಾ ಹೈಯರ್ ಸೆಕೆಂಡರೀ ಶಾಲೆಯಲ್ಲಿ ಶ್ರೀ ಸಾರಿ ವೆಂಕಪ್ಪಯ್ಯ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಾಧ್ಯಾಯರ ಹಿರಿಮೆಯ ಕುರಿತಾಗಿ ಮಾತನಾಡಿದರು. ಇದಾದ ನಂತರ ಹೈಯರ್ ಎಲಿಮೆಂಟರಿ ಶಾಲೆಯ ಹಾಗೂ ಹೈಯರ್ ಸೆಕೆಂಡರಿ ಶಾಲೆಯ ಅಧ್ಯಾಪಕರು ಅಧ್ಯಾಪಕರ ಸ್ಥಿತಿ ಸೇರಿದೆ ಯೆಂಬುದನ್ನು ಸಾಂಕೇತಿಕವಾಗಿ ವಿವರಿಸಿದರು. ಅಧ್ಯಕ್ಷರು ಮಾತನಾಡುತ್ತಾ ಹೆತ್ತವರು, ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ಶ್ರೀಮೇಣ ಸಾಮ್ಯ ಸಂಗಮವಾಗಬೇಕು, ಉಪಾಧ್ಯಾಯರಲ್ಲಿ ತಮ್ಮ ವೃತ್ತಿಯ ಕುರಿತು ಗೌರವ ತಮ್ಮ ವಿದ್ಯಾರ್ಥಿಗಳ ಕುರಿತು ಸ್ನೇಹ ಮತ್ತು ತನ್ನ ವಿಷಯದ ಕುರಿತು ಪಾಂಡಿತ್ಯ ಅಗತ್ಯ ಎಂದರು.

ಬೇಕಾಗಿದ್ದಾರೆ

ಪ್ರಿಂಟಿಂಗ್ ಪ್ರೆಸ್ಸಿನ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡಲು ಸಾಕಷ್ಟು ಅನುಭವಸ್ಥ ಕೆಲಸಗಾರರು ಬೇಕಾಗಿದ್ದಾರೆ, ಸಂಬಳ ಯೋಗ್ಯತಾನುಸಾರ. ಕನಿಷ್ಠ 8ನೇ ತರಗತಿವರೆಗಾದರೂ ಓದಿದ ಕೆಲವು ಹುಡುಗರನ್ನು ತರಬೇತಿಗಾಗಿಯೂ ಸೇರಿಸಿಕೊಳ್ಳಲಾಗುವುದು

ವಿಚಾರಿಸಿರಿ: —

ನವಯುಗ ಪ್ರೆಸ್, ಉಡುಪಿ,

ದ. ಕ.

(ಮೂರನೇ ಪುಟದಿಂದ)

ಕಳೆದ ಅರ್ಧ ಶತಮಾನಕ್ಕೂ ಮಿಕ್ಕೆ ಹಿಂದೀ ಪ್ರಚಾರವನ್ನು ಮಾಡಿಕೊಂಡು ಬಂದಿರುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಗೆ ಡಿಸೆಂಬರ 20ನೇ ದಿನದೊಳಗೆ ಮುಚ್ಚಬೇಕೆಂದು ಅಲ್ಟಿಮೇಟಂ—ಹಿಂದೀ ವಿರೋಧಿ ಚಳವಳಗಾರರದ್ದು. ಸಿನೆಮಾ ಮಂದಿರಗಳಲ್ಲಿ ಹಿಂದೀ ಚಲಚಿತ್ರಗಳನ್ನ ಪ್ರದರ್ಶಿಸುವುದು ಒಳ್ಳೆಯದಲ್ಲ ಎಂದು ಮುಖ್ಯ ಮಂತ್ರಿ ಅಣ್ಣಾ ದೊರೈಯವರ ಸಲಹೆ—ಕಾರಣ ರಾಜ್ಯದಲ್ಲಿ ಹಿಂದೀ ವಿರೋಧಿ ಚಳವಳ ನಡೆಯುತ್ತಿದೆ. ಹೀಗೆ ರಾಜ್ಯಗಳ ರಾಜಕೀಯ —ಬಂಗಾಳದಲ್ಲಿ ರೇಲುಗಳಿಗೆ ಪೋಲೀಸು ರಕ್ಷಣೆ ನೀಡಲು ಸರಕಾರದ ನಕಾರ. ಬೊಂಬಾಯಿಯಲ್ಲಿ ಶಿವಸೇನೆಯ ಚಟುವಟಿಕೆಗಳನ್ನು ಹಡೆಯಲು ರಾಜ್ಯ ಸರಕಾರ ಅಶಕ್ತ; ಮದ್ರಾಸದಲ್ಲಿ ಹಿಂದೀ ವಿರೋಧೀ ಚಳವಳಕ್ಕೆ ಸರಕಾರದ ಪ್ರೋತ್ಸಾಹ; ಕೇರಳದಲ್ಲಿ ಕೇಂದ್ರದ ವಿರುದ್ಧ 'ಬಂದ್'ಗೆ ಸರಕಾರದ ಕರೆ—ಇಷ್ಟೆಲ್ಲಾ ವಿಭಿನ್ನತೆಯಿದ್ದರೂ ನಾವೆಲ್ಲಾ ಒಂದೇ ದೇಶದವರು. ದೇಶದ ಉಳಿವಿಗಾಗಿಯೇ ನಮ್ಮನ್ನಮ್ಮ ದಾರಿಯಲ್ಲಿ ನಾವು ನಾವು ಮೊದಲೂ ನಡೆದಿದ್ದೇವೆ, ಮುಂದೆಯೂ ನಡೆಯುತ್ತೇವೆ. ಆದರೆ, ಹತ್ತು ಸಮಗ್ರಾರರ ಕೈ ಸೇರಿದ ಚರ್ಮದ ಕಥೆ ನಾವೆನ್ನೂ ಜ್ಞಾಪಿಸಿಕೊಂಡಿಲ್ಲವೇನು?

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 146/67.

ವಾದಿ: ಎಸ್. ಪರಮೇಶ್ವರಯ್ಯ, ಆಶ್ವತ್ಥಯ್ಯನ ಮಗ, ಕುಂದಾಪುರ ತಾಲೂಕು ನಿವಾಸಿ.

ಪ್ರತಿವಾದಿರು: 1. ಹೊನ್ನಾಶಿವರಾಮಯ್ಯ, 2. ಕೊಡಸಾನ ಕೃಷ್ಣಪ್ಪಯ್ಯ, 3. ಕೊಡಸಾನ ವಾಸುದೇವಯ್ಯ, ಶಂಕರಯ್ಯನ ಮಗಂದಿರು. ಸದ್ರಿ ತಾಲೂಕು ಹಕೂರು ಗ್ರಾಮ.

ಪ್ರತಿವಾದಿರಿಗೆ ತಿಳಿಯಪಡಿಸಿದ್ದು.

ನಿಮ್ಮಿಂದ ವಾದಿಗೆ ಕಳೆದ ಕೋಳಿಕೃತ್ಯ, ಕ್ರೋಧಿ ಮತ್ತು ಶಿಷ್ಟಾಚಾರ ಸಂಗಂಗಳಿಗೆ ಬರತಕ್ಕ ಮೂಲ ಗೇಣಿ ಬಾಕಿಗೆ ವಾದಿಯು ಮೇಲ್ಕಂಡ ದಾವಾ ನಡಿಸಿದ್ದು, ತನಿಖೆ ಬಗ್ಗೆ ತಾ. 24—9—67ಕ್ಕೆ ಇಟ್ಟಿರುತ್ತಾರೆ. ಸದ್ರಿದಾವೆಯಲ್ಲಿ ನಿಮಗೆ ಅಕ್ಕೇಪಣೆಗಳಿದ್ದರೆ ಸದ್ರಿ ದಿವ್ಸ ಹಗಲು 11 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಎಕ್ಸ್‌ಪಾರ್ಟೆ ನಾವೆ ನೀರ್ಣಯಿಸಲಾಗುತ್ತದೆ.

[ಕೋರ್ಟು ಹುಕುಂ ಪ್ರಕಾರ]

A. S. N. Hebbar

ವಾದಿ ಪರ ವಕೀಲ.

ಕುಂದಾಪುರ, 2—9—67.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು.

ರಿಜಿಸ್ಟರ್ಡ್ ಆಫೀಸು:—ಲೈಟ್ ಹೌಸ್ ಹಿಲ್ ರೋಡು, ಮಂಗಳೂರು—3

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು, ನಮ್ಮ ಶಾಖೆಯಿಂದ ಚಿನ್ನಾಭರಣ ನಿಗಗಳ ಈಡಿನ ಮೇಲೆ ಪಡೆದ ಸಾಲವನ್ನು ವ್ಯಾದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ, ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿ ಕೊಂಡಿದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ, ಸದ್ರಿಯವರಿಗೆ—ನ—ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ಬರುವ ತಿಂಗಳ ತಾರೀಖು 30—9—67ರ ಒಳಗಾಗಿ ಬೇಂಕಿಗೆ ಒದಗಿಬಾವತಿ ಮಾಡಲು ತಪ್ಪಿದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಖು 5—10—67 ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ವರಾಂಡದಲ್ಲಿ ಬಹಿರಂಗ ಹರಾಜು ಮಾಡಲಾಯಿತು—ಯೂ—ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗಯೂ—ಖಾಸಗಿಯಾಗಿ ಹರಾಜು ಮಾಡಲಾಯಿತು; ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು—ವ—ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ.

ಸಾಲದ ಜಂಜ್ಯಾ ನಂಬರು	ಸಾಲಗಾರನ ಹೆಸರು ಮತ್ತು ವಿಳಾಸ	ಮೊಬಲಗು ಬಡ್ಡಿ ಸಮೇತ 30-6-67ರ ವರೆಗೆ
177/66	ರಾಮ ದೇವಾಡಿಗ, ಸುಬ್ಬಿಹೆಂಗಸಿನ ಮಗ ಹುಣಸವನೆ ಎಡ್ತರೆ ಗ್ರಾಮ, P. O. ಬೈಂದೂರು.	97.70
581/65	ಎಸ್. ದುರ್ಗಯ್ಯ ಸೆಟ್ಟಿ, ಚಿಕ್ಕಮ ಸೆಡ್ತಿಯ ಮಗ, ದುರ್ಗ ಸೆಟ್ಟಿ ಮನೆ, ಪೋಸ್ಟ್ ಶೀರೂರು.	108.05
88/66	ಜೋಸೆಫ್ ಫೆರ್ನಾಂಡಿಸ್, ಜೋನ್ ಫೆರ್ನಾಂಡಿಸರ ಮಗ, ಎಡ್ತರೆ ಗ್ರಾಮ, P. O. ಬೈಂದೂರು.	75.70
90/66	ಜೊಸೆಫ್ ಫೆರ್ನಾಂಡಿಸ್, ಜೋನ್ ಫೆರ್ನಾಂಡಿಸರ ಮಗ ಎಡ್ತರೆ ಗ್ರಾಮ, P. O. ಬೈಂದೂರು.	39.25
99/66	ವೆಂಕಟಮ್ಮ, ಲಕ್ಷ್ಮಿಯ ಸುಗಳು, P. O. ಶೀರೂರು.	39.50
106/66	ಅನಂತಾಜ್ಜು ಟಿಕ್ಕನ್ನನ ಮಗಳು, ಸಾಂತಿ ಹಿಕ್ಕಲು, ಶಿರೂರು ಗ್ರಾಮ P. O. ಶಿರೂರು.	58.60
189/66	ರಾಮಣ್ಣ ಸೆಟ್ಟಿ, ನಾಗಮ್ಮ ಸೆಟ್ಟಿ ಮಗ, ನೊನೂರು ದೊಡ್ಡ ಮನೆ, ಕಾಲ್ತೋಡು ಗ್ರಾಮ, ಪೋಸ್ಟು ಗೋಳಿಯಂಗಡಿ.	139.65
253/66	ವಾಸುದೇವ ಪ್ರಭು, ರಾಮಚಂದ್ರ ಪ್ರಭುಗಳ ಮಗನೆ, ಉಪ್ಪುಂದ ಗ್ರಾಮ, ಪೋಸ್ಟು ಉಪ್ಪುಂದ.	167.15
262/66	ಕಾಜೆ ಸಮುಸುದೀನ್ ಸಾಹೆಬ್, ಕಾದಿರೆ ಸಾಹೆಬರ ಮಗ, ಮುಸ್ಲಿಮ್ ಲೇ, ಪೋಸ್ಟು ಶೀರೂರು	287.10
295/66	ರಾಮು ಮೇಸ್ತ್ರಿ, ಲಿಂಗಪ್ಪ ಮೇಸ್ತ್ರಿಯ ಮಗ, ಶಿರೂರು ಗ್ರಾಮ ಹಡುವಿನ ಕೋಣೆ, P. O. ಶೀರೂರು (ದ. ಕ)	19.80
289/66	ನಾರಾಯಣ, ಮುಂಜನ ಮಗ, ಉಪ್ಪುಂದ ಗ್ರಾಮ (P. O. Tarapathi) ತಾರಾಪತಿ.	19.45
575/65	ಗೋವಿಂದ ಪೂಜಾರಿ, ತಿಮ್ಮಪ್ಪ ಪೂಜಾರಿ ಅಳಿಯ, ಯಡ್ತರೆ ಗ್ರಾಮ, ಸಂಚಿವಾಡಿ ಮನೆ, ಪೋಸ್ಟ್ ಬೈಂದೂರು.	8.60

ಆಫೀಸು: ಬೈಂದೂರು,
ತಾ. 8—9—67

ಎ. ಪಿ. ಕೆಲ್ಲ ಶೆಟ್ಟಿ,
ಮೆನೇಜರ್

ಕೊನೆಗೂ ಆತ ಸಾಯಲಿಲ್ಲ

(ಎರಡನೇ ಪುಟದಿಂದ)

ವನ್ನು ತನ್ನ ಹಣೆಗೆ ಚುಂಬಿಸಿದ ಕರ್ನಲ್ ಮಿಡ್ ಮೊಕ್ಕ ಬೆಳ್ಳಂತೆ ನಿರಾಶೆಗೊಂಡು ಅಲ್ಲಿಂದ ಮೆಲ್ಲನೆ ಕಾಲುಕಿತ್ತನು.

ಹದಿನೆಂಟನೇ ಶತಕದ ಕೊನೆಯಾಗಿತ್ತು ಆ ಕಾಲ. ಸ್ವಾತಂತ್ರ್ಯ ಸಮರದ ಅಗ್ನಿಕಂಡದಲ್ಲಿ ಒಂದೊಂದೇ ವೀರರತ್ನಗಳು ಆಹುತಿಗೊಳ್ಳುತಿದ್ದವು. ಫವಾಟ ಬಹಾದ್ದೂರ್ ಶಾಹ, ವೀರಾಂಗನೆ ಲಕ್ಷ್ಮೀಬಾಯಿ ಇವರೆಲ್ಲ ಬ್ರಿಟಿಷರಿಗೆದುರಾಗಿ ತಮ್ಮ ಪ್ರಾಣವನ್ನೆ ಮುಡುಪಾಗಿಟ್ಟು ದುಡಿಯುತಿದ್ದರು ತಾಂತ್ಯಾ ಟೋಪಿಯಂತಹ ಶೂರ ದೇಶಭಕ್ತರು ಸ್ವಾತಂತ್ರ್ಯ ಸಮರದ ಪ್ರಳಯಾಗ್ನಿಗೆ ಇನ್ನೂ ತುಪ್ಪ ಎರೆಯುತಿದ್ದರು. ಆ ಅಗ್ನಿಯು ಬ್ರಿಟಿಷರ ಕುಟಿಲ ಆಳ್ವಿಕೆಯನ್ನು ಸುಟ್ಟು ಭಸ್ಮಮಾಡುವ ದಿನ ನೋಡಲು ಎಲ್ಲರಂತೆ ಗ್ವಾಲಿಯರ್‌ನ ದೇಶಪ್ರೇಮಿಗಳಿಗೂ ಆಶೆ. ಮಂತ್ರಿ ದಿನಕರ್ ರಾವ್ ರಾಜವಾಡೆಯ ದೇಶದ್ರೋಹಿ ನಡತೆಯಿಂದ ಜನತೆ ರೋಸಿ ಹೋಗಿತ್ತು. ಸರವರೆದ ಜಾಗೀರನ್ನು ದಿನಕರ್ ರಾವ್, ಸೆಳೆದು ಕೊಳ್ಳುವುದರ ಬಗ್ಗೆ ರಾಜನಿಗೆ ಹೆದರಿಸಿದ್ದ. ತಾಂತ್ಯಾಟೋಪಿಯು ಪರಿಸ್ಥಿತಿಯ ಸೂಕ್ಷ್ಮ ಅಧ್ಯಾಸ ಪಡೆಸಿ ಪ್ರಯತ್ನಿಸಿ ದಿನಕರ್‌ರಾವ್‌ನೊಡನೆ ಸೆಣಸುವುದು ಸರಿಯಲ್ಲವೆಂದೂ ಮನಗಂಡ.

ಇತ್ತ ಇಂಗ್ಲೀಷರು ಗ್ವಾಲಿಯರ್ ಹಾಗೂ ಸುತ್ತ ಮತ್ತ ಒಳಗೆ ಪ್ರಾಬಲ್ಯ ಪಡೆದಿದ್ದರು. ದಿನಕರ ರಾವ್‌ನನ್ನು ಬಿಟ್ಟರೆ ಇತರ ಎಲ್ಲಾ ಜನತೆ ಬ್ರಿಟಿಷರ ಎದ.ರಾಗಿ ಹೋರಾಡಲೇ ಸಿದ್ಧವಾಗಿತ್ತು. ಕರ್ನಲ್ ಮಿಡನೊಂದಿಗೆ ಸೇರಿ ದಿನಕರ್ ರಾವ್ ಪಿತೂರಿ ನಡೆಸಿ, ರಾಜಾವಾಜನಸಿಂಹನನ್ನು ತಾಂತ್ಯಾಟೋಪಿಗೆ ಶರಣು ನೀಡಿದ ಅಪರಾಧ (?)ಕ್ಕೆ ಒಳಗೆ ಮಾಡಿದ್ದ.

ರಾತ್ರಿ ಮೂರನೆ ಗಳಿಗೆಯಲ್ಲಿ ಬಾಗಿಲನ್ನು ಗುದ್ದುವ ಸದ್ದುಕೇಳಿ ನಾರಾಯಣ ರಾವ್ ಎಚ್ಚೆತ್ತ ಆತನಿನ್ನೂ ನಿದ್ದೆ ಹೋಗಿರಲಿಲ್ಲ, ಹಾಗೆ ಕಣ್ಣು ತೆರೆದು ಹಾಸಿಗೆಯಲ್ಲಿ ಹೊರಳಾಡುತ್ತಿದ್ದ ಕಾಂತ್ಯಾನನ್ನು ಬ್ರಿಟಿಷರ ಕೈಗೆ ಬೀಳದಂತೆ ಮಾಡುವ ದೊಂದೇ ಆತನು ಯೋಚಿಸುತ್ತಾ ಇದ್ದ

ಇಂಗ್ಲಿಷರ ಸ್ವಭಾವತ್ರ ಆತನಿಗೆ ಚೆನ್ನಾಗಿ ತಿಳಿದಿತ್ತು. ಅವರು ಗಂಡು ಶೌರ್ಯ ಮೆರೆಯುವ ಬದಲು ನಾಗಳಂತೆ ಕಪಟೋಪಾಯಿಯೇ ಸಪ್ಪ ಬೇಳೆಬೇಯಿಸುತ್ತಿದ್ದರೆಂದು ಆತನು ತಿಳಿದಿದ್ದ ಗ್ವಾಲಿಯರ್ ಕೂಡ ಈ ಕಪಟನಾಟಕಕ್ಕೆ ಆಹುತಿಯಾದೀತೆಂದು ಆತ ತಿಳಿದಿದ್ದಂತೆ ಜನತೆಗೂ ಕರ್ನಲ್ ಮಿಡನಿಗೂ ನಡೆದ ಸಲ್ಲಾಪವನ್ನಾತ ತಿಳಿದುಕೊಂಡಿದ್ದ. ಈಗ ಆತ ತನ್ನ ಕರ್ತವ್ಯವನ್ನು ನಿಶ್ಚಯಿಸಿಕೊಂಡಿದ್ದ. ಹತ್ತು ನಾರಾಯಣ ರಾವ್ ಹೋದರೂ ಏನೂ ಆಗದು, ಆದರೆ ಒಬ್ಬ ತಾಂತ್ಯಾನನ್ನು ಬ್ರಿಟಿಷರಿಗಾಹುತಿ ನೀಡಿದರೆ ಸಮಸ್ತ ದೇಶಕ್ಕೆ ದಿಕ್ಕೆಯಾದೀತೆಂದಾತ ಊಹಿಸಿದ.

ಬಂದಾತ ಇನ್ನ್ಯಾರೂ ಆಗಿರಲಿಲ್ಲ, ರಾಜನ ಕಡೆಯಿಂದ ಬಂದ ಸೇವಕ. 'ಮಾನಾಜಾದರು ಈಗಿಂದೀಗಲೇ ತಮ್ಮನ್ನು ಬರ ಹೇಳಿದ್ದಾರೆ.'

ಶ್ರೀಪ್ರದಲ್ಲಿ ನಾರಾಯಣರಾವ್ ರಾಜನ ಶಯನ ಗೃಹವನ್ನು ಸೇರಿದ. ಗೂಡಿನಲ್ಲಿ ಸಿಲುಕಿದ ಸಿಂಹದಂತೆ ಅವರು ಕೆರಳಿದಂತಿದ್ದರು. ನಾರಾಯಣ ರಾವ್‌ನನ್ನು ಕಂಡವರೇ ಅವರು ಶೋಕಚಿತ್ತರಾದರು.

'ನಾರಾಯಣ ರಾವ್! ಶಮ್ಮ ನೂತೇ ಮತ್ತೆ ಗೆದ್ದಿತು! ಇಂಗ್ಲಿಷರು ಈಗ ತಮ್ಮ ಕಪಟ ನೀತಿಗೆ ಶರಣು ಹೋಗಿದ್ದಾರೆ. ಕರ್ನಲ್ ಮಿಡ್ ಈಗ ರಾಣಿಯ ನಿವಾಸವನ್ನು ಪೂರ್ಣ ಮುತ್ತಿದ್ದಾರೆ.'

'ಆಯ್ಯೋ! ಇದು ವಹಾ ಅನ್ಯಾಯ. ತಮ್ಮ ಸಿಟ್ಟನ್ನು ಕೊಂಚ ತಡೆಯಿರಿ. ತಾಂತ್ಯಾನ ಜೀವನ್ಮರಣದ ಪ್ರಶ್ನೆಯಿದು, ರಾಣಿಯವರ ಮಾನದ ಪ್ರಶ್ನೆಯಿದು.'

'ನಿಜವಾಗಿಯೂ,ರಾವ್!"ರಾಜನೆಂದ.

"ಇನ್ನು ಮಾನ-ಮೀಷ ಎಣಿಸದಿರಿ. ಕರ್ನಲ್ ಮಿಡ್ ನನ್ನನ್ನು ತಿಳಿದಿಲ್ಲ. ತಾಂತ್ಯಾನನ್ನು ಕಂಡು ತಿಳಿದವನಲ್ಲ. ತಾಂತ್ಯಾನ ಬದಲಿಗೆ ನಾನೇ 'ತಾಂತ್ಯಾ' ಆಗುತ್ತೇನೆ. ತಾಂತ್ಯಾನ ಉಳಿವೂ ಆಯಿತು, ರಾಜ್ಞಿಯವರ ರಕ್ಷಣೆಯೂ ಆಯಿತು, ಸ್ವಾತಂತ್ರ್ಯ ಸಮರದ ಪ್ರಗತಿಯೂ ನಡೆಯಿತು. ದಿನಕರನ ದೃಷ್ಟಿಯಲ್ಲಿ ತಮ್ಮ ಮೌಲ್ಯವೂ ಹೆಚ್ಚೀತು. ನನಗೆ ಅನುಮತಿ ನೀಡಿ!'

ನಾರಾಯಣ ರಾವ್ ಭಾಗವತನ ದೃಢ ಪಿರ್ಧಾರದೆದುರೆ ರಾಜನ ಸಾಂತ್ವನದ ವೇನೂ ಹಿಡಿಯಲಿಲ್ಲ. ರಾಜನೆಂದ ಕೊನೆಗೆ "ತಮ್ಮ ಮೃತ್ಯುವಿನ ಪಾಪವನ್ನು ಹೇಗೆ ಈ ಬಡಪಾಯಿ ಅನುಭವಿಸಲಿ?"

"ಕರ್ತವ್ಯದಿಂದಲೂ ಹಿಂಯ ಧರ್ಮವೇತರದು ಮೂಡವನಿಗೆ? ತಾಂತ್ಯಾನನ್ನು ರಕ್ಷಿಸುವುದು ದೇಶದ್ರೋಹವೇನು? ಅದನ್ನು ಪಾಪವೆಂದೇಕೆ ಜಗೆಯುವಿರಿ?"

ಇಬ್ಬರೂ ಮೌನವಾದರು ಆದರೆ ಈ ಮೌನದಲ್ಲೂ ರಾಜನ ನೈಜ ಅಭಿಪ್ರಾಯವು ಪ್ರಕಟವಾಯಿತು.

ಮಹರಾಜ ಮಾನಸಿಂಹನ ವಿಶೇಷದೂತ ಅದೇ ತಾನೆ ಕರ್ನಲ್ ಮಿಡನಿನ ನಿವಾಸಕ್ಕೆ ತೆರಳಿದ.

o o

15ನೆ ಎಪ್ರಿಲ್, 1858 ನರಕೇಸರಿ ತಾಂತ್ಯ ಸೆರೆಯಲ್ಲಿ ಬಿದ್ದ ಕೊಂಚಹೊತ್ತಿನಲ್ಲೇ ಆತನ ವಿಚಾರಣೆ ನಡೆದು ಗಲ್ಲು ಶಿಕ್ಷೆಯು ಸಿದ್ಧವೆಯಾಗಿತ್ತು. ನ್ಯಾಯದೇವತೆಯು "ನ್ಯಾಯ"ನೇನೆಂದ ಆತನಾಗಲೀ ತಿಳಿದಿದ್ದ.

ಮಾನಸಿಂಹನಿಗೆ ಇಂಗ್ಲೀಷರಿಂದ ವಿಶೇಷ ಗೌರವವೂ ದೊರೆಯಿತು. ಅವನಿಂದಾನಿಯೇ "ತಾಂತ್ಯ"ನನ್ನ ಬ್ರಿಟಿಷರು ಸೆರೆಹಿಡಿದಿದ್ದರು!

ಅಂತೂ ಕೊನೆಗೆ ವಿಚಾರಣೆಯೆಲ್ಲಾ ಮುಗಿಯಿತು. ಇಷ್ಟೆಲ್ಲಾ ನಡೆದರೂ ಕರ್ನಲ್ ಮಿಡನಿಗೆ ಇನ್ನೂ ಸಂಶಯ ಪೂರ್ತಿ ನಿವಾರಣೆಗೊಂಡಿಲ್ಲ. ಜನರ ವಿನೋದಬಲವನ್ನು ಮರಿಯಲು ಅದೇ ಸಾಧ್ಯವಾಯಿತೆಂದಾತ ಊಹಿಸುತ್ತಿದ್ದ.

ನೋಡುತಿದ್ದಂತೆಯೇ ನಾರಾಯಣ ರಾವ ಭಾಗವತನನ್ನು 'ತಾಂತ್ಯಾ'ನೆಂದ ರಿತು ಗಲ್ಲಿಗೆ ಹೂಡಲಾಯಿತು. ಆತನ ಮುಖದಲ್ಲಿ ತೃಪ್ತಿಯಿತ್ತು.ಶ ಂತಿಯಿತ್ತು. ತನಗಾಗಿ ತಾನು ಮಡಿದೆನಲ್ಲಾ ಎಂಬ ಸಂತಸವಿತ್ತು.

ಆತ್ತ ಮೂಡನ ಮುಖದಲ್ಲೂ ಸಂತಸವೇ ಕಾಣ ಬರುತಿತ್ತು. ಕೊನೆಗಾವರೂ ಈ ಕಂಟಕವನ್ನು ಕಿತ್ತೊಗೆದೆನಲ್ಲಾ ಎಂದಾತ ಗರ್ವಪಟ್ಟ.

ಮಹಾರಾಜ ಮಾನಸಿಂಹನು ಸಂತೋಷದ ಮಧ್ಯೆಯೂ ವಿಷಾದಪಟ್ಟ. ಒಂದು ರಕ್ಷಣೆಗಾಗಿ ಇನ್ನೊಂದು ರಕ್ಷಣವನ್ನು ಕಳೆದೆನಲ್ಲಾ ಎಂಬಂತಾಗಿತ್ತು- ಅವರ ಮನಸ್ಥಿತಿ.

ಮತ್ತೆ ತಾಂತ್ಯಾನಾದರೋ ಸ್ವಾತಂತ್ರ್ಯ ಸಮರದಲ್ಲಿ ಮುಳುಗಿ ತನ್ನನ್ನೆ ಮರೆತು ತಾಯಿಯ ಬಂಧನ ಬಿಡಿಸಲು ಹೆಣಗುತ್ತಲಿದ್ದ.

ಎಲ್ಲು ನೀನು ಇರುತಿಹೆ

ಅರಳಿದೆಲರ ಕಂಪಿನಲ್ಲಿ
ಬಿರಿದ ಕವ ಲಕಾಂತಿಯಲ್ಲಿ
ದ ಂಬಿ ಹಿಂಡ ಸೊಬಗಿನಲ್ಲಿ
ಹೊಳೆವ ಮಂಜುಮಣಿಗಳಲ್ಲಿ
ಲತೆಯು ಕೆಂಪು ಚಿಗುರಿನಲ್ಲಿ
ದೇವನಿನ್ನ ತೇಜವಾ
ಕಂಡೆ ನೀಡು ಓಜವಾ ॥ ೧ ॥

ಮುದ್ದು ಮಗುವಿನಾಟದಲ್ಲಿ
ಜೊಲ್ಲು ನಗೆಯ ಚೆಲುವಿನಲ್ಲಿ
ಉಲಿವ ತೊದಲು ಮಾತಿನಲ್ಲಿ
ಹರ್ಷಪೂರ್ಣ ನೋಟದಲ್ಲಿ
ಜಗವ ವರೆವ ನಿದ್ದೆಯಲ್ಲಿ
ನಿನ್ನ ರೂಪಾ ಕಾಂಬುದಲ್ಲಿ
ಹಾಡಿ ಹಾಡಿದರ್‌ನೆನೆ
ನೋಡಿ ನೋಡಿ ತಣಿವೆನೆ ॥ ೨ ॥

ಉದಯ ರವಿಯ ಕಿರಣದಲ್ಲಿ
ದಿನದ ಪ್ರಖರ ಬಿಸಿಲಿನಲ್ಲಿ
ಪೂರ್ಣ ಚಂದ್ರ ಬಿಂಬದಲ್ಲಿ
ಸಗ್ಗ ಸುಖದ ಬೆಳಕಿನಲ್ಲಿ
ನಿಶೆಯ ಧರೆಯ ಮೌನದಲ್ಲಿ
ಉಷೆಯ ಭಾವ್ಯ ನೋಟದಲ್ಲಿ
ಕಂಡೆ ನಿನ್ನ ದೇವನೆ
ಜಗವ ನಿತ್ಯ ಕಾವನೆ ॥ ೩ ॥

ಶಂಕರ ಪಿಶಿದ ರಾಜ್ಯದಲ್ಲಿ
ಹಿಗ್ಗಿ ಕುಣಿವ ಪವಿಲಿನಲ್ಲಿ
ಹೊಳೆವ ಚೆಲುವ ಗಂಗೆಯಲ್ಲಿ
ಮುತ್ತಿ ಬರುವ ಮೋಡದಲ್ಲಿ
ಥಳಪ ಕೋಲ್ ಮಿಂಚಿನಲ್ಲಿ
ಜನುಗುತಿರುವ ಸೋನೆಯಲ್ಲಿ
ಎಲ್ಲು ನೀನು ಕಾಣುವೆ
ಸಗ್ಗ ಸುಖವ ನೀಡುವೆ ॥ ೪ ॥

ಗಿರಿಯು ತೊರೆಯು ಹರಿವಿನಲ್ಲಿ
ಫೀಲ ಬಾನಿನಂಚಿನಲ್ಲಿ
ಮಿನುಗುತಿರುವ ತಾರೆಯಲ್ಲಿ
ಹೊಲಪ ಪೈರು ಪಚ್ಚೆಯಲ್ಲಿ
ಕಾಡು ಹಿಗ್ಗಿ ಮನಸಿನಲ್ಲಿ
ದೇವ ಮೌನ ತಾಳ್ದೆಯಲ್ಲಿ
ನಿನ್ನ ರೂಪಾ ಚೈತ್ಯಯ
ನಾಡುತಿನ್ನ ಹಸ್ಯಯ ॥ ೫ ॥

—ಶ್ರೀ ಕಾ. ಶ. ನಾ. ಭ.



ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50

ರಿಯಿಂ ಸ್ರತಿಗಳಿಗೆ ವಿಶೇಷ ಸವಲತ್ತುಗಳಿವೆ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

READ & ADVERTISE IN
NAVAYUGA WEEKLY

NAVAYUGA 14—9—1967
Registered with the Registrar of News Papers for India under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಒಂದು ವಿವೇಚನೆ

ಯವ್ವನದ ಮಧುಮಾಸ - ವ

ಮಧುಪರ್ಕ ಸ್ವೀಕಾರ

ತುಂಬಿದ ಹುಡುಗ ತುಂಬಿದ ಹುಡುಗಿ ಮದುವೆಯೂಗುತ್ತಲೇ, ಇಬ್ಬರೇ ಏಕಾಂತ ಜೀವನವೂಡಲು ಹಾತೊರೆಯುತ್ತಾರೆ, ಅವರ ಪರಸ್ಪರ ಪ್ರೇಮ—ಕಾಮಗಳ ಮಧುರ ಬಂಧನವು ದೃಢಗೊಳ್ಳಲು ಅಂತಹ ಏಕಾಂತ ಅತ್ಯವಶ್ಯ. ಹೀರ ಬಡ ಜನರೂ ಕೂಡ ಹೊಸದಾಗಿ ಮದುವೆಯಾದ ತಮ್ಮ ಮಗ—ಸೊಸೆಯರು ಅರೀತಿ ಇಬ್ಬರೇ ಕೂಡಿ ಆಡಿ, ಸಂತೋಷ ಪಡುವುದನ್ನು ನೋಡಬಯಸುತ್ತಾರೆ.

ಪೇಟೆ—ಪಟ್ಟಣಗಳಲ್ಲಿ ನೂತನ ವಧೂವರರ ಏಕಾಂತ ವಿಲಾಸಗಳಿಗೆ ಸಂಯಾದ ಅಶ್ರಯ ಪಡೆಯುವುದು ಸುಲಭವಲ್ಲ; ಅದಕ್ಕೆ ಬಹಳಷ್ಟು ಹಣಬೇಕು. ಆದರೆ ಹಳ್ಳಿಗಳಲ್ಲಿ ಯಾವ ವೆಚ್ಚವೂ ಇಲ್ಲದೆ ಸತಿ ಪತಿಯರು ಏಕಾಂತವಾಗಿ ಕೂತು ಪರಸ್ಪರ ಪ್ರೇಮ ಪೂಜೆ ಮಾಡಲು ತುಂಬಾ ಅವಕಾಶವೂ ಆಶ್ರಯ ಸ್ಥಾನಗಳೂ ಸದಾ ಸಿಗುತ್ತವೆ. ಮನೆಯ ಹಿಂದು—ಮುಂದಿನ ಗುಡ್ಡ ಬೆಟ್ಟಗಳೂ ತೋಟ ಗದ್ದೆಗಳೂ, ತಳಿನೀರಿನ ಹೊಳೆಹಳ್ಳಗಳ ವಿಶಾಲವಿಸ್ತೀರ್ಣ ಅವರಿಗೆ ಅನಾಹೂತವಾಗಿ ದೊರೆಯುತ್ತವೆ. ಸುಂದರವಾದ ಪ್ರಕೃತಿಯು ಈ ನವದಂಪತಿಗಳ ಪ್ರೇಮಲೀಲೆಗೆ ಉಯ್ಯಾಲೆಯೂಗುತ್ತದೆ. ಅವರು ಪರಸ್ಪರ ಮುಟ್ಟಿ ತಟ್ಟಿ, ಉಬ್ಬಿ, ತಬ್ಬಿ, ನಕ್ಕು, ನುಡಿದು, ಓಡಿ, ಆಡಿ, ಮನದಣಿಯೆ ಪ್ರೇಮರಸಪಾನ ಮಾಡಬಹುದು; ಬೇಕಾದಷ್ಟು ಪ್ರಣಯ ಕಲಹ ಹೂಡಬಹುದು; ಹಾಡಿ ಕುಣಿಯಬಹುದು. ಎಲ್ಲಿ ನೋಡಿದರೂ ಅವರಿಗೆ ಹಸುರು ತುಂಬಿದ ಮರಗಳೂ, ಹೂ ಮುಡಿದ ಗಿಡಬಳ್ಳಿಗಳೂ, ಬಗೆಬಗೆಯ ವೈಗ ಪಕ್ಷಿಗಳೂ ಕಾಣಿಸುವವು. ಮೇಲೆ ನೋಡಿದರೆ ಕಣ್ಣಿಗೆ ತಂಪಾಗುವ ಅವಾರ ನೀಲಾಕಾಶ, ಪಶ್ಚಿಮಕ್ಕೆ ವಿಶಾಲವಾದ ಕೆನ್ನೀಲಿಯ ಕಡಲು, ಪೂರ್ವಕ್ಕೆ ಹೆಗ್ಗಾಡನ್ನು ಹೊದ್ದು ಗೋಡೆಯಂತೆ ಚಾಚಿ ಕೊಂಡಿರುವ ಸಹ್ಯಾದ್ರಿಯ ಸಾಲು ಕಾಣುವುವು.

ಪೇಟೆ ಪಟ್ಟಣಗಳಲ್ಲಾದರೊ ಇಂತಹ ನಿಸರ್ಗದ ಸೌಂದರ್ಯವಾಗಲೀ, ಗಾಢ ಮೌನವಾಗಲೀ ಏಕಾಂತವಾಗಲೀ ದೊರೆಯಲಾರವು. ಅವರು ಹಣ ವೆಚ್ಚಮಾಡಿ ಕೊಂಡು, ಅದೂ ಸಹಾ ಕೇವಲ ತಮ್ಮ ರಜಾ ದಿನಗಳಲ್ಲಷ್ಟೇ, ರೈಲು ಹತ್ತಿಯೋ ಮೋಟಾರ್ ಏರಿಯೋ ಅಂತಹ ಏಕಾಂತ ಪ್ರದೇಶಕ್ಕೆ ಹೋಗ ಬೇಕಾಗುವುದು. ಆ ಅಲ್ಪಾವಧಿಗೂ ಪೂರ್ಣ ಏಕಾಂತ ದುರ್ಲಭ; ಯಾಕೆಂದರೆ, ಅವರಂತಹ ನೂರಾರು ನವದಂಪತಿಗಳ "ಹೋಡಿ"ಗಳು ಅಲ್ಲಿ ಬಂದು ನೆರೆದಿರುತ್ತವೆ! ಒಟ್ಟಾಗಿ ಸೇರೋಣ ನೋಡುವುದೂ, ದೋಣಿ ಹತ್ತಿ ನದೀಯಾನ ಮಾಡುವುದೂ ಅವರಲ್ಲಿ ತುಂಬಾ ಇದೆ. ಮಧುರವಾದ ನೋಟ, ಮಧುರವಾದ ಕೂಟ, ಮಧುರ ತಿಂಡಿತಿನಿಸುಗಳ ಊಟ—ಇವುಗಳ ಶ್ರೀವೇಣೀ ಸಂಗಮದಲ್ಲಿ ಅವರು ನಿತ್ಯವೂ ಸ್ನಾನ ಮಾಡುತ್ತಾರೆನ್ನ ಬಹುದು.

ಈ ಬಗೆಯ ನವದಂಪತಿಗಳ ಏಕಾಂತ ಲೀಲಾ ಜೀವನಕ್ಕೆ ಆಂಗ್ಲರಲ್ಲಿ "ಹನಿಮೂನ್" ಎನ್ನುತ್ತಾರೆ. ಹನಿ ಎಂದರೆ ಜೇನು ತುಪ್ಪ, ಮೂನ್ ಎಂದರೆ ಬೆಳ್ದಿಂಗಳು ತುಂಬಿದ ಚಂದ್ರ ಮಂಡಲ, ಈ ಎರಡೂ ವಸ್ತುಗಳು ಸವಿಯಾದವು, ಸುಂದರವಾದವು ಬೆಳ್ದಿಂಗಳು ಸುಂದರ ಸ್ವಪ್ನ ರಾಜ್ಯವಾದರೆ, ಜೇನು ಮಧುರವಾದ ಜೀವನ ರಾಜ್ಯವಾಗುತ್ತದೆ. ಸತಿ—ಪತಿಯರ ಈ ಮಧು—ಸುಂದರ ವಿಲಸನವೇ ಮನುಷ್ಯ ಸೃಷ್ಟಿಯ ಉಗಮ ಸ್ಥಾನ. ಆದ್ದರಿಂದ ಅದಕ್ಕೆ ಪ್ರಪಂಚದ ನಾಗರಿಕ—ಅನಾಗರಿಕ ಎಂಬ ಎಲ್ಲ ಸಮಾಜಗಳಲ್ಲಿಯೂ ಪ್ರಮುಖಸ್ಥಾನ ಕೊಡಲ್ಪಟ್ಟಿದೆ.

ಹಿಂದೂ ಶಾಸ್ತ್ರದಲ್ಲಿ ವಿವಾಹ ಸಮಾರಂಭದಲ್ಲಿ 'ಮಧುಪರ್ಕ' ಎಂಬ ಒಂದು ಮನೋಹರವಾದ ಕೈಂಕರ್ಯ ಬರುತ್ತದೆ. ವರನು ವಧುವಿನ ತಂದೆಯ ಮನೆಗೆ ಬರುತ್ತಲೇ ಆತನನ್ನು ಈ 'ಮಧುಪರ್ಕ' 'ಸಮರ್ಪಣೆ'ಯಿಂದ ಸ್ವಾಗತಿಸಲಾಗುತ್ತದೆ. ಇದರಲ್ಲಿ ಜೇನು, ಸಕ್ಕರೆ, ಮೊಸರು 'ಬೆಣ್ಣೆ' ಮಿಶ್ರವಾಗಿರುತ್ತದೆ. ನಮ್ಮ ದೇಶವು ಸಂಪತ್ತಿನಿಂದ ತುಂಬಿ ತುಳುಕುತ್ತಿದ್ದ ಹಿಂದಿನ ಕಾಲದಲ್ಲಿ ಮನೆಗೆ ಯಾರು ಬಂದರೂ ಅವರಿಗೆ ಮೊದಲು ಈ "ಮಧುಪರ್ಕ"ವನ್ನು ಕುಡಿಯಲು ಕೊಡುತ್ತಿದ್ದರು. ಆದ್ದರಿಂದ, ಪಾದತೊಳಕೊಳ್ಳಲು ನೀರು, ಆ ಮೇಲೆ ಕುಡಿಯಲು, ದಣಿವಾರಿಸಿಕೊಳ್ಳಲು, ಈ ಮಧುಪರ್ಕ ಇಡುವುದು ಅತಿಥಿಸತ್ಕಾರದ ಪ್ರಥಮ ಕಾರ್ಯವಾಗಿಬಿಟ್ಟಿದ್ದರು.

ವಿವಾಹಾನಂತರದ ಒಂದೆರಡು ತಿಂಗಳು ನೂತನ ದಂಪತಿಗಳಿಗೆ ಮಧುಪರ್ಕದ ಸಂತತಧಾರೆಯೇ ಆಗಿಬಿಡುವುದು! ಅದೊಂದು ಕೊನೆ ಇಲ್ಲದ ಮಧುಮಾಸವೆನಿಸುವುದು. ಹಗಲು ಹೋಗಿ, ರಾತ್ರಿ ಎಷ್ಟೊತ್ತಿಗೆ ಬರುತ್ತಿದೆ ಎಂದವರು ನೀಕ್ಷಿಸಿ, ಹಗಲನ್ನು ಯುಗದಂತೆ ಕಳೆದರೆ, ರಾತ್ರಿಯನ್ನು ನಿಮಿಷದಂತೆ ಕಳೆಯುತ್ತಾರೆ.! ಇಷ್ಟುಬೇಗ ಸೂರ್ಯೋದಯವೇಕಾಯಿತು? ಎಂದವರು ಸೂರ್ಯನಿಗೆ ಶಾಪಕೊಡುವುದೂ ಉಂಟು! ಆದರೆ ಅದು ಹುಸಿಶಾಪ; ಅದೊಂದು ಹೊಸಜೀವನ ಚಿಂತನ ಹೊಡೆತ!

ಈ ಮಧುಮಾಸವು ಜೀವನಾನಂದದ ಶ್ರೇಷ್ಠ ಕಾಲವೆನಿಸಬೇಕಾದರೆ, ಇಬ್ಬರೂ ಆಖಂಡ ಬ್ರಹ್ಮಚರ್ಯವಾಲಿಸಿದ, ತುಂಬಿಗಳ ತುಟಿಗೆ ಸಿಲುಕಿರದ, ಹೊಚ್ಚ ಹೊಸ ಹೂವಿನಂತಿರಬೇಕು. ಇಷ್ಟು ಶುದ್ಧ, ಇಷ್ಟು ರಸವಂತಿಕೆ ಉಳ್ಳವರಾಗಿರಬೇಕು. ಏಕಾಗ್ರತೆಯಿಂದ ಇಬ್ಬರೂ ಅದುವರೆಗೆ ಶುಚಿಯೂ, ಜ್ಞಾನಲೋಲುಪವೂ ಆದ ಒಳ್ಳೆಯ ಜೀವನ ನಡೆಸಿರಬೇಕು. ನಮ್ಮ ಇಂದಿನ ಯುವಕ—ಯುವತಿಯರು ಅಂತಹ ಹುಡುಗತನವನ್ನು ಕಳೆದು, ಮಧುಪರ್ಕಕ್ಕೆ ಕೈಯೊಡ್ಡಿದರೇನೇ ಅವರ ಭವಿಷ್ಯ ಜೀವನವು ಸರ್ವತ್ರ ಸುಖ ಸಂತೋಷನಯವಾಗುವುದು.

—ಪಾಂ.
(ನಾಗರಿಕ)

ನಗೆ ಬಿಂದು

ಶಾಸ್ತ್ರೀಯ ಉತ್ತರ

ಅಧ್ಯಾಪಕ—"ಸಮುದ್ರದ ನೀರು ಹಗಲು ತಣ್ಣಗೂ ರಾತ್ರಿ ಬೆಚ್ಚಗೂ ಇರಲು ಕಾರಣ?"

ವಿದ್ಯಾರ್ಥಿ—"ಹಗಲು ಸೂರ್ಯನು ಆಕಾಶದಲ್ಲಿಯೂ ರಾತ್ರಿ ಸಮುದ್ರದಲ್ಲಿಯೂ ಇರುವುದರಿಂದಾಗಿ."

ಹೊಸ ಅನುಭವ

'ಇಲ್ಲಿಂದ ಕಾಸರಗೋಡಿಗೆಷ್ಟು?'
'ದೂರ 30 ಮೈಲಿ....'
'ಅದಲ್ಲ; ಟಿಕೇಟಿಗೆಷ್ಟು?'
'ಒಂದಕ್ಕೆ ರೂ. 1=20'
'ಏನೂ ಕಡಿಮೆಯಿಲ್ಲವೆ?....'
'ಇಲ್ಲ; ಇದ ರೇಲ್ವೆ ಇಲಾಖೆ....ಕೇಂದ ಸರಕಾರದ್ದು...'
'ಆಗಲಿ, ಒಳ್ಳೆಯದು ನೋಡಿ ಒಂದು ಈಚೆ ಕೊಡಿರಿ....'

ಚೌಕಾಸಿ ವ್ಯಾಪಾರ

'ಅಕ್ಕಿ ಮುಡಿಗೆಷ್ಟು?...'
'40 ಕೆಲೋಗ್ರಾಮಿಗೆ ರೂ. 55....'
'ಏನೂ ಕಡಿಮೆಯಾಗದೆ?'
'ಇಲ್ಲ; ನಿರಖಿ ಬೆಲೆ...'
'ರೂ. 5 ಆದರೂ ಕಡಿಮೆ ಮಾಡಿರಿ ರೂ. 50 ತಂದಿದ್ದೇನೆ...'

ಹಣವನ್ನು ವೇಜನೊಳಕ್ಕೆ ಕುರುಕಿದ ವ್ಯಾಪಾರಿ ಅಳತೆಯುವನನ್ನು ದ್ವೇಷಿಸಿ ಈತ ನಿಗೆ 35 ಕೆಜಿ ಅಕ್ಕಿ ಕೊಡುವಂತೆ ಆಜ್ಞಾಪಿಸುತ್ತಾನೆ.

—ಎಚ್. ಎಂ. ವಿಜಯನಾರಾಯಣ

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦.

ವಿದ್ವಾನ್ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ
ಸುಲಭದಲ್ಲಿ ಇಂಗ್ಲಿಷ್
(English Made Easy)
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.೨ರಷ್ಟು.(ಟ.ಖ. ಪ್ರತ್ಯೇಕ)
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
(Letter Writing Made Easy)
ವಿನಯವಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)
ಡಾ। ಕೊರಡ್ಕಲ್ ವೆಂಕಟ್ರಾವ್ ವಿರಚಿತ
ಮನೆ-ಮದ್ದು
(Home-Remedies)
ನೂರಾರು ಕಾಹಿಲೆಗಳಿಗೆ ಮನೆಯಲ್ಲೆ ಮದ್ದು ಮಾಡಿಕೊಳ್ಳುವ ವಿಧಾನ ನಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ. ಖ.-ಪ್ರತ್ಯೇಕ)
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ., ದ. ಕ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ



21—9—1967

೨೦
ಪೈಸೆ

ಕಥಾ ಪ್ರಪಂಚ

ವಿನ್ ತ್ಹೈಸ್ಯಾಂಡ್

ಬರೆದವರು : ಶ್ರೀ 'ಮಾಮಾ ಪನಾಸಕರ್'

ಅಣ್ಣಪ್ಪಯ್ಯ ತಪ್ಪಿ ಜೀವನದಲ್ಲಿ ಚಿಂತೆ ಎಂದರೆ ಏನೆಂದು ಅರಿತುಕೊಂಡಿರಲಿಲ್ಲ. ತಾಲ್ಲ್ಯ ತಮ್ಮಂದಿರ ಅಣ್ಣನೆನಿಸಿಕೊಂಡು ಶ್ರೀಮಂತ ಜೀವನ ನಡೆಸುವ ಜೀವ. ಅಂದೇಕೋ ಅಣ್ಣಪ್ಪಯ್ಯ ಗಾಢ ಆಲೋಚನೆಯಲ್ಲಿ ಬಿದ್ದಂತೆ ತೋರುತಿತ್ತು.

ಅಣ್ಣಪ್ಪಯ್ಯನಲ್ಲಿ ಆಗಾಗ್ಗೆ ಹೋಗಿ ಹರಟೆ ಹೊಡೆದು ಕುಳಿತುಕೊಳ್ಳುವ ನನಗೆ ದೊಂಡು ಸತ್ ಸಂಪ್ರದಾಯದಂತೆ ಹೋದಾಗ ಅಣ್ಣಪ್ಪಯ್ಯನ ಮುಖವನ್ನು ಎಂದಿನಂತೆ ಹಸನ್ಮುಖ ಸ್ವಾಗತ ಬಯಸುವುದನ್ನು ಕಾಣಲಾಗಲಿಲ್ಲ. ಅಂತಲೇ ನಾನು ಅಣ್ಣಪ್ಪಯ್ಯ ಯಾವುದೋ ಗಾಢ ಆಲೋಚನೆಯಲ್ಲಿ ಬಿದ್ದಿರಬೇಕು ಎಂದೆಣಿಸಿದೆ.

ನಾನು ಎಣಿಸಿದ್ದು ನೂರಕ್ಕೆ ನೂರು ಪಾಲು ಸತ್ಯವಾಗಿತ್ತು. ಮೇಲೇರಿ ಆಸನದಲ್ಲಿ ಕುಳಿತೊಡನೆಯೇ ಅಣ್ಣಪ್ಪಯ್ಯ "ಇದರ ಅರ್ಥವೇನಾದರೂ ನಿನಗಾಗಬಲ್ಲುದೆ?" ಎನ್ನುತ್ತಾ ಒಂದು ಆಗ ತಾನೆ ಬಂದ ಟೆಲಿಗ್ರಾಂ ನನ್ನ ಕೈಗಿತ್ತ.

ಅಣ್ಣಪ್ಪಯ್ಯನ ತಮ್ಮಂದಿರು ವಿವಿಧ ಅಭಿರುಚಿಯ ವಿದ್ಯಾಭ್ಯಾಸವನ್ನು ಮಾಡಿ ಪದವೀಧರರೆನ್ನಿಸಿಕೊಂಡಿದ್ದರೂ, ತನ್ನ ತಂದೆಯ ಕಸಬನ್ನು ಮುಂದುವರಿಸುವನೆಂಬ ಪಟ್ಟಿಯಲ್ಲಿ ಅಣ್ಣಪ್ಪಯ್ಯ ಕಲಿತಿರಲಿಲ್ಲವಾದುದರಿಂದ ಆ ಟೆಲಿಗ್ರಾಂ ಓದಿ ಅರ್ಥ ಮಾಡಿಕೊಳ್ಳಲಾರದಾದ. ನಾನಾದರೋ ಒಲ್ಪ ಸ್ವಲ್ಪ ಬಲ್ಲವನಾದುದರಿಂದಲೋ ಏನೊ ಅಂತಹ ಇಂಗ್ಲಿಷ್ ಪತ್ರಗಳೇನಾದರೂ ಬಂದಲ್ಲಿ ನನ್ನಿಂದನೆ ಅರ್ಥ ಕೇಳುವುದು ಅಣ್ಣಪ್ಪಯ್ಯನ ರೂಢಿಯಾಗಿತ್ತು.

ಟೆಲಿಗ್ರಾಂ ಬಿಚ್ಚಿ ಓದಿದೆ.

'Permit Vinthaisand Urgent Bank To-Day'

ಇನ್ನೊಮ್ಮೆ ಓದಿದೆ. ಪುನ: ಪುನ: ಓದಿದೆ. ನನ್ನ ಪಾಂಡಿತ್ಯ ಅದರ ಅರ್ಥವಾಗಲಿಲ್ಲ. ಅರ್ಥವಾಗದಿದ್ದಲ್ಲಿ ಇಲ್ಲ ಎನ್ನುವ ಸ್ವಭಾವ ನನ್ನದಲ್ಲ. ಅದನ್ನು ಹೇಗಾದರೂ ತಿಳಿದುಕೊಳ್ಳುವ ಬಯಕೆ ನನ್ನದು.

'ಶಬ್ದಕೋಶವೇನಾದರೂ ಇದೆಯೆ?' ನಾನು ಎಂದೆ.

"ಶಬ್ದ ಕೋಶ ನೋಡಿಯಾಯ್ತು. ಅದರಲ್ಲಿ Vinthaisand ಎಂಬ ಶಬ್ದವೇ ಇಲ್ಲ! ಎಂದ ಅಣ್ಣಪ್ಪಯ್ಯ.

ಆಗಲೇ ನನ್ನ ದೃಷ್ಟಿಯು ಟೆಲಿಗ್ರಾಂ ಕೊಟ್ಟವರು ಯಾರು ಎಂದು ನೋಡುವ ರೀತಿಯಲ್ಲಿ ಟೆಲಿಗ್ರಾಂನತ್ತ ಹೊರಳಿತು. ಆದರೆ ಅದರಲ್ಲಿ ಕೊಟ್ಟವರ ವಿಳಾಸ ಹೆಸರುಗಳೆಲ್ಲವಾದರೂ ಎಲ್ಲಿಂದ ಬಂದದ್ದು ಎಂದು ಬಪ್ಪಾಲು ಕಟ್ಟೆಯ ಮೊಹರಿನ ಹಕ್ಕದಲ್ಲಿ ಬರೆದದ್ದು ತೋರಿತು. ಅದು ಬೆಂಗಳೂರಿನ ಟೆಲಿಗ್ರಾಂ!

'ಊರು ಟೆಲಿಗ್ರಾಂ ಕೊಟ್ಟರಬಹುದು' ಎಂದು ಅಣ್ಣಪ್ಪಯ್ಯನೊಡನೆ ನಾನು ಕೇಳಿದೆ.

"ಊರು ಎಂದು ನನಗೇ ತಿಳಿದಿಲ್ಲ. ತಿಳಿದಿದ್ದರೆ ಇಷ್ಟು ಕಷ್ಟ ಇರಲಿಲ್ಲ. ಕೂಡಲೆ ಆಕ್ಷಣಿಗೆ ಟ್ರಂಕ್‌ಕಾಲ್ ಆದರೂ ಮಾಡುತಿದ್ದೆ." ಅಣ್ಣಪ್ಪಯ್ಯನೆಂದ.

"ಬೆಂಗಳೂರಿನವನ್ನಿ ಯಾರಾದರೂ ಇದ್ದಾರೆಯೆ?' ನಾನೆಂದೆ.

"ಇಲ್ಲ. ಆದರೆ ಊಟಿಯಲ್ಲಿ ನನ್ನ ಕಿರಿಯ ಸೋದರನಿದ್ದಾನೆ" ಅಣ್ಣಪ್ಪಯ್ಯನೆಂದ.

"ಊಟಿ ಎಲ್ಲಿ? ಬೆಂಗಳೂರು ಎಲ್ಲಿ! ಅದಿರಲಿ. ನಾನು ಕಳಿತ್ತಿದ್ದೇನೆಂದು ಬೇಸರ ನೂಡಬಾರದು. ಯಾರಿಗಾದರೂ ಹಣ ಕೊಡುವುದಿದೆಯೆ?'

"ಬೇಸರವೇಕೆ? ನನ್ನ ವಿಚಾರ ನಿನಗೆ ಗೊತ್ತಿದ್ದುದೇ ಅಲ್ಲವೆ? ನಾನು ಯಾರೊಡನೆಯೂ ಸಾಲ ಕೇಳುವನೆ?" ಅಣ್ಣಪ್ಪಯ್ಯ ತನ್ನ ಶ್ರೀಮಂತಿಕೆಯ ಬಗ್ಗೆ ಅಭಿಮಾನದಿಂದ ಹೇಳಿದ.

ನನಗೂ ಇದೊಂದು ಸಮಸ್ಯೆಯಾಯಿತು.

ಆಷ್ಟರಲ್ಲಿ ಇನ್ಸೂರ್ ರಾಮ ಎಂದು ಪ್ರಸಿದ್ಧಿ ಪಡೆದ ರಾಮಪ್ಪಯ್ಯ ಆ ಕಡೆಯಿಂದ ತನ್ನ ಭಾರವಾದ ಮೈಯನ್ನು ಪುಟ್ಟ ಕಾಲ್ಗಳಲ್ಲಿ ಹೊತ್ತು ಹೋಗುತ್ತಿದ್ದ. ಆತನೊಡನೆ ಮಾತೆತ್ತಿದರೆ ಸಾಕು. ಎರಡು ಸಾವಿರ ಇನ್ಸೂರ್ ತೆಗೆಯುವ' ಎನ್ನುವ ಅಭ್ಯಾಸ ಊರು ತುಂಬಾ ಪ್ರಸಿದ್ಧವಾಗಿದ್ದರಿಂದಲೇ ಎಲ್ಲರೂ 'ಇನ್ಸೂರ್ ರಾಮ' ಎಂದು ಕರೆಯುತ್ತಿದ್ದರು.

"ನಮಸ್ಕಾರ ರಾಮಪ್ಪಯ್ಯನವರಿಗೆ' ನಾನು ಹಸರಿಲ್ಲಿ ನಮಸ್ಕಾರವಿತ್ತೆ.

"ನಮಸ್ಕಾರ. ಇವತ್ತಾದರೂ ಎರಡು ಸಾವಿರ ಇನ್ಸೂರ್ ತೆಗೆಯೋಣ' ರಾಮಪ್ಪಯ್ಯನೆಂದ ನಗುನಗುತ್ತಾ.

"ಅದಕ್ಕೇನಂತೆ, ಖಂಡಿತ. ಎರಡಲ್ಲ ಸಾಲ್ಯ ಸಾವಿರಕ್ಕೆ ತೆಗೆಯೋಣ. ಆದರೆ ನನಗೆ ಈ ಟೆಲಿಗ್ರಾಂನ ಅರ್ಥ ಹೇಳಿ. ಆ ವೇಳೆಲಿ ಮಿಕ್ಕ ವಿಚಾರ" ನಾನು ಟೆಲಿಗ್ರಾಂನ್ನು ರಾಮಪ್ಪಯ್ಯನ ಕೈಗಿಟ್ಟು ಹೇಳಿದೆ. ರಾಮಪ್ಪಯ್ಯ 'ಅದೆಂತಹ ದೊಡ್ಡ ವಿಷಯ?" ಎಂದು ಉದಾಸೀನದಿಂದ ಟೆಲಿಗ್ರಾಂ ಕೈಗೆತ್ತಿಕೊಂಡು ಓದತೊಡಗಿದ.

'ಇದರಲ್ಲಿ Vinthaisand ಎಂದು ಬರೆದಿದೆಯಲ್ಲ....' ರಾಮಪ್ಪಯ್ಯ ಆಕಾಶಕ್ಕೇರಿಸಿದ ತನ್ನ ದೃಷ್ಟಿ,— ಅರ್ಥವಾಗಲಿಲ್ಲವೇನೊ! "ಪಕ್ಷದಲ್ಲಿ ವಕೀಲ ರಂಗಣ್ಣನವರು ಇದ್ದಾರೆ. ಅವರೊಡನೆ ಕೇಳಿ. ಆ ಶಬ್ದದ ಅರ್ಥ ನನಗೆ ಗೊತ್ತಿಲ್ಲ. ಅವರಿಗೆ ಗೊತ್ತಿರಬಹುದೆ.' ಎಂದು ಹೇಳುತ್ತಾ ರಾಮಪ್ಪಯ್ಯ ಅಲ್ಲಿಂದ ಜಾರಿದ.

ಪಕ್ಕದ ಆಂಡಿಯಲ್ಲಿ ವಕೀಲರು ವಿರಾಜಮಾನರಾಗಿ ಹರಟೆ ಹೊಡೆಯುತ್ತಿದ್ದರು. ನಾನು ಟೆಲಿಗ್ರಾಂ ಹಿಡಿದು ಅಲ್ಲಿಗೆ ಹೋಗಿ ಅವರೊಡನೆ ಅರ್ಥ ಕೇಳಿದೆ.

ಅವರು ಕೈಯಲ್ಲಿ ಹಿಡಿದು ಎರಡು ಸಲ ಓದಿದರು.

'ನೀನು ಯಾರಿಗಾದರೂ ಹಣ ಕೊಡಲಿಕ್ಕಿದೆಯೆ?' ಅವರೆಂದರು.

"ಇಲ್ಲ." ನಾನೆಂದೆ.

"ನಿನಗೆ ಯಾರಿಂದಲಾದರೂ ಬರಕಕ್ಕಿದೆಯೆ?" ಪುನಃ ಕೇಳಿದರು.

"ಇಲ್ಲ" ಖಾತ್ರಿ ಗೊತ್ತಿದ್ದಂತೆ ಹೇಳಿದೆ.

'ಹಾಗಾದರೆ ಈ ಟೆಲಿಗ್ರಾಂ ನಿನಗಲ್ಲ" ಎನ್ನುತ್ತಾ ಅಲ್ಲಿಂದ ಎಲ್ಲಿಗೂ ಹೊರಟು ಹೋದರು ವಕೀಲ ರಂಗಣ್ಣ.

ನಾನು "Vinthaisand" ಶಬ್ದದ ಅರ್ಥ ಹೇಗಾದರೂ ಮಾಡಿ ತಿಳುಕೊಳ್ಳಬೇಕು ಎಂದು ನಿರ್ಧರಿಸಿ ಅನತಿ ದೂರದಲ್ಲಿದ್ದ ಡಾಕ್ಟರ್ ಜನಂತಯ್ಯನಲ್ಲಿ ಹೋದೆ.

"ಇದು ಯಾವುದೊ ಮುದ್ದಿನ ಹೆಸರು ಇರಬೇಕು. ಇದಕ್ಕೆ ಪರ್ಮಿಟ್ ಬಂದಿದೆ. ಬ್ಯಾಂಕಿನಲ್ಲಿ ಇವತ್ತೇ ವಿಚಾರಿಸು" ಡಾಕ್ಟರರು ಅದರ ಅರ್ಥ ಹೇಳಿದರು. ಒಂದು ಬಗೆಯ ಸಮಾಧಾನದಿಂದ ಅಲ್ಲಿಂದ ಹೊರಗೆ ಬರುವಾಗ ಇಂಜಿನಿಯರ್ ಗಣೇಶಯ್ಯ ಸಿಕ್ಕಿದ. ನಾವಿಬ್ಬರೂ ಬಾಲ್ಯ ಸ್ನೇಹಿತರು. ಹಾಗಾಗಿ ಗಣೇಶಯ್ಯ ನನ್ನನ್ನು ನೋಡುತ್ತಲೇ "ಏನು? ಡಾಕ್ಟರರಲ್ಲಿ ಬರಲು ಕಾರಣ? ಮೈ ಹುಷಾರಿಲ್ಲವೆ?' ಎಂದು ಕೇಳಿದ.

'ಚೆನ್ನಾಗಿದ್ದೇನೆ. ಆದರೆ ಈ ಟೆಲಿಗ್ರಾಂ ವಿಷಯ ಏನೆಂದು ತಿಳಿದು ಕೊಳ್ಳಲು ಬಂದೆ. ಏನೆಂದರೂ ನಾನು ಇಂಗ್ಲಿಷ್ ಕಲಿಯದಿದ್ದುದರಿಂದ ನಿಮ್ಮಂತಹ ಪದವೀಧರರನ್ನು ಹೊಂದಿಕೊಳ್ಳಬೇಕಾಗಿದೆ!" ಹಾಗೆನ್ನುತ್ತಾ ನಾನು ವಿನೀತಯ ಮುಹಶ್ಚನನ್ನು ಕುರಿತು ಹೇಳಿದೆ.

"ಅದೆಂತಹ ಟೆಲಿಗ್ರಾಂ! ನೋಡೋಣ." ಎಂದವನೇ ನನ್ನ ಕೈಯಲ್ಲಿದ್ದ ಟೆಲಿಗ್ರಾಂ ಕಸಿದು ಬಿಡಿಸಿ ಓದಿದ.

'ಇದೆಂತಹ ಸಣ್ಣ ವಿಚಾರ! ನೀನು ಬಂಕ್ ಕಟ್ಟಿಸುವೆಯೊ? ಬಹಳ ಒಳ್ಳೆಯದು. ಅದಕ್ಕಾಗಿ ಪರ್ಮಿಟ್ ಬಂದಿದೆ. ಬಂಕ್ ಎಲ್ಲಯೋ ಬೇಂಕ್ ಆಗಿದೆ. Vinthaisand ಮೂಕ್ಕ ಎಂಕಹ ಶಬ್ದವೊ ನಾ ನಗೂತ್ತಿಲ್ಲ.' ಗಣೇಶಯ್ಯ ಹೇಳಿದ. ನಾನು ಅವಕ್ಕಾದೆ.

ಡಾಕ್ಟರರ ಅರ್ಥಕ್ಕೂ ಇಂಜಿನಿಯರರ ಅರ್ಥಕ್ಕೂ ಅಜ-ಗಜ ಅಂತರ. ಹಾಗಾದರೆ ಟಪ್ಪಾಲು ಕಟ್ಟೆಯಲ್ಲಿ ವಿಚಾರಿಸೋಣ ಎಂದು ನೇರವಾಗಿ ಟಪ್ಪಾಲು ಕಟ್ಟೆಗೆ ಧಾವಿಸಿದೆ.

ಆವರು ಧಾರಾಳವಾಗಿ ಹೇಳಿದರು. "ನಮಗೆ ಅದರ ಅರ್ಥ ಗೊತ್ತಿಲ್ಲ. ಹಾಗೆಯೇ ಇಲ್ಲಿ ರಿಸೀವ್ ಆಗಿದೆ. ಅದು ಕೋಡ್ ವರ್ಡ್ ಆಗಿರಬಹುದು."

ಸಪ್ಪೆ ಮೋರೆ ಮಾಡಿಕೊಂಡು ಹೊರ ಬರುವಾಗ ಹೊಟೆಲ್ ಉಪೇಂದ್ರ ಆ ಕಡೆಯಿಂದ ಎಲ್ಲಿಗೊ ಹೊರಟಿರುವುದನ್ನು ಕಂಡೆ.

'ಏನು ಇವತ್ತು ಕಾಫಿ ಕುಡಿಸಿಲ್ಲವೆ?' ಎಂದ ಉಪೇಂದ್ರ.

"ಎಲ್ಲಾ ಆಗಿದೆ. ಆದರೆ ಒಂದು ಮಾತ್ರ ಆಗಿಲ್ಲ! ಈ ಟೆಲಿಗ್ರಾಂ ಅರ್ಥ ನಿನಗೇನಾದರೂ ಆಗುವುದೆ?" ನಾನೆಂದೆ.

ಉಪೇಂದ್ರ ಸಾಮಾನ್ಯನಲ್ಲ. ಎಂತೆಂಥ ಸಮಸ್ಯೆಗಳನ್ನು ಬಗೆಹರಿಸಿದ ಭೂಪ! ಆದರೆ ಈ ಟೆಲಿಗ್ರಾಂ ನೋಡಿ ಕ್ಷಣ ಹತ್ತು ನಿಮಿಷ ಮೌನನಾದ.

"Vinthaisand ಎಂದರೇನು?" ಉಪೇಂದ್ರ ಕೇಳಿದ.

"ಅಯ್ಯೋ! ಅದೇ ಈಗ ಬಂದದ್ದು! ಅದರ ಅರ್ಥ ಸರಿಯಾಗಿ ಆಗದಿದ್ದರೆ ನಿನ್ನ-ಹತ್ತಿರ ಕೇಳುವ ಅವಶ್ಯಕತೆ ಏನು?" ನಾನು ಅಲ್ಲಿಂದ ಟೆಲಿಗ್ರಾಂ ಹಿಡಿದು ಬೇರೆ ದಾರಿ ಹಿಡಿದೆ. ಎಲ್ಲೆಲ್ಲೂ ಒಂದೊಂದು ಬಗೆಯ ಉತ್ತರ ಕಂಡು ಬೇಸರವಾಗಿ ಅಣ್ಣಪ್ಪಯ್ಯನಲ್ಲಿಗೆ ಬಂದು ಟೆಲಿಗ್ರಾಂ ಹಿಂದಕ್ಕೆ ಕೊಟ್ಟು ಹೇಳಿದೆ. 'ನಾಳೆ ಕಾಗದ ಬರೆದಾನು ಈ ಟೆಲಿಗ್ರಾಂ ಬಿಟ್ಟಾಕಿ!'

(ಹನ್ನೊಂದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಮನಮೆಚ್ಚುವ ಸರ್ವ ಸೌಕರ್ಯಗಳಿಂದೊಡಗೂಡಿದ

ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪಾಶ್ಚಿಮಾತ್ಯರ ಉಷಾಹಾರಕ್ಕೆ ಅಗ್ರ ಸ್ಥಾನ ಪಡೆದ ವಿಶ್ವಮಾತ್ರ ಹೊಟೆಲ್.

ಫೋನ್ : 77

47ನೇ ವರ್ಷ
Telephone 226.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ದ. ಕನ್ನಡ.

++

ಸ್ಥಾಪನೆ: 1921
ಸ್ಥಾಪಕರು
ದಿ। ಎ. ಬಿ. ಶೆಟ್ಟರು.
ಸಂಚಾಲಕ—ಸಂಪಾದಕ
ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

++

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಸಿನ ಸ್ಟಾಮಣ ಪತ್ರಿಕೆಯ ಒಂದೇ ಮಗ್ಗುಲಲ್ಲಿ ಬರೆಯಬೇಕು. ಅಕ್ಷರಗಳಿಂದ ಬರೆಯಲ್ಪಡಬೇಕು. ಅ ಭಿಪ್ರಾಯ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಬಾಬಲಾಗ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಈ ವರ್ಷದ ಗಣೇಶ ಚತುರ್ಥಿಯಂದು ಸಾವಿರಾರು ಜನರ ಮನವನ್ನಾಕರ್ಷಿಸಿದ ಉಡುಪಿ ಶ್ರೀ ಕೃಷ್ಣಾಪುರ ಮಠದಲ್ಲಿಯ ಗಣೇಶ ಮೂರ್ತಿ
(ಪಡಿಯಚ್ಚು ಶ್ರೀ ಕೃಷ್ಣಾಪುರ ಮಠದ ಕೃಪೆಯಿಂದ)

ಸಂಪುಟ ೪೭ | ಉಡುಪಿ | Vol. 47
ಸಂಚಿಕೆ ೩ | ೨೧—೯—೧೯೬೨ | No. 3

ಧಾಳಿಗೆ ಸಿದ್ಧತೆ?

ಸಿಕ್ಕಿಂ—ಟಿಬೇಟ್ ಗಡಿಯ ನಾಥುಲಾ ಪ ಆಸುಪಾಸಿನಲ್ಲಿ ಸುತ್ತೆ ಕೆಂಪು ಚೀನೀ ಯರ ಗುಂಡುಗಳ ದಾಳಿ ಆರಂಭವಾಗಿದೆ. ೧೯೬೨ರಲ್ಲಿಯೂ ಆರಂಭವಾದುದು ಇದೇ ರೀತಿಯಲ್ಲಿ. ಅಂದು ನಮ್ಮ ಸೈನ್ಯವು ಸುಸ ಜ್ಜಿತವಿರಲಿಲ್ಲ. ಏಕೆಂದರೆ, ಆಕ್ರಮಣ ನಡೆ ಯಬಹುದು ಎಂಬುದು ನಮಗೆ ಕಲ್ಪನಾ ತೀತವಾಗಿತ್ತು. ಆದರಲ್ಲೂ ಕೆಂಪು ಚೀನಾ ಗಡಿಯಲ್ಲಿ ಹೋರಾಟಕ್ಕೆ ತೊಡಗಿದೆಯೆಂ ದು ಸುದ್ದಿ ಬಂದಾಗ ಅದನ್ನು ನಂಬು ವುದೂ ಕಷ್ಟ ಸಾಧ್ಯವಿತ್ತು. ಆದರೆ, ಈಗ್ಗೆ ಐದು ವರ್ಷಗಳಲ್ಲಿ ಪರಿಸ್ಥಿತಿ ಪೂರ್ಣ ಬದಲಾಗಿದೆ. ಗುಂಡಿನ ಸ್ಪರ್ಶಿಗೆ ಗುಂಡಿನಲ್ಲೇ ಉತ್ತರ ನೀಡಲು ಭಾರ ತವಿಂದು ಕಲಿತ ಕೊಂಡಿದೆ. ಎಂತಲೇ ನಮ್ಮ ಹಾಗೂ ಕೆಂಪು ಚೀನೀಯ ಸೇನೆ ಗಳ ನಡುವೆ ಗುಂಡಿನ ವಿನಿಮಯ ಪಡೆ ಯುತ್ತಲೇ ಇವೆ. ಒಮ್ಮೆಗೆ ಶಾಂತವೆಂಬಂ ತೆ ಕಂಡುಬಂದರೂ ಅದು ಮುಂದಿನ ಹೋರಾಟಕ್ಕೆ ತಯಾರಿ ನಡೆಸುವ ಅವಧಿ ಯೆನಿಸೀತು.

ಕೆಂಪು ಚೀನಾ ಏತಕ್ಕೆ ಗುಂಡಿನ ದಾಳಿ ಆರಂಭಿಸಿತು? ಅವರ ಭೂಭಾಗವನ್ನು ಯಾರೂ ಆಕ್ರಮಿಸಿಲ್ಲ; ಕಿರಿಗಳನ್ನು ಹೊಡಕೊಂಡೂ ಹೋಗಲಿಲ್ಲ. ಭಾರತೀ ಯ ಸೇನೆಯೇ ತೊತ್ತಮೊದಲು ಗುಂಡು ಹಾರಿಸಿತು. ಇದು ಚೀನಾದ ಹೇಳಿಕೆ. ತಾ ನು ಮೊಸರು ತಿಂದು ಪಡಿನ ಮುಖಕ್ಕೆ ಒ ರಸಿದ ನರಿಯ ಕಥೆಯದು. ಸಿಕ್ಕಿಂ ಟಿಬೇಟುಗಳ ನಡುವೆ ಯಾವ ಸೀಮಾ ವಿವಾದವೂ ಇರುವುದಿಲ್ಲ. ಈ ಸಂಬಂಧದ ಒಡಂಬಡಿಕೆಯನ್ನು ಕೆಂಪು ಚೀನಾ ಒಪ್ಪಿ ಕೊಂಡಿದೆ. ಭಾರತೀಯ ಸೈನಿಕರು ಇಲ್ಲ ಸರಿಗೆ-ಬೇಲಿಯನ್ನು ಹಾಕುತಿದ್ದಾರೆ. ಈ ಬೇಲಿಯು ಕಾಲ್ಕೆರೆಯಕ್ಕೆ ಬಂದರೆ, ಟಿ ಬೇಟಿನ ಇಲಿಗರ.—ಕಿರಿಗಳು ಭಾರತದ ನೆಲಕ್ಕೆ ಬರುವುದೆಂತು? ಅವುಗಳನ್ನು ಕಾರಣವಿರಿಸಿ ಗುಂಡಿನ ಮಳೆ ಸುರಿಸುವು ದೆಂದು? ಇದೂ ಒಂದು ಕಾರಣವಿರಬಹು ದು. ಇದಕ್ಕಿಂತ ಮುಖ್ಯವಾ ದುದು ಬೇರೆಯೇ ಇದೆ. ಕೆಂಪು ಚೀನಾದಲ್ಲಿ ಆಂತರಿಕ ತಕ್ಕಾಟ ಇ ತೀಚೆಗೆ ತೀವ್ರವಾಗಿದೆ. ಜನ ಯಾವ ಕಾಲಕ್ಕೆ ಏನು ಮಾಡೀತೆಂದು ಹೇಳುವಂ ತಿಲ್ಲ. ಕ್ಯಾಂಟನ್ ನಗರದ ಹೋರಾಟ ಭೀಕರವಿದೆ. ಕೆಂಪು ಚೀನಾ ಆಟಂ ಬಾಂ ಬನ್ನು ತಯಾರಿಸಿರಬಹುದು; ಯುದ್ಧೋ ಸಕರಣಗಳನ್ನು ಹೆಚ್ಚಿಸಿಕೊಂಡಿರಬಹು ದು; ಆದರೆ, ಜನತೆಯ ಕಷ್ಟ ದೂರವಾ ಡುವಲ್ಲಿ ಮಾತ್ರ ಏನೂ ಮಾಡಿಲ್ಲ. ಇವೆಂ ದ ಸರಕಾರದ ವಿರುದ್ಧ ಎದ್ದು ನಿಲ್ಲುವ ಜನತೆಯು ಸೃಷ್ಟಿಯನ್ನು ವಿದೇಶಗಳತ್ತ ಹರಿದಿಸುವುದೂ ಒಂದು ರಾಜತಂತ್ರ. ಇದ ಕ್ಕಾಗಿ, ಕೆಂಪು ಚೀನಾವು ಗಡಿ ಘರ್ಷಣೆ ಯನ್ನು ತಂದುಕೊಂಡಿದೆ; ಆದರೆ, ಇಂತ ಹ ಅನ್ಯಾಯದ ವರ್ತನೆಯು ಒಂದು ಕಾ ಲಕ್ಕೆ ಕೆಂಪು ಚೀನಾಕ್ಕೇನೇ ಮುಳಿವಾಗಿ ಪರಿಣಮಿಸುವುದು ಕಂಡಿತ. ೧೯೬೨ರಲ್ಲಿ ಪಾಕಿಸ್ತಾನವು ಭಾರತನನ್ನು ಆಕ್ರಮಿಸಿ ತು. ಆದರೆ, ಧೀರ ಭಾರತೀಯರು ಪಾಕಿ ಸ್ತಾನಿಗಳಿಗೆ ಸರಿಯಾದ ಬುದ್ಧಿ ಕಲಿಸಿದ ರು. ಆ ಸಮಯದಲ್ಲಿ ಕೆಂಪು ಚೀನಾ ಪಾಕ್ ಸ್ತಾನಿಯರು ಖುಷಿ ಆಡಿಸುತಿತ್ತು. ಇದೀಗ ಪೀಕಿಂಗ್ ರೇಡಿಯೋದ 'ಸುಳ್ಳು ಸುದ್ದಿ'ಗಳನ್ನು ಕರಾಚಿ ರೇಡಿಯೋ ಮರು ಪ್ರಸಾರ ಮಾಡಿ, ಭಾರತದ ಬೆನ್ನಲ್ಲೆ ದೋ ಷಾರೋಪಣೆ ಆರಂಭಿಸಿದೆ. ಪಾಕಿಸ್ತಾನ ವು ತನ್ನ ಮೇಲಾಗುವ ಯಾವುದೇ ಆಕ್ರ ಮಣವನ್ನೆದುರಿಸಲು ಶಕ್ತವಿದೆ ಎಂದು ಇತ್ತೀಚೆಗೆ ಅಧ್ಯಕ್ಷ ಅ ಯ್ಯೂಬ ಖಾನರು ಗುಡುಗಿದ್ದಾರೆ. ಆದ ರೆ, ಅವರಿಗೆ ಯಾರ ಭೀತಿ? ಚೀನೀಯ ಮೂವನನ್ನು ಅವರು ವಧು ದಕ್ಷಿಣೆ (ಭಾ ರತೀಯ ನೆಲವನ್ನು ದಾನವಾಡಿ) ನೀಡಿ ಒಲಿಸಿಕೊಂಡಿದ್ದಾರೆ. ಅಂದರೆ, ಅವರ ಮಾ ತಿನ ಅರ್ಥ ಭಾರತೀಯರೇ ಆಕ್ರಮಣ ಮಾಡುತ್ತಾರೆಂದು. ಹೀಗೆ ಚೀನೀ ಮೂ ಪ, ಪಾಕೀ ಮು ಅಳಿಯ ಇಬ್ಬರೊಂದಾಗಿ ಭಾರತದ ಮೂರು ದಿಕ್ಕಿನಲ್ಲಿ ಆಕ್ರಮಣ ಎಂಡಬರುವುದು ಅಸಂಭವನೀಯವಾದ ರೂ ಆಕ್ರಮಣದ ಭೀತಿಯನ್ನು ಹೆಚ್ಚಿಸು ತ್ತಲೇ ಇರುವುದು ಸಂಭವನೀಯವೇ. ಈ ಆಕ್ರಮಣ ಭೀತಿಯಿಂದಾಗಿ ನಾವು ಸಂರ ಕ್ಷಣೆಗಾಗಿ ಹೆಚ್ಚಿನ ವೆಚ್ಚವನ್ನು ಮೂಡು ತ್ತಿರಬೇಕು; ಅಂದರೆ, ಅಭಿವೃದ್ಧಿ ಯೋ ಜನೆಗಳನ್ನ ಮೊಟಕುಗೊಳಿಸುವುದು ಅನಿವಾರ್ಯವಾಗುತ್ತದೆ. ಏತಕ್ಕಿಸ್ತಾನ—ಕೆಂಪು ಚೀನಾಗಳ ಆಂತರಿಕ ಅಭಿಲಾಷೆ ಯಾದರೂ ಇದೇ—ಭಾರತವು ಆರ್ಥಿಕ ವಾಗಿ ಬೆಳೆದು ಬರಬಾರದು; ಅದಕ್ಕಾಗಿ ಆದರ ಲಕ್ಷ್ಯವನ್ನು ಅವಲಿಸಬೇಕು.

ಆದುದರಿಂದ ನಮ್ಮ ಕಾರ್ಯ—ಸಾಧ್ಯ ನೆಗಳು ತುಂಬ ತ್ರಾಸದಾಯಕವಿವೆ. ದೇಶ ದ ಸಾರ್ವಭೌಮತ್ವ ರಕ್ಷಣೆ—ಆಕ್ರಮಣದ ನಿರೋಧಗಳಿಗಾಗಿ ನಾವು—ನೆತ್ತರು ಹಣ ವಿಡಬೇಕಾಗಿದೆ; ದೇಶದ ಬಡತನವನ್ನು ದೂರ ಮಾಡಲು ಹೆಣಗುತ್ತಿರುವಾಗಲೇ ಸಪ್ಪಗಳನ್ನೂ ತಡೆಗಟ್ಟಬೇಕಾಗಿದೆ. ಇಂ ದು ದೇಶದ ಪರಿಸ್ಥಿತಿ ಹಿಂದಿಗಿಂತ ಭಿನ್ನ ವಿದೆ. ಆಕ್ರಮಣವನ್ನು ಸಮರ್ಥಕ ವಾಗಿ ಎದುರಿಸಲು ನಾವು ಶಕ್ತರಿದ್ದೇವೆ. ದೇಶದ ಜನತೆಯು ಬಿಕ್ಕ ಹುಟ್ಟಿ ಕಾರಣ ಗಳಿಗಾಗಿ ಹೋರಾಡುತ್ತಿರುವುದು ಮತ್ತ

ವಚನ ಸುಧೆ

ಸುವ್ಯಾಹೃತಾನಿ ಧೀರಜಾಂ
ಫಲತ: ಪರಿಚಿಂತ್ಯತು:
ಅಧ್ಯವಸತಿ ಕಾರ್ಯೇಷು
ಚಿರಂ ಯಶಸಿ ತಿಷ್ಠತಿ॥

ಧೀರ ಪುರುಷರ ವಚನಗಳ ಪರಿಣಾಮವ ನ್ನು ವಿಚಾರಮಾಡಿ, ಅವನ್ನು ಕಾರ್ಯರೂಪ ದಲ್ಲಿ ತರುವವನು ಬಹುಕಾಲದ ತನಕ ಯಶಗಳಿಸುತ್ತಾನೆ.

ಮೆಚ್ಚಿಕೆಯುದ್ದಲ್ಲ. 'ಬಂದ್' ಮೊದಲಾದ ರೂಪದಲ್ಲಿ ಉತ್ಪಾದನೆಗೆ ಕೊಡಲಿಯೆ ಕ್ಕುವುದು ಯಾವ ಸರಕಾರಕ್ಕೇ ಆಗಲಿ ಶೋಭನೀಯವಲ್ಲ. ಕೇರಳದ 'ಬಂದ್' —ಕಣ್ಣನ ಸರಕಾರದ ಭಾರತ ನಿಷ್ಠೆಯ ನ್ನೇ ಪ್ರಶ್ನಿಸುವಂತಿದೆ. ವಿಶಾಲ ದೇಶ ಭಾರತವು ಏಕೈಕ ರಾಷ್ಟ್ರ—ಇದನ್ನು ಕ ಟ್ಟುವಲ್ಲಿ, ಉಳಿಸುವಲ್ಲಿ, ಬೆಳಸುವಲ್ಲಿ ಪ್ರತಿ ಯೊಬ್ಬ ಭಾರತೀಯನೂ ತನ್ನ ಪಾಲಿನ ಕರ್ತವ್ಯ ನಿರ್ವಹಿಸಬೇಕು; ಇದಕ್ಕೆ ತಪ್ಪಿ ದರೆ, ಅತ ದೇಶದ್ರೋಹಿಯೇ ಸರಿ—ಅತನಿಗೆ ತಕ್ಕ ದಂಡನೆ ದೊರೆಯಲೇಬೇಕು.

ಹೊಸ ದಾರಿ

ಮಧ್ಯ ಪ್ರದೇಶ ಸರಕಾರ ಬರಗಾಲ ಪರಿಹಾರ ನಿಧಿಗೆ ಹಣ ಕೂಡಿಸುವ ಹೊಸ ಯೋಜನೆಯೊಂದನ್ನು ಮಾಡಿದೆ. ರಾಜ್ಯ ದಿಂದ ಹೊರಗೆ ಒಂದು ಕ್ವಿಂಟಾಲ್ ಗೋ ಲಾಬೆ ಬೇಳೆಯನ್ನು ಒಯ್ಯಬೇಕಾದರೆ ಮೂವತ್ತು ರೂಪಾಯಿ ಪರಿಹಾರ ನಿಧಿಗೆ ತೆರಿಗೆ ಕೊಡಬೇಕಂತೆ. ಮಧ್ಯ ಪ್ರದೇಶದ ಲ್ಲಿ ಧಾರಾಳವಾಗಿರುವ ಈ ಬೇಳೆಯ ಪ್ರತಿ ಕ್ವಿಂಟಾಲಿಗೆ ರೂ. ೧೪೨ ಇದ್ದರೆ, ಮುಂಬಯಿ ಪಾಸೂ ಸುತ್ತು ಮುಟ್ಟ ರೂ. ೨೧೦ ಇದೆ. ಬಯ್ಯುವ ಪರ್ಮಿಟ್ ಬಯಸುವವನು ತೆರಿಗೆ ಕೊಡಲೇಬೇಕು. ವ್ಯಾಪಾರಿಗಳು ಇದರಿಂದ ತುಸು ತಬ್ಬಿಬ್ಬರಾಗಿರುವುದು ಸಹಜ. ಆದರೆ, ಅವರು ಲಾಭದಲ್ಲಿ ಕಡಿತವಾಗಿ ಬಹುದು. ಇಷ್ಟೇ ಆದರೆ ತೊಂದರೆಯಿಲ್ಲ. ಇದರ ಬದಲು ತನ್ನ್ಕಲಾಭಕ್ಕೆ ತೊಂದರೆಯಾಗ ದಂತೆ ವಂತಿಗೆಯ ಹಣವನ್ನೂ ಹೊರ ವಲಯಕಟ್ಟೆಯವರಿಂದಲೇ ವಸೂಲು ಮಾ ಡಿ ತೊಡಗಿದರೆ, ಬೆಲೆಯೇರಿಕೆಗೆ ಇದೂ ಒಂದು ಕಾರಣವಾಗುತ್ತದೆ. ಬಲಾತ್ಕಾರ ದ ವಂತಿಗೆ ಪಡೆಯುವುದು ಕಾನೂನು ರೀ ತ್ಯಾ ಸಂಯೋದೀತೆ? ಮೂಲಭೂತ ಹಕ್ಕು ಗಳಿಗೆ ಸರಿಯೆಂದೀತೆ?—ಈ ಸಂಬಂಧದ ಲ್ಲಿ ಪಚಾರಿಸದೆ ಮಧ್ಯ ಪ್ರದೇಶದ ವರ್ತನೆ ಸುಸಮ್ಮತವಿದ್ದಾರೆಯೆ?

ನರಸಣ್ಣನ ನರಸ



"ನಾವೆಲ್ಲಾ ನಾಳೆಯ ಯೋಚನೆಯನ್ನೇ ಕೈಬಿಟ್ಟರುವಾಗ ಸರಕಾರ ನಾಳ್ನಾಳೆಯ ಯೋ ಜನೆಯನ್ನು ಕೈಬಿಟ್ಟದ್ದರಲ್ಲಿ ಏನಾಶ್ಚರ್ಯವಿ ದೆ?"

ಗೇಪ ರಾಜ್ಯದಲ್ಲಿ

ಅಪ್ಪಿಗೆ ಪಟ್ಟ, ಎಣಿಕೆ ಬಾರದ ಕರಣಿಕ

ಬ ಟ

'ಶತ್ರವರಿಗೆಷ್ಟೆ ಅಪ್ಪವರು ನಾಯುರೇ, ಕತ್ತಿ ಹಿಡಿದವರೆಲ್ಲ ಯೋಧರಲರೇ...."

"ಓಂ ಗ, ಜವೇನಿಗಾ? ಬರುಸ್ಲೇ ಸಂಗೀತ ದಳೆಯ ಆರಂಭವಾದಂತಾಯ್ತಲ್ಲ...."

"ಟ್ಟಿಂ, ಸಂಗೀತಾನೂ ಆಗಕ್ಕೆ ಮತ್ತೇನಾದ್ರೂ ಆಯ್ತ್ರೆ... ಬಾನೇನಂತೆ ನಿನಗೆ...."

'ನಂಗೇನೂ ಇಲ್ಲಾಸ್ಟಿ. ಆದ್ರೆ ಈಗ ಇರೋದೇನು ನಂಗೆ ಮಾತ್ರ ಅಸ್ತಿ, ನಂಗೆ ನಮ್ಮೆ, ಎಲ್ರಿಗೆ...."

"ಏನೇ ಅಂದ್ಕಂಡ್ರೆ? ಇವಕ್ಕುಲಪತಿಗಳೆಲ್ಲಾ ಒಂದಾಗಿ ಕೇಂಪ್ರ ಸರಕಾರದ ಸಲಹೆಯಂತೆ ತ್ರಿಭಾಷಾ ಸೂತ್ರವನ್ನು ವ್ಯಾಪ್ತಿಕರಿಸಿ ಭಾಷೆಗಳಿಗೆ ಬದಲಾಯಿಸಲು ಒಪ್ಪಿದರಂತೆ. ಅಲ್ಲಿಗೆ ಒಂದು ಪಿಡುಗು ದೂರವಾಯ್ತಲ್ಲಾ.... ಮತ್ತೇನು ಹೊಸ್ತು ಆರಂಭವಾಗಿರೋದು?"

"ಅಂದ್ರೆ ಭಾಷಾಸಮಸ್ಯೆ ಸುಲಭದಲ್ಲಿ ಬಗೆಹರಿಯುತ್ತಾನ್ನಿ...."

'ಇನ್ನೇನು ಬಗೆಹರಿದಂತೆಯೇ ಸರಿ ಕ್ಕೆ..."

'ಹೇಗದು?"

'ತ್ರಿಭಾಷಾ ಸೂತ್ರವು ಪ್ರಾದೇಶಿಕ ಭಾಷೆಯೂಗಬೇಕು. ಅದನ್ನು ಯಾವ ರೀತಿಯಲ್ಲಿ ತರಬೇಕು ಎಂಬ ಸಂಗತಿ ವಿಶ್ವವಿದ್ಯಾಲಯಗಳ ನಿರ್ಣಯಕ್ಕೇ ಬಿಟ್ಟು ಬಿಡಬೇಕು....'

"ಓಹೋ ಹಾಗೊ....ಹಾಗಾದರೆ ಬಿಡಿ, ಕೇಂಪ್ರ ಸರಕಾರದ ಕಡುರೆಯು ಕಡಿವಾಣ ಉಪಕುಲಪತಿಗಳ ಕೈಯಲ್ಲಿ. ಮುಖ್ಯವಾಗಿ ದಕ್ಷಿಣದ ಎಲ್ಲವಿದ್ಯಾಲಯಗಳಲ್ಲಿ ಇಂಗ್ಲಿಷೇ ಮಾಧ್ಯಮವಾಗಿ ಬಹುಕಾಲ ಮುಂದುವರಿಯುವುದು ತಂಡಿತ. ಅದ್ರಲ್ಲೂ ನಮ್ಮ ಕನ್ನಡ ರಾಜ್ಯದಲ್ಲಿ ಇದು ನೂರಕ್ಕೆ ನೂರು ನಿಜ...."

"ಯೂಕೊಮ್ಮ ಆಷ್ಟು ನಿರಾಸೆ?"

'ನಿರಾಸೆಯಲ್ಲದೆ ಮತ್ತೇಂಥದು? ನಮಗೆ ಕನ್ನಡ ಬೇಕಾಗಿಲ್ಲ ನೋಡಿ...ಹಿಂದೊಂದು 'ಇಂಗ್ಲಿಷ್' ಇದ್ದಂತೆ ನೋಡಿ....ಎಂಥ ದದು.... ಧ್ಹಾಂ ಟಿಲ್ಲರ್ ಇಂಗ್ಲಿಷ್ ಆಂಪ. ಈಗಿನ ನಮ್ಮ ಪನ್ನಿಡ ತರಿದ್ರಿ...."

"ಏನು? ಒಳಿಬಿಟ..."

"ನೋಡ್ತಿ, ಸಂಗ್ಲೆ ಒನ್ವೆಂಬ ಡ್ಯಾಟ್ಸ್.... ಇನ್ನು, ನಮ್ಮ ಫಂಡ್ರೂಗೆ ಟೂ ಸೀರಿಯಸ್ಸು. ಕಾಪ್ಸಿಂಬಿ ಮಡಿಸಿನ್ ಮಾಡ್ಬೇಕಾಯ್ತು...."

'ಹ್ಞೂಂ.... ಅಂತೂ ನಾನ್ನು. ಇಂಥ ಕನ್ನಡ ಆದೇಶ ಕ್ಕೆಬ ಪಾಪ್ಯಮಸ್ಕೆ ಮಾತ್ರ ಭಾರಿ ನಿರೋಧ. ಅಪ್ಪು ಹೀಗೆ ಮಾತಾಡ್ಬಹುದು, ಬರೀಬಹುದು. ಆದ್ರೆ ಪಾಠ ಮಾತ್ರ ಕೇಳ್ಬಾರ್ದು, ಹೇಳ್ಬಾರದು.'

'ಅವೆಲ್ಲಾ ಇರ್ಲಿ.... ಅಲ್ಲಿ ಬರುತ್ತೇ ಹಾಡ್ತಾ ಇದಿರಲ್ಲಾ.... ಅದೇನೋ ಸತ್ತವರಿಗತ್ತರಿ...'

'ಹ್ಞೂಂ.....ಸಂಗೀತವನ್ನು ಸತ್ತವನಿಗತ್ತರಿ ಅಪ್ಪತ್ತರು ನಾಯುರೆ...."

'ಅಲ್ಲಿ, ಯಾರು ಸತ್ತು...."

'ಅಯ್ಯೋ, ಏನಂತೀಯಾ? ಸ್ವಲ್ಪನ್ನಣವೂ ಸೂರಾರು ಜನ, ನೋಣ ನಾವ್ತಾ ಇದ್ದಾರೆ...'

'ಅದು ಬಿಡಿ. ಈಟ್ಟಿದಷನು ನಾಯ ಬೇಕು...."

'ಆಜೆ, ಹುಟ್ಟಿದವನು ನಾಯ ಬೇಕೆಂತೆ. ಎಸು ನೂತು?'

"ಏನು? ಮತ್ತೆ ಹುಟ್ಟದೆ ಇರುವವನು ಸಾಯುತ್ತಾನಂತು?'

'ಹುಟ್ಟಿದವರಷ್ಟನೆ ಮಾತ್ಯಾಕೆ? ಹುಟ್ಟಿದವಳನ್ನು ಆಮರಳೆ?"

"ಆಯ್ಯೋ, ನೀವೊಂದು....ಮಾಡಕಯೊಡೆಯುವುದಕ್ಕೆ ಉಡಕೆ ನುರಬೇಕ?"

"ಮತ್ತೆ ಏನ ಪಕ್ಷೇ ನಂಗಾಗಿ...."

"ಸಾಕಾ ಬಿಡೀಂಪ್ರ...ತಪ್ಪಾಯ್ತು.... ಈಗ ಹೇಳಿ, ಯಾರು ಸತ್ತವ್ರು...'

"ಬೂರು ಬಂದ್ರು.... ಅಸ್ಲ ತಂದೆನ ಬ್ಲಾ ತುಂಬ ಜನಾಂತ...'

'ಹ್ಞೂಂ...ಏನಂತ..., ಹೀನೀಯು ಸೇನೆ ಮಂಡಿ ಬಂದು ಗುಂಡು ಹಾರಿಸಿಯೇ ಬಿಟ್ಟತೇನು?'

'ಭೂಕಿ ಹಾಗೆ ಕೇಳ್ತಿ ಏಕಿ?'

'ಮತ್ತೆ ತುಂಬಾ ಜನ ಸಾಯುಬೇಕಾದ್ರೆ...'

'ಯಾರೇನೂ ಇಲ್ಲಾನ್ನ. ಸಿಕ್ಕಿಂಗಡಿಯಲ್ಲಿ ಚೀನೀಯರ ಕೇಡಿಲೆ ಮತ್ತೆ ಭಾರಂಭವಾಗಿದೆ. ಗುಂಡು—ಸಿಡಿಮದ್ದುಗಳ ವಿನಿಮಯ ತೊಡಗಿದ. ನಮ್ಮ— ಅವರ ಪ್ರಶ್ನೆಗಳಲ್ಲಿ ನಾವು ನೋವು ಇದ್ದೇ ಇದಯೆನ್ನಿ....'

"ಮತ್ತೆ ಪಾಕಿಸ್ತಾನ?'

"ಅದು ಚೀನೀಯ ಸೈತ್ಯಕ್ಕೆ ತಾಳ ಹಾಕುತ್ತ ಇದ...."

"ಅಂದ್ರೆ?'

"ಪೀಕಿಂಗ್ ರೇಡಿಯೋ ಭಾರತದ ವಿರುದ್ಧ ಸುಳ್ಳು ಸುದ್ದಿಗಳನ್ನು ಪ್ರಚಾರ ಮಾಡುತ್ತಿದೆ. ಅವನ್ನು ಪಾಕಿಸ್ತಾನ ದುರು ಪ್ರಸಾರ ಮಾಡುತ್ತದೆ...."

'ಅದು ಸರೀನ್ನಿ, ರಾಜಕೀಯ ಅಂದ್ರೆ ಹೀಗೇನೇ.... ಮತ್ತ ನೋಡಿ, ಯೂರೋ ಒದ್ರು....

"ಹ್ಞೂಂ...'

'ಯೂರೋ ರಾಜ್ಯವಾಲರು..."

'ಅಲ್ವೆ, ಉತ್ತರ ಪ್ರದೇಶ—ಕೇರಳಗಳ ರಾಜ್ಯಪಾಲರುಗಳಿದ್ದ ಹಿಂಬಿನ ಹೈದರಾಬಾದಿನ ಮುಖ್ಯಮಂತ್ರಿ ರಾಮಕೃಷ್ಣ ರಾಯರು ನಿಧನರಾದರಂತೆ...."

'ಓ, ನಾನು ಒಲ್ಲೊಮ್ಮೆ ಕಂಡಿದ್ದೆ ಅವರನ್ನ—ಕುಳ್ಳಗಿನ ಶರೀರ...."

'ನೀನು ಯಾರನ್ನು ಕಂಡಿಲ್ಲಿದ್ದೀ ಏನೋ!'

'ಆಶ್ಚರ್ಯ ಮೆಣಸು ಹಳಿಕರೆ ಜೋಳ ಕೆಂತ ಕಡೆ ಸಲ್ಲ ಏನ! ಇರ್ಲಿ. ಮತ್ತೆ ಬಿಹಾರದಲ್ಲಿ ಏನಾಯ್ತು?'

'ಬಂಗಲದ ಬದಲು ನೆರೆ....'

'ಜಲಪ್ರಳಯ....'

'ವತ್ತೆ?'

'ಯೂರವ್ರು....ಂಡಳ್ಳಾ ಮಂಡಳ್ಳಾರು ಪತ್ರ ಬೆಂಬಲಿಗರ ಉದ್ದನೆಯ ಪಟ್ಟಿ ನೀಡಿ ತನಗೆ ಸರಕಾರ ರಚಿಸಲು ಆಹ್ವಾನ ಕೊಡಬೇಕೆಂದು ರಾಜ್ಯಪಾಲರನ್ನು ಕೇಳಿ ಕೊಂಪ್ರಂತೆ....'

'ಓ, ಆ ಸಂಗತಿಯೆ? ನುಂಗಲ್ಲಿಗೆ ಅವಕಾಶವನು ನಿರಾಕರಿಸಲಾಗ್ತು....'

'ಹಾಂ?'ಯಂಗೆ?'

"ವಂಡಳ್ಳು ರಾಜ್ಯ ವಿಧಾನ ಸಭೆಗಳ ಸದಸ್ಯರಲ್ಲ. ಮತ್ತೆ ಅವರು ಮೊದಲ ಶರಕಾರದಲ್ಲಿದ್ದು ಹೊರ ಬಂದವರು—ಅವಯ 'ಆರು ತಿಂಗಳ' ನಿಶೇಷ ಅವಧಿಗೂ ನಾಲಾಯಕ್ಕ ಖ್ಯಂತ...."

'ಅಲ್ವಿ, ಅಷ್ಟು ಮಂದಿ ಸದಸ್ಯರ ಬೆಂಬಲವಿರುವಾಗ..."

'ಅಯ್ಯೋ, ಅದ್ರಲ್ಲೇನು? ಸರಕಾರದ ಮೇಲೆ ಅವಿಶ್ವಾಸ ಗೊತ್ತುವಳಿ ಮಂಜೂರು ಮಾಡಲಿ...ಆಗ ಪ್ರಜಾಸ್ವಭುತ್ವಕ್ಕೆ ಮನ್ನಣೆ ದೊರೆತೇ ದೊರೆಯ ಪ್ರಾಮಿ.ಅವು ಬಿಟ್ಟ ರಾಜ್ಯವಾಲರುಗಳಲ್ಲಿಯೂ ಬರೀ ಗಲ್ಲು ಎಬ್ಬಿಸುತ್ತ ಇನ್ರೆ ಹೇಗೆ?'

"ಪಾಪ, ಪುಂಡಲವ ಮಂಡೆ ಕಳಿಗಾಯ್ತು—'

"ಇಲ್ಲಾ, ಅವಿಗೆ ಬಿದ್ರೂ ಮೂಗು ಮೇಲೆ".

'ಅಂದ್ರೆ?"

"ಅವ್ರು ರಾಷ್ಟ್ರಪತಿಗಳಿಗೆ ದೂರು ಕೊಡ್ತಾರೆ."

"ಹ್ಞೂಂ... ತಲೆಯೆಲ್ಲಡಟ್ಟೆಗೆ ಪಟ್ಟೆ ವನು ಕಟ್ಟುವರೆ? ಅಂತ ಅಂದ ಹಾಗೆ ....."

'ಆಗಲಿ... ಮತ್ತೆ ನೋಡು,..."

"ಏನು ವಿಶೇಷ?'

'ಕಾಶರಗೋಡಿನ ಸಂಗತಿ....'

"ಬಿಡ್ರಿ.... ಅದು ನೀವಂದೆ ಹಾಗೇನೇ ಮಹಾಜನ ಆಯೋಗದ ನಡದಿಯ ಮೇಲಿನ ತೂಪ್ತಿ ನಿಶರಂಥಿ ಕಾಸರಗೋಡಿನ ಮೇಲೆ ಕೇರಳ ಸರಕಾರ ತೋರಿಸಿತ....'

'ಅಲ್ವೆ, ನಂಬಿದರಿಷ್ಟಾದರು ಕಾಸರಗೋಡನ್ನ ಕರ್ನಾಟಕಕ್ಕೆ ಕಂಡಿತ ಕೊಡುಪುದಲ್ಲ...'

"ಅಲ್ಲಿ, ಅದ್ನ ಕೊಡುಪುದೆಂತದು? ಅವರಪ್ಪ ಮಾಡುಟ್ಟಿ, ಅಸ್ತಿಯೇನು?'

"ಹಾಗಲ್ಲಾ ಅನ್ನಬಾರದು. ಕೇರಳ ಸರಕಾರ ಇದಕ್ಕೆ ಒಪ್ಪುವುದಿಲ್ಲ ಅಂತೆ..."

"ಅಲ್ಲಿ, ಕಾಸರಗೋಡಿನ ಜನ ತಮಗೆ ಕೇರಳ ಬೇಡ, ಕರ್ನಾಟಕ ಬೇಕು ಅನ್ನುವಾಗ..."

"ಅವರದು ಅನ್ನಬಹುದು. ಆದರೆ, ಸರಕಾರ ಅದನ್ನ ಒಪ್ಪುವಂತೆ ಮಾಡಬೇಕಲ್ಲ."

"ಯಾರು?"

"ಯಾರಿಗೆ ಬೇಕೋ ಅವರು..."

'ಅದೇ ಈಗ ಸ್ವಲ್ಪ ಬೇಕು ಅನ್ನುವವರು ಅಲ್ಪ ಸಂಖ್ಯಾಕರು. "ಬಂದ್" ಮಾಡಿ ಇದ್ದ ಅಲ್ಪ ಸಂಖ್ಯಾಕರ ಮೇಲೆ ಗೋಳಿಬಾರು ಮಾಡಿಸಲಿಲ್ಲವೇ ಕೇರಳ ಸರಕಾರ?...."

"ಅದಿಲ್ಲಾ ಯೋಚನೆ ಮಾಡಿದ್ರೆ ಅಲಿಗಿರ್ಸ್ ಆಂಡ ಪಿಯಗೆತ್ತ ಗಂಡ್ರಿ.... ನೀರನ ಕರಾಕ್ಕನ ಹಾರುವನ ಮೇಲೆ ತೋರಿಸಬಾರದಷ್ಟು...."

'ಹೀಗೆಯೇ ಜಿದ್ದಿ ಜೆಟ್ಟಕ್ಕೆ ಚಳಿ ರೂಢಂಪೆಯೇ ಸರಿ. ಅನುನಯ್ನೀತಿಯಲು ಹೆಚ್ಚಿ ಡವಿಲ್ಲಿಂದ ಕಾಣಬೇಕು?'

'ಅದಕ್ಕೇನಂತೆ? ಎಮರ್ಜೆನ್ಸಿ ಮೆರಿಕಾ ಗಯೇ, ಸ್ವರ್ಣ ಸಿಂಗ್ ರಶ್ಯಾಗಯೇ. ಎರಡೂ ತಣ್ಣಗಿನ ದೇಶಗಳು.

(ಹಿಂಭತ್ತನೇ ಪುಟ ನೋಡಿರಿ)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. No 439/1966

1. ಪದ್ಮನಾಭ ಅಂಡು 2. ಶ್ರೀನಿವಾಸ ಅಡಿಗ —ವಾದಿರು

ಮತ್ತು

1. ವೀರಂಗನ ಅಡಿಗ 2. ರಾಮ ಅಡಿಗ 3. ಪ್ರಭಾಕರ ಅಡಿಗ

4. ಮೈನರ್ ಶ್ರೀಧರ 5. ಮೈನರ್ ಜನಾರ್ದನ- ಮೈನರ್ ಗಂಡಿರಾಯ ತಂದೆ 1ನೇ ಪ್ರತಿವಾದಿ —ಪ್ರತಿವಾದಿರು.

1ನೇ ಪ್ರತಿವಾದಿಯ ರಾಮಪ್ಪ ಅಡಿಗರ ಮಗ, 2ರಿಂದ 5ನೇವರೆಗಿನವರು 1ನೇ ಪ್ರತಿವಾದಿ ಮಕ್ಕಳು. ಕುಂದಾಪುರ ತಾಲ್ಲೂ ನಂಬ್ರ 36ನೇ ಪಡಾಕರೆ ಗ್ರಾಮ, ಆಗ ಹಾಲಿ ಬೆಂಗಳೂರು ಚಾಮರಾಜಪೇಟೆ ರೋಡಾ ನಂಬ್ರ 66 ಎರಿನ ಮೈನ್ ರೋಡಿನಲ್ಲಿ ನಂಬ್ರ 18ರಲ್ಲಿ ಇರುತ್ತಾರೆ.

ಇವರಿಗೆ,—

ಪ್ರತಿವಾದಿರಾದ ನೀವು ಮತ್ತ 2ನೇ ವಾದಿ ವಗ್ಗರೊಳಗೆ ತಾರೀಕು 18—12—1959 ರಲ್ಲು ರಿಜಿಸ್ಟ್ರಿ ನಂಬಿ ಅಡಿ ವಿಭಾಗ ಪತ್ರದ ಮೇರಿಗೆ ನಿಮ್ಮಿಂದ 1ನೇ ವಾದಿಗೆ ಪಡಿಸಿದ 18ತೆರಿಕ್ಕೆ ಅರವತ್ತೊಂದ ಸಾವಿರ ರೂಪಾಯಿಗಳಿದ ಎಳಂಬ ಸಂಬಂಧ ವಾಪಸ್ಸಿಕೊಂಡೆ ಕಳಿಸಿದಾಖಲೆ ವನು ಸಂಬಂಧವಿರಿಸಿ ಬಿಂಬಿಕ್ಕೆ ಅಸಲು ಬಿನ ಮೂಡಾ ಬಾಯಿಯು ತಾರೀಕು 16ನೇ ಸಿಕ ನಿಂತ್ಯದ ಬದ್ಧಿ ಕೋರ್ಟು ಪಿರ್ಸ ಸಮ್ಮರಿ ಬಗ್ಗೆ ನಿಂತು. ಮೇಲೆ ಸೂಚಿತ ಮೇಲ್ಕಂಡ ಪಾಪಯು ನಿಂಮ ಹಾಜರಾತಿಯ ಬಗ್ಗೆ ತೀರ್ಪು 5—10—1967ಕ್ಕೆ ಅಯ್ತೆಗೆ ನಾವಿಗೆ ತಪ್ಪಿಗೆ ಯಿಡೋಯಾಗಿಯಿಂಥೆ. ಈ ಕಾರಿತು ನಿಮ್ಮ ಅಕ್ಕೀಪ ಇದ್ದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಈ ಕೋರ್ಟಿಗೆ ಮಾಂಡೆ ಹಾಜ್ರು ಆಗಿ ಜ್ಯಾಪೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು.

(ಕೋರ್ಟಿನ ಆಜ್ಞೆಯ ಪ್ರಕಾರ)

G. Ramakrishna Rao
B. A. L. L. B.,
Advocate, Coondapoor

ಕುಂದಾಪುರ, ತಾ. 18—9—1967

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ ಸಂತತಿ

ಜನನಿಗಳು ಸಾಧ್ಯವಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0—50 ಪೈಸೆ ಮಾತ್ರ.

0-60 ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ಪವಭಾರತ ಪುಸ್ತಕ ಭಂಡಾರ

ಪಾಲುಕೋಟೆ, ಉಡುಪಿ ದ. ಕ.

ಅರಬ - ಇಸ್ರೇಲ್ ಪೂರ್ವಣೆಯ ಹಿನ್ನೆಲೆ, ಪರಿಣಾಮ

ಲೇಖಕರು: ಶ್ರೀ ಕೆ. ಜಿ. ವಸಂತಮಾಧವ, ಎಂ. ಎ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬ್ರಿಟನರ ಪಾತ್ರ

ಪ್ಯಾಲೆಸ್ತೈನಿನಲ್ಲಿ ಅಧಿಕಾರ ನಡೆಸುತಿದ್ದ ಬ್ರಿಟಿಷರು ಚಾಣಾಕ್ಷತೆಯಿಂದ 1948ರ ವರೆಗೆ ಅಧಿಕಾರ ನಡೆಸಿಕೊಂಡು ಬಂದರು ಈ ಅವಧಿಯಲ್ಲಿ ಬ್ರಿಟಿಷರ ಧೋರಣೆ ಒಂದು ಸಲ ಅರಬರ ಪರವಾಗಿಯೂ ಇನ್ನೊಂದು ಸಲ ಜ್ಯೂಗಳ ಪರವಾಗಿಯೂ ಇರುತ್ತಿತ್ತು. ಜಗತ್ತಿನ ರಾಷ್ಟ್ರಗಳ ಒತ್ತಾಯದಿಂದಾಗಿ ಬ್ರಿಟಿಷ್ ಸರಕಾರವು ಈ ದಂಗೆಯನ್ನು ಹತ್ತಿಕ್ಕಲು ತೀಕ್ಷ್ಣ ಶ್ರಮವಹಿಸಿತು. ಆಲ್ಲಿನ ಸ್ಥಿತಿಗತಿಗಳನ್ನು ಅವಲೋಕಿಸಲು ಬ್ರಿಟಿಷ್ ಸರಕಾರವು ಒಂದು ಆಯೋಗವನ್ನು ನೇಮಿಸಿತು ಈ ದಂಗೆಗೆ ಬ್ರಿಟಿಷರೇ ಕಾರಣರೆಂಬ ಆರೋಪವನ್ನು ಕಳಕೊಂಡ ಅರಬರು ದುಸ್ಥಿತಿಯಲ್ಲಿರುವರೆಂದೂ ಈ ಸಮಿತಿ ವರದಿಮಾಡಿತು. ಈ ಘರ್ಷಣೆಯನ್ನು ನಿವಾರಿಸಲು ಸರಕಾರವು ಜ್ಯೂಗಳು ಪ್ಯಾಲೆಸ್ತೈನ್‌ಗೆ ವಲಸೆ ಬರುವುದನ್ನು ನಿರ್ಬಂಧಿಸಬೇಕೆಂದು ವರದಿ ಸೂಚಿಸಿತು. ಈ ವರದಿಯನ್ನು ಬ್ರಿಟಿಷ್ ಸರಕಾರವು ಅಂಗೀಕರಿಸಿ ಯಹೂದಿಗರು ವಲಸೆ ಬರುವುದನ್ನು ತಡೆಗಟ್ಟಿತು. ಇದರಿಂದ ಯಹೂದಿಗಳು ಕ್ರೋಧಗೊಂಡು ಬ್ರಿಟಿಷ್ ಸರಕಾರದ ವಿರುದ್ಧ ಬಂಡೆದ್ದರು. ಜಗತ್ತಿನ ಹಲವಾರು ಜುಯಿಷ ಸಂಸ್ಥೆಗಳು ಬ್ರಿಟಿಷ್ ಸರಕಾರಕ್ಕೆ ಬಲವಾದ ಪ್ರತಿಭಟನೆಯನ್ನು ವ್ಯಕ್ತ ಪಡಿಸಿದವು. ಹಲವಾರು ಜ್ಯೂ ಉದಾರಿ ಸಂಸ್ಥೆಗಳು ಬ್ರಿಟಿಷ್ ಸರಕಾರಕ್ಕೆ ನೀಡುತ್ತಿದ್ದ ಧನ ಸಹಾಯವನ್ನು ನಿಲ್ಲಿಸಿದವು. ಬ್ರಿಟಿಷ್ ಸರಕಾರದಲ್ಲಿರುವ ಜಿನೆಯಿಸ್ಟ್ ಧುರೀಣರು ಸರಕಾರವನ್ನು ತ್ಯಜಿಸಿದರು. ಇದರಿಂದ ಪರಿಸ್ಥಿತಿಯು ಮಸ್ತಷ್ಟು ಉಲ್ಬಣಗೊಂಡಿತು. ಈ ಪರಿಸ್ಥಿತಿಯು ಜ್ಯೂಗಳ ಮತ್ತು ಅರಬರ ಪ್ರತಿ ತ್ಯೇಕವಾದ ಸಂಘಟನೆಗೆ ಕಾರಣವಾಗಿ ಸಾಮೂಹಿಕ ಕೊಲೆಗಳು ನಡೆದವು. ಈ ಸಮಯದಲ್ಲಿ ಜರ್ಮನಿಯಲ್ಲಿ ಹಿಟ್ಲರ್ ನು ಅಧಿಕಾರಕ್ಕೆ ಬಂದು ತನ್ನ ದೇಶದಲ್ಲಿರುವ ಜ್ಯೂಗಳನ್ನು ಹಿಂಸಿಸತೊಡಗಿದರು. ಇದರಿಂದ ಅಸಂಖ್ಯಾತ ಯಹೂದಿಗಳು ಜರ್ಮನಿನ್ನು ಬಿಟ್ಟು ಯುರೋಪಿನ ಇತರ ದೇಶಗಳಿಗೆ ನಿರಾಶ್ರಿತರಾಗಿ ಹೊರಟರು. ಮಿತ್ರರಾಷ್ಟ್ರಗಳ ಒತ್ತಾಯದಿಂದಲೂ ಪ್ಯಾಲೆಸ್ತೈನಿನಲ್ಲಿ ಯಹೂದಿಯರ ಸಂಖ್ಯೆ ಯಚ್ಚಿಸುವ ಉದ್ದೇಶದಿಂದಲೂ ಬ್ರಿಟಿಷ್ ಸರಕಾರವು ಪ್ಯಾಲೆಸ್ತೈನಿನಲ್ಲಿದ್ದ ವಲಸೆ ಕಾನೂನನ್ನು ಸಡಿಲುಗೊಳಿಸಲು ಹಲವಾರು ಜ್ಯೂಗಳು ಪ್ಯಾಲೆಸ್ತೈನಿಗೆ ಬಂದು ನೆಲಸಿದರು. ಇದು ಅರಬರಿಗೆ ಸಹಿಸಲಾಗಲಿಲ್ಲ. ಅರಬರು ಸಂಘಟಿತರಾಗಿ ಯಹೂದಿಗಳನ್ನು ಹಿಂಸಿಸಲಾರಂಭಿಸಿದರು. ಇದಕ್ಕೆ ಯಹೂದಿಗಳ ಪ್ರತಿಕ್ರಿಯೆ ಅಷ್ಟೇ ಹಿಂಸಾತ್ಮಕವಾಗಿತ್ತು.

ಸಮುಕ್ತ ಪಾಲೆಸ್ತೈನ್‌ನ್ನು ಒಂದುಗೂಡಿಸಿ ಪ್ರಜಾತ್ಮಕ ಜವಾಬ್ದಾರಿ ಸರಕಾರ ಸ್ಥಾಪಿಸುವ ಉದ್ದೇಶದಿಂದ ಅರಬ್ ಉಚ್ಚ ಸಮಿತಿ 1936ರಲ್ಲಿ ರಚಿತವಾಯಿತು. ಆದರೆ ಇದು ಜ್ಯೂ ಸಂಸ್ಥೆಯ ಸಂಘಟನೆಗಿಂತ ದುರ್ಬಲವಾಗಿತ್ತು. ಅರಬರ ಈ ಸಂಸ್ಥೆಯೇ 1945ರಲ್ಲಿ ಅರಬ್ ಲೀಗ್‌ಗಾಗಿ ಪರಿಣಮಿಸಿತು. ಈ ಪರಿಸ್ಥಿತಿಯಲ್ಲಿ ಬ್ರಿಟಿಷ್ ಸರಕಾರ ಇಕ್ಕಟ್ಟಿನ ಸ್ಥಿತಿಯನ್ನು ಪರಿಶೀಲಿಸಲು ಪೀಲ್‌ನ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಅರಬರು ಮತ್ತು ಜ್ಯೂಗಳ ಆಒಪ್ಪಂದ ಅಸಾಧ್ಯವಾದುದರಿಂದ ಪ್ಯಾಲೆಸ್ತೈನ್‌ನ್ನು ವಿಭಜಿಸಬೇಕೆಂದು ಈ ಸಮಿತಿ ಶಿಫಾರಸು ಮಾಡಿತು. ಈ ವರದಿಯನ್ನು ಜ್ಯೂಗಳು ಅನುಮೋದಿಸಿದರು. ಆದರೆ ಅರಬರು ಇದನ್ನು ಕಟುವಾಗಿ ವಿರೋಧಿಸಿ ಭೀಕರ ರೀತಿಯಲ್ಲಿ ಬ್ರಿಟಿಷ್ ಮತ್ತು ಜ್ಯೂಗಳ ವಿರುದ್ಧ ದಂಗೆ ಎದ್ದರು. ಬ್ರಿಟಿಷ್ ಸರಕಾರವು ಅರಬರ ಉಚ್ಚ ಸಮಿತಿಯನ್ನು ನ್ಯಾಯಬಾಹಿರವೆಂದು ಸಾರಿ, ಅದರ ಧುರೀಣರನ್ನು ದೇಶದಿಂದ ಗಡಿಪಾರು ಮಾಡಿ, ಅರಬರ ದಂಗೆಯನ್ನು ಕ್ರೂರ ರೀತಿಯಲ್ಲಿ ಹತ್ತಿಕ್ಕಿ ಯಶಸ್ಸು ಪಡೆಯಿತು.

ಆದರೆ ಪೀಲ್ ವರದಿಯನ್ನು ಜ್ಯಾರಿ ಮಾಡುವ ಸಾಹಸವನ್ನು ಬಿಟ್ಟಿತ್ತು. ವುಡ್‌ಹೆಡ್‌ನ ನೇತೃತ್ವದಲ್ಲಿ ಇನ್ನೊಂದು ಸಮಿತಿಯನ್ನು ಬ್ರಿಟಿಷ್ ಸರಕಾರವು ನೇಮಿಸಿತ್ತು. ಈ ಸಮಿತಿಯು, ಪ್ಯಾಲೆಸ್ತೈನ್‌ನ ವಿಭಜನೆ ಕಾರ್ಯಸಾಧ್ಯವೆಂತಲೂ, ಜ್ಯೂ ಮತ್ತು ಪ್ಯಾಲೆಸ್ತೈನ್‌ನ ಅರಬರ ಧುರೀಣರ ಸಂಯುಕ್ತ ಸಮ್ಮೇಳನವನ್ನು ಲಂಡನ್ನಿನಲ್ಲಿ ಕರೆಯಬೇಕೆಂದೂ ಶಿಫಾರಸು ಮಾಡಿತು. ಈ ಸಮ್ಮೇಳನವನ್ನು ಅರಬರೂ ಜ್ಯೂಗಳೂ ಬಹಿಷ್ಕರಿಸಿದರು. ಇದರಿಂದ ಬ್ರಿಟಿಷ್ ಸರಕಾರವು ಕೇ ಸರಗೊಂಡು ತನ್ನ ಧೋರಣೆಯನ್ನು ಇದಾದ ಎರಡು ತಿಂಗಳ ನಂತರ ಸಾರಿತು. ಅವರ ಧೋರಣೆ ಈ ರೀತಿಯಲ್ಲಿದೆ –

1) ಹತ್ತು ವರ್ಷಗಳಲ್ಲಿ ಸ್ವತಂತ್ರವಾದ ಪ್ಯಾಲೆಸ್ತೈನ್‌ನ್ನು ಸ್ಥಾಪಿಸುವುದು.

2) ಆ ರಾಷ್ಟ್ರದಲ್ಲಿ ಅರಬರು ಮತ್ತು ಜ್ಯೂಗಳು ಪರಸ್ಪರ ಹಕ್ಕು ಭಾದ್ಯತೆಗಳಿಗೆ ತಡೆ ಬಾರದಂತೆ ಸರಕಾರದಲ್ಲಿ ಭಾಗವಹಿಸಬೇಕು. ಈ ಅವಧಿಯಲ್ಲಿ ಬ್ರಿಟಿಷ್ ಸರಕಾರಕ್ಕೆ ಎರಡು ಜನಾಂಗದವರು ಸಹಕಾರ ನೀಡಬೇಕು ಮತ್ತು ಐದು ವರ್ಷಗಳೊಳಗೆ ಅರಬರಿಂದ ಮತ್ತು ಜ್ಯೂಗಳಿಂದ ಕೂಡಿದ ಘಟನಾ ಸಮಿತಿಯನ್ನು ಬ್ರಿಟಿಷರು ಪ್ಯಾಲೆಸ್ತೈನಿನಲ್ಲಿ ಸ್ಥಾಪಿಸುವರು.

ಜ್ಯೂಗಳು ಪ್ಯಾಲೆಸ್ತೈನ್‌ಗೆ ವಲಸೆ ಬರುವುದನ್ನು ಬ್ರಿಟಿಷ್ ಸರಕಾರವು 5 ವರ್ಷದ ನಂತರ ನಿರ್ಬಂಧಿಸುವುದು. ಈ ಧೋರಣೆಯನ್ನು ಅರಬ ವಕ್ತು ಜ್ಯೂಗಳು ಬಲವಾಗಿ ವಿರೋಧಿಸಿದರು. ಯಹೂದ್ಯರು ಬ್ರಿಟಿಷರ ನಿರ್ಧಾರವನ್ನು ಪ್ರಶ್ನಿಸಿ ಜನಾಂಗ ಸಂಘಕ್ಕೆ ದೂರನ್ನು ಒಯ್ದರು. ಆಷ್ಟರಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾದುದರಿಂದ ಜ್ಯೂಗಳ ಸಮಸ್ಯೆ ಪರಿಹಾರವಾಗಲಿಲ್ಲ.

ಇಸ್ರೇಲಿಯ ಉದಯ

ಎರಡನೆಯ ಮಹಾಯುದ್ಧದಲ್ಲಿ ಅರಬರು ಹೆಚ್ಚಿನ ಆಸಕ್ತಿ ತೋರಲಿಲ್ಲ. ಜ್ಯೂಗಳು ಮಾತ್ರ ಒಳ್ಳೆಯ ಮುಂಜೋರಣೆಯಿಂದ ಮಿತ್ರರಾಷ್ಟ್ರಗಳಿಗೆ ಸಂಪೂರ್ಣ ನೆರವಾದರು. 1942ರಲ್ಲಿ ಪ್ಯಾಲೆಸ್ತೈನಿನ ಜ್ಯೂಗಳ ಮುಖಂಡ ಬೆನ್‌ಗುರಿಯನ್ ಅವರಿಂದ ಸಂದರ್ಶಿಸಿ ಹೊಸರಾಷ್ಟ್ರ ನಿರ್ಮಾಣಕ್ಕೆ ಅಲ್ಲಿ ಅನುಕೂಲವಾತಾವರಣ ನಿರ್ಮಿಸಿದ್ದಲ್ಲದೇ ಅಲ್ಲಿಯ ಸಿರಿವಂತ ಜ್ಯೂಗಳಿಂದ ಆಪಾರ ಶಕ್ತಿಯ ಬೆಂಬಲವನ್ನು ಗಳಿಸುವಲ್ಲಿ ಯಶಸ್ವಿಯಾದನು.

1945ರ ಸಮಯದಲ್ಲಿ ಎರಡು ಜನಾಂಗದವರು ತಮ್ಮ ತಮ್ಮ ಸೈನ್ಯಗಳನ್ನು ರಹಸ್ಯವಾಗಿ ರಚಿಸಿಕೊಂಡಿದ್ದರು. ಯುದ್ಧಾನಂತರದಲ್ಲಿ ಅರಬರು ಜ್ಯೂಗಳಿಬ್ಬರೊಳಗೆ ಪರಸ್ಪರ ಒಪ್ಪಿಗಯೊಂದಿಗೆ ಈ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಲು ಬ್ರಿಟಿಷ್ ಸರಕಾರವು ಮಾಡಿದ ಯತ್ನವು ನಿಷ್ಫಲವಾಯಿತು. ಆಷ್ಟರಲ್ಲಾಗಲೇ ಜ್ಯೂಗಳ ಭೂಗತ ಚಟುವಟಿಕೆಗಳು ಹೆಚ್ಚತೊಡಗಿದವು. ಈ ಸಮಯದಲ್ಲಿ ಅಮೇರಿಕವೂ ಪ್ಯಾಲೆಸ್ತೈನಿನ ವಿಷಯದಲ್ಲಿ ಆಸಕ್ತಿಯನ್ನು ವಹಿಸತೊಡಗಿತು ಮಾತ್ರವಲ್ಲದೆ ಒಂದು ಲಕ್ಷ ನಿರಾಶ್ರಿತ ಯಹೂದಿಗಳನ್ನು ಪ್ಯಾಲೆಸ್ತೈನಿಗೆ ನೆಲಸಲು ಅನುಮತಿ ಕೊಡಬೇಕೆಂದು ಬ್ರಿಟಿಷ್ ಸರಕಾರವನ್ನು ಒತ್ತಾಯಿಸಿತು. ಇದಲ್ಲದೆ ಈ ಸಮಯದಲ್ಲಿ ಅಮೇರಿಕನರಿಂದ ಒಳಗೊಂಡಿದ್ದ ಆಂಗ್ಲೋ-ಅಮೇರಿಕನ್ ಸಮಿತಿಯು ಪ್ಯಾಲೆಸ್ತೈನ್‌ನಲ್ಲಿ ಒಕ್ಕೂಟ ಸರಕಾರವನ್ನು ರಚಿಸಬೇಕೆಂದೂ, ಒಕ್ಕೂಟದ ಒಳಗಿರುವ ಪ್ರಾಂತ್ಯಗಳಲ್ಲಿ ಸ್ವಾಯತ್ತತೆ ಇರಬೇಕೆಂದೂ ನಿರ್ಧರಿಸಿದವು. ಈ ಸೂಚನೆಯಿಂದ ಅರಬ-ಜ್ಯೂಗಳ ಸಮಸ್ಯೆ ತೀರ್ಮಾನವಾಗಲಿಲ್ಲ. ಇದರಿಂದ ಬ್ರಿಟನ್ ಜಿಗುಪ್ಸೆಗೊಂಡು ತಾನು ಈ ಪ್ರದೇಶದಿಂದ ಹಿಂದೆ ಸರಿಯುವುದಾಗಿ ಸಾರಿ ಈ ಪ್ರಶ್ನೆಯನ್ನು ಯುಕ್ತರಾಷ್ಟ್ರ ಸಂಘಕ್ಕೆ ಒಪ್ಪಿಸಿತು. ಯುಕ್ತರಾಷ್ಟ್ರ ಸಂಘದ ವಿಶೇಷ ಸಮಿತಿಯು ಪ್ಯಾಲೆಸ್ತೈನ್‌ನ್ನು ವಿಭಜಿಸಬೇಕೆಂದು ನಿರ್ಣಯಿಸಿತು. ಈ ನಿರ್ಣಯವನ್ನು ಅರಬ ರಾಷ್ಟ್ರಗಳು ಬಲವಾಗಿ ವಿರೋಧಿಸಿದುವು ಈ ನಿರ್ಣಯವನ್ನು ಜಾರಿಗೆ ತರಬಹುದೆಂದು ನಿರ್ಧರಿಸಿ ಅದನ್ನು ಕಡೆಯಲು ಪ್ರಯತ್ನಿಸಿದರು. ಬ್ರಿಟಿಷರು 1948ನೇ ಮೇ 12ರಂದು ಪ್ಯಾಲೆಸ್ತೈನ್‌ನಿಂದ ಕಾಲ್ತೆಗೆದರು. ಅರಬ ಲೀಗ್, ಪ್ಯಾಲೆಸ್ತೈನಿನ ಅರಬರ ಸಹಾಯಕ್ಕೆ ಬರಬೇಕೆಂದು ಸಿದ್ಧವಾಗುವ ಹೊತ್ತಿಗಾಗಲೇ ಜ್ಯೂಗಳು ತ

(ನಂತರದ ಸಂಚಿಕೆಯಲ್ಲಿ ನೋಡಿರಿ)

ಆಕೆಯ ಅಮೂಲ್ಯ ನಿಧಿ
—ಸಿಂಡಿಕೇಟಿನ ಪಾಸ್ ಬುಕ್

ಸಿಂಡಿಕೇಟ್ ಬ್ಯಾಂಕಿನಲ್ಲಿ ಈ ಕಿರಿಯ ಬಾಲಿಕೆ
ತೆರೆದಿರುವ ಉಳಿತಾಯ ಖಾತೆ ಆಕೆಗೆ ಭಾಷಣ-
ಪ್ರಾಯವನಿಸಿದೆ. ಆಕೆಯ ಹೆಸರಿನಲ್ಲಿರುವ
ಬ್ಯಾಂಕಿನ ಪಾಸ್ ಬುಕ್ ಆಕೆಗೆ ಅಮೂಲ್ಯ ನಿಧಿಯೂ
ಹೌದು. ಸಿಂಡಿಕೇಟ್ ಬ್ಯಾಂಕು ಬೇವಲ ಆಕೆಯ
ತಂದೆಯ ಬ್ಯಾಂಕಲ್ಲ. ಆಕೆಯದು ಕೂಡಾ.

ಹಣವನ್ನು ಕೂಡಿಡುವ ಪರಿವಾರ ಆಕೆಗೆ ಎಸ್ಟು
ಪ್ರೀತ್ಯಾಸ್ಪದವೋ ಅಷ್ಟೇ ಪ್ರೀತ್ಯಾಸ್ಪದ
ಹಣವನ್ನು ತನ್ನ ಬ್ಯಾಂಕ್
ಖಾತೆಯಲ್ಲಿ ಜಮೆಮಾಡುವುದು ಆಕೆಗೆ ಅಷ್ಟೇ
ಪ್ರಿಯವಾದುದು ಏಕೆಂದರೆ ಬ್ಯಾಂಕಿನಲ್ಲಿ ಆಕೆ
ಸಂಧಿಸುವ ಮಾಂದಿಯ ಸ್ನೇಹ-ವಿಶ್ವಾಸಗಳಿಂದಾಗಿ
ಆ ಬ್ಯಾಂಕು ಕೂಡಾ ಆಕೆಗೆ ಪ್ರಿಯ ವೆನಿಸಿದೆ.

ಎಳೆ ವಯಸ್ಸಿನಲ್ಲಿ ನಿಮ್ಮ ಮಕ್ಕಳ ಹೆಸರಿನಲ್ಲಿ
ಸಿಂಡಿಕೇಟ್ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು
ತೆರೆದು ಅವರಲ್ಲಿ ಬ್ಯಾಂಕಿಂಗ್ ಪರಿಜ್ಞಾನವನ್ನು
ಮೂಡಿಸಲು ನೆರವಾಗಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಗಣೇಶ ಪೂಜೆಯ ಆಗು-ಹೋಗುಗಳು ಎಲ್ಲಿಂದ ಎಲ್ಲಿಯ ತನಕ?

ಲೇಖಕರು: ಪಂಡಿತ ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಅತಿ ಪುರಾತನವಾದ ಒಂದು ಕಾಲದಲ್ಲಿ ಮಾನವ ಸಮುದಾಯ ತನ್ನ ಇಚ್ಛಿತ ಕಾರ್ಯಸಿದ್ಧಿಗಾಗಿ 'ಏಡ್ರಾಣಿ ಬಲಿ' ಮತ್ತು 'ಪ್ರೇತ ಪೂಜೆ' ಮೊದಲಾದ ಪೂಜಾ ವಿಧಾನಗಳನ್ನು ಮೊದಲು ಕೈಕೊಳ್ಳುತ್ತಿತ್ತು. ಕಾಲ ಪರಿವರ್ತನೆಯೊಂದಿಗೆ ಈ ಪದ್ಧತಿಯೂ ಬದಲಾವಣೆ ಹೊಂದಿತು. ವಿಘ್ನೇಶ್ವರನೇ ಜಗತ್ತಿನಲ್ಲಿ ಪ್ರತಿಯೊಂದು ಕಾರ್ಯವನ್ನು ನಿರ್ವಿಘ್ನ ಗೊಳಿಸುವವನೆಂಬ ನವೀನ ಭಾವನೆ ಪ್ರಾದುರ್ಭಾವವಾದಂದಿನಿಂದ ಪ್ರತಿಯೊಂದು ಮಂಗಲಕಾರಕ ಕಾರ್ಯಕಲಾಪಗಳಲ್ಲಿ ಮೊಟ್ಟಮೊದಲು ಗಣಪತಿ ದೇವರಿಗೆ ಪ್ರಥಮ ಅಗ್ರ ಪೂಜೆ ಸಲ್ಲಿಸುವ ಪರಿಪಾಠ ಪ್ರಾರಂಭವಾಯಿತು. ಇದರಂತೆ ಪ್ರತಿ ಸಂದರ್ಭದಲ್ಲಿಯೂ "ಶ್ರೀ ಗಣೇಶಾಯನಮಃ" ಎಂಬ ಸ್ತುತಿಪಾಠ ಬಳಕೆಗೆ ಬಂತು. ಈ ಮಂತ್ರದ ಹೊರತು ಯಾವ ಕಾರ್ಯವೂ ಪ್ರಾರಂಭಿಸಲ್ಪಡುವುದಿಲ್ಲ.

ಶ್ರೀ ಗಣೇಶನ ಉಪಾಸನೆ ಹಿಂದೂ ಸ್ಥಾನದಲ್ಲಿ ಮಾತ್ರವಲ್ಲ ವಿದೇಶಗಳಲ್ಲಿಯೂ ರೂಢಿಯಲ್ಲಿದೆ; ಆದರೆ ಅದು ಏಕ ಪ್ರಕಾರವಾಗಿರದೆ ಒಂದೊಂದು ದೇಶದಲ್ಲಿ ಬೇರೆ ಬೇರೆ ವಿಧಾನದಲ್ಲಿ ಆಚರಿಸಲ್ಪಡುತ್ತಿದೆ. ಭಾರತದ ನೆರೆ ರಾಜ್ಯ ನೇಪಾಲದಲ್ಲಿ ಗಣೇಶನನ್ನು "ಸೂರ್ಯವಿನಾಯಕ" ಎಂಬ ಹೆಸರಲ್ಲಿ ಪೂಜಿಸುತ್ತಾರೆ. ಚೈನಾ ದೇಶದಲ್ಲಿ ಕೇವಲ "ವಿನಾಯಕ" ಎಂದೇ ಪೂಜೆಯಾಗುತ್ತಿದೆ. ಬರ್ಮಾ ಜನರು "ಮಹಾವಿಘ್ನೇಶ್ವರ" ಎಂದು ಪೂಜೆ ಮಾಡುತ್ತಾರೆ. ಯೂನಾನ್ ಮತ್ತು ಇಜಿಪ್ತಿನಿಯಲ್ಲಿ ಗಣೇಶನ ಆರಾಧನೆ "ಹರ" ಎಂಬ ಹೆಸರಲ್ಲಿ ಆಗುತ್ತದೆ. ಈ ಪ್ರಕಾರ ಸಕಲ ವ್ಯವಸ್ಥಿತ ಸಿದ್ಧಿಗಾಗಿ ವಿಶ್ವವಾದ್ಯಂತ ಬೇರೆ ಬೇರೆ ರೀತಿಯಲ್ಲಿ ಗಣೇಶನ ಪೂಜೆ ಪ್ರಚಲಿತವಾಗಿದೆ. ದೇವತೆಗಳು ಸಹ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಅವನನ್ನು ಪೂಜಿಸಿದ ಕುರಿತು ನೂರಾರು ಪೌರಾಣಿಕ ಕಥೆಗಳೂ ರೂಢಿಗೆ ಬಂದಿರುತ್ತವೆ.

"ಗಣೇಶನು ರುದ್ರಗಣಗಳ ಅಧಿಪತಿ; ಆದುದರಿಂದ ಸಕಲ ಕಾರ್ಯಾರಂಭಕ್ಕೆ ಮೊದಲು ಗಣೇಶ ಪೂಜೆ ಮಾಡದಿದ್ದರೆ ಯಾವ ಕಾರ್ಯವೂ ಸಿದ್ಧಿಸಲಾರದು. ಎಂಬ ಭಾವನೆ ಜನ ಸಾಮಾನ್ಯರಲ್ಲಿ ದೃಢ ನಂಬಿಕೆಯಾಗಿದೆ. ಪುರಾತನ ಕಾಲದಲ್ಲಿ ಪೂರ್ವ ಆಸ್ಯಾಖಂಡದ ಕೆಲವು ದೇಶಗಳಲ್ಲಿಯೂ ಗಣೇಶ ಪೂಜೆ ಪ್ರಚಲಿತದಲ್ಲಿತ್ತು.

ಗಣೇಶ ಜನ್ಮ ಹೇಗಾಯಿತು?

ಇಷ್ಟೊಂದು ಸರ್ವವ್ಯಾಪಕ ರೂಪದಲ್ಲಿ ಗಣೇಶನ ಆರಾಧನೆ ಆಗುತ್ತಿರುವುದಾದರೂ ಈ "ಗಣೇಶನು" ಹೇಗೆ ಹುಟ್ಟಿದನು ಎಂಬುದರ ವಾಸ್ತವಿಕ ಇತಿಹಾಸ ಈ ತನಕ ಯಾರೊಬ್ಬರೂ ನಿರ್ದಿಷ್ಟವಾಗಿ ಕಂಡು ಹಿಡಿಯಲಿಲ್ಲವೆಂದರೆ ತಪ್ಪಾಗದು. ಇದಕ್ಕೆ ದೊಡ್ಡ ಪುರಾಣವೆಂದರೆ ಒಬ್ಬನೇ ಗಣೇಶನ ಹುಟ್ಟು ಮತ್ತು ಬೆಳವಣಿಗೆ ಮತ್ತು ತಪ್ಪಿದ ಕುರಿತು ಬೇರೆ, ಬೇರೆ ರೀತಿಯ ಕಥೆಗಳಿವೆ. ಅಷ್ಟಾದಶ ಪುರಾಣಗಳಲ್ಲಿಯಷ್ಟೆ ಈ ಕುರಿತು ಒಮ್ಮತ ಕಂಡು ಬರುವುದಿಲ್ಲ.

ಒಂದು ಪುರಾಣದಲ್ಲಿ "ಈ ಗಣಪತಿಯು, ವಿನಾಯಕ—ಲಂಬೋದರ ಅರುಣ ವರ್ಣದ ಉದರಂಭರ" ಎಂದು ಕರೆಯಲ್ಪಡುತ್ತಿದ್ದನು; ಇವನ ತಲೆಯನ್ನು "ಸಿಂದೂರ"ನೆಂಬ ಒಬ್ಬ ರಾಕ್ಷಸನು ಕತ್ತರಿಸಿ ಬಿಟ್ಟಿದ್ದನು. ಕೊನೆಗೆ ದಂಡಕಾರಣ್ಯದ ಈ ವಿನಾಯಕನನ್ನು ತಾನೇ ಸ್ವತಃ "ಗಜಾಸುರ" ನೆಂಬ ದೈತ್ಯನನ್ನು ವಧಿಸಿ ಅವನ ತಲೆಯನ್ನು ತನ್ನ ಮುಂಡಕ್ಕೆ ಸೇರಿಸಿಕೊಂಡನು. ಅಂದಿನಿಂದ ಇವನು "ಗಜಮುಖಿ" ನೆಂದು ಆರಾಧಿಸಲ್ಪಡತೊಡಗಿದನು." ಎಂಬ ಉಲ್ಲೇಖವಿದೆ. "ಗಣೇಶನ ತಲೆ ಶನಿಯ ದೃಷ್ಟಿಯಿಂದ ಕತ್ತರಿಸಲ್ಪಟ್ಟಿತ್ತು. ಅದು ಹೀಗೆ: ಇವನ ಜನನ ಕಾಲದಲ್ಲಿ ಸಮಸ್ತ ದೇವ, ದೇವತೆಗಳು ಬಂದಿದ್ದರು ಆದರೆ "ಶನಿ" ದೇವರು ಬಂದಿರಲಿಲ್ಲ; ಕಾರಣವೇನೆಂದರೆ "ಹಾನ ನವಜಾತ ಶಿಶುವಿಗೆ ಶನಿಯ ದೃಷ್ಟಿ ಬೀಳುತ್ತದೋ ಶಿಶುವು ಅವಸಾನ ಹೊಂದುವುದು" ಎಂಬ ಒಂದು ಶಾಪ ಶನಿಯು ಮೇಲೆ ಇದೆ. ಆದುದರಿಂದಾಗಿ ಗಣಪತಿಯ ಜನ್ಮೋತ್ಸವಕ್ಕೆ ಶನಿ ತಾನಾಗಿ ಬರಲಿಲ್ಲ. ಆದರೆ ಪಾರ್ವತಿ ತನ್ನ ಹಟ ಬಿಡದೆ ಅಗ್ರಹಪೂರ್ವಕ ಕರೆಸಿಕೊಂಡಳು. ಆ ಪ್ರಕಾರ ಶನಿ ಆ ಸಮಾರಂಭಕ್ಕೆ ಬಂದು ಶಿಶುವನ್ನು ನೋಡಿದ ಕೂಡಲೇ ಆದರ ತಲೆ ಕತ್ತರಿಸಲ್ಪಟ್ಟಿತು. ಆ ಕೂಡಲೇ ಮಹಾವಿಷ್ಣು ಒಂದು ಆನೆಯ ತಲೆ ಕಡಿದು ಶಿಶುವಿಗೆ ಜೋಡಿಸಿದನು." ಈ ಪ್ರಕಾರ ಗಣೇಶನಿಗೆ ಆನೆಯ ತಲೆಯಾಯಿತು." ಈ ಕಥೆ "ಬ್ರಹ್ಮವೈವರ್ತ ಪುರಾಣ"ದಲ್ಲಿದೆ.

"ದೇವತೆಗಳ ವಿಶೇಷ ಅಗ್ರಹದ ಮೇರೆಗೆ ಶಂಕರನು ತನ್ನ ತೇಜೋಭರಿತವಾದ ಮುಖವನ್ನು ಉಮಾದೇವಿಯು ಕಡೆಗೆ ತಿರುಗಿಸಿ ರೆಪ್ಪೆ ಮುಚ್ಚದೆ ನೋಡಿದನು. ಆ ಕ್ಷಣದಲ್ಲಿ ಉಮೆಯ ಬಾಯಿಯಿಂದ ಒಂದು ಸುಂದರವಾದ ಮತ್ತು ಅತಿ ಮನೋಹರವಾದ ಒಬ್ಬ ಸುಕುಮಾರನ ಉತ್ಪತ್ತಿಯಾಯಿತು. ಮನ ಮೋಹಕವಾದ ಆ ರೂಪವನ್ನು ಕಂಡು ಸಮಸ್ತ ದೇವಿ ದೇವತೆಗಳು ಮೋಹಿತರಾಗಿ ಬಿಟ್ಟರು. ಇದನ್ನು ತಿಳಿದ ಭವಾನಿದೇವಿ ಅತ್ಯಂತ ಕ್ರೋಧಗೊಂಡು ಆ ರೂಪವಂತ ಸುಕುಮಾರನಿಗೆ 'ನೀನು ಆನೆಯ ಮುಖವುಳ್ಳವನಾಗಿ ದೊಡ್ಡ ಗಾತ್ರದ ಹೊಟ್ಟೆಯವನಾಗಿ ಪರಿಣಮಿಸು" ಎಂಬುದಾಗಿ ಶಪಿಸಿಬಿಟ್ಟಳು. ಮತ್ತೊಂದು ಕಡೆಯಿಂದ 'ಶಂಕರನು' ನೀನು ನನ್ನ ಸಮಸ್ತ ಗಣಗಳಲ್ಲಿ ಪ್ರಮುಖ ಸ್ಥಾನದಲ್ಲಿದ್ದು ಜಗತ್ತಿನ ಸಕಲ ಮಂಗಲಕಾರ್ಯಗಳಲ್ಲಿ ಸರ್ವ ಪ್ರಥಮ ಅಗ್ರ ಪೂಜೆ ಪಡೆಯುವಂತೆ ಆಶೀರ್ವದಿಸಿದನು." ಎಂಬ ಮಹಾವರ ಪ್ರಸಾದವನ್ನಿತ್ತನು." ಈ ಕಥೆ "ವಾರಾಹ ಮಹಾ ಪುರಾಣ"ದಲ್ಲಿದೆ. ಇಂತಹ ಪರಸ್ಪರ ವಿರೋಧಾಭಾಸವುಳ್ಳ ಗಣೇಶ ಜನ್ಮ ವೃತ್ತಾಂತ ನೂರಾರು ಗ್ರಂಥಗಳಲ್ಲಿ ಅಸಂಬದ್ಧವಾಗಿ ವಿವರಿಸಲ್ಪಟ್ಟಿದೆ. ಲೇಖನ ವಿಸ್ತಾರದ ಭಯದಿಂದ ನಾವು ಮೂರು ಪುರಾಣಗಳ ಉದಾಹರಣೆಗಳನ್ನೂ ಮಾತ್ರ ಪಾಠಕರ ಮುಂದಿರಿಸಿದ್ದೇವೆ.

ಪೌರಾಣಿಕ ಕಥೆಗಳ ಹೊರತು ಲೌಕಾಚಾರ ಯುಕ್ತವಾದ ಒಂದು ದಂತ ಕಥೆ ಹಿಂದೂಗಳ ಪ್ರತಿಯೊಂದು ಮನೆಯಲ್ಲಿ ಹೆಂಗಸರಿಗೆ ನಿತ್ಯ ಸ್ಮರಣೆಯಲ್ಲಿದೆ. ಆ ಕಥೆ ಸಹ ಬಹಳ ವಿಚಿತ್ರತರದಲ್ಲಿದೆ. ಒಂದು ದಿನ ಪಾರ್ವತಿ ದೇವಿ ಸ್ನಾನಕ್ಕೆ ಹೋಗುವಾಗ ತನ್ನ ಶರೀರದಲ್ಲಿ ಅಂಟಿಕೊಂಡಿದ್ದ ಬೆವರನ್ನ ಮುದ್ದೆ ತೆಗೆದು ಅದರಿಂದ ಒಂದು ಮಾನವ ಮೂರ್ತಿಯನ್ನ ಮಾಡಿ ಅದಕ್ಕೆ ಜೀವ ಶಕ್ತಿ ಕೊಟ್ಟ ಮನೆಯ ದ್ವಾರದಲ್ಲಿ ನಿಲ್ಲಿಸಿ "ನಾನು ನನ್ನ ಸ್ನಾನ ತೀರಿಸಿ ಬರುವವರೆಗೆ ಯಾರೊಬ್ಬರನ್ನು ಕೂಡಾ ಒಳಗೆ ಪ್ರವೇಶಿಸಲಿಕ್ಕೆ ಬಿಡಕೂಡದು" ಎಂದು ಕಟ್ಟಪ್ಪಣೆ ಮಾಡಿ ಸ್ನಾನಕ್ಕೆ ಹೋದಳು. ಸ್ವಲ್ಪ ಹೊತ್ತು ಕಳೆದ ಮೇಲೆ ಶಂಕರನು ಅದೆಲ್ಲಿಗೋ ಹೊರಗೆ ಹೋದವನು ಬಂದು ಮನೆಯೊಳಗೆ ಪ್ರವೇಶ ಮಾಡುವಾಗ ದ್ವಾರದಲ್ಲಿದ್ದವನು ಬಲವಾಗಿ ಆತಂಕಪಡಿಸಿದನು. ಕೂಡಲೇ ಶಂಕರನಿಗೆ ಸಿಟ್ಟು ಕಡೆಯದಾಯಿತು. ಅವನು ಈ ಹುಡುಗನನ್ನು ಮನೆ ದ್ವಾರದಿಂದ ತೊಲಗಿಸಲು ಮೊದಲಾಗಿಯಾಮ, ಇಂದ್ರ ಮೊದಲಾದವರಿಗೆ ಆದೇ ಶವಿತ್ತನು. ಆದರೆ ಅವರೆಲ್ಲರೂ ಈ ಹುಡುಗನೊಡನೆ ಹೋರಾಡಿ ಕ್ಷಣಾರ್ಧದಲ್ಲಿ ಖಂಡಾಶಿರರಾದರು. ಆ ಕೂಡಲೇ ಶಂಕರನು ತನ್ನ ತ್ರಿಶೂಲದಿಂದ ಅವನ ತಲೆಯನ್ನು ಕತ್ತರಿಸಿ ಹಾರಿಸಿ ಬಿಟ್ಟನು.

ಶಂಕರನು ಅಂತಃಪುರದೊಳಗೆ ಹೋದಾಗ ಅಲ್ಲಿ ಊಟಕ್ಕೆ ಎರಡು ಬಟ್ಟಲುಗಳು ಇಡಲ್ಪಟ್ಟಿದ್ದವು. ಇನ್ನೊಂದು ಬಟ್ಟಲು ಯಾರಿಗಾಗಿ ಎಂದು ವಿಚಾರಿಸಿದಾಗ ಪಾರ್ವತಿ ತಾನು ಬೆವರ ಮುದ್ದೆಯಿಂದ ನಿರ್ಮಿಸಿದ ಮೂರ್ತಿಯ ಕುರಿತಾದ ಎಲ್ಲ ವೃತ್ತಾಂತವನ್ನು ವಿವರಿಸಿ ಹೇಳಿದಳು. ಇದೆಲ್ಲವನ್ನು ಕೇಳಿದಾಕ್ಷಣ ಶಂಕರನು ಅತಿ ದುಃಖಿತನಾಗಿ ಕೂಡಲೇ ತನ್ನ ಸಮಸ್ತ ಗಣಗಳನ್ನು ಕರೆದು ನೀವು ಈ ಕ್ಷಣ ಈ ಧರಿತ್ರಿಯ ಅಷ್ಟ ದಿಕ್ಕುಗಳಲ್ಲಿಯೂ ಸಂಚರಿಸಿ ಯಾವ ತಾಯಿ ತನ್ನ ಮಗುವಿಗೆ ಬೆನ್ನು ಮಾಡಿ (ತನ್ನ ಮುಖವಿರುವಂತೆ) ಮಲಗಿರುತ್ತಾಳೋ ಆ ಮಗುವಿನ ತಲೆಯನ್ನು ಕತ್ತರಿಸಿಕೊಂಡು ತನ್ನಿರಿ ಎಂದು ಆಜ್ಞಾಪಿಸಿ ಕಳುಹಿಸಿಕೊಟ್ಟನು. ಆ ಪ್ರಕಾರ ಗಣಗಳು ಪೃಥ್ವಿಪರ್ಯಟನ ಮಾಡಿ ಎಲ್ಲೆಲ್ಲಿ ಹುಡುಕಿದರೂ ಒಬ್ಬಾಕೆಯಾದರೂ ತನ್ನ ಮಗುವಿಗೆ ಮುಖವಾಡದೆ ಮಲಗಿದ್ದು ಕಂಡು ಬರಲಿಲ್ಲ. ಒಂದು ಕಾಡಿನಲ್ಲಿ ಒಂದು ಹೆಣ್ಣು ಆನೆ ಮಾತ್ರ ತನ್ನ ಮರಿಗೆ ಬೆನ್ನು ಮಾಡಿ ನಿದ್ರಿಸುತ್ತಿತ್ತು. ಶಿವನ ಗಣಗಳು ಆ ಆನೆ ಮರಿಯ ತಲೆಯನ್ನು ಕತ್ತರಿಸಿ ತಂದು ಶಿವನಿಗೊಪ್ಪಿಸಿದರು. ಶಿವನು ಪಾರ್ವತಿ ನಿರ್ಮಿಸಿದ್ದ ಬಾಲಕನ ದೇಹಕ್ಕೆ ಜೋಡಿಸಿ ಸುಜೀವನ್ನನ್ನಿತ್ತನು. ಈ ಘಟನೆ ಭಾದ್ರಪದ ಶುಕ್ಲ ಚತುರ್ಥಿಯಂದು ನಡೆದಿತ್ತು. ಈ ಪ್ರಕಾರ ಗಣೇಶನ ಜನ್ಮ ಭಾದ್ರಪದ ಶುಕ್ಲ ಚತುರ್ಥಿ ದಿನ ಆದುದರಿಂದ ಇದಕ್ಕೆ "ಗಣೇಶ ಚತುರ್ಥಿ(ಚೌತಿ) ಎಂಬ ರೂಢಿಯ ಹೆಸರು ಬಂದು ಹೋಯಿತು. ಈ ಕಥೆ ಹಿಂದೂ ಹೆಂಗಸರಲ್ಲಿ ಎಲ್ಲೆಲ್ಲಿಯೂ ನೆನಪಿನಲ್ಲಿದೆ.

ಭಾರತ ದೇಶದ ಗಣಪತಿ

ಗಣಪತಿ ಪೂಜೆ ಭಾರತ ದೇಶದಲ್ಲಿ ಎಂದಿನಿಂದ ಪ್ರಾರಂಭವಾಯಿತೆಂಬುದರ ನಿರ್ಣಯ ಈ ವರೆಗೆ ದೊರಕಿರುವುದಿಲ್ಲ. ಆರ್ಯ ಸಂಸ್ಕೃತಿಯ ಪ್ರಾರಂಭ ಕಾಲದಿಂದ ಈ ವರೆಗೆ ನಾವು ಗಣೇಶನ ಆರಾಧನೆಯನ್ನು ನೋಡುತ್ತಿದ್ದೇವೆ. ಆದರೆ ಆರ್ಯ ಸಂಸ್ಕೃತಿಯ ಮೊದಲಿನ ದ್ರಾವಿಡ ಸಂಸ್ಕೃತಿಯಲ್ಲಿ ಸಹ ಈ ಪದ್ಧತಿ ಇತ್ತು. ವೈದಿಕ ಸಂಸ್ಕೃತಿ ಪ್ರಸಾರವಾಗುತ್ತಿದ್ದಂತೆ "ಸ್ಕಂಧನಾಮ" (ಜರ್ಮನಿ ಸಹಿತ ನಾಲ್ಕನೆ ಪ್ರದೇಶ) ಎಂಬ ಪ್ರದೇಶಕ್ಕೆ ಗಣೇಶನ ಪೂಜಾ ಪದ್ಧತಿ ಪರಿಸಿತು. ಹಿಂದೂ ಸ್ಥಾನದಲ್ಲಿ ಗಣೇಶನ ಸಾಮಾನ್ಯ ಆರಾಧನೆ ಸರ್ವ ಸಾಧಾರಣ ಪ್ರತಿ ವರ್ಷದಲ್ಲಿ ಚತುರ್ಥಿಯಂದು ಆಗುತ್ತದೆ. ಆದರೆ ಗಣೇಶನ ಜನ್ಮದಿನದಪೂಜೆ "ಭಾದ್ರಪದಶುಕ್ಲಚತುರ್ಥಿ"ಯಂದು ವಿಜೃಂಭಣೆಯಿಂದ ಜರಗುತ್ತದೆ. ಕೆಲವು ಕಡಗಳಲ್ಲಿ ಈ ಪೂಜೆ ಕೆಲವು ತಿಂಗಳುಗಳ ವರೆಗೆ ಜರಗುವುದೂ ಉಂಟು.

ಮಹಾರಾಷ್ಟ್ರ, ಗುಜರಾತ್, ದಕ್ಷಿಣ ಭಾರತದ ವಿಭಿನ್ನ ಪ್ರದೇಶಗಳಲ್ಲಿ ಬೇರೆ ಬೇರೆ ವಿಧಾನಗಳಿಂದ ಗಣೇಶ ಪೂಜೆ ವಿಭಿನ್ನ ಮಂತ್ರಗಳ ಮೂಲಕ ಜರಗುತ್ತದೆ. ಆದರೆ ಅತ್ಯಂತ ಸವಿಸ್ತೀರ್ಣ ಪೂರ್ವಕವಾದ ಪೂಜೆ ಮಹಾರಾಷ್ಟ್ರದಲ್ಲಿ ಜರಗುತ್ತದೆ. ಅಲ್ಲಿ ಆಗುವಷ್ಟು ವಿಜೃಂಭಣೆಯ ಪೂಜೆ ಹಿಂದ ಸ್ಥಾನದಲ್ಲಿ ಎಲ್ಲಿಯೂ ಜರಗುವುದಿಲ್ಲ. ಭಾರತ ದೇಶದ ದೇವಮಂದಿರಗಳಲ್ಲಿ ಗಣೇಶನ ವಿಗ್ರಹ ದೊರಕುವಷ್ಟು ಇತರ ದೇವತೆಗಳದ್ದು ದೊರಕುವುದಿಲ್ಲ.

ದೇವತೆಗಳಿಂದ ಪೂಜಿಸಲ್ಪಡುತ್ತಿದ್ದ ಗಣೇಶ, ದೇವತೆಗಳಿಂದಲೂ ಪೂಜಿಸಲ್ಪಡುತ್ತಾನೆ. ಈ ಕುರಿತು ಸಹ ಒಂದು ಪೌರಾಣಿಕ ಕಥೆ ಈ ರೀತಿ ಇದೆ. 'ಸರ್ವ ಪ್ರಥಮ ಯಾರನ್ನು ಪೂಜಿಸದೇಕು?' ಎಂಬುದರ ಕುರಿತು ಬಹಳ ವರ್ಷಗಳ ವರೆಗೆ ದೇವತೆಗಳಲ್ಲಿ ವಾದ ವಿವಾದಗಳು ಜರಗುತಿದ್ದವು. ಕಟ್ಟ ಕಡೆಗೆ ಅವರೆಲ್ಲರೂ ಸೇರಿ ಒಂದು ನಿರ್ಣಯಕ್ಕೆ ಬಂದರು.

"ಯಾವ ದೇವತೆ ಇಡಿ ಪೃಥ್ವಿಯ ಪರಿಕ್ರಮ ಮಾಡಿ ಮೊದಲು ಬಂದು ಸೇರುತ್ತಾನೋ ಅವನಿಗೇನೇ ಪ್ರಥಮ ಪೂಜೆ ಸಲ್ಲಿಸಲಾಗುವುದು" ಎಂಬ ನಿರ್ಣಯವಾಯಿತು. ಆ ಪ್ರಕಾರ ಎಲ್ಲ ದೇವತೆಗಳು ತಮ್ಮ ತಮ್ಮ ವಾಹನವನ್ನೇರಿ ಪೃಥ್ವಿ ಪರಿಕ್ರಮ ಮಾಡಿ ಬರಲಿಕ್ಕೆ ಹೊರಟು ಹೋದರು. ಆದರೆ ಗಣೇಶನ ವಾಹನ ಇಲಿಯಲ್ಲಿಂದ ಕದಲಲಿಲ್ಲ. 'ನಾನು ನನ್ನ ಇಷ್ಟ ದೇವ

ಡ್ಡ ಬೊಜ್ಜ ಬೆಳೆದ ಶರೀರವನ್ನು ತೆಗೆದು ಕೊಂಡು ಹೇಗೆ ಭೂ ಪ್ರದಕ್ಷಿಣೆ ಮಾಡಲಿ? ಎಂದು ಯೋಚಿಸಿದನು. ಒಂದು ಪೇಳೆ ತನ್ನ ವಾಹನ ಇಲಿಯ ಮೇಲೆ ಕುಳಿತು ಸಂಚಾರಕ್ಕೆ ಹೊರಟರೂ ಇತರ ದೇವತೆಗಳ ಸಮಕ್ಷಮ ಹೇಗೆ ಸ್ಪರ್ಧಿಸುವುದು?' ಎಂದು ಯೋಚಿಸುತ್ತಾ ಕಡೆಗೆ ಒಂದು ಉಪಾಯ ಮಾಡಿದನು. ಅವನು 'ರಾಮ —ರಾಮ' ಎಂದು ಬರೆದು ಅಲ್ಲಿ ಕುಳಿತಿದ್ದ ತನ್ನ ಮೊತಾ-ಪಿತರ ಪ್ರದಕ್ಷಿಣೆಯನ್ನಿತ್ತನು. ಇತರ ದೇವತೆಗಳ ಇನ್ನೂ ಹಿಂದಿರುಗಿರಲಿಲ್ಲ; ಅಷ್ಟರೊಳಗಾಗಿ ಪ್ರಜಾಪತಿಯು ಗಣೇಶನಿಗೆ ಪೂಜೆಯನ್ನು ಪ್ರಾರಂಭಿಸಿಯೇ ಬಿಟ್ಟನ. ಭೂ ಪ್ರದಕ್ಷಿಣೆಯಿಂದ ಹಿಂತಿರುಗಿ ಬಂದ ದೇವತೆಗಳು ಇದನ್ನು ಕಂಡು ಬಹಳ ಕಪಿಶರಾದರು. ಆಪರೆ "ಒಂದು ರಾಮನಾಮದ ಪ್ರದಕ್ಷಿಣೆ ಸಮಗ್ರ ಬ್ರಹ್ಮಾಂಡದ ಪ್ರದಕ್ಷಿಣೆಗೆ ಸರಿ ಸಮಾನವಾಗಿದೆ' ಎಂಬುದಾಗಿ ಬ್ರಹ್ಮ ದೇವನು ದೇವತೆಗಳಿಗೆ ಸಮಾಧಾನ ಹೇಳಿದನು. ಬ್ರಹ್ಮನ ಈ ಉತ್ತರದಿಂದ ದೇವತೆಗಳು ಆವಕ್ಕಾದರು. ನೂತ್ಯವಲ್ಲ, ಗಣೇಶನ ಬುದ್ಧಿ ಜಾತುರ್ಯಕ್ಕಾಗಿ ಅವನಿಗೆ ಅಭಿನಂದನೆ ಸಲ್ಲಿಸಿದರು."

ಭಾರತದಲ್ಲಿ ಗಣೇಶ ವಿಗ್ರಹಗಳು

ಭಾರತ ದೇಶದಲ್ಲಿರುವ ಗಣೇಶ ವಿಗ್ರಹಗಳು ಹೆಚ್ಚಾಗಿ ಚತುರ್ಮುಖಿಯಳ್ಳವು ಗಳು. ಇತರ ಒಂದೆರಡು ಪ್ರಾಂತ್ಯಗಳಲ್ಲಿ ಇತರ ರೀತಿಯ ಮೂರ್ತಿಗಳಿವೆ. ಉತ್ತರ ಪ್ರದೇಶದ 'ಫೈಜಾಬಾದ್' ಎಂಬಲ್ಲಿ ಭೂ ಗರ್ಭ ಶೋಧನೆಗಾಗಿ ಆಗಿತ ಮಾಡಿದಾಗ ಅಲ್ಲಿ ಒಂದು ದೇವಸ್ಥಾನದ ಅವಶೇಷದೊರಕಿತು. ಅಪರಲ್ಲದ್ದ ಗಣೇಶ ವಿಗ್ರಹಕ್ಕೆ ೧೨ ಭುಜಗಳಿದ್ದುದು ಕಂಡು ಬಂದಿದೆ. ಇದೇ ರೀತಿಯ ಹನ್ನೆರಡು ಭುಜಗಳುಳ್ಳ ಒಂದು ವಿಗ್ರಹ "ಟೇಕಮ್ ಗಢ'ದಲ್ಲಿದೆ. ಜನೆಯ ಕಶಮೂನದಲ್ಲಿ ರೂಢಿಯಲ್ಲಿದ್ದ ಒಂದು ಗಣೇಶ ವಿಗ್ರಹ "ಖಜುರಾಹೋ"ದ ಸಂಗ್ರಹಾಲಯದಲ್ಲಿದೆ. "ಖಂಡರಿಯಾನಾಥ'ದಲ್ಲಿ ಸಪ್ತಮಾತೃಕೆಗಳುಳ್ಳ ಒಂದು ವಿಗ್ರಹ ದೊರಕಿರುತ್ತದೆ. ಈ ಪ್ರತಿಮೆ ಸೌಂದರ್ಯದ ತುಲನೆಯುಳ್ಳ ಜಗತ್ತಿನಲ್ಲಿಯೇ ಸರ್ವ ಶ್ರೇಷ್ಠವೆಂಬುದಾಗಿ ಪರಿಗಣಿಸಲ್ಪಟ್ಟಿದೆ.

ವಿಧಾರಿಯಲ್ಲಿ ಗಣೇಶ ವಿಗ್ರಹವೊಂದಕ್ಕೆ ವಿಗ್ರಹದೊಂದಿಗೆ ಮೂಷಿಕದ ಮೇಲೆ ಆರೂಢವಾಗಿದೆ; ಇಲ್ಲಿ ದಶ ಭುಜಗಳ ಮತ್ತು ಐದು ಮುಖಗಳ ಒಂದು ಮೂರ್ತಿಯೂ ಇದೆ; ಈ ಮೂರ್ತಿಯ ಭುಜಗಳಲ್ಲಿ ಶಸ್ತ್ರಗಳ ಜೊತೆಯಲ್ಲಿ ಮೋದಕಗಳಿವೆ. ಮಧುರೆಯ ಮೂರ್ತಿಗಳ ವಿಶೇಷ ವಿವರಣೆ "ಮುದ್ಗಲ ಪುರಾಣ'ದಲ್ಲಿ ದೊರಕುತ್ತದೆ. "ಕಿರಾಗಟ್ಟಿಣಮ್" ಎಂಬಲ್ಲಿರುವ ಗಣೇಶ ವಿಗ್ರಹ ಸಿಂಹದ ನೇಲೆ ಕೂತುಕೊಂಡಿದೆ. ಇದರ ಕೈಯಲ್ಲಿ ಇತರ ಆಯುಧಗಳೊಂದಿಗೆ ಒಂದು ಪರಶು ಸಹ ಇದೆ. ಈ ರೀತಿಯ ವಿಗ್ರಹ ಹಿಂದೂಸ್ಥಾನದಲ್ಲಾ ಎಲ್ಲಿಯೂ ಈ ತನಕ ದೊರಕಿಯುವುದಿಲ್ಲ. ತ್ರಿವೆಂಡ್ರಮ್'ನಲ್ಲಿರುವ ಗಣೇಶ ವಿಗ್ರಹ ಅತಿ ಮನೋಹರವಾಗಿದೆ. ಇದು ಆನೆಯ ದಂತದಿಂದ ರಚಿಸಲ್ಪಟ್ಟಿರುತ್ತದೆ. ಕಾರಮಂಡಲದಲ್ಲಿರುವ ಗಣೇಶ ವಿಗ್ರಹ ಇಲಿಯ ಬೆನ್ನ ಮೇಲ ನಿಂತು ಕೊಂಡಿದೆ; ಇಲ್ಲಿ ಗಣೇಶ ಪೂಜೆ ಅತಿ ವೈಭವದಿಂದ ನಡೆಯುತ್ತದೆ.

ವಿದೇಶಗಳಲ್ಲಿ ಗಣೇಶ ಪೂಜೆ

ವಿದೇಶಗಳಲ್ಲಿ ಗಣೇಶ ಪೂಜೆಯು ಇತಿಹಾಸವನ್ನು ಯೂನಾನಿನ ಇತಿಹಾಸಕಾರ "ಹೆರೋಡ್ಟ್ಸ್" ಎಂಬವನು ವಿವರಿಸಿರುತ್ತಾನೆ. ಅವನು ಅನ್ನ ವಿವರಣೆಯಲ್ಲಿ "ಸ್ಕಂದನಾಮ"ದ ನಿವಾಸಿಕರು (ಒಂದು ಕಾಲದಲ್ಲಿ ಇವರ ಪ್ರಭುತ್ವ ಸರಂಗ್ರಯೂರೋಪಿನಲ್ಲಿ ಪಸರಿಸಿತ್ತು) ಮದ್ಯಪಾನ ಮಾಡುವ ದೇವತೆ ಮತ್ತು ಅನೆಯ ಸೊಂಡಿಲು ಉಳ್ಳ ದೇವತೆಯನ್ನು ಸೂಚಿಸುತ್ತಿದ್ದರಲ್ಲದೆ 'ವಿಜಯ ದಶಮಿ' ಯನ್ನು ಸಹ ಆಚರಿಸುತ್ತಿದ್ದರು. ಎಥೆನ್ಸ್‌ನಲ್ಲಿ ವಿಜಯೋತ್ಸವ ಕಾಲದಲ್ಲಿ ಅನೆಯ ಸೊಂಡಿಲು ಉಳ್ಳ ವಿಗ್ರಹ ಪೂಜಿಸಲ್ಪಡುತ್ತಿದೆ. ಇಲ್ಲಿಯವರು ಪ್ರತಿಯೊಂದು ಶುಭಕಾರ್ಯದಲ್ಲಿ ಈ ವಿಗ್ರಹವನ್ನು ಪ್ರಥಮವಾಗಿ ಆರಾಧಿಸುತ್ತಾರೆ. ಯೂರೋಪಿನ ಹೊರತು ಚೀನ ದಲ್ಲಿಯೂ ಗಣೇಶಾರಾಧನೆ ವಿಶೇಷವಾಗಿ ಪ್ರಚಲಿತವಾಗಿತ್ತು. ಇದಕ್ಕೆ ದೊಡ್ಡ ನಿದರ್ಶನವೆಂದರೆ ಅತಿ ಪ್ರಾಚೀನ ಕಾಲದ ಕಂಚಿನ ಒಂದು ಗಣೇಶ ವಿಗ್ರಹ ಚೀನದಲ್ಲಿ ಒಂದು ಗುಹೆಯೊಳಗೆ ಇಂದಿಗೂ ಇದೆ. ಚೀನೀಯರು ಗಣೇಶನನ್ನು 'ವಿನಾಯಕ' ನ ಹೆಸರಲ್ಲಿ ಪೂಜಿಸುತ್ತಿದ್ದರು. ಈ ದೇಶದಲ್ಲಿ ದೊರಕುವ ಗಣೇಶ ವಿಗ್ರಹಗಳು ಅತಿ ಮನೋಹರವಾಗಿವೆ.

ಜಪಾನಿನಲ್ಲಿರುವ ಗಣೇಶ ಪ್ರತಿಮೆ ಪಂಚ ಲೋಹದ್ದು. ಇದರ ಕೈಯಲ್ಲಿ ಒಂದು ಶೂಲ ಮಾತ್ರ ಇದೆ. ಬರ್ಮಾದವರು ಗಣೇಶನನ್ನು "ಮಹಾಮಿಯನ್" (ಸಂಸ್ಕೃತದ 'ಮಹಾನುಭವ.ನ'ದ ಅಪಭ್ರಂಶ) ಎಂದು ಕರೆಯುತ್ತಾರೆ. 'ತುನ್ಲೊವಾಂಗ್' ಗುಹೆಯೊಳಗೆ ದೊರೆತ ಗಣೇಶ ವಿಗ್ರಹ ಬಹಳ ವಿಲಕ್ಷಣವಾಗಿದೆ. ಇದರ ತಲೆಗೆ ಮುಂಡಾಸು, ಕಾಲುಗಳಿಗೆ ಪೈಜಾಮವಿದೆ. ತುರ್ಕಿಸ್ತಾನದಲ್ಲಿ ದೊರಕಿರುವ ಗಣೇಶ ವಿಗ್ರಹದ ಕೈಯಲ್ಲಿ ಶ್ರೀಶೂಲವಿದ್ದು ಅದು ಒಂದು ಕಾಲನ್ನು ಸಿಂಹದ ಬೆನ್ನ ಮೇಲೂ ಇನ್ನೊಂದು ಕಾಲನ್ನು ಇಲಿಯಮೇಲೂ ಇರಿಸಿ ನಿಂತಿರುವುದಾಗಿ ಕಂಡಿದೆ. ತುರ್ಕಿಸ್ತಾನದ ಒಂದು ಗುಹೆಯಲ್ಲಿ ದೊರೆತ ಗಣೇಶ ವಿಗ್ರಹ ಆನೆಯ ಮತ್ತು ವರಾಹದ ಮುಖಾಕೃತಿಯುಳ್ಳದ್ದಾಗಿದೆ. ಬಾಲಿದ್ವೀಪದಲ್ಲಿರುವ ಗಣೇಶ ಪ್ರತಿಮೆ ಸಿಂಹಾಸನದಲ್ಲಿ ಕೂತಿದ್ದು ಆದರ ಕೈಯಲ್ಲಿ ಉರಿಯುತ್ತಿರುವ ಒಂದು ವೀಣೆಟಗೆ ಇದೆ. ಪ್ರತಿಮೆಯ ಸುತ್ತಲೂ ಅಗ್ನಿಶಿಖೆಗಳು ಸದಾ ಉರಿಯುತ್ತಾ ಇವೆ. ಜಾವಾದಲ್ಲಿ ದೊರೆತಿರುವ ಗಣೇಶ ಪ್ರತಿಮೆ ಚತುರ್ಭುಜಗಳಿದ್ದು ಎರಡೇ ಕಣ್ಣುಗಳುಳ್ಳವುಗಳಾಗಿವೆ. ಈ ಮೂರ್ತಿ ಕೈಗಳಲ್ಲಿ ಜಪಮಾಲೆ, ಪೋದಕಾ ಪರಶು ಮತ್ತು ಒಂದ ದಾಡೆ (ಆನೆಯ ಎದಾಡೆ) ಸಾಧನಗಳು ಕಾಣತ್ತವೆ. ಜಕಾರ್ತಾಕ್ಕೆ ಪಶ್ಚಿಮಕ್ಕೆ ಬೆಲು ದೂರ "ಪ್ರಾಗ್" ಮತ್ತು "ಬಲಂಬಿ" ಇವುಗಳ ಸಂಗಮ ಸ್ಥಳದಲ್ಲಿ "ಚಂಡೀಮುಂಡಾಕಾ ಚಂಡೀಪಾವನ" ಎಂಬ ಒಂದು ಸ್ಥಳವಿದೆ. ಇಲ್ಲಿ "ಚಂಡಿಲಾರಾಜುಗ್ರಂಗ್" ಮತ್ತು 'ಕೋಮಲ ದೇವಿ'ಯ ಮಂದಿರಗಳಿವೆ. ಇದು ಹಿಂದೂ ದೇವಮಂದಿರಗಳ ಸಮೂಹವಾಗಿದ್ದು ಕ್ರಿ ಶ ಹತ್ತನೆಯ ಶತಮಾನದಲ್ಲಿ 'ಶೈವ' ರಾಜರಿಂದ ಕಟ್ಟಲ್ಪಟ್ಟಿದ್ದು ತಿಳಿದು ಮಂದಿರಗಳ ನಾಶ್ಯಾವಶಾಲಾಗಳಿದ್ದು ಪ್ರಸ್ತುತ ಮಂದಿರಗಳು ಉಳಿದಿವೆ. ಇವುಗಳಲ್ಲಿ ೩ ಮಂದಿರಗಳಲ್ಲಿ ಗಣೇಶನ ಪ್ರತಿಮೆಗಳಿವೆ. ಇತರ ಮಂದಿರಗಳ ಭಗ್ನಾವಶೇಷಗಳು ಇಂದಿಗೂ ಕಂಡುಬರುತ್ತವೆ.

"ಚಂಡೀಪಂಚಾರನ್" ಎಂಬ ಇನ್ನೊಂದು ಪೇವಸ್ಥಾನಗಳ ಸಮೂಹವಿದೆ. ಇದು ಕ್ರಿ ಶ ೧೫ನೆಯ ಶತಮಾನದಲ್ಲಿ "ಶ್ರೀಭುವನ ಉತ್ತುಂಗ ದೇವಿ"ಯ ರಾಜ್ಯಭಾರದ ಕಾಲದಲ್ಲಿ ಕಟ್ಟಲ್ಪಟ್ಟಿದ್ದು. ಇಲ್ಲಿಯೂ ನಾನಾ ಪ್ರಕಾರದ ಮುಖಭಂಗಿಯುಳ್ಳ ಗಣೇಶ ಪ್ರತಿಮೆಗಳಿವೆ. ಫಿಲಿಫೀನ್ಸ್ ದ್ವೀಪಗಳಲ್ಲಿಯೂ ಳ ಇಂಚು ಗಾತ್ರದ ಚಿನ್ನದ ಒಂದು ಗಣೇಶ ವಿಗ್ರಹ ಉಪಲಬ್ಧವಾಗಿದೆ.

ಈ ಪ್ರಕಾರ ಗಣೇಶ ಪೂಜೆಯ ಪದ್ಧತಿ, ವೇದ ಸಮ್ಮತವಾಗಿದ್ದು ಆತಿ ಸನಾತನವಾಗಿರುವುದಾದರೆ ಅದು ಸರ್ವಕ್ರಮವೂ ಏಕ ಪ್ರಕಾರವಾಗಿದ್ದಿರಬೇಕು. ಹಾಗಿಲ್ಲವೆ ಬೇರೆ ಬೇರೆ ಗ್ರಂಥಗಳಲ್ಲಿ ಗಣೇಶನ ಜನ್ಮ ಮತ್ತು ಅವನಾನ ಹಾಗೂ ಪುನರ್ಜನ್ಮ-ಮರುಜನ್ಮ ಇತ್ಯಾದಿ ಆಗು ಹೋಗುಗಳು ಬೇರೆ ವಿಧಾನಗಳಿಂದ ಉಲ್ಲೇಖಿಸಲ್ಪಟ್ಟಿರುವುದನ್ನೂ ಅವಲೋಕನ ಮಾಡಿದರೆ ಈ ಪೂಜಾ ಪದ್ಧತಿ ಆವಾವುದೋ ಒಂದು ಕಾಲದಲ್ಲಿ ಒಂದು ಸಂಪ್ರದಾಯದವರಿಂದ ರೂಪಿಸಿಲ್ಪಟ್ಟು ವ್ಯವಹಾರದಲ್ಲಿ ಬಳಕೆಗೆ ಬಂದಿದಾಗಿರಬೇಕೆಂದುಭಾಸವಾಗುತ್ತದೆ. ದೇವರೆಂದು ಪರಿಗಣಿಸಲ್ಪಡುವ ಒಬ್ಬನೇ ಗಣೇಶನನ್ನು ದೇರೆ, ದೇರೆ ಗ್ರಂಥಗಳಲ್ಲಿ ಅನ್ಯಾನ್ಯ ರೀತಿಯಲ್ಲಿ ವಿವರಿಸಿರುವುದರಿಂದ ಇದರಲ್ಲಿ ಪಕ್ಷತೆಯೂ ವುದೆಂಬುದರ ಒಂದು ನಿಶ್ಚಿತ ನಿರ್ಧಾರವನ್ನು ಆಸ್ತಿಕ ಜಗತ್ತಿನ ಮುಂದಿಡುವುದು ಗಣೇಶ ಪೂಜಾ ಭಕ್ತರ ಮುಖ್ಯ ಕರ್ತವ್ಯವಾಗಿರುತ್ತದೆ.

ಗಣೇಶ ಚತುರ್ಥಿ ಮೊದಲ್ಗೊಂಡು ಕಲವು ದಿನಗಳ ಪರ್ಯಂತರ ವಿಜೃಂಭಣೆಯಿಂದ ಪೂಜೆ ಮಾಡಿದ ಗಣೇಶನ್ನು ಒಂದು ದಿನ ವೈಭವದ ಮೆರವಣಿಗೆಯೊಂದಿಗೆ ಕೊಂಡು ಹೋಗಿ ಕಣ್ಣು ಮುಚ್ಚೆ ಬಾವಿಗೆ, ಹೊಳೆಗೆ, ಸಮುದ್ರಕ್ಕೆ ಬಿಸಾಡಿ ಮುಳುಗಿಸುವ ವಿಚಿತ್ರಕ್ರಮ ಯಾವ ಪುರಾಣದಲ್ಲಿಯೂ ಉಲ್ಲೇಖಿಸಲ್ಪಟ್ಟಿಲ್ಲ; ಒಂದು ವೇಳೆ ಇರುವುದಾದರೆ ಈ ವ್ಯವಹಾರ ಯಾವ ಗ್ರಂಥದಲ್ಲಿದೆ? ವರ್ತಮಾನ ಕಾಲದ ಗಣೇಶ ಪೂಜೆಯ - ವಿಧಿ ವಿಧಾನಗಳು ವೇದ, ಉಪನಿಷತ್ತು ಪೌರಾಣಾದ ಆರ್ಷ ಗ್ರಂಥಗಳಲ್ಲಿನೆಯೇ? ಇರುವುದಾದರೆ ಅದರ ಪೂರ್ಣ ವಿವರವನ್ನು ಆಸ್ತಿಕ ಪ್ರಪಂಚಕ್ಕೆ ತಿಳಿಸಿ ಕೊಡುವುದರಲ್ಲಿ ವಿದ್ವಜ್ಜನರು ಮುಂದೆ ಬಂದಲ್ಲಿ ಪೂರ್ಣವ ಸಮುದಾಯಕ್ಕೆ ಎಷ್ಟೋ ವಿಧದಲ್ಲಿ ಶ್ರೇಯಸ್ಸುಂಟಾಗುವುದೆಂಬುದರಲ್ಲಿ ಸಂಶಯವಿಲ್ಲ.

(ಚರಂಜೀವಿಲಾಲ್ ಶಾರ್ಮರ್ ಅವರ ಒಂದು ಸಂಸ್ಕೃತ ಗ್ರಂಥದ ಆಧಾರ)

(ಭಾನುವಾರ ಸ್ಪೆಷಲ್ ಕ್ಲಾಸಿನಲ್ಲಿ)

ಅಧ್ಯಾಪಕರು:—

'ಸ್ವರ್ಗಕ್ಕೂಯವ ದಾರಿ ಕಲ್ಲು, ಮುಳ್ಳುಗಳಿಂದ ತುಂಬಿದೆ. ಆದರೂ ಅಲ್ಲಿಗೆ ಹೋಗಬೇಕೆಂದು ಬಯಸುವವರು ಎಷ್ಟು ಎದ್ದುನಿಲ್ಲಿರಿ.'

ಒಬ್ಬನೂ ಹೊರಕು ಮಿಕ್ಕ ವಿದ್ಯಾರ್ಥಿಗಳೆಲ್ಲರೂ ಎದ್ದುನಿಂತರು.

'ಅಯ್ಯಾ ನೀವು ಯಾಕೆ ನಿಲ್ಲಲಿಲ್ಲ?....'

"ನಾನು ಏನಾದರೆಷ್ಟೆ ತರಲಿಲ್ಲ, ಸಾರ್!'

ಮುಂಬೈಯಲ್ಲಿ ಸಿರಿಗನ್ನಡದ ಕೂಟ

ಮುಂಬೈಯ ಕರ್ನಾಟಕ ಫ್ರೀ ನ್ಯಾಟ್ ಹೈಸ್ಕೂಲಿನ 'ಸಿರಿಗನ್ನಡ ಕೂಟ'ವು ತಾ. 7-9-67ನೇ ಗಣೇಶ ಚತುರ್ಥಿಯಂದು, ಇಂದೋ ಸೋವಿಯತ್ ಕಲ್ಚರಲ್ ಸೊಸಾಯಿಟಿ ಸಭಾಗಾರದಲ್ಲಿ 'ಗಣೇಶೋತ್ಸವ'ವನ್ನು ಆಚರಿಸಿತು. ಶ್ರೀ ಕೃಷ್ಣಾನಂದ ಮಯ್ಯ ಅವರು ಸ್ವಾಗತ ಭಾಷಣ ಗೈಯುತ್ತಾ, 'ಧರ್ಮ' ಎಂಬುದು ಜೀವನದ ರೀತಿ, ನಾವು ಧರ್ಮವನ್ನು ಮರೆಯುವ ಯತ್ನ ಮಾಡುತ್ತೇವೆ. ಆದಕ್ಕಾಗಿ ನಮ್ಮ ಜೀವನದಲ್ಲಿ ಅಶಾಂತಿ ಹೆಚ್ಚುತ್ತಿದೆ." ಎಂದರು ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಖ್ಯಾತ್ಯಸಿದ್ಧ ತರುಣ ಬರಹಗಾರ ಶ್ರೀ ಸಂತೋಷಕುಮಾರ ಗುಲ್ವಾಡಿ ಆವರು 'ಸಾಂಕೇತಿಕ ದೇವರು— ಗಣಪತಿ' ಎಂಬ ವಿಷಯವಾಗಿ ಮನೋಜ್ಞವಾಗಿ ಮಾತನಾಡುತ್ತಾ ವೇದಕಾಲದಲ್ಲಿ ಗಣಪತಿಯು ಉಲ್ಲೇಖವು ಎಲ್ಲಿಯೂ ದೊರೆಯುವುದಿಲ್ಲವಾದರೂ, ಆನಂತರ ಈ ಸಾಂಕೇತಿಕ ಮೂರ್ತಿ ಉಳಿದಿಲ್ಲ ದೇವಾಂಗಿಂತಲೂ ಹೆಚ್ಚು ಶಕ್ತನಾಗಿ ಮೆರೆದಲ್ಲಿ ಪೂಜೆಯನ್ನು ಪಡೆಯಲು ಹೇಗೆ ಶಕ್ತನಾದ? ಹಾಗೂ ಗಣಪತಿಯು ಈ ವಿಚಿತ್ರ ರೂಪಕ್ಕೆ ನಮ್ಮ ಹಿರಿಯರು ಯಾವ ಸಂಕೇತವನ್ನು ಆರೋಪಿಸಿದ್ದಾರೆ? ಎಂಬ ಬಗ್ಗೆ ಅತಿದ್ಯುಪವಡು ಬಹು ವಿಸ್ತೃತವಾಗಿ ವಿವರಿಸಿದರು. ಸಭಾಧ್ಯಕ್ಷ ಪಂ. ರಮಾಚಾರ್ಯ ಜೋಶಿ 'ಕಾವ್ಯ ತೀರ್ಥ' ಆವರು—ನಮ್ಮ ತರುಣ ಪೀಳಿಗೆ ಅಂದಕಾರದಲ್ಲಿ ತೊಳಲಾಡುತ್ತಿರುವಾಗ ಹಿಂದೊಮ್ಮೆ ಲೋಕ ಮಾನ್ಯ ತಿಲಕರು ಸ್ವಾತಂತ್ರ್ಯ ಪ್ರಾಪ್ತಿಯ ಉದ್ದೇಶದಿಂದ ಗಣಪತಿಯ ಉತ್ಸವವನ್ನು ಸಾರ್ವಜನಿಕರಿಗಾಗಿ ಜರುಗಿಸಿ ಆ ಮೂಲಕ ಜನರಲ್ಲಿ ಚೈತನ್ಯವನ್ನು ಕುಂದಿದರು. ಇಂದು ಭಾಷೆ ಮತ್ತು ಪ್ರಾಂತ್ಯಗಳ ಬಡಿದಾಟದಲ್ಲಿ ದೇಶವೇ ನುಚ್ಚುನೂರಾಗುವುದೋ ಎಂಬ ಭಯವುಂಟಾಗುವ ಈ ಸಂದರ್ಭದಲ್ಲಿ ನಾವು ಪರಸ್ಪರ ಒಗ್ಗಟ್ಟು-ಮೈತ್ರಿಗಳನ್ನು ಬೆಳೆಸಿಕೊಳ್ಳಲಿಕ್ಕಾದರೂ ಇಂತಹ ಕಾರ್ಯಕ್ರಮಗಳನ್ನು ನಡೆಸುವುದು ತೀರಾ ಅವಶ್ಯವಾಗಿದೆ" ಎಂದರು. ತರುಣ ಕವಿ ಕೋಡು ಭೋಜ ಶೆಟ್ಟರು ತಮ್ಮ ಎರಡು ಕವನಗಳನ್ನು ಹಾಡಿ ಜನಮನರಂಜನೆ ಗೈದ ಬಳಿಕ ಶ್ರೀ ಶಿಮುಂಜೆ ಸರಾಯಿಯವರು ಧನ್ಯವಾದ ಸಮರ್ಪಣೆಗೈದರು.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 92/1967

ಉಡ್ಪಿ ಆದಮಾರು ಮಟಪಾಡಿಯ ಶ್ರೀವಿಘ್ನೇಶ್ವರ ತೀರ್ಥಸ್ವಾಮಿರು —ವಾದಿರು

ಮತ್ತು

1. ಮರಿಯ ಸಿಕೇರಾಬಾಯಿ— ಪ್ರಾಯ ೬೦ ವರ್ಷ ವಿಧವೆ—

೨ ಫೆಲಿಕ್ಸ್ ರಂತ್ಯ, ೩ ಅಲೆಕ್ಸ್ ರಂತ್ಯ —ಪ್ರಾಯ ೨೦ ವರ್ಷ ಮಕ್ಕಳು.

ಉಡ್ಪಿ ತಾಲೂಕು ಮಣಿಪುರ ಗ್ರಾಮದ ಕನರಾಡಿ —ಪ್ರತಿವಾದಿರು

ನಿಮ್ಮ ಪ್ರತಿವಾದಿರಿಗೆಲ್ಲಾ ಮುಂಬ್ಳ ತಿಳಿಸುವದೇನೆಂದರೆ...

ವಾದಿರ ಮಟಕ್ಕೆ ಪ್ರತಿವಾದಿರಿಂದ ಬರತಕ್ಕ ಕಳಕ್ಕೆ ವಿಶ್ವಾಸಸ್ಥ ಪರಿಹಾರ ರೂಪಾಯಿಗಳ ಸೇಟಿ ಬಡ್ಡಿಗೆ ದಿನಕ್ಕು ಪೂರಾದ ವೇಲ್ಯಂಡ ದಾವೆಯು ತಾ. ೪೨—೨—೧೯೬೭ ರಿಕ್ಕೆ ಯಿತ್ತೋ ಜಾಗಿಯಾದೆ. ನಿಮ್ಮ ಪ್ರತಿವಾದಿರಿಗೆ ಅಕ್ಕೆಸಲು ಹೇಳಕ್ಕಾದ್ದು ಯಿಪ್ಪೆ ಸರಿ ದಿನ ವೇಲ್ಯಂಡ ಕೋರ್ಟು ಮುಂದೆ ಹಾಜರ್ತಾಗಿ ಜ್ಞಾಪಕರು ಪಡಿಸಿಕೊಳ್ಳಕ್ಕಾದ್ದು ಯಂದು ಸಂಗ್ತಿ ತಿಳಿಸೋ ಜಾಗಿಯದೆ.

V. R Kidyur,
Advocate for Plaintiff
ಉಡ್ಪಿ, 12—೨—67

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿ

ವಾರ್ಷಿಕ ಚಂದಾ ರೂ. ೧೦

ಅರಬ-ಇಸ್ರೇಲ್ ಘರ್ಷಣೆಯ ಹಿನ್ನೆಲೆ, ಪರಿಣಾಮ

(ಪದನೇ ಸುಟದಿಂದ)

ಮೊದಲೇ ಅದ ಇಸ್ರೇಲ್ ರಾಜ್ಯ ನಿರ್ಮಾಣ ವಸ್ತು 1948 ಮೇ 14ರಂದು ಸಾರಿ ಬಿಟ್ಟರು. ಕೂಡಲೇ ಅಮೇರಿಕವು ಹೊಸ ರಾಜ್ಯಕ್ಕೆ ತನ್ನ ವನ್ನಣೆಯನ್ನು ಇತ್ತಿತು. 19:9 ಮಾರ್ಚ್‌ನಲ್ಲಿ ಜರಗಿದ ಸ. ರಾ. ಸಂಘದ ಭದ್ರತಾ ಸಮಿತಿಯು 9–1 ಓಟುಗಳಿಂದ ಇಸ್ರೇಲನ್ನು ಸಂಯುಕ್ತ ರಾಷ್ಟ್ರ ಸಂಘಕ್ಕೆ ಸೇರಿಸಿಕೊಂಡಿತು.

ಪರಿಣಾಮ

ಇಸ್ರೇಲ್ ದೇಶ ಉದಯವಾದೊಡನೆಯೇ ಅದಷ್ಟು ಅಳಿಸಬೇಕೆಂಬ ಉದ್ದೇಶದಿಂದ ಅರಬ ರಾಷ್ಟ್ರಗಳು ಇಸ್ರೇಲದ ಮೇಲೆ ಯುದ್ಧ ಸಾರಿದವು. ಆದರೆ ಜ್ಯೂಗಳು ಧೈರ್ಯವಾಗಿ ಅರಬರ ಆಕ್ರಮಣವನ್ನು ಹಿಮ್ಮೆಟ್ಟಿಸಿದರು. ಕೊನೆಗೆ ಸಂಯುಕ್ತ ರಾಷ್ಟ್ರ ಸಂಘವು ಮಧ್ಯೆ ಪ್ರವೇಶಿಸಿ ಅರಬ ರಾಷ್ಟ್ರ ಮತ್ತು ಇಸ್ರೇಲಿಗಳ ನಡುವೆ ತಾತ್ಕಾಲಿಕ ಒಪ್ಪಂದವನ್ನು ಉಂಟುಮಾಡಿತು. ಆದರೆ ಅದರ ಪ್ರಯತ್ನ ಯಶಸ್ವಿಯಾಗಲಿಲ್ಲ. ಆನಂತರದಲ್ಲಿ ಸಂಭವಿಸಿದ ಸುಮಾರು ಎಲ್ಲಾ ಘರ್ಷಣೆಗಳಲ್ಲೂ ಯಹೂದಿ ಇಸ್ರೇಲಿಗಳದೇ ಕೈ ಮೇಲಾಗುತ್ತಾ ಬಂದಿದೆ. ಅಂಬುಗಿಂತ ಕಡಿಮೆ ಸಂಖ್ಯೆ ಇರುವ ಜ್ಯೂಗಳು ತಮ್ಮ ಸಂಘಟನಾ ಚಾತುರ್ಯಗಳ ಬಲದಿಂದ ಆಶ್ಚರ್ಯಕರವಾದ ರೀತಿಯಲ್ಲಿ ಅಲ್ಪಾವಧಿಯಲ್ಲಿ ಉಚ್ಚ ದರ್ಜೆಯ ರಾಷ್ಟ್ರವೊಂದನ್ನು ನಿರ್ಮಿಸಿ ಅದನ್ನು ಶತ್ರುಗಳಿರುವ ಶಕ್ತಿಗಳಿಂದ ರಕ್ಷಿಸಿಕೊಂಡು ಬಂದಿದ್ದಾರೆ.

ಇಸ್ರೇಲ ರಾಜ್ಯದ ರಚನೆಯಿಂದಾಗಿ ಲಕ್ಷಾಂತರ ಜನರು ನಿರ್ಗತಿಕರಾಗಿ ಬೇರೆಕಾಗಿ ಬಂದುದು ದುರ್ದೈವದ ಸಂಗತಿ.

ಇಸ್ರೇಲ ಅಭಿವೃದ್ಧಿ:

ಅಲ್ಪಾವಧಿಯಲ್ಲಿ ಇಸ್ರೇಲ್ ಅದ್ಭುತ ಪ್ರಗತಿಯನ್ನು ಸಾಧಿಸಿದೆ. ಮರುಳು ಭೂಮಿಯಾಗಿದ್ದ ಪ್ಯಾಲೆಸ್ಟೈನನ್ನು ನಂದನವನವನ್ನಾಗಿ ಮಾಡಿದ ಕೀರ್ತಿ ಇಸ್ರೇಲಿಗೆ ಸಲ್ಲುತ್ತದೆ. ಕಳೆದ ಎರಡು ದಶಕಗಳಲ್ಲಿ ಸಾಗುವಳಿ ಕ್ಷೇತ್ರದ ಉತ್ಪತ್ತಿ ಇಮ್ಮಡಿಗೊಂಡಿದೆ. ನೀರಾವರಿ ಕ್ಷೇತ್ರ ನಾಲ್ಕು ಪಟ್ಟು ವಿಸ್ತಾರವಾಗಿದೆ. ವೈಜ್ಞಾನಿಕ ಸಾಧನಗಳನ್ನು ಉಪಯೋಗಿಸಿ ಕೃಷಿಯಲ್ಲಿ ಅಭಿವೃದ್ಧಿ ಸಾಧಿಸಿದೆ. ಇಸ್ರೇಲ್ ಕೈಗಾರಿಕೆಯಲ್ಲಿ ಮುಂದುವರಿದಿದೆ. ಇಸ್ರೇಲ್ ತಾನೊಂದು ಚಿಕ್ಕ ರಾಷ್ಟ್ರವೆಂದು ತಿಳಿದು ತನ್ನ ರಕ್ಷಣೆಗೆ ಹೆಚ್ಚಿನ ಗಮನವನ್ನು ಕೊಟ್ಟಿದೆ. ಆದರೆ ಅದು ತನ್ನನ್ನು ಕೆಣಕಿದ ಯಾವ ರಾಷ್ಟ್ರಗಳ ಮೇಲೂ ಆಕ್ರಮಣ ನಡೆಸಲಿಲ್ಲ.

ಇತ್ತೀಚೆಗಿನ ಘರ್ಷಣೆಯ ಕಾರಣ

ಇಸ್ರೇಲನ್ನು ನಾಶಪಡಿಸಬೇಕೆಂಬ ಅರಬ ರಾಷ್ಟ್ರಗಳ ಹಟವೂರಿತನದ ಉದ್ದೇಶವು ಇಸ್ರೇಲ ಸುತ್ತು ಅರಬ ಘರ್ಷಣೆಯ ಮೂಲಕಾರಣವಾಗಿದೆ ಅರಬ ರಾಷ್ಟ್ರಗಳ ಇಸ್ರೇಲದ ಇರುವಿಕೆಯನ್ನು ವಿರೋಧಿಸುತ್ತಿವೆ. ಇಸ್ರೇಲ ರಾಷ್ಟ್ರದ ಸುತ್ತಲೂ ಪ್ರಬಲ ವಿರೋಧಿ ಅರಬರಾಷ್ಟ್ರಗಳಿವೆ. ಕೆಲವು ಅರಬರಾಷ್ಟ್ರಗಳಿಗೆ ಇಸ್ರೇಲದೊಡನೆ ಸಾಮಾನ್ಯ ಗಡಿ ಇದೆ. ಇದು ಗಡಿ ಘರ್ಷಣೆಗೆ ಕಾರಣವಾಯಿತು. ಅರಣ ರಾಷ್ಟ್ರಗಳಾದ ಈಜಿಪ್ಟ್, ಜೋರ್ಡಾನ್ ಮತ್ತು ಸಿರಿಯಾ ರಾಷ್ಟ್ರಗಳ ಬಲವಾದ ಸೈನ್ಯವು ಇಸ್ರೇಲನ್ನು ಸುತ್ತುವರಿದು ನಿಂತಿವೆ. ಈ ಘಟನೆಯು ಇಸ್ರೇಲಿಗೆ ಭಯವನ್ನುಂಟು ಮಾಡಿತು. ಪರಿಣಾಮವಾಗಿ ಅದು ತನ್ನ ರಕ್ಷಣೆಗೆ ಉಪಾಯವನ್ನು ಕಂಡುಕೊಳ್ಳಬೇಕಾಗಿ ಬಂತು. ಈಜಿಪ್ಟ್ ಸುಯೇಜ್ ಕಾಲುವೆಯಲ್ಲಿ ಇಸ್ರೇಲದ ವ್ಯಾಪಾರ ಹಡಗು ಹೋಗಲು ಬಿಡಲಿಲ್ಲ. ಇಷ್ಟಲ್ಲದೇ ಆಕಾಬಕೊಲ್ಲಿಯ ಮೂಲಕ ಏಕ ಹಕ್ಕೆಯವಾಗಿ ಇಸ್ರೇಲ್ ಹಡಗು ಹೋಗಬಾರದೆಂದು ನಿರ್ಬಂಧಿಸಿತು. ಆಕಾಬ ಕೊಲ್ಲಿಯ ಇಸ್ರೇಲ್, ಈಜಿಪ್ಟ್, ಜೋರ್ಡಾನ್ ಮತ್ತು ಸೌದಿ ಅರೇಬಿಯಾಕ್ಕೆ ಸಾಮಾನ್ಯವಾದುದಾಗಿದೆ. ಆಕಾಬ ಕೊಲ್ಲಿಯ ಅಂತ್ಯದಲ್ಲಿ ಇಸ್ರೇಲ್ ಇಲಿಯಟ್ ಎಂಬ ಬಂದರವನ್ನು ಸ್ಥಾಪಿಸಿದೆ. ಈ ಕೊಲ್ಲಿಯನ್ನು ಈಜಿಪ್ಟ್ ಮುಚ್ಚಿದುದರಿಂದ ಇಸ್ರೇಲದ ವ್ಯಾಪಾರಕ್ಕೆ ಧಕ್ಕೆ ಉಂಟಾಯಿತು. ಈ ತೊಲ್ಲಿಯು ಅವರ ಜೀವನಾಡಿಯಾಗಿದೆ. ಈ ಘರ್ಷಣೆಗಳಲ್ಲಿ ಇಸ್ರೇಲದ್ದೇ ಮೇಲುಕೈಯಾಗಿ ಜಗತ್ತಿನಾದ್ಯಂತ ಜನರು ಆಶ್ಚರ್ಯಪಡುವಂತಾಯಿತು.

ಭಾರತದ ಧೋರಣೆ

ಭಾರತದ ಮಧ್ಯ ಏಶಿಯಾ ಧೋರಣೆಯಲ್ಲಿ ಕೆಲವು ಕುಂದು ಕೊರತೆ, ವಿರೋಧಾಭಿಪ್ರಾಯಗಳಿರ ವಂತೆ ತೋರುತ್ತದೆ. ಭಾರತವು ಇಸ್ರೇಲನ್ನು ಮನ್ನಿಸಿದೆಯಾದರೂ, ಅದರೊಡನೆ ರಾಯಭಾರ ಸಂಬಂಧ ಇಲ್ಲ. ಜಗತ್ತಿನ ನೂರು ರಾಷ್ಟ್ರಗಳು ಇಸ್ರೇಲನ್ನು ವನ್ನಿಸಿವೆಯಾದರೂ ರಾಜಕೀಯ ಬಾಂಧವ್ಯ ಹೊಡೆದಿಲ್ಲವಾದರೂ, ಭಾರತವು ಇಸ್ರೇಲದೊಡನೆ ರಾಜಕೀಯ ಬಾಂಧವ್ಯ ಬೆಳೆಯಲು ಆಳುಕುತ್ತಿದೆ ಇಸ್ರೇಲ್‌ದೊಡನೆ ವ್ಯಾಪಾರ ವಹಿವಾಟು ನಡೆಸಲು ಭಾರತವು ಹಿಂಜರಿಯುತ್ತಿದೆ. ಭಾರತದ ರಾಜಧಾನಿಯ ಮರುಭೂಮಿಯನ್ನು ಸಹಾ ನಂದನವನವನ್ನಾಗಿ ಪರಿವರ್ತಿಸುವುದಾಗಿ ಇಸ್ರೇಲ್ ತಿಳಿಸಿದರೂ ಭಾರತ ಸರಕಾರವು ಅದನ್ನು ತಿರಸ್ಕರಿಸಿರುವುದು ದೇಶದ ಪ್ರಗತಿಯ ದೃಷ್ಟಿಯಿಂದ ಆಷ್ಟೊಂದು ಹಿತಕಾರಿಯಾಗಿಲ್ಲ, ಇಸ್ರೇಲ-ಅರಬ ರಾಷ್ಟ್ರಗಳಲ್ಲಿ ಯುದ್ಧ ನಡೆಯುವಾಗ ಯು. ರಾ. ಸಂಘವು ಇಸ್ರೇಲನ್ನು ಆಕ್ರಮಣಕಾರಿ ಎಂದು ಸಾರುವ ಮೊದಲೇ ಭಾರತ ಸರಕಾರವು ಇಸ್ರೇಲನ್ನು ಆಕ್ರಮಣಕಾರಿ ಎಂದು ಏಕ ಪಕ್ಷೀಯವಾಗಿ ಸಾರಿದೆ. ಇದರಿಂದ ಭಾರತದ ಮಧ್ಯಪೂರ್ವ ಧೋರಣೆಯು ಅರಬರ ಕಡೆಗೆಯೇ ವಾಲಿಕೊಂಡಿದೆ ಎಂದರೆ ತಪ್ಪಾಗಲಾರದು. ಒಂದು ದೇಶದ ವಿದೇಶ ಧೋರಣೆ ಆ ರಾಷ್ಟ್ರದ ಹಿತಾಕ್ಕೆಯನ್ನು ಕಾಪಾಡಿಕೊಂಡು ಬರಬೇಕೆಂದು—ಕಾಟಿಲ್ಯನ ಅಭಿಪ್ರಾಯ. ಭಾರತದ ವಿದೇಶ ಧೋರಣೆ ಇದಕ್ಕೆ ವ್ಯತಿರಿಕ್ತವಾಗಿದೆ. ಪಶ್ಚಿಮ ಏಷ್ಯಾದ ಸಂಬಂಧವಾಗಿ ಭಾರತವು ಕಳೆದ ನಿಲುವು ಹೊಸ ಸ್ನೇಹಿತರನ್ನು ಗೆಲ್ಲಲಿಲ್ಲ. ಈ ನಿಲುವಿನಿಂದ ಭಾರತವು ತನ್ನ ಹಿತಾಸಕ್ತಿಗೆ ಧಕ್ಕೆಯನ್ನುಂಟು ಮಾಡಿಕೊಂಡಿದೆ. ಒಟ್ಟಿನಲ್ಲಿ ಭಾರತದ ಮಧ್ಯ ಏಶಿಯಾ ಧೋರಣೆಯು ಇನ್ನೂ ವಿಚಾರಣೀಯವಾಗಲು ಸಾಧ್ಯವಿದೆ.

ಉಸಸ ಸಂಹಾರ

ಇತ್ತೀಚೆಗಿನ ಘರ್ಷಣೆಯಲ್ಲಿ ಅರಬರಿಗೆ ಹೆಚ್ಚಿನ ಯಾವ ಸವಲತ್ತೂ ಸಿಗಲಿಲ್ಲ. ಅರಾಷ್ಟ್ರಗಳ ಹಲವಾರು ಭೂಭಾಗವನ್ನು ಇಸ್ರೇಲ್ ವಶಪಡಿಸಿಕೊಂಡು ಅದರಲ್ಲಿ ಭದ್ರವಾಗಿ ತಳವೂರಿದೆ. ಜೋರ್ಡಾನಿನ ಭಾಗವಾದ ಜೆರುಸಲೇಮನ್ನು ಇಸ್ರೇಲ್ ವಶಪಡಿಸಿಕೊಂಡ ಜೋರ್ಡಾನಿಗೆ ಯುತ್ಪಾರ್ಧಿಗಳಿಂದ ವರ್ಷಂಪ್ರತಿ ಬರುತ್ತಿದ್ದ 50ಕೋಟಿ ರೂಪ್ಯಾಗಳಿಗೆ ಮುಟ್ಟು ಗೋಲು ಹಾಕಿದೆ. ಜೋರ್ಡಾನಿನ ಫಲವತ್ತಾದ ಭೂಭಾಗವನ್ನು ಇಸ್ರೇಲ್ ಹಿಡಿದುಕೊಂಡಿದ್ದರಿಂದ, ಅದು ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದೆ. ಈ ಕದನದ ಪರಿಣಾಮವಾಗಿ ಈಜಿಪ್ಟ್ ತನಗಿರುವ ಘನ ಸ್ಥಾನವನ್ನು ಕಳೆದುಕೊಂಡಿದೆ. ಸುಯೇಜ್ ಕಾಲುವೆ ಮುಚ್ಚಿದುದರಿಂದಾಗಿ ಈಜಿಪ್ಟ್‌ಗೆ ಭಾರಿ ನಷ್ಟವಾಗಿದೆ. ಇಷ್ಟಲ್ಲದೆ ಈ ಯುದ್ಧದಿಂದಾಗಿ ಈಜಿಪ್ಟ್‌ನ ಆರ್ಥಿಕ ಸ್ಥಿತಿ ತೀರಾ ಕುಸಿದು ಹೋಗಿದೆ. ಒಟ್ಟಿನಲ್ಲಿ ಅರಬ ರಾಷ್ಟ್ರಗಳಿಗೆ ಬಹಳ ನಷ್ಟವಾಗಿದೆ. ಇಸ್ರೇಲ ರಚನೆಯಲ್ಲಿ ಸಾಮ್ರಾಜ್ಯವಾದಿಗಳ ಕೈವಾಡವಿದ್ದರೂ, ಇಸ್ರೇಲದ ಇರುವಿಕೆ ಸತ್ಯವಾಗಿದೆ. ಆದುದರಿಂದ ಅರಬ ರಾಷ್ಟ್ರಗಳು ಇಸ್ರೇಲನ್ನು ನಾಶಪಡಿಸುವ ಹಳಮಾರಿತನದ ಧೋರಣೆಯನ್ನು ಕೈಬಿಟ್ಟು ಇಸ್ರೇಲದ ಅಸ್ತಿತ್ವವನ್ನು ಒಪ್ಪಬೇಕು. ಇಸ್ರೇಲದ ಅಸ್ತಿತ್ವವನ್ನು ಕಾಪಾಡಲು ಈಜಿಪ್ಟ್, ಸುಯೇಜ್ ಕಾಲುವೆ ಮತ್ತು ಆಕಾಬ ಕೊಲ್ಲಿಯಲ್ಲಿ ಇಸ್ರೇಲ ಹಡಗು ಹಾಯ್ದು ಹೋಗಲು ನಿಶ್ಚಿತ ಶರತ್ತುಗಳಾಗಬೇಕು. ಈ ಎರಡನ್ನು ಸಾಧಿಸಿದ ಮೇಲೆ ಇಸ್ರೇಲ ಕಾನು ಹಿಡಿದ ಭೂಭಾಗವನ್ನು ಬಿಟ್ಟು ಕದನ ಪೂರ್ವದ ಸ್ಥಳಕ್ಕೆ ತೆರಳುವಂತೆ ಯು. ರಾ. ಸಂಘ ನೋಡಿಸಬೇಕು. ಇನ್ನುಳಿದ ಸಮಸ್ಯೆಗಳನ್ನು ಇಸ್ರೇಲ-ಅರಬ ರಾಷ್ಟ್ರಗಳು ಶಾಂತ ರೀತಿಯಲ್ಲಿ ಚರ್ಚಿಸಿ ಸಮ್ಮತಿಗೆ ಒಪ್ಪಂದಕ್ಕೆ ಬರಬೇಕು. ಹರರಾಷ್ಟ್ರಗಳು ಎಂದಿನ ಪಿಪಾದಿಂದ ದೂರ ಇರಬೇಕು. ಈ ರೀತಿಯಲ್ಲಿ ಪೂರ್ವದ ಮಧ್ಯಪೂರ್ವದ ಸ್ಥಿತಿ ಸುಧಾರಿಸಬಹುದು.

(ಸಂಗ್ರಹಗಳಿಂದ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
O. S. No. 70/67

Mrs. ವಿನ್ಸೆ. W. ಬೋಜೊ — ವಾದಿಳು

ಮತ್ತು

ಬಿಯೂಲು ಮರಕಾಲ್ತಿ — ರಾಮು ಮರಕಾಲನ ಸೊಸೆ — ಉದಯವರ ಗ್ರಾಮ

— ಪ್ರತಿವಾದಿಯು

ವಾದಿಳು ಪ್ರತಿವಾದಿಳ ಮೇಲೆ ಪುರುಷಾಂಶಿ ಸಂವತ್ಸರದ ಶಾಸನಯನ್ನು ಕ್ರೋಧಿನಾಮ ಸಂವತ್ಸರದ ವರೆಗೆ ಬರಕಕ್ಕೆ ಮೂಲಗೇಣಿ ಗೇಣಿ ಬಡ್ಡಿ ಕೂಡಿಸಿ ರೂ. 583–69ಕ್ಕೆ ದಾವ್ಯಲುಮಾಡಿದ ಮೇಲಿನ ದಾವೆಯು ತಾ. 18–9–67ಕ್ಕೆ ಇಟ್ಟಿದೆ. ಪ್ರತಿವಾದಿಳು ಸದರಿ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಸದ್ರಿ ದಾವೆಯಲ್ಲಿ ಮೇಲ್ಕಂಡ ಕೋರ್ಟಿಗೆ ಮುಂದೆ ಹಾಜರಾಗಿ ಮನನ ಮಾಡಿಕೊಳ್ಳುವಂಗೆ ತಪ್ಪಿದಲ್ಲಿ ಪ್ರತಿವಾದಿಳ ಗೈರು ಹಾಜ್ರಿಯಾದ ಸದ್ರಿ ದಾವೆಯನ್ನು ವಾಸ್ತವ್ಯವಾಗಿ ತೀರ್ಮಾನಿಸಲ್ಪಡುವದು.

(Sd.) Grahan C. Rego
Vakil for Plaintiff

ಉಡ್ಪಿ, ತಾ. 11—9—67



ನಮ್ಮ ಚಂದಾದಾರರಲ್ಲಿ ನಮ್ರ ವಿನಂತಿ

ಇದೇ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 46ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 47ನೇ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಅದಷ್ಟು ತ್ವರ್ಯಮನಿಆರ್ಡರು ಮೂಲಕ ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆ ಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಅಂತೂ ಚಂದಾ ಹಣವು ಸಕಾಲದಲ್ಲಿ ಬಾರದಿದ್ದಲ್ಲಿ ನಾವು ಕ್ರಮಶಃ ಮುಂದಿನ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇನೆ. ಇದನ್ನು ಅವಶ್ಯ ಸ್ವೀಕರಿಸಿ ಸಹಕರಿಸುವಂತೆ ಬಿನ್ನಹಿಸುತ್ತೇನೆ.

ಮೆನೇಜರ್,
ನವಯುಗ, ಉಡುಪಿ.

ಪಕ್ಷಿ ನೋಟ

ಜನಸಂಖ್ಯೆ ಮತ್ತು ಕುಟುಂಬ ಯೋಜನೆ

ಭಾರತದ ವಿಸ್ತೀರ್ಣದ ಭೂಮಿ ವಿಸ್ತೀರ್ಣದ ಶೇಕಡ ೨.೪ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದರೂ ಜಗತ್ತಿನ ಜನಸಂಖ್ಯೆಯ ಶೇಕಡ ೧೪ ಅಂಶವನ್ನು ಪ್ರತಿನಿಧೀಕರಿಸುತ್ತಿದೆ. ೧೯೫೧ರಲ್ಲಿ ನಡೆಸಿದ ಜನಗಣತಿಯ ಪ್ರಕಾರ ಭಾರತದ ಜನಸಂಖ್ಯೆ ೪೩.೯ ಕೋಟಿಯಷ್ಟಿದ್ದಿತು. ೧೯೫೧-೬೧ರ ದಶಕದಲ್ಲಿ ಜನಸಂಖ್ಯೆ ಪ್ರಮಾಣ ೭೮ ಕೋಟಿಗಿಂತಲೂ ಅಧಿಕವಾಯಿತು. ೧೯೬೧ರಲ್ಲಿ ಜನಸಂಖ್ಯೆ ೫೦ ಕೋಟಿಗಿಂತಲೂ ಮೀರಿತು.

ಜನಸಂಖ್ಯೆ ವರ್ಷಂಪ್ರತಿ ಶೇಕಡ ೨.೫ ಪ್ರಮಾಣ ಏರುತ್ತಿರುವ ಇದೇ ಪ್ರಮಾಣದಲ್ಲಿ ಜನಸಂಖ್ಯಾ ವೃದ್ಧಿಯಾದರೆ ಇನ್ನು ೩೦ ವರ್ಷಗಳಲ್ಲಿ ೧೦೦ ಕೋಟಿ ದಾಟುವುದು ಮುಟ್ಟುಕ್ಕೆನ್ನಿ. ಅಧಿಕಾಭಿವೃದ್ಧಿಯು ಭೀಕರವಾದ ಅಭಿವೃದ್ಧಿಯಲ್ಲಿ ಜನಸಂಖ್ಯೆಯು ನಿಯಂತ್ರಣ ಅತ್ಯಗತ್ಯವಾಗುತ್ತದೆ.

ಸ್ವಾತಂತ್ರ್ಯಾನಂತರ ಪ್ರಥಮ ಪಂಚವರ್ಷ ಯೋಜನೆಯ ಕಾಲದಲ್ಲಿ ಕುಟುಂಬ ಯೋಜನೆಗೆ ೧೦ ಲಕ್ಷ ರೂಪಾಯಿಗಳ ಸ್ವಲ್ಪ ಮೊತ್ತವನ್ನು ಒದಗಿಸಲಾಯಿತು. ಆದರೆ ಸ್ವತಂತ್ರ ಭಾರತದ ಮೊದಲ ಪಂಚವರ್ಷ ಯೋಜನೆಯ ಕಾಲದಲ್ಲಿ ಈ ಮೊತ್ತವನ್ನು ೧೦ ಕೋಟಿ ರೂಪಾಯಿಗಳಿಗೆ ಏರಿಸಲಾಯಿತು. ಎರಡನೆಯ ಪಂಚವರ್ಷ ಯೋಜನೆಯ ಕಾಲದಲ್ಲಿ ಈ ಮೊತ್ತವನ್ನು ೨೦ ಕೋಟಿ ರೂಪಾಯಿಗಳಿಗೆ ಏರಿಸಲಾಯಿತು. ಮೂರನೆಯ ಪಂಚವರ್ಷ ಯೋಜನೆಯ ಕಾಲದಲ್ಲಿ ಈ ಮೊತ್ತವನ್ನು ೫೦ ಕೋಟಿ ರೂಪಾಯಿಗಳಿಗೆ ಏರಿಸಲಾಗಿದೆ. ಆದರೆ ಸ್ವತಂತ್ರ ಭಾರತದ ಮೊದಲ ಪಂಚವರ್ಷ ಯೋಜನೆಯ ಕಾಲದಲ್ಲಿ ಈ ಮೊತ್ತವನ್ನು ೧೦ ಕೋಟಿ ರೂಪಾಯಿಗಳಿಗೆ ಏರಿಸಲಾಯಿತು. ಎರಡನೆಯ ಪಂಚವರ್ಷ ಯೋಜನೆಯ ಕಾಲದಲ್ಲಿ ಈ ಮೊತ್ತವನ್ನು ೨೦ ಕೋಟಿ ರೂಪಾಯಿಗಳಿಗೆ ಏರಿಸಲಾಯಿತು. ಮೂರನೆಯ ಪಂಚವರ್ಷ ಯೋಜನೆಯ ಕಾಲದಲ್ಲಿ ಈ ಮೊತ್ತವನ್ನು ೫೦ ಕೋಟಿ ರೂಪಾಯಿಗಳಿಗೆ ಏರಿಸಲಾಗಿದೆ.

ಕುಟುಂಬ ಯೋಜನಾ ಕೇಂದ್ರಗಳ ಜಾಲವನ್ನು ಈಗಾಗಲೇ ರಚಿಸಲಾಗಿದೆ. ಈ ವರ್ಷದ ಅಂತ್ಯದಲ್ಲಿ ೧೪,೧೫೦ ಕುಟುಂಬ ಯೋಜನಾ ಕೇಂದ್ರಗಳಲ್ಲಿ ಸಂತಾನ ನಿಯಂತ್ರಣದ ಬಗ್ಗೆ ಜನತೆಗೆ ಸಲಹೆ ನೀಡಲಾಗುತ್ತಿರುವುದಲ್ಲದೆ ಉಚಿತವಾಗಿ ಗರ್ಭ ನಿರೋಧಕ ಸಾಧನಗಳನ್ನು ಹಂಚಲಾಗುವುದು. ಗ್ರಾಮಾಂತರ ಪ್ರದೇಶಗಳಲ್ಲಿ ೧೫,೬೬೬ ಕುಟುಂಬ ಯೋಜನಾ ಕೇಂದ್ರಗಳಿವೆ.

ಜನನ ನಿಯಂತ್ರಣದ ವಿಧಾನಗಳು, ಸಂತಾನ ಶಕ್ತಿ ಹರಣ ಶಸ್ತ್ರ ಚಿಕಿತ್ಸೆ, ಗರ್ಭ ವಿಚ್ಛಿತ್ತಿಕರ ಸಾಧನಗಳು ಈಗ ಜನಪ್ರಿಯವಾಗುತ್ತಿವೆ.

ವಿಸ್ತೃತ ಪ್ರಯೋಗ ಪರೀಕ್ಷೆಯ ನಂತರ ಆಯ್ದು ಬಂದಿರುವಂಥ 'ಲೂಪ್' ಬಳಕೆಯು ಭಾರತದಲ್ಲಿ ಅತ್ಯಪ್ರಮಾದಕಾರಿ ಹೊಸ ವಿಧಾನವೆಂದು ಗುರುತಿಸಲ್ಪಟ್ಟಿದೆ. ಈ ಸಾಧನವನ್ನು ಗರ್ಭಾಶಯದಲ್ಲಿ ಅಳವಡಿಸಿದರೆ ಸಾಕು, ಅದರ ಪ್ರತಿಯೊಬ್ಬರಿಗೂ ದೊರಕಬೇಕಾದ ಪ್ರಯೋಜನದಲ್ಲಿ ಯಥೋಚಿತವಾದ ವಿಶೇಷಜ್ಞರಿಲ್ಲ. ಇವಲ ಶೇಕಡ ೧೧೦.೯ಷ್ಟು ಅಧಿಕವಾಯಿತು. ಇದೇ ಅವಧಿಯಲ್ಲಿ ಜನಸಂಖ್ಯೆ ಶೇಕಡ ೨೫ರಷ್ಟು ಏರಿತು. ದ್ವಿದಳ ಧಾನ್ಯಗಳು ಶೇಕಡ ೨೧ ಏರಿದರೆ ಪ್ರಯೋಜನದಲ್ಲಿ ಶೇಕಡ ೧೧ ಏರಿದೆ ಎಂದು ಪ್ರಕಟಿಸಿದರೂ ಗ್ರಹಿಯೊಬ್ಬರಿಗೂ ದೊರಕುವ ಪ್ರಯೋಜನ ಶೇಕಡ ೧೦ಕ್ಕಿಂತ ಕಡಿಮೆ ಬಂದಿತ.

ಈಗ ಹೆಚ್ಚಿರುವ ಜನಸಂಖ್ಯೆಗೆ ಅಗತ್ಯವಿರುವ ಜನನ ನಿಯಂತ್ರಣವನ್ನು ೧೯೭೬ನೇ ಇಸವಿಯ ಅಂತ್ಯದಲ್ಲಿ ಸಾಧಿಸಲೇಬೇಕಾದ ಗುರಿಯಾಗಿದೆ.

ಅಟ್ಟಿಗೆ ಪಟ್ಟು, ಎಣಿಕೆ ಬಾರದ ಕರಣಿಕ

(ನಾಲ್ಕನೇ ಪುಟದಿಂದ)

ನಮ್ಮ ರಂಜನೀ ಬಹಳ ವಿಚಿತ್ರವಾದ್ದು. ಇದು ಚಳಿಜ್ವರ ಇದ್ದ ಹಾಗೆ. ಚಳಿಂತ ಜೊಡಿಕೆ ತಂ ಬಿ ಉಂಟುಮಾಡ್ತೆ.... ಉರಿಂತ ಗಾಳಿ ಮಾಡಿದ್ರೆ ಕಡಿಮೆ ಆಗತ್ತೆ...."

"ಸಂಯೋಗಂದ ಬಂಡ ಗಳವಾಸಿ—ಸ ಜೂಜುವಾದಿ, ಪ್ರಜಾಪ್ರಭುತ್ವವಾದಿ—ಸ ವಾಕ್ಚಾತುರ್ಯವಾದಿ ಇವುಗಳ ಇವಿಶ್ವರ್ಯದ ಟಿಕೆಟ್ಟು ನೋಡೋಕೆ ಬಾರಿಚುದ. ಆದ್ರೇನ? ಅದು ಗಬ್ಬಿಲವಾಯ್ತು ಅಷ್ಟೆ ....'

'ವಿನೋ, ಥಂ ಭಯ...ನೆಮ್ಮಟ್ಟು ಕಟ್ಟು ಮಡುವನ್ನ ದಾಟುವ ಪ್ರಯತ್ನ ನಮ್ಮಿದು. ಎಣಿಕೆ ಬಾರದ ಅಂಶೆಕಾರ ಪಡಿಹೆಸಿ? ಎಂಬ ಗ್ರಹಿಕೆ ಈ.'

'ಇಲ್ಲೇ ನಾವು ತಪ್ಪು ಬಿದ್ದಿರೋದು.... ಕರಣಿಕ ಹುದ್ದೆಗಳನ್ನ ಲೆಕ್ಕ ಬಡಿಸ್ಬೇಕು ಅಂಬ ಹೊಗಡಾರೆ....'

'ಹೋಗ್ಲಿ ಬಿತ್ರಿ. ಆಕಾಶ ಉರುಬುವಾಗ ಕೊಡೆ ಹಿಡಿಯುತ್ತಿರೆಯೆ?'

'ಈ ವಿಂಥ ಕೃಯೋ ಜನವಿಲ್ಲ ಬಲಾಯ್ತ ಮಡಿಸ್ಬೇಕು ಗೆ!'

'ಆಯ್ತೋ ಎಂಥಿದ್ರಿ ಇವ-?'

'ಏನೂ ಇಲ್ಲ. ಬಲಾಯನ ವಾಬಳ್ಳಂ ತ ನಿಯತಿವಿಂದ, ನಿಯತಿಗಿಂಥ ಕರ್ಮಣ್ಯವಾಡ ವಲ್ಲು....'

'ಹ್ಞಾಂ...ಳೀತು—'

'ಹ್ಞಗೆ!'

'ಹೀಗೆ....ಹ್ಞಾಂ—'

'ಹ್ಞಂ ಹ್ಞೆ....'

'ಹ್ಞಾಂ—'

—ಗೋಪಾ.

ತಲೆಕೊಡಲುದುರುವುದೆ?

ಕೇಶವರ್ಧಕ ಬಳಸಬೇಡಿ

ಕೂದಲು ಉದುರುವುದನ್ನು ತಪ್ಪಿಸಲು, ಕೂದಲನ್ನು ಬೆಳೆಸಲು ಕೇಶವರ್ಧಕ ತೈಲಗಳನ್ನು ಉಪಯೋಗಿಸಬೇಡಿ ಇದು ಆಧುನಿಕ ಯುಗದ ಪರಿಹಾರ ಮಾರ್ಗ. ಆದರೆ, ಇದು ಪರಿಹಾರವಲ್ಲ, ಬರಿಯ ಮೂಢ ನಂಬಿಕೆ ಆಥವಾ ಅಂಧಾನುಕರಣೆಯೆಂಬುದು ತಜ್ಞ ವೈದ್ಯರ ಅಭಿಪ್ರಾಯ.

ಒಂದೊಂದು ದೇಶದಲ್ಲಿಯೂ ಕೆಲವೊಂದು ಮೂಢ ನಂಬಿಕೆಗಳಿವೆ. ದೇಶಪೂರ್ವ ವಿರಲಿ, ಪಶ್ಚಿಮವಿರಲಿ, ಕಾಲ ಪ್ರಾಚೀನ ವಿರಲಿ, ನವೀನವಿರಲಿ, ಎಲ್ಲೆಲ್ಲೂ ಬೆಳೆಯುತ್ತಲೇ ಜೋಗುಟ್ಟಿವೆ. ಜಲೋಕದ ಮರವಷ್ಟು ತಾಳಲಿ ಒಸ್ತರೆ, ಬಂಜೆಗೆ ಗರ್ಭನಿಲ್ಲುವುದು ಎಂಬುದು ಭಾರತೀಯರ ನಂಬಿಕೆಯಾದರೆ, ಹುಣ್ಣಿಮೆಯ ರಾತ್ರಿ ಬಿಸಿಲ ಗಾಡಿಯಲ್ಲಿ ನೀವು ಚಂದ್ರುನನ್ನೇ ನೋಡುತ್ತ ರಹಸ್ಯ ಮಂತ್ರಗಳನ್ನು ಉಚ್ಚರಿಸುವುದರಿಂದ ಚರ್ಮವು ವೇರಿನ ಗಂಟುಗಳಾಗುತ್ತವೆ ಎಂಬುದಾಗಿ ಮೂಢ ನಾಗುತ್ತವೆ ಎಂಬುದಾಗಿ ಪಶ್ಚಿಮದವರಿಗೆ ಪೂರ್ಣವಿಶ್ವಾಸ.

ಅಧುನಿಕ ಕಾಲವು ತಜ್ಞ ವೈದ್ಯರು ಇವೆಲ್ಲವೂ ಬುಳ್ಳ ಎಂದು ಸಾರುತ್ತಿದ್ದರೆ ಕಾಲಕಾಲಕ್ಕೆ ನ್ಯಾಯಬಂದೆ ಉಪಯೋಗಿಸಿ ರೋಗಿಗಳು, ಬಳಕೆಗಳಿಬಹುದು; ಆದರೆ, ಇವುಗಳಿಂದ ಎಂದಿಗೂ ಕೂದಲು ಬೆಳೆಯುವುದಿಲ್ಲ ಎಂಬುದೇ ಸತ್ಯ.

ಕೂದಲು ಉದುರುವಿಕೆಗೆ ಹಲವು ಕಾರಣಗಳಿವೆ. ಕೆಲವು ಔಷಧಿಗಳ ಸೇವನೆಯಿಂದಲೂ ಕೂದಲು ಉದುರುತ್ತದೆ. ಇದಕ್ಕೆ ಮುಖ್ಯ ಕಾರಣ ಮಾನಸಿಕ ಒತ್ತಡ. ಇಂದಿನ ಯಾಂತ್ರಿಕ ಯುಗದ ಪರಿಣಾಮ ಮಾನವನ ಮೇಲೆ ಬೀರಿರುವ ಪರಿಣಾಮ ಅಪಾರ. ಇದರಿಂದ ಮಾನಸಿಕ ಒತ್ತಡ ಹೆಚ್ಚಿ ಕೂದಲು ಉದುರುವಿಕೆ ಹೆಚ್ಚುತ್ತದೆ. ಇದಕ್ಕೆ ಮುಖ್ಯ ಪರಿಹಾರ ಮಾನಸಿಕ ಒತ್ತಡವನ್ನು ಕಡಿಮೆ ಮಾಡಿಕೊಳ್ಳುವುದು. ಇದಕ್ಕೆ ಸಾಧ್ಯವಾದಷ್ಟು ಪ್ರಯತ್ನಿಸಿ. ಜೊತೆಗೆ ಸಾಮಾನ್ಯ ಆರೋಗ್ಯ ಸಮಸ್ಯೆಗಳಾದ ಮಲಬದ್ಧತೆ, ಅಜೀರ್ಣ ಮುಂತಾದವುಗಳಿಗೂ ಸೂಕ್ತ ಚಿಕಿತ್ಸೆ ಪಡೆಯಿರಿ. ಇವೆಲ್ಲವೂ ಕೂದಲು ಉದುರುವಿಕೆಗೆ ಕಾರಣವಾಗಬಹುದು.

ಕೂದಲು ಉದುರುವಿಕೆಗೆ ಕಾರಣ ಏನೇ ಇರಲಿ, ಅದಕ್ಕೆ ಸೂಕ್ತ ಚಿಕಿತ್ಸೆ ಪಡೆಯಿರಿ. ಆದರೆ ಕೇಶವರ್ಧಕ ತೈಲಗಳನ್ನು ಬಳಸಬೇಡಿ. ಇವುಗಳಿಂದ ಕೂದಲು ಬೆಳೆಯುವುದಿಲ್ಲ ಎಂಬುದು ವೈದ್ಯಲೋಕದ ಅಭಿಪ್ರಾಯ. ಇವುಗಳಿಂದ ಕೂದಲು ಉದುರುವಿಕೆ ಹೆಚ್ಚಾಗಬಹುದು. ಆದ್ದರಿಂದ ಕೇಶವರ್ಧಕ ತೈಲಗಳನ್ನು ಬಳಸಬೇಡಿ.

ಸುಸ್ಥಿರವಾದ ಮತ್ತು ಉತ್ತಮವಾದ ಎಲ್ಲಾ ವಿಧದ ಬ್ಯಾಂಕಿಂಗ್ ವ್ಯವಹಾರಗಳಿಗೆ ನಮ್ಮ ೮೮ ಶಾಖೆಗಳಿಂದ ಹಳ್ಳಿಗರಿಂದ "ವಿಜಯ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಕನಿಷ್ಠ ಮೊತ್ತದ ಮೇಲೆ ಬಡ್ಡಿ ವರ್ಷಕ್ಕೆ ೨½% ಬಡ್ಡಿ.

ಸ್ಥಿರ ಠೇವಣಿಗಳ ಮೇಲೆ ಶೇ. ೫½% ರಿಂದ ೬½% ಬಡ್ಡಿ.

ವಿ ವಿಜಯ ಬ್ಯಾಂಕ್ ಲಿಮಿಟೆಡ್

ಪ್ರ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್ಸ್",
ಬಿ.ಟಿ. ರೋಡ್, ಹಿಲ್ ಸೈಡ್,
ಜಯಂತಿನಗರ—೩

ಎ. ಬಿ. ಶೆಟ್ಟಿ ಸ್ಮಾರಕವಾಗಿ



ಮೈಸೂರಿನಲ್ಲಿ ಹಾಸ್ಟೆಲು ಕಟ್ಟಡ

ಬಂಟರು ಹೊರನಾಡವರು ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದವರು. ಜೀವನೋಪಾಯ—ಶಿಕ್ಷಣ ಸೌಕರ್ಯಕ್ಕಾಗಿ ಉಳಿದವರಂತೆಯೇ ಇಂದು ಇವರೂ ವೇಶದ ಮೂಲೆ ಮೂಲೆಗಳಲ್ಲಿ ಹರಡಿದ್ದಾರೆ. ಮೈಸೂರು, ರಾಜ್ಯದ ಶಿಕ್ಷಣ ಕೇಂದ್ರಗಳಲ್ಲಿ ಒಂದು. ವಿಶ್ವ ವಿದ್ಯಾಲಯ, ಸ್ನಾತಕೋತ್ತರ ಶಿಕ್ಷಣ ಸೌಕರ್ಯ ವೈದ್ಯಕೀಯಾದಿ ವಿವಿಧ ಕಾಲೇಜುಗಳು ಇಲ್ಲಿರುವುದರಿಂದ ವಿದ್ಯಾಭ್ಯಾಸಕ್ಕಾಗಿ ಇಲ್ಲಿ ಬರುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಬಂಟರ ಸಮೂಹದ ವಿದ್ಯಾರ್ಥಿಗಳ ಸಂಖ್ಯೆಯೂ ಏರುತ್ತಿದೆ.

ಮೈಸೂರು ಶಹರದಲ್ಲಿ ಶಿಕ್ಷಣಾರ್ಥಿಗಳಿಗಾಗಿ ಬರುತ್ತಿರುವ ಬಂಟರು--ನಾಡವರ ಸಮೂಹದ ವಿದ್ಯಾರ್ಥಿಗಳ ಅನುಕೂಲಕ್ಕೆಂದು ಶ್ರೀ ಎ. ರಾಮಣ್ಣ ಮೊದಲಾದವರು ಪ್ರಯತ್ನಿಸಿದರು. ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿನಿಲಯವು ಕೆಲವು ವರ್ಷಗಳಿಗೆ ಮೊದಲು ಆರಂಭವಾಯಿತು. ಮೊದಲಿಗೆ ಇಂತಹ ಹಾಸ್ಟೆಲುಗಳು (ರಾಮಕೃಷ್ಣ ವಿದ್ಯಾರ್ಥಿ ಭವನಗಳು) ನಂಗಳೂರು ಮತ್ತಿತರ ಜಿಲ್ಲೆಯ ಕೆಲವು ತಾಲೂಕು ಕೇಂದ್ರಗಳಿಗೆ ಮಾತ್ರ ಸೀಮಿತವಾಗಿದ್ದುವೆಂಬುದನ್ನು ನೆನಪಿಗೆ ಬಹುದು.

ಮೈಸೂರಿನ ಈ ಹಾಸ್ಟೆಲಿಗಾಗಿ ಸರಕಾರದಿಂದ ಪ್ರಯತ್ನ ಸೂರ್ವಕ ಎರಡು ಎಕ್ರೆ ಸ್ಥಳವನ್ನು ಈಗಾಗಲೇ ಪಡೆಯಲಾಗಿದೆ. ಕಟ್ಟಡದ ರಚನೆಗಾಗಿ ಸುಮಾರು ೬.೭ ಲಕ್ಷ ರೂಪಾಯಿಗಳ ಯೋಜನೆಯೊಂದು ತಯಾರಾಗುತ್ತಿದೆ. ಇಷ್ಟು ದೊಡ್ಡ ಮೊತ್ತವನ್ನು ಕೂಡಿಸುವಲ್ಲಿ ಸಮೂಹದ ಸಂಪನ್ನ ವ್ಯಕ್ತಿಗಳು ತಮ್ಮ ಉದಾರ ಹಸ್ತವನ್ನು ಚಾಚಬೇಕು. ಎ| ಎ. ಬಿ. ಶೆಟ್ಟರು ಬಂಟರ ಸಮೂಹದ ಪ್ರತಿಷ್ಠಿತ ವ್ಯಕ್ತಿ. ಸಮೂಹದ ಸಂಘಟನೆಯನ್ನು ಮಾಡಿದ ಧೀಮಂತ ವ್ಯಕ್ತಿ. ಅವರು ಬಂಟ ಸಮೂಹಕ್ಕೆ ಸಲ್ಲಿಸಿದ್ದ ಸೇವೆಗೆ ಸಮೂಹವು ಸದಾ ಋಣಿಯಾಗಿರಬೇಕು. ಅಂತಹವರಿಗೆಲ್ಲಾ ಈ ವಿದ್ಯಾರ್ಥಿ ಭವನವಾಗುತ್ತದೆ. ಆದುದರಿಂದ ದಿ| ಎ. ಬಿ. ಶೆಟ್ಟರ ಪ್ರತಿಯೊಬ್ಬರೂ ಬಂಟ ಸಮೂಹದ ಶಕ್ತಿಯೂ ತಮ್ಮ ಕೊಡುಗೈ ದಾನದಿಂದ ಈ ವಿದ್ಯಾರ್ಥಿ ಭವನವು ಶೀಘ್ರವಾಗಿ ತಲೆಯೆತ್ತುವಂತೆ ಮಾಡುವಲ್ಲಿ ಸಂಪೂರ್ಣ ಸಹಕರಿಸಬೇಕು.

ಎಂದಿನಂತೆ ಪ್ರಕಟವಾಗುವ

ದೀಪಾವಳಿ ಸಂಚಿಕೆ

ಜಾಹೀರಾತಿಗೆ ಉತ್ತಮ ಮಾಧ್ಯಮ.

ಕಂದಾಯ ಸಚಿವರಿಗೆ ತುನವಿ

ಇದೇ ತಾ. 13ರಂದು ಮಂಗಳೂರಲ್ಲಿ ಜರಗಿದ ಸೌತ್ ಕೆನರಾ ಜಿಲ್ಲಾ ಬೋರ್ಡ್ ಬ್ಯಾಂಕ್ ಎಂಪ್ಲಾಯೀಸ್ ವಿಶೇಷ ಸಭೆಯೊಂದರಲ್ಲಿ ಕಂಪೆನಿಯ ಹಾಗೂ ಅರಣ್ಯ ಶಾಲೆಯ ಸಚಿವ ಶ್ರೀ ಬಿ. ರಾಚಯ್ಯನವರಿಗೆ ಮನವಿಯೊಂದನ್ನು ಅರ್ಪಿಸಲಾಯಿತು.

ಮೈಸೂರು ಭೂಸುಧಾರಣಾ ಮಸೂದೆಯಲ್ಲಿ ಕೆಲವು ತಿದ್ದುಪಡಿಗಳನ್ನು ತರುವ ಬಗ್ಗೆ ಹಾಗೂ ಜಿಲ್ಲೆಯ ಕೃಷಿ ಅಭಿವೃದ್ಧಿಗೆ ಸಂಬಂಧಿಸಿದ ಕೆಲವು ಮಹತ್ವದ ವಿಚಾರಂಗಳು ಮನವಿಯ ಮುಖ್ಯಾಂಶಗಳಾಗಿದ್ದುವು. ಭೂಸುಧಾರಣಾ ಕಾಯಿದೆಯ ಎರಡು ಮುಖ್ಯ ನಿಯಮಗಳಾದ ಹಿಡುವಳಿ ಹಾಗೂ ನ್ಯಾಯಗೇಣಿಯ ಪ್ರಗದಿಯನ್ನು ಹೊರತು ಮಿಕ್ಕವುಗಳ ಕಾರ್ಯಾಚರಣೆಯಲ್ಲಿ ವಿನಾಯಿತಿ ನೀಡಬೇಕೆಂದೂ ತೀರ್ವಯನ್ನು ರದ್ದು ಮಾಡುವ, ಹಾಗೂ ಬೇರೆ ವಿದ್ಯಮಾನ ತೆಂಗಿಗೆಳನ್ನು ಆರಂಭಿಸುವುದು ಈಗಿನ ಪರಿಸ್ಥಿತಿಯಲ್ಲಿ ಅನುಕೂಲವಲ್ಲವೆಂದೂ ಸೂಚಿಸಲಾಗಿದೆ.

ಸಚಿವರು ಉತ್ತರಿಸುತ್ತಾ ಚೀಂಬರಿನವರು ಮುಂದಿಟ್ಟ ಸಮಸ್ಯೆಗಳ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿದರು. ಭೂಮೂಲಕರ ಅಭಿಪ್ರಾಯಗಳ ಮೇಲೆಯೆ ನಿರ್ಧಾರಕ್ಕೆ ಬರಲಾಗುವುದಿಲ್ಲವೆಂದೂ, ಒಕ್ಕಲುಗಳ ಅಭಿಪ್ರಾಯವನ್ನು ಕೇಳಿ ಉಳಿಯಿರಿಗೂ ನ್ಯಾಯವಾಗುವ ಮಾರ್ಗ ಅನುಸರಿಸಬಹುದೆಂದೂ ತಿಳಿಸಿದರು. ಎಲ್ಲ ಅಭಿಪ್ರಾಯಗಳನ್ನು ಸಂಬಂಧಪಟ್ಟಿರೊಡನೆ ಚರ್ಚಿಸುವುದಾಗಿ ಆಶ್ವಾಸನೆಯಿತ್ತರು. ಆರಂಭದಲ್ಲಿ ಚೀಂಬರಿನ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟರು ಪ್ರಸ್ತಾವನ ಭಾಷಣ ಮಾಡಿದ್ದರು. ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಸಿ. ಶೆಟ್ಟರು ಧನ್ಯವಾದವಿತ್ತರು.

ಬಂಟ್ವಾಳದಲ್ಲಿ ಕಾಲೇಜು ಕಟ್ಟಡದ ಶಿಲಾನ್ಯಾಸ.

ಬಂಟ್ವಾಳದ ಶ್ರೀ ವೆಂಕಟರಮಣ ಸ್ವಾಮಿ ವಿದ್ಯಾವರ್ಧಕಸಂಘದವರಿಂದ ಪಡೆಯಲ್ಪಡುವ ಶ್ರೀ ವೆಂಕಟರಮಣ ಸ್ವಾಮಿ ಕಾಲೇಜಿನ ಕಟ್ಟಡದ ಶಿಲಾನ್ಯಾಸ ಸಮಾರಂಭವು ಶ್ರೀ ಬಿ. ಮಾಧವ ಶೆಟ್ಟಿಯವರಿಂದ, ಮೈಸೂರು ಯುನಿವರ್ಸಿಟಿಯ ವೈಸ್ ಚಾನ್ಸಲರ್ ಡಾ| ಕೆ. ಎಲ್. ಶ್ರೀಮಾಲಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಪ್ರಾರ್ಥನೆಯೊಡನೆ ಬಳಿಕ ಸಂಘದ ಅಧ್ಯಕ್ಷ ಶ್ರೀ ಬಿ. ದಾಮೋದರ ಜನಾರ್ದನ ಬಂಳಿಗರು ಸ್ವಾಗತಿಸಿದರು. ಶುಭಕೋರಿದವರಿಂದ ಸಂದೇಶಗಳನ್ನು ಶ್ರೀ ಪಡುಬಿದ್ರಿ ಲಕ್ಷ್ಮಣ ಪ್ರಭುಗಳು ಓದಿದರು ಸಂಘದ ಉಪಾಧ್ಯಕ್ಷ ಶ್ರೀ ಬಿ. ರಘುರಾಮ ಪ್ರಭುಗಳು ಆತಿಥಿಗಳಿಗೆ ಹಾರಾರ್ಪಣೆಗೈದರು.

ಉದ್ಘಾಟಕರಾದ ಶ್ರೀ ಮಾಧವ ಶೆಟ್ಟಿಯವರು ಅಡರ್ಶ ವಿದ್ಯಾಸಂಸ್ಥೆಯಾಗಿ ಬೆಳೆದು ಬೆಳಗಲಿ ಎಂದು ಹಾರೈಸಿದರು ಡಾ| ಶ್ರೀಮಾಲಿಯವರು ತನ್ನ ಅಧ್ಯಕ್ಷ ಭಾಷಣದಲ್ಲಿ ಇಂದಾ ಹಳ್ಳಿ ಪ್ರದೇಶಗಳಲ್ಲಿ ಇಂತಾ ಕಾಲೇಜುಗಳಾಗುವುದು ಅಗತ್ಯವೆಂದು ಹೇಳಿದರು, ಹಾಗೂ ಕಾಲೇಜಿಗೆ ಅವಶ್ಯ ಭೂಪ್ರದೇಶವನ್ನು ಕೊಡಿಸಿದರು ಅಲ್ಲದೆ ಮೈಸೂರು ಸಿಫಿನ ಸಭಾಧ್ಯಕ್ಷ ಶ್ರೀ ಬಿ. ವೈ. ಕುಂದರ ಬಾಳಿಗಾ, ಮೈಸೂರು ವಿಶ್ವವಿದ್ಯಾಲಯದ ಸೆನೇಟ್ ಸದಸ್ಯರಾದ ಶ್ರೀ ಕೆ. ಸೂರ್ಯನಾರಾಯಣ ಅಡಿಗ, ದ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ, ಪ್ರಿನ್ಸಿಪಾಲ್ ಡಾ| ಎ. ಎಸ್. ಅಡ್ಯಿ, ಬಂಟ್ವಾಳ ಹೈಸ್ಕೂಲಿನ ನಿವೃತ್ತ ಮುಖ್ಯೋಪಾಧ್ಯಾಯ ಶ್ರೀ ಕೆ. ಮಾಧವ ಶೆಟ್ಟಿ ಮೊದಲಾದವರು ಕಾಲೇಜಿಗೆ ಉತ್ತರೋತ್ತರ ಶ್ರೇಯಸ್ಸು ಕೋರಿದರು ಶ್ರೀ ವೆಂಕಟೇಶ ನಲಿಸಿಂಹ ಬಾಳಿಗರು ಧನ್ಯವಾದ ಸಮರ್ಪಿಸಿದರು.

ಕಾಲೇಜು ಕಟ್ಟಡಕ್ಕೆ ಮೈಸೂರು ನುಂಗಳೂರು ಗಡೀಶ ಬೀಡಿ ಖೂಲಿಕರಾದ ಶ್ರೀ ಬಿ. ಮಾಧವ ಶೆಟ್ಟಿ ಹಾಗೂ ಶ್ರೀ ಬಿ. ರಘುರಾಮ ಪ್ರಭುಗಳು ತಲಾ ಒಂದೊಂದು ಲಕ್ಷ ರೂಪಾಯಿ ಉದಾರ ದಾನವಿತ್ತಿದ್ದರು.

ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕರಿಗೆ ಸನ್ಮಾನ

ಸುರತ್ಕಲ್ ಸೆಪ್ಟಂಬರ್ ೯ ಆದರ್ಶ ಶಿಕ್ಷಕರೆಂದು ರಾಷ್ಟ್ರ ಪ್ರಶಸ್ತಿಗೆ ಈ ಸಲ (1967) ಆಯ್ಕೆಯಾದ ಶ್ರೀಯುಂ. ವಾಸುದೇವಯ್ಯರನ್ನು ಸತ್ಕರಿಸುವ ಸಲುವಾಗಿ, ಗೋವಿಂದ ದಾಸ ವಿದ್ಯಾದಾಯಿನೀ ಕಾಲೇಜು ಹಳೆವಿದ್ಯಾರ್ಥಿಯಾಯಿನೀಹೈಯರ್ ಸೆಕೆಂಡರಿಸ್ಕೂಲ್, ಇ. ವಿ. ಡಿ. ಎ. ಶಾಲೆ, ಮತ್ತು ಶ್ರೀ ವೆಂಕಟ್ರಮಣ ಹಾ. ಎ. ಶಾಲೆ, ಮೈರ್ಪಾಡಿ-ಈ ನಾಲ್ಕು ಶಾಲೆಯ ಅಧ್ಯಾಪಕ ವೃಂದದವರ ಸಂಯುಕ್ತ ಸಹಯೋಗ ಶ್ರೀ ಯಜ್ಞ. ದಾಮೋದರ ರಾವ್—ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಸ್ವಾರ್ಹಜೆಗಳಾದ ಬಳಿಕ ಸರ್ವಶ್ರೀ ಪಿ. ಕೆ. ದೇವಾಡಿಗ, ಬಿ. ಪದ್ಮನಾಭ ಸೋಮಯಾಜಿ ವೆಂಕಟರಾಯರಾರ್ಯ ಇವರು ಶ್ರೀ ವಾಸುದೇವರಾಯರ ವ್ಯಕ್ತಿತ್ವ ಶಕ್ತಿ, ಆದರ್ಶದ ನಡೆನುಡಿ, ಬೋಧನಾ ಕ್ರಮ ಮೊದಲಾದ ವಿಚಾರವಾಗಿ ಭಾಷಣ ಗೈಯಲು ಶ್ರೀ ವಾಸುದೇವರಾಯರು ಕೃತಜ್ಞತೆಯನ್ನರ್ಪಿಸುತ್ತ ಧೃಢವಾದಾಲುಮೆಧೈರ್ಯದ ನಡೆ, ನಿಸ್ಕಲ್ಮಷ ಹೃದಯ, ಸತತ ಉದ್ಯೋಗ ಇವುಗಳಿದ್ದಲ್ಲಿ ಯಾರೂ ಜಯವನ್ನು ಪಡೆಯಬಹುದು ಎಂದು ಹೇಳಿ ತನಗೆ ಸ್ಫೂರ್ತಿಯನ್ನಿತ್ತವರೆಲ್ಲರನ್ನೂ ಕೊಂಡಾಡಿದರು.

ಅಧ್ಯಕ್ಷರು—ಈ ರಾಷ್ಟ್ರೀಯ ಪ್ರಶಸ್ತಿಯು ನಮ್ಮ ಮುಖ್ಯೋಪಾಧ್ಯಾಯರಿಗೇ ಮೊತ್ತ ಮೊದಲಾಗಿ ದೊರೆತಿದುದು ನಮ್ಮ ಭಾಗ್ಯ. ಶ್ರೀ ವಾಸುದೇವರಾಯರಿಗೆ ಇದಕ್ಕಿಂತಲೂ ಹೆಚ್ಚಿನ ಪ್ರಶಸ್ತಿ ಬರಲಿ ಎಂದು ಹಾರೈಸಿ ತಮ್ಮ ಅಧ್ಯಕ್ಷೀಯ ಭಾಷಣವನ್ನು ಕೊನೆಗೊಳಿಸಿದರು.

ಶ್ರೀ ಯಜ್ಞ. ಸೀತಾರಾಮಾಡಾಯರ ಧನ್ಯವಾದಗಳನ್ನು ಅರ್ಪಿಸಿದರು.

ವಿವರಗಳನ್ನು ಆಹ್ವಾನಿಸಲಾಗಿದೆ

ಮಣಿಪಾಲ, ಸೆ. ೧೪—ಇಲ್ಲಿಯ ಅಕಾಡೆಮಿ ಆಫ್ ಜನರಲ್ ಎಜುಕೇಶನ್ ಸಂಸ್ಥೆಗೆ ಸಲಹೆಗಾರರಾಗಿ ಆಗಮಿಸಿರುವ ಅಮೆರಿಕದ ಶ್ರೀ ಸೆಡ್ಡನ್ ಮೆನೆಫೀಯವರು ಇಲ್ಲಿ ನೆಲೆಸಿರುವ ಜೈ ಕುಟುಂಬ ಹಾಗೂ ದಕ್ಷಿಣ ಕನ್ನಡದಲ್ಲಿ ವೈದ್ಯಕೀಯ ರಂಗ, ಬ್ಯಾಂಕ್ ಉದ್ಯಮ, ಹಾಗೂ ಶಿಕ್ಷಣ ಕ್ಷೇತ್ರದಲ್ಲಾಗಿರುವ ಅಭಿವೃದ್ಧಿಯಲ್ಲಿ ಅವರ ಪಾತ್ರದ ಬಗ್ಗೆ ಒಂದು ಪುಸ್ತಕ ಬರೆಯುವದಕ್ಕಾಗಿ ವಿವರಗಳನ್ನು ಸಂಗ್ರಹಿಸುತ್ತಿದ್ದಾರೆ.

ಈ ಪುಸ್ತಕದಲ್ಲಿ ಸಾಧ್ಯವಾದಲ್ಲಿ ಉಪಯೋಗಿಸುವದಕ್ಕಾಗಿ ಸಾರ್ವಜನಿಕರು ವೈಯಕ್ತಿಕ ಸ್ಮರಣೆಗಳು, ಪತ್ರವ್ಯವಹಾರ ಹಾಗೂ ಅತಿ ಅಪರೂಪವಿಲ್ಲದ ಪತ್ರಿಕೆಗಳಿಂದಾಯ್ದ ಅಂಶಗಳನ್ನು ಕಳಿಸಿಕೊಡಬೇಕೆಂದೂ, ಅವನ್ನು ಎಚ್ಚರಿಕೆಯಿಂದ ಇಟ್ಟು ಕೊಳ್ಳುವುದಲ್ಲದೆ ವಾಪಾಸು ಬೇಕಾದಲ್ಲಿ ಕಳಿಸುವುದಾಗಿಯೂ ಶ್ರೀ ಮೆನೆಫೀ ತಿಳಿಸಿದ್ದಾರೆ.

NAVAYUGA

Announcement

HAPPY DEEPAVALI, the great Indian festival of lights, is fast approaching. Rightly do the people rejoice on this day, what with hundred illuminations at home and in the market place.

NAVAYUGA, the premier Kannada Weekly, shares with the people this joy and serves them with a SPECIAL DEEPAVALI ISSUE to illumine their minds. It will contain rich food for thought and entertainment for the masses. Thousands of Kannada people read this issue with relish.

It would be a happy idea for you to use the Navayuga Deepavali Special as a medium for advertising your goods; for, Navayuga is able to carry your message to every home.

ADVERTISEMENT RATES:

Full Page	...	Rs. 200/-	Back Cover Page	...	Rs. 500/-
Half Page	...	Rs 100/-	Inside 1st Cover Page	...	Rs 400/-
Quarter Page	...	Rs. 60/-	Inside 2nd Cover Page	...	Rs. 300/-

MECHANICAL DATA:

Paper Size	...	15" × 10"	Size of type page	...	13" × 8"
		(37 · 5 Cm. × 25 Cm.)			(32 · 5 Cm. × 20 Cm.)

Kindly send your advertisement on or before 20—10—1967.

Date of publication. 2—11—1967

Advt. Manager,
Navayuga, Udipi.

ವಿನ್‌ತ್ರೈಸ್ಯಾಂಡ್

(ಎರಡನೇ ಪುಟದಿಂದ)

ಶಂಟೆ ಆಗಾಗಲೆ ರಾತ್ರಿ ಎಂಟು ಚೆನ್ನಾಗಿ ಊಟ ಮಾಡೋಣ ಎಂದರೆ Vinthaisand ತಲೆಯಲ್ಲಿ ಸುತ್ತುತ್ತಿತ್ತು ಊಟವೂ ಹಿಡಿಸಲಿಲ್ಲ. ನಿದ್ರೆಯೂ ಬಂದಿಲ್ಲ. ರಾತ್ರಿ ಕಳೆದು ಹಗಲು ಹೇಗೆ ಆಯಿತೊ ತಿಳಿಯದು.

ಮರುದಿನ ಅಣ್ಣಪ್ಪಯ್ಯನ ಕಿರಿಯ ಸಹೋದರ ಊಟಿಯಿಂದ ಒಂದು ಪತ್ರ ಬರೆದದ್ದು ಬಂದಿತ್ತು.

ಆ ಪತ್ರದ ಸಾರಾಂಶ ಈ ರೀತಿ ಇತ್ತು.

'ನಿನ್ನೆ ಒಂದು ಟೆಲಿಗ್ರಾಂ ಕೊಟ್ಟಿದ್ದೆ. ಆ ಪ್ರಕಾರ ನೀವು ನನ್ನ ಬ್ಯಾಂಕಿಗೆ ನನ್ನ ಖಾತೆಗೆ ಒಂಭತ್ತು ಸಾವಿರ ರೂಪ್ಯಾ ರವಾನಿಸಿರುತ್ತೀರಿ ಎಂದು ಭಾವಿಸಿದ್ದೇನೆ. ಬೆಂಗಳೂರಿನಲ್ಲಿ ಒಂದು ಹೋಟೆಲನ್ನು ಖರೀದಿ ಮಾಡಿರುತ್ತೇನೆ. ನಾನು ತುಂಬಾ ಕಲಿತಿರಬಹುದು. ಆದರೆ ಬೆಂಗಳೂರಿನಲ್ಲಿ ಹೋಟೆಲ್ ಉದ್ಯಮಕ್ಕೆ ಅನುಕೂಲವಾದ ವಾತಾವರಣವಿದೆ. ಆದುದರಿಂದ ಒಂಭತ್ತು ಸಾವಿರ ರೂಪ್ಯಾ ಕಡಿಮೆ ಆದುದರಿಂದ ಬರೆದಿದ್ದೇನೆ. ಅಲ್ಲದೆ ನಿನ್ನೆ ಟೆಲಿಗ್ರಾಂನಲ್ಲಿ ನನ್ನ ಹೆಸರು ಬರೆದಿಲ್ಲವಾದುದರಿಂದ ನಿನಗೆ ಗದಿಬಿಡಿಯೂದೀತೆಂದು ಈ ದಿವಸ ಎಕ್ಸ್‌ಪ್ರೆಸ್ಸಾಗಿ ಈ ಕಾಗದ ಬರೆದಿದ್ದೇನೆ!'

Remit Nine Thousand Urgent Bank Today ಇದ್ದದ್ದು Permit Vinthaisand Urgent Bank Today ಆದದ್ದು ಹೇಗೆ? ಎಂಬ ಪ್ರಶ್ನೆ ನನ್ನ ಮತ್ತು ಅಣ್ಣಪ್ಪಯ್ಯನ ಮನಸ್ಸಿಗೆ ಬರುವಾಗಲೇ ಉಪೇಂದ್ರ ಬಂದ ಆ ದಿಸ್ತೆಗೆ.

ಒಂದವನೇ—"ನಿನ್ನೆಯ Vinthaisand ಏನಾಯ್ತು?" ಎಂದು ಕೇಳಿದ. ಇದ್ದ ವಿಚಾರ ಹೇಳಿದಾಗ ಒಪ್ಪೊ, ಆದು ಸರಿ" ಎಂದವನೇ ಒಂದು ಕಾಗದದಲ್ಲಿ ಏನೊ ಗೀಚಿದ. ಅದನ್ನು ಓದುವರೇ ನನ್ನ ವೈಗಿತ್ತ ಉಪೇಂದ್ರ.

ಆದು ನೋಡಿ ಆಕ್ಷರದಲ್ಲಿ ಬರೆದಿತ್ತು. Permit Vinthaisand Urgent Bank Today ಎಂದಿತ್ತು ಅದನ್ನು ಆತ Remit Nine Thousand ಎಂದು ಓದಿ ಹೇಳಿದಾಗ ನಾವು ಕಣ್ಣು ಕಣ್ಣು ಬಿಟ್ಟು ನೋಡಿದೆವು

ಊಟಿಯ ನೋಂದಣಿ ಬ್ರಹ್ಮ ಲಿಪಿಯೂ ಇದೇ ಮಾದರಿಯಲ್ಲಿ ಜಂಗಮವಾಣಿ ನಟಪ್ಪಾಲು. ಖಾತೆದಾರರ ಕಣ್ಣಾಗಳಿಗೆ Remit Nine Thousand ಬದಲಿಗೆ Permit Vinthaisand ಆಗಿ ತೋರಿದ್ದರಿಂದಲೇ ಇಷ್ಟೊಂದು ವಿಪರ್ಯಯ ಕಾರಣವಾಯ್ತು.

ಆ ದಿನ ನಾವೆಲ್ಲರೂ ಉಪೇಂದ್ರನ ಹೋಟೆಲಿಗೆ ಹೋಗಿ ಮನಸ್ಸಿಗೆ ಸರಿ ಬಂದಷ್ಟಾನವಿಲ್ಲವಾದರೂ ಹೊಟ್ಟೆ ತುಂಬಾ ತಿಂದು ಖುಷಿ ಕುಡಿದವು.

ಎಷ್ಟೆಂದರೂ ನನ್ನ ಪುತ್ತು ಅಣ್ಣಪ್ಪಯ್ಯನಿಗೆ Vinthaisand ಶಬ್ದವನ್ನು ಸರಿಯಾಗಿ ಅರ್ಥವಾಗುವಂತೆ ಹೇಳಿದವನಲ್ಲವೆ?

ಕಳವು ನಿಲ್ಲಿಸುವ ಉಪಾಯ

ಪನ್ನ ಮಿತ್ರನೊಬ್ಬ ಪಪಾಯಿ ಗಿಡ ನೆಟ್ಟಿದ್ದ ಗಿಡಗಳು ಜೋರಾಗಿ ಬೆಳೆದಿದ್ದವು ತುಂಬಾ ಕಾಯಿ ಬಿಟ್ಟಿದ್ದವು. ಅವು ಹಣ್ಣಾಗಹತ್ತಿದೊಡನೆ ನೆರೆಹೊರೆಯವರ ಬಾಯಿಯಲ್ಲಿ ನೀರು ಬಿಟ್ಟಿತು.

ಮಿತ್ರನು ಸಂಜೆಮುಂಜಾನೆ ಗಿಡಗಳನ್ನು ನೋಡಿ ಕಾಯಿಗಳನ್ನು ಎಣಿಸಿ ಬರುತ್ತಿದ್ದ. ಹಗಲೂ ರಾತ್ರಿ ಕಾಯಲು ನೌಕರರನ್ನು ಇಟ್ಟಿದ್ದ. ಆದರೂ ಒಂದು ದಿನ ೫ ಪಪಾಯಿ ಕಳುವಾಗಿದ್ದವು ಇದರಿಂದ ಅವನು ನಿರಾಶನಾದ. ದುಡಿದವರಿಗೆ ದುಡಿತದ ಫಲ ತಿನ್ನಗೊಡದೆ ದುಡಿಯುವ ದನರೇ ಅಪಹರಿಸಿ ತಿನ್ನುವಂತಾದರೆ ದುಡಿಯುವ ಉತ್ಸಾಹ ಹೇಗೆ ಬರಬೇಕು?

ಆದರೆ ಅವನು ಎಷ್ಟೇ ಒದರಿಕೊಂಡರೂ ೨—೩ ದಿನಕ್ಕೊಮ್ಮೆ ಕಳವು ಆಗುವದು ತಪ್ಪಲೇ ಇಲ್ಲ. ಮುಂದೆ ಎಷ್ಟುಗಳನ್ನು ಬೆಳೆಸಬೇಕೋ ಬಿಡಬೇಕು ಎಂಬ ವಿಚಾರದಲ್ಲಿ ಬಿದ್ದ.

ಕೊನೆಗೆ ಅವನಿಗೊಂದ ಯುಕ್ತಿ ಸೂಚಿಸಿತು. ಅವನು ಮರುವರ್ಷ ಬೀಜ ನೆಟ್ಟು ಬಹಳಷ್ಟು ಗಿಡ ಬೆಳೆಸಿದ ಮತ್ತು ಅವುಗಳನ್ನು ಒಮ್ಮೆ ವೆರೆಹೊರೆಯಲ್ಲಿ ಪ್ರತಿಯೊಂದು ಮನೆಯವರಿಗೂ ಒಳಗಿಡ ಕೊಟ್ಟು ನೆಟ್ಟು ಬೆಳಸಿಕೊಳ್ಳಿರಿ ಎಂದು ಹೇಳಿದ ಫಲ. ಹೆಚ್ಚಿನ ಪರಿಶ್ರಮವಿಲ್ಲದೆ ಬೆಳೆಯುವನೆ. ಆರೋಗ್ಯಕ್ಕೂ ಉತ್ತಮ. ಪೇಟೆಯಲ್ಲಿ ಕೊಳ್ಳ ಹೋದರೆ ತುಂಬಾ ಹುಟ್ಟು. ಕಣ್ಣು ಮುಂದೆ ಅಂಗಳದಲ್ಲೇ ಒಂದು ಮೂಲೆಯಲ್ಲಿ ಬೆಳಸಿಕೊಳ್ಳಬಹುದು ಎಂದು ಹೇಳಿ ಪ್ರೋ

ಓ! ನೆಲದ ಚಲುವೆ!!

ಓ! ನೆಲದ ಚಲುವೆ !!
ಒಲೆ-ಒಲೆದು ನಿಂತಿರುವೆ
ಒಲಹುಗೆ ನೀ ಚಲುವೆ
ಒಲವರಿಗೆ ನೀ ಒಲುಮೆ ತೋರುವೆ
ಒರದೊರೆ ನಿನಗೆ ಹೂರೆ?
ಒರಗು ಬಾರೆ ನೀರೆ !

ನೀಳಗದೆಷ್ಟು ಚಲುವಿನಾಸೆ
ನಿನಗದೆಷ್ಟು ಸೌಂದರ್ಯಾಭೀಪ್ಸೆ
ಒಂದಂಗುಲ ಮಣ್ಣು ಇದ್ದರೂ ಸರಿ
ಜಲಸುರಿದರೂ ಸರಿ, ಬೀಜ ಬಿತ್ತಿದರೂ ಸರಿ
ವಾರಿರುಹಗೆ ನೀ ವಾರಿ
ಭುವಿಗೆಲ್ಲ ನೀನೆ ಅಂಬುಸಾರಿ!

ತಪ್ಪಿಹಿಸಿದ.

ಕೇಳಿ ಎಲ್ಲರೂ ಖುಷಿಯೋದರು. ಪ್ರತಿಯೊಬ್ಬರ ಮನೆಯಲ್ಲೂ ಪಪಾಯಿ ಗಿಡ ಆದವು ಎಲ್ಲರೂ ಬೇಕಷ್ಟು ಹಣ್ಣು ತಿಂದರು. ಮನೆಯಲ್ಲಿಯೇ ಹಣ್ಣು ಸಿಗಹತ್ತಿದ ಮೇಲೆ ಮಿತ್ರನ ತೋಟದಲ್ಲಿ ಹಣ್ಣು ಕಳವಾಗುವದು ತನ್ನಷ್ಟಕ್ಕೇ ಬಂದಾಯಿತು

ಇಂದು ಬಡವರ ಚಿಂತೆ ಹೆಚ್ಚಾಗಿದೆ ಸಾವುಕಾರರ ಭಯ ನಿವಾರಣೆಗೆ ಇದೇ ಸುಲಭವಾದ ಉಪಾಯ ಇಬ್ಬರೂ ಕೂಡಿಯೇ ಬಾಳಬೇಕಾಗಿರುವದರಿಂದ ಶ್ರೀಮಂತರ ಬುದ್ಧಿ ಮತ್ತು ಬಡವರ ದುಡಿತ ಎರಡೂ ಹೊಂದಿಸಿ ಎಲ್ಲರೂ ಮರ್ಯಾದೆಯಿಂದ ಜೀವಿಸುವ ಮಾರ್ಗ ಕಂಡು ಹಿಡಿಯಬೇಕು.

(ಗಾಂವಕೇ ಬಾತ)



ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ
ಪುಟ 450ಕ್ಕೂ ವಿಶೇಷ ಚಿತ್ರಗಳು ಬೆಲೆ ರೂ. 1-50
ರಿಯಿಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ನಿನ್ನ ಶೃಂಗಾರ ಸಾಧನೆಗೆ ಮೇರೆಯಿಲ್ಲ
ಎಷ್ಟು ಸಿಂಗರಿಸಿಕೊಂಡರೂ
ತೃಪ್ತಿಯಿಲ್ಲ
ಕ್ಷಣ-ಕ್ಷಣಕೂ ನೀ ಮೆರಗುಗಾತಿ
ನಾ ಅರಿಯೆ ನೀ ಮೆರವ ರೀತಿ
ಬಿಂಕ ತೋರುವ ಬಿನ್ನಾಣಗಿತ್ತಿ
ಪುಳಕಗೊಳಿಸುವೆ ಸುತ್ತಿ—ಸುತ್ತಿ.
ಚಿಗುರಾಗಿ—ಎಲೆಯಾಗಿ
ಹೂವಾಗಿ—ಹಣ್ಣಾಗಿ
ಕಾಯಾಗಿ—ಹೆಣ್ಣಾಗಿ
ಅದರಿಂದ ತಾಯಬೀಜವಾಗಿ
ಮತ್ತೆ ನೋಡಲಗಿತ್ತಿಯಾಗಿ
ಒಕ್ಕುಲ ಮಕ್ಕಳ ನೀಗಿಸಿ ಯೋಗಿಯಾಗಿ
ನಿರಿಗೆಯ ಜರಿಯ ಸೀರೆ ಉಟ್ಟು
ಹೂಗಳ ಕುಪ್ಪಸವ ತೊಟ್ಟು
ಮಲ್ಲಿಗೆಸರ ಪ್ರೀತಿಯ ಮೂಗುತಿ
ಯಿಟ್ಟು
ಗೆಜ್ಜೆ ತೆನೆಗಳ ಕಾಲಲಿ ತೊಟ್ಟ
ಓ! ನೆಲದ ಚಲುವೆ !!
ಬಾ ನಾ ನವಿದಿಂದ ಕರೆವೆ !!

—"ಮಲ್ಲಾರಿ"

ಸ್ವಾತಂತ್ರ್ಯ ರಶ್ಮಿ

ಬಾಳ ಬಂಧನ ಹಾಳು ಜೀವನ
ಗೋಳು ಜನತೆದು ನು ಶ್ರಿತು
ಹತ್ತು ಚಣಾರಲ ಹೆಣ್ತ್ತು ಸಲಹಿದ
ಬಿತ್ತು ಭುವಿಯನ್ನ ಪ್ರಿತು.
ಎಂತೆ ಎಲ್ಲಿಯೋ ಬಂತು ಬವಣೆಯು
ಹಂತ ಜನರಿಡೆ ಸರಿಯಿತು.
ವರುಷ ವರುಷಕೆ ವರನ ಹೃದ ಬಿ ವಿ
ಪೌರುಷವು ಹೊರ ಚಿಮ್ಮಿತು
ಫಿಲ್ಲು ಮೂನನ ಹುಲ್ಲು ತಿನ್ನಲು
ಗಲ್ಲು ಗುಳ್ಳನು ತಂದಿತು.
ಆಡಿಯ ಮುಂದಕೆ ನುಡಿಯು ಬಂಧಕೆ
'ನಡೆದು ಹೋಗಿರಿ' ಎಂದಿತು.
ಭಾರತಾಂಬೆಯ ಧೀರ ಕುವರರ
ಶೂರ ಗರ್ಜನೆ ಗುಡುಗಿತು.
ಬಾಳ ಪೌಕೆಯ ಹುಳಿ ಗಂಟಿನ
ಗಾಳಿ ದೂರಕೆ ಸಾಗಿಯಿತು.
ನಾಡ ಜನತೆಯ ಗಾಢ ಚಿಂತೆಯ
ಸೂಡು ನೀರಲಿ ವಿಳುಗಿತು.
ಭಾರತಾಂಬೆಯ ಹಾರದಂಚಲಿ
ಸ್ವತಂತ್ರ ರಶ್ಮಿಯು ಬೆಳಗಿತು.

—ಶ್ರೀ ಮ. ಗೋ. ರಾವ್.

"NAVAYUGA" Kannada Weekly is recommended for high Schools and Public Libraries by the Director of Public Instruction in Mysore, Bangalore vide their letter No CL-4.17-4/65 66 dated 26—4—1966



NAVAYUGA 21—9—1957
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ನಗುತಿರು ನೀ ನಗುತ್ತಿದ್ದರೆ . . .

ಯೋಗ್ಯರು

ವಕೀಲ:—ಆರೋಪಿ ನಿಮ್ಮನ್ನು ಏನೆಂದು ಬೈದ?

ಆತ:—ಅದನ್ನು ಯೋಗ್ಯರಾದವರು ಕೇಳಬಾರದು.

ವಕೀಲ:—ಜಾಗಾದರೆ ನ್ಯಾಯಮೂರ್ತಿಗಳ ಕಿವಿಯಲ್ಲಿ ಆದನ್ನು ಹೇಳಿ ಬಿಡಿ.

ನನ್ನದಲ್ಲ

ವಿನೂತನ ಹತ್ಯಲು ಜನರು ಬಿಕ್ಕುರವಾಗಿ ಬರುತ್ತಿದ್ದರು. ಬಾಗಿಲಲ್ಲಿ ಒಬ್ಬ ಆಧಿಕಾರಿ ನಿಂತು ಪ್ರಯಾಣಿಕರಿಗೆ ವಾರ್ಗದರ್ಶನ ನೀಡುತ್ತಿದ್ದ.

"ಮೊದಲನೆಯ ತರಗತಿಯವರು ಎಡಗಡೆಗೆ ಹೋಗಿ. ಎರಡನೆಯ ತರಗತಿಯವರು ಬಲಗಡೆಗೆ ಹೋಗಿ"

ಇನ ಒಳಗೆ ಹೋಗುತ್ತಿದ್ದಂತೆ ಗುಂಪಿನಿಂದ ಒಬ್ಬ ಸುಂದರ ಯುವತಿ ಬಂದಳು. ಅವಳು ಮುದ್ದಾದ ಮಗುವನ್ನು ಭುಜಕ್ಕೆ ಒರಗಿಸಿಕೊಂಡು ಬರಲು ಆ ಆಧಿಕಾರಿಯು ಹತ್ತಿರಬಿನಾಗಿ: "ಮೊದಲನೆಯದೋ—ಎರಡನೆಯದೋ?" ಎಂದ. ಯುವತಿಯ ಮುಖ ನಾಚಿಕೆಯಿಂದ ಕೆಂಪಾಯಿತು. "ನನ್ನದಲ್ಲ" ಎಂದಳು.

ಹುಚ್ಚಣ್ಣ

ಮಧ್ಯರಾತ್ರಿಯಲ್ಲಿ ಕುಡುಕನೊಬ್ಬನು ತೂರಾಡಿಕೊಂಡು ಬಂದು ರಸ್ತೆಯಂಚಿನಲ್ಲಿದ್ದ ದೀಪದ ಕಂಬಕ್ಕೆ ಬೀಗದಕೈಯನ್ನು ಹಾಕಲು ಯತ್ನಿಸುತ್ತಿದ್ದ, ಇದು ಗಸ್ತು ತಿರುಗುತ್ತಿದ್ದ ಪೋಲೀಸನೊಬ್ಬನ ಕಣ್ಣಿಗೆ ಬಿತ್ತು.

"ಏನಯ್ಯ ನೀನು ಮಾಡುತ್ತಿರುವುದು?"

"ಬಾಗಿಲು ತೆಗೀತಾ ಇದ್ದೀನಿ!"

"ಮನೆಯಲ್ಲಿ ಯಾರೂ ಇಲ್ಲ ಎಂಬುದು ಗೊತ್ತಿಲ್ಲವೇನೋ ಹುಚ್ಚಪ್ಪ?'

"ಹುಚ್ಚ ನಾನೋ - ನೀನೋ? ಮಹಡಿಯ ಮೇಲೆ ದೀಪ ಇರೋದು ಕಾಣೋಲ್ವೇನೀ?" ಎಂದ.

ನಾವೆಲ್ಲಾ ಒಂದೇ

ಒಬ್ಬ ಧನಿಕ ಲಕ್ಷಾಂತರರೂಪಾಯಿವೆಚ್ಚದಲ್ಲಿ ಒಂದು ದೊಡ್ಡ ಸುಂದರ ದೇವಾಲಯವನ್ನು ಕಟ್ಟಿಸಿದ. ಹಿಂದೂಗಳು ಭಕ್ತಿಯಿಂದ ಬರುತ್ತಿದ್ದರು. ಮುಸ್ಲಿಮರೂ— ಕ್ರಿಶ್ಚಿಯನ್ನರೂ ಆ ಕಡೆಗೆ ಸುಳಿಯಲಿಲ್ಲ. ಆಗ ಧನಿಕ ದೇವಾಲಯವನ್ನು ಕೆಡವಿ ಮಸೀದಿ ಕಟ್ಟಿಸಲು ಹಿಂದೂಗಳು ಅಶ್ರ ಹಾಯಲಿಲ್ಲ. ಮುಸ್ಲಿಮರು ಬಂತೆಡಗದರು. ಆ ಬಳಿಕ ಧನಿಕ ಅದನ್ನು ಕೆಡವಿಸಿಚರ್ಚ್ ಕಟ್ಟಿಸಿದ. ಹಿಂದೂಗಳೂ-ಮುಸ್ಲಿಮರೂ ತತ್ತ ಸುಳಿಯಲಿಲ್ಲ. ಕ್ರಿಶ್ಚಿಯನ್ನರು ಪೂಜೆ ಬರಲಾರಂಭಿಸಿದರು. ಇದರಿಂದ ಬೇಸರಗೊಂಡ ಆ ಧನಿಕನು— ಜರ್ಚನ್ನೂ ಕೆಡವಿಸಿ—ಪಾಯಖಾನೆಗಳನ್ನು ಕಟ್ಟಿಸಿದ ಆಗ ಹಿಂದೂ—ಮುಸ್ಲಿಮ್— ಕ್ರಿಶ್ಚಿಯನ್ ಎಲ್ಲಾ ಜಾತಿಯ ಜನರೂ ಭೇದ ಭಾವ ಬಿಟ್ಟು ಅಲ್ಲಿಗೆ ಬರತೊಡಗಿದರಂತೆ.

ಪ್ರಥಮ ಚಿಕಿತ್ಸೆ

ಪ್ರಥಮ ಚಿಕಿತ್ಸೆಯಪಾರ ಹೇಳುತ್ತಿದ್ದ ಉಪಾಧ್ಯಾಯರು ಒಬ್ಬ ಹುಡುಗನಿಗೆ ಈ ರೀತಿ ಪ್ರಶ್ನಿಸಿದರು—"ಒಬ್ಬ ಮನುಷ್ಯನಿಗೆ ತಲೆಗೆ ತುಂಬಾ ಪೆಟ್ಟು ಬಿದ್ದು ರಕ್ತ ಸೋರುತ್ತಿದ್ದರೆ ಅದನ್ನು ನಿಲ್ಲಿಸಲು ಏನು ಮಾಡುತ್ತಿಯಯ್ಯಾ?'

'ಈತ್ರಿಗೆಗೆ ಬಲವಾಗಿ ಹಗ್ಗ ಬಿಗಿದು ಬೇಕು ಸಾರ್" ಎಂದು ಹುಡುಗನು ಉತ್ತರಿಸಲು ತರಗತಿಯಿಡೀ ಎದ್ದು ಬಿದ್ದು ನಗಬೇಕೇ?

ಇದೇಕೆ ಹೀಗೆ?

ಶೇಕ್ಸ್‌ಪಿಯರ್ ಲೋಕದಲ್ಲಿ ಅತ್ಯಂತ ಪ್ರತಿಭಾಶಾಲಿ ನಾಟಕಕಾರ. ಆದರೆ ಆತನ ತಂದೆ ಒಬ್ಬ ದಿವಾಳಿ ತೆಗೆದ ಕುಟುಕ. ತಾಯಿ ನಿರಕ್ಷರಕುಕ್ಷಿ. ಬಿರೋನೆನ್ ಈ ಲೋಕದಲ್ಲಿ ಸ್ವರ್ಗೀಯ ಸಂಗೀತ ನಿರ್ಮಿಸಿದ ಭೃಂಗಿ. ಆವನ ತಾಯಿ ಕ್ಷಯದ ಗೂಡು. ತಂದೆ ಹೆಂಡದ ಮಡಕೆ. ಪ್ರಖ್ಯಾತ ವಿಜ್ಞಾನಿ ವೈಕೇಲ್ ಫ್ಯಾರಡೆ ದನದ ಗೋದಲಿಯಲ್ಲಿ ಕಣ್ತೆರೆದವನು. ಆವನ ತಂದೆ ಆಂಗ ವಿಕಲನಾದ ಓರ್ವ ಕಮ್ಮಾರ. ತಾಯಿ ದಿನಕೂಲಿ ಕೆಲಸದನಳು. ಲಂಡನ್ ಬೀದಿಗಳಲ್ಲಿ ವೃತ್ತ ಪತ್ರ

ಕಂಡದ್ದು—ಕೇಳಿದ್ದು

ಬಕ ಮಧ್ಯೆ ಹಂಸ

ಸುಮಾರು ಒಂದು ವರ್ಷ ಮೊದಲಿಗೆ ನಡೆದ ಸಂಗತಿ. ನಮ್ಮ ನೆರಿಮನೆಯಲ್ಲಿ ಮಂಕುಂದನೆಂಬವನಿದ್ದ. ಜಾತಿಯಲ್ಲಿ ಬ್ರಾಹ್ಮಣ; ಮಕ್ಕಳುಮರಿಗಳೆಂಬವರಿಲ್ಲ. ಮುಂಜಾವದಿಂದ ಸಂಜೆಯ ವರೆಗೂ ತರಪೆಯೆತ್ತಿ ಹೊಟ್ಟೆಹೊರೆಯುವುದು ಆವನ ನಿತ್ಯಕರ್ಮ. ಮನೆಯಲ್ಲಿ ರಾತ್ರೆಯೂ ಇರುವವನೊಬ್ಬನೇ.

ಆನಂದ ಒಂದು ದಿನ ಗ್ರಾಮದ ಇನ್ನೊಂದು ಪಕ್ಕದ ನದಿಯಲ್ಲಿ ಸ್ನಾನ ಮಾಡಲೆಂದು ಹೋಗಿ ಮರಳುತ್ತಿದ್ದ. ದಾರಿಯಲ್ಲೇ ಆತನಿಗೆ ಗಂಟೊಂದು ಕಾಣಿಸಿತು. ಆದನ್ನೆತ್ತಿಕೊಂಡ ನಡೆಯುತಿದ್ದಂತೆಯೆ ಬಿಚ್ಚಿ ನೋಡಿದ. ಆದರಲ್ಲಿ ಒಂದು ಸಾವಿರಕ್ಕೂ ಮಿಕ್ಕಿದ ಸಂಪತ್ತು ತುಂಬಿತ್ತು. ಹಣ ಕಂಡೊಡನೆಯೇ ಮುಕುಂದನೊಮ್ಮೆ ಆನಂದ ಸಾಗರದಲ್ಲಿ ಮುಳುಗೆದ್ದ. ಪ್ರಸನ್ನನಾಗಿಯೇ ಗಂಟನೊಡ

ಮೂರುತ್ತಾ ಆವನ ಶಿಕ್ಷಣ ಆರಂಭವಾಯ್ತು. ಆಧುನಿಕ ಔಷಧ ಶಾಸ್ತ್ರದ ನಿರ್ಮಾಪಕನಾದ ಲೂಯಿ ಪಾಶ್ಚರ್ ಒಬ್ಬ ಸಮಗಾರನ ಮಗ.

—ಸುರತ್ಕಲ್ ರಾಮಕೃಷ್ಣ ಹೆಬ್ಬಾರ್
(ಸಂಗ್ರಹ)

ದಿ॥ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ನಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ ಎರಡು (ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅಮೂಲ್ಯವಾದ

ಸುಲಭದಲ್ಲಿ ಪತ್ರಲೇಖನ

(Letter Writing Made Easy)

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗುವಹುದಾದ 75 ಇಂಗ್ಲಿಷ್ ಪತ್ರಗಳು

ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಡಾ॥ ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ - ಮದ್ದು

(Home-Remedies)

ನೂರಾರು ಕಾಹಿಲೆಗಳಿಗೆ ಮನೆಯಲ್ಲೆ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹಪೈದ್ಯ.

ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—

ಸಪ್ತಭಾರತಿ ಪುಸ್ತಕ ಭಂಡಾರ, ಉಡುಪಿ, ದ. ಕ.

ಆಯೋಗ—ಈಯೋಗ

ಬಂದಿಹುದು ಇಲ್ಲಿಗೂ ಮಹಾಜನ
ಆಯೋಗ
ವೈಸೂರಿಗಿಹುದಂತೆ ಗಜಕೇಂದ್ರಿ ಯೋಗ
ಬಹುಜನರ ಸೊಲ್ಲು ಇದು ಮಹಾಜನ
ಯೋಗ!
ಆವಗಿಲ್ಲಿತ್ಯಂತೆ ರಾಜ ದರಬಾರು.

—ಮು. ಗೋ. ರಾ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

Edited, Printed & Published by K. H. Shetty at the Navayuga Press, Udupi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

28—9—1967

೧೦
ಪೈಸೆ

ಪ್ರೇಮಬಂಧನ

ಬರೆದವರು :
ಶ್ರೀ ಸ. ನಾರಾಯಣ, ಚಿತ್ರದುರ್ಗ.

ರಜನಿ ಪತ್ರ ಓದ ತ್ತಾ ನಿಂತಿದ್ದಳು. ಪತ್ನಿಯು ಏಕಾಗ್ರ ಚಿತ್ತತೆಗೆ ಭಂಗ ತಾರದೆ ಗೋಪಿ ಬಾಗಿಲಲ್ಲಿಯೇ ನಿಂತಿದ್ದ.

ರಜನಿ ಪತ್ರ ಓದಿ ಮುಗಿಸಿ ಮುಡಿಚಿದಳು. ಆವಳ ಕಣ್ಣಿಂದ ಹನಿ ಜಾರಿ ಉರುಳಿತು. ಗೋಪಿಗೆ ಕಾರಣ ಗೊತ್ತಾಗಲಿಲ್ಲ.

"ಯಾರದು ರಜನಿ ಕಾಗದ?" ಎಂದ ಗೋಪಿ.

"ನನ್ನದೆ.... ಹೋಗಲಿ ಬಿಡಿ' ಎಂದು ನೋವಿನ ದನಿಯಲ್ಲಿ ಹೇಳಿದಳು ರಜನಿ.

"ನಿನ್ನದೆ ಇರಬಹುದು... ಕಾಗದ ಓದಿದರೆ ಕಣ್ಣಿಲ್ಲೇಕೆ ನೀರು?'

'ದಯವಿಟ್ಟು ಆ ವಿಷಯದ ಪ್ರಸ್ತಾಪ ಬೇಡ' ಎಂದಳು ರಜನಿ.

ಗೋಪಿಗೆ ಸಮಾಧಾನವಾಗಲಿಲ್ಲ. ಪತ್ನಿಯಿಂದ ಪತ್ರ ಪಡೆದು ಸಂಗತಿಯನ್ನು ತಿಳಿಯಲು ಕಾತರನಾಗಿ; "ಸ್ವಲ್ಪ ಪತ್ರ ಕೊಡು ರಜನಿ" ಎಂದ.

"ದಯವಿಟ್ಟು ಬೇಡಿ"

"ಏಕೆ"

"ನಿಮ್ಮ ಮನ ನೋಯಿಸುವ ಇಚ್ಛೆ ನನಗಿಲ್ಲ"

'ನೀನು ಕೊಡದೆ ಹೋದರೆ ಹೆಚ್ಚು ವ್ಯಥೆಯಾಗುತ್ತದೆ....ತಾ ಇಲ್ಲಿ"

'ಉಹುಂ'

"ಓಹೋ ಹಾಗೋ" ಎಂದು ಗೋಪಿ ಅವಳ ಕೈಯಲ್ಲಿದ್ದ ಪತ್ರಕ್ಕೆ ಕೈ ಚಾಚಿದ. ತಬ್ಬಿಬ್ಬರ ಎಳೆದಾಟದಲ್ಲಿ ಪತ್ರದ ಸ್ವಲ್ಪ ಭಾಗ ಗೋಪಿ ಕೈಗೆ ಬಂತು. ಉಳಿದುದನ್ನು ರಜನಿ ಗಂಡನದುರಿನಲ್ಲಿಯೇ ಹರಿದು ಹಾಕಿದಳು.

ಗೋಪಿಯ ಕಣ್ಣು ಕುಣಿಯಿತು. ರಜನಿ ಎಂದೂ ಆ ಒಗೆಯಲ್ಲಿ ವಿರೋಧಿಸಿರಲಿಲ್ಲ. ಕೋಪದಿಂದ ಕೆರಳಿ "ಕಾಗದ ಏಕೆ ಹರಿದು ಹಾಕಿದೆ" ಎಂದ.

"ನಿಮಗೆ ಗೊತ್ತಾದರೆ .ಅಲ್ಲದೆ ನೀನು ತಿಳಿಯಲೇ ಬೇಕಾದ ವಿಷಯವೂ ಇರಲಿಲ್ಲ"

"ಹಾಗಲ್ಲ'

"ಮತ್ತೆ?'

"ಜೆಸ್ಸ ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ಉಳಿದವರಿಗೆ ಗೊತ್ತಾಗುವುದಿಲ್ಲವೇ...ನಿನ್ನ ಹಳೆಯ ಪ್ರಿಯತಮನ ಪತ್ರ ಎಂದ. ಹೇಳಿಕೋ...ಏಕೆಷ್ಟು ನಾಟಕ?' ಎಂದ ವ್ಯಂಗ್ಯವಾಗಿ.

ರಜನಿಗೆ ಸಿಡಿಲು ಬಡಿದಂತಾಯ್ತು.

"ರಾಮ.... ರಾಮ.... ಇದೇನ್ರೀ ನಿಮ್ಮ ಮೊಹ?" ಎಂದು ಅಳುವಿನ ದನಿಯಲ್ಲಿ ಹೇಳಿದ ರಜನಿ ಕಿವಿ ಮುಚ್ಚಿಕೊಂಡಳು.

"ಎಷ್ಟು ದಿವದಿಂದ್ದೆ ಈ ನಾಟಕ?'

'ಹಾಗಲ್ಲರೀ'

"ನನಗೆ ಅದೆಲ್ಲ ಬೇಕಿಲ್ಲ.. ನಾಳೆ ಪ್ರಯಾಣಕ್ಕೆ ಸಿದ್ಧಪಡಿಸಿಕೋ.... ನನಗೂ ನಿನಗೂ ಇಂದಿಗೇ ಋಣಾನುಬಂಧ ಹರಿಯಿತು' ಎಂದು ಕೋಪದಿಂದಲೇ ಹೇಳಿದ ಗೋಪಿ.

ರಜನಿ ಅಳ ತ್ತಾ "ನೀವು ತಪ್ಪಾಗಿ ಭಾವಿಸಿದ್ದೀರಿ... ಅಪಾರ್ಥ ಮಾಡಿಕೊಳ್ಳ ಬೇಡಿ, ಪ್ಲೀಮಿ' ಎಂದು ಅವನ ಕಾಲು ಹಿಡಿಯಲು ಹೋದಳು. ಕೋಪದಿಂದ ಕೆರಳಿದ್ದ ಗೋಪಿ ಹೆಂಡತಿಯ ಕೆನ್ನೆಗೆ ಬಲವಾಗಿ ಹೊಡೆದ.

"ಅಮ್ಮಾ" ಎಂದು ಚೀರಿ ರಜನಿ ನೆಲದ ಮೇಲುರುಳಿದಳು.

ಸೊಸೆಯ ಕೂಗು ಕೇಳಿ ರಾಜಮ್ಮ ಕೋಣೆಗೆ ಧಾವಿಸಿ ಬಂದರು.

ಆಕ್ಷಯ ದೃಶ್ಯ ನೋಡಿ ಅವರ ಕಣ್ಣಿಗೆ ಕತ್ತಲೆ ಕವಿಯಿತು.

"ನೀನು ಗಂಡಸಾದುದಕ್ಕೆ ಸಾರ್ಥಕ ವಾಯ್ತು ಗೋಪಿ.... ಅಹುಡುಗಿ ಅದೇನು ತಪ್ಪು ಮಾಡಿತ್ತೊ!' ಎಂದು ಸೊಸೆಯನ್ನು ಮಮತೆಯಿಂದ ಎತ್ತಿಕೊಂಡರು.

'ನನ್ನನ್ನೇನು ಕೇಳಬೇಡ ನಿನ್ನ ಮಾದ್ದು ಸೊಸೆಯನ್ನು ಕೇಳು' ಎಂದ ಗೋಪಿ ಕೋಟನ್ನು ಕೈಗೆತ್ತಿಕೊಂಡು ನಡೆದ.

ಅತ್ತೆಯ ಎಲ್ಲ ಪ್ರಶ್ನೆಗಳಿಗೂ ಸೊಸೆಯ ಕಣ್ಣೀರೇ ಉತ್ತರ.

೦ ೦ ೦ ೦

. ಗೋಪಿ ಪೇಟೆಯಲ್ಲಿ ಅವಳ ಮತ್ತು ಬೇವರವಿಂದಲೇ ನಡೆದು ಬರುತ್ತಿದ್ದ. ಪತ್ನಿಯ ಬಗ್ಗೆ ವೃಥಾ ಸಂಶಯ ತಾಳಿದ್ದ.

ರಜನಿ ತಾನು ಪತ್ರ ಹರಿದು ಹಾಕಿ ಬಾರದಿತ್ತು ಎಂದು ಕೊಂಡಿದ್ದಳು.

—"ರಜನಿಯನ್ನು ನಂಬಿದ್ದೆ. ನಂಬಿಸಿ ಮೋಸ ಮಾಡಿದಳು. ಅವಳಿಗೆ ಯಾವ ಕೊರತೆಯೂ ಇರಲಿಲ್ಲ. ಆದರೂ ಯಾರೋ ಹಳೆಯ ಗೆಳೆಯನೊಂದಿಗೆ ಪತ್ರ ವ್ಯವಹಾರ ಇಟ್ಟು ಕೊಂಡಿದ್ದಾಳೆ. ನನ್ನ ಪ್ರೀತಿ ಬಿನ್ನೆಲ್ಲಾ ಅವಳಿಗೆ ಧಾರೆ ಎರೆದಿದ್ದೆ; ನನಗೆ ಅನ್ಯಾಯ ಮಾಡಿದಳು. ಮೊದಲು ಅವಳನ್ನು ತಾರು ಮನೆಗೆ ಕಳುಹಿಸಿದರೆ ಸಾಕು...." ಎಂದುಕೊಂಡು ಬರುತ್ತಿದ್ದ.

ಯೂರೋ ಚಪ್ಪಾಳೆ ತಟ್ಟಿ ಕೂಗಿದಂತಾಯ್ತು. ಗೋಪಿ ಹಿಂತಿರುಗಿ ನೋಡಿದ.

ಅವನ ಕಣ್ಣನ್ನು ಅವನೇ ನಂಬದಾದ. ಗೆಳೆಯ ಹರೀಶ್ ಫಂತಿದ್ದ. ಹಳೆಯ ಗೆಳೆಯನನ್ನು ಕಂಡೊಡನೆಯೇ ಗೋಪಿಗೆ ಅವಿತಾನಂದವಾಯಿತು. "ಹಲೋ ಹರೀಶ್" ಎಂದು ಕೂಗಿ ಅವನ ಬಳಿಗೆ ನಡೆದ.

ಗೆಳೆಯನ ಕೈಗಳನ್ನು ಹಿಡಿದು "ಚೆನ್ನಾಗಿದ್ದೀಯೊ ಭಾಯಿ" ಎಂದ ಹರೀಶ್.

"ಇಷ್ಟರ ಮಟ್ಟಿಗೆ ಇದ್ದೇನೆ, ನೀನು ಚನ್ನಾಗಿದ್ದೀಯೇನಯ್ಯ?"

"ಹೀಗೆ ಇದ್ದೇನಪ್ಪ'

"ಬೊಂಬಾಯಿಯಿಂದ ಯಾವಾಗ ಬಂದೆ ಹರೀಶ್"

"ನಿನ್ನೆ ಸಂಜೆ ಬಂದೆ .ನಿನ್ನನ್ನು ನೋಡಲು ನಿನ್ನ ಮನೆಗೆ ಬರಬೇಕೆಂದಿದ್ದೆ. ಆದೃಷ್ಟವಶಾತ್ ನೀನೇ ಭೇಟಿಯಾದೆ.. ಕಂಬ ಸಂತೋಷ— ಬಹಸ್ ಚನ್ನಾಗಿದ್ದಾರಾ ಗೋಪಿ"

"ಹೂನಪ್ಪ" ಎಂದು ನಿರುತ್ಸಾಹದಿಂದಲೇ ನುಡಿದ ಗೋಪಿ.

'ಏಕೋ ಬೇಸರಪಟ್ಟುಕೊಂಡಿರುವಂತಿದೆ".

". ... ."

"ಬಾ ಗೋಪಿ ತುಂಬ ಅಪರೂಪ ಭೇಟಿಯಾಗಿದ್ದೀನೆ. ಲಾಲ್‌ಬಾಗ್ ಕಡೆ ಗಾದರೂ ಹೋಗಿ ಬರೋಣ....ನಿಮಯ ವಿದೆಯಷ್ಟೆ?' ಎಂದ ಹರೀಶ್.

'ನನಗಿನ್ನೇನು ರಾಜಕಾರಣ ...ನಡಿ ಹೋಗೋಣ' ಎಂದ ಗೋಪಿ.

ಗೋಪಿ ಗೆಳೆಯನ ಕಾರು ಹತ್ತಿದ. ಹರೀಶ್ ಕಾರನ್ನು ಲಾಲ್‌ಬಾಗಿನ ಮುಂದೆ ನಿಲ್ಲಿಸಿ ಗೆಳೆಯನನ್ನೆಂದಿಗೆ ಒಳಕ್ಕೆ ನಡೆದ.

ರೆಸ್ಟೋರಾದಲ್ಲಿ ತಿಂಡಿ ಕಾಫಿ ಮುಗಿಸಿ ಇಬ್ಬರೂ ಕಾರಂಜಿಯು ಬಳಿಯಲ್ಲಿದ್ದ ಮರದ ಕೆಳಗೆ ಕುಳಿತರು.

ಸ್ವಲ್ಪ ಹೊತ್ತು ಟೋಕಾಭಿಂತಾಮವಾಗಿ ಮೂಕ ಸಾಗಿತು.

ಹರೀಶ್ ನೆನೆಸು ಮಾಡಿಕೊಂಡವನಂತೆ 'ಮುಖ್ಯವಾದ ವಿಷಯವನ್ನೇ ಮರೆತಿದ್ದೆ ಗೋಪಿ' ಎಂದ

"ಅದೇನಯ್ಯ ಅಂಥ ವಿಷಯ'.

"ನೀವು ಬೊಂಬಾಯಿಗೆ ಬಂದು ತುಂಬ ದಿವಸವಾಯ್ತುಲ್ಲ?'

"ಎರಡು ವರ್ಷದ ಮೇಲಾಗಿದೆ....ಈ ಮಯವೇ ದೊರೆಯುವುದಿಲ್ಲ'

"ನಿನ್ನಗೇನೋ ಫ್ಯಾಕ್ಟರಿ ಕೆಲಸ ಬಿಡುವಿಲ್ಲ. ಬೆಹನ್‌ಗೇನು ಕೆಲಸ—ಅವರಾದರೂ ಆಲ್ಲಿಗೆ ಬರಬಹುದಿತ್ತಲ್ಲಿ?"

'ಅವಳಿಗೆ ಎಷ್ಟೋ ಬಾರಿ ಹೇಳಿದೆ. ಅವಳೇ ಹೋಗಲು ಒಪ್ಪುವುದಿಲ್ಲ"

'ಗಂಡಿಗೆ ತಕ್ಕ ಹೆಂಡತಿ"

'.....'

'ನಿಮ್ಮ ಮಾವ ಸಿಕ್ಕಿದ್ದರು . ಅವರ ಮನೆಗೂ ಹೋಗಿದ್ದೆ.... ನಿಮ್ಮ ಅತ್ತೆ ಮಾವ ತುಂಬ ನೊಂದುಕೊಂಡು ಹೇಳಿದರು. ಬೆಹನ್ ಒಂದು ಬಾರಿಯೂ ಅಲ್ಲಿಗೆ ಹೋಗಿಲ್ಲವಂತೆ. ನಿಮಗೆ ಕಾಗದ ಬರೆದರೆ ಉತ್ತರವನ್ನೇ ಬರೆಯುವುದಿಲ್ಲವಂತೆ'

'ನನ್ನ ಬದಲಾಗಿ ಅವರ ಮಗಳೇ ಉತ್ತರ ಬರೆದಿದ್ದಳು ಕಣಯ್ಯ"

"ನಿಮ್ಮ ಮಾವ ಏನು ಹೇಳಿದರು ಗೊತ್ತೆ?"

"ನನಗೇನು ಗೊತ್ತು'

"ನನಗೆ ಹೋಗಿ ಬಾಲು ಹುರುಸೊಲ್ಲ ಹರೀಶ್. ಒಂದು ಬಾರಿ ಹೋದರೆಗೂಡ ಹೆಂಡತಿ ಇಬ್ಬರ ಕೆನ್ನೆಗೂ ಹೊಡೆದು ಬಿಡೋಣ ಎನ್ನುವಷ್ಟು ಸಿಟ್ಟು ಬಂದಿದೆ ನಮಗೆ ಅವರನ್ನು ನೋಡುವ ಆಸೆ ಇರುವುದಿಲ್ಲವೇ .ನೋನ್ನೆ ಒಂದು ಕಾಗದ ಬರೆದಿದ್ದೇನೆ ನಿನ್ನ ಗೆಳೆಯ ಹೆಂಡತಿಯೊಂದಿಗೆ ಓಡಿ ಬಿಡಬೇಡ. .ಇಲ್ಲಿಂದು ನರಿಗೆ ತಡೆ ಹಿಡಿದಿದ್ದ ಕೋರವನ್ನೆಲ್ಲಾ ಪತ್ರದಲ್ಲಿ ಬರಹದ ಮೂಲಕ ತೋರಿಸಿದ್ದೇನೆ...ಕಾಸ್ತು ಹೀನಾಮಾನವಾಗಿಯೂ ಬೈದಿದ್ದೇನೆ....ಮನಸ್ಸು ತಡೆಯುವ ಎಂದರು ಎಂದ ಹರೀಶ್.

"ನನಗೆ ಒಂದೂ ಅಂತಹ ಕಾಗದ ಬರಲುಪಿಲ್ಲವಲ್ಲ ಹರೀಶ್"

"ಕಾರಣ ಗೊತ್ತೆ?"

"ನನಗೊಂದೂ ತಿಳಿಯದು"

"ರಜನಿ ಬೆಹನ್"

"ಅದು ಹೇಗಯ್ಯ?"

'ತಂದೆ ತಾಯಿ ಬರೆದ ಎಲ್ಲ ಪತ್ರ

(ಹನ್ನೊಂದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ –
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಮನಮೆಚ್ಚುವ ಸರ್ವ ಸೌಕರ್ಯಗಳಿಂದೊಡಗೂಡಿದ
ವಸತಿ ಗೃಹ



ಹೊಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ವಿಶ್ವಮಾತ್ರ ಹೊಟೆಲ್.

47ನೇ ವರ್ಷ
Telephone 226.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ದ. ಕನ್ನಡ.

++

ಸ್ಥಾಪನೆ: 1921
ಸ್ಥಾಪಕರು
ದಿ| ಎ. ಬಿ. ಶೆಟ್ಟರು.
ಸಂಚಾಲಕ—ಸಂಪಾದಕ
ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

++

ಜಾಹೀರಾತು ದರಗಳು:
ಅರಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಂಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗ

ಲೇಖನವು ಕಿರಿದಾಗಿದ್ದು ಹಿಂದರ್ಥದಿಂದ ಕೂಡಿರಬೇಕು. ಕಾಲು ಪಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬರೆಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಭಾಂತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ –

ಚಂದಾಪಾವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಶ್ರೀ ಸಾಮಾನ್ಯನ ನೈಜ ಪ್ರತಿನಿಧಿ
ಮಹಾತ್ಮಾ ಗಾಂಧಿ

ನವಯುಗ

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೪	೨೮—೯—೧೯೬೨	No. 4

ಕೆಂಪು ಕುತ್ತ

ಚುನಾವಣೆಯ ಪ್ರಚಾರ ಕಾಲದಲ್ಲಿ ವಿರೋಧಿ ಪಕ್ಷಗಳು ಕಾಂಗ್ರೆಸ್ಸನ್ನು ಪತಿತ ಗೊಳಿಸುವುದನ್ನೇ ತಮ್ಮ ವಿಶೇಷವೆಂಬ ಉದ್ದೇಶವಾಗಿಟ್ಟು ಕೊಂಡಿದ್ದುವು. ಒಂದೆರಡು ರಾಜ್ಯಗಳಲ್ಲಿ ಚುನಾವಣೆಗೆ ಮೊದಲೇ ಸಂಯುಕ್ತ ರಂಗಗಳನ್ನು ಕಟ್ಟಿ ಕಾಂಗ್ರೆಸ್ಸಿಗೆ ಹಂಧ್ರಾಹ್ವಾನವನ್ನೂ ನೀಡಿದುವು. ಆದರೆ ಪಕ್ಷತ್ವ ಬಹುಮತಗಳಸದೆ ಹೋದದರಿ, ಮುಂದೆ ರಾಜಕೀಯ ಅಸ್ಥಿರತೆಗೆ ನಾಂದಿಯಾಗಬಹುದು ಎಂಬ ಭೀತಿ ಕೆಲವರಲ್ಲಿತ್ತು; ವಿವಿಧ ರಾಜಕೀಯ ಪಕ್ಷಗಳು ಒಂದಾಗಿ ಸಂಮ್ಮಿಶ್ರ ಸರಕಾರ ರಚಿಸಿಕೊಂಡರೂ, ಪಕ್ಷ— ಪಕ್ಷಗಳ ಭಿನ್ನ ಧ್ಯೇಯಗಳಿಂದಾಗಿ ಕಚ್ಚಾಟ ತಪ್ಪಿದ್ದಲ್ಲವೆಂಬ ಅಭಿಪ್ರಾಯವೂ ವ್ಯಕ್ತವಾಗಿತ್ತು. ಆದರೆ, ಬುದ್ಧಿ ಜೀವಿಗಳಲ್ಲಿ ಅಗ್ರಗಣ್ಯರಾದ ಮಾಜಿ ಗವರ್ನರ-ಜನರಲ್ ಚಕ್ರವರ್ತಿ ರಾಜಗೋಪಾಲಾಚಾರಿಯವರು ಈ ಬಗ್ಗೆ ಈಗ ತಲೆಕೆಡಿಸಿಕೊಳ್ಳಬೇಕಾಗಿಲ್ಲವೆಂದೂ ರಾಜ್ಯಪಾಲರು ರಾಷ್ಟ್ರಪತಿಗಳು ನೋಡಿಕೊಳ್ಳುತ್ತಾರೆಂದೂ, ಜನತೆ ಕಾಂಗ್ರೆಸ್ಸನ್ನು ಪದಚ್ಯುತಗೊಳಿಸಬೇಕೆಂದೂ ಉದ್ಘೋಷಿಸಿದ್ದರು.

ನಾಲ್ಕನೆಯ ಚುನಾವಣಾ ನಂತರ ಕೆಲವು ರಾಜ್ಯಗಳಲ್ಲಿ 'ಸಂಯುಕ್ತದಳ'ಗಳ ಸರಕಾರ ರಚನೆಯಾಯಿತು. ಇನ್ನು ಕೆಲವೆಡೆ ಮೊದಲು ಕಾಂಗ್ರೆಸ್ಸು ಬಹುಮತ ಪಡೆದಿದ್ದರೂ 'ಅಧಿಕಾರ'ದ ಮೋಹದಿಂದ ಪಕ್ಷತ್ಯಾಗಕ್ಕೆ ಶರಣು ಹೋದವರಿಂದಾಗಿ, ಅದುವಿರೋಧಿಕ್ಷಸ್ಥವಾಗಿ ಉಳಿಯಬೇಕಾಯಿತು. ಇನ್ನುಕೆಲವೆಡೆಕಾಂಗ್ರೆಸ್ಸು ನಿಚ್ಚಳ ಬಹುಮತವನ್ನು ಗಳಿಸಿತು. ಸಂಯುಕ್ತ ದಳಗಳು ಅಧಿಕಾರವನ್ನು ನಿರ್ವಹಿಸಲು ತೊಡಗಿ ಆರು ತಿಂಗಳುಗಳು ಕಳೆದುವು. ಈ ಅವಧಿಯ ಸಾಧನೆಯ ಬಗ್ಗೆ ಕಾಂಗ್ರೆಸ್ ಪಕ್ಷೇತರ ಟೀಕೆ-ಟಿಪ್ಪಣಿಗಳು ಏನೇ ಇರಲಿ, ದಳದ ನಾಯಕರಲ್ಲಿ, ವಿವಿಧ ಪಕ್ಷಗಳ ನಾಯಕರಲ್ಲಿ ಒಮ್ಮತವೆಂಬುದಿಲ್ಲ. ಅಂತೂ ಕುರುಡನೂ ಶುಂಟನೂ ಒಂದಾಗಿ ಇನ್ನೂ ಕೆಲಕಾಲ ಮುಂದುವರಿಯಬಹುದು; ಆದರೆ, ಪಶ್ಚಿಮ ಬಂಗಾಲ ಮತ್ತು ಕೇರಳದ ಸಂಯುಕ್ತ ರಂಗದ ಪಕ್ಷಗಳು ಪರಸ್ಪರ ದ್ವೇಷಾಸೂಯೆಯ ಉರಿಯನ್ನು ಸ್ಫೋಟಕೊಡಗಿವೆ. ಇದಕ್ಕಿರುವ ಮುಖ್ಯ ಕಾರಣವೆಂದರೆ, ಅಲ್ಲಿನ ಸಂಯುಕ್ತ ದಳಗಳಲ್ಲಿ ಕಮ್ಯುನಿಸ್ಟರ ಸಂಖ್ಯೆ ಗಣನೀಯವಾಗಿರುವುದೇ ಆಗಿದೆ. ಕಮ್ಯುನಿಸ್ಟರು ಆರಂಭದಿಂದಲೂ ಹಿಂಸಾಪ್ರಿಯರು. ಸರಕನ್ನು ಹಿಂಸಿಸಿಯೇ 'ಶ್ರಮಿಕ ವರ್ಗ'ದ ಯೋಗ ಕ್ಷೇಮವನ್ನು ನೋಡಿಕೊಳ್ಳುವ ಸಂಪಾಟವುಳ್ಳವರು. ಕೈಗೆ ಅಧಿಕಾರ ಸಿಕ್ಕೊಡನೆಯೇ ಅದನ್ನು ಬಲಪಡಿಸಿ, ಅದರ ಆಶ್ರಯದಲ್ಲೇ ಅರಾಜಕತೆಯ ಬೀಜ ಬಿತ್ತುವುದರಲ್ಲಿ, ತಪ್ಪೊಲ ಕಜಾತಿಯ ಮನಸ್ಸಿನಲ್ಲಿ ಕ್ರಾಂತಿಯ ಜ್ವಾಲೆ ಹುಟ್ಟಿಸುವುದರಲ್ಲಿ ತನ್ನಷ್ಟಿರಾಗುತ್ತಾರೆ ಪಶ್ಚಿಮ ಬಂಗಾಳ, ಕೇರಳಗಳ ಸಂಯುಕ್ತ ಸರಕಾರಗಳು ಇದಕ್ಕೆ ಅಪವಾದವೆನ್ನುವಂತಿಲ್ಲ, ಪಶ್ಚಿಮಬಂಗಾಳಸರಕಾರವು ಅಜಯ ಮುಖರ್ಜಿಯವರ ನಾಯಕತ್ವದಲ್ಲಿರುವುದಾದರೂ ನಾಯಕತ್ವ ನುಂಗಲಾರದ ತುತ್ತು ಅವರಿಗೆ. ಧ್ಯೇಯ—ನೀತಿ ರೂಪಿಸುವಲ್ಲಿ ಅವರ ಮಾತಿಗೆ ಬೆಲೆಯೇ ಇಲ್ಲವೆಂಬಂತಾಗಿದೆ. 'ಛಲ್ಸಲಾಖಾರ'ಯ ಹಿಂಸಾತ್ಮಕತ್ವಗಳನ್ನು ತಡೆಗಟ್ಟಲು ಅವರು ವಿಫಲಮೇಧಾವಿಗಳೇ ಕಾಯಕು. ಇತ್ತೀಚೆಗೆ ಮಂತ್ರಿಮಂಡಲದ ಸದಸ್ಯರ ಧರಣಿ, ಬಂಗಾಳ ಬಂದ್— ಮೊದಲಾದುವುಗಳಲ್ಲಿಯೂ ಕಮ್ಯುನಿಸ್ಟರ ಒತ್ತಾಯವೇ ಹೆಚ್ಚಾಗಿದೆಯೆಂದು ತಿಳಿಯುತ್ತದೆ. ಗಡಿರಾಜ್ಯಗಳಲ್ಲಿ ಒಂದಾದ ಬಂಗಾಳದಲ್ಲಿ ಕಮ್ಯುನಿಸ್ಟ್ ಪರ ಕರದಪತ್ರಗಳ ಪ್ರಚಾರವೂ ನಡೆಯುತ್ತಿದೆಯೆಂದೂ ಕೆಂಪು ಚೀನೀಯರ ಹಸ್ತಕರು ಇಲ್ಲಿದ್ದಾರೆಂದೂ ಆಂಧ್ರವರ ಮೇಲೆ ತೀವ್ರ ಕ್ರಮ ಕೈಕೊಳ್ಳಲು ಸರಕಾರದ ಕಮ್ಯುನಿಸ್ಟ್ ಸದಸ್ಯರು ಆಡ್ಡ ಬರುತಿದ್ದಾರೆಂದೂ ಹೇಳಲಾಗುತ್ತಿದೆ ೧೯೬೨ರಲ್ಲಿ ಚೀನಾದ ಆಕ್ರಮಣದ ವೇಳೆಯೂ ಇದೇ ಬಗೆಯ ಕರಪತ್ರಗಳು ನೇಫಾ, ಬಂಗಾಳಗಳಲ್ಲಿ ಹಂಚಲಾಗಿದ್ದುವು. ರಾಜ್ಯ ಸರಕಾರದ ಕುಂದು—ಕೊರತೆಗಳನ್ನು ಅಸಹಾಯಕತೆಯನ್ನು ಮರೆಮಾಚಿ ಕೇಂದ್ರ ಸರಕಾರವನ್ನು ಬೊಟ್ಟುಮಾಡಿ ತೋರಿಸುವ ಚಪಲತೆಯು ರಾಜ್ಯದಲ್ಲಿ ಅರಾಜಕತೆಯನ್ನು ಹೆರಡಿಸುವ ಸಾಧನಗಳಲ್ಲಿ ಒಂದು. ಇದನ್ನೆಲ್ಲಾ ಗಮನಿಸಿದ ಅಜಯ ಮುಖರ್ಜಿಯವರು ನಮ್ಮಳ್ಳನ ಕಿರಿಟವನ್ನು ಹೊತ್ತಿರುವುದು ಮಾತ್ರವಲ್ಲ, ಮುಳ್ಳಿನ ಚಪ್ಪಲಿಯನ್ನೂ ಮೆಟ್ಟುತ್ತಿರುವ ಅನುಭವ ಪಡೆಯುತ್ತಿದ್ದಾರೆ. ಇದೀಗ ಅಲ್ಲಿನ ಸಂಯುಕ್ತ ರಂಗವು ಕಮ್ಯುನಿಸ್ಟರನ್ನು ಹೊರ ದೂಡಿ ಹೊಸ ಸರಕಾರ ರಚಿಸುವ ಆಲೋಚನೆಯಲ್ಲಿದ್ದಾರೆಂದೂ ಕಾಂಗ್ರೆಸ್ಸು ಸರಕಾರದಲ್ಲಿ ಸೇರುವುದಿಲ್ಲವಾದರೂ ತನ್ನ ನೀತಿ-ನಿಯಮಗಳಿಗೊಳಪಟ್ಟು ಬೆಂಬಲ ನೀಡುವುದೆಂದೂ ತಿಳಿಯುತ್ತದೆ. ಥಾಂತದ ಮಣ್ಣಿನಲ್ಲಿ ಕಮ್ಯುನಿಜಂ ಬೀಜ ಮೊಳಕೆ ಬರುವುದಿಲ್ಲವೆಂಬುದನ್ನು ನಾವಿದಿರಿಂದ ಅರಿಯಬಾರದೆ?

ಕೇರಳದಲ್ಲಿ ಪರಸ್ಪರ ದೋಷಾರೋಪಣೆಯನ್ನು ಮಂತ್ರಿಗಳೇ ಮಾಡತೊಡಗಿದ್ದಾರೆ. ಆದರೆ, ನಂಬೂದಿರಿಪಾದರ ಕಮ್ಯುನಿಸ್ಟ್ ಪಕ್ಷವೊಂದೇ ಅಧಿಕ ಸಂಖ್ಯಾಬಲ ಪಕ್ಷವಾದುದರಿಂದ ಅವರ ಕೈಯಿಂದ ಸೂತ್ರ ಜಾರದು. ಆದರೆ, ಸರಕಾರವೇ ಕರೆನೀಡಿ ಆಚರಿಸಿದ 'ಬಂದ್' ತನ್ನೊಳಕ ರಾಜ್ಯದಲ್ಲಿ ಉದ್ಭವಿಸಿದ ಅರಾಜಕತೆ —ಅಶಾಂತಿಗಳನ್ನು ರಾಜ್ಯಪಾಲರು ಕಟುವಾಗಿ ಪರಿಗಣಿಸಿದ್ದಾರೆ. ಓಣಂ'ಗೆ ಹೆಚ್ಚು ಅಕ್ಕಿ ಕೊಡಲಿಲ್ಲವೆಂಬುದಕ್ಕಾಗಿ, ಕೇಂದ್ರವನ್ನು ಪ್ರತಿಭಟಿಸುವ ಯೋಜನೆಯೇ ಈ 'ಬಂದ್' ರಾಜ್ಯದಲ್ಲಿ ಆಹಾರೋತ್ಪಾದನೆಯನ್ನು ಹೆಚ್ಚಿಸುವಲ್ಲಿ ಕೇರಳ ಸರಕಾರ ಯಾವ ಕ್ರಮವನ್ನೂ ಕೈಕೊಂಡಿಲ್ಲ 'ಬಂದ್' ಧರಣಿ, ಮುಷ್ಕರ, ಸಂಘರ್ಷ— ಮೊದಲಾದುವುಗಳಿಂದ ಅಧಿಕ ಆಹಾರೋತ್ಪಾದನೆಯಾಗುವುದಾದರೆ, ನಿಶ್ಕರ್ಮವೂ ಇವಕ್ಕೆ ಅವಕಾಶ ಕೊಡಿಕೊಡಬಹುದು. ಜನತೆಯ ಧಾವನೆಯೇನೇ ಇದ್ದರೂ, ಅದನ್ನು ಸರಕಾರ ಅರಿತು ಪರಿಹಾರ ಕ್ರಮವರಸಬೇಕಲ್ಲದೆ, ಅದನ್ನು ಮತ್ತಷ್ಟು ಕೆರಳಿಸುವುದುರಾಜ್ಯ ಸರಕಾರದ ಕೆಲಸವಲ್ಲ. 'ಕೇರಳ ಬಂದ'ನಿಂದ ಸಾಧಿಸಿದ್ದೇನು? ಹೆಚ್ಚಿನ ಅಕ್ಕಿಯಂತೂ ಆಕಾಶದಿಂದ ಸುರಿಯುಲಿಲ್ಲ;ಅದಿಲ್ಲದೇನೇ ಓಣಂ ಆಚರಿಸಲಾಯ್ತು; ರಾಜ್ಯದ ಒಂದು ದಿನದ ಉತ್ಪಾದನೆಗೆ ಮೋಶವಾಯಿತು. ಇದರಿಂದ ಪ್ರಕೃತಿಕ್ಕೆ ನಷ್ಟ. ಇದನ್ನೇ ಕಮ್ಯುನಿಸ್ಟರ ಗತ್ಯುಗಾರಿಕೆಯೆನ್ನಬಹುದೆ? ಅಂತಾರಾಷ್ಟ್ರೀಯತೆಗೆ ಹಾಂದಿಯೆನ್ನಬಹುದೆ?

ರಾಜ್ಯದ ಭಾಷೆ

ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀ ವಿ. ಕೆ. ಗೋಕಾಕರು ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ಆರಂಭಗಾಗಿರುವ ಕನ್ನಡ ಮಾಧ್ಯಮವನ್ನು ಮುಂದಿನ ವರ್ಷ ಪ್ರಥಮ ವರ್ಷದ

(ಎಂಟನೇ ಪುಟ ನೋಡಿರಿ)

ವಚನಸುಧೆ

ಬುದ್ಧ್ಯಾ ಭಯಂ ಪ್ರಣುದತಿ
ತಪಸಾ ವಿಂದತೇ ಮಹತ್
ಗುರು ಶುಶ್ರೂಷಯಾಜ್ಞಾನಂ
ಶಾಂತಿಂ ಯೋಗೇನ ವಿಂದತಿ||

ಮನುಷ್ಯನು ಬುದ್ಧಿಯಿಂದ ಭಯವನ್ನು ದೂರ ಮಾಡಬಲ್ಲನು, ತಪಸ್ಸಿನಿಂದ ಮಹತ್ವವನ್ನು ಪಡೆಯುತ್ತಾನೆ; ಗುರುಸೇವೆಯಿಂದ ಜ್ಞಾನವನ್ನೂ ಯೋಗದಿಂದ ಶಾಂತಿಯನ್ನೂ ಪಡೆಯುತ್ತಾನೆ.

ನರಸಣ್ಣನ ನರಸ



'ಮಹಾಜನಸ್ಯ ಅಯೋಗದ ವರದಿ ಪ್ರಕಟವಾಗದಿರುವಾಗ ಆದರ ರಹಸ್ಯಗಳನ್ನು ಲಯಲು ಮಾಡಿದ ಜ್ಯೋತಿಷಿಯೂರಿಂ ಒಹುದು?"

ಗೇಹ ರಾಜ್ಯದಲ್ಲಿ

ಬೀಳುತ್ತಿರೋದು ಸ್ಪೀಟ್ ಸ್ಟ್ರೀನ್

"ಅಲ್ಲಾ, ಇದನ್ನೇ ವಿಧಿಯ ವೈಚಿತ್ರ್ಯ ಅನ್ನೋದು ಅಲ್ವೇ?'

"ಯಾವುದನ್ನೊಂತಂದೆ?"

"ನೋಡ್ರಿ, ಕಳೆದೆರಡು ವರ್ಷಗಳಿಂದ ಮಳೆ ನೆರೆ ನೋಡಿ ತಿಳಿಯದ ಬಿಹಾರಕ್ಕೆ ಈ ವರ್ಷ ಮಳೆಯೂ ಸುರೀತು; ನೆರೆಯೂ ಬಂತು...'

'ಹೌದ್ದಾಂ ...ರಾಜ್ಯದ ಅನೇಕ ನಗರಗಳಿಗೆ ಪ್ರವಾಹದ ಭೀತಿ. ಮನೆಮಾರುಗಳೆಲ್ಲ ನೀರುಪಾಲು...."

"ಗಂಗಾದೇವಿ ಅಂದರೆ ಹಾಗೇನೇ ನೋಡಿ. ಒಲಿದರೆ ನಾರಿ, ಮುನಿದರೆ ಮಾರಿ...."

"ಹ್ಞೂಂ...ಸರೀನ್ನ. ಆದೇ ಶಂತನು ಚಕ್ರವರ್ತಿಯೊಬ್ಬನೇ ಸಾಕು ಇದಕ್ಕೆ ಉದಾಹರಣೆ."

'ನೀರು—ಬೆಂಕಿಯೊಡನೆ ಸರಸಾಟವಲ್ಲ ಅಂದಿದ್ದಾರೆ ನೋಡಿ ಹಿರಿಯರು...."

"ಪಂಚಭೂತಗಳಲ್ಲಿ ಇವೆರಡಕ್ಕೇನು ಹೆಚ್ಚಿನ ಸ್ಥಾನಾಂತ..."

"ಏನೂ ಅಂದ್ರೆ...ಅದು ಹಾಗೆಯೇ."

"ಏಕೆ?"

"ನೀನೇ ಹೇಳಿ...."

"ನೋತೇಂತ ಹೇಳು..'

"ಆಯ್ತಪ್ಪ...."

"ಊ ಹ್ಞೂಂ.....ಸರಿ ಊಗೆ ಹೇಳು.."

"ಸರಿಯೂಗೇ ನೋತೆ...."

"ಹ್ಞೂಂ, ನೋಡ', ಮನುಷ್ಯನ ತಲೆಯೊಳಕ್ಕೆ ದೇಹದ ನೀಲಿರೋದು, ಅದಕ್ಕೆ...."

"ಒಳ್ಳೆ ಕತೆಯಾಯ್ತಲ್ಲ ಇದ..."

"ಏನು?"

"ಏನೂ ಇಲ್ಲ. ನೋಡಿ, ಸ್ವರ್ಣ ಸಿಂಗರು ರಶ್ಯಾದಿಂದ ಹಿಂದೆ ಬಂದರಂತೆ..'

"ಏನು ತಂದರಂತೆ?"

"ಮತ್ತೇನೂ ತಾರದಿದ್ರೂ ನೋವಿಯತ್ ತನ್ನ ವಿಶಾಲ ಜನ ಸಮೂಹದ ಶುಭ ಕಾಮನೆಯನ್ನಂತೂ ತಂದಲ್ಲಾ...ಅಲ್ರಿ, ಚೀನಾ ದಾಳಿಯು ಆರಂಭದಿಂದಿನ, ಅಧ್ಯಕ್ಷ ಅಯ್ಯೂಬರವರು ಮೋಸ್ಕೋವಿಗೆ ತೆರಳುವ ಮುಂಚಾವದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯಾಧಿವೇಶನಕ್ಕೆ ಹಾರ್ದಭಾವಿಯೊದ ಈ ಸಂದರ್ಶನ ಮಹತ್ವಪೂರ್ಣವೆಂದಿತ್ತಲ್ಲಾ....'

'ಈಗ ಯಾರು ಅಲ್ಲಾಂತಂದವ್ರು?"

'ಗೂರು ಜೂಕೆ ಅನ್ಬೇಕು? ಅವ್ರೇನು ಸಾಧಿಸಿಕೊಂಡು ಬಂದ್ರೂಂತ...."

'ಸಾಧಿಸಿಕೊಂಡು ಬರೋಕೆ ಅದೇನು ವ್ಯಾಪಾರಾನ? ಕಂಡು ಚೀನಾದ ತಂಟೆ ನೋಡಿಯಕ್ಕಿನೊಂದಿಗೂ ಇದೆ ನೋಡು, ಆಮೇಲಿನಿಂದ ಅದ್ರ ಬಗ್ಗೆ ಪರಸ್ಪರ ವಿಚಾರ ವಿನಿಮಯವಾಗಿರಲೇಬೇಕು; ತಾಷ್ಕೆಂಟ್ ಘೋಷಣೆಗೆ ಭಾರತ ಬದ್ಧವಾಗಿಯೇ ಇದೆ ಎಂಬ ಘೋಷಣೆ ಅಯ್ಯೂಬರಿಗಾಗಿ, ವಿಯತನಾಮದ ಯುದ್ಧ ವಿರಾಮ ಸುಂದರ ಸ್ವಪ್ನ ನೂಪ್ಪವೆಂಬುದು ಯುನೋವಿಗೆ, ಇನ್ನು ಉಭಯ ಕ್ಷೀರೋಪರಿ—ಸಾಲದೇ? ಅಂತಾರಾಷ್ಟ್ರೀಯ ರಾಜಕಾರಣದಲ್ಲಿ ಇಂತಹ ಭೇಟ್ಟಿಗಳು ಕೆಲವೊಮ್ಮೆ ನೆರವಾಗುವುದುಂಟು...'

'ಏನು ರಾಜಕಾರಣವೋ ಆದು—ಅಲ್ರಿ, ಮುರಾರ್ಜಿಯವರು ಅಮೆರಿಕಾ—ಕೆನೆಡಾಗಳಲ್ಲಿ ಭಾರಿ ದಿಗ್ವಿಜಯ ಸಾಧಿಸಿದ್ದಾರಂತೆ.'

"ಎಂಥ ದಿಗ್ವಿಜಯ? ಬಯಲಾಟದ ದಿಗ್ವಿಜಯವೆ?'

"ಅಲ್ರಿ, ನಾನು ಏನಾದ್ರೂ ಅಂದ್ರೆ ನಿಮ್ಗೆ ತಮಾಷೇನೇ...."

'ಮತ್ತೆ ನೀನು ಅನ್ನೋದಾದ್ರೂ ಏನು? ಮುರಾರ್ಜಿ ಭಾಯಿ ದೇಶದ ಸಂಕಟದ ಕಡೆ—ಅದರೂ ಅದರ ನಿರ್ಧಾರದ ಹೆಜ್ಜೆ ಮೊದಲಾದುವನ್ನು ತಿಳಿಸಿ ಬಿಡಿಸಿ ಹೇಳಿದ್ದರಿಂದ ಕೆಲವೊಂದು ತಪ್ಪು ಭಾವನೆಗಳು ದೂರವಾಗುವ ಸಂಭವವಿದೆ.'

"ಮತ್ತೆ ಎಂಥದೋ ಶೇಕ ಅಬ್ದುಲ್ಲಾ ಅಯ್ಯೂಬಖಾನರ ಕೈಯವಿನ ಕಾಗದ ಪತ್ರಗಳೋ ಏನೋ...."

"ಹ್ಞೂಂ... ಪಾಕಿಸ್ತಾನದ ಪಿತೂರಿಯನ್ನು ಶೇಕ ಅಬ್ದುಲ್ಲಾರೇ ಒಪ್ಪಿಕೊಳ್ಳುತಿದ್ದಾರೆ. ಭಾರತ ಸರಕಾರ ಪಾಕಿಸ್ತಾನಿ ಕಾರಸ್ಥಾನ—ಕುಟಿಲ ನೀತಿಯನ್ನು ಬೆಳಕಿಗೆ ತರುವಲ್ಲಿ ಯಶಗಳಿಸಿದೆ ಎಂತಲೇ ಅಯ್ಯೂಬರ ವಾದ ನಡುಗತೊಡಗಿದೆ...."

"ಏನಾದ್ರೂ ಕಾಶ್ಮೀರದ ಮೋಹ ಬಿಡೋಲ್ಲ ಕಾನೆ?"

'ಅದ್ಯಾಕೆ ಬಿಟ್ಟಾರು? ಅದು ಬಿಟ್ಟು ಬಿಟ್ರೆ ಮತ್ತೆ ಅದು ಬದುಕೋದು ಹ್ಯಾಗೆ?"

"ನೋಡಿ, ನಮ್ಮ ಪ್ರಧಾನಿ ಮಂತ್ರಿ ಸಿಂಹಳ ಕುಂದರ್ಶನ ಮಾಡಿ ಬಂದ್ರು. ಆಲ್ಲ, ಇಡಿಯ ಸಿಂಹಳದಲ್ಲಿ ಆಳಿಗೆ ಎಂಥ ಸ್ವಾಗತಕಾರಂತೆ?....

"ಹ್ಞೂಂ.....ಸರೀನ್ನ. ಎಷ್ಟಾದ್ರೂ ಪ್ರಪಂಚಕ್ಕೆ ಮೊತ್ತಮೊದಲು ಮಹಿಳಾ ಪ್ರಧಾನಿಗುನ್ನು ನೀಡಿದ ದೇಶ ಸಿಂಹಳ—ಆ ಪರಂಪರೆಯನ್ನು ಮುಂದುವರಿಸಿದ್ದು ಭಾರತ...."

"ಸರಿ ಹೋಯ್ತು.....ಇವಳೆ ಅಂದ ಮೊತ್ತಕ್ಕೆ...."

"ಹ್ಞೂಂ ಕಣೇ. ನೋಡು, ಮೊನ್ನೆ ಮೊನ್ನೆ ಮುಂಬಯಿಯಲ್ಲಿ ಒಬ್ಬಾಕೆ ಪುರುಷ ನೇಪಥ್ಯಾರಿ ಕಳ್ಳತನ ಪ್ರವೀಣೆಯೊಬ್ಬಳ ಮಹಿಳೆಯನ್ನು ಸೆರೆ ಹಿಡಿದರಂತೆ....'

'ಛಿ, ಏನಂತೀರಾ ನೀವು?'

"ಇದು ಸುಳ್ಳಲ್ಲ ಕಣೆ..."

"ಹ್ಞೂಂ....ಅಲ್ಲಿಗೆ ನಿಜವಾದ ನಾಗರಿಕತೆ ಬಂದಂತಾಯ್ತು. ಇಷ್ಟೂ ಮುಂದುವರಿಯವುದೆಂದರೆ...."

"ಕೆಲವರು ನಮ್ಮ ಮಹಿಳಾ ಜನವನ್ನು ಹೀಗೂ ಉಪಯೋಗಿಸುತ್ತಾರೆ...."

"ಹೆಣ್ಣಾಂ ನಾಚಿಗೆಗೇಡು.."

'ಯಾಕೆ? ಕಳ್ಳತನವೆಂಬುದು ಪುರುಷರಿಗೆ ಮಾತ್ರ ಏಸಾಸಲಾದ ವಿದ್ಯೆಯೇನು? ಅದೂ ಸಮಾನತೆಯು ಈ ಯುಗದಲ್ಲಿ...."

'ಕೆಟ್ಟು ಹೋಯ್ತು ಕಾಲ..."

"ಯಾಕೆ?"

'ಯಾಕೆ ಅಂದ್ರೆ? ನೋಡಿ, ಪ್ರಪಂಚದ ಸುಸಂಸ್ಕೃತ ಸುಸಂಪನ್ನ ಜನತೆ ಪಶು ಸಮಾನವಾಗುತ್ತ ಇದೆಯಂತೆ...'

'ಅಂದ್ರೆ....?'

ಅಂಪೈ ಎಂದ್ರೆ ಎಂಥದು? ಮುದುವೆಯಾಗದೆ ತಾಯಿಯಾಗುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಬೆಳೆಯುತ್ತಿದೆಯಂತೆ ಅಮೆರಿಕೆಯಲ್ಲಿ!

'ಹ್ಞೂಂ, ಅಲ್ಲಿನ ಸಂಸ್ಕೃತಿ ಅಂಥಾದ್ದು. ಗಂಡು-ಹೆಣ್ಣು ಕೈಕೈಹಿಡಿದು ಪರ್ತಿನಿ ಲಲಂಗಿನಿ ಲೈಂಗಿಕ ತೃಪ್ತಿಯನ್ನು ತೀರಿಸಿಕೊಳ್ಳಬಲ್ಲಂತಹ ಸಂತೋಷ ಕೂಟಗಳು ನಡೆಯುತ್ತಲೇ ಇರುತ್ತವೆ. ಇದನ್ನು ವಿರೋಧಿಸುವುದು ಅವರ ಸಾಮಾಜಿಕ ಕಟ್ಟಳೆಗಳಿಗೆ ವಿರೋಧ....'

'ಎಂಥದ್ರಿ ಇದು? ನೈತಿಕ ಅಪಮೌಲ್ಯ, ಪಾಶವಿಕ ವರ್ತನೆ, ಅದ್ರ ಮೇಲೆ ದಾಂಪತ್ಯದಲ್ಲಿ ವಿರಸ..."

'ಪರಿಹಾರವಿಧಿಯಲ್ಲಾ ಡೈವರ್ಸ್...'

'ಅದೇ ಅಂದದ್ದು ನೋಡಿ, ಲೈಂಗಿಕ ಸ್ವೈರ ಅಂದ್ರೆ ಪಶು ಜೀವನತಾಂತ ಅರ್ಥ. ಇಂತಹ ಪಶುಗಳನ್ನೂ ನಾವು ಸುಸಂಸ್ಕೃತರೂಂತ ಕರೆಯುವುದಾದ್ರೆ...."

"ಇದು ದೃಷ್ಟಿ ಭೇದ...."

"ಊಳಿ?"

"ಸಂಸ್ಕೃತಿಗೆ ಯಾವುದೇ ಪರಿಪೂರ್ಣ ಪರಿಭಾಷೆಯೆಂಬುದಿಲ್ಲ. ಒಂದು ಪರಿಭಾಷೆ ನಿರ್ಮಾಣವಾಗುವುದರೊಳಗೆ ಅದು ಔಟ್ ಆಫ್ ಫ್ಯಾಷನ್ ಆಗಿ ಬಿಡುತ್ತದೆ.'

"ಹೆಣ್ಣಾಂ. ನವ್ಯ ದೇಶದ ಕೆಲವು ರಾಜ್ಯ ಸರಕಾರಗಳ ಕತೆಯಂತೆ...'

"ಹೆಣ್ಣಂ....ಬಿಲ್ಲಿ ಲೈಂಗಿಕ ವ್ಯಭಿಚಾರವಾದ್ರೆ ಇಲ್ಲಿ ರಾಜಕೀಯ ವ್ಯಭಿಚಾರ...."

"ಮತ್ತೆಂಥದು? ನೋಡಿ, ಪಾಂಡಿಚೇರಿಯಲ್ಲಿ ಮತ್ತೊಮ್ಮೆ ಹಗರಣ ಆರಂಭವಾಗಿದಿಯಂತೆ..."

'ಮಣಿಪುರದಲ್ಲೂ "ಚಾಣ ಸಿಂಗ್"ರ ಅವತಾರವಾಗಿದೆ."

"ಅಲ್ರಿ, ನೋಡಿ, ಸೇನೆಯಲ್ಲಿ ಕಮ್ಯುನಿಸ್ಟರು ಸೇರಿಕೊಳ್ಳದಂತೆ ನೋಡಿಕೊಳ್ಳಬೇಕೆಂದು ಎಚ್ಚರಿಕೆ ನೀಡಲಾಗಿದೆಯಂತಲ್ಲಾ....'

"ಫಿಜಾನ್ನ. ಕಮ್ಯುನಿಸ್ಟ ಚೀನಾದೊಂದಿಗೆ ನಮ್ಮ ರಕ್ಷಣಾನಿಸ್ಪೃ ಪಾರ್ಟಿ ಕೈಮಿಲಾಯಿಸಲು ಸಿದ್ಧವಿರುವಾಗ...."

"ಅದು ಹೌದೂನ್ನಿ. ಪಶ್ಚಿಮ ಬಂಗಾಲವನ್ನು ನೋಡಿದ್ರೆ ತಿಳಿಯೋದಿಲ್ವೆ? ಕಾನೂನೂ ಇಲ್ಲ, ಸುವ್ಯವಸ್ಥೆಯೂ ಇಲ್ಲ. ಒಂದಕ್ಕೂ ಎರಡಕ್ಕೂ 'ಫೋರಾಪೋ'!"

'ಅದಕ್ಕೇ ನೋಡ', ಕಮ್ಯುನಿಸ್ಟರನ್ನು ಹೊರಗಿಟ್ಟು ಬೇರೆ ಸಚಿವ ಸಂಪುಟ ಅಧಿಕಾರಕ್ಕೆ ಬರುವ ಬಗ್ಗೆ ಊಹಾಪೋಹ ನಡೆಯುತ್ತಿದೆ..."

"ಅಲ್ಲಿ ಸಾಧ್ಯವಾಗಬಹುದು. ಆದರೆ ಮದ್ರಾಸಲ್ಲಿ?"

"ಇದೆಯಲ್ಲಾ ಡಿಎಂಕೆ. ಶಿವಸೇನೆಯನ್ನು ವಿಸರ್ಜಿಸಬೇಕಾದ್ರೆ ಡಿಎಂಕೆಯನ್ನೂ ವಿಸರ್ಜಿಸಬೇಕು ಅಂತಾರೆ ಥ್ಯಾಕರೆ...."

"ಅಲ್ರಿ, ಇದು ಹೇಗೆ? ಡಿಎಂಕೆ ರಾಜಕೀಯ ಪಕ್ಷ...."

"ಅದು ಹುಟ್ಟಿದ್ದು ಬೇರೆ ರೀತಿಯಲ್ಲಿ."

"ಏನೇ ಆಗ್ಲಿ, ಅದ್ರ ಹಿಂದೀ ವಿರೋಧಿ ನೀತಿಯನ್ನು ನಾನು ಒಪ್ಪೋಲ್ಲ."

"ಬೇಡ. ಅಭಿಪ್ರಾಯ ಸ್ವಾತಂತ್ರ್ಯವಿದೆ ನೋಡು..."

"ಅಲ್ರಿ, ಕೆಲವು ನಮ್ಮವರೆಲ್ಲಾ ಸೇರಿ ಇಂಗ್ಲಿಷ್ ಶಿಕ್ಷಣ ಮಾಧ್ಯಮ ವಿದ್ಯೇ ಕೂಡಾ ಹೇಳ್ತಾರಂತೆ ... ಕಲಿಯುವ ವಯಸ್ಸಿನ ಮಕ್ಕಳ ಮೇಲೆ ಈ ವಯಸ್ಕರಜ್ಜನ ವರ ಬಲಾತ್ಕಾರವೇಕೆ? ತಮ್ಮ ಹಳೆಯು ಮೊನದಂಡದಲ್ಲೇ ಅಳೆಯುವ ಇವ್ರು ಸ್ವಲ್ಪ ಸುಮ್ಮಗಿರಬಾರದೆ? ನೋಡಿ ಬೆಂಗ್ಳೂರಲ್ಲಿ ಕನ್ನಡ ಮಾಧ್ಯಮ ಶುಂಭ ಆಕರ್ಷಕವಾಗಿದೆ."

'ಆಗದೆ ಏನೆ? ಅವಕಾಶವಿದ್ದರೆ, ಆಕರ್ಷಕವಾಗಿಯೇ ಆಗುತ್ತೆ. ವಿಷಯ ಜ್ಞಾನ ಮಾತೃಭಾಷೆ ಮೂಲಕವೇ ಸಾಧ್ಯ ತಾನು ತಿಳಿದದ್ದನ್ನು ಮಾತೃ ಭಾಷೆಯ ಮಾಧ್ಯಮದಲ್ಲಿ ಆದು ಸರಿಯಾಗಿ

(ಬಂಭತ್ತನೇ ಪುಟದಿಂದ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
R. I. A. 413/67
O. S No 209/66

ಲೊರೆನ್ಸ್ ಇವಾಸುಮೇಲವಾಸ್

—ಅರ್ಜಿದಾರ

ಮತ್ತು

ಪದ್ದು ಸಾಧುಸಿ ಕೂಡಾ —ಎದ್ರಿರು

ಅರ್ಜಿದಾರನು ಫ್ಯಾಬಲ್ ದಿಕ್ಕಿ ಬಗ್ಗೆ ದಾವೆ ಮಾಡಿದ ಮೇಲಿನ ಅರ್ಜಿಯು ಬಂದಿಂದ ರಿನೇದಿಗಿನ ಎದ್ರಿಯರ್ ನೋಟೀಸಿನ ಬಗ್ಗೆ ತಾ. 30—8—67 ಕ್ಕೆ ಇಟ್ಟಿದೆ. ಸದ್ರಿಯ ದಿನ ಸದ್ರಿ ಕಾರ್ಯಕಿನಲ್ಲಿ ಪೂರ್ವಾಹ್ನ ಘಂಟೆ 10ಕ್ಕೆ ಸದ್ರಿ ಅರ್ಜಿಯಲ್ಲಿ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಸದ್ರಿಯವರ ಗೈರು ಹಾಜ್ರಿಯಂಡ ಸದ್ರಿ ಅರ್ಜಿ ತೀರ್ಮಾನಿಸಲ್ಪಡುವದು.

(Sd.) Grafian C. Rego
Vakil for Petitioner

ಉಡುಪಿ, ತಾ. 21—9—67

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0—50 ಪೈಸೆ ಮಾತ್ರ.

0—60 ಪೈಸೆ M. O. ಮಾಡಿ, ಯಾ ಸ್ಟ್ಯಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ
ಪಾಲುಕೋಟೆ, ಉಡುಪಿ, ದ. ಕ.

ಅಭಿಪ್ರಾಯ

ಶಿಕ್ಷಣದ ಮಾಧ್ಯಮವು ರಾಜ್ಯಭಾಷೆಗಳಲ್ಲಿ!!

ಬರೆದವರು: ಕುಮಾರಿ ವಿಜಯಾ ಶೆಣೈ, ಬಿ. ಎ.

ಸ್ವಾತಂತ್ರ್ಯ ದೊರಕಿ ಇಪ್ಪತ್ತು ವರುಷಗಳು ಸಂದುವು. ನೂರು ಪಂಚವಾರ್ಷಿಕ ಯೋಜನೆಗಳಾದುವು. ಆದರೂ ನಮ್ಮ ದೇಶದ ಅವನತಿಯ ಮಟ್ಟವು ಏರುತ್ತಾ ಇರುವುದು ತುಂಬಾ ಹಾಸ್ಯಾಸ್ಪದ, ಶೋಚನೀಯ. ಇದಕ್ಕೆ ಕಾರಣ ದೇಶದಲ್ಲಿ ಉದ್ಭವಿಸಿದ ಹಲವಾರು ಸವ ಸೈಗಳು. ಸಮಸ್ಯೆಗಳು ತಾನು ಮುಂದು ತಾನು ಮುಂದು ಎಂದು ತಿಕ್ಕಾಡುತ್ತಿವೆ. ದಿನದಿಂದ ದಿನಕ್ಕೆ ನಿರುದ್ಯೋಗ ಸಮಸ್ಯೆ; ಪ್ರತಿದಿನವೂ ತನ್ನ ಪೌರುಷವನ್ನು ತೋರಿಸುವ ವಸ್ತು ಸಾಮಗ್ರಿಗಳ ಬೆಲೆ; ಹೆಣ್ಣುಬ್ಬರ ರೂಪ್ಯಾ ಅಪಸಾಮಾನ್ಯ ಮತ್ತು ಅದರಿಂದ ಉಂಟಾದ ಹಲವಾರು ತೊಡಕುಗಳು; ನಾಗಾ, ಮಿಜೋ ಸಮಸ್ಯೆ; ನಿರಾಶ್ರಿತರ ಮತ್ತು ಪ್ರವಾಹ ಪೀಡಿತಜನರ ಸಮಸ್ಯೆ.ಅಲ್ಲಲ್ಲಿ ಆಗುವ ರಾಜಕೀಯ ಗಲಭೆಗಳುಮತ್ತುಮೊದಲಾದುವು ನಮ್ಮ ರಾಷ್ಟ್ರವನ್ನು ಮುತ್ತಿಕೊಂಡಿವೆ. ಎಲ್ಲವುಗಳಿಗೆ ಮುಖ್ಯವಾದುದು ಮತ್ತು ದೇಶದ ಉನ್ನತಿಗೆ ಕಂಟಕಪ್ರಾಯವಾದುದು ಅಹಾರಾಭಾವ ಮತ್ತು ಹೆಚ್ಚಾಗಿ ಬೆಳೆಯುವ ಜನಸಂಖ್ಯೆ. ಈಗ ನಮ್ಮ ದೇಶವು ಜನಸಂಖ್ಯೆಯಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿದೆ. ಆದ್ದರಿಂದ ಈಗ ಮೂರು ಜನರಲ್ಲಿ ಇಬ್ಬರಿಗೆ ಮಾತ್ರ ರಾಷ್ಟ್ರೀಯ ಕ್ಯಾಲೋರಿಯಷ್ಟು ಅಹಾರ ಒದಗಿಸಲು ನಮ್ಮ ದೇಶವು ಸಮರ್ಥವಾಗಿದೆ. ಅದರೆ ಇತ್ತೀಚೆಗೆ ಇಷ್ಟು ಆಹಾರ ಒದಗಿಸಲು ದೇಶವು ಅಸಮರ್ಥವಾಗಿದೆ. ಈ ಎಲ್ಲಾ ಸಮಸ್ಯೆಗಳನ್ನು ನೋಡಿದರೆ ಭಾರತವು ಸಮಸ್ಯೆಗಳ ನೆಲೆಬೀಡೋ ಅಥವಾ ತವರೂರೋ ಎಂದು ಭಾಸವಾಗುತ್ತಿದೆ.

ಇಷ್ಟೆಲ್ಲಾ ಸಮಸ್ಯೆಗಳು ನಮ್ಮ ಮುಂದಿದ್ದರೂ ಇತ್ತೀಚೆಗೆ ಶಿಕ್ಷಣದ ಮಾಧ್ಯಮಕ್ಕೆ ತುಂಬಾ ಬೆಲೆ ಕೊಡಲಾಗುತ್ತಿದೆ. ಇವರ ಹಿತಕ್ಕಾಗಿ, ದೇಶದ ಉನ್ನತಿಗಾಗಿ ಯಾವ ಸಮಸ್ಯೆಯನ್ನು ನಾವು ಮೊದಲು ಪರಿಹರಿಸಬೇಕೆಂಬ ವಿವೇಚನೆಯಿಲ್ಲದೆ ಈಗ ಈ ಸಮಸ್ಯೆಯ ಧ್ವನಿಯನ್ನು ಎತ್ತಿ ಹಿಡಿಯಲಾಗುತ್ತಿದೆ. ಇನ್ನು ಏಪು ವರು ಷಗಳೊಳಗಾಗಿ ಪ್ರತಿಯೊಂದು ಪ್ರಾಂತ್ಯದ ಶಾಲಾ ಕಾಲೇಜುಗಳಲ್ಲಿ ಶಿಕ್ಷಣದ ಮಾಧ್ಯಮವು ತಮ್ಮ ತಮ್ಮ ಪ್ರಾದೇಶಿಕ ಭಾಷೆಗಳಲ್ಲಾಗಬೇಕೆಂದು ಕೆಲವರು ಒಟ್ಟಾಗಿ ನಿರ್ಣಯಿಸಿದ್ದಾರೆ.

ಶಿಕ್ಷಣದ ಮಾಧ್ಯಮವು ಪ್ರಾಂತೀಯ ಭಾಷೆಯಾಗಲ್ಲಾದರೆ ನಮಗೆ ಬಹು ಮಟ್ಟಿಗೆ ಚಾನ್ಸು. ಈಗಾಗಲೇ ಭಾರತವು ಹಲವಾರು ರಾಜ್ಯಗಳಾಗಿ ವಿಭಜನೆಗೊಂಡುದರಿಂದ ಹಲವಾರು ಸಮಸ್ಯೆ, ಒಳ ಜಗಳಗಳು ಹುಟ್ಟಿಕೊಂಡಿವೆ. ಉದಾಹರಣೆಗಾಗಿ ಕೇವಲ ನಮ್ಮ ನೀರಿಗಾಗಿಯೇ ನಮ್ಮ ರಾಜ್ಯಗಳು ಕಚ್ಚಾಡುತ್ತಿವೆ.

ಶಿವಸೇನೆ, ಬಸವಸೇನೆ ಮುಂತಾದುವುಗಳಿಗೆ ಜನ್ಮ ನೀಡುತ್ತಿವೆ. ಇನ್ನು ಪ್ರತಿಯೊಂದು ರಾಜ್ಯವು ತನ್ನ ರಾಜ್ಯ ಭಾಷೆಯನ್ನೇ ಶಾಲಾ ಕಾಲೇಜುಗಳಲ್ಲಿ ಶಿಕ್ಷಣದ ಮಾಧ್ಯಮವನ್ನಾಗಿ ಮಾಡಿದರೆ ಮೂಲ ಸೇನೆ ಸಮಸ್ಯೆಗಳಿಗೆ ದಾರಿ ಮಾಡಿಕೊಡುತ್ತವೆಯೋ ಎಂದು ಕಾದು ನೋಡಬೇಕು.

ಶಿಕ್ಷಣ ಮಾಧ್ಯಮವು ಪ್ರಾದೇಶಿಕ ಭಾಷೆಯಾದರೆ ನಮಗೆ ಇಂಗ್ಲಿಷಿನ ಸಂಬಂಧವು ಹೆಚ್ಚಾಗಿ ಕಡಿದು ಹೋಗುವುದು. ಈ ಅಂತಾರಾಷ್ಟ್ರೀಯ ಭಾಷೆಯನ್ನು ಲಘುವಾಗಿ ತೆಗೆದುಕೊಳ್ಳಕ್ಕಾಗಿ. ಇದರಿಂದ ವಿದೇಶಗಳಿಗೆ ಹೋಗುವ ನಮ್ಮ ವಿದ್ಯಾರ್ಥಿಗಳಿಗೆ, ಅಧಿವೇಶನ ಮತ್ತು ಇತರ ಸಮಾರಂಭಕ್ಕೆ ಭಾಗವಹಿಸಲು ಹೋಗುವ ಮಹನೀಯರಿಗೆ, ರಾಯಭಾರಿ ಮುಂತಾದವರಿಗೆ ತುಂಬಾ ತೊಡಕಾಗುತ್ತದೆ.

ಇನ್ನು ಶಿಕ್ಷಕರಿಗಾಗುವ ತೊಂದರೆ— ಇದರಿಂದ ಶಿಕ್ಷಕರು ತುಂಬಾ ತೊಂದರೆಗೆ ಸಿಲುಕುತ್ತಾರೆ. ಇದು ಏರಿಗೆ ಇಂಗ್ಲಿಷಿನಲ್ಲೇ ಕಲಿಸುತ್ತಿದ್ದ ಅಧ್ಯಾಪಕರು ಈಗ ಒಂದೇ ಸಾರಿ ರಾಜ್ಯ ಭಾಷೆಯಲ್ಲಿ ಕಲಿಸಬೇಕಾದರೆ ಎಷ್ಟು ಕಷ್ಟವಾಗಬಹುದು ಅಧ್ಯಾಪಕರಿಗೆ ಹೊರತು. ಉದಾಹರಣೆಗಾಗಿ—ಇಂಗ್ಲಿಷಿನ ಒಂದೇ ಒಂದು ಶಬ್ದಕ್ಕೆ ಕನ್ನಡದಲ್ಲಿ ಹಲವಾರು ಅರ್ಥಗಳಿವೆ, ಅದ್ದರಿಂದ ಅಧ್ಯಾಪಕರು ತಮ್ಮ ವಿಚಾರಗಳನ್ನು ಸರಿಯಾಗಿ ಮನನ ಮಾಡಿ ಅನಂತರ ಅದಕ್ಕೆ ಹೋಲುವ ಪದಗಳನ್ನು ಹೊಂದಿಸಿಡಬೇಕಾಗುತ್ತದೆ. ಇದರಿಂದಾಗಿ ಅವರಿಗೆ ಆ ಬರೆಪು ಸ್ವಲ್ಪ ಮತ್ತು ಅರ್ಧ ಕೊಡೊಡನೇ ಹೋಗಾಡದೇಕಾಗುವುದು ಅದರೆ ಅನ್ಯ ಒಳ್ಳೇ ಬರಹಗಾರರ ಪುಸ್ತಕಗಳನ್ನು ಮನನ ಮಾಡಿ ಅದನ್ನು ತಮ್ಮ ವಿದ್ಯಾರ್ಥಿಗಳಿಗೆ ತಿಳಿಯ ಹೇಳಿ ತನ್ಮ ನುತ್ತ ವಿದ್ಯಾರ್ಥಿಗಳ ಜ್ಞಾನ ವೃದ್ಧಿಸುವ ಸಾಧ್ಯತೆಯು ಕಡಿಮೆಯಾಗುತ್ತದೆ. ಇದರಿಂದಾಗಿ ಅವರಿಗೆ ತಮ್ಮ ವೃತ್ತಿಯಲ್ಲೇ ಬೇಸರ ಬಂದು ಅನ್ಯ ವೃತ್ತಿಗೆ ಸೇರಿದರೂ ಆಶ್ಚರ್ಯವೇನಿಲ್ಲ. ಇದು ಹೆಚ್ಚಾಗಿ ವಿದ್ವತ್ತಿನ ಮತ್ತು ವೈದ್ಯಕೀಯ ವಿಷಯಗಳಿಗೆ ತುಂಬಲಾರದ ನಷ್ಟವನ್ನು ತಂದೊಡ್ಡುವುದು. ದೇಶದ ಉನ್ನತಿಗೆ ಕಾರಣಭೂತವಾದ ಇವುಗಳಿಗೇನೇ ತೊಂದರೆಯಾದರೆ ಇನ್ನು ದೇಶದ ಉನ್ನತಿಯಾಗಬೇಕೆಂದು ಹೇಳಿದರೆ ಸಾಧ್ಯವೇ?

ಶಿಕ್ಷಣದ ಮಾಧ್ಯಮವು ರಾಜ್ಯ ಭಾಷೆಯಲ್ಲೇ ಆದರೆ ವಿದ್ಯಾರ್ಥಿಗಳಿಗೂ ತುಂಬಾ ತೊಂದರೆಯಾಗುವುದು. ಉದಾಹರಣೆಗಾಗಿ—ಇಂಗ್ಲಿಷಿನಲ್ಲಿ ರಸ್ತೆಗಳ ವರ್ಗೀಕರಣವನ್ನು ಮಾಡಿಕೊಂಡ ಅವರು ಇನ್ನು ಪ್ರತಿಯೊಂದು ಪಾರಿಭಾಷಿಕವನ್ನೂ ಅನ್ಯ ಭಾಷೆಯಲ್ಲಿ ಕಲಿಯಲು ಸರ್ವಥಾ ಒಪ್ಪಲಾರರು. ಒಂದು ರಾಜ್ಯದ ವಿದ್ಯಾರ್ಥಿಗಳಿಗೆ ಇನ್ನೊಂದು ರಾಜ್ಯಗಳಿಗೆ ಹೋಗಿ ಕಲಿಯುವ ಅವಕಾಶವು ಕಡಿಮೆಯಾಗುವುದು ಅಲ್ಲದೆ ಪರದೇಶಗಳಿಂದ ಇಲ್ಲಿ ಬಂದು ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯೂ ಸೊನ್ನೆಯಾಗಬಹುದು. ಈ ಒಂದು ವಿಷಯವನ್ನು ನಾವು ಶೂನ್ಯ ಶಿಸಬಹುದು. ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ ನಮ್ಮ ಈ ಮೈಸೂರು ರಾಜ್ಯದಲ್ಲೇ ಇದ್ದ ಹಲವಾರು ಕಾಲೇಜುಗಳಲ್ಲಿ ಆಂಧ್ರ ದೇಶದ ವಿದ್ಯಾರ್ಥಿಗಳನ್ನು ಕಾಣಬಹುದು. ವೆಂಡಿಲಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪಂಂಾಷ್ಟ್ರಗಳ ವಿದ್ಯಾರ್ಥಿಗಳೂ ಇದ್ದಾರೆ. ಅಂತಾರಾಷ್ಟ್ರೀಯ ಭಾಷೆಯಾದ ಇಂಗ್ಲಿಷ್ ಶಿಕ್ಷಣದ ಮಾಧ್ಯಮವಾಗಿದ್ದರಿಂದ ಇದು ಸಾಧ್ಯವಾಯಿತು. ಶಿಕ್ಷಣದ ಮಾಧ್ಯಮವು ಇಂಗ್ಲಿಷಿನ ಹೊರತಾದರೆ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹೋಗಿ ತಮ್ಮ ಶಿಕ್ಷಣ ಮುಂದುವರಿಸಲು ವಿದ್ಯಾರ್ಥಿಗಳಿಗೆ ಸಾಧ್ಯವೂ ಇಲ್ಲ. ಅಲ್ಲದೆ ಬೇರೆ ದೇಶಗಳಿಂದ ನಮ್ಮ ದೇಶಕ್ಕೆ ವಿದ್ಯಾರ್ಥಿಗಳ ಆಗಮನವೂ ನಿಂತು ಹೋಗುವುದು.

ಬಹು ತೊಡಕಿನ ಕೆಡುಕೆಂದರೆ, ಒಂದು ರಾಜ್ಯದಿಂದ ಇನ್ನೊಂದು ರಾಜ್ಯದಲ್ಲಿ ಇದರಿಂದಾಗಿ ಕೆಲಸಕ್ಕೆ ಸ್ವಯಂಸ್ಪಿಸುವುದು ಅಸಾಧ್ಯವಾಗಿದೆ. ವಿಗ್ರವಣೆ ಬಹಳ ಕಷ್ಟದ ಕೆಲಸವಾಗುವುದು.

(ಎಂಟನೇ ಪುಟ ನೋಡಿರಿ)

ಮಕ್ಕಳ ಕನಸಿನ ಜಗತ್ತು

ನಿನ್ನ ಮಕ್ಕಳಿಗೆ ತಮ್ಮದೇ ಆದ ಪವಿತ್ರ ಯೋಜನೆಗಳಿವೆ..... ... ತಮ್ಮ ಭವಿಷ್ಯದ ಬಗೆಗೆ ಅವರು ಕನಸುಗಳನ್ನು ಪ್ರಾಯಶಃ ನೀವು ಓದಲಾರಿರೋ ಏನೋ. ಒಬ್ಬಾತ ಡಾಕ್ಟರನಾಗಬೇಕೆಂದು ಬಯಸಿದರೆ ಎರಡನೆಯವ ಇಂಜಿನಿಯರನಾಗಬೇಕೆಂದೂ, ಮೂರನೆಯವ ಸ್ವಂತ ಉದ್ಯೋಗವನ್ನು ತೊಡಗಬೇಕೆಂದೂ ಹಂಬಲಿಸುವನು.

ಹೆತ್ತವರಾದ ನೀವು ನಿಮ್ಮ ಮಕ್ಕಳ ಕನಸಿಗೆ ರೂಪುಕೊಡಲು ಅವರ ಮುಂದಿನ ಜೀವನದ ಬಗ್ಗೆ ಈಗಿಂದೀಗಲೇ ಸನ್ನಾಹ ಮಾಡಬೇಕು. ಅವರ ಭವಿಷ್ಯದ ಸುರಕ್ಷಿತೆಗೆ ನೀವು ಮಾಡಬೇಕಾದ ಕೆಲಸ ಒಂದೇ : ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಅವರ ಉದ್ಯೋಗ ಜೀವನಕ್ಕಾಗಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ರಮವಾಗಿ ಹಣವನ್ನು ಕೂಡಿಡುವುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಈಗ ಇಂಗ್ಲಿಷಿನಲ್ಲಿ ಕಲಿಸಲ್ಪಡುತ್ತಿರುವ ಎಲ್ಲಾ ವಿಷಯಗಳನ್ನು ಒಂದೇ ಸಾರಿ ಕನ್ನಡದಲ್ಲಿ ಕಲಿಸಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಅವರಿಗೆ ಅಭ್ಯಾಸದಲ್ಲಿ ಆಸಕ್ತಿಯೇ ಕುಂದಿಹೋಗಬಹುದು. ಇದರಿಂದಾಗಿ ಅವರಿಗೆ ಅಭ್ಯಾಸದಲ್ಲಿ ಆಸಕ್ತಿಯೇ ಕುಂದಿಹೋಗಬಹುದು. ಇದರಿಂದಾಗಿ ಅವರಿಗೆ ಅಭ್ಯಾಸದಲ್ಲಿ ಆಸಕ್ತಿಯೇ ಕುಂದಿಹೋಗಬಹುದು.

ಇದಲ್ಲದೆ ಇಂಗ್ಲಿಷಿನಲ್ಲಿ ಕಲಿಸಲ್ಪಡುತ್ತಿರುವ ಎಲ್ಲಾ ವಿಷಯಗಳನ್ನು ಒಂದೇ ಸಾರಿ ಕನ್ನಡದಲ್ಲಿ ಕಲಿಸಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಅವರಿಗೆ ಅಭ್ಯಾಸದಲ್ಲಿ ಆಸಕ್ತಿಯೇ ಕುಂದಿಹೋಗಬಹುದು. ಇದರಿಂದಾಗಿ ಅವರಿಗೆ ಅಭ್ಯಾಸದಲ್ಲಿ ಆಸಕ್ತಿಯೇ ಕುಂದಿಹೋಗಬಹುದು. ಇದರಿಂದಾಗಿ ಅವರಿಗೆ ಅಭ್ಯಾಸದಲ್ಲಿ ಆಸಕ್ತಿಯೇ ಕುಂದಿಹೋಗಬಹುದು.

ಕುಂದಾಪುರ ತಾಲೂಕಿನಗೊಳ್ಳಗ್ರಾಮದಲ್ಲಿರುವವರು— ಪಾವುಲು ಪಿಂಟೋರ ಮಗ ಲೋರೆನ್ಸ್ ಪಿಂಟೊ| ರುಜಾರಿ ಪಿಂಟೋರ ವಿಧವೆ ಲೂಸಿ ಪಿಂಟೊ| ರುಜಾರಿ ಪಿಂಟೋರವರ ಮಗಳು ರೋಸಿ ಪಿಂಟೊ| ನಿಕೋಲಸ್ ಪಿಂಟೋರ ವಿಧವೆ ಲೂಸಿ ಪಿಂಟೊ| ನಿಕೋಲಸ್ ಪಿಂಟೋರ ಮಗ ವೆತ್ತಯಾನೆ ಆಗ್ನೆಸ್ ಪಿಂಟೊ| ಕೂಡಾ ಜನರಿಗೆ ಈ ಪ್ರಸಿದ್ಧತೆಯ ಯಪಡಿಸಾರ್ಪಣೆಯೆಂದರೆ—

ಕಲ್ಕಿ ವೃಷಭಾಯಿಯಲ್ಲಿ ವಾದಿಗೆ ಪ್ರತಿವಾದಿಂದ ಬಂಬಕ್ಕೆ ಬಳಿದ ಸ್ಥಿರ ಸಂಪತ್ತಿನ ಅದಿಲಾಭ್ಯತೆಯ ಮೂಲ ಗಣಿಗೆಯಿಂದ ಬಾಡಿಕೊಳ್ಳುವರೆ ವಾದಿಯು ಪ್ರತಿವಾದಿಗೆ ಮೇಲೆ ವಾಕ್ಸ್ಥ ದಾಖಲಿಸಿದ ಸೂಚನೆ ದಾವೆಯು ನಂ. 80—ಇ—1967ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಮ್ಮತ್ತಿದೆ. ಆ ಕಾರಣ ಏನಾದರೂ ಅಕ್ಷೇಪಣೆಗಳಿದ್ದರೆ ಸದ್ರಿ ದಿನ ಸ್ವಂತ ಕೋರ್ಟಿಗೆ ಮುಂದೆ ಜಗಲು 11ಗಂಟೆಗೆ ಹಾಜರಾಗಿ ಜ್ಞಾಪಿಸಲು ಮಾಡಿಕೊಳ್ಳಕ್ಕೆ ದ್ದು, ಎಂದು ಸಂತೆ ಆ ಮೇಲ್ಕ ತಮಿ ಪಡ್ಡಿಯನ್ನು.

G. V. Aithal
Advocate for Pltf.

Date 16—9—67, Coondapoor.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 62/1967.

ವಾದಿ —ದೇವರಾಯ ಕಾಮತ್

ಪ್ರತಿವಾದಿಗಳು—1. ರೋಲ್ಡನ್ ಪಿಂಟೊ, 2. ಲೋರೆನ್ಸ್ ಪಿಂಟೊ, 3. ಲೂಸಿ ಪಿಂಟೊ, 4. ರೋಸಿ ಪಿಂಟೊ, 5. ಲೂಸಿ ಪಿಂಟೊ, 6. ವಿಕ್ಟೋರಿಯಾ ಪಿಂಟೊ, 7. ವೆತ್ತಯಾನೆ ಆಗ್ನೆಸ್ ಪಿಂಟೊ, 8. ವಾಲ್ಟರ್ ಪಿಂಟೊ, 9. ಮೈಸರ ಪುಟ್ಟಣ್ಣಿ, 10. ಮೈಸರ ವಿಡೊ, 11. ಮೈಸರ ವೀರಿ.

ವಿಚಾರ ವೀಚಿ

ಧ್ಯೇಯ ಸಾಧನೆಯಲ್ಲ-ಸ್ವಾರ್ಥ ಸಾಧನೆ

ಲೇಖಕರು: ಶ್ರೀ "ಶಿವಶಂಕರ"

ಇಂದಿನ ದುರ್ಬಲ ಸರಕಾರದ ಸ್ಥಿತಿಗೆ ಪಶ್ಚಿಮಶರದ ಪಿಡುಗೇ ಪ್ರಮುಖ ಕಾರಣವೆನ್ನಲಾಗುತ್ತಿದೆ. ಕೆಲವು ಸಲ ಧ್ಯೇಯ ಸಾಧನೆಗಾಗಿಯೂ ಹಕ್ಕೊಲ್ಲಂಥೆನೆ ನೆಡೆ ಸಬೇಕಾಗುತ್ತದೆ. ಆದರೆ ಇಂದು ನಡೆಯುತ್ತಿರುವ ಪಿಡುಗಿಗೆ ಧ್ಯೇಯ ಸಾಧನೆ ಕಾರಣ ಇರುವದಿಲ್ಲ; ಸ್ವಾರ್ಥ ಸಾಧನೆಯೇ ಕಾರಣವಿದೆ. ಇಂತಹವರು ಪಕ್ಷ ಪರಿವರ್ತನೆಕ್ಕೆ ಪ್ರಾರಂಭಿಸುವದು ತಮ್ಮ ಎಲ್ಲಾ ಅಸ್ತ್ರಗಳು ಮುಗಿದ ಮೇಲೆಯೇ ಅಲ್ಲಿಯವರೆಗೆ ಅವರು ಒಳಗಿದ್ದೇ ತಮ್ಮ ದಾಳವನ್ನು ಉರುಳಿಸುತ್ತ ಇರುತ್ತಾರೆ. ಇದೇ ಒಳ್ಳೆಯ ಉಪಾಯವನ್ನು ತ್ತಾರೆ ದ್ರಾವಿಡ ಕಳ್ಳಗಮಿನ ತಂದೆ ತಿರು ರಾಮಸ್ವಾಮಿ ನಾಯ್ಕರ್‌ರವರು. ಶ್ರೀ ಅಂಬೇಡ್ಕರ್‌ರವರು ತಾವು ಹಿಂದೂ ಮತವನ್ನು (?) ತ್ಯಜಿಸಿ ಬೌದ್ಧ ಮತಕ್ಕೆ ಸೇರಿರುವದಾಗಿ ತಿಳಿಸಿದೊಡನೆ ತಿರು ರಾಮಸ್ವಾಮಿ ನಾಯ್ಕರ್‌ರವರು ಅದು ತಪ್ಪೆಂದು ಹೇಳಿ, ಹಿಂದೂ ಮತ (!)ದಲ್ಲಿದ್ದೇ ಅದನ್ನು ಹಾಳುಗೆಡವಿ "ಬ್ರಾಹ್ಮಣೇತರರ ಬಂಧನ"ವನ್ನು ಕಡಿದೊಗೆಯಬೇಕೆಂದು ತಿಳಿಸಿದ್ದರು. ಅದೇ ರೀತಿ ಕೆಲವರು ಕಾಂಗ್ರೆಸ್ಸಿನೊಳಗಿದ್ದೇ ಅದನ್ನು ಕೆಡವಲು ಪ್ರಯತ್ನಿಸುತ್ತಿದ್ದಾರೆ. ಅದರಲ್ಲಿ ಇನ್ನು ಕೆಲವರಿಗೆ ಕಾಂಗ್ರೆಸ್ಸನ್ನು ಬೀಳಿಸುವದು ಮುಖ್ಯವಲ್ಲ, ತಮ್ಮ ಬೇಳೆ ಬೇಯಿಸಿಕೊಳ್ಳುವದೇ ಮುಖ್ಯವಿದೆ. ಅಂಥ ಇಂದು ಅಸನಕ್ಕಾಗಿ ತೀವ್ರಗತಿಯಲ್ಲಿ ಸ್ಪರ್ಧೆ ನಡೆಯುತ್ತಿದೆ. ತಾನು ಮಂತ್ರಿಯಾಗಿಯೇ ಸಾಯಬೇಕೆಂಬ ಸಂಕಲ್ಪವನ್ನು ಮಾಡಿಕೊಂಡವರೂ ಇರಬಹುದು! ಅದರಿಂದಾಗಿ ಜ್ಯೂತ್ ಮಂತ್ರಿ ಮಂಡಲದ ಆಯುಷ್ಯ ರಜನೆಸೂಗುತ್ತಿದೆ. ತಾತ್ಕಾಲಿಕ (ಆರು ತಿಂಗಳ) ವಂತ್ರಿಗಳ ನೇಮಕವಾಗುತ್ತಿದೆ! ತಮ್ಮ ದಳಕ್ಕೂ, ಕಳ್ಳಗಮಿಗೂ, ಪಕ್ಷಕ್ಕೂ ಸೇರಿದರೆ ಸಾಕು, ಅವನು ಮಂತ್ರಿಯೇ ಆಗಿ ಬಿಡುತ್ತಾನೆ!

ಈ ಮಂತ್ರಿಮಂಡಲದ ಆಸನಕ್ಕಾಗಿ ನಡೆಯುತ್ತಿರುವ ಸ್ಪರ್ಧೆಯೂ ತಮಾಷೆಯದ್ದೇ ಇದೆ. ಕವಿ ಶುನಾಡಿನ ಜನತೆಗೆ ತಿರು ಮೂ. ಪೋ. ಶಿ. ಯವರ ಹೆಸರು ಗೊತ್ತು. ತಮಿಳಿಗಾಗಿಯೇ ಜೀವನ ಮುಡಿಪಾಗಿಟ್ಟವರೆನ್ನಲಾಗುತ್ತಿದೆ. ತಮಿಳು ನಾಡಿನ ಕೆಲವು ಭಾಗ ಆಂಧ್ರ ಹಾಗೂ ಕೇರಳಕ್ಕೆ ಹೋಗಿದ್ದಾಗ ಇವರ ನೇತೃತ್ವ ದಲ್ಲಿ ಭಾರೀ ಚಳುವಳಿಗಳು ನಡೆದಿದ್ದುವು. ಸ್ವಾತಂತ್ರ್ಯ ಹೋರಾಟದಲ್ಲೂ ಭಾಗವಹಿಸಿದವರಿದ್ದಾರೆ. ಇವರು ತಮಿಳು ಆರಸು ಕಳ್ಳಗಮಿನ ಸ್ಥಾಪಕ ಮುಂದಾಳು. ಇದು ಹಿಂದೆ ರಾಜಕೀಯ ಪಕ್ಷವಾಗಿರಲಿಲ್ಲ. ಕಳೆದ ಚುನಾವಣೆಯ ಸಮಯ ಶ್ರೀ ಮೂ.ಪೋ. ಶಿ.ಯವರಿಗೆ ಅದೇನು ಹೊಳೆಯಿತೋ! ತಮಿಳು ಆರಸು ಕಳ್ಳಗ ರಾಜಕೀಯ ಪಕ್ಷವೆಂದು ಪ್ರಕಟಿಸಿ ದ್ರಾ. ಮು. ಕ. ದೊಂದಿಗೆ ಚುನಾವಣಾ ಹೊಂದಾಣಿಕೆಯನ್ನು ನಡೆಸಿಕೊಂಡರಲ್ಲದೆ, ಸ್ವತಃ, ಅವರೇ ದ್ರಾ. ಮು. ಕ. ದ ಚುನಾವಣಾ ಚಿಹ್ನೆಯನ್ನು ಉಪಯೋಗಿಸಿಕೊಂಡರು; ಗೆದ್ದರು ವಿಧಾನ ಸಭೆ ಆರಂಭವಾಗುವಾಗ ಅಧ್ಯಕ್ಷರ ಸ್ಥಾನಕ್ಕೆ ಅವರ ಹೆಸರು ಸೂಚಿಸಲ್ಪಟ್ಟಿತು. ಶ್ರೀಯುತರು ದ್ರಾ. ಮು. ಕ. ದ ಚುನಾವಣಾ ಚಿಹ್ನೆಯನ್ನು ಪಯೋಗಿಸಿಕೊಂಡಿರುವರೇ ವಿನಃ ಪಕ್ಷದ ಸದಸ್ಯರಲ್ಲವಾದ ಕಾರಣ ಅವರ ಹೆಸರು ತಿರಸ್ಕರಿಸಲ್ಪಟ್ಟಿತು. ಇದೀಗ ಮಂತ್ರಿ ಪದವಿಗೆ ಅವರ ಹೆಸರನ್ನು ಸೂಚಿಸಲಾಗುತ್ತಿದೆ. ದ್ರಾ. ಮು. ಕ.ಕ್ಕೂ ಬೇವ ಸ್ಥಾನ ಸಂಬಂಧಕ್ಕೂ ಎಣ್ಣೆ ಶೀಗೆ ಕಾಯಿ ಇರುವದರಿಂದ ಹಿಂದೂ ಮತೀಯ ಉಂಬಳ ಪಾತೆಗೆ ಅವರನ್ನು ಮಂತ್ರಿಯನ್ನಾಗಿ ಮಾಡುವ ಯೋಚನೆ ಇದೆ. ಆದರೆ ಅದೇ ಪಕ್ಷದ ಹೆಸರು ಅಡ್ಡಿ ಬರುತ್ತಾ ಇದೆ. ಇದೀಗ ಅವರು ತಮ್ಮ ಕಳ್ಳಗಂ ರಾಜಕೀಯ ಪಕ್ಷ ಅಲ್ಲವೆಂದು ಪ್ರಕಟಿಸಿದ್ದಾದೆ. ಆ ಕಳ್ಳಗಮಿನಲ್ಲಿರುವವರು ಆದ್ಯನ ರಾಜಕೀಯ ಪಕ್ಷಕ್ಕೆ ಸೇರಬಹುದು. ಆ ಧಿಕಾರ ದಾಹ ಪಕ್ಷಾಂತರಕ್ಕೆ ಮೂತ್ರ ಪ್ರೇರೇಪಿಸುವದಲ್ಲ, ಪಕ್ಷದ ವಿನಾಶಕ್ಕೂ ಪ್ರೇರೇಪಿಸುತ್ತಿದೆ. ಇವರಿಗ ರಾಜಕೀಯ ಪಕ್ಷವೆಂದರೆ ಉಡುಪುಗಳೇ ಇವೆ—ಬೇಕಾದಾಗ ಬೇಕಾದ ಬಟ್ಟೆಗಳನ್ನ್ಟುಕೊಳ್ಳುವದು.

ಕೆಲವರು ಪಕ್ಷಾಂತರ ನಡೆಯುವ ಪ್ರದರ್ಶನ ನಡೆಸುವವರೂ ಇದ್ದಾರೆ. ಭಾರತದ ಪ್ರಧಮಂತ್ರಿ ಶ್ರೀ ಯುತಂತ ಚವ್ಹಾಣರು ಕಾಂಗ್ರೆಸ್ಸಿನಿಂದ ಕಾಲ್ಕೆಗೆದು, ಎದುರು ಪಕ್ಷಗಳೊಂದಿಗೆ ಕೈವಲಂಯಿಸಿಕೊಂಡು ಪ್ರಧಾನಿ ಪಟ್ಟವನ್ನೇರುವೆಂದು ಮಹಾರಾಷ್ಟ್ರದ ಪತ್ರಿಕೆಗಳು ಪ್ರಕಟಿಸಿದುವು. ಶ್ರೀ ಜವಹರ್‌ಲಾಲರಿಂದಲೇ "ಇಲ್ಲ"ವೆಂದರು ಅಷ್ಟೇ. ಅವರ ಹಿಂದ ಗಡೆ ಬೆನ್ನಲು ಬಾಗಿ'ತಿವನೇನೆ'(ಶವಸೇನೆ!)ಇದೆಯೆಂದು ರೀಸಲಾಗುತ್ತಿದ. ಇವರು "ಇಲ್ಲ"ನ್ನು ಆತ್ತಾರೆ ಅಷ್ಟೇ. ಅದಕ್ಕಿಂತ ಹೆಚ್ಚಿನ ಕೃಪ ಏನನ್ನೂ ತೆಗೆದುಕೊಳ್ಳುವದಿಲ್ಲ. ಅದರ ಬದಲು ಅಂತಹ ಸವಾಚಾರಗಳಿಗೆ ಅವಕಾಶವನ್ನೊದಗಿಸುತ್ತಿರುತ್ತಾರೆ. ಇತ್ತೀಚೆಗೆ ಅವರು ಮಾಯಿ ಮಂಬಿ' ಪತ್ರಿಕೆಯ ಉದ್ಘಾಟನೆ ಮಾಡಿದರು. ಶ್ರೀಯುತರು ಕೇವಲ ಮಹಾರಾಷ್ಟ್ರದ ಪ್ರಧಮಂತ್ರಿಯಷ್ಟೆಯಾದಿಸ್ಥಿ. ಭಾರತದ ಪ್ರಧಾನಿಯಾಗಿರುವದಿಸ್ಥಿ. ಮಹಾ ರಾಷ್ಟ್ರವು ಭಾರತದ ಒಂದು ಅಂಗವಿದೆ. ಮಹಾರಾಷ್ಟ್ರ ಭಾರತೀಯ ಭಾಷೆಗಳಲ್ಲಿ ಒಂದು. ಇಂದರ ಭಾರತ ಮೊತ್ತದ ಕೈ ಅಥವಾ ಕಾಲು.... ಒಂದು ಅಂಗ ಅಷ್ಟೇ. ಕುರುಡರು ಅನೆಯ ಅಂಗವನ್ನೇ ಆನೆಯೆಂದಂತೆ ಮಹಾರಾಷ್ಟ್ರನ್ನೇ ಮಾಯಿ (ತಾಯಿ), ಮಹಾರಾಷ್ಟ್ರವನ್ನೇ ತಾಯ್ನಾಡು ಅನ್ನುವಂಥ ರಾಜಕೀಯ ಅಂಧರು ಅದೆಂಥ ಭಾರತದ ಸಚಿವರಾಗಿ ಇರಲು ಸಾಧ್ಯ? ಅದರಲ್ಲೂ ಗೃಹ ಶಾಖೆ ಇನರ ಕೈಯಲ್ಲಿ ಇದೆ! ಮಹಾರಾಷ್ಟ್ರಯೇ ಇವರ ಮಾಯಿ ಇರುವದರಿಂದ ಮಹಾರಾಷ್ಟ್ರಕ್ಕಾಗಿಯೇ ಏನೇನೋ ಮಾಡುತ್ತಿರುವ ಶಿವಸೇನೆಯತ್ತ ಇಂತಹವರು ಮೊದಲಾಗಿ ವರ್ತಿಸಲೇ ಬೇಕಾಗುತ್ತದೆ. ಆಗ—ಬಸವ ಸೇನೆಯನ್ನೋ, ದ್ರಾವಿಡ ಕಳ್ಳಗಮನ್ನೋ, ದ್ರಾವಿಡ ಮುನ್ನೇಟ್ರ ಕಳ್ಳಗವನ್ನೋ, ಆಪಾಲಿ ದಳವನ್ನೋ, ನಾಗಾ ವಿದ್ರೋಹಿಗಳನ್ನೋ ನ್ಯಾಯ ಪೂರ್ಣ ರೀತಿಯಲ್ಲಿ ದಂಡಿಸಿ ಭಾರತದ ಭದ್ರತೆಯನ್ನು ಕಾಪಾಡಲು ಇವರಿಂದ ಸಾಧ್ಯವಾಗುವದಿಲ್ಲ. ಕೇವಲ ಮಂತ್ರಿಯೇ ಸರ್ವಸ್ವವೆನ್ನುವವರು ಮಹಾ ಆಸೆಯಿಂದ ಮೆತ್ತಗೆ ಕೆಳಗಿಳಿದುಕೊಂಡು ಬಂದು ಮಹಾರಾಷ್ಟ್ರದಲ್ಲೇ ಮನೆ ಮಾಡಿಕೊಂಡಲ್ಲಿ ಭಾರತಕ್ಕೆ ಬಹಳ ಒಳ್ಳೆಯದು. ಇಲ್ಲದಿದ್ದಲ್ಲಿ ವಿಘಜನಾ ವಿದ್ರೋಹಿಗಳ ಆಟ ಅಧಿಕವಾದೀತು. ರಾಷ್ಟ್ರೀಯತೆಯ, ಐಕ್ಯತೆಯ ಪಟ ನೈಕ್ಷವನ್ನು ಕಡಿಯುವವರಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಇದು ಭಾಷಾ ವ್ಯಾಮೋಹ ಹಾಗೂ ಪ್ರಾಂತೀಯ ಮನೋಭಾವನೆಯ ಒಂದು ಉದಾಹರಣೆ ಇವುಗಳ ಮಿತಿಯು ಮೇಲೂ ಆಕೆ, ಗಂಜಿಯು ಮೇಲೂ ಆಕೆ, ಆ ರೀತಿ— ಮಹಾರಾಷ್ಟ್ರದಲ್ಲಿ ಕಾಲೂರಲು ಸ್ಥಳವೀಕೇಕು, ಡಿಲ್ಲಿಯಲ್ಲಿ ಉಳಿತುಕೊಳ್ಳಲು ಆಸನಬೇಕು! ಅದಿಷ್ಟು ದಿನ ಬಂಡಿಯಿಟ್ಟಿದ ಆ ಜೋಡೆತ್ತುಗಳ ನೇಲೆ ಒಬ್ಬ ಸವಾರಿ ಮಾಡಲು ಸಾಧ್ಯ!

"ನವಯುಗ"ದ ಸ್ವಾತಂತ್ರ್ಯದಿನದ ವಿಶೇಷಾಂಕದಲ್ಲಿ ಶ್ರೀ ಮಹಮ್ಮದ್ ಕರೀಂ ಭಾಗ್ಲಾರವರ ವಿಷಯ ಒಂದುಲೇಖನದಲ್ಲಿ ಪ್ರಕಟವಾಗಿತ್ತು. ಅದರ ಸತ್ಯಾ ಸತ್ಯತೆಯ ಬೆಳಕಿಗೆ ಬರುತ್ತಾ ಇದೆ. ಶ್ರೀಯುತರು ಭಾರತದ ಭೂಭಾಗ "ಸೆಕ್ರೆಡ್" ಇರುವಕಾರಣಒಂದಂಗುಲ ಭೂಮಿಯನ್ನೂ ಅನ್ಯಮಣಗಾರರಿಗೆ (ಪಾಕಿಸ್ತಾನಿಗಳಿಗೆ) ಬಿಟ್ಟು ಕೊಡುವದಿಲ್ಲವೆಂದು ಸಂಸದಿನಲ್ಲಿ ಸಾರಿದ್ದರು. ಸೇಕ್ರೆಡ್ ಅಂದರೆ ಸಾಮಾನ್ಯ ಅರ್ಥ ಪವಿತ್ರ ಇದೆ. ಇದಾಗಲೇ ಬಹಳಷ್ಟು ಭೂ ಪ್ರದೇಶವನ್ನು ಪಾಕಿಸ್ತಾನಿಗಳಿಗೂ, ಚೈನೀಯರಿಗೂ ಬಿಟ್ಟು ಕೊಟ್ಟಿರುವ ಮೇಲೂ, ಹಿಂದಿನ ಪ್ರಧಾನಿಯವರೊಬ್ಬರು ಭಾರತದ ಅಂಗವೆಂದರೇನು—ಕಲ್ಲು, ಮಣ್ಣು, ಹುಲ್ಲು! ತಾನೇಯೆಂದು ಪ್ರಷ್ಟ ಪಡಿಸಿರುವದರಿಂದು, ಆ ಕಳೆದ ಕೆಲವೊಲಾದ ಭೂ ಪ್ರದೇಶವನ್ನು ಪಡೆದುಕೊಳ್ಳಲು ಪತ್ರಿ ವ್ಯವಹಾರದಲ್ಲಿಯೂ ಸಂಧಾನ—ಮಾತುಕತೆಯಲ್ಲದೆ ಪ್ರಯೋಜನ ಬಾರ್ಯಕ್ಕೆ ಕೈ ಹಾಕುವದಿಲ್ಲವೆಂಬ ಕೇಂದ್ರದ ಎಲ್ಲಾ ಮಂತ್ರಿಗಳ ಮಾತಿಗೂ ಕಾಂಗ್ರೆಸ್ಸ ಪಕ್ಷವೂ, ಘೋಷಿಸಿರುವಾಗ ಭಾರತದ ಭೂಭಾಗ ಪವಿತ್ರವೆನ್ನುವದರಲ್ಲಿ ಆರ್ಥವಿರುವದಿಲ್ಲ. ಇದರ ಬದಲು 'ಸೇಕ್ರೆಡ್' ಅಂದರೆ ಸಮರ್ಪಿತ,ವಿಗಲಾದ (ಅಕ್ರಮಣಗಾರರಿಗೆ ಸಮರ್ಪಿತ) ಭೂ ಪ್ರದೇಶವೆನ್ನುವದೇ ಸರಿಯಾಗಿದೀತೆಂದು ವಿಶೇಷಾಂಕದ ಲೇಖನದಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ.

ಆದೇ ಜನಾಬ್ ಮಹಮ್ಮದ್ ಕರೀಂ ಭಾಗ್ಲಾರವರು ಇನ್ನೊಂದು ಸಲ ಏನೂ ಹೇಳದೆ ಗಮ್ಮನಿದ್ದ ಪ್ರಸಂಗ ಒಂದು ಲೋಕ ಸಭೆಯಲ್ಲಿ ನಡೆಯಿತು. ಪ್ರಿಪುರ ಪೂರ್ವ ಬಂಗಾಲದ ಗಡಿಯಲ್ಲಿ ಪಾಕಿಸ್ತಾನವು ಐದು ಚದರ ಮೈಲು ಭೂ ಪ್ರದೇಶವನ್ನು ಆಕ್ರಮಿಸಿಕೊಂಡಿರುತ್ತದೆ. ಆದರ ಬಿಡುಗಡೆಗಾಗಿ ಸೇನೆಯನ್ನೆಕ್ಕೆ ಕಳುಹಿಸಿಲ್ಲವೆಂದು ಪ್ರ. ಸೋ. ಪಾರ್ಟಿಯು ಹೇಮ ಬರುವಾ ಲೋಕ ಸಭೆಯಲ್ಲಿ ಕೇಳಿದಾಗ ಶ್ರೀ ಭಾಗ್ಲಾ ಕಾರಣ ಹೇಳಲಾರಂಭಿಸಿದರು — ಆ ಭೂ ಪ್ರದೇಶವನ್ನು ಪಾಕಿಸ್ತಾನಿಗಳು ಬಿಟ್ಟುಹೋಗಬೇಕೆಂದೂ, ಅದು ಭಾರತಕ್ಕೆ ಸೇರಿದ ಭೂಭಾಗವೆಂದೂ ನಾವು ಅವರಿಗೆ ತಿಳಿಸಿರುವೆವು. ಭೂ ಪ್ರದೇಶವನ್ನು ಪಡೆಯುವದಕ್ಕಾಗಿ ಅಂದರೆ ಪಾಕಿಸ್ತಾನಿಗಳು ಆ ಭೂ ಪ್ರದೇಶವನ್ನು ನಮಗೆ ಬಿಟ್ಟು ಹೋಗುವಂತೆ ಅವರ ಮನ ಒಲಿಸಲು ರಾಜತಾಂತ್ರಿಕ ರಂಗದಲ್ಲಿ ಪ್ರಯತ್ನಗಳೆ ನ ಡೆ ದಿ ರು ತ್ತ ದೆ ಮತ್ತು ಅವರ ಮನ ಒಲಿಸಲು ಭಾರತ ಸರಕಾರ ಸ್ವಯ ತ್ನ ಸುತ್ತಿದೆ. ಈ ಮಾತುಗಳಿಂದ ಶ್ರೀ ಹೇಮ ಬರುವಾರವರ ಮನ ಒಲಿಸಲು ಸಾಧ್ಯವಾಗಲಿಲ್ಲ. ಅವರು ಸೇನೆಯನ್ನೇಕಕ್ಕೆ ಕಳುಹಿಸಿಲ್ಲವೆಂದು 'ಶಾಂತಿ ಪ್ರಿಯ' ಭಾರದೇಶ ಮಂತ್ರಿ ಶ್ರೀ ಭಾಗ್ಲಾರನ್ನು ಪ್ರಶ್ನಿಸಿದರು. ಆದಕ್ಕೆ ಶ್ರೀ ಭಾಗ್ಲರವರು ಆಕ್ರಮಣ ನಡೆಸಿರುವ ವಿಷಯ ಪಾಕಿಸ್ತಾನಕ್ಕೆ ಸ್ಪಷ್ಟವಾಗಿ ಸೂಚಿಸಲಾಗಿದೆ. ಆ ವರದ ರೋ ದುರಾದೃಷ್ಟವಶಾತ್ ಬಲಾತ್ಕಾರದಿಂದ ಬಂದಿದ್ದಾರೆ. ಆದರೆ ನಾವು ಒಪ್ಪಂದಕ್ಕೆ ಒಳಗಾಗಿರುವದರಿಂದು, ಹಟಕ್ಕಥೆೀರಣೆಯನ್ನು ಅನುಸರಿಸಬೇಕಾಗಿರುವದರಿಂದಾಗಿ ಅಲ್ಲಿಗೆ ಹೋಗುವಂತಿಲ್ಲವೆಂದು ಶ್ರೀ ಯುತರು ತಮ್ಮ ಅಸಹಾಯಕತೆಯನ್ನು ಪ್ರಕಟಿಸಿದರು.

ಪ್ರ. ಸೋ. ಪಾರ್ಟಿಯವರಿಗಿಂತಲೂ ಸ. ಸೋ. ಪಾರ್ಟಿಯವರು ಕಾರ ತಿನ್ನುವದು ಹೆಚ್ಚೆಂದು ಕಾಣುತ್ತದೆ. ಅಂತೆಯೇ ಸ. ಸೋ.ಪಾರ್ಟಿಯ ಶ್ರೀ ಮಧು ಲಿಮಯಿಯವರು ಶ್ರೀ ಭಾಗ್ಲಾರನ್ನು ತಂಟೆಗೆ ತೆಗೆದುಕೊಂಡರು. ಇಂಡಿಯಾದ ಜನ ಸಂಖ್ಯೆಯು ಪಾಕಿಸ್ತಾನದ ಜನಸಂಖ್ಯೆಗಿಂತ ಐದು ಪಾಲು ಜಾಸ್ತಿ ಇದೆ. ಹಾಗಿದ್ದರೂ, ಇಪ್ಪತ್ತು ವರ್ಷಗಳಲ್ಲಿ ಇಲ್ಲಿ-ಅಲ್ಲಿ, ಹೀಗೆ ಅನೇಕೆಡೆಗಳಲ್ಲಿ ಪಾಕಿಸ್ತಾನ ಎಡೆಬಿಡದೆ ಭಾರತಕ್ಕೆ ಸೇರಿದ ಭೂಭಾಗವನ್ನು ಆಕ್ರಮಣ ರೀತಿಯಲ್ಲಿ ವಶಪಡಿಸಿಕೊಳ್ಳುತ್ತಿದೆ. ಸರಕಾರವು ಂತಹ ನವುಂಕಕ ಘೋರ ನೆಯನ್ನು ಬಿಟ್ಟು, ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವಂತೆ, ಪಾಕಿಸ್ತಾನದ ಭೂ ಪ್ರದೇಶವನ್ನು ವಶಪಡಿಸಿಕೊಳ್ಳಬೇಕು. ಆಗ ಮಾತ್ರ ಪಾಕಿಸ್ತಾನವು ಸಂಧಾನಕ್ಕೆ ಬಂದೀತೆಂದು ಶ್ರೀ ಮಧು ಲಿಮಯಿ ತಿಳಿಸಿದರು. ಅದಕ್ಕೆ ಶ್ರೀ ಭಾಗ್ಲಾರವರು ಸರಕಾರಕ್ಕೆ ಇದೊಂದು ಸೂಚನೆಯೆಂದು ಹೇಳಿದರು.

ಭಾರತದ ಭವಿಷ್ಯದತ್ತಲೇ ದೃಷ್ಟಿ ಇರುವ ಭಾರತೀಯ ಜನಸಂಘದ ಅಧ್ಯಕ್ಷರೆ ಶ್ರೀ ಬಲರಾಜ ಮಧೋಕರವರು ಭವಿಷ್ಯದತ್ತ ಶ್ರೀ ಭಾಗ್ಲರ ಗಮನ ಸೆಳೆದರು.

ಚಿಂತನೆ—ಮಥನ

ಗಾಂಧಿ ಜಯಂತಿಯ ಸಂದೇಶ

ಲೇ—ಶ್ರೀ ಆ. ನಾ. ಹೊದಿಕೆ

ಗಾಂಧಿಯವರು ಕ್ರಾಂತಿ ಪುರುಷರಾಗಿದ್ದರು. ಅವರದು ಸಮಗ್ರ ದೃಷ್ಟಿಯೂ ಆಗಿತ್ತು. ಅವರ ಕಣ್ಣುಂಪೆ ನವ ಸಮಾಜದ ಸುಸ್ಪಷ್ಟ ಚಿತ್ರವಿತ್ತು. ಸುಸ್ಪಷ್ಟ ಗುರಿ ಇತ್ತು. ಅವರ ಪ್ರತಿಯೊಂದು ಹೆಜ್ಜೆಯು ಆ ಗುರಿಯ ದಿಶೆಯಲ್ಲೇ ಇರುತ್ತಿತ್ತು.

ಸತ್ಯ ಶೋಧನವನ್ನೇ ಅವರು ಜೀವನದ ಉದ್ದೇಶವಾಗಿರಿಸಿದ್ದರು. ಅವರ ಶೋಧಕ ದೃಷ್ಟಿಯು ಎಂದೂ ಮಸುಕಾಗಿರಲಿಲ್ಲ. ಹೀಗೆಂದೇ ಅವರು ನಿತ್ಯ ನೂತನ ಪ್ರಯೋಗ ನಡೆಸುತ್ತಿದ್ದರು. ಮತ್ತು ನಿತ್ಯ ನೂತನ ಸ್ಫೂರ್ತಿ ಪಡೆಯುತ್ತಿದ್ದರು.

ಅವರದು ಜೀವನ ಶಿಕ್ಷಣ ದೃಷ್ಟಿಯೂ ಆಗಿತ್ತು. ಅವರು ಜೀವನದೊಳಗಿಂದಲೇ ಎಲ್ಲವನ್ನೂ ಕಂಡುಕೊಳ್ಳುತ್ತಿದ್ದರು. ಮತ್ತು ಪ್ರತಿಯೊಂದು ವಿಚಾರವನ್ನು ಜೀವನದಲ್ಲಿ ಇಳಿಸಿ ತ್ತಿದ್ದರು. ತಮ್ಮ ಜೀವನದಿಂದ, ತಮ್ಮ ದಿನನಿತ್ಯದ ನಡೆನುಡಿಗಳಿಂದಲೇ ಜನರಿಗೆ ಶಿಕ್ಷಣ ಕೊಡುತ್ತಿದ್ದರು.

ಅವರು ವಿಶಾಲ ದೃಷ್ಟಿಯವರಾಗಿದ್ದರು. ಜಡತೆಯಲ್ಲೇ ಸೂಕ್ಷ್ಮ ದೃಷ್ಟಿಯವರೂ ಆಗಿದ್ದರು. ಅವರಲ್ಲಿ ಸಮಗ್ರತೆಯೂ ಇತ್ತು. ಏಕಾಗ್ರತೆಯೂ ಇತ್ತು. ವೇದಾಂತದಿಂದ ವಿಜ್ಞಾನದವರೆಗೆ, ರಾಜಕಾರಣದಿಂದ ಸಮಾಜ ಕಾರಣದವರೆಗೆ, ಲಕ್ಷಾಧೀಶರಿಂದ ಹಿಡಿದು ಭಿಕ್ಷಾಧೀಶರ ವರೆಗೆ ಯಾವ ಕ್ಷೇತ್ರವೂ ಅವರ ಕಾರ್ಯಕ್ಷೇತ್ರದಿಂದ ಹೊರಗುಳಿಯುತ್ತಿರಲಿಲ್ಲ.

ಅವರ ಕಾರ್ಯಕ್ರಮಗಳೆಲ್ಲ ಅವರಜೀವನ ಕ್ರಮಗಳಾಗಿದ್ದವು. ಅವರ ಚಿಂತನ—ಮಥನ, ಶೋಧನ— ಸಾಧನ, ಲೇಖನ—ಭಾಷಣ, ಜೀವನ ಮತ್ತು ಮರಣ ಬಹುಜನ ಸಮಾಜವನ್ನು ಅನುಲಕ್ಷಿಸಿಯೇ ಇತ್ತು.

ಅತ್ಯಂತ ಉಪೇಕ್ಷಿತ ಭಂಗಿ, ಹರಿಜನ, ರೈತ, ಕೂಲಿಕಾರ, ಸ್ತ್ರೀ ಸಮಾಜ, ಹಳ್ಳಿಯ ಸಮಾಜ, ಕುಷ್ಠಾದಿ ರೋಗಪೀಡಿತ ಜನ, ಅರ್ಥಾತ್ ದರಿದ್ರನಾರಾಯಣ ಇವರೆಲ್ಲ ಶೋಷಿತ ವರ್ಗ ಹಾಗೂ ಗೋಮಾತೆ ಇವೇ ಅವರ ಉಸಿರು ದೇವತೆಯಾಗಿದ್ದರು.

ಒಟ್ಟಿಗೆ ಅವರೊಬ್ಬ ಪುರುಷಾರ್ಥಿ, ಪರಮ ಸಾಹಸಿ, ಅಖಂಡ ಪ್ರಯತ್ನ ಶೀಲ ಹಾಗೂ ಅಪ್ರತಿಮ ಪರಾಕ್ರಮಿಗಳಾದ ಪೂರ್ಣ ಪುರುಷರಾಗಿದ್ದರು. ವಿಶ್ವಮಾನವರಾಗಿದ್ದರು. ವಿಶ್ವಮಾಧ್ಯರಾಗಿದ್ದರು.

ಇಂಥ ವರ್ಷಕಾಲ ಬದುಕಿ ಉಳಿದು, ಜಗತ್ತಿಗೊಂದು ಆದರ್ಶವಾದ ನವಸನಾಜವನ್ನು ನಿರ್ಮಿಸಬೇಕೆಂಬುದು ಅವರ ಜೀವನದ ಹೆಬ್ಬಯಕೆಯಾಗಿತ್ತು.

ಕಾಂಗ್ರೆಸ್ಸು ರಾಜಕೀಯ ಉದ್ದೇಶ ಸಾಧನೆಗಾಗಿ ಕಟ್ಟಿದರು, ಪಠಿಮಿತ ಉದ್ದೇಶದ ಸಂಸ್ಥೆಯಾಗಿತ್ತು. ಆದರೂ ಗಾಂಧಿಯವರಿಗೆ ಅದರ ಅಶ್ರಯ ಅನಿವಾರ್ಯವಾಗಿತ್ತು. ಮತ್ತು ಕಾಂಗ್ರೆಸ್ಸಿಗೂ ಗಾಂಧಿಯವರ ಆಧಾರ ಅಪರಿಹಾರ್ಯವಾಗಬೇಕಿತ್ತು. ಹೀಗಾಗಿ ಸತ್ಯ ಅಹಿಂಸೆಗಳ ಗುರಿ ಹಾಗೂ ಧೋರಣೆಯ ವಿಷಯದಲ್ಲಿ ಹೊಂದಿಕೆಯಾಗದೆ, ಗಾಂಧಿಯವರು ವೈಧಾನಿಕವಾಗಿ ಕಾಂಗ್ರೆಸ್ಸಿನಿಂದ ಹೊರಗೆ ಉಳಿದಿದ್ದರೂ, ಕಾಂಗ್ರೆಸ್ಸಿನ ವಿಷಯದಲ್ಲಿ ಅವರ ಆತ್ಮೀಯ ಭಾವನೆ ಕಡಿಮೆಯಾಗಲಿಲ್ಲ. ಕಾಂಗ್ರೆಸ್ಸಿಗೆ ಮಾರ್ಗದರ್ಶನವನ್ನು ಮಾಡುವದನ್ನೂ ಅವರು ಬಿಟ್ಟಿರಲಿಲ್ಲ.

ಆದರೆ ಸ್ವರಾಜ್ಯ ಪ್ರಾಪ್ತಿಯ ತರುವಾಯ ಕಾಂಗ್ರೆಸ್ಸಿಗೆ ಗಾಂಧಿಯವರ ಮಾರ್ಗದರ್ಶನ ತೆಗೆದುಕೊಳ್ಳುವದೂ ಬೇಡವೆನಿಸಹತ್ತಿತ್ತು. ಇತ್ತ ಗಾಂಧಿಯವರೇ ಸ್ಥಾಪಿಸಿದ ಹಲವಾರು ಅಖಿಲ ಭಾರತೀಯ ರಚನಾತ್ಮಕ ಸಂಸ್ಥೆಗಳಿದ್ದರೂ, ಅವು ತಮ್ಮ ತಮ್ಮ ಕರ್ಮಕಾಂಡದಲ್ಲೇ ತೊಡಕಿಕೊಂಡಿದ್ದ ಕಾರಣ, ಗಾಂಧಿಯವರ ಧ್ಯೇಯ ಸಾಧನೆಯ ಹೋರಾಟದಲ್ಲಿ, ಜೀವನ ಮರಣದ ಕೊನೆಯ ಪೇಚಾಟದಲ್ಲಿ, ಗಾಂಧಿಯವರಿಗೆ ಪುಷ್ಕಳ ಸಹಾಯ ಸಲ್ಲಿಸಲು ಅಸಮರ್ಥವಾದವು.

ಇಂಥ ಇಕ್ಕಟ್ಟಿನ ಪರಿಸ್ಥಿತಿಯಲ್ಲೂ ಗಾಂಧಿಯವರು ಅಭಿವನ್ಯವಿನಂತೆ ಏಕಾಕಿಯಾಗಿ, ಭಿನ್ನ-ಸರಾಕ್ರಮದಿಂದ ಹೋರಾಡಿದರು. ಅವರಿಗೆ ತಮ್ಮ ಕಾಲಡಿಯು ನೆಲವೇ ಕುಸಿಯುತ್ತಿರುವಂತೆ ಭಾಸವಾಯಿತು. ಅಖಂಡ ಪರಿಶ್ರಮದಿಂದ ತಾವು ಪೋಷಿಸಿ ಬೆಳೆಸಿದ ಉಚ್ಚ ಆಕಾಂಕ್ಷೆಗಳನ್ನೆಲ್ಲ, ತಮ್ಮ ಕಣ್ಣು ಮುಂದೆಯೇ, ತಮ್ಮ ಜನರೇ ತುಳಿದು ಮಣ್ಣುಗೂಡಿಸಿರುವದು ನೋಡಲಾರದ, ಗಾಂಧಿಯು ನರು ಜೀಗನೇ ಕಣ್ಣು ಮುಚ್ಚಲು ಅಪೇಕ್ಷಿಸಿದರು. ಮತ್ತು ತಮ್ಮನ್ನು ಬೇಗನೇ ಕರೆದೊಯ್ಯುವಂತೆ ದೇವರಲ್ಲಿ ಪ್ರಾರ್ಥಿಸಿರಂದು ತಮ್ಮ ದೇಶ ಬಾಂಧವರನ್ನು ಕೇಳಿಕೊಂಡರು.

ಈ ಅವರ ಕೊನೆಯ ಅಪೇಕ್ಷೆಯನ್ನು ಮಾತ್ರ ಅಕ್ಷರಶಃ ಪೂರ್ತಿಗೊಳಿಸಿ ಅವರನ್ನು ದೇವರ ಕಡೆಗೆ ಕಳಿಸಿ ಕೊಟ್ಟು, ಅವರ ದೇಶಬಾಂಧವರು ಧನ್ಯರಾದರು ಕೃತಕೃತ್ಯರಾದರು!

ಗಾಂಧಿಯವರ ಜೀವನದಿಂದ, ಗಾಂಧಿಯವರ ಕನಸಿನ ರಾಮರಾಜ್ಯವೂ ನವಸನಾಜರಚನೆಯೂ ಇಕ್ಕಟ್ಟಿಗೆ ಸಿಂತಿತು. ದಿನದಿನಕ್ಕೆ ಹೆಚ್ಚು ಹೆಚ್ಚು ಮಸುಕಾಗುತ್ತ ನಡೆಯಿತು. ಅಸಹಾಸ್ಯದ ಮಾತಾಗಹತ್ತಿತ್ತು!

ಇಂದು ಗಾಂಧೀಯವರ ಹೆಸರು ಮಾತ್ರ ಉಳಿದಿದೆ. ಆಳುವ ವರ್ಗವಲ್ಲಿ ಪ್ರತಿಪಕ್ಷಿಯ ಕರುಹು ಆಗಿ, ಶೋಷಣದ ಸಾಧನವಾಗಿ ಮತ್ತು ಪ್ರತಿಷ್ಠಿದವರ ಕೈಯಲ್ಲಿ ಉಳುವ ಪಕ್ಷದ ಮೇಲೆ ಬೀಸಲು ಅನುಕೂಲವಾದ ದೊಣ್ಣೆಯಾಗಿ! ಅಂತೂ ಇಂದ ರಾಜಕೀಯ ಕ್ಷೇತ್ರದಲ್ಲಿ ಗಾಂಧಿ ಹೆಸರಿಗೆ ಶೋಷಣದ ಹಾಗೂ (ಪ್ರಚಾರದ)ದೊಣ್ಣೆಯ ಸ್ಥಾನಮಾತ್ರ ಪ್ರಾಪ್ತವಾಗಿದೆ! — "ಭೂಮಿ"

ಇನ್ನು ಎರಡು ತಿಂಗಳಲ್ಲಿ ಪಾಕಿಸ್ತಾನವು ಭಾರತದ ಮೇಲೆ ಪಡೆಯೆತ್ತಿಕೊಂಡು ಬರಬಹುದೆಂದು ವರದಿಯಾಗಿರುವ್ದೆ. ಹಾಗೇನೇದರೂ ಆದಲ್ಲಿ ಭಾರತದ ಭೂಪ್ರದೇಶವನ್ನು ಈ ಸಲವಾದರೂ ಸರಕಾರ ಬಿಟ್ಟು ಕೊಡುವದಿಲ್ಲವೆಂಬುದಕ್ಕೆ ಪ್ರಧಾನಿಯವರು ಆಶ್ವಾಸನೆ ನೀಡಬಲ್ಲರೇ?—ನೇರ ಪ್ರಶ್ನೆ.

ಇದಕ್ಕೆ ಪ್ರಧಾನಿಯವರಾಗಲೀ, ಅಷ್ಟರ ವರೆಗೆ ಉತ್ತರ ಕೊಡುತ್ತ ಬಂದಿದ್ದ ಶ್ರೀ ಭಾಗ್ಲರವರಾಗಲೀ ತುಟಿ ಎರಡು ಮಾಡಲಿಲ್ಲ. ಹಾಗಾದರೆ ಅದರ ಅರ್ಥವೇನು? ಪಾಕಿಸ್ತಾನ ಆಕ್ರಮಣ ಪಡೆದು ಭೂ ಪ್ರದೇಶವನ್ನು ವಶಪಡಿಸಿಕೊಂಡಲ್ಲಿ ಅದನ್ನು ತಡೆಯಲು ನಮ್ಮಿಂದ ಸಾಧ್ಯವಿಲ್ಲವೆಂದಾಯಿತು. ಇದಕ್ಕೆ ರಕ್ಷಣಾ ಮಂತ್ರಿ, ಪರದೇಶ ಸಂಪರ್ಕ ಸಚಿವ, ಪ್ರಧಾನಿ....ದೇ ಕೇನು? ಎಳ್ಳು ನೀರು ಬಿಡುವದರಲ್ಲಿ ಒಬ್ಬರನ್ನೊಬ್ಬರು ಇವರು ಮೀರಿಸುತ್ತಿದ್ದಾರೆ!

ತಾತ್ಕಾಲಿಕ ವಿಭಜನೆ ಎನ್ನಲಾಗಿದ್ದ ಪಾಕಿಸ್ತಾನವನ್ನು ವಿಲೀನಗೊಳಿಸುವದು ಹಾಗಿರಲಿ, ಆ ಪಾಕಿಸ್ತಾನ ಆಕ್ರಮಿಸಿಕೊಂಡಿರುವ ಭೂ ಪ್ರದೇಶವನ್ನು ಬಿಡಿಸಿಕೊಳ್ಳಲು ಇಪ್ಪತ್ತು ವರ್ಷಗಳಲ್ಲಿ ನಮಗಾಗಿಲ್ಲ. ಮಾತ್ರವಲ್ಲ, ಇನ್ನು ಮುಂದಿನ ಆಕ್ರಮಣವನ್ನು ನಮ್ಮಿಂದ ತಡೆಗಟ್ಟಲು ಸಾಧ್ಯವಿಲ್ಲವೆಂದಾದಲ್ಲಿ ನಾವು ಜೈನೀ ಆಕ್ರಮಣವನ್ನೆದುರಿಸುವದುಂಟೇ? ಇಂಥ ಹ ದುಃಸ್ಥಿತಿಯುಕ್ತ ನಮ್ಮನ್ನು ನಡೆಸಿದವರ್ಯಾರು? ಇದಕ್ಕಾಗಿ ಗೃಹ ಸಚಿವ, ರಕ್ಷಣಾಮಂತ್ರಿ, ಪರದೇಶ ಸಂಪರ್ಕ ಅಮಾತ್ಯ ಪ್ರಧಾನಿ ಮಂತಾದವರ ಅವಶ್ಯಕತೆ ಇದೆ ಏನು?

ಇದಕ್ಕೂ ಪಕ್ಷಾಂತರಕ್ಕೂ ಸಂಬಂಧ ಇದೆ. ಏನು? ಪಕ್ಷಾಂತರ ಒಳ್ಳೆಯದೇ? ಪಕ್ಷದಲ್ಲದ್ದುಕೊಂಡೇ ದೇಶವನ್ನು ದುಸಿತಿಗೆ ತಳ್ಳಿ ಬಿಡುವದೊಳ್ಳೆಯದೇ? ಇಷ್ಟೆಲ್ಲಾ ನಡೆಯುತ್ತಿದೆಯೂದರೂ ಇಂದಿನ ದುಸ್ಥಿತಿಗೆ ಕಾಂಗ್ರೆಸ್ಸೇತರ ಸರಕಾರಗಳೇ ಕಾರಣವೆಂದು ಕಾಂಗ್ರೆಸ್ಸಿನ ಅಧ್ಯಕ್ಷ ತಿರು ಕಾಮರಾಜರು ಕಾಲಿಟ್ಟಲ್ಲೆಲ್ಲಾ ಹೇಳುತ್ತಾ ತಿರುಗಾಡುತ್ತಿದ್ದಾರೆ. ಕಾಂಗ್ರೆಸ್ ಹೋದಲ್ಲಿ ದೇಶವೇ ಹೋಗುತ್ತದೆಂದು ಭಯ ಹುಟ್ಟಿಸುತ್ತಿದ್ದಾರೆ. ಆದಕ್ಕಾಗಿ ಬಿಹಾರ್ ಮುಂತಾದೆಡೆಗಳಲ್ಲಿ ಕಾಂಗ್ರೆಸ್ಸೇತರ ಮಂತ್ರಿಮಂಡಲವನ್ನುರುಳಿಸಲು ಪ್ರಯತ್ನಿಸಲಾಗುತ್ತಿದೆ. ಆಶೆ ಅವಿಷಗಳಿಗೊಳಗಾಗಿ ಕಾಂಗ್ರೆಸ್ಸಿಗೆ ಬರುವಂತೆಯೇ ಆಶೆ— ಅವಿವಗಳಿಗೊಳಗಾದವರು ಕಾಂಗ್ರೆಸ್ಸಿನಿಂದ ಹೊರ ಹೋಗುವನು ಸ್ವಾಭಾವಿಕವೇ ಇದೆ. ಕೆಲವರು ತಮ್ಮ ಸ್ವಾನ ಭದ್ರವಾಗಿರುವ ವರೆಗೆ ಮಂತ್ರಿ ಮಂಡಲದ ಇರುತ್ತಾರೆ. ಆನಂತರ ಬಾಲ ಕಳೆದು ಕೊಂಡ ನರಿಗಳಂತೆ ಹೊರಬಂದೊಡನೆ ಸಿಕ್ಕಾಬಟ್ಟೆ ಅಪಪ್ರಚಾರಕ್ಕೆ ಆರಂಭಿಸುತ್ತಾರೆ. ಈ ರೀತಿ ಆಸನಕ್ಕಾಗಿ ಹೋರಾಟ ನಡೆಸುತ್ತಿರುವವರು ಧ್ಯೇಯಸಾಧನೆಗಾಗಿ ಹಾಗೆ ಮಾಡುತ್ತಿರುವದಿಲ್ಲ. ಕೇವಲ ಸ್ವಾರ್ಥ ಸಾಧನೆಗಾಗಿ ಹಾಗೆ ಮಾಡುತ್ತಿದ್ದಾರೆ. ಅಂತಹವರು ರಾಜಕೀಯ ರಂಗದಿಂದ ದೂರ ಹೋದಷ್ಟೂ ಜನತೆಗೆ ಹಿತ. ಆದರೆ ಸುಲಭದಲ್ಲಿ ಅವರು ಆಸನದಿಂದ ಕೆಳಗಿಳಿಯುವದೆಂದಿಲ್ಲ.

ಸಂಪತ್ತಿನ ಮೃದು ಹಾಸಿಗೆಯಲ್ಲಿ ಅನೇಕ ರಾಷ್ಟ್ರಗಳೇ ನಾಶಗೊಂಡಿವೆ. ಮತ್ತೆ ಮನುಷ್ಯನ ಕತೆ ಕೇಳಬೇಕೆ?

—ಯಂಗ್

ಭಿಕ್ಷುಕರ- ಲೋಕಾನುಭಾವ!

ಅದೊಂದು ಅಪೂರ್ವ ದೃಶ್ಯ
ಭಿಕ್ಷುಕರ ದಾರುಣ ದೃಶ್ಯ
ಮನಕರಗುವ ಆರ್ತನಾದ
ಬಿದ್ದು—ಬಿದ್ದು ಹಿಡಿದೆಳೆವರು ಪಾದ!

ಆರೆ ಬತ್ತಲೆ ಮೈ,
ಬಡ ಬಡಕಲು ಕೈ!
ಹೊರಗೆದ್ದೆದೆ ಎಲುಬು!
ಎವೆಗೆಸೆಯುವ ಶೂಲ!

ಕುಂಟೆ, ಕುರುಡ, ಹೆಳವ ಕುಬ್ಜರು
ಸಾಲುಗಟ್ಟಿ ಆಲ್ಲಿ ಕುಳಿತಿರುವರು
ಎದೆಯ ಮರುಕ ಕೆರಳಿಸುವವರು
ಅಂಗಲಾಚಿ ಬೇಡುತಿರುವರು

ಇವರಿಲ್ಲದ ನಗರವಿಲ್ಲ ಊರಿಲ್ಲ
ಬಸ್ಸು ನಿಲ್ದಾಣ ನಿನೇಮಾ ನಾಟಕ ಮಂದಿರ
ಭಿಕ್ಷುಕರ ಬೀಡು ನಮ್ಮೀ ನಾಡು!
ಒಂದೂರಿನ ನೀರು ಕುಡಿದ ಬಾಯಿಯೇ?

ಒಂದು ಮನೆಯ ಹಿಟ್ಟು ತಿಂದ ಹೊಟ್ಟೆಯೇ?
ಹೆಳಸಿದನ್ನವೇ ನೆಗಳಿ ಬಿಸಿ ಹೋಳಿಗೆ
—ಲಭಿಸಲಿ ಹರ್ಷದಿಂದ ಅವರ ಪಾಲಿಗೆ
ಒಂದೇ ರೀತಿಯ ರುಚಿಕಂಡ ನಾಲಗೆಯೇ?
ಒಂದೇ ಬಗೆಯ ನೋಟ ಕಂಡ ಕಣ್ಣೇ?

ಅತಿ ವಿಶಾಲ ಅತಿ ಆಳ ಅತಿ ಪ್ರಶಸ್ತ ಶ್ರೇಷ್ಠ!
ಭಿಕ್ಷುಕರ ಲೋಕಾನುಭಾವ ಪುಷ್ಟ!
—"ಮಲ್ಲಾರಿ"

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ
O. S. No. 87/67

ಶ್ರೀ ಸೋದೆ ವಾದಿರಾಜ ಮಠ ಉಡ್ಪಿ
—ವಾದಿ

ಮತ್ತು

ಜನಾರ್ಧನ ಆಚಾರಿ ಕೊಡಾ
—ಪ್ರತಿವಾದಿಗಳು

ಉಡ್ಪಿ ತಾಲೂಕು ಶಿರ್ವ ಗ್ರಾಮದಲ್ಲಿರುವ ಹೊಯ್ಕೊಚಾರಿಯ ಮಗ 1ನೇ ಪ್ರತಿವಾದಿ ಜನಾರ್ಧನ ಆಚಾರಿಗೆ ತಿಳಿಯ ಪಡಿಸುವದೇನೆಂದ್ರೆ.—

ವಾದಿರು ನಿಮ್ಮ ಮೇಲೆ ಕೊಡಾ ಗೇಣ ಬಾಕಿ ಬಗ್ಗೆ ದಾಖ್ಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 5—10—67ಕ್ಕೆ ಕಸ್ಬಿ ಗೆದ್ದಿಟ್ಟಿದೆ. ನಿಮ್ಮ ಉದಾರಣೆಯನ್ನು ಆ ದಿವ್ಸ ಕೋರ್ಟಿಗೆ ಮುಂಚೆ ಹಾಜರಾಗಿ ಪಾಕ್ಲು ಮಾಡುವರೆ ತಪ್ಪಿದಲ್ಲಿ ಸದ್ರಿದಾವೆಯನ್ನು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದು.

By order of Court
(Sd) V. G Kedlaya,
M. A. LL. B.,
Advocate for Plaintiff

ಉಡ್ಪಿ, ತಾ. 20—9—67

ಶಿಕ್ಷಣದ ಮಾಧ್ಯಮವು ರಾಜ್ಯಭಾಷೆಗಳಲ್ಲಿ

(ಐದನೇ ಪುಟದಿಂದ)

ನಿಮ್ಮ ಸ್ಮರಿಸಿದ್ದ ವಿಜ್ಞಾನಿಗಳು, ಅರ್ಥ ಶಾಸ್ತ್ರಜ್ಞರು. ಸರೋಜಶಾಸ್ತ್ರಜ್ಞರು ಮುಂತಾದ ಅನೇಕ ಮಹನೀಯರು ಪರ ದೇಶದವರು. ಅವರ ಎಲ್ಲಾ ಗ್ರಂಥ, ಶಸ್ತ್ರಕಳಿರುವುದು ಹೆಚ್ಚಾಗಿ ಇಂಗ್ಲಿಷ್ ಭಾಷೆಯಲ್ಲಿ ಅಥವಾ ಇಂಗ್ಲಿಷ್ ಭಾಷಾಂತರಗಳಲ್ಲ. ನಮ್ಮ ಶಿಕ್ಷಣದ ಮಾಧ್ಯಮವು ಬದಲಾದರೆ ನಾವು ಅವುಗಳನ್ನು ನಮ್ಮದೇಶದಎಲ್ಲಾರಾಜ್ಯಭಾಷೆಗಳಲ್ಲಿ ಭಾಷಾಂತರಿಸಬೇಕಾಗುವುದು. ಒಂದು ವೇಳೆ ಸರ್ವ ಪ್ರಯತ್ನಗಳಿಂದ ಭಾಷಾಂತರವಾದರೂ ನಮ್ಮ ದೇಶದ ಶಬ್ದ ಭಂಡಾರದ ನ್ಯೂನತೆಯಿಂದ ಹೆಚ್ಚಿನ ಪದಗಳೆಲ್ಲವೂ ಪ್ರತಿಯೊಂದು ಭಾಷೆಯಲ್ಲಿ ಬರೆದ ಇಂಗ್ಲಿಷಿನ ಶಬ್ದಗಳೇ ಆಗಬೇಕಾಗುವುದು. ಈಗಾಗಲೇ ಬಹು ಸಂಖ್ಯೆಗಳಲ್ಲಿ ಇದನ್ನು ನಾವು ನಮ್ಮ ಪಠ್ಯ ಪುಸ್ತಕಗಳಲ್ಲಿ ಕಾಣಬಹುದು. ಇನ್ನು ಮುಂದಕ್ಕೆ ಇದು ಅಭಿವೃದ್ಧಿಸಿ ಒಂದು ಫ್ಯಾಶನ್ ರೂಪಕ್ಕೂ ಬರಬಹುದು. ಇದರಿಂದಾಗಿ ನಮ್ಮ ವಿದ್ಯಾಭ್ಯಾಸವು ಇನ್ನೂ ಅಪವಿತ್ರವಾಗಿ ಗೊಳಗಾಗಬಹುದು.

ಭಾಷಾಂತರ ಮಾಡುವುದೂ ಒಂದು ಸಾಮಾನ್ಯ ಕೆಲಸವಲ್ಲ. ಇದಕ್ಕಾಗಿ ಹಲವು ಕೋಟಿ ರೂಪಾಯಿಗಳು ವೆಚ್ಚಮಾಡಬೇಕಾಗುತ್ತದೆ. ಈ ವೆಚ್ಚವೆ ಅನುತ್ಪಾದಕವೆಂದು ಹೇಳಬಹುದು. ಕಾಲ ಕ್ರಮೇಣ ಇದೂ ಒಂದು ಹೊಣದ ಉಬ್ಬರಕ್ಕೆ ಉತ್ತೇಜನಕೊಡಬಹುದು.

ಶಿಕ್ಷಣದ ಮಾಧ್ಯಮವು ರಾಜ್ಯ ಭಾಷೆಯಲ್ಲೇ ಆದರೆ ನಮ್ಮ ದೇಶದ ಮುಖಂಡರು ಮತ್ತು ಶ್ರೀಮಂತ ವರ್ಗದವರು ಆವರ ಪೀಳಿಗೆಯವರನ್ನು ಅವರ 'ಉದ್ಧಾರ'ಕ್ಕೋಸ್ಕರ ಪಾಶ್ಚಿಮಾತ್ಯ ದೇಶಗಳಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕಳುಹಿಸಬಹುದು.

ಇದನ್ನು ಈಗಾಗಲೇಕಂಡುಕೊಂಡಿದ್ದೇನೆ —ಭಾರತದ ಈಗಿನ ಪ್ರಧಾನಿಯವರ ಸುತ್ತಲಿರುವಾಗಲೂ ಭಾರತದಲ್ಲೇ ಕಲಿಯಲು ಸೀಟು ಸಿಕ್ಕಲಿಲ್ಲವೇನೋ ಪಾಪ! ಈ ವಿದ್ಯಮಾನವು ಇನ್ನೂ ಮುಂದಕ್ಕೆ ವೃದ್ಧಿಸಿದರೆ ಆಶ್ಚರ್ಯವೇನಿಲ್ಲ.

ಪೂರ್ವದಲ್ಲಿ ರಾಷ್ಟ್ರಭಾಷೆಯು ಗೊಂದಲವೆದ್ದಿತ್ತು, ರಾಷ್ಟ್ರಭಾಷೆಯು ಹಿಂದಿಯಾಗಬೇಕೆಂದು ಕೆಲವು ಮುಖಂಡರು ಅಭಿಪ್ರಾಯಪಟ್ಟರು. ಆದರೆ ಅವರು ಪ್ರಥಮವಾಗಿ ತಮ್ಮ ದೇಶದ ಜನತೆಯ ಬಹುಮತವನ್ನು ಪಡೆಯಲಿಲ್ಲ. ರಾಷ್ಟ್ರಭಾಷೆಯು ಹಿಂದಿ ಎಂದು ಸಾರಿದ್ದೇ ತಡ, ಅದರಿಂದ ಉಂಟಾದ ಪ್ರತಿಕ್ರಿಯೆಯು ವರ್ಣನಾತೀತ. ಆ ದೃಶ್ಯಗಳು ಈಗಲೂ ಕಣ್ಣೆದುರಿನಲ್ಲಿ ನಿಲ್ಲುತ್ತವೆ. ಶಿಕ್ಷಣದ ಮಾಧ್ಯಮವು ಆಯಾ ರಾಜ್ಯಭಾಷೆಗಳಲ್ಲೇ ಆಪರೆ ಇನ್ನಾವ ಅನಾಹುತಗಳು ಕಾದಿವೆಯೋ ಯಾರು ಬಲ್ಲರು? ಇಂಥಾ ಒಂದೊಂದು ಕಾರಣಗಳೂ ವಿದ್ಯಾರ್ಥಿಗಳನ್ನು ರಾಜಕೀಯ ರಂಗಕ್ಕೆಳೆಯಲು ಪ್ರಬೋಧಿಸುದಿಲ್ಲವೇ?

ನಮ್ಮ ಮೈಸೂರಿನ ವಿಷಯ ತೆಗೆದುಕೊಂಡರೆ ರಾಜ್ಯದ ಬಹು ಸಂಖ್ಯೆಯ ಜನರಿಗೆ ಪ್ರತಿವರ್ಷವು ಕಾಲೇಜಿನ ವಿದ್ಯಾರ್ಥಿಗಳಿಗೆ ಮಾತ್ರವಲ್ಲ ಊರಿನ ಜನತೆಗೂ ಕನ್ನಡವು ಮಾಧ್ಯಮವಾಗಲು ಇಷ್ಟವಿಲ್ಲ. ಆದ್ದರಿಂದ ನಮ್ಮ ರಾಜ್ಯವು ಮೊದಲಾಗಿ ಜನರ ಅಭಿಪ್ರಾಯವನ್ನು ತಿಳಿದುಕೊಳ್ಳುವುದು ಒಳ್ಳೆಯದು.

ನಮ್ಮ ದೇಶದ ಪರಿಸ್ಥಿತಿಗಳ ಕಡೆಗೆ ದೃಷ್ಟಿ ಹರಿಯಿಸಿದರೆ ನಮ್ಮ ಮುಖಂಡರೂ, ಕೆಲವು ಮುಖ್ಯಸ್ಥರೂ ತಾವು ತಲೆ ಹರಟೆಯ ವಿಷಯಗಳಿಗೆ ತಲೆ ಖರ್ಚು ಮಾಡುವುದರ ಬದಲಾಗಿ ದೇಶದ ಏಳಿಗೆಗಾಗಿ, ಅಭಿವೃದ್ಧಿಗಾಗಿ, ಸಮೃದ್ಧಿಗಾಗಿ ಯಾವ ಸಮಸ್ಯೆಗಳನ್ನು ಕೆತ್ತೆಲ್ಲಗಾಯಿದಕ್ಕೋ—(ಆಹಾರ ಸಮಸ್ಯೆ, ಆಹಾರ ಧಾನ್ಯಗಳ ಬೆಲೆ ನಿಯಂತ್ರಿಸುವುದು ಮುಂತಾದುವುಗಳು) ಎಂಥ ಸಮಸ್ಯೆಗಳ ಕಡೆಗೆ ಗಮನ ಹರಿಯಿಸಿದರೆ ನಮ್ಮ ಜನರ ಕಷ್ಟಗಳೂ ಪರಿಹಾರವಾಗಿ ದೇಶದ ಪ್ರಗತಿಯೂ ಪರಿಣಾಮಗಬಹುದು. ಇದಾ ಬದಲಾಗಿ ಇಂಥ ಸಮಸ್ಯೆಗಳನ್ನು ಎಬ್ಬಿಸಿದರೆ ದೇಶದಲ್ಲಿ ಇದ್ದ ಬದ್ದ ಶಾಂತಿಗೆ ಭಂಗ ಬರುವುದು. ದೇಶದ ಒಗ್ಗಟ್ಟಿಗೂ ಕಂಟಕವಾಪ್ತಿಯವಾಗುವುದು. ಕಾಲಕ್ರಮೇಣ ಪ್ರತ್ಯೇಕ ಭಾಷಾಸೀಮೆಗಳು ಉದ್ಭವಿಸಿ ದೇಶಮೊಳಗೇ ತಿಕ್ಕಾಟ ಪ್ರಾರಂಭವಾಗಬಹುದು. ಇಂಥ ಪರಿಸ್ಥಿತಿಗಳನ್ನು ಎದುರು ನೋಡುತ್ತಿದ್ದ ನಮ್ಮ ನೈರಿಗಳು ತಮ್ಮ ಸುಸಂದ ಭವನ್ನು ಆಗಲೂ ಬಿಡುವರೆ?

ನಮ್ಮ ಚಂದಾದಾರರಲ್ಲಿ ನಮ್ರ ವಿನಂತಿ

ಇದೀ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 40ನೇ ವರ್ಷವು ಕೊನೆಗೊಂಡು ಸಪ್ತಾಂಬರಾದಿಯಿಂದ 47 ನೇ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವ ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಅದಷ್ಟು ತ್ವರ್ಯ ಮನಿಆರ್ಡರು ಮೂಲಕ ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆ ಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಅಂತೂ ಚಂದಾ ಹಣವು ಸರಾಲದಲ್ಲಿ ಬಾರದಿದ್ದಲ್ಲಿ ನಾವು ಕ್ರಮಪ್ರಕಾರ ಮುಂದಿನ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಇದನ್ನು ಅವಶ್ಯ ಸ್ವೀಕರಿಸಿ ಸಹಕರಿಸುವಂತೆ ಬಿನ್ನಹಿಸುತ್ತೇವೆ.

ಮೆನೇಜರ್,
ನವಯುಗ, ಉಡುಪಿ.

ಬಾಪು ದೇವರೂರ ಸೋಪು!

ಲೇಖಕರು: ಶ್ರೀ ಬಸವರಾಜ ಕಂಚೂರು

ಜಗದ ಕರಾಜೆ ತನ್ನ ಜೊನ್ಮಕ್ಕಳ ನೋಲ್ಲೆ ಮೈಭಾರ ಹಾಕಿ ಪ್ರಾರ್ಥನೆ ಮಂದಿರದಿಂದ ನಡೆದು ಬರುತಿತ್ತು. ಎಲ್ಲಿಂದಲೋ ಇದ್ದಕ್ಕಿದ್ದ ಹಾಗೆ ಡಂ, ಡಂ, ಎಂಬ ಶಬ್ದ ಕೇಳಿತು ಆಪ್ಪೆ, ಗುಂಡು, ಮಹಾತ್ಮರ ಪ್ರಾಣಪಕ್ಷಿಯನ್ನು ಹಾರಿಸಿ ಬಿಟ್ಟಿತ್ತು. ರಾಮ! ರಾಮ! ಎಂಬಷ್ಟೆ ಕೊನೆಯುಸಿರು, ಜ್ಯೋತಿ ಆರಿಂದ ಪ್ರಭೆಯಲ್ಲಿ ಲೀನವಾಗಿ ಬಿಟ್ಟಿತು. ಮಂದಸ್ಮಿತ ಮುಖದ ಸೂಲೆ ಹರಡಿತ್ತು.

ಯಾರು ಈ ದೇಶಕ್ಕಾಗಿ ತನು, ಮನ, ಧನ ಅರ್ಪಿಸಿ, ಎಲ್ಲ ಅಂತಸ್ತುಗಳನ್ನು ಧಿಕ್ಕರಿಸಿ ರಾಷ್ಟ್ರಕ್ಕಾಗಿ ಜೀವನವನ್ನೇ ತೇಯ್ದು ಸ್ವಾತಂತ್ರ್ಯಕ್ಕಾಗಿ ಜೇಲಿಗೆ ಹೋಗಿ ಲಾಟೆ ಪೆಟ್ಟು ತಿಂದು ಶ್ರೀ ಸಾಮಾನ್ಯನ ಏಳ್ಗೆ ಆಗುವ ವರೆಗೆ ನಾನು ಎಂದೂ, ವೈತಾಂಬ ಬಟ್ಟೆ ತೊಡುವವಿಲ್ಲವೆಂದು ಪ್ರತಿಜ್ಞೆ ಗೈದು, ಆಡಿನ ಹಾಲು, ಕಡಲೆಕಾಯಿಯೇ ಆಹಾರವಾಗಿ ಸೇವಿಸುತ್ತಾ ದೇಶದ ಕೇಳು ಜನತೆಯು ಉದ್ಧಾರವಾಗಬೇಕೆಂದು ಹಗಲಿರುಳು ಪರಿತಪಿಸುತಿದ್ದ ಮಹಾ ಜೀವನನ್ನ ಮಹಾ ಭಾರತೀಯನನ್ನ ಮಹಾತ್ಮನನ್ನ, ಭಾರತೀಯು ಪುತ್ರನೊಬ್ಬನೆ ಗುಂಡಿಟ್ಟನೆಂದು ಚಂತ್ರಿ ಹೇಳಿದರೆ, ನಮ್ಮ ಮುಂದಿನ ಜನಾಂಗ ನಂಬುತ್ತಪಯೋ, ಇಲ್ಲವೋ? ಅಂಥ ಭಯ್ಕರ ಘಟನೆಯೊಂದು ನಡೆದು ಹೋಯಿತು.

ಮಹಾತ್ಮರು ಮಡಿದು ೧೯ ವರುಷಗಳು ಕಳೆದು ಹೋದುವು. ಅವರು ಹಾಕಿ ಕೊಟ್ಟ ಜಾಳ, ನಡೆದ ದಾರಿ, ಎಲ್ಲವನ್ನು ಮರೆತು ಬಿಟ್ಟಿದ್ದೇವೆ. ಸ್ವಾರ್ಥ, ವಂಚನೆ, ಮೋಸಕ್ಕಾಗಿಯೇ ಆವರನ್ನ ಉಪಯೋಗಿಸುತ್ತಿದ್ದೇವೆ.

"ಗಾಂಧಿ ವರ್ಗ ಎನ್ನುವದು" ಭಾಷಣ ಬಾಯಿ ಹೇಳಿಕೆಯಲ್ಲಿಯೇ ನಮೂದಿಸಿಯಾಗಿದೆ. ಹೊವ್ವ ಜೆಲ್ಲಿದ ಅವರ ಹಾದಿಯಲ್ಲಯೇ ಇಂದು ಮುಳ್ಳು ಬಿಕ್ಕುತಿದ್ದೇವೆ. ಜಗತ್ತಿಗೆನೇ ಕೊಡಗೆಯಾಗಿ ಕೊಟ್ಟ ಅಹಿಂಸಾ ಅಸ್ತ್ರ ಸತ್ಯಾಗ್ರಹವನ್ನ ಇಂದು ಕ್ಷುಲ್ಲಕ ಕಾರಣಕ್ಕಾಗಿ ಬಳಸುತಿದ್ದೇವೆ. ದೇಶದ ಸಾಮಾಜಿಕ ರಾಜಕೀಯ ಜೀವನ ಕಲುಷಿತಗೊಂಡು ರಾಷ್ಟ್ರಜೀವಿತ ಮುರಿದು ಬೀಳ ಹತ್ತಿದೆ. ಜಾತಿ, ಮತ, ಪಂಥ, ಭಾಷೆ, ಅನೇಕ ವಿಷ ನೆಗ್ಗಲು ಮುಳ್ಳುಗಳು ಭಾರತೀಯನ ಜೀವನವನ್ನ ಆವರಿಸಿ, ಅಧಪತನಕ್ಕೆ ಇಳಿಸಿ ಬಿಟ್ಟಿವೆ. "ಏಷಾ ರಾಮ" ಮನೋವೃತ್ತಿ ಬೆಳೆದು, ಬಡತನದ ರಕ್ಕಸುಗಳ್ಳ ಬೆಳೆಯಲಿಕ್ಕೆ ಇನ್ನೂ ನೆರವಾಗಿದೆ.

ಜೀವನದ ಎಲ್ಲ ರಂಗಗಳು ಮಲಿನವಾಗಿ ಬಿಟ್ಟಿವೆ. ಕೊಳಕು ತುಂಬಿ ಸಹ್ಯ ಬಾಳು ಹೊರಟು ಹೋಗಿದೆ. ಕವಿ ಹಾಡಿದಂತೆ ಈ ಕೊಳಕನ್ನು ತೆಳೆಯಲು "ಆ ದೇವರೂರ ಸೋಪು ಬಾಪು" ಮತ್ತೊಮ್ಮೆ ಜನ್ಮವೆತ್ತ ಬೇಕಾಗಿದೆ.

—: ನುಡಿಮುತ್ತುಗಳು :—

(ಸಂಗ್ರಹ— ಶ್ರೀ ಯು. ಪಿ. ಮಂಜುನಾಥ, ಹಾಪರಪುರ)

ಕಾಲ ಕೆಟ್ಟಿತೆಂದು ಹೇಳುತ್ತಾರೆ; ಆದರೆ ಕಾಲ ಕಡದು, ಅದೇ ಸೂರ್ಯಚಂದ್ರರು, ಅದೇ ಭೂಮಿ, ಅದೇ ಲೋಕ, ಅದೇ ಕಾಲ. ಆದರೆ, ಕೆಡುವುದು ಜನರ ನಡೆನುಡಿ,ಆಚಾರವಿಚಾರಗಳು ಮಾತ್ರ.

—ಸ್ವಾಮಿ ವಿವೇಕಾನಂದ.

ತಪ್ಪುಗಳನ್ನು ಮಾಡಿದವನಿಗೆ ನಂತರ ಅದು ತಪ್ಪೆಂದು ಜ್ಞಾನೋದಯವಾಗುತ್ತದೆ. ಆಗ ನಮ್ಮ ಇಡೀ ಜೀವನದಲ್ಲಿ ನಾವು ನಮ್ಮ ತಪ್ಪುಗಳಿಂದಲೇ ಕಲಿಯುತ್ತಿರುತ್ತೇವೆ.

—ಪೆಪ್ಪಿ.

ನಾವು ಟೀಕೆ ಮಾಡುವಷ್ಟು ಬೇರಾವ ಕೆಲಸವನ್ನೂ ಮಾಡುವುದಿಲ್ಲ. ನಾವು ಮಾಡುವ ಪುಣ್ಯದ ವಿಚಾರಗಳೆಲ್ಲ ಇತರರನ್ನು ಟೀಕಿಸುವ ಕಾರ್ಯದಲ್ಲಿ ತೂಳಿದು ಅಳಿದು ಹೋಗುತ್ತದೆಂಬ ಕಲ್ಪನೆ ಸ್ವಲ್ಪವಾದರೂ ಇದ್ದರೆ!

—ಅಲ್ಫ್ರೆಡ್.

ಇತರರ ತಪ್ಪುಗಳನ್ನು ದೊಡ್ಡ ಧ್ವನಿಯಿಂದ ಜೇಳುತ್ತೀ. ನಿನ್ನ ತಪ್ಪುಗಳನ್ನು ಸದಾ ಮುಚ್ಚಿಡಲು ಪ್ರಯತ್ನಿಸುತ್ತೀ. ಮೊದಲು ನಿನ್ನ ತಪ್ಪುಗಳನ್ನು ಒದರಿ ಹೇಳಿಕ್ಷೆವೆ ಬೇಡ್ರು ಇತರರ ತಪ್ಪುಗಳ ಗೊಡವಗ ಎಂದಿಗೂ ಹೋಗಬೇಡ. ಹೋದರೆ ನೀನೇ ಆ ತಪ್ಪಿನ ಬಲೆಯಲ್ಲಿ ಸಿಕ್ಕಬಹುದು.

—ಸ್ವಾಮಿ ಜೈತನ್ಯ.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 85 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಶೇವಣಾತಿಗಳ ಮೇಲೆ ೪% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್ಸ್"
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೨

ಎಲ್ಲೆಲ್ಲಿ ಏನೇನು?

ಕುಡ್ಪಿ ವಾಸುದೇವ ಶೆಣೈಯವರಿಗೆ ಸನ್ಮಾನ

[illegible]ತ ವಾರ್ತಾಕ್ರಿಯೆಯ ಸಂಪಾದಕರೂ, ಕರ್ನಾಟಕದ ಸುಪ್ರಸಿದ್ಧ ನಾಟಕಕಾರರೂ ಆಗಿರುವ ಶ್ರೀ ಕುಡ್ಪಿ ವಾಸುದೇವ ಶೆಣೈಯವರನ್ನು ಅವರ ಪಷ್ಟ್ಯಬ್ದಿ ಪೂರ್ತಿಗಾಗಿ ಗೌರವಿಸುವ ಸಮಾರಂಭವು ಇದೇ 10ರಂದು ಮಂಗಳೂರಿನ ಮೋಹಿನಿ ವಿಲಾಸದಲ್ಲಿ ಶ್ರೀ ಬೇಲಗದ್ದೆ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು.

ಲಘೂಪಹಾರದ ನಂತರ ಶ್ರೀ ಎಂ. ಕೃಷ್ಣಗೋಪಾಲರು ಸ್ವಾಗತ ಭಾಷಣ ಮಾಡಿದರು. ಅನಂತರ ಶ್ರೀ ಎಂ. ಬಾಬು ಪೈಯವರು ಅಧ್ಯಕ್ಷರಿಗೂ ಮುಖ್ಯ ಅತಿಥಿಗಳಿಗೂ ಹಾರ ಶಾಲೆ ಗೈದರು. ಸರ್ವಶ್ರೀ ಡಾ| ಎಂ. ಪಿ. ಪೈ, ಎಂ. ಕೃಷ್ಣಗೋಪಾಲ್, ಬಿ. ವಿ. ಬಾಳಿಗಾ, ಕೇಕಾನ ರಂಗಪ್ಪಂಡ್ರು, ಬಿ. ಎಂ. ಇದಿನಬ್ಬ, ಎಸ್. ಆರ್. ಬಾಲಗೋಪಾಲ್, ಕೆ. ದೇವದಾಸ್ ನಾಯಕ್, ಎಸ್. ಮುಕಂದರಾವ್, ಮಾಂಜನಾಥ ಶಾಲಿವಾಹನ, ಮತ್ತು ಎಚ್. ಕೃಷ್ಣಪ್ಪ ತಿಂಗಳಾಯರು ಶ್ರೀ ಶೆಣೈಯವರ ಬಹುಮುಖ ಪ್ರತಿಭೆ, ಅವರು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಗಳ ಕುರಿತು ಮಾತನಾಡಿದರು. ಎಸ್ಸರೂ ಇನ್ನೂ ಹೆಚ್ಚಿನ ಯಶಸ್ಸು, ಕೀರ್ತಿಗಳನ್ನು ಹಾರೈಸುತ್ತಾ ಶ್ರೀ ಶೆಣೈಯವರು ದೀರ್ಘಾಯುರಾರೋಗ್ಯ ಸಂಪನ್ನರಾಗಲಿ ಎಂದು ಹೇಳಿದರು.

ಶ್ರೀ ಶೆಣೈಯವರಿಗೆ ಅಭಿನಂದನೆಗಳನ್ನು ಸಲ್ಲಿಸಿ, ಹಾಗೂ ಸಮಾರಂಭಕ್ಕೆ ಶುಭಕೋರಿ ಬಂದ ಸಂದೇಶಗಳ ವಾಚನವಾದ ಮೇಲೆ ಶ್ರೀ ಶೆಣೈಯವರು ಮಾತನಾಡುತ್ತಾ ತನ್ನ ಸತ್ಕಾರಕ್ಕಾಗಿ ಕೃತಜ್ಞತೆಗಳನ್ನು ಅರ್ಪಿಸಿದರು. ತನಗೆ ಸ್ಫೂರ್ತಿಯಿತ್ತ ಮಾತೆ ಹಾಗೂ ಗುರು ವರ್ಯರಾದ ದಿವಂಗತ ಎಂ ಎನ್. ಕಾಮತರನ್ನು ಸ್ಮರಿಸಿದರು ಕೊನೆಯಲ್ಲಿ 'ಅಹಂಕಾರಿಯ ಅಹಂಕಾರದ ದರ್ಪಕ್ಕೆ ಈ ಶಿರಮಣಿಯದಿರಲಿ" ಎಂಬ ಶ್ರೀ ಟಿ.ಗೋರರ ಕವನವನ್ನು ಉಲ್ಲೇಖಿಸಿ, ತನ್ನ ಜೀವನದ ಶಿಕ್ಷ ಪ್ರಾರ್ಥನೆ ಎಂದು ಹೇಳಿ ತನ್ನ ಭಾಷಣ ಮುಗಿಸಿದರು.

ಅಧ್ಯಕ್ಷರಾದ ಶ್ರೀ ಬೇಲಗದ್ದೆ ಅಪ್ಪಯ್ಯ ನವರು, ಮಹಾವ್ಯಕ್ತಿಯೊಬ್ಬರ ಸತ್ಕಾರ ಸಮಾರಂಭಕ್ಕೆ ತಾನು ಅಧ್ಯಕ್ಷ ನಾದುದರಿಂದ ಧನ್ಯನಾದೆನೆಂದು ಹೇಳುತ್ತಾ, ಶ್ರೀ ಶೆಣೈಯವರಿಗೆ ದೀರ್ಘಾಯುರಾರೋಗ್ಯ ಸಂಪತ್ತುಗಳನ್ನು ಕೋರಿದರು. ಕೊನೆಯಲ್ಲಿ ಶ್ರೀ ಎಂ. ಕೃಷ್ಣಗೋಪಾಲರಿಂದ ಧನ್ಯವಾದ ಸಮರ್ಪಣೆಯಾಯಿತು

ಉದ್ಘಾಟನಾ ಸಮಾರಂಭ

ಕಿಣ್ಣಿಗೋಳಿ, ಸ. 16 "ಯುಗಪುರುಷ ಪ್ರಕಟನಾಲಯದ ಪ್ರಕಟಣೆಯಾದ ಶ್ರೀ ಕೆ. ಗಣೇಶ ಮಲ್ಯರ ಕಾವೇರಿಯ 'ಬೀಸಿದ ಬಲೆ' ಈ ಕೃತಿಯನ್ನು ಶ್ರೀ ಕೆ. ಕೆ. ಪೈ, ಚೀಫ್ ಆಫೀಸರ್, ಸಿಂಡಿಕೇಟ್ ಬ್ಯಾಂಕ್, ಮಣಿಪಾಲ ಇವರು ಡಾ| ಯು.ಸ್. ಚಂಪಾ ಇವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಶ್ರೀ ಕೆ. ಗಣೇಶ ಮಲ್ಯರು, ಕೃತಿಯ ಕುರಿತಾಗಿ ಪ್ರಾಸ್ತಾವಿಕ ಭಾಷಣವನ್ನು ಗೈದರು. ಶ್ರೀ. ಕೆ. ಕೆ. ಪೈಯವರು ಮಾನವನ ಮನರಂಜನೆ ಗೈಯುವುದರ ಜೊತೆಗೆ ಮಾನಸಿಕ ವಿಕಾಸವನ್ನೂ ನೆರವೇರಿಸುವ ಸಾಹಿತ್ಯೋದ್ಯಮಕ್ಕಾಗಿ ಸಂತೃಪ್ತಿಯನ್ನು ಸೂಚಿಸಿ, ಶ್ರೀ ಮಲ್ಯರ ಸಾಹಸವನ್ನು ಕೊಂಡಾಡಿ ಅವರಿಗೆ ಉಜ್ವಲ ಭವಿಷ್ಯವನ್ನು ಹಾರೈಸಿದರು. ಶ್ರೀ ರಘುನಾಥ ರಾವ್ ಇವರು "ಕಾದಂಬರಿಯ ವಿಚಾರವಾಗಿ ಮಾತನಾಡಿದರು. ಅಂತ್ಯದಲ್ಲಿ ಶ್ರೀ ಕೊ. ಅ. ಉಡುಪರು ಧನ್ಯವಾದಗಳನ್ನರ್ಪಿಸಿದರು.

ವಾರ್ಷಿಕ ಸಭೆ

ಪರ್ಕಳ, ಹೆಗ್ಗ ಸರಕಾರಿ ಸ್ವಾವಸಾಯಿಕ ಬೇಂಕಿನ ವಾರ್ಷಿಕ ಸಭೆಯು 17-9-67 ರಂದು ಬೇಂಕಿನ ಪ್ರೆಸಿಡೆಂಟ್ ಬಿ. ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸೆಕ್ರೆಟರಿಎನ್ನಾ ವೇದಮೂರ್ತಿಭಟ್1966-67 ನೇ ವರ್ಷದ ವರದಿ ಸಭೆಯ ಮುಂದಿಟ್ಟರು. 1967-68 ನೇ ವರ್ಷದ ಬಜೆಟ್ ಎಸ್ಟಿಮೇಟ್, 1966-66 ಲಾಭಾ ಹಂಚುವಿಕೆ ಇತ್ಯಾದಿಗಳು ಮುಂಜೂರಾದುವು. ಗ್ರಾಮ ಸೇವಕ ಲಕ್ಷ್ಮೀ ಗೌಡ ಉಪಸ್ಥಿತರಿದ್ದರು. ಸೆಂಟ್ಸಲ್ ಬೇಂಕ್ ಸುರ್ಕಾರ್ ವೈಶ್ಯ, ಬೇಂಕಿನ ಪ್ರೇ ಜರರ್ ಕೆ. ಆನಂದ ಸೆಟ್ಟಿ ಬೇಂಕಿನ ವಿಷಯಗಳನ್ನು ವಿವರಿಸಿದರು

ಡಾ|| ವಿಶ್ವೇಶ್ವರಯ್ಯನವರ ಧ್ಯೇಯಗಳ ಅನುಸರಣೆಗೆ ಕರೆ

ಮಣಿಪಾಲ, ಸ. 16, ಕೀರ್ತಿಶೇಷ ಡಾ|| ಎಂ. ವಿಶ್ವೇಶ್ವರಯ್ಯನವರ ಆದರ್ಶವನ್ನು ಅನುಕರಿಸಿ ಹಾಗೂ ಸ್ಥಳೀಯ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಒಟ್ಟಾಗಿ ಕೆಲಸ ಮಾಡುವುದರ ಮೂಲಕ ಮಾನವ ಸಂಪನ್ಮೂಲ ಸಾಧನೆಗಳನ್ನು ಮಾಡಬೇಕೆಂದು ಅಖಿಲ ಭಾರತ ತಯೂರಿಕೆಗಾರರ ಸಂಸ್ಥೆಯ ದಕ್ಷಿಣ ಕನ್ನಡ ಜಿಲ್ಲಾ ಮಂಡಳಿಯ ಅಧ್ಯಕ್ಷರಾದ ಡಾ|| ಟಿ. ಎಂ. ಎ. ಪೈಯವರು ನಿನ್ನೆ ಇಲ್ಲಿ ವಿದ್ಯಾರ್ಥಿಗಳಿಗೆ ಕಳಕಳಿಯ ಕರೆಯಿತ್ತರು.

'ಕಳೆದ ಎರಡು ಶತಮಾನಗಳಲ್ಲಿ ನಮ್ಮ ದೇಶದಲ್ಲಿ ಅನುಪಯುಕ್ತ ಹಾಗೂ ಉಪದ್ರವಿ ಅಂಶಗಳು ಉಂಟಾದವು ಈಗ ಇರುವ ಅರ್ಥಿಕ ಹಿಂಜರಿತದ ಭಯ ಕೇವಲ ಎಣಿಕೆಯು ದಾಗಿದೆ' ಎಂದು ಅವರು ಉಡುಪಾಲ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆ ಕಾಲೇಜಿನ ಹಾಗೂ ಅ. ಭಾ. ತ. ಸಂಸ್ಥೆಯ ದ. ಕ. ಜಿಲ್ಲಾ ಮಂಡಳಿಯ ಆಶ್ರಯದಲ್ಲಿ ಇಂಜಿನಿಯರುಗಳ ದಿನ ಹಾಗೂ ಡಾ| ಎಂ. ವಿ. ಯವರ ೧೦೭ನೇ ಜನ್ಮ ದಿನ ಆಚರಿಸಿದ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ತಿಳಿಸಿದರು.

ಪ್ರಿನ್ಸಿಪಾಲ್ ಶ್ರೀ ಪಿ. ವಿ. ಭಟ್‌ರವರು ಕಾಲೇಜಿನ ಸಿವಿಲ್ ಇಂಜಿನಿಯರಿಂಗ್ ಸಂಘವನ್ನು ಉದ್ಘಾಟಿಸುತ್ತಾ ಸಿವಿಲ್ ಇಂಜಿನಿಯರಿಂಗ್ ಪದವೀಧರರು ನಿರುದ್ಯೋಗದ ಭಯ ಇಟ್ಟು ಕೊಳ್ಳಬೇಕಾಗಿಲ್ಲವೆಂದು ಹೇಳಿ ವಿದ್ಯಾರ್ಥಿಗಳಿಗೆ ಮುಂದೆ ಸಾಕಷ್ಟು ಅವಕಾಶಗಳಿರುತ್ತವೆಂದರು.

ಅ. ಭಾ. ತ. ಸಂಸ್ಥೆಯ ದ. ಕ. ಜಿಲ್ಲಾ ಮಂಡಳಿಯ ಕಾರ್ಯದರ್ಶಿ ಶ್ರೀ ಟಿ. ರಮೇಶಯ್ಯ, ಪೈಯವರು 'ಡಾ|| ಎಂ. ವಿ.'ಯವರನ್ನು ಕುರಿತ ವಾರ್ ಸ್ಪರ್ಧೆಯಲ್ಲಿ ಬಹುಮಾನಗಳಿಸಿದ ಶ್ರೀ ಪಿ.ಆರ್.ಭಟ್‌ರವರನ್ನು ಅಭಿನಂದಿಸಿದರು.

ಶ್ರೀ ಎನ್.ರಾಮಕೃಷ್ಣ ಶೆಟ್ಟಿಯವರು ಅತಿಥಿಗಳನ್ನು ಸ್ವಾಗತಿಸಿದರು. ಸಿವಿಲ್ ಇಂಜಿನಿಯರಿಂಗ್ ಸಂಘದ ಅಧ್ಯಕ್ಷ ಪ್ರೊ||ಎಚ್. ಎಸ್. ಶಿವಸ್ವಾಮಿಯವರು ಭಾಷಣ ಮಾಡಿದರು. ಕಾಲೇಜು ಸಂಘದ ಕಾರ್ಯದರ್ಶಿ ಶ್ರೀ ಜೋಸೆಫ್ ಡೇನಿಯಲ್‌ರವರು ಆಭಾರ ಮನ್ನಿಸಿದರು.

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ

ಮೈಸೂರಿನ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ಸಕಲ ಸದಸ್ಯರ ಸಭೆಯು ತಾ. 17—9—67ರಂದು ಬೆಳಿಗ್ಗೆ ನಿಲಯದ ಆವರಣದಲ್ಲಿ ಅಧ್ಯಕ್ಷ ಶ್ರೀ ಕೆ. ದೇಜು ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆ ಹಿಂದಿನ ಸಾಲಿನ ಆದಳಿತದ ವರದಿ ಹಾಗೂ ಲೆಕ್ಕ ಪತ್ರಗಳನ್ನು ಅಂಗೀಕರಿಸಿತು.

ವಿದ್ಯಾರ್ಥಿ ನಿಲಯಕ್ಕೆ ಸರಕಾರದಿಂದ ಕೊಟ್ಟರುವ ಜಾಗದಲ್ಲಿ ಮೊಗೇನೇ ಕಟ್ಟಡ ಕಟ್ಟಲು ಅರಂಭಿಸ ಬೇಕೆಂದೂ ಕಟ್ಟಡ ನಿಧಿಗಾಗಿ ಸಂಗ್ರಹಿಸಲು ಸಾಕಷ್ಟು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದೂ ತೀರ್ಮಾನಿಸಲಾಯಿತು.

ಮಂಡಿನ ಸಾಲಿಗೆ ಈ ಕೆಳಗೆ ಕಂಡ ಅಧಿಕಾರ ವರ್ಗವನ್ನು ಜನುನಯಿಸಿತು. ಶ್ರೀಗಳಾದ ಕೆ. ದೇಜು ಶೆಟ್ಟಿ (ಅಧ್ಯಕ್ಷರು) ಎ. ಸಿ. ಶ್ರೀಕಂಠಯ್ಯ (ಉಪಾಧ್ಯಕ್ಷರು) ಎಂ.ಎ ಮಂಜ (ಕಾರ್ಯದರ್ಶಿ) ಎಸ್. ಬೈರಪ್ಪ (ಖಜಾಂಚಿ) ಕೆ. ಹಿರಿಯಣ್ಣ ಶೆಟ್ಟಿ, ಕೆ. ಶಂಭುಶೆಟ್ಟಿ, ಕೊಡಗಳ್ಳಿ ಸಂಭು ಗೌಡ, ಕೆ. ದಿವಾಕರಹೆಗ್ಡೆ, ದಿವಾಕರಯ್ಯ, ಎಸ್. ಟಿ. ವೆಂಕಟಯ್ಯ (ವಾರ್ಡನ್) ದೊಡ್ಡ ತಮ್ಮಯ್ಯ (ಪುರಸಭಾಸದಸ್ಯರು) ಮತ್ತು ವೈ.ಸೂರ್ಣ ಜಿಲ್ಲೆಯ ವಿದ್ಯಾರ್ಥಿಕಾರಿಗಳು ಸದಸ್ಯರು.

ಶ್ರೀ ಧರ್ಮಸ್ಥಳ ಹೆಗ್ಡೆಯವರ ಪಟ್ಟದ ವರ್ಧಂತಿ

ಶ್ರೀ ಧರ್ಮಸ್ಥಳ ರತ್ನವರ್ಮಹೆಗ್ಡೆಯವರ ಪಟ್ಟದ ವರ್ಧಂತಿ ಉತ್ಸವವು ಬೆಂಗಳೂರಿನ ಶ್ರೀ ರಾಜಗೋಪಾಲ್‌ರವರ ಅಧ್ಯಕ್ಷತೆಯಲ್ಲಿ ತಾ. 15ರಂದು ಧರ್ಮಸ್ಥಳದ ರತ್ನಪುರಿಯಲ್ಲಿ ನಡೆಯಿತು.

ಆರಂಭದಲ್ಲಿ ಶ್ರೀ ಎ. ರಾಮಣ್ಣ ಶೆಟ್ಟರು ಸ್ವಾಗತಿಸಿದರು. ಶ್ರೀಗಳಾದ ಕೆ. ಸೂರ್ಯನಾರಾಯಣ ರಾವ್, ಶ್ರೀ ಕೊಂಕಾಂ, ಚಿನರಾಜ ಶಾಸ್ತ್ರಿ, ಶ್ರೀನಿವಾಸರಾವ್ ಮೊದಲಾದವರು ಹೆಗ್ಡೆಯವರನ್ನು ಅಭಿನಂದಿಸಿ ಮಾತನಾಡಿದುದಕ್ಕೆ ಶ್ರೀ ಹೆಗ್ಡೆಯವರು ಅದಕ್ಕುತ್ತರವಾಗಿ ಮಾತನಾಡಿ ತನ್ನ ಕಾರ್ಯಭಾರಗಳಿಗೆ ಸೋದರರ ಸಹಕಾರ, ಶ್ರೀ ಸ್ವಾಮಿಯ ಅನುಗ್ರಹಗಳೇ ಅಧಿಕವೆಂದು ಹೇಳಿದರು.

ಕೊನೆಯಲ್ಲಿ ಶ್ರೀ ಕೆ. ಸೂರ್ಯನಾರಾಯಣ ರಾವ್ ಧನ್ಯವಾದ ಸಮರ್ಪಿಸಿದರು. ಕೊನೆಗೆ 'ಸಂಸಾರನೌಕೆ ಎಂಬ ನಾಟಕವೂ 'ಸಾಭದ್ರಾರ್ಜುನ'ವೆಂಬ ಯಕ್ಷಗಾನ ಕೂಟವೂ ಜರಗಿದವು.

ವಾರ್ಷಿಕ ಮಹಾಸಭೆ

ಶಿವ ಸೇವಾ ಸಹಕಾರಿ ಸಂಘದ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಡಾ| ಎಸ್. ರಾಜಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ಲಭ್ಯಾಂಶ ವಿನಿಯೋಜನಾ, ಕೃಷಿ ಸಲಹಾಂಧಿಗಳ ಕಿದ್ದಾಂತ ಅಧ್ಯಕ್ಷರ ಭಾಷಣಾನಂತರ ಶ್ರೀ ಕೆ. ವಾಸುದೇವ ಶೆಟ್ಟಿ ಧನ್ಯವಾದಸಮರ್ಪಿಸಿದರು.

ಹೊಸ ಕಾರ್ಯಕಾರಿ ಸಮಿತಿಯು ಈ ಕೆಳಗಿನ ಸದಸ್ಯರನ್ನೊಳಗೊಂಡಿದೆ:ಡಾ| ಎಸ್. ರಾಜಶೇಖರ ಹೆಗ್ಡೆ, ಶ್ರೀಯುತರುಗಳಾದ ಕೆ. ವಾಸುದೇವ ಶೆಟ್ಟಿ, ಕೆ.ಕುಮಾರಹೆಗ್ಡೆ, ಎಸ್. ಗೋಪಾಲಹೆಗ್ಡೆ,ಎನ್ ನಿರ್ಮಲಪ್ಪ ಶೆಟ್ಟಿ, ಕೆ. ಎಲ್. ಶರ್ಮ ಮತ್ತು ಕೆ. ಕೃಷ್ಣಶೆಟ್ಟಿ.

ಬೀಳುತ್ತಿರೋದು ಸ್ಟ್ರೀಟ್ ಸ್ಕ್ರೀನ್

(ನಾಲ್ಕನೇ ಸುಟದಿಂದ)

ವ್ಯಕ್ತಪಡಿಸುವುದು ಸಾಧ್ಯ..."

"ಹಸ್ತಾಂ... ಕೇರಳದಲ್ಲಿ ಕಮ್ಯುನಿಷ್ಟರನ್ನು ಹೊರಗಿಡುವುದು...."

'ಅವರನ್ನು ಜನರೇ ಹೊರಗಿಡಬೇಕು'

'ಎತ್ತೆ ನೋಡಿ ಮೊನ್ನೆ ಸರಕಾರದ ಗೋಳಬಾರಿನಲ್ಲಿ ಇಬ್ಬರು..."

"ಹೌದು, ಅಗ್ನಿತತ್ತ್ವ ಮತ್ತು ಶೆಣೈ ..."

'ಅವ್ರ ಕುಟುಂಬಕ್ಕೆ ಪರಿಹಾರ ಸೀಡಲು ನಿರ್ಧರಿಸಿದಯಂತೆ..."

"ಕೇರಳ ಸರಕಾರ ವ್ಯಾಣಕ್ಕು ಬೆಲೆ ಕಟ್ಟು ಮಮ್ಮಕ ಕೆಂಪು ಗುಣಾನನ್ನು ತೋರಿಸಿತು...."

"ನೋಡಿ, ಈ ಖರಿಹಾವನ್ನು ತಿರಸ್ಕರಿಸಬೇಕು...."

"ಉದ್ವೇಕಪೂರ್ವಕ ಗೋಳಿಬಾರು ನಡೆಸಿ ಅದನ್ನು ಮರೆಮಾಚಲು ಆಡುವ ಈ ನಂಬೂದಿರಿ ನಾಟಕಕ್ಕೆ ಆಂಕದ ಪರದೆ ಬೀಳಬೇಕು..."

"ಎಲ್ಲವೂ ನಾಟಕವೇ. ಬೀಳುತ್ತಿರುವುದು ಸ್ಟ್ರೀಟ್ ಸ್ಕ್ರೀನ್...."

'ಆಯ್ಯೋ..."

'ಏನೇ ಆದು?'

"ಏನೂ ಇಲ್ಲಾನ್ನಿ...."

—ಗೋರಾ.

ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ
ಪುಟ 450ಕ್ಕೂ ವಿ ಕ್ಕಿ ಬೆಲೆ ರೂ. 1-50
ರಿಯಂ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಇದು ನುಳ್ಳೆನ್ನ ಬೇಡಿರಿ

ಯಾಂತ್ರಿಕ ಶಿಕ್ಷಕರ ನಿಯುಕ್ತಿ

ಒಂದು ದಿನ ಅಧ್ಯಾಪಕರು ತಪ್ಪು ಲೆಕ್ಕ ಮಾಡಿಕೊಂಡು ಬಂದ ಹುಡುಗನನ್ನು ಗದರಿಸುತ್ತ ಹೇಳಿದರು— "ಬೆಂಚೀ ಮೇಲೆ ನಿಲ್ಲೋ...." ಆಗ ಆ ಹುಡುಗ ಅಂದನಂತೆ—'ನಾನೆಲ್ಲ ಸಾರ್' 'ಏನಂದೆ? ನೀನಲ್ಲ? ಮತ್ಯಾರು ನಾನು ನಿಲಬೇಕೇನೋ' ಎಂದು ಗುಡುಗಿದಾಗ, ಹುಡುಗ ಮೆಲ್ಲನೆ ಉತ್ತರಿಸಿದ— 'ಅಲ್ಲ ಸಾರ್, ಲೆಕ್ಕ ತಪ್ಪಾಗಿ ಮಾಡಿದ್ದು ನಾವಲ್ಲ ಸಾರ್, ನಮ್ಮಪ್ಪ' ಎಂದು ಬಿಟ್ಟ.

ಮನೆಲೆಕ್ಕ, ಮನೆ ಅಭ್ಯಾಸವಲ್ಲ ಮಕ್ಕಳಿಗೊಂದು ತಲೆ ಶೂಲ. ಕಲಿಯಬೇಕಾದ್ದನ್ನೆಲ್ಲಾ ಶಾಲೆಯಲ್ಲೇ ಮುಗಿಸಿ ಬಿಡಬೇಕು. ಮನೆಯಲ್ಲಿ ಗರಿಗೆದರಿ ಹಾರುವುದಕ್ಕೆ ಪೂರ್ಣ ಆಕಾಶದೊರೆಯು ಬೇಕು-ಇದು ಮಕ್ಕಳ ಹೇರಾಸೆ.ಹೆಚ್ಚಿನ ಮಕ್ಕಳಿಗೆ ಮನೆಪಾಠವೆಂದರೆ ಭೀದಿ ಔಷಧ ಕುಡಿದಂತೆ ಆಗಿ ಬಿಡುತ್ತದೆ. ಉಪಾಧ್ಯಾಯರು ಸುಮ್ಮನಿರುವುದುಂಟೆ? ಹೇಳಿದ ಕೆಲಸವನ್ನು ಮಾಡಿಕೊಂಡು ಬರಬೇಕು-ಇದು ಅವರ ತತ್ವ—ಅವರಾದರೂ ಏನು ಮಾಡಿಯಾರು? ಕರ್ತವ್ಯ ಭಾವನೆಯುಳಿದಿರುವುದಾದರೂ ಇಂದು ತುಸು ಮಟ್ಟಿಗೆ ಇವರ ವರ್ಗದಲ್ಲಿ ಮಾತ್ರ ತಾನೆ! ದಸರಾ ರಜೆ—ಕ್ರಿಸ್‌ಮಸ್ ರಜೆಯಿರಲಿ, ಅವರ ಮನೆಪಾಠ ತಪ್ಪಿದ್ದಲ್ಲ. ಆದುದರಿಂದ, ಚಕ್ರವ್ಯೂಹವನ್ನು ಹೊಕ್ಕ ಹೊರ ಬರಲರಿಯದ ಅಭಿಮನ್ಯುವಿನಂತೆ ಮಕ್ಕಳು ಉಪಾಧ್ಯಾಯರ ಹೆದರಿಕೆಗಾಗಿ ಪುಸ್ತಕಗಳನ್ನು ಹರಡಿಟ್ಟು, ತಲೆ ಕೆಡಿಸಿಕೊಳ್ಳುತ್ತಾರೆ. ಈ ಹುಡುಗರಿಗೂ ಅಭಿವನ್ಯುವಿಗೂ ಹೆಚ್ಚಿನ ವ್ಯತ್ಯಾಸವಿರುವುದಿಲ್ಲ.

ಕೆಲವು ಭಾಗ್ಯಶಾಲಿ ಹುಡುಗರೂ ಇದ್ದಾರೆ. ಅಣ್ಣ, ಅಪ್ಪ, ಅಕ್ಕ, ಅಮ್ಮ ಮೊದಲಾದವರು ಆಪದ್ಬಾಂಧವರಂತೆ ಪ್ರತ್ಯಕ್ಷನಾಗಿ ಅವರು ಚಕ್ರವ್ಯೂಹದಿಂದ ಹೊರಗೆಳೆಯಲು ಸಹಾಯ ಮಾಡುವರು. ಆದರೆ, ಎಲ್ಲರಿಗೂ ಈ ಭಾಗ್ಯ ಎಲ್ಲಿಂದ ಬರಬೇಕು? ಈ ಆಪದ್ಬಾಂಧವರಿಗೆ ಅಷ್ಟು ರಾಭ್ಯಾಸ ಗೊತ್ತಿರಬೇಕು; ಬಿಡುವಿರಬೇಕು; ಹುಡುಗನ ದಯನೀಯ ಸ್ಥಿತಿಯು ಮನವರಿಕೆಯಾಗಬೇಕು—ಇವೆಲ್ಲವೂ ಸರಿಹೊಂದಿದರೆ ಲೆಕ್ಕ ಮಾಡುವ ರೀತಿ ಸರಿಯಾಗಿ ಗೊತ್ತಿರಬೇಕು!

ಹಿರಿಯರು ಕಿರಿಯರ ಮುಂದೆ ತಾವೆಲ್ಲ ತಮ್ಮ ಕಾಲದ ಬ್ರಹಸ್ಪತಿಗಳೆಂದೇ ಹೇಳಿಕೊಳ್ಳುತ್ತಾರೆ. ಆದರೆ, ಸತ್ಯಸ್ಥಿತಿ ಇದಕ್ಕೆಂತ ದೂರವೆಂಬುದು ಹಾಲಿನಷ್ಟು ಬೆಳ್ಳಗೆ, ಅತ್ಯೆಯಂದಿರ ಅವತಾರ ಸತ್ಯಯುಗದಲ್ಲೇ, ಆದರೆ, ಅವರ ಸೊಸೆಯಂದಿರು ಜನ್ಮ ತಾಳಿರುವುದು ಕಲಿಯುಗದಲ್ಲ! ಒಂದು ತಲೆಮಾರಿನಲ್ಲೇ ಇಷ್ಟೊಂದು ಅಂತರ!

ಅದರಿಂದಲೇ ಹಿರಿಯರು ಕಿರಿಯರ ಗೋಜಿಗೆ ಹೋಗುವುದಿಲ್ಲ. ತುರು ಹೇಳಿಕೊಡಣ್ಣಾ ಅಂಕ ರಾಗವೆಳೆದರೆ, 'ನಗ ಬಿಡು ವಿಲ್ಲಕಣೋ" ಎಂದು ಜಾರಿಕೊಳ್ಳುವ ಅಣ್ಣಾ— ಅಕ್ಕಂದಿರೇ ಹೆಚ್ಚು! ತನಗೆ ಗೊತ್ತಿಲ್ಲ ಅಂದರೂ ಉರಿ ಮೋರೆಯ ಆ ಸೆಡವಿನ ಉತ್ತರ ತಾನು ಬ್ರಹಸ್ಪತಿಯೆಂಬುದನ್ನೇ ಸಮರ್ಥಿಸುವಂತಿರುತ್ತದೆ. ಇನ್ನು ಮಾಡಿಕೊಟ್ಟರೂ ಅದು.....? ತಮ್ಮ ಕಾಲದಲ್ಲಿ ತಮ್ಮ ಕಾಲ ಮೇಲೆ ನಿಷ್ಠಿಲಾಗದ, ತಮ್ಮ ಮನೆ ಕೆಲಸವನ್ನು ಸರಿಯಾಗಿ ಮಾಡಲಾಗದ ಈ ಬ್ರಹಸ್ಪತಿಗಳ ಲೆಕ್ಕ ಹೇಗಾದೀತು! ಪಾಪ, ಹುಡುಗ ದಂಡನೆಯಿಂದ ಉಳಿಯಲು ನಿರುಪಾಯನಾಗಿ ಸತ್ಯ ಭೇದಿಸಲೇ ಬೇಕಾಗುತ್ತದೆ! ಆಗ ಅಧ್ಯಾಪಕರ ಮುಖ ನೋಡಬೇಕು!

ಈ ಬಗೆಯ ಸಮಸ್ಯೆಗೆ ಪರಿಹಾರವರಿಸಬೇಕು. ಮಕ್ಕಳು ಸರಿಯಾಗಿ ಲೆಕ್ಕ ಮಾಡಲು ನೆರವಾಗುವ ಶಿಕ್ಷಣ ಕ್ರಮವೊಂದು ಪಶ್ಚಿಮ ಜರ್ಮನಿಯಲ್ಲಿದೆ. ಒಂದು ಮಾದರಿಯ ಲೆಕ್ಕವನ್ನು ಅಧ್ಯಾಪಕರು ಬಿಡಿಸುತ್ತಿರುವಾಗಲೇ ಅದನ್ನು "ಟೇಪ್ ರೆಕಾರ್ಡ್" ಮಾಡಿಕೊಳ್ಳುತ್ತಾರೆ ಇದೇ ವಾಕ್ಯವನ್ನು ಮೇಲೆ ಮನೆ ಲೆಕ್ಕ ಕೊಟ್ಟಾಗ ಬುದ್ಧಿವಂತ ಮಕ್ಕಳು ಮಾಡಿತರಬಹುದು; ಇನ್ನು, ಲೆಕ್ಕ ಮಾಡಿತರಲಾಗದವರಿಗೆ ಟೇಪ್ ರೆಕಾರ್ಡರಿನ ಸದಾಯ ನೀಡುತ್ತಾರೆ. ಅವರು ಸರಿಯಾಗಿ ಅರ್ಥ ಮಾಡಿಕೊಳ್ಳುವಷ್ಟು ಒತ್ತರಿಯೂ ಈ ರೆಕಾರ್ಡರ್ ಅವರಿಗೆ ಪಾಠ ಹೇಳುವುದು. ಒಮ್ಮೆ ಹೇಳಿದ್ದನ್ನು ಇನ್ನೊಮ್ಮೆ ಹೇಳುವುದೆಂದರೆ ಮಾನವ—ಅಧ್ಯಾಪಕನಿಗೆ ಬೇಸರ. ಏನು ಸಾರ್ ಎಂದು ಯಾವನಾದರೂ ಮತ್ತೆ ಕೆಳಿ ಬಿಟ್ಟರೆ, ತೀರಿತು— ರುದ್ರಾವತಾರಿಯಾಗುವವರೇ ಹೆಚ್ಚು ಮಂದಿ ವಿದ್ಯಾರ್ಥಿಗಳ ಒತ್ತಡದಿಂದಾಗಿ ಹತ್ತಿಯಂತಹ ಅವರ ಮನಸ್ಸು ಕಲ್ಲಾನಷ್ಟು ಗಟ್ಟಿಯಾಗಿರುವುದೇ ಇದಕ್ಕೆ ಕಾರಣ.

ಪಶ್ಚಿಮ ಜರ್ಮನಿಯು ಟ್ಯೂಬಿಂಜೆನ್ ವಿಶ್ವವಿದ್ಯಾಲಯದಲ್ಲಿರುವಂಥದೊಂದೊರೆಲಕ್ಷ ರೂಪಾಯಿಯ ಬೆಚ್ಚದಲ್ಲಿ "ಟೇಪ್ ರೆಕಾರ್ಡರ್ ಶಿಕ್ಷಕ"ನನ್ನು ನೇಮಿಸಿಕೊಳ್ಳಲಾಗಿದೆ. ಇವನಿಂದ ಏನು ಲಾಭ? ಇವನು ನಮಸ್ಕರಕವಾಗಿ, ಹುಡುಗನಿಗೆ ಮಂದಟ್ಟಾಗುವಂತ ಪಾರೆ ಹೇಳಿ ಕೊಡಬಲ್ಲನೆ? ಹೇಳಲು ಬರುವುದಿಲ್ಲ. ಆದರೂ ಈ ಯಾಂತ್ರಿಕ ಶಿಕ್ಷಕನಿಗೆ ಜೇಳದ್ದನ್ನೇ ಹೇಳಬೇಸರ ಒರುವುದಿಲ್ಲ; ಸಿಟ್ಟು ಬರುವುದು ಬಹಳ ಅಪರೂಪ. ಕೇಳುವ ತಾಳ್ಮೆ ಹುಡುಗನಲ್ಲದ್ದರೆ, ಆತ ಕಲಿಸುಕೊಳ್ಳುವ ಸಾಧ್ಯತೆಯಿದೆ. ಬೇರೆಯುವರಿಂದ ನಕಲು ಹೊಡೆಯುವುದಕ್ಕಿಂತ ಇದು ಲೇಸು.

ಆದರೆ, ನೆನಪಿಡಿ, ತಂಪು ಕಲಿತುಕೊಳ್ಳಬೇಕು ಎಂಬ ಆಸಕ್ತಿ ಹುಡುಗನಲ್ಲಿರಬೇಕು. ಎದೆಗುಂದಿಗೆಯಿಲ್ಲದವನಿಗೆ ರಕ್ತ ದಾನ ಮಾಡುವುದೆಂತು?

ಕುಟುಂಬ ಯೋಜನಾ ಪಕ್ಷ ಉದ್ಘಾಟನೆ

ಮಣಿಪಾಲ, ಭಾರತದ ಕುಟುಂಬ ಯೋಜನಾ ಸಂಸ್ಥೆದ ದ. ಕ. ಜಿಲ್ಲಾ ಶಾಖೆಯ ಆಶ್ರಯದಲ್ಲಿ ತಾ. 16ರಂದು ಮಣಿಪಾಲದಲ್ಲಿ ಕುಟುಂಬ ಯೋಜನಾ ಪಕ್ಷದ ಉದ್ಘಾಟನೆಯು ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರಿಂದ ಡಾ| ಟಿ. ಮೊಧವ ಪೈಗಳ ಅಧ್ಯಕ್ಷತೆಯಲ್ಲಿ ನಡೆಯಿತು.

ಆರಂಭದಲ್ಲಿ ಕಾರ್ಯದರ್ಶಿ ಶ್ರೀ ಟಿ. ರಮೇಶ ಪೈಗಳು ಸ್ವಾಗತಿಸುತ್ತಾ, ಭಾರತದಂತಹ ಹಿಂದುಳಿದ ರಾಷ್ಟ್ರವು ಜನಸಂಖ್ಯೆಯ ಸಮಸ್ಯೆಯನ್ನು ಅವಶ್ಯವಾಗಿ ಬಗೆಹರಿಸ ಬೇಕಾಗಿದೆಯೆಂದರು. ಡಾ| ಎ. ಕೃಷ್ಣರಾಯರು ಸಂದೇಶಗಳನ್ನು ಓದಿದರು.

ಸಭಿಕರ ಪರವಾಗಿ ಕೊಡಗಿನ ಶ್ರೀಮತಿ ದೇವಕಿಯವರು ಮಾತನಾಡಿದ ಮೇಲೆ ಡಾ| (ಶ್ರೀಮತಿ) ಶಾದ್ಯಾರಾವ್ ಧನ್ಯವಾದ ಸಮರ್ಪಿಸಿದರು.

ಕುಟುಂಬ ಯೋಜನಾ ವಸ್ತುಪ್ರದರ್ಶನ

ಕುಟುಂಬಯೋಜನಾ ಪಕ್ಷಾಚರಣೆಯ ಅಂಗವಾಗಿ ಉಡುಪಿಯ ರೋಟರಿ ಹಾಲಿನಲ್ಲಿ ಏರ್ಪಡಿಸಲಾದ ವಸ್ತು ಪ್ರದರ್ಶನದ ಉದ್ಘಾಟನೆಯು ತಾ. 17ರಂದು ಜಿಲ್ಲಾ ವೈದ್ಯಾಧಿಕಾರಿ ಡಾ| ಎ. ಡಿ. ಪಾಲ್‌ರವರಿಂದ ಡಾ| ಟಿ. ಮೊಧವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ಟಿ ರಮೇಶ ಪೈಗಳು ಸ್ವಾಗತಿಸಿ ಮಣಿಪಾಲ ಕೇಂದ್ರದಿಂದ ಉಡುಪಿ ಹೀಗೂ ಆ ಸುತ್ತಮುತ್ತಿನ ಸ್ಥಳಗಳಲ್ಲಿ ನಡೆಸಿರುವ ಕಾರ್ಯಕ್ರಮಗಳನ್ನು ವಿವರಿಸಿದರು.

ಶ್ರೀಮತಿ ಕಲ್ಯಾಣಿಬಿ ಶೆಟ್ಟಿಯವರು ಪ್ರಾಥಮಿಕ ಶಿಕ್ಷಕರು ಬಯೋಜನಾಪುಸ್ತಿಕೆಯನ್ನು ಉದ್ಘಾಟಿಸಿ ಕುಟುಂಬಯೋಜನೆಯನ್ನು ಸಾಮಾಜಿಕ ದೃಷ್ಟಿಯಿಂದ ನೋಡಬೇಕೇ ಹೊರತು ಧಾರ್ಮಿಕ ರಾಜಕೀಯವನ್ನು ಇದ್ದಿ ತರಬಾರದು ಎಂದರು.

ಡಾ| ಮೊಧವ ಪೈಗಳು ಮತನಾಡುತ್ತಾ ನಮ್ಮ ದೇಶದ ಹಾಗೂ ಕುಟುಂಬದ ಕಲ್ಯಾಣಕ್ಕಾಗಿ ಸ್ತ್ರೀಯೆಬ್ಬನೂ ಈ ಸಮಸ್ಯೆಯನ್ನು ಎದುರಿಸಲು ತನ್ನ ಪಾಲಿನ ಸೇವೆಯನ್ನು ಸಲ್ಲಿಸಲು ಸಿದ್ಧನಾಗಿರಬೇಕೆಂದರು.

ಕೊನೆಯಲ್ಲಿ ಶ್ರೀ ಎ. ಜಿ ಅಲ್ಮೆಯವರಿಂದ ಧನ್ಯವಾದ ಸಮರ್ಪಣೆಯಾಯಿತು. ಕುಟುಂಬಯೋಜನೆಗೆ ಸಂಬಂಧಿಸಿದ ಚಲಚಿತ್ರ ಪ್ರದರ್ಶನವನ್ನು ಅಲ್ಪನಾಥಿಯೇಟರಿನಲ್ಲಿ ಏರ್ಪಡಿಸಲಾಗಿತ್ತು.

ಶ್ರೀ ಕೆ. ಸೀತರಾಮರಾಯರಿಗೆ ಅನುಗ್ರಹ ಪತ್ರಿಕೆ

ಮಂಡ್ಯಾಸಿನಲ್ಲಿ ಜಾತಿಮೂಢ್ಯ ದೀಕ್ಷೆಯನ್ನು ಮುಂಬಯಿನಲ್ಲಿ ಶ್ರೀಪಾದರಾಜ ಮಠದ ಶ್ರೀ ೧೦೮ ಸತ್ಯಸನ್ನಿಧತೀರ್ಥ ಶ್ರೀಚರಣರಿಂಗೆಳವರು ತಾ. 18—9—1967ರಲ್ಲಿ ಜಾತಿಮೂಢ್ಯ ದೀಕ್ಷೆಯನ್ನು ಮುಂಬಾಯಿಗೊಳಿಸಿದರು. ಅಂದು ಸಂಜೆ ದೊಡ್ಡ ಸಭೆಯನ್ನೇರ್ಪಡಿಸಿ ಧರ್ಮದ ರಹಸ್ಯವನ್ನು ಭಕ್ತರಿಗೆ ಉಪದೇಶ ನೂಡುತ್ತಾ, ಪರಮಾತ್ಮನಲ್ಲಿ ದೃಢವಾದ ಭಕ್ತಿಯನ್ನು ಮೂಡಬೇಕೆಂದೂ ಅದರಲ್ಲಿ ಪಾರಮಾರ್ಥಿಕ ಭಾವವು ಪೂರ್ಣವಾಗಿರಬೇಕೆಂದೂ ಬಿತ್ತಿ ಹೇಳಿದರು. ಭಕ್ತ ಶ್ರೀ ಗೋವಿಂದದಾಸರಲ್ಲಿಯೂ, ಅವರ ವಾಕ್ಯೈಕಾದ ಮಧ್ವಾಸಾದಾಸಪ್ರಕಾಶ ಮತ್ತು ಧರ್ಮಪ್ರಕಾಶ ಸಂಸ್ಥೆಗಳಲ್ಲಿ ಶ್ರೀ ಕೆ. ಸೀತಾರಾಮರಾಯರಲ್ಲಿಯೂ ಸಕಲ ಯೋಗ್ಯತೆಗಳಿದ್ದಿಯೂ, ವಿದ್ವಜ್ಜನರಲ್ಲಿಯೂ ಇರುವ ಅಸಾಧ್ಯ ಪ್ರೀತಿಯಿಂದ ಸಂತುಷ್ಟರಾಗಿ ಅವರಿಗೆ "ಯತಿ ವಿದ್ವಜ್ಜನ ಪ್ರಿಯ" ಎಂಬ ಬಿರುದನ್ನು ಕೊಟ್ಟು, ಅನುಗ್ರಹ ಪತ್ರಿಕೆಯೊಡನೆ, ಸುವರ್ಣಪದಕವನ್ನು ದಯಪಾಲಿಸಿದರು. ತಮ್ಮ ತಾಯಿಯವರಾದ ಶ್ರೀಮತಿ ಶತಾಯುಷಿ ಗಂಗಾಬಾಯಿಯವರಿಗೆ ತಾ. 22—9—67ರಂದ ತಾ. 8—10—67ರ ವರೆಗೆ ಮಾಡಿಸಲಿರುವ ಬದರೀನಾರಾಯಣ ಯಾತ್ರೆಯು ನಿರ್ವಿಘ್ನವಾಗಿ ನಡೆಯಲೆಂದೂ ಆಶೀರ್ವದಿಸಿದರು. ಶ್ರೀ ಪಿ. ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರಿಂದ ಧನ್ಯವಾದ ಸಮರ್ಪಣೆ ನಡೆದು ಸಭೆಯು ಮುಕ್ತಾಯವಾಯಿತು.

ಅಮ್ಮಂಜೆ ನಾರಾಯಣ ನಾಯಕರ ನಿಧನ

ಉಡುಪಿಯ ಪೂಜೆನಗರಸಭಾಸದಸ್ಯರೂ ಪ್ರಸಿದ್ಧ ವ್ಯಾಪಾರಿಗಳೂ ಆದ ಅಮ್ಮಂಜೆ ನಾರಾಯಣ ನಾಯಕರು ತಾ. 8ರಂದು ಹೃದ್ರೋಗಿಯಿಂದ ಸ್ವಂತ ಕುಂಜಿಬೆಟ್ಟಿನ ಸ್ವಗೃಹದಲ್ಲಿ 6ನೇ ಪ್ರಾಯದಲ್ಲಿ ನಿಧನರಾದರೆಂಬ್ಬಲು ವಿಷಾದವಾಗುತ್ತದೆ ದಿವಂಗತರು ಸಾರ್ವಜನಿಕ ಕೆಲಸಗಾರರಾಗಿ ಜನಪ್ರಿಯತೆ ಗಳಿಸಿದ್ದರು.

ಆಯುರ್ವೇದ ತಜ್ಞರ ವಿಚಾರಗೋಷ್ಠಿ.

ಆಯುರ್ವೇದ ತಜ್ಞರ ಹಾಗೂ ವೈದ್ಯರ ಸೆಮಿನಾರ್, ಕುಟುಂಬ ಯೋಜನಾ ಪಕ್ಷದ ಅಂಗವಾಗಿ ಆಯುರ್ವೇದ ಕಾಲೇಜಿನ ಪ್ರಿನ್ಸಿಪಾಲ್ ಡಾ| ವಿಜಯೇಂದ್ರ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಉಡುಪಿಯ ರೋಟರಿ ಹಾಲಿನಲ್ಲಿ ತಾ. 17ರಂದು ಜರಗಿತು. ಶ್ರೀ ಎ. ಜಿ. ಅಲ್ಮೆಯವರು ಸೆಮಿನಾರಿನ ಉದ್ದೇಶವನ್ನು ವಿವರಿಸಿದರು. ಡಾ| ಜಿ. ಗೋಪಿನಾಥಾಚಾರ್ಯರು ಆಯುರ್ವೇದದಲ್ಲಿ ಮಿತಸಂತತಿಗೆ ಯೋಗ್ಯ ವಿಧಾನ ಕಂಡು ಹುಡುಕುವುದು ಅವಶ್ಯವೆಂದರು.

ಸ್ವಾ. ಗುರುರಾಜ ಆಚಾರ್ಯ, ಡಾ| ಯು. ಕೆ. ಆಚಾರ್ಯ, ಡಾ| ಕೆ. ಆರ್. ಭಾಗವತ, ಮುಳಿಂದ ಭಟ್ಟ, ನಾರಾಯಣ ಶಾಸ್ತ್ರಿ, ಚಂದ್ರ ಶೇಖರ್, ಕೆ. ಆರ್ ಪುರಾಣಿಕ, ಕವಿರಾಜ ಎಂ. ಜಿ ಶಿಖೈ, ವಿ.ಎಸ್. ತೆಂಗಿನಾಸಿ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಅಧ್ಯಕ್ಷರ ಭಾಷಣದ ನಂತರ ಶ್ರೀ ಟಿ. ರಮೇಶ ಪೈಗಳು ವಂದನೆಗೈದನ್ನರ್ಪಿಸಿದರು.

ಅಸ್ಥಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ಥಮಾ ನಿವಾರಕ ಮೂಲಿಕೆಯನ್ನು ದಿ. 18—10—67 ಹುಣ್ಣಿಮೆಯ ರಾತ್ರಿ ಹಾಲು ಮತ್ತು ಆಕ್ಕಿಯಂದಿಗೆ ತಯಾರಿಸಿದ ಪಿಠಂಜಿಲ್ಲಿ ತೆಗೆದುಕೊಳ್ಳುವುದರಿಂದ ಅಸ್ಥಮಾ, ಗೂರಲು, ಕೆಮ್ಮು, ಉಬ್ಬಸ, ವಾಲಲುಸಿರು ಮತ್ತು ಶ್ವಾಸಕಟ್ಟು ಪಕ್ಕಿವೆಯಾಗಿ ನಿವಾರಣೆಯಾಗುತ್ತವೆ. ಹೆಚ್ಚಿನ ವಿವರಗಳು ಇಂಗ್ಲಿಷಿನಲ್ಲಿ ಬರೆಯಿರಿ.

Shri Mahatma Sidh Baba Seva Ashram
P. O. Chitrakot, (Uttar Pradesh)

ಅಸ್ತಮಾ ರೋಗಿಗಳ ತಿಳುವಳಿಕೆಗೆ

ರಜಿಸ್ಟ್ರಿಯಾದ ಚಿತ್ರಕೂಟ್ ಅಸ್ತಮಾ ನಿವಾರಕ ಬೂತಿಯನ್ನು ತಾ. 18—10—67 ನೇ ಹುಣ್ಣಿಮೆ ರಾತ್ರಿ ಬೀರಿನೊಂದಿಗೆ ಸೇವಿಸುವುದರಿಂದ ಅಸ್ತಮಾ, ನೇವಸ, ಕೆಮ್ಮು, ನೆಗಡಿ ನಿವಾರಣೆಯಾಗುವುದು. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga Baba Ayurvedashram,
P. O. Chitrakot U. P.

ಪ್ರೇಮಬಂಧನ

(ಎರಡನೇ ಕಂತಿನಿಂದ)

ಳನ್ನು ಅವರೇ ತೆಗೆದು ಕೊಂಡು ಓದಿಕೊಂಡು ಫಿಮಗೆ ಯಾವ ಸುದ್ದಿಯನ್ನೂ ತಿಳಿಸಿಲ್ಲ...ನಿನ್ನ ಮನಸ್ಸಿಗೆ ನೋವಾಗುವುದೆಂದು, ನಿನಗೆ ಹೇಗೆ ತಿಳಿಯ ಬೇಕು...ಅವರು ಹತ್ತು ವಕ್ರ ಬರೆದರೂ ಫಿನಗೆ ತಲುಪಿದರಷ್ಟೇ ಫೀನು ಉತ್ತರಿಸುವುದು...ಅವಳು ಫಿನಗೆ ಸರಿಯೂದ ಜೋಡಿ....ಎಷ್ಟಾದರೂ ಪ್ರೀತಿಯ ಪತ್ನಿ" ಎಂದ ಪರೀಫ್.

"ಅವಳನ್ನೇ ವಿಚಾರಿಸುತ್ತೇನೆ'

"ಬೆಹೆನ್‌ಗೂ ತಂಜೆ-ತಾಯಿ- ಬಂಧು ಬಳಗ ನೋಡಬೇಕೆಂಬ ಆಸೆ ಇರಬಹುದ್ದು ...ಕೆಲದಿನ ರಜೆ ತೆಗೆದು ಕೊಂಡು ಏಕೆ ಬೊಂಬಾಯಿ ಗೆ ಖರಬಾರದು....ಫೀವಿಬ್ಬರು ಬಂದರೆ ಎಲ್ಲರಿಗೂ ಸಂತೋಷ'

"ಸರಿ ಪರೀಫ್'

'ಜಾಗಾದರೆ ಬೊಂಬಾಯಿಗೆ ಪ್ರಯಾಣ'

"ಯೋಚಿಸಬೇಕು'

"ಯೋಚಿಸುವುದು ಬೇಡ ಒಂದೆರಡು ದಿನಗಳಲ್ಲಿಯೇ ಹೊರಟುಬಿಡಿ. ಮುಂದಿನ ಭೇಟಿ ಬೊಂಬಾಯಿಯಲ್ಲಿಯೇ ಆಗಲಿ ....ಅಂದ ಹಾಗೆ ಒಂದು ವಾರ ಕಾಯುವುದಾದರೆ ನಾನೂ ಬರುತ್ತೇನೆ' ಎಂದ ಪರೀಫ್

'ಇಲ್ಲ ಪರೀಫ್ ಜಾಗ್ರತೆಯಾಗಿಯೇ ಹೊರಡುತ್ತೇವೆ"

"Correct Brother" ಎಂದ ಪರೀಫ್.

. ಗೆಳೆಯರಿಬ್ಬರೂ ಕಾರಿನ ಕಡೆಗೆ ನಡೆದರು.

೦ ೦ ೦ ೦

ರಜನಿ ಪತ್ರ ಮುಚ್ಚಿಟ್ಟ ಕಾರಣ ಗೋಪಿಗೆ ಮನಃಶಿಕ್ಷಯಾಯಿತು.ಮನದಲ್ಲಿ ಮೂಡಿದ್ದ ಸಂದೇಹ ಮರೆಯಾಗಿತ್ತು. "ಅನ್ಯಾಯವಾಗಿ ಅವಳ ಮನನೋಯಿಸಿದೆ; ಕೈ ಮೂಡಬಾರದಿತ್ತು—"ಎಂದು ಮರುಗಿದ ಗೋಪಿ.

ರಜನಿ ತಿರುಗಿತ್ತು ಮಂಚದ ಮೇಲೆ ಮಲಗಿದ್ದಳು.

ರಾಜಮ್ಮನವರಿಗೆ ಮಗನ ಒರಟುತನದಿಂದ ಕೋಪ ಬಂದಿತ್ತು.

ರಾಜಮ್ಮ ಮನೆಯ ಮುಂದಿನ ಹೂದೋಟದಲ್ಲಿ ಉಲ್ಲಾ ಬೆಂಚಿನ ಮೇಲೆ ಕುಳಿತಿದ್ದರು, "ಇದೀನೆನ್ನು ಇಷ್ಟಿ ಕೂತಿದ್ದೀಯೂ ಎನ್ನುತ್ತಲೇ ಗೋಪಿ ಒಳಕ್ಕೆ ಬಂದ.

"ನೀನು ಕಟುಕಿ ಕಣೋ. ಪಾಪ, ಆ ಹುಡುಗಿ ಕಣ್ಣೀರಿಡುತ್ತಾ ಮಲಗಿದೆ"

"ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸಬೇಕಮ್ಮ'

"ಸಾರ್ಥಕವಾಯ್ತಪ್ಪ'

"ನಾನು ಅವಳು ನಾತಿದ್ದು ಬೊಂಬಾಯಿಗೆ ಹೊರಡುತ್ತೇವಮ್ಮ"

"ಬುದ್ಧಿ ಸರಿಯಾಗಿದೆ ಏನೋ ಗೋಪಿ'

"ಹೂನಮ್ಮ" ಎಂದ ಗೋಪಿ ತಾಯಿಗೆ ಎಲ್ಲಾ ಸಂಗತಿಯನ್ನು ವಿವರಿಸಿದ.

'ಆಯ್ಯೋ ಪಾಪ' ಎಂದು ನೊಂದು ನುಡಿದರು ರಾಜಮ್ಮ.

'ವಿಷಯ ಗುಟ್ಟಾಗಿರಲಮ್ಮ. ಮುದ್ದು ಸೊಸೆ ಅಂತ ಗುಟ್ಟು ತಿಳಿಸಿದರೆ...'

"ಹೆಂಡಗು ಬುದ್ಧಿ ಬಿಡಲಿಲ್ಲವಲ್ಲೋ' ಗೋಪಿ' ಎಂದು ನಕ್ಕರು ರಾಜಮ್ಮ.

೦ ೦ ೦ ೦

ಗೋಪಿ ಹೆಚ್ಚಿನ ವ್ಯಾಸಂಗಕ್ಕೆ ಬೊಂಬಾಯಿಗೆ ತೆರಳಿದ್ದ. ವಸಕಿಯ ಅನಾಮಕೂಲತೆಯಿಂದ ತೊಳಲಾಡುತ್ತಿರುವಾಗ ದೂರದ ಬಂಧು ಈಶ ಮೂರ್ತಿಗಳವರ ಮನೆಯಲ್ಲಿ ಕೋಣೆ ದೊರೆಯಿತು. ಕೆಲ ದಿನಗಳಲ್ಲಿಯೇ ಗೋಪಿ ಅವರ ಮನೆಯ ವರಲ್ಲೊಬ್ಬನಾದ. ರಜನಿ ಕೇಶವಯ್ಯನವರ ಒಬ್ಬಳೇ ಮಗಳು.

ಗೋಪಿ—ರಜನಿ ಇವರಲ್ಲಿ ಬೆಳೆದ ಗೆಳೆತನ ಅವರ ವಿವಾಹದಲ್ಲಿ ಮುಗಿಯಿತು. ಅವರ ದಾಂಪತ್ಯ ಜೀವನ ಆರಂಭವಾಯಿತು.

ರಜನಿ ಪತಿಮನಸ್ಸಗಲಿ ಒಂದು ಕ್ಷಣವೂ ಇರಲಾರದಾಗಿದ್ದಳು. ಅವಳ ಪಾಲಿಗೆ ಗೋಪಿ ಸರ್ವಸ್ವ. ಪತಿಮನ್ನು ಬಿಟ್ಟು ಕ್ಷಣಕ್ಕೆ ಹೋಗಲಾರದೆ ತಂದೆ-ತಾಯಿಯವರ ಆಗ್ರಹಕ್ಕೆ ಗುರಿಯಾಗಿದ್ದಳು.

ರಜನಿಯ ಮನಸ್ಸನ್ನು ಗೋಪಿ ಪೂರ್ಣವಾಗಿ ಅರಿತಿದ್ದ. ಆದರೆ ರಜನಿ ತಂದೆ ಬರೆದಿರುವ ಪತ್ರ ಪತಿಯ ಮನಸ್ಸಿಗೆ ನೋವ್ಹುಂಟು ಮಾಡುವುದೆಂದು ಕೊಡದಿದ್ದಾಗ ಗೋಪಿ ವಿನಾಕಾರಣವಾಗಿ ಸಂದೇಹ ತಾಳಿ, ಒರಟಾಗಿ ವರ್ತಿಸಿದ್ದ.

೦ ೦ ೦

ರಜನಿಯ ಹೃದಯ ಹರಿದು ಹೋಗಿತ್ತು. ಎಷ್ಟು ತಡೆದರೂ ಕಣ್ಣೀರು ಹಂದಿ ಬರುತ್ತಿತ್ತು. ಭೂಮಿ ಬಾಯಿ ತೆರೆದು ನಂಗ ಬಾರದೆ ಎನ್ನುತ್ತಿತ್ತು ಅವಳ ಪೊಂದ ಹೃದಯ. ರಜನಿಯ ನೊಂದ ಮುಖವ ಫನ ಕಂಡೂ ಕಾಣದವನಂತೆ ಅವಳೊಂದಿಗೆ ಪ್ರಯಾಣ ಬೆಳೆಸಿದ್ದ ಗೋಪಿ.

ರೈಲು ಬೊಂಬಾಯಿಯ ಕಡೆಗೆ ವೇಗದಿಂದ ಸಾಗುತ್ತಿತ್ತು.

"ವೇಗದಿಂದ ಓಡುತ್ತಿದ್ದ ರೈಲಿನಿಂದ ಹಾರಿ ಬಿಡಲೆ' ಎಂದು ಯೋಚಿಸಿದಳು ರಜನಿ. ಅವಳ ಹೃದಯ ಭಯದಿಂದ ನಡುಗಿತು.

ಊಟದ ಕ್ರಮಗಳೆಷ್ಟಿವೆ?

ಅಲ್ಲಲ್ಲಿನ ಊಟದ ಪ್ರಕಾರಗಳನ್ನು ಶ್ರೀ ಸ್ವಾಮಿ ವಿವೇಕಾನಂದರು ಹೀಗೆ ತಿಳಿಸಿದ್ದಾರೆ:—

ಆರ್ಯರು ಊಟ ಮಾಡುವ ಸಮಯದಲ್ಲಿ 'ಪದ್ಮಾಸನ' ಹಾಕಿಕೊಂಡು ಒಂದು ಮಣೆಯ ಮೇಲೆ ಕುಳಿತುಕೊಳ್ಳುತ್ತಿದ್ದರು. ಒರಗಿ ಕೊಳ್ಳುವುದಕ್ಕೆ ಹಿಂದೆ ಒಂದು ಮಣೆ. ಊಟ ಮಾಡುವುದಕ್ಕೆ ಒಂದು ಬೀಳಾಹದ ತಟ್ಟೆಯನ್ನು ಒಂದು ಮಣೆಯ ಮೇಲೆ ಇಡುತ್ತಿದ್ದರು. ಈ ಅಭ್ಯಾಸ ಪಂಜಾಬ್, ರಾಜಪುತ್ರಸ್ಥಾನ, ಮಹಾರಾಷ್ಟ್ರ ಮತ್ತು ಗುಜರಾತಿನಲ್ಲಿ ಈಗಲೂ ಇದೆ. ಬಂಗಾಳಿ, ಒರಿಸ್ಸಾ, ಆಂಧ್ರರು ಮತ್ತು ಮಲೆಯಾಳಿಗಳು ಊಟದ ತಟ್ಟೆಯನ್ನು ಮಣೆಯ ಮೇಲೆ ಇಡುವುದಿಲ್ಲ. ಆದರೆ ಬದಲು ಬಾಳೆಯ ಎಲೆಗಳನ್ನು ಅಥವಾ ತಟ್ಟೆಯನ್ನು ನೆಲದ ಮೇಲೆ ಉಪಯೋಗಿಸುವರು. ನೈಷ್ಠರು ಮಹಾರಾಜರು ಕೂಡಾ ಹೀಗೆಯೇ ಮಾಡುವರು.

ಮಲೆಯಾಳೀಯರು ಊಟ ಮಾಡುವಾಗ ದೊಡ್ಡ ಬಳಸು ಬಟ್ಟೆಯ ನೆಲೆ ಕುಳಿತುಕೊಳ್ಳುವರು. ಬನಿರ್ಜಿಯರು ಮತ್ತು ಜಪಾನೀಯರು ಊಟದ ತಟ್ಟೆಯನ್ನು ನೆಲದ ಮೇಲಿಟ್ಟು ಮಂಡಿಯೂರಿ ಕುಳಿತುಕೊಂಡು ಊಟ ಮಾಡುವರು. ಚೈನಾದೇಶೀಯರು ಕುರ್ಚಿಯ ಮೇಲೆ ಕುಳಿತುಕೊಂಡು ಊಟ ಮಾಡುವರು ಮುಂದೆ ಊಟಕ್ಕೆ ಒಂದು ಮೇಜು ಇರುತ್ತದೆ. ಊಟದ ಸಮಯದಲ್ಲಿ ಚಮಚ ಮತ್ತು ಎರಡು ಕಡ್ಡಿಗಳನ್ನು ಉಪಯೋಗಿಸತ್ತಾರೆ ಹಿಂದಿನ ಕಾಲದಲ್ಲಿ ಗ್ರೀಕ್ ಮತ್ತು ರೋಮನ್ ಜನರು ಊಟ ಮಾಡುವುದಕ್ಕೆ ಮೇಜನ್ನೇ ಉಪಯೋಗಿಸುತ್ತಿದ್ದರು. ಕುರ್ಚಿಯ ಮೇಲೆ ಕುಳಿತುಕೊಂಡು ಕೈ ಬೆರಳುಗಳಿಂದಲೇ ಊಟ ಮಾಡುತ್ತಿದ್ದರು.

ಆದರೆ ಈಗ ಚಿಲಿ, "ಫೋರ್ಕ್" ಮುಂತಾದುವನ್ನು ಉಪಯೋಗಿಸುತ್ತಾರೆ. ಚೈನೀಯರು ರೀತಿ ಊಟ ಮಾಡುವುದು ಒಂದು ಕಸರತ್ತು. ಅದಕ್ಕೆ ತುಂಬಾ ಕುಶಲತೆ ಬೇಕು. ಹೇಗೆನವ್ಮ 'ಪಾನ್‌ವಾಲಾ'ಗಳು ವೀಳ್ಯೆದೆಲೆ ಮಡಿಸುವುದಲ್ಲ ಎರಡು ಕಡ್ಡಿಗಳನ್ನು ಉಪಯೋಗಿಸುವರೋ, ಹಾಗೆಯೇ ಚೈನಾ ದೇಶೀಯರು ಎರಡು ಕಡ್ಡಿಗಳ ಸಹಾಯದಿಂದ ತರಕಾರಿಯನ್ನು ಹಿಡಿದುಕೊಂಡು ಬಾಯಿಗೆ ರವಾನಿಸುವರು.

ಸಂಗ್ರಹ— ಶ್ರೀ ಸುರತ್ಕಲ್ ರಾಮಕೃಷ್ಣ ಪೆಬ್ಬಾರ್.

ಇದೀಗಲೇ ಸೊಸತಾಗಿ ತೆರೆಯಲ್ಪಟ್ಟಿದೆ.

ನೇತ್ರ ರಕ್ಷಣೆಗಾಗಿ— ನಿಮ್ಮ ಕಣ್ಣುಗಳ ಸೌಂದರ್ಯಕ್ಕಾಗಿ—

ಅತ್ಯಧುನಿಕ ಅಕರ್ಷಕ ವಿಧಾನ

ಕಾಂಟೆಕ್ಟ್ ಲೆನ್ಸ್ (Contact Lens)



Phone: 26144S

The only Qualified Optometrist of South

Shetty's Optics & Contact Lens Clinic

London Qualified Optometrists

೭೫' ಗನ್ ಬೊಸ್ಟ್ರೀಟ್, ಬಾಳುಪಾರ್‌ಗೇಟ್ ಸ್ಟೇಟ್‌ಬ್ಯಾಂಕ್ ಆಫೀಸಿನ ಎದುರು ಬೊಂಜಾಯಿ. ೧.

ಲಂಡನ್ ತರಬೇತಾದ ಹಾಗೂ ಜಗದ್ವ್ಯಾಪಿ ಅನುಭವಶಾಲಿ ನೇತ್ರ ತಜ್ಞರಿಂದ ನೇತ್ರ ಪರೀಕ್ಷೆ.

ದಕ್ಷಿಣ ಕನ್ನಡಿಗರಲ್ಲೇ ಮೊದಲಿಗರಾದ ಕಾಂಟೆಕ್ಟ್ ಲೆನ್ಸ್ ತಜ್ಞರು.

ಒಂದೇ ಲೆನ್ಸಿನಲ್ಲಿ ಪ್ರತ್ಯೇಕ ಪವರನ ೧೪ ಅದೃಶ್ಯ ಭಾಗಗಳುಳ್ಳ 'ಬೆಂಜಿಕ್ಸ್ ಲೆನ್ಸ್'ನ ತಜ್ಞರು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C 183/1967.

R. ನರಸಿಂಹ ಶೆಣೈ —ವಾದಿ.

ನುಳಂದ ಭಟ್ಟ —ಪ್ರತಿವಾದಿ

ಮುಕುಂದ ಭಟ್ಟ, ತಂಕಿ ಸಾರಾಯಣ ಭಟ್ಟ ಮಗ, ಕಾರ್ಕಳ ಕ್ಷೆಯಸ್ಥರಿರುವವ....

ಪ್ರತಿವಾದಿ ಅದ ನಿಮಗೆ ಈ ಮೂಲಕ ತಿಳಿಸುವದೇನಂದರೆ....

ನೀವೆ ತಾ. 12—6—1967ರಲ್ಲಿ ರೂ. 250ಕ್ಕೆ ವಾದಿಗೆ ಬರಕೊಟ್ಟಿರುವಂಥ ಪೈಸರ ನೋಟಿನ ಆಸಲು ಬಗ್ಗೆ ರೂಪಾಯಿ 296—00ಕ್ಕೆ ವಾದಿಯು ನಿಮ್ಮ ಮೇಲೆ ದಾಖ್ಲು ಮಾಡಿದ ಸಿ. ದಾ. ವೆ. ನಂ. 4—10—1967ಕ್ಕೆ ನಿಮಗೆ ಆಕ್ಷೇಪ ನೋಟೀಸಿಗೆ ಇಟ್ಟಿದೆ. ಆಕ್ಷೇಪ ಇನ್ನು ೨೧ ದಿನ ಬಿಟ್ಟಿಗೆ 10ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ಉತ್ತರವನ್ನು ಕೊಡತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ವಾದಿ ಕೇಸುನಡೆಸಲಾಗುವದು ಎಂತ ಕೋರ್ಟು ಹುಕ್ಕುಂ ಸ್ವಕಾರ ತಿಳಿಸುವದೆ.

K. S. Kamath

Advocate for Plff.

Karkala, 16—0—67.

NAVAYUGA 28—9—1967
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಸಾಹಿತಿ ಗಳಿಸಿದ

ಪ್ರಥಮ ಸಂಭಾವನೆ

ಬರೆದವರು :

ಶ್ರೀ ಎಚ್. ಎಂ. ನಾರಾಯಣ ಭಟ್

ಇದೊಂದು ಕಥೆಯಲ್ಲ. ನಡೆದ ಸಂಗತಿ. ರಮೇಶನು ತನ್ನ ಜೀವನ ಪ್ರಾರಂಭಿಸಿ ಹೆಚ್ಚು ವರ್ಷಗಳಾಗಿರಲಿಲ್ಲ. ವಿವಾಹವಾಗಿ ಕೇವಲ ನಾಲ್ಕು ವರ್ಷಗಳಾಗಿದ್ದವು. ಇದಕ್ಕು ರಮೇಶನ ವಿವಾಹವನ್ನು ಅಂಗೀಕರಿಸಿತೋ ಇಲ್ಲವೋ! ಫಲಿಸಿಯೊಂದಿಗೆ ರಮೇಶನು ರೂ. ೧೧೦ರ ಬಾಡಿಗೆಯ ಒಂದು ಕೊಠಡಿಯಲ್ಲಿ ಜೀವನ ನಡೆಸುತ್ತಿದ್ದ ಜೀವನದಲ್ಲಿ ಸಾಹಿತ್ಯವನ್ನೇ ಆರಾಧಿಸುವ ರಮೇಶನಿಗೆ ಕುಡಿಯಲು ಗಂಜಿ,ಉಡಲು ಬಟ್ಟೆ, ಸ್ವಂತ ಮನೆ, ಸಾಹಿತ್ಯ ಸೃಷ್ಟಿಗೆ ಬೇಕಾದ ಕಾಗದ...ಇತ್ಯಾದಿಗಳದೇ ಸಮಸ್ಯೆಗಳ ಕ್ಯೂ! ಏನೂ ಪರಿಣಾಮವಿಲ್ಲ, ಬಂಧುಗಳಾಗಲೀ ಸ್ನೇಹಿತರಾಗಲೀ ಸಹ ಪ್ರವರ್ತಕರಾಗಲೀ ಸಹಾಯಕ್ಕಿಲ್ಲ. ಒಂದು ಮುದಿ ಬೆಕ್ಕು ಮಾತ್ರವೇ ಅಡಿಗೆ ಪಾತ್ರೆಯ ಬಳಿಯಲ್ಲಿಯೂ ಚಾಪೆಯ ಬಳಿಯಲ್ಲಿಯೂ ಅಲೆಯುತ್ತಾ 'ಮಿಯೂಂ' ಶಬ್ದವೆಬ್ಬಿಸುತ್ತಾ ಸಕತಾಪ ವ್ಯಕ್ತ ಪಡಿಸುತ್ತಿದೆ.

ಅಕ್ಕಿ ಮತ್ತಿತರ ನಿತ್ಯೋಪಯೋಗಿ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಏರುತ್ತಿತ್ತು. ಜನ ಸಾಮಾನ್ಯರಿಗೆ ಎಟಕದಷ್ಟೂ ಎತ್ತರಕ್ಕೆ ಸಾಧನಗಳ ಬೆಲೆ! ರಾಜಕೀಯ ನಾಟಕವೂ ಸಂಸಾರ ನಾಟಕವೂ....ಇವೆರಡ ಸಮನ್ವಯವಾಗ "ಜೀವನ ಸಂಗ್ರಾಮ" ಎಂಬ ಹೆಸರ ಕಥೆಯನ್ನು ರಮೇಶ ಬರೆದು ಬೆಂಗಳೂರಿನ ಒಂದು ಜನಪ್ರಿಯ ಸಾಪ್ತಾಹಿಕಕ್ಕೆ ರವಾನಿಸಿದ.

'ಅವರೇನಾದರೂ ಸಂಭಾವನೆ ಕೊಡುವರೇ?..."—ನಳಿನಿ ಪ್ರಶ್ನಿಸಿದಳು. "ಕೊಡಲೂ ಸಾಕು...."

ಯಾರು ಹಸಿದಿದ್ದರೂ ಕಣ್ಣೀರಿನ ಹೊಳೆಯನ್ನೇ ಈ ಜಿದ್ದರೂ ಹೊಟ್ಟೆಪ್ಪನಿಗೇ ಅಂಟಿಕೊಂಡಿದ್ದರೂ ಹಸಿ ಗೆಣಸು, ಹಸಿಮೀನು, ತೆನೆಲಗಡಲೆ, ಹಸಿ ಸಪ್ಪು....ಇತ್ಯಾದಿಗಳನ್ನೇ ತಿಂದರೂ ತಿನ್ನದಿದ್ದರೂ ಕಾಲಚಕ್ರ ಉರುಳುತ್ತಲೇ ಇತ್ತು. ದಿನಗಳೂ ವಾರಗಳೂ ಕಳೆದವು.

ನಗೆಯಿಲ್ಲ. ಉತ್ಸಾಹವಿಲ್ಲ; ಆಟವಿಲ್ಲ. ಬರೆಯುವಿಕೆಯೂ ಇಷ್ಟು; ಓದುವಿಕೆಯೂ ಇಲ್ಲ....ಎಲ್ಲವೂ ಶೂನ್ಯ!

ದಂಪತಿಯರೀರ್ವರೂ ಆಶಕ್ತರಾಗಿ ಹಸಿದ ಹೊಟ್ಟೆಯ ಉಪವಾಸವನ್ನು ಶಪಿಸುತ್ತಿದ್ದರು. "ಊಟಕ್ಕಿಲ್ಲದವರು ವಿವಾಹವಾಗುವುದೇಕೆ?...." ಇಬ್ಬರಿಗೂ ಒಂದೇ ಪ್ರಶ್ನೆ! ಕೇಳುವುದಾರಲ್ಲಿ?

"ಅಮ್ಮಾ! ಸ್ವಲ್ಪ ಧರ್ಮ ಕೊಡಿ, ತಾಯೇ!...." —ಓರ್ವ ಭಿಕ್ಷುಕಿ ತನ್ನ ಬೆನ್ನ ನೋವೆಯೇ ಒಂದು ಮಗುವನ್ನು ಬಟ್ಟೆಯಲ್ಲಿಸಿ ಹೇರಿಕೊಂಡು ಬಾಗಿಲಿಗೆ ದುರು ಬಂದುನಿಂತಳು

ಕೈಸನ್ನೆಯಿಂದಲೇ 'ನಾಸ್ತಿ'ಯೆಂದಾಗ ಆ ಭಿಕ್ಷುಕಿ ಏನನ್ನೋ ಗೊಣಗುಟ್ಟುತ್ತಾ ನಡೆದಳು.

ನಿರ್ಧಾರ್ಯ ಪರಿಣಮಿಸಿತು. ಪೋಸ್ಟ್ ಮೇನ್! ಎಲ್ಲಿಂದ ಬಂತೋ ಉತ್ಸಾಹ! ನಳಿನಿ ಬೇಗನೆ ಎದ್ದು ಬಾಗಿಲ ಬಳಿಗೆ ಸರಿದಳು. ಒಂದು ಪತ್ರಿಕೆಯನ್ನೂ "ಕವರನ್ನೂ" ಕೊಟ್ಟು ಪೋಸ್ಟ್ ಮೇನ್ ಹೇಳಿದ್ದು, "ರಮೇಶರಿಗೊಂದು ಮನಿಯೂರ್ಡರೂ ಇದೆ" ಎಂದಾಗಿತ್ತು.

ಪೋಸ್ಟ್ ಮೇನ್‌ನ ಮಾತುಗಳನ್ನು ಮಲಗಿದಲ್ಲಿಂದಲೇ ಕೇಳಿದ ರಮೇಶ ವಿಚಾರಿಸಿದ:—

'ಎಷ್ಟು ರೂಪಾಯಿ?....ಎಲ್ಲಿಂದ?"

'ರೂ. 25....ಬೆಂಗಳೂರಿನಿಂದ"

ರಮೇಶ ಎದ್ದು ಪತ್ರಿಕೆಯನ್ನು ಬಿಡಿಸಿ ತನ್ನ ಕಲಾ ಸೃಷ್ಟಿಗಾಗಿ ಹುಡುಕಲಾರಂಭಿಸಿದಾಗ, 'ಸರ್! ಹೊತ್ಕಾಯ್ತು. ಈ ಫೋರ್ಮಿನಲ್ಲಿ ದಸ್ಕತು..."ಎಂದು ಪೋಸ್ಟ್‌ಮೇನ್ ಫೋರ್ಮು ನೀಡಿದ.

ರಮೇಶನಿಗೆ ರೂ. 25 ಲಭಿಸಿತು. ಅದನ್ನು ನಳಿನಿಯ ಕೈಗಿತ್ತು, ತಾನು ತನ್ನ 'ಕತೆ'ಯನ್ನೋದುವುದರಲ್ಲೇ ತಲ್ಲೀನನಾದ....ಕತೆಗೆ ಅನುಗುಣವಾದ ಒಂದು ಚಿತ್ರವನ್ನು ಪ್ರಕಟಿಸಲಾಗಿದೆ.

ತನ್ನ ಕತೆಯನ್ನೇ ಮೇಲಿಂದ ಮೇಲೆ ನೋಡಿ ರಮೇಶನು ಕವರನ್ನೆಳೆದು ಪತ್ರವನ್ನೋದುತ್ತಿದ್ದಂತೆ ಆಶಕ್ತ ಮುಖವು ಮುಕ್ತಸ್ಫು ಪ್ರಕಾಶಮಾನವಾಗುವುದನು ಗಮನಿಸಿದ ನಳಿನಿ ಸಮಿಪಿಸಿ ವಿಚಾರಿಸಿದಳು.

'ಸಂಪಾದಕರ ಅಭಿನಂದನಾ ಪತ್ರ.... ಇಂತಹ ಕಲಾಸೃಷ್ಟಿಗಳಿಗೆ ಸದಾ ಹಾರ್ದಿಕ ಸ್ವಾಗತವೆಂದೂ ಕೊನೆಯು ಪಾರಾದಲ್ಲಿ ಬರೆದಿದ್ದಾರೆ...."

ಸಂತೋಷಮಯ ವಾತಾವರಣ. ಉರ್ವರ ಮುಖಗಳಲ್ಲಿಯೂ ಆಹ್ಲಾದವು ತಾನಾಗಿ ಹುಟ್ಟಿತ್ತು.

ರಮೇಶನು ರೂ.೧೧೦ರ ಸಹಿತ ಸಮೂಹದ ಅಂಗಡಿಗೆ ತೆರಳಿದವನು ಮರಳುವುದರ ಮುನ್ನವೇ ನಳಿನಿ ಒಲೆ ಹೆಚ್ಚಿ ಏರಿಸಿದ್ದಳು.

ಅಕ್ಕಿ, ತರಕಾರಿ, ಕಾಫಿ ಪುಡಿ, ಬೆಲ್ಲ, ಎಣ್ಣೆ, ಸಂಬಾರ ಜೀನಸುಗಳ ಸಹಿತ ರಮೇಶನ ಆಗಮನವಾದೊಡನೆಯೇ ನಳಿನಿ ರುಚಿಕರವಾದ ಅಡಿಗೆ ಮಾಡಿದಳು.

ಸಾಹಿತ್ಯ ಸೃಷ್ಟಿ, ಕಲೆಯು ಉದ್ದೇಶ, ಪತ್ರಿಕೋದ್ಯಮ ಮುಂತಾದವುಗಳ ಕುರಿತು ಇಬ್ಬರೂ ಉತ್ಸಾಹದ ಮಾತುಕತೆಗೆ ಪ್ರಾರಂಭಿಸಿದ್ದಾರೆ.

ಇಬ್ಬರೂ ಸಂತೃಪ್ತ ಭೋಜನ ಮಾಡಿದರು. ಆ ಊಟದ ರುಚಿ! ಅದರ ಬಗ್ಗೆ ನವ್ಯ ಸಾಹಿತ್ಯಕ್ಕೆ ರಮೇಶನಿಗೆ ಮತ್ತೂ ಸ್ಫೂರ್ತಿಯುಂಟಾಯಿತು.

ವಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

(Letter Writing Made Easy)

ವಿವಿಧ ಸಪ್ರಯೋಜನಕಾರಿ ಮಾದರಿಗಳೊಂದಿಗೆ

ಬೆಲೆ: ರೂ. 1-25 (ಟ.ಖ. ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ - ಮದ್ದು

(Home-Remedies)

ನೂರಾರು ರೋಗಿಗಳಿಗೆ ಮನೆಯಲ್ಲೇ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹಸ್ಥೈದ್ಯ.

ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಸ್ವರಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಬಲೀರಾ ?

೧

ಬಿಸಿ ನೀರಿನಲ್ಲಿ ಅದ್ದಿದ ಜಾಗರಿಯಿಂದ ಸುಲಭವಾಗಿ ಬ್ರೆಡ್ಡನ್ನು ತೆಳುವಾಗಿ ತುಂಡು ಮಾಡಬಹುದು.

೨

ಕುದಿಯುವ ನೀರಿನಲ್ಲಿ ತೆಂಗಲನ್ನು ಸ್ವಲ್ಪ ಹೊತ್ತು ಬಿಸಿ ಮಾಡಿದರೆ ಅದು ಈಗ ತಾನೆ ಮಾಡಿದ ಅನ್ನದಂತೆ ಉಪಯೋಗಕ್ಕೆ ಬರುವುದು.

೩

ನಿಂದೆ ಹಣ್ಣಿನ ರಸವನ್ನು ಹಿಂಡಿದ ನೀರಿನಲ್ಲಿ ಹಳಸಿದ ಹಳದಿ ಕರಕಾಯಿಯನ್ನು ಅದ್ದಿ ತೆಗೆದರೆ ಅದು ಉತ್ತಮ ತರಕಾರಿಯಾಗುತ್ತದೆ.

೪

ಒಣಗಿದ ಬೈಹುಲ್ಲನ್ನು ಎರಡು ದಿನಗಳಷ್ಟು ಹಗಲಿಗೆ ಇಟ್ಟು ನೋಡಿ, ಪುನಃ ಮೃದುವಾಗುವುದು.

೫

ಜಿಗಣೆ ಕಚ್ಚಿದಾಗ ಸ್ವಲ್ಪ ಸುಣ್ಣವನ್ನು ನೀರು ಮಾಡಿ ಹಚ್ಚಿದರೆ ಕೂಡಲೇ ಬಿಡುತ್ತದೆ.

೬

ಕರಬೇವಿನ ಸೊಪ್ಪನ್ನು ಕಡ್ಡಿಯಿಂದ ಬೇರೆ ಮಾಡಿ, ಒಂದು ಚಾ ಚಮಚೆ ಉಪ್ಪಿನೊಡನೆ ಒಂದು ಸೀಸೆಯಲ್ಲಿ ಹಾಕಿಟ್ಟರೆ ನಾಲ್ಕು ದಿವಸಗಳವರೆಗೆ ಕೆಡದೆ ಇಡಬಹುದು.

೭

ಸುಟ್ಟ ಗಾಯಕ್ಕೆ ತಕ್ಷಣ ಜೇನು ತುಪ್ಪವನ್ನು ಸವರಿ ನೋಡಿ ಬೊಕ್ಕೆಗಳು ಏಳುವುದಿಲ್ಲ.

೮

ಚಟ್ನಿಪುಡಿಯಷ್ಟು ನೋಡಿ ಹುಡಿ ಕಾಫಿ, ಟೀ ಮಾಡುವಾಗ ಬಳಸಿ ನೋಡಿ ಪಾತ್ರೆಯಗಳ ಬದಲಾದ ಬಣ್ಣವನ್ನು ಹಾಗೂ ರುಚಿಯನ್ನು.

—ಪಿ. ವಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

NAVAYUGA

5—10—1967

೧೦ ಪೈಸೆ

ಕಥಾ ಪ್ರಪಂಚ

ಕನಸೊಡೆಯರು

ಬರೆದವರು: "ಮಲ್ಲಾರಿ"

ಹನ್ನೆರಡಾಗಿ ಹತ್ತು ನಿಮಿಷಗಳು ಕಳೆದಿವೆ. "ಹನ್ನೆರಡು ಗಂಟೆಗೆ ಮೊದಲೇ ಬರುವ ಅವರು ಇಂದು ಇಷ್ಟು ಹೊತ್ತಾದರೂ ಬರಲಿಲ್ಲವೇಕೆ? ಅಡಿಗೆ ಮಾಡಿ, ಮಾಡಬೇಕಾದ ಕೆಲಸಗಳನ್ನೆಲ್ಲಾ ಮಾಡಿ ಮುಗಿಸಿಯೂಆಗಿದೆ. ಏನಾದರೂ ಓದೋಣವೆಂದರೆ ಒಂದು ಒಳ್ಳೆಯ ಕಾದಂಬರಿಯೂ ಇಲ್ಲ. ಏನು ಮಾಡುವುದು ಬೇಸರ.....' ಎನ್ನುತ್ತಾ ಸುನಂದ, ಒಮ್ಮೆ ಓದಿದ್ದ 'ಸುಧಾ' ಪತ್ರಿಕೆಯನ್ನು ಮತ್ತೆ ತಿರುವಿ ಹಾಕಿದಳು. ಆದೂ ಬೇಸರವಾಯಿತು. ಎದ್ದು ಮಲಗುವ ಕೋಣೆಗೆ ನಡೆದಳು. ಅಲ್ಲಿ ಮೂಲೆಯಲ್ಲಿ ಒಂದರ ಮೇಲೊಂದು ಪೆಟ್ಟಿಗೆಗಳನ್ನು ಏರಿಸಿದ್ದರು. ಅದರಲ್ಲಿ ತನ್ನ ತವರು ಮನೆಯಲ್ಲಿ ಕೊಟ್ಟ ಪೆಟ್ಟಿಗೆಯನ್ನು ಕೆಳಗಿಳಿಸಿ ತೆರೆದಳು. ಅದರಲ್ಲಿ ತನ್ನ ತವರು ಮನೆ ಸೀರೆಗಳು, ಗಂಡನ ಮನೆಯಲ್ಲಿ ಕೊಟ್ಟ ಸೀರೆಗಳು, ಉಡುಗರೆಯಾಗಿ ಬಂದ ಅನೇಕ ಬೆಳ್ಳಿಯ ಸಾಮಾನುಗಳು ಇದ್ದವು; ಮೇಲೆ ಅನೇಕ ಪತ್ರಗಳಿದ್ದವು. ಅದರಲ್ಲಿ ಒಂದನ್ನು ಕೈಲೆತ್ತಿ ಬಿಚ್ಚಿ ಓದತೊಡಗಿದಳು.

"ಚಿ. ಸುನಂದಾಗೆ, ಆಶೀರ್ವಾದಗಳು.

ಇಲ್ಲಿ ನಾವೆಲ್ಲಾ ಕ್ಷೇಮ. ನಿಮ್ಮಲ್ಲಿ ಎಲ್ಲರ ಕ್ಷೇಮ ಸಮಾಚಾರಕ್ಕೆ ಪತ್ರಿಸುತ್ತೀಯೆಂದು ನಂಬಿದ್ದೇನೆ. ಬಹು ದಿನಗಳಿಂದ ನಿನಗೆ ಪತ್ರ ಬರೆಯಬೇಕೆಂಬಾಸೆಯನ್ನು ಕಾಡುತ್ತಿತ್ತು. ಈಗ ಕೈಗೂಡಿದೆ. ಈ ಪತ್ರವನ್ನು ಬರೆಯುವ ಮೊದಲು ಹಿಂದಿನ ಕೆಲವು ಸವಿ-ಳಿಳಿಗಳನ್ನ ನೆನಸುತ್ತೇವೆ. ಆ ಳಿಳಿಗಳ ನಾನು ಚರ ಖಿ. ಣಿ, ಪತ್ರವನ್ನ ಓದುತ್ತಿದ್ದಂತೆ ಸುನಂದಾಳಿಗೆ ಹಿಂದಿನ ಘಟನೆಗಳು ಅಲೆ ಅಲೆಯಾಗಿ ಅವಳ ಮನದಲ್ಲಿ ತೇಲಿತು.

"ಸುನಂದಾ—ಹೊತ್ತಾಯ್ತು ಕೂಡಮ್ಮ. ನೀನು ಇಷ್ಟು ನಿಧಾನವಾಗಿ ನಡೆದರೆ, ನಾವು ಮನೆ ಕಾಣುವ ಹೊತ್ತಿಗೆ ರಾತ್ರಿಯಾಗುತ್ತೆ, ಬೆಟ್ಟದ ಮೇಲೆ ಕಾರ್ತೀಕ ಬೇರೆ ಇಟ್ಟು ಕೊಂಡಿದ್ದಾರೆ. ಎಲ್ಲರೂ ಕಾದಿರುತ್ತಾರೆ"

"ನೀವು ಮುಂದೆ ಹೋಗಿ—ನಾನು ಹೀಗೆ ಹೊಪ್ಪುಕೊಂಡು ಬಂದು ಮಾನಸಿಗೆ ತೋರಿಸಿ ಬೇಕು. ಜೋರಾಗಿ ನಡೆದರೆ ಬುಟ್ಟಿ ಬಿದ್ದ ಹೋಗುತ್ತೆ. ನೀವು ಧೈರ್ಯವಾಗಿ ಹೊರಡಿ. ನನಗೆದಾರಿ ಗೊತ್ತಿದೆ...."

ಸುಂದರಮ್ಮ ಮನಸ್ಸಿಲ್ಲದಿದ್ದರೂ ಯತ್ನವಿಲ್ಲದೆ ಮುಂದೆ ಹೆಜ್ಜೆ ಹಾಕಿದಳು. ಸುನಂದ ಸುತ್ತಲೂ ನೋಡುತ್ತಾ ನಿಧಾನವಾಗಿ ನಡೆದು ಬರುತ್ತಿದ್ದಳು. ಕೆರೆಯಅಡಿಯಿಂದ ತಣ್ಣನೆ ಗಾಳಿ ಬೀಸುತ್ತಿತ್ತು. ಆ ರಳಿಯು ಮಂದ ಚಿಗುರೆಲೆಗಳು ಸಂಜೆಯ ಬಿಸಿಲಿನಲ್ಲಿ ಥಳ-ಥಳನೆ ಹೊಳೆಯುತ್ತಾ ಬಳುಕುತ್ತಿದ್ದವು. ಕೊಯ್ಯುವ ವರ ಕೈಗೆಟುಕದೆ ಮರೆಯಲ್ಲಿ ಅಪಹಿತ್ತ ಪಾದರೀ ಹೂಗಳು ವಾಸನೆಯನ್ನ ಸುತ್ತಲೂ ಬೀರುತ್ತಿದ್ದವು. ಮೂವಿನ ಗಿಡದಲ್ಲಿ ಸಣ್ಣ ಹೀಜುಗಳು ನೇತಾಡುತ್ತಿದ್ದವು. ಅವನ್ನೆಲ್ಲಾ ನೋಡಿ ಸುನಂದ

'ಏನು ಸೊಗಸಾಗಿದೆ ಈ ನೋಟ...! ಇಂಥಾ ದೃಶ್ಯ ಎಲ್ಲಿ ಸಿಗಬೇಕು....?' ಎಂದು ಕೊಂಡಳು.

ಸುನಂದ ಸುಂದರವಾದ ಹುಡುಗಿ. ಮರಗಳ ಸಂದಿನಿಂದ ಹೊರಿ ಬರುತ್ತಿದ್ದ ಸೂರ್ಯನ ಕೊನೆಯ ಕಿರಣಗಳು ಅವಳ ಕೆನ್ನೆಗಳ ನೇಲೂ, ಉಬ್ಬಿದ್ದ ಗುಲಾಬಿ ಬಣ್ಣದ ಸೀರೆಯ ಮೇಲೂ ಬಿದ್ದು—ಇನ್ನೂ ಕೆಂಪಾಗಿ ಕಂಡಿತು. ಅದರ ಛಾಯೆ ಅವಳ ಮುಖದ ಮೇಲೂ ಬೀಳುತ್ತಿತ್ತು. ಹತ್ತಿರದ ಬೆಟ್ಟದಲ್ಲಿ ಸಂಜೆಯ ಮಂಗಳಾರತಿಗೆ ಜಾಗಟೆಯನ್ನ ಬಡಿದರು. ಆ ವೇಳೆಗೆ ಅವಳಿಗೆ ತಲೆಯ ಮೇಲೆ ಬುಟ್ಟ ಇದ್ದದ್ದು ಮರೆತು ಹೋಗಿತ್ತೋ ಆಥವಾ ಕೈ ಜಾರಿತೋ—ಬುಟ್ಟಿ ಧಡಾರನೆ ಕೆಳಗೆ ಬಿದ್ದು, ತೊಳೆದಿದ್ದ ಪಾತ್ರೆಗಳೆಲ್ಲಾ ಥಳಿ ನಲ್ಲಿ ಉರುಳಾಡಿದವು.

ಹಿಂದೆ ಯಾರೋ ಗಟ್ಟಿಯಾಗಿ ನಕ್ಕಂತಾಯಿತು. ಸುನಂದಾಗೆ ನಾಚಿಗೆಯಾಯಿತು, ಸಿಟ್ಟು ಬಂತು. ಗಾಬರಿಯಿಂದ ತಿರುಗಿ ನೋಡಿದಳು. ಕೈಲಿ ಸೂಟ್ ಕೇಸ್ ಹಿಡಿದ ವ್ಯಕ್ತಿ; ಅವಳು ಪಾತ್ರೆಗಳನ್ನ ಬುಟ್ಟಿಗೆ ಎತ್ತಿಹಾಕುತ್ತಿದ್ದನ್ನ ನೋಡಿ ನಗುತ್ತಾ ನಿಂತಿದ್ದ. ಅವನು ಆಗ ತಾನೆ ರೈಲಿನಿಂದಿಳಿದು, ಆ ದಾರಿಯಲ್ಲಿ ಬರುತ್ತಿದ್ದ. ಸಂಜೆ ನೆಂಪಿನಲ್ಲಿ ರಂಜಿಸುತ್ತಾ ಬಳುಕಿ ಬರುತ್ತಿದ್ದ, ಅವಳ ನಿಲುವು ಅವನ ಗಮನವನ್ನು ಆ ಕಡೆ ಎಳೆಯಿತು. ಅಭ್ಯಾಸವಿಲ್ಲದೆ ಸೊಟ್ಟ ಸೊಟ್ಟಾಗಿ ಇಟ್ಟುಕೊಂಡಿದ್ದ ಆ ಕೋಮಲೆ ಅವನನ್ನ ಆಕರ್ಷಿಸಿದಳು.

'ಇನ್ನೇನು ಆ ಬುಟ್ಟಿ ಬಿದ್ದು ಬಿಡುವುದು!' ಎಂದು ಅವನು ಎಣಿಕೆ ಹಾಕುವಷ್ಟರಲ್ಲಿ ಅದು ಬೀಳುವುದಕ್ಕೂ ಸರಿಯಾಗಲು ನಗು ಅವನ ಅಂಕೆಗೆ ಸಿಲ್ಲದೆ ಹೊರ ಬಂದಿತ್ತು.

ಹತ್ತಿರದಲ್ಲೇ ನೀರು ಹೊತ್ತುಕೊಂಡು ಹೋಗುತ್ತಿದ್ದ ಒಬ್ಬ ಮುದುಕಿ ಅವಳ ಕಡೆ ನೋಡುತಾ; 'ಪಾಪ! ಪಟ್ಟಣವಾಸದ ಹುಡುಗಿ—ಚೆಂಡಾಡುವ ಹಾಗೆ ಎಂದು ಕೊಂಡಳೇನೊ! ಗಡಿಸೂರ ಕಟ್ಟುವ ಕೈ ಭಾರ ಹೊತ್ತೀತೆ....?"ಎಂದಳು.

ಸುನಂದೆಯ ಮುಖ ಕೆಂಪಾಯಿತು. ಆದಿನ ಬೆಳಿಗ್ಗೆ ಮನೆಯ ಒತ್ತಿಲಿನಲ್ಲಿ ರವಿಯೊಡನೆ ಜೆಂಡಾಡುತ್ತಿದ್ದುದು ನೆನಪಾಯಿತು. ಹಂಗಿಸಿದ ಮುದುಕಿ ಅತ್ತಿಗೆಯ ಮಗನ ಜೊತೆಯಲ್ಲಿ ಚೆಂಡಾಡುತ್ತಿದ್ದನ್ನ ಎಲ್ಲೋ ಬೀದಿಯಿಂದಲೇ ನೋಡಿರಬೇಕು. ತಾನು ಯಾವ ವಯಸ್ಸಿನಲ್ಲಿ ಅತ್ತೆಯ ಮನೆಯ ಕೋಟಲೆಯನ್ನ ಸಹಿಸಿಕೊಂಡು ಸಂಸಾರ ಮಾಡುತ್ತಾ ದಿನವನ್ನ ಕಳ್ಳುತ್ತಿದ್ದಳೊ— ಆ ವಯಸ್ಸಿನ ಹುಡುಗಿ ಹಕ್ಕಯಂತೆ ಹಾಡುತ್ತಾ—ಕುಣಿಯುತ್ತಾ .... ಆ ಟ ವಾ ಡು ತ್ತಿ ದ್ದ ನ್ನ ನೋ ಡಿ, ಅಂದಿದ್ದಳು, ಆ ಮುದುಕಿ. ಸುನಂದಾಗೆ ಮುದುಕಿಯ ಮೇಲೆ ಹಿಡಿಸದಷ್ಟು ಕೋಪ ಬಂತು. ಅವಳೊಡನೆ ಬೀದಿಯಲ್ಲಿ ಜಗಳಕ್ಕೆ ನಿಂತರೆ ಮೊದಲೇ ನಕ್ಕವನು ಮಕ್ಕಷ್ಟು ನಗ ಬಹುದೆಂದು ಕೊಂಡು ಸುಮ್ಮನಾದಳು. ಕೋಪವೆಲ್ಲಾ ನಕ್ಕವನ ಕಡೆ ತಿರುಗಲು ಉರಿಗಣ್ಣಿಗಳಿಂದ ಅವನ ಕಡೆ ದೃಷ್ಟಿ ಹರಿಸಿದಳು. ಅವನು ದೃಢ ಕಾಯನಾದ ತರುಣ, ಯೌವನ ರೂಪ ರೇಖೆಗಳು ಮುಖದ ಸೌಂದರ್ಯವನ್ನ ಹೆಚ್ಚಿಸಿತ್ತು.

ಸುನಂದ ಅವನ ಕಡೆ ನೋಡಿದ ಕೂಡಲೇ ಅವನು ವಿನಯದಿಂದ ಮುಂದೆ ಬಂದು—

'ನಾನು ಸಹಾಯ ಮಾಡಲೇ—?' ಎಂದು ಕೇಳಿದ. ಸುನಂದ ಬಗ್ಗಿ ಪಾತ್ರೆಗಳನ್ನ ಒಂದೊಂದಾಗಿ ಬುಟ್ಟಿಗೆ ತುಂಬುತ್ತಿದ್ದವಳು ತಲೆ ಎತ್ತದೆ—

"ಇಲ್ಲಿ ಯಾರ ಸಹಾಯವೂ ಬೇಕಿಲ್ಲ" ಎಂದು ಒರಟಾಗಿ ನುಡಿದಳು.

ಸುಂದರಮ್ಮ ಇನ್ನೂ ಬಹಳ ದೂರ ಹೋಗಿರಲಿಲ್ಲ, ಮೂಲೆಯನ್ನು ತಿರುಗುವಷ್ಟರಲ್ಲಿದ್ದಾಗ ಒಂದು ಕಲ್ಲು ಹಿಂದಕ್ಕೆ ನೊಡಿದಳು. ಕೂಡಲೇ ಬೇಗ ಬಂದು ಅವನ್ನ ಸವಧಾನ ಪಡಿಸುತ್ತಾ—

"ಹೋಗಲಿ ಬಿಡು ಸುನಂದ, ಮನೆಗೆ ಹೋಗಿ ಇನ್ನೊಂದು ಪಲ ತೊಳೆದರಾಯಿತು. ನಡೆ, ಮನೆಗೆ ಹೋಗೋಣ' ಎಂದಳು.

ಸುನಂದ ಬಗ್ಗಿಕೊಂಡೇ—

"ಬಹಳ ದೊಡ್ಡ ಮನುಷ್ಯರು ಕಣ್ರೀ ಸುಂದರಮ್ಮ—ನಿಮ್ಮೂರಿನವರು! ನಗುವುದಕ್ಕೆ ಇಲ್ಲಿ ಏನು ಆಶ್ಚರ್ಯವಿತ್ತೋ' ಎಂದಳು.

"ಯಾರು ನಕ್ಕವರು...?'

"ಯಾರೋ— ನನಗೇನು ಗೊತ್ತು! ಅಲ್ಲಿ ನೋಡಿ!' ಸುನಂದ ಅವನನ್ನ ತೋರಿಸಲು ತಲೆ ಎತ್ತಿದಳು, ಆದರೆ ಅವನಾಗಲೇ ಮುಂದೆ ಹೋಗುತ್ತಿದ್ದ. ಸುಂದರಮ್ಮ—'ಯಾರೋ ನಮ್ಮೂರೋರಾಗೆ ಕಾಣಿಸ್ಲಿಲ್ಲ ಕಣೇ—ಸುನಂದಾ...ಕೈಲಿ ಸೂಟ್‌ಕೇಸ್ ಬೇರೆ ಇದೆ. ರೈಲಿನಿಂದ ಬಂದರಬೇಕು. ನಕ್ಕರೆ ನಗಲಿ ನಮಗೇನು ನಷ್ಟ? ಹೋಗೋಣ ಬಾ" ಎಂದಳು.

'ಸುಂದರಮ್ಮ—ಇನ್ನೊಂದು ಸಲ ಪಾತ್ರೆ ತೊಳೆಯುವಂತಾಯಿತು ಬಿಡಿ! ನಾನೇ ಬೇಗ ಕರೆಗೆ ಹೋಗಿ ತೊಳೆದು ತರುತ್ತೇನೆ ಬಿಡಿ....'

'ಬೇಡವ್ಮ ಹೊತ್ತಾಯಿತು. ಮನೆಯಲ್ಲೇ ತೊಳೆದಂತಾಯಿತು ಸುನಂದಾ ... ಅಮ್ಮ ಅಲ್ಲಿಪ ಬೆಟ್ಟಕ್ಕೆ ಹೋಗಲು ಹೊತ್ತಾಗುತ್ತೆ ಬಿಸ್ಲೆ....!

"ಬೆಟ್ಟ, ಏನಲ್ಲಿ...? ಈ ದಿನ?"

"ಅದೇ ಈ ಬೆಟ್ಟದಲ್ಲಿ ಪ್ರತಿ ಕಾರ್ತೀಕ ಮೊಸದಲ್ಲಿ ಪ್ರತಿಯೊಬ್ಬರು ಮನೆಯವರು ಒಂದೊಂದು ದಿನ ಕಾರ್ತೀಕ ಮಾಡಿಸುತ್ತಾರೆ. ಈ ದಿನ ನಮ್ಮ ಮನೆಯದು. ಎಲ್ಲರೂ ಮಂಗಳಾರತಿ ಹೊತ್ತಿಗೆ ಹೊಗೋಣವೆನ್ನುತ್ತಿದ್ದರು.'

'ಸುಮ್ಮ ನಿರಿ. ನನ್ನಿಂದ ಹೊತ್ತಾಯಿತೆಂದು ಹೇಳುತ್ತೇನೆ. ಬೇಗೂ ತಪ್ಪಿಸಿಕೊಳ್ಳದೇ....!"

ಸುಂದರಮ್ಮ, ಸುನೆಂದೆಯೂ ಮನೆಗೆ ಬರುವ ಹೊತ್ತಿಗೆ ಎಲ್ಲರೂ ಬೆಟ್ಟಕ್ಕೆ ಹೊರಟು ನಿಂತಿದ್ದರು. ಸುಂದರಮ್ಮನವರ ತಂದೆ ಬಾಲಿನಲ್ಲಿ ಕುಳಿತಿದ್ದವರು—

ಏಕೆ ತಾಯಿ—ಇಷ್ಟು ಹೊತ್ತಾಯಿತು ...? ನಾನು ನೋಡಿಕೊಂಡು ಬರೋಣವೆಂದು ಯೋಚಿಸುತ್ತಿದ್ದ ಅಷ್ಟರಲ್ಲೇ ನೀವು ಬರುತ್ತಿರುವುದು ಕಾಣಿಸಿತು.' ಎಂದರು.

ಹುಡುಗಿಯರಿಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು ನಕ್ಕರು. ಸುನಂದ ಮುಂದಾಗಿ ಬಂದು-"ಕಷ್ಟವನ್ನದಲ್ಲ. ನಿಮ್ಮಿಂದ ಕೆರೆಯನ್ನು ಅಲ್ಲಿಂ

(ಹನ್ನೊಂದನೇ ಪುಟ ನೋಡಿರಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಮನಮೆಚ್ಚುವ ಸರ್ವ ಸೌಕರ್ಯಗಳಿಂದೊಡಗೂಡಿದ
ವಸತಿ ಗೃಹ

ಹೊಟೆಲ್ ಶಿವಪ್ರಸಾದ

ಫೋನ್: 77 ಕುಂದಾಪುರ, ದ. ಕ.

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ವಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

47ನೇ ವರ್ಷ
Telephone 226.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ದ. ಕನ್ನಡ.

++

ಸ್ಥಾಪನೆ: 1921
ಸ್ಥಾಪಕರು
ದಿ। ಎ. ಬಿ. ಶೆಟ್ಟರು.
ಸಂಚಾಲಕ—ಸಂಪಾದಕ
ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ಪೆಚ್ಚು ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೫

++

ಜಾಹೀರಾತು ದರಗಳು:
ಆನಿಯಮಿತ (ಕೆಜುಪಲ್)
ಕಲಂ ಸೆಂಟಿಮೀಟರಿಂಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿಂದಥದಿಂದ ಕೂಡಿರಬೇಕು. ಖಾಲಿ ತಾವಿನ ಸ್ಥಳಾವಕಾಶ ಇಂದೇ ಬಗ್ಗುಲಲ್ಲಿ ಬರೆಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಭಿಪ್ರಾಯ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಹಣವನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಕಮಿಷನ್ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ವಿಶ್ವವಿಖ್ಯಾತ ಭಾರತೀಯ ಸಿತಾರ್ ಕಲಾವಿದ ಶ್ರೀ ರವಿಶಂಕರರು ಬುಡಾಪೆಸ್ಟ್‌ನ್ನು ಸಂದರ್ಶಿಸಿದರು. ಅವರಿಗಲ್ಲಿ ಹಾರ್ದಿಕ ಸ್ವಾಗತ ದೊರೆಯಿತು. ಅವರ ಕಲಾ ಚಾತುರ್ಯಕ್ಕೆ ಅಲ್ಲಿನವರು ತಲೆದೂಗಿದರು.

ನವಯುಗ

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೫	೫—೧೦—೧೯೬೨	No. 5

ಕಾಯಾಕಲ್ಪ

ಬಂಗಾಳ ರಾಜ್ಯದಲ್ಲಿ ಕಾಂಗ್ರೆಸ್ಸು ಏಕೆ ಸೋಲ ಬೇಕಾಯಿತು ಎಂಬ ಪ್ರಶ್ನೆಯನ್ನು ಆಮೂಲಾಗ್ರ ಪರಿಶೀಲಿಸಿ ಸೂಕ್ತ ಕ್ರಮ ಸೂಚಿಸಲು ಮಾಜಿ ಕೇಂದ್ರ ಮಂತ್ರಿ ಸುಚೇತಾ ಕೃಪಲಾನಿ ನಂದಾರವರು ಹೋದರು. ಅವರನ್ನು ಕಳಿಸಿದ್ದು ಕಾಂಗ್ರೆಸ್ ಕಾರ್ಯಕಾರಿಣಿಯೇ. ಹೀಗೆಯೇ ಕಾಂಗ್ರೆಸ್ ಸೋಲುಂಡ ಬೇರೆ ಬೇರೆ ರಾಜ್ಯಗಳಿಗೂ ನಿರೀಕ್ಷಕರು ಹೋಗಿ ಅಧ್ಯಯನ ಮಾಡಲಿದ್ದಾರೆ. ವರದಿ ಸಲ್ಲಿಸಲಿದ್ದಾರೆ. ಅದೇನು ಪಶ್ಚಿಮ ಬಂಗಾಳ ಕಾಂಗ್ರೆಸ್ಸಿನ ಸುದೈವವೋ ದುರ್ದೈವವೋ ಆ ಬಿನ್ನ ರಾಜಕೀಯ ಪರಿಸ್ಥಿತಿಯು ಒಂದು ರೀತಿ ಡೋಲಾಯಮಾನವಾಗಿದೆ; ಇದರಿಂದಲೇ ನಂದಾರು ಹೆಚ್ಚು ಹಡ ಮಾಡಲಿಲ್ಲ. ನಂದಾ ತನಗಿರುವ ಇಲ್ಲದಿರುವ, ಎರವಲು ಪಡೆದ ಎಲ್ಲ ತರದ ಅಧಿಕಾರಗಳನ್ನೂ ಉಪಯೋಗಿಸಿ ಅಲ್ಲಿನ ಕಾಂಗ್ರೆಸಿಗೆ ಕಾಯಾಕಲ್ಪ ಚಿಕಿತ್ಸೆಯಾಗಬೇಕು; ಅದಕ್ಕಾಗಿ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯನ್ನು ರದ್ದು ಮಾಡಿ ಅಡ್-ಹಾಕ್ ಸಮಿತಿಯನ್ನು ರೂಪಿಸಬೇಕು ಎಂದು ಕ್ರಾಂತಿಯ ಕಹಳೆಯನ್ನೇ ಊದಿದರು.

ಪಶ್ಚಿಮ ಬಂಗಾಳದ ಹಲವು ಅತ್ಯುತ್ಸಾಹಿ ಘೋಷ್: ಇವರು ಎ ಐ ಸಿ ಸಿ ಯ ಕೋಶಾಧಿಕಾರಿ ಬೇರೆ. ಶ್ರೀಮತಿ ಇಂದಿರಾ ಗಾಂಧಿ ಯವರನ್ನು ಪ್ರಧಾನ ಮಂತ್ರಿಯಾಗಿ ಮಾಡುವಲ್ಲಿಯೂ ಇವರ ಕೈವಾಡ ತುಂಬ ಹೆರಡಿದ್ದುದನ್ನು ಯಾರೂ ಮರೆಯಲಾರರು. ಈಗೈ ಹಲವು ವರ್ಷಗಳಿಂದ ಅತುಲ್ಯ ಘೋಷರು ಪ್ರಾದೇಶಿಕ ಕಾಂಗ್ರೆಸ್ಸನ್ನು ತನ್ನ ಮುಷ್ಟಿಯಲ್ಲಿಟ್ಟುಕೊಂಡು ತನ್ನ ಮನಸ್ಸಿಗೆ ಬಂದಂತೆ ಕಾರ್ಯಕ್ರಮ ಕೈಗೊಳ್ಳುತ್ತಿದ್ದುದಕ್ಕೆ ಅಜಯ ಮುಖರ್ಜಿಯವರನ್ನು ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನದಿಂದ ಅವಿಶ್ವಾಸ ಗೊತ್ತುವಳಿಯ ಮೂಲಕ ಇಳಿಸಿದುದೇ ಸಾಕ್ಷಿ. ಪೂರ್ಣವೇ ಬಲವಕ್ಕರ ಕಾರಣವಿಲ್ಲದೆ ಬಂಗಾಳ ತನ್ನ "ಅಧಿಕಾರ" ಬಲದಿಂದಲೇ ಘೋಷರು ಇಂತಹ ಕೃತ್ಯವನ್ನೆಸಗಿದ್ದರು. ಪರಿಣಾಮವಾಗಿ ಮುಖರ್ಜಿ ಪಕ್ಷದಿಂದ ಹೊರಬಂದರು. ಬಂಗಾಳ ಕಾಂಗ್ರೆಸ್ಸಿನ ಸ್ಥಾಪನೆಯಾಯಿತು, ಸಂಯುಕ್ತ ಸರಕಾರದ ಮುಖ್ಯ ಮಂತ್ರಿ ಪದವಿಯೂ ಲಭಿಸಿತು. ಸಾರ್ವತ್ರಿಕ ಚುನಾವಣೆಯ ಪರಿಣಾಮ ಘೋಷರ ಮುಖಕ್ಕೆ ಮಸಿ ಬಳಿದಿದ್ದರೂ ಅವರಿನ್ನೂ ಕಣ್ಣು ತೆರೆದಿಲ್ಲವೆಂಬುದು ಶೋಚನೀಯ. ಘೋಷರ ಭದ್ರ ಕವಿಮುಷ್ಟಿಯಿಂದ ಪಶ್ಚಿಮ ಬಂಗಾಳ ಕಾಂಗ್ರೆಸ್ಸನ್ನು ವಿಮೋಚನೆಗೊಳಿಸಬೇಕು, ಒನ್ಮೆ ಪಕ್ಷ ತ್ಯಾಗ ಮಾಡಿದವರು ಮತ್ತೆ ಕಾಂಗ್ರೆಸ್ ಸೇರುವ ನಿರೀಕ್ಷೆಯೂ ಇದೆ. ಏಕೆಂದರೆ, ಘೋಷ್ ಕೇಂದ್ರದ ನಾಯಕರ ನಡುವೆ ತನ್ನ ಸ್ಥಾನಮಾನ ಹಿರಿದೆಂದು ತೋರಿಸಿಕೊಂಡರೂ ರಾಜ್ಯದಲ್ಲಿ ಅವರ ಬಗ್ಗೆ ಸದಭಿಪ್ರಾಯವಿಲ್ಲ. ಇದರಿಂದಲೇ ನಂದಾರ ಘೋಷಣೆಯನ್ನವರು ಬಹಿರಂಗವಾಗಿಯೇ ವಿರೋಧಿಸಿದರು. ಮಧ್ಯ ಪ್ರದೇಶದ ಮಿಶ್ರರ ವರ್ತನೆಯಿಂದ ಕಾಂಗ್ರೆಸ್ಸು ಒಡೆದಂತೆಯೇ ಘೋಷರ ನಾಯಕತ್ವದಿಂದ ಕಾಂಗ್ರೆಸ್ಸು ಹೊಸ ಜೀವ ಪಡೆಯದು—ಇದನ್ನು ನಂದಾ ಅರಿತುಕೊಂಡರು. ಕಾಂಗ್ರೆಸ್ ವರ್ಗದವರೊಡನೆ ಆರು ದಿನಗಳ ಕಾಲ ವಿಚಾರ ವಿನಿಮಯ ನಡೆಸಿದರು. ಕೇಂದ್ರ ನಾಯಕರೊಡನೆಯೂ ಸಮಾಲೋಚಿಸಿದರು, ಅಂತಿಮ ನಿರ್ಧಾರಕ್ಕೆ ಬಂದರು. ಅರಂಭದಲ್ಲಿ ಕಾಂಗ್ರೆಸ್‌ಅಧ್ಯಕ್ಷ ಕಾಮರಾಜರು ಮೌನವಾಗಿದ್ದರು, ನಿಜ. ಆದರೆ, ಈಗ ಅವರೂ ನಂದಾ ಕ್ರಮವನ್ನು ಒಪ್ಪಿದ್ದಾರೆ

ಕಾಂಗ್ರೆಸ್ಸು ಕೆಲವು ರಾಜ್ಯಗಳಲ್ಲಿ ಮೊದಲೇ ಸೋತಿದೆ; ಇನ್ನು ಕೆಲವಲ್ಲಿ ಆರಂಭದಲ್ಲಿ ಗೆದ್ದರೂ ಮುಂದೆ ಸೋತಿದೆ. "ಪಕ್ಷತ್ಯಾಗ"-'ಪಕ್ಷಾಂತರ' ರೋಗವೇ ಇದಕ್ಕೆ ಕಾರಣವೆನ್ನಬೇಕು. ಆದರೆ, ಈ ವಿಷಮ ರೋಗದ ಬೀಜ ಬಿತ್ತುವವರು "ಹಿರಿಯ ನಾಯಕರೇ ಎಂಬುದು ನಿಸ್ಸಂದೇಹ. ಇಂದಿನ ಸಾಮಾಜಿಕ ಪ್ರಜ್ಞೆಯುಳ್ಳ ಕಿರಿಯವರ್ಗಕ್ಕೆ—ಹೊಸರಕ್ತಕ್ಕೆ- ಪ್ರತಿನಿಧ್ಯ ಸಾಕಷ್ಟು ನೀಡಲು ಹಳೆಯ ಹುಲಿಗಳಿಗೆ ಮನಸ್ಸಿಲ್ಲ. ಅಧಿಕಾರವೆಲ್ಲವನ್ನೂ ತಾನೇ ಇಟ್ಟುಕೊಂಡು ತನ್ನ ವಂತಿಂತೆ ಅಜ್ಞಾಧಾರಕರಾಗಿ ನಡೆಯುವುದಷ್ಟೇ ಕಿರಿಯ ವರ್ಗದ ಕರ್ತವ್ಯವೆಂಬ ಭಾವನೆ ಅವಲ್ಲಿದೆ. ಈ ಬಗೆಯ ಮೇಲು ಕೀಳು ಭಾವನೆಯಿಂದಲೇ ಕಾಂಗ್ರೆಸ್ಸು ಹೊಸ ಪೀಳಿಗೆಯನ್ನು ತನ್ನತ್ತ ಆಕರ್ಷಿಸಲು ಅಶಕ್ತವಾಗಿದೆ. ಇಮವರೆಗೂ ಕಾಂಗ್ರೆಸಿಗನಾಗಿದ್ದು ಈಗ ಹೇಗೆ ಪಕ್ಷಾಂತರ ಹೊಂದಲಿ ಎಂಬ ಅನಿವಾರ್ಯ ಕಾರಣದಿಂದ ಕಾಂಗ್ರೆಸಿಗರಾಗಿ ಉಳಿದವರಿದ್ದಾರೆ. ಹೊಸ ಪೀಳಿಗೆಗೆ ಕಾಂಗ್ರೆಸ್ಸಿನಲ್ಲಿ ಸ್ಥಾನವಿಲ್ಲ; ಹೊಸ ವಿಚಾರಗಳಿಗೆ ಅವಕಾಶವಿಲ್ಲ. ಅದೇ ಹಳೆಯ ಜಾಡು ಹಳೆಯ ಹುಲಿಗಳ ಮುಂದೆ ನವಜಾತ ಹುಲಿಮರಿ ಹೆದರಿ ನಿಲ್ಲಬೇಕು! ಈ ನಿಟ್ಟಿನಲ್ಲಿ ಕಾಂಗ್ರೆಸ್ ಸಂಸ್ಥೆಯ ಆಮೂಲಾಗ್ರ ಮಾನಸ ರಚನೆಯಾಗಬೇಕು. ಹಳಬರು ತಾವಾಗಿ ಹಿಂದೆ ಸರಿದು ಹೊಸಬರಿಗೆ—ಭವಜನತಾಂಗಕ್ಕೆ—ಅವಕಾಶ ನೀಡಬೇಕು. ವ್ಯತಾಧಿಕಾರವು ಅಧಿಕವಾಗಿ ಯುವಜನತಾಂಗದ ಕೈಮುಷ್ಟಿರುವುದು. ಕಾಂಗ್ರೆಸ್ ಪಕ್ಷಕ್ಕೆ ಹೊಸ ಜನ್ಮ ನೀಡಬೇಕಾದರೆ, ನಂದಾರ ಕಾಯಾಕಲ್ಪ ಚಿಕಿತ್ಸೆಯಾಗಲೇ ಬೇಕು. ಘೋಷರು ಎಂತಹ ಪ್ರಭಾವಿತ ವ್ಯಕ್ತಿಯರಲಿ, ಅವರ ನಾಯಕತ್ವ ಕಾಂಗ್ರೆಸಿಗರಿಗೆ ಬೇಡವಾಗಿರುವಾಗ, ಯಾರೇನು ಮಾಡಬಲ್ಲರು? ನಂದಾರ ಸಲಹೆಯನ್ನು ಕಾಂಗ್ರೆಸ್ ಕಾರ್ಯಕಾರಿಣಿ ಅಳ್ಳಿಸಿ ಸೂಕ್ತ ಕ್ರಮಕೈಗೊಳ್ಳಬೇಕು. ಇದೇ ರೀತಿಯಲ್ಲಿ ಅಬಿಲ ಭಾರತದಲ್ಲೇ ಈ ಬಗೆಯ ಚಿಕಿತ್ಸೆ ನಡೆಯಬೇಕು; ಆಗ ತಾನೇ ಕಾಂಗ್ರೆಸ್ಸಿನ ಪುನರ್ಪ್ರತಿಷ್ಠಾಪನೆ ಸಾಧ್ಯವಾಗಬಹುದು. ಕಾಂಗ್ರೆಸ್ ಪಕ್ಷದ ಕೈಯಲ್ಲೇ ಅಧಿಕಾರವಿರಬೇಕು ಎಂಬುದಿದರ ಅರ್ಥವಲ್ಲ; ಕಾಂಗ್ರೆಸ್ ಜನಸಾಮಾನ್ಯರ ಪಕ್ಷವಾಗಬೇಕು, ಯುವ ಜನಾಂಗಕ್ಕೂ ಆಕರ್ಷಕ ಪಕ್ಷವಾಗಬೇಕು, ಪೆನ್ಶನರ ಸಂಘವಾಗಿರಬಾರದು.

ವಿನೋದ ನಾಟಕ

ಪಾಕ್ ಅಧ್ಯಕ್ಷ ಅಯ್ಯೂಬ್‌ಖಾನರು ಮೊನ್ನೆ ಮೊನ್ನೆ ಮೊಸ್ಕೋಗೆ ಹಾರಿದರು. ಅವರ ಅಪೇಕ್ಷೆ ದೊಡ್ಡದು. ಸೋವಿಯತ್— ಭಾರತ ಸಂಬಂಧದ ಹಾಲಿನಲ್ಲಿ ಹುಳಿ ಹಿಂಡುವುದು ಮುಖ್ಯ ಉದ್ದೇಶ. ಅಮೆರಿಕಾ ಪ್ರವಾಸದ ಪೂರ್ವ ಸಂಧ್ಯೆಯಲ್ಲಿ ಈಪು ಚೀನಾ ಭಾರತವನ್ನು ಮುಂದಿಟ್ಟು ಖಾಕಿಸ್ತಾನಕ್ಕೆ ರಕ್ಷಣಾ ನಂಟು ಬೇಡವೆಂದು ಎಚ್ಚರಿಕೆ ನೀಡಿತು. ಪಾಕ್ ಚೀನೀಮೋಹವನ್ನು ಹತ್ತಿರ ಹತ್ತಿರ ಬರುತ್ತಿರುವಾಗ, ಇಂತಹ ಎಚ್ಚರಿಕೆಯನ್ನು ಪಡೆದೂ ಅದನ್ನು ಕಡೆಗಣಿಸಿ ಕೆಂಪುಚೀನಾದ ಬಗ್ಗೆ ತನ್ನ ಒಲವು ಸಂಪ್ರದಾಯಿಕವೆಂದು ಅಯ್ಯೂಬರು ತೋರಿಸಿ ಕೊಡಲೆತ್ನಿಸಿದರು. ರಕ್ಷಣಾ ನಾಯಕರಿಗೆ ಭಾರತಕ್ಕೆ ರಸ್ತ್ರಾಸ್ತ್ರ ನೀಡುವಂತೆಯೇ ತನಗೂ ನೀಡಬೇಕು; ಇಲ್ಲವಾದರೆ ಭಾರತಕ್ಕೆ ಅದನ್ನು ನೀಡಬಾರದು- ಕಾಶ್ಮೀರವನ್ನೊ ಸಮಸ್ಯಾತ್ಮಕ ರಾಜ್ಯ ಇದು

(ಪತ್ರಿನೇ ಪುಟ ನೋಡಿರಿ)

ನರಸಣ್ಣನ ನರಸ



'ಮುಖ್ಯಮಂತ್ರಿ ಸಮ್ಮೇಳನದಿಂದ ಅಸಂತುಷ್ಟರಾಗಿ ಬಂದ ನಂಬಾರ್ದ್ರಿಪಾದರು ಇನ್ನಾವಾಗ "ಬಂಧ್" ಮಾಡಿಸ್ತಾರೋ?'

ವಚನ ಸುಧೆ

ಯಥಾ ಯಥಾ ಹಿ ಪುರುಷಃ
ಕಲ್ಯಾಣೇ ಕುರುತೇ ಮನಃ
ತಥಾ ತಥಾಸ್ಯ ಸರ್ವಾರ್ಥಾಃ
ಸಿಧ್ಯಂತೇ ನಾತ್ರ ಸಂಶಯಃ॥

ಮನುಷ್ಯನು ಶುಭಕಾರ್ಯಗಳಲ್ಲಿ ಮನಸ್ಸು ದೃಢಗೊಳಿಸುತ್ತ ಬಂದಂತೆ ತನ್ನ ಅಭೀಷ್ಟಗಳನ್ನು ನಿಸ್ಸಂಶಯವಾಗಿ ಸಿದ್ಧಿಸುತ್ತ ಬರುತ್ತಾನೆ.

ಗೇಹ ರಾಜ್ಯದಲ್ಲಿ

ಸೆಮಿ ಪರ್ಮನೆಂಟ್ ಗಂಡ ಬೇಕು

"ಓಯ್, ಅಲ್ಲ, ಈ ಪೇಪ್ರಿನವರಿಗೇನು ಬೇರೆ ಕೆಲಸವಿಲ್ವೆ?"

'ಏಕೆ? ಇದ್ದೇ ಇದ್ಬೇಕಾಪ್ಪ... ಮತ್ತೆ ಈ ದಿನ ದೇವಿಯವರ ವಕ್ರದೃಷ್ಟಿ ಪೇಪ್ರಿನವರ ಮೇಲೆ ಬೀಳದೇಕಾಗಿ ಬಂದ ಮಹಾ ಪ್ರಮೇಯವಾದರೂ ಏನು?'

"ಮತ್ತೆಂಥದೂಂದ್ರೆ....'

"ಅಪ್ರಲ್ಲೇ ಇರೋದು ಸ್ವಾರಸ್ಯ....'

"ಏನು ಸ್ವಾರಸ್ಯ?'

'ಅದನ್ನು ಹೇಳ್ಬೇಕಾದವ್ಳೆ ನೀನು....'

'ನೀವ್ಯಾಕೆ ಹೇಳ್ಬಾರ್ದೂಂತ...'

'ಯಾರು, ನಾನೆ? ನಾನೇನೇ ಹೇಳ್ಲಿ? ಮತ್ತೆ...ಆ...ಇ...ಅಂತ ಸುರು ಮಾಡಿದ ಪೈಲಿದಿರ್ಲಿ...ಸದ್ಯ ಒದರೋದಾದ್ರೂ ಏನೂಂತ?'

'ಒದರೋಕೇನು ಕತ್ತೆಯಿದೆಯೇನು?'

'ಕತ್ತೆಯಿಲ್ಲಾನ್ನು. ಅದ್ರೂ ಕತ್ತೆಯಂತೆ...'

"ಹ್ಞೂಂ....ಸರೀನ್ನಿ. ಅಂತೂ ಕೈ ಹಿಡಿದರೂಂತಂದ್ರೆ ಹಾಗೇನೇ....ಕತ್ತೆ ಚಾಕರಿ ಮಾಡೋಕೆ. ಹೆಸ್ರು ಕೇಳೋಕೆ....ಇದಕ್ಕೇ, ಅನ್ನೋದಲ್ವೆ ಹೆಣ್ಣಿನ ಬಾಳು ಗೋಳೂಂತ...."

"ಅಯ್ಯೋ!...ಗಂಗೆ...ಭಾಗೀರಥಿಕಾವೇರಿಯರೆಲ್ರೂ ಏಕ ಸಮಯದಲ್ಲಿ ಪ್ರತ್ಯಕ್ಷವಾಗಿ ಬಿಟ್ರೆ ಹೇಗೇಂತ...."

'ಹೋಗ್ರಿ ಬಿಡ್ರಿ....ನಿಮಗ್ಯಾಕೆ ಕತ್ತೆಗಳ ಪರಾಟೆ....'

'ಈ ಫೀರು — ಈ ಬೆಂಕಿಯೆಲ್ಲಾ ಯಾಕೆ?'

'ಬೇಕು...'

'ನೋತಮ್ಮ, ಇದೆಲ್ಲಾ ಮಾಡ್ಬಾದ್ದು....'

'ಮಾಡ್ತೇನೆ...."

'ನೋಡು, ನೀನೇ ಅಂದಹ್ಗೆ...ಫೇರಾವೋ ಮಾಡ್ಬಾರ್ದೂಂತ..."

'ನಾನೆಲ್ಲಿ ಫೇರಾವೋ ಮಾಡ್ತೀನಿ?"

"ಮತ್ತಿದೆಂತಪ್ಪ?"

"ಯಾವುದು?'

"ಹೆಜ್ಜೆನ ಕಣ್ಣೀರು—ಸಿಟ್ಟು ಆಕ್ರಮಣ ಯೋನೇ ಫೇರಾವೋ"

'ಮತ್ತೆ ಗಂಡಿನದು....?'

"ಅದು ಶರಣಾಗತಿ...'

'ಅಹ, ಭಾರಿ ಬುದ್ಧಿವಂತಿಕೆ...."

'ಬುದ್ಧಿವಂತಿಕೆಯೀನು ಬಂತು? ಇದ್ದದನ್ನೆ ಅಂದೆ...."

"ಆದೇ, ಹಿಂದಿನಿಂದ್ಲೂ ಹೀಗೇ. ಹೆಣ್ಣಾ ಅಂದ್ರೆ ಅಷ್ಟೂ ಸಸಾರ...."

'ನೋಡು, ಹೆಣ್ಣು ಕಣ್ಣೀರು ಸುರಿಸಿ ಗೆಲ್ಲುತ್ತಾಳೆ. ಗಂಡು ಕಣ್ಣೀರು ಸುರಿಸಿ ಸೋಲುತ್ತಾನೆ."

"ಹ್ಞೂಂ..."

'ಅದನ್ಕೇ ಅಂದದ್ದು ಒಂದು ಫೇರಾವ್ ಮತ್ತೊಂದು...."

'ಆದ್ರೆ ನೋಡಿ, ಫೇರಾವ್ ಗಂಡಸ್ರೂ ಮಾಡದೆ ಇರೋದಿಲ್ಲ. ಮತ್ತೆ ಪತ್ರ ಪತ್ರಿಕೆಗಳೇ ಫೇರಾವ್ ಮಾಡ್ತಾವೆ...."

"ಆದೇ ಪತ್ರಿಕೆಗಳ ಕತೆಯೇ ಕೆ ಬಂತು?'

'ಮತ್ತೆಂಥದು? ಭಾಗಲಾ ರಾಜಿನಾಮೆ ಕೊಟ್ಟಗ ಒಂದು ತಿಂಗಳು ಆಯ್ತಿಲ್ಲಾ."

"ಹೆಜ್ಜಿಂ..."

'ಆ ಒಂದು ತಿಂಗಳಲ್ಲಿ ಇಂದಿರಾ ಗಾಂಧಿಗೆ ನಿದ್ದೆ ಮಾಡಲಿಕ್ಕೆ ಅವ್ರು ಬಿಡಲಿಲ್ಲ.'

'ಅಯ್ಯೋ, ಪಾಪ...."

'ನಿವ್ವತ್ತೆ ಒಳ್ಳೆದಾಯ್ತು'

'ಯಾಕೆ?'

'ಯಾಕೆ ಅಂದ್ರೆ? ಸತ್ತವರಿಗೆಲ್ಲಾ ಒಂದು ಫಿಮಿಸ ಕಾಲ-ಕೆದಯತ್ತ, ಕೈಯಂಡಿಯುತ್ತ ಮೌನ ಪ್ರಾರ್ಥನೆ ಸಲ್ಲಿಸಿದ ಹಾಗೆ...'

'ಏನಾಯ್ತೀ ಈಗ?'

'ಅಗೋದೇನಿಲ್ಲ. ಅಯ್ಯೋ ಪಾಪಾಂತ ರಾಗವೆಳೆದ್ರೆ ತೀರ್ತೇನ?'

"ಮತ್ತೇನು ಮಾಡೋದೆ?'

"ಒಂದಿಷ್ಟು ಅಂತಃಶರಣದ ಸಹಾನು ಭೂತಿಯೂದ್ರೂ..."

"ಇದೆ, ಇದೆಯಮ್ಮಾ ಇದೆ....'

'ಎಲ್ಲಿದೆ?"

"ಅಂತಃಶರಣದಲ್ಲಿ. ಸದ್ಯ ಸಂಗ್ತಿ ಏನೂಂತಾದ್ರೂ...'

"ಅದೇ ಅಂದೆನಲ್ಲಾ, ಭಗಲಾ ನಿರ್ಗಸುನದ ವೇಳೆ ಒಂದಷ್ಟು ರಂಪಾಟ ಮಾಡಿದ್ರು....ಅವರಂಥ ಮಂತ್ರಿ ಮತ್ತಾರೂ ಇಲ್ಲ..."

"ಹೌದು...."

"ನಂದಾರನ್ನು ಸಂಸತ್ತಿಂದ ಹೊರಗಿಟ್ಟ ದುಃಶಕ್ಕಿಗಳು ಭಗಲಾರನ್ನೂ ಹೊರಹಾಕಿದುವೂಂತ ಅಂದ್ರು. ಭಗಲಾ ಹೋದುದರಿಂದ ಕೊಡೆಸು ಕೋಲೇ ಮುರಿಯಿಕೂಂತ..."

"ಹ್ಞೂಂ....

'ಆದ್ರೆ ನೋಡಿ, ಕೋಲು ಮುರೀಲಿಲ್ಲ... ಎಲ್ಲ, ನೆಹ್ರು ಅವರಂಥವರಾದ ಮೇಲೆ ಭಾರತ ಉಗುಳಿ ಬೀಳತ್ತೆ ಅಂತ ಇಂಗ್ಲಿಷ್ ಜನರು ಭವಿಷ್ಯ ನುಡಿಯುತಿದ್ರು...."

'ಹ್ಞೂಂ...."

"ಇಂದಿರಾ ಹೆದರಲಿಲ್ಲ. ವಿದೇಶ ಶಾಖೆಯನ್ನು ತಾನೇ ನಿರ್ವಹಿಸಿಕೊಂಡ್ರು...."

"ಯೋಜನೆಯನ್ನು ಮೊದಲೇ ಹೊತ್ತುಕೊಂಡಿದ್ದಾರೆ.

'ಹ್ಞೂಂ....ಹೆಣ್ಣಾ ಅಬಲೆಯಲ್ಲ ಅಂಥ ಇದರಿಂದಲೇ ಗೊತ್ತಾಗೋದಿಲ್ವೆ?'

'ಆಗುತ್ತೆ, ಆಗುತ್ತೆ.... ಅಬಲೆ ಅಂದ್ರೆ ಅತಿ ಬಲೆ ಅಂತ ಅರ್ಥ...."

"ಹಾಗೆ ಬನ್ನಿ....ಮತ್ತೆ ನೋಡಿ,ಮುಂದಿನ ವಿದೇಶ ಮಂತ್ರಿ ಯಾರು ಅಂತ ಇಂದಿರಾ ತಲೆಕೆಡಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಈ ಪೇಪ್ರಿನವ್ರು ಕೆದ್ದಿ ಕೊಳ್ತಾರೆ ...ಅರ್ಥಾ...."

'ಏನು?"

'ತಲೆ ಕೆಟ್ಟ ವಿಚಾರವನ್ನೇ ಮಾಡ್ತಾರೆ...."

"ಹ್ಞೂಂ...."

"ವಿದೇಶ ಸಂಗಾತಿಗೆ ವಿದೇಶ ಅಂದ್ರೂ, ಹಾಗಲ್ಲಾ, ಟಟಕೆ ಬರ್ತಾರೆ, ಸಿಂಗ್ರು ಅವ್ರೊಡನೆ ಮಾತಾಡ್ತಾರೆ ಅಂದ್ರು—ಅದು ಸುಳ್ಳಾಂತಾಯ್ತು...."

'ಹ್ಞೂಂ...."

'ಆಹಾರದಿಂದ ಜಗಜೀವನರ ಜೀವನ ಆರಾಮವಿಲ್ಲ, ಆಶಾಂತವಾಗಿದೆ.ಆದ್ರಿಂದ ಅವ್ರಿಗೇ ವಿದೇಶ ವ್ಯವಹಾರಾಂತ ಅಂದ್ರು ..."

"ಹ್ಞೂಂ...."

'ಹಾಗೇನಿಲ್ಲ, ಸ್ವರ್ಣಸಿಂಗರು ವಿದೇಶ ಮಂತ್ರಿ, ಜಗಜೀವನರು ಸಂರಕ್ಷಣಾ ಅಂತ ಟಿಪ್ಪಣಿ ಮಾಡಿದ್ರು..... ಮತ್ತೆ ಜಗಜೀವನರ ಮೇಲೆ ಇಂದಿರಾಜಿಯ ವಿಶ್ವಾಸ ಹಾರಿ ಹೋಗಿದೆ; ಅವರನ್ನು ಹೊರಗಿಟ್ಟು ಸಂಪುಟದ ಪುನಾರಚನೆ ಮಾಡುತ್ತಾರೆ ಅಂತ ಸುದ್ದಿ ಹರಡಿದ್ರು...."

'ಹೌದು, ಹೌದು..."

"ಮುಂದೆ ನೋಡಿ, ಮೆಹತಾರಿಗೆ ಪೆನ್ಸನ್ ವೃತ್ತಿ—ರಾಜ್ಯಸಾಲ, ರಾಯಭಾರಿ— ಸತ್ಯನಾರಾಯಣಸಿಂಹ ಮನೆಗೆ ಅಂತ ಸುದ್ದಿ ಬಂತು.

'ಸರಿಯೇ. ಆದರೆ ಬರುವ ಹೊಸ ಮುಖಗಳು ಯಾವ್ದೂಂತ ಯಾರೂ ಅನ್ನಲಿಲ್ಲ..."

'ಹೇಗ್ರಿ ಅನ್ನೋದು? ಇರೋ ಐವತ್ತು ಜನರ ಮುಖ ಪರಿಚಯ ಸರಿಯಾಗಿದೆ. ಹೊರಗಿರೋ ಐವತ್ತೊಂದು ಕೋಟಿಯ ಪರಿಚಯವೆಲ್ಲಿಂದ?'

"ಸರಿ....ಸರಿ...."

'ನೋಡಿ, ಮುರಾರ್ಜಿ ಬರೋದಕ್ಕೆ ಮೊದಲೇ ಪುನರ್ಘಟನೆ ಅಂತ ಅಂದ್ರು."

"ಹ್ಞೂಂ, ಆದೂ ಒಂದು ರಾಜ್ಯಕೀಯ. ಪಕ್ಷೇತರರೊಬ್ರು ಖರ್ಚಾರಿ ಅನ್ನಲಿಲ್ಲವೆ?'

'ಈಗ, ಇಂದಿರಾಜಿ ಪೂರ್ವ ಯುರೋಪನ್ನು ಸಂದರ್ಶಿಸಿ ಬಂದ ಬಳಿಕ ಅಂತ ಅನ್ನತ್ತಾರೆ...."

'ಹೌದು...."

'ಈ ಮಾತುಗಳಲ್ಲಿ ಯಾವುದು ಸತ್ಯಾಂತ?"

"ಯಾವುದೂ ಇಲ್ಲ...."

'ಮತ್ತೆ ಹೀಗೆಲ್ಲಾ ಏನ್ನುವುದೆಂದರೆ?'

"ನೋಡಮ್ಮಾ, ಅವ್ರೇ ಪದ ಬರೀತಾರೆ, ಅವರೇ ಹಾಡ್ತಾರೆ, ಅವರದ್ದೇ ತಾಳ, ರಾಗ, ಅರ್ಥ, ಕಡಿಗೆ ಎಲ್ಲಾ...."

'ಹೀಗೆಲ್ಲಾ ಸುದ್ದಿ ಹರಡಿದ್ರೆ..."

'ಸುದ್ದಿಗೇನಂತೆ? ಭಗಲಾ ಹೊರಬಂದು ಇಂಗ್ಲಿಷ್ ದೋಣಿ ಹತ್ತಿ ಯೂರೆ ಮಾಡ್ತಾರೇಂತ ಯಾವ ಪತ್ರಿಕೆಯವ್ರು ಬರೆದಿದ್ದಾರೆ?'

"ಯಾರೂ ಇಲ್ಲಾನ್ನಿ..."

"ಹಾ ದು. ಈಗ ಮನೆಯಲ್ಲಿ ವಧು ಇದೆ. ರಾಜ್ಯಕೀಯ ಸೆಮಿ ಪರ್ಮನೆಂಟಾದ್ರೂ ಆದೂ "ಪರ್ಮನೆಂಟ್" ಗಂಡ ಬೇಕು. ಯಾವ ವರನ ಕೊರಳಿಗೆ ಹೂಮಾಲೆ ಬೀಳುತ್ತೋ ರಾಯಬೇಕು; ನೋ

(ಬಂಳಿತ್ತನೇ ಪುಟ ನೋಡಿರಿ)

ಅಸ್ಥಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೋಟ್ ಅಸ್ತಮಾ ನಿವಾರಕ ಬಿಡಿಯನ್ನು ತಾ. 18—10—67 ನೇ ಹುಣ್ಣಿಮೆ ರಾತ್ರಿ ಬೀರನೊಂದಿಗೆ ಸೇವಿಸುವುದರಿಂದ ಅಸ್ತಮಾ, ನೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Nagar Baba Ayurvedashram, P. O. Chitrakot U. P.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

L. T. O. P. 140/1967

ಬಿ. ಪರಮೇಶ್ವರಯ್ಯ —ಅರ್ಜಿದಾರ

ಮತ್ತು

ಲೋರೆನ್ಸ್ ಡಿ'ಸೋಜ ಕೂಡಾ —ಎದ್ರಿರು ದಿವಂಗತರಾಗಿರುವವರಿಗೆ

ನೋಟೀಸ್

ಉಡ್ಪಿ ತಾಲ್ಲೂಕು ಬೈಕಾಡಿ ಗ್ರಾಮದಲ್ಲಿರುವ ಯೆತ್ತಾರ್ ಡಿ'ಸೋಜರ ಮಗ 1ನೇ ಲೋರೆನ್ಸ್ ಡಿ'ಸೋಜ; ಜರೋಮ್ ಡಿ'ಸೋಜರ ಮಕ್ಕಳು 2ನೆ ಎಡ್ರಿ ಫ್ರೆನ್ಸಿಲ್ ಡಿ'ಸೋಜ; 3ನೆ ಡೆನ್ನಿಸ್ ಡಿ'ಸೋಜ 4ನೆ ಪ್ಯಾನ್ಸಿ ಡಿ'ಸೋಜ ಕೂಡಾ ಇವರಿಗೆ—

ಅರ್ಜಿದಾರನು ನಿಮ್ಮಿಂದ ಕಳೆದ ವಿಶ್ವವಿಖ್ಯಾತ ಸಂವತ್ಸರಕ್ಕೆ ಬರತಕ್ಕ ಗೇಣಿ ಬಾಕಿ ಬರಬೇಡುವರೆ ಪೂರ್ವದ ಮೇಲಿನ ಅರ್ಜಿಯು ತಾ. 25—11—67 ಕ್ಕೆ ಯಿಟ್ಟಿರುವದ್ರಿಂದ ನಿಮಗೆ ಉದಾಪರಣೆಯಿದ್ದೆ ಆ ದಿನ ಸ್ವತಃ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಪಿಸಿರಿ ಮತ್ತು ಕೊಳ್ಳತಕ್ಕದ್ದು. ಇಲ್ಲವಾದ್ರೆ ನಿಮಗೆ ಗೈರಾ ಜ್ಞೆಯಲ್ಲಿ ಏಕ ಪಕ್ಷವಾಗಿ ತೀರ್ಪುಮಾಡಲಾಗುವದು.

(ಕೋರ್ಟು ಹುಕುಂ ಪ್ರಕಾರ)

B. Yogishwara Holla
Advocate for Petitioner

Udipi, 28—9—67

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 85 ಶಾಖೆಗಳಿಂದ ಹಿಪ್ಪರಿಗಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಜೀವಿಸಾಕಿಗಳ ಮೇಲೆ ೫% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್

ಮಂಗಳೂರು—೩

ಇದು ನಿಮಗೂ ತಿಳಿದಿರಬೇಕು

ಶ್ರೀಕೃಷ್ಣನ ದ್ವಾರಕಾ ನಗರ ಎಲ್ಲಿದೆ?

ಸಂಗ್ರಾಹಕರು :— ಪಂಡಿತ ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಯಾದವ ಕುಲ ತಿಲಕ ಶ್ರೀಕೃಷ್ಣನು "ದ್ವಾರಕಿ"ಯಲ್ಲಿ ರಾಜ್ಯಭಾರ ನಡೆಸುತ್ತಿದ್ದನೆಂದು ಮಹಾಭಾರತದಲ್ಲಿ ಕಂಡು ಬರುತ್ತದೆ. ಶ್ರೀಕೃಷ್ಣನ ಸಂಬಂಧದಿಂದಾಗಿಯೇ ದ್ವಾರಕಾ ನಗರ ಸಪ್ತ ತೀರ್ಥಗಳಲ್ಲಿ ಒಂದೆಂಬುದಾಗಿ ಪರಿಗಣಿಸಲ್ಪಟ್ಟಿದೆ. ಆದರೆ ಈ ದ್ವಾರಕಾ ನಗರ ಯಾವುದು? ವರ್ತಮಾನಕಾಲದಲ್ಲಿ ಸೌರಾಷ್ಟ್ರದ "ಓಕಾ ಮಂಡಲ"ದ ತಟದಲ್ಲಿ ಒಂದು ದ್ವಾರಕಾ ನಗರಿ ಇದೆ. ಇಲ್ಲಿ ಆದಿ ಶಂಕರಾಚಾರ್ಯರು ಪಶ್ಚಿಮಾಂಚಲದ ನಾಲ್ಕನ್ನು ಸ್ಥಾಪಿಸಿರುತ್ತಾರೆ. ಅವರ ಕಾಲದಿಂದ ಈ ತನಕ ವಿದ್ವಾನ್ ಸಂಮೋಹಾಚಾರ್ಯರು ಅವರ ಪೀಠದಲ್ಲಿದ್ದಾರೆ. ಇಂದಿನ ಈ ದ್ವಾರಕೆಯು ಕಳೆದ 13 ಶತಮಾನಗಳಿಂದ ಅದ್ವೈತ ತತ್ವಸಾರವನ್ನು ಪ್ರಸಾರಗೊಳಿಸುವ ಪ್ರಧಾನ ಕೇಂದ್ರದ ರೂಪದಲ್ಲಿದೆ. ಇಲ್ಲಿ ಕಾಲ ಕಾಲಕ್ಕೆ ಸ್ವನಿಷ್ಠಿತ ರೂಪದಲ್ಲಿ ಧಾರ್ಮಿಕ ಉತ್ಸವಗಳು ನಡೆಯುತ್ತಿವೆ.

ಇದೇ ಶ್ರೀ ಕೃಷ್ಣನ ನಿವಾಸ ಸ್ಥಳ ದ್ವಾರಕೆಯೋ ಅಥವಾ ಕೆಲವು ಜನರು ಹೇಳುವಂತೆ ಮೂಲ ದ್ವಾರಕ ಮಧುರಾ ಪಟ್ಟಣದ ಸಮೀಪದಲ್ಲಿ ಎಲ್ಲಿಯಾದರೂ ನೆಲೆಸಿದೆಯೇ? ದ್ವಾರಕಾ ನಗರದ ಅಸ್ತಿತ್ವ ನಿಜವಾಗಿ ಎಲ್ಲಿದೆಯೆಂಬುದು ಕುರಿತು ಸರ್ವ ಸಮ್ಮತಿ ಯುಕ್ತ ಪ್ರಮಾಣಗಳು ಈ ವರೆಗೂ ಬೆಳಕಿಗೆ ಬಂದಿರುವುದಿಲ್ಲವೆಂದರೆ ಹೆಚ್ಚಿನವರಿಗೆ ಆಶ್ಚರ್ಯವಾಗದಿರದು. ವರ್ತಮಾನ ಕಾಲದ ದ್ವಾರಕಾ ನಗರ ಕ್ರಿ. ಶ. ಪ್ರಾರಂಭಕಾಲವು ನಂತರದ ಅಸ್ತಿತ್ವದಲ್ಲಿತ್ತೆಂದು ಪುರಾತತ್ವ ಅನ್ವೇಷಣೆಯಿಂದ ಕಂಡು ಬರುತ್ತದೆ.

ಈ ಆಧಾರವನ್ನು ಸ್ವೀಕರಿಸುವುದಾದರೆ ಕೃಷ್ಣನ ಹುರಿನ ನಿಕಟ ಸಂಬಂಧಿಗಳು ವ. ಇಂದಿನ ದ್ವಾರಕೆ ಮಹಾಸ್ರೋತದ ಕಾಲದಿಂದಲೂ ಪ್ರಸಿದ್ಧವಾಗಿದ್ದವರಿಂದ ಇದನ್ನು ಪ್ರಾಗೈತಿಹಾಸಿಕ ಕಾಲದೊಂದಿಗೆ ಸಮ್ಮಿಳಿತಗೊಳಿಸುವುದು ಉಚಿತವಲ್ಲ. "ಇಂದು ಪ್ರಾಚೀನ ದ್ವಾರಿಕಾ ನಗರವು ಕ್ರಿ. ಶ. 1000ರಿಂದ 400 ವರ್ಷಗಳ ಹಿಂದ ಇತ್ತು. ಅದು ಅನೇಕ ಸಲ ಸಮುದ್ರದ ನೀರು ಉಕ್ಕೇರಿ ಬಂದು ನಿಸ್ಪಮಾಡುತ್ತಾ ಇತ್ತು" ಎಂಬುದಾಗಿ "ಸಾಂಕಲಿಯ" ಎಂಬ ಒಬ್ಬ ಪುರಾತತ್ವ ಶೋಧಕರು ಅಭಿಪ್ರಾಯ ಪ್ರಕಟಿಸುತ್ತಾರೆ. ಇಂದು ಕಡೆ ದ್ವಾರಕಾ ನಗರದ ಪರಂಪರಾಗತ ಸಾಹಿತ್ಯಕ ವಿವರ ದೊರೆಯುತ್ತವೆ. ಮತ್ತೊಂದು ಕಡೆ ಸೌರಾಷ್ಟ್ರ ಕ್ಷೇತ್ರದಲ್ಲಿ ಇತರ ಕಡೆ ದೊರಕುವ ಪುರಾತತ್ವ ಪುಂಜಗಳು ಕಂಡುಬರುತ್ತವೆ. ಇದರಿಂದಾಗಿ ಶ್ರೀಕೃಷ್ಣನಂತಹ ಮಹಾ ಮೂರ್ತಿಯು ವ್ಯಕ್ತಿಯ ನಿವಾಸಸ್ಥಾನದ ನಿಶ್ಚಿತತೆಯನ್ನು ಸ್ಪಷ್ಟವಾಗಿ ಗುರುತಿಸಿ ನುವುದು, ಅಸ್ಪಷ್ಟಸಂಶ್ಯದ ಕೆಲಸವೆಂಬುದರಲ್ಲಿ ಅನುಮಾನವಿಲ್ಲ.

ಶ್ರೀಕೃಷ್ಣನ ಜೀವನ ಪರಿಕ್ರಮದ ಸಂಪೂರ್ಣ ಆಧಾರದಿಂದ ಪ್ರಸ್ತುತ ವಿಷಯದ ಯಥಾರ್ಥತೆಯನ್ನು ವಾದಿಸಬೇಕಾದರೆ ವಸುದೇವ—ದೇವಕಿಯರ ಕಾಲದಿಂದ ಹಿಡಿದು ಮಹಾಭಾರತ, ಸಕಲ ಪುರಾಣಗಳೇ ಮೊದಲಾದ ಶಾಸ್ತ್ರಾರು ಗ್ರಂಥಗಳನ್ನು ಆದ್ಯಂತವಾಗಿ ಸಂಶೋಧನೆ ಮಾಡಬೇಕಾಗುವುದು. ಶ್ರೀಕೃಷ್ಣ ಮತ್ತು ವಸುದೇವ ಇವರಿಬ್ಬರು ಇದ್ದ ಕ್ಷೇತ್ರದ ವಿಸ್ತೃತ ಪರಿಶೀಲನೆಯನ್ನು ಅವಶ್ಯವಾಗಿ ಮಾಡಬೇಕಾಗುವುದು. ಎಲ್ಲದಕ್ಕಿಂತ ಮಹತ್ವಪೂರ್ಣ ಕ್ಷೇತ್ರ "ಉತ್ತರ ಕುರುವಂಶ"ದ ರಾಜಧಾನಿ "ಹಸ್ತಿನಾಪುರ", ಪಾಂಚಾಲದ ರಾಜಧಾನಿ "ಅಹಿಚ್ಛತ್ರ" ಮತ್ತು 'ಜರಾಸಂಧ'ನ "ಮಗಧ ದೇಶ". ಈ ಮೂರು ಕ್ಷೇತ್ರಗಳಲ್ಲಿ ನಡೆಸಿದ ಶೋಧನೆಗಳಿಂದ ಪುರಾತತ್ವಾವಶೇಷಗಳು ಒಂದೆ ಕ್ಷೇತ್ರದಲ್ಲಿ ದೊರಕಿವೆ. ಅಲ್ಲಿನಂದರವಾದ ಚಿತ್ರಕಲೆಗಳಿಂದ ಕೂಡಿರುವ ಕಂದು ಬಣ್ಣಪಾತ್ರೆಗಳು, ಇತರ ಕಪ್ಪು ಮತ್ತು ಕೆಂಪುಬಣ್ಣದ ವಿವಿಧ ಆಕೃತಿಯ ಪಾತ್ರೆಗಳು ದೊರಕಿರುತ್ತವೆ. ಇವುಗಳನ್ನು ನೋಡುವಾಗ ಈ ಪ್ರದೇಶದಲ್ಲಿ ಎರಡು ಭಿನ್ನ ಭಿನ್ನ ಸಂಸ್ಕೃತಿಯು ಏಕ ಕಾಲದಲ್ಲಿತ್ತೆಂದೂ ಖಚಿತವಾಗುತ್ತದೆ.

ಯಾದವರ ಸಂಸ್ಕೃತಿ ಪಶ್ಚಿಮ ಮಹಾರಾಷ್ಟ್ರದ ಶ್ರೀಕೃಷ್ಣನ ಕಾಲವೂ ಒಂದೆಯೆಂಬುದಾಗಿಯೂ ಇವರು ಒಂದೇ

(ಎಂಟನೇ ಪುಟ ನೋಡಿರಿ)



ಈ ಸ್ಮರಣೀಯ ದಿನಗಳು ರಜೆಯ ದಿನಗಳಲ್ಲ— ಹಣ ಉಳಿಸುವ ವಿಶೇಷ ದಿನಗಳು. ಕೆನರಾ ಬ್ಯಾಂಕಿನಲ್ಲಿರುವ ನಿಮ್ಮ ರಿಕರಿಂಗ್ ಡಿಪಾಸಿಟ್ ಅಕೌಂಟಿನಲ್ಲಿ ಹಣವನ್ನು ಕೂಡಿಸಿಡುವ ದಿನಗಳು! ಹಣವನ್ನು ಉಳಿಸುತ್ತಿರುವಾಗಲೇ ಹಣವನ್ನು ಗಳಿಸುವ ಅತಿ ಸುಲಭವಾದ ಕ್ರಮವನ್ನು ತೋರಿಸಿಕೊಡುವ ದಿನಗಳವು. ಎಷ್ಟು ಸುಲಭವೆಂದರೆ, ಪ್ರತಿ ತಿಂಗಳೂ ಕೇವಲ 10 ರೂಪಾಯಿ ಉಳಿಸಿದರೂ 12 ತಿಂಗಳಲ್ಲಿ ನಿಮಗೆ ರೂ. 123.00 ದೊರೆಯುತ್ತದೆ—24 ತಿಂಗಳಲ್ಲಿ ರೂ. 255.00 ದೊರೆಯುತ್ತದೆ. ರಿಕರಿಂಗ್ ಡಿಪಾಸಿಟ್ ಅಕೌಂಟಿನ್ನು ರೂ. 5/-ರಷ್ಟು ಕಡಿಮೆ ಹಣದಿಂದಲೂ ತೆರೆಯಬಹುದು. ಅದರಿಂದಲೂ ನಿಮಗೆ ಒಳ್ಳೆಯ ಬಡ್ಡಿ ದೊರೆಯುತ್ತದೆ. ಕೆನರಾ ಬ್ಯಾಂಕಿನಲ್ಲಿ ಆಕರ್ಷಕವಾದ ಬೇರೆ ಅನೇಕ ಉಳಿತಾಯ ಯೋಜನೆಗಳೂ ಇವೆ. ಈ ಸುಲಭವಾದ, ಲಾಭದಾಯಕವಾದ ಕ್ರಮದಲ್ಲಿ ನಿಮ್ಮ ವಿಶೇಷ ಅವಶ್ಯಕತೆಗಳಿಗಾಗಿ—ವಿಶೇಷ ಸಂದರ್ಭಗಳಿಗಾಗಿ—ಹಣ ಉಳಿಸಲು ಪ್ರಾರಂಭಿಸಿರಿ. ಈ ದಿನವನ್ನು ವಿಶೇಷ ಸ್ಮರಣೀಯವಾದ 'ಉಳಿತಾಯದ ದಿನ'ವನ್ನಾಗಿ ಮಾಡಿಕೊಳ್ಳಿರಿ.

ನಾವತಿ-ಸಂಪರ್ಕಗಳು
123 ಕಚೇರಿಗಳೂ ಅರಿಕೆ.
240ಕ್ಕಿಂತಲೂ ಹೆಚ್ಚು ಶಾಖೆಗಳು
ಜಗತ್ಪ್ರಸಿದ್ಧ ಪ್ರತಿನಿಧಿಗಳು

ಕೆನರಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಲೈಟ್ ಹೌಸ್ ಹಿಲ್, ಮಂಗಳೂರು.
ಆಡಳಿತ ಆಫೀಸು:
112, ಜಯಚಾಮರಾಜೇಂದ್ರ ರೋಡ್, ಬೆಂಗಳೂರು.

BISTA'S-CB-22 KAN

ಐತಿಹಾಸಿಕ ಮಹತ್ವದ

ಬಾರಕೂರಿಗೆ ಇನ್ನೊಮ್ಮೆ ಸಂದರ್ಶನ

ಬರೆದವರು: ಪ್ರೊ ಪಿ. ಗುರುರಾಜ ಭಟ್ಟ.

ಭಾರತದ ಶಾಸನ ವಿಭಾಗದ ಉಪ ಅಧಿಕಾರಿಗಳಾದ ಡಾಕ್ಟರ್ ರಮೇಶ—ಇವರೊಂದಿಗೆ ತುಳುನಾಡಿನ ಒಂದು ಕಾಲದ ದೊಡ್ಡ ಕೇಂದ್ರವಾದ ಬಾರಕೂರಿಗೆ ಇಂದು ಸಂದರ್ಶನವನ್ನೀಯುವ ಸಂದರ್ಭವು ಬಂತು. ನಾವಿಬ್ಬರೂ ತನಿಕ ಸುಮಾರು ಇಪ್ಪತ್ತು ಸಲ ಈ ಚಾರಿತ್ರಿಕ ಸಾನ್ನಿಧ್ಯವುಳ್ಳ ಸ್ಥಳಕ್ಕೆ ಹೋಗಿದ್ದೆ. ಸಾಮಾನ್ಯರಿಗೆ ಒಪ್ಪುವ ಹಾಗೂ ಆಕರ್ಷಣೀಯವಾದ ಬೃಹದಾಕಾರದ ನೆಲೆ ಮತ್ತು ಕಟ್ಟಡಗಳು ಇಲ್ಲಿ ಕಂಡು ಬಾರದಿದ್ದರೂ ಐತಿಹಾಸಿಕ ಅಭ್ಯಾಸದ ದೃಷ್ಟಿಯಿಂದಲೂ ಶಿಲ್ಪದ ಅಭಿರುಚಿಯಿಂದಲೂ ಪ್ರಾಚೀನತೆಯ ದೃಷ್ಟಿಯಿಂದಲೂ ಅಭಿಮಾನಪಡುವ ಅನೇಕ ಅವಶೇಷಗಳು ಇಂದಿಗೂ ಇಲ್ಲಿ ಕಂಡು ಬರುತ್ತವೆ. ಇತಿಹಾಸವನ್ನು ಅಭ್ಯಾಸಿಸುವ ವಿದ್ಯಾರ್ಥಿಗಳು ಸಮಯೂವಕಾಶ ಮಾಡಿಕೊಂಡು ವ್ಯವಧಾನದಿಂದ ಪರಿಶೀಲಿಸಬೇಕಾದಸ್ಥಳವಿದು. ಮಾತ್ರವಲ್ಲ ವಿಶೇಷಕಾರವಾಗಲೀ ಸಮಯೂವಾಗಲೀ ಕಣ್ಣಿರಿದು ಕಲೆಯು ಕಡೆಗೆ ಗಮನವನ್ನಿತ್ತು ಅದರ ಪೋಷಣೆ ಮಾಡಲು ಯೋಗ್ಯತೆಯುಳ್ಳ ಆನೇಕ ಅವಶೇಷಗಳನ್ನು ಹೊಂದಿಕೊಂಡಿರುವ ಸ್ಥಳವು ಬಾರಕೂರಾಗಿದೆ. ಇಲ್ಲಿ ಎಲ್ಲೆಲ್ಲೂ ಬಿದ್ದಕೊಂಡಿರುವ ಭಿನ್ನವಾದ ಗಮನಾರ್ಹವಾದ ಶಾಸನಗಳ ಕಲ್ಲುಗಳನ್ನು ಕಂಡಾಗ ಮನಸ್ಸಿಗೆ ಬಹುವಾದ ವೇದನೆಯುಂಟಾಗುತ್ತದೆ. ಅಂತೆಯೇ ಜೀರ್ಣವಾದ ದೇಗುಲಗಳನ್ನೂ ಆವುಗಳ ಕಡೆಗೆ ಕಂಡು ಬರುವ ಅಜಾಗ್ರತೆಯನ್ನೂ ಗಮನಿಸಿದಾಗ ಬೇಸರವಾಗ ತ್ತದೆ. ಪ್ರತಿಯೊಂದು ಕೇರಿಯಲ್ಲಿಯೂ ಇರುವ ಕರೆಯನ್ನು ಸರಕಾರ ಹಾಗೂ ಸಮಾಜ ಜೀರ್ಣೋದ್ಧಾರ ಮಾಡಿದರೆ ಅಸುಪಾಸಿನ ವ್ಯವಸಾಯಕ್ಕೆ ತುಂಬಾ ಪ್ರೋತ್ಸಾಹ ದೊರೆಯುವುದಂದಲ್ಲಿ ಸಂದೇಹವಿಲ್ಲ.

ಬಾರಕೂರು, ಇತಿಹಾಸ ನವುಗೆ ತಿಳಿಯುವಹಿಸಂತೆ, ಅಳುಪರ ಮತ್ತು ವಿಜಯ ನಗರದ ರಾಜ್ಯಪಾಲರ ಕೇಂದ್ರವಾಗಿತ್ತು. ಐತಿಹ್ಯವು ಹೊವುಜೋ ಒಂದು ವಿಕ್ರಮಾದಿತ್ಯನ ವಿಚಾರವಾಗಿ ತಿಳಿಸ ತ್ತದೆ. ನಮಗೇನೂ ಇಪ್ಪರ ತನಿಕ ಯಾವ ದಾಖಲೆಯೂ ವಿಕ್ರಮಾದಿತ್ಯನ ಕುರಿತು ಏನವರವನ್ನೀಯುವುದಿಲ್ಲ. ಈ ಪ್ರದೇಶನ ಮೇಲೆ ವಿಕ್ರಮಾದಿತ್ಯನೆಂಬ ಒಬ್ಬ ಚಕ್ರವರ್ತಿ ಆಧಿಪತ್ಯವನ್ನು ಸ್ಥಾಪಿಸಿದ್ದಾದರೆ ಅದು ಕಲ್ಯಾಣಿ ಚಾಲುಕ್ಯರ ವಂಶಕ್ಕೆ ಸೇರಿದ ವಿಕ್ರಮಾದಿತ್ಯರಬೇಕು. ಆತನ ಕಾಲವು ಕ್ರಿ. ಶ. 11ನೇ ಶತಮಾನ.

ಬಾರಕೂರಿಗೆ ಸಂಬಂಧಿಸಿದ ಇಪ್ಪರತನ ಕ ನಮಗೆ ದೊರಕಿನ ಶಾಸನಗಳಲ್ಲಿ ಆ ತ್ಯಂತ ಪ್ರಾಚೀನವಾದ ಶಿಲಾ ಲೇಖನಗಳೆಂದರೆ ಬರೇ ಮೂರು. ಈ ಕಲ್ಬರಹಗಳಲ್ಲಿ ಯೂ ತೇದಿ ಕಂಡು ಬರುವುದಿಲ್ಲ. ಆದರೆ ಲಿಪಿಶಾಸ್ತ್ರ ಮತ್ತು ಸಾಹಿತ್ಯದ ಪರಿಶೀಲನೆಯಿಂದ ಇವುಗಳು ಹತ್ತು, ಹನ್ನೊಂದನೇ ಶತಕದವುಗಳಿಗೆನ್ನಲಡ್ಡಿಯಿಲ್ಲ. ಮಹಾಲಕ್ಷ್ಮೀ ದೇವಾಲಯದೆದುರು ಇರುವ ಒಂದು ವೀರಗಲ್ಲು ಸುಮಾರು ಕ್ರಿ. ಶ. 10ನೇ ಶತಕದ್ದಾಗಿದ್ದು ಸಂಭವಿಸಿದ ಒಂದು ರಾತ್ರಗದ ಕುರಿತಾಗಿ ತಿಳಿಸಿ ಕೇರ್ತಿ ಶೇಷನಾದವನ ಶರವಾಗಿ ನಟ್ಟ ವೀರಗಲ್ಲೆಂದು ಹೇಳುತ್ತಿದೆ. ಎರಡೇ ಅಂತರಗಳನ್ನು ಒಳಗೊಂಡ ಈ ವೀರಗಲ್ಲು ಕ್ರಿ. ಶ. 10ನೇ ಶತಕದ್ದೆಂದು ಹೇಳಬಹುದು. ಈ ಶಾಸನದಲ್ಲಿಯೇ ಭಾರಕೂರಿಗೆ 'ಬಾರಕನೂರು' ಎಂಬ ಹೆಸರಿತ್ತೆಂದು ಕಂಡು ಬರುತ್ತದೆ.

ಇನ್ನೆರಡು ವೀರಗಲ್ಲುಗಳು ಕ್ರಿ. ಶ.11ನೇ ಶತಕದವುಗಳು. ಇವುಗಳು ಆಳುಪ ಅರಸನಾದ ಬಂಕಿಯಾಳುಪೇಂದ್ರನ ಕಾಲದವುಗಳು. ದಕ್ಷಿಣ ಕನ್ನಡದಲ್ಲಿ ದೊರಕಿದ ಶಾಸನಗಳ ಪೈಕಿ "ತುಳು" ಎಂಬೀ ಹೆಸರು ಈ ಶಿಲಾ ಲೇಖನಗಳಲ್ಲಿಯೇ ಪ್ರಥಮವಾಗಿ ಕಂಡು ಬರುತ್ತವೆ. ಬಂಕಿಯಾಳುಪೇಂದ್ರನ ಯೂರೋ ಒಬ್ಬ ಸೇನಾಧಿಪತಿಯು ತುಳು ವಿಷಯದಲ್ಲಿ ಜನ್ನ ಆಜ್ಞೆಯನ್ನು ನಿಲಿಸಿ ಮಂಡಳಿಕರನ್ನೂ ಮಹಾಮಂಡಳಿಕರನ್ನೂ ತನ್ನ ಪ್ರಭುವಾದ ಬಂಕಿಯಾಳುಪೇಂದ್ರನ ಕೈವಶ ಮಾಡಿಸಿ ಜೋಳರನ್ನು ಒಡಿಸಿ ಶಾಂತಿ ಸ್ಥಾಪನೆಮಾಡಿದ ವಿಚಾರವು ಇವುಗಳಿಂದ ತಿಳಿದು ಬರುತ್ತದೆ.

ತೇದಿಯಿರುವ ಬಾರಕೂರಿನ ಪ್ರಥಮ ಶಾಸನವೆಂದರೆ ಕ್ರಿ. ಶ. 1140ರದ್ದಾಗಿದೆ. ಇದು ಬುಜಬಲ ಕವಿಯೂಲುವೇಂದ್ರನ ಕಾಲದ್ದಾಗಿದೆ. ಈ ಶಾಸನದ ಆಭಿಪ್ರಾಯ ಹೀಗಿದೆ. ಶಿವಾನುಷ್ಠಾನ ಯೋಗಿ ಎಂಬಾತನು (ಶಾಸ್ತ್ರಾಯಃ ನಾಥ ಪಂಥಕ್ಕೆ ಸೇರಿದವನು) ಶ್ರೀ ಮೂರ್ಕಾಂಡೇಶ್ವರ ದೇವರ ಶ್ರೀಪಾದ ಸನ್ನಿಧಾನದಲ್ಲಿ ಒಂದು ನಿವೇದ್ಯ ಶಾಲೆಯನ್ನು ಮಾಡಿಸಿ ಸೂರಾಲಿನ ತೊಳಹರ ಕೈಯಲ್ಲಿ ಅದರ ಅಧಿಕಾರಕೊಟ್ಟಂತೆಯೂ ಪಾಂಡ್ಯಗದ್ಯಾಣ30 ನ್ನೂ ನಿವೇದ್ಯಕ್ಕೆ ಕೊಟ್ಟಂತೆಯೂ ಇದೆ. ಈ ಶಾಸನದಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತವೆ. ಕ್ರಿ. ಶ. 12ನೇ ಶತಕಕ್ಕೆ ಸೂರಾಲಿನಲ್ಲಿ ತೊಳಹರ ಅಧಿಕಾರ ಸ್ಥಾಪನೆಯಾಗಿತ್ತು. ಮಾತ್ರವಲ್ಲದೆ ಕ್ರಿ. ಶ.12ನೇ ಶತಕಕ್ಕೆ ಮೂರ್ಕಾಂಡೇಶ್ವರ ದೇವಲಯಕ್ಕೆ ಉಲ್ಲೇಖವಿರುವಾಗ ಇದಕ್ಕಿಂತ ಒಂದೆರಡು ಶತಕಗಳಾದರೂ ಹಿಂದಕ್ಕೆ ಈ ದೇಗುಲವು ನಿರ್ಮಾಣವಾಗಿದ್ದಿರಬೇಕು. ಇದಕ್ಕೇ ಪುಷ್ಟೀಕರಣವಾಗಿ ಈ ದೇಗುಲದ ಗರ್ಭಗುಡಿಯು ಗಜಪೃಷ್ಠಾಕಾರವಾಗಿರುವುದೂ ಒಂದು ಕಾರಣವಾಗಿದೆ.

ಬಾರಕೂರಿನ ಪ್ರಾಚೀನತೆಯನ್ನು ಸ್ಥಿರೀಕರಿಸಬೇಕಾದರೆ ಪ್ರಯತ್ನಸಬೇಕು. ಇಲ್ಲಿ ಭೂಶೋಧ ನಡೆಯಬೇಕು. ಈಗ ದೊರಕುವ ಅವಶೇಷಗಳ ಆಧಾರದಿಂದ ಈ ಕೆಳಗಣ ಹಲವು ತೀರ್ಮಾನಗಳನ್ನು ಮಾಡಬಹುದು. ಬಾರಕೂರು ಸುಮಾರು 10-11ನೇ ಶತಮಾನಕ್ಕೇನೇ ಹತ್ತು ಕೇರಿಗಳಿಂದ ಸೇರಿದ ಒಂದು ಹಿರಿದಾದ ಪಟ್ಟಣವಾಗಿತ್ತು. ಜೈನಕೇರಿಯಲ್ಲಿರುವ ದ್ವಿಬಾಹು ಮತ್ತು ಕಿರೀಟ ವಿರಹಿತ ಪಾರ್ಶ್ವನಾಥ ಮತ್ತು ಕೋಟಿ ಕೇರಿಯ ದ್ವಿಬಾಹು ಗಣೇಶ (ಬಟ್ಟೆ ವಿನಾಯಕ) ಈ ಎರಡು ಮೂರ್ತಿಗಳ ಶಿಲ್ಪವನ್ನು ಪರಿಶೀಲಿಸಿದರೆ ಇವುಗಳು ಕನಿಷ್ಟ ಪಕ್ಷ ಕ್ರಿ. ಶ. 10ನೇ ಶತಮಾನದಿಂದ ಹಿಂದಣದವು ಎನ್ನಬಹುದು. ಜೀರ್ಣಕೇರಿ ಗಣೇಶನ ವಿಗ್ರಹವು ಎಲ್ಲಿಯು ಕೆರೆಯಿಂದ ಪಡೆದುದೆಂಬ ವಿಷಯವೂ ಬಟ್ಟೆ ವಿನಾಯಕನ ದೇವಳವು ಈಗ ಇರುವುದಕ್ಕಿಂತ ತುಂಬಾ ಕೆಳಮಟ್ಟದಲ್ಲಿತ್ತೆಂಬ ವಿಚಾರವೂ ಕೇಳಿಬರುತ್ತವೆ. ಇದಕ್ಕೆ ಸರಿಯಾಗಿ ಇವುಗಳ ಶಿಲ್ಪದ ಲಕ್ಷಣವು ಸಾಕ್ಷ್ಯವಾಗಿದ್ದಂತೆ ಕಂಡು ಬರುತ್ತದೆ.

ಮೂಡುಕೇರಿಯ ಸೋ ವ.ನಾಥ ದೇವಾಲಯವೂ ಪ್ರಾಚೀನವಿದ್ದರಬಹುದಾದರೂ ಈಗಣ ಅವಶೇಷಗಳಿಂದ ನಿಶ್ಚಿತತೆ ಸಾಧ್ಯವಿಲ್ಲ. ದೇಗುಲದ ಜೀರ್ಣೋದ್ಧಾರ ಕೆಲಸ ಜೆನ್ನಾಗಿನಡೆದಿದೆ. ಆದರೆಈದೇಗುಲದಒಳಮಂಟಪದಲ್ಲಿರುವಎರಡುಶಿಲಾಸ್ತಂಭಗಳು ಕಾಲ ನಿರ್ಣಯಕ್ಕೆ ತುಂಬಾ ಸಹಕಾರವಾಗುತ್ತವೆ. ಒಂದು ಮೂರ್ತಿಯು ಜನಾರ್ದನ ಸ್ವಾಮಿಯದು. ಸುಮಾರು 3 ಅಡಿ ಎತ್ತರವುಳ್ಳ ಪ್ರಭಾವಳಿ ವಿರಹಿತವಾದ ಈ ಮೂರ್ತಿಯು ಬಹು ಸುಂದರವಾಗಿದೆ. ಸು. ಕ್ರಿ. ಶ. 11—12ನೇ ಶತಕದ ಶಿಲ್ಪವನ್ನು ತೋರ್ಪಡಿಸುತ್ತದೆ. ಇದು ಪ್ರತ್ಯೇಕವಾದೊಂದು ದೇಗುಲದ ಮೂಲಸ್ಥಾನ ದೇವತವಾಗಿದ್ದಿರಬೇಕು. ಆ ದೇಗುಲವು ಬೆದ್ದು ಹೋದ ನಂತರ ಮೂರ್ತಿಯನ್ನು ಮೂಡುಕೇರಿಯಲ್ಲಿ ತಂದಿರಿಸಿದ್ದಿರಬೇಕು. ಅಂತೆಯೇ ಇಲ್ಲಿರುವ ಸರಸ್ವತಿಯು ವಿಗ್ರಹವು ಮುದ್ದಾಗಿದ್ದು ಸರಾಸರಿಯ ತೋರಣನನ್ನೆಳಗೊಂಡು ಎಂಟೆಂದರೂ ಕ್ರಿ. ಶ. 12ನೇ ಶತಕಕ್ಕೆ ಅನ್ವಯಿಸುವ ಮೂರ್ತಿಯಾಗಿದೆ. ಇದೇ ಕಾಲಕ್ಕೆ ಸರಿಹೋಗುವ ಶಿಲ್ಪ ಮೂಡುಕೇರಿ ದೇಗುಲಕ್ಕೆ ಸವಿಾಪವಿರುವ ಮಹಾಸತಿಯರ ಗುಡಿ ಎನ್ನಿಸಿಕೊಳ್ಳುವಲ್ಲಿರುವ ಜೈನ ಬ್ರಹ್ಮನ ಶಿಲಾಮೂರ್ತಿಯುದಾಗಿದೆ. ಜಾಳಿಕೇರಿಯು ಸಮೀಪವಿರುವ ಕಾಡಿನ ಮಧ್ಯದಲ್ಲಿ ಹಾಳುಬಿದ್ದಿರುವ ಎರಡು ಗುಡಿಗಳ ಪೈಕಿ ಒಂದರಲ್ಲಿ ಕಂಡುಬರುವ ಜನಾರ್ದನ ಮೂರ್ತಿಯೂ ಮೂಡುಕೇರಿಯಲ್ಲಿ ಚಿಕ್ಕದಾದೊಂದು ಹಾಳಾದ ಗುಡಿಯಲ್ಲಿರುವ ನಾರಾಯಣೀ ವಿಗ್ರಹವೂ ಸೌಂದರ್ಯದ ದೃಷ್ಟಿಯಿಂದಲೂ ಕಲಾದೃಷ್ಟಿಯಿಂದಲೂ ಆಕರ್ಷಣೀಯವಾಗಿವೆ.

ಸುವಾರು ಕ್ರಿ. ಶ.10—11ನೇ ಶತಕಕ್ಕೆ ಒಪ್ಪುವ ಮೂರು ಮೂರ್ತಿಗಳು ಪಂಚಲಿಂಗೇಶ್ವರ ದೇಗುಲವಲ್ಲಿ ಕಂಡು ಬರುತ್ತವೆ. ಒಂದು ಗಣಪತಿ ವಿಗ್ರಹ, ಒಂದು ಸೂರ್ಯ ವಿಗ್ರಹ; ಮತ್ತೊಂದು ಸ್ಕಂದನ ಮೂರ್ತಿ.

ಈ ಮೂರು ಮೂರ್ತಿಗಳೂ ಕಲೋಪಾಸಕರಿಗೆ ಔತಣವನ್ನೀಯುವುವುಗಳು. ಈಗ ಮಹಾ ಲಕ್ಷ್ಮಿ ಎಂದು ಕರೆಯಲ್ಪಡುವ ದೇವತಾ ಸಮೂಹವು ಪ್ರಾಯಃ ಕ್ರಿ. ಶ. 9—10ನೇ ಶತಕದ್ದಿದ್ದು ಬಹುಶ ಸಪ್ತ ಮಾತೃಕೆಯರಲ್ಲಿ ಪ್ರಾಮುಖ್ಯರಾದ ಬ್ರಾಹ್ಮೀ, ಮಾಹೇಶ್ವರೀ ಮತ್ತು ವೈಷ್ಣವೀಯರನ್ನು ನಿರ್ದೇಶಿಸುತ್ತವೆ. ಈ

ಇದೀಗಲೇ ಹೊಸತಾಗಿ ತೆರೆಯಲ್ಪಟ್ಟಿದೆ.

ನೇತ್ರ ರಕ್ಷಣೆಗಾಗಿ— ನಿಮ್ಮ ಕಣ್ಣುಗಳ ಸೌಂದರ್ಯಕ್ಕಾಗಿ

ಅತ್ಯಾಧುನಿಕ ಆಕರ್ಷಣ ವಿಧಾನ

ಕಾಂಟೆಕ್ಟ್ ಲೆನ್ಸ್ (Contact Lens)



Phone: 26144-49

The only Qualified optometrist of South

Shetty's Optics & Contact Lens Clinic

London Qualified Optometrists

೭ ಈಗೆನ್ ಬೋಸ್ಕ್ವೀಟ್, ಬಾರ್ಟುರಾಡ್ ನೇಟ್ ಪೋಸ್ಟ್ ಆಫೀಸಿನ ಎದುರು

ಬೊಂಬಾಯಿ - ೧.

ಲಂಡನ್ ಕಡಬೇವಾದ ಹಾಗೂ ಜಗದ್ವ್ಯಾಪಿ ಆನ ಭವತ್ಕಳ ನೇತ್ರ ತಜ್ಞರಿಂದ ನೇತ್ರ ಪರೀಕ್ಷೆ.

ದಕ್ಷಿಣ ಕನ್ನಡಿಗರಲ್ಲೇ ಮೊದಲಿಗರಾದ ಕಾಂಟೆಕ್ಟ್ ಲೆನ್ಸ್ ತಜ್ಞರು.

ಒಂದೇ ಲೆನ್ಸಿನಲ್ಲಿ ಪ್ರತ್ಯೇಕ ಪವರನ ೧೪ ಅದೃಶ್ಯ ಭಾಗಗಳಿರುವ 'ವೆಂಟೆಕ್ಸ್ ಲೆನ್ಸ್'ನ ತಜ್ಞರು.

ತೀವ್ರ ಚಟುವಟಿಕೆಗಳುಳ್ಳ

ನಾಥುಲಾ ಕಣಿವೆ

ಬರೆದವರು : ನೋ. ಆರ್. ಎನ್. ಮೂ.

ಒಂದು ಕಾಲಕ್ಕೆ ನಾಥೂ ಲಾ ಒಂಟೊಲು ಯದ ಭಾರೀ ಚಟುವಟಿಕೆಯ ಕಣಿವೆ ಮಾರ್ಗ. ಸಿಕ್ಕಿಂ— ಲಾಸಾ ವ್ಯಾಪಾರೀ ಮಾರ್ಗ ನಾಥುಲಾ ಮುಖಾಂತರವೇ ಹಾ ಯುದ್ದುಹೋಗುತ್ತದೆ. ಕಳೆದ ಒಂದೆರಡು ವ ರ್ಷಗಳಿಂದ ನಾಥುಲಾದಲ್ಲಿ ಭಾರತೀಯ ಮತ್ತು ಚೀನೀಯ ಸೈನ್ಯ ಪಡೆಗಳು ಸದಾ ಸಜ್ಜಾಗಿ ಒಂದನ್ನೊಂದು ಎದುರಿಸಿ ನಿಂತಿ ವೆ. ಸದ್ಯಕ್ಕೆ ಚೀನಿಯರು ಕಚ್ಚೆತ ತೊಂದ ರೆ ಕೊಡುವುದರ ಬಗ್ಗೆ ಯಾವ ಚಿಹ್ನೆಗ ಳೂ ಇಲ್ಲ. ಹಿಮಾಲಯದ ಮರುತ ದೇ ವತೆಯ ಚಲನವಲನವನ್ನಾದರೂ ಕಂಡು ಹಿಡಿಯಬಹುದು, ಆದರೆ ಚೀನೀಯರು ಯಾವಾಗ ಏನು ಮಾಡುತ್ತಾರೆ ಎಂಬುದ ನ್ನು ಮೊದಲಾಗಿ ಅರಿಯಲು ಶಕ್ಯಸಾಧ್ಯ.

ಹಿಮಗಿರಿಯ ಹವೆ ವಿಪರೀತ. ಸಿಕ್ಕಿಂ— ಟಿಬೆಟ್ ಗಡಿಯ ಕಣಿವೆ ಮಾರ್ಗದಲ್ಲಿ ಯಂತೂ ಹವೆ ಇನ್ನೂ ವಿಷಮ ವಾಗಿದೆ. ಕೊರೆಯುವ ಗಾಳಿ ಹಿಮಚ್ಛಾದಿತ ಬೆಟ್ಟಗಳು ಕುಸಿದು ಬೀಳುತ್ತವೆ, ಸಂಪ ರ್ಕ ಶಕ್ತಿ ಹೋಗುತ್ತದೆ. ಮುಂಜಾವಿನ ಯ ಪ್ರದೇಶಗಳೊಂದಿಗೆ ಟೆಲಿಫೋನ್ ಸಂಪರ್ಕ ಸಾಧಿಸುವದು ಬಲು ಗಹನ ವಿ ಷಯವಾಗಿ ಬಿಡುತ್ತದೆ. ಮಾರ್ಗ ಕಟ್ಟು ದುದರಿಂದ ವಾಹನ ಸಂಚಾರಕ್ಕೆ ವ್ಯತ್ಯ ಯಬಂದರೆ, ಗಿರಿ ಶಿಬಿರದ ಸೈನಿಕ ರಾಣಿಗಳಿಗೆ ಪೂರೈಕೆ ನಿಂತು ಹೋಗುತ್ತದುಟು.

ಈ ಗಿರಿ ಶೃಂಗಗಳ ಮೇಲೆ ವಾಹನವ ನ್ನು ನಡೆಸುವದೆಂದರೆ ಅತಿ ಸಾಹಸದ ಚಲಾಚಿಯ ಮಾತೇ ಸರಿ. ಈ ಅವಾಗು ದ ಮಾರ್ಗಗಳಲ್ಲಿ ಶಂಚರಿಸುವಾಗ ಸ್ವಲ್ಪ ಮುಗ್ಗರಿಸಿದರೆ ಅಧಃಪಾತಕ್ಕೆ ಇಳಿದು ಕ ಣಿವೆಯಲ್ಲಿ ಕೊನೆಗೂ ಕಣ್ಮರೆಯಾಗಿ ಹೋಗಬೇಕಾಗುತ್ತದೆ. ಪ್ರಪಂಚದ ಆ ಕೃಷ್ಟತ ಭೂ ಪ್ರದೇಶದಲ್ಲಿ ಕಣಿ ವೆಗಳಿಗೆ ಮುಟ್ಟುವ ದಾರಿಯನ್ನು ರಚಿಸಿ ತಂಡನಿಯರಿಂಗ್ ದಳದವರು ಜವಾಬ್ದು ಕೆಲಸ ಮಾಡಿದ್ದಾರೆ. ಸಾವಿರಾರು ಸಂಖ್ಯೆಯಲ್ಲಿ ಸಿಕ್ಕಿಂ ನೇ ಪಾಳ ಮತ್ತು ಟಿಬೆಟಿನ ಜನರು ಸ್ವಯಂ ಪ್ರೇರಣೆಯಿಂದ ಮಾರ್ಗ ರಚನೆಯಲ್ಲಿ ಶ್ರ ಮಿಸಿದ್ದಾರೆ. ಹೊಸ ಮಾರ್ಗ ರಚನೆ ವಿ ಶೇಷವಾಗಿ ಸಿಕ್ಕಿಂನ ಜನತೆಗೆ ಹೊಸ ಆ ರ್ಥಿಕ ಅಭ್ಯುದಯದ ದ್ವಾರವನ್ನು ತೆರೆದಿ ಟ್ಟಿದೆ.

ಮಾರ್ಗವನ್ನು ರಚಿಸುವವರು

ಸಿಕ್ಕಿಂನ ಜನರು ಮಾರ್ಗರಚನೆಯ ಕಾರ್ಯದಲ್ಲಿ ಬಹಳಷ್ಟು ಭಾಗವಹಿಸಿದ್ದಾರೆ. ಸದಾ ಹಸನ್ಮುಖಿ ಜನಾಂಗವಾದ ಸಿಕ್ಕಿಂ ಜನರು ಸಹಾಯ ಹಸ್ತ ನೀಡಲು ಸದಾ ಸನ್ನದ್ಧರು. ಮಾರ್ಗ ರಚನೆಯಲ್ಲಿ ತೊಡ ಗಿದ ಪ್ರತಿಯೊಬ್ಬ ಮಹಿಳೆಗೆ ಅಧಿಕಾರಿ ಪುರುಷರಿಗೆ ಕಲಾಳಿ, ಖಂಡೂಗಳು ಪ್ರತಿದಿ ನ ಕೂಲಿ ಎಂದು ಕೊಡಲಾಗುವದು.

ಈಗಿರು ಮುರಿಯುತ್ತಿರುವ ಕಣಿವೆಯ ಮೇಲೆ ನೋಡಿಗಳು ತೇಲುತ್ತಿರುವಂತೆ, ಜವಾನರು ಪ್ರಶಸ್ತ ನದನದಿಂದ ತಮ್ಮ ಕಾ ರ್ಯದಲ್ಲಿ ಆಸಕ್ತರಾಗಿರುವರು. ದೇಶ ಸಾ ನೂನ್ಯ ಅಧ್ಯಾಗಳು ಇಲ್ಲಿಗೆ ಬಂದರೆವ್ಯಾ ಜವಾಯು ವಿರಳವಿರುವ ಈ ಪ್ರದೇಶದಲ್ಲಿ ಉಸಿರಾಡಲೂ ಪ್ರಯಾಸ ಪಡಿಕೊಳ್ಳ ಬೇಕ ಗುತ್ತದೆ.

ಕೆಚ್ಚು ಹಸುರಿನ ಪ್ರದೇಶಗಳಾದ ಪಂ ಜಾಬ್, ಹರಿಯಾಣ, ಉತ್ತರ ಪ್ರದೇಶ, ಮಹಾರಾಷ್ಟ್ರ, ಮದ್ರಾಸ್ ಮತ್ತು ಕೇರ ಳಗಳಿಂದಲೂ, ರುಕ್ಷ ಪ್ರದೇಶವಾದ ರಾ ಜಸ್ಥಾನದಿಂದಲೂ ಜವಾನರು ಇಲ್ಲಿಗೆ ಬಾ ದಿದ್ದಾರೆ. ಹೊಸ ವಾತಾವರಣಕ್ಕೆ ಪೂ ರ್ಣವಾಗಿ ಹೊಂದಿಕೊಂಡಿದ್ದಾರೆ. ಜವಾ ನರ ಮನೋನಿಧ್ಯಾರ ಮತ್ತು ಸೈನಿಕ ಶಿಸ್ತಿನ ಪರಿಣಾಮ ಇವುಗಳಿಂದಾಗಿ ವಿ ಷಮ ಪರಿಸರದಲ್ಲಿಯೂ ಜವಾನರು ಸ ಮಾಧಾನ ಸಂತೋಷದಿಂದ ಧೈರ್ಯ ಪ್ರಯೋ ಜ್ಯರಾಗಿದ್ದಾರೆ. ನಮ್ಮ ಜವಾನರು ಯಾ ವ ಹವಾಮಾನದಲ್ಲಿ ತಿಳಸ ಮಾಡುತ್ತಿದ್ದಾರೆ ಎಂಬುದನ್ನು ಅನುಭವಿಸಿ ನೋಡಿದರೇನೇ ಅರ್ಥವಾಗುವ ವಿಷಯ.

ಜವಾನರ ಸೈನಿಕಮಟ್ಟು ಉನ್ನತವಾ ಗಿದೆ. ದೇಶದ ಸಾರ್ವಭೌಮತ್ವಕ್ಕೆ ಶತ್ರುಗ ಳು ತಾಕುವ ಯಾವದೇ ಸವಾಲನ್ನು ವಿ ಶ್ವಾಸ ಪೂರ್ವಕವಾಗಿ ಎದುರಿಸುವ ಕೆಚ್ಚ ನ್ನು ಪಡೆದವರಾಗಿದ್ದಾರೆ. ನಮ್ಮ ಜವಾನ ರು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರು ಸೈನಿಕ ಪಡೆಯ ಕೆಳದರ್ಜೆಯ ಅಧಿಕಾರಿ ಗಳಲ್ಲಿಯೂ ಹೊಸ ಚೈತನ್ಯ, ಸಮರ್ಪಣ ಭಾವದ ಹೊಸ ಉತ್ಸಾಹ ಕಂಡು ಬರುತ್ತಿದೆ.

ಕೇವಲ ಕೆಲ ವರ್ಷಗಳ ಹಿಂದೆ ಸಿಕ್ಕಿಂ —ಟಿಬೆಟಿನ ಗಡಿಯಲ್ಲಿರುವ ಕಣಿವೆ ಮಾ ರ್ಗಗಳಾದ ನಾಥೂ ಲಾ, ಜೆಲೆಪೆಲಾ, ಡೊಂಗ್ಕಿಲಾ ಮುಂತಾದವುಗಳನ್ನು ಭೂಗೋಳ ವಿಷಯ ವಿಷಯಾಂತರ ವಿದ್ಯಾ ರ್ಥಿ ಮಾತ್ರ ಅರಿತಿದ್ದ. ಇಂದು ಈ ಕಣಿ ವೆ ಮಾರ್ಗಗಳು ನಮ್ಮ ವೀರ ಜವಾನರ ಯಶಸ್ಕಾಥೆಗಳಾಗಿವೆ.

ಇಷ್ಟು ಎತ್ತರ ಪ್ರದೇಶದಲ್ಲಿ ಕಾರ್ಯ ಮಾಡಬೇಕಾದ ಜವಾನರಿಗೆ ಹೇಗೆ ಆಸಕ್ತಿ ಉಂಟಾಗಬೇಕು? ಭೀಕರ ವಿಕಾಂತಿಕೆ ಅವ ರನ್ನು ಕಾಡುವದು, ವೈವಿಧ್ಯರಹಿತ ಪರಿ ಸರ ತಲೆಬೇಧರ ಕಾರಣವದು. ಮನೆಯಿಂದ ಬಂದ ಪತ್ರಗಳನ್ನು ಓದುವದರಲ್ಲಿ ಜವಾ ನರು ಕೆಲವಮಯವನ್ನಾದರೂ ಆನಂದ ತುಂದಿಲರಾಗಿ ಕಳೆಯುವರು. ಟ್ರಾನ್ಸಿ ಸ್ಟರ್ ಜವಾನನ ಸಂಗಾತಿ.

ನಾಥೂ ಲಾದಲ್ಲಿ ಸಿಕ್ಕಿಂ ಮತ್ತು ಟಿಬೆ ಟ್ಗಿಗಳ ನಡುವಿನ ಅಂತರ್ರಾಷ್ಟ್ರೀಯ ಗಡಿಗಳನ್ನು ಗುರುತಿಸಲು ಕೇವಲ ಕೆಲ ಅಸಹ್ಯರೂಪದ ಬಿದಿರು ಮೆಳೆಯನ್ನು ನೆ ಡಲಾಗಿದೆ. ಈ ಬಿದಿರು ಮೆಳೆಯು ಮೇಲೆ ಚೀನೀ ಸುರು ಹರಿದ ಬಿಳಿವಸ್ತ್ರಗಳ ತುಂ ಡನ್ನು ಅಂಟಿಸಿದ್ದಾರೆ. ಈ ಬಿದಿರು ಮೆಳೆ ಯ ಅನತಿ ದೂರದಲ್ಲಿ ಪ್ರಧಾನಿ ನೆಹರೂ ಜಿಯವರು ಗಾರ್ಡರಲ್ಲಿ ನಿಲ್ಲಿಸಿದ್ದ ಫಲಕವಿ ದೆ. ಆದರಾಜೆಗೆ ಚೀನಿಯರ ದುರಾಗ್ರಹ ಪೂ ರಿತ ತೊಳಲಾಟವು ತ್ತಿರುವ ಲಾಮೂಗಳ ದೇಶವು ಶಾಂತವಾಗಿ ಹೆಬ್ಬಿದೆ!

ಚೀನಿಯರು ತಮ್ಮ ಭಾಗದಲ್ಲಿ ಮಾ ವೋನ ಭಾವಚಿತ್ರವೊಂದನ್ನು ಕೇಂಬಲಿಗೆ ಕಚ್ಚೆ ತೊಗು ಹಾಕಿದ್ದಾರೆ, ಈ ಮಾವೋ ನ ಚಿತ್ರ ಕೆಲವು ಮೈಲ ಕಣ್ಣಳತೆಯಷ್ಟಾಗುತ್ತ ದೆ, ಮತ್ತೆ ಕೆಲ ದಿನಗಳ ನಂತರ ತಾನೆಸಿ ಕೊಳ್ಳುತ್ತದೆ. ಬಹುಶಃ ಚೀನವಳ್ಳಿ ಇಂ ದು ನಡೆಯುತ್ತಿರುವ ಅಧಿಕಾರ ಕಚ್ಚಾಟ ದ ಪಡಿನೆಳಲು ಚೀನಿ ಸುರ ಟಿಬೆಟಿನಲ್ಲಿ ರು ಸೈನ್ಯದಲ್ಲಿ ಪ್ರಧಾನ ಬೀರಿದೆ ಚೀನ ದವರು ಸೇರುಗಳಿಗೆ ಬಹುಶಃ ಅನುಗು ಣವಾಗಿ ನಾಥುಲಾ ಪಡೆಗಿನ ಚೀನಿಯು ರ ಸೈನ್ಯಾಧಿಕಾರಿಗಳು ಮಾವೋನ ಚಿತ್ರ ವನ್ನು ಒಮ್ಮೆ ಪ್ರದರ್ಶಿಸುವದು, ಒಮ್ಮೆ ಮರೆ ಮಾಡುವದು. ನಾಥುಲಾದ ಪಡೆಗೆ ಕಾಣಿಸಿಕೊಳ್ಳುವ ಚೀನಿ ಸೈನಿಕರು ಬಲು ಚುರುಕಾಗಿದ್ದಾರೆ

ನಾಥುಲಾದ ಶಾಂತಿಯನ್ನು ಚೀನಿ ಯರ ಧ್ವನಿವರ್ಧಕ ಯಂತ್ರಗಳು ಕದಡು ತ್ತಿವೆ. ಚೀನಿಯರು ಗಡ್ಡಿಂಗ್ ಹಾಡಿಯು ಲ್ಲಿ ಪ್ರಚಾರ ನೀಡಲು ಧ್ವನಿವರ್ಧಕ ಯಂತ್ರಗಳಲ್ಲಿ ಕಿರುಚತ್ತಾರೆ. ಭಾರತೀ ಯ ಜವಾನನು ಚೀನಿಯರ ಈ ಲಹರ್ಪ್ರ ಚಾರವನ್ನು ಪೂರ್ತ ಉಲ್ಲೇಕ್ಷಿಸಿದ್ದಾನೆ. ತನ್ಮ ವೃತ್ತಿಯಲ್ಲಿ ಚೀನಿಯರು ಎಂಥೆ ಡ್ಡುವ ನೂರೆಂಟು ತೊಂದರೆಗಳಲ್ಲಿ ಇಂಥ ಪ್ರಚಾರವೂ ಒಂದು ಎಂದು ಅರಿತು ಆ ದರಿಂದ ಎಷ್ಟು ವಿಚಲಿತನಾಗದೆ ಉಳಿದಿ ದ್ದಾನೆ!

ಮೂರ್ತಿಗಳು ವೈಣ್ಣವ. ಇವುಗಳಲ್ಲಿ ಮೂಲದಲ್ಲಿದ್ದಿರಬೇಕಾದ ತಲೆಯ ವೈಶಿ ಷ್ಟ್ಯಗಳು ಆಗಿಂದಾಗ್ಗೆ ಬಣ್ಣ ಬಳಿಯುವು ದರಿಂದ ಮಸಿ ಹೋಗಿದ್ದಿರಬೇಕು. ಇಂ ತಹ ಸಪ್ತ ಮಾತೃಕಾ ಪೈಣ್ಣವ ಮೂ ರ್ತಿಗಳು ಇವುಗಳಿಗಿಂತಲೂ ಅಧಿಕ ಗಾತ್ರ ದಲ್ಲಿ ಉದ್ದಾವರದಲ್ಲಿ ಕಂಡು ಬರುತ್ತವೆ.

ಹೀಗೆ ಈಗ ನೈವೈವಾಗುವ ಅವಶೇಷ ಗಳ ಸಹಾಯದಿಂದಲೂ ದೊರಕಿರುವ ಹಲಕೆಲವು ಕಲ್ಬರಹಗಳ ಸಹಾಯದಿಂದಲೂ ಬಾರಕೂರಿನ ಪ್ರಾಚೀನತೆಯನ್ನು ಸುಮಾರು ೨—೧೦ನೇ ಶತಮಾನಕ್ಕಂ ತೂ ನಿಸ್ಸಂದೇಹವಾಗಿ ಕೊಂಡೊಯ್ಯಬ ಹುದು. ಉತ್ಖನನ ಮತ್ತು ಅಧ್ಯಾಪನ ನಿರಂತರವಾಗಿ ಈ ಊರಿನ ಪ್ರಾಚೀನ ಇತಿಹಾ ಸಕ್ಕೆ ಹೆಚ್ಚಿನ ವಸ್ತು ದೊರಕಬಹುದು.

ವಿಘ್ನಪರಂಪರೆಯಿಂದ ಪಾರುಗೊಳಿಸಿ, ನಮ್ಮ
ಮನೋಭೀಷ್ಟೆಗಳನ್ನು ಈಡೇರಿಸಿ ಬದುಕಿನ ಸುಖವನ್ನೂ
ಭವಿಷ್ಯವನ್ನೂ ರೂಪಿಸುವ ದೇವ ವಿಘ್ನೇಶ್ವರ.

ನೆನ್ಮೆಲ್ಲರನ್ನು ಆಪತ್ತು ವಿಪತ್ತುಗಳಿಂದ ಸಂರಕ್ಷಿಸಿ
ಅರ್ಥಿಕ ಭದ್ರತೆಯನ್ನೂ ಅತಿಶಯ ಶ್ರೇಯಸ್ಸನ್ನೂ
ನಮಗೆ ವಿಘ್ನೇಶ್ವರನು ನಿರಂತರ ಕೀಡಲಿ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಶ್ರೀಕೃಷ್ಣನ ದ್ವಾರಕಾ ನಗರ ಎಲ್ಲಿದೆ?

(ಐದನೇ ಪುಟದಿಂದ)

ಕ್ಷೇತ್ರದಲ್ಲಿ ಆರ್ಥಾತ್ ಸೌರಾಷ್ಟ್ರದಲ್ಲಿ ದ್ವಾರಕಾ ಎಂಬುದಾಗಿಯೂ ಪುರಾತತ್ವ ಸಂಶೋಧನೆಗಳಿಂದ ಕಂಡುಬರುತ್ತದೆ. ಈ ಸ್ಥಳದ ಉಲ್ಲೇಖ ಮಹಾಭಾರತದ ಅನೇಕ ಪ್ರಕರಣಗಳಲ್ಲಿ ಕಂಡು ಬರುತ್ತದೆ. ಶ್ರೀ ಕೃಷ್ಣನ ಶಾಸನಕ್ಕೊಳಪಟ್ಟರುವ ಎರಡನೆಯ ಕ್ಷೇತ್ರ "ಪ್ರಭಾಸಪಟ್ಟಣ" ಎಂಬುದೂ ಇತಿಹಾಸ ಪ್ರಮಾಣಗಳಿಂದ ಸಿದ್ಧವಾಗುತ್ತದೆ. ಪ್ರಭಾಸ ನಗರ ಸೌರಾಷ್ಟ್ರದ ದಕ್ಷಿಣ—ಪಶ್ಚಿಮ ದಿಕ್ಕಿನಲ್ಲಿ ಸಮುದ್ರ ತಟದಲ್ಲಿದ್ದು ಅತ್ಯಂತ ಸುರಮ್ಯ ಹಾಗೂ ಫಲವತ್ತಾದ ಪ್ರದೇಶವಾಗಿರುತ್ತದೆ. ಇದು ಸೋಮನಾಥ ಮಂದಿರದಿಂದ ಸ್ವಲ್ಪವೇ ದೂರ ಹಿರಣ್ಯ ನದಿ ಮತ್ತು ಸಮುದ್ರದ ಸಂಗಮ ಸ್ಥಳದಿಂದ ಸ್ವಲ್ಪ ಹಿಂದಕ್ಕೆ ಇದೆ. ಕ್ರಿ. ಶ. ೧. ಶಂಂರಿಂದ ೧. ೨೦೦ಕ್ಕೆ ಪೂರ್ವದಲ್ಲಿ ಒಂದು ಸಮೃದ್ಧ ಸಂಸ್ಕೃತಿ ಅಸ್ತಿತ್ವದಲ್ಲಿತ್ತೆಂಬುದು ಇಲ್ಲಿ ಈ ತನಕ ಗೈದ ಭೂಗರ್ಭ ಅಗೆತದಿಂದ ದೊರೆತ ಆಧಾರಗಳಿಂದ ಕಂಡು ಬರುತ್ತದೆ. ಈ ವರೆಗೆ ನಡೆಸಿದ ಶೋಧನೆಗಳು ವಿಸ್ತಾರವಾದ ಈ ಪ್ರದೇಶ ಶ್ರೀ ಕೃಷ್ಣ, ವಸುದೇವರ ಕಾಲದ ಸಂಸ್ಕೃತಿಯ ಪ್ರಧಾನ ಕೇಂದ್ರವಾಗಿತ್ತೆಂಬುದರ ಸಂಕೇತವನ್ನೂ ಒದಗಿಸಿವೆ; ಮುಂದಕ್ಕೂ ವಿಸ್ತೃತವಾಗಿ ಸಂಶೋಧನೆ ಗೈದಲ್ಲಿ ಈ ಕುರಿತು ಸಂಪೂರ್ಣ ಪ್ರಮಾಣಗಳು ಈ ಕ್ಷೇತ್ರದಲ್ಲಿ ದೊರಕುವುದರಲ್ಲಿ ಸಂಶಯವಿಲ್ಲ.

ಈ ಸಂದರ್ಭದಲ್ಲಿ "ದ್ವಾರಕಾನಗರ"ದ ಮೂಲ ಸ್ಥಾನ ಯಾವುದು? ಎಂಬ ಸಮಸ್ಯೆಯನ್ನು ಫಲವಾರಿಸುವಲ್ಲಿ ಕೆಳಗಿನ ಕೆಲ ವಂಶಗಳು ಸಹಕಾರಿಯಾಗುವವೆಂದು ಹೇಳಬಹುದು.

1. ಮಹಾಭಾರತದ ಆಧಾರದಿಂದ ಕಂಡು ಬರುವುದೇನೆಂದರೆ, ದ್ವಾರಕಾನಗರಿ ರೈವತದ ಮತ್ತು ಉರ್ಜಯಂತ ಪರ್ವತಗಳಿಗೆ ಹೆಚ್ಚು ದೂರದಲ್ಲಿರಲಿಲ್ಲ; ಮತ್ತು ದ್ವಾರಕೆಗೆ ಹೋಗ ಬೇಕಾದರೆ ಈ ಎರಡು ಪರ್ವತಗಳನ್ನು ದಾಟಬೇಕಾಗುತ್ತಿತ್ತು. ರೈವತ ಪರ್ವತ ಶ್ರೇಣಿ ದ್ವಾರಕೆಯ ಪೂರ್ವದ ಕಡೆಗಿತ್ತು.

2. ಮತ್ಸ್ಯ ಪುರಾಣದ ಆಧಾರದಲ್ಲಿ ದೊರಕುವ ಒಂದು ಸೂಚನೆಯ ಆಧಾರದಂತೆ "ಕುಶಸ್ಥಲ"ಕ್ಕೇನೇ "ದ್ವಾರಕಾ" ಎಂಬ ಹೆಸರನ್ನಿಡಲಾಗಿತ್ತು ಎಂದು ಕಂಡು ಬರುತ್ತದೆ.

3 ದ್ವಾರಕಾ ನಗರ "ಅನಾರ್ತ ದೇಶ" ದಲ್ಲಿದೆಯೆಂಬುದಾಗಿ ವಾಯು ಪುರಾಣ ಮತ್ತು ಮಹಾಭಾರತದಲ್ಲಿ ಕಂಡು ಬರುತ್ತದೆ.

4 ದ್ವಾರಕೆಯು ಸಮೀಪ ಅನೇಕ ದ್ವೀಪಗಳಿದ್ದವೆಂದೂ ದ್ವಾರಕೆಯ ಆಸುಪಾಸಿನಲ್ಲಿ ಉಪ್ಪು ವಿಶೇಷವಾಗಿ ದೊರಕುತ್ತಿತ್ತೆಂದೂ ಹರಿ ವಂಶ ಪುರಾಣದಲ್ಲಿ ಉಲ್ಲೇಖವಿದೆ.

5 ಭಾಗವತ ಪುರಾಣ ಮತ್ತು ಮಹಾಭಾರತದಲ್ಲಿ ದ್ವಾರಕೆಯು ಉಲ್ಲೇಖ ಪ್ರಭಾಸ ಪಿಂಡಾರಕ ಕಧಾ ಉರ್ಜಯಂತ ದೊಂದಿಗೆ ಸೌರಾಷ್ಟ್ರದ ಒಂದು ತೀರ್ಥ ಸ್ಥಾನದ ರೂಪದಲ್ಲಿ ಕೊಡಲ್ಪಟ್ಟಿದೆ.

6 ದ್ವಾರಕಾನಗರದ ನಿರ್ಮಾಣ "ಕಾಲಯವನ"ನ ಮತ್ತು 'ಜರಾಸಂಧ"ನ ಭಯದಿಂದಾಗಿ ನಿರ್ಮಿಸಲ್ಪಟ್ಟಿತ್ತೆಂದು ಹರಿವಂಶ ಪುರಾಣ ಮತ್ತು ಮಹಾಭಾರತದಲ್ಲಿ ವಿವರಿಸಲಾಗಿದೆ.

7 ದ್ವಾರಕಾನಗರದ ನಾಲ್ಕೂ ಕಡೆ ಐದು ಪರ್ವತಗಳು ಮತ್ತು ಐದು ವನಗಳಿದ್ದುವು. ಹಾಗೂ ಮಹಾನದಿ ಇವುಗಳ ಮಧ್ಯದಿಂದ ಹರಿಯುತ್ತಿತ್ತೆಂದು "ಹರಿವಂಶ ಪುರಾಣ"ದಲ್ಲಿ ಉಲ್ಲೇಖವಿದೆ.

8 ದ್ವಾರಕೆಯ ಸಮುದ್ರ ಕರಾವಳಿ ಬಹಳ ವಿಸ್ತಾರವಾಗಿತ್ತೆಂದು ಸಹ ಹರಿವಂಶದಲ್ಲಿ ವರ್ಣಿಸಲ್ಪಟ್ಟಿದೆ.

9. ಶುಕ್ಲತೀರ್ಥದ ಸ್ಥಾಪನೆ ಶ್ರೀ ರಾಮನ ಮುಖ್ಯ ಕುರಿತು ಹೆಸರಲ್ಲಿ ಆಗಿತ್ತು. ಮತ್ತು ಗೋಮತಿ ನದಿ ಇದರ ಸಮೀಪದಿಂದಾಗಿ ಸಮುದ್ರಕ್ಕೆ ಸೇರುತ್ತಿತ್ತೆಂಬುದಾಗಿ ಸ್ಕಂಧ ಪುರಾಣದಲ್ಲಿ ಕಂಡು ಬರುತ್ತದೆ. ಈ ವಿವರಣೆಗಳೆಲ್ಲವನ್ನು ಪರಿಶೀಲಿಸುವಾಗ ಇವೆಲ್ಲವುಗಳು ಒಂದಕ್ಕೊಂದು ಪರಸ್ಪರ ವಿರೋಧಾಭಾಸಗಳಿಂದ ತುಂಬಿದ್ದು, ಇವುಗಳ ಆಧಾರದಿಂದ ಒಂದು ನಿಶ್ಚಿತ ನಿರ್ಧಾರಕ್ಕೆ ಬರಲಿಕ್ಕೆ ಸಾಧ್ಯವಿಲ್ಲವೆಂಬುದು ಖಚಿತವಾಗುತ್ತದೆ.

ಈ ಎಲ್ಲಾ ಗ್ರಂಥಗಳಲ್ಲಿ ಮಹಾಭಾರತ ಗ್ರಂಥ ಅತಿ ಪ್ರಾಚೀನ ಗ್ರಂಥವೆಂಬುದಾಗಿ ಪರಿಗಣಿಸಲ್ಪಟ್ಟಿದೆ. ಆದರಲ್ಲಿ ದ್ವಾರಕೆಯ ಕುರಿತಾಗಿ ಮಹತ್ವಪೂರ್ಣವಾದ ವಿವರಗಳು ದೊರಕುತ್ತವೆ. ಈ ಎಲ್ಲಾ ಪ್ರಮಾಣಗಳ ಪರಿಶೀಲನೆಯಿಂದ, ದ್ವಾರಕೆಯು "ರಿರ್ವತ" ಪರ್ವತದ ದಕ್ಷಿಣದ ಕಡೆಗೆ ವರ್ತಮಾನ ಕಾಲದ "ಸೋರಠ" ಜಿಲ್ಲೆಯ ಅಂತರ್ಗತವಾಗಿತ್ತೆಂದು ಹೊಳೆಯುತ್ತದೆ, ಈ ಕ್ಷೇತ್ರವನ್ನೇ ಪ್ರಧಾನ ಕ್ಷೇತ್ರವೆಂದು ಕರೆಯಲಾಗುತ್ತಿತ್ತು. ಆದುದರಿಂದ ಈಗ ನಾವು ಕಾಣುತ್ತಿರುವ ಪ್ರಧಾನ ಕ್ಷೇತ್ರವೇ ನಿಜವಾದ ದ್ವಾರಕೆಯೆಂದು ಸಿದ್ಧವಾಗುತ್ತದೆ.

ದ್ವಾರಕೆ ಮತ್ತು ರೈವತ ಪರ್ವತ ಈ ಎರಡರಲ್ಲಿಯೂ ಶಕ್ತಿಯ ಶಾಸನವಿತ್ತೆಂದು ಬ್ರಹತ್ಪುರಾಣದಲ್ಲಿ ಕಂಡು ಬರುತ್ತದೆ ಈಗಿನ ದ್ವಾರಕೆಯ ಪರಿಸರದಲ್ಲಿ ಎಲ್ಲಿಯೂ ಪರ್ವತಗಳಿಲ್ಲ. ಶಕ ವಂಶೀಯ ರಾಜಾ ಪ್ರಥಮ ರುದ್ರದಮನನು ಗಿರ್ನಾರ್ ಪರ್ವತ ತಪ್ಪಲಲ್ಲಿ ಕೆತ್ತಿಸಿದ ಒಂದು ಶಿಲಾ ಲೇಖನದಲ್ಲಿ ಉರ್ಜಯಂತ ಮತ್ತು ರೈವತ ಪರ್ವತಗಳು ಗಿರ್ನಾರ್ ಪರ್ವತ ದ್ವೇ ಪೂರ್ವದ ಹೆಸರಾಗಿರುತ್ತದೆ. ದ್ವಾರಕೆಯ ದಕ್ಷಿಣದಲ್ಲಿ ಪಿಂಡಾರಕ ಇದೆಯೆಂಬುದಾಗಿ ಮಹಾಭಾರತದಲ್ಲಿ ಉಲ್ಲೇಖವಿದೆ. ಆದರೆ ವರ್ತಮಾನ ಕಾಲದಲ್ಲಿ ದ್ವಾರಕೆಯ ದಕ್ಷಿಣದಲ್ಲಿ "ಪಿಂಡಾರಕ"ದ ಅಸ್ತಿತ್ವವೇ ಕಂಡು ಬರುವುದಿಲ್ಲ. ದ್ವಾರಕೆಯು ಅತಿ ಸಮೀಪದಲ್ಲಿಯೇ "ಪಿಂಡಾರಕ" ಈಗಲೂ ಕಂಡು ಬರುತ್ತದೆ.

ಸೌರಾಷ್ಟ್ರದ ಸಮುದ್ರ ತೀರದಲ್ಲಿರುವ ಪ್ರದೇಶದ ಪಂಡರೆಯು ಕೃಷ್ಣ ಭಕ್ತಿಯ ಸಂಪರ್ಕವನ್ನು ಹೊಂದಿಕೊಂಡಿರುತ್ತದೆ. ಈ ಪ್ರದೇಶದಲ್ಲಿಯೇ ಈ ಸ್ಥಳವು 'ಪ್ರಭಾಸ್‌ಕ್ಷೇತ್ರ' ಕ್ಷೇತ್ರವೆಂಬುದಾಗಿ ಪ್ರಸಿದ್ಧಿ ಪಡೆದಿರುತ್ತದೆ. ಈ ಸ್ಥಳದಲ್ಲಿಯೇ ಒಬ್ಬ ಬೇಡನ ಬಾಣದಿಂದಾಗಿ ಶ್ರೀ ಕೃಷ್ಣನು ತನ್ನ ಪಾರ್ಥಿವ ಶರೀರವನ್ನು ತ್ಯಾಗ ಮಾಡಿದ್ದನು. ಶ್ರೀ ಕೃಷ್ಣನು ದ್ವಾರಕೆಗೆ ಬಿಟ್ಟು ತನ್ನ ಆಪ್ತ ಜನರ ಶಾಸನ ಸರ್ವಸ್ವವನ್ನೂ ಅರ್ಜುನನಿಗೆ ಒಪ್ಪಿಸಿ ತಾನು ಚತುರ್ಧಾಶ್ರಮ (ವನ-ಸ್ಯ) ಸ್ವೀಕಾರ ಮಾಡಿ ವನ ಪ್ರದೇಶದಲ್ಲಿ ವಾಸ ಮಾಡಿದನು ಎಂಬುದಾಗಿ ಇತಿಹಾಸ ದೊರಕುತ್ತದೆ. ಶ್ರೀಕೃಷ್ಣನೊಡನೆ ನಿಕಟ ಸಂಬಂಧ ಬೆಳೆಸಿಕೊಂಡಿದ್ದ ಅನೇಕ ಪ್ರದೇಶಗಳು ಈ ಕ್ಷೇತ್ರದಲ್ಲಿ ಇಂದಿಗೂ ಕಂಡು ಬರುತ್ತವೆ. ಅವುಗಳಲ್ಲಿ, ಮಧವಪುರ, ಸುದಾಮಪುರಿ (ಪೋರ್ಬಂದರ) ಇವುಗಳ ಉಲ್ಲೇಖ ವಿಶೇಷವಾಗಿದೆ. ವರ್ತಮಾನ ಕಾಲದಲ್ಲಿ ಈ ಪ್ರದೇಶಕ್ಕೆ ಬಹಳ ದೂರದಲ್ಲಿ ಆಲ್ಲಲ್ಲಿ ಕೆಲವು ನಗರಗಳು 'ವಾಲಾದ್ವಾರಕೆ' ಯೆಂದು ಕರೆಯಲ್ಪಡುತ್ತಿದೆ. ಇದಕ್ಕೆ ಕಾರಣವೇನೆಂದರೆ ಭಾರತ ದೇಶದ ಮೇಲೆ ಮುಸಲ್ಮಾನರ ಆಕ್ರಮಣವಾದಾಗ ಸ್ಥಳೀಯರು ಸೋಮನಾಥ ವಿಗ್ರಹ ಮತ್ತು ದ್ವಾರಕೆಯಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಮೂರ್ತಿ ಮತ್ತು ರತ್ನಾದಿಗಳು ಯವನರಿಂದ ಕೊಳ್ಳೆ ಹೊಡೆಯಲ್ಪಟ್ಟಾಗ ಶ್ರೀಕೃಷ್ಣನ ಭಕ್ತರಲ್ಲಿ ಕೆಲವರು ತಮ್ಮ ಕೈಗೆ ಸಿಕ್ಕಿದ ಮೂರ್ತಿ ಮತ್ತು ಆಭರಣಾದಿಗಳನ್ನು ಹಿಡಕೊಂಡು ದೂರ—ದೂರ ಪ್ರದೇಶಗಳಿಗೆ ಹೋಗಿ 'ಪ್ರತಿದ್ವಾರಕೆ'ಗಳನ್ನು ಸ್ಥಾಪಿಸಿ ಜನರನ್ನು ತಮ್ಮಲ್ಲಿಗೆ ಆಕರ್ಷಿಸಿಕೊಳ್ಳುವ ಸಲುವಾಗಿ ತಾವುಗಳು ಸ್ಥಾಪಿಸಿದವುಗಳಿಗೆಲ್ಲಾ 'ಮೂಲಧ್ವಾರಕೆ' ಯೆಂದೇ ಹೆಸರಿಟ್ಟರು. ಆದರೆ ಈಚಿನ ತನಕ ನಡೆಸಿದ ಭೂಗರ್ಭ ಸಂಶೋಧನೆಯು ಉಪರೋಕ್ತ "ಪ್ರಭಾಸ ಕ್ಷೇತ್ರ"ವೇ ವಾಸ್ತವಿಕ ದ್ವಾರಕೆಯೆಂಬುದಾಗಿ ಸಿದ್ಧವಾಗುತ್ತದೆ.

ಈ ಕುರಿತು ಪ್ರಾಜ್ಞರು ಇನ್ನಷ್ಟು ಆಳವಾಗಿ ಸಂಶೋಧನೆ ಮಾಡಿದರೆ ಶ್ರೀ ಕೃಷ್ಣನ ವಾಸ್ತವಿಕ ಚಾರಿತ್ರಿಕ ಹಿನ್ನೆಲೆ ಸಂಪೂರ್ಣವಾಗಿ ಬೆಳಕಿಗೆ ಬರುವುದರಲ್ಲಿ ಸಂದೇಹವಿಲ್ಲ.

(ಆಧಾರದಿಂದ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

R. E. P. 348/1966

O. S. 10/1965

ಲಟಿಸಿಯೂ ಫೆರ್ನಾಂಡಿಸ್ ಬ್ಯಾ (ಪೌತಿ) ವಾರೀಸುದಾರರು: ಮಹಿರ್ನ್ ಸಜ್ಜಾ ಕೂಡಾ —೩೦ಂಡಾ ೫ನೇ ಅರ್ಜಿದಾರರು.

ಮತ್ತು

ರಾಮಚಂದ್ರ ಸಾಮಂತ ಕೂಡಾ —ಎದ್ರಿರು

ಇವರೊಳಗೆ

1ನೇ ಎದ್ರಿ ರಾಮಚಂದ್ರ ಸಾಮಂತರಿಗೆ ಕೃಷ್ಣ ಸಾಮಂತರ ಮಗ, ಮೂಡು ತೋನ್ಸೆ ಗ್ರಾಮದ

ಈಗ್ಗೆನ್ನತ 1ನೇ ಅರ್ಜಿದಾರರ ವಾರೀಸು ವಾರರಾಗಿ ೩೦ಂಡಾ ೫ನೇ ವರೆಗಿನ ಅರ್ಜಿದಾರರು ಸದ್ರಿ O. S. 10/65ನೇ ದಿಕ್ರಿಯ ಮೇಲೆ ಅಮ್ಮಜ್ಞಾಪಿಸಿದ್ದಾರೆ. ಆ ಕಾರಣ ನಮ್ಮ ಆಕ್ಷೇಪಣೆ ಇದ್ದರೆ, ತಾರೀಕು, 18—10—67ನೇ ದಿವ್ಸ ಹಗ್ಗ ಗಂಟೆ 11 ಕ್ಕೆ ನೀವು ಹಾಜ್ರಾಗಿ ಜ್ಯಾಬ್ತೀರು ಮಾಡಿಕೊಳ್ಳತಕ್ಕದ್ದು.

B. Vasudeva Rao

Counsel for Ptnrs 2. to 8

ಉಡ್ಪಿ, 28—9—67

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

S. C. No. 106/67

ಪದ್ಮಕ್ಕ ಸಡ್ತಿ —ವಾದಿ

ಮತ್ತು

ಗೋವಿಂದ ಸೆಟ್ಟಿ —ಪ್ರತಿವಾದಿ

ಇವರೊಳಗೆ

ಪ್ರತಿವಾದಿ ಗೋವಿಂದ ಸೆಟ್ಟಿ, ಪಡುಮನೆ ಲಕ್ಷ್ಮಿ ಸಡ್ತಿರ ಮಗ, ಉಡ್ಪಿ ತೆಲ್ಲೂರು ಹಂದಾಡಿ ಗ್ರಾಮದವರಿಗೆ ಸಮನು ಜಾರಿ ಮಾಡುವುದೇನೆಂದರೆ:—

ವಾದಿಗೆ ಬಹಾ ಚಾಲಗೇಡು ಬಾಕಿಗೆ ಪ್ರತಿವಾದಿ ಮೇಲೆ ಮಾಡಿದ ಮೇಲಿನ ದಾವೆಯು ತಾ. 23—10—67ಕ್ಕೆ ಪ್ರತಿವಾದಿ ಹಾಜರಿ ಬಗ್ಗೆಯಿಟ್ಟರುವುದರಿಂದ ಮೇಲಿನ ದಾವೆಯನ್ನು ನೀವು ಹಾಜರಿಸಾವುದಿದ್ದರೆ ಸದ್ರಿ ತಾರೀಕು ಪ್ರಥಮ ಗಂಟೆ 11ಕ್ಕೆ ಈ ಕೋರ್ಟಿಗೆ ಮುಂದೆ ಹಾಜರಾಗಿ ಜ್ಯಾಬ್ತೀರು ಮಾಡಿಕೊಳ್ಳತಕ್ಕದ್ದು.

Y. C. S. Hegde

Advocate for Plff

Udipi, 28—9—67

ಎಲ್ಲೆಲ್ಲಿ ಏನೇನು?

"ಕನಕಪ್ರಭೆ" ಉದ್ಘಾಟನೆ

ಉಡುಪಿ, ಸ. 17 ಕರ್ನಾಟಕ ಸಂಘದ ಆಶ್ರಯದಲ್ಲಿ ಮಂಗಳೂರಿನ ನವಭಾರತ ಪ್ರೌಢ ಶಾಲೆ ಡಾ|| ಶಂಕರ ಮೊಕಾಶಿಯವರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿಯೊಂದು ಜರಗಿತು. ಇದೇ ಸಂದರ್ಭದಲ್ಲಿ ಶ್ರೀಗಳಾದ ವ. ರಾ. ಬೇಂದ್ರೆ, ಕಯ್ಯಾರ ಕಿಞ್ಞಣ್ಣ ರೈ, ಎಸ್. ವೆಂಕಟ್ರಾಜ ಪುಣಿಂಚಿತ್ತಾಯ ಮೊದಲಾದ ಕವಿಗಳು ಕನ್ನಡ ಕವಿತೆಯ ಬೆಳವಣಿಗೆಯ ಬಗ್ಗೆ ಮಾತನಾಡಿದರು. ಕವಿಗೋಷ್ಠಿಯಲ್ಲಿ ಸುಮಾರು ಹದಿನೈದು ಕವಿಗಳು ತಮ್ಮ ಕವನಗಳನ್ನು ವಾಚಿಸಿದರು. ಸಂಜೆ ಕವಿಗೋಷ್ಠಿಯ ಅಧ್ಯಕ್ಷರಾದ ಡಾ|| ಶಂಕರ ಮೊಕಾಶಿಯವರು "ಕನಕಪ್ರಭೆ" ಕವನ ಸಂಕಲನವನ್ನು ಉದ್ಘಾಟಿಸಿದರು. ಕವಿಗೋಷ್ಠಿಯ ಅಧ್ಯಕ್ಷರಾದ ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸಿದರು. ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಸಿ. ರಂಗನಾಥ ಶೆಣೈಯವರು ಅಭಾರ ಮನ್ನಿಸಿದರು.

ಕುಷ್ಠರೋಗ ಚಿಕಿತ್ಸಾಲಯ

ಮಣಿಪಾಲ, ಸೆಪ್ಟಂಬರ 16, ಕುಷ್ಠರೋಗ ಮತ್ತು ಕ್ಷಯರೋಗಗಳ ಬಗ್ಗೆ ನಮ್ಮ ಸಾರ್ವಜನಿಕರಲ್ಲಿ ಏಳ್ಕೆಸ್ಪ ಮನೋಭಾವವಿರುವುದು ಸರಿಯಲ್ಲವೆಂದೂ, ಆ ರೋಗಗಳಿಂದ ಬಳಲುತ್ತಿರುವವರನ್ನು ಸಾಮಾನ್ಯರಿಂದ ನೋಡಿಕೊಳ್ಳಬೇಕೆಂದೂ ಹಿಂದ್ ಕುಷ್ಠ ನಿವಾರಣ ಸಂಘದ ಉಡುಪಿ ಶಾಖೆಯ ಕಾರ್ಯದರ್ಶಿ ಡಾ|| ಕೆ. ಮೋಹನದಾಸ ಪೈಯವರು ನಿನ್ನೆ ಇಲ್ಲಿ ತಿಳಿಸಿದರು. ಈ ಪ್ರದೇಶದಲ್ಲಿರುವ ರೋಗಿಗಳಿಗಾಗಿ ಪ್ರತಿ ಶುಕ್ರವಾರ ಆಪರಾಹ್ನ ೨-೩೦ರಿಂದ ಆಗಂಬಿಯವರೆಗೆ ಕೆಲಸ ಮಾಡುವ ಕುಷ್ಠರೋಗ ಚಿಕಿತ್ಸಾಲಯವನ್ನು ಅವರು ಕಸ್ತೂರ್ ಬಾ ಜನರಲ್ ಆಸ್ಪತ್ರೆಯಲ್ಲಿ ಉದ್ಘಾಟಿಸಿ ಮಾತನಾಡುತ್ತಿದ್ದರು. ಆಸ್ಪತ್ರೆಯ ಮುಖ್ಯಾಧಿಕಾರಿ ಡಾ|| ಸಿ. ಎಚ್. ಶಿವರಾಮಾಚಾರ್ ಅವರು ಡಾ|| ಪೈಯವರನ್ನು ಸ್ವಾಗತಿಸಿದರು. ಡಾ|| ಜಗನ್ನಾಥ್ ಎನ್. ಶೆಟ್ಟಿಯವರು ಅಭಾರ ಮನ್ನಿಸಿದರು.

ಕುಮಟೆಯಲ್ಲಿ ನವರಾತ್ರಿ ಕಾರ್ಯಕ್ರಮ

ಇಲ್ಲಿನ ಇತಿಹಾಸ ಪ್ರಸಿದ್ಧ ಶ್ರೀ ರಾಮೇಶ್ವರ ಕಾಮಾಕ್ಷಿ ದೇವಸ್ಥಾನದಲ್ಲಿ ಪ್ರತಿ ವರುಷದಂತೆ ಈ ವರುಷವೂ ಸಹ ನವರಾತ್ರಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ಅಕ್ಟೋಬರ್ ೨ನೆಯ್ಕಂದ ಪ್ರಾರಂಭವಾಗಿವೆ. ಅಲ್ಲದೆ ಪ್ರತಿರಾತ್ರಿ ಒಂಭತ್ತು ಗಂಟೆಗೆ ಬೆಂಗಳೂರು, ಶ್ರೀ ಎಸ್. ವೀರಣ್ಣ ದಾಸ್ಕರವರಿಂದ ಹರಿಕೀರ್ತನೆಯನ್ನು ಪಡಿಸಲ್ಪಡುವುದು. ದಿನಗಳ ವರೆಗೂ ಏರ್ಪಡಿಸಿರುತ್ತೆ. ಭಕ್ತ ಮಹಾಶಯರು ಬಂದು ಭಾಗವಹಿಸಿ ಈ ಸದವಕಾಶವನ್ನು ಉಪಯೋಗಿಸಿಕೊಂಡು ಶ್ರೀ ದೇವಿಯ ಕೃಪೆಗೆ ಪಾತ್ರರಾಗ ಬೇಕಾಗಿ ಕಾರ್ಯಕಾರೀ ಸಮಿತಿಯವರು ವಿನಂತಿಸಿ ಕೊಂಡಿದ್ದಾರೆ.

ಕೃಷಿ ಉಪಸಮಿತಿಯ ಸಭೆ

ಮಂಗಳೂರು, ಕಳೆದ ತಾ. ೨೮ರಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಜಿಲ್ಲಾ ಪಂಚಾಯತ್ ಕೃಷಿ ಉಪಸಮಿತಿಯ ಸಭೆಯಲ್ಲಿ ಉಪ್ಪಿನ ಕೃಷಿ ಇಲಾಖೆಯ ಡೈರೆಕ್ಟರ್ ಡಾ| ಎಚ್. ಆರ್. ಆರಕೇರಿಯವರು ರೈತರಿಗೆ ಬೇಕಾದ ಸಲಹೆಗಳನ್ನು ನೀಡಿದರು. ಅವರು ಮಾತನಾಡುತ್ತಾ ರೈತರಿಗೆ ಬೇಕಾಗುವ ಬೀಜ, ಗೊಬ್ಬರಗಳ ಪ್ರಮಾಣವನ್ನು ಮುಂದಾಗಿ ನಿರ್ಧರಿಸುವಂತೆ ಸೂಚನೆ ನೀಡಿದರು. ಇದಕ್ಕಾಗಿ ನಾವು ರೈತರಿಗೆ ಮಾರ್ಗದರ್ಶನ ನೀಡಬೇಕಾದುದು ಅವಶ್ಯವಾಗಿದೆ ಇಂದಿನ ಪರಿಸ್ಥಿತಿಯಲ್ಲಿ ಹೆಚ್ಚಿನ ನಷ್ಟವನ್ನು ಅನುಭವಿಸಬೇಕಾದುದರಿಂದ ಗ್ರಾಮ ಸೇವಕರು ರೈತರಿಗೆ ಯೋಗ್ಯ ಸಲಹೆಗಳನ್ನು ನೀಡಿ ಸಹಕರಿಸುವುದು ಅಗತ್ಯವೆಂದರು.

ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇ ಗೌಡರು ವಹಿಸಿದ್ದರು. ಕೃಷಿ ಮತ್ತು ಪಶುಸಂಗೋಪನಾ ವಿಭಾಗದಲ್ಲಿ ಕಳೆದ ನಾಲ್ಕು ತಿಂಗಳಲ್ಲಿ ಜಿಲ್ಲೆಯ ವಿವಿಧ ಬ್ಲಾಕುಗಳಲ್ಲಿ ಏನೆಲ್ಲಾ ಪ್ರಚಾರ ನಡಿದ್ದುದರ ಕುರಿತು ಶ್ರೀ ಜೆ. ಎಂ. ಲೋಬೋ ಪ್ರಭು, ಶ್ರೀಮತಿ ವಿನ್ಸಿ ಫೆರ್ನಾಂಡಿಸ್ ಮೊದಲಾದವರು ಕಾರಣಗಳನ್ನು ಅಪೇಕ್ಷಿಸಿದರು. ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟಿರು ಗತ್ರ ಮೊಂತರ ಪ್ರದೇಶಗಳಲ್ಲಿ ಗ್ರಾಮಸ್ಥರಿಗೆ ಅನುಕೂಲವಾಗುವ ಸೂಚನಾ ಫಲಕಗಳನ್ನಿಡಬೇಕೆಂದರು.

ಡಿಪ್ಟಿ ಡೈರೆಕ್ಟರ್ ಶ್ರೀ ಆರಕೇರಿಗೌಡರು ಜಿಲ್ಲೆಯಲ್ಲಿ ನಡೆದ ಪರೀಕ್ಷಣಿ, ಗೊಬ್ಬರಗಳ ಪೂರೈಕೆ, ರೈತರಿಗೆ ಒದಗಿಸಬಾದ ಸಾಲಸೌಲಭ್ಯಗಳ ಕುರಿತಾದ ಪ್ರಗತಿಯನ್ನು ತಿಳಿಸಿದರು. ಶ್ರೀ ಮೋಹನದಾಸ ಅಡ್ಯಂತಾಯರು ತಾಲೂಕು ಬೋರ್ಡಿನ ಕರ್ತವ್ಯಗಳನ್ನು ತಿಳಿಸಿದರು.

ಶ್ರೀ ವಿಠಲ್‌ದಾಸ್ ಶೆಟ್ಟರು ಬಂಟ್ವಾಳ ತಾಲೂಕಿನ ರೈತರ ಸಂಕಷ್ಟಗಳನ್ನು ತಿಳಿಯಪಡಿಸಿದರು. ಜಿಲ್ಲಾಧಿಕಾರಿಗಳು ಸದ್ಯದಲ್ಲೇ ಅಡಿಸ್ಟೆ ಸರಕಾರದಿಂದ ಆಜ್ಞೆ ಬರುವ ನೀರಿಕ್ಷೆಯಿದೆಯೆಂದರು

ಪ್ರಗತಿಪರ ರೈತ- ಸಹಕಾರಿಗಳ ಸಭೆ

ಮೈಸೂರು ರಾಜ್ಯದ ಕೃಷಿ ಇಲಾಖೆ ಹಾಗೂ ದ. ಕ. ಜಿಲ್ಲಾ ಸಹಕಾರ ಯೂನಿಯನ್, ಮಂಗಳೂರು ಇವರ ವ್ಯವಸ್ಥಾಪಕತ್ವದಲ್ಲಿ ದ. ಕ. ಜಿಲ್ಲಾ ಪ್ರಗತಿಪರ ರೈತರ ಹಾಗೂ ಸಹಕಾರಿಗಳ ಸಭೆಯು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಕಟ್ಟಡದಲ್ಲಿ ಕಳೆದ ತಾ. 26 ಮತ್ತು 27ರಂದು ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಮೈಸೂರು ರಾಜ್ಯದ ಕೃಷಿ ಇಲಾಖೆ ಡೈರೆಕ್ಟರ್ ಡಾ| ಎಚ್. ಆರ್. ಆರಕೇರಿಯವರು ಸಮಾರಂಭವನ್ನು ಉದ್ಘಾಟಿಸಿ ಇಂತಹ ಸಭೆಗಳ ಅವಶ್ಯಕತೆಯನ್ನು ಕೃಷಿ ಪ್ರಗತಿಯನ್ನೂ ವಿವರಿಸಿದರು. ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರು ಹೆಚ್ಚು ಇಳುವರಿ ತಳಗಳ ಪ್ರದರ್ಶನವನ್ನು ಉದ್ಘಾಟಿಸಿ ಸಂದರ್ಭೋಚಿತ ಭಾಷಣಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಭಾರತದ ಆಹಾರ ಕಾರ್ಯೋತ್ಪಾದನಾ ಮಂಡಳಿ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ಸಮರ್ಥವಹಿಸಿದ್ದರು.

ರೈತ ಸಹಕಾರಿ ವಿಚಾರಗೋಷ್ಠಿಯ ಮುಖ್ಯಾಯ ಸಮಾರಂಭವು ಡಾ|ಎನ್.ಟಿ.ಪಾಟೀಲರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಟಿ. ಎ ಪೈಯವರು ಉಪಸಾಹಾರ ಭೋಜನ ಮಾಡುತ್ತಾ, ದ. ಕನ್ನಡದ ರೈತರು ಮಾರ್ಗದರ್ಶಕರಾಗಲಿ ಎಂದು ಹಾರೈಸುತ್ತಾ ಜನಸಂಖ್ಯೆ ಭರದಿಂದ ಏರುತ್ತಿರುವಂಥ ಇಂದಿನ ಪರಿಸ್ಥಿತಿಯಲ್ಲಿ ನಾವು ಆಹಾರ ಸ್ವಾವಲಂಬನೆ ಸಾಧಿಸದೆ ಗತ್ಯಂತರವಿಲ್ಲ, ಭಾರತೀಯ ರೈತರು ವಿದೇಶೀಯರಿಂದ ಕಲಿಯ ಬೇಕಾದುದೇನೂ ಇಲ್ಲವೆಂದು ವಿದೇಶೀಯ ಪರಿಣತರೇ ಅಭಿಪ್ರಾಯ ಪಟ್ಟಿದ್ದಾರೆ. ಆದರೆ ನಾವು ಕೃಷಿಯ ಕಡೆಗೆ ಅಷ್ಟೊಂದು ಲಕ್ಷ್ಯ ಕೊಡುತ್ತಿಲ್ಲ. ಕೃಷಿಕರಲ್ಲಿ ಭರವಸೆಯುಂಟಾದಾಗ ಕೃಷಿಕನು ಯಾವ ಪ್ರಚಾರವೂ ಇಲ್ಲದೆ ಉತ್ಪಾದನಾ ರಂಗದಲ್ಲಿ ಕ್ರಾಂತಿ ಸಾಧಿಸಬಲ್ಲ ಎಂದು ಹೇಳಿದರು.

ಅವರು ಮುಂದುವರಿಯುತ್ತಾ ಕೃಷಿ ಉತ್ಪಾದನೆಗೆ ಡ್ಯೂಟಿವಿಧಿಸಬಾರದು ಎಂಬ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅಲ್ಲದೆ ಕೃಷಿ ಆದಾಯ ತೆರಿಗೆ ವಿಧಿಸುವುದು. ಉತ್ಪಾದಿಸುವವರು, ದೇಶದ ಬಡಾಕಾಗಿ ಲೆವಿಯು ಆಗತ್ಯ. ಆದು ಎಲ್ಲೆವಾರು ಪ್ರಮಾಣದಲ್ಲಿರುವುದು ನ್ಯಾಯವೆಂದರು. ರೆವಿಗೆ ಕೊಟ್ಟ ಧಾನ್ಯದ ಬೆಲೆ ಏನಾದರೂ ಬೇಕೆಂಬುದನ್ನು ಹೇಳುವ ಹಕ್ಕು ರೈತರದ್ದು. ಅವರು ತಮ್ಮ ಉತ್ಪಾದನೆಗೆ ತಕ್ಕ ಬೆಲೆ ಬಯಸುವುದು ನ್ಯಾಯವಾಗಿದೆ.

ಇಂದು ರೈತರಿಗೆ ನೆರವು ನೀಡಲು ರಿಸರ್ವ್ ಬ್ಯಾಂಕೂ ಸಿದ್ಧವಾಗಿದೆ. ನಮ್ಮ ಜಿಲ್ಲೆಯ ರೈತರು ಸಂಘಟನೆಯಿಂದ ತಮಗೆ ಬೇಕಾದುದನ್ನು ಸಾಧಿಸಿಕೊಂಡು, ಇತರರಿಗೆ ಮಾರ್ಗದರ್ಶಕರಾಗಿ ನಮ್ಮ ದೇಶವನ್ನು ಸಾಕುವ ಜವಾಬ್ದಾರಿಯನ್ನು ಹೊರಬೇಕೆಂದು ಅವರು ಕರೆ ನೀಡಿದರು.

ಸೆಮಿ ಫೆರ್ಮನೆಂಟ್ ಗಂಡ ಬೇಕು

(ನಾಲ್ಕನೇ ಪುಟದಿಂದ)

ಡಬೇಕು. ಮಧ್ಯಾವಧಿಪುಳ್ಳಿ ಮಜ್ಜೇನು, ಜನರ ಕುತೂಹಲ ಕೆರಳಿಸುವುದಕ್ಕಾಗಿಯೇ ಊಹಾಪೋಹದ ವರದಿ ಬರುತ್ತವೆ..'

'ಅಂಪೈ, ಇದೆಲ್ಲಾ ಬರಿಯ ಇಸ್ಪೀಟಿನ ಮನೆ....'

"ಇಲ್ಲ, ಗಾಳಿಯ ಗೋಪುರ..."

'ಅಲ್ಲ, ಇಂದಿರಾಜಿಗೂ ಚವನರಿಗೂ ಹಿಡಿಸಿ ಹಾಕುವ ಕೆಲಸ....'

'ಅವರನ್ನೇ ಕೆಳ್ಳನೇ, ಕೇಂದ್ರದ ಚರಣಸಿಂಗರಾಗುತ್ತಾರೆ ಎಂತ ಅಂದದ್ದು..'

"ಅದೇ ನೋಡಿ, ಪುಸ್ತಕದ ಬದಲಿಗೆ ಕಾಯಿ ಪತ್ರಿಕೆಯ ಸುದ್ದಿ—'

"ಹಾಗೇನೂ ಅಲ್ಲ...ಜಾಗೇಂತ ಎಲ್ಲಾ ಗಾಳಿ ಗೋಪುರಗಳು ಉರುಳಿ ಬೀಳಬೇಕೆಂದಿಲ್ಲ. ಅಂತೂ ಜನರಿಗೆ ವಿಷಯಮಾಡಬೇಕು; ಆದಕ್ಕಾಗಿ ಇದ್ದ—ಸುದ್ದಿಗಳೊಂದಿಗೆ ಸುದ್ದಿಯ ಸೃಷ್ಟಿಯನ್ನೂ ಮಾಡಬೇಕಾಗುತ್ತದೆ.

"ಅದಕ್ಕೇ ಅಂದದ್ದು ಪ್ರಜಾಸ್ವಭುತ್ವದ ಬಲಗಳಲ್ಲಿ ಪತ್ರ—ಪತ್ರಿಕೆಗಳೂ ಒಂದೂಂತ...'

'ಹ್ಞೂಂ...."

'ಏನು?"

"ಏನೂ ಇಲ್ಲ...."

"ಇಲ್ವೆ!"

'ಉಹೆ...."

'ಏನು?'

'ಇಕ್ಕ ಬಾ ಹೇಳ್ತೇನೆ....'

'ಹೆಣ್ಣಾ ಬಾರ್ದೆ ಇದ್ದೇನೆ?'

—ಗೋರಾ.

ವಗೆ ಬಿಂದು

"ರಾಮು, ಯಾಕೋ ನಿನ್ನೆ ಶಾಲೆಗೆ ಬರಲಿಲ್ಲ?"

"ನನ್ನ ಅಜ್ಜ ತೀರಿ ಹೋದರು, ಸಾರ್!"

"ಇನ್ನು ಮುಂದೆ...."

"ಇಲ್ಲ ಸಾರ್! ಇನ್ನು ಮುಂದೆ ಹಾಗಾಗಲಿಕ್ಕೆಲ್ಲ ಸಾರ್!"

೦ ೦ ೦

ಪತ್ನಿ—"ನಿಗಳನ್ನು ಇನ್ನು ಯಾರಿಗಾದರೂ ಕೊಡಬೇಕು..."

ಪತಿ—"ಹಾಗೆಲ್ಲಾ ಅವಸರ ಪಲ್ಲದು; ವಿದ್ಯಾವಂತನೂ ಬುದ್ಧಿವಂತನೂ ಗುಣವಂತನೂ ಶ್ರೀಮಂತನೂ ಆದ ವರನು ಬರುವನಕವೂ ಕಾದಿರೋಣ..."

"ಯಾಕೆ? ಅವಳ ಪ್ರಾಪ್ತಿಯಲ್ಲಿ ನಾನು ಹಾಗೆಂದೂ ಕಾಯುವಂತೆ ನನ್ನ ತಂದೆ ಹೇಳಲಿಲ್ಲ."

೦ ೦ ೦

'ರಾತ್ರಿಯಲ್ಲಿ ಹಂಪನ ಕಟ್ಟೆಯಿಂದ ರೇಲ್ವೆ ನಿಲ್ದಾಣಕ್ಕೆ ಜೋಗದಬೇಕಾಗಿದ್ದ ಓರ್ವ ಯಾತ್ರಿಕನು ನಿನ್ರಿಕ್ಷುತ್ತಿದ್ದ ಟಿ ಟೋ - ರಿಕ್ಷ (ವಟ ವೃಕ್ಷ)? ದನನನ್ನು ಕರೆದು ವಿಚಾರಿಸಿದ—

'ಇಲ್ಲಿಂದ ರೇಲ್ವೆ ನಿಲ್ದಾಣಕ್ಕೆಷ್ಟು ಚಾರ್ಜು?'

'ಬನ್ನಿ ಸಾರ್! ಐವತ್ತು ಪೈಸೆ ಕೊಡಿ....'

'ಬೇಕಾಗಿಲ್ಲ; ನಾನು ನಡೆದರೆ ಎಷ್ಟು ಉಳಿತಾಯವಾಗುವುದೆಂದು ತಿಳಿಯಲು ನೂಕ್ಯ ವಿಚಾರಿಸಿದ್ದು...'

—ಎಚ್. ಎಂ ವಿಜಯನಾರಾಯಣ.

ಗು ಲಾ ಬಿ

— ೧ —

ಹೂರಾಶಿ ಹೂವನದಿ ನಸುನಗುತ ನಿಂತಿಹೆ
ಗಾಳಿಯಲ್ಲಿ ಜೋಲಿಪಾಕೆ ನೃತ್ಯನನ್ನೇ
ಮಾಡಿಹೆ!
ನಯ ವಿನಯ ಚೆಲ್ವದುಂಬಿ
ಹೂರಾಣಿಯೂಗಿಹೆ
ಜವಾಹರರ ಎದೆಯನ್ನೆಗೆದ್ದು ಲೋಕವೆಲ್ಲ
ಮೆರೆವಿಂ!!

— ೨ —

ಚೆಲ್ವ ಉಂಟು, ಗುಣವು ಉಂಟು
ಬಿಂಕ ಮೊದಲೆಂಬರಿವಿಲ್ಲ
ಮುಳ್ಳು ಗಿಡದಿ ಅರಳಿ ನಿಂತು ನಾಡಸೇವೆ
ಮಾಡಿಹೆ
ನಲವುದೆದುರು ಬಾಗಿ ನಮಿಸಿ ಅತಿಥಿ
ಯನ್ನು ಕರೆಯುವೆ
ಜಗಕೆ ಹಿರಿಯ ಗುಣವ ತೋರಿ ದಾರಿ
ದೀಪವಾಗಿದೆ.

— ೩ —

ಕೇಟೆ ಭ್ರಮರ ಕಪ್ಪನೀಡಿ ತ್ಯಾಗ ನಿನಗೆ
ಕೊಟ್ಟರೂ—
ನರು ನಗತ ದುಗುಡ ದೂಡಿ ಗಂಧಕುತ್ತ
ಸೂಸುವೆ
ಬೆಡಗಿನಿಂದ ಹುಡುಗಿ ಬಂದ, ನಿನ್ನ
ಕೆಯ್ದು ತಂದರೂ
ಮುಡಿಯೆನೀರಿ ಕಂಸು ಬೀರಿ ಹೆಳಲು
ಮಾಲೆಯಾಗಿವೆ.

— ೪ —

ಹೇ ಜಾಣೆ! ಹೂಂಣಿ!! ಇಳಿಗೆ ಸೊಬಗು
ನೀಡಿಹೆ
ನಿನ್ನ ಪಡೆದ ಭೂವಿ, ತಾನು ಶ್ರೇಷ್ಠ
ತಾಕೆ ಅಂಬಿಕೆ!
ಇಳೆಗೆ ಬಂದ ದೊಮಗೆ ನೀನು! ಎಂಬ
ಬೆಕ್ಕ ಇರಿಕೆ
ನಿನ್ನ ಗುಣವನೆಲ್ಲ ಕಲಿತ ಮನವು
ಪಾವನವಾಗದೆ?

— ಮುಂದಲೀಕ ಪಾಟೀಲ,
ಹಿರೇಬಾಗೇವಾಡಿ.

READ & ADVERTISE IN NAVAYUGA WEEKLY

ಒಕ್ಕಣ್ಣರ ರಾಜ್ಯದಲ್ಲಿ

ಒಂದು ಕಣ್ಣು ಕೆತ್ತುಕೊಳ್ಳಿರಿ

ಮಹಾತ್ಮಾ ಗಾಂಧಿಗಳವರ ಜನ್ಮದಿನವನ್ನು ನಾವು ವಿಜೃಂಭಣೆಯಿಂದ ಆಚರಿಸುತ್ತೇವೆ, ರಾಷ್ಟ್ರಪಿತನೆಂಬ ಅಭಿಮಾನದಿಂದ. ಅವರು ಮಧ್ಯಪಾನವು ಮಾನವನನ್ನು ದಾನವನಾಗಿಸುತ್ತದೆಯೆಂಬ ಮಾನವೀಯ ದೃಷ್ಟಿಯಿಂದತನ್ನ ತತ್ವ-ಆದರ್ಶಗಳಲ್ಲಿ ಅದನ್ನು ನಿಷೇಧಿಸುವುದನ್ನೂ ಒಂದಾಗಿರಿಸಿಕೊಂಡರು. ದೇಶವು ಸ್ವಾತಂತ್ರ್ಯ ಗಳಿಸಿದ ನಂತರ ಪ್ರತಿ ರಾಜ್ಯದಲ್ಲೂ ಪಾನಪ್ರತಿಬಂಧ ಶಾಸನವು ಜಾರಿಗೆ ಬಂತು. ಕೆಲವೆಡೆ ಇಡಿಯ ರಾಜ್ಯಕ್ಕೂ ಇನ್ನು ಕೆಲವೆಡೆ ರಾಜ್ಯದ ಕೆಲವು ಭಾಗಗಳಿಗೂ ಇದು ಅನ್ವಯವಾಗುವಂತಿತ್ತು. ಆದರೆ, ಶಾಸನದ ವ್ಯವಹಾರ?

ಮಹಾತ್ಮರು ವಿಶುದ್ಧ ಮಾನವರು. ತನ್ನ ಅದಾನವತೆಯಿಂದಲೇ ಮಾನವಾಗಿ ಮಾನವತೆಯಿಂದ ದೇವತ್ವವನ್ನು ಗಳಿಸಿದವರು. ಅವರ ಅನುಯಾಯಿಗಳಲ್ಲಿ ಬೆರಳೆಣಿಕೆಯಷ್ಟು, ಜನರಾದರೂ ದೇವತ್ವ ಪ್ರಾಪ್ತಿ ಮಾಡದಿದ್ದರೂ ಮಾನವರಾಗಿಯೇ ಬಾಳಿದವರಿದ್ದಾರೆ. ಆದರೆ, ಎಲ್ಲರೂ ಮಹಾತ್ಮರಾಗಲಿಲ್ಲ; ಸಾಮಾನ್ಯ ಜನತೆಯೂ ಮಾನವರಾಗಲು ಇಷ್ಟ ಪಡಲಿಲ್ಲ. ಪಾನ ನಿರೋಧ ಶಾಸನ ಬಹಿರಂಗ ಪಾಪವನ್ನು ಪ್ರತಿಬಂಧಿಸಿದುದರಿಂದ, ಮದ್ಯ ಪಾನಕ್ಕೇನೂ ಅಭಾವ ಕಾಣಿಸಲಿಲ್ಲ. ಕಳ್ಳಭಟ್ಟಿ ಕೇರಿ ಕೇರಿಗಳಲ್ಲಿ ತಲೆಯೆತ್ತಿತು. ಪರಿಣಾಮವಾಗಿ ಸರಕಾರದ ಬೊಕ್ಕಸ ಸೇರುತಿದ್ದ ಲಕ್ಷಾಂತರ ರೂಪಾಯಿಗಳು ಲೋಪವಾದುವು, ಕುಡಿಯುವ ಜಟಿಸ್ಥಳ್ಳರಿಗೆ ವೇಷ ಮದ್ಯಗಳೂ ದೊರೆಯದಾದವು. ತೀರ ಕೆಳ ಮಟ್ಟದ ಅನಾರೋಗ್ಯಕರವಾದ ಮದ್ಯ ಸೇವನೆಯಿಂದ ಕುಡುಕರ ಕುಡಿಕ ಆರೋಗ್ಯವನ್ನೇ ಬಲಿ ತೆಗೆದುಕೊಂಡಿತು.

ಇತ್ತೀಚೆಗಿನ ಉದಾಹರಣೆಗಳನ್ನೇ ಗಮನಿಸಬಹುದು.—ತಮಿಳು ನಾಡು ಪಾನ ಪ್ರತಿಬಂಧವನ್ನು ಸೈಚ್ಛೆ ಹಿಡಿದ ರಾಜ್ಯ. ಸದ್ಯ ಅಲ್ಲಿ ದ್ರವಿಡ ಮುನ್ನೇತ್ರ ಕಳಗಂನ ಅಧಿಕಾರ ನಡೆಯುತ್ತಿದೆ. ಕೆಲವು ಕಾಂಗ್ರೆಸ್ ಸರಕಾರಗಳೇ ಈ ಪ್ರತಿಬಂಧವನ್ನು ಸಡಿಲಿಸುತ್ತಿರುವಾದಾಗ, ಡಿಎಂಕೆ ಪ್ರತಿಬಂಧವನ್ನೇ ಬಿಗಿ ಹಿಡಿದ ರಾಜ್ಯ. ಆದರೆ, ಆಷಾಢ ಬಹುಳ ಅಮಾವಾಸ್ಯೆಯ ದಿನ ನೂರಮ್ಮನ ಪೂಜೆ ಮಾಡಿದವರು ವಾರ್ನೀಷನ್ನು ಕುಡಿದು ತಮ್ಮ ತಾವು ಕೊಂಚಕಾಲ ಮರೆಯಲೆಳಸಿದರೆ, ಪಾಪ, ಗದಾಕಾಲವೂ ಅವರು ನೆಲದಿಂದ ದೂರವಿರುವಂತಾಯಿತು. ಅಲ್ಲಿ ಕೆಲವು ಸಂಸಾರಗಳೇ ವಾರ್ನೀಷ್ ಸೇವನೆಯಿಂದ ನಿರ್ನಾಮವಾದುವು. ಸಂಸ್ಕೃತ ನಗರ—ಮದ್ಯಪಾನ ಪ್ರತಿಬಂಧಕ್ಕೆ ಸಡಿಲಿರುವ ರಾಜ್ಯದ ರಾಜಧಾನಿ—ಅಂತಾರಾಷ್ಟ್ರೀಯ ಮಹತ್ವದ ನಮ್ಮ ನಗರ—ಬೂಂಬಾಯಿಯಲ್ಲಿ ಪೊಲಿಸ್ ಕುಡಿದು ತಮ್ಮ ಇಂದ್ರಿಯಗಳನ್ನು ಮರೆಯುವಷ್ಟು ಜನರು ಮೂರ್ಖರಾದುದು. ಬೆಂಗಳೂರು ನಗರದಲ್ಲೂ ವಾರ್ನೀಷ್ ಸೇವನೆಯ ಕೆಲವು ನಿದರ್ಶನಗಳು ಪ್ರಕಟವಾಗಿವೆ.

ಮಹಾತ್ಮರ ಶತಮಾನೋತ್ಸವವನ್ನು ನಾವು ವೈಭವದಿಂದ ಆಚರಿಸುವ ಕಾರ್ಯಕ್ರಮದಲ್ಲಿದ್ದೇವೆ. ಪೂರ್ಣ ಪಾನ ಪ್ರತಿಬಂಧವನ್ನು ಅದಿನದೆಂದಿಗೆ ಸಾಧಿಸಬೇಕು—ಇದು ಅಪ್ಪಟ ಗಾಂಧಿ ಭಕ್ತರ ಹೃದಯದ ಹಂಬಲ. ಆದರೆ, ದೇಶದಲ್ಲಿ ನಡೆಯುವುದೇನು? ಎಲ್ಲ ಕಾಂಗ್ರೆಸ್ ರಾಜ್ಯ ಸರಕಾರಗಳು ಪಾನಪ್ರತಿಬಂಧವನ್ನು ಸಡಿಲುಮಾಡಲು ಇಂದು ಒಪ್ಪಿ ಕೊಂಡಿವೆ—ಸರಕಾರಗಳು ಒಪ್ಪಿ ಕೊಂಡಿವೆಯೆಂಬುದಕ್ಕಿಂತ ಸರಕಾರಗಳು ತುಳಿದ ದಾರಿಯೇ ಸರಿಯೆಂದು ಕಾಂಗ್ರೆಸ್ ಕಾರ್ಯಕಾರಿಣಿ ತಲೆ ದೂಗಿತು ಎಂದು ಹೇಳುವುದೇ ಸಮರ್ಪಕವಾದೀತು.

ಕಾಂಗ್ರೆಸ್ ಸರಕಾರಗಳೇ ಪಾನಪ್ರತಿಬಂಧದಲ್ಲಿ ಅನಾಸಕ್ತಿಯಾಗಿರುವಾಗ ಕಾಂಗ್ರೆಸ್ಸೇತರ ಸರಕಾರಗಳಿಗೇನು? ಕೇರಳದಲ್ಲಿ ಮುಸ್ಲಿಮರುರುಕ್ಟೆ ಆರಂಭವಾಗಿದೆ—ಕಳ್ಳಂಗಡಿಯವರೂ ತಮ್ಮ ಬಾವುಟ ಹಾರಿಸಿ ವಿಧಾನ ಸಭಾ ಸದನದ ಮುಂಡಿಗೆ ಹೂಡುವ ಹುಂಜಿಕೆಯಲ್ಲಿದ್ದಾರೆ. ಬಂಗಾಳ—ಒರಿಸ್ಸಾ, ಪಂಜಾಬ—ಹರ್ಯಾನಾಗಳು ಏಕೆ ಹಿಂಜರಿಯಬೇಕು?

ಆದರೂ ಸಮಾಧಾನ—ಕಾಂಗ್ರೆಸ್ ಸರಕಾರಗಳಲ್ಲಿ ಗುಜರಾತು, ಕಾಂಗ್ರೆಸ್ಸೇತರ ಸರಕಾರಗಳಲ್ಲಿ ತಮಿಳುನಾಡು ಇನ್ನೂ ಪಾನಪ್ರತಿಬಂಧವನ್ನು ಬಿಗಿ ಹಿಡಿದಿವೆ. ಆವು ಶಾಸನ ಸಡಿಲಿಸಲು ಒಪ್ಪುವುದಿಲ್ಲ. ಮಹಾತ್ಮರ ಜನ್ಮರಾಜ್ಯ ಗುಜರಾತ, ಆವರ ಕಾರ್ಯಭೂಮಿ. ನಡೆದ ದಕ್ಷಿಣದ ರಾಜ್ಯ ಮದ್ರಾಸು—ಇವೆಲ್ಲಕ್ಕಿಂದೂ ಮಹಾತ್ಮರ ಶತಮಾನೋತ್ಸವದ ವರೆಗೆ ಪಾನಪ್ರತಿಬಂಧವನ್ನು ಕಿತ್ತೊಗೆಯದಿದ್ದರೆ, ಅದು ಮಹಾತ್ಮರ ಋಣ.

ತನ್ನ ಶತಮಾನೋತ್ಸವವನ್ನು ತನ ವರು—ತನ್ನ ದೇವರುಗಳು—ಹೀಗೆ ಆಚರಿಸುತ್ತಾರೆ ಎಂದು ಗಾಂಧೀಜಿ ಸ್ವರ್ಗದ ಬಾಗಿಲಿನಿಂದ ಇಣಿಕಿ ನೋಡಿದರೆದಂರೆ, ಗುಜರಾತು— ಮದ್ರಾಸುಗಳಿಗೂ ಅವರು ಅಂತರಾಷ್ಟ್ರೀಯ ಪ್ರೇರಣೆಯಿಂದ ಆದೇಶ ನೀಡತ್ತಾರೆ.. ಒಕ್ಕಣ್ಣರ ರಾಜ್ಯದಲ್ಲಿ ಒಂಗು ಕಣ್ಣನ್ನು ಬ್ಬಿ ನಡೆಯಿರಿ ಬೇಕೆಂಬ ಗಾದೆ ಹಳೆಯದಾಯಿತ ; ಒಂದು ಕಣ್ಣು ಕೆತ್ತು ಕೊಳ್ಳಬೇಕು ಎಂದು.

ಹೀಗೆ ಮಹಾತ್ಮರ ಇಂಗಿತವನ್ನರಿತೇ ನಮ್ಮ ರಾಜ್ಯ ಸರಕಾರ ಪಾನ ಪ್ರತಿಬಂಧವನ್ನೂ ಈ ವರ್ಷ ಸಡಿಲಿಸಿದೆ; ಪೂರ್ಣ ಕೆತ್ತುಹಾಕಲು ಮಹಾತ್ಮರ ಶತಮಾನೋತ್ಸವದ ದಿನವನ್ನೇ ಕಾಯುತ್ತಿದೆಯೆ?

—ರಾಶಿ.

(ಮೂರನೇ ಪುಟದಿಂದ)

ಅಯ್ಯೂಬರ ರಾಗವಾದರೆ, ರಶ್ಯನ್ನರು ಇನ್ನೂ ಕೆರಕ್ಕೂ ಕಿವಿಗೊಡಲಿಲ್ಲ. ಪಾಕಿಸ್ಥಾನವು ಭಾರತದೊಡನೆ ಹಿತಕಾರಕ ಸಂಬಂಧ ಬಯಸುವುದೆಂದು ಅವರು ಆಡಿದರೂ ಅದು ಮೊಸಳೆಯ ಆಸೆಯಷ್ಟೆ—ಇದು ರಶ್ಯನ್ನರಿಂದ ಮರೆಮಾಚಿಲ್ಲ ಅಯ್ಯೂಬರು ಮೋಸ್ಕೊ ಯಾತ್ರೆಯಿಂದ ಬಂದರೆ, ಅವರು ಗಳಿಸಿದ್ದು ಇಷ್ಟು; ಕಳೆದುಕೊಂಡದ್ದು?—ರಶ್ಯ—ಭಾರತ ಸ್ನೇಹವಿರುವ ತನಕ ಕೆಂಪು ಚೀನಾ—ಪಾಕಿಸ್ತಾನಗಳ ಬೇಳೆ ಬೇಯದು. ಪಾಶ್ಚಾತ್ಯ ರಾಷ್ಟ್ರಗಳ ಒಲವು ಪಾಕಿಸ್ತಾನಕ್ಕಿದ್ದರೂ ಅತ್ತ ಭಾರತದ ವಿರುದ್ಧ ನೆರವು ನೀಡಲಾರವು. ಆದುದರಿಂದ, ಭಾರತದ ಪಕ್ಷದಿಂದ ರಶ್ಯವನ್ನು ದೂರ ಮಾಡಿದರೆ, ಮೂವಳಿಯಂದಿರು ಒಂದಾಗಿ ಭಾರತವನ್ನು ನುಂಗಬಹುದೆಂಬ ಇಚ್ಛೆ—ರಶ್ಯ ದೂರವಾದರೆ, ಚೀನಾಕ್ಕೂ ಭಾರತಾಕ್ರಮಣದ ವೇಳೆ ರಶ್ಯನ್ ಭೀತಿಯಿಲ್ಲವಾಗುವುದು—ಹೀಗೆ ಕೆಂಪು ಚೀನಾದ ಎಚ್ಚರಿಕೆ, ಅಯ್ಯೂಬರ ರಶ್ಯ ಗಮನ ಮೂವಳಿಯರ ಒಂದು ವಿನೋದ ನಾಟಕ ಮಾತ್ರವೆಂಗುಳಿಯಿತು.

ಬೆಳಕಿನ ಹಬ್ಬ

ದೀಪಾವಳಿ ಸಮೀಪಿಸುತ್ತಿದೆ

ನವಯುಗದ

ದೀಪಾವಳಿ ಸಂಚಿಕೆ

ತಯಾರಾಗುತ್ತಿದೆ

ಜ್ಞಾನದೀಪವಾಗಿ

ಇದು ಎಲ್ಲೆಲ್ಲೂ ಬೆಳಗಲಿದೆ

ಜಾಹೀರಾತಿಗೆ

ಉತ್ತಮ ಮಾಧ್ಯಮವೆಂದರೆ

ನವಯುಗ

ದೀಪಾವಳಿ ಸಂಚಿಕೆ!

ದರಗಳಿಗೆ ಬರೆಯಿರಿ:

ಮೆನೇಜರ್, ನವಯುಗ, ಉಡುಪಿ

ವಿದೇಶ ಪ್ರಯಾಣ

ಉಡುಪಿ ತಾಲೂಕು ಕುಂದಾಪುರ ಗ್ರಾಮದ ಕೇರೋಟ್ಟು ಶ್ರೀ ಸಂಜೀವ ಶೆಟ್ಟಿಯವರು ಇಂಗ್ಲೆಂಡ್ ಸ್ವಿಜರ್‌ಲೇಂಡ್ ಮತ್ತು ಫ್ರಾನ್ಸು ದೇಶಗಳ ಸಂದರ್ಶನಾರ್ಥವಾಗಿ ತಾ. ೪—೯—೬೭ರಲ್ಲಿ Air India ವಿಮಾನ ಮೂಲಕ ಬೊಂಬಾಯಿಯ ಸಾಂತಾಕ್ರೂಜ್ ನಿಲ್ದಾಣದಿಂದ ಪ್ರಯಾಣ ಕೈಗೊಂಡರು.

ಇವರು ಜೆ. ಕೆ ಇಂಜಿನಿಯರ್ಸ್ ಫಾರ್ಜ್ಸ್ (J K. Engineers Files, ಕಂಪೆನಿ ಫಾನ್ಸು, ಮುಂಬಯಿ, ಇದ್ದಿ ಪೆಸಾಲ್ಟ್ಸ್ ಇಂಜಿನಿಯರಾಗಿ (Productio, Engineer) ಕೆಲಸ ಮಾಡುತ್ತಿರುವರು; ಇವರು ಹೆಚ್ಚಿನ ತಾಂತ್ರಿಕ ಶಿಕ್ಷಣಕ್ಕಾಗಿ ಮತ್ತು ವ್ಯಾಪಾರ ಪ್ರಗತಿಗಾಗಿ ವಿದೇಶಕ್ಕೆ ತೆರಳಿದರು.

ತಡೆಯಾಜ್ಞೆ

ಉಡುಪಿಯ ಅದಮಾರು ಮಠದವರು ತಮ್ಮ ಶ್ರೀ ಗ್ರಾಮದ ಕುಂಜಿಬೆಟ್ಟಿನ ಕೆಲವೊಂದು ಸ್ಥಳವನ್ನು ಏಲಂ ಮೂಲಕ ಮಾರಾಟ ಮಾಡಲಿರುವುದನ್ನು ಶ್ರೀ ಆರ್. ಆರ್ ಕುಂಜೂರರ ಅಳಿಯ ಮೇರಿಗೆ ಮೈಸೂರು ಸರಕಾರವು ಏಲಂನಲ್ಲಿ ಕಡೆಹಿಡಿದಿರುವುದಾಗಿ ತಿಳಿದು ಬರುತ್ತದೆ. ಕಂಜಿದಾರರ ಕಡೆಯಿಂದ ಬೆಂಗಳೂರಿನ ನ್ಯಾಯವಾದಿಗಳಾದ ಶ್ರೀಯುಗ ಎಲ್. ನಾರಾಯಣರಾವ್ ಮತ್ತು ಶ್ರೀ ಕೆ. ಜಗನ್ನಾಥ ಶೆಟ್ಟರು ವಾದಿಸಿದ್ದರು. ಕೊನೆಯ ತೀರ್ಮಾನವನ್ನು ಜನ ನೀರೀಕ್ಷಿಸುತ್ತಾರೆ

ಸಂಪಾದಕರಿಗೆ ಪತ್ರ

ಮಾನ್ಯರೇ,

ತಮ್ಮ ೨೧—೯—೬೭ ರ ಪತ್ರಿಕೆಯಲ್ಲಿ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿನಿಲಯದ ಬಗ್ಗೆ ಬರೆದಿರುವ ಲೇಖನಕ್ಕಾಗಿ ತಮಗೆ ಅಭಿನಂದನೆಗಳು.

ವಿದ್ಯಾರ್ಥಿ ನಿಲಯ ಎ. ಬಿ. ಶೆಟ್ಟರ ಸ್ಮರಣಾರ್ಥವಾಗಿ ಸ್ಥಾಪಿತವಾಗಿದೆ. 1960ರಿಂದಲೂ ನಡೆಯುತ್ತಿದೆ. ಇದು ಸಾರ್ವಜನಿಕ ವಿದ್ಯಾರ್ಥಿನಿಲಯ ಎಲ್ಲಾ ಜಾತಿಯವರಿಗೂ ಇಲ್ಲಿ ಪ್ರವೇಶ ಅವಕಾಶವಿದೆ. ವಿದ್ಯಾ ಪ್ರಗತಿಯಲ್ಲಿ ಅಸಕ್ತಿಯುಳ್ಳ ವರೆಲ್ಲರೂ ಈ ನಿಲಯದ ಕಟ್ಟಡಕ್ಕಾಗಿ ಸಹಾಯ ಮಾಡಬಯಸುವಂತಾಗಿದೆ.

ನಿಲಯದ ಸ್ವಂತ ಕಟ್ಟಡಕ್ಕಾಗಿ ಸರಕಾರ ಎಕ್ರೆ ಜಮೀನನ್ನು ನಗರದ ಮಧ್ಯಭಾಗದಲ್ಲಿರುವ ಚಿಲುಮಾಂಬ ಅರಮನೆ (C. F T R. I.) ಆವರಣದಲ್ಲಿ ಕೊಟ್ಟಿದೆ.

ಮೈಸೂರು. ಎ. ರಾಮಣ್ಣ
ಕಾರ್ಯದರ್ಶಿ

ತನ್ನ ಹಣವನ್ನು ತನ್ನ ನಿದುಳಿಗೆ ಸಂಪಾದಿಯುವಾತನ ಸಂಪತ್ತನ್ನು ಯಾರೂ ಅಪಹರಿಸಲಾರರು. —ಫ್ರಾಂಕ್ಲಿನ್

ಜ್ಞಾನ ಹೆಚ್ಚಿಸಿಕೊಳ್ಳದಿರುವುದಕ್ಕೆ ಯಥಾ ಹೊಟ್ಟದಿರುವುದೇ ಒಂದು ಏಕೆಂದರೆ ಅಜ್ಞಾನವೇ ಎಲ್ಲ ದುಃಖಗಳ ಮೂಲ

—ಪ್ಲೇಟೊ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. E. P. 46/67

ನಾರಾಯಣ ಆಚಾರ್ಯ —ಅರ್ಜಿದಾರ,

VS

ರಾಮಮ್ಮ & ಇತರರು —ಎದ್ರಿದಾರು

ಬೆಳ್ತಂಗಡಿ ತಾಲ್ಲ್ಯ, ತೆಂಕಕಾರಂದೂರು ಗ್ರಾಮದಲ್ಲಿರುವ ೧ ಪೈಸೆ ಸಂಪಿಗೆತ್ತಾಯರ ಪಾಗ, ೪ ಎದ್ರಿ ಅನಂತರಾಮ ಸಂಪಿಗೆತ್ತಾಯರು ೪೦೦ ರಿಂದ 10 ವರೆಗಿನ ಮೈನರ ಎದ್ರಿಯರ ಗಾರ್ಡಿಯನ್ ಕೂಡಾ ಮತ್ತು ಸದ್ರಿ ಅನಂತರಾಮ ಸಂಪಿಗೆತ್ತಾಯರ ಮಗ ೦ನೇ ಎದ್ರಿ ೨ನೆ ಸಂಪಿಗೆತ್ತಾಯ. ಇವರಿಗೆ ಕೋರ್ಟಿನ ಮುಂದೆ ಕಾರ್ಯ ಕಾರಣ ತಿಳಿಸಿ ಪಡಿಸುವುದೇನೆಂದರೆ

ಮೇಲ್ಕಂಡ ಅರ್ಜಿದಾರಿಯು ನ್ಯಾಯಸ್ಥಿರ ನೇಲ ನೋಟೀಸಿನ ಬಗ್ಗೆ ತಾ 20-10-67 ಕ್ಕೆ ಇಟ್ಟುರುವುದ್ರಿಂದ, ನಿಮಗೇನಾದರೂ ಆಕ್ಷೇಪಣೆಗಳಿದ್ದಲ್ಲಿ ಸದ್ರಿ ದಿವ್ಸ ಬೆಳಿಗ್ಗೆ ಗಂಟೆ 11 ಕ್ಕೆ ಸದ್ರಿ ಕೋರ್ಟಿನಲ್ಲಿ ಹಾಜರಾಗಲಿ, ನಿಮಗೆ ಲಿಖಿತ ಮುಖಾಂತ್ರವಾಗಲಿ ಹಾಜರಿದ್ದು ಉಪದೇಶ ಕಳ್ಳಿದ್ದು—ತಪ್ಪಿದಲ್ಲಿ ನಿಮ್ಮನ್ನು ತಿರ್ಮಾ ಸೂಡಿ ನಿರ್ಣಯಿಸಲಾದೀತು.

R. N. Bhide
Advocate for Petr.

ಬೆಳ್ತಂಗಡಿ, ೨೫—೯—೬೭

ಜಗವೇ ಒಂದು ನಾಟಕ

ಬರೆದವರು: ಶ್ರೀ ಮ. ಗೋ. ರಾವ್.

ಓ.....ರಸ್ಕೆ

"....."

"ನನ್ನ ಪಕ್ಕಳಿ ಚೆನ್ನಾ..."

ಹ್ಞಾ!! ಸಾಕು ನಿಲ್ಲಿಸಿ ನಿಮ್ಮ ಅಲಾಪನೆ. ಯಾವಾಗ್ಲೂ ಒಂದೇ ರಾಗ. ಚೆನ್ನಾ...ಗೆನ್ನಾ.....ಅಂತ ನಾನು ಹೇಳಿದ್ದು ನಿನ್ನೆ....

ನಿನ್ನೆನ್ಲೆ ?"

"ಚೆನ್ನಾಗಿ ಅರ್ಥವಾಯ್ತು ಎಂಬುದು ...."

"ನೀನಂದುದು ಚೆ ನ್ನಾ ಗಿ ಅರಿತು ಕೊಂದೆ..."

'ಏನದು, ತಿಳಿದಿರಿ?"

"ನಿನ್ನನ್ನು ಐದು ವರ್ಷಗಳಿಂದ ಬೇಕಷ್ಟು ಅರ್ಥ ಮಾಡಿಕೊಂಡಿದ್ದೇನೆ. ನಿನಗೆ ಬೇಕಾದ್ದು..."

'ಹಾಂ! ಸರಿ...ಛೆ...ನನಗೆ ಬೇಕಾದ್ದು ನೀನ್ಲ....ಉ...."

'Correct ..ನಿನಗೆ ಬೇಕಾದವನು ನಾನು.'

'ಹಾಗಲ್ಲಾಂದ್ರೆ!....ನಿನಗೆ ಹೂರ್ಣಾ ಹೇಳೋ ವರೆಗೂ ಅವಸರ..'

'ಏನದು? ಸೂರಾ...'

'ನಾನು ನಿನ್ನೆ ಹೇಳಿದ ಚಿನ್ನದ ನೆಕ್ಲೇಸು ನೀವು ತರಲೇ ಇಲ್ಲ. ಆದರ ಮೇಲೂ ಉದ್ದುದ್ದ ಪುರಾಣ..'

"ಚಿನ್ನ..ಚೆನ್ನ...ಚಿನ್ನ...ನಿನ್ನ ತಲೆಯಲ್ಲಿ ಚಿನ್ನದ ಸರಳುಗಳದೇ ಕಕಾರ ನಾದ. ದೇಶದೇ ಒನ್ನಡುತ್ತಿರುವಾಗ ನೀನು ಚಿನ್ನಕ್ಕೆ ಪಂಠಪಿಸುತ್ತಿದ್ದಿ. ಆ ಹಣವನ್ನು ಉಳಿಸಿ ಉಳಿತಾಯ ಸಂಸ್ಥೆಯಲ್ಲಿಟ್ಟರೆ ..."

'ಸಾಕು... ನಿಲ್ಲಿಸಿ...ಹೀಗೆ ಉಳಿತಾಯ Interester ಅಂತ ಯಾಕೆ ತಲೆ ಬ ಡ್ಕೊಳ್ತೀರಿ?. .....ಗಂಡನಾದವನು ಸಹ ಧರ್ಮಿಣಿಯ ಬೇಡಿಕೆಗಳನ್ನ ಪೂರೈಸ ದಿದ್ರೆ...."

'__ಅವನು ಪತಿಯಲ್ಲ ಪಾಪ ಅಂತ ಪರಿಗಣಿಸಲ್ಪಡುತ್ತಾನೆ ಅಂತ ಹೇಳಿ ಬಿಡು...ಹೇಳೋದನ್ನೆಲ್ಲಾ...ಹೇಳು"'ಹಾಗಲ್ಲರೀ....ಹೆಂಡತಿ ಮಕ್ಕಳ ಗಂಡನ ನಮಸ್ಕಾರ ಅಂತರ....'

'ಶ್ಶ್ಶ್..Stop. ರಾಸ್ಕ್ರಾವೇ ನಂಡಾಂತರದಲ್ಲಿದ್ದಿ! ನಿನಗೇನು ಗೊತ್ತು ಪಾಪ. ವೃದ್ಧ ಪುಲಾಪಾಲಾಪಗಳಿಗೆ ನೀನ್ನ ದು ಎತ್ತಿದ ಕೈ, ಅನ್ನು. ದೇಶದ "ಪೊಲಿಟಿಕ್ಸ್ನು" ನಿನಗ ಹೇಗೆ ಗೊತ್ತಾಗಬೇಕ.. ಈ ಸರಕಾರ....ಈ Strikeಉ....ಈ Problem ಉ ...

'ಮತು ಮಾತಿಗೆ ಪ್ರಾರಂಭಿಸಿದ್ರಲ್ಲಾ ರಾಜಕೀಯ ಪುರಾಣ...ಇದೆಲ್ಲಾ ಜಾರಿ ಕೆಸಿಳ್ಕೋ ಉಪಾಯ. ಇದಕ್ಕೆಲ್ಲ ನಾನೂ ಪ್ಪೋಲ್ಲಾ..... ಏನಯದಿಂದ ನಿನ್ನ ಹತ್ರ ಹೇಳಿಯಿಯಿತು. ಕಾಡಿ ಬೇಡಿ ಯಾಸ್ತು ಅಯ ಪಂಣಾಮ ಕಾರಿಯೂಗಿಸ್ಲಿ ಇನ್ನುಳಿದ ಐದೇ ಮಾರ್ಗ..."

"ಐದೇ ಮಾರ್ಗ....?'

'ಸಖ್ಯಾಸ್ತ್ರಹ ಮಾಡುವುದು ಮುಷ್ಕರ ಹೂಡುವುದು'

"ನಾಲಿಗೆಗೆ ಸ್ವಲ್ಪ ಬ್ರೇಕ್ ಹಾಕು. ನನ್ನನ್ನು ಸಿಕ್ಕಾಪಟ್ಟೆ ಅರ್ಥವಿಲ್ಲದ ಚಿನರ್ಥ ವಿಚಾರಗಳ ಕಡೆಗೆ ಎಳೆಯು ಬೇಡ. ನನ್ನನ್ನು ನೀನಾವ ಆಂಶಪ್ತಿನಲ್ಲಿ ಇಟ್ಟಿರು ವಿ? ಜಂದ್ರಮತಿ, ದಮಯಂತಿ, ಸಾವಿತ್ರಿ ಮುಂತಾದ ಪುಂ ಣ ಪ್ರಸಿದ್ಧ ಪುಣ್ಯಜೀವಿಗಳ ಪತಿವ್ರತಾ ಪಾರಾಯಣೆಯರ ಕತೆಗಳನ್ನು ಒಂದಷ್ಟು ಲಕ್ಷಣವಾಗಿ ಓದಿತಿಳಿದುಕೋ ಎಂದು ಸಾವಿರ ಸಲ ಹೇಳಿಯಾಯಿತು. ಆದೆಲ್ಲ ಬಿಟ್ಟು ಬರೀ ಅಲಂಕಾರ ಸಾಧನಗಳ ಕಡೆಗೆ ನಿನ್ನ ಗಮನ ಹರಿದು ಬಾಯಿಗೆ ಬಂದಂತೆ ಅಲಾಪ ಗೈಯ್ಯುತ್ತಿರುವೆ. ಬರೀ ಹಳ್ಳಿ ಪೊದ್ದು. ಚಿನ್ನಕ್ಕೂ ನಿನಗೂ ಎಷ್ಟೊಂದು ಗಳಸ್ಯ ಕಂಠಸ್ಯ!'

'ಇಷ್ಟು ವರ್ಷವಾಯ್ತು ನೀವೆನ್ನ ಕೈ ಹಿಡಿದು. ನನ್ನ ಮುಖಕ್ಕೊಂದು ದಿನ ನೀವು....ಲಕ್ಷಣವಾದ....'

'ಓಹೋ!! Understood ನಿನ್ನ ಮುಖಕ್ಕೆನ್ನು ನಾನು ಲಕ್ಷಣವಾದ ತಿಲ ಕವಿಡದೇಕೂಂತ ನಿನ್ನ ಅಭಿಪ್ರಾಯವೇ?'

"ಹಾಗಲ್ಲ, ಇಕೋ...ಕಕೋ...ಅಂತ ಒಂದು ತೊಲೆ ಚಿನ್ನ ಈ ಮುಖಕ್ಕೆ....'

"ತೊಲ್ಲು ಬೆಲೆ ಎಷ್ಟೆಂದು ನಿನಗೆ ಡ್ಯಾಗೆ ಗೊತ್ತಾಗ್ಬೆ ಕು?'

"ಬೆಲೆ ಎಷ್ಟಾದರೇನು !! ನಿಮಗೆ ತಾಕತ್ತಿಲ್ಲಾಂಕ ಹೇಳಿದರೆ ಆಗದೇ? ನಿಮ್ಮ ಆಡಂಬಂಕ್ಕೆ ಮಿತಿ ಇಲ್ಲದೆ ಖರ್ಚು ಮಾಡುವುದನ್ನು ನೋಡುತ್ತ ನಾನು ಕೂರಬೇಕಷ್ಟೆ..."

'ಮುಚ್ಚಿ ಬಾಯಿ. ಮುರ್ಕಂಳಿ. ಮಾತಿಗ ಕೊಡಗಿದರು ಉದ್ದುದ್ದ ಎಲ್ಲಿ ವಿಂರಿಹರಿಸುತ್ತಿದೆ ನಿನ್ನ ವಾಕ್ ಪ್ರವಾಹ. ಕಡಿವಾಣವಿಲ್ಲದ ಕುದುರೆಸಂತೆ ನಿಂಲಿಗೆ ಏನೇನೋ ಗೊಣಗುತ್ತೆದ. ದೇಶವೇ ಆರ್ಥಿಕ ಮುಗ್ಗಟ್ಟಿನ್ನ ಕೊಳ್ತರಿಸಿದೆ. ಎಲ್ಲ ನೋಡಿದರಿನ್ನ ಸಮಸ್ಯೆಗಳ ಸರವಳಿಯೇ ಸಜ್ಜಾಗಿದ. ದೇಶದ ರಕ್ಷಕರಾದ ನಾವು ಉಳಿತಾಯಕ್ಕೆ ಮನಮಾಡುವುದರ ಬದಲು ವ.ನಬಾದಂತೆ ವ್ಯಯ ಮಾಡಿದರೆ..ಪರಿಣಾಮ ..."

'ಪರಿಣಾಮ.... ಪರಿಣಾಮ ... ಎಂದು ಕೇಳಿದರೂ ದೇಶದೇ ನಿಮ್ಮ ಬಾಯಿಲ್ಲ.... ಪರಿಣಾಮ..... ಕೊನೆಗೆ ... ಲತ್ಕಹತ್ಯೆ!!"

'ಛಿ!! ವಾಚಾಳಿ ... ಹಟವಾದಿ.... ಹೆಚ್ಚು ಮಾತಾಡಿದರೆ ಡೈವೋರ್ಸು ನೋ

ಕನಸೊಡೆಯಿತು

(ಎರಡನೇ ಪುಟದಿಂದ)

ಲಿಟ್ಟುಕೊಂಡು ಕೂತರೆ ಏ ಆಪ್ತುದಕ್ಕೆ ಮನಸ್ಸು ಬರುವುದಿಲ್ಲ....!'ಎಂದಳು.

ಬಾಗಿಲಿಗೆ ಬೀಗ ಹಾಕಿಕೊಂಡು ಎಲ್ಲರೂ ಜೊರಟರು. ದೇವಸ್ಥಾನದ ತುಂಬಾ ಜನ ಸೇರಿದ್ದರು. ಪೂಜೆ ನಂಗಳಾರತಿ ಆದ ಮೇಲೆ "ತಾಯಿ! ನು ಂದಾ...ಒಂದು ದೇವರ ನಾಮ ಹಾಡಿ ಬಿಡಮ್ಮ, ತಂಬೂರಿಯಿಲ್ಲ, ತಾಳವಿಲ್ಲ ಎಂದು ನೆವ ಹೇಳ ಬೇಡ ದೇವರು ಕೋಪಿಗಯ್ಯಂಕ ಕಂರ ಕೊಟ್ಟಿರುವಾಗ ಅವೆಲ್ಲ ಏಕೆ....? ಭಕ್ತಿಯಿಂದ ನೀನು ಎಷ್ಟು ಹೇಳಿದರೆ ಅಷ್ಟೇ ಸಾಕು....!' ಎಂದರು ಸುಂದರಮ್ಮನ ಕಂಡೆ.

ಸುನಂದೆಗೆ ಹೇಳುವ ಮನಸ್ಸಿಲ್ಲ. ಆದರೆ ದೊಡ್ಡವರು ಹೇಳಿರುವಾಗ ಅವರ ಮಾತನ್ನು ತೆಗೆದು ಹಾಕುವಂತಿಲ್ಲ. ಅಂತೂ ಹಾಡಿದಳು. ನೆನೆದ ಜನ ಅಲ್ಲಾಡದೆ ನಿಂತು ಕೇಳುತ್ತಿದ್ದರು.

ಪ್ರಸಾದವನ್ನು ಹಂಚುತ್ತಿದ್ದಾಗ ಗುಂಪಿನಲ್ಲಿರುವನೊಬ್ಬನು ತನ್ನನೇ ನೋಡುತ್ತಿರುವುದನ್ನು ಸುನಂದ ಗಮನಿಸಿದಳು. ಆವನು ಹೂರಿಂದು ಗುದುತಿಕ ಪ್ರದಕ್ಕೆ ಕದವಾಗಲಿಲ್ಲ. ಅವನು ಈಗಲೂ ದಾರಿಯಲ್ಲಿ ನೆಡೆದುದನ್ನ ನೆನೆದು ಕೀಟಲೆಯಿಂದ ನಗುತ್ತಿರುವಂತೆ ತೋರಿತು. ಅವಳಿಗೆ ಅಲ್ಲಿ ನಿಲ್ಲಲು ಪ ನಸ್ಸಾಗಲಿಲ್ಲ. ಅಲ್ಲದೇ—ಆಗಲೇ ಜನರ ಸಮೂಹದಲ್ಲಿ ಆ ಳ ಹಾಡಿನ ಹೊಗಳಿಕೆಗೆ ಮೊದಲಾಗಿತ್ತು ನಿಂತು ಅದನ್ನ ಕೇಳುವ ಇಷ್ಟ ಕವಳಿಲ್ಲ? ಅತ್ತಿಗೆಯೂದ ಮಿನಾಕ್ಷಿಯು ಬಳಿಗ ಹೋಗಿ—

ಟೀಸ....ಜೋಕ್....Carefull.

'ಡೈವೋರ್ಸು?"

'ಹೂಂ! ಡೈವೋರ್ಸು ನೋಟೀಸು.... ವಿವಾಹ ವಿಚ್ಛೆದನ....'

'ವಿವಾಹ ವಿಚ್ಛೇದನ.... ಗ್ಗಹ್ಹ ಹ್ಹ್ಹ. ಅಲ್ಲಾ...ಅಕ್ಕಿ. ನೈವಾಹಿಕ ಜೀವನ ...ತಮೊಗೆ ನುನಂದೆ ಎಂತ ನೀವು ಸಿಟ್ಟಾಗುತ್ತಿದೆ ಇದೂ ಒಂದು ನಾಟಕವೇ ನನ್ನ ಸ್ವಾಮಿ ...?'

"Certainly. 'ಜಗವೇ ಒಂದು ನಾಟಕರಂಗ'...ಹಾಗೆ ಬಾ. ಇದೂ ಒಂದು ನಾಟಕವೇ...ಬರೀ ನಾಟಕವಲ್ಲ...."

"ಮತ್ತೇನು-?"

'ನನ್ನ ಮನದ ಇಂಗಿತವಂತೆ ನಿನಗೂ ಗೊತ್ತಿಲ್ಲವೇ?

"ಊಹೂಂ'

'ಬರೀ ನಾಟಕವಲ್ಲ ಕಣೆ ... ಜೀವನ ನಾಟಕ . ಜೀವನ ನಾಟಕ... ಹ್ಹಹ್ಹ ಹ್ಹ್ಹ"

ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ—

ಮಿತ ಸಂತತಿ

ಜನನಗಳು ಹೆಚ್ಚದಂತೆ ನಾರಿಯರ ವಿಚಾರ ಪತ್ತು ಉಪಾಯಗಳನ್ನು

ವಿವರಿಸುವ ಕೈಪಿಡಿ

ಬೆಲೆ 0—50 ಪೈಸೆ ಮಾತ್ರ.

0—60 ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು

ಪಡಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ

ಪಾಲುಕೋಟೆ, ಉಡುಪಿ, ದ. ಕ.

"ಮಿನಾ—ನಾನು ಮನೆಗೆ ಹೋಗು ತ್ತೇನೆ. ಏಕೋ ತಲೆ ನೋಯುತ್ತೆ. ನೀನೆ ಲ್ಲಾ ನಿಧಾನವಾಗಿ ಬನ್ನಿ' ಎಂದಳು.

"ಕಸ್ತಲೆ! ಒಬ್ಬಳೆ ಯಾಕೆ ಹೋಗಬೇಕು? ನಡಿ ನಾನೂ ಬರುತ್ತೇನೆ. ಆವರೆಲ್ಲಾ ನಿಧಾನವಾಗಿ ಹಿಂದಿನಿಂದ ಬರಲಿ!' ಎಂದು ಹೇಳಿ ಮಿನಾಕ್ಷಿ ಆವಳನ್ನ ಕರೆದುಕೊಂಡು ಜೊರಟಳು. ಸ್ವಲ್ಪ ಹೊತ್ತಾದ ಮೇಲೆ ಎಲ್ಲರೂ ಮನೆಗೆ ಬಂದರು.

"ಮಿನಾ—ಮೂರ್ತಿ ಬಂದಿದ್ದಾನೆ...." ಎಂದು ಸುಂದರಮ್ಮನವರ ತಂದೆ ಹೊರಗೆ ನಿಂತಿದ್ದವರು ಕೂಗಿದರು.

ಸುನಂದ ಮಿನಾಕ್ಷಿಯು ತೊಡೆಯ ವೇಲೆ ತಲೆಯಿಟ್ಟು ಮಲಗಿದ್ದವಳು ತಟಕ್ಕನ ಎದ್ದು ಕುಳಿತಳು. ಮೂರ್ತಿ ಒಳಗೆ ಬಂದವನು—

"ಏನು ಮಿನಾ ಸಿಬ್ಬಿನೇ....? ಯಾವಾಗ ಬಂದದ್ದು..?' ಎಂದು ವಿಚಾರಿಸಿದ.

'ಏನೋ ಇಪ್ಪರ ವಟ್ಟಿಗೆ! ಒಳಗೆ ಬಾಪ್ಪ. ಬಗ್ಗಿಕೂಂಡ, ಬಾ. ಇಲ್ಲದಿದ್ದರೆ ನಮ್ಮ ಮನೆ ಬಾಗಿಲು ತಲೆಯು ವೇಲೆ ತಟ್ಟಿ ಬುದ್ಧಿ ಕಲಿಯುತ್ತೆ! ಎಷ್ಟ ಉದ್ದವಾಗಿ ಬೆಳೆದು ಬಿಟ್ಟೆ ವರ್ಷ.....?"

"ಇನ್ನೇನು...ನೀನು ಇಷ್ಟ ಬೇ ಡ ನ ಮ್ಮನೆಲ್ಲಾ ಜಪ್ತಿಮಿಸಿಕೊಂತು ಈ ಕಡೆ ಬರುತ್ತಿದ್ದರೆ....? ಇನ್ನೂಂಪು ಸಲ ನೀನು ಬರುವ ಹೊತ್ತಿಗೆ ತಲೆ ನೆರೆತು ಹಣ್ಣೂ ಬಿದ್ದಿರಬಹುದು. ಆದರಲ್ಲಿ ಆಶ್ಚರ್ಯವೇನು...?"

"ನೀನು ಯಾವಾಗ ಬಂದದ್ದು...?'

'ಸಂಜೆಯ ಲೋಕಲ್ಲಿನಲ್ಲೇ ಬಂದೆ. ದಾರಿಯಲ್ಲಿ ಸ್ನೇಹರು ಸಿಕ್ಕಿರು ಕಡವಾಯಿತು. ವನೆಗೆ ಬಂದ ಮೇಲೆ ನೀ ವೆಲ್ಲಾ ಬೆಟ್ಟಕ್ಕೆ ಹೋಗಿರ ವುದು ತಿಳಿಯುತು. ನೀನು ಬಂದಿರುವ ವಿಚಾರವೇ ತಿಳಿಯದು, ಮಿನಾ! ದೇವಸ್ಥಾನದಲ್ಲಿ ನೋಡಿದ ಮೇಲೆ ಗೊತ್ತಾದದ್ದು...'

'ನೀನೂ ಅಲ್ಲಿಗೆ ಬಾಡಿದ್ದಾಗಿ ಕಾಣಿಸಲೇ ಇಲ್ಲ....!'

'ಇಲ್ಲಿ ಮನೆ ಬೀ ನೋಡುತ್ತಾ ಎಷ್ಟು ಹೊತ್ತು ಕೂತಿರಲಿ....? ಬೇಜಾರಾಯಿತ. ಬಂದೆ....! ಆದರೆ.... ಂಗೀತದಲ್ಲಿ ಮಗ್ನರಾಗಿರುವವರಿಗೆ ನಾನು, ಬಂದಂರ ಕಾಣುವುದೇ...? ಈ ಪ್ರಾಣವೆ ಅಷ್ಟು ಚೆನ್ನಾಗಿ ಹಾಡಿದೆವರು ಇದ್ದಾರೆಂದು ನಿನಗೆ ಇದ ವರೆವಿಗೂ ಗೊತ್ತಿರಲ್ಲಿಲ್ಲ! ಅಷ್ಟೊಂದು ಜನ ಮಂತ್ರಮುಗ್ಧರಾಗಿ ಯಾರು ಮಿನಾ ...?"

ರಂಡರು ಕೂಲು ಜರಿಕೊಳ್ಳುತ್ತ ಒಳಗೆ ಬಂದರು—ಮೂರ್ತಿಯ ಮಾತು ಕವಿಗೆ ಬೀಳುತ್ತಲೇ—'ಏನದು, ನನ್ನ ರಾಯಣಿಸಿದ್ರನ ಬಂಗಾಯ! ಬಹಳ ಚೆನ್ನಾಗಿ ಹಾಡಿ ಬಿಟ್ಟ. ಸರಸ್ವತಿ ಹೊಡುಗೆ ಚೆನ್ನಾಗಿ ಒಲಿದು ಬಿಟ್ಟಿದ್ದಾಳೆ...!" ಎಂದಳು.

ಆದರೆ ಆ ಹೊಗಳಿಕೆಯನ್ನು ಕೇಳಲು ಸುನಂದ ಅಲ್ಲಿರಲಿಲ್ಲ. ಯಾವಾಗಲೋ ಎದ್ದು ಒಳಗೆ ಹೋಗಿ ಬಿಟ್ಟಿದ್ದಳು ಮಿನಾಕ್ಷಿ ಎಡಬಲ ತಿರುಗಿ ನೋಡಿ—'ಸುನಂದಾ!' ಎಂದು ಕೂಗಿದಳು.

"ಸುನಂದಾ...!' ಎಂದು ಆಫೀಸಿನಿಂದ ಒಂದೆ ವರ್ಷ ಬಾಗಲಲ್ಲಿ ನಿಂತು ಕೂಗಿದಾಗ ಅವಳ 'ಕನಸೊಡೆಯಿತು'

NAVAYUGA 5—10—1967
Registered with the Registrar of News Papers for India under No. K. N. 3546/'57

REGD. No. B. G. 176
LICENCE No. 31
Licenced to Post without Prepayment

ಸ್ಮೋಕ್— ಈಗಿನ ಶೋಕ್ !

ಸಿಗರೇಟಿನ ಸೊಗಸು

ಬರೆದವರು : ಶ್ರೀ ಸುರತ್ಕಲ್ ರಾಮಕೃಷ್ಣ ಹೆಬ್ಬಾರ್.

ಈಗಿನ ಕಾಲದಲ್ಲಿ Smoking ಕೂಡಾ ಒಂದು ಕಲೆಯಾಗಿ ಬಿಟ್ಟಿದೆ; ಅಥವಾ 'ಶೈಲಿ' (Style) ಎನ್ನಿಸಿಕೊಂಡಿದೆ. ಶುದ್ಧವಾದ ಟ್ರಿಪ್ಲಿನ್ ಹರ್ಬ್ಸ್ ಫ್ಲ್ಯಾಂಟ್, ರಿಸ್ಟ್‌ವಾಚ್, ಶೂ ಇಷ್ಟೆಲ್ಲಾ ಧರಿಸಿದ ಕೂಡಲೇ ಸುಸಂಸ್ಕೃತನೆನ್ನಿಸಿಕೊಳ್ಳಲಾರ! ಈಗ ಸಿಗರೇಟ್ ಸೇದುವವನೇ "ಜಂಟ್ಲ್‌ಮ್ಯಾನ್" ಅನ್ನಿಸುವನು.

ಹೊಗೆಸೊಪ್ಪನ್ನು ಕಂಡು ಹಿಡಿದ ನಂತರ ಈ ಸಿಗರೇಟು ಸೃಷ್ಟಿಯಾಗಿದೆ. ವೀಳ್ಯದಲೆಯೊಂದಿಗೆ ಹೊಗಸೊಪ್ಪ ತಿನ್ನುವುದು, ನಶ್ಯಸೇವನೆ, ಹೊಗಸೊಪ್ಪ (ಬೀಡಿ ಸಿಗರೇಟ್) ಸೇದುವುದು, ಹೀಗೆ ಮೂರು ವಿಧಗಳಲ್ಲಿ ಹೊಗೆಸೊಪ್ಪ ಉಪಯೋಗಿಸಲ್ಪಡುತ್ತದೆ. ಇವುಗಳಲ್ಲ ಪಶ್ಚಿಮದ ಎರಡು ವಿಧಾನಗಳಿಗಿಂತ ಕೊನೆಯ 'ಧೂಮಪಾನವು' ಶ್ರೇಷ್ಠವಾಗಿದೆಯೆಂದು ತಿಳಿದವರ ಅಭಿಪ್ರಾಯ.

ಕಾಫಿ-ಚಹಾಗಳಂತೆ ಧೂಮಪಾನವೂ ಮನುಷ್ಯನ ಚಟವಾಗಿದೆ. ಒಮ್ಮೆ ಸೇವಿಸಿದವನು ಅದರ ಗುಲಾಮನಾಗಿಯೇ ಬಿಡುತ್ತಾನೆ. ಉದಾಹರಣೆಗೆ ಬಾಯಿ ಆಕಳಿಸುತ್ತಿರುವಾಗ, ಏಕಾಂತದಲ್ಲಿರುವಾಗ—ಈ ಸಿಗರೇಟು ಮಾನವನಿಂದ ಹೆಚ್ಚು ಪ್ರಮಾಣಗಳಲ್ಲಿ ಭಸ್ಮವಾಗುತ್ತಿದೆ. ರೈಲು ಪ್ರಯಾಣ ಸಂದರ್ಭದಲ್ಲಿ, ಬಸ್ಸಿನಲ್ಲಿ, ಸಿನಿಮಾ ಥಿಯೇಟರುಗಳಲ್ಲಿ—Smoking is prohibited—ಎಂಬ ಬೋರ್ಡು ತಗಲಿಸಿದರೂ "ಅದು ಗಂಡಸರಿಗಲ್ಲ— ಹೆಂಗಸರಿಗೆ ಮಾತ್ರ ಆಸ್ಪಯಿಸುವ ಬೋರ್ಡು" ಎಂದು ಹೇಳುತ್ತಾ ಸಿಗರೇಟು ಸೇದುವವರು ಎಷ್ಟೋ ಜನರಿದ್ದಾರೆ. (ಕೆಲವು ಹೆಂಗಸರೂ ಸೇದ್ತಾರೆ!)

ಯಾರು ವ್ಯಾಪಾರಿಯೂಗಿರ ತ್ತಾರೋ ಅವರಿಗೆ ಈ ಸಿಗರೇಟ್ ಗುಂದರಿಯು ಅತ್ಯಂತ ಪ್ರಿಯಳು. ಸಿಗರೇಟಿನ ಮೂಲಕ ಅವರು ತಮ್ಮ ಸ್ನೇಹಿತರನ್ನು ಹೆಚ್ಚು ಪಡೆಯುತ್ತಾರೆ.

ಹಲವು ತರುಣರಲ್ಲಿ ಒಂದು ಬಲವಾದ ಭ್ರಮೆಯಿರುತ್ತದೆ. ಅದೇನೆಂದರೆ ಸಿಗರೇಟ್ ಸೇದುವುದರ ಮೂಲಕ ಯುವತಿಯರ ಮನಸ್ಸನ್ನು ಒಲಿಸಬಹುದು ಎಂದು. ಆದರೆ ನನ್ನ್ಯಭಾರತೀಯ ಮಹಿಳೆಯರು ಅದಕ್ಕೆಲ್ಲಾ ಸೊಪ್ಪು ಹಾಕಿಯಾರು! ಏಕೆಂದರೆ ಒಂದು ಕಥೆಯಿದೆ. ಚಿಕ್ಕ ಕಥೆ:-

ಒಬ್ಬ ಯುವಕನು ಒಂದು ಯುವತಿಯನ್ನು ಮೆಚ್ಚಿಸಿ, ಅವಳ ಮನಸ್ಸನ್ನು ಒಲಿಸುವಂತೆ ಮಾಡಿದನು. ತಾನು ಅವಳ ಮನಸ್ಸನ್ನು ಒಲಿಸಿದೆನೆಂಬ ಸಂತೋಷ ಹಾಗೂ ಹೆಮ್ಮೆಯಿಂದ ಅವನು ಸಿಗರೇಟನ್ನು ಸೇದುತ್ತಾ ಹೊಗೆಯನ್ನು ಅವಳ ಮುಖಕ್ಕೆ ಚೆಲ್ಲಿದನಂತೆ. ಹೊಗೆಯಿಂದ ಆವಳಿಗೆ ನಗೆ ಹೊಮ್ಮುವುದರ ಬದಲು ಬಹಳ ಕೋಪ ಬಂದು ಕೆರಳಿದ ಸರ್ಪಿಣಿಯಂತಾಗಿ ತರುಣಿಯು—ಆ ತರುಣನ ಕೆನ್ನೆಗೆ ಪೇರ್ಳೆ ವನ್ನು ಕೊಟ್ಟಳಂತೆ! ಅಂದಿನಿಂದ 'ಆವರು ಭಗ್ನ ಪ್ರೇಮಿಗಳಾದರೆಂದು ಹೇಳಬೇಕಿಲ್ಲವಷ್ಟೆ?ಆಗಲಿ, Somke ಮಾಡ್ತೀರಾ?

ಶರೀರ ನಾಶವು ನಾಶವೇ ಅಲ್ಲ; ಆತ್ಮ ನೈತಿಕ ನಾಶವೇ ಇಲ್ಲ. ನಾಶವೆಂದರೆ ಬುದ್ಧಿ ನಾಶ.

—ವಿನೋಬಾ.

ಜನಪದ ಗೀತೆಗಳು.

ವಜ್ರುದ ಬಾಕೇ ನಡಿಗ್ಯಾವೆ

ಆಕ್ಕಿ ಅಷ್ಟದ ಬುತ್ತಿ ಕಟ್ಟಿಂದ ಮದಕೇರಿ
ದಟ್ಟಿ ಸುತ್ತೋದೆ ತಡವೆಂದ|
ಮಾಯ ಕೊಂಡ
ಕಾಳ್ಗಕ್ಕೋಗಾನು ನಡೆಯೆಂದ||
ಶ್ಯಾವೆ ಅನ್ನದ ಬುತ್ತಿ ಮಾಡೆಂದ ಮದಕೇರಿ
ಲಾಡಿಸುತ್ತೋದೆ ತಡವೆಂದ|
ಮಾಯಕೊಂಡ
ಕಾಳ್ಗಕ್ಕೋಗಾನು ನಡೆಯೆಂದ||
ಅಗಲ ಕಾಯಿಗೆ ಹೆಣ ಎನ
ಸಂಬಾರ
ಅಗಲಿಲ್ಲಡಿಗೆ ಉಣಲಿಲ್ಲ| ಮದಕೇರಿ
ಕಾಳ್ಗಕ್ಕೋಗಾನು ನಡೆಯೆಂದ||
ಬದ್ದಾನೆ ಮದಕೇರಿ ಬಳಿಯಂಗಿ
ಯಡಿಯೂ
ವಜ್ರುದ ಬಾಕೇ ನಡಿಗ್ಯಾನೆ|
ಮದಕೇರಿ
ಬದ್ದಾನೆ ತೀರ್ಗೇಪೊಡಿಯೂಗೆ||

(ಚಕ್ರಮಗ್ಗದ ಇತಿಹಾಸದಲ್ಲಿ ಆಗಿಹೋದ ವೀರ ಮದಕೇರಿನಾಯಕನ ಬಗ್ಗೆ ಹಾಡುವಕೆಲವು ಜನಪದ ಗೀತಗಳು)

ಸಂಗ್ರಾಹಕ: ಕೋ. ಶ. ವಿಶ್ವನಾಥ
ಹಾಡಿದವರು: ಇಂಗ (ಕೋನಸಾಗರ)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 507/64. R. I. A. 440/1967.

ವಾದಿ—ರಾಮಕೃಷ್ಣ ಸೇಟ್.
ಪ್ರತಿವಾದಿಯ—ಸಾಬದಪ್ಪ ಕೊಡಂಜೆ ಕೂಡಾ

8, 4, 5ನೆ ಪ್ರತಿವಾದಿಗೆ ಯಾ ಮೂಲಕ ತಿಳಿಸುವದೇನಂದರೆ—

3ನೆ ಪ್ರ. ಪ್ರಧಾಕರ ಕೊಡಂಜೆ, 4ನೆಪ್ರ. ಅರವಿಂದ ಕೊಡಂಜೆ-ಮೂದಪ್ಪ ಕೊಡಂಜೆರಮಾಕ್ಕಳು. 5ನೆ ಪ್ರ. ಸಾತೀಲಬಾಯಿ. ಮೂಡಪ್ಪ ಕೊಡಂಜರ ಹೆಂಡ್ತಿ. ಕುಂದಾಪುರ ತಾಲ್ಲೂಗುಜ್ಜಾಡಿ ಗ್ರಾಮಸ್ಥರು—

ಮೇಲ್ಕಂಡ ದಾವೆಯಲ್ಲಿ ಆದ ಪ್ರಲಿವಿನಾರಿ ದಿಕ್ರಿಯು ಮೇಲೆ ಫೈನಲ್ ದಿಕ್ರಿ ಕೊಡಿಸ ಬೇಕಾಗಿ ವಾದಿಯು ದಾಕಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು. 18—10—67ಕ್ಕೆ ಕಶ್ಚಿಗೆ ಯಿಟ್ಟಿರುವದ್ರಿಂದ ಆ ಅಂತು ನಿಂವು ಅಕ್ಷೇಪಣೆಯಿದ್ದಲ್ಲಿ ಪಕ್ಷದಲ್ಲ ಸದ್ರಿ ತಾರೀಖು ಹಗಲು 11ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜಾಹೀರುಮಾಡಿಕೊಳ್ಳ ತಕ್ಕದ್ದು.

M. Madhava Rao,
Advocate for Plaintiff.

ತಾರೀಕು. 24—9—67.
ನೋಕ್ಕಾಂ: ಕುಂದಾಪುರ.

ಅಸ್ಥಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ತಮಾ ನಿವಾರಕ ಮೂಲಿಕೆಯನ್ನು ದಿ. 18—10—67 ಹುಣ್ಣಿಮೆಯ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಪೇರಿನಲ್ಲಿ ತೆಗೆದುಕೊಳ್ಳುವುದರಿಂದ ಅಸ್ಥಮಾ, ಗೂರಲು, ಕೆಮ್ಮು, ಉಬ್ಬಸ, ವೀಳಲಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಣೆಯಾಗುತ್ತವೆ. ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ.

Shri Mahatma Sidh Baba Sewa Ashram
P. O. Chitrkot, (Uttar Pradesh)

ವಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ ಎರಡು (ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಸಶಕ್ತವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

(Letter Writing Made Easy)

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು

ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ - ಮದ್ದು

(Home-Remedies)

ನೂರಾರು ಕಾಹಿಲೆಗಳಿಗೆ ಮನೆಯಲ್ಲೆ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹಪೈದ್ಯ.

ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—

ವಿವಿಧಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 388/67

N. ಅನಂತ್ಯಾಜ ಆರಿಗ —ವಾದಿ
K. T. ಇಬ್ರಾಯಿಂ-ಹಮ್ಮಬ್ಬನವರಮಗ, Tailor C/o Sri Mohamad Musliar, Cloth Merchant Puttur Town —ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಕೋರ್ಟು ಹ್ಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ದಾವಾ A ಶೆಡ್ಯೂಲು ಆಸ್ತಿ ಸ್ವಾಧೀನಕ್ಕೂ ಮತ್ತು ಇತರ ನಿವೃತ್ತಿಗಳಿಗೂ ವಾದಿಯು ನಿಮ್ಮ ಮೇಲೆ ಮಾಡಿದ ಈ ದಾವೆಯನ್ನು ನಿಮ್ಮ ನೋಟೀಸಿನ ಬಗ್ಗೆ ತಾ. 5—10—67ಕ್ಕೆ ಇಟ್ಟಿರುತ್ತದೆ. ಸದ್ರಿ ದಿನ ಈ ಕೋರ್ಟು ಮುಂದೆ ಹಾಜರಾಗಿ ಉತ್ತರನ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಯುಕ್ತೆಕಂಡಂತೆ ತೀರ್ಪುಕೊಡಲಾ ದೀತು.

(Sd.) M. Sadashiva Rao
Vakil for Plaintiff

Puttur, 23—9—67

Printed, Published by K. H. Shetty at the Navayuga Press, Udipi, S. India.

ನವಚೇತನ

ಸಮಾಜವಾದಿ ಕನ್ನಡ ವಾರಪತ್ರಿಕೆ

2—10—1967

೧೦ ಪೈಸೆ

ಕಥಾ ಪ್ರಪಂಚ

ತೀರ್ಥಯಾತ್ರೆ

ಹಿಂದೀ ಮೂಲ: ಸುದರ್ಶನ್
ಕನ್ನಡಕ್ಕೆ: ಬಿ ನರಸಿಂಗ ರಾವ್

— ೧ —

ಲಾಜವಂತಿ ಹೆತ್ತ ಮಕ್ಕಳು ಹಲವರಾದರೂ ಬದುಕಿ ಉಳಿದದ್ದು ಕೊನೆಗೆ ಹೇಮರಾಜನೊಬ್ಬನೆ. ಅತನೇ ಅವರ ಬಾಳಿನ ನಂದಾದೀಪವಾಗಿದ್ದ. ಅತನ ಲಾಲನೆ ಪಾಲನೆಯಲ್ಲೆ ಲಾಜವಂತಿ ತನ್ನ ಹಿರಿಯ ಮಕ್ಕಳ ಸಾವಿನ ದೇನೆಯನ್ನು ಮರೆಯುತಿದ್ದಳು. ಹೇಮರಾಜನು ರೂಪದಲ್ಲೂ, ವರ್ಣದಲ್ಲೂ ಹಳ್ಳಿಯ ಇತರ ಮಕ್ಕಳಂತೆ ಇದ್ದರೂ ಲಾಜವಂತಿಯ ಪಾಲಿಗೆ ಆತ ಸುರ-ಸುಂದರನಾಗಿದ್ದ—ಮಾತೃ ವಾತ್ಸಲ್ಯದಿಂದಾಗಿ ಅವಳ ಕಣ್ಣುಗಳು ಮೋಸ ಹೋಗಿದ್ದವು. ಹಗಲೂ ರಾತ್ರಿ ಅವಳಿಗೆ ಹೇಮನದ್ದೆ ಚಿಂತೆ. ದಿನವಿಡೀ ಅವನನ್ನು ಕಂಕುಳಲ್ಲಿ ಹೊತ್ತು ಕೊಂಡೇ ಅವಳಿರುತಿದ್ದಳು. ಹೇಮನೆಂಬ ದೀಪವನ್ನಾರಿಸಲು ಗಾಳಿಯು ನಾಲ್ದೆಸೆಗಳಿಂದಲೂ ಬೀಸುತಿತ್ತೊ ಎಂಬಂತೆ ಕಾಣುತಿತ್ತು— ಲಾಜವಂತಿಯು ಹುಚ್ಚ ಪ್ರೇಮವನ್ನು ಕಂಡಾಗ, ಎಲ್ಲಾದರೂ ದೃಷ್ಟಿ ತಗುಲೀತೋ ಎಂದು ಹೆದರಿ ಅವಳು ಅವನನ್ನು ಮನೆಯಿಂದ ಹೊರ ಹೋಗಲು ಬಿಡುತ್ತಿರಲಿಲ್ಲ. ಹಳ್ಳಿಯ ಇತರ ಹುಡುಗರೊಡನೆ ಬಯಲಲ್ಲಿ ಆಡಲು ಆ ಬಾಲಕನು ಇಚ್ಛಿಸುತಿದ್ದರೂ, ಲಾಜವಂತಿಯ ವಾತ್ಸಲ್ಯವು ಅತನನ್ನು ತಡೆಯುತಿತ್ತು. ಹಳ್ಳಿಯ ಹೆಂಗುಸರು ಲಾಜವಂತಿಯ 'ಮಾತೃವಾತ್ಸಲ್ಯ'ವನ್ನು ಕಂಡು ಆಗಾಗ ಹೇಳುತಿದ್ದರು— "ನಮ್ಮಲ್ಲಿ ಹುಡುಗರಿದ್ದಾರೆ. ಆದರೆ ನಾವು ಈ ತರಾ ಕಾಳಜಿ ವಹಿಸುತ್ತಿಲ್ಲ." ಲಾಜವಂತಿಗೆ ಇದನ್ನು ಕೇಳುತ್ತಲೆ ಕಣ್ಣು ತುಂಬಿ ಬರುತಿತ್ತು. ದುಃಖವಿಂದ,ಕಣ್ಣೀರ್ಗರೆಯುತ್ತಾ ಅವಳಾಗ ಅನ್ನುತಿದ್ದಳು — 'ನೀನೇನೆ ಹೇಳಿ ನನ್ನ ಹುಡುಗನ ವಿಷಯ ನಂಗೇ ಗೊತ್ತು. ನೀವ್ಯಾಕೆ ಅದಕ್ಕೆ ಬಡ ಬಡಿಸ್ತೀರಾ?"

ಆಗಾಗ ಲಾಜವಂತಿಗೆ ತನ್ನ ಮೈತ್ಯೆವು ಹೃರ ನೆನೆವು ಮರುಕಳಿಸುತಿತ್ತು. ಹೆತ್ತೊಡಲಿನ ನೋವು ಅನ ಭವಿಸಿದವರಿಗೇ ಗೊತ್ತಷ್ಟೆ?

ಆದರೆ ಇಷ್ಟೊಂದು ಜಾಗ್ರತೆ ಸಹಿಸಿದರೂ ಹೇಮರಾಜನು ಕುದ್ವಷ್ಟಿಗೆ ಗುರಿಯಾಗಿಯೇ ಆದ. ಬೆಳಗಾಗಿತ್ತು. ಲಾಜವಂತಿ ಹಾಲು ಕರೆಯಲು ಹೋಗಿದ್ದಳು.ಅಷ್ಟರಲ್ಲೇ ಹೇಮರಾಜ ಮುಖವನ್ನು ಒಂದೆಡೆ ವಾಲಿಸಿ, "ಅಮ್ಮಾ"ಎಂದು ಚೀರಿದ. ಇದನ್ನು ಕೇಳಿದವಳೆ ಲಾಜವಂತಿಯು ಕೈಯಿಂದ ಹಾಲಿನ ಪಾತ್ರೆ ಕೆಳಗೆ ಬಿದ್ದು ಹಾಲು ಜೆಲ್ಲಿ ಹೋಯಿತು. ಓಡುತೋಡುತ್ತಾ ಅವಳು ಹೇಮನಿದ್ದೆಡೆ ಬಂದಳು." ಏನೋ ಹೇಮಿ? ಯಾಕಪ್ಪಾ ಕರೆದಿ ನನ್ನ? ಏನಾಗಿದೇಪ್ಪಾ ನಿಂಗೆ? ಹೇಳಪ್ಪಾ ಯಾಕಳ್ತಿದೀಯೂ?" ಒಂದೇ ಸವನೆ ಪ್ರಶ್ನಿಸ ಹೊಡಗಿದಳು.

ಹೇಮನು ಅಳುತ್ತಾ, ತಲೆ ನೋಯುತ್ತಿದೆ ಅಮ್ಮಾ" ಅಂದ.

ವಿಷಯವು ಸಾಧಾರಣವಾಗಿದ್ದರೂ ಲಾಜವಂತಿಯ ಹೃದಯಕ್ಕೆ ಸುಟ್ಟಟ್ಟಂತಾಯಿತು. ಇನೇ ದಿನ, ಇದೇ ಋತುವಿನಲ್ಲೆ ಅವಳ ಪ್ರಥಮ ಪುತ್ರ ಮದನ ಮರಣವನ್ನೆದಿದ್ದ. ಅತನೂ ಇದೇ ರೀತಿ ಆ ಸಾಖ್ಯಿ ಬಿದ್ದಿದ್ದ. ಆಗಲೂ ಲಾಜವಂತಿ ಆತನ ಶುಶ್ರೂಷೆಯಲ್ಲಿ ರಾತ್ರಿ ಹಗಲು ಎರವಾಗಿದ್ದಳು. ಆದರೆ ಹಣೆ ಬರಹವೇ ಹಾಗಿರುವಾಗ ಯಾರಿಂದೇನು ಸಾಧ್ಯ? ಮದನನು ಅವಳ ಕಣ್ಣೆದುರಲ್ಲೆ ಕಣ್ಮುಚ್ಚಿದ. ಆಗಲೇ ಅವಳು ಬಹಳ ನೊಂದು— ಬೆಂದು ಹೋಗಿದ್ದಳು. ಆ ಘಟನೆ ಈಗ ಮತ್ತೆ ಅವಳ ಸ್ಮೃತಿ ಪಟಲದಲ್ಲಿ ಹಾದು ಹೋಯಿತು.

ಲಾಜವಂತಿಗೆ ತಾನು ನಿಂತ ನೆಲವೇ ಕುಸಿಯುತ್ತಿರುವಂತೆ ತೋಚಿತು. ಒಮ್ಮೆ ಭೇಲಾಗಿ ಮತ್ತೆ ಪುನ: ಪರಿಸ್ಥಿತಿಗೆ ತೆರಳಲು ಗಾಬರಿಗೊಂಡಂತೆಯೇ, ಲಾಜವಂತಿಯೂ ತನ್ನ ಪುತ್ರನ ಸಾವಾನ್ಯಾವಸ್ಥೆಯಿಂದ ವ್ಯಾಕುಲಗೊಂಡಿದ್ದಳು.

ಹಳ್ಳಿಯಲ್ಲಿ ವೈದ್ಯ ದುರ್ಗಾದಾಸನು 'ಧನ್ವಂತರಿ'ಯೆನಿಸಿದ್ದ. ಆಸುಪಾಸಿನ ಹಳ್ಳಿಗಳಲ್ಲೆಲ್ಲಾ ದುರ್ಗಾದಾಸನೇ 'ಮನೆ ವೈದ್ಯ"ನಾಗಿದ್ದ. ಲಾಜವಂತಿಯು ಓಡು ತೋಡುತ್ತಾ ಅವರ ಮನೆ ತಲುಪಿದಳು. ವೈದ್ಯರು ಪುರಾಣ ಪಠಣದಲ್ಲಿ ಮುಳುಗಿದ್ದರು. ಲಾಜವಂತಿಯನ್ನು ಕಂಡವರೆ ಕನ್ನಡಕವನ್ನು ತೆಗೆದು, ಕಣ್ಣು ತೆರೆದು "ಏನು ಮಗಳೆ? ಏನು ಸಂಗತಿ?"ಅಂದರು,

"ಹೇಮನು ಆಸೌಖ್ಯು ಬಿದ್ದಿದ್ದಾನೆ...."
ಲಾಜವಂತಿಯು ಉತ್ತರವಿತ್ತಳು.

ಸಹಾನುಭೂತಿ ಪ್ರಕಟಿಸುತ್ತಾ ವೈದ್ಯರೆಂದರು "ಎಂದಿನಿಂದ?"

'ಇವೊತ್ತಿನಿಂದಲೇ ತಲೆ ಸಿಡಿಯುತ್ತೆ ಅನ್ನುತ್ತಾನೆ'

'ಜ್ವರ ಗಿರ ಏನಿಲ್ಲವಷ್ಟೆ?"

"ನಂಗೇನ್ಗೊತ್ತು? ತಾವೇ ಬಂದು ಪರೀಕ್ಷೆ ಮಾಡ್ಬೇಕು..."

ವೈದ್ಯರು ಕ್ಷಣದಲ್ಲೆ ತಮ್ಮ ಮೂಮೂಲು ವೇಷದೊಡನೆ ಸಿದ್ಧರಾದರು. ಮತ್ತೆ ಲಾಜವಂತಿಯೊಡನೆ ತೆರಳಿದರು.

ಮನೆಗೆ ತಲುಪುತ್ತಲೆ ಹೇಮನು ಜ್ವರದಿಂದಾಗಿ ತತ್ತರಿಸಿ, ನಿಶ್ಕ್ರಿಯನಾಗಿದ್ದ. ವೈದ್ಯರು ನಾಡಿ ಪರೀಕ್ಷೆ ಮಾಡಿ ನೆತ್ತಿಗೆ ಕೈಯಿಡುತ್ತಾ ಅಂದರು—"ಏನೂ ಹೆದರಿಕೆ ಬೇಡ. ಸ್ವಲ್ಪ ಮದ್ದು ಕೊಡ್ತೇನೆ, ಜ್ವರ ಇಳ್ದೀತು."

ಲಾಜವಂತಿಯ ಮುಳುಗುತ್ತಿರುವ ಹೃದಯಕ್ಕೊಂದು ಆಸರೆ ದೊರಕಿತು. ಸೀರೆಯ ಗಂಟನ್ನು ಬಿಡಿಸಿ ಅವಳು ಎಂಟು ಆಣೆಯನ್ನು ವೈದ್ಯರಿಗೆ ನೀಡಿದಳು. ವೈದ್ಯರು ಬಾಯಿಯಿಂದ 'ಬೇಡ ಬೇಡ' ಅಂದರೂ ಕೈ ಮಾತ್ರ ಕೇಳಲಿಲ್ಲ.

— ೨ —

ಹಲವಾರು ದಿನಗಳುರುಳಿದುವು. ಹೇಮನ ಜ್ವರವು ಇಳಿದ ಹಾಗೆ ತೋರಲಿಲ್ಲ. ವೈದ್ಯರು ಅಡಿಷ್ಟು ಪ್ರಯತ್ನ ಪಟ್ಟರೂ ಫಲ ದೊರೆಯಲಿಲ್ಲ. ಲಾಜವಂತಿಯಾದರೂ ಅತನ ಶುಶ್ರೂಷೆಯಲ್ಲಿ ತನ್ನ ಪೂರ್ತಿ ಸಮಯವನ್ನು ಕಳೆಯುತಿದ್ದಳು. ನೆರೆ ಹೊರೆಯವರು ಅವಳನ್ನು ಸಂತೈಸಲು ಬರುತಿದ್ದರು. ಲಾಜವಂತಿ ಮೌನವಾಗಿ ತನ್ನ ಏಕೈಕ ಪುತ್ರನ ತಲೆಯನ್ನು ಸವರುತ್ತಾ, ಅವರ ಸಾಂತ್ವನದ ನುಡಿಗಳನ್ನು ಕೇಳುತಿದ್ದಳು.

ಒಂದು ದಿನ ವೈದ್ಯರು ಪ್ರಶ್ನಿಸಿದರು- "ಹೇಗೆ, ಜ್ವರ ಏನಾದ್ರೂ ಇಳಿಮುಖವಾಗಿದಂತೀದೆನ್ಮೂ? ನನಗೆ ಕಾಣುತ್ತೆ ಅದು ಇಳಿಯೋದರಲ್ಲಿಲ್ಲಿಂತ ....ಅದು ಹರಕೆಯ ಜ್ವರ..."

ಲಾಜವಂತಿ ಗಾಬರಿಗೊಂಡು ಕೇಳಿದಳು -'ಹರಕೆಯ ಜ್ವರವೇನಿದ್ದು?'

"ಹೌದು ಮಗಳೆ, ಹೊತ್ತ ಹರಕೆ ಪೂರ್ತಿಯಾಗದೆ ಜ್ವರ ಇಳಿಯದು."

"ಅದ್ರೆ ಎಷ್ಟು ದಿನ ಹೀಗಿದ್ದೀತು..?"

"ಇಪ್ಪತ್ತೊಂದನೇ ದಿನ ಇಳಿಯುತ್ತೆ, ಅದರ ಮೊದಲಾದರೆ....ಊಹುಂ—"

"ಇವೊತ್ತಿಗೆ ಹನ್ನೊಂದು ದಿನ ಕಳೆದಿದೆ...."

'ಸರಿ, ಇನ್ನೂ ಹತ್ತು ದಿನ ಬ-ಕಿಯಿದೆ. ಹೇಗಾದ್ರೂ ದಿನ ಕಳೆಯಲ್ಲಿ, ದೇವ್ರು ಒಳ್ಳೆದು ಮಾಡ್ತಾನು..."

ಲಾಜವಂತಿ ಕೈ ಹಿಸುಕುತ್ತಾ ಹೇಳಿದಳು— "ಸಂಶಯಕ್ಕೆಡೆ ಮಾಡ್ಬೇಡ್ರಿ, ಧೈರ್ಯವಿರಿಸಿ ಪೂರ್ತಿ ಸತ್ಯ ಸಂಗ್ತಿನೆ ಹೇಳಿ ಸೋಮಿ'

ವೈದ್ಯರು ಕೊಂಚ ಸ್ತಬ್ಧರಾದರು. ಸತ್ಯವನ್ನು ಹೇಳಲೆ, ಇಲ್ಲ ಸುಳ್ಳನ್ನೆ ಎಂದವರು ಆಲೋಚಿಸಿ ಕೊನೆಗೆಂದರು-"ನೋಡಮ್ಮಾ, ಜ್ವರ ದುಸ್ಸಾಧ್ಯ ಇದೆ. ಹೇಮುನ ತಂದೆಗೆ ಬರೋಕೆ ಹೇಳೋದೇ ಚೆನ್ನು.."

ಲಾಜಂತಿಯ ಆಶೆಯ ಆಗಸದಲ್ಲಿ ನಿರಾಶೆಯ ಮೋಡ ಕವಿಯಿತು. ಹೇಮನು ಒಂದೆರಡು ದಿನದಲ್ಲೆ ಗುಣ ಮುಖನಾಗದಾನೆಂದು ತಿಳಿದ ಅವಳಿಗೆ ತುಂಬಾ ನಿರಾಶೆಯೊಗಿತ್ತು.

ಪಟ್ಟಣದಲ್ಲಿ ಕಾರಕೂನನಾಗಿ ದುಡಿಯುತಿದ್ದ ರಾಮಲಾಲ— ಲಾಜವಂತಿಯ ಗಂಡ - ಲಾಜವಂತಿಯ ಪತ್ರ ದೊರೆತು ದೊಡನೆ ಊರಿಗೆ ತೆರಳಿದ. ಮತ್ತೆ ಚಿಕಿತ್ಸೆಗೆ ತೊಡಗಿದರು. ಹತ್ತು ದಿನಗಳು ಕಳೆದರೂ ಜ್ವರವು ಇಳಿಮುಖವಾಗದ್ದ ಕಂಡು ಪತಿ—ಪತ್ನಿಯರಿಬ್ಬರೂ ಕಂಗೆಟ್ಟು, ಗಾಬರಿಗೊಂಡರು. ಹೇಮನ ಮೇಹವು ಕೆಂಡದಂತೆ ಬಿಸಿಯಾಗಿತ್ತು.

ವೈದ್ಯರು ನಾಡಿ ಪರೀಕ್ಷೆ ಮಾಡುತ್ತಾ ಅಂದರು—"ಇಂದಿನ ರಾತ್ರಿ ಭಾರಿ ಜಾಗ್ರತೆತೆಗೊಂಡ್ಬಿಡಿ. ಸಾವಧಾನವಾಗಿರಿ. ಜ್ವರವು ಒಂದೇ ಸವನೆ ಇಳಿದೀತು...."

— ೩ —

ಲಾಜವಂತಿ ರಾಮಲಾಲರಿಬ್ಬರೂ ಅನ್ನ ನೀರಿಲ್ಲದೆ ದಿನಗಳೆಯುತಿದ್ದರು. ವೈದ್ಯರ ಬಾಯಿಯಿಂದ ಹೊರಡುವ ನೂತು ಗಳು ಭಯದ ಪೂರ್ವ ಸೂಚಕವೇ ಆಗಿದ್ದುವು. ರಾಮಲಾಲನು ಮದ್ದಿನ ಬಾಟಲಿಯನ್ನು ಹಿಡಿದು ಮಗನ ಬಳಿ ಕುಳಿತಿದ್ದ. ಲಾಜವಂತಿಯು ಹೃದಯದ ನಡುಗುವು ವಿಪರೀತವಾಗಿತ್ತು. ಸಂಜೆಯಾಗುತ್ತಲೆ ಅವಳು ತುಪ್ಪದಲ್ಲುರಿಯುವ ಹಣತೆಯೊಡನೆ ಸವಿನಯದ ದೇವಸ್ಥಾನಕ್ಕೆ ತೆರಳಿದಳು. ಆಕೆ—ನಿರಾತೆಗಳ ವೇಷವು ಕಳಗಲೋ— ಆಗಲೊ ಮಳೆ ಸುರಿಯಲು ಸಿದ್ಧವಾಗಿತ್ತು. ದೇವಸ್ಥಾನವನ್ನು ತಲುಪಿ ಅತ್ಯಂತ ಭಕ್ತಿ ಪೂರ್ವಕ ಒಮ್ಮೆದೇವರನ್ನು ಪ್ರಾರ್ಥಿಸಿದಳೆ ; ತೀರ್ಥಯಾತ್ರೆಯ ಹರಕೆ ಹೊತ್ತಳು.

ಪ್ರಾರ್ಥನೆಯುಗುತ್ತಲೆ ಅವಳಿಗೆ ತನ್ನ ಹೃದಯದ ಭಾರವೊಮ್ಮೆ ಇಳಿದಂತೆ ಭಾಸವಾಯಿತು. ಅವಳು ಅಶಾ ಭಾವದಿಂದೊಡಗೂಡಿ ಮನೆಯೆಡೆ ತೆರಳಿದಳು. ಮನೆ ತಲುಪುತ್ತಲೆ ಹೇಮನ ಜ್ವರ ಇಳಿಮುಖವಾಗುತ್ತಿದೆಯೆಂದು ಅವಳ ಗಂಡನು ತಿಳಿದು ಪರಮಾತ್ಮನನ್ನು ಮನಸಾರೆ ದಿಸಿದಳು.

ಲಾಜವಂತಿಯ ಮುಖವನ್ನೆ ಪ್ರಶ್ನೆ ಮಾಡಿತು. ಕಣ್ಣಲ್ಲಿ ಆಶ್ರುವು ಮಿನುಗುತಿತ್ತು. ಅವಳು ರಾಮಲಾಲನೊಡನೆಂದಳು—"ಇನ್ನು ಹೇಮನ ಕುರಿತು ಹೆದರುವುದು ಬೇಡ, ನಾನು ತೀರ್ಥಯಾತ್ರೆಯ ಹರಕೆ ಹೊತ್ತಿರುವೆನು.'

ರಾಮಲಾಲನು ತೀರ್ಥಯಾತ್ರೆಯ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ಕನ್ನ 85 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಕೇವಸಾತಿಗಳ ಮೇಲೆ ೮% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ೪½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆ.ಆ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೫

47ನೇ ವರ್ಷ
Telephone 226.

ನವಯುಗ
ಮುಖ ಕನ್ನಡ ವಾರಪತ್ರಿಕೆ
ಉಡುಪಿ, ದ. ಕನ್ನಡ.
++
ಸ್ಥಾಪನೆ: 1921
ಸ್ಥಾಪಕರು
ದಿ. ಎ. ಬಿ. ಶೆಟ್ಟರು.
ಸಂಚಾಲಕ—ಸಂಪಾದಕ
ಕೆ. ಹೊನ್ನಯ್ಯ ಶೆಟ್ಟಿ
++
ವಾರ್ಷಿಕ ಚಂದಾ.
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೫
++
ಜಾಹೀರಾತು ದರಗಳು:
ಅನಿಯಮಿತ (ಕೆಡುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50
++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವನ್ನು ಕಳುಹಿಸಿದ್ದು ಹಿಂದಿರುಗಿಸಿ ಕೊಡಿರಬೇಕು. ಕಾಲು ಕಾಸಿನ ಸ್ಟಾಂಪಿನ ಕವರಿನ ಹಾಳೆಯ ಒಂದೇ ಮಗ್ಗುಲಲ್ಲಿ ಬರೆಯಬೇಕು. ಅಭಿಪ್ರಾಯಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಭಿಪ್ರಾಯ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಹಣವನ್ನಾಗಲೀ ಸಂಪಾದಕರಿಗೆ ವೈಯಕ್ತಿಕವಾಗಿ ಯಾವುದೇ ರಾಪಿಯಲ್ಲಿ ಯಾವ ಖರ್ಚೂ ಇಲ್ಲದ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಹಂಗೇರಿಯ ರಾಜಧಾನಿ ಬುಡಾಪೆಸ್ಟ್ ಡೆನ್ಯೂಬ್ ನದೀ ತೀರದಲ್ಲಿದೆ. ಸಂಜೆಯ ಹೊತ್ತು ಇಲ್ಲಿಗೆ ವಿಹಾರಕ್ಕಾಗಿ ಆಗಮಿಸಿದ ಪರಿವಾರವೊಂದನ್ನು ಚಿತ್ರದಲ್ಲಿ ಕಾಣಬಹುದು.

ನವಯುಗ

ಸಂಪುಟ ೪೭	ಉಡುಪಿ	Vol. 47
ಸಂಚಿಕೆ ೬	೧೨—೧೦—೧೯೬೨	No. 6

ಕೆಂಪು ಜಾಲದಲ್ಲಿ ಜೇಡ

ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಿಂದ ಬರುತ್ತಿರುವ ವರದಿಗಳು, ಅಲ್ಲಿ ನಡೆದ ಮತ್ತು ನಡೆಯುತ್ತಿರುವ ಘಟನೆಗಳು ಸಂಪೂರ್ಣ ಅರಾಜಕತೆಯತ್ತ ದೇಶವನ್ನು ಒಯ್ಯುತ್ತಿವೆಯೆನ್ನುವುದನ್ನೇ ಸಮರ್ಥಿಸುತ್ತಿವೆ. ಕೆಂದು ಕಮ್ಯುನಿಸ್ಟರೇ ಇದಕ್ಕೆ ಮೂಲ ಕಾರಣರೆಂಬುದನ್ನು ಬೇರೆ ಹೇಳ ಬೇಕಾಗಿಲ್ಲ. ಕೇರಳದಲ್ಲಿ ಹೆಸರಿಗೆ ಮಿತ್ರ ಪಕ್ಷಗಳ ಸಂಯುಕ್ತ ಸರಕಾರ ವಿರುವುದಾದರೂ ಎಡ ಕಮ್ಯುನಿಸ್ಟರು ತಮ್ಮ ಸ್ಥಾನವನ್ನು ಇದೀಗ ಬಲವಾಗಿ ಭದ್ರಗೊಳಿಸಿದ್ದಾರೆ. ಜನತೆಯ ವಿತ್ತ ಜೀವಿತಗಳನ್ನು ಸಂರಕ್ಷಿಸಿ, ರಾಜ್ಯದಲ್ಲಿ ಶಾಂತಿ ಕಾಪಾಡಿಕೊಳ್ಳುವುದನ್ನು ಬಿಟ್ಟು ಸರಕಾರವೇ ದೊಂಬಿ-ಗಲಭೆಗಳನ್ನು ಪುರಸ್ಕರಿಸುತ್ತಿದೆ; ಅನ್ಯಾಯ ಅತ್ಯಾಚಾರಗಳನ್ನು ಹತ್ತಿಕ್ಕುವುದನ್ನು ಬಿಟ್ಟು ಗೂಂಡಾಗಿರಿಗೆ ಬೇಕಷ್ಟು ಅವಕಾಶಗಳನ್ನು ಒದಗಿಸಿಕೊಡುತ್ತಿದೆ— ನಂಬೂದರಿ ಪಾದರು ಹಿಂದೆ ಎರಡು ವರ್ಷಗಳಲ್ಲಿ ಸಾಧಿಸಲಾಗದುದನ್ನು ಇದೀಗ ಬರಿಯ ಅರ್ಧ ವರ್ಷದಲ್ಲಿ ಸಾಧಿಸಿದ್ದಾರೆ; ಅವರು ಬಲವಾಗಿ ಬೇರು ಬಿಟ್ಟಿದ್ದಾರೆ.

ಪಶ್ಚಿಮ ಬಂಗಾಳದ ಚತುರ್ದಶ ಪಕ್ಷಗಳ ಸಂಯುಕ್ತ ರಂಗದಲ್ಲಿಯೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟರ ಕಾರ್ಯಭಾರ ಕಡಮೆಯೇನಿಲ್ಲ. ದೇಶ ಸಂಬಂಧ ಕಡಿಮೆಯೇ ಇದ್ದರೂ ಕೆಂದು ನಿಶಾನಿಯ ಸರಕಾರವಿರುವಲ್ಲಿಯಾದರೂ 'ನೆಕ್ಸಲ್ ಬಾರಿ'ಗಳನ್ನು ನಿರ್ಮಿಸಿ ಅರಾಜಕತೆಯು ತಾಂಡವ ನೃತ್ಯಕ್ಕೆ ಶಕ್ತಿ ವೇದಿಕೆ ಹಾಕಿ ಕೊಡಬೇಕೆಂದವರು ಆಶಿಸಿ ಕಾರ್ಯ ತತ್ಪರರಾದರು ನಿಜ. ಆದರೆ, ಭಾರತೀಯರ ಸಂಯುಕ್ತ ಪ್ರಯತ್ನದಿಂದ ಅವರ ವಿಷ ಬೀಜದ ಪ್ರಕಾರ ಅನ್ಯತ್ರವಾಗಲಿಲ್ಲ. ಮುಖ್ಯ ಮಂತ್ರಿ ಅಜಯ ಮುಖರ್ಜಿಯವರೇ ಹೇಳುವಂತೆ ಅವರಿಗ ದ್ದುಗೆ ಮಳ್ಳಿನಿಂದ ತುಂಬಿದ್ದು ಪೂರ್ತ್ವವಲ್ಲ, ಅವರಿಸಿದ್ದು ಕೂಡ. ಸ್ವಯಂ ಮುಖರ್ಜಿಯವರಾದರೂ ಕಮ್ಯುನಿಸ್ಟರನ್ನು ಮೆಚ್ಚುವುದಿಲ್ಲ; ಕಮ್ಯುನಿಜಂನ್ನು ಸಹಿಸುವುದೂ ಇಲ್ಲ. ಆದರೆ, ಕಾಂಗ್ರೆಸ್ಸು ಅಧಿಕಾರ ಚ್ಯುತವಾಗುವಂತೆ ಅವರ ಪ್ರಯತ್ನ ನಡೆದಿತ್ತು—ಅತುಲ್ಯ ಘೋಷರ ಪ್ರಭಾವದಿಂದ ಮುಖರ್ಜಿಯವರು ಕಾಂಗ್ರೆಸ್ ತ್ಯಜಿಸಬೇಕಾಯಿತು. ಫಿರುಪಾಯರಾದ ಅವರು ಕಣ್ಣಿದ್ದೂ ಕುರುಡರಾದರು. ಸರಕಾರದ ವ್ಯವಹಾರಗಳನ್ನು ನಡೆಸುವಾಗ, ಮುಖರ್ಜಿಯವರಿಗೆ ಕಮ್ಯುನಿಸ್ಟರ ಬೇರು ಹೆರಡುವ ನೀತಿ ವೇದ್ಯವಾಯಿತು:— ಇದೇ ಹೊತ್ತಿನಲ್ಲಿ ರಾಜ್ಯದ ಕಾಂಗ್ರೆಸ್ ಸಮಿತಿಯು ಮುನ್ಸೂಚನೆಯೆಯ ಘೋಷಣೆಯೂ ಪಡೆಯಿತು— ಕಾರಣ, ಕಾಂಗ್ರೆಸ್ಸನ್ನೊಳಗೊಂಡು, ಕಮ್ಯುನಿಸ್ಟರನ್ನು ಹೊರಗಿಟ್ಟು ಮುಖರ್ಜಿಯವರು ಹೊಸ ಸಚಿವ ಸಂಪುಟ ರಚಿಸುವರೆಂಬ ವಾರ್ತೆಯೂ ಹರಡಿತು—ಈಗ ಬಂದ ವಾರ್ತೆಯಂತೆ ಸಂಯುಕ್ತರಂಗದಲ್ಲಿ ಉಂಟಾದ ಬಿಕ್ಕಟ್ಟು ಪರಿಹಾರವಾಯಿತೆಂದು ಗೊತ್ತಾಗಿದೆ ಆದರೆ, ಈ ಪರಿಹಾರವು ಕಾಕತಾಳೀಯವಾದುದೆಂದೂ ಮನವರಿಕೆಯಾಗುತ್ತದೆ. ಏಕೆಂದರೆ, ಪ್ರೊ। ಹುಮಾಯೂನ್ ಕಬೀರರ ಪಂಗಡದವರು ಶಾಂತಿ—ಸುವ್ಯವಸ್ಥೆಗಳಿಗೆ ಭಂಗ ತರುವ ವಿದ್ರೋಹ ಪಕ್ಷಗಳನ್ನು ಸಂಯುಕ್ತರಂಗದಿಂದ ಹೊರಡೊಡದಿದ್ದರೆ, ತಮ್ಮ ಪಕ್ಷವು ದೂರ ಸರಿಯುವುದು ಎಂದು ಸಾರಿದ್ದಾರೆ. ಇದಕ್ಕೆ ಕಾಲಾವಧಿಯನ್ನೂ ಗೊತ್ತು ಪಡಿಸಿದ್ದಾರೆ. ಸಮಾಜ ವಿರೋಧಿ ಶಕ್ತಿಗಳು ಯಾವುದೆಂದು ಅವರು ಹೇಳದಿದ್ದರೂ ಕಮ್ಯುನಿಸ್ಟರನ್ನು ಕುರಿತಾಗಿಯೇ ಈ ಹೇಳಿಕೆಯೆಂಬುದು ಬೇಡ್ಯವಾಗುತ್ತದೆ. ಹಾಗಾಗಿ ಅಜಯ ಮುಖರ್ಜಿಯವರೇ ಮತ್ತೆ ಸೇಜೆನೆಲ್ಲಿ ಸಿಕ್ಕಿದ್ದಾರೆ. ಅವರು ಯಾವ ದಾರಿ ತುಳಿಯುವರು ಎಂಬುದನ್ನು ಪಶ್ಚಿಮ ಬಂಗಾಳ ಮಾತ್ರವಲ್ಲ, ಇಡಿಯ ದೇಶವೇ ಇದಿರು ನೋಡುತ್ತಿದೆ. ಕಮ್ಯುನಿಸ್ಟರು ತಮ್ಮ ಕಾರ್ಯ ಸಾಧನೆಗಾಗಿ ಏನನ್ನೂ ಮಾಡಬಲ್ಲರು; ಬಂಗಾಳದಲ್ಲಿ ಸರಕಾರದೊಳಗೆ ಇದ್ದು ಕೊಂಡೇ ತಮ್ಮ ಬೇರು ಹರಡ. ಮೊದಲ ಅವರ ಘೋಷ್ಯೋದ್ದೇಶವೆಂದು ಬೇರೆ ಹೇಳಬೇಕಾಗಿಲ್ಲ. ಅದಕ್ಕಾಗಿಯೇ 'ಬಿಕ್ಕಟ್ಟನ್ನು ಬಗೆಹರಿಸಲು ಸಾಧ್ಯವಿದೆ;' ತಮ್ಮ 'ವಿರುದ್ಧದ ದಿಸೆಯಗಳನ್ನು ಮುಖ್ಯ ಮಂತ್ರಿಗಳು ಮುಕ್ತ ಮನಸ್ಸಿನ ಮೂತುಕತೆ ಮತ್ತು ರಾಜೀ ಮನೋಭಾವನೆಯಿಂದ ಪರಿಹರಿಸಬಹುದು' ಎಂದು ಮುಂತಾಗಿ ಅವರು ಹೇಳುತ್ತಾರೆ. ಕುತ್ತಿಗೆ ದಬ್ಬಿ ಹೊರ ದೂಡುತ್ತಾರೆನ್ನುವಾಗ ಕಾಲು ಹಿಡಿದ ವನ ಹಾಗಿವೆ ಇವರ ವರ್ತನೆ. ಆದರೆ, ಹಾವಿನ ಜತೆ ಮುಖರ್ಜಿಯವರು ಹಾವಾಡಿಗನಾಗಿ ಎಷ್ಟು ದಿನ ಇರುವರು? ಆದರೆ ಕಡಿಪಕ್ಕೆ ಇಡಿಯ ರಾಜ್ಯವನ್ನು ಅವರು ಗುರಿ ಮಾಡದಿರಲಿ.

ಉಳಿದ ರಾಜ್ಯಗಳಲ್ಲಿ ಕಾಂಗ್ರೆಸ್ ಸರಕಾರಗಳು ಕಾಂಗ್ರೆಸ್ಸೇತರರಿಂದ ಬಹ್ಯವಾಗಿ ನಡೆಯುತ್ತಿವೆ. ಇದು ಸಹಜ. ತಮ್ಮ ಅಸ್ತಿತ್ವಕ್ಕಾಗಿ ಕಾಂಗ್ರೆಸ್ಸೇತರ ಪಕ್ಷಗಳನ್ನವಲಂಬಿಸಿರುವ ಸರಕಾರಗಳೆಲ್ಲ, ಕೇಂದ್ರ ಸರಕಾರದ ವಿರುದ್ಧ ಮಸಿ ಬಳೆದು, ಜನತೆಯನ್ನು ವಂಚಿಸುವ ಚಟ ಮಾತ್ರ ಸಾಮಾನ್ಯವಾಗಿದೆ. ಇಂತಹ ಹವ್ಯಾಸವನ್ನು ತ್ಯಜಿಸಿ ರಾಷ್ಟ್ರದ ಪ್ರಗತಿಗಾಗಿ ಇವು ದುಡಿದಿದ್ದಲ್ಲಿ ಸರಿಯಾಗಿರುತ್ತಿತ್ತು. ಆದರೆ, ಇದು

ವಚನ ಸುಧೆ

ಯಸ್ಯಾ ಕೃತ್ಯಂ ನ ವಿಘ್ನಂತಿ
ಶೀತಮುಷ್ಣಂ ಭಯಂ ರತಿಃ
ಸಮೃದ್ಧಿರ ಸಮೃದ್ಧಿರ್ವಾ
ಸ ವೈ ಪಂಡಿತ ಉಚ್ಯತೇ॥

ಶೀತ—ಉಷ್ಣ, ಭಯ— ಅನುರಾಗ, ಸಂಪತ್ತಿ—ವಿಪತ್ತಿಗಳು ಯಾರ ಜೀವನದ ಮೇಲೆ ಪರಿಣಾಮ ಬೀರಲಾರವೋ ಅಂತಹವನೇ ಜಾಣನೆನಿಸಾವನು.

ಕ್ಕಿರುವ ಅಂತರವೆಂದರೆ, "ಚರಣ ಸಿಂಗ್' ರ ಅವತಾರಗಳು ಹಾಗಾಗಿ ಮುಖ್ಯ ಮಂತ್ರಿಗಳು ಎಲ್ಲ ಪಕ್ಷಗಳವರನ್ನೂ ಸಮಜಾಯಿಸಿಕೊಂಡು ಹೋಗಬೇಕು; ಒಂದೊಂದು ಪಕ್ಷಕ್ಕೂ ಆದದು ಬಯಸುವಷ್ಟು 'ಸ್ವಾತಂತ್ರ್ಯ' ಕೊಡಬೇಕು— ಆಗ ಮುಖ್ಯಮಂತ್ರಿಗಳು ಪರಾಧೀನರಾದರು! ಇಂತಹ ರಾಜಕೀಯ ಜೋಲಾಯಮಾನ ಪರಿಸ್ಥಿತಿಯನ್ನು ಧಾರಕೇಯರು ಪಡೆದಿದ್ದಾರೆ ಇದು ಇನ್ನೂ ಹಲವು ವರ್ಷ ಮುಂದುವರಿಯುವ ಸಾಧ್ಯತೆಯೂ ಇದೆ. ರಾಜಕೀಯ ಪ್ರಜ್ಞೆಯು ಪರಿಪೂರ್ಣವಾಗಿ ಬೆಳೆದು, ನಮ್ಮ ರಾಜಕೀಯ ಪಕ್ಷಗಳ ಸಂಖ್ಯೆ ಬೆರಳೆಣಿಕೆಗೆ ಇಳಿಯಲು ಎರ

(ಪತ್ರನೇ ಪುಟ ನೋಡಿ)

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. E. A. 502/67 ಮತ್ತು R. E. P. 201/67 in O. S. 108/66.

ಕಟ್ಟೆ ನಾರಾಯಣ ಭಟ್ಟ — ಅರ್ಜಿದಾರ
ಗಿರಿಜಮ್ಮ —ಎದ್ರಿ.

ಎದ್ರಿ ಗಿರಿಜಮ್ಮ, ಕೇಶವ ಪುಣಚಿತ್ತಾಯರ ಸಿಫಿಲ್ ಬಂಟ್ವಾಳ ತಾಲೂಕು ಪೂರ್ಣಿಲ ಗ್ರಾಮದ ತೋಟದ ಮನೆ. P.O. ಮುರ್ಡ. ಇವರಿಗೆ—

ಕೋರ್ಟು ಹುಕುಂ ಪ್ರಕಾರ ತಿಳಿಸುವುದಿಷ್ಟು ಸುವುದೇನೆಂದರೆ—ಅರ್ಜಿದಾರನು ನಿನ್ನ ಮೇಲೆ ಹೊಂದಿದ ದಿಕ್ರಿ ಹಣ ವಸೂಲಿಗಾಗಿ ಆಡಳಿತ ಆಸ್ತಿಯನ್ನು ಏಲಂ ಪಡಿಸುವರೆ ಯೂ, ಏಲಂನಲ್ಲಿ bid ಮಾಡುವರೆಯೂ ಕೇಳಿ ಅರ್ಜಿ ಸಲ್ಲಿಸಿರುತ್ತಾನೆ. ಆದಕ್ಕೆ ನಿನಗೇನಾದರೂ ಆಕ್ಷೇಪಗಳಿದ್ದಲ್ಲಿ ಮೇಲ್ಕಂಡಿಸಿದ ಕೋರ್ಟಿನಲ್ಲಿ ತಾ. 26-10-67ರಂದು ಪೂರ್ವಾಹ್ನ ಗಂಟೆ 11ಕ್ಕೆ ಉಪಸ್ಥರಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

V. M. Bhat, B.A.,LL.B.
ಅರ್ಜಿದಾರನ ಪರ ವಿದ್ವಾನ್ ವೀಕ್ಷಕ
ಪುತ್ತೂರು, 29—9—67.

ನರಸಣ್ಣನ ನರಸ



ತಮಿಳರೊಡನೆ ನಾವಿನ್ನು ಬಂದಾಗ ತುಳು ಕೊಂಕಣಿ ಕನ್ನಡಿಗರಿಲ್ಲಿಗೆ ಬಹಳ ಬಾರದು!

ಗೇಹರಾಜ್ಯದಲ್ಲಿ

ಮಾನವತನದಿಂದ ದೇವತನದತ್ತ

"ಹೌದ್ರಿ....'

"ಹೌದು...."

"ಏನು ಹೌದು?"

'ಎಲ್ಲವೂ ಹೌದು."

"ಎಲ್ಲವೂ ಅಂದ್ರೆ?'

'ಸರ್ವಂ..."

'ಓ, ಅಂದ್ರೆ, ಎಲ್ಲವೂ ಸತ್ಯ ಅಂತ ತಾನೇ ನಿಮ್ಮ ಅಂಬೋಣ?"

"ಅಲ್ಲಾಂತ ಅಂದವ್ರು ಯಾರು?"

"ಯಾರೂ ಇಲ್ಲ. ಅದ್ರಿಂದ್ಲೇ....."

"ಏನು?'

"ಈ ಪ್ರಪಂಚ ನಡೆಯುತ್ತಿರೋದು. ಇದು ಮಿಥ್ಯ ಅಂತ ಅಂದುಬಿಟ್ರೆ ಬದುಕೋದಾದ್ರೂ ಹೇಗೆ? ಅದ್ರೂ ಇದೆಲ್ಲ ಮಾಯೆ — ಆ ದೇವನಾಮುವ ಗೊಂಬೆಯಾಟ ಅಂತ ಅನ್ನುತ್ತಾರಲ್ಲಾ!'

'ಅನ್ನೋರು ಅಂದುಕೊಳ್ಳಲಿ. ಗೀತೆಯಲ್ಲಿ ಕೃಷ್ಣ ಅಂದಿದ್ದಾನೆ ನೋಡು, ನೀನು ಕೊಲ್ಲುತ್ತಿ, ಅವರು ಸಾಯುತ್ತಾರೆ ಅನ್ನೋದು ಸುಳ್ಳು. ಅವರವರ ಕರ್ಮಾನುಸಾರ ಅವರವರು ಫಲ ಹೊಂದುತ್ತಾರೆ. ಕರ್ಮ ಮಾಡಿಸುವವನೂ ಫಲಕೊಡುವವನೂ ನಾನೇ ಅಂತ....'

'ಅದನ್ನೇ ತಾನೇ ಸಲಾಯನವಾದ ಅನ್ನುವುದು?'

"ಜೀವನದಿಂದ ಪಲಾಯನ ಮಾಡಿದರೂ ಅದು ನಿಯತಿವಾದವೆಂಬ ಹೊಸ ತೊಂದು ವಾದವನ್ನು ನಿರ್ಮಿಸಿದೆ.'

"ಆದ್ರೆ ನೋಡಿ, ಎಲ್ಲವೂ ಮಾಯೆ, ಸುಳ್ಳು, ಗೊಂಬೆಯಾಟ. ಎಲ್ಲನ್ನೂ ಹಿಂದಯೂ ಸೂತ್ರಧಾರನೊಬ್ಬ ಬೇರೆಯಿದ್ದಾನೆ—ಎನ್ನುತ್ತಾದರೆ, ನಾವು ಸಂಪೂರ್ಣ ಪಂಥೀನರು ಅಂತಾಯ್ತು. ಇನ್ನು ನೋಡಿ ಆತ್ಮದಲ್ಲಿಯೇ ಪರಮಾತ್ಮನನ್ನು ಕಾಣುವವರಿರುವಾಗ .....'

"ಅಯ್ಯೋ, ಪೆದ್ದಿ, ನಿನಗೇನು ಬೇರೆ ಕೆಲಸವಿಲ್ಲವೇನು? ಜೀವನ ಮಾಯೆ—ಸುಳ್ಳು—ಗೊಂಬೆಯಾಟ ಅಂದ್ರೆ ಅದೊಂದು ನಾಟಕಾಂತ ಅರ್ಥ..."

'ಹೇಗೆ ಅಂದ್ರೆ? ನಾಟಕದಲ್ಲಿ ನೋಡು, ಸೂತ್ರಧಾರ—ನಟ ಬರುತ್ತಾರೆ. ಸಾಮಿಂಹಪ ನಾಟಕವನ್ನು ಆಡೋಣವೆಂದು ಸೂಚಿಸಿ ಹೋಗುತ್ತಾರೆ. ಮುಂದೆ ನಾಟಕಾರಂಭ."

"ಹ್ಞೂಂ...'

'ಮುಂದೆ ನಾಟಕ ಮುಂದುವರಿಯುತ್ತದೆ. ನಾಲ್ಕು—ಐದು ಅಂಕಗಳ ತನಕ ಓಡುತ್ತದೆ. ಇದೆಲ್ಲ ನಾಟಕ ಅಂತ ಗೊತ್ತಿದ್ದೂ ಅದರಲ್ಲಿ ಆಸಕ್ತರಾಗುತ್ತೇವೆ ನಾವು—'

"ಅದು ಸರಿ. ಆದರೆ, ಅದು ನಾಟಕ. ಜೀವನವು ಸುಳ್ಳು ಅಂತ ತಿಳಿಕೊಳ್ಳುವುದಿಲ್ಲ ನಾವು...'

'ಏನೋ ಜೀವನವು ಸುಳ್ಳು ಎಂತ ಗೊತ್ತಿದ್ದರೂ ನಾವು ಅದು ಸತ್ಯ ಅಂತಲೇ ನಂಬುತ್ತೇವೆ—ಇದನ್ನೇ ನೋಡು ಧರ್ಮರಾಯ ಮಾನವನ ಮೂರ್ಖತನದ ಪರಮಾವಧಿ ಎಂದು ಕರೆದದ್ದು...?'

'ಮತ್ತೆ ಒಂದು ನೋಡಿ, ಜೀವನವು ಮಿಥ್ಯ, ಮಾಯೆ ಅಂತ ಅಂದು ಕೊಂಡ್ರೆ ಎಲ್ಲರೂ ನಿರ್ಗಮಣ ಹೊಂದಬೇಕಾದೀತು. ಅಲ್ಲವೆ?"

"ಹ್ಞೂಂ.... ಹೀಗೇ ಇನ್ನೂ ಕೆಲವು ವರ್ಷ ಕಳೆದರೆ, ಮತ್ತೆಂಥದು?"

"ಅಂದ್ರೆ?'

"ಲೋಕವೇ ನಿರ್ಗಮಣ ಹೊಂದುವ ಸ್ಥಿತಿ ಬರುತ್ತದೋ ಏನೋ?"

"ಏಕೆ?'

"ನೋಡು, ನಮ್ಮ ದೇಶದ ಕಥೆಯನ್ನೇ ನೋಡು. ಆಹಾರಾಭಾವಕ್ಕೆ ಅತಿವೃಷ್ಟಿ—ಅನಾವೃಷ್ಟಿ—ಯೋಜನೆಗಳ ತಲೆ ಕೆಳಗು ವ್ಯಾಪಾರ—ಇವೆಲ್ಲವುಗಳಿಗಿಂತಲೂ ಜನಸಂಖ್ಯಾ ಹೆಚ್ಚಳವೇ ಪ್ರಬಲ ಕಾರಣ ಅನ್ನುತ್ತಾರೆ...."

"ಅದು ಸರಿ. ಆದರ್ಕೇ ನೋಡಿ, ಕುಟುಂಬ ಯೋಜನಾ ಸಲಹೆಯನ್ನು ಅದ್ದೂರಿಯಿಂದ ಆಚರಿಸಿದ್ದು..."

"ಏನೇ ಆದು ಆಚರಿಸಿದ್ರೂಂತೆ?'

'ಮತ್ತೇನನ್ನ ಬೇಕು?"

'ಆಚರಿಸಿದೆವು ಅನ್ನು...."

"ಹೇಗೆ ಬೇಕೋಹಾಗೆ ಅಂದುಕೊಳ್ಳಿ. ಆದ್ರೆ, ಒಂದು..."

'ಏನು? ಕುಟುಂಬವನ್ನು ನಿಯಂತ್ರಿಸುವ ಅಧಿಕಾರ ಮಾನವನಿಗಿಲ್ಲ....'

'ಒಳ್ಳೆ ಕಥೆ ಹೂಯ್ತಲ್ಲಾ?'

ಊಹೆಗೆ?'

'ರಾಜಾ ಪ್ರತ್ಯಕ್ಷ ದೇವತಾ...."

"ಆದ್ರೂ ನೋಡಿ, ನಾನು ಹೇಳ್ತೇನೆ, ಕುಟುಂಬಯೋಜನೆಯನ್ನು ಜನಪ್ರಿಯಗೊಳಿಸಲಿ. ಆದ್ರೆ ಮೂರು ಮಕ್ಕಳಿಗಿಂತ ಹೆಚ್ಚು ಇರಬಾರ್ದು ಇನ್ನೋರಿಗೊಂದು ಸವಾಲು—"

'ಏನು?"

'ಮೂರು ಹೆಕ್ಕ ಕೊಡ್ಲೇ ಕುಟುಂಬ ಯೋಜನೆ ಸೇರಿಬಿಟ್ರ್ರಿಸ್ತಿ. ಈ ಮೂರು ಮಕ್ಕಳಗಾ ಪೂರ್ಣಾಯುಷ್ಯ ಬರೆಯೋದು ಸಾಧ್ಯನೆ?'

"ರಾಜಾ ಪ್ರತ್ಯಕ್ಷ ದೇವತಾ ತಾನೆ? ಸರಕಾರ ಕೈಕೊಳ್ಳುವ ಯೋಜನೆಗಳಿಂದ ಆಯುಃ ಪ್ರಮೂಣ ಹೆಚ್ಚುತ್ತಾ ಇದೆ....'

'ಇರ್ಲಿ... ಮತ್ತೆಷ್ಟಂದು ಮಾತು— ಮಕ್ಕಳೇ ಇಲ್ಲದವರಿಗೆ ಮೂರು ಮಕ್ಕಳನ್ನು ಇವರು ಕೊಡಬಲ್ಲರೆ?"

'ಆದೂ ಸಾಧ್ಯವಾದೀತು. ಇಂಜೆಕ್ಷನ್ ಜಾಲೂ ಆಗುತ್ತ ಇದೆ...."

"ಅಯ್ಯೋ!.... ಯೂರ್ಕಾರೆದೋ....'

"ಅದೇ ನೋಡು, ಯೂರ್ಕಾರಾದರೂ ದೇವರ ಮಕ್ಕಳು — ಎಲ್ಲವೂ ಗೊಂಬೆಯಾಟ. ಆಗ, ಎಲ್ಲವೂ ಒಬ್ಬನದೇ.... ಕೊಡುವವನೂ ಕೊಳ್ಳುವವನೂ ಅವನೇ ಅಂತ ವಿಶಾಲ ಭಾವನೆ..."

"ಅಲ್ಲಿಗೆ ಸರಿಹೋಯ್ತು—ಪಶುಪ್ರವೃತ್ತಿಯಾಯಿತು....ನುತ್ತೆ ನಾವು ಮಹಮ್ಯರು ಹೇಗಾಗುತ್ತೀವೆ?"

"ಹೇಗೆ ಅಂದರೆ?ನಮ್ಮನ್ನು ನಾವು ಮನ ಪ್ಯರೆಂದು ಕರೆದು ಕೊಳ್ಳುತ್ತೀವೆ. ಆದುದರಿಂದ..."

"ಹಾದಪ್ಪ, ಎಲ್ಲವೂ ಕೆಟ್ಟುಹೋಯಿತು. ಟ್ರಾನ್ಸಿಸ್ಟರು ಕೂಡುತ್ತಾರಂತೆ ಇನ್ನು. ಮತ್ತೆ ವ.ಕ್ಕಳನ್ನು ಸಾಕುವ ಖರ್ಚಿದಲು ಟ್ರಾನ್ಸಿಸ್ಟರು ಸಾಕಿದ್ರೆ ಸರಿ..."

'ಹೆದ್ರ ಬೇಡ್ವೆ, ನವ್ಯಾಲಕ್ಕೆ ಮೋಟಾರ್ ಕಾರೂ ಸಿಗಬಹುದು....'

'ಹೌದು.... ನಮ್ಗೂ ಆ ಕಾಲ ಬರುತ್ತೆ....'

'ಅಯ್ಯೋ, ಯಾಕೆ ಹೀಗಂತೀಯ?'

"ಮತ್ತೇನಪ್ಪ ಬೇಕು?'

'ಏನೂ ಅನ್ನ ಬೇಡ. ಬಾರದೆ ಇರುತ್ತೈ? ಎಲ್ಲ ದಿನಗಳು ಇಂದಿನ ಹಾಗೇ ಇರುತ್ತೆಂತ ಅನ್ನುತ್ತೀಯ?"

"ನೋಡಿ, ಲೋಕದ ಕತಿಯೇ ಹೀಗೆ—ಹಣವಿರುವಲ್ಲಿಯೇ ಹಣ ಸೇರೋದು, ಸಮುದ್ರಕ್ಕೇ ನದಿ ಸೇರೋದು.'

"ಏನನ್ನುತ್ತೀಯ? ಮತ್ತೆ ಗುಡ್ಡಕ್ಕೆ ನೀರು ಏರಬೇಕೆನ್ನುತ್ತೀಯ?"

'ಸಮುದ್ರಕ್ಕೆ ನೀರು ಬಿದ್ದರೇನು, ಬೀಳದಿದ್ದರೇನು?"

'ಆದು ಸರೀನ್ನಿ. ವೈಜ್ಞಾನಿಕ ಸಂಶೋಧನೆಗಳು ಹೆಚ್ಚುತ್ತ ಹೋದಂತೆ, ಹೇಗೆ ಹೇಳೋದು, ನದಿಯು ಮೇಲ್ಮುಖವಾಗಿ ಹರಿಯಲೂ ಬಹುದು...'

'ಅನ್ನಿ, ಕೋಣ ಕರು ಹಾಕಲೂ ಬಹುದಂತಾ..."

"ಅಯ್ಯೋ, ಏನಂತೀಯ? ಹೆಂಗಸು ಗಂಡಸಿನ ಸಂಪರ್ಕವಿಲ್ಲದೆ ತಾಯಿಯಾಗುವುದೂ ಉಂಟಂತೆ...."

'ಎಂಥದ್ರಿ ಇದು? ನಿಮಗೇನು ಬೇರೆ ಕೆಲಸವಿಲ್ಲವೆ? ತಮಾಶೆ ನೋಡೋಕೆ ...

"ತಮಾಶೆಯಲ್ಲ ಇದು, ವೈಜ್ಞಾನಿಕ ಸತ್ಯ. ನೋಡು ಇತ್ತೀಚೆಗೆ ನಡೆದ ಸಂ ಶೋಧನೆಗಳಿಂದ ಜರ್ಮನಿನ ಒಬ್ಬಾಕೆ ವ ಹಿಳೆ ಈ ರೀತಿ ತಾಯಿಯಾಗಿದ್ದಾಳಂತೆ ....'

"ಹ್ಞಾಂ....? ಎಲೆನ್ನೇ ಏನೋ ಮಾಡಿ ಕೊಂಡು....'

'ಛೆ....ಛೆ ...ಹಾಗೆಲ್ಲ ಅನ್ನಬೇಡ. ಆ ಮಹಾಪತಿವ್ರತೆಗೆ...."

"ಎಂಥದ್ರಿ ಇದು? ಪತಿಯೇ ಇಲ್ಲದೆ ಳು ಪತಿವ್ರತೆ ಹೇಗಾದಾಳು?"

"ಅವಳಿಗೆ ಅವಳೇ ಪತಿ— ಪತ್ನಿ ಎಲ್ಲ ಮತ್ತೆ ನೋಡು, ಸುಳ್ಳು ಅನ್ನಬೇಡ, ಬ ಹಳ ರೀತಿಯ ವೈಜ್ಞಾನಿಕ ಪರೀಕ್ಷೆಗಳಲ್ಲಿ ಆಕೆ ಉತ್ತೀರ್ಣಳಾಗಿದ್ದಾಳೆ. ಮತ್ತು ಇಂ ತಹ ಸಂದರ್ಭಗಳು ಅತ್ಯಪ್ಪು ಹೂವಿನಂತೆ ಅಪರೂಪವಾದರೂ ಕಂಡು ಬರುತ್ತವೆ. ಅಂತ ಸಿದ್ಧಾಂತವಾಗಿದೆ—"

"ಎಂಥದೋ... ನೋಡಿ, ನಿಮ್ಮ ವಿ ಜ್ಞಾನ ಅಂದರೆ ಒಂದು ರಹಸ್ಯವಾದ.. '

"ಸರಿ...."

'ರಹಸ್ಯವಾದಿ ಕವಿಗಳು ಆತ್ಮ—ಗ ಮಾತ್ಮಗಳ ಹೆಸರಲ್ಲಿ ಗಂಡು— ಹೆಣ್ಣಿನ ಕಾಮ ವಾಸನೆಗೆ ಪ್ರಾಧಾನ್ಯನೀಡಿ ತಾವು ಕೊಂಡಂತೆ. ಹಾಗೆಯೇ ವಿಜ್ಞಾನಿಗಳು ಇ ದ್ರಜಾಲ ಮಾಡಿ ಮಾನವಿಗಳು ಹುಟ್ಟುವಿಗಳು ಹುಟ್ಟಿ ಬೇಕೆ ಬೇಯಿಸಿಕೊಂಡರು. ಈಗ ವಿ ಜ್ಞಾನಿಗಳೂ ಇಂತಹ ಕೆಲಸ ಮಾಡೋ ಕೆ...'

"ನಿನಗೆ ವಿಶ್ವಾಸವಾಗಲಿಕ್ಕಿಲ್ಲ. ಆನು ವ ಕಾಲವೂ ಒಂದು ಬರಬಹುದು.... ಆ ಗ ತಾನಾಗಿಯೇ...."

"ಏನೇ...ಇದೆಲ್ಲ ಸುಳ್ಳು..."

"ಅದೇ ಬಂಬೆನಲ್ಲಾ....ಇರಲಿ. ಎಲ್ಲವ ಕ್ಕೂ ಕಾಲ ಬರಬೇಕು.'

'ನೋಡಿ, ಗರ್ಭಪಾತನನ್ನು ಶಾಸನ ಬದ್ಧಗೊಳಿಸುತ್ತಾರಂತೆ - ಭಾರತದಲ್ಲಿ.'

'ಹೆಣ್ಣಾಂ...ಏನೋ ಒಂದು ಮಾಡ್ತಾರಂತೆ...."

(ಒಂಭತ್ತನೇ ಪುಟ ನೋಡಿರಿ)

V. M. Hegde, Bijjal

P. O. Wajgod, Tq. Siddapur (N. K.)

ರಬ್ಬರ್ ಸ್ಟಾಂಪುಗಳು!!

ನಿಮಗೆ ಬೇಕಾಗುವ ಎಲ್ಲ ನಮೂನೆಯ

ಅಂದವಾದ ರಬ್ಬರ್ ಸ್ಟಾಂಪುಗಳಿಗೆ

ನಮ್ಮಲ್ಲಿ ವಿಚಾರಿಸಿರಿ:—

VINAYAKA STAMPS

ಇಂಗ್ಲೀಷ್, ಕನ್ನಡ, ಹಿಂದಿ, ತಮಿಳು ಭಾಷೆಗಳಲ್ಲಿ

ನಿಮ್ಮ ಮನ ಒಪ್ಪುವಂತೆ ಒದಗಿಸುತ್ತೇವೆ.

ವಿವರಗಳಿಗೆ ರಿಪ್ಲೈ ಕಾರ್ಡ್ ಇಟ್ಟು ಮೇಲಿನ ವಿಳಾಸಕ್ಕೆ ಬರೆಯಿರಿ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 476/1967

ವಾದಿಗಳು— 1. ಗಣಪಯ್ಯ(ಪ್ರತಿವಾದಿ)2. ಮಾ ಮ್ಮ, 1ನೇ ವಾದಿ ವಿಧವೆ ನೂಜಾಡಿ ಗ್ರಾಮ

ಮತ್ತು

ಪ್ರತಿವಾದಿಗಳು- ಸುಬ್ರಾಯ ಭಟ್ಟ ಸಹಾ ನೇ ಪ್ರತಿವಾದಿ ಶಂಭುಲಿಂಗೇಶ್ವರ ಬೂರಾಡಿ S/o ಸುಬ್ರಾಯ ಗುಂಡಿಕ್ಕ, ಸಪ್ತುಂದ ಗ್ರಾ ಮ ಇವರಿಗೆ ತಿಳಿಯುವಂತೆ ನಿಮ್ಮದು—

ನಿಮ್ಮೂರು ಗ್ರಾಮದ ಸ ನಂ. 140/1ನೆ ಸ್ಥಳದಲ್ಲಿ ಹಿಸೆಅಂದಿಸಿ ಬೇಕಾಗಿ ವಗೈರೆ ವಾದಿಯು ವಾದಿಸಿದಾಗ ಪ್ರತಿವಾದಿಯು ನೀವೇ ವಾದಿಯು ಮಾಡಿದ ಸುಳ್ಳಂಡ ದಾ ಯು ತಪ್ಪಿ ಬಗ್ಗೆ ತಾ. 3—11—196 ಕ್ಕೆ ಇಡೋಣಾಗಿದೆ. ನೀವುಗೆ ಉಪಾಹರಣೆ ಇದ್ದರೆ ಸದ್ರಿ ದಿನ ಹಗಲು 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ದಾಖಲು ಮಾಡಿ ಕ್ಕದ್ದು ತಪ್ಪದೆ ನಿಮ್ಮನ್ನು ಎಕ್ಸ್‌ಪಾರ್ಟೆ ಮಾಡಿ ಮುಂದಿನ ಕ್ರಮ ಜರಗಿಸಲಾಗುತ್ತದೆ

[ಕೋರ್ಟಿನ ಸುಳ್ಳಂ ಸ್ಕಾರ]

(ಸಹಿ) ಎ. ಎಸ್. ಎನ್. ಜೆಬ್ಬಾರ್

ವಾದಿಯ ಎಹ್ಮೋಕೇ

ಕುಂದಾಪುರ, 4—10 —1967

ವಿವೇಚನೆ

ಇಂದಿನ ಪ್ರಪಂಚ-ಮಹಾಭಾರತ

ಬರೆದವರು

ಶ್ರೀ ಪ್ರೇಮನಾಥ ಜೈಕಿರಣ್

ಮಹಾಭಾರತವನ್ನು ಓದಿದಾಗ, ನವ್ಯ ಆಧುನಿಕ ಪ್ರಪಂಚಕ್ಕೂ, ಅದಕ್ಕೂ ನಿಕಟ ಸಂಬಂಧ ಕಂಡು ಬರುವುದು ಸುಸ್ಪಷ್ಟ ಗೋಚರ. ಇಂದು ಪ್ರಪಂಚವನ್ನು ಕಂಡು ಅರ್ಥಮಾಡಿಕೊಂಡರೆ, ಶಾಂತಿ ಎಲ್ಲಿದೆ? ಎಂದು ಪ್ರತಿಯೊಬ್ಬನೂ, ಪ್ರಶ್ನೆ ಕೇಳಬಹುದು. ಆದರೆ ಆ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದೀತು. ಇಂದು ಎಲ್ಲೆಲ್ಲೂ ಯುದ್ಧಗಳು, ಅದಕ್ಕೆ ತಕ್ಕುದಾಗಿ ವಿಜ್ಞಾನದ ಉಪಯೋಗದಿಂದ ಕಂಡು ಹಿಡಿದ ಶಸ್ತ್ರಾಸ್ತ್ರಗಳು, ಇವುಗಳ ಬಳಕೆಯಿಂದ, ಲಕ್ಷೋಪಲಕ್ಷ ಮರಣಗಳು. ಇವು ಆಧುನಿಕ ಮಾನವನ ಮನಸ್ಸನ್ನು ಹಿಂಡಿ ಹುಚ್ಚನ್ನಾರು ಮಾಡುವುದರಲ್ಲಿ ಸಂಶಯವಿಲ್ಲ.

ಆಧುನಿಕ ಯುಗದ ಮುಖ್ಯ ಲಕ್ಷಣಗಳು, ಮಾನವ ಸ್ವಾತಂತ್ರ್ಯ ಮತ್ತು ಧನ ಸಂಪತ್ತು. ಪ್ರತಿಯೊಬ್ಬನೂ, ತಾನು, ಸ್ವತಂತ್ರನೂ, ಧನವಂತನೂ ಆಗಬೇಕೆಂದು ಬಯಸುವುದು ಸಹಜ ಪ್ರವೃತ್ತಿ ಸೂಚಿಸಿದೆ. ದೊಡ್ಡ ದೊಡ್ಡ ನಗರಗಳಲ್ಲಿ ಬಂಡವಾಳಗಾರ, ಮತ್ತು ಕಾರ್ಮಿಕರ ವರ್ಗಗಳು ಏರ್ಪಟ್ಟು, ಮೇಲು ಕೀಳೆಂಬ ಭಾವನೆಗಳು ಜನರಲ್ಲಿ ಮೂಡಿವೆ. ಯುದ್ಧವಾದರೆ ಇಂಥ ಬಂಡವಾಳಗಾರರು ಸ್ವಾರ್ಥ ಸಾಧಕರಾಗಿ ಬಹಳಷ್ಟು ಹಣವನ್ನು ಸಂಪಾದಿಸುತ್ತಾರೆ. ಯುದ್ಧ ಕಾಲದಲ್ಲಿ ಬಡವರಂತೂ ಪೂರ್ತಿ ಸಾಯುತ್ತಾರೆ. ಆದರೆ ಮಧ್ಯಮ ವರ್ಗದವರು ಅರ್ಧ ಸಾಯುತ್ತಾರೆ. ನರಳಿ ನರಳಿ ಅವರು ಕೊನೆಗೂ ಳುತ್ತಾರೆ. ಆದರೆ ಬಂಡವಾಳಗಾರರಾದ ರೋ, ಸುತ್ತೂ ಮತ್ತೂ ಶ್ರೀಮಂತರಾಗುವುದು ಎಲ್ಲರಿಗೂ ತಿಳಿದ ವಿಷಯ.

ಈ ಹಿಂದೆ ಯುದ್ಧಗಳು, ಜಾಗಕ್ಕಾಗಿ ಹೆಣ್ಣಿಗಾಗಿ, ಸಂಪತ್ತಿಗಾಗಿ, ಮತ್ತು ಪಡೆಯ ಸಾಯಕಶಕ್ತಿಯಾಗಿ ಜರುಗುತ್ತಿದ್ದುವು. ಆದರೆ ಇಂದು—ಯುದ್ಧಗಳು, ದೇಶದ ವರ್ಗೀಯ ಮತ್ತು ಮೇಲು—ಕೀಳೆಂಬ ಭಾವನೆಗಳಿಂದ ಉಂಟಾಗುತ್ತಿವೆ. ಇದಕ್ಕೆಲ್ಲಾ ಮನುಷ್ಯನಲ್ಲಡಗಿದ್ದ ಸ್ವಾರ್ಥತೆಯೇ ಮೂಲಕಾರಣ. ಸಂಪತ್ತು ಮತ್ತು ಸಮಾನದಿಂದ ಓಡಾಡುತ್ತಿರುವ ರಾಷ್ಟ್ರಗಳ ಮೇಲೆ ಕಣ್ಣು ಹಾಯುವುದು ಇತರ ರಾಷ್ಟ್ರಗಳ ಸಹಜ ಪ್ರವೃತ್ತಿಯಾಗಿದೆ. ಆದ್ದರಿಂದ ಮಧ್ಯಯುಗದಲ್ಲಿ ಯುದ್ಧಗಳು ಜಾತೀಯತೆಯ ದೃಷ್ಟಿಯಿಂದ ನಡೆಯುತ್ತಿದ್ದರೆ, ಆಧುನಿಕ ಯುಗದಲ್ಲಿ ರಾಜಕೀಯ ಕಾರಣಗಳಿಂದ ನಡೆಸುತ್ತಿದೆ. ರಾಷ್ಟ್ರೀಯ ಸಂಪನ್ನತೆ, ಸಮಗ್ರತೆ, ಮತ್ತು ಸ್ವಾರ್ಥತೆಗಳಿಗಾಗಿ ನಡೆಯುತ್ತಿದೆ.ಪ್ರತಿಯೊಂದು ರಾಷ್ಟ್ರವೂ, ಇಂದು ಅಸಾಧಾರಣವಾದ ಗುಣಪಡಿಸಲಾಗದ,'megalomania' (ಇಂದು ರೀತಿಯ ಮನೋರೋಗ) ಎಂಬ ಕಾಯಿಲೆಯಿಂದ ನರಳುತ್ತಿದೆ.

ಈ ಹಿಂದೆ ನಡೆದ ಮಹಾಯುದ್ಧಗಳಲ್ಲಿ, ಪ್ರತಿಯೊಂದು ರಾಷ್ಟ್ರವೂ ನಾಗರಿಕತೆ, ಮನುಷ್ಯತ್ವ ಮತ್ತು ದೇವರ ಹೆಸರಿನಿಂದ ಕಾದಾಡಿತ್ತು. ಬರೇ ದೇಶಪ್ರೇಮ, ದೇಶೀಯತೆಯ ಹೊದಿಕೆ ಮಾತ್ರ ಜನರನ್ನು ಮುಸುಕಿತ್ತು. ಆದರೆಲ್ಲಾ ಉದ್ವಿಗ್ನರಾಗಿದ್ದರು. ಅನಂತರದ ಪರಿಣಾಮವನ್ನು ಅವರುನಿರೀಕ್ಷಿಸದಂತೆಕಂಡುಬರಲಿಲ್ಲ. ಆದರೆ ಜರ್ಮನಿಯು ತಾನೇಸ್ವತಃ ತಯಾರಿಸಿದ ಬಾಂಬ ಗಳನ್ನು ನಾಗಸಾಕಿ. ಹಿರೋಶಿಮಾದ ಮೇಲೆ ಚೆಲ್ಲಿದಾಗ, ಅದರ ಪರಿಣಾಮಗಳನ್ನು ಅವರು ಕಂಡಾಗ ಅವರ ಉದ್ವಿಗ್ನತೆಯು ಕೊಂಚ ಮಟ್ಟಿಗೆ ಇಳುಪಂಯಾಯಿತು, ಆದರೆ ಯುದ್ಧ ದಾಹ ಕೊನೆಗೊಳ್ಳಲಿಲ್ಲ.

ಯುದ್ಧ ಒಂದು ಯುದ್ಧವೇ. ಅದು ಬರಿಯ ಆಟವಲ್ಲ ಇಂದು ವಿಜ್ಞಾನ ಬಾಂಬ ಗಳನ್ನು ಕಂಡುಹಿಡಿಯುತ್ತಿದೆ. 'ಮನುಷ್ಯತ್ವದ ಉಪಯೋಗಕ್ಕೆ ಕಂಡು ಹಿಡಿಯುತ್ತಿವೆ'—ಎಂದು ಅದು ಹೇಳುತ್ತಿದೆ, ಆದರೆ ಮನುಷ್ಯ ಅದನ್ನು ವಿನಾಶಕ್ಕಾಗಿ ಉಪಯೋಗಿಸುತ್ತಿದ್ದಾನೆ. ಅದನ್ನು ಆತ ಸ್ವಾರ್ಥತೆಗಾಗಿ ಉಪಯೋಗಿಸಿಕೊಂಡು ಉಳಿದವರನ್ನು ಸಹ ವಿನಾಶದತ್ತ ಒಯ್ಯುತ್ತಿದ್ದಾನೆ.

'ಅಟಂಬಾಂಬ್' ಇಂದು ನಮ್ಮ ತಲೆಯ ಮೇಲೆ ನೇತಾಡುತ್ತಿದೆ. ಅದನ್ನು ಬರೇ ಒಂದು ಕೂದಲಿನ ಎಳೆಯಿಂದ ಹಿಡಿದು ಕಟ್ಟಿದ್ದಾರೆ. ಅದು ಎಂದು ನಮ್ಮತಲೆಯ ಮೇಲೆ ಬೀಳುವುದೋ, ನಮಗೆ ತಿಳಿಯದು. ಆದರೂ ಪ್ರಯತ್ನ ಪಟ್ಟಲ್ಲಿ ನಾವದನ್ನು ಬೀಳದಂತೆ ಹಿಡಿಯಬಹುದೇನೋ? ಯಂದ್ದಕ್ಕೆ ಇದರಿಂದ ನಾವು ಆವಕಾಶವನ್ನೂ ಕೊಡದಿರಬಹುದು.

ಇಂದಿನ ಉದ್ವಿಗ್ನ ಪ್ರಪಂಚಕ್ಕೂ ಎರಡು ಸಾವಿರ ವರ್ಷಗಳಷ್ಟು ಪುರಾತನವಾದ ಮಹಾಭಾರತದಲ್ಲಿ ಹರಿವ ಕುರುಕ್ಷೇತ್ರಕ್ಕೂ ಹೋಲಿಕೆಯಿಲ್ಲ. ಮಹಾಭಾರತದಲ್ಲಿ ಎರಡು ಪಕ್ಷಗಳು ಉದ್ವಿಗ್ನವಾಗಿ ಕತ್ತಿಯನ್ನು ಹಿಡಿದು ಹೋರಾಡಿದುವು. ಆದರೆ ಇಂದು ನಾವು ಅದಕ್ಕಿಂತ ಭಯಂಕರವಾದ ಬಾಂಬನ್ನು ಕೈಯಲ್ಲಿ ಹಿಡಿದು ಹೋರಾಡುತ್ತಿದ್ದೇವೆ. ಅಷ್ಟೇ ವ್ಯತ್ಯಾಸ.ಆದರೆ ಇಂದು ಇಡಿ ಜಗತ್ತನ್ನು ವಿನಾಶದತ್ತ ಎಳೆದೊಯ್ಯಲು ಒಬ್ಬನೇ ಸಾಕು. ಒಂದು ಬಾಂಬು ಸಾಕು. ಹಾಗಾದರೆ ಅಂದಿನ ಕುರುಕ್ಷೇತ್ರದ ಜನರಿಗಿಂತ ನಾವು ಹೆಚ್ಚು ಉದ್ವಿಗ್ನರಾಗಿದ್ದೇವೆ. ನಾವೆಷ್ಟು ಮತ್ತತ್ತು ಮೃತ್ಯುಸ್ವರೂಪರಾಗಿದ್ದೇವೆ ಅಲ್ಲವೇ?

ಅಂದಿನಮಹಾಭಾರತದಲ್ಲೂ, ಸಂಧಿ ಮಾಡಿಕಲು, ಯುದ್ಧವನ್ನು ತಡೆಗಟ್ಟಲು ಪ್ರಯತ್ನಪಡಲು ಪರಮಾತ್ಮ, ಶ್ರೀಕೃಷ್ಣನಿದ್ದ. ಧರ್ಮ ವಿದುರನಿದ್ದ. ಧರ್ಮಾತ್ಮ ಧರ್ಮರಾಯನಿದ್ದ (ಯುಧಿಷ್ಠಿರ); ಆದರೂ ಅವರೆಷ್ಟು ಪ್ರಯತ್ನಪಟ್ಟರೂ, ಯುದ್ಧವನ್ನು ತಡೆಗಟ್ಟಲು ಆಗದೇ ಹೋಯಿತು. ಯುದ್ಧ ನಡೆದೇ ಹೋಯಿತು. ಇದರ ಪರಿಣಾಮ, ಹದಿನೆಂಟು ಅಕ್ಷೌಹಿಣಿ ಸೇನೆಯ ನಾಶ. ಎಷ್ಟೋ ಲಕ್ಷ ಜನತೆಯ ಕಣ್ಣೀರು. ಇಂದೂ ನಾವಿದೇ ಸ್ಥಿತಿಯಲ್ಲಿದ್ದೇವೆ. ಆದರೂ ನಮ್ಮನ್ನು ನಾವೇ ಅರಿತಿಲ್ಲ. ಇಂದು ಶ್ರೀಕೃಷ್ಣನ ಸ್ಥಾನವನ್ನೇ, ವಿಶ್ವಸಂಸ್ಥೆ ತುಂಬಿದೆ ಆದರೂ ಅದಷ್ಟು ಫಲಕಾರಿಯಾಗಿಲ್ಲ. ದುರ್ಯೋಧನನೇನೋ ಮಹಾಭಾರತದಲ್ಲಿ ಹರಿವಾದಿಯಾಗಿದ್ದ. ಶುರ್ಮಾರ್ಗಿಯಾಗಿದ್ದ. ಶಾಂತಿಗೆ, ಸಂಧಿಗೆ ಆತ ಒಪ್ಪಲಿಲ್ಲ. ಯುದ್ಧ ಇದರಿಂದ ಅನಿವಾರ್ಯವಾಯಿತು. ಎಷ್ಟೋ ಪ್ರಾಣಹಾನಿಗಳು ಇದರಿಂದ ಆಯಿತು.

ಯುದ್ಧ ಶೆಂಬುದು ಇಂದು ಒಂದು ಅಟವಾಗಿದೆ. ಈ ಸಮಯದಲ್ಲಿ ಉಜಾರ್ಕಾಕ್ಕೋ, ಮರ್ಡೂಬೆಗೋ, ಕೆಲವರು ಪ್ರಪಂಚಕ್ಕೆ ಶಾಂತಿ ದೊರಕಬೇಕಾದರೆ, ನೈತಿಕ, ಧಾರ್ಮಿಕ ಮಾರ್ಗದಿಂದಲೇ ಅನ್ವೇಷಿಸಬೇಕಾಗಿದೆ. ಐದನೆಯ ವೇದವೆಂದು ಪರಿಗಣಿಸಲ್ಪಟ್ಟು, ಎರಡು ಸಾವಿರ ವರ್ಷಗಳಷ್ಟು ಪುರಾತನವಾದ ಮಹಾಭಾರತವೂ ಕೂಡ ಕೂಗಿ ಹೇಳುವ ಶಾಂತಿ ವರ್ಗ ಇದೇ— "ಧರ್ಮಾದರ್ಥಶ್ಚ ಕಾಮಶ್ಚ ಸಕೇ ಮರ್ಥಾಂಸ ಸೇವ್ಯತೇ". "ಮಾನವನು ಇಂದು ಪಕ್ಷಿಯಂತೆ ಗಗನದಲ್ಲಿ ಹಾರಲು ಕಲಿತಿದ್ದಾನೆ. ಮೀನಿನಂತೆ ನೀರಿನಲ್ಲಿ ಈಜಲು ಕಲಿತಿದ್ದಾನೆ. ಆದರೆ ಮಾನವನಂತೆ ಈ ಭೂವಿಯಲ್ಲಿ ಬದುಕಲು ಕಲಿತಿಲ್ಲ". ಇದು ರಕ್ಕಾದ ಒಬ್ಬ ಸಾನಾನ್ಯನ ಆಭಿಪ್ರಾಯ. ಇದು ಇಂದಿಗೆ ನಿಜವಲ್ಲವೇ? ಮಹಾಭಾರತದ ಸಂದೇಶವನ್ನು ಅರಿತು ಶಾಂತಿಗಾಗಿ ದುಡಿದ ಬಾಳುವುದೇ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ— ಇಂದು ಈ ಆಧುನಿಕ ಪ್ರಪಂಚದಲ್ಲಿ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. E. P. 538/66
in O.S. 197/56

ಯೆಲ್ಲಪ್ಪ ಯಮನೆ ಜೋಗಪ್ಪ ಪಟ್ಟೆ ಆರ್ಜಿದಾರ ಮತ್ತು

ಬಾಗಮ್ಮ ಶೆಟ್ತಿ ಸಹಾ —ಎದ್ರಿರು.

ಕುಂದಾಪುರ ತಾಲೂಕು ಹಾರ್ದಳ್ಳಿ ಮಂಡಳ್ಳಿ ಗ್ರಾಮದ ದೊಡ್ಡನೆಮ್ಮದ್ದಿರುವಿ ಮುತ್ತಕ್ಕ ಶೆಟ್ತಿ ಮಗ 3ನೇ ಎದ್ರಿ ಅಂತೆ ಶೆಟ್ಟಿ, ಮತ್ತು ಉಡುಪಿ ತಾಲೂಕು ಹನೆಹಳ್ಳಿ ಗ್ರಾಮದ ದೊಡ್ಡನೆಯಲ್ಲಿರುವ ಮುತ್ತಕ್ಕ ಶೆಟ್ತಿ ಮಕ್ಕಳು 2ನೇ ಎದ್ರಿ ಮಹಾಬಲ ಶೆಟ್ಟಿ, 3ನೇ ಎದ್ರಿ ಕೃಷ್ಣಯ್ಯ ಶೆಟ್ಟಿ, ೪ನೇ ಎದ್ರಿ ಬಾಗಮ್ಮ ಶೆಟ್ತಿ ಮಕ್ಕಳು 5ನೇ ಎದ್ರಿಳು ಪಾರ್ವತಿ ಶೆಟ್ತಿ, 7ನೇ ಎದ್ರಿ ಭುಜಂಗ ಶೆಟ್ಟಿ, ೮ನೇ ಎದ್ರಿ ಶಿವರಾಮ ಶೆಟ್ಟಿ ಕೂಡಾ 9ನೇರೇಗೆ ಯಾ ಮೂಲಕ ತಿಳಿಯಪಡಿಸುವುದೇನೆಂದರೆ:

ಮೇಲ್ಕಾಣಿಸಿದ ಅಮಲ್ದಾರ್ಯರಿಯಲ್ಲಿ ಆರ್ಜಿದಾರನು ನೀವು ಕೂಡಾ ಜಂಟಿ ಸ್ವಾಧೀನ ಪಕ್ಕಯದ ಕುರಿತು ಆರ್ಜಿ ಮಾಡಿಕೊಂಡಿದ್ದು ಸದ್ರಿ ವಿಚ್ಛಾಯದ ಇಸ್ಕಾರಿನ ಶರ್ತ ನಿರ್ಣಯದ ಬಗ್ಗೆ ತಾರೀಕು 25—10—67ಕ್ಕೆ ಮೇಲಿನ ಕೋರ್ಟು ಸದ್ದಿ ಇರ್ಜೋಡಾಗಿರುವುದೆ.ಆ ಕಾರಣ ನಿಮ್ಮ ಆಕ್ಷೇಪವಿದ್ದಲ್ಲಿ ಸ್ವತಹಾ ಯಾ ವಕೀಲರ ಮೂಲಕ ಸದ್ದಿ ದಿನ ಜಗಲು 11 ಗಂಟೆಗೆ ಹಾಜರು ಪಡಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಮುಂದಿನ ಕ್ರಮ ಕೈಗೊಳ್ಳಲಾದೀತು.

ಕೋರ್ಟು ಆಜ್ಞೆಯ ಮೇರೆಗೆ

G. Kushala Hegde
ಆರ್ಜಿದಾರನ ಪರ ಎಡ್ವೋಕೇಟ್

ಕುಂದಾಪುರ, 27—10—67

ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ

ಪುಟ 450ಕ್ಕೂ ಮಿಕ್ಕಿ ಬೆಲೆ ರೂ.1-50

ರಾಜ್ಯದ ಪ್ರಮುಖ ನಗರಗಳಿಗೆ ವಿಶೇಷ ಸಂಚಾರ ಸೌಲಭ್ಯಗಳನ್ನೆ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

ಕಳೆದ ದಿನಗಳು

ಪಾಕಿಸ್ತಾನದ ಕುರಿತು ಬಾಪೂಜಿ ಹೇಳಿದ್ದು!

ಲೇಖಕರು: ಪಂಡಿತ ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

೧೯೪೭ ಅಕ್ಟೋಬರ ತಿಂಗಳು ತಾ. ೨೦ರಂದು ಪಾಕಿಸ್ತಾನ ತನ್ನ ಧಾಳಿಕಾರರನ್ನು ಮತ್ತು ವಿಮಾನಗಳನ್ನು ಕಳುಹಿಸಿ ಕಾಶ್ಮೀರದ ಮೇಲೆ ಆಕ್ರಮಣ ಮಾಡಿತು. ಆಗ ಭಾರತ ಸರಕಾರ ಶ್ರೀನಗರಕ್ಕೆ ಸೈನ್ಯ ಕಳುಹಿಸಿದುದನ್ನು "ಮಹಾತ್ಮಾ ಗಾಂಧೀಜಿ" ಬಲವಾಗಿ ಸಮರ್ಥಿಸಿದರು. ಪಾಕಿಸ್ತಾನ ದರೋಡೆಗಾರರು ಮತ್ತು ಸೈನಿಕರು ಆ ಸಮಯದಲ್ಲಿ ಕಾಶ್ಮೀರದಲ್ಲಿ ನಡಿಸಿದ ಸರ್ವನಾಶದ ಕುರಿತಾಗಿ ಮಹಾತ್ಮರು ಬಹಳ ದುಃಖಿತರಾಗಿದ್ದರು. "ಕಾಶ್ಮೀರವನ್ನು ರಕ್ಷಿಸುವುದು ನಮ್ಮೆಲ್ಲರ ಮುಖ್ಯ ಕರ್ತವ್ಯ" ವೆಂದು ಅವರು ಬಹಳ ದೃಢತೆಯಿಂದ ಹೇಳುತಿದ್ದರು.

ಬಿಲಾಕ ಭವನದಲ್ಲಿ ಬಾಪೂಜಿ ತನ್ನ ಭಾವೀಜೀವನವನ್ನು ಕಳೆಯಲು ಉಳಕೊಂಡಿದ್ದರು. ಆ ಸಮಯದಲ್ಲಿ ಕಾಶ್ಮೀರದ ಮೇಲೆ ಆಕ್ರಮಣ ವಾಯಿತು. ಗಾಂಧಿಯವರ ಖಳಿಯಲ್ಲಿ ಕೆಲವು ಪ್ರತಿಕಾ ಪ್ರತಿನಿಧಿಗಳೂ ಇದ್ದರು. ಮುಸಲ್ಮಾನರ ಆಕ್ರಮಣದ ಕುರಿತು ಮಹಾತ್ಮರು ಬಹಳ ಗಂಭೀರವಾಗಿ ಚಿಂತನೆ ಮಾಡುತಿದ್ದರು. ಪಂಡಿತ್ ನೆಹ್ರು, ಸರ್ದಾರ್ ಪಟೇಲ್, ಮತ್ತು ರಕ್ಷಣಾ ಮಂತ್ರಿ ಸರ್ದಾರ್ ಬಲ್ದೇವ್ ಸಿಂಗ್ ಇವರುಗಳು ಪ್ರತಿಕ್ಷಣಕ್ಕೊಮ್ಮೆ ಗಾಂಧೀಜಿ ಯವರಲ್ಲಿ ಈ ಗಂಭೀರ ಸಮಸ್ಯೆಯ ಕುರಿತು ಸಲಹೆಗಾಗಿ ಬಂದು ಹೋಗುತ್ತಿದ್ದರು. "ಹಿಂದೂ ಮುಸಲ್ಮಾನ ಐಕ್ಯಕ್ಕಾಗಿ ಅಂದು ಆಮರಣಾಂತರ ಉಪವಾಸ ಕೈಕೊಂಡಿದ್ದ ಮಹಾತ್ಮರು ದಿಂಬಿಗೆ ಒರಗಿಕೊಂಡು ತನ್ನ ಸಮಿಪದೇ ಗೋಡೆಯಲ್ಲಿ ತೂಗಾಡುತಿದ್ದ ಭಾರತ ಮತ್ತು ಕಾಶ್ಮೀರದ ಭೂಪಟವನ್ನು ಏಕಾಗ್ರ ದೃಷ್ಟಿಯಿಂದ ನೋಡುತ್ತಿದ್ದರು; ಭಾರತ ಏಕಜನವೆಯೂದುದರಿಂದ ಅವರು ಮೊದಲೇ ಅತಿರೇಕ ದುಃಖಿಕ್ಕೊಳಗಾಗಿದ್ದರು. ಕಾಶ್ಮೀರದ ಮೇಲಿನ ಆಕ್ರಮಣವು ಅವರ ದುಃಖವನ್ನು ಶತಾಂಕ ಮತ್ತೂ ಹೆಚ್ಚಿಸಿತು. ಈ ರಾಷ್ಟ್ರಸೀ ಅತ್ಯಾಚಾರವನ್ನು ದಮಿಸಲಿಕ್ಕಾಗಿ ಅವರು ಶಸ್ತ್ರಾಸ್ತ್ರ, ಮತ್ತು ಸೈನ್ಯವನ್ನು ಕಳುಹಿಸಿ ಕಾಶ್ಮೀರವನ್ನು ರಕ್ಷಿಸುವಂತೆ ಪಂಡಿತ್ ನೆಹ್ರು ಮತ್ತು ಭಾರತ ಸರಕಾರಕ್ಕೆ ಅನುಮತಿ ಇತ್ತರು.

ಒಂದು ದಿನ ಪ್ರಾರ್ಥನಾಕಾಲ ಅವರು ವಾಯು ಸೇವನಾರ್ಥ ಸಂಚರಿಸುತಿರುವಾಗ ಆಕಾಶದಲ್ಲಿ ಕೆಲವು ವಿಮಾನ ಬಹಾರಾಡುತ್ತಿರುವುದನ್ನು ಕಂಡರು. ಆ ಅವರೊಡನೆ ಇದ್ದ ಪತ್ರಿಕೋದ್ಯೋಗಿ ಶ್ರೀ ಶೈಲೇಂದ್ರ ಚಟರ್ಜಿಯವರು ಮಹಾತರಲ್ಲಿ "ಇಷ್ಟು ಸ್ವಾತಂತ್ರಕಾಲ ಇಷ್ಟೊಂದು ವಿಮಾನಗಳು ಎಲ್ಲಿಗೆ ಓಡುತ್ತಿವೆ?" ಎಂದು ಪ್ರಶ್ನಿಸಿದಾಗ ಬಾಪೂಜಿ "ಬಹುಶಃ ಈ ವಿಮಾನಗಳೆಲ್ಲವೂ ಕಾಶ್ಮೀರಕ್ಕೆ ಸೇನೆಯನು ಸಾಗಿಸುತ್ತಿರಬೇಕು" ಎಂದರು. ತಮ್ಮ ಪ್ರಾರ್ಥನೋತ್ತರ ಪ್ರವಚನದಲ್ಲಿ ಅವರು "ಒಕ್ಕೂಟ ಸರಕಾರ ಶ್ರೀನಗರಕ್ಕೆ ಸೈನ್ಯ ರವಾನಿಸಿದ್ದು ಬಹಳ ಉಚಿತವಾಯಿತು. ಸೈನ್ಯವು ಚಿಕ್ಕದಾಗಿದ್ದರೂ ಚಿಂತಿಲ್ಲ; ಏಕೆಂದರೆ ಇದರಿಂದ ಕಾಶ್ಮೀರ ಪ್ರಜೆಗಳಲ್ಲಿನ ಸ್ವಂದೇಹವಾಗಿಅತ್ಮ ವಿಶ್ವಾಸ ಉಂಟಾಗುವುದು. ಈ ಚಿಕ್ಕ ಸೇನೆಯು ಕಾಶ್ಮೀರದ ರಕ್ಷಣೆಗೋಸ್ಕರ ವೀರಾವೇಶದಿಂದಹೋರಾಡಿ ಕಾಶ್ಮೀರದ ರಣಭೂಮಿಯಲ್ಲಿ ನಾಮವನ್ನಪ್ಪಿದರೆ ನನ್ನ ಕಣ್ಣುಗಳಿಂದ ಒಂದು ಹನಿ ನೀರಾದರೂ ಬೀಳಲಿಕ್ಕಿಲ್ಲ; ಒಂದು ವೇಳೆ ಮುಸಲ್ಮಾನರು, ಹಿಂದೂಗಳು, ಸಿಖ್ಖರೇ ಮೊದಲಾದ ಪ್ರತಿಯೊಂದು ಜಾತಿಯ ಸ್ತ್ರೀ—ಪುರುಷರೆಲ್ಲರೂ ಕಾಶ್ಮೀರವನ್ನು ರಕ್ಷಿಸಿ ಮಾಡುತ್ತ ಅಲಿದಾನವಾದರೂ ನನಗೆ ದುಃಖವುಂಟಾಗದು. ಈ ರೀತಿ ಮಾತೃ ಭೂಮಿಯ ರಕ್ಷಣೆಮಾಡಿದ ಇಡಕ್ಕೆಂತ್ಯಗೌರವಯುಕ್ತವಾದ ಇನ್ನೊಂದು ಉದಾಹರಣೆ ಹಿಂದೂಸ್ಥಾನಕ್ಕೆ ಲಭಿಸದು.' ಎಂದು ಸ್ಪಷ್ಟವಾಗಿಹೇಳಿದರು.

೧೯೪೭ ಅಕ್ಟೋಬರ ತಿಂಗಳು ತಾ. ೨೦ರಂದು ಪಾಕಿಸ್ತಾನ ಆಕ್ರಮಣ ವೆಸಗಿದಾಗ ಕಾಶ್ಮೀರದಲ್ಲಿ ಕೇವಲ ಹೆಸರಿಗೆ ತಕ್ಕ ಸೈನ್ಯವಿದ್ದುದು ಜಿಜ್ಞಾಸೆಯವಿರಬಹುದು! ಪಾಕಿಸ್ತಾನದ ಕೊಳ್ಳೆಗಾರರು ಸರ್ವನಾಶದ ಪ್ರವಾಹವನ್ನೇ ಹರಿಸುತ್ತಾ ಶ್ರೀನಗರದ ಸಮೀಪಕ್ಕೆ ಬಂದಿದ್ದರು. ಮಹಾರಾಜಾಹರಿಸಿಂಗರು ಪರಿವಾರ ಸಹಿತ ದಿಲ್ಲಿಗೆ ಬಂದು ಅಕ್ಟೋಬರ ೨೬ರಂದು ಕಾಶ್ಮೀರವನ್ನು ಭಾರತದೊಂದಿಗೆ ಸೇರಿಸಿಡೆಗೊಳಿಸುವ ಸಂಧಾನ ಪತ್ರಕ್ಕೆ ಹಸ್ತಾಕ್ಷರ ಮಾಡಿದ್ದರು. ಕೂಡಲೇ ಭಾರತ ಸರಕಾರ ಕಾಶ್ಮೀರದ ರಕ್ಷಣೆಗೆ ವಿಮಾನ ಮೂಲಕ ಕಳುಹಿಸಿದ ಸೇನೆ ಪಾಕಿಸ್ತಾನದ ದರೋಡೆ ಹೋರರನ್ನು ಹಿಡಿಸಿತು; ಆಗ ಪಾಕಿಸ್ಥಾನ ಸರಕಾರದ ಸೈನ್ಯವೇ ನೇರವಾದ ಯುದ್ಧ ಹೂಡಲು ಮುಂದೆ ಬಂತು. ಭಯಾನಕವಾದ ಈ ವಿಪತ್ತನ್ನು ಕಂಡು ಭಾರತ ಸರಕಾರ ಪಾಕ್ ಆಕ್ರಮಣದ ಕುರಿತು ಭದ್ರತಾ ಸಮಿತಿಗೆ ದೂರು ಕೊಟ್ಟಿತ.- ಆದರೆ ಆಗ ಸಹ ಬ್ರಿಟನ್ ಮತ್ತು ಅಮೇರಿಕ ಎರಡೂ ಸರಕಾರಗಳು ಪಾಕಿಸ್ತಾನದ ಪಕ್ಷವನ್ನೇ ಸಮರ್ಥಿಸಿದವು. ಆ ಎರಡೂ ರಾಷ್ಟ್ರಗಳು ಪಾಕಿಸ್ತಾನದೊಡನೆ ಸಂಧಿ ಮಾಡಿಕೊಳ್ಳುವಂತೆ ಭಾರತದ ಮೇಲೆ ಒತ್ತಡ ಹಾಕಿದವು. ಆದರೆ ಈ ರೀತಿ ಸಂಧಿಗೆ ಪಾಕಿಸ್ತಾನವೇ ಸರ್ವಥಾ ಸಮ್ಮತಿಸಲಿಲ್ಲ. ಈ ಕುರಿತಾಗಿ ಭದ್ರತಾ ಸಮಿತಿ ರೆಂವು ಸ್ವೀಕರಿಸಿದರೂ ಕೂಡಾ ಪಾಕಿಸ್ತಾನ ತನ್ನ ಸೈನ್ಯವನ್ನು ಹಿಂತೆಗೆಯಲಿಲ್ಲ.

ಕಾಶ್ಮೀರದ ದುಃಖದಾಯಕವಾದ ಘಟನೆಗಳನ್ನು ವರ್ಣನೆ ಮಾಡುತ್ತಾ ಮಹಾತ್ಮಾಜಿ "ಕಾಶ್ಮೀರದ ಮಹಾರಾಜರು ತನ್ನ ಸಂಪತ್ತು ಪಸ್ತುವಿತು ಯೂವಾಗ ಭಾರತ ಒಕ್ಕೂಟಕ್ಕೆ ಸೇರುವ ಇಚ್ಛೆ ವ್ಯಕ್ತ ಪಡಿಸಿದರೋ ಆಗ ಗವರ್ನರ್ ಜನರಲ್ಲರು ಅನ್ನು ಯಾವ ವಿಧದಿಂದಲೂ ತಿರಸ್ಕರಿಸಲು ಸಾಧ್ಯವಿರಲಿಲ್ಲ. ಆದುದುಂದ ಅವರು ಮತ್ತು ಸಂಪ್ರಭುಂಡಲ ಕೂಡಲೇ ಕಾಶ್ಮೀರಕ್ಕೆ ಸೈನ್ಯ ರವಾನಿಸಿದರು; ಹಿಂದೂ ಸ್ಥಾನದ ಸೈನ್ಯ ಕಾಶ್ಮೀರದ ಮೇಲೆ ಆಕ್ರಮಣಕ್ಕಾಗಿ ಹೋದುದಲ್ಲ; ಆದನ್ನು ರಕ್ಷಿಸಲು ಹೋದ ದಾಗಿತ ಪ್ರಜೆ; ಅಲ್ಲಿಯ ಮಹಾರಾಜನು ಮತ್ತು ಪ್ರಥಾನ ಮಂತ್ರಿಗಳು ಆಕ್ರಮಣಕಾರರನ್ನು ಪ್ರತಿಭಟಿಸಲಿಕ್ಕಾಗಿ ಕೇಂದ್ರ ಸರಕಾರದಿಂದ ಸೈನಿಕ ಸಹಾಯ ಯಾಚಿಸಿದರು" ಎಂಬುದಾಗಿ ಸ್ಪಷ್ಟೀಕರಣ ಕೊಟ್ಟಿದ್ದರು.

ರಾಷ್ಟ್ರಧಾರ್ಮ್ಯಂಶ ಐಕ್ಯವನ್ನು ಬಲಗೊಳಿಸಲಿಕ್ಕಾಗಿ ಅವರು ತಮ್ಮ ಅಂತಿಮ ಉಪವಾಸ ಕೈಕೊಂಡಿದ್ದ ಸಮಯದಲ್ಲಿ ಅವರು ತನ್ನ ಮರಣದ ಹದಿಮೂರು ದಿನಗಳ ಮೊದಲು ಮಲಗಿದ್ದಲ್ಲಿಂದಲೇ ಒಂದು ಪ್ರಾರ್ಥನೆ ಮುಗಿಸಿದ ನಂತರ ಪತ್ರಿಂದು ಮಹತ್ವಪೂರ್ಣವಾದ ಸ್ಪಷ್ಟೀಕರಣವನ್ನು ರಾಷ್ಟ್ರದ ಮುಂದಿಟ್ಟರು. ಇದು ಅವರ ಜೀವನದ ಅಂತಿಮ ಸಾರ್ವಜನಿಕ ವಿಶ್ವದ ಇತಿಹಾಸದಲ್ಲಿ ಅಜರಾಮರವಾಗಿ ಉಳಿಯುವ ಬಭೇದ್ಯ ಭವಿಷ್ಯವಾಣಿ ಆದು ಪೂರ್ಣ ವಿವರ ಈ ರೀತಿಯಲ್ಲಿದೆ.

"ಪಾಕಿಸ್ತಾನೀಯರಿಗೆ ಅಂದರೆ ಪಾಕಿಸ್ತಾನದ ಭವಿಷ್ಯವನ್ನು ನಿರ್ಮಿಸಬೇಕಾದ ಜವಾಬ್ದಾರಿಯುಳ್ಳ ಪ್ರತಿನಿಧಿಗಳಿಗೆ ನಾನು ಪಾಕಿಸ್ತಾನದ ಒಳಿತಿಗಾಗಿ ಸಲಹೆ ನೀಡಿದ್ದೆನೆಂದರೆ ಇನ್ನಾವುದೂ ಒಂದು ವೇಳೆ ಅವರೆಲ್ಲ ವಿವೇಕ ಶೀಲತೆ ಉಪ್ಪನ್ನವಾಗಿದ್ದರೆ ಮತ್ತು ಪಾಕಿಸ್ತಾನ ತನ್ನ ತಪ್ಪನ್ನರಿತುಕೊಳ್ಳಲಿದ್ದರೆ ಅವರು ಪಾಕಿಸ್ತಾನವನ್ನು ಎಂದೆಂದಿಗೂ ಸ್ಥಿರವಾಗಿ ಇಟ್ಟುಕೊಳ್ಳಲಾರರು; ಇದು ನಿಶ್ಚಿತ! ಅಂದರೆ ಹಿಂದೂಸ್ಥಾನದಲ್ಲಿ ಅದ ಈ ಎರಡು ವಿಭಾಗಗಳು ಪರಸ್ಪರ ಸಮ್ಮತಿ ತಾಲ್ಲದಿದ್ದರೂ ಕಾಶ್ಮೀರ ಒಂದಾಗಲೆಂಬ ಅಭಿಪ್ರಾಯ ನನ್ನದಲ್ಲಿ-ಕಾಶ್ಮೀರವು ಎರಡು ವಿಭಾಗವಾಗಿ ಹರಿಯಲ್ಪಡುವುದೆಂದು ನಾನು ಕಿವಿಯಾರ ಕೇಳುತಿದ್ದೇನೆ. ಈ ರೀತಿಯು ವಿಭಜನೆ ಆಗಲೆನೆಯನ್ನು ಕೂಡಾ ನಾನು ಮಾಡಲಾರೆನು. ಕಾಶ್ಮೀರವನ್ನು ತುಂಡು ಮಾಡುವುದಾದರೆ ಈ ರೀತಿ ಪುಂಡರಿಯುವ ಸಮಸ್ಯೆ ಎಲ್ಲಿಗೆ ಹೋಗಿ ಕೊನೆಗಾಣುತ್ತದು? ಹಿಂದೂಸ್ಥಾನವನ್ನು ಭಗವಂತನು ಅಖಂಡವಾಗಿ ಸೃಷ್ಟಿಸಿದ್ದನು. ಮನುಷ್ಯನು ಅದನ್ನು ಹೇಗೆ ತುಂಡುಮಾಡಬಲ್ಲನು? ಆದರೆ ಅದು ಆಗಿ ಹೋಯಿತು! ಲೀಗ್ ಮತ್ತು ಕಾಂಗ್ರೆಸಿಗರು ಬೇರೆ ಬೇರೆ ಕಾರಣಗಳಿಗಾಗಿ ಭಾರತವನ್ನು ತುಂಡುಗಳನ್ನಾಗಿ ಸವ್ಮತಿಸಿದರು—" (ಇಂಪ್ಪ್ರೆ ವಿಭಜನೆ ಮನಃಪೂರ್ವಕವಾಗಿ ಸವ್ಮತವಿರಲಿಲ್ಲವೆಂಬುದು ಇಲ್ಲಿ ಕಂಡು ಬರುತ್ತದೆ).

ಇಂದಿಗೆ ಕಾಶ್ಮೀರದ ಭೂಮಿಯಲ್ಲಿ ಬಹುದೊಡ್ಡ ಧರ್ಮ ಮತ್ತು ಇನ್ನಾ ಮಿಶ್ರ ಪರಿಸ್ಥಿತಿಯಾಗುತ್ತಿದ್ದ. ಒಂದು ವೇಳೆ ಇವರೆಲ್ಲರೂ ಉಚಿತ ರೀತಿಯಲ್ಲಿ ಒಂದಾಗಿ ಸೇರಿ ಕಾರ್ಯಪ್ರವೃತ್ತರಾದರೆ ಇಬ್ಬರಿಗೂ ಯಶಸ್ಸು ಮತ್ತು ಗೌರವ ದೊರಕುವುದು; ಮತ್ತು ಇಂತಹ ಯಶಸ್ಸನ್ನು, ಗೌರವವನ್ನು ಕಾಪುಕೊಳ್ಳುವ ಎದೆಗಾರಿಕೆ ಹೊಂದಿ ಶಕ್ತಿ

ಜಗತ್ತು ಆತನ ಪುಟ್ಟ ಕೈಗಳಲ್ಲಿ!

ಚಿಕ್ಕ ಗೋಪು ತನ್ನ ಪುಟ್ಟ ಕೈಗಳಲ್ಲಿ ಚಿತ್ರಪುಸ್ತಕವನ್ನು ಹಿಡಿದು ಚಿತ್ರಗಳ ಕೌತುಕಗಳನ್ನು ಕಂಡು ಆನಂದಿಸುತ್ತಿದ್ದಾನೆ. ಸುತ್ತಣ ಸೋಜಿಗಗಳನ್ನು ಕಾಣುವ, ತಿಳಿಯುವ ಕುತೂಹಲ ಚಿತ್ತವೇ ಆತನ ಮನಸ್ಸನ್ನು ವಿಕಸಿಸಲು ನೆರವಾಗಬಲ್ಲದು. ಶಿಶುವಿನಲಿ, ಬಾಲಕನಿಂಲಿ ಹೆಚ್ಚು ಹೆಚ್ಚು ತಿಳಿದಂತೆ ಜಗತ್ತು ಅಷ್ಟು ಚಿಕ್ಕದಾಗಿ ಕಾಣುತ್ತದೆ.

ಪ್ರಿಯರಾದ ನಾವು ಮುಕ್ಕಳಲ್ಲಿ ಉತ್ತಮ ಹವ್ಯಾಸಗಳನ್ನಿಟ್ಟು ಉತ್ತೇಜಿಸುವುದು ಹೇಗೆ ಮಾಡಿ, ಮಕ್ಕಳು ಬಳೆದಂತೆ, ಬದುಕಿಗೆ ಅನುವಾಗುವ ಆ ಹವ್ಯಾಸಗಳೂ ಜವಲಲ್ಲಿ ಬೆಳೆಯುವುದನ್ನು ಕಂಡು ಆನಂದಿಸಬೇಕು. ನಿಮ್ಮ ಮಕ್ಕಳ ಬೆಳವಣಿಗೆಗೆ, ವಿದ್ಯಾಭ್ಯಾಸಕ್ಕೆ ಯಾಗೂ ಮುಂದಿನ ಉದ್ಯೋಗ ಜೀವನಕ್ಕಾಗಿ ಅವರಿಗೆ ಯೋಗ್ಯ ಅವಕಾಶವನ್ನು ನೀಡಲು ನೀವು ಇಂದೇ ಸನ್ನಾಹಮಾಡಬೇಕು.

ಸಿಂಡಿಕೇಟ್ ಬ್ಯಾಂಕಿನಲ್ಲಿ ನೀವು ನಿಮ್ಮ ಮಕ್ಕಳ ಹೆಸರಿನಲ್ಲಿ ಕ್ಯುಮುಲೇಟಿವ್ ರೇವಣಾನಿ ಖಾತೆಯನ್ನು ತೆರೆದು, ಅದರಲ್ಲಿ ಕ್ರಮವಾಗಿ ಕೂಡಿಡುತ್ತಾ ಬಂದಲ್ಲಿ ನಿಮ್ಮ ಮಕ್ಕಳ ಭವಿಷ್ಯಕ್ಕೆ ಒಂದು ಭದ್ರ ತಳಹದಿಯನ್ನು ನೀವು ಏರಿಡಿದಂತಾಗುವುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ನಾಟಕ ಕಲೆ

ಕಾವ್ಯೇಷು ನಾಟಕಂ ರಮ್ಯಂ

ಬರೆದವರು ಶ್ರೀ ಎಚ್. ಎಂ. ಅಡಿಗ

ಜೀವನವೇ ಒಂದು ನಾಟಕ. ಮಹಾ ಪ್ರಭುವಿನೇ ನಾಟಕ ಆಡುವ ರಂಗಮಂದಿರ ಮನುಷ್ಯನೇ ಆದರೆ ಪಾತ್ರಧಾರಿ. ಸೂತ್ರಧಾರ ಪರಮಾತ್ಮ.

ಈ ನಾಟಕವು ಸಾಧಾರಣವಾಗಿ ಸಾಹಿತ್ಯದ ಒಂದು ಭಾಗ ನಮ್ಮ ದೇಶದಲ್ಲಿ ಈ ಕಲೆಗೆ ಬಹು ಪುರಾತನವಾದ ಸ್ಥಾನವಿದೆ. ಸಾಧಾರಣ ಕ್ರಿ.ಪೂ.ನೇ ಶತಮಾನದಲ್ಲಿಈ ಸಾಹಿತ್ಯವು ಭರತ ಮುನಿಯಿಂದ ಬರೆಯಲ್ಪಟ್ಟಿದೆ. ಆತನ ವಂಶ ಪರಂಪರೆಯಿಂದ ಈ ನಾಟ್ಯ ಶಾಸ್ತ್ರವು ಭೂಮಿಗೆ ಬಂತೆಂದು ಐತಿಹ್ಯವು ಸೂಚಿಸುತ್ತದೆ.

ಶತೆ, ಕಾದಂಬರಿಗಳಿಗಿಂತ ನಾಟಕವು ಒಂದು ಪೃಷ್ಟಿಯಿಂದ ಹೀನವಾಗಿದೆ ಎಂದು ಯಾರಿಂದಲೂ ತಪ್ಪಾಗಲಾರದು. ಕಾರಣ, ಕವಿ, ಕತೆಗಾರ, ಕಾದಂಬರಿಕಾರರು ಇವರೆಲ್ಲರೂ ಸ್ವತಂತ್ರ ಜೀವಿಗಳ ಪರಾವಲಂಬಿಗಳಲ್ಲಿ ತಾವು ಬರೆದ ಕೃತಿಗಳ ಬಗ್ಗೆ ಫಲಾಫಲಗಳಿಗೆ ಪ್ರತ್ಯಕ್ಷ ಭಾಗಿಯಾಗಬೇಕಾಗಿಲ್ಲ. ಆದರೆ ನಾಟಕಕಾರ ಬರಾವಲಂಬಿ. ಇದರಿಂದಲೇ ಯಶಸ್ಸು ಸಿಕ್ಕುವಂತಿಲ್ಲ ತುಂಬಾ ಎಚ್ಚರಿಕೆಯಿಂದ, ವಾಸ್ತವಿಕತೆಯಿಂದ ಕೃತಿಯನ್ನು ರೂಪಿಸಬೇಕು. ಬರೆದ ಸಾಹಿತ್ಯವು ಯಶಸ್ವಿಯಾಗಬೇಕಾದರೆ, ನಟನ ನೈಪುಣ್ಯ, ರಂಗ ಭೂಮಿಯ ಸಂಪ್ರದಾಯ, ಪ್ರೇಕ್ಷಕರ ಮನಸ್ಸನ್ನು ನೆಚ್ಚಿಸಬೇಕು. ಪಾತ್ರಗಳಿಗೆ ಅನುಗುಣವಾಗಿ ಪಾತ್ರಧಾರಿಗಳನ್ನು ಎಳೆದು ತಂದು ರಂಗ ಭೂಮಿಯ ಮೇಲೆ ಕುಣಿಸಬೇಕು ಆತನ ಅಭಿನಯ ಸಮ್ಮ ಚೆನ್ನಾಗಿರಬೇಕು.

ರಂಗ ಮಂಟಪವು ಸಾಂಕಸ್ಯ ವಿಶಾಲವಾಗಿ, ತುಂಬಾ ಜನರು ಕುಳಿತು ಕೊಳ್ಳುವಂತಹದ್ದಾಗಿರಬೇಕು. ಇದರಿಂದಿಗೆ ನಿರ್ದೇಶನವು ಮುಖ್ಯ. ಅಲಂಕಾರ, ಆಕಾರ ಇರಬೇಕು ಅದ್ದರಿಂದ ನಾಟಕಕಾರ ಇಂತಹ ಎಲ್ಲಾ ಬಂಧನಗಳಿಂದ ಬಿಡುಗಡೆ ಹೊಂದಿ ಬಂದರೆ, ಆತನು ಬರೆದ ಕೃತಿ ಅಕಾಲಿಗೆ ಕೀರ್ತಿಯನ್ನು ತರುತ್ತದೆ.

ನಾಟಕವು ವ್ಯಕ್ತಿಗಾಗಿ ಅಲ್ಲ. ಜನ ಸಮೂಹಕ್ಕೆ ನಾಟಕವು ಒಂದು ಕಲೆ ಸಹಜ. ಆದರೆ ಸೌಂದರ್ಯವನ್ನ ಪಡೆಯುವುದು, ಬಿಡುವುದು ಜನ ಸಾಮಾನ್ಯಕ್ಕೆ ಸಾಧ್ಯವಿಲ್ಲ. ಕಲಾವಿದ ಶಿಲ್ಪಿಯ ಅಭಿಪ್ರಾಯವನ್ನು ಅಪೇಕ್ಷಿಸುತ್ತಾನೆ ಅದರಿಂದ ಗಣ್ಯರಿಲ್ಲವಾಗಿರೆ, ಅದು ಉತ್ತಮ ನಾಟಕವೆಂದು ಪರಿಗಣಿಸಬಹುದು. ಆದರೆ ಈ ಪಕ್ಷವನ್ನು ಹಿಡಿದುಕೊಂಡು ಹೋಗಲು ಸಾಧ್ಯವಿಲ್ಲ ಯಾಕೆಂದರೆ ನಾಟಕ ಒಬ್ಬನಿಗಾಗಿ ಅಲ್ಲ, ಹತ್ತು ಮಂದಿ ತಜ್ಞರಿಗೂ ಅಲ್ಲ, ಜನ ಸಾಮಾನ್ಯರು ಆನಂದ ಪಡೆಯುವುದಕ್ಕಾಗಿ. ಇವರ ನಿಷ್ಕರ್ಷೆಯನ್ನು ನಾಟಕಕಾರ ಅಂಗೀಕರಿಸಬೇಕಾಗುತ್ತದೆ. ಹಿಂಗೆ ಹೇಳುವವರು, ಅಪೇಕ್ಷಿಸುವರು, ಆಗಿಸಿಕರು. ಇದರ ಅಭಿಪ್ರಾಯ ಅಮೂಲ್ಯವೆಂದು ತಿಳಿದು ನಾಟಕ ಬರೆಯುವುದನ್ನು ಬಿಟ್ಟು ಬಿಡಬಾರದು.

ನಾಟಕಕ್ಕೂ ಜೀವನಕ್ಕೂ ತೀರಾ ನಿಕಟ ಸಂಬಂಧವಿದೆ ರಾಗದ್ವೇಷ, ಸ್ತ್ರೀ ಪುರುಷರು, ಯುವಕರು, ವೃದ್ಧರು, ಒಳ್ಳೆಯದ ಕೆಟ್ಟದ್ದು-ನಗು, ಅಳು, ದುಃಖ ಮತ್ತು ದಂತಗಳು ನಾಟಕದಲ್ಲಿ ಬರುತ್ತವೆ. ನಿತ್ಯಜೀವನದಲ್ಲಿ ಬೇಕಾದ ಹೊಂದಿದಾಗ, ಮನೋಲ್ಲಾಸಕ್ಕೆ, ನಾಟಕವನ್ನು ಕಾಣುತ್ತೇವೆ. ಎಷ್ಟೋ ಬಾರಿ ಇದರಿಂದ ಒಳ್ಳೆಯದನ್ನು ಕಂಡುಕೊಳ್ಳಲ ಪ್ರಯತ್ನ ಪಡುತ್ತವೆ. ನಿತ್ಯಜೀವನ ಬಂಧನದಿಂದ ಬಿಡುಗಡೆ ಪಡೆಯಲು ಸ್ವಲ್ಪ ಸಮಯ ಹೋಗಿ ಸಂತೃಪ್ತಿ ಪಡೆಯುತ್ತೇವೆ.

ಒಂದೇ ಸಮುದಾಯದಲ್ಲಿ ಸಾವಿರಾರು ಜನರ ಆಂತಃಕರಣ ಕರಗಿಸುವ ಸಾಮರ್ಥ್ಯ ಈ ಒಂದು ಕಲೆಗೆ ಮಾತ್ರ ಇದೆ ಆದ್ದರಿಂದಲೇ "ಕಾವ್ಯೇಷು ನಾಟಕಂ ರಮ್ಯಂ".

ಬ ಆದೇ ವಚನವು ಭಗವಂತನ ದಯೆಯಿಂದ ಪಾಕಿಸ್ತಾನದಲ್ಲಿಯೇ ಅತಿ ಶೀಘ್ರದಲ್ಲಿ ಕಾರ್ಯಗತವಾಗುವಂತೆ ಕಾಣಿಸುತ್ತಿದೆ.

We have pleasure in announcing
the appointment of

M/S. SUPREME MOTORS

BALMATTA ROAD :: MANGALORE-1

as our Distributors for

TEMPO VIKING 4-WHEELERS
TEMPO 3-WHEELERS
&
THEIR SPARE PARTS.

For the Districts of

(1) SOUTH KANARA (2) SHIMOGA,
(3) CHIKMAGALUR and (4) COORG only

BAJAJ TEMPO LIMITED,

BOMBAY-POONA ROAD, CHINCHWAD-POONA: 19.

ಧರ್ಮ ಪಥ

ನೂಪುರೇ ತ್ವಭಿ ಜಾನಾಭಿ

ತೆಲುಗು ಮೂಲ: ಶ್ರೀ ಬುಲುಸು ವೆಂಕಟೇರಮಣಯ್ಯ
ಕನ್ನಡ: ಶ್ರೀ ಬಪ್ಪನಾಡು ಭಗವಾನ್‌ದಾಸ್

ಭಾರತೀಯರಿಗೆ ಭಾರತ, ರಾಮಾಯಣ ಭಾಗವತಾದಿಗಳು ಎಣೆಯಿಲ್ಲದ ಧರ್ಮ ಗ್ರಂಥಗಳು. ಇವುಗಳಲ್ಲಿ ಭೇದಗಳನ್ನು ಗುರುತಿಸುವುದು ಸಾಧ್ಯವಿದೆ. ಸದುಪದೇಶಗಳನ್ನು ಮಾಡುವದರಲ್ಲಿ ಇವುಗಳಿಗೆ ಸಮಪ್ರಧಾನವಿರುವದಾದರೂ ದೃಷ್ಟಿಗಳು ವಿಭಿನ್ನವಾಗಿ ಕಂಡುಬರುತ್ತವೆ.

ಭಾರತವು ಇತಿಹಾಸ ಸಂಬಂಧ, ರಾಮಾಯಣ ಮಹಾ ಕಾವ್ಯ. ಭಾಗವತವು ಪುರಾಣ. ಸಂಸ್ಕೃತ ವಾಙ್ಮಯದಲ್ಲಿ ಮೊದಲನೆಯ ಕಾವ್ಯವೇ ರಾಮಾಯಣ. ಆದುದರಿಂದಲೇ ಇದಕ್ಕೆ "ಆದಿಕಾವ್ಯ"ವೆಂದು ಹೆಸರು ಪ್ರಸಿದ್ಧವಾಯ್ತು.

ರಾಮಾಯಣವು ಕಾವ್ಯವಾದುದರಿಂದ ಪುರಾಣದಲ್ಲಿರುವಂತೆ ಅಭೂತ ಕಲ್ಪನೆಯೂ ಅಲೌಕಿಕ ಊಹಾತೀತ ಸಂಘಟನೆಯೂ ಬಲೀ ಇರಲು ಸಾಧ್ಯವಿಲ್ಲ. ಪಾತ್ರ ಆಯೂ ರಸಕ್ಕನುಗುಣವಾಗಿ ಪೋಷಿಸಲ್ಪಟ್ಟಿದೆ. ಶೀಲವರ್ಣನೇ ಮಹೋದ್ದಾತ್ತವಾಗಿ ನಿರ್ವಹಿಸಲ್ಪಟ್ಟು ಕಾವ್ಯ ಪ್ರಯೋಜನವನ್ನು ಭವ್ಯವಾಗಿರಿಸಿರುವನು.

ಕುಟುಂಬದಲ್ಲಿ ಹಿರಿಯಣ್ಣನು ತಂದೆಗೆ ಸಮಾನನೆಂದೂ, ಆತನ ಪತ್ನಿ ತಾಯಿಗೆ ಸಮಾನವೆಂದೂ ಭಾರತೀಯ ಭಾವನೆ. ಆಗಲೂ ಈಗಲೂ ಭಾರತೀಯರಲ್ಲಿ ಈ ಭಾವನೆ ಅಚಲವಾಗಿರುವದಕ್ಕೆ ಮೂಲ ಕಾರಣ ರಾಮಾಯಣವೆಂದೇ ಹೇಳಬಹುದು. ಎಷ್ಟೋ ಕುಟುಂಬಗಳಲ್ಲಿ ತಂದೆ ತಾಯಿಗಳ ಲೇಸನ್ನು ಅತ್ತಿಗೆಯೇ ಹುಂಬಿಸಿ ವೈದುನರಿಗೆ ವಿದ್ಯಾ ಬುದ್ಧಿಯನ್ನಿತ್ತು ಪೂರ್ಣ ವಾತ್ಸಲ್ಯದಿಂದ ನೋಡುವಂಥವುದರಲ್ಲಿ ಅತಿಶಯೋಕ್ತಿ ಏನಿಲ್ಲ! ಇದು ತನ್ನ ಧರ್ಮವೆಂಬ ಭಾವನೆ ಆ ಅತ್ತಿಗೆಯಲ್ಲಿ ಬೇರೂರಿರುವದು.

ಅಣ್ಣನೊಂದಿಗೆಯೇ ಪ್ರಪಂಚವೆಂದು ನೆನೆದು ರಾಮನೊಂದಿಗೆ ಕೂಡ ಹೆಚ್ಚಿನ ಸಂತೋಷದಿಂದ ಅಡವಿಗೆ ಪ್ರಯಾಣವಾದ ಲಕ್ಷ್ಮಣನ ವಿಷಯವಾಗಿ ಬೇರೆ ಹೇಳಬೇಕಾದುದೇನಿಲ್ಲ. ಅಣ್ಣನ ಸುಖಕ್ಕಾಗಿ ತನ್ನ ಸುಖವನ್ನೇ ಮರೆತು ಆರಂಭಿಸಿದಂಥ ಉರ್ಮಿಳೆಯನ್ನು ಕೂಡ ಬಿಟ್ಟು ಅಡವಿ ಗೈದ ಲಕ್ಷ್ಮಣನ ತ್ಯಾಗ ಬುದ್ಧಿ ಎಷ್ಟೊಮ್ಮೆ ಚ್ಚುಕೊಳ್ಳುವಂಥದ್ದು. ಭ್ರಾತೃ ಪ್ರೇಮ ದೊಡನೆ ನಮಗೆ ಭರತನೇ ಜ್ಞಾಪಕಕ್ಕೆ ಬರುವನಲ್ಲದೇ ಲಕ್ಷ್ಮಣನನ್ನು ಕುರಿತು ಯೋಚಿಸಿದಲ್ಲಿ ಲಕ್ಷ್ಮಣ ಎಣೆ ಪ್ರಸಂಗದಲ್ಲಾರೂ ಇಲ್ಲ.

ವನವಾಸದಲ್ಲಿರುವಾಗ್ಗೆ ಲಕ್ಷ್ಮಣನು ಅಣ್ಣ—ಅತ್ತಿಗೆಯನ್ನು ಕಜ್ಜಿಗ ರೆಪ್ಪೆಯಂತೆ ಕಾಪಾಡಿದನು. ಅವರ ಸೌಕರ್ಯಕ್ಕಾಗಿ ನಾನಾ ಅವಸ್ಥೆಪಟ್ಟನು. ಹಪ್ಪ ತಾಯಿಗೆ ತೋರಿಸುವದಕ್ಕಿಂತಲೂ ಹೆಚ್ಚಿನ ಭಕ್ತಿ, ಪ್ರೇಮ, ಗೌರವವನ್ನು ಸೀತಾದೇವಿಗೆ ತೋರಿಸಿದನು.

ರಾಮನು ಮಾಯಾ ಮೃಗವನ್ನು ಬೇಟೆಯಾಡುವುದಕ್ಕೆ ಹೋಗುವ ಸಂದರ್ಭ ಸೀತಾದೇವಿಯನ್ನು ಭದ್ರವಾಗಿ ನೋಡೆಂದು ಹೇಳಿ ಹೊರಟನು. ಪರ್ಣ ಶಾಲೆಯನ್ನು ಬಿಟ್ಟು ಹೋಗಬಾರದೆಂದು ರಾಮಾಜ್ಞೆ; ಧನುರ್ಬಾಣಗಳನ್ನು ಹಿಡಿದು ಲಕ್ಷ್ಮಣನು ಅಣ್ಣನ ಆಜ್ಞೆಯನ್ನು ಶಿರಸಾ ವಹಿಸಿದನು.

ಆದರೇನು? ಆತನು ಪರ್ಣಶಾಲೆಯನ್ನು ಬಿಟ್ಟು ರಾಮನ ಸಹಾಯಾರ್ಥವಾಗಿ ಹೋಗಬೇಕಾಗಿಬಂದು. ಮಾಯಾವಿಯೂದ ಆ ಮೃಗವು ರಾಮನ ಕಂಠವನ್ನು ನುಕರುಣೆ ಮಾಡಿ 'ಹಾ ಲಕ್ಷ್ಮಣಾ!" ಎಂದು ದೊಡ್ಡ ಬೊಬ್ಬೆ ಹಾಕಿದುದನ್ನು ಕೇಳಿದೊಡನೆಸೀತೆಭಯಕಂಪಿತಳಾಗಿ ಶ್ರೀರಾಮನು ಅಪಾಯದಲ್ಲಿರುವನೆಂದು ಭ್ರಾಂತಿಗೊಂಡುಅಣ್ಣನಿಗೆಸಹಾಯವಾಗಿಹೋಗೆಂದು ಲಕ್ಷ್ಮಣನನ್ನು ಕೋರಿದಳು. "ಇದು ರಾಕ್ಷಸ ಮಾಯ. ಅಣ್ಣಯ್ಯನೆಂದಿಗೂ ಆಕ್ರಂದಿಸರೆಂದು'. ಎಷ್ಟು ವಿಧವಾಗಿ ಸಮಾಧಾನಪಡಿಸಿದರೂ ಸೀತೆಯ ತಲೆಗೇರಲಿಲ್ಲ. ಅವಳು ವೈದುನನನ್ನು ಹೋಗಲೇ ಬೇಕೆಂದು ನಿರ್ಬಂಧಿಸಿದಳು. ಆದರೆ ಅಣ್ಣನ ನಿಜ ಸತ್ವವನ್ನರಿತ ಲಕ್ಷ್ಮಣನು ಚಲಿಸಲಿಲ್ಲ. ಕೊನೆಗೆ ವಿಧಿಯಿಲ್ಲದೆ ಅವಳು ಹೇಳುವ ಕರ್ಣಕಠೋರವಾದ ಮಾತನ್ನು ಕೇಳಲಾರದೆ ಪರ್ಣಶಾಲೆಯನ್ನು ಬಿಟ್ಟು ಹೋಗಬೇಕಾಯ್ತು. ಸರ್ವದಾ ಅವಳ ಪಾದಗಳನ್ನೇ ಸೇವಿಸುತ್ತಾ, ಕಣ್ಣೆತ್ತಿ ಅವಳ ಮುಖವನ್ನು ಸಹಿತ ನೋಡುವ ಪಾಪಕ್ಕೆ ಲಕ್ಷ್ಮಣನು ಹೋದವನಲ್ಲ. ಅಂಥ ಪಾವನ ಪುರುಷನನ್ನು ಅವಳು ಕಠಿಣವಾಗಿ ಮೂಕವಾಡಲು ಅದನ್ನು ಕೇಳ ಅವನೆಂತು ಸಹಿಸಿ ಅಲ್ಲೇಯಿರಬಲ್ಲನು?

ಅವನು ಅಣ್ಣನಿಗಾಗಿ ಹೋಗುವದೇನು? ರಾವಣನು ಸನ್ಯಾಸಿ ವೇಷದಲ್ಲಿ ಬರುವದೇನು ಎರಡೂ ಒಂದು ಗಳಿಗೆಯಲ್ಲೇ ಜರುಗಿತು. ರಾವಣನು ಬಲಾತ್ಕಾರವಾಗಿ ಸೀತೆಯನ್ನು ಪುಷ್ಪಕದಲ್ಲಿ ಕುಳ್ಳಿರಿಸಿ ಹೋಗುತ್ತಿರುವಾಗ ಅವಳು ತನ್ನಲ್ಲಿರುವ ಆಭರಣಗಳನ್ನೆಲ್ಲಾ ನೂಟಿಕಟ್ಟಿ ಕೆಳಗೆ ಬಿಸಾಡಿದಳು. ಒಂದು ವೇಳೆ ಅದು ಶ್ರೀರಾಮನಿಗೆ ಸಿಕ್ಕಿದರೆ ತನ್ನನ್ನು ಕುರಿತು ಊಹಿಸಲು ಸಹಾಯವಾದೀತೆಂದು ಅವಳ ಭಾವನೆ.

ಆದೃಷ್ಟ ವಶಾತ್ ಆ ಆಭರಣಗಳು ವಾನರರಿಗೆ ಸಿಕ್ಕಿ ಅವರು ರಾಮನಿಗವನ್ನು ತೋರಿಸಿ 'ಇವು ನಿನ್ನ ಸೀತಾದೇವಿಯ ಆಭರಣಗಳೇನೋ ಗುರ್ತಿಸಿರೆಂದು ಮನವಿ ಮಾಡಿದರು ಸೀತಾ ವಿಯೋಗ ಸಂತಪ್ತ ಮಾನಸನಾದ ಶ್ರೀ ರಾಮನಿಗೆ ಅವುಗಳನ್ನು ನೋಡಿದೊಡನೆ ದುಃಖ ವುಕ್ಕಿ ಹರಿಯಿತು ಕಣ್ಣೀರು. ಸಂತತ ಧಾರೆಯಾಗಿ ಹರಿಯುವುದರಿಂದ ಎದುರಿಗಿರುವ ವಸ್ತುಗಳೇ ಕಾಣಲಾರದಾಯ್ತು. ಇನ್ನು ಆ ಆಭರಣಗಳು ಅವನ ಪ್ರೀತಿಯು ಸೀತೆಯದೋ ಅಲ್ಲ ಬೇರೆಯವರದೋ ಎಂದು ಹೇಗೆ ಊಹಿಸ ಬಲ್ಲನು?

ಅವನು ಲಕ್ಷ್ಮಣನತ್ತ ತಿರುಗಿ "ಅನುಜಾ! ಈ ಆಭರಣಗಳು ನಿನ್ನ ಅತ್ತಿಗೆಯುವೋ ನೋಡೆಂದು ಹೇಳಲು ಲಕ್ಷ್ಮಣನು ಹೇಳಿದ ಸವಧಾನನೇನು ಗೊತ್ತೆ?"

ನಾಹಂ ಜಾನಾಮಿ ಕೇಯೂರೇ
ನಾಹಂ ಜಾನಾಮಿ ಕುಂಡಲೇ
ನೂಪುರೇ ತ್ವಭಿ ಜಾನಾಮಿ
ನಿತ್ಯಂ ಪಾದಾಭಿ ವಂದನಾತ್

"ಇವು ಅವಳ ಭೂಷಣ ಕೀರ್ತಿ ಆಹುದೋ ಅಲ್ಲವೋ ನನಗರಿಯದು ಇವು ಅವಳ ಕರ್ಣಾಭರಣಗಳೊ ಅಲ್ಲವೋ ಕೂಡ ನನಗರಿಯದು ಸತತವೂ ಅವಳ ಪಾದ ಪದ್ಮಗಳಗಭಿನಂದನೆಯನ್ನು ಮಾಡುವದರಿಂದ ಅತ್ತಿಗೆಯ ಕಾಲಂದುಗೆಗಳನ್ನು ಮಾತ್ರ ಗುರುತು ಹಿಡಿಯ ಬಲ್ಲೆನು.

ಸೀತಾದೇವಿಯ ಪಾದ ಪದ್ಮಯುಗಳಗಳನ್ನೇ ಆಲ್ಲದೇ ಇನ್ನಾವವಯವುಗಳನ್ನೂ ಕಣ್ಣೆತ್ತಿ ನೋಡದ ಲಕ್ಷ್ಮಣನಿಗೆ ಅವಗಾಹನೆಯೂ ಅವಯವಗಳಲ್ಲಿ ಧರಿಸುವ ಆಭರಣಗಳ ಗುರುತು ಹೇಗೆ ತಿಳಿದೀತು? ಇದರಿಂದಲೇ ಲಕ್ಷ್ಮಣನ ಶೀಲವೆಂಥಹುದೆಂದು ಗ್ರಹಿಸಬಹುದು. ಈ ಉತ್ತಮ ಶೀಲವನ್ನು ಮನವರಿಕೆಯಾಗುವಂತೆ ಒಂದೆ ಒಂದು ಶ್ಲೋಕದಲ್ಲಿ ಚಿತ್ರಿಸಿದ ಆದಿಕವಿ ವಾಲ್ಮೀಕಿಯ ಪ್ರತಿಭೆಯನ್ನು ಆಳೆಯಲು ಯಾರಿಂದ ತಾನೇ ಸಾಧ್ಯವಾದೀತು?

ಜೀವಂತವಿರುವಾಗ ಪ್ರೇಮದ ಅಮರತ್ವವಿರಲಿ; ಸತ್ತಾಗ ಕೀರ್ತಿಯ ಅಮರತ್ವವಿರಲಿ. —ರಾಗೋರ್

○ ○ ○

ಭಾವನಾ ಪ್ರಪಂಚದಲ್ಲಿ ವಿಹರಿಸದ ಇಲ್ಲವೇ ಬೆಂಕನೆಗೆ ಅವಕಾಶ ಕೊಡದ ಜೀವ ದೂರ ದರ್ಶಕವಿಲ್ಲದ 'ಆಲ್ಟಿರ್ನೇಟಿವ್' ಇದ್ದಂತೆ. —ಬೀಚರ್

ಬೇಕಾಗಿದ್ದಾರೆ

ಪ್ರಿಂಟಿಂಗ್ ಪ್ರೆಸ್ಸಿನ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡಲು ಸಾಕಷ್ಟು ಅನುಭವಸ್ಥ ಕೆಲಸಗಾರರು ಬೇಕಾಗಿದ್ದಾರೆ, ಸಂಬಳ ಯೋಗ್ಯತಾನುಸಾರ. ಕನಿಷ್ಟ 8ನೇ ತರಗತಿವರೆಗಾದರೂ ಓದಿದ ಕೆಲವು ಹುಡುಗರನ್ನು ತರಬೇತಿಗಾಗಿಯೂ ಸೇರಿಸಿಕೊಳ್ಳಲಾಗುವುದು

ವಿಚಾರಿಸಿರಿ: —

ನವಯುಗ ಪ್ರೆಸ್, ಉಡುಪಿ,
ದ. ಕ.

ಉಡುಪಿ ಲೇಂಡ್ ಟ್ರಿಬ್ಯುನಲ್ ಕೋರ್ಟಿನಲ್ಲಿ

L. T. O. P. 49/1967

U. ರಾಮಪ್ಪಯ್ಯ ಶ್ಯಾನುಭಾಗ—ಅರ್ಜಿದಾರ

ಮತ್ತು

ಸೋಮಯ್ಯ ಶೆಟ್ಟಿ ಕೂಡಾ —ಎದ್ರಿರು

ಇವರೊಳಗೆ

ಎದ್ರಿರು:- 1. ಸೋಮಯ್ಯ ಶೆಟ್ಟಿ 2. ಶಿವ ಶೆಟ್ಟಿ-ಸಿಂಧು ಶೆಟ್ಟಿರ ಮಾಳ್ಕಳು, ಉಡ್ಪಿ ತಾಲೂಕ್ಕೆ ಇನ್ನಂಜೆ ಗ್ರಾಮದ ಮಾಡಂಬು-ಯಿವರಿಗೆ ಈ ಮೊಲಲ್ ತಿಳಿಯ ಪಡಿಸುವದೇನಂದ್ರೆ ಅರ್ಜಿದಾರಗೆ ನಿಮ್ಮಿಂದ ತಳದ ವಿಶ್ವವಸು ಸಂವತ್ಸರಕ್ಕೆ ಬಡಾ ಮೂಲಗೇಣಿಯನ್ನು ನ ಸೂಲು ಕೇಳಿ ಪಾತ್ರಲು ಮೂಡಿದ ಮೇಲ್ಕಂಡ ಅರ್ಜಿಯು ತಾರೀಕು 30—10—1967ಕ್ಕ ಯಿಟ್ಟಿದೆ ಉವಾದರಿಸುವಂಗಾದ್ದಿದ್ದರೆ ಆ ದಿನ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟ್ ಮುಂದೆ ಹಾಜ್ರಾಗಿ ಜ್ಯಾಬ್ತೀದಾ ಮಾಡಿಕೊಳ್ಳ ಬಹುದು-ಕಪ್ತಿದ್ರೆ ನಿಮ್ಮ ಗೈರು ಹಾಜರಿಯಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

ಕೋರ್ಟಿನ ಹುಕುಂ ಪ್ರಕಾರ

K. Balachandra Rao
Advocate for Petitioner

Udipi, 29—9—1967

ಶಾಲೆಗಳಿಗೆ ಬೇಕಾಗುವ
ರಿಜಿಸ್ಟ್ರಿ, ಫಾರ್ಮುಗಳಿಗೆ—
ವ್ಯಾಪಾರಿಗಳಿಗೆ ಬೇಕಾಗುವ
ವರ್ಗ, ಊಳಿಗ ಮೊದಲಾದ
ಎಕೌಂಟು ಪುಸ್ತಕಗಳಿಗೆ—
ಕೋರ್ಟುಗಳಿಗೆ ಬೇಕಾಗುವ ಫಾರ್ಮುಗಳಿಗೆ

ದಯವಹಾಡಿ ವಿಚಾರಿಸಿರಿ

ನವಯುಗ ಪ್ರೆಸ್

ಮುದ್ರಕರು ಮತ್ತು ಪ್ರಕಾಶಕರು,
ಪಾಲುಕೋಟೆ, ಉಡುಪಿ, ದ. ಕನ್ನಡ.

ಉಡ್ಪಿ ಲೇಂಡ್ ಟ್ರಿಬ್ಯುನಲ್ ಕೋರ್ಟಿನಲ್ಲಿ

I. T. O. P. 82/1967.

ರೋಜಾ ರೊಜೆಲ್ಲೊ ಡ್ಯಾ - ಅರ್ಜಿದಾರರು

ಮತ್ತು

ಮುತ್ತಕ್ಕ ಪುರಂಕಾಲ್ತಿ ಕೂಡಾ— ಎದ್ರಿರು

ಇವರೊಳಗೆ

1. ಮುತ್ತಕ್ಕ ಪುರಂಕಾಲ್ತಿ-ಅತ್ತು ಪುರಂಕಾಲನ ಮೊಮ್ಮಗಳು 2. ವಿಠಲ ಮಲೆಕಾಲ- ಒಂದನೆಯವಳ ಮಗ.

ಉಡ್ಪಿ ತಾಲೂಕು ಉಪ್ಪೂರು ಗ್ರಾಮದ ಕುದ್ರುಬೆಟ್ಟು.

ಅರ್ಜಿದಾರಳಿಗೆ ನಿಮ್ಮಿಂದ ತಳದ ವಿಶ್ವವಸು ಸಂವತ್ಸರಕ್ಕೆ ಬಡಾ ಗೇಣಿ ವಸೂಲು ಕೇಳಿ ದಾವಿಲು ಮೂಡಿದ ಮೇಲ್ಕಂಡ ಅರ್ಜಿಯು ತಾ. 13 11—1967ಕ್ಕೆ ಯಿಟ್ಟಿದೆ ಉವಾದರಿಸುವಂತಾಗಿದ್ದಿದ್ದರೆ ಆ ದಿನ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಬ್ತೀದಾ ಮಾಡಿಕೊಳ್ಳ ಬಹುದು. ಕಪ್ತಿದ್ರೆ ನಿಮ್ಮ ಗೈರು ಹಾಜರಿಯಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟಿನ ಹುಕುಂ ಪ್ರಕಾರ

K. Balachandra Rao
Advocate for Petitioner

Udipi, 29—9—67

ಎಲ್ಲೆಲ್ಲಿ ಏನೇನು?

ಗಾಂಧಿ ಜಯಂತಿ ಆಚರಣೆ

ತಾ. 2ರಂದು ಮಹಾತ್ಮಾಗಾಂಧೀಜಿಯವರ ಜಯಂತಿಯನ್ನು ಬೋಳ್ಕ ಸೇವಾ ಸಮಾಜ ಸೇರಿಂದ ಶಾಲೆಯಲ್ಲಿ ಆಚರಿಸಲಾಯಿತು ಸಂಸ್ಥೆಯ ಅಧ್ಯಕ್ಷರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ದೇವಪ್ಪಾಜ್ಞರು ಗಣ್ಯ ಅತಿಥಿಗಳಾಗಿ ಬಂದಿದ್ದು ಗಾಂಧೀ ಜೀವನದ ಮಹತ್ವವನ್ನು ಹೇಳಿದರು. ಶ್ರೀ ರಾಮಚಂದ್ರ ಗೌಡರು ಗಾಂಧೀ ಜೀವನದ ಮುಖ್ಯ ಘಟನೆಗಳನ್ನು ಬಣ್ಣಿಸಿದರು. ನಂತರ ಅಧ್ಯಕ್ಷರು ಗಾಂಧೀಜಿಯವರು ಸಾರಿದಂತಹ ಧರ್ಮ, ಶಾಂತಿ, ಸತ್ಯ ಮೊದಲಾದ ತತ್ವಗಳನ್ನು ಜೀವನದಲ್ಲಿ ಬಳಸಲು ಸಭೆಗೆ ಕರೆಯಿತ್ತರು.

ಉದ್ಘಾಟನೆ

ಮೂಲ್ಕಿ, ಇಲ್ಲಿಯ ಕರ್ಕಾರ ಹೈಸ್ಕೂಲಿನ ಕಲಾಭವನದಲ್ಲಿ ತಾ. 30—9—67ರಂದು ಶ್ರೀ ಮ. ಗೋ. ರಾಯರ ವಿರಚಿತ 'ಕಾಂಚನ ಕೃಷ್ಣಾರ' ಎಂಬ ಕನ್ನಡ ಸಾಮಾಜಿಕ ನಾಟಕದ ಉದ್ಘಾಟನೆ ಮತ್ತು "ಮುಹೂರ್ತ" ಸಮಾರಂಭವು ಹಿರಿಯ ಕನ್ನಡ ಪಂಡಿತರಾದ ಶ್ರೀ ಕೆ. ಜಿ. ಸೋಮಯ್ಯನವರಿಂದ ಉದ್ಘಾಟಿಸಲ್ಪಟ್ಟಿತು ಶ್ರೀ ಕೆ. ಸಂಜೀವ ಸುವರ್ಣ ಇವರು ಸಭಾಧ್ಯಕ್ಷತೆ ವಹಿಸಿದ್ದರು. ಈ ನಾಟಕವನ್ನು ಪ್ರಸ್ತುತಪಡಿಸಲಾ ಸಾಹಿತ್ಯ ಸಂಘದ ಅಲಂವಿದರು ಅಕ್ಟೋಬರ್ ತಾ. 28 ರಂದು ಮಂಗಳೂರಿನ ಪುರಭವನದ ರಂಗ ಮಂಟಪದಲ್ಲಿ ಅಖಿಲ ಸಂಗೀತ ಸಭಾ ಮಂಗಳೂರು ಇವರ ವತಿಯಿಂದ ಗೃಹಾ

ಮಾನವ ತನದಿಂದ ದೇವತನ ದತ್ತ

(ನಾಲ್ಕನೇ ಸುಜ ದಿಂಬ)

1. "ಅಲ್ಲ, ಬಿದಕ್ಕಂತ ಮನುಷ್ಯರನ್ನು ಗುಂಡಿಟ್ಟುಕ್ಕಾಲ್ಲ ಬಹುದಲ್ಲಾ!'

'ಅಯ್ಯೋ! ಏನಿದು? ದಾನವರೇಷ್ಠು ನೀವು?'

'ಮತ್ತೊರಂತೆ? ನೋಡಿ ಗರ್ಭ ಮೊಳೆಯಿತು ಅಂದರೆ, ಅದಕ್ಕೂ ಮೂಲ ಭೂತ ಅಧಿಕಾರ ಬೇಡವೆ? ಅದಕ್ಕೂ ತಾಯಿ ಹೊಟ್ಟೆಯಲ್ಲಿ ಎಗುವಾಗ ಬಳಿಯುವ, ಬಿಳಿದು ವಿಶಾಲ ದೇಶದಲ್ಲಿ ಸಂಚರಿಸುವ ಅಧಿಕಾರವಿಲ್ಲವೆ?"

"ಹಷ್ಟಾಂ .ಇದು ಒಳ್ಳೆಯ ಸವಾಲು. ಆದರೆ, ಭಾರತದಲ್ಲಿ ಯಿಟ್ಟಿದವಸನ್ನೇ ಭಾರತೀಯನನ್ನ ಬೇಕಾದಿರೆ, ವಿನೋ ಕೃಮವಿದ. ಅಂತೂ ಆತ ಭಾರತೀಯ ನಾಗರಿಕನಾದರ ತೀರಿತು, ಮೂಲಭೂತ ಅಧಿಕಾರವಿಧಿಯೆಯೆಷ್ಟೆ. ಹುಟ್ಟದಿತಾರೀಕನ್ನು ಎಂತ್ರ ದಾಖಿಲ ಮಾಡಿತ್ತಿರೆಯೇ ಹೊಂತಿ..."

"ನೋಡಿ, ನೀನು ಏನೇ ಅನ್ನಿ. ಇದರಿಂದ ಮಾನವತ ದೂರವಾಗುತ್ತಿದೆ. ಮಾನವತೆಗೆ ಮಾಡಾ ಅನ್ಯಾಯವಾಗುತ್ತಿದೆ'

'ಆಯ್ತು, ನಾವು ನಡೆಯುತ್ತಿರುವುದು ದೇವತನವಲ್ಲ...."

"ಓಹೋ ಮಾನವತನದಿಂದ ದೇವತನ ದತ್ತವೆ! ಇಷ್ಟರಲ್ಲಿ ಇವಲ್ಲಾ ಕಾನೂನು!'

"ಶ್ಯಾ ನಿದ್ಯ ಸಾವಕ್ಕಿಕೆ ಈ ಬಗ್ಗೆ ಚಿಂತೆ ಮಾಡ್ಬೇಕೂ ಇಲ್ಲ..."

'ಹಷ್ಟಾಂ....ತಿಳಿಸಲು ಬಹುದೆಯಾಯಿತು ...."

"ಸಪ್ಪೆ ಅಷ್ಟಕ್ಕೆದ್ದೆ ಸರಿ...."

"ಹಷ್ಟಾಂ—"

—ಗೋರಾ.

ನಾಟಕವಾಗಿ ಅಭಿನಯಿಸಲ್ಪಡುವುದು ಎಂದು ನಿರ್ಧರಿಸಲಾಗಿದೆ.

ಯಕ್ಷಗಾನ

ದೇಲಂಬಾಡಿ ಬನಾರಿ ಶ್ರೀ ಗೋಪಾಲ ಕೃಷ್ಣ ಯಕ್ಷಗಾನ ಕಲಾ ಸಂಘದಿಂದಲ್ಲಿ ಕಳೆದ ತಾ 30ರಂದು "ಗಿರಿಜಾಕಲ್ಯಾಣ" ಎಂಬ ಕಥಾ ಭಾಗದ ಯಕ್ಷಗಾನ ಕೂಟವು ಶ್ರೀ ಗೋಪಾಲ ಕೃಷ್ಣ ಯಕ್ಷಗಾನ ಸಂಘದವರಿಂದ ನಡೆಸಲ್ಪಟ್ಟಿತು.

ಶ್ರೀ ಕೇದಗಡಿ ಗಡಿಸ್ಥ ಗೌಡರವರ ವತಿಯಿಂದ ಜರಗಲ್ಪಟ್ಟ ಈ ಕಾರ್ಯಕ್ರಮದಲ್ಲಿ ಸರ್ವ ಶ್ರೀ ಕೇವ ಕೇರವ, ಬಂದ್ಯಡ್ಕ ಅಣ್ಣಯ ಗೌಡ, ಮಣಿಂಜರು ಈಶ್ವರ ಸರಳಾಯ, ಲಕ್ಷ್ಮೀನಾರಾಯಣ ಕುಂಜತ್ತಾಯ ಕಂಡೆತ್ತೋಡಿ ಶ್ರೀಧರ ಕೇಕುಡ್ಡಾಯ, ಯು. ಬಿ. ಗೋವಿಂದ ಭಟ್ಟ, ಯನ್. ನಾರಾಯಣ ನಾಯರ್ಕ, ಕುಂಬಡಾಜೆ ಮೂರ್ತಿ ಜತ್ತಪ್ಪೆ, ಟಿ. ಕೆ. ಪರಮೇಶ್ವರ, ಗೋಪಾಲಕೃಷ್ಣ ಕಲ್ಲೂರಾಯ, ಕೆ ಯಸ್. ವೆಂಕಟ್ರಮಣ ಭಟ್ಟ, ಸಂಕಪ್ಪಗೌಡ, ಬಿ ಸಿ ವಿನೋದ, ಯಂ ನಾರಾಯಣ ರೈ, ಸಂತಪ್ಪಗೌಡ ಲಕ್ಷ್ಮಣಗೌಡ, ಕಿಮ್ಮಪ್ಪಗೌಡ, ಕಲ್ಲಡ್ಕ ಬಾಬು ರೈ, ಮತ್ತು ಬಿ. ಶ್ರೀಧರ—ಅವರುಗಳು ಪಾಲ್ಗೊಂಡಿದ್ದರು

ಕೇರ್ತನೆ

ಅಂಬಲಪಾಡಿ, ಮಜಂಕಾಳೀ ದೇವಸ್ಥಾನದಲ್ಲಿ ಉಡಿಯೂರಿನ ಶ್ರೀ ವಿರಲಾಚಾರ್ಯನಿವರಿಂದ ಹರಿಕೀರ್ತನೆ ನಡೆಯಲ್ಪಟ್ಟಿತು. ಹಿಮ್ಮೇಳದಲ್ಲಿ ಶ್ರೀ ನ ರಾಮಣ ಶೆಟ್ಟಿಗೂ ಶ್ರೀ ಜನಾರ್ಧನ ಆಚಾರಿಯವರೂ ಸಹಕರಿಸಿದ್ದರು. ಆಡಳಿತದಾರ ಶ್ರೀ ಅಣ್ಣಾಜೀ ಬಲ್ಲಾಳರು ಸಂಭಾವನೆ ಪ್ರಸಾದ ಕೊಡಿಸಿ ಕಲಾಗಾರರನ್ನು ಸತ್ಕರಿಸಿದರು.

ಗಾಂಧೀ ಜಯಂತಿ

ಬೆಂಗಳೂರು, ಗಾಂಧೀ ಜಯಂತಿಯಂದು ನಾವು ಯಾವುದಾದರೂ ಒಂದು ಕಡೆ ತೊಟ್ಟು ದುಂದೆ ಸಾಗುವ ನಿರ್ಧಾರ ಕೈಗೊಳ್ಳಬೇಕು ಅದಕ್ಕಾಗಿ ಎಲ್ಲರೂ ಇಂದಿನಿಂದ ಸ್ವಲ್ಪ ಸ್ವಲ್ಪ ವಾಗಿ ಜೀವನವನ್ನು ಹದಗೆಡಿಸಿ ಕೊಂಡು ಗಾಂಧೀಜಿಯವರು ತೋರಿಸಿದ ಧ್ಯೇಯಗಳನ್ನ ಆದರಣೆಗೆ ತರಲು ಪ್ರಯತ್ನಿಸಿ" ಎಂದು ಡಾ|| ಕೆ. ಎಸ್ ನಾಗಾಂಜನಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಕರೆಯಿತ್ತರು. ಅಕ್ಟೋಬರ್ ಎರಡೆಂದು ಸಾಜೆ ಜಯನಗರ ಎಳನೇ ಬ್ಲಾಕಿನ ಪಾರ್ಕಿನ ಎಂಜಿನಿಯರಿಂಗ್ ಸಂಗಂಜನಾಲಯ ಅಧ್ಯಕ್ಷತೆಯಲ್ಲಿ ಗಾಂಧೀಜಿಯವರ ಜನ್ಮದಿನೋತ್ಸವವನ್ನು ಆಚರಿಸಲಾಯಿತು. ಪ್ರಾರಂಭದಲ್ಲಿ ಕವಿ ನೋ ನೇತ್ಯಾವತಿಯವರಿಂದ ದೇವತಾ ಪ್ರಾರ್ಥನೆಯೊದ ಬಳಿಕ, ಧೀರೇತಿಯ ಪಾಣಿಜ್ಯ ಪದ್ಮಾಶಾಲೆಯ ಪ್ರಿನ್ಸಿಪಾಲ್ ಶ್ರೀ ಬಿ ಕೃಷ್ಣಮೂರ್ತಿಯವರು ಸ್ವಾಗತ ಕೋರಿದರು ಶ್ರೀಮತಿ ರತ್ನಮ್ಮ ಸುಂದರರಾವ್ ಮತ್ತು ಕುಮಾರಿ ನೇತ್ರಾವತಿಯವರು ಡಾ॥ ನಾಗರಾಜನ್ ವಿರಚಿತ ಭಾವಂತಿಂದೀಂ ಸ್ವಾತಿಯನ್ನ 'ವನಸಿರಿ' ವರಚಿತ ಗಾಂಧೀಗೀತೆಗಳನ್ನು ಪಾಡಿದರು, ಆನಂತರ ಶ್ರೀ ಡಿ. ಎಸ್. ಜಯೂನರಾಯಣರವರ ಆರ್ಕಾಡಿಯನ್ ವಾದ್ಯ ಸಂಗೀತ ತಪ್ಪೂ, ಶ್ರೀ ಸೇಲಂ ಶ್ರೀನಿವಾಸರಾಯರವರಿಂದ ಏಕಪಾತ್ರಾಭಿನಯವೂ ನಡೆಯಿತು.

ಆ ಬಳಿಕ ಶ್ರೀ ಎಸ್ ಬಿ ದಾಸಯ್ಯನವರೂ ಶ್ರೀ ಬಿ ಸಿ ಸುಂದರ ರಾಯರೂ ಸಂದರ್ಭೋಚಿತ ಭಾಷಣ ಮಾಡಿದರು ಅಧ್ಯಕ್ಷರ ಭಾಷಣದ ಬಳಿಕ ಧನ್ಯವಾದಾರ್ಪಣೆಯಾಯಿತು.

ಕೃಷಿ ಕ್ಷೇತ್ರ ಸಂದರ್ಶನ

ಮಣಿಪಾಲ ಜಿಲ್ಲೆಯ ಉತ್ತರ ಭಾಗದ ಸುಮಾರು ಐವತ್ತು ಮಂದಿ ಕೃಷಿಕರು ಈ ಭಾಗದ ಸಾಧಾರಣ ಪದ್ಧತಿಯ ಕೃಷಿಕ್ಷೇತ್ರಗಳನ್ನು ಸಂದರ್ಶಿಸುವ ಕಾರ್ಯಕ್ರಮವೊಂದನ್ನು ಮಣಿಪಾಲದ ಸಿಂಡಿಕೇಟ್ ಎಗ್ರಿಕಲ್ಚರ್ ಫೌಂಡೇಶನ್‌ನವರು ತಾ. 10ರಂದು ಸಂಘಟಿಸಿದ್ದರು. ಫೌಂಡೇಷನ್‌ನ ಉಪಾಧ್ಯಕ್ಷ ಶ್ರೀ ಕೆ. ಕೆ. ಪೈಯವರ ನೇತೃತ್ವದಲ್ಲಿ ಕೈಗೊಂಡ ಈ ಪ್ರವಾಸ ಕಾರ್ಯಕ್ರಮದಲ್ಲಿ ಕೃಷಿಕರು ಪಡುವಣೆಯ ಕಾಲಾನದಲ್ಲಿ ಶ್ರೀ ಸಂಜೀವ ಶೆಟ್ಟರ ಹಡ್ಡಿನ ಕೋಟೆ, ಬಿದ್ಕಲ್‌ಕಟ್ಟೆ ಯಲ್ಲಿ ಶ್ರೀ ನೈಲಾಡಿ ಭುಜಂಗ ಶೆಟ್ಟರಹೊಲ್ಯ ಡಾಡಿ ಮತ್ತಿಯಲ್ಲಿ ಶ್ರೀ ನಂದಾಡಿ ನಾರಾಯಣ ಹೆಗ್ಡೇರ ವ್ಯವಸಾಯ ಭೂಮಿ, ಕೊಳ್ಕ ಜೆಕಟ್ಟಿಯಲ್ಲಿ ಶ್ರೀ ಆಂತಯ್ಯ ಹೆಗ್ಡೇರ ಹೊಲ್ ಜೇಕಾಡಿಯಲ್ಲಿ ಶ್ರೀ ರಾಮಚಂದ್ರ ರಾಯರ ಸಪೋಟದಮು ಕೃಷಿಕ್ಷೇತ್ರ, ಆಂಧಾಕಾರಿನಲ್ಲಿ ಶ್ರೀ ಕೆ. ಪದ್ಮನಾಭ ಭಟ್ಟರ ಹೊಲತೋಟಗಳನ್ನು ಸಂದರ್ಶಿಸಿ ಸಾಯಂಕಾಲ ಸಮಾರಂಭ ನೃಸಾಯಕ್ಕಮದ ಬಗೆಗೆ ಪ್ರತ್ಯಕ್ಷ ಅನುಭವವನ್ನು ಪಡೆದರು

ಮಣಿಪಾಲದಲ್ಲಿರುವ ಸಿಂಡಿಕೇಟ್ ಬ್ಯಾಂಕಿನವರು ಏರ್ಪಡಿಸಿದ ಭೋಟನದ ಬಳಿಕ ಕೃಷಿಕರಿಂದ ಪ್ರಶ್ನೆಗಳಿಗೆ ಉತ್ತರವನ್ನು ಫೌಂಡೇಷನಿನ ಸ್ಪಯೋಗ ಕ್ಷೇತ್ರವನ್ನು ಸಂದರ್ಶಿಸಿ ಅಲ್ಲಿಂದಳ ಟಪಾಡಿಯಲ್ಲಿ ಶ್ರೀ ಗೋಪಾಲಕೃಷ್ಣ ನಾಯಕರ ಹೊಲಗಳನ್ನೂ, ಶ್ರೀ ಕಟ್ಟೋಡಿಯಾಲ ಯಿಸ್‌ರವರ ಹೊಲತೋಟಗಳನ್ನೂ ಸಂದರ್ಶಿಸಿ ಬಳಿಕ ಕಟಪಾಡಿಯ ಎಸ್. ವಿ. ಎಸ್ ಕಾಲೇಜು ಆವರಣದಲ್ಲಿ ನಡೆದ ಕೃಷಿಕ ವಿಷಯ ಸಮಾಲೋಚನಾ ಸಭೆಯ ಅಧ್ಯಕ್ಷತೆಯನ್ನು ಶ್ರೀ ಕೆ. ಕೆ. ಪೈಯವರು ವಹಿಸಿದ್ದರು. ಶ್ರೀ ಪಿ. ಗೋಪಾಲಕೃಷ್ಣ ನಾಯಕರು ಕೃಷಿಕರನ್ನು ಸ್ವಾಗತಿಸಿದರು ಸಿಂಡಿಕೇಟ್ ಬ್ಯಾಂಕಿನವರು ಮತ್ತು ಸಿಂಡಿಕೇಟ್ ಎಗ್ರಿಕಲ್ಚರ್ ಫೌಂಡೇಷನಿನವರು ಕೃಷಿ ವಿಚಾರದಲ್ಲಿ ತೋರಿಸುತ್ತಿರುವ ಆಸಕ್ತಿಯನ್ನೂ, ಕೃಷಿಕರಿಗೆ ನೀಡುತ್ತಿರುವ ನೆರವು, ಸಾಲಸೌಕರ್ಯಗಳನ್ನೂ ಪ್ರಶಂಸಿಸಿ ಮಾತನಾಡಿದರು ಶ್ರೀ ಬಾಬು ರಂಜೀಂದ್ರ ಹೆಗ್ಡೇರು ಕೃಷಿವಿಷಯಕ ಸಮಾಲೋಚನೆಗೆ ಪೀಠಿಕೆ ಹಾಕಿದರು ನೆರೆದ ಕೃಷಿಕರ ಪರವಾಗಿ ಶ್ರೀಗಳಾದ ಕೋಣೆ ನಂಥಪ್ಪ ಹೆಬ್ಬಾರ್, ನಾರಾಡಿ ನಾರಾಯಣ ಬಿಲ್ಲಿ ಮತ್ತು ಆಡೂರ್ ಶಿವರಾಂಕಾರಂತ್ ಇವರು ಮಾತನಾಡಿ ಫೌಂಡೇಶನಿನವರು ಏರ್ಪಡಿಸುತ್ತಿರುವ ಇಂತಹ ಕೃಷಿಕ್ಷೇತ್ರ ಸಂದರ್ಶನ ಕಾರ್ಯಕ್ರಮಗಳ ಉಪಯುಕ್ತತೆಯನ್ನು ಕೊಂಡಾಡಿದರು. ಫೌಂಡೇಷನ ಪರವಾಗಿಯಿಂದ ಶ್ರೀ ಕೆ. ಸಂಜೀವನಾಥ ಉಡುಪರು ಸೂತನವಾಗಿ ಅಭ್ಯಕ್ಷರ ಭಾಷಣದ ಬಳಿಕ ಶ್ರೀ ಕೆ. ವಿ. ಬೆಂಗಿಯವರಿಂದ ವಂದನಾರ್ಪಣೆಯಾಯಿತು.

ವಾರ್ಷಿಕ ಮಹಾಸಭೆ

ಬಿಕ್ಕ ಮಂಡಳ್ಳರು ಸೇವಾ ಸಹಕಾರಿ ಸಂಘದ ವಾರ್ಷಿಕ ಮಹಾಸಭೆಯು ತಾ. 28—9—67ರಂದು ಸಂಘದ ಅಧ್ಯಕ್ಷ ತುಂಬುಗೆ ಶ್ರೀಮತಿ ಮಂತ ಕುಮಾರಿಯವರ ಅಧ್ಯಕ್ಷತೆಯಲ್ಲಿ ಬಿಕ್ಕ ಮಾಡ್ತಾರು ಶಾಲೆಯಲ್ಲಿ ಜರಗಿತು. ಶ್ರೀ ಮಾಳಬಲ್ಲಿ ವಿಠಲರಾಯರ ನಿಧನಕ್ಕಾಗಿ ಮೌನ ಪ್ರಾರ್ಥನೆಯ ನಂತರ 1966-67ರ ಆಯವ್ಯಯ ಪತ್ರ ವಂದಿಸಾಚನೆಯಾಯಿತು. ಮುಂದಿನ ವರ್ಷಕ್ಕೆ ಆಡಳಿತ ಮಂಡಳಿಗೆ ಶ್ರೀಮತಿ ವಸಂತ ಬಂಗೇರ, ಶ್ರೀಗಳಾದ ಪಿ ಗಿಡಪ್ಪಾಲ ನಾಯ್ಕ, ಈಶ್ವರ ಭಟ್ಟ, ಕೆ. ಅಲ್ಲಿಪ್ಪಾಡಿಯವರ್, ಅಂದು ಸಹಕಾರಿ ಇಸಯ ಅವಲೋಕನವಾಗಿ ಆರಿಸಲ್ಪಟ್ಟವು. ಗುಮ್ಮಟ ಸೇವಕ ಶ್ರೀವರ್ಣಾಲ್ಕ ಗೌಡವರತ್ತು ಯಂ. ನಾರಾಯಣ ನಾಯ್ಕರು ಸೂಕ್ತ ಲಪೆಗಳನ್ನಿತ್ತರು.

ಗಾಂಧೀ ಜಯಂತಿ

ಉಡುಪಿ ಬ್ಲಾಕ್ ಕಾಂಗ್ರೆಸ್ ಪಕ್ಷದ ವತಿಯಿಂದ ಗಾಂಧೀ ಜಯಂತಿ ದಿನಾಚರಣೆಯು ಪಕ್ಷದ ಅಧ್ಯಕ್ಷ ಶ್ರೀ ಪಿ. ರಂಗನಾಥ ಶೆಣೈ ಯವರ ನಿವಾಸದಲ್ಲಿ ನೆರವೇರಿತು. ಆಂದು ಆ ಪಂಚಾಯ್ತ ಕಾಂಗ್ರೆಸ್ ಅಧ್ಯಕ್ಷರು ಸ್ವಯಂಸೇವಕರೊಂದಿಗೆ ಬೀದಿಗಳನ್ನು ಸ್ವಚ್ಛಗೊಳಿಸಿ ಯವರಿಂದ ಪ್ರಾರಂಭವಾದ ಪಾದಯಾತ್ರೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಅಲ್ಲಿನ ಜನರಿಗೆ ಗಾಂಧೀ ತತ್ವಗಳ ಮಹತ್ವವನ್ನು ವಿವರಿಸಿತು. ಈ ಪಾದಯಾತ್ರೆಯಲ್ಲಿ ಸುಮಾರು ಮುನ್ನೂರು ಜನ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದರು.

ನಗೆ ಮಲ್ಲಿಗೆ

ಶ್ರೀ ಬಿ ನರಸಿಂಗ ರಾವ್

"ಅಲ್ಲ, ರೇಶನ್ ಅಕ್ಕಿಯನ್ನು ಜಾಸ್ತಿ ಮಾಡ್ತಾರಂತಲ್ಲಾ. ಅದು ನಿಜವಾಗಿ ವಿದೇಶದಿಂದ ಇನ್ನೂ ಹೆಚ್ಚು ಅಕ್ಕಿ ಬರುವುದು ಮಾಡ್ತಾರೋ ಏನೋ?"

"ಛೆ, ಛೆ, ಅದೇನಲ್ಲ. ಇಕ್ಕೆಗೆ ಚಲೋ ದಾಗಿ ನವ್ಯ ಮೂಪ್ಪ ಭೂಮಿಯಲ್ಲೆಲ್ಲ ದೊರೆಯುವ ಮಣ್ಣನ್ನು ಸೇರಿಸಿದರಾಯ್ತಲ್ಲ

ಂ ಂ ಂ ಂ

ವೆ ಜಿನ್ಸ್‌ಟೋ: ನಿನ್ನ ಮುಖ ನೋಡಿದ್ರೆ ಕಳ್ಳನ ಲಕ್ಷಣ ಜೆನ್ನಾಗಿ ಕಾಣ್ತಾ ಇದೆ.

ಕಳ್ಳ: ಅದಕ್ಕೆ ನನ್ನ ಮುಖ ಅನ್ನಡಿಯೇನೂ ಅಲ್ಲವಲ್ಲ!

ಂ ಂ ಂ ಂ

"ಇವೊತ್ತು ಗಡೆಇದ ಪಿರೀಯಡಿಗೆ ಕ್ಲಾಸು ತಪ್ಪಿಸುವ ಮತ್ತಾಯಾ."

"ಎಲ್ಲೂ ಇಲ್ಲ, ಇವೊತ್ತಾದ ಮಾನಗೆ ಸುಖವಾಗಿ ನಿದ್ರಿಸಬೇಕು."

ಂ ಂ ಂ ಂ

ಒಬ್ಬಾತ, ತನ್ನ ಸ್ನೇಹಿತನೊಡನೆ. "ಅವಳು 'ಇದು' ಹೇಳಿಕವ ಬದಲಿಗೆ ಬೇರೇನಾದರೂ ಹೇಳಿದ್ದರೆ ನಾನವಳನ್ನು ಖಂಡಿತಾ ಮದುವೆಯಾಗುತ್ತಿದ್ದೆ.

"'ಇದು' ಅಂದ್ರೆ ಯಾವುದು?"

"ಆಸೆ, 'ನಿನ್ನನ್ನು ನಾನು ನುಂಗಲಾರೆ' ಎಂದು"

ಂ ಂ ಂ ಂ

'ನೀವು ಒಬ್ಬ ಮುಂದರಿಮನೆನ್ನೇ ಇಷ್ಟ ಬುದ್ಧಿವಂತೆ ನೂಡವಳನ್ನೇನು ಮದುವೆಯಾಗಬೇಕ."

'ಎಂಥೂ ಸಾಧ್ಯವಿಲ್ಲ"

'ಕಾರಣ?'

"ಮುಂದರಿಯೂವರೆ ನನ್ನಿಂದಲೂ ಮುಂದರಿಸಾಧವನನ್ನು ಅವಳಿಗೆ ಹೊಡಿಕಿಯಲ್ಲಿ ಬುದ್ಧಿವಂತೆಯೂದ್ದಿ ಮತ್ತೆ ನನ್ನನ್ನು ವಿವಾಹವಾಗುವ ಪ್ರಶ್ನೆಯೇ ಇಲ್ಲ..."

ಬೆಳಕಿನ ಹಬ್ಬ

ದೀಪಾವಳಿ ಸಮೀಪಿಸುತ್ತಿದೆ

ನವಯುಗದ

ದೀಪಾವಳಿ ಸಂಚಿಕೆ

ತಯಾರಾಗುತ್ತಿದೆ

ಜೀವನದೀಪವಲಂಗಿ

ಇದು ಎಲ್ಲೆಲ್ಲೂ ಬೆಳಗುತಿದೆ

ಜಾಹೀರಾತಿಗೆ

ಉತ್ತಮ ಮಾಧ್ಯಮವೆಂದೂ

ನವಯುಗ

ದೀಪಾವಳಿ ಸಂಚಿಕೆ

ದರಗಳಿಗೆ ಬರೆಯಿರಿ:

ಮೆನೇಜರ್, ನವಯುಗ, ಉಡುಪಿ

(ಮೂರನೇ ಪುಟದಿಂದ)

ಡು—ಮೂರು ದಶಕಗಳಾದರೂ ಬೇಕಾದಾವು—ಬುದ್ಧಿ ಜೀವಿ ರಾಜಕಾರಣಿಗಳು ಪಕ್ಷ ಒಡೆಯುವುದಕ್ಕಿಂತ ಪಕ್ಷವೊಂದು ಮೂಡುವತ್ತ ಗಮನ ಹರಿಸಬೇಕು; ರಾಷ್ಟ್ರ ಪ್ರಯತ್ನರಾಗಬೇಕು.

ಪಾಟೀಲರ ಸಕ್ಕರೆ

ಎಸ್. ಕೆ. ಪಾಟೀಲರು ತಮ್ಮನ್ನು ಎರಡು ವರ್ಷಗಳ ರಾಜಕೀಯ ಜೀವನದಲ್ಲಿ ಮೊತ್ತ ಮೊದಲ ಬಾರಿಗೆ ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಪರಾಭವ ಗೊಂಡರು—ಇದೀಗ ಮಂಡ್ಯ ಲೋಕ ಸಭಾಕ್ಷೇತ್ರದಿಂದ ಅವರು ಸ್ಪರ್ಧಿಸುವರೆಂದು ಊಹಾಪೋಹಗಳು ಎದ್ದಿವೆ. ಇದಕ್ಕೆ ಪರ–ವಿರೋಧ ಅಭಿಪ್ರಾಯಗಳೂ ಹುಟ್ಟಿವೆ. ಪಾಟೀಲರು ಮೆನೆನ್ನಂಗೆ ಹಾಕಿದ ಉರುಳೇ ಈಗ ಅವರ ಕತ್ತಿಗೆಯನ್ನೇ ಕಾಯುತ್ತಿದೆ. ಹಾಗಾಗಿ ಅವರು ತಮ್ಮ ಮೂಲಿಕ ಪೋಡಿಯನ್ನು ತಿರುಗಿಸಿದ್ದಾರೆ. ಮಂಡ್ಯದಿಂದ ಸ್ಪರ್ಧಿಸುವ ಯೋಚನೆ ತನಗಿಲ್ಲವೆಂದೂ, ಅಂತಹ ಅವಶ್ಯಕತೆಯೂ ತನಗಿಲ್ಲವೆಂದೂ ಅವರು ಸ್ಪಷ್ಟವಾಗಿ ಅಂದಿದ್ದಾರೆ. ಆದರೆ, ಅವರ ಕೆಲವು ಮಾತುಗಳು ಮಂಡ್ಯದ ಸಕ್ಕರೆ ರುಚಿ ನೋಡುವ ಅವರ ಆಶಯವನ್ನೇ ವ್ಯಕ್ತಪಡಿಸುತ್ತಿದೆ.

ಮಹಾಜನ ಆಯೋಗದ ನೇಮಕದ ಹಿಂದೆಯೇ ಅವರ ವಾದಿಯನ್ನು ಸಂಬಂಧಪಟ್ಟವರು ಒಪ್ಪಿಕೊಳ್ಳಬೇಕೆಂದು ಒಪ್ಪಲಾಗಿತ್ತು; ಈಗ ಒಂದು ರಾಜ್ಯವು ಆದರಿಂದ ಹಿಂದೆ ಸರಿಯುವುದು ತಪ್ಪು ಎಂದವರು ಮಹಾರಾಷ್ಟ್ರವನ್ನು ಟೀಕಿಸಿದ್ದಾರೆ. ಶಿವಸೇನೆಯು ಚಟುವಟಿಕೆಗಳನ್ನು ಖಂಡಿಸಿರುವುದು ಮಾತ್ರವಲ್ಲ, ಕೇಂದ್ರ–ರಾಜ್ಯ ಸರಕಾರಗಳು ಅದನ್ನು ಅಣಗಿಸಬೇಕು ಎಂದವರು ಹೇಳುತ್ತಾರೆ. ಮೈಸೂರು ಕಾಂಗ್ರೆಸ್ಸಿನಲ್ಲಿ ಒಮ್ಮತವಿದೆಯೆಂದೂ ಪ್ರಕಟಿಸಿದ್ದಾರೆ. ಇವೆಲ್ಲ ಸಕ್ಕರೆಯಂತಹ ಮಾತುಗಳು ಸಕ್ಕರೆ ರುಚಿ ನೋಡುವ ಬಯಕೆಯಿಂದ ಪ್ರೇರಿತವಾಗಿಲ್ಲವೆ ಪ್ಲಲಾದೀತೆ?

18ನೇ ಕ್ಷಯ ರೋಗ ನಿವಾರಣಾ ಮುದ್ರೆಗಳ ಮಾರಾಟ ಚಳವಳಿ ಆರಂಭ

ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಜರಗಿದ 18ನೇ ಕ್ಷಯರೋಗ ನಿವಾರಣಾ ಮುದ್ರೆಗಳ ಮಾರಾಟ ಚಳವಳಿಯ ಉದ್ಘಾಟನೆಯು ಇದೇ ತಾ. 2ರಂದು ಶ್ರೀ ಕೊಡಾಜೆ ಬಸಪ್ಪನವರಿಂದ ನಡೆಯಿತು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿ ಶ್ರೀ ಎಚ್ ಎಲ್. ನಾಗೇಗಾರರು ವಹಿಸಿದ್ದರು.

ಡಾ। ಎ. ಡಿ. ಪೌಲ್‌ರವರು ಸ್ವಾಗತಿಸಿದರು. ಡಾ। ಎಂ. ಉಮೇಶರಾಯರು ಮುಖ್ಯ ನಾಡುತ್ತಾ ರಾಷ್ಟ್ರವ್ಯಾಪಕವಾದ ಕ್ಷಯರೋಗದ ನ್ನು ನಿವಾರಿಸಲು ನಾವು ಕಕ್ಕಸ್ಸಿನ ಕೈಗೊಳ್ಳಬೇಕು. ಇದಕ್ಕೆ ಸಾಕಷ್ಟು ಧನದ ಅವಶ್ಯಕತೆಯಿದೆ. ಈ ಧನವನ್ನು ಸಾರ್ವಜನಿಕರಿಂದ ಸಂಗ್ರಹಿಸುವುದಕ್ಕೋಸ್ಕರ ಗಾಂಧೀಜಯಂತಿಯ ದಿನದಂದೇ ಕ್ಷಯರೋಗ ನಿವಾರಣಾ ಮುದ್ರೆಗಳ ಮಾರಾಟ ಚಳವಳಿಯನ್ನು ಪ್ರಾರಂಭಿಸಲಾಗಿದೆಯೆಂದರು.

ಶ್ರೀ ಕೊಡಾಜೆ ಬಸಪ್ಪನವರು ಸಭೆಯಂದ ಉದ್ಘಾಟನಾಭಾಷಣದಲ್ಲಿ ಯುವಜನಾಂಗವನ್ನೇ ಕಬಳಿಸುತ್ತಿರುವ ಈ ಕ್ಷಯರೋಗವನ್ನು ನಿವಾರಿಸುವ ಈ ಚಳವಳಿಯಲ್ಲಿ ನಮ್ಮ ದೇಶದ ಜನಾಂಗವೇ ಒಂದಾಗಬೇಕು. ಈ ಬೃಹದಾಕಾರವಾದ ಚಳವಳಿಗೆ ಅರ್ಥಿಕ ಸಾಲಬ್ಧ ಆಕ್ಕಗತ್ಯವಾಗಿದೆ. ಎಲ್ಲರೂ ಉದಾರ ಮನಸ್ಸಿನಿಂದ ಈ ಮುದ್ರೆಗಳನ್ನು ಖರೀದಿ ಮಾಡುವ ಮೂಲಕ ಸರಕಾರಿಸಬೇಕು. ಈ ಯೋಜನೆಯ ಉತ್ತೇಜನಕ್ಕಾಗಿ ಈ ಬಾರಿ ಅತ್ಯಧಿಕ ಹಣ ಸಂಗ್ರಹಿಸಿದ ಬ್ಲಾಕಿಗೆ ರೋಲಿಂಗ್ ಶೀಲ್ಡ್ ಒಂದನ್ನು ಬಹುಮಾನವಾಗಿ ಕೊಡಲಾಗುವುದೆಂದು ಹೇಳಿದರು. ಕೊನೆಯಲ್ಲಿ ಶ್ರೀ ಡಿ ಮೋಹನರಾಯರು ಧನ್ಯವಾದ ಸಮರ್ಪಿಸಿದರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಗಾಂಧೀಜಯಂತಿ

ಮಂಗಳೂರು, ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಗಾಂಧೀ ಜಯಂತಿಯ ಸಲುವಾಗಿ ಮೈಸೂರು ರಾಜ್ಯದ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಧ್ವಜಾರೋಹಣ ಗೈದರು. ಸಮಾರಂಭದ ಅಧ್ಯಕ್ಷತೆಯನ್ನು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೆ.ನಾಗಪ್ಪ ಆಳ್ವರು ವಹಿಸಿದ್ದರು. ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟರು ಸ್ವಾಗತಿಸಿದರು.

ಮೂನ್ನ ಸಚಿವರು ಮಹಾತ್ಮಾ ಮಹಾತ್ಮರ ಜಯಂತಿಯನ್ನು ನಾವು ಬರೇ ಸಂಪ್ರದಾಯವಾಗಿ ಆಚರಿಸಬಾರದು. ಸದ್ವಿಚಾರ, ಸ್ನಾತಂತ್ರತೆ, ಸದ್ಭಕ್ತಿಗಳನ್ನು ನಮಗೆ ಪ್ರೇರಣೆ ಯೊಗಬೇಕು. ಅವರ ಆದರ್ಶ ನಮ್ಮದಾಗಬೇಕು. ಭಾವೀ ಭಾರತದ ಹಿತದೃಷ್ಟಿಯಿಂದಲೂ ಪ್ರಜಾಪ್ರಭುತ್ವದ ಸಮೃದ್ಧತೆ ಹಾಗೂ ರಾಷ್ಟ್ರಜನತೆಯ ಏಕತೆಯ ದೃಷ್ಟಿಯಿಂದಲೂ ಜನನಾಯಕರ ಯೋಗ್ಯ ಆದರ್ಶಗಳು ನಮ್ಮದಾಗಬೇಕು. ಮನವನ್ನು ಕಲಕಿಸದೆ ಪ್ರಜಾಪ್ರಭುತ್ವದ ಶಾಂತಿ, ನೆಮ್ಮದಿ ಕಡೆಗೆ ನಾಡನ್ನು ಎಚ್ಚರಿಸಲು ರಾಷ್ಟ್ರವಿತ ಗಾಂಧೀಜಿ, ಲಾಲ್ ಬಹಾದ್ದೂರ್ ಶಾಸ್ತ್ರಿಗಳಂತಹ ಮೇಲ್ಪಂಕ್ತಿಗಳು ನಮ್ಮ ಆದರ್ಶಗಳಾಗಿರಬೇಕೆಂದರು.

ಶ್ರೀ ಪೇಜಾವರ ಸ್ವಾಮಿಗಳ ಸಂಚಾರ

ಉಡುಪಿ, ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದಂಗಳವರು ಪರ್ಯಾಯದ ಪೂರ್ವಭಾವಿಯಾಗಿ ನವರಾತ್ರಿಯಿಂದ ಆರಂಭಿಸಿ ಮೂರು ತಿಂಗಳ ಸಂಚಾರ ಕಾರ್ಯಕ್ರಮವನ್ನು ಕೈಗೊಂಡಿರುವರು ಈ ಮೊದಲು ತಾ. 4ರಂದು ಸಂಜೆ ಉಡುಪಿಯ ಹಾಗೂ ಸುತ್ತ ಮುತ್ತಲ ನಾಗರಿಕರನ್ನು ಮಠಕ್ಕೆ ಬರಮಾಡಿಕೊಂಡು ಮುಂದಿನ ತಮ್ಮ ಪರ್ಯಾಯ ಕಾಲದಲ್ಲಿ ಸರ್ವರ ಸಹಕಾರವನ್ನು ಕೋರಿದರಲ್ಲದೆ ಆತಿಥಿಗಳಿಗೆ ಪ್ರಸಾದ ಫಲ ಮಂತ್ರಾಕ್ಷತೆಗಳನ್ನು ಕೊಟ್ಟು ಅತಿಥಿಸತ್ಕರಿಸಿದರು.

ಜಗತ್ತಿನಲ್ಲಿ ಪ್ರತಿಯೊಂದಕ್ಕೂ ಭಗವಂತನು ಮಿತಿ ಇರಿಸಿದ್ದಾನೆ. ಆದರೆ ದಯೆ, ಕರುಣೆ, ಜ್ಞಾನ, ಪ್ರೀತಿ, ಸಜ್ಜನಿಕೆಗಳಿಗೆ ಮಿತಿ ಕಲ್ಪಿಸಿಲ್ಲ.

—ಬೇಕನ್



In the Court of Addl. Munsiff, Puttur.

R. E. A. 510/67.
R. E. P. 295/67.
O. S. 84/64.

Flora Mary D'Souza ... Petr.

—V—

Hilary D'Souza and others ... Respts.

To respondents 1, 2, 4, 5, 7 and 8.

1. Hilary D'Souza,
2. Albert D'Souza, } Both sons of JacobD'Souza
Both C/o Yesh Tailors, Denu Building, Parel, Bombay 12.
3. Maurice D'Souza, Driver, Kankanady, Mangalore 2.
4. Lucy D'Souza, wife of late Sebastian Mascarenhas, Darbe, Puttur Kasaba.
5. Benedict Lasrado, wife of Sylvester Lasrado, Kadji Hithlu, Konchady, P. O. Derebail, S. K.
8. Lawrence Mascarenhas, C/o Andreson Dawn & Co., Darabshaw House, Ballard Road, Bombay.

Take notice that the above execution against you stands posted to 19—10—67 for notice of sale and Bid to you, and if you have any objection for the sale papers, you may oppose the same on that date before this Court at 10 A. M. failing which orders will be passed as the court deems fit.

/ By order of the Court /

B. Sripati Rao.
Advocate for petr.

Puttur, 12—9—67.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟ್

O. P. 17/67

1 ಶಿವಣ್ಣ ಗೌಡ, ಕುಕ್ಕೆಪ್ಪ ಗೌಡರ ಮಗ, 2 ಸಿದ್ಧಮ್ಮ ಯೊನೆ ಸೀತಮ್ಮ, ಚನ್ನಪ್ಪ ಗೌಡರ ಹೆಂಡ್ತಿ ಇಬ್ಬರೂ ಸುಳ್ಯತಾಲೂಕು ಕಲ್ಲುಮುಟ್ಲು ಗ್ರಾಮದವರು. ಪೀಟಿಷನ್ದಾರ ಪೆರುಮಾಳ ಪ. ಕ. 8 ವೆಂಕಪ್ಪ, ಗುಡ್ಡಪ್ಪ ಗೌಡರ ಹೆಂಡ್ತಿ ಸುಳ್ಯ ತಾಲೂಕು ಕೊಲ್ಲಮೊಗ್ರ ಗ್ರಾಮದವರು, Post ಪೆಲಂಬಾಡಿ [ಪ್ರ. ಕ.]

—ಅರ್ಜಿದಾರರು.

ಈ ಮೂಲಕ ಎಲ್ಲಾ ಜನರಿಗೂ ತಿಳಿಯಪಡಿಸುವುದೇನೆಂದರೆ:—

ಸುಳ್ಯ ತಾಲೂಕುಕಲ್ಮುವಾಜಿ ಗ್ರಾಮದಲ್ಲಿರುವ ಶಿವಣ್ಣ ಗೌಡರ ಹೆಂಡ್ತಿ ದೇಂಪ್ಪ ಹೆಂಗಸು ತಾ. 7—12—66ರಲ್ಲು ಮೃತಪಟ್ಟು ಆ ಬಾಬತ್ತಿನಲ್ಲಿ ತಮಗೆ ವಾರೀಸು ಸರ್ಟಿಫಿಕೇಟು ಕೊಡಿಸ ಬೇಕೆಂತ ಅರ್ಜಿದಾರರು ಅರ್ಜಿ ಮಾಡಿರುತ್ತಾರೆ.

ಸದ್ರಿ O. P. 17/67ನೇ ಅರ್ಜಿಯಂತೆ ಕೋರುವ ಅಪೇಜು ವಗ್ಗೆರೆ ವಸೂಲು ಪಡೆಯಲು ವಾರೀಸು ಸರ್ಟಿಫಿಕೇಟು ಕೊಡಿಸ ಬೇಕೆಂತ ಅರ್ಜಿದಾರರು ಬರಕೊಂಡ ಅರ್ಜಿಯು ತಾ 17—10—67ಕ್ಕೆ ವ್ಯಾಜ್ಯ ಆಗಿರುತ್ತದೆ. ಆ ದಿನ ಹೂರಂದರೂ ಆಕ್ಷೇಪ ಹೇಳವರಿದ್ದಲ್ಲಿ 11 ಘಂಟೆಗೆ ಈ ಕೋರ್ಟ್ ಮುಂದೆ ಹಾಜ್ರಾಗಿ ಉದಹರಿಸತಕ್ಕದ್ದು.

(By order of the court)

U. P. Shivarama
B. A, B. L.
Advocate for Petitioner.

Puttur, 24—9—67

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R. E. P. 405/1966 O. S. 567/1961
R. I. A. 586/1963.

ಉಪೇಂದ್ರ ಮಂಜುನಾಥ ಕಾಮತ

—ಅರ್ಜಿದಾರ.

ಮೇರಿ ಪರ್ಪೆಡೊ ಬಾಯಿ—ಎದ್ರಿ.

ಮೇರಿಪುರ್ಪೆಡೊಬಾಯಿ, ಡೊಮಿಪುರ್ಪೆಡರ ಮಗಳು, ಉದ್ರಿ ತಾಲ್ಲ್ಯ ಉದ್ಯಾವರ ಗ್ರಾಮದಲ್ಲಿರುವವಳು—

ಸದ್ರಿ ಅಮ್ಮಜ್ಜಾರಿಯ ಎದ್ರಿದಾದ ನಮಗೆ ಈ ಮೂಲಕ ತಿಳಿಸುವದೇನೆಂದರೆ—

ಸದ್ರಿ ಅಮ್ಮಜ್ಜಾರಿಯಲ್ಲಿ ಕಿಕ್ಕುಯಲ್ಲಿ ಪರಾಟಕ್ಕೆ ವಿಧಿಯಿರುವ ಆಸ್ತಿಗಳನ್ನು ಯೇಲಾಗೆ ಅಪೇಕ್ಷಿಸಿ ಅರ್ಜಿದಾರನು ದಾಖ್ಲು ಮಾಡಿಯೇಲಂ ಯಿಸ್ತಿರುವಿನ ಶರ್ತ ನಿರ್ಣಯಿಸುವುರಿಂದ ನಿಮಗೆ ತಾ. 21—10—67ನೆ ಆಕ್ಕರಿ ನೋಟೀಸಿಗೆ ಇಟ್ಟಿದೆ. ಆಕ್ಷೇಪ ಇದ್ದಲ್ಲಿ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉಪಾಧರಣೆ ಕೊಡತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರಹಾಜ್ಯರಿಯಲ್ಲಿ ಅಮ್ಮಜ್ಜಾರಿ ತೀರ್ಮಾನವಾಗಿ ಪದು ಎಂತ ಕೋರ್ಟು ಹುಕುಂ ಪ್ರಕಾರ ಜಾರಿಯಾದೆ.

K. S. Kamath
Advocate for Petitioner.

ಕಾರ್ಕಳ, 7.10.67.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ತೀರ್ಥಯಾತ್ರೆ

(ಎರಡನೇ ಪುಟದಿಂದ)

ಚ್ಚಿದ ವಿಷಯ ಸಂಶಯ ಪ್ರಕಟಿಸಿದರೂ, ಪುತ್ರನಿಗೋಸ್ಕರ ಏನಾದರೂ ಮಾಡಿ, ನೇಗಾದರೂ ಮಾಡಿ ತೀರ್ಥಯಾತ್ರೆಗೆ ಕಿರಲುವುದೆಂದು ನಿಶ್ಚಯಿಸಿ ಇಂತೆಂದ...

ಒಳ್ಳೆದೇ ಆಯ್ತು. ಹಣದ ವಿಷಯವೇ ಕೆ ಚಿಂತೆ? ಹಣ ಖರ್ಚಿತ್ತೆ ಹೋಗುತ್ತೆ, ಕೈಯ ಕೊಳೆಯಂತೆ. ಭಗವಂತನು ನೀಡಿದ ಪುತ್ರನನ್ನಾದರೂ ಉಳಿಸಿ ನಮ್ಮ ಪರಂ ಪರೆಯನ್ನೆಳಿಸಿಕೊಳ್ಳೋಣ."

ಲಾಜವಂತಿ, ಪತಿಯನ್ನು ನಿದ್ರಿಸಹೇಳಿ ತಾನೊಬ್ಬಳೇ ಎಚ್ಚೆತ್ತು ಕುಳಿತಳು. ಅವಳಿಗೆ ಹೃದಯದಲ್ಲಿ ಬ್ರಹ್ಮಾನಂದವೇ ಉಕ್ಕು ಭವಕ್ಕೆ ಬಂದಿತ್ತು. ಬೆಳಗಾಗುತ್ತಲೆ ಹೇ ಮನ ಜ್ವರ ಇಳದು ಹೋಗಿತ್ತು. ಲಾಜವಂತಿಯ ಮ ಖದಲ್ಲಿ ಕಳೆಯೇರಿತು- ಸಂಜೆಯಾಗುತ್ತಲಿ ದನಗಳ ಕೆಚ್ಚಲವು ಹಾಲ್ತುಂಬುವಂತೆ,

ನೈದರೂ ಆಗಮಿಸಿದರು. ಅವರೂ ಸುದ್ದಿ ಕೇಳಿ ಹರ್ಷಗೊಂಡರು. ಅವರೆಂದರು—"ಈಗೇನೂ ಚಿಂತೆ ಬೇಡ ನಿಮ್ಮ ಹುಡುಗಪ್ಪಿಗಿನ್ನ್ಯಾರ ಭಯವೂ ಇಲ್ಲ."

ಲಾಜವಂತಿಯೂ ಹೇಮನ ದೇಹವನ್ನೊಮ್ಮೆ ಮುಟ್ಟಿ ನೋಡಿ ಅಂದಳು—'ಏನೆಲ್ಲಾ ಅಸಂಭವಗಳು ನೆಡೆದು ಹೋದವು!"

ವೈದ್ಯರೂ ನುಡಿದರು—'ಅದೆಲ್ಲವೂ ನಿನ್ನ ಪರಿಶ್ರಮದ ಫಲ!

ಲಾಜವಂತಿಯಿಂದಳು—"ಇದು ದೇವಿಯ ಕೃಪೆಯಲ್ಲದೆ ಇನ್ನೇನಲ್ಲ. ನನ್ನ ಪರಿಶ್ರಮಕ್ಕೆ, ನಾನೇನು ಮಾಡಿದ್ದೇನೆ!"

"ನಾನು ನಿನ್ನವ್ವ ದ್ವಿತೀಯ ಸಾವಿತ್ರಿಯೆಂದರೂ ಒಪ್ಪತ್ತೆ. ಅವಳು ಮೃತಪತಿಯನ್ನೂ ಬದುಕಿಸಿದರೆ, ನೀನು ಮೃತ್ಯು ಮುಖನಾದ ಪುತ್ರನಪ್ಪನ್ನ ರಕ್ಷಿಸಿದೆ. ನೀನು ಶಕ್ತಿ ವಿೂರಿ ದುಡಿಯದಿದ್ದರೆ ಏನೆಲ್ಲಾ ಅಸಂಭವವಾಗಿತ್ತು! ಹುಡುಗನು ಬದುಕಿದ್ದಲ್ಲಿ ಇದು, ಎರಡನೇ ಬಾರಿ ಜನಿಸಿದ್ದು!!

ರಾಮಲಾಲನೂ ಮುಗುಳ್ನಕ್ಕ- ರಾಮಲಾಲನು ಮರುದಿನ ತನ್ನ ಕೆಲಸಕ್ಕೆಂದು ತೆರಳುವಾಗ "ಯಾತ್ರೆಗೆ ಸಿದ್ಧ ಪಡಿಸು" ಎಂದೇ ಹೇಳಿ ಹೋದ.

— ೪ —

ಮೂರು ವಾರಗಳುರುಳಿದುವು. ತೀರ್ಥಯಾತ್ರೆಯ ತಯಾರಿ ಭರದಿಂದ ನಡೆದಿತ್ತು. ಇಂದು ಲಾಜವಂತಿಯ ಕಣ್ಣುಗಳಲ್ಲಿ ಹಿಂದಿನೆಂಸೇ ಉತ್ಸಾಹವೇತಿ ಎಸರುಗುತಿತ್ತು. ಮುಖದಲ್ಲಿ ಮತ್ತೆ ಕಳಆಯೇರಿತ್ತು. ಹೃದಯದಲ್ಲಿ ತೃಪ್ತಿ ತುಂಬಿತ್ತು.

ತೀರ್ಥಯಾತ್ರೆಗೆ ಹೊರಟಿನ ದಿನ ಹಳ್ಳಿಯಿಡೀ ಅವರ ಮನೆಯಲ್ಲಿನೆರೆದಿದ್ದರು. ಸಡರೆರವೇ ಸಡಗರ, ಮನೆಯಿಡೀ ಆನಂದ ಸಾಗರದಲ್ಲೋಲಾಡುತಿತ್ತು. ಒಂದೆಡೆ ಸಿರಾಯಿ ಸಿದ್ಧ ಮಾಡುತಿದ್ದರೆ, ಇನ್ನೊಂದೆಡೆ ಜೊಸ ಬಟ್ಟೆ ಧರಿಸಿ ಅಡುತ್ತಿರುವ ಮಕ್ಕಳ ಗುಲ್ಲು. ಲಾಜವಂತಿಅತಿಥಿ ಸತಾರದಲ್ಲಿ ಮುಳುಗಿದ್ದಳು. ಆದರೆ—

...ಅಲ್ಲಿ ನೆರೆದವರಲ್ಲಿ ಮುದುಕಿಯೊಬ್ಬಳು ಮಾತ್ರ ಅತೀವ ದುಃಖದಿಂದ ಳು ಳಿತದ್ದು ಕಂಡು ಬಂತು. ಅವಳೇ ಹೇಮೋ. ಆನಂದೋಲ್ಲಾಸದ ಈ ಸಡಗರದಲ್ಲಿ ಹೇಮೋ ಎಲ್ಲೂ ದುಃಖನಾಗರದ ತೆರೆಗಳನ್ನು ಎಣಿಸುತ್ತಿರುವುದು ಕಾಣಬರುತಿತ್ತು.

ಬೆಳಗ್ಗೆ ಗಂಟೆ ನಾಲ್ಕು ಕಳೆದಿತ್ತು. ಬಂದ ಅತಿಥಿಗಳೆಲ್ಲ ತಿಂದುಂಡು ಸುಖನಿದ್ರೆಯಲ್ಲಿದ್ದರೂ ಲಾಜವಂತಿಗೆನಿದ್ರೋಷದಿಂದಾಗಿಯೂ, ಯಾತ್ರೆಯಸಿದ್ಧತೆಯಿಂದಲೂ ಫಿದ್ರಿಸಲು ಸಮಯವೇ ದೊರೆಯುಲಿಲ್ಲ. ಅವಳು ಹಾಸಿಗೆ, ಬಟ್ಟೆ ಇತ್ಯಾದಿ ಸಿದ್ಧಪಡಿಸುತಿದ್ದಳು. ಮನೆಯಲ್ಲಿ ಕರೆಯುವ ದನವನ್ನು ನಿನ್ನೆಯೇ ನೆರೆಯವಳ ಕೈಯಲ್ಲೊಪ್ಪಿಸಿ ಅವಳು ಅಂದಿದ್ದಳು- 'ನೋಡು! ಇದನ್ನು ಜೆನ್ನಾಗಿ ನೋಡ್ಬೇಕು. ಹುಲ್ಲು ಹಿಂದೆನೀಡಲು ಯಾವತ್ತೂ ಅಸಡ್ಡೆ ತೋರಿಸ್ಬೇಡ."

ಅಷ್ಟರಲ್ಲಿ ಯಾರೋ ಬಿಕ್ಕಿ ಬಿಕ್ಕಿ ಅಳುವುದನ್ನು ಲಾಜವಂತಿ ಆಲಿಸಿದಳು. ಈ ಬೆಳ್ಳ ಬೆಳಗ್ಗೆ, ಹಳ್ಳಿಯಿಡೀ ನಿದ್ರೆಯಲ್ಲಿ ಮರೆತಿರುವಾಗ, ಅಳುತ್ತಿರುವುದ್ಯಾರೆಂದು ಲಾಜವಂತಿಗೆ ತಿಳಿಯಲಿಲ್ಲ ಅವಳು ಮತ್ತೆ ಕಿವಿಗೊಟ್ಟು ಆಲಿಸಿದಳು.

ಮನೆಯ ಹೊರಗಡೆ ಬಂದು ಆವರಣ ಗೋಡೆಯ ಸಮೀಪಕ್ಕೆ ಆಗಮಿಸಿದಳು. ನೆರೆಮನೆಯಲ್ಲಿರುವ ಹರೋ ಅಳುತ್ತಿರುವುದು ಕಂಡು ಲಾಜವಂತಿಗೂ ವ್ಯಸನವಾಗಿ "ತಾಯಿ ಹರೋ ಯಾಕಳ್ತಿಯ?'ಎಂದಳು

ಕೊಂಚ ಹೊತ್ತಿನವರೆಗೆ ಮೌನ. ಮತ್ತೆ ಅಳುವನ್ನು ತಡೆಹಿಡಿದು ಹರೋ ತುಟಿ ಬಿಚ್ಚಿದಳು— "ಯಾಕವ್ವಾ, ಲಾಜವಂತಿಯೆ!'

ಲಾಜವಂತಿ ಜಿಪ್ಪರಲ್ಲೇ ಹರೋ ಕುಳಿತೆಡೆ ಬಂದು ತಲುಪಿದಳು. "ಏನಾ ನಮತು ತಾಯೀ? ಯಾಕೆ ಈ ಅಳು?' ಎಂದವಳು ಮತ್ತೆ ಪ್ರಶ್ನಿಸಿದಳು.

ಹರೋಗೆ ತನ್ನದುಃಖವನ್ನು ಲಾಜವಂತಿಯೊಡನೆ ತೋಡಿಕೊಳ್ಳುವುದು ಸರಿದೋರಲಿಲ್ಲ ಲಂತೆಯೇ ಅವಳೆಂದಳು— ಏನೂ ಇಲ್ಲ ತಾಯೀ...."

"ಹಾಗಾದ್ರೆ ಈ ಅಳು ಯಾಕೆ?"

ಹರೋ ದುಃಖದ ಕಟ್ಟೆಯೊಡೆದು ಮತ್ತೆ ಮತ್ತೆ ಅಳಲು ಮೊದಲಾದಳು.

"ನೆರೆಮನೆಯವಳಾಗಿಯೂ ನನ್ನಿಂದ ವಿಷಯವನ್ನು ಬಚ್ಚಿಡಿದಿರಮ್ಮಾ, ಹೇಳುಯೂಕೆ ಕಳ್ತಿಯೂ?" ಎಂದು ಲಾಜವಂತಿ ಪುನಃ ಪ್ರಶ್ನಿಸಿದಳು.

ಹರೋ ಉತ್ತರ ನೀಡಲಿಲ್ಲ; ಲಾಜವಂತಿ ಹಟಬಿಡಲಿಲ್ಲ. ಉಪ್ಪರಲ್ಲೇ ಅರುಣೋದಯವಾಗಿತ್ತು.

ಹರೋ ಕೊನೆಗೆ ಗದ್ಗದ ಪೂರಿತ ಕಂಠದಲ್ಲಿಂದಳು— "ನೀನು ಆ ದುಃಖವನ್ನು ದೂರ ಮಾಡುವಿಯೂ? ಅಂತಿದ್ದರೆ ಮಾತ್ರ ಹೇಳ ಬಲ್ಲ.'

"ಸಾಧ್ಯವಿದ್ದರೆ ಮಾಡಿಯೇ ತೀರುವೆ' ಲಾಜವಂತಿಯೆಂದಳು.

'ಅಸಾಧ್ಯವಾದರೆ....'

"ಜಗತ್ತಿನಲ್ಲಿ ಅಸಾಧ್ಯವೆನ್ನುವ ಮಾತೇ ಇಲ್ಲ. ಪರಮಾತ್ಮನೆಲ್ಲವನ್ನೂ ಸಾಧ್ಯವಾಗಿಸುತ್ತಾನವ್ವಾ."

ಹರೋ ಕೊಂಚಹೊತ್ತಿನವರೆಗೆಮೌನವಾಗಿದ್ದು ಮತ್ತೆ ನುಡಿದಳು— "ಮಗಳ ಚಿಂತೆ ತಲೆ ತಿನ್ನುತ್ತಿದೆ. ಅವಳ ಮದುವೆ ಯಾದ್ದ ದೊಡ್ಡ ಪ್ರಶ್ನೆಯಾಗಿದೆ. ನಿನಗೂಡಲಿ ಈ ಬಡವ!'

'ನಿನ್ನ ಮಗಳ ವಿವಾಹದ ಖರ್ಚನ್ನು ನಿನ್ನ ಸಹೋದರನಿತ್ತಿರುವನಲ್ಲ!"

'ಅಂತಿದ್ದರೆ ನಾನ್ಯಾಕೆ ಇಷ್ಟ ಚಿಂತಿಸ್ತು?'

'ಅದರೆ ಆ ಮೊತ್ತ ಸ.ಕ್ಕೆ.'

'ಪೂರ್ಣ ಸುಳ್ಳಲ್ಲ. ಆತ ೩೦೦ರೂಪಾಯಿ ಅಭರಣವಿತ್ತಿದ್ದಾನೆ. ಅದರೆ ಮಿರಿಯ, ಔಷಣ, ಮಂಟಪಕ್ಕೆಲ್ಲಾ ನಾನೆಕ್ಕಂದ ತರಲಿ? ಒಣ ರೊಟ್ಟಿಯ ನ್ನಾದರೂ ಹಂಚಲು ನನ್ನಲ್ಲಿ. ಚಿಕ್ಕಾಸೂ ಇಲ್ಲ....'

ಲಾಜವಂತಿಯು ಕೊಂಚ ಯೋಚಿಸಿ ಮತ್ತೆ ಬಾಯ್ತೆರೆದರು-"ಏನಪ್ಪಾ ಈ ಹಳ್ಳಿಯ ಜನ! ಈ ಬಡವಿಯ ಕನ್ಯೆಯ ವಿವಾಹ ಮಾಡಲೂ ಅಸಾಧ್ಯರೆ? ಅದವರ ಧರ್ಮವಲ್ಲವೆ?"

ಹರೋಳ ಕಣ್ಣಾಲಿಗಳು ತುಂಬಿ ಬಂದವು. ಅವಳು ಮೆಲ್ಲನೆ ಉಸುರಿದಳು-"ಇಲ್ಲ.ಈ ಬಡವಿಯ ನೆರವಿಗೆ ಯಾರೂ ಬರುತ್ತಿಲ್ಲ ಅಮ್ಮಾ."

"ಹೌದು! ಇದು ಹಳ್ಳಿಗಿಡೀ ಅಪಮಾನದ ವಿಷಯ. ಅಂತಿದ್ದರೆ ಮಗಳು ಕುವರಿಯಾಗಿಯೇ ಇರುತ್ತಾಳ್ಳ!'

"ದೈವೇಚ್ಛೆ ಹಾಗಿದ್ದರೆ ಯಾರೇನು ಮಾಡಲಿ ತಾಯಿ?'

ಲಾಜವಂತಿ ಹರೋಳ ಕರುಣಾರ್ದ್ರ ಸ್ಥಿತಿಯರಿತು ತುಂಬ ಮರುಕಗೊಂಡಳು; ಕನ್ನನ್ನೆ ಮರೆತಳು. ಅವಳ ಹೃದಯ ಕರಗಿ ನೀರಾಗಿತ್ತು. ಸ್ಫೂರ್ತಿ ತುಂಬಿದ ಮಾತುಗಳಲ್ಲಿ ಅವಳೆಂದಳು "ಜಿಂತೆಮಾಡದಿರು, ನಾನೇ ಸಂಕಷ್ಟದಿಂದ ನಿನ್ನೆನ್ನ ಪಾರು ಮಾಡಿಯೇ ತೀರುವೆ.ನಿನ್ನ ವಿವಾಹದ ಖರ್ಚನ್ನೆಲ್ಲಾ ನಾನೇ ನೀಡುವೆ ನಿನ್ನ ಮಗಳು ನನ್ನ ಮಗಳೂ ಆಕುದು!"

ಹರೋ ಇದನ್ನು ಕೇಳಿ ಸಂತೋಷಾತ್ಕರ್ಯಗಳಿಂದ ದಿಗ್ಭ್ರಾಂತಳಾದಳು ಅವಳ ಕಣ್ಣಿಂದ ಕೃತಜ್ಞತೆಯ ಕೋಡಿಯೇ ಹರಿಯಿತು. ಲಾಜವಂತಿಯು ತೀರ್ಥಯಾತ್ರೆಯ ಯೋಜನೆಯನ್ನು ಕೈಬಿಟ್ಟಳು. ಹರಿದ್ವಾರ್ಮಥುರಾ೨ಬೃಂದಾವನದೇವಾಲಯಗಳನ್ನು ಕಂಡು ಹೃದಯವಾದರೂ ಅರಳುತ್ತಿತ್ತು. ಆದರೆ ಲಾಜವಂತಿಗೆ ಒರ್ವ ಬಡವಿಯ ನೇನೆ ಮಾಡುವುದರಲ್ಲಿ ಆದರಿಂದಲೂ ಅಧಿಕ ಆನಂದವಿರುವುದೆಂದು ಕಂಡಿತು. ಅವಳು ಓಡುತ್ತಾ ಮನೆ ತಲುಪಿದಳು. ಪೆಟ್ಟಿಗೆಯಲ್ಲಿ ಯಾತ್ರೆಗೆಂದು ತೆಗೆದಿರಿಸಿದ 200ರೂಪಾಯಿಯನ್ನು ತಂದು ಹರೋಳ ಕೈಗಿರಿಸಿದಳು. ಲಾಜವಂತಿಯು ದುಃಖಿತ ಬದಲಿಗೆ ಸಂತೋಷಾತಿರೇಕದಿಂದ ತುಂಬಿದ್ದಳು!ಯಾವ ಸುಖವು ತ್ಯಾಗದಲ್ಲಿದೆಯೋ, ಅದು ಗ್ರಹಣದಲ್ಲೆಲ್ಲಿದೆ!!

— ೫ —

ಲಾಜವಂತಿಯು ತೀರ್ಥಯಾತ್ರೆ ವಿಚಾರವನ್ನು ಕೈ ಬಿಟ್ಟಿದ್ದು ಳಿ ಹಳ್ಳಿಗೆ ಹಳ್ಳಿಯೇ ಕ್ರೋಧಗೊಂಡಿತ್ತು. 'ಲಾಜವಂತಿಗೇಕಬೇಕಿತ್ತು ಈ ಅಧಿಕ ಪ್ರಸಂಗ? ದೇವಿ ಮೊತೆಯು ಕ್ರೋಧಗೊಂಡಿ ಇಡೀ ಹಳ್ಳಿಯು ಶಾಪಕ್ಕೆಳಗಾಯಿತು' ಎಂದು ಸ್ತ್ರೀಯರಾಗಿಯೋ ಇವರು ಊರಿ ಡೀ ಓತ

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಮನಮೆಚ್ಚುವ ಸರ್ವ ಸೌಕರ್ಯಗಳಿಂದೊಡಗೂಡಿದ

ವನಶ್ರೀ ಗೃಹ



ಹೊಟೆಲ್ ವನಶ್ರೀ ನಿವಾಸ

ಕುಂದಾಪುರ, ದ. ಕ.

ಫೋನ್: 77

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಶಾನೀಯುಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆವ ಏಕಮಾತ್ರ ಹೊಟೆಲ್.

ಅಷ್ಟಮಾ ರೋಗಿಗಳ ತಿಳಿವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೂಟ ಆಸ್ತಮಾ [illegible] ಬೂತಿಯನ್ನು ತಾ. 18—10—67 ನೇ ಹುಣ್ಣಿಮೆ ರಾತ್ರಿ ಬೀರಿನೊಂದಿಗೆ ಸೇವಿಸುವುದರಿಂದ ಆಸ್ತಮಾ, ನೆಗಡಿ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹೊಸ್ಸ ನೆಯ ಮೊದಲೇ ಬರೆಯಿರಿ.

Manager, Shri Mahatma Naga Baba Ayurvedashram,
P. O. Chitrakot U. P.

NAVAYUGA 12—10—1967
Registered with the Registrar
of News Papers for India
under No. K. N. 3540/'57

REGD. No. B. G. 176
LICENCE No. 31
Licensed to Post without Prepayment

ಣ ಹಾಕಿದ್ದು?" ಎಂದು ಹಳ್ಳಿಗೆ ಹಳ್ಳಿಯೇ ಪ್ರತಿಧ್ವನಿಸುತಿತ್ತು. "ಆಳಿದುಳಿದಿದ್ದಾನೆ ಒಬ್ಬನೇ ಹುಡ್ಗ. ಅವನನ್ನಾದರೂ ಉಳಿಸೋ ಆಶೆಯಿಲ್ಲಾ ಇವಳಿಗೆ. ಇದೆಲ್ಲಾ ಕಲಿಯುಗದ ಮಹಿಮೆಯಲ್ಲದೆ ಮತ್ತೇನು?" ಎಂದು ಹಳ್ಳಿಯ ಮಬದಿಗೂ ಬೆಡಳು ತಮ್ಮಲ್ಲೆ ಮಾತಾಡಿಕೊಂಡವು. "ಇದುವರೆಗೆ ಮನುಷ್ಯ ಮನುಷ್ಯನಿಗೆ ಪೋಸ ಕೊಡುತಿದ್ದ. ಈಗಲೇ ಪ್ರಾಣ ಕೊಡೋಕೆ ಸುರುಮಾಡಿದ್ನಲ್ಲಾ" ಅಂತ ಅನುಭವಸ್ತ ಮುದುಕರಾಡುತಿದ್ದರು. ಮೊದಲಿಗೆಲ್ಲ ಲಾಜವಂತಿ ಈ ಮಾತುಗಳನ್ನು ಹಚ್ಚಿಕೊಳ್ಳದಿದ್ದರೂ, ಮತ್ತೆ ಹಳ್ಳಿಯಿಡೀ ಈ ರೀತಿ ಬುಸುಗುಟ್ಟುವುದು ಕೇಳಿ ಅವಳು ದಿಗ್ಭ್ರಾಂತಳಾದಳು.

'ನಾನೇನು ತಪ್ಪು ಮಾಡಿರುವೆ? ಓರ್ವ ಬಡ ಮುದುಕಿಯ ಮಗಳ ವಿವಾಹಕ್ಕೆ ಸಹಾಯ ನೀಡಿದ್ದೂ ತಪ್ಪಾಯಿತೆ? ದೇವಿಮತೆಗೆ ಅದೂ ಹಿತವೆನಿಸಲಿಲ್ಲವೆ? ತೀರ್ಥಯಾತ್ರೆಯ ವಿಚಾರವನ್ನೇನೂ ನಾನು ಕೈಬಿಟ್ಟಿಲ್ಲ, ಮುಂದರಿಸಿದ್ದೇನೆ ಪೈ." ಎಂದು "ಜನಸೇವೆಯೇ ಜನಾರ್ಧನ ಸೇವೆ"ಯೆಂದರಿತ ಲಾಜವಂತಿ ಚಿಂತಿಸಿದಳು.

ಜಗತ್ತು ಕೆಟ್ಟ ಕೆಲಸಗಳಿಗಾಗಿ ಪಶ್ಚಾತ್ತಾಪ ಪಡುತ್ತಿದ್ದರೆ ಲಾಜವಂತಿ ತನ್ನ ಸುಕಾರ್ಯಕ್ಕಾಗಿ ಪಶ್ಚತ್ತಾಪ ಪಡಬೇಕಾದ ಪ್ರಸಂಗ ಬಂದಿತ್ತು.

ಲಾಜವಂತಿಯು ಮನೆಯ ಹೊಸ್ತಿಲನ್ನು ದಾಟಿದರೆ ಒಂದೇ ಸವನೆ ಕೊಂಕು ನುಡಿಗಳು ಕಿವಿಯನ್ನು ಬಂದು ಸೇರುತ್ತಿದ್ದವು. ಅವಳಿಗೆ ಇದನ್ನು ಕೇಳಿ, ಕೇಳಿ ಮನಸ್ಸಿಗೆ ಚಿಟ್ಟು ಹಿಡಿಯಿತು. ಅವಳಿಗೆ ರಾತ್ರಿ ನಿದ್ರೆಯೂ ಬಾರದಾಯಿತು.

ಇದೇ ರೀತಿ ಹಲವಾರು ದಿನಗಳು ಕಳೆದವು. ಹರೋಣ ಮನೆಯಲ್ಲಿ ಮದುವೆಯ ಸಡಗರ ವಾದ್ಯ ಘೋಷಗಳು ಮೊಳಗುತ್ತಲಿದ್ದವು. ಅಂದು ಲಾಜವಂತಿಯು ಮನೆಯಲ್ಲಿ ಸಡಗರವಿದ್ದಾಗ ಹರೋ ದುಃಖಿತಸ್ತಳಾಗಿದ್ದಳು. ಇಂದು ಹಳ್ಳಿಗರ ಕೊಂಕು ನುಡಿಗಳಿಂದ ಲಾಜವಂತಿಯ ಮನ ನೊಂದು ಹೋಗಿತ್ತು. ಕಾಲದ ಮಹಿಮೆ!

ರಾತ್ರಿಯ ಹೊತ್ತು. ಲಾಜವಂತಿಯು ಹಳ್ಳಿಯ ದೇವಾಲಯದ ಕಡೆಗೆ ತೆರಳಿದಳು. ದೇವಸ್ಥಾನದ ದ್ವಾರ ತಲುಪುತ್ತಲೆ ಅವಳಿಗೆ ಕಾಲೇ ಬರಲಿಲ್ಲ. ದೇವಿಯ ಕಣ್ಣಾಳು ತನ್ನ ಮೇಲೆ ನಿಟ್ಟುಗೊಂಡು ಕೆಂಪಡರಿದಂತೆ ಅವಳಿಗೆ ತೋಚಿತು. ಅವಳು ಹೆದರಿ ಅಲ್ಲೆ ನಿಂತಳು.

ಆಪ್ತರಲ್ಲೆ ಯಾರೋ ಪ್ರಾರ್ಥಿಸುತ್ತಾ ದೇವರಲ್ಲಿ ಬೇಡಿಕೊಳ್ಳುತ್ತಿದ್ದರು. ಲಾಜವಂತಿಯು ಆದನ್ನು ಆಲಿಸಿದಳು—"ದೇವಿ ಮಾತೆ! ಅವಳು ಚಿರಂಜೀವಿಯಾಗಿ ಬಾಳಲಿ, ಅವಳ ಮಗನು ಶತವರ್ಷ ಬಾಳಲಿ ಅವಳು ನನ್ನ ಈ ಬಡವಿಯನ್ನು ಕಷ್ಟದಿಂದ ಪಾರು ಮಾಡಿದಳು. ಇದೋರ್ವ ಮುದಿ ಬ್ರಾಹ್ಮಣಿಯ ವಾರ್ಥನೆ. ಅವಳೆಂದು ನನ್ನ ಹೃದಯವನ್ನು ತಣಿಸಿದಳೋ ಆಂತೆಯೇ ನೀನವಳನ್ನು ಹರಸು ದೇವಿ!'

ಇದು ಹರೋಣ ಪ್ರಾರ್ಥನೆಯಾಗಿತ್ತು. ಲಾಜವಂತಿಯು ಇದನ್ನು ಕೇಳಿ ಹರ್ಷಭರಿತಳಾದಳು. ಅವಳು ಅಳುತ್ತಾ ಹರೋಣ ಕಾಲಿಗೆ ಬಿದ್ದಳು.

— ೬ —

ರಾತ್ರಿ ಕನಸಿನಲ್ಲಿ ಲಾಜವಂತಿ ಮತ್ತೆ ದೇವಿಯ ಸನ್ನುಖದಲ್ಲಿದ್ದಳು. ದೇವಿಯು ಸಿಂಹಾಸನದಿಂದಿಳಿದು ಲಾಜವಂತಿಯನ್ನು ಆಲಂಗಿಸಿಕೊಂಡಳು, ಮತ್ತೆ ನುಡಿದಳು "ನೀನೋರ್ವ ಬಡವಳ ಸೇವೆಮಾಡಿರುವಿ. ನಿನ್ನ ಕೆಲಸವು ಸ್ತುತ್ಯಾರ್ಹ. ಅನ್ಯರು ತೀರ್ಥಯಾತ್ರೆ ಮಾಡಿದರೆ ನೀನು ಮಹಾ ತೀರ್ಥಯಾತ್ರೆಯನ್ನೆ ಮಾಡಿರುವಿ. 'ಜನತಾ ಸೇವೆಯೆ ಜನಾರ್ಧನನ ಸೇವೆ. ಇದು

ದಿ|| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಆಂಗ್ಲ ಸ್ವಯಂಬೋಧಿನಿ
ಸುಲಭದಲ್ಲಿ ಇಂಗ್ಲಿಷ್
(English Made Easy)
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಸುಲಭದಲ್ಲಿ ಪತ್ರಲೇಖನ
(Letter Writing Made Easy)
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಬೆಲೆ: ರೂ. 1-25 (ಟ್ಯ.ಖ.ಪ್ರತ್ಯೇಕ)
ಡಾ|| ಕೊರಡ್ಕಲ್ ವೆಂಕಟ್ರಾವ್ ವಿರಚಿತ
ಮನೆ - ಮದ್ದು
(Home-Remedies)
ನೂರಾರು ಕಾಹಿಲೆಗಳಿಗೆ ಮನೆಯಲ್ಲೆ ಮದ್ದು ನೂಡಿಕೊಳ್ಳುವ
ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ. ಖ. ಪ್ರತ್ಯೇಕ)
—ಪ್ರತಿಗಳಿಗಾಗಿ ಅರಿಯಿರಿ—
ಪವರ್ಧಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ತೀರ್ಥಯಾತ್ರೆಗಿಂತಲೂ ಮಿಗಿಲು."

ಲಾಜವಂತಿ ಕಣ್ತೆರೆದಳು. ಅವಳು ಗರ್ಭಗುಡಿಯ ಸಂತಸದಲ್ಲಿ ತೇಲಾಡಿದಳು. ಮಹಾಜೆಯ ರಹಸ್ಯ ಇಂದವಳಿಗೆ ಅರಿವಾಯ್ತು.

ಸಾಕು ಬಾರೆ ಸನಿಹಕೆ

ನೀಲ ವಸನವುಟ್ಟ ಬಾಲೆ
ಮುಡಿಗೆ ಜಾಜಿ ಮುಗುಳ ಮೂಲೆ
ತುಂಟ ನಗೆಯು ಬೀರ್ವೆಯಲ್ಲೆ!—
ಸಾಕು ಬಾರೆ ಸನಿಹಕೆ.

ಬೀರುತಿರುವ ಓರೆ ನೋಟ
ರಸಿಕ ಮನಕೆ ನಿಜದ ಮೂಟ
ಬಳುಕಿ ನಡೆವ ಸೊಬಗಿನಾಟ—
ಸಾಕು ಬಾರೆ ಸನಿಹಕೆ.

ನುಡಿಸಲೊಂದು ನುಡಿಯು ಲಾರೆ
ನೆಟ್ಟ ದೃಷ್ಟಿ ತೆಗೆಯಲಾರೆ
ಬಯಕೆಯನ್ನು ಉಸುರಲಾರೆ—
ಸಾಕು ಬಾರೆ ಸನಿಹಕೆ.

ಶುಭ್ರ ಚಂದ್ರ ಕಿರಣ ಚೆಲ್ಲೆ,
ಧರೆಯು ವೈಯ್ಯ ತುಂಬಿ ನಿಲ್ಲೆ,
ಸುತ್ತು ಮುತ್ತು ಕೃತ್ರಿಯಲ್ಲೆ
ಸಾಕು ಬಾರೆ ಸನಿಹಕೆ.

ಮನವು ಮನವ ತಿಳಿಯಲಲ್ಲಿ
ಹೃದಯ ತುಂಬಿ ಬಂದಿತಲ್ಲಿ
ಜಿಹ್ವೆಗಿನ್ನು ಕಾರ್ಯವೆಲ್ಲಿ?
ಸಾಕು ಬಾರೆ ಸನಿಹಕೆ.

ಬಿಂದ ಹೊವು, ಒಲಿದ ಮವವು
ತಿಳಿದ ಕೊಳದ ನೀರು ಜೆಲುವು
ನವ್ಯ ಮಿಲನ ಸಗ್ಗ ಸುಖವು —
ಸಾಕು ಬಾರೆ ಸನಿಹಕೆ.

—ಕಾ. ಶ. ನಾ. ಭೆ.
ಬೆಳ್ಕೆಸೊಡ್ಲೂರು, ದ. ಕೊಡ

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

ಶ್ರವನಂಬ್ರ 222/1967

ಅನಂತ ಉಳ್ಳೂರ —ವಾದಿ
1 ಕೆ. ಮಂಕಪ್ಪ ನಾಯ್ಕ 2, ಕೆ. ಸುರೇಂದ್ರ ನಾಯ್ಕ —ಪ್ರತಿವಾದಿರು

ಸದ್ರಿ ದಾವೆಯ 2ನೇ ಪ್ರತಿವಾದಿ ಕೆ. ಸುರೇಂದ್ರನಾಯ್ಕ್, ನಾರಾಯಣ ನಾಯ್ಕರ ಮಗ, ಕುಂದಾಪುರ ತಾಲ್ಲೂ ಶಾವರಾಡಿ ಗ್ರಾಮದ ಕಂಡ್ಲೂರು ಕಲಾರ ವೈಲಲ್ಲಿರುವನ.

ಇವರಿಗೆ

ನೀವು ಕೂಡಾ 2 ಜನರು ವಾದಿಗೆ ತಾ. 16—6—1961ರಲ್ಲು ರೂಪಾಯಿ 800ಕ್ಕೆ ಅಡಿಸ್ಕ್ರಿಪ್ಷನ್ ಬರೆಕೊಟ್ಟ ದಿನಾಂಕ ನೋಟಿನ ಪ್ರಕಾರ ಬರತಕ್ಕ ಅಸಲು ಬಡ್ಡಿ ಹಣ ರೂ 981—55 ಪೈಸೆ ಕೋರ್ಟು ಖರ್ಚು ವಗೈರೆ ಬಗ್ಗೆ ನಿಂದು ವಿ.ಲೆ ಮಾಡಿದ ಮೇಲಿನ ದಾವೆಯು ನಿಂದು ಡಂಜರಾಯಿ ಬಗ್ಗೆ ತಾ ೦೯ನು 28—10—1967ಕ್ಕೆ ಆಕ್ಷೇಪ ಸಾರಿಗೆ ತಪ್ಪಿಗೆ ಯಿಡೋಷಾಗಿದೆ. ಈ ಕಾರಣ ನಿಂದು ಆಕ್ಷೇಪ ಇದ್ದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜವಾಬ್ದಾರು ಮಾಡಿಕೊಳ್ಳಕ್ಕೆ ತಪ್ಪಿದ್ದಲ್ಲಿ ದಾವೆಯನ್ನು ಏಕ ಪಕ್ಷದಲ್ಲಿ ತೀರ್ಮಾನಿಸಲಾದೀತು.

(ಕೋರ್ಟು ಡ್ಯೂಂ ಪ್ರಕಾರ)

G. Ramakrishna Rao,
B. A, LL. B,
Advocate

ಕುಂದಾಪುರ, 2—10—1967

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 286/19

ಮಂಗೇಶ ಶಾನುಭಾಗ —ವ

ಮತ್ತು

ಶಮಶುದ್ದೀನ್ ಸ್ಯಾಬ ಕೊಡಾ —ಪ್ರತಿವಾ

ನೇ ಪ್ರತಿವಾದಿಯ ಬೀಬಿರಾಬಿಯ, ಆಹ ದ್ ಯೂನೆ ಅಮ್ಮೂರ್ ಬಾತ್ಯಾ ಸ್ಯಾಬರ್ ಪ್ಪಿ, ನಂಬ್ರ 1ನೇ ಶಿರೂರು ಗ್ರಾಮದಲ್ಲಿ ಳು—

ದಾವೆಗೆ ತಾ. 30—6—1989ರ ಸ್ಪ್ರಿ ಮೂಲಗೇಣ ಎದುರ್ಸಾದಿ ಪ್ರಕಾರ ಜ ನ್ಯಾಯವಾದ ಗೇಣಿ ಬಾಕಿ ಬಗ್ಗೆ ಮೊ ಮೇಲೆಕಾಣಿಸಿದ ದಾವೆಯು ತಾ.28—10— ಕ್ಕೆ ತನ್ಮಗೆ ಯಿಟ್ಟರುತ್ತಿಂತಲೂ ಆ ದಿ ಹಗಲು 10 ಘಂಟೆಗೆ ಕೋರ್ಟು ಮು ಸ್ವತಃವಾ ಯಬೀರರ ಪರವಾಗಿ ಹಾ ಆಗಲಿಕ್ಕೆ ತಪ್ಪಿದ್ದೆ ಸದ್ರಿ ದಾವೆಯ ಮುಂ ತನ್ಮಯ ನಡೆಯುತ್ತದೆಂತಲೂ ಸಹಾ ಪ್ರತಿವಾದಿಗಳಿಗೆ ಈ ಮೂಲಕ ತಿಳಿಸಲಾಗು ತ್ತದೆ.

G. Sanjeeva R
Vakil for Plain

ಕುಂದಾಪುರ, 1—9—67

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

—10—1967

೨೦ ಪೈಸೆ

ಹಣವಲ್ಲ, ಗುಣ

ಶ್ರೀ ಎನ್. ಎಚ್. ಗಣಪತಿ

'ಹಣವಲ್ಲ ಗುಣ' ನಿಜ ನಿಜ. ವಂಶ ಪಚ್ಚಪದಂತಿರುವ ಮೋಹನನನ್ನು ನಾನು ಕೇವಲ ಹಣದ ಮೋಹದಿಂದಲೇ ಬಲಿ ಕೊಟ್ಟೆ. ಅಂದು ಮೋಹನನು ಅದೆಷ್ಟು ಪರಿಯಿಂದ ಬೇಡನೆಂದು ಬೇಡಿಕೊಂಡರೂ ಲಕ್ಷಿಸದೇ ಅಪ್ಪನೆಂಬ ಅಧಿಕಾರದಿಂದ ಧಿಕ್ಕರಿಸಿದೆ.

ಗೋವಿಂದರಾಯರ ಸ್ಮೃತಿ—ಪಟಲದ ಮೇಲೆ ಐದು ವರ್ಷಗಳ ಹಿಂದಿನ ಆ ಚುಚ್ಚಳಿಯದ ದುರಂತ ಘಟನೆಗಳು ತೆರೆಯ ಮೇಲಿನ ಚಿತ್ರಗಳಂತೆ ಒಂದರ ಮೇಲೊಂದು ಹಾದು ಹೋದವು!

"ನಿನ್ನನ್ನು ಸಲಹಿದ ಉಪಕಾರವನ್ನೂ ಮರೆತೆಯೊ? ನೋಹನಾ, ತಂದೆ ಎಂಬ ಲಘುವಾನ ನಿನಗಿದ್ದುದಾದರೆ ನನ್ನ ಮಾತನ್ನು ದೂರೀಕರಿಸದಿರು. ಮೋಹನಾ ಯೋಚಿಸು, ಜೀನ್ಸಾಗಿ ಯೋಚಿಸು. ಶಾಮಲಳನ್ನು ಆನ ಮಾಡಿಸಿ ಒಪ್ಪು. ಸ್ವಲ್ಪ ಕಷ್ಟಾಗಿದ್ದರೇನಂತೆ? ಲಕ್ಷಣವಾಗಿರುವಳು." ಒಂದೇ ಸವನೆ ಉದ್ವೇಗ ತುಂಬಿದ ಧ್ವನಿಯಲ್ಲಿ ನುಡಿಯುತ್ತಿದ್ದರು ಗೋವಿಂದರಾಯರು.

"ಅಪ್ಪಾ, ಆ ಶಂಕರಯರದ ಆ ಮೋಹನನದಾಸರ ಹುಡುಗಿ ತಾನೆ? ಕಷ್ಟಕಾಳಿ! ಜಂಬದ ಕೋಳಿ!'

"ಪೆಪ್ಪ, ಕಷ್ಟಾದರೇನು-ತೇದು ತಿನ್ನು ವೆಯೂ ಅವಳನ್ನು?"

"ಅಪ್ಪಾ, ನಾನು ತಿನ್ನದಿದ್ದರೂ, ಅವಳೇ ನಮ್ಮನ್ನೆಲ್ಲ ತೇದು ತಿನ್ನುತ್ತಾಳೆ.'

"ಹೂಂ. ನಾಳು ಮಾಡು ನಿನ್ನ ತಲೆ ಹರಟೆ. ಕೇಲದಷ್ಟಕ್ಕೆ ಉಕ್ತರಿಸು—ಮೊದಲು—ತೇದು ತಿನ್ನಲಿಕ್ಕೆ ಅವಳೇನು ರಾಕ್ಷಸಿಯೋ? ಭೂತ—ಪಿಶಾಚಿಯೋ?'

"ರಾಕ್ಷಸಿಯಲ್ಲದಿದ್ದರೂ ರಾಕ್ಷಸೀ ಗುಣ ಬೇರೂರಿದೆ ಅವಳಲ್ಲಿ. ಅಲ್ಲದೇ ಸಿರಿವಂತಿಕೆಯ ಭೂತ ಬಡಿದ ಅವಳಿಗೆ, ಇಂಟರಿನಲ್ಲಿ ಫೇಲಾಗಿದ್ದೇನೆಂಬ ಜಂಬ ಬೇರೆ ಸೇರಿದೆ.'

"ಸ್ವಾಥವಿಕವೇ, ನಿಮ್ಮಂಥ ಕಲಿತವರಿಗೇ ಹಾಗೆ. ಏನೋ ಸ್ವಲ್ಪ ಮುದ್ದಿನಿಂದ ಸಾಕಿದ್ದಾರೆ. ಅದಕ್ಕೇ ಸ್ವಲ್ಪ ಜಂಬಾ ಇರಬಹುದು. ಮದುವೆಯಾಗಿ ಯಾವಾಗ ಗಂಡನ ಮನೆ ಸೇರಿದಳೋ ಆಗ ಬೇಡಾ ಅಂದ್ರೆ ಜಂಬಾ—ಗಿಂಬಾ ಎಲ್ಲಾ ಇಳಿದು ಹೋಗಿ ಬಿಡುತ್ತೆ."

'ಸ್ವಾರದಾಸ್ಪಿ, ಸುಗುಣವಂತಳಾದ ಆ ಶಾಮ.ರಾಯರ ಹುಡುಗಿಯನ್ನೇಕೆ ನೀನು ಫಿರಾಕರಿಸಿದ್ದು?'

"ಹುಚ್ಚಾ, ಗುಣ ಮುಖ್ಯವಲ್ಲ—ಪ್ರಾಮುಖ್ಯ ಹಣ. ಬಡ ಕುಟುಂಬ ಅಂತಾನೇ ಹೆಜ್ಜೇನೂ ಕೇಳದೆ ಐದು ಸಾವಿರ ನಗದು ಕೆಲವು ಒಡವೆ ಕೇಳಿದ್ದು ತಪ್ಪೇ?"

"ಅಬ್ಬಬ್ಬಾ!! ಎರಡೊತ್ತಿನ ಊಟಕ್ಕೂ ಗತಿ ಗಾಣದ ಬಡ ಕುಟುಂಬದವರ ಹತ್ತಿರ ಐದು ಸಾವಿರ ಕೇಳಿದಿರಾ—ನಮ್ಮಲ್ಲಿದ್ದ ಇಷ್ಟು ಸಂಪದ ಸಾಲದೇ?'

"ಸಂಪತ್ತು ಸಾಕೆಂಬುದಿದೆಯೇ? ಸಮುದ್ರಕ್ಕೆ ಎಷ್ಟು ನೀರು ಸೇರಿದರೂ ಹೇಗೆ ಸಾಕಾಗೋದಿಲ್ಲವೋ ಹಾಗೆ ಈ ಸಂಪತ್ತೂ—ಎನ್ನೋದು. 'ಗಾಳಿ ಬಂದಾಗ ತೂರಿಕೊಳ್ಳಬೇಕಲ್ಲವೇ' ಆ ಮೇಲಲ್ಲ."

'ಬೇಡಪ್ಪಿ. ಖಂಡಿತ ಬೇಡ. ಸಾರಿ ಹೇಳತೀನಿ ನಿಮಗೆ ಆ ರಾಮರಾಯರ ಹುಡುಗಿ ಇಸ್ಪ ಇಲ್ಲದಿದ್ರೆ, ಒಳ್ಳೆ ರೂಪ, ಗುಣ, ವಿದ್ಯೆ, ವಿನಯ, ನಡತೆಯಿದ್ದ ಬೇರೆ ಹೆಣ್ಣನ್ನು ಗೊತ್ತುಪಡಿಸಿರೇ ಹೊರತು ಈ ಬಣ್ಣದ ಚಿಟ್ಟೆ ಸರ್ವಥಾ ಬೇಡ. ಬೇರೆ ಮನೆಗೆ ಹೆಣ್ಣನ್ನು ತರುವದು ನಮ್ಮ ಬಾಳು ನಂದನವನ ಮಾಡಲಿಕ್ಕಲ್ಲದೇ ನರಳ ಮಾಡಲಿಕ್ಕಲ್ಲ ವಷ್ಟೆ?"

"ನಾಳು ಮಾಡು ನಿನ್ನ ಉಪನ್ಯಾಸ. ಎರಡಕ್ಷರ ಇಂಗ್ಲೀಷು ಮಾತಾಡಲಿಕ್ಕೆ ಬರುತ್ತದೆಯಂತಾ ನನ್ನೊಡನೆ ದರ್ಪ ತೋರಿಸತೊಡಗಿದ್ದಾನೆ. ವರದಕ್ಷಿಣೆ, ವರೋಪಚಾರಗಳಲ್ಲದೆ ಮದುವೆ ಮಾಡಿಸಿಕೊಳ್ಳಲಿಕ್ಕೆ ನಾನೇನು ತುತ್ತನ್ನಕ್ಕೆ ಗತಿಯಿಲ್ಲದವರೆಂದು ತಿಳಿದಯಾ? ಹೋಡು, ಯೋಚಿಸು, ಮೋಹನದಾಸರೊಡನೆ ವಾತುಕತೆ ನಡೆಸಿ ಎಲ್ಲಾ ನಿಷ್ಕರ್ಷೆ ಮಾಡಿದ್ದೀನಿ. ಈಗ ಹತ್ತು ಸಾವಿರ ನಗದು, ಒಂದು ಅಂಬಾಸೆಡರ್ ಕಾರು, ಒಂದು ಕೈಗಡಿಯಾರ, ಎರಡೆಳೆ ಬಂಗಾರದ ಚೈನು ಸರ, ಎರಡು ಉಂಗುರ, ಮಂಗಳಂತರ ಒಡವೆಗಳಿಂದಲೇ ತುಂಬಿಸಿ ಬಿಡ್ತಾರೆ. ಅದೂ ಅಲ್ಲದ ಒಬ್ಬಳೇ ಮಗಳು ಎಲ್ಲಾ ಆಸ್ತಿ ಪಾಡಿಗೇ ಅಂತಾ ಒಪ್ಪಿ ಕೊಂಡಿದ್ದಾರೆ. ಹೇಳು ಈಗ ನಿನ್ನ ಮನ ನಿರ್ಧಾರ ..'

'ಅಪ್ಪಯ್ಯಾ ನಿರ್ಧಾರ? ನಿಮ್ಮ ನಿರ್ಧಾರವೇ ನನ್ನದೆನ್ನ ಬೇಕಂದು—ಹಾಗೆ ತಾನೆ ಅನ್ನುವದು? ಆಗಲಿ ಹಣದ ಭೂತ ಹಿಡಿದ ನಿಮ್ಮೊಡನೆ ಹೇಳ ಪ್ರಯೋಜನವೇನು?

ಸೊಸೆಯಿಂದಲೇ ಹೀನಾಮಾನವಾಗಿ ಬೈದು ಅವಮಾನಿತನಾದಗಲೇ ಗೊತ್ತಾಗಲಿ ಹಣದ ಗುಣ.

ನಿಮ್ಮ ಮನ ಸಮಾಧಾನಕ್ಕಾಗಿಯೇ ಒಪ್ಪುವ. ಆದರೆ ನೆನಪಿರಲಿ. ಶಾಳಿನ ಜೀವಿತ—ಕಡಕುಗಳ ಬಗ್ಗೆ ನಾನು ಮಾತ್ರ ಹೊಣೆಗಾರನಲ್ಲ.'

ಗೋವಿಂದರಾಯರು ಫೈಗೆ ಸ್ವರ್ಗವನ್ನು ಟಕೆದ ಹಿಗ್ಗಿನಲ್ಲಿದ್ದರು. ಇನ್ನು ತಮ್ಮನ್ನು ನೆಯಲ್ಲಿ ಭಾಗ್ಯ—ಲಕ್ಷ್ಮಿಯು ತಾಳ್ಮು ಮುರಿದು ಬಿದ್ದಿರುತ್ತಾಳೆಂದು ಬಗೆದು ಸಂತೋಷಪಟ್ಟರು. ಆಂತೂ ಅದ್ದೂರಿಯಿಂದ ಮದುವೆ — ಮುಗಿಯಿತು. ಎಡೆಕೆಗಿಂತ ಹೆಚ್ಚೇ ವರದಕ್ಷಿಣೆ—ವರೋಪಚಾರಗಳನ್ನು ಸಂದಿದ್ದವು. ಶುಭಮುಹೂರ್ತದಲ್ಲಿ ಸೊಸೆಯಾಗಿ ಬಂದಳು 'ಶಾಮಲ' ಗೋವಿಂದರಾಯರ ಮನೆಗೆ ಸಂತೋಷ ಸಮಾಧಿಯಲ್ಲಿಯೇ ಮಲಗಿದ್ದರಾಯರು ಬೆಚ್ಚಿ ಎಚ್ಚರಾಗುವಂತೆ ಏಳಲು ತಡವಾಗಲಿಲ್ಲ!

ಮೊದಲೇ ಹಣವೆಂದರೆ—ಬಾಯಿ ಬಿಡುವ ರಾಯರು ಸೊಸೆಯ ಮಿತಿಮೀರಿದ ವೆಚ್ಚದಿಂದ ಕೊರಗತೊಡಗಿದರು—ಅವಳೊಡನೆ ಮನಬಿಚ್ಚಿ ನುಡಿಯಲಾರದೆ.

ದಿನ ಒಂದಕ್ಕೆ ಇಪ್ಪತ್ತೈದು ರೂಪಾಯಿಗಳೂ ವಾಕಿಂಗಿಗೆ ಪೆಟ್ರೋಲಿಗೆ ಸಾಲುತ್ತಿರಲಿಲ್ಲ. ಅಲ್ಲದೇ ಮಹಿಳಾ ಸಂಘ, ಆ ಸಂಘ, ಈ ಸಂಘವೆಂದು ದಿನದಿನವೂ ಒಂದು ಸಾವಿರ — ಅದಕ್ಕೂ ಮಿಕ್ಕಿ ಬೇಡುತ್ತಿದ್ದಳು ಮೊನವನವ ಹತ್ತಿರ. ಇದಕ್ಕಾಶನ್ನೂ ಅನಾಮೂಸವಾಗಿ ಖರ್ಚು ಮಾಡದ ರಾಯರು ತಮ್ಮ ಶ್ರೀಮಂತಿಕೆಗೆ ಎಲ್ಲಿ ಅವಮಾನವಾಡೀತೋ ಅಲ್ಲವೆಂದು ತಮಗೆ ಬಿರುದೂ ಬರುತ್ತದಲ್ಲ ಎಂದು ಕೇಳಿದಾಗಲೆಲ್ಲ ಕೊಟ್ಟರು. ಆದರೆ ಮಿತಿಮೀರಿದ ಹಣದ ಬೇಡಿಕೆಯಿಂದಾಗಿ ಶ್ರೀಮಂತರೆನಿಸಿದ ರಾಯರು ಸೊಸೆಗೆ ಹಣದ ಕೂರೈಕೆ ಪೂಡದಾದರು.

ಮಗನಿಗೆ ತಿಳಿಸಿ ಮುಂದಿನ ಕ್ರಮ ಕೈಗೊಳ್ಳೋಣವೆಂದರೆ ಆತನು ಎಂದೊ ಮಾತನ್ನು ಮುಗಿಸಬಿಟ್ಟಿದ್ದಾನೆ. ಇನಳಿಗ ಹೇಳೋಣವೆಂದರೆ ಒಂದುಕಡೆ ಅವಮಾನ.... ಇನ್ನೊಂದೆಡೆ ಲಜ್ಜೆ. ಏನು ಮಾಡುವದು ಎಂದು ಯೋಚನೆಗೊಳಗಾದ ರಾಯರು ಒಂದು ದಿನ ತಾನೇ ಸೊಸೆಗೆ ಸ್ವಲ್ಪ ಬಿಸ ನುಡಿಯಬೇಕೆಂದು ಗಮಯ ಕಾಯುತೊಡಗಿದರು.

ಂ ಂ ಂ

ಎಂದಿನಂತೆ ಒಂದು ದಿನ ಸಂಜೆ ವಾಕಿಂಗಿಗಾ ಹೊರಡುತ್ತಿದ್ದ ಶಾಮಲಳಾ ಮೊವನವರೊಡನೆ "ನನಗಂದು ಒಂದು ಸಾವಿರ ರೂಪಾಯಿಗಳ ಅಗತ್ಯವಿದೆ. ಬಗ್ಗಿ ಕೊಡುವಿಂತ' ಎಂದಳು.

ರಾಯರ ಕೋಪ ಮಿತಿ ಮೀರಿತು. ಆದರೂ ಸಮಾಧಾನದ ನುಡಿಯಲ್ಲಿ, 'ಏನಮ್ಮಾ, ಹೀಗಲ್ಲಾ ಮುಂದು ವೆಚ್ಚ ಮಾಡುವುದೇ? ವೆಚ್ಚಕ್ಕೂ ಒಂದು ಮಿತಿಯಿರಬೇಡವೇ?' ಎಂದುಂ.'

"ಏನು ನಾನು ಕಾಲೇಜ ಕಲಿತದಕ್ಕೂ ಸುಮ್ಮನಾಯಿತೆ? ನನ್ನನ್ನ ಹಣದ ಬೆಲೆ ಅರಿಯದಷ್ಟು ಮೂರ್ಖಳೆಂದು ತಿಳಿದಿರಾ?"

"ಹಾಗಿದ್ದರೆ ನಿನ್ನೆ ತೆಗೆದು ಕೊಂಡ ಸಾವಿರ ಏನು ಮಾಡಿದೆ?"

'ಓಹೋ, ಅದೋ? ನಿನ್ನೆ ನಿಮ್ಮ ಹತ್ತಿರ ಐದು ಸಾವಿರ ಪಡೆದವಳು ನೇರವಾಗಿ ಹುಬ್ಬಳ್ಳಿಯ ಮಿಟ್ಟೂಗಿಗೆ ಹೋದೆ. ನನ್ನನ್ನೇ ಅಧ್ಯಕ್ಷೆಯೆ ಸನ್ಮಾನಿಸಿ ಮಾಡಿದರು ಇಂದಿನ ವಿದ್ಯಾವಶ್ಯಕತೆ, ಆದಯಲ್ಲಾ ಶ್ರೀ

(ಹನ್ನೊಂದನೇ ಪುಟ ನೋಡಿರಿ)

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

ಓ ಸ 100/1967

ಲಕ್ಷ್ಮಿಪತಿ —ವಾದಿ

ಜಿನರಾಜ ಆರಿಗ ಕಮಟ —ಪ್ರತಿವಾದಿರು

ಮೇಲ್ಕಂಡ ವ್ಯಾಜ್ಯದ ನಿಮಿತ್ತ ಪ್ರತಿವಾದಿ ಬೆಳ್ತಂಗಡಿ ತಂಲೂಕು ಪೇಣೂರು ಗ್ರಾಮದ ಜೈನ್ ಪೇಟೆಯಲ್ಲಿರುವ ಶ್ರೀಮತಿ ತಂಗಳ್ಳೆ ಹೆಂಗ್ಸುರವರ ಮಗ ಶ್ರೀ ಅನಂತರಾಜ ಇವರಿಗೆ ಈ ಕಛೇರಿಯಿಂದ ಕೋರ್ಟಿನ ಕ್ರಮ ಪ್ರಕಾರ ತಿಳಿಸುವದೇನೆಂದರೆ.—

ವಾದಿ ನಿಮ್ಮ ಮೇಲೆ ಮಾಡಿರುವ ಮೇಲಿನ ವ್ಯಾಜ್ಯದ ನಿಮ್ಮ ಹಾಜರಾತಿ ಬಗ್ಗೆ ತಾ. 6—11—1967ಕ್ಕೆ ಇಟ್ಟಿರುತ್ತದೆ. ಸದ್ರಿ ನ್ಯಾಯದ ದಿವ್ಸ ನೀವುದೇನಾದರೂ ಆಕ್ಷೇಪವಿದ್ದಲ್ಲಿ ಖುದ್ದು ಸ್ವತಹ ಯಾ ವಕೀಲರ ಮೂಲಕ ಕೋರ್ಟಿಗೆ ಹಾಜರಾಗಿ ಉದಹರಿಸಿ ತಕ್ಕದ್ದು. ಕಕ್ಷಿದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಮೇಲ್ಕಿನ ದಾವೆಯನ್ನು ಯುಕ್ತ ಕಾಡಂತೆ ತೀರ್ಮಾನಿಸಿ ಆದೀತು.

ಬಿ. ಕೆ. ಸೂರ್ಯನಾರಾಯಣ ರಾವ್

ಎಡ್ವೋಕೇಟು, ಬೆಳ್ತಂಗಡಿ.

ಬೆಳ್ತಂಗಡಿ, 1—10—1967

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ —
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಮನಮೆಚ್ಚುವ ಸರ್ವ ಸೌಕರ್ಯಗಳಿಂದೊಡಗೂಡಿದ

ವನಶ್ರೀ ಗೃಹ



ಮೊಟೆಲ್ ವನಶ್ರೀ

ಕುಂದಾಪುರ, ದ. ಕ.

ಫೋನ್: 77

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪಾನೀಯಗಳಿಗೆ ಆಗ್ರ ಸ್ಥಾನ ಪಡೆದ ವಿಶ್ವಾಸಾರ್ಹ ಹೊಟೆಲ್.

47ನೇ ವರ್ಷ
Telephone 226.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ದ. ಕನ್ನಡ.

++

ಸ್ಥಾಪನೆ: 1921
ಸ್ವಾಧಿಕಾರಿ
ದಿ। ಎ. ಬಿ. ಶೆಟ್ಟರು.
ಸಂಚಾಲಕ—ಸಂಪಾದಕ
ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

++

ಜಾಹೀರಾತು ದರಗಳು:
ಅನಿಯಮಿತ (ಕಜವಲ್)
ಕಲಂ ಸೆಂಟಿಮೀಟರಿಂಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬರೆಯಿಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಭಿಪ್ರಾಯ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ—

ಚಂದಾಪಾವತಿಯನ್ನಾಗಲೀ ಜಾಹೀರಾತಿನ ಮೊದಲಾಗಿನವನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ "ನವಯುಗ"ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಮುಖಪತ್ರದಲ್ಲಿ:

ಕನ್ನಡದ ಸವ್ಯಸಾಚಿ
ಕಡಲ ತೀರದ ಭಾರ್ಗವ
೬೫ ತುಂಬಿದ
"ಹುಬ್ಬನಸ್ಸಿನ ಹುಡುಗ"
ಡಾ। ಶಿವರಾಮ ಕಾರಂತರು

(ಇದೇ ತಾ. ೧೦ರಂದು ಬೆಂಗಳೂರಲ್ಲಿ ಇವರ ೬೬ನೇ ಜನ್ಮದಿನದ ಸಮಾರಂಭವು ವೈಭವದಿಂದ ಜರಗಿತು)

ಸಂಪುಟ ೪೭ | ಉಡುಪಿ | Vol. 47
ಸಂಚಿಕೆ ೭ | ೧೯—೧೦—೧೯೬೨ | No. 7

ಪರಿಹಾರ ಸಾಧ್ಯವಿಲ್ಲ?

ಮಹಾಜನ ಆಯೋಗದ ವರದಿಯು ನ್ಯೂ ರಾಜ್ಯಗಳ ಮುಖ್ಯಮಂತ್ರಿಗಳ ಕೈಯಲ್ಲೇ ಇದೆ. ಇದರಲ್ಲಿ ಏನಿದೆ ಎಂಬುದು ಇನ್ನೂ ರಹಸ್ಯವಾಗಿದೆ. ಅಭೇದ್ಯ ರಹಸ್ಯವನ್ನೂ ಭೇದಿಸಿ ಪತ್ರಿಕೆಗಳು ಕೆಲವೊಂದು ವರದಿಯನ್ನೇನೋ ಪೂಡಿದ್ದುವು. ಅಧಿಕೃತ ವರದಿಗೂ ಈ ಸ್ಕೂಪ್‌ಗಳಿಗೂ ಹೆಚ್ಚಿನ ಅಂತರವಿರಲಾರದು. ಕರ್ನಾಟಕದ ಮುಖ್ಯಮಂತ್ರಿ ನಿಜಲಿಂಗಪ್ಪನವರು ವರದಿಯು ತನ್ನ ಕೈ ಸೇರುವುದಕ್ಕೆ ಬಹಳ ದಿನ ಮೊದಲೇ ಘೋಷಿಸಿದ್ದರು:— 'ವಿವಾದವನ್ನು ಕೊನೆಯ ಬಾರಿಗೆ ಬಗೆಹರಿಸುವ ಸದುದ್ದೇಶದಿಂದ ವರದಿಯಲ್ಲಿ ಏನೇ ಇರಲಿ, ಅದನ್ನು ಇದ್ದ ಹಿದ್ದಂತೆ ಒಪ್ಪಿಕೊಳ್ಳಬೇಕು.' ಇವರ ನಿಲುವು ಇಂದಿಗಾದರೂ ಬದಲಾಗಿಲ್ಲ. ಮಹಾರಾಷ್ಟ್ರದ ನಾಯಕರು ಆಯೋಗ ನೇಮಕದ ವೇಳೆಯಲ್ಲಿ ವರದಿಯನ್ನೊಪ್ಪುವ ಮನೋಧಾವದಿಂದಿದ್ದರೂ ಇಂದೀಗವರು ಪೂರ್ಣ ಬೇರೆಯಾಗಿದ್ದಾರೆ. ವರದಿಯು ಅವರ ಬೇಡಿಕೆ-ಅಧಿಕೃತ ಕೇಳಿಕೆಗಳಲ್ಲಿ ಹೆಚ್ಚಿನ ವನ್ನು ಕಡೆಗಣಿಸಿದರಿಂದ ತೀವ್ರ ಅಸಮಾಧಾನಗೊಂಡಿದ್ದಾರೆ. ಕೇಂಳದ ನಂಬೂದಿರಿ ಪಾದರು ತನಗೂ ಈ ವರದಿಗೂ ಯಾವ ಸಂಬಂಧವೂ ಇರಲಿಲ್ಲ; ಇಂದಿಗೂ ಇಲ್ಲವೆಂದು ಸಾರುತ್ತ ಬಂದಿದ್ದಾರೆ; ಬರುತ್ತಿದ್ದಾರೆ.

ಕಾಸರಗೋಡಿನಲ್ಲಿ ಚಂದ್ರಗಿರಿ ಹೊಳೆಯ ಉತ್ತರ ಭಾಗವನ್ನು ಕರ್ನಾಟಕದಲ್ಲಿ ಸೇರಿಸಲು ಕೇರಳದ ಕಮ್ಯುನಿಸ್ಟ್ ಪಕ್ಷ ಮಾತ್ರವಲ್ಲ, ಹೆಚ್ಚಿನ ರಾಜಕೀಯ ಪಕ್ಷಗಳೂ ಹಿಂದೆ ಒಪ್ಪಿದ್ದುಂಟು; ಗೊತ್ತುವಳಿ ಸ್ವೀಕರಿಸಿದ್ದುಂಟು. ಆದರೆ, ಈ ಹೀದಿನ ಸರಕಾರಗಳಾವುವೂ ಕಾರ್ಯರೂಪಕ್ಕೆ ತರಲು ಅಸಕ್ತಿ ವಹಿಸಿದ್ದಿಲ್ಲ. ಇಂದಿನ ಸಪ್ತರಂಗೀ ಸರಕಾರವಾದರೂ ಇದಕ್ಕೆಂತ ಹೆಚ್ಚಿನದನ್ನು ಮಾಡುವಂತಿಲ್ಲ. ಅಧಿಕಾರವನ್ನುಳಿಸುವಾದರಲ್ಲಿ ಆಸಕ್ತರಾಗಿರುವ ಯಾರಿಂದಲಾದರೂ ನ್ಯಾಯ ಸಿಗುವುದು ಅಸಾಧ್ಯ. ಆದುದರಿಂದಲೇ ಕೇರಳ ಸರಕಾರ ಮಹಾಜನ ಆಯೋಗವನ್ನು ಬಹಿಷ್ಕರಿಸಿತು; ಅಂದೇ ನಿರೀಕ್ಷಿಸಿದ್ದಂತೆ ಇದೀಗ ವರದಿಯನ್ನೂ ತಿರಸ್ಕರಿಸುತ್ತದೆ. ಅಧಿಕಾರ ಭೂತನನ್ನು ಕೈಪಿಡಿಸಲು ಅದೀಗ ಕಾಸರಗೋಡನ್ನು ಬಲಿಕೊಡಲು ಹವಣಿಸಿದೆ. ಕಾಸರಗೋಡು ಜನತೆಯನ್ನು ಬಲಿಗಂಬದಿಂದ ಬಂಧಮುಕ್ತಗೊಳಿಸಬಲ್ಲ ವಿಶ್ವಾಮಿತ್ರರೆನ್ನಲ್ಲಿ? ಮಹಾರಾಷ್ಟ್ರದ ರಾಜಕಾರಣ ನಿಜಕ್ಕೂ ವಿಚಿತ್ರ. ಮುಖ್ಯಮಂತ್ರಿ ನಾಯಕರಿಗೂ ಇದೇ ಚಿಂತೆ. ವರದಿಯನ್ನು ಒಪ್ಪಿಕೊಂಡರೆ, ಗೋವೆಯ ಮೇಲೆ ಅಧಿಕಾರ ಜಮಾಯಿಸುವಂತಿಲ್ಲ; ಬೆಳಗಾಂವಿ ಕಾರವಾರಗಳ ಕಡೆಗೆ ಕೈಚಾಚುವಂತಿಲ್ಲ; ನೋಡಲಾಗಿ ಕೆಲವಾರು ಹಳ್ಳಿಗಳನ್ನು ತೆಗೆದುಕೊಂಡು ಹಲವಾರು ಹಳ್ಳಿಗಳನ್ನು ಕರ್ನಾಟಕ್ಕೆ ಕೊಡಬೇಕು- ಇದು ಮಹಾಜನ ಆಯೋಗದ ವರದಿಯ ಸಾರ —ವಿನಾಯಕ ರಾವ್ ನಾಯಕರಿಗೆ ನುಂಗಲಾರದ ಬಿಸಿ. ವರದಿಯಲ್ಲಿ ಮಹಾಜನರು ಮಹಾರಾಷ್ಟ್ರಕ್ಕೆ ಇನ್ಸಿಂಗ್ಸ್ ರೌಂಡ್ ಕೊಡುವರೆಂದು ಮೊದಲೇ ತಿಳಿದಿದ್ದರಿ, ನಾಯಕರೂ ನಂಬೂದರಿ ಪಾದರನ್ನೇ ಅನುಕರಿಸುತಿದ್ದರೋ ಏನೋ! ಆಯೋಗ ನೇಮಕದ ಬಗ್ಗೆ ಪದೇಪದೇ ಕೆರುಕುಳ ಕೊಡುತಿದ್ದವರೇ ಮಂತ್ರಿಗಳು; ಅವರ ಒತ್ತಾಯಕ್ಕೇನೇ ಕೇಂದ್ರ ನಾಯಕ ಮಂಡಳಿಯೂ ಕಾಂಗ್ರೆಸ್ ಹೈಕಮಾಂಡೂ ತಲೆಕಡ್ಡಿಸಿದುವು. ಈಗ ವರದಿ ಹೊರಬಿದ್ದಾಗ, ಮಂತ್ರಿಗಳಿಗೆ ಅಂಗೈ ತೋರಿಸಿ ಅವಲಕ್ಷಣ ಕೇಳಿಸಿಕೊಂಡಹಾಗಾಗಿದೆ; ಇದನ್ನು ಒಪ್ಪಿಕೊಳ್ಳುವುದಂತೂ ಗಡಿ ಬದಲಾವಣೆಗೆ ಹಲಪುಂಡುತನ ಮಾಡಲು ಅವಕಾಶ ಕಪ್ಪಿ ಹೋಗುವುದೆಂದೇ ಕಿಡಿಕೇಡಿಗಳ ನಿರಾಶೆ. ಇದ ಕ್ಕೆ ಪುಟ್‌ವಿಟ್ಟಂತೆ ಶಿವಸೇನೆಯೂ ಹೇಳಿಕ ಹೊರಡಿಸಿಕೊಡಗಿದೆ. ಮಹಾರಾಷ್ಟ್ರದ ಒಂದು ಕಾಲದ ಅನಭಿಷಕ್ತ ದೊರೆ ಎಸ್. ಕೆ. ಪಾಟೀಲರು ವರದಿಯನ್ನು ಒಪ್ಪಬೇಕೆಂದು ಬೆಂಗಳೂರಲ್ಲಿ ನುಡಿದಿದ್ದರು; ತನ್ನ ಸೃಷ್ಟಿ ಶಿವಸೇನೆಯ ಚಟುವಟಿಕೆಗಳನ್ನೂ ಖಂಡಿಸಿದ್ದರು. ಭಸ್ಮಾಸುರನಾಗಿ ಪರಿಣಮಿಸಿದ ಶಿವಸೇನೆಯೂಗ ಪಾಟೀಲರನ್ನೇ ನುಂಗ ಬರುತ್ತಿದ. ಮೊದಲಿದು ಮಹಾರಾಷ್ಟ್ರೀಯರ ಒಳಿತಿಗಾಗಿ ದುಡಿಯುವ ಸೇವಾ ಸಂಸ್ಥೆಯೆಂದು ಜೇಳಲಾಗುತಿತ್ತು. ಇಂದು ಫ್ಯಾಶಿಸ್ಟರಿಯವರೇ ಜನ್ಮತ್ತಾರೆ— 'ರಾಜಕೀಯ ಪಕ್ಷಗಳು ಸರಿಯಾಗಿ ಕಲಸ ಮಾಡುತ್ತಿಲ್ಲವೆಂದ್ದರಿಂದ ಶಿವಸೇನೆಯು ಅನಿವಾರ್ಯವಾಗಿ ರಾಜಕೀಯಕ್ಕಿಳಿಯಬೇಕಾಯಿತು." ಮುಂಬಯಿಯ ಕಾರ್ಪೊರೇಶನ್ ಚುನಾವಣೆಗಳಲ್ಲಿ ಇದು ಪ್ರತ್ಯಕ್ಷವಾಗಿ ಭಾಗವಹಿಸಲಿದೆ. (ವಿದ್ಯಾರ್ಥಿದಲ್ಲಿ ಡಿ ಎಂ ಕೆಯ ಚಟುವಟಿಕೆಗಳೂ ಪ್ರಾರಂಭವಾದದ್ದು ಇದೇ ರೀತಿ.) ಮಹಾಜನ ಆಯೋಗದ ವರದಿಯನ್ನು ಇದ್ದಕ್ಕಿದ್ದಂತೆ ಸ್ವೀಕರಿಸಿದರೆ, ಇಡಿಯ ಮಹಾರಾಷ್ಟ್ರದಲ್ಲಿ ಅಶಾಂತಿ ತೆರೆದುಕ್ಕುವುದಂತೆ! ತಮ್ಮ ಬೇಡಿಕೆ-ಕೇಳಿಕೆಗಳು ವಾಸ್ತವ್ಯ ನ್ಯಾಯಎಂಬ ಭಾವನೆ ಜನತೆಯಲ್ಲಿ ಮನೆ ಮಾಡುವ ತನಕ ಶಾಂತರೂಪವಚೀರ್ಘನಕ್ಕೆ ಬರುವುದು ಎಂದಿಗೂ ಸಾಧ್ಯವಿಲ್ಲ.

ಕರ್ನಾಟಕವೊಂದನ್ನುಳಿದು ಉಳಿದ ಎರಡು ರಾಜ್ಯಗಳು ಅಧಿಕೃತವಾಗಿ ವರದಿಯನ್ನು ತಿರಸ್ಕರಿಸುವುದು ಸೂತ್ರ ಬಾಕಿ. ಹ್ಯಾಯ ದೃಷ್ಟಿಯಿಂದ ವಿವೇಚಿಸಿ ನೋಡಿದ್ದರೂ ಕೈಕೊಳ್ಳುವುದಕ್ಕಿಂತ ಅಧಿಕಾರ ಸ್ಥಾನವನ್ನುಳಿಸಿಕೊಳ್ಳುವುದೇ ನಾಯಕ-ನಂಬೂದರಿ ಪಾದರಿಗೆ ಇಷ್ಟವಾದದ್ದು. ಆಗಾಗಿ, ಕೇಂದ್ರ ಸರಕಾರವೇ ಮಹಾಜನ ವರದಿಯನ್ನು ಖಚಿತ ವೆಂದು ಸ್ವೀಕರಿಬೇಕಾಗುವುದು—ಆದರೆ, ಇಲ್ಲಿಯೂ ಇರುವ ಪ್ರಶ್ನೆಯಿದೇ—ಅಧಿಕಾರಕ್ಕೆ ಧಕ್ಕೆಬರಲಾರದೆ? ಮಹಾರಾಷ್ಟ್ರೀಯರ ಇಂದಿನ ನಾಯಕ ಚಲನರು ವ್ಯಾಪಕೇತಿಕ ಸಾರ್ವಭೌಮ ತೆಯಿಂದ ರಾಷ್ಟ್ರೀಯಸಾರ್ವಭೌಮತೆಗೆಯುತ್ತಲಿಯಬೇಕು. ಮಹಾರಾಷ್ಟ್ರೀಯರು ಆವರ ಅನುಯಾಯಿಗಳೆಂದೂ, ಕೇಂದ್ರದ "ಚರಣ ಸಂಗ"ರಾಗುವವರು ಚಲನರೆಂದೂ ಹೇಳಲಾಗುತ್ತಿದೆ. ಈ ಸೀಮಾ ವಿವಾದದಲ್ಲಿ ಚಲನರು ತಮ್ಮ ಅನುಯಾಯಿಗಳಿಗೆ ತಿಳಿ ಹೇಳಬೇಕು. ಪ್ರಧಾನಿಯವರು ಚಲನರ ವಿಶ್ವಾಸವನ್ನು ತೆಗೆದುಕೊಂಡೇ ಗಡಿ ಸಮಸ್ಯೆಗೊಂದು ಪೂರ್ಣವಿರಾಮ ಹಾಕಬೇಕು. ಗಡಿನಾಡಿನ ಕನ್ನಡಿಗರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ—ಅತ್ಯಾಚಾರಗಳು ಕೊನೆಗಾಣಬೇಕು. ಹಾಗೆ ಸಾಯಬಾರದು—ಕೋಲು ಮುರಿಯಬಾರದು ಎಂಬ ದುರ್ಬಲ ನೀತಿಯಿಂದಾಗಿಯೇ ಆಡಳಿತವೆಲ್ಲಿ ಶಿಥಿಲತೆ ಮೂಡಿಸಿ; ಜನತೆಯ, ವಿಶ್ವಾಸ ಹಾರಿಹೋಗುತ್ತದೆ.

ಡಾ। ಲೋಹಿಯಾ ಇನ್ನಿಲ್ಲ.

ಡಾ। ಲೋಹಿಯಾ ಎಂಬೆಯಿಂದಲೂ ದೇಶಭಕ್ತರು, ಒಂಭತ್ತನೆಯ ವರ್ಷದಿಂದ

(ಜತ್ತಿಯೇ ಮುಂ ನೋಡಿರಿ)

ವಚನ ಸುಧೆ

ಪಿತುರಂತಃ ಪುರಂ ಪದ್ಯಾನ್
ಮಾತುರ್ದದ್ಯಾನ್ನಹಾನಸಮ್
ಗೋಸು ಚಾತ್ಮಸಮಂ ದದ್ಯಾತ್
ಸ್ವಯಮೇವ ಕೃಷಿಂ ವ್ರಜೇತ್॥

ಅಂತಃಪುರದ ರಕ್ಷಣೆಯು ಭಾರವನ್ನು ತಂದೆಗೊಪ್ಪಿಸು, ಅಡುಗೆ ಮನೆಯ ಹೊಣೆಗಾರಿಕೆಯನ್ನು ತಾಯಿಗೊಪ್ಪಿಸು, ನಿನ್ನ ಸಮಾನರಾದವರನ್ನು ಗೋ ಸೇವೆಗೆ ನಿಯಮಿಸು. ಕೃಷಿಯ ಕೆಲಸವನ್ನು ನೀನೇ ಮಾಡಹೋಗು.

ನರಸಣ್ಣನ ನರಸ



"ಸತ್ಯಳೆಂದು ಶಿವಾಲಯಕ್ಕೆ ಸಾಗಿಸಿದ ಗರ್ಭಿಣಿಯೊಬ್ಬರು ಆಲ್ಲೇ ಪ್ರಸವಿಸಿದಂತೆ... ಸರ್ಕಾರಿ ಆಸ್ಪತ್ರೆಯಲ್ಲಿ.... ಈ ಸರ್ಕಾರದಲ್ಲಿ ಜೀವಂತ ಸಮಾಧಿ ಮಾಡಿದ್ರೆ ಸಾಕು..."

ಗೋಪ್ಯವಾದರೂ ವಿಶಿಷ್ಟ ಪರಂಪರೆಗಳುಳ್ಳ

ಪ್ರೇಮ ಪತ್ರಗಳು

ಬರೆದವರು : ಶ್ರೀ ಎಚ್. ಎಂ. ನಾರಾಯಣ ಭಟ್.

ವಿಶ್ವ ಮಹಾಕವಿ ಕಾಳಿದಾಸನು ಶಕುಂತಳೆಯಿಂದ ದುಷ್ಯಂತನಿಗೆ ಬರೆಯಿಸಿದ ಪ್ರೇಮ ಲೇಖನ ಹೀಗಿತ್ತು.

"ಅಲ್ಲಮ್ಮೇ, ನಿರ್ದಯ, ನಿಮ್ಮ ಹೃದಯ ಭಾವವನ್ನೂ ನನಗೆ ತಿಳಿಯದು; ಆದರೆ, ನಿನ್ನಲ್ಲಿ ಅನುರಕ್ತಳಾದ ನನ್ನ ಅವಯವಗಳನ್ನು ಮದನನು ಹಗಲೂ ರಾತ್ರಿಯೂ ಮತ್ತೂ ಮತ್ತೂ ತೀವ್ರವಾಗಿ ತಪಿಸುತ್ತಾನಲ್ಲಾ!.."

ಬರೆದುದು ಇಂದಿನಂತೆ ಕಾಗದದಲ್ಲಾಗಲೀ ಆಧುನಿಕ ಲಿಪಿತೋಪರಣಗಳಿಂದಾಗಲೀ ಆಗಿರಲಿಲ್ಲ; ಅತಿ ವೃದ್ಧವಾದ ತಾವರೆ ಎಲೆಯಲ್ಲಿ ಉಗುರಿನಿಂದ ಬರೆದುದು.

ಇಂದೂ ಅನುರಾಗ ಬದ್ಧರಾದ ಸ್ತ್ರೀ ಪುರುಷರು ಹೃದಯ ರಹಸ್ಯಗಳನ್ನು ಸಂದೇಶ ರೂಪದಲ್ಲಿ ಪರಸ್ಪರ ಬರೆಯುವುದೂ ಬದಲಾಯಿಸುವುದೂ ವಿನಿಮಯಗೊಳಿಸುವುದೂ ಇದೆ. ಪ್ರೇಮ ಲೇಖನಗಳೆಂದೋ ಕಾಮ ಲೇಖನಗಳೆಂದೋ ಹೇಳಬಹುದಾದ ಅಂತಹ ಸಂದೇಶಗಳಲ್ಲಿ ಹಲವೂ ಹಲವು ಅನಾಹುತಗಳನ್ನೂ ಸೃಷ್ಟಿಸುವುದಿದೆ. ಪ್ರಣಯ ಲೇಖನಗಳ ಹಿಸರು ದುರಂತ ಕಥೆಗಳೂ ಅಸಂಖ್ಯಾತವಿವೆ.

ಓರ್ವ ಫ್ರೆಂಚ್ ಯುವಕನಿಗೆ ಅವನ ವಿವಾಹ ದಿನದಂದು ಅವನ ಪೂರ್ವಪ್ರೇಯಸಿಯಿಟ್ಟಪ್ಪಲು ದ್ವಾರಾ ಕಳುಹಿಸಿ ಕೊಟ್ಟಿದ್ದ ಒಂದು ಕಟ್ಟು ಪ್ರೇಮ ಪತ್ರಗಳು ಸೃಷ್ಟಿಸಿದ್ದ ಅಶಿಸ್ಟ ಸಂಭವಗಳ ಬಗ್ಗೆ ಹಲವರು ಸ್ವಲ್ಪ ಕಾಲದ ಹಿಂದೆ ಪತ್ರಿಕೆಗಳಲ್ಲಿ ಓದಿರಬಹುದು.

ಪ್ರೇಮ ಪತ್ರಗಳ ಕುರಿತು ವಿಚಿತ್ರವು ತ್ತು ರಸವತ್ತಾದ ಅನೇಕ ಕಥೆಗಳವೆ. ಅಜ್ಞಾತರಾದ ಆರಾಧಕರು ಕಳುಹಿಸಿದ ಅನೇಕ ಸಹಸ್ರ ಪತ್ರಗಳಿಂದ ತನ್ನ ಶಯ್ಯಾಗೃಹವನ್ನಲಂಕರಿಸಿದ್ದ ಓರ್ವ ನಟಿಯ ತಾರುಣ್ಯ ಅಕ್ಕರೆಯ ಚಿತ್ರಣವೆಗೆ ಓದಿದ ನೆನಪು.

ಜಗತ್ತಿನಲ್ಲಿ ಈ ವರೆಗೆ ಬರಯಲ್ಪಟ್ಟ ಪುಗಳಲ್ಲಿ ಅತ ದೊಡ್ಡ ಪ್ರೇಮಪತ್ರವು ಬ್ರಿಟಿಷ್ ನಸ್ತು ಸಂಗ್ರಹಾಲಯದ ಗ್ರಂಥಾಲಯದಲ್ಲಿದೆ. ಸ್ಥಳನು ಎಲಿಜಬೆತ್ ಕಾಲದಲ್ಲಿ ಆದು ಬರಯಲಾದುದೆನ್ನಲಾಗಿದೆ. ರಾಜಯ ಅರಮನೆಯ ಅಧಿಕಾರಿಯೋರ್ವನು ತನ್ನ ಪ್ರೇಯಸಿಗೆ ಬರೆದಿದ್ದ ಆ ಪತ್ರದಲ್ಲಿ ಳಂ ಪುಟಗಳಲ್ಲಾಗಿ ಎಲ್ಲ ಲಕ್ಷಕ್ಕೂ ಮಿಕ್ಕಿ ಶಬ್ದಗಳಿದ್ದವು.

ದ್ವಿತೀಯ ಮಹಾಯುದ್ಧ ಕಾಲದಲ್ಲಿ ದೂರವ್ಯಾಪ್ತದಲ್ಲಿದ್ದ ಓರ್ವ ಸೈನಿಕನು ತನ್ನ ಪ್ರೇಯಸಿಗೆ ಬರೆದ ಪತ್ರದಲ್ಲಿ ಎಂಟು ಸಾವಿರ ಶಬ್ದಗಳಿದ್ದವು.

ಇತ್ತೀಚೆಗೆ ಓರ್ವ ಸಂಯುಕ್ತ ರಾಷ್ಟ್ರಗಳ ಸೈನಿಕನಿಗೆ ಪ್ರೇಮ ಪತ್ರಗಳನ್ನು ಬರೆಯುವುದರಲ್ಲಿ "ಚೇಂಪಿಯನ್ ಶಿಪ್" ಲಭಿಸಿದ್ದಾಗಿ ವರದಿಯಿತ್ತು. ತನ್ನ ಕೇಲಿ ಫೋರ್ನಿಯನ್ ಪ್ರೇಯಸಿಯಿಂದ ತನಗೆ ಲಭಿಸಿದ್ದ ಜಗತ್ ಪತ್ರಗಳನ್ನು ಓಬ್ಬನು ತೋರಿಸಿದಾಗ ಈ ಯೋಧನು ಕೇವಲ ಐದು ತಿಂಗಳ ಅವಧಿಯಲ್ಲಿ ತನ್ನ ಪ್ರೇಯಸಿಗೆ ಬರೆದ ೬೭೬ ಪತ್ರಗಳನ್ನು ಹಾಜರು ಪಡಿಸಿದ್ದನು!

ಪೈಕೋವಿಸ್ಕಿ ಎಂಬ ಕವಿ ತನ್ನ ಪ್ರೇಯಸಿಯಾಗಿದ್ದ ಓರ್ವ ಶ್ರೀಮಂತ ವಿಧವೆಗೆ ಹದಿಮೂರು ವರ್ಷಗಳಲ್ಲಿ ಐದು ಸಾವಿರಕ್ಕೂ ಮಿಕ್ಕಿ ಪ್ರೇಮ ಪತ್ರಗಳನ್ನು ಬರೆದು ಕಳುಹಿಸಿದ್ದನಂತೆ. ಈ ಅವಧಿಯಲ್ಲಿ ಇವರೀರ್ವರೂ ಪರಸ್ಪರ ಭೇಟಿಯೂಡುದು ಒಂದೇ ಬಾರಿಯಂತೆ! ಆದರೆ, ಜೂಲಿಯೆಟ್ ಡ್ರೆವಟ್ ಎಂಬ ನಟಿಯೂ ಆಕೆಯ ಪ್ರಿಯತಮನಾದ ವಿಕ್ಟರ್ ಹ್ಯೂಗೋವೂ ಪ್ರತಿದಿನವೂ ಸಂಧಿಸುತ್ತಿದ್ದರಾದರೂ ಹದಿನೈದು ಸಾವಿರ ಪ್ರೇಮಪತ್ರಗಳನ್ನು ಬರೆದಿದ್ದರೆನ್ನಲಾಗಿದೆ.

ಕೆಲವು ವರ್ಷಗಳ ಹಿಂದೆ ಪೇರಿಸ್‌ನಲ್ಲಿ ಪ್ರೇಮ ಪತ್ರಗಳ ಪ್ರದರ್ಶನವೊಂದನ್ನು ಏರ್ಪಡಿಸಲಾಗಿತ್ತು. ಪುಟಕ್ಕೆ ರೂ. ಎಂಟು ಸಾವಿರಕ್ಕೂ ಮಿಕ್ಕಿ ಸಂಗ್ರಹವಾದ ವಿಚಿತ್ರವಾದದ್ದೂ ನೆನೆಪೀಲಿಯನ್ ಜೋಸೆಫೈನ್‌ಗೆ ಕಳುಹಿಸಿದ್ದೆನ್ನಲಾದ ಪ್ರೇಮ ಪತ್ರಗಳೂ, ಪೆಟ್ಟಿಗೆಗಳೊಳಗಿರಿಸಿ ಕೋಮೋ ಸರೋವರದಲ್ಲಿ ತೇಲು ಬಿಟ್ಟಿದ್ದವುಗಳೂ ಕ್ಲಾರಿಟ್ಸ್ಯ ಪೆಟ್ಟಾಸಿಯು ಮುಸ್ಸೋಲಿನಿಗೆ ಕಳುಹಿಸಿದ್ದವುಗಳೆಂದು ನಂಬಲಾದ ಪ್ರೇಮ ಪತ್ರಗಳೂ ಪ್ರದರ್ಶನದಲ್ಲಿದ್ದ ಅಸಂಖ್ಯಾತ ಪ್ರೇಮ ಪತ್ರಗಳಲ್ಲಿ ಒಳಪಟ್ಟಿದ್ದವು.

ಎಲಿಜಬೆತ್ ಬಾರೆಟ್ ಬ್ರೌನಿಂಗ್‌ನ ಒಂದು ಪ್ರೇಮಪತ್ರವು ರೂ. ಒಂದು ಲಕ್ಷವನ್ನೂ ಮಿಕ್ಕಿದ ಬೆಲೆಗೆ ಹರಾಜಿಗೆ ಹೋಗಿತ್ತು.

ಪ್ರೇಮಪತ್ರಗಳನ್ನು ಬರೆಯುವ ಕಾಗದಕ್ಕೂ ವೈಶಿಷ್ಟ್ಯಗಳಿವೆ. ಬಿಳಿ, ನೀಲಿ, ನಸುಗೆಂಪು ಇತ್ಯಾದಿ ವಿಶಿಷ್ಟ ವರ್ಣದ ಕಾಗದಗಳನ್ನೇ ಆಯ್ಕೆ ಮಾಡಲು ಶ್ರದ್ಧಿಸುವಂತೆಯೇ—ಗುಲಾಬಿ, ಲಿಲ್ಲಿ ಇತ್ಯಾದಿ ಪುಷ್ಪಗಳ, ಸುಗಂಧ ಸಾಬೂನುಗಳ; ಚರ್ಮ, ಹೊಗೆಸೊಪ್ಪು ಮುಂತಾದವುಗಳ ಪರಿಮಳವುಳ್ಳ ಕಾಗದಗಳನ್ನೂ ಬಳಸುವುದಿದೆ.

ಪ್ರೇಮ ಪತ್ರಗಳನ್ನು ಕಳುಹಿಸುವ ವಿಧಾನಗಳು ಮತ್ತೂ ರಸವತ್ತಾಗಿ ತೋರಿದಿರವು. ಹಲವು ಸಂದರ್ಭಗಳಲ್ಲಿಯೂ ಪ್ರೇಮ ಪತ್ರಗಳನ್ನು ಪಕ್ಷಿಗಳ ಮೂಲಕ ಕಳುಹಿಸುವುದಿದೆ.

ಪಾಶ್ಚಾತ್ಯ ಯುವತಿಯರನೇಕರೂ ಪೋಸ್ಟಾಫೀಸಿನವರೇ ವಾರವಾಳಗಳನ್ನೂ ಸಂಗಡವೇ ಇರಕೊಂಡು ಹೋಗುವುದಿದೆ.

ಓರ್ವ ಪ್ರಸಿದ್ಧ ಕಲಾವಿದನ ಹೇಳಿಕೆಯನ್ವಯ, ಆತನು ಪ್ರೇಮ ಪತ್ರಗಳನ್ನು ಟೆಲಿಫೋನ್ ಮೂಲಕ ಕಳುಹಿಸುವ ವಾಡಿಕೆಯೇ ಇಲ್ಲ. ಈ ಕಲಾವಿದನಂತಹ ಅನೇಕ ಮಂದಿಯಿದ್ದಾರೆ. ಇವರು ದಿನಂಪ್ರತಿಯೆಂಬಂತೆ ಪ್ರೇಮ ಪತ್ರಗಳನ್ನು ವಾರವಾಳಗಳ ಮೂಲಕ ರವಾನಿಸುತ್ತಿರುವರಾದರೂ ಈ ವರೆಗೂ ಒಂದೇ ಪತ್ರವಾದರೂ ಕಾಣೆಯಾಗಿಲ್ಲವಂತೆ!

ಪ್ರೇಮ ಪತ್ರಗಳ ಪಾತ್ರವನ್ನು ಕರೆನ್ಸಿ ನೋಟುಗಳು ವಹಿಸಿದ ನಿದರ್ಶನಗಳೂ ಇವೆ. ಶ್ರೀಮಂತ, ಅಮೇರಿಕನ್ ನಟ ತನ್ನ ಪ್ರಿಯತಮನಿಗೆ ಫಿಕ್ಸಲೂ ಪ್ರೇಮ ಪತ್ರ — ಸಂಜ್ಞಾ ರೂಪದಲ್ಲಿ ಅಥವಾ ಗುಪ್ತ ಭಾಷೆಯಲ್ಲಿ ಬರೆಯುತ್ತಿದ್ದುದು ೬೦ ಡಾಲರ್ ಮುಖ ಬೆಲೆಯ ಕರೆನ್ಸಿ ನೋಟೆನಲ್ಲಾಗಿತ್ತೆನ್ನಲಾಗಿದೆ.

ಪ್ರೇಮಕ್ಕೆ ಕಣ್ಣಿಲ್ಲವೆಂಬುದು ಸದಾ ಸರಿಯಾಗಿರಬೇಕೆಂಬ ನಿಯಮವಲ್ಲ.

ಓರ್ವ ನಟನು ತನ್ನ ಪ್ರೇಯಸಿಗೆ ಪ್ರೇಮಪತ್ರ ಬರೆದಿದ್ದುದು ಬಹಳ ಮುಂಜಾಗರೂಕತೆಯಿಂದಲಾಗಿತ್ತು. ಮುಂದೆಂದಾದರೂ ಅಂತಹ ಪತ್ರಗಳ ಸದುಪಯೋಗವನ್ನು ಸ್ವಾರ್ಥ ಸಾಧನೆಗಾಗಿ ಹೊಂದದಂತೆ ಕೆಲವೇ ದಿನಗಳಲ್ಲಿ ಮಾಸಿ ಹೋಗುವಂತಹ ರಾಸಾಯನಿಕದಿಂದಲೇ ಆತ ಪತ್ರ ಬರೆಯುತ್ತಿದ್ದನು.

ತಾನು ಪ್ರೇಯಸಿಗೆ ಬರೆದ ಪ್ರೇಮ ಪತ್ರದ ಕೆಳಭಾಗದಲ್ಲೇ ತನ್ನ ಪ್ರೇಯಸಿಗೆ ತನಗೆ ಜವಾಬು ಕಳುಹಿಸಬೇಕೆಂಬ ಫಂಟನ್ನು ರೋಮಿಯೋ ಎಂಬಾನೆ ೀರ್ವನು ಅನುಸರಿಸಿದ್ದನು. ಆತ ಬರೆದ ಪತ್ರಗಳೆಲ್ಲವೂ "ಪ್ರಾಣೇಶ್ವರ"ಯ ರಿಂದ "ಪ್ರಾಣೇಶ್ವರ"ನಿಗೇ ಮರಳಿ ಲಭಿಸುತ್ತಿದ್ದವು.

ಸ್ವಂತ ವಾಕ್ಯಗಳನ್ನು ಬರೆಯಲಸಮರ್ಥರಾದ ಕವಿಗಳ ಕವಿತೆಗಳನ್ನು ಉದ್ಧರಿಸಿ ಪ್ರೇಮ ಪತ್ರಗಳನ್ನು ಬರೆದ ನಿದರ್ಶನಗಳೂ ಇವೆ.

ಓರ್ವನು ತನ್ನ ಪ್ರೇಯಸಿಗೆ ಒಟ್ಟು ಮೂರಪತ್ರಕಯ ಪ್ರತಿಗಳನ್ನು ಪ್ರತಿ ಗಳೂ ಕಳುಹಿಸುತ್ತಿದ್ದನು. ಆದರೆ ಆ ಚಕೆಯಲ್ಲಿನ ಪ್ರಖ್ಯಾತ ಬರಿಹಗಾರರ ಖನಗಳಲ್ಲಿನ ಆಯ್ದ ವಾಕ್ಯಗಳಿಂದಲ್ಲದೆ ಕೆಂಪುಗೆರೆ ಹಾಕುತ್ತಿದ್ದನು. ಕೆಂಪು ಗೆರೆ ಎಳೆಯಲ್ಪಟ್ಟ ವಾಕ್ಯಗಳನ್ನು ಜೋಡಿಸಿ ಓದಿದಾಗ ಉತ್ತಮ ಪತ್ರ "ಪ್ರೇಮ ಪತ್ರ"ವಾಗಿ ತ್ತು ಎಂಬ ವೈಶಿಷ್ಟ್ಯ.

ಕಾಗದವಾಗಲೀ ನೋಟಾಗಲೀ ಸಡಿ ಕೇವಲ ತಂತೀ ಸಂದೇಶಗಳ ಮೂಕವೂ ಗುಪ್ತ ಭಾಷೆಯಲ್ಲಿ ಪ್ರೇಮ ದೇಶಗಳು ಕಳುಹಿಸಲ್ಪಡುವುದಿದೆ. ರೋಬಿನ್ಸನ್ ಎಂಬ ಆಂಗ್ಲ ಯುವಗರ್ಲಿಯಲ್ಲಿ ಒಂದು ಪ್ರೇಮ ಸಂದೇಶನ್ನು ತಂತೀ ಮೂಲಕ ಕಳುಹಿಸಿದ್ದನು ಭೂಮಿಯಿಂದ ಸುಮಾರು ಕೋಟೆ ಮೈ ದೂರದ "ಮಾರ್ಸ್" ಉಪಗ್ರಹಕ್ಕೆ ಡಿಯೋ ತರಂಗಗಳ ಮೂಲಕ ಬೆಳಕಿನ ವೇಗದಲ್ಲಿ ಮೂರೂವರೆ ಮಿನಿಟುಗಳ ನಿರ್ದಿಷ್ಟ ಸ್ಥಾನವನ್ನು ತಲಪಿದ್ದ ಆ ಸಂದೇಶವು ಇರಾಗಿತ್ತು—"ಸ್ನೇಹವು ಗೋಳದಿಂದ ಮಾರ್ಸ್‌ಗೆ ಶಬ್ದಕ್ಕೆ ಸಮಲಿಂಗ್‌ನಂತೆ ಈ ಸಂದೇಶಕ್ಕೆ ಅಧಿಕಾರಿಗಳು ಜಾರ್ಜ್ ವಸಂಲಿ ಗೆರೂ ಈ ತನಕವೂ ಪ್ರತ್ಯುತ್ತರ ಲಭಿಸವೆಂಬ ಆಕ್ಷೇಪವಿದೆ.

ಕಾಗದಕ್ಕೆ "ಸೆಂಟ್" ಅಥವಾ ಸುಗಂಧ ದ್ರವ್ಯಗಳನ್ನು ಪೂಸಿ ಘಮಘಮಿಸುವ ಪ್ರೇಮ ಪತ್ರಗಳನ್ನು ಕಳುಹಿಸಿವ, ಟೇಪ್‌ನಲ್ಲಿ ರಿಕಾರ್ಡ್ ಮಾಡಿ ಕ್ಕೋಟೆಯಲ್ಲಿಂಸಿ ಕಳುಹಿಳುವ ಪದ್ಧತಿಗಳನ್ನೂ ಪ್ರೇಮ ಲೇಖಕರು ಆಶ್ರಯಸಿದ್ದಿರೆ.

[—ಸಂಗ್ರ

ವ್ಯಾಯೋಗಿಕ ಪತ್ರಿಕ

ಮಡಿಕೇರಿ, ಆ. ೨, ಇಲ್ಲಿಯ ಎಲಾ ೭ನೇ ಜನರಲ್ ಎಜುಕೇಶನಲ್ ಸಾರ್ವಜ ಸಂಸ್ಥೆಗಳ ಕಾಮೆ ಹೊರಡಿಸಿದ 'ಮಡಿಸೆ ರೆಕಾರ್ಡ್" ಎಂಬ ಪ್ರಾಯೋಗಿಕ ಇಂಗ್ಲಿ ವಾರಪತ್ರಿಕೆಯ ಪ್ರಥಮ ಸಂಚಿಕೆ ಇಂ ಹೊರಬಿತ್ತು.

ಶ್ರೀ ಟಿ. ರಮೇಶ ಯು. ಪೈಯವರು ಕಾರ್ಯಕಾರಿ ಸಂಪಾದಕರಾಗಿಯೂ, ಶ್ರೀ ಕೆ. ಕೆ. ಭಂಡಾರಿ ಕರಂದಲವರು ಸಂಪಾದಕರಾಗಿಯೂ ಇದ್ದು ಕ್ರೌನ್ ಅರ್ಧ ಆಕಾರದ ನಾಲ್ಕು ಪುಟಗಳಲ್ಲಿ ಈ ಪತ್ರಿಕೆ ಉದಯಿಸಿದೆ. ಕೊಡಗಿನ ವಿದ್ಯಾರ್ಥಿಗಳ ಸಾಧನೆಗಳ ಸ್ಪರ್ಧಾತ್ಮಕ ಮನೋಧರ್ಮವನ್ನು ಸ್ಥಾಪಿಸಲು ಉದ್ದೇಶಿಸಿದೆ.

ಶ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)

ಶಕ್ತಿ ವರ್ಧಕ, ಆರೋಗ್ಯದಾಯಕ ಮತ್ತೂ ಉಲ್ಲಾಸಕರ ಟಾನಿಕ್
ಖಾತರಿಯಾದ ಆಯುರ್ವೇದ ವೆಷಧಿ ಮತ್ತು ಪಶ್ಚ ವೈದ್ಯಕೀಯ
ಸಲಹೆಗಳಿಗೆ, ಇವರಿಗೆ ಬರೆಯಿರಿ

SHANKAR PHARMACY
BHADRAVATI (MYSORE)

ಯೋಚಿಸಿ ನೋಡಿ

ಮಾನಭಂಗವಮಾಡಿ...

ಬರೆದವರು : ಶ್ರೀ ಸ. ನಾರಾಯಣ.

'ಮಾನಭಂಗವ ಮಾಡಿ ಮುಕ್ತಿ ಉಪಚಾರ ಮಾಡುವದರಲ್ಲಿ ಏನಾದರೂ ಇರಬಾರದಯ್ಯಾ' ಎಂದು ಉಪದೇಶಿಸಿದರು ದಾಸವರೇಣ್ಯ ಪುರಂದರರು. ಮಾನಭಂಗ ಹೇಗಾಗುತ್ತದೆ? ಮಾಡುವುದರಿಂದ ಆಗುತ್ತದೆ. ಮಾನಭಂಗ ಪ್ರಕರಣದ ಉದಾಹರಣೆಗಳು ಹೇರಳವಾಗಿವೆ. ಮಾನ-ಮರ್ಯಾದೆಗಳನ್ನು ಗಾಳಿಗೆ ತೂರಿ ಸ್ವೇಚ್ಛೆಯಿಂದ ವರ್ತಿಸುವ ಛಂಡರೂ ಇದ್ದಾರೆ.

ಸಮಾಜದಲ್ಲಿ, ರಾಜಕೀಯ ವ್ಯವಹಾರಗಳಲ್ಲಿ, ಜನ ಜೀವನದ ನಾನಾ ಚಟುವಟಿಕೆಗಳಲ್ಲಿ ಮಾನಹಾನಿಯ ಪ್ರಸಂಗಗಳಿಗೆ ಕೊರತೆ ಇಲ್ಲ. ಇಂದಿನ ಸಮಾಜದಲ್ಲಿಯಂತೂ ಅದಕ್ಕೆ ಮಿತಿ ಇಲ್ಲ. ವಿದ್ಯೆ, ವಯಸ್ಸು, ವ್ಯಕ್ತಿತ್ವ ವಿಶೇಷವಾಗಿದ್ದರೂ ವಿವೇಕ ಇಲ್ಲದಿರುವ ವ್ಯಕ್ತಿಗಳ ಸಂಖ್ಯೆ ವಿಶೇಷವಾಗಿದೆ-ನಮ್ಮ ನಿತ್ಯ ವ್ಯವಹಾರಗಳಲ್ಲಿ. ಜೀವಪದಲ್ಲಿ ಗುಣಕ್ಕೆ ದೊರೆಯಬೇಕಾದ ಬೆಲೆ ಹಣಕ್ಕೆ ದೊರೆತಿದೆ—ಧಾರಾಳವಾಗಿ. ಸಮಾಜ ಪುಂಡ ಪುಢಾರಿಗಳ ಸ್ವಾರ್ಥಿಗಳ ಆಡುಂಬಲವಾಗಿದೆ.

ಭಾರತ ಬ್ರಿಟಿಷರ ಬಿಗಿದ ಹಕ್ಕಿನಿಂದ ಮುಕ್ತಿ ಹೊಂದಿದ ತರುವಾಯ ಗಣರಾಜ್ಯವಾಗಿ ರಾಷ್ಟ್ರಗೊಂಡಿತು. ನಮ್ಮದು ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯ. ಸರ್ವಸಮಾನತೆಯ ಸಮಾಜವಾದದ ರಾಷ್ಟ್ರ. ಜನನಿಬಿಡ ಖಂಡ ದೇಶ. ಪ್ರತಿ ಭಾರತೀಯನಿಗೂ ಸಮಾನ ಸ್ವಾತಂತ್ರ್ಯ ಹಕ್ಕುಗಳು ಇವೆ. ಪ್ರಮುಖ ಜನತೆಯಲ್ಲಿ ಹಕ್ಕನ್ನು ಪ್ರಶ್ನಿಸುವ—ಅಶಿಸುವ ಆಸೆ ಇದೆ. ಅದರಿ ಶರ್ತು ವ್ಯಕ್ತಿಯ ನೆನಪಿಲ್ಲ, ಮರೆತು ಬಿಟ್ಟಿದ್ದಾರೆ. ಎಲ್ಲ ಭಾರತೀಯರಿಗೂ ವ್ಯಕ್ತಿ ಸ್ವಾತಂತ್ರ್ಯ ವಿಚಾರ ಸ್ವಾತಂತ್ರ್ಯ ವಾಕ್ ಸ್ವಾತಂತ್ರ್ಯ ಇದೆ. ಈ ಎಲ್ಲ ಸ್ವಾತಂತ್ರ್ಯಗಳನ್ನು ಬಳಸಿಕೊಳ್ಳಲು ವಿವೇಕ ಸಾಕಷ್ಟು ಇಲ್ಲ. ಈ ಮಾತು ಅಸಭ್ಯವಾದರೂ ಸತ್ಯದಿಂದ ದೂರವಿಲ್ಲ.

ವಿದ್ಯೆ ಇಲ್ಲದ ನಿರಕ್ಷರಸ್ಥ ಜನತೆಯ ನಿರಕ್ಷರತೆ, ಅಜ್ಞಾನ, ಮೂಢನಂಬಿಕೆಗಳನ್ನು ತೊಡೆದು ಹಾಕಲು ಸಾಧ್ಯವಾಗಿಲ್ಲ. ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಭ್ರಷ್ಟಾಚಾರ ಬಲವಾಗಿ ಬೇರೂರಿದೆ. ಇದರ ಫರ್ಮೂಲನಕ್ಕೆ ಶಸ್ತ್ರ ಚಿಕಿತ್ಸೆಯೇ ಆಗಬೇಕು. ಅನ್ಯ ಮಾರ್ಗವಿಲ್ಲ.

ಸಾರ್ವತ್ರಿಕ ಚುನಾವಣೆಯ ಸಂಧಿಕಾಲ. ಅಳವ ಆಡಳಿತ ಪಕ್ಷದಲ್ಲಿಯಾವ ಬಗೆಯ ಧ್ಯೇಯೋದ್ದೇಶಗಳೂ ಉಳಿದಿಲ್ಲ, ಸ್ವಾತಂತ್ರ್ಯ ಪೂರ್ವದಲ್ಲಿ ಕಾಂಗ್ರೆಸು ಸಂಸ್ಥೆಗೆ ಇದ್ದ ಜನ ಬಲ, ನೈತಿಕ ಬಲ, ಧರ್ಮ ಬಲ ಇಂದಿಲ್ಲ, ರಾಷ್ಟ್ರಕ್ಕಾಗಿ, ಸಂಸ್ಥೆಗಾಗಿ ಆತ್ಮಾರ್ಪಣೆ ಮಾಡಿದ, ತ್ಯಾಗಪೂರ್ವಕವಾಗಿ ದುಡಿದ ವ್ಯಕ್ತಿಗಳು ಇಂದು ಕತ್ತಲು ಕೋಣೆ ಸೇರಿದ್ದಾರೆ. ಸಂಸ್ಥೆಯಲ್ಲಿ ಕೊಳೆ ಹೆಚ್ಚಾಯಿತು. ಹೊಲಸು ಅವರಿಸಿತು. ಗಾಂಧಿ ಕಪ್ಪ, ದೇಶ ಸೇವೆ, ಸಂಸ್ಥೆಯ ಉದ್ಧಾರ, ಜನ ಹಿತಕಾರ್ಯ ಎಲ್ಲವೂ ಸೈಹಿತದೆ ಮುಖವಾಡವಾದವು.

ಜನ ಸಾಮಾನ್ಯರ ಉದ್ಧಾರಕ್ಕಾಗಿ, ಆಡಳಿತ ಪಕ್ಷಕ್ಕೆ ವಿರುದ್ಧವಾಗಿ ನಿಂತಿರುವ ವಿರೋಧ ಪಕ್ಷಗಳು ಹತ್ತಾರು. ಎಲ್ಲ ಪಕ್ಷಗಳಲ್ಲಿಯೂ ಯೋಗ್ಯರು, ಅಯೋಗ್ಯರು ಇದ್ದಾರೆ. ಪ್ರತಿ ಪಕ್ಷಗಳಲ್ಲಿ ಒಮ್ಮತವಿಲ್ಲ. ಫಿಜಿಕ ಮನೋಧಾವವಿಲ್ಲ. ಪ್ರತಿಪಕ್ಷಗಳು ಒಂದುಗೂಡಿ ದುಡಿದರೆ ಆಡಳಿತ ಪಕ್ಷ ಸುಧಾರಿಸೀತು. ತಪ್ಪನ್ನು ತಿದ್ದಿಕೊಂಡಿತು. ನಿಜವಾದ ರಾಷ್ಟ್ರೋದ್ಧಾರ ಆದೀತು.

ಮಾನಭಂಗದ ಪ್ರಸಂಗ ರಾಷ್ಟ್ರೀಯ ಅಂತರಾಷ್ಟ್ರೀಯ ವ್ಯವಹಾರಗಳಲ್ಲಿ ಸರ್ಕಾರಿ ವಲಯದಲ್ಲಿ, ಸಮಾಜ ಸಂಸ್ಥೆಗಳಲ್ಲಿ, ಜನಜೀವನದಲ್ಲಿ ಹುಲುಸಾಗಿ ಬೆಳೆದು ನಿಂತಿದೆ. ಜೀವನದ ಪ್ರತಿ ವ್ಯವಹಾರವೂ ರಾಜಕೀಯವಾಗಿದೆ.

ಮಾನಹಾನಿ ಪ್ರಸಂಗದಲ್ಲಿ ಪತ್ರಿಕೆ, ಲೇಖಕ, ನಾಗರಿಕ, ಭಾಷಣಕಾರರ ಪಾತ್ರ ವೆಷ್ಟು ಎಂಬುದನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸಬಹುದು. ಎಲ್ಲ ಪತ್ರಿಕೆಗಳನ್ನು ಲೇಖಕ, ನಾಗರಿಕ, ಭಾಷಣಕಾರರನ್ನು ಒಂದೇ ಮಾನದಂಡದಿಂದ ಅಳೆಯುಲು ಸಾಧ್ಯವಿಲ್ಲ. ಭಾರತದ ಮೂಲಭೂತ ಹಕ್ಕಾದ ವ್ಯಕ್ತಿ, ವಿಚಾರ, ವಾಕ್ ಸ್ವಾತಂತ್ರ್ಯಗಳನ್ನು ಬಳಸಿಕೊಂಡ ವ್ಯಕ್ತಿಗಳನ್ನು ಅವಲಂಬಿಸಿದೆ ಮಾನಹಾನಿ. ರಾಜ್ಯಾಂಗ ನಿಬಂಧನೆಗಳು ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿರುವಂತೆಯೇ ಅತಿಯಾಗಿ ವರ್ತಿಸುವ ಸಮಾಜ, ರಾಷ್ಟ್ರ, ಸಂಸ್ಥೆ, ವ್ಯಕ್ತಿಗಳನ್ನು ಕಟುವಾಗಿ ಟೀಕಿಸುವ ಘನತೆ—ಗೌರವ, ಸ್ಥಾನ-ಮಾನಗಳಿಗೆ ಭಂಗವನ್ನುಂಟು ಮಾಡುವಪ್ರಸಂಗಗಳನ್ನು ತಡೆಗಟ್ಟಲು ಕಾನೂನುಗಳು ಸಿದ್ಧವಾಗಿವೆ, ಶಕ್ತಿ ಪಡೆದಿವೆ. ಸ್ವಾತಂತ್ರ್ಯವನ್ನು ದುರುಪಯೋಗ ಪಡಿಸಿಕೊಂಡ ಪ್ರಸಂಗಗಳೂ ಹಲವು.

ಭಾರತದಲ್ಲಿ ಇತ್ತೀಚಿನ ದಿನಗಳಲ್ಲಿ ಮಾನ್ಯರ, ಹಿಂಸಾತ್ಮಕ ಪ್ರಸಂಗಗಳು ಅಧಿಕ ಸಂಖ್ಯೆಯಲ್ಲಿ ಬೆಳೆದವು. ಕಾರಣವೂ ಇಲ್ಲದಿಲ್ಲ. ಮುಖ್ಯವಾಗಿ ಎರಡು ಕಾರಣಗಳು. ಮೊದಲನೆಯದಾಗಿ ಸರ್ಕಾರದ ಸಡಿಲ ನೀತಿ, ಅಧಿಕ್ಷ ವ್ಯವಹಾರ ಮತ್ತು ಭೀದ ಭಾವ, ಎರಡನೆಯದಾಗಿ ಜನತೆಯ ಅಸಹಕಾರ ಮತ್ತು ಅಗತ್ಯತೆಗಳನ್ನು ಪೂರೈಸಿಕೊಳ್ಳುವ ಶಿಕ್ಷಣ ಪ್ರವೃತ್ತಿ. ಈ ಎರಡು ಕಾರಣಗಳನ್ನು ಹೆಲವರು ತಮ್ಮ ಬಲಸಂವರ್ಧನೆಗೆ ಬಳಸಿಕೊಂಡರು. ಮಹಾತ್ಮಾ ಗಾಂಧಿಯವರು ಬದುಕಿರುವ ವರೆಗೂ ರಾಷ್ಟ್ರದ ಉದ್ಧಾರಕ್ಕೆ ಜನತೆಯು ಸುಖಶಾಂತಿಗಳಿಗೆ ಅಗತ್ಯವಾದ ಯೋಜನೆಗಳನ್ನು ನಿರೂಪಿಸಿ—ಸೂಚಿಸಿದರು. ಮಹಾತ್ಮರು ಮನಸ್ಸು ಮಾಡಿದ್ದರೆ ಅರಮನೆಯಲ್ಲಿ ವಾಸಿಸಬಹುದಿತ್ತು. ಆದರೆ ಅವರು ಜನಸಾಮಾನ್ಯರ ಪ್ರತಿನಿಧಿಯಾಗಿ ಉಳಿದರು. ಜನಸಾಮಾನ್ಯರಂತೆ ಗುಡಿಸಲಲ್ಲಿ ವಾಸಿಸಿದರು. ಅವರ ತತ್ವಗಳನ್ನು ಅಮಲು ಸರಕುವಲ್ಲಿ, ಅವರ ಮಾರ್ಗದರ್ಶನದಲ್ಲಿ ಅವರ ಶಿಷ್ಯರು ಹಿಂದಾದರು—ಅಶಕ್ತರಾದರು. ಗಾಂಧೀಜಿ ಹಿಂಸಾತ್ಮಕ ಚಳುವಳಿಯನ್ನು ವಿರೋಧಿಸಿದರು. ಆದಿಂಸೆಗೆ ಪ್ರಾಧಾನ್ಯತೆ ನೀಡಿದರು. ಅವರು ಮುಷ್ಕರ ಹೂಡಿದರು. ಜನತೆಯನ್ನೂ ವಿಚಾರಗೊಳಿಸಿದರು. ಯಾವ ಸ್ವಾರ್ಥದಿಂದಲೂ ಅಲ್ಲಿ ಅವರಿದ್ದ ಸ್ವಾರ್ಥ ಒಂದೇ: 'ನನ್ನ ರಾಷ್ಟ್ರ ಸ್ವತಂತ್ರವಾಗಬೇಕು. ಸುಖ—ಸಮೃದ್ಧಿಗಳ ನಾಡಾಗಬೇಕು' ಎಂದು.

ಚಳುವಳಿ ಮುಷ್ಕರಗಳು ಹಿಂಸಾತ್ಮಕ ರೂಪ ತಾಳಿದರೆ ಅದರಿಂದಾಗುವ ನಷ್ಟ ವ್ಯಕ್ತಿಗೆ, ಸಮಾಜಕ್ಕೆ, ನಾಡಿಗೆ, ರಾಷ್ಟ್ರಕ್ಕೆ, ಸರಕಾರಕ್ಕೆ ಸಮವಾಗಿ ಹಂಚಿಕೆಯಾಗುತ್ತದೆ. ಚಳುವಳಿ—ಮುಷ್ಕರ, ಗುಂಪು, ಗಲಭೆ, ಹಿಂಸಾ ಪ್ರಸಂಗಗಳಿಗೆ ಸರ್ಕಾರವೂ ಹೊಣೆ ಎಂದು ದೇಶದಿರುವಂತಿಲ್ಲ, ಸಾಕಾರರು, ಉದ್ಯಮಿಗಳು, ಪ್ರಜೆಗಳ ಪಾಲೂ ಇದೆ. ವ್ಯವಹಾರ ವಿಪರೀತವಾಗಿ ರಕ್ತವಾಕ್ಷೆ, ಹಿಂಸೆಗೆ, ಹೋರಾಟಕ್ಕೆ ಅವಕಾಶ ಮಾಡಿ ಕೊಡಬಾರದು. ರಾಜಕಾರಣಿಗಳು, ಅಧಿಕಾರಿಗಳು ನಾಕರರೂ, ಉದ್ಯಮಿಗಳು, ಪ್ರಜೆಗಳ ಪಾಲೂ ಇದೆ. ವ್ಯವಹಾರ ವಿಪರೀತವಾಗಿ ರಕ್ತವಾಕ್ಷೆ, ಹಿಂಸೆಗೆ, ಹೋರಾಟಕ್ಕೆ ಅವಕಾಶ ಮಾಡಿ ಕೊಡಬಾರದು. ರಾಜಕಾರಣಿಗಳು, ಅಧಿಕಾರಿಗಳು ನೌಕರರೂ, ಉದ್ಯಮಿಗಳು, ಪ್ರಜೆಗಳು ಕಾಳ್ಕೆ, ವಿವೇಕಗಳನ್ನೂ ವರ್ಜಿಸು ಅಸಂಸ್ಕೃತರಂತೆ ನಡೆದುಕೊಳ್ಳುತ್ತಿರುವುದು ಶೋಚನೀಯ. ಅನೈತ್ಯತೆ, ಅಶಿಸ್ತು, ಅಭಿನವಾನಶೂನ್ಯತೆ ಅಧಿಕವಾದರೆ ರಾಷ್ಟ್ರಕ್ಕೆ ವಿಪತ್ತು ಖಂಡಿತ. ಈ ಬಗ್ಗೆ ಚಿಂತನೆ, ಆಗತ್ಯ ಇಂದು ಮಾರ್ಮಿಕತೆಯಿಂದ ವರ್ತಿಸಿ ನಾಳೆ ಪಶ್ಚಾತ್ತಾಪ ಪಡುವುದು ಬೇಡ.

ವಿವೇಕಯುತ ವರ್ತನೆಯು ವ್ಯವಹಾರ ನನ್ನುಳ್ಳಿ ಕಡಿಮೆಯಾದರೂ ಮೋಸ ವಂಚನೆಯ ಪ್ರಕರಣಗಳು ಗಣನೀಯವಾಗಿವೆ. ಅಪರಾಧಗಳನ್ನು ತಡೆಗಟ್ಟಲು ಕಾನೂನು ಮತ್ತು ರಕ್ಷಣಾ ಇಲಾಖೆ ಸದಾ ಸಿದ್ಧವಿವೆ. ಆದರೆ ನಮ್ಮಲ್ಲಿರುವ ವ್ಯವಹಾರಗಾರರು ಕಾನೂನು ರಕ್ಷಣಾ ಇಲಾಖೆಯ ಕಣ್ಣು ತಪ್ಪಿಸಿ ವ್ಯವಹರಿಸುತ್ತಿದ್ದಾರೆ. ನಿಜವಾದ ಅಪರಾಧಿಗಳು ಸಾಕ್ಷ್ಯ ಆಧಾರಗಳ ಸಹಿತ ದೊರೆತಾಗಲೂ ಅವರು ನಿರಪರಾಧಿಗಳೆಂದು ಹರಿಗಣಿಸಿ ಅಪರಾಧದಿಂದ ಶಿಕ್ಷೆಯಿಂದ ಪಾರಾದ ಪ್ರಸಂಗಗಳ ನಿತ್ಯ ನೋಟ ವಿಶೇಷವಾಗಿದೆ. ಅಕ್ರಮ ವ್ಯವಹಾರಗಳಿಗೆ ರಾಜಕಾರಣಿಗಳ ಅಧಿಕಾರಿಗಳ ಬೆಂಬಲ ದೊರೆತ ಉದಾಹರಣೆಗಳು ಸ್ಪಷ್ಟವಾಗಿವೆ.

ಈ ಮಧ್ಯೆ ಶಾಶ್ವತವಾಗಿ ಉಳಿದು ನೆರೆಯಾಗಿ ಧ್ಯೇಯ-ಧೋರಣೆಗಳನ್ನು ಅನುಸರಿಸಿ ಸಮಾಜಕ್ಕೆ ರಾಷ್ಟ್ರಕ್ಕೆ ಯೋಗ್ಯ ಸೇವೆ ಮಾಡಬಲ್ಲ ಪತ್ರಿಕಗಳ ಸಂಖ್ಯೆ

(ಎಂಟನೇ ಪುಟ ನೋಡಿ)

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಇವರು ಕಮ್ಮ

ಬಿದರ್ ಶಾಖೆಯನ್ನು

ಅಕ್ಟೋಬರ್ 13, 1967ರಂದು

ಡೋರ್ ನಂಬರ್ 6-3-67/2563
ಸಿವಿಲ್ ಆಸ್ಪತ್ರೆಯ ಬಳಿ
ಗೆಲ್ಲಪ್ಪ ಟಂಡೂರ್ಸ್ ಬಿಲ್ಡಿಂಗ್
ಜಸೆಮಾನ್ ಗಂಜ್
ಬಿದರ್ (ಮೈಸೂರು ರಾಜ್ಯ)

ಎಂಬಲ್ಲಿ ತೆರೆದಿರುವರೆಂದು ತಿಳಿಸಲು ಹರ್ಷಪಡುತ್ತವೆ.

ವ್ಯಾಪಕ ಪ್ರಮಾಣದ ದಕ್ಷ, ಪರಿಪೂರ್ಣ ಆರ್ಥಿಕ ಸೇವೆಗೆ

FAITHFUL FRIENDLY SB

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಚಲಾವಣಾ ನಿಧಿ: ರೂ. 95 ಕೋಟಿಗೂ ಮಿಕ್ಕಿ.
ಶಾಖೆಗಳು: 218.
ಕಾದಿಟ್ಟ ನಿಧಿ ಮತ್ತು ಬಂಡವಾಳ: ರೂ. 2·34 ಕೋಟಿ.

ಯಾವತ್ತೂ ವಾಚನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳು

ಬರಿದ ಮುಗುಳು	1—50
ಅನುವಾದಿತ ಕತೆಗಳು	1—20
ಸಂಜೆ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ಪಂಚಗಜ್ಜಾಯ	1—75
ವಿಕಾಂಕ ನಾಟಕಗಳು	1—00
ಭಾರತದ ನಾಲ್ಮುಮಿಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—20
ವಿಚಿತ್ರ ಕಳ್ಳಪೇಟೆ	1—50
ಭಾರತದ ವೀರಾಂಗನೆಯರು	1—50
ಸೋಲಕೊಟ್ಟ ಬೆಂಡೋಲೆ	1—80
ಶಿಲ್ಪಿ	1—50
ಅಜ್ಜಿನ ಪೂರ್ತಿ	1—00
ಘಂಟೆ ನೂರಾ	2—50
ನೀತಿ ವಿನೋದ ಕತೆಗಳು	1—00

ಕೆಟಲಾಗಿಗೆ ಬರೆಯಿರಿ

ಸರ್ವಭಾರತ ಪುಸ್ತಕ ಭಂಡಾರ,
ಉಡುಪಿ.

ನಾವು ಆಚರಿಸುತ್ತೇವೆ

ವಿಜಯ ವಿಹೀನ ವಿಜಯ ದಶಮಿ

ಬರೆದವರು ಶ್ರೀ ಶಿವಶಂಕರ.

ಕಳೆದ ಸಪ್ಟಂಬರ ದಿನಾಂಕ ಹನ್ನೊಂದರಂದು ದೇಶದಾದ್ಯಂತ 'ಭಾರತ ಬಂದ್' ನಡೆಸಬೇಕೆಂದು ಕಮ್ಯೂನಿಸ್ಟರು ಹಂಚಿಕೆ ಹಾಕಿದ್ದರು. ಅನ್ಯಾನ್ಯ ಕಾರಣಗಳಿಂದಾಗಿ ಇಲ್ಲಿಯ ಎಲ್ಲಾ ರಾಜಕೀಯ ಪಕ್ಷಗಳು ಆದಕ್ಕೆ ಬೆಂಬಲವನ್ನು ಸೂಚಿಸಿದ್ದುವು. ಇದರಲ್ಲಿ ಸರಕಾರೀ ನೌಕರರ ತುಟ್ಟಿ ಭತ್ತೆಯ ಪ್ರಶ್ನೆಯೂ ಒಂದಾಗಿತ್ತು. ತುಟ್ಟಿ ಭತ್ತೆಯಶ್ನೇರಿಸುವ ವಿಷಯವನ್ನು ಕೇಂದ್ರ ಸರಕಾರ ಒಪ್ಪಿಕೊಂಡಿತ್ತಾದರೂ ಈಗಿನ ಪರಿಸ್ಥಿತಿಯಲ್ಲಿ ಕೊಡಲು ಸಾಧ್ಯವಿಲ್ಲವೆಂದು ಅರ್ಥ ಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರು ತಮ್ಮ ದೇಸಾಯಿ ಮನೋವೃತ್ತಿಯನ್ನು ಪ್ರಕಟಿಸಿದುದರಿಂದ ಕಾಂಗ್ರೆಸ್ಸು ಕೂಡಾ ಕೇಂದ್ರ ಸರಕಾರದ ನೌಕರರ ಪರವಾಗಿ ಮಿನಮೇಷ ಎಣಿಸಬೇಕಾಯಿತು. ಅವರಿಗೆ ತುಟ್ಟಿಭತ್ತೆ ಏರಿಸುವದು, ಬಿಡುವದು ಮುಖ್ಯವಲ್ಲ. ಕೇಂದ್ರ ಸರಕಾರದ ಮತವೇ ಮುಖ್ಯ. ಸಪ್ಟಂಬರ ಹನ್ನೊಂದರ ಹಿನರಣಕ್ಕೆ ಭಾರತೀಯ ಜನಸಂಘದ ಬೆಂಬಲ ಸೂಚಿಸಿರುವದಷ್ಟಾರಿಗೂ ಆಶ್ಚರ್ಯದಾಯಕ ವಿಷಯವಿಷಿ. 'ಬಂದ್' ಅಂದರೆ ಬಹಳಷ್ಟು ದೂರ ಹೋಗುವ ಭಾರತೀಯ ಜನಸಂಘದವರಿಂತು ಒಪ್ಪಿದರು. ಅವರಿಗೆ 'ಬಂದ್' ಮುಖ್ಯವಲ್ಲ. ಸರಕಾರೀ ನೌಕರರ ನ್ಯಾಯಪೂರ್ಣ ಬೇಡಿಕೆಗೆ ಜಯ ಸಿಗಬೇಕಾಗಿತ್ತು ಆದುದರಿಂದಲೇ ಅವರು ಬೆಂಬಲವನ್ನು ವ್ಯಕ್ತ ಪಡಿಸಿದ್ದರೂ ಅದರೊಂದಿಗೆನೇ ಎಚ್ಚರಿಕೆಯನ್ನು ಕೊಟ್ಟಿದ್ದರು—ಚೀನಾ ಆಕ್ರಮಣ ನಡೆಸಿದಲ್ಲಿ ಅದ್ಯಾವ ಪ್ರದರ್ಶನವನ್ನು ಮುನ್ನಡೆಸಬಾರದಾಗಿ ಸ್ಪಷ್ಟವಾಗಿ ಸೂಚಿಸಿತ್ತು. ಆ ದಿನ ಬೇಗನೇ ಬರಲೆಂದು ಕಮ್ಯುನಿಸ್ಟ್ ಪಕ್ಷಗಳು ಕಣ್ಣು ಬಿಟ್ಟುಕೊಂಡು ಕಾದು ಕೊಂಡಿದ್ದುವು. ಮುರಾರ್ಜಿ ದೇಸಾಯಿ ದೊಡ್ಡ ಮನಸ್ಸು ಮಾಡಿದರು—ದೇಸಾಯಿ ದರ್ಪವನ್ನು ಉಳಿಸಿಕೊಂಡರು. 'ಬಂದ್' ತಪ್ಪಿತು. ಈ ಪ್ರಕಾರವನ್ನು ಸಹಿಸಿಕೊಳ್ಳಲು ಕಮ್ಯೂನಿಸ್ಟರಿಗೆ ಸಾಧ್ಯವಾಗಲಿಲ್ಲ ಇದಕ್ಕೆ ಬಲವಾದ ಕಾರಣ ಇನೆ. ಈ ದಿನವನ್ನು ಅವರು ಚೈನಾದೊಂದಿಗೆ ಸಮಾಲೋಚಿಸಿ ನಿರ್ಧರಿಸಿದ್ದೇ ಇರ. ಸಪ್ಟಂಬರ್ ಹನ್ನೊಂದರಂದು ದೇಶದಾದ್ಯಂತ ಧರಣಿ ನಡೆಯಬೇಕು, ಅದನ್ನು ಹತ್ತಿಕ್ಕುವದರಲ್ಲಿ ಸೇನೆ ಮಗ್ನವಾಗಿರಬೇಕು. ಚೈನಾ ಆದಿನವೂ ದುರ್ದಾಸೆ ಇಲ್ಲದೆ ವಿಜಯ ಸತಾಕೆಯನ್ನು ಹಾರಿಸುತ್ತ ಬರಬೇಕು! ಇಲ್ಲಿ ಕಮ್ಯೂನಿಸ್ಟರು ಅಡಿಗೆ ಬಿದ್ದರೂ ಆದರೂ ಮೀಸೆಗೆ ಮಣ್ಣು ತಾಗಿಸ್ಲಿಲ್ಲವೆಂದು ಹೇಳಲಿಕ್ಕಾಗಿ ತಮ್ಮ ಲಲ್ಲಿರುವ ಕೇರಳದಲ್ಲಿ ತಮ್ಮ ಸೈದ್ಧಾಂತಿಕ ಆಟವನ್ನಾಡಿದರು. ಸಂಬಳ ಕೂಟ್ಟು 'ಬಂದ್' ಮಾಡಿಸಿದರು, ಅದನ್ನ ದುರಿಸಿದ ವರ ಪ್ರಾಣವನ್ನು ಹೀಲಾಗಿ ಹಿಂದರಿಗುಲ್ಲಿಲ್ಲ. ಅದಕ್ಕ ಬಾಲಕರಾದರೇನು? ಮೂಕೆಯರಾದರೇನು? ವೃದ್ಧರಾದರೇನು? ಹೃದಯಿಗೆ ಆಘಾತವಾಸ ಗೊತ್ತಾಗುತ್ತದೆಯೇ? ಅವರಾದರೂ ಚೈನೀ ಕಮ್ಯೂನಿಸ್ಟರಿಂದ ಪೂರಿನ ಪೆಟ್ಟನ್ನು ತಿನಬೇಕಲ್ಲವೇ?

ಚೈನಿ ಕಮ್ಯೂನಿಸ್ಟರ ಜೆಲ್ಲಾಟ ದ್ವಿತೀಯ ಬಾರಿ ಮಣ್ಣುಪಾಲಾಯಿತು ಕಳೆದ ಸಲವೂ ಅವರು ಇಲ್ಲಿಯ ಕಮ್ಯೂನಿಸ್ಟರಿಗೆ ಸ್ಪಷ್ಟ ಸೂಚನೆಯನ್ನಿತ್ತಿದ್ದರೂ ಇಲ್ಲಿಯ ಕಮ್ಯೂನಿಸ್ಟರು ಆ ಮಟ್ಟಕ್ಕೇಳದಿದ್ದ ಕಾರಣ, ಕಲ್ಕತ್ತದ ಬಂದರಿನ ಕಾರ್ಮಿಕರನ್ನು ದೇಶದ್ರೋಹಿಗಳನ್ನಾಗಿ ಮಾರ್ಪಡಿಸಲಿಕ್ಕಾಗದಿದ್ದ ಕಾರಣ ಚೈನಿಯರು ಸೋಲಲೇಕಾಯಿತು. ಈ ಸಲವೂ ಅವರ ಗುಂಡಿನ ಮದ್ದಿಗೆ ಹಿಮನೀರನ್ನೆರೆಚಲಾಯಿತು. ಗಲಭೆ ನಡೆಯಲಿಲ್ಲ. ಕೇವಲ ಕಮ್ಯೂನಿಸ್ಟರು ಮಾತ್ರ ತಮ್ಮ ಕರಾಳ ಕೃತ್ಯತನವನ್ನು ನಡೆಸಿದರು. ಕೇರಳ ಎಲ್ಲಿ, ನಾಥುಲಾ ಎಲ್ಲಿ?

ಹಾಗಿದ್ದರೂ, ಸಪ್ಟಂಬರ್ ಹನ್ನೊಂದರಂದು ಚೈನೀ ಕಮ್ಯುನಿಸ್ಟ್ ಸೈನಿಕರು ಭಾರತೀಯರ ಬಲ ಪರೀಕ್ಷೆ ಮಾಡಿದರು. ಅವರು ಭಾರತೀಯ ಸೈನಿಕರ ಮೇಲೆ ಗುಂಡು ಹಾರಿಸಿದರು. ಯುದ್ಧ ವಿರಾಮ ರೇಖೆಯ ಇತ್ತ ಅಕ್ರಮ ಪ್ರವೇಶ ನಡೆಸಿದರು ಮತ್ತು ನಮ್ಮ ಸೈನಿಕರನ್ನು ಕೊಂದಿರುವರು. ಈ ವಿಷಯವನ್ನು ಹಲವಾರು ದಿನಗಳ ವರೆಗೆ ಗೋಪ್ಯವಾಗಿಡಲಾಯಿತಾದರೂ ರಹಸ್ಯವನ್ನು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧೀಜಿಯವರು ಬೊಂಬಾಯಿಯಲ್ಲಿ ಸಾರ್ವಜನಿಕರಿಗೆ ತಿಳಿಸಿದ್ದಾರೆ. ನಮ್ಮ ಶಾಂತಿ ಪ್ರಿಯ ಇಷ್ಟು ಸೇನಾನಿಗಳು ಪ್ರಾಣ ತೆತ್ತರು! ಇನ್ನು ಈ ಸಂಖ್ಯೆಯಲ್ಲಿ ಆದಷ್ಟುಂಕಸ್ಯ ಇರಬೇಕೋ! ಆದರೆ ಚೈನಾದ ಸೈನಿಕರ್ಯಾರೂ ಸಾಯಲಿಲ್ಲವೇನು? ಪ್ರದರ್ಶನಕ್ಕಾದರೂ ಒಂದು ಹೆಣ ನಮಗೆ ಸಿಗಲಿಲ್ಲವೇ?

ಪಕ್ಷ ಹಂಚಿಕೆ ಕಾರ್ಯಗತವಾಗದಿರುವದು ಚೈನಾಕ್ಕೆ ತಿಳಿದಿತ್ತಾದರೂ ಅವರು ಪಡೆಯವರು ಸಪ್ಟಂಬರ್ ಹನ್ನೊಂದರಂದು ಗುಂಡು ಹಾರಿಸಿಯೇ ಬಿಟ್ಟರು. ಅದೇನೂ ಕೊನೆಯ ಆಕ್ರಮಣವೂ ಇರುವದಿಲ್ಲ. ಅಂದಿನಿಂದ ಕೆರುಕುಳದ ಪ್ರಮಾಣ ಹೆಚ್ಚಾಗುತ್ತಾ ಇದೆ. ನಾಥುಲಾ, ಜೋಲಾ ಹೀಗೆ ನಮಗೆ ಲತ್ತೆಗಳ ಮೇಲೆ ಲತ್ತೆಗಳನ್ನೆವರು ಕೊಡುತ್ತಿದ್ದಾರೆ. ನಾವಾದರೋ ಅಹಿಂಸೆಯನ್ನು ಶಾಂತ ರೀತಿಯಲ್ಲಿ ಸಹಿಸುತ್ತಿದ್ದೇವೆ. ಹಿಂದೆ ಪರದೇಶಿ ಮಂತ್ರಿಯಾಗಿ ಶ್ರೀ ಭಾಗ್ವಾನ್ ಪರವರಿದ್ದಾಗ ಲೋಕ ಸಭೆಯಲ್ಲಿ ಸದಸ್ಯರು ಕಳೆದುಕೊಂಡಿರುವ ಪ್ರದೇಶಗಳನ್ನು ಹುನರಿ ಪಡೆಯಲೇನು ಕಾರ್ಯಕ್ರಮವನ್ನು ಹಾಕಿಕೊಂಡಿರುವಿರೆಂದು ಕೇಳಿದಾಗ, ಯುದ್ಧ ಒಂದನ್ನು ಬಿಟ್ಟು ಎಲ್ಲಾ ರೀತಿಯ ಕಾರ್ಯಕ್ರಮಗಳವೆಯೆಂದವರು ಹೇಳಿದ್ದರು. ಅಂದರೆ ಚೈನಾವನ್ನು ನಾವು ರಣರಂಗದಲ್ಲೆ ದುರಿಸುವದಿಲ್ಲವೆಂಬುದು ಸ್ಪಷ್ಟವಾಯಿತು. ಕೇವಲ ಕಾಗದಕಾಳಗದಿಂದಲೇ ಚೈನಿ ಪಡೆಯನ್ನು ಹಿದರಿಸಿ ಬಿಡಲು ಸಾಧ್ಯವಿಲ್ಲ! ಆದರ ಪರಿಣಾಮವಾಗಿ ಶ್ರೀ ಭಾಗ್ವಾರೇ ಮಂತ್ರಿ ಮಂಡಲವನ್ನು ಬಿಟ್ಟು ಬೊಂಬಾಯಿಗೆ ಹಿಂತೆರಳಬೇಕಾಯಿತು.

ಇಂಥಾ ಚೈನೀ ಕಮ್ಯುನಿಸ್ಟರು ಅಪರಾಷ್ಟ್ರೀಯ ವಿಜಯೋತ್ಸವವನ್ನು ಆಚರಿಸುವುದು ನಮ್ಮ ಸೇನಾನಿಗಳ ಮೇಲೆ ಗುಂಡು ಹಾರಿಸಿ ಕ್ರೂರ ರೀತಿಯಲ್ಲಿ ನಡದುಕೊಂಡಿದ್ದಾರೆ. ಅವರಾದರೋ ಬೇರಿಯ ಅತ್ಯ ಬಯಿಂದ ಗುಂಡು ಹಾರಿಸಿರುವದಿಲ್ಲ, ಇತ್ತ ಬಂದು, ಇದೋ ನಾನು ಮೂಸಿನ ನೆಲಸಲ್ಲಿದ್ದೇನೆ. ಏನು ಆಕ್ರಮಣಕಾರನೆಂದು ಹೇಳಿ ಗುಂಡು ಹಾರಿಸಿದ್ದಾರೆ. ನಾವು ಪ್ರತಿಭಟನೆಯ ಗುಂಡು ಕಳುಹಿಸುವೆವು!

ಅಸ್ಸಾಮಿನ ಮುಖ್ಯ ಮಂತ್ರಿ ಶ್ರೀ ಎ ಲಿಯಾರವರು ಪಾಕಿಸ್ತಾನಿಗಳು ಭಾರತ ಪ್ರಮಾಣದಲ್ಲಿ ಅಸ್ಸಾಮಿಗೆ ಬರುತ್ತಿದ್ದಾರೆಂಬುದನ್ನು ಒಪ್ಪಿಕೊಂಡಿದ್ದಾರೆ. ಕಾಶ್ಮೀರ ಸರಕಾರವು ತಡೆಯಾಕೋ ಆ ವಿಷಯವನ್ನು ಮುಚ್ಚಿಡುತ್ತಿದೆ ಕಾಶ್ಮೀರ ವಿಧಾನ ಸಭೆಯಲಿಗನೇ ಪಾಕಿಸ್ತಾನಿಗಳಿರುವರೆಂಬ ವಿಷಯವೂ ಬಳಕೆಗೆ ಬಂದಿದೆ. ಪಾಕಿಸ್ತಾನ ಕೈ ಸಯಾಮು ಮಾಡುತ್ತಿದ್ದಾರೆಂಬ ಕಾರಣದಿಂದಾಗಿ ಉದ್ಯೋಗದಿಂದ ಹೊರತೆಳ್ಳಲ್ಪಟ್ಟ ಸರಕಾರೀ ಉದ್ಯೋಗಸ್ಥರು ಕಂಗೆಸ್ ಟಕೇಟನ್ನು ಪಡೆದು ವಿಧಾನ ಭಾ ಸದಸ್ಯರಾಗಿದ್ದಾರೆಂಬುದು ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ. ರಾಜಸ್ಥಾನದಲ್ಲೂ ವಿಷಯವನ್ನು ರಹಸ್ಯವಾಗಿಡಲಾಗುತ್ತಿದೆ ಅಂತೂ ಈ ನಡಿ ಪ್ರದೇಶಗಳಲ್ಲಿ ಪಾಕಿಸ್ತಾನಿಗಳುಸರಾಗವಾಗಿ ಬರುತ್ತಿದ್ದಾರೆ ಅಲ್ಲಿ ನೆಲೆಗಳನ್ನುಂಟು ಮಾಡುತ್ತಿದ್ದಾರೆಂಬ ದನ್ನು ಅಲ್ಲಗೆಳೆಯುವಂತಿಲ್ಲ ಪ್ರ ನಾವಣೆಯ ಸಮಯ. ಇವರು ಕಾಂಗ್ರೆಸ್ಸಿಗೆ ಮತದಾನ ಮಾಡುವದರಿಂದಾಗಿ ಅ ರ ವಿಷಯದಲ್ಲಿ ಸರಕಾರ ಮೆದು ನೀತಿಯನ್ನು ಅನುಸರಿಸುತ್ತಿದೆ. ಈ ರುಇಡ್ಡಿ ಕಾ ಇತರ ಪಕ್ಷಗಳಿಗೂ ಹರಡುತ್ತಿದೆ ನಾಗಲೇಂಡಿನಲ್ಲಿ ಚೈಫೀಯರು ಮನಸ್ಸು ಬಂದಂತೆ ಅಡ್ಡಾಡುತ್ತಿರುವದಾಗಿ ಹೇಳಲಾಗುತ್ತಿದೆ. ಬಂಗಾಲದಲ್ಲೂ ಹಂಚಿನ ಸ್ಥಂಭೀಯರು ಅಲ್ಲಿಯ ಸರಕಾರದ ಪಾಳಪ್ರದಡಿಯಲ್ಲಿ ತಮ್ಮ ವಿಸಶಕಾರೀ ಚಟುವಟಿಕೆಗಳನ್ನು ವಿಸ್ತರಿಸುತ್ತಿದ್ದಾರೆ. ಗಡಿ ಪ್ರದೇಶದಲ್ಲಿ ಶಸ್ತ್ರ ಕೊಂಡು ಬಂದಿರುವ ಲೋಕಸಭಾ ಸದಸ್ಯರು ಇನ್ನೊಂದು ವಿಷಯವನ್ನು ಒತ್ತಿ ಲೆಗೆಳದಿರುವರು. ಯುದ್ಧವಿರಾಮ ರೇಖೆಯಲ್ಲಿ ಹಿಂದೆ ಹೋಗುತ್ತಿರುವೆಂದು ಅಧಿಕಾರಿಗಳು ಅಂದು ಒಪ್ಪಿಕೊಂಡಿದ್ದರೂ ನಿಜವಾಗಿ ಅವರು ಅದಿನಿತೂ ಹಿಂದೆ ಹೋಗಿರುವವಲ್ಲ.

ಇದನ್ನು ನೋಡುವಾಗ ಆಕ್ರಮಣಕಾರರನ್ನು ಹಿಂದಕ್ಕಟ್ಟಲು ನಮ್ಮ ಸೈನಿಕರ ಆದ್ಯಾವ ಛಿದ್ರಿಸ್ಟ ನಿಲವನ್ನು ತಿರಿರುವದೂ ಗೊತ್ತಾಗುವದಿಲ್ಲ. ಆಕ್ರಮಣದ ಮೇಲೆ ಆಕ್ರಮಣ ನಡಯುತ್ತಲಿರುವ ಈ ಸಂದರ್ಭದಲ್ಲಿ ವಿಜಯದಶಮಿ ಬಂದಿರುತ್ತ... ದೇಶದಾದ್ಯಂತ ಈ ಹಬ್ಬವನ್ನು ಆಚರಿಸಲಾಗುತ್ತಿದ. ಈ ಹಬ್ಬಕ್ಕೂ ಇತರ ಹಬ್ಬಗಳಿಗೂ ಸ್ವಲ್ಪ ವ್ಯತ್ಯಾಸ ಇನೆ. ಆ ಹಬ್ಬದ ವೈಶಿಷ್ಟ್ಯ ಶಕ್ತಿಪೂಜೆ ಇನೆ. ಇಂದು ಶಸ್ತ್ರಾಸ್ತ್ರಗಳಿಗೆ ಪೂಜೆ ಸಲ್ಲುವ ದಿನವಿದ. ಹಾಗೆ ನೋಡುವಂಗ ನಮ್ಮ ಳಿ ಇರುವ ಶಸ್ತ್ರಾಸ್ತ್ರಗಳಾದರೂ ಎ ನು? ಕೇವಲ ಕಾಗದದ ಹಾಗೂ ಮಾತಿ ಶಸ್ತ್ರಾಸ್ತ್ರಗಳೇ ನಮ್ಮಬಳಿ ಇರುವದು ಇದಕ್ಕೆ ಯಾರಾದರೂ ಹದರುವರೇ ಟೀ ಜ್ಯನಂದ ಬಳಿ ಅಣುಗುಂಡು ಹಾಗೂ ಜಲಜನಕ ಬಾಂಬುಗಳಿವೆ. ನಮ್ಮ ಬಳಿ ಏನಿವೆ? ಗುಂಡುಸೂಜಿ ಕೂಡ ಹೊರ ದೇಶದಿಂದ ಬರಬೇಕು!

ಹಾಗಾದಲ್ಲಿ ಪಾಕಿಸ್ತಾನಿಗಳನ್ನು ಹಾಗೂ ಚೈನೀಯರನ್ನು ಹಿಂದಕ್ಕಟ್ಟಲು ಹೇಡಿ ಸಂಖ್ಯವಾಯಿತೆಂಬ ಪ್ರಶ್ನೆ ಬರುತ್ತದೆ. ಆ ಹಿಮ ಪ್ರದೇಶದಲ್ಲಿ ನಮ್ಮ ಧೀರ ಸೇನಾನಿಗಳು ಬರಿಗಾಲಿನಲ್ಲಿ ನಡದು ತ್ತುಗಳನ್ನದ ರಿಸಿರುವರೆಂಬ ರೋಮಾಂಚಕಾರಿ ಘಟನೆಗಳನ್ನು ನಾವು ಕೇಳಿರುವೆವು ಈಗ ಅವರ ಬಳಿ ಇರುವದು ಒಂದೇ ಬಂದುಬಂಡವಾಳ—ಅದುವೇ ನಮ್ಮ ಪರಂಪರೆಯ ಇತಿಹಾಸ. ಹಿಂದೆ, ಭಾರತದ ಜರು ವಿಜಯ ದಶಮಿಯಂದು ಸಮಸ್ತ ಪ್ರದೇಶಗಳಲ್ಲಿ ಸೀಮೋಲ್ಲಂಘನ ಗೈದು ಪ್ರಾಯ ಸ್ಥಳಗಳ ವಸ್ತುಪಥವನ್ನು ಡಿಕೊಳ್ಳುತ್ತಿದ್ದರು ಇಂದು ನಮ್ಮ ಸೈನಿಗಳು ಆ ಹಿಂದಲ್ಲೇ ಜೀವನ ನಡೆಸಬೇಕಾಗಿರುತ್ತದೆ ಅವರಿಗ ವಿಜಯ

ಪುಟ ೧೫—೧೯—೧೯೬೨

ಸುಮ್ಮವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 85 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 8% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,
ಶೆ
ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್ಸ್,
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೫

ಇದರ ಕಾರ್ಯಭಾರ ದೊಡ್ಡದು

ಸಂಯುಕ್ತ ರಾಷ್ಟ್ರ ಸಂಘ

ಬರೆದವರು : ಶ್ರೀ ಪಿ. ಕೆ. ಪ್ರಕಾಶ ರಾವ್.

ಕಳೆದ ಅರ್ಧ ಶತಮಾನ ದಾಟವ ಮೊದಲೇ ಜಗತ್ತಿನಲ್ಲಿ ಎರಡು ಜಾಗತಿಕ ಯುದ್ಧಗಳು ಘಡೆದವು. ಅವುಗಳು ಲೋಕ ವ್ಯಾಪಿಯಾಗಿ ಭೀಕರ ಸಂಕಷ್ಟವನ್ನು ಜಗತ್ತಿಗೆ ತಂದೊಡ್ಡಿದುವು. ಜಪಾನಿಬಿಡವಾದ ಹಲವು ಪಗರಗಳು ಬಾಂಬು ಧಾಳಿಗೆ ತುತ್ತಾಗಿ ನಾಶವಾದವು. ಲಕ್ಷಾಂತರ ಜನರು ಯುದ್ಧದಲ್ಲಿ ಮಡಿದರು. ಲಕ್ಷಾಂತರ ಜನರು ನಿರ್ಗತಿಕರಾದರು. ಲಕ್ಷಾಂತರ ಮಕ್ಕಳು ಪೆತ್ತವರನ್ನು ಕಳಕೊಂಡರು. ಹಿರೋಶಿಮಾ, ನಾಗಸಾಕಿಗಳ ಮೇಲ್ಕಾದ ಬಾಂಬು ಧಾಳಿಯ ಪರಿಣಾಮವೇ ಇದಕ್ಕೆ ನಿದರ್ಶನ. ಇಂದು ಕೂಡಾ ಅಂಗಹೀನರಾಗಿರುವ ಮಕ್ಕಳು ಆಫ್ಘಿ ಹುಟ್ಟುವಂತೆ, ಇನ್ನೂ ಅನೇಕ ತಲೆಮಾರುಗಳ ತನಕ ಹುಟ್ಟುವ ಮಕ್ಕಳು ಅಂಗಹೀನ ರಾಗುವರು ಎಂದು ವೈದ್ಯಕೀಯ ವಿಜ್ಞಾನಿಗಳು ಅಭಿಪ್ರಾಯಪಡುತ್ತಿದ್ದಾರೆ.

ಇದರಿಂದ ಜಗತ್ತಿನ ಜನರೆಲ್ಲಾ ಶಾಶ್ವತ ಶಾಂತಿ ಸ್ಥಾಪನೆಗೆ ಹಂಬಲಿಸಿದರು. ಶಾಂತಿಕಾಲದಲ್ಲಿ ದಾಂಪ್ರುತ್ಯದಿಂದ ಕಂಗೆಟ್ಟ ಬಡ ಜನರೆಲ್ಲರೂ ದಾಂಪ್ರುತ್ಯದಿಂದ ಹಸಿವೆಯಿಂದ ಮತ್ತು ರೋಗಗಳಿಂದ ಪಾರಾಗಲು ಹಾರೈಸಿದರು. ಜಗತ್ತಿನ ವಿವಿಧ ಭಾಗಗಳಲ್ಲಿ ಪರದೇಶಿಯರ ದಬ್ಬಾಳಿಕೆಯಲ್ಲಿದ್ದ ಜನರು ತಮಗೆ ಸ್ವಾತಂತ್ರ್ಯ ಮತ್ತು ನ್ಯಾಯ ಬೇಕೆಂದು ಆಸೆಪಟ್ಟರು.

ಇದರಿಂದ ಹಲವು ರಾಷ್ಟ್ರಗಳ ಪ್ರತಿನಿಧಿಗಳು ಒಂದು ಪರಿಷತ್ತನ್ನು ಸಾನ್ ಫ್ರಾನ್ಸಿಸ್ಕೋ ಎಂಬಲ್ಲಿ ಕರೆದರು. ಈ ಪರಿಷತ್ತಿನಲ್ಲಿ ಜಗತ್ತಿನ ಹೆಲವು ರಾಜನೀತಿಜ್ಞರು ಭಾಗವಹಿಸಿದರು. ಇನ್ನು ಮುಂದೆ ಕ್ಯಾದರೂ ಇಂತಹ ಯುದ್ಧಗಳನ್ನು ನಿಲ್ಲಿಸಿ ಜಗತ್ತಿನಲ್ಲಿ ಶಾಂತಿ ಸ್ಥಾಪಿಸಲು ನಿರ್ಧರಿಸಿದರು. ಇದಕ್ಕಾಗಿ ೫೦ ರಾಷ್ಟ್ರಗಳ ದೊಡಗೂಡಿದ ಸಂಯುಕ್ತ ರಾಷ್ಟ್ರ ಸಂಸ್ಥೆಯೂದ United Nations' Organisation ಯು ಅಂತಾರಾಷ್ಟ್ರೀಯ ಶಾಂತಿ, ಸಹಕಾರತ್ವಗಳನ್ನು ಭದ್ರಗೊಳಿಸುವ ಶಕ್ತವನ್ನು ಮಂದಿರಿಸಿಕೊಂಡು ಉದ್ಭವಿಸಿತು. ಇಂದು ಇದರ ಸದಸ್ಯ ರಾಷ್ಟ್ರಗಳ ಸಂಖ್ಯೆ ೧೫೮. ಅಂತಾರಾಷ್ಟ್ರೀಯ ಶಾಂತಿ ಭದ್ರತೆಯ ಸಂರಕ್ಷಣೆ ಮಾಡಬೇಕೆಂದೂ; ಆರ್ಥಿಕ ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳನ್ನು ಭದ್ರಪಡಿಸಲು ಪ್ರಯತ್ನಿಸಬೇಕೆಂದೂ ಈ ಸಂಸ್ಥೆಯು ಯೋಜನೆಯನ್ನು ನಿರೂಪಿಸಿಕೊಂಡಿತು. ಮಾನವನಿಗೆ ಈ ಸಂಸ್ಥೆಯು (a) ಆಹಾರ ನ್ಯೂನತೆಯಿಂದ ಸ್ವಾತಂತ್ರ್ಯ (b) ಪಿದರಕಯಿಂದ ಸ್ವಾತಂತ್ರ್ಯ (c) ಧರ್ಮ ಸ್ವಾತಂತ್ರ್ಯ (d) ವಾಕ್ ಸ್ವಾತಂತ್ರ್ಯಗಳನ್ನೆತ್ತಿತು.

ಜಗತ್ತಿನ ಜನರು ಸ್ವತಂತ್ರರಾಗಿ ಸಂಪತ್ತು ಪಡೆದು ಬಾಳಬೇಕೆಂದರೆ ಜಗತ್ತಿನಲ್ಲಿ ಶಾಂತಿ, ಸುಖಗಳು ಅಕಸ್ಮಿಕವಾಗಿ ಬರುವುದಿಲ್ಲ. ಹಲವು ಕಾರ್ಯಗಳನ್ನು ಮಾಡಿ ಯುದ್ಧದ ಕಾರಣಗಳನ್ನು ಪರಿಹರಿಸಿದರೆ ಮಾತ್ರ ಒಟ್ಟಿನ ಭದ್ರತೆಯು ಸಾಧ್ಯ. ಜನರೊಳಗೆ ಸಹಕಾರದಿಂದ ಸಾಂಯುಕ್ತ ಪ್ರಯತ್ನ ಮಾಡಿದರೆ ಮಾತ್ರ ಜಗತ್ತಿನ ಜನರು ಶಾಶ್ವತ ಶಾಂತಿಯ ಪ್ರಯತ್ನ ಮಾಡಬಹುದು. ಮಾನವ ಹಕ್ಕುಗಳ ರಕ್ಷಣೆಗೆ ಜಗತ್ತಿನ ಜನರ ಸಂಯುಕ್ತ ಪ್ರಯತ್ನದ ಒತ್ತಾಯವನ್ನು ಯುದ್ಧ ಕಾರಣಗಳನ್ನು ಕಡಿಮೆಮಾಡಲು ಸಾಧ್ಯ.

ಈ ಸಂಸ್ಥೆಯು ತನ್ನ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ೬ ಅಂಗ ಸಂಸ್ಥೆಗಳನ್ನೇರ್ಪಡಿಸಿಕೊಂಡಿದೆ.

(i) ಜನರಲ್ ಎಸೆಂಬ್ಲಿ:— ಪ್ರತಿ ಸದಸ್ಯರಾಷ್ಟ್ರ ಇದಕ್ಕೇ ೫ ಮಂದಿಯನ್ನು ಕಳುಹಿಸಬಹುದು. ಇದರ ಪ್ರಧಾನ ಕಚೇರಿ ಅಮೇರಿಕದ ಲೇಕ್ ಸಕ್ಸೆಸ್ ಎಂಬಲ್ಲಿರುವುದು. ೧೯೪೮ರಲ್ಲಿ ಇದರ ಅಧಿವೇಷನದ ಅಧ್ಯಕ್ಷತೆಯನ್ನು ಭಾರತದ ವಿಜಯ ಲಕ್ಷ್ಮಿ ಪಂಡಿತರವರು ವಹಿಸಿದ್ದರು. ಇದರ ಅಧಿವೇಶನವು ವರ್ಷಕ್ಕೊಮ್ಮೆ ಸೇರುವುದು. ಸದಸ್ಯ ರಾಷ್ಟ್ರವೊಂದಕ್ಕೆ ಒಂದು ಓಟು ಕೊಡುವ ಹಕ್ಕಿರುತ್ತದೆ.

(ii) ಭದ್ರತಾ ಸಮಿತಿ:— ಲೋಕದ ಶಾಂತಿ ಪಾಲನೆಯ ಜವಾಬ್ದಾರಿಯು ಇದಕ್ಕೆ ಸೇರಿದೆ. ಇದರಲ್ಲಿ ರಾಷ್ಟ್ರೀಯ ಚೀನಾ, ಫ್ರಾನ್ಸ್, ಬ್ರಿಟನ್, ಅಮೇರಿಕಾ, ರಶ್ಯಾಗಳಿಗೆ ಕಾಯಂ ಸದಸ್ಯತ್ವವಿದೆ. ಇದರ ಸದಸ್ಯರ ಸಂಖ್ಯೆ ೧೧. ಉಳಿದ 6 ಸದಸ್ಯರನ್ನು ೨ವರ್ಷಗಳಿಗೊಮ್ಮೆ ಸಾಮಾನ್ಯ ಚುನಾಯಿಸಿ ಸೇರಿಸುತ್ತಾರೆ. ಯಾವುದಾದರೊಂದು ಮಹಾದಿ ಜ್ಯಾರಿಗೆ ಬರಬೇಕಾದರೆ ಒಗದಸ್ಯ ರಾಷ್ಟ್ರಗಳ ಒಪ್ಪಿಗೆಯಾದರೂ ಬೇಕು. ತನ್ಮಧ್ಯೆ ಕಾಯಂ ಸದಸ್ಯತನವುಳ್ಳ ೫ ರಾಷ್ಟ್ರಗಳೂ ಒಪ್ಪಿಸಬೇಕೆಬೇಕು. ಯಾವುದಾದರೊಂದು ಕಾಯಂ ಸದಸ್ಯತನವುಳ್ಳ ರಾಷ್ಟ್ರ ಸೂಚಿಸುವ ಅಸಮ್ಮತಿಗೆ "ವೀಟೊ" ಎಂದು ಕರೆಯುವರು. ಜಗತ್ತಿನ ಶಾಂತಿಗೆ ಧಕ್ಕೆ ಬಂದೊದಗುವ ಸಮಯದಲ್ಲಿ ಯಾವ ರಾಷ್ಟ್ರವು ಆ ಸಮಸ್ಯೆಯನ್ನು ಈ ಎರಡು ಸಭೆಗಳ ಮುಂದೆ ತರಬಹುದು. ೫ ವರ್ಷಕ್ಕೊಮ್ಮೆ ಇದರ ಸೆಕ್ರೆಟರಿಯ ನೇಮಕವಾಗುವುದು. ಇದರ ಮೊತ್ತಮೊದಲ ಸೆಕ್ರೆಟರಿಯೇ ಜಟ್ಟಿಗ್ನಿಲೀ. ಅನಂತರ ಬಂದ ಡಾಗ್. ಹೆಮ್ಮರ್ ಶೀಲ್ಡ್‌ರವರು ವಿಮಾನಾಪಘಾತಕ್ಕೊಳಗಾದರು. ಈಗ ಇದರ ಸೇವೆಯನ್ನು ಬರ್ಮಾದ ಉ ಥಾಂಟ್‌ರವರು ಮಾಡುತ್ತಿರುವರು.

(iii) ಅಂತಾರಾಷ್ಟ್ರೀಯ ನ್ಯಾಯಾಲಯ:— ಇದರಲ್ಲಿ ೧೫ಮಂದಿ ನ್ಯಾಯಾಧೀಕರರಿರುವರು. ಸಂಯುಕ್ತ ರಾಷ್ಟ್ರ ಸಂಸ್ಥೆಯು ಯಾವ ಸದಸ್ಯ ರಾಷ್ಟ್ರವೂ ಇದರಲ್ಲಿ ವ್ಯಾಜ್ಯಗಳನ್ನು ನಿರ್ಣಯಿಸಬಹುದು.

(iv) ಯುನೋದ ಮತ್ತು ಅಂಗ ಸಂಸ್ಥೆಗಳ ಕೆಲಸಕ್ಕಾಗಿ ಇರುವ ಒಂದು ದೊಡ್ಡ ಸಿಬಂಧಿಯೇ ಸೆಕ್ರೆಟೇರಿಯಟ್. ಇದರ ಕೈಕೆಳಗೆ ೪೮ ಇಲಾಖೆಗಳಿವೆ.

(v) ಟ್ರಸ್ಟಿಶಿಪ್ ಕೌನ್ಸಿಲ್ ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗಾಗಿ ಇತ್ತು ಅದರ ವಿಸ್ತರಣೆಗಾಗಿ ಸ್ಥಾಪಿತವಾಗಿದೆ. ಪರರ ಅಧೀನವಿರುವ ಪ್ರದೇಶಗಳ ಪ್ರಗತಿಗಾಗಿ ಇದು ಶ್ರಮಿಸುತ್ತದೆ.

(vi) ಆರ್ಥಿಕ ಮತ್ತು ಸಾಮಾಜಿಕ ಸಮಿತಿ:— ಇದು ೧೮ ಮಂದಿಯಿಂದೂಡಗೂಡಿ ಸದಸ್ಯ ರಾಷ್ಟ್ರಗಳ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯನ್ನು ಕಾಪಾಡುತ್ತದೆ.

ಸಂಯುಕ್ತ ರಾಷ್ಟ್ರ ಸಂಘದ ಧ್ವಜದಲ್ಲಿ ಆಲಿವ್ ಹಸ್ತಿಲೆ ಬಣ್ಣಗ ವೇಷ್ಟಿಯನ್ನು ಜಗತ್ತಿನ ನಕ್ಷೆಯಿದ್ದು ಅದರ ಎಡೂ ಬದಿಗಳಲ್ಲಿ ಎದುರು ಬದುರಾಗಿ ಮಾಡಿದ ಓಲಿವ್ ಗಿಡದ ಟೊಂಗೆಗಳನ್ನು ಚಿತ್ರಿಸಲಾಗಿದೆ.

ಸಂಯುಕ್ತ ರಾಷ್ಟ್ರ ಸಂಘದ ಅಂಗಗಳಾಗಿ ಯುನೆಸ್ಕೋ, ಎಫ್ ಎ ಓ, ಹೆಹೊ ಮೊದಲಾದ ಅನೇಕ ಸಂಸ್ಥೆಗಳು ಜಾಗತಿಕ ಅಭಿವೃದ್ಧಿಗಾಗಿ ಶ್ರಮಿಸುತ್ತಿವೆ.

ವಿಶ್ವ ಸಂಸ್ಥೆಯು ಜಗತ್ತಿನ ಶಾಂತಿಯನ್ನು ಈ ತನಕ ಯೇಗೆ ಕಾಪಾಡಿ ಕೊಂಡಿದೆ ಎಂಬುದನ್ನು ತಿಳಿದುಕೊಳ್ಳುವುದು ಮುಖ್ಯ. ಕೊರಿಯಾದಲ್ಲಿ ಯುದ್ಧ ಬೀತಿಯನ್ನು ಇದು ನಿವಾರಿಸಿತು. ಉತ್ತರ ಕೊರಿಯಕ್ಕೆ ಚೀನಾವೂ, ದಕ್ಷಿಣ ಕೊರಿಯಾಕ್ಕೆ ಅಮೇರಿಕಾ ಸಹಾಯವಿತ್ತಾಗ ವಿಶ್ವಸಂಸ್ಥೆಯು ಅಲ್ಲಿ ತಟಸ್ಥ ರಾಷ್ಟ್ರಗಳ ಸೈನ್ಯವನ್ನಿಟ್ಟು ಶಾಂತಿಯನ್ನು ಕಾಪಾಡಿತು. ಇಸ್ರಾಯಿಲ್ ಮತ್ತು ಅರಬ್ ರಾಷ್ಟ್ರಗಳೊಡನೆ ಜೋರ್ಡಾನ್ ನದೀ ನೀರನ್ನು ಮತ್ತು ಗಡಿ ವಿವಾದಗಳನ್ನು ಇದು ಹೋಗಲಾಡಿಸಿತು. ಆಫ್ರಿಕದ ಕಾಂಗೋದಲ್ಲಿ ಉಂಟಾದ ಆಂತರಿಕ ಕಲಹಗಳನ್ನು ಮತ್ತು ವಿಶೇಶಿಯರ ಪ್ರವೇಶಗಳನ್ನು ನಿಲ್ಲಿಸಿತು. ಮತ್ತು ತಟಸ್ಥ ರಾಷ್ಟ್ರಗಳ ಸೈನ್ಯ ಕಳುಹಿಸಿ ಯುದ್ಧ ಭೀತಿಯನ್ನು ಹೋಗಲಾಡಿಸಿತು.

ಕ್ಯೂಬಾ ಮತ್ತು ಅಮೆರಿಕಾಗಳನಡುವೆ ವಿರಸ ಏರ್ಪಟ್ಟು ಅವುಗಳಲ್ಲಿ ಘರ್ಷಣೆ ಏರ್ಪಟ್ಟಾಗ ಇತರ ರಾಷ್ಟ್ರಗಳ ಪ್ರವೇಶವಾಯಿತು. ಆಗ ಅಲ್ಲಿಯ ಶಾಂತಿಯನ್ನು ವಿಶ್ವಸಂಸ್ಥೆಯು ರಕ್ಷಿಸಿತು.

ಸೈಪ್ರಸ್‌ನಲ್ಲಿ ಸ್ವಾತಂತ್ರ್ಯ ದೊರೆತೊಡನೆ ಅಲ್ಲಿಯ ಗ್ರೀಕ್ ಮತ್ತು ಟರ್ಕಿ ಮೂಲದ ಪ್ರಜೆಗಳಿಂದಿನ ಘರ್ಷಣೆಯುಂಟಾಯಿತು. ಇಲ್ಲಿಯೂ ಸಂಯುಕ್ತರಾಷ್ಟ್ರ ಸಂಸ್ಥೆಯು ಶಾಂತಿಯುತ ಪರಿಹಾರವನ್ನು ಕೊಟ್ಟಿತು.

ಇಂದು ಇನ್ನೊಮ್ಮೆ ಸಂಯುಕ್ತರಾಷ್ಟ್ರ ಸಂಸ್ಥೆಗೆ ಪರೀಕ್ಷೆಯ ಕಾಲ ಬಂದೊದಗಿದೆ. ಭಾರತ ಪಾಕಿಸ್ತಾನದ ಕಾಶ್ಮೀರಸಮಸ್ಯೆ, ವಿಯೆತನಾಮಗಳ ಪ್ರಶ್ನೆ ಅದರ ಮುಂದಿನ ತೀರ್ಮಾನವನ್ನು ಕೊಟ್ಟೆತ್ತಿನೆ. ಇಂದು ವಿಶ್ವಸಂಸ್ಥೆಯು ನಿಜವಾದ ತನ್ನ ನ್ಯಾಯಪ್ರಿಯತೆಯನ್ನು ಜಗತ್ತಿಗೆ ತೋರಿಸಿ ಕೂಡುವ ಸಮಯವಾಗಿದೆ.

ದೆಹಲಿಯ ಆಫ್ರಿಕದ ವಿಜ್ಞಾನಿ ಧ್ರ ಶೀತಿ ಸೋಜ್ ಗಣಿಗಳ ವಸಾಹತು ನೀತಿ, ಹಿಂಗಡಿಯದಂಗೆ ಗೊವಾವಿವಾದ, ಅಲ್ಜೀರಿಯದ ಹಡಿಸಿ ರಾಷ್ಟ್ರಗಳ ವಿವಾದ, ವಾಲೇಸ್ಯಾ ಇಂಡೋನೇಷ್ಯಾ ವಿವಾದ, ಅಲ್ಜೀರಿಯಾ ವಿವಾದಗಳಲ್ಲಿಯೂ ಇದು ತನ್ನ ವಿಶ್ವಸಂಸ್ಥೆಯ ನ್ಯಾಯನಿಷ್ಠೆಯಿಂದ ವರ್ತಿಸಿದೆ.

ಶಿಕ್ಷಣ ಲೆಲೆ, ವಿಜ್ಞಾನಗಳ ವಿಷಯದಲ್ಲಿ ವಿಶ್ವಸಂಸ್ಥೆಯು "ಯುನೈಟೆಡ್ ನೇಶನ್ ಎಜ್ಯುಕೇಶನಲ್, ಸೈಂಟಿಫಿಕ್ ಎಂಡ್ ಕಲ್ಚರಲ್ ಆರ್ಗನೈಝೇಶನ್" ಎಂ

(ಉಳಿದ ಭಾಗ ನೋಡಿರಿ)

ಮಿಯು ವಿಜಯದ ಧೈರ್ಯೋತ್ಸಾಹಗಳನ್ನೀಯುತ್ತಿದೆ. ಅಸ-ತ್ಯ ಶಕ್ತಿಗಳ ನಾಶ, ಧರ್ಮದ ವಿಜಯದ ಸಂಕೇತವೇ ವಿಜಯ ದಶಮಿ ಉತ್ಸವ ಇದು. ಧರ್ಮವನ್ನು ನಾಶಮಾಡಲಿಕ್ಕಾಗಿ ದೇಶದೊಳಗೂ ಹೊರಗೂ ಕಮ್ಯೂನಿಸ್ಟ್, ಕ್ರೈಸ್ತೀಯ, ಇಸ್ಲಾಮಿಯ ಶಕ್ತಿಗಳು ಪ್ರಯತ್ನಿಸುತ್ತಿವೆ. ಇದು ಕೇರಳದಿಂದ ಕಾಶ್ಮೀರದವರೆಗೂ ಸ್ಪಷ್ಟವಾಗಿ ಇಂದು ಗೋಚರವಾಗುತ್ತಿದೆ. ಇವರಿಂದಿನಿಕೂ ಭಯ ಪಡುವದಿಲ್ಲ. ಹೂಕೆಂದರೆ ಅಧಿಕಾರ ಬಲವೇ ರಾಜಕೀಯ ಪಕ್ಷಗಳು ಮಕದಾಳೆಯಿಂದಿವರ ಕುಕೃತ್ಯಗಳನ್ನು ಖಂಡಿಸುವಂತಿಲ್ಲ. ಇದಕ್ಕೆ ವಿದೇಶಾಗಲೀ, ವೈಸೂರಾಗಲೀ ಅಪವಾದ ಇರುವದಿಲ್ಲ. ಈ ಪರಿಸ್ಥಿತಿಯಲ್ಲಿ ನಮ್ಮ ಸೇನಾನಿಗಳಿಗೆ ಧೈರ್ಯ ತುಂಬಿಲು, ನಾವು ಹಿಂದಾಗಬೇಕೆಂಬ ಪ್ರಜ್ಞಾವಂತರು ಕರೆ ಇತ್ತಿರುವರು. ಅವರು ೧೯೪೭ರ ಚಿತ್ರವನ್ನು ನೆನ್ಪು ಕಣ್ಮುಂದೆ ಇಟ್ಟಿದ್ದಾರೆ. ಅಂದಾವರೋ ಅನ್ನರ ಅಲ್ಲಿಕೆ ನಡೆಯುತ್ತಿತ್ತು. ಇಂದು ನವಭಾರತದ ಅಲ್ಲಿಕೆ ಇದೆಯಾದರೂ ಶತ್ರು ಶಕ್ತಿ ವರ್ಧಿಸುತ್ತಾ ಇದೆ. ಇದಕ್ಕೆ ಕಾರಣವೆಂದರೆ ರಾಷ್ಟ್ರೀಯ ಶಕ್ತಿಗಳಿಗೆ ಸರಕಾರ ಪ್ರೋತ್ಸಾಹ ಕೂಡದಿರುವದೇ ಇದೆ. ಅವಿನ್ನು ವಿಭಿನ್ನ ರಾಷ್ಟ್ರೀಯತೆಯ ಕಲ್ಪನಾ ಸ್ರವಂತಿಯಲ್ಲೇ ಇದೆ. ಇಂದಿನ ವಿಜಯ ವಿಜಯ ವಿಜಯ ದಶಮಿಯ ಮುಂದಿನ ವಿಜಯ ಪೂರ್ಣ ನ್ಯಾಯ ವಿಜಯ ದಶಮಿಗೆ ನಾವಿಂದಿಯಾಗಿರಲಿ.

ಮಾನಭಂಗವಮಾಡಿ....

(ಐದನೇ ಪುಟದಿಂದ)

ಅಲ್ಪವಾಗಿದೆ, ಯೂಷ್ಟದೋ ಬಸೆಯ ಅನುಕೂಲದಿಂದ ಧರ್ಮದಿಂದಲೋ ಅಧರ್ಮದಿಂದಲೋ ತಲೆ ಎತ್ತಿನಂತ ಪೀತ ಪತ್ರಿಕೆಗಳು — ಅ ಪತ್ರಿಕೆಗಳ ಸಂಪಾದಕರು, ಲೇಖಕರು ಸಮಾಜವನ್ನು, ರಾಷ್ಟ್ರವನ್ನು ಅಧೋಗತಿಗೆ ತರಲು ಸಿದ್ಧವಿದ್ದಾರೆ. ಹಣ ಸಂಪಾದನೆಯೊಂದೇ ಗುರಿಯನ್ನಾಗಿ ಇಟ್ಟುಕೊಂಡಿರುವಂಥ ಪತ್ರಿಕೆಗಳು ಸಮಾಜದಲ್ಲಿ ಕಂಟಕಪ್ರಾಯವಾಗಿ ಉಳಿದಿವೆ ಎಂದು ಹೇಳಬಹುದು. ತಮ್ಮ ವಿರೋಧಿ ವ್ಯಕ್ತಿ, ಸಂಘ, ಸಂಸ್ಥೆಗಳನ್ನು ಮನಸೈತೃಪ್ತಿಯಾಗಿ ಛಿಂದಿಸಿ ಮಾನ ಹಾನಿ ಮಾಡುವುದೇ ಈ ಪತ್ರಿಕೆಗಳ ಉದ್ದೇಶ (ಎಲ್ಲ ಪತ್ರಿಕೆಗಳ ದೃಷ್ಟಿಯೂ ಒಂದೇ ಎಂದು ಊಹಿಸಲಾರೆ). ಬಹುಸಂಖ್ಯೆಯ ಪತ್ರಿಕೆಗಳು ಆರಂಭವಾದ ಕೆಲದಿನಗಳಲ್ಲಿಯೇ ಬಾಲಗ್ರಹಕ್ಕೆ ಗುರಿಯಾಗುವ ಪ್ರಸಂಗಗಳು ಅಧಿಕ. ಹಣ ಸಂಪಾದನೆಗಾಗಿ ಅನುಚಿತ ಸಂಗತಿಗಳನ್ನು ಪ್ರಕಟಿಸುವುದು ಸ್ವಾಭಾವಿಕ. ಬೆದರಿಸಿ ಸೆಳ್ಳುವಿಂದ ಹಣ ಪಡೆದ ಉದಾಹರಣೆಗಳು ಇಲ್ಲದಿಲ್ಲ. ತಮ್ಮ ಯೋಚನೆಗೆ ಕೈಗೂಡದೆ ತೊಂದರೆ ಉಂಟಾಗಬಹುದಾದ ಸಂದರ್ಭದಲ್ಲಿ ಕ್ಷಮೆ ಯಾಚಿಸಿದ ಸಂಗತಿಗಳು ಇಲ್ಲದಿಲ್ಲ. ಲೇಖಕರಿಗೂ ಈ ಮೊದು ಅನ್ವಯಿ ಸುತ್ತದೆ. ತಮ್ಮ ವೈಯಕ್ತಿಕ ದ್ವೇಷವನ್ನು ತೀರಿಸಿಕೊಳ್ಳುವ ಸಲುವಾಗಿಯೇ ಲೇಖನಿಯನ್ನು ಮುಡುಪಾಗಿಡಬಾರದು.

ಅಸಂಸ್ಕೃತ ನಾಗರಿಕರ ಅಸಭ್ಯ ವರ್ತನೆಯು ಪರಿಣಾಮವಾಗಿಯೂ ಮಾನಹಾನಿಯಾಗುವ ಸಂಭವವಿದೆ. ಸಮಾಜಿಕ ವ್ಯವಹಾರಗಳಲ್ಲಿ, ನಿತ್ಯ ಜೀವನದಲ್ಲಿ ನಾಗರಿಕರ ಪಾತ್ರ ವಿಶೇಷವಾದುದು. ಸಮಾಜಕ್ಕೆ ಕುಟುಂಬಗಳು, ಕುಟುಂಬಗಳಿಗೆ ವ್ಯಕ್ತಿಗಳು ಅತಿ ಮುಖ್ಯ. ವಿದ್ಯೆಯ ವಿಕಾಸವಾದಂತೆಲ್ಲಿ ನಾಗರಿಕ, ಸುಸಂಸ್ಕೃತ ಮನೋಭಾವ, ಪಡವಳಿಕೆ ಬಳಕೆಗೆ ಬರದೇಕು.

ವೇದಿಕೆಯ ಮೇಲೆ ನಿಂತು ಭಾಷಣ ಮಾಡುವ ಕಡಿವಾಣವಿಲ್ಲದ ಭಾಷಣಕಾರರ ವಿವೇಕ್ರತೆಯನ್ನು ಇಲ್ಲ ಪ್ರಸ್ತಾಪಿಸಿಬಹುದು, ವಾಕ್ ಸ್ವಾತಂತ್ರ್ಯದ ಪಟ್ಟು ಹಿಡಿದು ಜನಮನವನ್ನು ಕರಳಿಸುವ, ಜನ ಮನವನ್ನು ಪ್ರಕ್ಷುಬ್ಧಗೊಳಿಸುವ ನಿಂದೆಯೊಂದೇ ತಮ್ಮ ಭಾಷಣದ ಗುರಿ ಎಂದೂ ಹಂಬರುವ ವ್ಯಕ್ತಿಗಳಿಂದಲೂ ಮಾನಹಾನಿ ಪ್ರಸಂಗ ಜರುಗಿ ಹೋಗುತ್ತದೆ.

ಸಮಾಜದಲ್ಲಿ ನಾಗರಿಕರ ಸ್ಥಾನಮಾನಗಳನ್ನು ರಾಪಾಡುವ ಸಲುವಾಗಿ ರಾನೂ ಹುಗಳು ಯೋಗ್ಯ ರಕ್ಷಣೆಯನ್ನು ವ್ಯವಸ್ಥೆ ಮಾಡಿವೆ. ಪೀತ ಪತ್ರಿಕೆ, ಉಪದ್ವ್ಯಾಪಿ, ಲೇಪಕ, ಅಸಂಸ್ಕೃತ ನಾಗರಿಕ ಮತ್ತು ಬಾಯಿ ಬಿಗಿ ಇಟ್ಟುಕೊಳ್ಳಿ ಹೇಳಿಕಾರದಿಂದ ಸಭ್ಯರನ್ನು ಸುಸಂಸ್ಕೃತ ನಾಗರಿಕರನ್ನು ರಾಡು ಮಾಡಲು ನ್ಯಾಯಾಲಯದ ನೆರವೂ ಇದೆ. ಸಾಕಷ್ಟು ಸಾಕ್ಷ್ಯಾಧಾರಗಳಿಲ್ಲದೆ, ಸತ್ಯಕ್ಕೆ ದೂರವಾದ ಮಾನಹಾನಿ ಪ್ರಸಂಗಕ್ಕೆ ಕಾರಣರಾದವರನ್ನು ಶಿಕ್ಷಿಸುವ ಅಧಿಕಾರ ನ್ಯಾಯಾಲಯಕ್ಕಿದೆ. ಮಾನಹಾನಿಗೆ ಕಾರಣರಾದವರು ಕ್ಷಮೆಯಾಚಿಸಿ ಪಾರಾಗುವಂತಿಲ್ಲ. ಕ್ಷಮೆಯಾಚನೆಯನ್ನು ಪರಿಶೀಲಿಸಿದಾಗ ದುರುದ್ದೇಶಪೂರ್ವಕವಾಗಿ ಅಲ್ಲ ಎಂಬ ಸಂಗತಿ ತಿಳಿದು ಬಂದರೆ ಅಪರಾಧಿಯು ಶಿಕ್ಷೆ ಕಡಿಮೆಯಾಗಬಹುದು. ಮಾನಹಾನಿ ಅಪರಾಧವು ನ್ಯಾಯಾಲಯದಲ್ಲಿ ರುಜುವಾತಾದರೆ ಅಪರಾಧಿಗೆ ಎರಡು ವರ್ಷ ಶಿಕ್ಷೆ ಅಥವಾ ದಂಡಗಳೆರಡೂ ವಿಧಿಸಲ್ಪಡುವುವು. ಜನ ಸಾಮಾನ್ಯರಲ್ಲಿ, ವಿದ್ಯಾವಂತರಲ್ಲಿ ಅಸಂಸ್ಕೃತನಾಗರಿಕರಲ್ಲಿ ವಿವೇಕ ಮೂಡುವ ವರೆಗೂ ಈ ವ್ಯವಹಾರ ಮುಕ್ಯಾಯವಾಗುವುದಿಲ್ಲ.

ನಕ್ಷತ್ರ ದರ್ಶನ

[ಶ್ರೀ ವಿ| ಎಚ. ವೆಂಕಟರಮಣಯ್ಯ]
[ಸಂಗ್ರಹ— ಕೆ ವೆಂಕಟರಾಯಾಚಾರ್ಯ]

ಸಾರತ್ನಲ್ಲು

[ಸುರತ್ನಲ್ಲು ವೇಂದ್ರದ ಹೊಸಬೆಟ್ಟು ಗ್ರಾಮದ ಶ್ರೀ ಉಸ್ಪಜೆ ವೆಂಕಟರಮಣಯ್ಯನವರು ಪ್ರಾಥಮಿಕ ಶಾಲಾಧ್ಯಾಪಕರೊಬ್ಬರು. 1916ರಲ್ಲಿ ವಿದ್ಯಾಭ್ಯಾಸವೇ ತಲೆ ಪ್ರಾರಂಭವಾಗಲು ಕಾರಣರಾದವರಲ್ಲಿ ಇವರೊಬ್ಬರು. 'ಹೆಂಗಳ ಅಂಗೈಗನ್ನಡಿ'ಯೆಂಬ ನೀಳ್ಗನವಿದ್ದಲ್ಲಿ ಹಲವಾರು ಪದ್ಯಗಳನ್ನೂ ಬಾಲಕರ ಉಪಯೋಗಕ್ಕಾಗಿ ಬರೆದು ಪ್ರಕಟಿಸಿದ್ದಾರೆ. ಇವುಗಳನ್ನು, ಇವರು ಸಾಹಿತ್ಯರು ಹಾಗೂ ತ್ರಿಂದ ಸಂಗ್ರಹಿಸಿದ್ದು ಅನುಕ್ರಮವಾಗಿ ಪ್ರಕಟಿಸಲಿಪಸಿದ್ದೇವೆ]

೧) ಧಾಟಿ: ಇಂಗ್ಲೀಷ್ ನೋಟ್

ಬಾಹಾನ ಮಧ್ಯದೊಳಿಪ ತಾವೆಗಳ |
ಕಾಣುತ ಸಂಪೆ ಗಳಿಗೆ ಸಂಪ್ಯೆಗಳ |
ಕ್ಷೋಣಿಯೊಳಿರುವಂದದಿ ತಿಳಿಸುವೆನು |
ಜಾಣರು ಕಿವಿದ್ದರೆ ತಪ್ಪರಿಲಿದನು ॥೧॥

ಮೇಷದೊಳೊಂದೂವರೆ ಸಲುವಾಗ |
ತಾ ಶ್ರವಣವು ನಡುವಹುದು ಸರಾಗ |
ಬೇಸರಿಸದೆ ಮೂರುವರೆಗಾಗಿ |
ಆಸು ಧನಿಷ್ಠವು ಸಲುವುದು ಸಾಗಿ ॥೨॥
ವೃಷಭದೊಳೊಂದೂವರೆ ತನಗೆಂದು |
ಕುಶಲದಿ ಶತಭಿಷವಿರುವುದು ಮುಂದು |
ಕೊಸರದೆ ಪೂರ್ವಾಭಾದ್ರೆಯು ಬರುತ |
ಪೆಸರಡಗಿಸುವುದು ಕೇಳ್ ಸರತ ॥೩॥
ಮಿಥುನದೊಳೆರಡೂ ಮುಳ್ಕಾಲೆಂಬ |
ಪಥದೊಳಗುತ್ತರ ಭಾದ್ರದ ಜಿಂಬ |
ಸತಿ ರೇವತಿಯೆದ ನಡಗಿಸಿ ಮುಂದೆ |
ಮಿತಬಲಿ ನಿಲುವಳು ಸರಿಸಮನೆಂದೆ ॥೪॥
ಕರ್ಕಾಟಕದಲ್ಲಿರಡೂ ಕಾಲು |
ಕರ್ಕಶವಿರದೆಯಶ್ವಿನಿಯೂ ಪಾಲು |
ಕರ್ಕಶದಾ ಭರಣಿಯೊಳ್ಕೆಯೆಂದು |
ತೋರ್ಕೆಗೆ ತರುವುದು ಪೊರೆವೆನು ನಮಂನು
॥೫॥
ಕೃತ್ತಿಕೆಗಾ ನಿಂಹದೊಳೆಂಗೆನಿಮಿತ |
ವಿತ್ತಿರಿಸ್ಯೆ ರೋಹಿಣಿ ಮೂರೆನುತ |
ಮತ್ತಾ ಮೃಗಶಿರ ಕನ್ಯೆಯ ಕಾಲ |
ಪೊತ್ತಿ ಪಿಡಿವುದಾ ಮೇಲ್ ತಿಳಿ ಬಾಲ
॥೬॥
ಕನ್ಯೆಯೊಳಿರಡೂವರೆ ಸಲುವುದನು |
ಸನ್ಮತ ದಾರ್ದ್ರೆಯು ಸಾಚಿಸುದಿನ್ನ |
ಚೆನ್ನ ಪುನರ್ವಸು ತುಲೆಯೊ ಕಾಲ |
ಬೆನ್ನ ಪಿಡಿದೆ ತಾನಿರುವುದು ಕೇಳ ॥೭॥
ತುಲೆಯೊಳಗೆರಡೂವರೆ ಸಲುವುದನು |
ಸಲೆ ಪುಷ್ಯೆಯು ತಾನೊರೆಯುವುದಿನ್ನು |
ಕಳೆಯಲು ತುಲೆಯೊಳ್ಪೆಣಿಯು ಮುಂದು|
ಹೊಳೆಯುತಿಯದು ನಡು(ವಿದ್ದು) ಗಗನದಿ
॥೮॥
ವೃಶ್ಚಿಕದೊಂದೂವರೆ ಸಲುವಾಗ |
ಸ್ವೇಚ್ಛೆಯೊಳಾ ಮಘೆ ಬರುವುದು ಬೇಗ |
ಉಚ್ಚಸ್ಥಾನಕೆ ಹುಬ್ಬೆಯು ಪೋಗೆ |
ಸ್ವಚ್ಛದೊಳಾಯದು ನಾಲಂಕು ಗಳಿಗೆ॥೯॥
ಉತ್ತರಿಗಾ ಧನುವಿನೊಳರ್ಧವನು |
ಹಸ್ತಕೆ ಕಾಲು ಕದಿವೆ ಮೂರನ್ನು |
ಚಿತ್ತೈಗೆ ಮಿಗಿಯದರೆದ್ದೂ ಕಾಲ |
ನಿತ್ಯದಿ ಕಳೆವರು ಲಾಲಿಸು ಬಾಲ ॥೧೦॥
ಸ್ವಾತಿಗೆ ಮಕರದೊಳೊಂದೂವರೆಯೆ |
ಟ್ಯಾತ ವಿಶಾಖ್ಯುಳ್ಕೆದಮುದರಿಯೆ |
ನೂತನವೆದನುರಾಧೆಗೆ ಶುಂಭದೊಳು |
ಪ್ರೀತನೆ ಸಲ್ಲುವುದರ್ಧನೆ ಕೇಳು ॥೧೧॥
ಶುಂಭಕೆ ಜ್ಯೇಷ್ಠದೊಳೊಂದೂ ಕಾಲು |
ಶುಂಬಿದ ಮೂಲದಿ ನಾಲ್ಕೂ ಕಾಲು |
ಬೆಂಬಿಡದೂ ಮೇಲ್ ಪೂರ್ವಾಷಾಢಿ ಕೇಳ್ |
ಗಂಭೀರದೊಳಾನೊರೆವೆನು ಕೇಳ್ |
॥೧೨॥

(ಇಲ್ಲಿಯೊಂದೆರಡು ಸೊಪ್ಪು ಇರಬೇಕು)

ಕರ್ನಾಟಕ ವಿಮೋಚನಾ ಮಿತ್ರಕೂಟ

ಕರ್ನಾಟಕ ವಿಮೋಚನಾ ಮಿತ್ರಕೂಟ ಮಂಗಳೂರು ರಚನೆಯ ಆಸುಪಾಸಿನ ಉತ್ಸಾಹಿ ತರುಣರಿಂದ ಪ್ರೇರಿತವಾದ, ಕನ್ನಡದ ವಿಶಿಷ್ಟ ಏಳಿಗೆಗಾಗಿ ಕನ್ನಡಪ್ರಾಂತ ಸೇವೆಗಾಗಿ ಮೂಸಲಾಗಿರುವ ಒಂದು ಸಂಸ್ಥೆ. ಈ ಸಂಸ್ಥೆ ೧೫—೮—೧೯೬೬ರಂದು ಮೂಜಿ ಉಪನಂತ್ರಿಶ್ರೀ ವೈ. ರಾಮಚಂದ್ರರವರ ಅಧ್ಯಕ್ಷತೆಯಲ್ಲಿ ಉದ್ಘಾಟನೆಯಾಯಿತು.

ಉಚಿತ ವಾಚನಾಲಯ, ಪುಸ್ತಕ ಭಂಡಾರ, ಕನ್ನಡಿಗರಲ್ಲದವರಿಗೆ ಉಚಿತ ಕನ್ನಡ ತರಗತಿಗಳನ್ನು ನಡೆಸುವುದು, ಉತ್ತಮ ಮಟ್ಟದ ಸಾಹಿತ್ಯವನ್ನೊಳಗೊಂಡ ಪತ್ರಿಕೆಯನ್ನು ಪ್ರಕಟಿಸುವುದೇ ಮೊದಲಾದ ಧ್ಯೇಯಗಳನ್ನು ಹೊಂದಿ ಮುನ್ನಡೆಯುತ್ತಿರುವ ಮಿತ್ರಕೂಟವು ಇಂದು ನಾಲ್ಕನೆಯ ಆಡ್ಡದಿದ್ದು, ಮೂಗಿರ ಸ್ವಂತ ಬೆಂಗಳೂರು-೨೩ ವಿಳಾಸದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಉಚಿತ ವಾಚನಾಲಯವನ್ನು ಪ್ರಾರಂಭಿಸಿದೆ.

ಕನ್ನಡ ಕುಲಪುರೋಹಿತ ದಿವಂಗತ ಶ್ರೀ ಆಲೂರು ವೆಂಕಟರಾಯರ ಸ್ಮಾರಕಾರ್ಥವಾಗಿ ಪುಸ್ತಕ ಭಂಡಾರವನ್ನು ಪ್ರಾರಂಭಿಸುವ ಯೋಜನೆ ಕಾರ್ಯರೂಪಕ್ಕೆ ಬರುತ್ತಿದೆ. ಆ ಕಾರ್ಯಕ್ಕಾಗಿ ಈಗ ಈ ಮಿತ್ರಕೂಟ "ಲಕ್ಕಿ ಡಿಪ್" ಒಂದನ್ನು ಏರ್ಪಡಿಸಿದೆ. ಈ ಆಕರ್ಷಕ ಬಹುಮಾನಗಳನ್ನೂ ಇಡಲಾಗಿದೆ.

ಉನ್ನತ ಧ್ಯೇಯವನ್ನು ಹೊಂದಿ ಮುನ್ನಡೆಯುತ್ತಿರುವ ಈ ಸಂಸ್ಥೆಯು ಏಳಿಗೆಗೆ ತಮ್ಮ ಉದಾರ ಮನಸ್ಸಿನಿಂದ ಸಹಾಯ ನೀಡಬೇಕೆಂದು ಅಧ್ಯಕ್ಷರಾದ ಶ್ರೀ ಕೆ.ವೇಣುಪ್ರಸಾದ ಆಳ್ವ, ಬಿ. ಎಸ್‌ಸಿ. ಇವರು ಕೋರಿಕೊಂಡಿದ್ದಾರೆ.

ಶ್ರೀ ಎಡನೀರು ಶ್ರೀಗಳವರ ಜನ್ಮದಿನೋತ್ಸವ

ಕಾಸರಗೋಡು ತಾ. 1, ಎಡನೀರು ಮಠಾಧೀಶರಾದ ಶ್ರೀ ಕೇಶವಾನಂದ ಭಾರತೀ ಸ್ವಾಮೀಜಿಯವರ ಜನ್ಮದಿನೋತ್ಸವ ಎಡನೀರಿನ ಸ್ವಾಮೀಜೀ ವಿದ್ಯಾಮಂಟಪದಲ್ಲಿ ಗುರುವಾರ ಶ್ರೀ ಸೋದೆ ವಾದಿರಾಜ ಮಠದ ವಿಶ್ವೇತ್ತಮ ತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಆರಂಭದಲ್ಲಿ ಕಾಸರಗೋಡಿನ ಸುನಂದಾ ಮತ್ತು ಸಾವಿತ್ರಿಯವರಿಂದ ಪ್ರಾರ್ಥನೆಯಾಯಿತು. ಬಳಿಕ ಶ್ರೀ ಯಂ. ಮಹಾಲಿಂಗ ಭಟ್ಟರು, ಕೆ. ವೈ. ರಾಮಚಂದ್ರ ಭಟ್ಟರು ಶ್ರೀಗಳವರಿಗೆ ಕಾಣಿಕೆ ಸಮರ್ಪಿಸಿದರು. ಶ್ರೀಗಳವರು ಶಾಲಾ ಅಧ್ಯಾಪಕರ ಪರವಾಗಿ ಹಾಗೂ ವಿದ್ಯಾರ್ಥಿಗಳ ಪರವಾಗಿ ಹಾಗೂ ಪೂಜೆಯನ್ನು ಶ್ರೀ ಚಂದ್ರರಾಜ ಶಾಸ್ತ್ರಿಯವರು ಗುರುಕಾಣಿಕೆಯನ್ನೂ ಸಮರ್ಪಿಸಿದರು. ಶ್ರೀ ಪಿ. ವೆಂಕಟರಮಣ ಭಟ್ಟರು ಸ್ವಾಗತಭಾಷಣ ಮಾಡಿದರು. ವಿದ್ವಾನ್ ವೆಂಕಟರಾಜ ಪುಣಿಂಚತ್ತಾಯರು 'ಸ್ವಾಮೀಜಿದರ್ಶನ' ಎಂಬ ಗ್ರಂಥವನ್ನು ಶ್ರೀಗಳವರಿಗೆ ಕಾಣಿಕೆಯಾಗಿ ಸಮರ್ಪಿಸಿದರು. ಶ್ರೀಗಳವರು ಶಾಲಾ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ನೇವೆಯನ್ನು ಶ್ಲಾಘಿಸಿ ಆಶೀರ್ವಚನಗೈದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀಗಳವರ ತ್ಯಾಗ, ಪರೋಪಕಾರ, ಗುಣ ಶೀಲತೆಗಳನ್ನು ಸ್ಮರಿಸಿದರು. ಶ್ರೀಗಳವರು ಸಂಸ್ಕಾರಯುವುದೇ ಧನಸಹಾಯವನ್ನು ಅಪೇಕ್ಷಿಸದೆ, ಶ್ರೀ ಮಠದ ಆಶ್ರಮದಲ್ಲಿ ಸ್ವಂತವಾಗಿಯೇ ಹೈಸ್ಕೂಲು ನಡೆಸುತ್ತಿರುವುದು ಸಾಮಾನ್ಯದ ವಿಷಯವಾಗಿದೆಯೆಂದರು. ಶ್ರೀ ಕೆ. ವೈ. ರಾಮಚಂದ್ರ ಭಟ್ಟರು ವಂದನಾರ್ಪಣೆ ಗೈದರು.

ಈ ಸಂಬಂಧವಾಗಿ ರಾತ್ರಿ ಶ್ರೀ ಕಯಕಲಾವೃಂದದ ಆಶ್ರಯದಲ್ಲಿ ಶ್ರೀ ಕೃಷ್ಣ ಪಾರಿಜಾತ ಸುತ್ತು ಕೃಷ್ಣಾರ್ಜುನ ಕಾಳಗವೆಂಬ ಕಥಾಭಾಗದ ಯಕ್ಷಗಾನ ಬಯಲಾಟ ಜರಿತು. ಮರುದಿನವೂ ಅಕಿಕಾಯ ಇಂದ್ರಜಾಣವಧೆ ಎಂಬ ಕಥಾಭಾಗದ ಯಕ್ಷಗಾನ ಬಯಲಾಟವು ನಡೆಯಿತು.



ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ
ಪುಟ 450ಕ್ಕೂ ಮಿಕ್ಕಿ ಬೆಲೆ ರೂ. 1-50
ರಷ್ಟು ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಶ್ರೀ ಹಂಸ ಚಿತ್ರಕವರ ಅನುಪಮ
ಕಥಾರಚನೆ

ಶ್ರೀ ಪುರಂದರ ದಾಸರು

ಕನ್ನಡ ನಾಡಿನಲ್ಲಿ ಅತ್ಯಂತ ಜನಪ್ರಿಯವಾಗಿರುವ ದಾಸಸಾಹಿತ್ಯ ನಮ್ಮ ಕಾಯ್ಕುಡಿಯ ಜ್ಞಾನಭಂಡಾರದ ಒಂದು ಅಮೂಲ್ಯ ಘಟಕವಾಗಿದೆ. ಇದರಲ್ಲಿ ಸರ್ವೋನ್ನತವಾಗಿ ಪ್ರಚಾರವಾಗಿರುವುದು ಶ್ರೀ ಪುರಂದರದಾಸರ ಕಥೆ. ಸಂತನಾಗಿ ಪರ್ವರ್ತಿಸಿ ಅವರು ಜನತೆಯ ಆತ್ಮೋದ್ಧಾರಕ್ಕಾಗಿ ಶ್ರಮಿಸಿದ ಕಥೆ ನಾಡಿನ ಅಬಾಲವೃದ್ಧರಿಗೂ ಸುಪರಿಚಿತ. ಪೂಜನೀಯರಾದ ಈ ಕಥೆಯನ್ನು ಸಾಯೋಗ್ಯ ರೀತಿಯಲ್ಲಿ ತೆರೆಗೆ ತಂದು ಲಕ್ಷಾಂತರ ಜನ ನೋಡಿ ಮನಸಾ ಮಾಡಲು ಅವಕಾಶವಾಗಿರುವ ಅಕಾಂಕ್ಷೆಯೇ ಶ್ರೀ ಹಂಸ ಚಿತ್ರವರ ಕಾಣಿಕೆ "ಶ್ರೀ ಪುರಂದರದಾಸರು" ಚಿತ್ರಕ್ಕೆ ಪ್ರೇರೇಪಣೆ.

ವ್ಯಾಪಾರ ವೃತ್ತಿಯಲ್ಲಿದ್ದು ಧನಾರ್ಜನೆಯೇ ಜೀವನದ ಪರಮೋದ್ದೇಶವೆಂದುಕೊಂಡಿದ್ದ ಸೀನಪ್ಪ ನಾಯಕ. ಪರಮೋತ್ಕಟನು ಅತನನ್ನು ನಾನಾ ರೀತಿಯಲ್ಲಿ ಪರೀಕ್ಷಿಸಿದ. ಕೊನೆಗೆ 'ಮೂಗುತಿ ಪ್ರಕರಣ'ದಿಂದ ಆತನ ಕಣ್ಣು ತೆರೆದು ಮನಸ್ಸು ಪರಿವರ್ತಿತವಾಗಿ ಐಶ್ವರ್ಯವನ್ನೆಲ್ಲ ದಾನಮಾಡಿ ಆತ ಪುರಂದರದಾಸರಾದರು. ಗುರು ವ್ಯಾಸರಾಯರಲ್ಲಿಗೆ ಹೋಗಿ ದಾಸದೀಕ್ಷೆ ಪಡೆಸಿದರು.

ಶ್ರೀ ಪುರಂದರದಾಸರು ತಮ್ಮ ಜೀವನಾದರ್ಶದಿಂದಷ್ಟೇ ಅಲ್ಲದೆ ಸಾಹಿತ್ಯ, ಸಮಾಜ ಸಾಧಾಂಶಗಳಿಗೂ ವಿಶೇಷವಾಗಿ ಮಾರ್ಗದರ್ಶನ ಮಾಡಿದ್ದಾರೆ. ಅವರ ಸಾಹಿತ್ಯ ಅನನ್ಯ ಭಕ್ತಿಯಿಂದ ತುಂಬಿ ತುಳುಕುವುದು. ಅವರು ಸಂಕುಚಿತ ಸಾಮಾಜಿಕ ಭಾವನೆಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿ ಉದಾತ್ತ ದೃಷ್ಟಿ ಬೆಳಸಿಕೊಳ್ಳಬೇಕೆಂದು ಪ್ರತಿಪಾದಿಸಿದರು. "ಹಾಡಿದರೆ ಎನ್ನೊತೆಯನ ಹಾಡುವೆ," 'ಈ ಪರಿಯ ಸೊಬಗಾವ ದೇವರಲ್ಲಿ ನಾಕಾಣೆ' "ಸಕಲ ಗ್ರಹಬಲ ನೀನೇ ಸರಸಿಜಾಕ್ಷ' ಎಂದು ಮುಂತಾಗಿ ಸವಿಗನ್ನಡದಲ್ಲಿ ಹೃದಯ ತುಂಬಿ ಪುರಂದರ ವಿಠಲನನ್ನು ಸ್ತುತಿಸಿದ ದಾಸವರೇಣ್ಯರು ಜನರನ್ನು ಜಾಗೃತಗೊಳಿಸಲೂ ಹಾಡಿದ್ದಾರೆ. ಸಮಾಜದಲ್ಲಿ ಸಮಾನತೆಯನ್ನು ಪ್ರತಿಪಾದಿಸಿರುವುದು ಪುರಂದರದಾಸರ ಒಂದು ಸಮಕಾಲೀನ ಮಹತ್ವದ ವಿಷಯ. 'ಏನನು ತಂದೆಯೊ ಬಂದಾಗ, ಏನನು ಒಯ್ಯುವೆ ಹೋದಾಗ, ದಾನಧರ್ಮವ ಬಿಡದೆ ಮಾಡು ಇದ್ದಾಗ' ಎಂದು ಕರೆಯಿತ್ತರು. "ಹೊಲೆಯ ಹೊರಗಿಡದೆ ಊರೊಳಗಿಲ್ಲವೆ?" ಎಂದು ಸಮಾಜ ಹಾಕಿದರು.

ವಿದ್ವಜ್ಜನರ ಮಾರ್ಗದರ್ಶನ ಪಡೆದು, ಬಹು ಗಂಭೀರವೂ ಗೌರವಾನ್ವಿತವೂ ಆದ ರೀತಿಯಲ್ಲಿ ಚಿತ್ರಕಥೆ ನಿರೂಪಿತವಾಗಿದೆ. ಈ ಚಿತ್ರದಲ್ಲಿ ಕೆಲಸ ಮಾಡಿರುವವರೆಲ್ಲ ಇದು ತಮ್ಮ ವೈಕ್ತಿ ಜೀವನದ ಒಂದು ಪುಣ್ಯಕಾರ್ಯವೆಂದು ಶ್ರದ್ಧೆಯಿಂದ ಶ್ರಮಿಸಿದ್ದಾರೆ. ಚಿ. ಉದಯ ಶಂಕರ ಅವರು ಬರೆದ ಚಿತ್ರ ಸಾಹಿತ್ಯ ಎಲ್ಲರ ಮನಸೆಳೆಯುವಂತಿದೆ. ತಾಂತ್ರಿಕವಾಗಂತೂ ಕನ್ನಡದಲ್ಲೇ ಅಭೂತಪೂರ್ವವೆನ್ನಬೇಕು. ಭಾವಪೂರ್ಣ ಅಭಿನಯಕ್ಕೆ ಹೆಸರಾಂತ ಕೆ. ಎಸ್. ಅಶ್ವತ್ಥ್ ಪುರಂದರ ದಾಸರ ಪಾತ್ರವನ್ನು ಮನೋಜ್ಞವಾಗಿ ನಿರ್ವಹಿಸಿದ್ದಾರೆ. ದಾಸರ ಪತ್ನಿಯ ಪಾತ್ರದಲ್ಲಿ ಶ್ರೀಮತಿ ಲೀಲಾವತಿ ಸಂಥಂಬಾಯಿ ಇದ್ದಂತೆಂದೆ ಮೇಲೆ ಆ ಪಾತ್ರದ ಸರಳ ಭಕ್ತಿಪ್ರಧಾನತೆಯನ್ನು ಕುರಿತು ಬೇರೆ ಹೇಳಬೇಕಾಗಿಲ್ಲ. ಜತೆಗೆ ಅಂ. ನಾಗೇಂದ್ರರಾವ್, ಉದಯಕುಮಾರ್, ವೀಣಾಪಟು ಚಿಟ್ಟಿಬಾಬು, ನರಸಿಂಹರಾಜು, ಬಾಲಕೃಷ್ಣ, ರಾಜಶಂಕರ್, ವಾದಿರಾಜ್, ಎಚ್. ಆರ್. ಶಾಸ್ತ್ರಿ, ವೆಂಕಟೇಶ್, ಗಣಪತಿಭಟ್, ಮೈನಾವತಿ, ವಿಜಯಲಕ್ಷ್ಮಿ (ನಂದನಾ), ಹರಿಣಿ, ರಮಾದೇವಿ ಹೊಸಕಾಡವರು ಯಶೋಚಿತ ಸೋಪಕ ಪಾತ್ರಗಳಲ್ಲಿದ್ದಾರೆ. ಸಾಯಜವಾಗಿಯೇ ಸಂಗೀತವು ಈ ಚಿತ್ರದ ಗುಣಾತಿಶಯವೆಂದೂ ಹೇಳಬಹುದಾಗಿದೆ. ಪುರಂದರ ದಾಸರ ಅನೇಕ ಹಾಡುಗಳನ್ನು ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಎಂ. ಬಾಲಮುರಳಿ ಕೃಷ್ಣ, ಪಿ. ಬಿ. ಶ್ರೀನಿವಾಸ್, ಎಂ. ಎಲ್. ವಸಂತಕುಮಾರಿ, ಪಿ. ಲೀಲಾ, ಸರೋಜಿನಿ ಮೊದಲಾದವರು ಈ ಹಾಡುಗಳನ್ನು ಸ್ಮರಣೀಯ ಗಾಂಭೀರ್ಯ, ಭಕ್ತಿಭಾವಗಳಿಂದ ಹಾಡಿದ್ದಾರೆ. ಸಿ. ಎಸ್. ಪಾಂಡುರಂಗ ಅವರು ಸಂಗೀತವನ್ನು ನಿರ್ದೇಶಿಸಿದ್ದಾರೆ. ನುರಿತ ಚಿತ್ರವ್ಯಕ್ತಿಗಳಾದ ಸಿ.ವಿ. ರಾಜುನುತ್ತು ಆರ್. ರಾಮ ಮೂರ್ತಿ ಅವರುಗಳ ನೇತೃತ್ವದಲ್ಲಿ ಈ ಚೊಕ್ಕ ಚಿತ್ರ ಸಿದ್ಧಗೊಂಡಿದೆ. ವೀನಸ್ ಮೂವೀಸ್ ಹಂಚಿಕೆಯೊಂದಿಗೆ 'ಶ್ರೀ ಪುರಂದರದಾಸರು' ಚಿತ್ರ ಕನ್ನಡ ರಾಜ್ಯೋದಯ ದಿನವಾದ ನವೆಂಬರ್ 1ರಂದು ನಾಡಿನಾದ್ಯಂತ ತೆರೆಗೆ ಬರಲಿದೆ.

ಸಂಯುಕ್ತ ರಾಷ್ಟ್ರ ಸಂಘ

(ನಿನ್ನೆಯ ಮುಂದುವರಿದ ಭಾಗ)

ಬ ಅಂಗಸಂಸ್ಥೆಯನ್ನು ಸ್ಥಾಪಿಸಿದೆ. ಇದು ಸದಸ್ಯರಾಷ್ಟ್ರಗಳಲ್ಲಿ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಯನ್ನುಂಟುಮಾಡಲು ಅನೇಕ ತರದ ಸಹಾಯವನ್ನೊದಗಿಸುವುದು. ಪ್ರತಿಯೊಂದು ಸದಸ್ಯರಾಷ್ಟ್ರವೂ ಇದರಿಂದ ಅನೇಕ ಪ್ರಯೋಜನವನ್ನು ಪೊಂದುತ್ತಿದೆ ಮತ್ತು ಪ್ರಗತಿಯನ್ನು ಸಾಧಿಸುತ್ತಿದೆ.

ಜಾಗತಿಕ ಶಾಂತಿಯ ರಕ್ಷಣೆಗಾಗಿ ಭಾರತವು ಸಂಯುಕ್ತ ರಾಷ್ಟ್ರ ಸಂಸ್ಥೆಗೆ ತಂಬಾಸಹಾಯವನ್ನಿತ್ತಿದೆ. ಜಗತ್ತಿನಲ್ಲೀಗ ನಾವ್ಯಾಜ್ಯ ಶಾಂತಿ ಮತ್ತು ಸಮಾಜವಾದೀ ಎಂಬ ಎರಡು ಪ್ರಬಲ ಪಕ್ಷಗಳಿವೆ ಆದರೆ ಭಾರತವು ಈ ಎರಡೂ ಪಕ್ಷಗಳನ್ನು ವಹಿಂಪೆ ತಟಸ್ಥರಾಷ್ಟ್ರವೆನಿಸಿಕೊಂಡಿದೆ. ಕೊರಿಯಾ, ಕಾಂಗೋಗಳಲ್ಲಿ ನಡೆದ ಭೀಕರ ಯುದ್ಧದ ಮೂಲ ಹಂತದಲ್ಲೇ ಸಂಯುಕ್ತ ರಾಷ್ಟ್ರಸಂಸ್ಥಿಗೆ ಸಹಾಯಕವಾಗಿ ತನ್ನ ಭಾರತದ ಸೈನ್ಯವನ್ನಿಟ್ಟು ಶಾಂತಿಯನ್ನು ಸಾಧಾರಿಸಿತು. ಶಾಂತಿಯ ಮಾರ್ಗದಲ್ಲಿ ನಡೆಯಲು ಜಗತ್ತಿಗೇ ಭಾರತವು ಒಂದು ಮಾರ್ಗದರ್ಶಕವಾಗಿದೆ ಎಂದು ಎದೆ ತಟ್ಟಿ ಹೇಳಬಹುದು.

ಸಂಯುಕ್ತ ರಾಷ್ಟ್ರ ಸಂಸ್ಥೆಯು ಈ ತನ್ನತಂತೆಯೇ ಇನ್ನು ಮುಂದೆಯೂ ಕಾರ್ಯ ನಿರ್ವಹಿಸಿ ಯಶಸ್ವಿಯಾಗಲಿ, ಜಾಗತಿಕ ಶಾಂತಿಗೆ ಆಶ್ರಯವಿತ್ತು, ಜಾಗತಿಕ ಅಭಿವೃದ್ಧಿ ಸಾಧಿಸುವುದರಲ್ಲಿ ಸಫಲವಾಗಿ ಚಿರಕಾಲ ಬಾಳಲಿ.

ಬಸ್ ಅಪಘಾತ

ಯಾರು ಊರಿಗೆ
ಹೊರಡಿ ಬನ್ನಿರಿ
ಬಸ್ಸು ಹೊರಟೂ ಘಂಟೆದೆ.
ಸಮಯ ಸಮಯಕೆ
ಕೂಗು ರಾಗವ
ಹಾಡಿ ಕರೆವುದು ಕೇಳದೆ?
ಪತ್ನಿ ಪುತ್ರರು
ಹೊರಡಿ ಎಲ್ಲರು
ನಿಂತ ಬಸ್ಸನು ನೋಡಿರಿ.
ಮಿತ್ರ ವರ್ಗವು
ಬೀಳು ಕೊಡುತಿದೆ
ಹೊರಡಿ ಮುಂದಕೆ ಎನ್ನುತ.
ಚಕ್ರ ಗಿರಿ ಗಿರಿ
ಬಸ್ಸು ಡರ ಡರ
ಹೊರಟು ಸಾಗಿತು ಮುಂದಕೆ
ಏರು ತಗ್ಗನು
ದಾಟಿ ಹೋಯಿತು
ಕೆಸರು ಧೂಳಿನ ಮಧ್ಯದಿ
ಎದುರು ಬಂದಿತು
ಕಾರು ನೋಡಿರಿ
ಎಷ್ಟು ಸುಂದರ ಮನೋಹರ!
ಹೊಳೆವ ಬಣ್ಣಕೆ
ಬರುವ ವೇಗಕೆ
ಹಿಡಿವ ತಪ್ಪಿತು ಬಸ್ಸಿಗೆ
ಬಸ್ಸು ನಾಚಿತು
ಬದಿಗೆ ಹೋಯಿತು
ಹರಿವ ನದಿಯಲಿ ಧುಮುಕಿತು
ಕಾರು ನಕ್ಕಿತು
ಓಡಿ ಹೋಯಿ ತು
ಹೊಗೆಯ ಕಾರುತ ಹಿಂದಕೆ.
ಬಸ್ಸೆ ಜೀವವು
ಕಾರೆ ಮೂಯೆಯು
ಪಯಣವೇ ಈ ಜೀವನ
ಜೀವ ಜೀವನ—
ದಲ್ಲಿ ಪಯಣಿಗ
ಮೂಯೆ ಕಾಣುತ ನೆಗೆಯಿತು
ಹಿರಿಯ ಜೀವಕೆ
ಕಿರಿಯ ಧೈರ್ಯವು
ಇದಕೆ ಸೂಯೆಯು ನಕ್ಕಿತು
ಗುರಿಯ ಸೇರದ
ಸಹಜ ಹೊರಟಕ
ಇದುವೇ ಬಸ್ ಅಪಘಾತವು!

—ಎಸ್. ಪದ್ಮನಾಭ ನಾಯಕ್
ಉಡುಪಿ.

ಗಾಂಧಿ ವಾಣಿ

ಕಾಯದೆ ಮುರಿದು ಸರಕಾರದ ಕೋಪಕ್ಕೆ ಗುರಿಯಾಗಿ ಬದುಕ ಬಹುದು, ಆದರೆ ಶೀತಿಯನ್ನು ಮುರಿದು ದೇವರ ಕೋಪಕ್ಕೆ ಗುರಿಯಾಗಿ ಬದಕುಲಾರೆ.

ಂ ಂ ಂ

ಸ್ವಾರ್ಥ ಲಾಭವಿಲ್ಲದ ಸೇವೆಯೇ ಧರ್ಮ.

ಂ ಂ ಂ ಂ

ವ್ಯಕ್ತಿಯ ಅಥವಾ ಜನಾಂಗದ ನೀತಿಗೆ ದಕ್ಕೆ ತರುವ ದ್ರವ್ಯ ಸಂಪತ್ತು ಅಧಾರ್ಮಿಕ ಆದ್ದರಿಂದ ಪಾಪಕರ.

ಂ ಂ ಂ ಂ

ಆರನರೂ ಅವರ ಖಡ್ಗಗಳೂ ನೀತಿಯ ಖಡ್ಗದ ಮುಂದೆ ನಿಲ್ಲಲಾರವು.

ಂ ಂ ಂ ಂ

ಮೂತು ಮನಸ್ಸನ್ನು ತೋರಿಸುವಂತಿರಬೇಕು; ಕೃತಿ ಮೂಕನ್ನು ತೋರಿಸುವಂತಿರಬೇಕು.

ಂ ಂ ಂ ಂ

ಹೋರಾಟದಲ್ಲಿ, ಪ್ರಯತ್ನದಲ್ಲಿ, ಅದಕ್ಕಾಗಿ ಪಡುವ ಕಷ್ಟನಷ್ಟದಲ್ಲಿ ಆನಂದ ವಿದೆಯೇ ಹೊರತು ಅದರ ಗೆಲುವಿನಲ್ಲಿಲ್ಲ.

ಂ ಂ ಂ ಂ

ಬುದ್ಧಿವಂತಿಕೆಯು ಹೃದಯವಂತಿಕೆಯು ಅಧೀನವಾಗಿರಬೇಕು.

ಂ ಂ ಂ ಂ

ನಿಜವಾದ ಕಲಾವಿದನು ಸತ್ಯ ಪ್ರಕಾಶದ ಆಕ್ಕದಲ್ಲಿ ಸೌಂದರ್ಯವನ್ನು ನೋಡುತ್ತಾನೆ! ಹೊರಗಿನ ಮುಖ—ಮೈ ಸೌಂದರ್ಯದಷ್ಟಲ್ಲ.

ಂ ಂ ಂ ಂ

ಸೇವೆಯೇ ಪತ್ರಿಕೋದ್ಯಮದ ಮುಖ್ಯ ಗುರಿಯಾಗಿರಬೇಕು.

ಆರೋಗ್ಯ ಒಂದಿದ್ದರೆ ವೈಭವಗಳೆಲ್ಲ ಆರವನ್ನು ನಾಚಿಸಿಯೇನು!

—ಎಮರ್ಸನ್

ಂ ಂ ಂ

ಆರೋಗ್ಯವುಳ್ಳ ಶರೀರ ಅತ್ಯದ ಆರಮನೆ; ಆರೋಗ್ಯವುಳ್ಳ ಶರೀರ ಅತ್ಯದ ಸೆರೆಮನೆ.

—ಜೇಕನ್

ಪರಿಜನ ಗಿರಿಜನರ ಅವಗಾಹನೆಗೆ

ಬೆಳ್ತಂಗಡಿ ತಾಲೂಕು ನಾರಾಯಣ ಗ್ರಾಮದಲ್ಲಿ ಗಿರಿಜನರಿಗಾಗಿಯೂ, ಇಂದಬೆಟ್ಟು ಗ್ರಾಮದಲ್ಲಿ ಪರಿಜನರಿಗಾಗಿಯೂ ಸರಕಾರದಿಂದ ಕಟ್ಟಿಸಲ್ಪಟ್ಟ ಮನೆಗಳು ಮತ್ತು ಅವಕ್ಕೆ ಸಂಬಂಧಪಟ್ಟ ಸಾಗುವಳಿ ಮಾಡುವಂಥ ಯೋಗ್ಯವಾದ ಭೂಮಿ ಕೂಡ ಖಾಲಿ ಇದೆ. ಇದನ್ನು ಸಾಗುವಳಿ ಮಾಡುವವರೇ ಎಲ್ಲಾ ರೀತಿಯ ಸೌಲಭ್ಯಗಳನ್ನು ಸರಕಾರದಿಂದ ಕೊಡಲಾಗುವುದು. ಈ ಸದುಪಯೋಗವನ್ನು ಪಡೆಯಲಿಚ್ಛಿಸುವ ಮೇಲಿನ ವರ್ಗಕ್ಕೆ ಸೇರಿದ ಜನರು ಬೆಳ್ತಂಗಡಿ ಬ್ಲೋಕ್ ಡೆವಲಪ್‌ಮೆಂಟ್ ಆಫೀಸರರಿಗೆ ಅರ್ಜಿ ಸಲ್ಲಿಸಬೇಕಾಗಿ ಈ ಮೂಲಕ ತಿಳಿಸೋಣವುಂಟಾಗಿದೆ. ಈ ಬಾಬಿನಲ್ಲಿ ಹೆಚ್ಚಿನ ಮಾಹಿತಿಯನ್ನು ಬ್ಲೋಕ್ ಡೆವಲಪ್‌ಮೆಂಟ್ ಆಫೀಸರಿಂದಲೂ ಬೆಳ್ತಂಗಡಿ ಮತ್ತು ನಾರಾವಿ ಪೈಬಲ್ ಪೈಬಲ್ ಎಲ್ ಫೋರ್ ಇನ್ಸ್‌ಪೆಕ್ಟರರಿಂದ ಪಡೆದು ಕೊಳ್ಳಬಹುದು.

ಎ. ಶಶಿಕಲ
ಬ್ಲೋಕ್ ಡೆವಲಪ್‌ಮೆಂಟ್ ಆಫೀಸರರ್
ಬೆಳ್ತಂಗಡಿ

V. M. Hegde, Bijjal
P. O. Wajgod, Tq. Siddapur (N. K.)

ರಬ್ಬರ್ ಸ್ಟಾಂಪುಗಳು!!

ನಿಮಗೆ ಬೇಕಾಗುವ ಎಲ್ಲಾ ನಮೂನೆಯ
ಅಂದವಾದ ರಬ್ಬರ್ ಸ್ಟಾಂಪುಗಳಿಗೆ
ನಮ್ಮಲ್ಲಿ ವಿಚಾರಿಸಿರಿ:—

VINAYAKA STAMPS

ಇಂಗ್ಲೀಷ್, ಕನ್ನಡ, ಹಿಂದಿ, ತಮಿಳು ಭಾಷೆಗಳಲ್ಲಿ
ನಿಮ್ಮ ಮನಸ್ಸು ಒಪ್ಪುವಂತೆ ಒದಗಿಸುತ್ತೇವೆ.
ವಿವರಗಳಿಗೆ ರಿಪ್ಲೈ ಕಾರ್ಡು ಇಟ್ಟು ಮೇಲಿನ ವಿಳಾಸಕ್ಕೆ ಬರೆಯಿರಿ.

ಚಿತ್ರಯುಗ ೧೯—೧೧—೫೯

ಎಲ್ಲೆಲ್ಲಿ ಏನೇನು?

'ಯುಗಪುರುಷ' ವಿಶೇಷಾಂಕ ಉದ್ಘಾಟನೆ

ಕೆನ್ನಗೋಳಿ, ಯುಗಪುರುಷದ ದಸರಾ ವಿಶೇಷಾಂಕದ ಉದ್ಘಾಟನಾ ಸಮಾರಂಭವು ತಾ. 7—10—67ರಂದು ಶ್ರೀ ಕುದ್ರಿ ವಾಸುದೇವ ಶೆಟ್ಟಿಯವರಿಂದ ಶ್ರೀ ಕೆ. ಸೂರ್ಯನಾರಾಯಣ ಆಡಿಗ, ಎಂ ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಶ್ರೀ ಬಿ. ವಿ. ಬಾಳಿಗರಿಂದ ಪ್ರಾರ್ಥನೆಯೊಂದಿಗೆ ಡಾ| ನಂಜೀವನನಾಥವಳಲರಿಸ್ವಾಗತ ಭಾಷಣ ಮಾಡಿ ಪತ್ರಿಕೆಯ ಇತಿಹಾಸವನ್ನು ವಿವರಿಸಿದರು. ಶ್ರೀ ಕೆ. ಎಸ್. ಪದ್ಮನಾಭಾಚಾರ್ಯರು ಪರಿಚಯ ಭಾಷಣ ಮಾಡಿದರು. ಶ್ರೀ ಕುದ್ರಿಯವರು ಜಿಲ್ಲೆಯ ಪತ್ರಿಕೆಗಳ ಇತಿಹಾಸವನ್ನು ವಿವರಿಸಿ 'ಯುಗಪುರುಷ'ದ ವೈಶಿಷ್ಟ್ಯಕ್ಕಾಗಿ ಸಂಪಾದಕ ಶ್ರೀ ಉಡುಪರನ್ನು ಅಭಿನಂದಿಸಿದರು.

ಶ್ರೀ. ಕೆ. ಬಾಲಕೃಷ್ಣಾಚಾರ್ಯರಿಂದ ಕವಿತಾ ವಾಚನ, ಶ್ರೀ ವಿಶುಕುಮಾರರಿಂದ ಭಾಷಣ, ಶ್ರೀ ಪರಿಪೂರ್ಣಚಂದ್ರ ಆಚಾರ್ಯರಿಂದ ಸಂದೇಶ ವಾಚನಗಳಾದ ಬಳಿಕ ಶ್ರೀ ಅಡಿಗರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಯುಗಪುರುಷದ ಸ್ಥಾನ ಮಾನಕ್ಕಾಗಿ ಮೆಚ್ಚುಗೆ ಸೂಚಿಸಿ ಅದಕ್ಕೆ ಉತ್ತರೋತ್ತರ ಶ್ರೇಯಸ್ಸಾಗಲೆಂದರು. ಸಂಪಾದಕ ಶ್ರೀ ಕೊಡತ್ತೂರು ಅನಂತ ಪದ್ಮನಾಭ ಉಡುಪರು ಧನ್ಯವಾದಗಳನ್ನರ್ಪಿಸಿದರು.

ಬಹುಮಾನ ಪಡೆದ ಕನ್ನಡ ವಿದ್ಯಾರ್ಥಿನಿ

ಮುಂಬೈ, ೧೯೬೭ನೇ ಇಸವಿ ಎಪ್ರಿಲ್ ತಿಂಗಳಲ್ಲಿ ಮುಂಬೈಯಲ್ಲಿ P. S. C. (ಪ್ರೈಮರಿ ಸ್ಕೂಲ್ ಸರ್ಟಿಫಿಕೇಟ್) ಪರೀಕ್ಷೆ ಜರಗಿತ್ತು. ಈ ಪರೀಕ್ಷೆಯಲ್ಲಿ ಭಾಗವಹಿಸಿದ್ದ ಬ್ರಹನ್ಮುಂಬಯಿಯ ಸಾಮಾರು ಇಪ್ಪತ್ತಾರು ಸಾವಿರ ವಿದ್ಯಾರ್ಥಿಗಳಲ್ಲಿ ಕನ್ನಡ ವಿದ್ಯಾರ್ಥಿನಿಯಾದ ಬಿ. ಕನಕಾ ವೆಂಕಟ್ರಮಣ ಬಾಳಿಗಾ ಇವಳು ಪ್ರಥಮ ಶ್ರೇಣಿಯಲ್ಲಿ ಪಾಸಾಗಿರುವಳು. ಬ್ರಹನ್ಮುಂಬಯಿ ವಿದ್ಯಾಲಾಖೆಯ ಇನ್ಸ್‌ಪೆಕ್ಟರಂ ರೂಪಾಯಿ೨೫/- ಪ್ರೋತ್ಸಾಹಕ ಬಹುಮಾನವನ್ನಿತ್ತು ಈಕೆಯನ್ನು ಗೌರವಿಸಿದ್ದಾರೆ. ಮುಂಬಯಿಯ, ಪ. ಗೋರೆಗಾಂವ್‌ನಲ್ಲಿರುವ ಅಪ್ಪರ್ ಪ್ರೈಮರಿ ಕನ್ನಡ ಶಾಲಾ ವಿದ್ಯಾರ್ಥಿನಿಯಾಗಿದ್ದ ಬಿ. ಕನಕಾ ತನ್ನ ಪರಿಶ್ರಮದಿಂದ ತನ್ನ ಶಾಲೆಗೆ ಗೌರವವನ್ನು ತಂದಿರುವ ವಿಷಯವು ಅಭಿನಂದನೀಯವಿದೆ.

ಬೆಳಕಿನ ಹಬ್ಬ

ದೀಪಾವಳಿ ಸಮೀಪಿಸುತ್ತಿದೆ

ನವಯುಗದ

ದೀಪಾವಳಿ ಸಂಚಿಕೆ

ತಯಾರಾಗುತ್ತಿದೆ

ಜ್ಞಾನದೀಪವಾಗಿ

ಇದು ಎಲ್ಲೆಲ್ಲೂ ಬೆಳಗಲಿದೆ

ಜಾಹೀರಾತಿಗೆ

ಉತ್ತಮ ಮಾಧ್ಯಮವೆಂದರೆ

ನವಯುಗ

ದೀಪಾವಳಿ ಸಂಚಿಕೆ!

ದರಗಳಿಗೆ ಬರೆಯಿರಿ:

ಮೆನೇಜರ್, ನವಯುಗ, ಉಡುಪಿ

ನಾಡಹಬ್ಬ

ರಂಗಂಪೇಟೆ ಕನ್ನಡ ಸಾಹಿತ್ಯ ಸಂಘದ ವತಿಯಿಂದ ನಾಡ ಹಬ್ಬವು ತಾ ೭ರಿಂದ ೮ರ ತನಕ ವಿಜೃಂಭಣೆಯಿಂದ ಜರಗಿತು. ಸಂಘದ ಅಧ್ಯಕ್ಷೆ ಶ್ರೀ ರಾಮಣ್ಣಾ ಬೋಣಾ ಅವರಿಂದ ಧ್ವಜಾರೋಹಣವಾಯಿತು. ಶ್ರೀ ಬಂಡಿ ಗುರಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ರುದ್ರ ಸ್ವಾಮಿಗಳು ಉಪಸ್ಥಾನ ನೂಡಿದರು. ಎರಡನೆ ದಿನ ಶ್ರೀಮತಿ ಮುಂಡಾಕೆನ ಬಾಯಿಯವರು ಜನಪದ ಸಾಹಿತ್ಯದ ವಿಷಯ ಭಾಷಣ ಮಾಡಿದರು. ಕೊನೆಯ ದಿನ ಶ್ರೀ ಕೃಷ್ಣ ಶೆಟ್ಟರು ರಾಮಾಕೃಷ್ಣ ಪರಮಹಂಸರ ಬಗ್ಗೆತು ಮೊತನಾಡಿದರು. ಪ್ರತಿ ದಿನವೂ ವಿವಿಧ ಮನರಂಜನಾ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದವು ಕಾರ್ಯದರ್ಶಿ ಶ್ರೀ ಎಂ. ಆರ್. ಬುದ್ಧಿವಂತ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ದಸರಾ ಮಹೋತ್ಸವ

ಉಡುಪಿ, ಹೀರೆಬಾಗಿಲಿನಲ್ಲಿ ವರ್ಷಾವಧಿಯಂತೆ ದಸರಾ ಮಹೋತ್ಸವವು ತಾ. 7—10—1967ರಿಂದ ತಾ. 19—10—1967ರ ತನಕ ವಿಜೃಂಭಣೆಯಿಂದ ನಡೆಯುತ್ತಿದ್ದು, ಪ್ರತಿದಿನವೂ ಮಕ್ಕಳ ಆಟೋಟ ಸ್ಪರ್ಧೆಗಳೂ ನಾಟಕ, ನೃತ್ಯ, ಸಂಗೀತ, ಭಕ್ತಿಗೀತೆ ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳೂ ನಡೆದಿದ್ದು ತಾ. ೧೮ರಂದು ಮಧ್ಯಾಹ್ನ ೩ ಗಂಟೆಯ ವೇಳೆಗೆ ಶ್ರೀ ಅನಂತೇಶ್ವರ ದೇವಸ್ಥಾನದಿಂದ ಹೊರಟ ಭವ್ಯ ಮೆರವಣಿಗೆಯಲ್ಲಿ ಶ್ರೀ ಅನಂತೇಶ್ವರ ದೇವರ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿರಿಸಿ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಮೆರವಣಿಗೆಯಲ್ಲಿ ಸಾವಿರಾರು ಭಕ್ತಾದಿಗಳು ಭಾಗವಹಿಸಿದ್ದರು. ಮೆರವಣಿಗೆಯು ಕಲ್ಸಂಕ, ಕರಂಬಳ್ಳಿ, ಕಲ್ಯಾಣಪುರ, ಸಗ್ರಿ, ಮಲ್ಪೆ, ಕೊಡವೂರು, ಪಡುಕೆರೆ, ಮಲ್ಪೆ ಬೀಡಿನಗುಡ್ಡೆ, ಕೊಳ, ಕಡೆಕಾರು, ಕಲ್ಮಾಡಿ, ಕಿದಿಯೂರು, ಕರಾವಳಿ ಬೈಪಾಸ್, ಸರ್ವಿಸ್ ಬಸ್ ನಿಲ್ದಾಣ, ಸಿಟಿ ಬಸ್ ನಿಲ್ದಾಣ, ಕೊಡಿಬೆಂಗ್ರೆ, ಕಲ್ಸಂಕ, ಕರಂಬಳ್ಳಿ ಮೂಲಕ ಹಾದು ಶ್ರೀ ಅನಂತೇಶ್ವರ ದೇವಸ್ಥಾನಕ್ಕೆ ಹಿಂತಿರುಗಿತು. ಮೆರವಣಿಗೆಯ ಉದ್ದಕ್ಕೂ ಸಾವಿರಾರು ಜನರು ಭಕ್ತಿಯಿಂದ ಕೈಮುಗಿದು ಪೂಜಿಸಿದರು. ಮೆರವಣಿಗೆಯು ಸಾಗಿದ ಮಾರ್ಗದಲ್ಲಿ ಸಾರ್ವಜನಿಕರು ಹಣ್ಣು ಕಾಯಿ ಒಡೆದು ಪೂಜೆ ಸಲ್ಲಿಸಿದರು. ಮೆರವಣಿಗೆಯು ರಾತ್ರಿ ೧೦ ಗಂಟೆಯ ವೇಳೆಗೆ ದೇವಸ್ಥಾನಕ್ಕೆ ಹಿಂತಿರುಗಿತು. ಮೆರವಣಿಗೆಯ ಮಾರ್ಗದಲ್ಲಿ ಸಾರ್ವಜನಿಕರು ಸ್ವಾಗತಿಸಿದ ಬಳಿಕ ಕಾಲೇಜ್ ಯೂನಿಯನ್ ಅಧ್ಯಕ್ಷ ಶ್ರೀ ಬಾಲಸುಂದರಂ ಸಂದೇಶಗಳನ್ನೀಡಿದರು.

ಮೂನ್ಯಗಿರಿಯವರು ಉದ್ಘಾಟನಾ ಭಾಷಣದಲ್ಲಿ ಡಾ. ಮೂಧವ ಪೈಗಳ ಸಂಘಟನಾ ಚತುರತೆ, ದಕ್ಷತೆ, ಸೇವಾಕಾಂಕ್ಷೆಗಳನ್ನು ಪ್ರಶಂಸಿಸಿ ವಿದ್ಯಾರ್ಥಿನಿಲಯಸ್ಥಾಪನೆಗೆ ಬೇಕಾದ ಎಲ್ಲ ಕಾಲೇಜುಗಳಿಗಿದ್ದು ತಕ್ಕ ಆದಿಕಾರಿಯವನ್ನಲ್ಲಿ ಹಾಕಲಾಗಿದೆ ಎಂದರು ಮುಂದು ವರಿಯುತ್ತ ಮೆಡಿಕಲ್ ಕಾಲೇಜುಗಳ ಸ್ಥಾನ ಹೊಸಗಾರಿಕೆ, ವೈದ್ಯರ ಕರ್ತವ್ಯಗಳನ್ನು ವಿವರಿಸಿ ರೋಗಗಳನ್ನು ಗುಣಪಡಿಸುವುದಕ್ಕಿಂತ ಲೂ ಅದನ್ನು ಕಡೆಗಟ್ಟುವುದಕ್ಕಾಗ ಬೇಕೆಂದರು. ಅಧ್ಯಕ್ಷ ಡಾ| ಪೈಗಳು ಎಳೆಮನಸು ಕಾಲೇಜುಗಳ ವಿಶಿಷ್ಟತೆಯನ್ನು ವಿವರಿಸಿ ಮೂನ್ಯಗಿರಿಯವರಿಗೆ ತನ್ನ ಬಗೆಗಿರುವ ಪ್ರೀತಿಗಾಗಿ ಆಭಾರ ಸೂಚಿಸಿದರು. ಕೊನೆಯಲ್ಲಿ ದೀನ್, ಎ. ಕೃಷ್ಣರಾಯರು ಧನ್ಯವಾದಗಳನ್ನರ್ಪಿಸಿದರು.

(ಮೂರನೇ ಪುಟದಿಂದ)

ಆರಂಭವಾದ ಅವರ ರಾಜಕೀಯ ಜೀವನದ ದಾರಿ ಹೆಲವು ಕವಲುಗಳಾಗಿ ಒಡೆದಿತ್ತು; ಎಂಕಲೇ ಗರಿ ಮುಟ್ಟಲಿಲ್ಲ. ಕಾಂಗ್ರೆಸ್ಸಿನಿಂದ ಹೊರ ಬಂದ ಮೇಲೆ ಅವರು ಎಸ್. ಎಸ್. ಪಿ. ಪಕ್ಷವನ್ನು ತಾವೇ ಸೃಷ್ಟಿಸಿದರು; ತನ್ನದೇ ವಿಚಾರ ಧಾರೆಯನ್ನು ಅದರಲ್ಲಿ ಬೆಂಬಿಸಿದರು; ಪಕ್ಷದ ಕಾರ್ಯಕರ್ತರಿಗೆ ಸವೂಜ ವಾದದಲ್ಲಿ ತರಬೇತಿ ನೀಡಲು ಒಂದು ಕಾಲೇಜೂ ತೆರೆಯುವ ಯೋಜನೆ ಅವರದಿತ್ತು; ಇದಕ್ಕಾಗಿ ೭೦,೦೦೦ರೂ ಪಾಯಿಗಳನ್ನವರು ಸಂಗ್ರಹಿಸಿದ್ದಾರಂತೆ. ಡಾ| ಲೋಹಿಯಾ ಯಾವ ಪಕ್ಷದವರೇ ಆಗಿರಲಿ, ಅವರ ವಿಚಾರಧಾರೆ ರೂಪ ಬಗೆಹೂಗಿಯೇ ಹರಿದಿರಲಿ, ಅವರೊಬ್ಬ ಉತ್ಕೃಷ್ಟ ಭಾರತೀಯ ರಾಜಕಾರಣಿಯೆಂಬುದು ನಿಸ್ಸಂದೇಹ. ಇವನಿಗೆ ಸತ್ಯ ಸರಿಯಾದುದು— ಎಂದು ತಿಳಿದುದನ್ನು ನಿರ್ಭೀತಿಯಿಂದ ಹೇಳಬಲ್ಲ ಸ್ಪಷ್ಟವಾದಿತನ ಇವರ ಗುಣ—ಇದರಿಂದಲೇ ಅವರು ಹಲವರಿಗೆ ಬೇಡವಾದರು. ಡಾ| ಲೋಹಿಯಾರ ಮರಣ ದೇಶಕ್ಕೊಂದು ನಷ್ಟ. ಎಸ್. ಪಿ. ಗೆ ತಂಬಲಾರದ ನಷ್ಟ.

ಹೆಚ್ಚಿನ ರಜೆಗೆ ಕೆಲಸಗಾರರಿಂದ ವಿರೋಧ!

ಅಮೇರಿಕೆಯ ವ್ಯಾಪಾರೀ ಸಂಸ್ಥೆಯೊಂದು ಜಪಾನಿನದಲ್ಲೂ ವ್ಯವಹಾರ ಆರಂಭಿಸಿತು ಮತ್ತು ತನ್ನ ಕಾರ್ಯಾಲಯದಲ್ಲಿ ಜಪಾನಿ ಜನರನ್ನೇ ಹೆಚ್ಚಾಗಿ ತೆಗೆದುಕೊಂಡಿತು. ಇವರಿಗೂ ಅಮೇರಿಕೆಯಲ್ಲಿರುವಂತೆ ವಾರದಲ್ಲಿ ೨ದಿನ ಶನಿವಾರ ರವಿವಾರ ರಜೆ ಇರಿಸಿತು.

ಆದರೆ ಜಪಾನೀ ಕೆಲಸಗಾರರು ೨ ದಿನ ರಜೆಯನ್ನು ವಿರೋಧಿಸಿದರು. ಅಮೇರಿಕೆಯ ವ್ಯವಸ್ಥಾಪಕರು ಆಶ್ಚರ್ಯಪಟ್ಟು ವಿರೋಧದ ಕಾರಣವನ್ನು ಕೇಳಿದರು. ಜಪಾನಿ ಕೆಲಸಗಾರರು ಹೇಳಿದರು. 'ನಮಗೆ ವಾರದಲ್ಲಿ ಒಂದೇ ರಜೆ ಸಾಕು. ಹೆಚ್ಚು ದಿನ ರಜೆ ಬಂದರೆ ನಮ್ಮಲ್ಲಿ ವೈಗಳ್ಳತನ ಹುಟ್ಟೀತು. ದುಡಿಯಲಿಕ್ಕೆ ಬೇಸರ ಬಂದೀತು. ಮೇಲಾಗಿ ರಜೆಯದಿನ ಅಮೋದ ಪ್ರಮೋದಗಳಲ್ಲಿ ನಮ್ಮ ದುಡ್ಡು ಹೆಚ್ಚು ಖರ್ಚಾದೀತು. ಶಾರೀರಿಕ ಹಾಗೂ ಆರ್ಥಿಕ ಎರಡೂ ದೃಷ್ಟಿಯಿಂದ ಹಾನಿಕರವಾದ ಹೆಚ್ಚಿನ ರಜೆ ನಮಗೆ ಬೇಡವೇ ಬೇಡ" ಎಂದರು!

ಪ್ರತಿಯೊಂದು ಉದ್ಯೋಗ ವ್ಯವಹಾರವು [illegible] ಗುಟ್ಟು ಇದರಲ್ಲಡಿ!

"ನೀವಿ ಜೀವನದಲ್ಲಿ ಯಾರಿಗಾದರೂ ಸಹಾಯ ಮಾಡಿದ್ದೀರಾ?"

'ಮಾಡಿದ್ದೇನೆ. ನಿನ್ನ ಅಪ್ಪನಿಗೆ'

"ಏನೆ ಪರಾಕಾರವಪ್ಪಾ!'

'ಅವನೇ ನಿನ್ನನ್ನು ಮದುವೆಯಾದದ್ದು!

o o o o

"ವ್ಯಾಪ್ತಿವನ್ನು ಉಳಿದುಬಿಸಿದರೆ, ತಿಳಿವು ನಮ್ಮನ್ನು ಕೊಲ್ಲುತ್ತದೆ.... 'ಉಪಾಧ್ಯಾಯರು ಪಾಠ ಮಾಡುತ್ತಾ, ಪುಶ್ನಿಸಿದರು "ಯಾರು ನಮ್ಮನ್ನು ಕೊಲ್ಲುವುದು?'

"ಕಿಟ್ಟುವಿನ ಉತ್ತರ ದೊರೆಯಿತು, ಶೀಘ್ರ!"

o o o

ಪತ್ನಿ:—ನೀವು ಏನು ಮಾಡಿದರೂ ನರ್ಥ ಅಥವಾ ಅನಾಹುತವಿಲ್ಲದಿಲ್ಲ... ಸ್ವಲ್ಪ ಯೋಚಿಸಿದರೆ ಹೀಗಾಗಲಿಕ್ಕೆ ಕಾರಣವೇ ಇಲ್ಲ..."

ಪತಿ:—'ನಿಜ;....ಉದಾಹರಣೆಗೆ ನಿನ್ನ ವಿವಾಹವನ್ನೇ ತೆಗೆದರಾಯ್ತು...."

ನಮ್ಮ ಚಂದಾದಾರರಲ್ಲಿ ನಮ್ರ ವಿನಂತಿ

ಇದೇ ಕಳೆದ ಆಗೋಸ್ತು ತಿಂಗಳಲ್ಲಿ ನಮ್ಮ ''ನವಯುಗ''ದ 46ನೇ ವರ್ಷವನ್ನು ಕೊನೆಗೊಂಡು ಸಪ್ಟಂಬರಾದಿಯಿಂದ 47ನೇ ಹೊಸ ವರ್ಷಾರಂಭವಾಗಿದೆ. ಈ ವಧಿಗೆ ಚಂದಾ ಅವಧಿ ಮುಗಿಯುವ ಮತ್ತು ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಶೀಘ್ರ ಮನಿಆರ್ಡರು ಮೂಲಕ ಯಾ ಸಿಂಡಿಕೇಟ್ ಬ್ಯಾಂಕಿನ ಸವಿಹದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆ ಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಅಂಕೂ ಚಂದಾ ಹಣವು ಸಕಾಲದಲ್ಲಿ ಬಾರದಿದ್ದಲ್ಲಿ ನಾವು ಕ್ರಮವಶಃ ಮುಂದಿನ ಸಂಚಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಅದನ್ನು ಅವಶ್ಯ ಸ್ವೀಕರಿಸಿ ಸಹಕರಿಸುವಂತೆ ವಿನ್ನಹಿಸುತ್ತೇವೆ.

ಮೆನೇಜರ್,

ನವಯುಗ, ಉಡುಪಿ.

ಬೇಕಾಗಿದ್ದಾರೆ

ಪ್ರಿಂಟಿಂಗ್ ಪ್ರೆಸ್ಸಿನ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡಲು ಸಾಕಷ್ಟು ಅನುಭವಸ್ಥ ಕೆಲಸಗಾರರು ಬೇಕಾಗಿದ್ದಾರೆ; ಸಂಬಳ ಯೋಗ್ಯತಾನುಸಾರ. ಕನಿಷ್ಟ ೫ನೇ ತರಗತಿವರೆಗಾದರೂ ಓದಿದ ಕೆಲವು ಹುಡುಗರನ್ನು ತರಬೇತಿಗಾಗಿಯೂ ಸೇರಿಸಿಕೊಳ್ಳಲಾಗುವುದು.

ವಿಚಾರಿಸಿರಿ: —

ನವಯುಗ ಪ್ರೆಸ್, ಉಡುಪಿ,

ದ. ಕ.

ಹಣವಲ್ಲ ಗುಣ

(ಎಂಡನೇ ಸುಟದಿಂದ)

ಯರು ಉಚ್ಚ ಶಿಕ್ಷಣ ಪಡೆದು ಉಚ್ಚ ದರ್ಜೆಯ ನೌಕರಿ ಹೊರಕಿಸಿ ಸ್ವತಂತ್ರರಾಗಿ ಜೀವಿಸ ಬಲ್ಲರೆಂಬುದನ್ನು ಸುರುಸರಿಗೆ ತೋರಿಸಿ ಕೊಡಬೇಕು. ಅಪ್ಪೆ ಅಲ್ಲ ಈ ಕೊಬ್ಬೇರಿದ ವರದಕ್ಷಿಣೆಯ ಭೂತವನ್ನು ಬಿಡಿಸಬೇಕೆಂದು ಹದಿನೈದು ನಿಮಿಷ ಭಾಷಣ ಮಾಡಿದೆ.

ಹೈಸ್ಕೂಲ ಚೇರಮನ್‌ರು ಅಭಾರವನ್ನು ಮನ್ನಿಸಿ, ಇಲ್ಲಿ ಸೇರಿದವರಲ್ಲಿ ಹೊಸದಾಗಿ ಕಟ್ಟುವ ಸ್ವಂತ ಹೈಸ್ಕೂಲ ಕಟ್ಟಡಕ್ಕೆ ೨೦೦೦ ಹೆಚ್ಚಿನ ಧನ ಸಹಾಯ ಸಲ್ಲಿಸುವರೋ ಆವರ ಜೆಸರನ್ನೇ ಹೈಸ್ಕೂಲಿಗೆ ಇಡಲಾಗುವದೆಂದು ನುಡಿದರು.

ಕೊನೆಗೆ ಎಲ್ಲರಿಗಿಂತ ಹೆಚ್ಚಾಗಿ ಹಾಲ್ಕು ಸಾವಿರ ಕೊಡಲು ಉಪಕಾರ ಸ್ಮರಿಸಿ ನನ್ನ ಹೆಸರನ್ನೆ ಇಡುವದಾಗಿ ಹೇಳಿದರು. ಇಷ್ಟೊಂದು ದೇಶ ಹಿತಕಾರ್ಯದಲ್ಲಿ ದುಡಿಯುತ್ತಿರುವಾಗ ಹಣ ವ್ಯಯವಾಗದಿರುತ್ತದೆಯೆ? ನಿಮಗೇನು ಗೊತ್ತು ಕಲಿತವರ ಭವಣೆ!"

ರಾಘುರು 'ರಾಮ—ರಾಮ— ನಾಕಪ್ಪ ಕಲಿತವರ ಸಹವಾಸ' ಎಂದರು.

'ನಾಕು ಬೇಕೆನ್ನಲು ನಿಮಗೇನು ಕಲಿತವರ ಪರಿಚಯವಿಲ್ಲ. ನಿಮ್ಮ ಮಗ ಬಿ. ಎ. ಪಾಸಾದರೂ ಇನ್ನೂ ಹಳ್ಳಿ ಪೈದರಂತೆ ದಗಲೆ ಪ್ಯಾಜಾಮ ಹಾಕುತ್ತಾರೆ. ತಿಂಗಳಿಗೆ ಒಂದು ಪಿಕ್ಚರ್ ನೋಡುವದಿಲ್ಲ. ಹ್ಯಾಗೆ ತಿಳಿಯಬೇಕು ಕಲಿತವರ ಬಿಡುವು. ನೀವು ನೋಡಿದ್ದು ಹಣವನ್ನು...? ಪೈಸೆಗೆ ಪೈಸೆ ಕೂಡಿಸಿ ಲೆಕ್ಕ ಮಾಡಲಿಕ್ಕೆ ಇಷ್ಟೇ!"

ಇಂದಿನ ವರೆಗೆ ಯಾರಿಂದಲೂ ಅವಮಾನಿತರಾದವರಲ್ಲ ರಾಘುರು. ಆದೂ ಕೇವಲ ಒಂದು ಹೆಣ್ಣಿನಿಂದ ಅವಮಾನ ಸಹಿಸಲಸಾಧ್ಯವಾಯಿತು. ಮೇರೆ ತಪ್ಪಿದ ಕೋಪದಿಂದ 'ಹೊಂ'ಕರಿಸಿದರು ರಾಯರು.

"ನೋಹನಾ, ನಿನ್ನ ಹೆಂಡತಿ ಹಿಡಿಕ ತಪ್ಪಿ ಮಾತನಾಡುತ್ತಿರುವಳಿ, ಸ್ವಲ್ಪ ಬುದ್ಧಿ ಹೇಳಬಾರದೆ? ಎಂದರು ರಾಯರು ಮಗನೊಡನೆ.

"ಅಪ್ಪಾ, ನಾನು ಮೊದಲೇ ನುಡಿಯಲಿಲ್ಲವೇ? ತಂದೆಯ ಮನೆಯಲ್ಲಿ ಸಲಿವಾಗಿ ಬೆಳೆದವಳು. ಮೇಲಾಗಿ ಎರಡಕ್ಷರ ಇಂಗ್ಲೀಷ್ ಕಲಿತವಳು. ತಂದೆ ಬೇಕಾದಷ್ಟು ವರದಕ್ಷಿಣೆ ಕೊಟ್ಟಿದ್ದಾರೆ. ಕೇಳಬೇಕೇ ಮಂಗನಿಗೆ ಮದ್ಯ ಕುಡಿಸಿದಂತಾಗಿದೆ. ನೋಡು ಧನದ ದಾಹದ ಪರಿಣಾಮ. ಈಗಲಾದರೂ ಅರಿತು ಕೋಮಿಗಲ್ಯಾವುದು ಹಣವೋ ಗುಣವೋ ಎಂದು.

ಉರಿಯುತ್ತಿರುವ ಗಾಯಕ್ಕೆ ಉಪ್ಪೆರೆ ಚಿದಂತಾಯಿತು ಆವರಿಗೆ. ಅವಮಾನದ ಮೇಲೆ ಅವಮಾನ. ವದ್ರದ ಕಿಡಿಯಾದರು ರಾಘುರು.

"ಹೋಗಿ, ನಾನೇ ಬುದ್ಧಿಗಲಿಸುವೆನೋ ಇಲ್ಲವೋ ನೋಡುತ್ತಿರಿ." ಯೋಚಿಸುತ್ತ ಹೊರನಡೆದರು ರಾಯರು.

ಂ ಂ ಂ

ಮರುದಿನ ಬೆಳಿಗ್ಗೆ ಎಂಟು ಘಂಟೆಯು ಮೊದಲೇ ಪೋಲೀಸ ಇನಸ್ಪೆಕ್ಟರರು ಹಾಜರಿದ್ದರು ಗೋವಿಂದ ರಾಯರ ಮನೆಯಲ್ಲಿ.

"ನಿನ್ನೆ ರಾತ್ರೆ ೧೨ ಘಂಟೆಗೆ ನಿಮ್ಮ ಮನೆಯಲ್ಲಿ ಸೊಸೆಯನ್ನು ನೀವು ಕೂಲೆ ಮಾಡಿದ್ದೀರೆಂದು, ಕೂಗು ಕೇಳಿ ಧಾವಿಸಿ ಕಿಟಿಕಿಯಿಂದ ನೋಡಲು ಈ ದೃಶ್ಯ ತನಗೆ ಕಂಡಿತೆಂದೂ ಪಕ್ಕದ ಮನೆಯ ಸುಬರಾಯರು ಫಿರ್ಯಾದು ಕೊಟ್ಟಿದ್ದಾರೆ. ಆದರಂತೆ ಕ್ರಿಮಿನಲ್ಲಿಗೊಳಪಟ್ಟು ನಿಮ್ಮನ್ನು ಅರೆಸ್ಟ ಮಾಡಲಾಗುವದಲ್ಲದೇ ಶವವನ್ನು ಪರೀಕ್ಷೆಗೆ ಕಳಹಿಸಲಾಗುತ್ತದೆ ಇದಕ್ಕೆ ನಿಮ್ಮ ಹೇಳಿಕೆ ಏನಾದರೂ ಇದೆಯೇ?" ಎಂದರು ಇನ್ಸಪೆಕ್ಟರರು ಪ್ಯಾಲಿ ತರೆಯುತ್ತ.

ಮರ್ಯಾದೆಯನ್ನು ಉಳಿಸಿಕೊಳ್ಳಲು ಮನೆಯಲ್ಲಿದ್ದ ನೆಗ—ನಾಣ್ಯಗಳನ್ನೆಲ್ಲ ಮೂರಿ ಹತ್ತು ಸಾವಿರ ಕೊಟ್ಟು ಹಾರ್ಟ-ಫೇಲ್‌ಎಂದು ರಂಜನಾವೆಬರೆಸಿ ಈ ಕುತ್ತಿಂದ ಪಾರಾದರು ರಾಯರು.

ಂ ಂ ಂ ಂ

ಹಿಂದಿನ ದಿನ ಮಿತ್ರನ ಮನೆಗೆ ಹೋದ ನೋಹನನು ಬೆಳಿಗ್ಗೆ ೬ರಲ, ಮನೆಯಲ್ಲಿ ನಡೆದ ಹೀನಕೃತ್ಯವನ್ನು ನೋಡಿಕ್ಷಣಕಾಲ ದಿಕ್ಕುತಂತೆ ನಿಂತು ಬಿಟ್ಟ.

ಗೋವಿಂದರಾಯರು ಮುಂದೆ ಬಂದು ಆದರದಿಂದ "ಏನು ಮಾಡುವದು? ಕೆಟ್ಟ ಗಳಿಗೆಯಲ್ಲಿ ಬಂದಿದ್ದಳು. ಕಟ್ಟು ಹೋದಳು. ಹೋಗಲಿ, ಮರೆತು ಬಿಡು." ಎಂದು ಹೇಳಿದರು ನಾಚಿಕೆ ಇಲ್ಲದೆಯೆ.

ಈಗ ಮೂತ್ರ ಕೆಣಕಿದ ನಾಗನಂತಾದನು ನೋಹನ.

"ಅಪ್ಪಾ, ನೀನು ನನ್ನ ಅಪ್ಪನಲ್ಲ, ಹಣದ ಪಿಶಾಚಿ. ಕೇವಲ ಹಣಕ್ಕಾಗಿ ನಮ್ಮ ಮಾನವನ್ನು ಕಳೆದೆ. ಸ್ತ್ರೀ ಹತ್ಯೆಯಂಥ ಘೋರ ಪಾಪವನ್ನೆಸಗಿದೆ. ಕಲಿತು ಪದವೀಧರನಾದ ನನ್ನ ಮಾನವನ್ನು ಏನಿಗಾಗಿ ಮಾರಿದೆ. ಇಂಥ ಅವಮಾನದಲ್ಲ ಜೀವಿಸಿ ಉಳಿಯುವದಕ್ಕಿಂತ ಅಳಿಯುವದೆ ಲೇಸು. ಛೀನೊಬ್ಬನೇ ಉಳಿದು ಅನುಭವಿಸು. ಇದೋ ಕೊನೆಯ ನಮಸ್ಕಾರ" ಎಂದಂದ ಮೋಹನ ಧಗ—ಧಗಿಸಿಹಿಡಿಯನ್ನೇರಿ ನಡೆದನು. ನಿಂತಲ್ಲೇ ಕುಸಿದು ಬಿದ್ದರು ರಾಯರು.

ಂ ಂ ಂ ಂ

ರಾಯರು ಸ್ವಲ್ಪ ಚೇತರಿಸಿ ಸುತ್ತ ಕಣ್ಣೊರಳಿಸಿ ನೋಡಲು ನೋಹನನಿಲ್ಲ. ಕರೆದರು...ಸುಳಿಯಲ್ಲ ಹೆಚ್ಚು ಹೊತ್ತಾಗಿರಲಿಲ್ಲ. ಗದಬಿಡಿಯಿಂದ ಮಹಡಿಯನ್ನೇರಿ ರೂಮಿನಿಡೆ ಸಾಗಿದರು. ಆಷ್ಟು ಅವರ ಕಂಡಿದ್ದನ್ನು?...ಮಗನ ನಿರ್ಜೀವ ಕಳೆಬರ. ರಾಯರ ಕಣ್ಣಿಗೆ ಹಗಲೇ ಕತ್ತಲೆ ಕವಿಯಿತು. ನಿಂತಂತೆಯೇ ಕುಸಿದು ಬಿದ್ದರು. ರಾಯರ ರೋಧನ ಆಕ್ರಂದನವಾಯಿತು. ತತವರಿಸಿ ಎದ್ದ ರಾಯರ ದೃಷ್ಟಿ ಅಸ್ತ-ವ್ಯಸ್ತವಾಗಿ ಬಿದ್ದ ಕಾಗದಡೆಡೆ

ಹಾರೈಕೆ

ಪ್ರಣಯ ಹೊಸಿ ಕೋಪವನು ಹತ್ತಿಕ್ಕುತೆ
ಪ್ರಣಯಿನಿಯ ಸುಧೆಯೂಡಿ
ಮುತ್ತಿಕ್ಕುತೆ!
ಸಾರದಿರು ದೂರ ಕೈಬಿಟ್ಟು ನನ್ನ
ಸಾರಸರ್ವಸ್ವ ನೀ ಬಾಳಿಗನ್ನ!

ಸರಸ ವಿರಸದ ಬಾಳ ದೂರ ಸರಿಸಿ
ಅರಸ ಸಮರಸವನ್ನೆ ಬಳಿಗೆ ಕರಿಸಿ
ತೆರೆಸಿದೆಯ ನೀ ಎನ್ನ ಪ್ರೇಮ ಕಣ್ಣಿ
ಸರಿಸಿ ಹುಲು ಕಪ್ಪುದೆರೆ ಕಾಮವನ್ನ!

ಜೀವನವಿ ನಾ ಒಂಟಿ ಪ್ರೇಮಕಂಟಿ
ಜೀವನದ ಪ್ರೇಮ ನೀರೇರಿಗ ಂಟಿ
ಸಾಗುತಿಹೆ ಕೈ ಬಿಡದೆ ರಾಪಿಡೆನ್ನ
ಸಾಗುವಳಿ ನಡೆಸಿ ಬಳೆ ಪ್ರೇಮವನ್ನ!

—"ಕ್ರಿಮೂರ್ತಿ"

ಹೋಯಿತು. ಲಗುಬಗೆಯಿಂದ ಆಯ್ದು ಒಂದೇ ಉಸಿರಿಗೇ ಓದಿ ಮುಗಿಸಿದರು ರಾಯರು.

"ತೀರ್ಥರೂಪ ತಂದೆಯವರಿಗೆ...ಅಲ್ಲಲ್ಲಾ...ಹಣದ ಪಿಶಾಚಿಗೆ- ಎಂತೂ ನಿನ್ನ ಹಣದ ದಾಹಕ್ಕಾಗಿ ನಿನ್ನ ಮುದ್ದಿನ ಮಗನ....ಧ್....ಧ್....ದುಡ್ಡಿನ ಮಗನೆ ಹೊಣವನ್ನು ತೆಗೆದುಕೊಂಡು ಅಂತೂ ನಿನ್ನಾಶೆ ಕೊನೆಗೊಂಡಿತು. ಹಣದ ಹೆಣ್ಣಾಪ್ಪ ತಂದು ಮನೆ ಮಸಣವಾಯಿತು ಇನ್ನು ನಿನ್ನ ಎಷ್ಟು ತೆಗಳಿದರೂ ಅಪ್ಪೇ. ನಿನ್ನ ದುಸ್ಕೃತ್ಯಕ್ಕೆ ದೇವರೇ ನಿನ್ನನ್ನು ಶಿಕ್ಷಿಸಲಿ. ಇಗೋ ನಾನು ಇಹಲೋಕ ಬಿಟ್ಟು ಪರಲೋಕದೆಡೆ ಸಾಗುತ್ತಿರುವೆ. ನನ್ನಿಂದ ನಾಳಿನ ನವ ಯುವಕರು "ಹಣವಲ್ಲ—ಗುಣ"ಎಂಬುದನ್ನು ಕಲಿಯಲು, ನವ್ಯ ಬಾಳು ಆದರ್ಶ ಬಾಳು. ಇಂತಿ ನಿನ್ನ
ಮೋಹನ

ಂ ಂ ಂ ಂ

ರಾಯರ ಮುಂದೆ ಆಕಸ್ಮಾತ್ ಕಾರೊಂದು ಹಾಯ್ದು ಹೋಗಲು ಬಿಚ್ಚಿ ಬಿದ್ದರು. ಆಗಲೇ ಸ್ವಲ್ಪ ಲೋಕದಿಂದ ಎಚ್ಚೆತ್ತು ಮನಸಣದ ಮನೆಯ ದಾರಿ ಕ್ರಮಿಸತೊಡಗಿದರು.

ಚಿತ್ರಕಲೆಯ ಉಪಾಧ್ಯಾಯರು ಮಾತಾಡುತ್ತ, "ದೇವಿಡ್‌ಲೊ ಎಂಬಾತ ಬ್ರಶ್ಶಿನ ಒಂದೇ ಚಲನೆಯಿಂದ ನಗು ಮುಖವನ್ನು ಅಳವ ಬವಾಗಿಸುತಿದ್ದ" ಎಂದರು.

ಆಗ ಒಬ್ಬ ಹುಡುಗನೆಂದ—'ನಸ್ಮಷ್ಟ ನಿಗೂ ಅದು ಸಾಧ್ಯ. ಬ್ರಶ್‌ನ ಆಗತ್ಯವಿಲ್ಲ, ಬೆತ್ತ ಮಾತ್ರ ಸಾಕು.'

ಂ ಂ ಂ ಂ

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

S. C 117/67

ಸಿಂಡಿಕೇಟ್ ಬೇಂಕ್ ಲಿಮಿಟೆಡ್ ಮಣಿಪಾಲ
—ವಾದಿ

ಮತ್ತು

M. ಪಾಂಡುರಂಗ ಶ್ಯಾನಭೋಗ್ ಕೂಡಾ
—ಪ್ರತಿವಾದಿರು

ಇವರೊಳಗೆ

ಮೇಲ್ಕಂಡ ದಾವೆಯ ಪ್ರತಿವಾದಿ M ಪಾಂಡುರಂಗ ಶ್ಯಾನಭೋಗ್, ಅನಂತಯ್ಯ ಶ್ಯಾನುಭೋಗರು ವಾಗ್ಯ, ಉಪ್ಪಿ ತಾಲ್ಲೂಕಿನ ಗ್ರಾಮದ ಸರಳಬೆಟ್ಟಿನವರು ಪಾಸಿಸುವವರು, ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಪ್ರತಿವಾದಿರಾದ ನೀವು ವಾದಿಗೆ ತಾ 16—1—65ರಲ್ಲಿ ಬರಕೊಟ್ಟ ಪ್ರೊಮಿಸರಿ ನೋಟು ಪ್ರಕಾರ ಬಹಾ ಅಸ್ಸಲ ಬಡ್ಡಿ ವಸೂಲಿಗಾಗಿ ವಾಡಿದ ಮೇಲ್ಕಂಡ ದಾವೆಯು ತಾ. 22—10—67ಕ್ಕೆ ನಿಮ್ಮ ನೋಟೀಸು ಬಗ್ಗೆ ಇಟ್ಟಿದೆ ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಆ ದಿವ್ಸ ಹಗಲು ಗಂಟೆ 10ಕ್ಕೆ ಹಾಜರಾಗಿ ಜ್ಯಾಬ್ತೀರು ಮಾಡಿಕೊಳ್ಳ ತಕ್ಕದ್ದು.

M. D. Kamath
Advocate for Plaintiff

Udipi, Dated, 10—10—67

NAVAYUGA 19—10—1967
Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ವಿನೋದ ವೀಚಿ

ಬ್ರಹ್ಮಚರ್ಯಾಲಾಪನಂ

ಬರೆದವರು:
ಶ್ರೀ ಮ. ಗೋ. ರಾವ್.

"ಓ ನನ್ನವರೇ...."

'.....'

"ನನ್ನ ಕೈ ಹಿಡಿದವರೇ...."

'.....'

'...ಓ...ಸ್ವಾಮಿಯೇ....'

'...ಏನೇ ಇದು ನಿನ್ನ ರಾಗ? ಯೂವಾಗಲೂ ಸ್ವಾಮಿ....ಸ್ವಾಮಿ...ಅಂತ ಈ ಅಸಾಮಿಯನ್ನು ಕರೆಯುತ್ತಿರುವೆ?'

"ಅಂದರೆ....?"

'ಅಂದರೆ!!....ಆ ಸ್ವಾಮಿಗೂ ಈ ಸ್ವಾಮಿಗೂ ಯೂವ ರೀತಿಯ ಸಂಬಂಧವಿದೆ? ತೂವ ರೀತಿಯ ಸಂಪರ್ಕವಿದೆ?....ಯೂವ ರೀತಿಯ....."

"ಪತ್ನಿರದ ಸಂಬಂಧವಿದೆ. ಅವರುಮತೆಯ ಸ್ವಾಮಿಗಳು ಆದರೆ, ನೀವು ಈ ಮತೆಯ ಸ್ವಾಮಿಗಳು... ಅವರು ಆದರ ಅಧಿಪತಿಯಾದರೆ ನೀವೆ—ನನ್ನ—ಅಧಿ...."

'ತಿಳಿಜೆ....ಖಾನು ನಿನ್ನ ಅಧಿಪತಿ ಎನ್ನೋದೇ ನೀನು?"

"ಹಾಂ! ಜೆನ್ನಾಗಿ ನುಡಿದಿರಿ..."

"ಜೆನ್ನಾಗಿ ಮಡಿದರೇನು ಬಂತು ಈ ಕಾಲದಲ್ಲಿ? ನಾನು ನಿನ್ನ ಅಧಿಪತಿಯಲ್ಲ—ಅಧೀನ ಪತಿ....ಅಧೀನ ಪತಿ..."

"ಹ್ಹ ಹ್ಹ ಹ್ಹ...."

'ಓಹೋ... ನಗುತಿಹೆಯೂ...ನಗು—ಇನ್ನೂ ನಗು. ಮಹಾ ನಗು—ಆ ಮೇಲೂ ನಗು— ಮುಂದೆಲು ಮುಗುಳಾಗಿ ನಗು...'

"....."

'ಅಂಗನೆ ನೀನೆಂದೆಂದಿಗು ನಗುತಿರು
ಳ್ಳಂಗದ ತೆರ ನೀನಾಗದಿರು|
ಕಂಗಳು ನಗಲಿ,ಮುಖಮಂಗಳಗಲಿ
ಭಂಗವ ನೀ ತಂದೆಸಗದಿರು|—'

'ನನ್ನ ನಗುವೇ ನಿಮಗೆ ಈ ಸ್ಫೂರ್ತಿಯನ್ನಿತ್ತಿತೇ?...ಆದರೆ ಪರಿಣಾಮ ಸೂಚಕವಾಗಿ ಈ ಕವನದ ಕರೆ..."

"ತೊರೆ ಪರಿದಂತೆ ಹರಿಯುಬೇಕು ಕವನದ ಸರೆ..."

'ಅಂದ ಹಾಗೆ ಕಗನ ಬರೆಯಲು...'

'ಕವನ ಬರೆಯಲು ವನವೇ ಸೂಕ್ತವೆಳ ಕಣೇ...ಆ "ವನ"ದಲ್ಲಿರುವ ಲತೆ, ಚಿಗುರು, ಹೂ ಹಣ್ಣು ಕೋಕಿಲಾ ಮಧುರ ಸ್ವರ, ಸುಗಂಧದ ಸೌರಭ—ಇವೇ ಕವನ ರಚನೆಗೆ ಸ್ಫೂರ್ತಿ ಸಂಜೀವಿನಿ. ಉತ್ಸಾಹ ವಾಹಿನಿ...."

"ನಿಮ್ಮ ಈ ಸುತ್ತು ಬಳಸಿ ಹೇಳುವ ಸಂಪ್ರದಾಯವನ್ನು ನಾನು ಮೆಚ್ಚೋಲ್ಲ...."

"ಸುತ್ತು ಬಳಸಿ ಬಳಸಿಯೇ ಹೊತ್ತು ಕಳೆಯುವ ನನಗೆ ನಿನ್ನ ಈ 'ಸಂಪ್ರದಾಯ'ದ ಅರಿವೇ ಇಲ್ಲ. ನೀ ನನ್ನ ಮೆಚ್ಚಬೇಕು. ಬೆಚ್ಚಿ ಮೆಚ್ಚಿ ಹೊಗಳಬೇಕು, ನೀನೆನ್ನ ಹೊಸಳು ಭಟ್ಟನಿಯೂಗಬೇಕು ಎಂಬುದು ನನ್ನ ಧ್ಯೇಯವೂ ಅಲ್ಲ..."

"....."

"ಏನು ಸುಮ್ಮನಾದ?....What is your opinion?...'

"ನಿನ್ನೊಡನೆ ಮಾತನಾಡಿ ನಿಮ್ಮ ಪೊಂಡುವಾದಕ್ಕಿದಿರು ಹಿಡಿ, ನಿನ್ನು ತೀಕ್ಷ್ಣ ಅಲಗಿಗೆ ಇದಿಂಲಗನ್ನು ಈಡಾಡಿ ಜಯಿಸಲು ನನಗೆ ಅಸಾಧ್ಯ. ಆದಕ್ಕೆ ನಾನು ತಯಾರೂ ಇಲ್ಲ..."

'ಛೇಷ್....ಎಂತಹ ಜೇನು—ಬೇವು ಬೆರೆತ ನುಡಿಗಳು....ನೀನು ಜಯಿಸಲು ಪ್ರಯತ್ನಿಸಿದರೆ ನಾನು ಸೋಲೊಪ್ಪಲು ಸಿದ್ಧನೂ ಇಲ್ಲ....ಬಳಿಯಿತೇ ಜೆನ್ನೇ....'

"ಆದರೆ...ಸಂದರ್ಭ ಬಂದಾಗ....?"

"ಸಂದರ್ಭ...ಬಂದರೆ....ಅದಕ್ಕೊಪ್ಪುವಂತೆ ಹೊಂದಿಕೊಂಡು....ಹೋಗಲಿಕ್ಕೂ ನಾನೆ.ಸ್ತ್ರೀನಾದವನು ತಿಳಿದಿದ್ದರೆ ಆದಕ್ಕನ್ನುವುದು ದೊಡ್ಡ ಗುಣ ಅಂತ..."

"ಅಹುದು. ನೀವು ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಂಡು ನುಡಿದಿರಿ.... ಆದರೆ..."

"But...?"

"ಹಣದ 'ಮಹಾಗುಣ'ದ ಇದಿರಿಗೆ ಈ ಖಲು ಮಾನವರು ಹೊಂದಿಕೊಳ್ಳುವ ಗುಣವಿಲ್ಲಿ ಕಾಣಬೇಕು?"

"ಮುತ್ತಿನಂತಹ ನುಡಿ ಮುತ್ತುಗಳ ನ್ನಾಡಿದೆ- ಮುಂಗುರುಳಾಣೆಗೂ...'

'.....'

"ಅದೇಕೆ ಮೌನವ್ರತ ಧಾರಣೆ?
ಜೆನ್ನಾಗಿ ನುಡಿದೇ ನಿನ್ನಂತೆ ನುಡಿವವರನ್ನುಂಟೆ ಈ ಮನೆಯೊಳಗೆ!
ರನ್ನೆ, ನೀ ಜೆನ್ನೆ ನೀ ನತುಳುಗುಣ ಸಂಪನ್ನೆ
ಎನ್ನ ಮನದನ್ನೆ...ನೀಹುತ್ಕಳಿ ಚೆನ್ನೆ...! "

"ಅಯ್ಯೊ... ನಿಮ್ಮ ಗುಣಗಾನ ಕೇಳಿ ಕೇಳಿ ಆ ಗಾನವೆಂಬ ಶಲ್ಯ....

"ಆರ್ಥವಾಯಿತು. ಆ ಬಾಣ ನಿನ್ನ ವೈಸ್ಸೊಂಕಿತೇ?"

"ರಾಜಕೀಯದ ಬಾಣಗಳಿಂದಾಗಿ ಬೆಲೆಗಳು ಏರಿಹುದು"

"ಅದೂ ಹಣದ ಅಶಮೌಲ್ಯವಾದಂದಿನಿಂದ.ನಿತ್ಯೋಪಯೋಗಿ ವಸ್ತುಗಳ ಮೌಲ್ಯ ದ್ವಿಗುಣವಾಗಿ ತೊಡಗಿದೆ"

"ದಿನವಹಿ ಅಲಂಕಾರಕ್ಕಾಗಿ ಉಪಯೋಗದ ವಸ್ತುಗಳ ಬೆಲೆ ಮಣಗಟ್ಟಲೆ ಏರಿಕೊಡಗಿದೆ."

"ಓಹೋ! Correct- ಆದಕ್ಕಾಗಿ ನೀನಿಂತು ಗೊಣಗುಟ್ಟುತ್ತಿರುವುದು ಅನ್ನು"

"ಹಾಗಲ್ಲ.... ನನ್ನ ..."

"ಹಾಗೂ ಅಲ್ಲ.. ಹೀಗೂ ಅಲ್ಲ. ಅಂತೂ ಈ ಸ್ತ್ರೀ ಸಮೂಹಕ್ಕೆ ಇದ್ದ ಕಲಹಾಭಿಲಾಷೆ, ದೂರಾಲೋಚನೆ, ಮೋಹ, ಆಭೂಷಣ ಪ್ರೇಮ.... ಬೇರೆ ಕುಲದಲ್ಲಿದೆ?"

'ಹೇಳಿ.... ಜೆನ್ನಾಗಿ ಹೇಳಿ... ಇನ್ನೂ ....ಹೇಳಿ.... ಆದರೆ.... ಅಂತಹ ಸ್ತ್ರೀಯ ಕೈಹಿಡಿದ ಓರ್ವ ಗೃಹಸ್ಥ ನೀವು ಅಂಥ ಸ್ತ್ರೀಯು 'ಸಹವಾಸ' ಏಕೆ ಮಾಡಿರಿ ನೀವು? ಅಂತಹ ದೂರಾಲೋಚನೆ ಸ್ತ್ರೀಯನ್ನು ಖಡಾಖಂಡಿತವಾಗಿ ಕೈಹಿಡಿದು ಸಹಚರಿಯಾಗಿ ಇರಿಸಿಕೊಂಡಿದ್ದು ಏಕೆ ನೀವು?.... ಅಂಥ...!!!"

"..... ಆಲೋಚಿಸು.... ಇನ್ನೇನಾದರೂ ಹೇಳೋಕಿದ್ದರೆ ಹೇಳಿಬಿಡು... ಯೋಚಿಸು..."

"ಹೇಳೋಕೆ ಬೇಕಷ್ಟಿದೆ. ಅಂತಹ ಸ್ತ್ರೀಯೊಡನೆ ಜೀವನವನ್ನು ಸಂಗಾತಿಯಾಗಿ ಮಾಡಿಕೊಳ್ಳಬಯಸಿದೆರೇಕೆ? ಅಂತಹ ಸ್ತ್ರೀಯಲ್ಲಿ ಪ್ರೇಮಾನುರಾಗವಿರಿಸಿದೆರೇಕೆ? ಜೀವನ ವಿಡೀ ಅಖಂಡ ಬ್ರಹ್ಮಚರ್ಯ ವ್ರತವನ್ನು ಪಾಲಿಸಿ ಆಂಜನೇಯನ ಶಿಷ್ಯನಾಗಿಲ್ಲವೆಕೆ?...."

"ಕೇಳುತಕೇ...ನನ್ನಾಕೆ. ಜೀವನ ಕ್ಕೊಂದು ಸಂಗಾತಿ ಬೇಕೇಬೇಕು. ಅದು ಜೀವನ ರಹಸ್ಯ.....ನೋಡು ಒಮ್ಮೆ ಕ 'ಗೀತಾ ಪ್ರವಚನ'ವಿದು...ನಾವು ಬಾಳಿ ಈ ಬಾಳಿನಲ್ಲಿ ಸಾಫಲ್ಯತೆ ಹೇಗೆ ಪಡೆಯಬಹುದೆಂಬುದನ್ನೆಂದು ಸಾರಿ ಶಲಕೋ. ಉದ್ದುದ್ದ ರಾವಣಯಣ ವಾಚಮೊಡಬೇಡ...ಹೇಳಿದುದು ಚಿಕ್ಕದಿದ್ದೊಕ್ಕಷನ ಮೂಡಿ ಬರಲಿ—"

"ಹಾಗಾದರೆ...ಬ್ರಹ್ಮಚರ್ಯೆ..."

"ಹಾಂ! ನೋಡು.....ಬ್ರಹ್ಮಚರ್ಯೆಯ ವಾಲಿಸಲೇ ಬೇಕು. ಬ್ರಹ್ಮಜ್ಞಾನ ಪಡೆಯಲು ಹುತ್ಸಹಿಸಬೇಕು. ಈ ಬಾಳಿನಲ್ಲಿ ಬದಿಸೇರಬೇಕು..."

"....."

"ಬ್ರಹ್ಮಚರ್ಯದಲ್ಲೆರಡು ವಿಧ. ಒಂದು ಬಾಲ ಬ್ರಹ್ಮಚಾರಿ...ಇನ್ನೊಂದು ಸಂಸಾರಿ ಬ್ರಹ್ಮಚಾರಿ. ಇದರಲ್ಲಿ ನಿನಗೆ ಎರಡನೆಯದು..."

"ಅಂದರೆ ಸಂಸಾರವನ್ನು ಕಟ್ಟಿಕೊಂಡು ಬ್ರಹ್ಮಚರ್ಯವನ್ನು ಸಾಧಿಸುವುದೆಂದರ್ಥವಲ್ಲವೇ ಬ್ರಹ್ಮಚಾರಿಗಳೇ!"

"Cent percent correct... ಸಾರ ತೆರೆಯುಲ್ಲಿದ್ದು ಸೊಗ ಕಪ್ಪದ ಗಳಲ್ಲಿ ಮುಳುಗುತ್ತಲೇಳುತ್ತ ಮುಳುಗುವ ಪ್ರತಿಜ್ಞಾಧಾರಿ...ಅವನೇ ವೂಢಾರಿ....ಅವನೇ ಸಂಸಾರಿ ಬ್ರಹ್ಮಚಾರಿ....ಅವನು... ತಿಳಿಯಿತೆ? ಬ್ರಹ್ಮಚಾರಿಣೀ...?..."

'ಹ್ಹ ಹ್ಹ ಹ್ಹ ಹ್ಹ'

"ಹ್ಹ ಹ್ಹ ಹ್ಹ...ಹ್ಹ ಹ್ಹ ಹ್ಹ"

ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ.ಎರಡು.(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

(Letter Writing Made Easy)

ವಿವಿಧ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು

ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ - ಮದ್ದು

(Home-Remedies)

ನೂರಾರು ಕಾಹಿಲೆಗಳಿಗೆ ಮನೆಯಲ್ಲೆ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹವೈದ್ಯ.
ಬೆಲೆ ರೂ. 2—00 (ಟ. ಖ.-ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ



10 1967

೨೦ ಪೈಸೆ

ಕಥಾ ಪ್ರಪಂಚ

ತಾತನ ಸಲಹೆ

ಬರೆದವರು

ಶ್ರೀಮತಿ ಆನಂದಿ ಸದಾಶಿವರಾವ್

ಸೀಮಾ ಆಲೋಚಿಸಿ ಕೊನೆಗೆ ನಿರ್ಧಾರಕ್ಕೆ ಬಂದಳು. ತಾನು ನಟಿಸುತ್ತಿದ್ದ ಚಿತ್ರದ ಷೂಟಿಂಗ್ ಮುಗಿದೊಡನೆ ಒಂದು ವಾರ ತಾತನಲ್ಲಿಗೆ ಹೋಗಿ ವಿಶ್ರಾಂತಿ ಪಡೆಯಬೇಕೆಂದು. ಒಂದು ವರ್ಷದಿಂದ ಎಡೆಬಿಡದೆ ಅವಿಶ್ರಾಂತವಾಗಿ ದುಡಿದ ಯಿಂದ ಅವಳ ದೇಹ, ಮನಸ್ಸು ಎರಡೂ ಸೋತಿದ್ದವು. ಅವಳ ತಾರಾ ಜೀವನದಲ್ಲಿ ಹಿಂದೆಂದೂ ಹೀಗೆ ವಿಶ್ರಾಂತಿ ಅಗತ್ಯವೆನಿಸಿರಲಿಲ್ಲ.

ಸೀಮಾ, ಈಗ ಸೀಮೋಸೇವಿ ಎಂದು ಚಲನ ಚಿತ್ರರಂಗದಲ್ಲಿ ಖ್ಯಾತಿಗಳಿಸಿದ್ದಳು. ನಾಲ್ಕು ವರ್ಷಗಳಿಂದ ಚಿತ್ರರಂಗವನ್ನು ಪ್ರವೇಶಿಸಿದ್ದರೂ ಇದೀಗ ಒಂದೆರಡು ವರ್ಷಗಳಲ್ಲಿ ಮುಖ್ಯ ಪಾತ್ರ ವಹಿಸುವ ಅವಕಾಶ ಒದಗಿತ್ತು. ಪಾತ್ರ ವಹಿಸಿದ್ದ ಚಿತ್ರ ಬಿಡುಗಡೆಯಾಗಿ ಆರು ತಿಂಗಳುಗಳಾಗಿದ್ದುವು. ಆದು ಯಶಸ್ವಿಯಾಗಿದ್ದುದರಿಂದ, ಒಮ್ಮೆಗೇ ಕೇರ್ ಎನಿಸಿತ್ತು. ಹಾಗೆಯೇ ನಾಲ್ಕಾರು ಚಿತ್ರಗಳಲ್ಲಿ ಪಾತ್ರ ವಹಿಸಲು ಕರೆ ಬಂದಿತ್ತು.

ಮನೆಯಲ್ಲಿ ಅಣ್ಣನ ಹೊರತು, ಹಿರಿಯರಾರೂ ಇಲ್ಲ. ತಾಯಿ-ತಂದೆಯರು ಅವಳ ಎಳೆಯ ವಯಸ್ಸಿನಲ್ಲಿ ಕಾಲವಶರಾಗಿದ್ದರು. ತಾತ ಸಾಕಿದ್ದರು. ಆದರೆ ಅಣ್ಣ-ತಂಗಿಯರು, ಮನೆ ಬಿಟ್ಟು, ಷಟ್ಟಣದಲ್ಲಿ ಬಂದು ನೆಲಸಿದ ಬಳಿಕ, ದೂರವಾಗಿದ್ದರು. ಈಗ ಅಣ್ಣನಿಗೂ ಚಿತ್ರ ನಿರ್ಮಾಪಕನಾಗುವ ಹಂಬಲದಿಂದ ಕೈತುಂಬಾ ಕೆಲಸ. ಸೀಮಾ, ಸ್ಟುಡಿಯೋದಿಂದ ಮನೆಗೆ ಮರಳಿದರೇ ಏಕಾಕಿನಿಯೂ ಗಿರಬೇಕು. ಸ್ಟುಡಿಯೋದಲ್ಲಿಯೂ ಎಲ್ಲರೊಡನೆ ಬೆರೆಯುವ ಸ್ವಭಾವ ಅವಳದಲ್ಲ. ಅದರಿಂದಲೋ ಏನೋ ಎಂಬಂತೆ ಅಂತಃಮುಖಿಳಾಗುತ್ತಾ ಬರುತ್ತಿದ್ದಳು.

ಅಣ್ಣ, ತಂಗಿ ಈರ್ವರ ಜೀವನದಲ್ಲಿ ಆಗೊಮ್ಮೆ ಈಗೊಮ್ಮೆ ಅತ್ಯಾವಶ್ಯಕವಾಗಿ, ಬಂದು ಮಾತನಾಡಿ ಹೋಗುವವನು. ದೂರದ ಸಂಬಂಧಿಕನು, ರಾಮಮೂರ್ತಿ. ಸೀಮಾಳ ಬೇಸರ ಕಳೆಯಲು ತುಂಬಾ ಸಹಕಾರಿಯಾಗುತ್ತಿದ್ದನು. ಮನೆಯು ಸಮೀಪ ಅವನು ರಾಮು ಹುಡುಕುತ್ತಾ ಬಂದು ಹೋಗುತ್ತಿದ್ದನು. ನಗರದ ರಾಸಾಯನಿಕ ಕಾರ್ಖಾನೆಯಲ್ಲಿ ಪ್ರಾಮುಖ್ಯ ಸಂಶೋಧಕ ಹುದ್ದೆಯಲ್ಲಿದ್ದನು. ಸೀಮಾಳ ಲೋಕಕ್ಕೂ ಅವನ ಕಾರ್ಯ ಕ್ಷೇತ್ರಕ್ಕೂ ತುಂಬಾ ದೂರ. ಆದರೆ ಸೀಮೊಡನೆ ಅವನ ಸ್ನೇಹ ಬರಬರುತ್ತಾ ಪ್ರಗಾಢವಾಗಿ ಮಾರ್ಪಾಡಾಗಿತ್ತು.

ಎರಡು ತಿಂಗಳುಗಳ ಹಿಂದೆ ಅವನು ಸೀಮಾಳನ್ನು ಕೇಳಿದ್ದನು. "ನನ್ನನ್ನು ಏ ವಾಹವಾಗುವಿಯಾ?"

ಆಕಸ್ಮಿಕವಾಗಿಯೇ ಬಂದ ಕೇಳಿಕೆ— ಸೀಮಾಳನ್ನು ಚಕಿತಗೊಳಿಸಿತ್ತು. ತಕ್ಷಣ ಉತ್ತರ ಕೊಡಲಾಗಲಿಲ್ಲ.

ಅವಳ ಮುಖದ ಭಾವವನ್ನು ನೋಡಿ, "ನಿನ್ನ ಅಣ್ಣನ ಒಪ್ಪಿಗೆ ಪಡೆದಿರುವೆನು." ಎಂದ ರಾಮಮೂರ್ತಿ.

ಇದರಿಂದ ಸೀಮಾಳ ಆಶ್ಚರ್ಯ ಇನ್ನೂ ಹೆಚ್ಚಾಯಿತು. ಇಬ್ಬರು ಯೋಚಿಸಿ ತನ್ನ ಭವಿಷ್ಯ ಬಗ್ಗೆ ನಿರ್ಧಾರಕ್ಕೆ ಬಂದಿರಬೇಕು. ತನ್ನ ಹಾಜೆ ಏನೆಂದು ತಿಳಿಯದೆ ಅಣ್ಣ ಹೀಗೆ ನಿರ್ಧಾರ ತಳೆದುದರಿಂದ ಅವನ ಮೇಲೆ ಸಿಟ್ಟುಬಂತು.

ರಾಮಮೂರ್ತಿ ಸೀಮಾಳ ಮೊಗದ ಲ್ಲಾದ ಸೂಕ್ಷ್ಮ ಬದಲಾವಣೆ ಗಮನಿಸಿದ್ದನು.

"ನೀನು ಚಿತ್ರದಲ್ಲಿ ಅಭಿನಯಿಸುವುದಕ್ಕೆ ನನ್ನ ಅಭ್ಯಂತರವಿಲ್ಲ. ವಿವಾಹವಾದ ಬಳಿಕವೂ ನೀನು ಇಷ್ಟವಿದ್ದರೆ ಅಭಿನಯಿಸು. ನಿನ್ನ ತಾರಾಜೀವನಕ್ಕೆ, ಯಶಸ್ಸಿಗೆ ಅಡ್ಡಿ ಬರಲಾರೆ."

ಅವನ ಮಾತನ್ನು ಪೂರ್ತಿ ತಡೆದು, "ನಾನು ವಿವಾಹದ ಬಗ್ಗೆ ಈ ತನಕ ಆಲೋಚಿಸಿಯೇ ಇಲ್ಲ" ಖಂಡಿತ ವಿಶ್ವಾಸದನಿಯಿಂದ ಉತ್ತರವಿತ್ತಿದ್ದಳು.

ಅವನ ಮೊಗವು ಬಾಡಿತು.

"ಯೋಚಿಸಿ ನೋಡು" ಎಂದನವನು.

"ನೋಡೋಣ. ಯಾವುದಕ್ಕೂ ಸಮಯ ಬೇಕು. ಈಗಲೇ ಯೋಚಿಸಲೂ ಸಮಯವಿಲ್ಲ. ಕೈ ತುಂಬಾ ಕೆಲಸ. ಮೂರು ಚಿತ್ರಗಳಲ್ಲಿ ಕೆಲಸ ಮಾಡಬೇಕು. ಮುಂದಿನ ತಿಂಗಳು ಎಷ್ಟು ಕಾದಿವೆಯೋ?" ಎಂದು ದೀರ್ಘ ರಾಗ ತೆಗೆದು ನುಡಿದಿದ್ದಳು.

ಅವನ ತೇಜಸ್ವಿಯುತ ವ್ಯಕ್ತಿತ್ವ, ಆಕರ್ಷಕ ಮೊಗ, ತಮ್ಮ ಹೊಳಪನ್ನು ಕಳೆದು ಕೊಂಡಿರದ ಯೌವನಾ ಭರಿತ ಕಣ್ಣಿಗಳು, ಕಪ್ಪು ಕೂದಲು, ಸೀಮಾಳ ಮನಪಟಲದಲ್ಲಿ ಹಾದು ಹೋದವು.

ಆದೆಷ್ಟು ಬಾರಿ ಇಬ್ಬರು ಮಾತುಕತೆಯಾಡುತ್ತಿದ್ದೆವು! ಎಷ್ಟೋ ವಿಚಾರಗಳಲ್ಲಿ ಒಂದೇ ಅಭಿಪ್ರಾಯ ತಳೆದಿದ್ದೆವು. ಈರ್ವರ ವ್ಯಕ್ತಿತ್ವವು ಬೇರೆ ಬೇರೆ ಕ್ಷೇತ್ರದಲ್ಲಿ ಬೆಳೆದರೂ, ಮಾನಸಿಕ ಪ್ರವೃತ್ತಿಗಳು ಹಲವು ವಿಷಯಗಳಲ್ಲಿ ಒಂದೇ ಮುಖವಾಗಿ ಹರಿಯುತಿದ್ದುವು. ಸರಳ ನಿಷ್ಕಪಟವಾದ ಮನಸ್ಸು ರಾಮುವಿನದು. ಒಂದೇ ಒಂದು ಬಾರಿ ನೋವು ಮಾಡುವ ಮಾತನ್ನಾಡಿರಲಿಲ್ಲ. ಸ್ಟುಡಿಯೋದಿಂದ ಆಯಾಸಗೊಂಡು ಹಿಂತಿರುಗಿದ ದಿವಸರಾಮುವಿನ ಆಗಮನ ವಾದರೆ, ಅವನ ಲಘು ಹಾಸ್ಯ, ತನ್ನ ಸಂತೋಷನೆಯ ಬಗ್ಗೆ ವಿಚಾರ, ಅವಳ ಬಾಡಿದ ಮನಸ್ಸನ್ನು ತಿಳಿಯಾಗಿ ಮಾಡುತಿದ್ದುವು.

ವಿವಾಹದ ಪ್ರಶ್ನೆಯ ಬಗ್ಗೆ ಕೇಳಿದ ಬಳಿಕ ರಾಮು ಒಂದು ಬಾರಿ ಬಂದಿದ್ದನು. ಆದರೆ ಸೀಮಾ ಅವನೊಡನೆ ಹೆಚ್ಚು ಹೊತ್ತು ಮಾತನಾಡಲಿಲ್ಲ. ಕೊಂಚ ಬೇಗುವಾಗಿ ವರ್ತಿಸಿದ್ದಳು.

"ಏಕೆ?" ಎಂದು ಅವಳಿಗೇ ತಿಳಿಯದು.

ತನ್ನ ಸ್ವಾತಂತ್ರ್ಯದ ಬಗ್ಗೆ ಯೋಚನೆ ಹೊಂದಿರಬೇಕು.

"ಮದುವೆ' ಎಂದರೆ ಒಂದು ಬಂಧನ.

ಸೀಮಾಳಿಗೆ ತನ್ನ ವಾತೆಯ ಬಗ್ಗೆ ನೆನಪಿರಲಿಲ್ಲ ತಾತನ ಬಗ್ಗೆ ಅವರ ಪ್ರೇಮ, ವಾತ್ಸಲ್ಯದ ನೆನಪು ಮಡತೊಡಗಿದಳು. ಅವಳ ಮನಸ್ಸಿನಲ್ಲ ಒಂದು ಅಭಾವ ತಲೆದೋರಿತ್ತು.

ಅಣ್ಣ ಅಭಿನ್ಯಾಯವೆತ್ತಿದ್ದನು.

"ನಿಮಗೆ ರಾಮುವಿನಂತಹ ಪತಿ ದೊರಕುವುದು ಭಾಗ್ಯವೆನ್ನಬೇಕು."

"ಈಗ ನನಗೆ ಮದುವೆಯಾಗಬೇಕೆನಿಸುತ್ತಿಲ್ಲ. ನಾನು ಸ್ವತಂತ್ರಳಾಗಿಯೇ ಇರುತ್ತೇನೆ

"ಎಷ್ಟು ದಿವಸಗಳ ತನಕ ನಿನಗೆ ಈ ತರಹ ಒಂಟಿ ಜೀವನ ಹಿಡಿಸುವುದೋ ನೋಡೋಣ' ಎಂದಾತ ಹಾಸ್ಯ ವಾಡಿದ್ದನು.

"ನನ್ನ ಕೆಲಸದಲ್ಲಿ ನನಗೆ ತೃಪ್ತಿ, ಸಮಾಧಾನಗಳು ದೊರಕುತ್ತಿವೆ."

'ಸರಿ, ನಿನ್ನಿಷ್ಟ. ರಜತ ಪರದೆಯ ಮೇಲೆ ಆಡುವ ಜೀವನವೇ ಸಾಕು, ಎಂದು ನಿರ್ಧರಿಸಿದರೆ ಸರಿ."

"ನೀನು ಏನು ಬೇಕಾದರೂ ನುಡಿಯುವುದು ನು ಮನಸ್ಸಿನಲ್ಲಿದ್ದುದನ್ನು ಹೇಳಿದೆ."

"ನೀನು ರಾಮುವಿನೊಡನೆ ಆಫೀಸಿಗೆ ಸಹಜವಾಗಿ ವರ್ತಿಸುವಾಗ, ಆಫೀಸಿಗೆ ಜೀನ್ಸಾಗಿ ನೀವಿಬ್ಬರು ಹೊಂದಿಕೊಂಡು ಜತೆಯಲ್ಲಿ ಇದ್ದುದನ್ನು ನೋಡಿ ನನಗೆ ಆಸೆ ಇತ್ತು."

"ಏನಾಸೆ?"

'ನೀನು ಅವನನ್ನು ವಿವಾಹವಾದರೆ ನ್ನ ಬದುಕು ಪೂರ್ಣವಾಗುತ್ತದೆ ಎಂಬ ಆಸೆ.

ಅಣ್ಣನ ಮಾತು ಕೇಳಿ ಸೀಮಾ ನಕ್ಕು ಬಿಟ್ಟಿದ್ದಳು.

'ನಗುವ ವಾತಲ್ಲ. ಕೊಂಚ ಯೋಚಿಸಿ ನೋಡು. ರಾಮುವಿಗೆ ಏನು ಕೊರೆ ಬೇಕು?"

"ಏನು ಬೇಕಾದರೂ ಹೇಳು.'

"ಸದ್ಯಕ್ಕೆ ನೀನು ವಿವಾಹವಾಗುವುದಿಲ್ಲ ಎನ್ನುವುದೆ?"

"ಹೌದು. ನನ್ನ ಬಳಿ ಕೇಳಿದಾಗ ಹಾಗೆ ಹೇಳಿದ್ದೆ, ವಿವಾಹದ ಯೋಚನೆ ಸದ್ಯಕ್ಕಿಲ್ಲ.'

'ಹಾಗಾದರೆ ನೀನು ನಿಜಕ್ಕೂ ದಿಟ್ಟ ಹುಡುಗಿ. ಆದರೂ ಕಾಲ ಮಿಂಚಿ ಹೋಗಿಲ್ಲ- ಯೋಚಿಸಿ ನೋಡು 'ಎಂದು ನಾನು ಹೇಳಿದ್ದೆನು.

"ಅಣ್ಣನ ಮಾತನ್ನು ಅಲಕ್ಷಿಸಿ ಅವಳಲ್ಲಿಂದ ಹೋಗಿದ್ದಳು.

ರಾಮು ಬಳಿಕ ಬರುವುದು ಕಡಿಮೆಯಾಯಿತು. ಸೀಮಾಳಿಗೆ ಕಲಸವೂ ಜಾಸ್ತಿಯಾಯಿತು. ಅವಳು ನಟಿಸಿದ ಚಿತ್ರ ಬಿಡುಗಡೆಯಾಗಿ ಜನಪ್ರಿಯವಾಗತೊಡಗಿತ್ತು. ಆರೇಳು ಚಿತ್ರಗಳಲ್ಲಿ ನಟಿಸಲು ಕರಾರು ಹಾಕಬೇಕಾಯಿತು. ಆದರೆ ಖ್ಯಾತಿಯ ಯಶಸ್ಸು, ಹೊರತಾರೂ, ಮನಸ್ಸಿನ ನೆಮ್ಮದಿ ಮಾಯವಾಯಿತು.

ಒಂದು ಸಂಜೆ ಚಿತ್ರದ ಷೂಟಿಂಗ್ ಮುಗಿದಾಗ, ಡೈರೆಕ್ಟರ್, ನಿರ್ಮಾಪಕರು ಹೇಳಿದರು.

'ನೀವು ಒಂದು ವಾರ ವಿಶ್ರಾಂತಿ ತೆಗೆದು ಕೊಳ್ಳಬೇಕೆಂದು ನನ್ನ ಸಲಹೆ, ನಿರ್ಮಾಪಕರಿಗೆ."

'ಸಲಹೆ ಧನ್ಯವಾದ. ಆದರೆ ವಿಶ್ರಾಂತಿಗೆ ರಜತ ಬೇಕಲ್ಲಾ?"

"ರಜತ ಮೊಂಕಿನ ಕೊಡ್ತೀನಿ"

'ಎಷ್ಟು ಅವಶ್ಯವಿದೆಯೆ?'

"ಹೌದು, ಕಳೆದ ನಾಲ್ಕಾರು ವಾರಗಳಿಂದ ನಾನು ನೋಡುತ್ತಲೇ ಇದ್ದೇನೆ. ನೀವು ಹಿಂದಿನಂತಿಲ್ಲ. ಆಯಾಸದಿಂದ ಕಂಗೆಡುತ್ತಿದ್ದ ನಿಮ್ಮ ಮುಖ ಈಗ ಬಹುಶಃ ಕಳೆಯಿಂದ ಹೆಚ್ಚಾಗುತ್ತಿದೆ.'

"ಈಗ ಹಿಡಿದ ಚಿತ್ರ ಮುಂತ್ಯವಾಗಿಯೂ ಮುಗಿಯಲು, ಇನ್ನು ಐದೆಂಟು ವಾರ ಬೇಕಾಗಬಹುದು. ಹಾಕಿ ಊಗೆ ಹೊಟ್ಟು, ಹೋಗಲಾಡಿಸಿ

(ಹಸ್ತಾಂದನೇ ಪುಟ ನೋಡಿ)

ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ನಿಮ್ಮನ್ನು ಸುಸ್ವಾಗತಿಸುವ
ಮನಮೆಚ್ಚುವ ಸರ್ವ ಸೌಕರ್ಯಗಳಿಂದೊಡಗೂಡಿದ
ವಸತಿ ಗೃಹ

ಹೊಟೆಲ್ ಶಿವಪ್ರಸಾದ್
ಕುಂದಾಪುರ, ದ. ಕ.
ಫೋನ್: 77
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ಸೌಕರ್ಯಗಳಿಂದಿರುವ ವಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್.

47ನೇ ವರ್ಷ
Telephone 226.

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ದ. ಕನ್ನಡ.

++

ಸ್ಥಾಪನೆ: 1921
ಸ್ಥಾಪಕರು
ದಿ। ಎ. ಬಿ. ಶೆಟ್ಟರು.
ಸಂಚಾಲಕ—ಸಂಪಾದಕ
ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:
ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

++

ಜಾಹೀರಾತು ದರಗಳು:
ಅಪಯುಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾಸಿನ ಶ್ರಮದಿಂದ ಮಾಡಿದ ಹಾಳೆಯು ಒಂದೇ ಮುಗ್ಗುಲಲ್ಲಿ ಬರೆಯಬಹುದಾಗಿರಬೇಕು. ಅಕ್ಷರಗಳಿಂದ ಬರೆಯಲ್ಪಡಬೇಕು. ಅ ಭಾರತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಚಂದಾದಾರರಿಗೆ —

ಚಂದಾಪಡಿಸುವವರು ಜಾಹೀರಾತಿನ ಮೊಬಲಗನ್ನಾಗಲೀ ನಿರ್ದೇಶಿಸಿದ ದೇಣಿಗೆಯ ಯಾವುದೇ ಪಾಲಿಯನ್ನಾಗಲೀ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಲಭ್ಯವಿರುವುದು.

ಮುಖಪತ್ರದ ಚಿತ್ರ:

ಹೊಂಗೇರಿಯ ರಾಜಧಾನಿ ಬುಡಾಪೆಸ್ಟ್‌ನ ಎಡ್ಡುರ್‌ಬೆಟ್ ಸೇತುವೆಯಿಂದ ಕಾಣಬರುವಾದ ಗೆಲ್ಲರ್ಟ್ ಬೆಟ್ಟದ ನೋಟ.

ಸಂಪುಟ ೪೭ | ಉಡುಪಿ | Vol. 47
ಸಂಚಿಕೆ ೮ | ೨೬—೧೦—೧೯೬೨ | No. 8

ಬಂದು ಪ್ರಾಮಾಣಿಕ ಪ್ರಯತ್ನ

ನಮ್ಮ ನಾಡಿನ ಹೆಮ್ಮೆಯ ಜನಪದ ಕಲೆಯೆನಿಸಿದ "ಯಕ್ಷಗಾನ" ಇತ್ತೀಚಿಗಿನ ಹಲವು ವರ್ಷಗಳಿಂದ ನಾಡಿನ ವಿದ್ಯಾವಂತರ, ಕಲಾಭಿಮಾನಿಗಳ, ಪೋಷಕರಲ್ಲಿ ಅಲಕ್ಷ್ಯ ಧೋರಣೆಗೆ ತುತ್ತಾಗಿದೆ. ಹಳ್ಳಿಯ ಜನರ ಮನೋರಂಜನೆಯ ಸಾಧನವಾಗಿದ್ದ ಈ ಕಲೆಯಲ್ಲಿ, ತನ್ನದೇ ಆದ ವೈಶಿಷ್ಟ್ಯವಿದೆ; ರಸಾನುಭೂತಿಗೆ ತಕ್ಕುದಾದ ಸಂಗೀತ, ನೃತ್ಯ, ಅಭಿನಯಗಳು ಯಥಾ ಪ್ರಮಾಣದಲ್ಲಿ ಸೇರಿಕೊಂಡಿವೆ ಎಂಬುದನ್ನು ತೋರಿಸಿಕೊಟ್ಟವರು ನಮ್ಮವರೇ ಆದ ಕವ್ಡದ ಸವ್ಯ ನಾಚಿ ಡಾ। ಕೋಟ ಶಿವರಾಮ ಕಾರಂತರು.

ತನ್ನ ಊರಿನ ಜನರಿಗೆ ಮನೋರಂಜನೆಯ ಸಾಧನವಾಗಿದ್ದ ಈ ಕಲೆಯಿಂದ ಎಳೆಮಕ್ಕಳಲ್ಲಿ ಪುಣ್ಯಾತ್ಮರಾದ ಕಾರಂತರು, ಆ ಬಳಿಕ ತನ್ನ ಬಾಳಿನ ಉದ್ದಕ್ಕೂ, ಸಂದರ್ಭ ದೊರೆತಾಗಲೆಲ್ಲ ಈ ಕುರಿತು ಜಿಜ್ಞಾಸೆ ನಡೆಸಿ, ಸಂಶೋಧನೆ ನಡೆಸಿ "ಯಕ್ಷಗಾನ ಬಯಲಾಟ" ಎಂಬ ಉದ್ಗ್ರಂಥವನ್ನೇ ಬರೆದರು. ಅವರ ಈ ಬರಹ ಅಂತರಾಷ್ಟ್ರೀಯ ಹಾಗೂ ರಾಷ್ಟ್ರೀಯ ಪ್ರಶಸ್ತಿಗಳಿಂದನ್ನೂ ಪಡೆದಾಗ ಜನರ ಗಮನ ಈ ಕಡೆ ಸೆಳೆಯಿತು. ಹೆಚ್ಚೆಚ್ಚು ಜನ ವಿದ್ಯಾವಂತರು ಈ ಕಲೆಯ ಕಡೆಗೆ ಆಕರ್ಷಿಸಲ್ಪಟ್ಟರು. ಬಯಲಾಟ ನೋಡಬೇಕೆಂದು ಹಳ್ಳಿಗರ ಹಂಬಲಿಸಿದಂತೆ ಪಟ್ಟಣಿಗರೂ ಸುಸಂಸ್ಕೃತ ಜನರ ಆದರಕ್ಕೆ ಪಾತ್ರವಾದ ಕಲೆಯಾಗುವಂತಾಯಿತು.

ನಮ್ಮ ಜನಪದ ಕಲೆಗಳು ಜನಮನರಂಜನೆಯನ್ನೇ ಮುಖ್ಯೋದ್ದೇಶವನ್ನಾಗಿಟ್ಟು ಕೊಂಡಿವುಗಳು. ಜನಮನರಂಜನೆಯೇ ಅವುಗಳ ಉದ್ದೇಶವಾಗಿರಬಹುದಾದರೂ ಆ ಉದ್ದೇಶ ಸಾಧನೆಗಾಗಿ ಕಲೆಯನ್ನು ಕೊಲೆ ಮಾಡುವುದು ವಿರೂಪಗೊಳಿಸುವುದು ಸರಿಯಲ್ಲ. ಯಕ್ಷಗಾನದಲ್ಲಿ ಹಲವು ಆಗ ಬಾರದ ಸುಧಾರಣೆಗಳಾಗಿವೆ. ಇಂದಿನ ಹಲವು ಬಯಲಾಟಗಳಲ್ಲಿ ಅತ್ತ ಯಕ್ಷಗಾನ ಎನ್ನುವಂತೆಯೂ ಇಲ್ಲ; ಇತ್ತ ನಾಟಕವೆನ್ನುವಂತೆಯೂ ಇಲ್ಲ. ಜನರು ಮೆಚ್ಚುತ್ತಾರೆಂದು ಅಸಂಬದ್ಧವಾದ ವೇಷ ಭೂಷಣ ತೊಟ್ಟು, ಸೀನು ಸಿನೇರಿಗಳನ್ನು ಜೋಡಿಸಿ ಆ ಕಲೆಯ ಮೂಲ ರೂಪವನ್ನೇ ಕಡಿಸುತ್ತಾ ಇದ್ದಾರೆ. ಇಂತಹ ರಾಶ್ಯ ಇಂದಿಗೂ ನಡೆಯುತ್ತಾ ಇದೆ.

ಕಲೆಯು ಜನರ ಹ್ಯೋತ್ಸಾಹದ ಅಧಾರದಿಂದ, ಅಧಃಪತನದತ್ತ ಸಾಗುತ್ತಿರುವ ಈ ಸಂದರ್ಭದಲ್ಲಿ ಕಾರಂತರು ಈ ಕ್ಷೇತ್ರದಲ್ಲಿ ಕೈಯಾಡಿಸಿ, ಕಲಾವಿದರಲ್ಲೂ, ಕಲಾಭಿಮಾನಿಗಳಲ್ಲೂ ಅಲೋಡಯನನ್ನುಂಟು ಮಾಡಿದರು. ನಮ್ಮ ಪ್ರಾಚೀನ ಸಂಪ್ರದಾಯಗಳಲ್ಲಿ ಒಳ್ಳೆಯ ದಾದುವುಗಳನ್ನು ಉಳಿಸಿಕೊಂಡು, ತಕ್ಕ ಬದಲಾವಣೆ ಮಾಡಿದರೆ, ಯಕ್ಷಗಾನ ಅಂತರಾಷ್ಟ್ರೀಯ ಖ್ಯಾತಿಯ ಕಲೆಯಾಗುವ ಲಕ್ಷಣವುಳ್ಳದಾಗುವುದು ಎಂದು ಅವರು ತೋರಿಸಿಕೊಟ್ಟರು. ಇದರ ಪ್ರತೀಕವೇ ಅವರ "ಯಕ್ಷಗಾನ ಬ್ಯಾಲೆ". ಇದು ಮುಂಬಯಿಯಂತಹ ನಗರದಲ್ಲಿ ಜಯಭೇರಿ ಗಳಿಸಿತು.

ಯಕ್ಷಗಾನದ ಇತ್ತೀಚಿಗಿನ ಸುಧಾರಣೆಗಳನ್ನು ಟೀಕಿಸುವ ಕಾರಂತರು ತನ್ನ 'ಬ್ಯಾಲೆ'ಯಲ್ಲಿ ತನಗೆ ಇಷ್ಟ ಬಂದ ರೀತಿ ಕಲೆಯ ವಿಷಯದಲ್ಲಿ ಸ್ವತಂತ್ರವಾಗಿ ನಡಿಸಿಲ್ಲವೆ? ಪ್ರಧಾನ ಆಂಶವಾಗಿದ್ದ ಸಂಭಾಷಣೆಯನ್ನೇ ಲೋಪಗೊಳಿಸಿದುದು ಸರಿಯೆ? ಎಂದು ಪ್ರತಿ ಟೀಕೆ ಮಾಡುವವರೂ ಇದ್ದಾರೆ. ಆದರೆ, ಇಲ್ಲಿ ಕಾರಂತರ 'ಬ್ಯಾಲೆ' ಭಾಷೆ ತಿಳಿಯದ ಜನರ ಮೇಲೆ ಆಗುವ ಪರಿಣಾಮದ ಅಳತೆ ನೋಡುವುದಕ್ಕಾಗಿ ತಯಾರಾದುದು. ಭಾಷೆ ತಿಳಿದವರೂ, ಮಾತು ಕೇಳಿಯೇ ದುಃಖ, ಸಂತೋಷ, ಕ್ರೋಧ ಇತ್ಯಾದಿ ರಸಾನುಭವಗಳನ್ನು ಪೂರಿಕೊಳ್ಳಬೇಕೆಂದಿಲ್ಲವಷ್ಟೆ? ಯಕ್ಷಗಾನದಲ್ಲಿ ಮಾತಿಗಿಂತ ಹೆಚ್ಚು ನೃತ್ಯಕ್ಕೆ ಭಾವನಾ ಪ್ರದರ್ಶನಕ್ಕೆ ಪ್ರಾಧಾನ್ಯವಿದೆ. ಆದರೆ, ಇಂದು ಮಾತುಗಾರಿಕೆಯನ್ನೇ ಮೆಚ್ಚಿ, ಅದನ್ನೇ ಅರಾಧಿಸುವ ಸಾಹಿತ್ಯ ಪ್ರಿಯರೂ ಇಲ್ಲವೆಂದಲ್ಲ. ಆದರೆ "ಬಯಲಾಟ"ದಲ್ಲಿ ಮಾತಿಗಿಂತ ಹೆಚ್ಚು ಪ್ರಾಧಾನ್ಯ ನೃತ್ಯಕ್ಕೆ, ಅಭಿನಯಕ್ಕೆ ಇದೆ. ತಾಳಮದ್ದಲೆಯಲ್ಲಿ ಮಾತಿಗೇ ಪ್ರಾಧಾನ್ಯವಿರಬಹುದು ತಾಳಮದ್ದಲೆಯನ್ನು ಈಕ್ಷಿಸಿ, ಯಕ್ಷಗಾನ ಕಲೆಯು ಪರಿಚಯವನ್ನು ಸ್ವಲ್ಪವಾದರೂ ಮಾಡಿಕೊಳ್ಳುವುದು ಕಷ್ಟ. ಅದೊಂದು ಬಾಯಿತೀಡೆ ತೀರಿಸಿಕೊಳ್ಳುವ ಪಾತ್ರಧಾರಿಗಳು ಆಯಾಯ ಪಾತ್ರಗಳ ವಕಾಲತು ವಹಿಸಿ ಮಾತನಾಡುವ ವಾದಗೋಷ್ಠಿ ಅಷ್ಟೆ.

ಯಕ್ಷಗಾನ ಕಲಾವಿದರ ಬದುಕು ತೀರಾ ನಿಶ್ಚಿಷ್ಟ ವಷ್ಟೆದ್ದು. ಅದು ಈಯುವ ಪ್ರತಿಫಲ ತೀರಾ ಅಲ್ಪ. ಹಾಗಿರುವಾಗ ಉತ್ತಮ ಕಲಾವಿದರು, ಅಂತಸ್ಸಿರುಳುಗಳು ಈ ಕಲೆಯಲ್ಲಿ ಭಾಗವಹಿಸುವ ಅವಕಾಶ ದೊರೆಯುವುದಿಲ್ಲ. ಇದ್ದ ಪ್ರಸಿದ್ಧ ವೇಷಧಾರಿಗಳೂ ಕಲೆಯ ಮೇಲಣ ಮಮತೆಯಿಂದ ದುಡಿದರು, ಮಡಿಯುತ್ತಿರುವವರಲ್ಲದೆ ಅದೇ ಕಲೆಯನ್ನೇ ಕಲಿಸಿ ಬೆಳೆಸಿದವರು ಉಳಿಸಿಕೊಳ್ಳುವುದು, ಬೆಳೆಸಿಕೊಳ್ಳುವುದು ಅತೀ ಅಗತ್ಯ.

ಚಂದಾದಾರರಲ್ಲಿ ವಿನಂತಿ

ಇನ್ನೂ ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ತಮ್ಮ ಬಾಕಿಯನ್ನು ದಯವಿಟ್ಟು ಆದಷ್ಟು ಶೀಘ್ರ ಕಳುಹಿಸಿ ಕೊಟ್ಟು ಸಹಕರಿಸುವಂತೆ ಕೇಳಿಕೊಳ್ಳುತ್ತೇವೆ. ಎಷ್ಟರಲ್ಲಿ ಪತ್ರಿಕೆ ಬೇಡವೆಂದಿರುವವರು ಆಗಲೇ ನಮಗೆ ತಿಳಿಸಿ, ಈ ನವೆಂಬರ ಬಾಕಿಯನ್ನು ಕಳಿಸಿದರೆ ತುಂಬಾ ಉಪಕಾರವಾಗುವುದು.

ಮೆನೇಜರ್, ನವಯುಗ

ನರಸಣ್ಣನ ನರಸ

"ಈ ವರ್ಷ ಮಳೆ ಬೆಳೆ ಎಲ್ಲಾ ಸಮೃದ್ಧಿಯಾಗಿದ್ದ, ಹೀಗೆಯೇ ಬೆಲೆಗಳೂ ಈ ಬಾರಿ ಸಮೃದ್ಧಿಯೇ ಎಂತ?"

ವಚನ ಸುಧೆ

ದಿವ ಸೇನೈವ ತರ್ತ್ ಕುರ್ಯಾತ್
ಯೇನ ರಾತ್ರೌ ಸುಖಂ ವಸೇತ್
ಅಪ್ಪಮೂಸೇನ ತರ್ತ್ ಕುರ್ಯಾತ್
ಯೇನ ಪರ್ವಾಣಿ ಸುಖಂ ವಸೇತ್॥

ರಾತ್ರಿಯನ್ನು ಸುಖವಾಗಿ ಕಳೆಯಬಹುದಕ್ಕೆ ಸರಿಯಾಗುವಂತಹ ಕೆಲಸಗಳನ್ನು ಹಗಲಲ್ಲಿ ಮಾಡಬೇಕು; ಪರ್ವದಲ್ಲಿ ಮಳೆಗಾಲವನ್ನು ಸುಖವಾಗಿ ಬದುಕುವಂತೆ ಉಳಿದ ಎಂಟು ತಿಂಗಳು ಮಾಡಿಟ್ಟುಕೊಳ್ಳಬೇಕು.

ವಿಜ್ಞಾನ ಪ್ರಗತಿ

ಮಗುವಿನ ಹೃದ್ರೋಗಕ್ಕೆ ಚಿಕಿತ್ಸೆ

ಹೃದಯದ ಮತ್ತು ರಕ್ತನಾಳಗಳ ರೋಗಗಳು ಬಾಲ್ಯದಿಂದಲೇ ಉಂಟಾಗುತ್ತವೆ, ತದುದರಿಂದಲೇ ಸಂಧಿವಿಯೆತ್ ರಾಜ್ಯಕ್ಷ್ಮ ವಕ್ಕಳ ಈ ರೋಗ ಹರಿಶೀಲನೆಗಾಗಿ ಅನೇಕ ವಿಶಿಷ್ಟ ವೈಜ್ಞಾನಿಕ—ಸಂಶೋಧನ ಸಂಸ್ಥೆಗಳನ್ನು ಸ್ಥಾಪಿಸಿದ.

ಮಗುವಿನ ಶರೀರದಲ್ಲಿ ವಯಸ್ಕರದ ಕ್ಕಿಂತಲೂ ಭಿನ್ನವಾದ ಅನೇಕ ಲಕ್ಷಣಗಳಿರುತ್ತವೆ. ಮಗುವಿನ ತೀವ್ರ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು, ಅದಕ್ಕೆ ಪೋಷಕ ವಸ್ತುಗಳನ್ನು ಆಗಾಗ್ಗೆ ಒದಗಿಸುತ್ತಿರಬೇಕಾಗುತ್ತದ ಮತ್ತು ಕಾಲಕಾಲಕ್ಕೆ ಜಲಮಲ ವಿಸರ್ಜನೆಗಳಾಗುವಂತೆಯೂ ನೋಡಿಕೊಳ್ಳಬೇಕಾಗುತ್ತದೆ. ಇದರಿಂದ ಮಗುವಿನ ಹೃದಯವು ಹೆಚ್ಚು ಶ್ರಮವಹಿಸಿ ದುಡಿಯಬೇಕಾಗುತ್ತದ.

ಮಗುವಿನ ಮೊದಲನೆಯ ವರ್ಷದಲ್ಲಿ ಹೃದಯವು ಅತ್ಯಂತ ಪ್ರಿಪ್ರಮವಾಗಿ ಬೆಳೆಯುತ್ತದೆ. ಒಂದು ವರ್ಷ ವಯಸ್ಸಿನ ಮಗುವಿನ ಹೃದಯವು ನವಜಾತ ಶಿಶುವಿನ ಹೃದಯದ್ಕಿಂತಲೂ ಮುದ್ದಾಡಿ ಗಾತ್ರದಲ್ಲಾಗಿರುತ್ತದ. ಹೀಗಾಗಿ ಮಗುವಿನ ಹೃನ್ನಾಳ ವ್ಯವಸ್ಥೆಯು ಬೆಳೆಯುತ್ತಿರುವ ಈ ಹದ ಅವಶ್ಯಕತೆಗಳಿಗೆ ಹೊಂದಿಕೊಳ್ಳುತ್ತದೆ. ಆದರೆ ನೈಸರ್ಗಿಕ ವ್ಯವಸ್ಥೆಯು ಈ ಜಟಿಲ ಕಾರ್ಯವನ್ನು ಒಮ್ಮೆ ಚೆನ್ನಾಗಿ ನಿಯಂತ್ರಿಸದು. ಎಂದರೆ, ನರಗಳ ಯಾಂತ್ರಿಕ ವ್ಯವಸ್ಥೆಯು ವಿಕಾಸವು ಮಗುವಿಗೆ ಏಳು ವರ್ಷ ವಯಸ್ಸಾದಾಗ ಪೂರ್ತವೇ ಮುಗಿಯುತ್ತದೆ.

ಇದೇ ಕಾರಣದಿಂದಲೇ ಮಗುವಿನ ಹೃದಯಚಿಕಿತ್ಸೆ ಸುಲಭವಾಗಿ ಉದ್ರೇಗೊಳ್ಳುತ್ತದ. ದೈಹಿಕ ಶ್ರಮ, ಕ್ಷೋಭೆ, ಭೀತಿ, ಯಂತಿಸಿ ಅತ್ಯಲ್ಪ ಪ್ರಮಾಣದಲ್ಲಾದರೂ, ಅದರಿಂದ ಹೃದಯದ ವಿಘಿತವು ಹೆಚ್ಚುತ್ತದ.

ಪ್ರಯೋಜನಗಳು

ಮಗುವಿನ ಹೃನ್ನಾಳ ವ್ಯವಸ್ಥೆಯನ್ನು ಕಂಡುಬರುವ ಅನೇಕ ಪ್ರಯೋಜನಗಳು ವಯಸ್ಕರಿಗೂ ಇವೆ. ವಯಸ್ಕರಿಗೆ ಉಂಟಾಗುವ ರೋಗಗಳಿಂದ ಪರಿಣಾಮಗಳಾದ ರೋಗ-ಲಕ್ಷಣಗಳ ಬದಲಾವಣೆಗಳು ಎಳ ಕ್ಕಳಲ್ಲಿ ಉಂಟಾಗುವುದಿಲ್ಲ. ಆಲಿಸುಯಂಲ್ ಮತ್ತು ಸಿಸ್ಟಾಲ್ಟೈನ್ (ಎದ್ಯ ಮತ್ತು ಹೃದಯಸೂಚನೆಗಳನ್ನು ಎನ್ನುಗಳಲ್ಲಿರುವ ರಾಸಾಯನಿಕ ದ್ರವ್ಯಗಳು) ಉಂಟುಮಾಡುವ ಅಪಾಯಕಾರಿ ಪ್ರಭಾವವನ್ನು ಮಕ್ಕಳ ಹೃದಯವು ಅರಿಯುವುದು. ಆರೋಗ್ಯವಂತರಾದ ಮಕ್ಕಳ ರಕ್ತನಾಳಗಳು ತುಂಬಾ ಆಗಲವಾಗಿರುತ್ತವೆ, ಹಜ್ಜಾರಿಯೂ ಇರುತ್ತದೆ. ಆದುದರಿಂದಲೇ ಆರೋಗ್ಯವಂತ ಎಳೆ ಮಗುವಿನ ಹೃದಯದ ಮೂಂಸಖಂಡಕ್ಕೆ ಮೋನಕ ವಸ್ತುಗಳ ಕೊರತೆ ಇರದು.

ರಕ್ತನಾಳಗಳಿಗೆ ವಿಷಪ್ರಭಾವವನ್ನೆ ಉಂಟುಮಾಡುವ ಶಿಶುವಿನ ಹೃದಯಕ್ಕೂ ಕೂಡ ಹಾನಿಕರವಾದ ಸಂಧ್ಯಾಂ (ಸ್ಕಾರ್ಲೆಟ್ ಫೀವರ್) ಗಳ ಚರ್ಮರೋಗ (ಡಿಫ್ತೀರಿಯ), ನಾಯಿಕೆಮ್ಮು, ಮಂತಾದ ರೋಗಗಳು ಮಕ್ಕಳಿಗೆ ಬರುತ್ತವೆ. ಆಗ ಹೃದಯದ ಮೊಸಖಂಡದ ಉರಿಯೂತವುಂಟಾಗುತ್ತದೆ. (ಮೈಕಾರ್ಡಿಟಿಸ್). ಇದರ ಪರಿಣಾಮಗಳು ಅನೇಕ ವರ್ಷಗಳ ತರುವಾಯ ಅನುಭವಕ್ಕೆ ಬರುತ್ತವೆ.

ನೋವಿಯೆತ್ ನೈಪ್ಕಕೀಯ ವ್ಯವಸ್ಥೆಯು ಜಾಗರಿಗೆ ತಂದಿರುವ ರೋಗ ನಿರೋಧಕ ಚಿಕಿತ್ಸೆಯು ಮುಖ್ಯ ಸೂತ್ರದ ಕಾರಣ, ಹಳಯ ಸಂಕ್ರಾಮಿಕ ಕೇಂದ್ರಗಳು ಬೃಮಕ್ಕಳನ್ನು ಆವು ಅವಾಯಕರವಾಗುವುದಕ್ಕೆ ಮೂದಲೇ ಗುಂಪಿಸುವುದು ಸಾಧ್ಯವಾಗಿದೆ. ಶಿಶುರೋಗ ಚಿಕಿತ್ಸಕರು, ಕರ್ಣ—ಧ್ವನಿನಾಳ ಚಿಕಿತ್ಸಕರು, ಬಾಯಿಯ ರೋಗಗಳ ಚಿಕಿತ್ಸಕರು, ನುತ್ತು ಇನ್ನಿತರ ವಿಶೇಷಜ್ಞರು ಮಕ್ಕಳ ಜಟಿಲ ವೈದ್ಯಕೀಯ ಪರೀಕ್ಷೆಗಳನ್ನು ನಡೆಸುತ್ತಾರೆ. ಇದರಿಂದ ಹೃನ್ನಾಳ ವ್ಯವಸ್ಥೆಯ ಮೇಲೆ ಪರಿಣಾಮವನ್ನು ಉಂಟು ಮಾಡುವ ನಾಸಿಕ—ಶಂರಳುಹರ ಸ್ಥಿತ್ಯಂತರಗಳನ್ನು ಕಂಡು ಹಿಡಿಯುವುದು ಸಾಧ್ಯವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸುಯೋಗ್ಯ ಪಥ್ಯಕ್ರಮ, ಪೋಷಣೆ, ಸಾಂಕ್ರಾಮಿಕ ಕೇಂದ್ರಗಳ ಚಿಕಿತ್ಸೆಗಳಿಂದ ಮಗುವಿಗೆ ಸಹಾಯದ ಅತ್ಯುತ್ತಮ ಸಾಧ್ಯತೆಯಿರುತ್ತದೆ.

ಸಂಧಿವಾತ ಜ್ವರ

ಮುಕ್ಕಳ ಶರೀರದಲ್ಲಿ ರಕ್ಷಣಾ ಶಕ್ತಿಯ ಕ್ಷೀಣಿಸಿದ್ದರೆ, ಗಲಗ್ರಂಥಿಯ ಉರಿಯೂತ ಅಥವಾ ನಾಸಿಕ—ಕಂರಕುಹರದಲ್ಲಿ ಉಂಟಾಗುವ ಉರಿಯೂತದ ಬದಲಾವಣೆಗಳು ಸಂಧಿವಾತ ಜ್ವರಕ್ಕೆ ಕಾರಣವಾಗಬಹುದು. ಮುಖ್ಯತಃ ಹೃನ್ನಾಳ ವ್ಯವಸ್ಥೆಯ ಮೇಲೆ ಹಾನಿಕರ ಪರಿಣಾಮ ಉಂಟು ಮಾಡುವ ದೀರ್ಘ ಅಸ್ವಸ್ಥತೆ ಕೂಡ ಉಂಟಾಗಬಹುದು. ಅನೇಕ ವರ್ಷಗಳವರೆಗೆ ಉಳಿಯುವ ಈ ರೋಗವು ಬಲ ಹೀನತೆಯನ್ನು ಉಂಟು ಮಾಡುತ್ತದೆ. ಸಂಧಿವಾತ ಜ್ವರದಿಂದ ಹೃದಯದ ಪೊರೆ, ಹೃದಯದ ಮೂಂಸ ಖಂಡ, ಕವಾಟಗಳು ಮತ್ತು ನಾಳಗಳು ಇವೆಲ್ಲವುದರಲ್ಲಿಯೂ ಅನೇಕ ರೋಗ ಪರಿವರ್ತನೆಗಳುಂಟಾಗುತ್ತವೆ.

ಹೃನ್ನಾಳ ರೋಗಗಳು

ಹುಟ್ಟಿನಿಂದಲೇ ಬಂದ ಹೃದಯ್ ಕಾಯಗಳು ಕಂಡ ಬಾಲ್ಯದಲ್ಲಿ ಸ್ಪಷ್ಟವಾ ವ ಹೃನ್ನಾಳ ರೋಗಗಳಿಗೆ ಸಂಬಂಧ್ ರುತ್ತವೆ. ಗರ್ಭಾವಸ್ಥೆಯ ಮೂವಿನ ವಣಿಗೆಯಲ್ಲಿಯೇ ಪ್ರಾರಂಭವಾಗುವ ಕ್ಕು ಹೃದಯದ ಸೂಚಿಗಳಲ್ಲಿ ಜೆಚ್ಚುಬ ಲವಣಿಗಳನ್ನು ಉಂಟು ಮಾಡುವ ಶಂ ಸ್ಥಿತಿಸ್ಥಾಪಕತ್ವ—ವಿಕಾರವೂ (ಪಿಡ್ರೋ ಲಾಸ್ಟಿಸಿನ್) ಸಹ ಅವುಗಳಲ್ಲೊಂದು ದೆ ಈ ರೋಗ ಪೀಡಿತರಾದ ನವಕ್ಕಳ ಟಗಳೂ, ಸುಗುರುಗಳೂ ನೀರಿನಂತೆ ಶ್ಯತ್ವವೆ; ಆವ್ರ ಕಾಂತಿ ಹೀನವೆಯೂ, ಸಾವರೋಧವೂ ಕಂಡುಬರುತ್ತವೆ. ತ್ತು ಬೆಳವಣಿಗೆ ಕುಂಠಿತವಾಗಿರುತ್ತದೆ. ವುಗಳ ಆಮ್ಲಜನಕ ಸಂಗ್ರಹ ಶಕ್ತಿಯನ್ನು ಜೆನ್ನಾಗಿ ಬಳಸಿಕೊಳ್ಳಲು ಅವು ಅಸಾಕಳಿತುಕೊಂಡೇ ಇರಲು ಸ್ವಯತ್ನಿಸುತ್ತವೆ. ಆದರೂ ಕೂಡ ಸೀಲಿ ಬಗೆಯ ಹಜಾತ ವಿಕಾರಗಳ ಜತಗೆ, 'ಬಿಳಿಚಿಂಡ' ಬಗೆಯ ವಿಕಾರಗಳೂ ಸಹ ಉಂಗತ್ತವೆ. ಅವು ಮುಕ್ಕಳ ಎರಿಕ್ಕಿಗ್ಳನ್ನು ನಿಕರವಾಗಿರುತ್ತವ

(ಸೀನೆ ಪುಟ ನೋಡಿ)

ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ
ವಿದ್ಯುಚ್ಛಕ್ತಿ ಬಿಲ್ಲುಗಳನ್ನು
ಪಾವತಿ ಮಾಡಲು ಇನ್ನು ಮುಂದೆ
ಬ್ಯಾಂಕಿಗೆ ಅಲೆಯಬೇಕಾಗಿಲ್ಲ

ದಕ್ಷಿಣ ಕನ್ನಡ ಜಿಲ್ಲೆಯ ನಗರದ ನಿವಾಸಿಗಳಿಗೆ, ವಿದ್ಯುಚ್ಛಕ್ತಿ ಬಳಕೆ ಬಿಲ್ಲುಗಳನ್ನು ಸ್ವೀಕರಿಸಲು ಒಪ್ಪುವ ಮೊಟ್ಟಮೊದಲು ವಿಜಯಾ ಬ್ಯಾಂಕ್ ಸಂತೋಷ ಈ ಸೌಲಭ್ಯವನ್ನು ಬೆಂಗಳೂರು ನಗರದ ನಿವಾಸಿಗಳಿಗೂ ವಿಸ್ತರಿಸಲಾಯಿತು ಮತ್ತು ಈಗ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಯ ಪ್ರಮುಖ ನಗರಗಳಿಗೆ ವಿಸ್ತರಿಸಲಾಗುವುದು

ಮೈಸೂರು ರಾಜ್ಯ ವಿದ್ಯುಚ್ಛಕ್ತಿ ಮಂಡಲಿಯು ಬಳಕೆದಾರರ ಬಿಲ್ಲುಗಳನ್ನು ಸ್ವೀಕರಿಸಲು ನಮಗೆ ಅನುಮತಿ ನೀಡಿದೆ ಈ ಕೆಳಕಂಡ ವಿಜಯಾ ಬ್ಯಾಂಕಿನ ಯಾವುದೇ ಆಫೀಸುಗಳಲ್ಲಿ ಬಿಲ್ಲುಗಳನ್ನು ಪಾವತಿ ಮಾಡಿ ರಸೀತಿಯನ್ನು ಪಡೆಯಬಹುದು

ಮಂಗಳೂರು ಸಿಟಿ:
1 ಲೈಟ್ ಹೌಸ್ ಹಿಲ್ ರೋಡ 2 ಹಂಪನಕಟ್ಟ
3 ಅಶೋಕ ನಗರ ಮತ್ತು 4 ಜಿ ಎಚ್ ಎಸ್ ರೋಡು

ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆ:
1 ಬ್ರೆಂದೂರು 2 ಕುಂದಾಪುರ 3 ಉಡುಪಿ
4 ಕಾರ್ಕಳ 5 ಕಾಪು 6 ಪುತ್ತೂರು
7 ಕಾರ್ಕಾಡ (ಮೂಲ್ಕಿ) 8 ಗೊಸಿಕೊಪ್ಪಿಲ
9 ಸಿದ್ದಾಪುರ 10. ಬಿಸಿ ರೋಡು (ಬಂಟ್ವಾಳ)
11 ಸುಡಕೇರಿ

ವಿಜಯಾ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು ವಿಜಯಾ ಬ್ಯಾಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು-3.

VD 69 MAC(B)KAN

ಪಾಠ ಶಾಲೆಗಳಲ್ಲಿ

ಮನರಂಜನೆ

ಬರೆದವರು— "ಮಲ್ಲಾರಿ"

ವಿದ್ಯಾರ್ಥಿಗಳು ಶಾಲಾ ವೇಳೆಯಲ್ಲಿ ತಮ್ಮ ಮನಸ್ಸನ್ನು ಪಾಠಗಳ ಕಡೆ ಹರಿಯಬಿಡುವುದರ ಫಲವಾಗಿ ಅಯಾಸ ಮತ್ತು ಬೇಸರಗಳಿಂದ ಅವೃತರಾಗುವರು. ಇಂತಹ ಅವರ ಮನಸ್ಸನ್ನು ಮತ್ತೆ ಪ್ರಫುಲ್ಲಿತಗಾಗುವಂತೆ ಮಾಡುವುದು ಉಪಾಧ್ಯಾಯರ ಕೈಯಲ್ಲಿನೆ. ಪಾಠಗಳ ವೇಳೆಯು ಮುಗಿದ ನಂತರ ಸಾಯಂಕಾಲ ಆಗಾಗ್ಗೆ ಕೆಲವು ಮನರಂಜನೆ ಕಾರ್ಯಗಳಿಟ್ಟು ಕೊಳ್ಳಬಹುದು. ಈ ರೀತಿಯ ಕಾರ್ಯಗಳನ್ನು ಏರ್ಪಡಿಸುವುದು. ಪ್ರಾಥಮಿಕ ಶಾಲೆಗಳಲ್ಲಿಯೂ ಶಿಕ್ಷಣ ಸಂಸ್ಥೆಗಳಲ್ಲಿಯೂ ಸುಲಭ ಸಾಧ್ಯ. ಏಕೆಂದರೆ ಅಲ್ಲಿ ಇದಕ್ಕೋಸ್ಕರ "ವಿದ್ಯಾರ್ಥಿ ಸಂಘ"ಗಳನ್ನು ಏರ್ಪಡಿಸಿಕೊಂಡಿರುತ್ತಾರೆ. ಈ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಮನರಂಜನೆಯ ಕಾರ್ಯವನ್ನು ನಿಪುಣತೆಯಿಂದ ನಿರ್ವಹಿಸುತ್ತಾರೆ. ಪೂರ್ವ ವಿಮರ್ಶಕ್ಕಾಪ್ರಾಥಮಿಕ ಶಾಲೆಗಳಲ್ಲಿ ಎಳೆಸು ಪಯಸ್ಸಿನ ಬಾಲಕರ ಸಂಪೂರ್ಣ ಜವಾಬ್ದಾರಿಯನ್ನು ಉಪಾಧ್ಯಾಯರು ಮುಪಿಂಡರೇ ವಹಿಸಬೇಕಾಗುತ್ತದೆ. ಅಂತ ಮನರಂಜನೆಯ ಕಾರ್ಯ ಶಾಲೆಗಳಲ್ಲಿ ಅತ್ಯಾವಶ್ಯಕ.

ಇನ್ನು ಮನರಂಜನೆ ಎಂದರೇನು? ಎಂಬ ಪ್ರಶ್ನೆ ಬರುತ್ತದೆ. ಒಳಲಿದ ಮನಸ್ಸನ್ನು ಸಂತೋಷಗೊಳಿಸುವ ಕಾರ್ಯವೆಂದು ಹೇಳಬಹುದು. ಮನರಂಜನೆಯಲ್ಲಿ ಅನುಸರಿಸುವ ಕ್ರಮವು ನಾನಾ ರೀತಿ ಇದೆ. ಚರ್ಚಾ ಸ್ಪರ್ಧೆ, ಉತ್ತಮ ಸಾಹಿತಿಗಳ ಉಪನ್ಯಾಸಮಾಲೆ, ಸಂಗೀತ, ಭಾರತವಾಚನ, ಕಾವ್ಯಪಠನ, ಶಿಕ್ಷಣ ಮತ್ತು ಆರೋಗ್ಯ ಚಿತ್ರಪ್ರದರ್ಶನ,ನಾಟಕಗಳು, ಆಟಗಳು ಇನ್ನೇ ಮೊದಲಾದವುಗಳಾಗಿವೆ. ಇವುಗಳಲ್ಲಿ ಯಾವುದನ್ನಾ ನಡೆಸಲು ಅನುಕೂಲವಿದೆಯೋ ಆ ಕಾರ್ಯವನ್ನು ಏರ್ಪಡಿಸಬಹುದು.

ಬೆಳಗಿನಿಂದ ಸಾಯಂಕಾಲದ ವರೆಗೂ ಪಾಠಗಳನ್ನು ಬೋಧಿಸಿ ಬೇಸರಗೊಂಡ ವಿದ್ಯಾರ್ಥಿಗಳ ಮನಸ್ಸು ಈ ವಿಧವಾದ ಕಾರ್ಯಕ್ರಮಗಳನ್ನು ಕೈಗೊಳ್ಳುವುದರಿಂದ ಹರ್ಷದಿಂದ ಅರಳುವುದು ನಿಶ್ಚಯ. ಮೇಲೆ ಹೇಳಿದ ಒಂದೊಂದು ವಿಷಯದಲ್ಲಿಯೂ ಒಂದೊಂದು ಸ್ವಾರಸ್ಯವಿದೆ. ಮನಸ್ಸನ್ನು ವಿಕಾಸಗೊಳಿಸುವ ಶಕ್ತಿ ಇದೆ. ಇದು ಪ್ರದರ್ಶನ ಮಾಡುವವನಸ್ಸು ಅವಲಂಬಿಸಿದೆ.

ಚರ್ಚಾಸ್ಪರ್ಧೆ— ಈಗ ಚರ್ಚಾಸ್ಪರ್ಧೆಯನ್ನು ತೆಗೆದುಕೊಳ್ಳೋಣ. ಈ ಸ್ಪರ್ಧೆಯನ್ನು ಏರ್ಪಡಿಸುವುದರಿಂದ ವಿದ್ಯಾರ್ಥಿಗಳಲ್ಲಿ ಚಿಂತಿಸುವ ಶಕ್ತಿಯು ಬೆಳೆಯುತ್ತದೆ. ಸ್ಪರ್ಧೆಗೆ ವಿಷಯವನ್ನು ಇರಿಸುವಾಗ ಬಹಳ ಜಾಗರೂಕತೆಯನ್ನು ಉಪಯೋಗಿಸಬೇಕು. ಹೀಗೆ ಆರಿಸಿದ ವಿಷಯವು ವಿದ್ಯಾರ್ಥಿಗಳ ಮನಸ್ಸಿಗೆ ಒಡಿಯುವಂತಿರಬೇಕು. ಇಂತಹ ವಿಷಯವನ್ನು ಸ್ಪರ್ಧಗಿಟ್ಟರೆ ಅನೇಕ ವಿದ್ಯಾರ್ಥಿಗಳು ಪ್ರಬಲ ವಿಚಾರವಾಗಲಿ ನೈತಿಕ ವಿಚಾರವಾಗಲಿ ಅಥವಾ ಧಾರ್ಮಿಕ ವಿಚಾರವಾಗಲಿ ನಮಗೆ ಸ್ಪಷ್ಟವಾಗಿ ವ್ಯಕ್ತವಾಗಬೇರದರೆ ಭಾರತವನ್ನೆ ನಾವು ಮೂಲಾಧಾರವಾಗಿಟ್ಟುಕೊಳ್ಳಬೇಕಾಗುತ್ತದೆ. ಈ ವಿಷಯಗಳು ಪದ್ಯಗಳಿಂದ ನಮಗೆ ಹಿತವಾಗುವ ಸ್ಪಷ್ಟ ಗದ್ಯಗಳಿಂದ ಹಿತವಾಗುವುದಿಲ್ಲ. ಇಂಪಾಗಿ ಭಾರತವನ್ನೋದುವುದೂ ಒಂದು ಕಲೆ.

ಈ ಕಲೆಯಿಂದ ಮನಸ್ಸಿಗೆ ಆಗುವ ಆನಂದ ಇನ್ನಾವ ಕಲೆಯಿಂದಲೂ ಸಾಧ್ಯವಿಲ್ಲ. 'ಶಿಶುವೇತ್ತಿ ಪಶುವೇತ್ತಿ ವೇತ್ತಿ ಗಾನರಸ ಫಣಿಃ" ಎಂಬ ಉಕ್ತಿಯಂತೆ ಗಮಕದಲ್ಲಿ ಈ ರೀತಿಯ ಒಂದು ಮಾಧುರ್ಯವಿದೆ, ರಸವಿದೆ. ಸನ್ನಿವೇಶಕ್ಕೆ ಹೊಂದಿಕೆಯಾಗುವಂತೆಯೂ ಅಯಾ ರಸಕ್ಕನುಗುಣವಾಗಿಯೂ ಧಾರತವನ್ನು ಇಂಪಾಗಿ ಮನೋಹರವಾಗಿ ವಾಚನ ಮಾಡಿದ್ದೇ ಆದರೆ ಅದರಿಂದ ಆಗುವ ಆನಂದವನ್ನು ಇಷ್ಟೇ ಎಂದು ಅಳೆಯಲು ಸಾಧ್ಯವಿಲ್ಲ. ಶಾಲೆಗಳಲ್ಲಿ ಈ ಭಾಂಕ್ಷಿವಾಚನವನ್ನೂ ಆಗಾಗ್ಗೆ ಏರ್ಪಡಿಸುವುದರಿಂದ ವಿದ್ಯಾರ್ಥಿಗಳ ಮನಸ್ಸು ವಿಕಾಸವಾಗಿ ನವ ಚೈತನ್ಯವನ್ನು ಹೊಂದುತ್ತದೆ.

ಕಾವ್ಯವಾಚನ:- ಇದೂ ಭಾರತ ವಾಚನದಲ್ಲಿ ಸೇರುವುದಾದರೂ ಆಧುನಿಕ ಕವನಗಳ ದೃಷ್ಟಿಯಿಂದ ಪ್ರತ್ಯೇಕವಾಗಿದೆ. ಚಂಪೂಕಾವ್ಯಗಳು ಓದಲು ಬಹು ರಮ್ಯವಾಗಿರುತ್ತವೆ. ರನ್ನನ ಗದಾಯುದ್ಧ ಕಾವ್ಯವನ್ನು ರಸಸ್ಫೂರ್ತಿಯಿಂದ ಓದಿದರೆ ಎಂತಹವನ ಮನಸ್ಸಾದರೂ ಉದ್ಬುದ್ಧವಾಗುತ್ತದೆ. ಹೀಗೆಯೇ ಸಾಹಿತ್ಯ ಪ್ರಬಂಧದಲ್ಲಿ ಅನೇಕ ಕಾವ್ಯಗಳಿವೆ. ಇವುಗಳೆಲ್ಲವನ್ನೂ ಓದಲು ಸಾಧ್ಯವಾಗಲಾರದು. ಆದುದರಿಂದ ಗಮಕಿಗಳ ಮುಖಾಂತರ ಕೇಳುವುದರಿಂದ ಅತ್ಯಾನಂದವಾಗುತ್ತದೆ. ವಿದ್ಯಾರ್ಥಿಗಳು ಇಂತಹ ಸುಸಂದರ್ಭವನ್ನೂ ಕಳೆದುಕೊಳ್ಳಬಾರದು. ಕೆಲವು ಆಧುನಿಕ ಕವನಗಳಂತೂ ಸುಶ್ರಾವ್ಯವಾಗಿ ವಾಚನ ಮಾಡುವವರ ಮುಖಾಂತರ ಕೇಳಲು ಬಹಳ ಸೊಗಸಾಗಿರುತ್ತವೆ. ಬೇಂದ್ರೆಯವರ ಕವನಗಳಲ್ಲಿ ಸಕ್ಕರೆಯಂತಹ ಸವಿರುಚಿಯು ಅಡಕವಾಗಿರುತ್ತದೆ. ಸ್ವತಃ ಕವಿಗಳೇ ತಮ್ಮ ಕವನಗಳನ್ನು ಬಹು ರಮ್ಯವಾಗಿ ಓದುತ್ತಾರೆ. ರಸಿಕರಾದ ಕೆಲವು ವಿದ್ಯಾರ್ಥಿಗಳಂತೂ ಇವರ ಕವನಗಳನ್ನು ಸೆಗಣಿಸಾಗಿ ಮನೋಧರ್ಮವಾಗಿ ಹಾಡಿ ಪ್ರೇಕ್ಷಕ ವಿದ್ಯಾರ್ಥಿಗಳ ಮನಸ್ಸನ್ನು ಸೂರಗೊಳ್ಳುತ್ತಾರೆ. ಇಂತಹ ಒಂದು ಅಪೂರ್ವವಾದ ಆನಂದ ಇವರ ಕವನಗಳಲ್ಲಿ ಅಡಗಿದೆ. ಹೀಗೆಯೇ ಅನೇಕ ಆಧುನಿಕ ಕವಿಗಳು ಬರೆದಿರುವ ಸುಂದರ ಕವನಗಳು ಹೇ. ಈ ಕವನಗಳನ್ನು ಓದುವುದರಿಂದ ಮನಸ್ಸು ಅತ್ಯಂತ ಆನಂದವನ್ನು ಹೊಂದುತ್ತದೆ.

ಚಿತ್ರಪ್ರದರ್ಶನ:-ಶಿಕ್ಷಣ ವಿಚಾರವಾಗಿಯೂ ಆರೋಗ್ಯವಿಚಾರವಾಗಿಯೂ ಸರ್ಕಾರದವರು ವಿದ್ಯಾರ್ಥಿಗಳಿಗೆ ಚಿತ್ರ ಪ್ರದರ್ಶನವನ್ನಿಟ್ಟಿದ್ದಾರೆ. ಬಿಡಿಯು ವಿಷಯಗಳಿಂದ ವಿದ್ಯಾರ್ಥಿಗಳ ಮನಸ್ಸಿಗೆ ಅಷ್ಟು ಪರಿಣಾಮಕಾರಿಯಾಗುವುದಿಲ್ಲ. ಚಿತ್ರಪ್ರದರ್ಶನಗಳಿಂದ ವಿದ್ಯಾರ್ಥಿಗಳು ವಿಷಯಗಳನ್ನು

(ಎಂಬತ್ತೇ ಸುಟ ನೋಡಿರಿ)

ಸಂಗೀತ— ಸಂಗೀತವು ಪ್ರೇಕ್ಷಕರ ಮನ ಸೆಳೆಯುವುದರಲ್ಲಿ ಶ್ರೇಷ್ಠತರವಾದ ದೈ ಸಶ್ರವ್ಯವಾದ ಸಂಗೀತದಿಂದ ಮನಸ್ಸು ಆನಂದ ಸಾಗರದಲ್ಲಿ ನಗ್ನವಾಗುತ್ತವೆ. ಶಾಲೆಗಳಲ್ಲಿ ಸಂಗೀತ ಕಾರ್ಯವನ್ನೇರ್ಪಡಿಸುವ ಸಂದರ್ಭದಲ್ಲಿ ಶಕ್ತ್ಯನುಬೋಧಕವಾದ ದಾಸ ಸಾಹಿತ್ಯಕ್ಕೆ ಹೆಚ್ಚು ಧಮನುನಕೊಟ್ಟರೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬಹಳ ಉತ್ತಮ. ವಿದ್ಯಾರ್ಥಿಗಳಿಗೆ ಮುಖ್ಯವಾಗಿ ಬೇಕಾದುದು ನೈತಿಕ ವಿಚಾರ. ಇಂತಹ ಒಂದು ಉದಾತ್ತ ನೀತಿಯು ಪುರಂದರದಾಸರ ಕೀರ್ತನೆಗಳಲ್ಲಿ ಅಡಗಿದೆ. ಆದುದರಿಂದ ಒಂಭತ್ತು ಕೀರ್ತನೆ ಮತ್ತು ದೇವರ ನಾಮಗಳನ್ನು ಶಾಲೆಗಳಲ್ಲಿ ಏರ್ಪಡಿಸಿದರೆ ವಿದ್ಯಾರ್ಥಿಗಳು ಮುಂದೆ ತಮ್ಮ ಜೀವನವನ್ನು ನೀತಿವಂತರಾಗಿ ಬಾಳಲು ಅವಕಾಶವಾಗುತ್ತದೆ.

ಭಾರತ ವಾಚನ:— ಇದು ಗಮಕ ಕಲೆಯ ಒಂದು ಭಾಗ. ವಿದ್ಯಾರ್ಥಿಗಳಿಗೆ ಇದರಿಂದ ಸ್ವಯೋಜನವಿದೆ. ಪುರಾತನ ಕಾಲದಲ್ಲಿ ನಡೆದು ಹೋದ ರಾಜಕೀಯ

ಉತ್ತಮ ಸಾಹಿತಿಗಳ ಉಪನ್ಯಾಸ ಮಾಲೆ:—

ಉತ್ತಮ ಸಾಹಿತಿಗಳ ಉಪನ್ಯಾಸ ಮಾ

ಕೃಷಿ ಉತ್ಪನ್ನಕ್ಕೆ ಹಣದ ಅನಾನುಕೂಲತೆಯೇ?

ಸಿಂಡಿಕೇಟ್ ಬ್ಯಾಂಕಿನ

ಕೃಷಿ ಉತ್ಪನ್ನ ಸಾಲ

ಜಿಲ್ಲೆಯ ಕೃಷಿಕರ ಪಾಲಿಗೆ ಲಭ್ಯ.

ಎರಡನೆಯ ಬೆಳೆಯ ಕಾಲದಲ್ಲಿ ಜಿಲ್ಲೆಯಲ್ಲಿರುವ ಸಿಂಡಿಕೇಟ್ ಬ್ಯಾಂಕಿನ 47 ಶಾಖೆಗಳಲ್ಲಿ ಎಲ್ಲಿಂದಲೂ ಕೃಷಿಕರು ಉತ್ಪನ್ನ ಸಾಲವನ್ನು ಪಡೆಯಬಹುದು.

- ಭತ್ತ, ಜೋಳ, ತೆಂಗು ಮತ್ತು ತರಕಾರಿಗಳನ್ನು ಬೆಳೆಸಲು ಸಾಲವನ್ನು ನೀಡಲಾಗುವುದು.
- ಉತ್ಪನ್ನಕ್ಕೆ ಬೇಕಾದ ಬೀಜ, ರಾಸಾಯನಿಕ ಗೊಬ್ಬರ, ಕೃಷಿ ಉಪಕರಣ ಮೊದಲಾದುವನ್ನು ಕೊಂಡುಕೊಳ್ಳಲು ಹಣವನ್ನು ಬಳಸಬಹುದು.
- ಪರ್ಸಕ್ಕೆ ಸೇ/ಡಾ 8ರಂತೆ ಬಡ್ಡಿ.
- ಬೆಳೆ ಕೈಗೆ ದೊರೆತ ಬಳಿಕ ಹೊಸ ಮರುಪಾವತಿ.

ಕೃಷಿ ಉತ್ಪನ್ನ ಹೆಚ್ಚಿಸಲು ನೀಡಲಾಗುವ ಈ ಸಾಲವ ಪ್ರಯೋಜನವನ್ನು ಜಿಲ್ಲೆಯ ರೈತರು ಹೊಂದ ಬಹುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಇದು ಸತ್ಯವೆ ?

ಮಿಶ್ರ ರಾಷ್ಟ್ರ - ಮಿಶ್ರ ಭಾಷೆ

ಬರೆದವರು— "ಶ್ರೀ ಶಿವಶಂಕರ"

ನಾವೆಂದೂ ಹಿಂದೆ ಒಂದು ರಾಷ್ಟ್ರವಾಗಿರಲಿಲ್ಲ. ಬ್ರಿಟಿಷರು ಧಮ್ಮನ್ನು ಒಂದುಗೂಡಿಸಿದರು. ಆನರ ಆಳ್ವಿಕೆಯನ್ನು ಅಂತ್ಯಗೊಳಿಸಿ ನಾವೀಗ ನವರಾಷ್ಟ್ರ ನಿರ್ಮಾಣದ ಮಹಾನ್ ಕಾರ್ಯದಲ್ಲಿ ಪ್ರಗತಿ ಪಥದಲ್ಲಿ ಸಾಗುತ್ತಿರುವದಾಗಿ ಪಂಡಿತ ಜವಾಹರಲಾಲ ನೆಹ್ರೂರಂತಹ ದೊಡ್ಡ ಮನುಷ್ಯರೂ ಸಲವೊಮ್ಮೆ ಹೇಳುತ್ತಿದ್ದರು. ಇಲ್ಲಿಗೆ ಬಂದ ಬ್ರಿಟಿಷರು ಒಡೆದು ಆಳುವ ನೀತಿಗನುಸಾರವಾಗಿ ಭಾರತದ ಜನರು ಹಲವಾರು ಬುಡಕಟ್ಟಿನವರೆಂದೂ, ತಮಿಳಿಗೂ ಇತರ ಭಾಷೆಗಳಿಗೂ ಸಂಬಂಧವೇ ಇಲ್ಲವೆಂದೂ, ನಾಗಾಗಳಿಗೂ ಇತರರಿಗೂ ಸಂಬಂಧವೇ ಇಲ್ಲವೆಂದೂ ತಮ್ಮ ಇಚ್ಛೆಗಳನ್ನು ತಮ್ಮ ಮತೀಯ ಪ್ರಸಾರಕರ ಮೂಲಕ ಸರಾಗ ಪ್ರಚಾರ ಮಾಡಿದರು. ಇದಕ್ಕೆ ಬಲಿಯಾದವರು ಹಲವಾರು ಮಂದಿ.

ಪ್ರತ್ಯೇಕ ತಮಿಳು ನಾಡಿನ ಸ್ವರವನ್ನೆತ್ತುವ ಈ. ವೆ ರಾಮಸ್ವಾಮಿ ನಾಯುರ್‌ರಂಥವರು ಇದೀಗ ತಮಿಳು ನಾಗರೀಕತೆಯ ಗಂಧಗಾಳಿ ಇಲ್ಲದ ಕಾಡು ಜನರ ಭಾಷೆಯೆಂದೂ, ಆಂಗ್ಲ ಭಾಷೆಯೇ ಆಧುನಿಕ ಭಾಷೆಯೆಂದೂ ಆಡುತ್ತಿದ್ದಾರೆ. ಈ ರೀತಿ ಇವರು ತಮಿಳಿಗೆ ಸ್ಥಾನವಿಲ್ಲದ 'ತಮಿಳ್ನಾಡ'ನ್ನು ಕಟ್ಟುತ್ತಿದ್ದಾರೆ!

ಆಂಗ್ಲ ಭಾಷೆಯ ವ್ಯಾಮೋಹವೆಷ್ಟರ ಮಟ್ಟಿಗೆ ಹಬ್ಬಿದೆಯೆಂದರೆ ಹಿಂದಿ ವ್ಯಾವಹಾರಿಕ ಭಾಷೆಯಾದರೂ ಲಿಪಿ ರೋಮನೇ ಇರಬೇಕೆಂದು ವಾದಿಸಿಕೊಳ್ಳುವ ವರೆಗೂ ಇಪಿ ಹಿಂದಿಗಾಗಿ ಹಕ್ಕಾಡಿದ್ದ ಚಕ್ರವರ್ತಿ ರಾಜಗೋಪಾಲಾಚಾರಿಯವರು ಇಂದು ಇಂಗ್ಲೀಷೇ ಇರಬೇಕೆಂದು ಸ್ವತಂತ್ರ ಪಾರ್ಟಿಯನ್ನು ಸ್ಥಾಪಿಸಿದ್ದಾರೆ. ಈ ಅಚಿಂತ್ಯರ ಪ್ರೋತ್ಸಾಹದಿಂದಾಗಿ ಮದರಾಸು ರಾಜ್ಯ 'ದ್ರವಿಡ ದ್ರಾ. ಮು. ಕ. ಪಕ್ಷ'ಶಕ್ತಿ ದ್ವಿಗುಣವಾಗಿರುತ್ತದೆ. ದ್ರಾ. ಮು. ಕ. ಹುಟ್ಟುವದು ಹಾಗೂ ಬೆಳೆಯುತ್ತಿರುವದು ವಿದ್ವೇಷದ ಕಂಡಧಲ್ಲ. ಹಿಂದ ಬ್ರಾಹ್ಮಣರ ಮೇಲೆ ತಮ್ಮ ಹಿಂಬಾಲಕ ಬ್ರಾಹ್ಮಣೇತರರನ್ನೂ ಬಿಡಲಾಗುತ್ತಿತ್ತು. ಈಗ ಹಿಂದಿಯ ಮೇಲೆಯೂ ಬಿಟಲಾಗುತ್ತಿದೆ. ಕಾಂಗ್ರೆಸ್ಸಿನ ನಾಯಕ ಶ್ರೀ ಪನ್ನಮಂತಯ್ಯನವರು ಕೂಡಾ ಇಂಗ್ಲೀಷ್ ಮುಂದರಿಯಬೇಕೆನ್ನುವ ನಿಲುವನ್ನು ತಳೆದಿದ್ದಾರೆ. ನಾಗಾಲೇಂಡ್ ಲವಾಗಲೇ ತಮ್ಮ "ರಾಜ್ಯ"ದ ಭಾಷೆ ಇಂಗ್ಲಿಷೆಂದು ಸಾರಿಯಾಗಿದೆ.

ವ್ಯಾವಹಾರಿಕ ಭಾಷೆ ಹಿಂದಿಯಾಗಬೇಕು, ಸಂಸ್ಕೃತವೇ ಸಂಯೆನ್ನುವ ಸ್ವರವೂ ಕಳಿ ಬರುತ್ತಿದೆ. ಸಂಸ್ಕೃತವೇ ಸಂಯೆಂದಾದಲ್ಲಿ, ಬ್ರಿಟಿಷರ ಹಾಗೂ ಮೊಗಲರ ಅಕ್ರಮಣ ನಡೆಯುವ ಮುಂಚೆ ಈ ದೇಶದ ಜನ ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೂ, ಅಟಕದಿಂದ ಕಟಕದ ವರೆಗೂ ಅದಿನಿತೂ ಭಾಷೆಯ ತಡೆತಡೆ ಇಲ್ಲದೆ ಸರಿಹರಿಸುತ್ತಿದ್ದರು, ಯಾತ್ರೆಗೆ ಹೋಗುತ್ತಿದ್ದರು, ಪವಿತ್ರ ಕ್ಷೇತ್ರ ಪ್ರಯಾಗದಲ್ಲಿ ಸಮ್ಮಿಲಿತರಾಗುತ್ತಿದ್ದರೆಂಬ ಭವ್ಯ ಭಾರತದ ಸ್ವಸ್ಥ ಚಿತ್ರ ಕಣ್ಮುಂದೆ ಬಂದು ನಿಲ್ಲುತ್ತದೆ. ಆ ಕಾಲದಲ್ಲಿ ಚೇರರೂ ಚೋಳರೂ, ಅಥವಾ ಗುಪ್ತರೂ ಕಳಿಂಗರೂ ಯುದ್ಧ ಮಾಡಿಕೊಂಡಿದ್ದರೂ, ಚೇರ ರಾಜ್ಯದವನು ಕಾಶ್ಮೀರದಲ್ಲಿ ಹೋಗಿ ಜೀವಿಸಬಹುದಾಗಿತ್ತು. ಅವನನ್ನು ಆ ದ್ಯಾರೂ 'ತಮಿಳನೇ ತೆಂಳೆಂ'ದು ಹೇಳುತ್ತಿರಲಿಲ್ಲ. ಅಂದರೆ ಭಾಷಾ ಬಡಿದಾಟ ಆಗ ಇದ್ದಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ನಮ್ಮ ವ್ಯಾವಹಾರಿಕ ಭಾಷೆ ಹಿಂದಿ ಇರಬೇಕೆನ್ನುವವರ ವಾದಕ್ಕೆ ಪುಷ್ಟಿ ಕೊಡುವದು, ನಮ್ಮ ದೇಶದಲ್ಲಿ ನಮ್ಮ ದೇಶದ್ದೇ ಆದ ಯಾವದಾದರೊಂದು ಬಹು ಸಂಖ್ಯಾತರಾಡುವ ಭಾಷೆಯೇ ವ್ಯಾವಹಾರಿಕ ಭಾಷೆಯಾಗಿರಬೇಕೆಂಬ ವಿಷಯವಿದೆ. ಇದೂ ಒಂದೆರಡು 'ರಾಜ್ಯ'ಗಳ ಭಾಷೆ ಇರುವದರಿಂದ ಇತರ 'ರಾಜ್ಯ'ಗಳಿಗದು ವ್ಯಾವಹಾರಿಕ ಭಾಷೆಯಾಗಿರಬಾರದಂದೂ ಕೆಲವರು ಹೇಳುವದುಂಟು.

ಏನಿದ್ದರೂ ಸಂಸ್ಕೃತ—ಹಿಂದಿಯೆನ್ನುವಾಗ ಇದೂಂದು ರಾಷ್ಟ್ರವೆನ್ನುವದು ನಮ್ಮ ಗಮನಕ್ಕೆ ಬರುತ್ತದೆ. ಇಂಗ್ಲೀಷ್ ವ್ಯಾವಹಾರಿಕ ಭಾಷೆಯಾಗಿರಲೇ ಬೇಕೆನ್ನುವಾಗ ಇಂಗ್ಲೀಷರು ಬಂದು ನಮ್ಮನ್ನೊಂದು ರಾಷ್ಟ್ರವನ್ನಾಗಿ ಮಾಡಿದರೆಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ದ್ರಾ. ಮು. ಕ.ದ ವಾದವೂ ಅದೇ ಇದೆ. ಆದೆಂದೂ ಭಾರತವು ಒಂದು ದೇಶ —ರಾಷ್ಟ್ರವಾಗಿರಲಿಲ್ಲ. ಸ್ವತಃ ಜವಾಹರಲಾಲ ನೆಹರ್ರವರೇ ಹಾಗೆ ಹೇಳುತ್ತಿದ್ದರೆಂದಲ್ಲಿ ವಿದ್ವೇಷದ ಅಗ್ನಿಕಾರುವ ತಿರು ಅಣ್ಣಾದೊರೈ, ರಾಮಸ್ವಾಮಿ ನಾಯ್ಕರ್ ಅವರ್‌ಗಳ ಯಾವ ಮೂಲೆಗೆ?

ಇಂಗ್ಲೀಷರು ಖಂದು ನಮ್ಮನ್ನು ರಾಷ್ಟ್ರವಾಗಿ ಮಾಡಿದರು ಮತ್ತು ನವ ರಾಷ್ಟ್ರದ ಕಲ್ಯಾಣ ಕಾರ್ಯವನ್ನು ನಾವು ಮಾಡುತ್ತಿದ್ದೇವೆಂದು ಹೆಲವಾರು ಮುಂದಾಳುಗಳು ಈಗಲೂ ಹೇಳುವದುಂಟು, ಬ್ರಿಟಿಷರು ನಮ್ಮನ್ನೊಂದು ದೇಶವನ್ನಾಗಿ ಮಾಡಿದ ಮೇಲೆ ಅದಕ್ಕೊಂದು ಹೆಸರನ್ನಿಟ್ಟರು. ಹೊಸ ಹೆಸರು ಹಿಬ್ಬು ಆಕರ್ಷಕ ಕಾನೇ! ಅವರು ಇಂಡಿಯೆಂದು ನಮ್ಮನ್ನು ಕರೆದರು.

ಇಂಗ್ಲಿಷಿನೊಂದಿಗೆ ಇದನ್ನೂ ನ
ಮುಂದರಿಸಿದರೇನೇ ಅಂತರಾಷ್ಟ್ರೀಯ
ಪ್ರಪಂಚದಲ್ಲಿ ನಾವು ಕಂಡು ಬರಲು ಸಾ
ಧ್ಯ. ಈ ಹೆಸರನ್ನಿಡಲು ಬ್ರಿಟಿಷರು ಬಹಳ
ಕಷ್ಟ ಪಟ್ಟಗಬಹುದು. ಅದಕ್ಕಾಗಿ ಅ
ಷ್ಟು ಸಮಿತಿಗಳನ್ನು, ಪರಿಶೋಧನಾ ಕ್ಷಿ
ದ್ರಗಳನ್ನು ನಿರ್ಮಿಸಿದ್ದರೋ, ಅವರಿಗೇ
ಗೊತ್ತು. ಅಂತೂ ಉಳಿದ ಭಾಷೆ, ಉಪ
ಮ ಹೆಸರನ್ನು ಕೊಟ್ಟು ಹೋದರು. ಈ
ತಹವರನ್ನು "ಧರಾಷ್ಟರೆನ್ನದಿರಲು ಸಾಧ್ಯ
ವೇನು? ನವರಾಷ್ಟ್ರ ನಿರ್ಮಾಣ ಪಥದಲ್ಲಿ
ಇದೊಂದು ನಿಮಗೆ ಅಡ್ಡಿ ಬರಲಾರದು
ಅದು ಉಗನ ಸ್ಥಾನ ತಾನೇ!

ನವರಾಷ್ಟ್ರ ನಿರ್ಮಾಣವೆಂದ ಮೇಲೆ
ಒಂದು ಆಧುನಿಕ ಭಾಷೆ ಇಲ್ಲದಿರಲು ಸಾ
ಧ್ಯವೇನು? ತಿರು ಈ. ವೆ. ರಾ. ನಾಯ್ಕರ
ರವರೂ ಆಂಗ್ಲ ಭಾಷೆಯೇ ಆಧುನಿಕ ಭಾ
ಷೆಯೆಂದಿರುವರು. ಇನ್ನು ಸಿ. ಆರ್. ರೆ
ಯನ್. ಎ., ಎಟಿಎ ಜೆಡ್ ಇಂಗ್ಲಿಷೇ ಬೇ
ಕೆನ್ನುತ್ತಾರೆ. ಆದರೆ ನವರಾಷ್ಟ್ರದಲ್ಲಿ ಎ
ಲ್ಲಾ ಬುಡಕಟ್ಟಿನವರೂ ಇರುವದರಿಂದ
ಒಂದೇ ಭಾಷೆಯನ್ನು ಪ್ರಯೋಗಿಸುವದ
ಸಮಾನತೆಗೆ ದ್ರೋಹ ಬಗೆಯುವದಾ
ದೆ. ಇದಕ್ಕೆ ಪರಿಹಾರೋಪಾಯವನ್ನು -
ದಾಗಲೇ ಓರ್ವ ಮುಂದಾಳು ಸೂಚಿ
ದ್ದಾರೆ, ರೋಮನ್ ಲಿಪಿಯನ್ನು ಪ್ರಯೋ
ಗಿಸಿ ಕೊಳ್ಳುವದು. ರೋಮನ್ ಲಿಪಿಯ
ಲ್ಲೇ ನಮ್ಮ ದೇಶದ ಹೆಸರನ್ನು ಬರೆಯಬೇಕು
"INDIA" ನವರಾಷ್ಟ್ರ ವೆಂದೊಡನೆ
ಶೂನ್ಯದಿಂದ ಆರಂಭಿಸುವದೆಂದರ್ಥವನ್ನು
ಹೆಲವಾರು ಬುಡಕಟ್ಟಿನವರನ್ನು ಒಂದು
ಗೂಡಿಸಿ ಮಿಶ್ರ ರಾಷ್ಟ್ರವನ್ನು (ಐಗುಪ್ತವೂ ಅಲ್ಲ, ಯುಗುಪ್ತವೂ ಅಲ್ಲ) ನಿರ್ಮಿಸುವದು ಅಷ್ಟೇ.

ಮುಖ್ಯವಾಗಿ ಇಲ್ಲಿರುವವರು ಹಿಂದಳಿದ ಹಿಂದೂಗಳು, ಮುಂದರಿದಿರುವ ಮುಸ್ಲಿಮರು ಹಾಗೂ ಈಗ ಬಂದಿರುವ ಈಸಾಯಿಗಳು. ಇದರಲ್ಲಿ ಹಿಂದೂಗಳನ್ನು ಒಂದೇ ಬುಡಕಟ್ಟೆನ್ನವರಂದು ಹೇಳುವ ಸಾಧ್ಯವಿಲ್ಲವಾದ ಕಾರಣ ಹಾಗೂ ಹಿಂದುಳಿದವರಿರುವ ಕಾರಣ ಅವರಿಗೆ ಪ್ರಾಮುಖ್ಯತೆ ಕೊಡುವದು ಆಧುನಿಕತೆಗೆ ವಿರುದ್ಧವೂ ಪ್ರಜಾಪ್ರಭುತ್ವಕ್ಕೆ ಅಪಚಾರವೂ ಆಗಿದೆಂತೆಯೇ, ಸರಿ, ಆಯಾ ಒಂದಿಷ್ಟು ರಿಯಾಯಿತಿ ಮೇರೆಗೆ ಮುಸ್ಲಿಮರೊಡನೆ ಒಪ್ಪಂದ ಮಾಡಿಕೊಳ್ಳಬಹುದು. ಬರಬರುತ್ತಿಗೆ ರೋಮನ್ ಲಿಪಿಯನ್ನು ಸಹಯೋಗಿಸಿ ಆಧುನಿಕತೆಯನ್ನು ಎಡೆಮಾಡಿಕೊಡುವದು ಹಿಂದೂಗಳ ಹೃಪ್ತಿಗಾಗಿ ಕೆ
ದೇಶದ್ದಲ್ಲಾ ಅವರು ಇತರರಿಗಿಂತಲೂ ಹಿ
ದಿನಿಂದ ಇರುವ ಕಾರಣ ಅವರಿಗೆ ಅದ
ಲ್ಲಿ ವಿಶಿಷ್ಟ ಸ್ಥಾನ. ಅಂದರೆ ಮೊದಲು
ಎಡಪಡಿಂದ ಓದುವದು ಅನಂತರ ಬಲ
ಮುಸ್ಲಿಮರಿಗಾಗಿ ಉಳಿದದ್ದನ್ನು ಬಲ
ಬದಿಯಿಂದ ಒಡುತ್ತಾ ಬರುವುದು ಅಥ
ಎಂತಹ ಯೋಜನೆ! ಇಷ್ಟಲ್ಲಾ ತಲೆ
ಚ್ಚು ಮಾಡಿಯೇ ಈ ಪದ್ಧತಿಗನುಸಾ
ರವಾಗಿಯೇ ಬ್ರಿಟಿಷರು ನಮ್ಮ ದೇಶ
ನಾಮಕರಣ ಅಥವಾ ಕ್ರೈಸ್ತೀಯರ
ಡಿದ್ದಾರೆ. ಇದರ ಮೇಲೆಯೇ ನಮ್ಮ
ಶ ಎದ್ದು ನಿಲ್ಲ ಬೇಕು ಹಿಂದೂಗಳ
ಗಾಗಿ "IN"ಇನ್ ಇದೆ. ಮುಸ್ಲಿಮ
ಪ್ರಯೋಜನಕ್ಕಾಗಿ "AID"ಎಯಿಡ್ ಇದೆ.
ಸ್ತೀಯರ ಪ್ರಯೋಜನಕ್ಕಾಗಿ ರೋಮನ್ ಲಿ

ಮನೆಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ
ಬೆಲೆ ರೂ. 1-50
ಪುಟ 450ಕ್ಕೂ ಮಿಕ್ಕ
ರಟ್ಟಿನ ಪ್ರತಿಗಳಿಗೆ ವಿಶೇಷ ಸವಲತ್ತುಗಳಿವೆ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

'ಕಾಯಕದಲ್ಲಿ ಕೈಲಾಸ'

ನಮ್ಮಲ್ಲಿ ಅನೇಕರು ಕೆಲಸ ಮಾಡದೆ ಹೊತ್ತು ಹೊತ್ತಿಗೆ ಉತ್ತಮ ಭೋಜನ ಮಾಡುತ್ತಾ, ಸೋಮಾರಿಯಾಗಿ ದಿನ ಕಳೆಯುವುದನ್ನು ಸುಖವೆಂದು ತಿಳಿದಿದ್ದಾರೆ. ಕೆಲವರು ಕೆಲಸಮಾಡುವುದು ತಮ್ಮ ಅಂತಸ್ತಿಗೆ, ಗೌರವಕ್ಕೆ ಕುಂದು ಎಂದು ಭಾವಿಸಿದ್ದಾರೆ. ಭಾರತದ ಶ್ರೀಮಂತ ವರ್ಗದಲ್ಲಿ ಇಂಥ ಸೋಮಾರಿಗಳ ಸಂಖ್ಯೆ ಹೆಚ್ಚಿದೆ. ಇವರನ್ನು ನೋಡಿ ಇತರರೂ ಕೂಡ ಸೋಮಾರಿಯಾಗಿ ಸಮಯ ವ್ಯಯಮಾಡುವುದೇ ಸುಖಜೀವನದ ಸಂಕೇತವೆಂದು ಊಹಿಸುತ್ತಾರೆ.

ನಾನು ವಿದ್ಯಾರ್ಥಿಯಾಗಿದ್ದಾಗ ನಮ್ಮ ಕಾಲೇಜಿಗೆ ಸನ್ಯಾಸಿಯೊಬ್ಬರು ಬಂದು ನಮ್ಮನ್ನು ಉದ್ದೇಶಿಸಿ ಮಾತಾಡುತ್ತಾ ಒಂದು ವರ್ಷದಿಂದ ತಾನು ಮಲಗುವ ವಿಚಾರದಿಂದ ಅಲುಗದ ಸನ್ಯಾಸಿಯೊಬ್ಬರ ವಿಚಾರ ವಿವರಿಸಿದರು. ಅವರು ಊಟಮಾಡಲು ಏಳರು, ಬಟ್ಟೆ ಬದಲಾಯಿಸರು, ಸ್ಥಾನ ಮಾಡರು, ಪ್ರಕೃತಿಯ ಕರೆಗೂ ಓಗೊಡಲು ನಾಲ್ಕು ಹೆಜ್ಜೆ ಹೋಗರು. ಇವೆಲ್ಲವನ್ನೂ ಅವರ ಶಿಷ್ಯವೃಂದವೇ ಅವರಿಗಾಗಿ ಅಪಾರ ಭಕ್ತಿಯಿಂದ ಮಾಡುತ್ತಿತ್ತು. ಇಂಥಾ ಅದ್ಭುತ ಪವಾದ ಪುರುಷರು ಭಾರತದಲ್ಲಿ ವಿನಸಿ ವಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಕಾಣಸಿಗುವರೇ? ಎಂದು ಅವರು ಹೆಮ್ಮೆಯಿಂದ ಹೇಳಿದರು.

ಈ ಸನ್ಯಾಸಿಯ ಜೀವನ ಸೋಮಾರಿತನದ ಪರಕಾಷ್ಠೆ. ಅದನ್ನೇ ಆದರ್ಶವೆಂದೂ, ಆರಾಧನೀಯವೆಂದೂ ಗಣಿಸಿರುವ ಭಾರತೀಯರು ಜೀವನದಲ್ಲಿ ಸೋಮಾರಿಗಳಾಗಿರುವುದರಲ್ಲಿ ಆಶ್ಚರ್ಯವಿಲ್ಲ. ಭಾರತದಲ್ಲಿ ಸೋಮಾರಿತನವನ್ನು ಈ ರೀತಿ ಆರಾಧ್ಯವಾಗಿಗೊಳಿಸಿ ಜೀವಿಸುವ ಮಿಲಿಯಂತರ ಸಾಧುಗಳೂ ಇತರರೂ ಇದ್ದಾರೆ. ಇವರ ಜೀವನದ ಪ್ರಭಾವ ಭಾರತೀಯ ಜನ ಸಾಮಾನ್ಯರ ಮೇಲೂ ಬಿದ್ದಿದೆ.

ಇಂದು ನಮ್ಮ ಮನೋಭಾವವೂ ಕೂಡ ಮೈಬಗ್ಗಿ ದುಡಿಯದೆ, ಬೆವರಿಳಿಸಿ ಶ್ರಮಿಸದೆ ಹೇಗಾದರೂ ಜೀವಿಸಬೇಕೆಂಬುದೇ ಆಗಿದೆ. ಇಂದು ಕೆಲಸ ಮಾಡುವ ವರಾದರೂ ತಮ್ಮ ಹೊಟ್ಟೆಪಾಡಿಗಾಗಿ ಕೆಲಸ ಮಾಡುತ್ತಾರಲ್ಲದೆ ಕೆಲಸದ ಮೇಲಿನ ಅಭಿರುಚಿಯಿಂದಲ್ಲ, ಹೊಟ್ಟೆಯ ಬೇಡಿಕೆಯೊಂದಿರದಿದ್ದರೆ ಭಾರತದಲ್ಲಿ ನೂರಕ್ಕೆ ೯೦ ಜನರು ಸೋಮಾರಿಗಳಾಗಿ ದಿನ ಕಳೆಯಲು ಆಶಿಸುವವರೆ! "ಆರಾಮ್ ಹರಾಮ್" ಎಂದು ಬಾಯಿಯಲ್ಲಿ ಹೇಳದರೂ ಕಾರ್ಯತಃ ಆರಾಮಿಗಾಗಿ ಆಸುವವರೇ ಹೆಚ್ಚು.

ಸೋಮಾರಿತನದಿಂದ ಮನುಷ್ಯನ ಚಿಂತನಾಶಕ್ತಿ ಕುಗ್ಗುತ್ತದೆ. ಪರಿಣಾಮವಾಗಿ ರಾಷ್ಟ್ರವೇ ಕುಸಿಯುತ್ತದೆ. ಭಾರತದ ಅವನತಿಗೆ ಅದರ ಸೋಮಾರಿತನ ಹಾಗೂ ಸುಖಲೋಲುತೆಯೇ ಕಾರಣವೆಂಬುದನ್ನು ಚರಿತ್ರೆ ಎತ್ತಿ ಹೇಳುತ್ತದೆ. ಸೋಮಾರಿತನವು ಮನುಷ್ಯನ ಕ್ರಿಯಾಶಕ್ತಿಯನ್ನು ಉಡುಗಿಸಿ ಆತನನ್ನು ನಿಷ್ಪ್ರಯೋಜಕನನ್ನಾಗಿಸುತ್ತದೆ.

ಕೆಲಸ ಎಂದರೆ ಹೆದರುವ ಪೀಳಿಗೆ ಹೆಚ್ಚುತ್ತಿದೆ. ಕೆಲಸದಿಂದ ದಾನಿ ಎಂದೂ ಆಗದು. ಶಕ್ತಿಗೆ ಮಿಂದ ದುಡಿತ ಹಾನಿಕಾರಕವಿರಬಹುದು. ಆದರೆ ಹದವರಿತ ಶರೀರಶ್ರಮ ಅನ್ನಾಹಾರಗಳಷ್ಟೇ ಶರೀರಕ್ಕೆ ಅಗತ್ಯ. "ಪದವಂತ ದರಿದ್ರ ಶರೀರದ ಪರಿಶ್ರಮ ಯಾರಿಗೂ ಹಾನಿ ಮಾಡಿಲ್ಲ ಬದಲು ಶಾರೀರಕವಾಗಿಯೂ ಆರ್ಥಿಕವಾಗಿಯೂ ಲಾಭವನ್ನೇ ತಂದಿದೆ" ಎಂಬುದು ಸಂಶೋಧಕರ ಖಚಿತ ಅಭಿಪ್ರಾಯ.

ದೀರ್ಘ ಜೀವನಕ್ಕೆ ಕೆಲಸಮಾಡಿದ್ದು ಶರೀರ ಶಕ್ತಿಯ ಸಂಚಯನ ಆಗತ್ಯವೆಂದು ಕೆಲವರು ಭಾವಿಸಿದಂತಿದೆ. ಸಂಶೋಧನೆಗಳಿಂದ ಮನುಷ್ಯನು ತನ್ನ ಕಾರ್ಯಜೀವ ತನದ ಹತ್ತರಲ್ಲಿ ಒಂದು ಭಾಗವನ್ನು ಮಾತ್ರ ವಿನಿಯೋಗಿಸುತ್ತಿದ್ದಾನೆ. ಉಳಿದ ಒಂಭತ್ತು ಭಾಗವನ್ನು ವಿನಿಯೋಗಿಸದೆ ಹಾಳುಗೆಡಹುತ್ತಿದ್ದಾನೆ. ಆದ್ದರಿಂದ ಪ್ರತಿಯೊಬ್ಬನಲ್ಲೂ ಇನ್ನೂ ಹೆಚ್ಚು ಕರಿಣ ತರದ ಪರಿಶ್ರಮಕ್ಕೆ ಬೇಕಾದ ಜೀವನವಿದೆ. ಆದರೆ ಅದನ್ನು ಉಪಯೋಗಿಸದೆ ನಿಷ್ಪ್ರಯೋಜಕವಾಗುತ್ತಿದೆಂದು ತಿಳಿದು ಬಂದಿದೆ.

ಶರೀರ ಶ್ರಮವೇ ಇರಲಿ ಮಾನಸಿಕ ಶ್ರಮವೇ ಇರಲಿ ಮಾನವಶರೀರದ ಸಾಧ್ಯತೆ ವಿಫುಲವಾಗಿದೆ ಆದರೆ ನಾವು ಸೋಮಾರಿತನದ ದಾಸರಾಗಿ ಇಲ್ಲದ ನೆಪದಿಂದ ಕೆಲಸದ ಜವಾಬ್ದಾರಿಯನ್ನು ಬಿಟ್ಟು ಕೊಟ್ಟು ನಿಷ್ಕ್ರಿಯರಾಗುತ್ತೇವೆ. 'ವಿದ್ಯುತ್ತಿನ ಶಕ್ತಿಯನ್ನು ವ್ಯಯಿಸುವುದು ಅಸಾಧ್ಯ. ಅದರ ಜೀವನ ಅಪ್ಪೆಂದು ನಿಪುಲವಾಗಿದೆ' ಎಂದು ವಿಜ್ಞಾನಿಗಳು ಹೇಳಿದ್ದಾರೆ. ಆದರೆ ನಮ್ಮ ಶಾರೀರಿಕ ಹಾಗೂ ಮಾನಸಿಕ ಶಕ್ತಿಯು ಪೂರ್ಣ ಉಪಯೋಗವನ್ನು ನಾವು ಮಾಡುತ್ತಿಲ್ಲ. ದಿನಕ್ಕೆ ೧೮ ಗಂಟೆಗಳ ಕಾಲ ಸಶಕ್ತ ದುಡಿದೂ ಆರೋಗ್ಯದಿಂದಿರುವವರ ಉದಾಹರಣೆ ಬೇಕಾದಷ್ಟಿದೆ.

ಒಬ್ಬ ಮನುಷ್ಯನಿಗೆ ದಿನಕ್ಕೆ ೧೦ ಗಂಟೆ ದುಡಿಯುವ ಜೀವನವಿದ್ದರೂ ಆತನು ೬ಗಂಟೆ ಮಾತ್ರ ದುಡಿಯುತ್ತಾನೆಂದರೆ ಆತನು ಸಕ್ರಿಯವಾಗಿ ಕೆಲಸ ಮಾಡಬಲ್ಲ ೪ ಗಂಟೆಗಳನ್ನು ಇಲ್ಲದ ಚಿಂತನೆ ತಲೆಸರಟಿಗಳಲ್ಲಿ ವ್ಯಯಮಾಡುವನು. ಇದು ವರ್ಷಕ್ಕೆ ೬೦ ದಿನಗಳಷ್ಟಾಗುವದೆಂಬುದನ್ನು ನಾವು ಗಮನಿಸಬೇಕು!

ಯಾರು ಕ್ರಿಯಾಶೀಲರಾಗಿ ತುಂಬು ಜೀವನ ನಡಸುತ್ತಾರೋ, ಶಾರೀರಿಕ ಶ್ರಮ ಹಾಗೂ ಮಾನಸಿಕ ಜ್ಞಾನಗಳ ಸಮತೋಲನವನ್ನು ಕಾಪಾಡಿಕೊಂಡಿದ್ದಾರೋ ಅಂಥ ಭಾಗ್ಯವರು ದೀರ್ಘ ಜೀವನಿಗಳಾಗುವುದರಲ್ಲಿ ಸಂಶಯವಿಲ್ಲ. ಅವರ ಆರೋಗ್ಯ ಕಡೆಯವರೆಗೂ ಚೆನ್ನಾಗಿದ್ದು ಅವರು ಪೂರ್ಣ ಪ್ರೌಢ ತೃಪ್ತಿಕರವೂ ಆದ ಜೀವನದ ಆನಂದವನ್ನು ಪಡೆಯುತ್ತಾರೆ.

ಹೆಚ್ಚು ಕೆಲಸ ಮಾಡಿದಷ್ಟೂ ಹೆಚ್ಚು ಬದುಕುತ್ತಾರೆ. ಹೆಚ್ಚು ಬದುಕಿದಷ್ಟೂ ಹೆಚ್ಚು ಕೆಲಸವಾಗುತ್ತದೆ. ಆದ್ದರಿಂದ ಹೆಚ್ಚು ಕೆಲಸದಿಂದ ಆರೋಗ್ಯ ಕೆಡುತ್ತದೆ; ಆಯುಷ್ಯ ಕುಂದುತ್ತದೆ ಎಂಬುದು ತೀರಾ ಮೌಢ್ಯತೆ. ನಿಂತ ನೀರು ಕೊಳೆಯುವುದಲ್ಲದೆ ಹರಿಯುವ ನೀರು ಸದಾ ಶುಚಿಯಾಗಿರುತ್ತದೆ.

—'ಗುಜ್ಜ' ಮಡಿಕೇರಿ (ಕೊಡಗು).

ಶಾಸನ ಸಭಾಧಿವೇಶನದ ಸಂದರ್ಶಕರ ಗೆಲರಿಯಿಂದಿಳದು ಬರುತ್ತಿದ್ದ ಪುರೋಹಿತರನ್ನುದ್ದೇಶಿಸಿ ಓರ್ವ ಶಾಸಕರು ಪ್ರಶ್ನಿಸಿದರು:—

"ಫಾದರ್, ಸ್ವಾಮೀ! ಶಾಸಕರ ಬಗ್ಗೆ ಪ್ರಾರ್ಥನೆ ಮಾಡುತ್ತಿದ್ದಿರಾ?...."

"ಅಲ್ಲ; ಇಷ್ಟೆನ ಪದ್ಯಮಾನಗಳನ್ನು ಕಂಡು ರಾಜ್ಯದ ಪ್ರಜೆಗಳ ಬಗ್ಗೆ ದೇವರನ್ನು ಪ್ರಾರ್ಥಿಸುತ್ತಿದ್ದೆ."

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26—4—1966.

ಬೇಕಾಗಿದ್ದಾರೆ

ಪ್ರಿಂಟಿಂಗ್ ಪ್ರೆಸ್ಸಿನ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡಲು ಸಾಕಷ್ಟು ಅನುಭವಸ್ಥ ಕೆಲಸಗಾರರು ಬೇಕಾಗಿದ್ದಾರೆ. ಸಂಬಳ ಯೋಗ್ಯತಾನುಸಾರ. ಕನಿಷ್ಠ ೪ನೇ ತರಗತಿವರೆಗಾದರೂ ಓದಿದ ಕೆಲವು ಚುರುಕುಗರನ್ನು ತರಬೇತಿಗಾಗಿಯೂ ಸೇರಿಸಿಕೊಳ್ಳಲಾಗುವುದು

ವಿಚಾರಿಸಿರಿ:—

ನವಯುಗ ಪ್ರೆಸ್, ಉಡುಪಿ.

ಬ್ರಿಟಿಷರು ಒಂದು ಇಂಗ್ಲೀಷನ್ನು ಸರಕಾರಿ ಭಾಷೆಯನ್ನಾಗಿ ಮಾಡಿದ್ದಲ್ಲಿ ನಮ್ಮ ಮೇಲೆ ಆಳ್ವಿಕೆ ನಡೆಸದ ಇರುತ್ತಿದ್ದಲ್ಲಿ ನಾವೆಂದು ಇನ್ ಎಯಿಡ್‌ನಲ್ಲಿ (ಸಹಾಯದಲ್ಲೇ- ಭಿಕ್ಷೆಯಿಂದಲೇ!) ಬಾಳುವ ದೇಶವಾಗುತ್ತಿದ್ದವೇ? ನಿಸ್ಸಂದ ಅದು ಸಾಧ್ಯವೇ! ರಾಣಾ ಪ್ರತಾಪಸಿಂಗರಲೀ, ಶಿವಾಜಿ, ಗೋವಿಂದ ಸಿಂಘೆ, ಛತ್ರಸಾಲ, ಬಾಲ ಗಂಗಾಧರ ಟಿಳಕ್, ವಿನಾಯಕ ದಾಮೋದರ ಸಾವರ್‌ಕರ್, ಶಾಮ ಪ್ರಸಾದ ಮುಖರ್ಜಿ, ಕೇಶವ ಬಲಿರಾಂ ಹೆಡ್ಗೇವಾರ್...ಇನರೆಲ್ಲರಿಗೂ ಆದು ಹೊಳೆಯದಿದ್ದಾ ಕಾರಣವೇ ಅವರು ವಿರೋಧವನ್ನು ಕಟ್ಟಿಕೊಳ್ಳಬೇಕಾಯಿತು. ಬುದ್ಧಿವಂತ ಬ್ರಿಟಿಷರು ಬಹಳ ಶ್ರಮಪಟ್ಟು ನಮ್ಮನ್ನೊಂದು ಇಂಡಿಯನ್ನನ್ನಾಗಿ ಮಾಡಿ, ನಮಗೆ ಯೋಗ್ಯವಾಗಿ ವಿಭಜಿಸಿ, ಇನ್ ಎಯಿಡ್ ರಾಷ್ಟ್ರವನ್ನಾಗಿ ಮಾಡಿ ಅದನ್ನು ನೋಡಿಕೊಳ್ಳಲು ತಮ್ಮ ಮಾನಸ ಪುತ್ರ ಕಾಂಗ್ರೆಸ್ಸಿಗರನ್ನು ನೇಮಿಸಿ ಹೋಗಿದ್ದಾರೆ. ಅವಂ ಆ ದೃಷ್ಟಿಯ ಹಕ್ಕನ್ನು ಕಸಿದುಕೊಳ್ಳಲು ಈಗ ಹಲವಾರು ರಾಜಕೀಯ ಪಕ್ಷಗಳು ಪ್ರಯತ್ನಿಸುತ್ತಿವೆ.

ಇವೆಲ್ಲವೂ ದೇವರ ದಯೆಯಿಂದ ಹಾಗೂ ನವ ಪುಣ್ಯದಿಂದ ನಡೆದಿರುತ್ತದೆ. ಬುದ್ಧಿವಂತ ಬ್ರಿಟಿಷರು ಯೋಚಿಸಿಯೇ ದೇವರನ್ನು 'God' ಗೋಡೆಂದು ಕರೆಯುವರು. ಮುಂದಾದಿರುವ ನವ ರಾಷ್ಟ್ರೀಯನಾದ ನಾವು ಇದನ್ನು ಎಡ ಬದಿಯಿಂದ ಓದಿದೆ ಬಲ ಬದಿಯಿಂದ ಲೇ ಓದಿ ಇಲ್ಲಿಯ ಕಲ್ಲು-ಮರದ ದೇವರನ್ನು ಬಿಟ್ಟು ಬಡಬೇರು. ನಾಗರೀಕರಾಗಲು ಅಷ್ಟಾದರೂ ಮಾಡದಿದ್ದಲ್ಲ ಹೇಗೆ. ಭಾರತವನ್ನು ಇನ್‌ಎಯಿಡ್ ರಾಷ್ಟ್ರವನ್ನಾಗಿ ಮಾಡಿದ ದೇವರನ್ನು ಮರ್ಯಾದಸುವದಕ್ಕಾಗಿ ಹಾಗೂ ಹಿಂದೂಗಳಲ್ಲಿ ಹಲವಾರು ದೇವರುಗಳಿರುವ ಕಾರಣ ಅಂಗ್ಲೇಯರು GODನ್ನು ಬಲಬದಿಯಿಂದಲೇ ಓದಬೇಕು. ಅದನ್ನರಿತುಕೊಂಡ ಕಾಮರಾಜರು ಇನ್ನು ಮುಂದೆ ದೇಶವು ನಾಯಿ ಜಾಲಾಗುತ್ತದೆಂದು ಹೇಳಿರುವರು. ಆದರ ಕಾಂಗ್ರೆಸ್ ಹೋದಲ್ಲಿ ಆಗ ಎಲ್ಲರೂ ಎಡಬದಿಯಿಂದಲೇ ಓದುತ್ತಾರೋ, ಏನೋ! ಏನೇ ಇದ್ದಲ್ಲಿ ಭಾರತವನ್ನು ಒಂದಾಗಿಸಿ, ನವಂಪ್ಪ ನಿರ್ಮಾಣ ನೈದು IN-AID ರಾಷ್ಟ್ರವನ್ನಾಗಿ ಮಾಡಿದ ಬ್ರಿಟಿಷರನ್ನೂ ನಾವು ಮರೆಯಲು ಸಾಧ್ಯವಿಲ್ಲ. ಇದೆಲ್ಲವೂ ಬಲಬದಿಯಿಂದ ಓದಬಹುದಾಗಿರುವ GODನ ಉಪಕಾರವೆಂಬುದನ್ನೂ ಮರೆಯಲು ಸಾಧ್ಯವಿಲ್ಲ. ಇಂತಹ ನಷ್ಟೇ ಕೋನ ಭವಿಷ್ಯತಿಯು ಮಿಶ್ರಭಾಷೆಯ ನವಂಪ್ಪ ನಾವು!

ಸುಮಧುರ ಸ್ನೇಹ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 85 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಕೇವಲಾತಿಗಳ ಮೇಲೆ 8% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆಡ್ ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",
ಬೈಪಾಸ್ ರೋಡ್ ಹಿಲ್ ರೋಡ್,
ಮಂಗಳೂರು—3

ಮನರಂಜನೆ

(ಐದನೇ ಪುಟದಿಂದ)

ಸಂತೋಷವನ್ನು ಗ್ರಹಿಸುತ್ತಾರೆ. ಇಂತಹ ಚಿತ್ರಗಳನ್ನು ನೋಡುವ ಒಂದು ಸದವಕಾಶವನ್ನು ವಿದ್ಯಾರ್ಥಿಗಳು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು. ಇದರಿಂದ ವಿದ್ಯಾರ್ಥಿಗಳ ಮನಸ್ಸು ಹರ್ಷಗೊಳ್ಳುವುದಲ್ಲದೆ ಜ್ಞಾನಾಭಿವೃದ್ಧಿಗೂ ಕಾರಣವಾಗುತ್ತದೆ.

ನಾಟಕಗಳು:—ಇದು ಮನರಂಜನೆಯ ಕಾರ್ಯದಲ್ಲಿ ಮೊದಲನೆಯ ಸ್ಥಾನವನ್ನು ಹೊಂದುತ್ತದೆ. ಇದನ್ನು ನೋಡಲು ಯಾವ ವಿದ್ಯಾರ್ಥಿಯನ್ನೂ ಬಲಾತ್ಕರಿಸಬೇಕಾಗಿಲ್ಲ. ನಾಟಕವೆಂದರೆ ಸಾಕು ಅದನ್ನು ಯಾವಾಗ ನೋಡೇನೆಂಬ ಕುತೂಹಲವು ವಿದ್ಯಾರ್ಥಿಗಳಿಗಿರುತ್ತದೆ. ಬಿಡಿನ ಕುಳಿತು ಕೊಳ್ಳಲೂ ಜಾಗವಿರುವುದಿಲ್ಲ ಇದರ ಆಕರ್ಷಣವೇ ಅಷ್ಟಿದ್ದು ತಮಾಷೆದ ನಾಟಕ ಕಾರ್ಯಕ್ರಮವು ಸಾಮಾನ್ಯವಾಗಿ ಶಾಲಾ ವಾರ್ಷಿಕೋತ್ಸವ ಸಂದರ್ಭದಲ್ಲಿ ಆಚರಿಸಲ್ಪಡುತ್ತದೆ. ಇದನ್ನೇ ಆಗಾಗ್ಗೆ ಏರ್ಪಡಿಸುವುದು ವಿದ್ಯಾರ್ಥಿಗಳಿಗೆ ಬಹಳ ತೊಂದರೆ. ಅವರ ವಿದ್ಯಾಭ್ಯಾಸಕ್ಕೆ ತೊಂದರೆ ಬರುತ್ತದೆ. ಆದುದರಿಂದ ವರ್ಷಕ್ಕೊಂದು ಸಾರಿ ಅಂದರೆ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಇದನ್ನು ಇಟ್ಟುಕೊಳ್ಳಬಹುದು. ಅಂತೂ ಒಳ್ಳೆಯ ನಾಟಕವನ್ನು ನೋಡುವುದರಿಂದಆದರಲ್ಲಿ ಅಡಗಿರುವ ನೀತಿಯುಕ್ತೇಕ್ಷರ ಹೃದಯವನ್ನು ಮುಟ್ಟುತ್ತದೆ. ವಿದ್ಯಾರ್ಥಿಗಳ ಅಂತರಾಳವನ್ನು ಪ್ರವೇಶಿಸುತ್ತದೆ. ಯಾಸ್ಯರನ ಪ್ರಹೋದಕರವಾದ ನಾಟಕವನ್ನು ನೋಡುವುದರಿಂದಂತೂ ವಿದ್ಯಾರ್ಥಿಗಳ ಮನಸ್ಸು ಆನಂದಾಂಬುಧಿಯಲ್ಲಿ ಲೀನವಾಗಿ ಹೋಗುತ್ತದೆ.

ಆಟಗಳು.— ಶಾಲೆಗಳಲ್ಲಿ ಆಟಗಳ ಸ್ಪರ್ಧೆಯನ್ನು ಏರ್ಪಡಿಸುವುದು ಮನಸ್ಸಂತೋಷಕ್ಕೂ ಶರೀರ ವ್ಯಾಯಾಮಕ್ಕೂ ಸಾಧನವಾಗಿರುತ್ತದೆ. ಇದರಿಂದ ಬೇಸರಪಟ್ಟ ಮನಸ್ಸು ವಿವಿಧವಾದ ಆಟಗಳನ್ನು ಆಡುವುದರಿಂದ ಒಂದು ಹೊಸ ಚೇತನವನ್ನು ಹೊಂದುತ್ತದೆ. ಮನಸ್ಸು ಲವಲವಿಕೆತನವನ್ನು ಹೊಂದುತ್ತದೆ. ಬುದ್ಧಿಯು ಚಟುವಟಿಕೆಯುಳ್ಳದ್ದಾಗಿ ನವೀನತೆಯನ್ನು ಪಡೆಯುತ್ತದೆ. ಕಲಾ ವಿದ್ಯಾರ್ಥಿಗಳ. ಬರಿಯ ಪಾಠಗಳನ್ನು ಓದುವುದರಲ್ಲಿ ಸಂತರಾಗಿ ಆಟಗಳ ಕಡೆಗೆ ಗಮನವನ್ನೇ ಕೊಡುವುದಿಲ್ಲ. ಅಂತಹ ವಿದ್ಯಾರ್ಥಿಗಳು ಶರೀರ ದಾರ್ಢ್ಯಕ್ಕೆ ಪೆಸಿದಲು ಗಮನ ಕೊಡಬೇಕು. ಯಾವುದಾದರೂ ಒಂದು ವ್ಯಾಯಾಮದಲ್ಲಿ ಆಸಕ್ತಿಯನ್ನು ವಹಿಸಬೇಕು. ಪ್ರತಿಯೊಂದಕ್ಕೂ ಅಭ್ಯಾಸವೇ ಕಾರಣ. ಆದುದರಿಂದ ಆಟಗಳಲ್ಲಿ ಭಾಗವಹಿಸುವುದನ್ನು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಾ ಬಂದರೆ ಶರೀರವು ಬಲವಾಗುವುದಲ್ಲದೆ ಮನಸ್ಸು ಹರ್ಷವನ್ನು ಹೊಂದುತ್ತದೆ.

ವಿದ್ಯಾರ್ಥಿಗಳ ಮನರಂಜನೆಯ ಕಾರ್ಯಗಳು ಇನ್ನೂ ಅನೇಕ ವಿಧವಾಗಿವೆ. ಅವೆಲ್ಲವೂ ಅವರವರ ಮನಸ್ಸಿನ ಮೇಲೆ ಪರಿಣಾಮವಾಗುತ್ತದೆ. ಇದರಲ್ಲಿ ಯಾವುದು ಹೆಚ್ಚು ಯಾವುದು ಕಡಿಮೆ ಎಂದು

ಎಂಟನೆಯ

ವಿವೇಚನೆ

ಮುಕ್ತಿ ಸಾಧನೆಯ ಏಕೈಕ ಮಾರ್ಗ

ಬರೆದವರು:

ಶ್ರೀ ಮಂ. ಗೋ. ರಾವ್.

ಭಕ್ತಿ ಬಹು ಆನಾದಿಯಿಂದ ಮಾನವನಲ್ಲಿ ಹುಟ್ಟಿಕೊಂಡ ಒಂದು ದಿವ್ಯ ಸಾಧನೆ. ಅದನ್ನೇ ಮಹಾಮಂತ್ರವೆನ್ನಬಹುದು. ಹಿಂದಿನ ಗುರುಕುಲಾದಿಗಳಲ್ಲಿ ಗುರುಶಿಷ್ಯರೊಳಗಿನ ಭಕ್ತಿ ಅಪಾರವೆಂಬುದನ್ನು ಕೆಲವು ಪುರಾವೆಗಳಿಂದಲಿಯಬಹುದು. ಏಕಲವ್ಯನ ಗುರುಭಕ್ತಿ ಎಷ್ಟು ಪ್ರಭಾವಯುತವಾದುದು ಮತ್ತು ಪವಿತ್ರತನುವಾದುದು! ವಿಧೇಯಕೆಯು ವಿದ್ಯಾರ್ಥಿ ಜೀವನದ ಮೂಲಮಂತ್ರ. ಅದು ಭಕ್ತಿಯ ಒಂದು ಅವಿಭಾಜ್ಯ ಅಂಗ ಪ್ರೇಮ, ವಿಧೇಯತೆ, ಆತ್ಮ ವಿಶ್ವಾಸಗಳನ್ನು ಜೊತೆಗೆ ಬೆಸೆದಾಗ ಭಕ್ತಿ ರಸೋತ್ಪನ್ನವಾಗುವುದು.

ಭಕ್ತಿರಸವನ್ನು ಹರಿಸಿ ಮುಕ್ತಿಯನ್ನು ಕಾಣಬೇಕೆಂದು ಅಭ್ಯೇಪಿಸಿಟ್ಟುಕೊಂಡು ಅನೇಷ್ಟು ಭಕ್ತಾಗ್ರಣಿಗಳು ಬಿದ್ದಿ ಪಡೆದಿಲ್ಲ. ಆ ಭಕ್ತಗಣವೂ ಅಪಾರ ಒಟ್ಟನಲ್ಲಿ ಚಿತ್ಕೈಕಾಗ್ರತ ಅತಿಮುಖ್ಯವೆನಿಸುವುದು.

ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ 'ಮನ್ಮನೋಮದ್ಭಾರ್ಗಿಹಂಚ' ಎಂದು ಸಾರಿದ್ದಾನೆ. ಜಾಂಜಲ್ಯಯುತವಾದ ಮನಸ್ಸು ನಮ್ಮನ್ನು ಚಂತನೆಯ ಕಡಲಲ್ಲಿ ಮುಳುಗೇಳಿಸುವುದು. ಚಿತ್ತ ವಿಕಾರತೆಗೆ ಎಡೆ ಕೊಡುವುದು ಅಂತಹ ಚಂಚಲತೆಯನ್ನು ದೂರೀಕರಿಸುವಲ್ಲಿ ಯೋಗಸಾಧನೆ ಪ್ರಧಾನ ಪಾತ್ರವಹಿಸುವುದು.

"ಸತ್ಯ, ಸದಾಚಾರ, ಸದ್ವಿಚಾರ, ಸ್ವಪ್ರಜ್ಞೆಗಳು ಮೂರ್ತಿವೆತ್ತು ನಿಂತಾಗ ನಾವು ಭಕ್ತಿಯು ಆಗಮಕ್ಕೆ ಗಮನ ಗೈದಂತೆ ಭಾಸವಾಗುವುದು' ಇದೊಂದು ಅನುಭವೋಕ್ತಿ.

ಆಧುನಿಕ ಭಕ್ತಿ:—ಈಗಿನ ಭಕ್ತಿ ವಿಚಿತ್ರತರವಾದುದು. ಭಕ್ತರು ಸಹಾ ವಿಶಿಷ್ಟರಾದವರು. ಭಕ್ತಿಯ ಆದಿಯಲ್ಲಿ 'ಆಡಂಬರದ' ಎಂಬ ಪದ ಬರೆದು ಓದುವುದೊಳಿತು. ಆವು ಕೊರಳ ಮೇಲಿಂದ ಹೊರ ಬಾಮುಕುವ ಭಕ್ತಿ, ಸ್ವಾರ್ಥಕ್ಕಾಗಿ ತೋರ್ಪಡಿಸುವ ಭಕ್ತಿ. ಆಡಂಬರಯುತ್ತ ಭಕ್ತಿ, ಅಂತರಾತ್ಮನಡೆಯಿಂದ, ಅನಂತದಾಳದಿಂದ, ಹೊರ ಹೊಮ್ಮಿ ಹೊನಲಾಗಿ ಹರಿಯುವ ಭಕ್ತಿಯದಲ್ಲ, ಸ್ವಾರ್ಥಕ್ಕಾಗಿ ಲಾಭದ ಶಕ್ತಿಯಾಗಿ ಭಕ್ತಿಯನ್ನು ಸನ್ನೆ ಕೋಲುಗಿ ಉಪಯೋಗಿಸುವುದು.

ಕೆಲವರು ಬಹಳ ಭಕ್ತಿಭಾವದಿಂದ ರಾಮಮಂದಿರವು ನಿಂತು ಭಜನೆಗೈದ ಅಜನೇಯನಂತೆ (ಆತನ ನೈಜ ಭಕ್ತಿ ಅನುಪಮವಾದುದು) ಶಕ್ತಿವಿಹಿ 'ಭಕ್ತಿ ನಾಟಕ' ಪ್ರದರ್ಶಿಸುವುದುಂಟು. ಕೈ ಜೋಡಿಸಿ ಅನನ್ಯ ಭಾವದಿಂದ ವಂದಿಸುವುದುಂಟು (ನಿಃಸ್ವಾರ್ಥಯುತವಾದ ಭಕ್ತಿ ನಿತ್ಯ ಶ್ರೇಷ್ಠ) ಸ್ವಾರ್ಥಕ್ಕಾಗಿ ಉಪಯೋಗಿಸುವ ಭಕ್ತಿ, ಸೌಜನ್ಯ, 'ಡಾಂಭಿಕ ಭಕ್ತಿ' ಎನಿಸುವುದು; ಏನಾ ಆಶ್ಚರ್ಯ ಭಕ್ತಿ ಎನಿಲಾರದು. ಗಾಂಧೀಜಿಯವರು Truth is my religion and Ahimsa is the only way of its realization ಎಂದು ಸಾರಿದ್ದಾರೆ. ಇಂತಹ ದೃಢ ಮನಸ್ಕರಾಗಲು, ಕಾರ್ಯ ಮೂಲಕ ಅದನ್ನು ತೋರಿಸಲು ಮುಂದಾದ, ಮತ್ತು ಯಶಸ್ವಿಗೊಂಡ ಅವರ ಅಚಲ ಭಕ್ತಿ ಎಷ್ಟು ಶ್ರೇಷ್ಠ.

ನಮ್ಮ ಹಿರಿಯರು, ಪಾವಿತ್ರ್ಯದ ಕರೆ ತಲಪಿಸಿದವರು. ಭಕ್ತಿಯು ಮುಕ್ತಿಗೆ ಏಕ ಮೇವ ಮಾರ್ಗ ಅಂದಿದ್ದಾರೆ.

ಭಕ್ತಿಯ ಕುಲುಮೆಯಲ್ಲಿ ಈ ಕಾಯ ಬೆಂದು ನೀರಾಗಬೇಕು. ನಮ್ಮೆದೆಯ ಚಿಲುಮೆಯಲ್ಲಿ ಭಕ್ತಿ ಧಾರೆ ಹೊಂ ಚಿಮ್ಮಬೇಕು. ನರನಾಡಿಗಳಲ್ಲಿ ಭಕ್ತಿರಸ ಉಕ್ಕಿ ಹರಿಯಬೇಕು. ವಂಚನಾತ್ಮಕವಾದ, ಕಪಟ ಭಕ್ತಿಯನ್ನು ದೂರೀಕರಿಸಬೇಕು. ಮನೋವಾಕ್ ಕಾಯಗಳಲ್ಲಿ ಮುಗ್ಧ ಭಕ್ತಿಯ ಜ್ಯೋತಿಯನ್ನು ಬೆಳಗಬೇಕು. ಇದೇ ಪಥವನ್ನು ಹಲವು ಭಕ್ತ ಶ್ರೇಷ್ಠರು ತುಳಿದಿದ್ದರು.

ಭಕ್ತಿಗೆ ವಿಶ್ವಾಸದ ಅವಿನಾಭವನ್ನು ನಿರ್ಮಿಸಿ ಇತ್ಯೂಭ ಭಕ್ತಿಯ ಅರಳುಗಳನ್ನು ಅತ್ಮನಿಗೆ ಅರ್ಪಿಸಬೇಕು. ಶುದ್ಧ ಮನಸ್ಸಿನಿಂದ ಅಂತರಾತ್ಮನ ಸೇವೆಗೈಯ ಬೇಕು. ಇದೇ "ಮುಕ್ತಿಯ ದಾರಿ' ಎಂದು ಯೋಗಿಗಳ ಅಭಿಪ್ರಾಯ.

ನಿರ್ವಾಜನಾತ್ಮಕವಾದ ಭಕ್ತಿಗೆ ಸೃಷ್ಟಿಕರ್ತನು ಎನ್ನನ್ನು ಕೊಡುವನು. ಅರ್ಜುನನ ಉಜ್ವಲ ಭಕ್ತಿಯ ಜ್ವಲಂತ ಉದಾಹರಣೆಯನ್ನಿಲ್ಲಿ ನಾವು ಸ್ಮರಿಸಬಹುದು. ಗೀತಾಚಾರ್ಯನಾದ ಶ್ರೀಕೃಷ್ಣ ಪಾರ್ಥನ ಮುಗ್ಧ ಭಕ್ತಿಗೆ ಮೆಚ್ಚಿ ವಿಶ್ವರೂಪ ದರ್ಶನವಿತ್ತ. ಆದರಿಂದ ಅರ್ಜುನ ಕೃತಾರ್ಥನಾದ ಲೋಕಿ ಕೃಷ್ಣಸ್ಪರ್ಶನಾಯಕ ಭಕ್ತಿಗೆ ಮೂರು ಯೋಗಿ ಮುಕ್ತಿಯು ಪಥವನ್ನು ಅರಸುತ್ತ ರಾಜ ವೈಭವದಲ್ಲಿ ದ್ದ ರತ್ನ ರಾಶಿಗಳನ್ನೇ ದಾನಮಾಡಿ ಕೃಷ್ಣಾಂತರಾಳದಲ್ಲಿ ಭಕ್ತಿಯ ವೀಣೆಯನ್ನು ಮಿಡಿಯುತ್ತ ಶೈಶವತ್ಯತೆಯನ್ನು ಪಡೆದ.

ಭಕ್ತಿ ಭಂಡಾರಿ ಬಸವಣ್ಣನವರ ಭಕ್ತಿಯೂ ಅದೇ ಪೆರನಾದುದು.

ಜ್ಞಾನಮಾರ್ಗ ಮತ್ತು ಕರ್ಮಮಾರ್ಗ ಭಕ್ತಿಯ ಸೂರಕ ಪಥಗಳು. ಅವು ಭಕ್ತಿ ವರ್ಧನದಷ್ಟು ಪ್ರಭಾವಶಾಲಿಗಳಲ್ಲ. ಭಕ್ತಿ ಮಾರ್ಗದ ವೈಶಿಷ್ಟ್ಯಗಳನ್ನು ಬಸವಣ್ಣನವರು ಪ್ರತಿಪಾದಿಸುತ್ತಾ ಹೀಗೆ ಹೇಳಿದರು. 'ವೇದ ಪ್ರಿಯ ಶಿವನೆಂಬರು ನಾದಪ್ರಿಯ ಶಿವನೆಂಬರು,

ವೇದ ಪ್ರಿಯನು ಅಲ್ಲ, ನಾದ ಪ್ರಿಯನು ಅಲ್ಲ,

ಭಕ್ತ ಪ್ರಿಯ ನಮ್ಮ ಕೂಡಲ ಸಂಗಮ ದೇವ."

ಭಕ್ತಿ ಆತ್ಮ ಸಾಕ್ಷಾತ್ಕಾರಕ್ಕಾಗಿ ಅನುಸರಿಸುವ ಒಂದು ದಾರಿ. ಪ್ರಾಮಾಣಿಕ, ಆಡಂಬರ ರಹಿತ ಭಕ್ತಿ ಇವಕ್ಕೆ ಅಗತ್ಯ.

ಗುರುವು ಭಕ್ತನನ್ನು ಆಧ್ಯಾತ್ಮ ವರ್ಗಗದಲ್ಲಿ ಕೈ ಹಿಡಿವ ಮುನ್ನಡೆಸಿ ಪರಮ ಸಾಕ್ಷಾತ್ಕಾರಕ್ಕೆ ಸಹಾಯ ಮಾಡುತ್ತನೆ.ಆದುದರಿಂದ ಭಕ್ತನಿಗೆ ಗುರು ಏನ ಸಹಕಾರ ಅಗತ್ಯ. ಗುರುವಿ ಭಕ್ತರ ಹೃದಯದಲ್ಲಿ ಭಕ್ತಿ ಜ್ಯೋತಿಯನ್ನು ಬೆಗಿಸಲು ನೆರವಾಗುವನು.

ಧರ್ಮಕ್ಷೇತ್ರವಾದ ಕರ್ನಾಟಕದಲ್ಲಿ ಭಕ್ತಿಯು ಬೀಜವನ್ನು ಬಿತ್ತಿ ಅಪಾರ ಶಿಷ್ಯ ಸಮೂಹವನ್ನು ಸೃಷ್ಟಿಸಿದ ಬಸವಣ್ಣನವರ ವಿಚಾರಗಳು ಭಕ್ತನಿಗೆ ಮುಕ್ತಿಯ ಸಂಧಾನಕ್ಕೆ ಪ್ರಚೋದನೀಯವಾದುದು. ಸಂದೇಹವಿಲ್ಲದುದು.

ಒಟ್ಟಿನಲ್ಲಿ ಅನಾದಿಯಿಂದ ಆಚರಿಸಿಕೊಂಡು ಬಂದ ನಿಷ್ಕಲ್ಮಶ ಭಕ್ತಿಯು ಬೇಕು. ಅದೇ ಶಕ್ತಿ ಮುಕ್ತಿಗೆ ನಾಂದಿ ಮಂತ್ರ. ಅದೇ ಮುಕ್ತಿಯ ಏಕವೇವ ಸಾಧನ.

ಯಾವತ್ತೂ ನಾವಿನ ಭಂಡಾರಗಳಿಗೆ

ಯೋಗ್ಯವಾದ ನವೀನ ಪುಸ್ತಕಗಳ

ಬರಿದ ಮುಗಿಲು	1—೦
ಅನುವಾದಿತ ಕತೆಗಳು	1—೦
ಹಂಚಿ ನವೀನ	1—೨
ಮುಕ್ತಿನ ಹೂಲಿ	1—೦
ಹೂ ಗೊಂಚಲು	1—೦
ಪಂಚಗಜ್ಜಾಯ	1—೦
ನಕಾಂಕ ನಾಟಕಗಳು	1—೦
ಭಾರತದ ನಾಲ್ಕುಮುಖಗಳು	1—೦
ದೇಶವಿದೇಶದ ಮಾಹಿತಿ ಜೀವಿಗಳು	1—೨
ಹಂಗುಸಿದ ಕತೆಗಳು	2—೦
ನುಡಿಮುತ್ತುಗಳು	1—
ವಿಚಿತ್ರ ಕಳ್ಳಪೇಟೆ	1—
ಭಾರತದ ವೀರಾಂಗನೆಯರು	1—೦
ಪೋಕೂಟ್ಟ ಬಂಡೋಲೆ	1—
ಶಿಲ್ಪ	1—
ಪ್ರತಿಜ್ಞೆ, ಪೂರ್ತಿ	1—
ಘಂಟಮಾನಿ	೪—
ನೀತಿ ವಿನೋದ ಕತೆಗಳು	1—

ಕಡಿಮೆಗೆ ದರಿಯರು

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಸಂಪ್ರ - ಪುರೋಹಿತ ಸಹಿಸಲಾಗದು

(ಬಾಬೂಭಾಯಿ ಪಟೇಲ)

ನವ್ಯ ದೇಶದಲ್ಲಿ ಲೋಕಶಾಹಿ ರಾಜ್ಯ ವ್ಯವಸ್ಥೆ ಇ. ದನ್ನು ನಮ್ಮ ವಿಚಾರಗಳನ್ನು ವ್ಯಕ್ತ ಪಡಿಸಲಿಕ್ಕೆ ಸಾವದೇ ಪ್ರಕಾರದ ಬಂಧನವಿಲ್ಲ. ಇಷ್ಟೇ ಅಲ್ಲ! ಪತ್ರಿಕೆ, ಪುಸ್ತಕ, ಬಿಡಿ, ಮೆರವಣಿಗೆ, ಚರ್ಚೆ, ಮತ್ತು ವೃತ್ತಪತ್ರಗಳ ಮುಖಾಂತರ ನಮ್ಮ ವಿಚಾರಗಳನ್ನು ವ್ಯಕ್ತ ಪಡಿಸಲಿಕ್ಕೆ ಸಂಪೂರ್ಣ ಸ್ವಾತಂತ್ರ್ಯವಿದೆ. ಲೋಕಮತವನ್ನು ರೂಪಿಸಿಕ್ಕಾದ್ಯವಿದೆ. ಎಲ್ಲಪೆರದ ಜಿಕ್ಕದೊಡ್ಡ ಪ್ರಶ್ನೆಗಳನ್ನೂ ಶಕಲಾರುಗಳನ್ನೂ ಚರ್ಚಾಸಲಿಕ್ಕೆ ಲೋಕಶಾಹಿ ಪದ್ಧತಿಯಲ್ಲಿ ನಡೆ ಯುತ್ತಲಿರುವ ಗ್ರಾಮ ಪಂಚಾಯತಿ, ತಾಲೂಕು ಅಭಿವೃದ್ಧಿ ಮಂಡಳ, ಜಿಲ್ಲಾ ಅಭಿವೃದ್ಧಿ ಮಂಡಳ, ರಾಜ್ಯವಿಧಾನ ಸಭೆ, ಲೋಕಸಭೆ ಮೊದಲಾದವುಗಳು ಉಪಲಬ್ಧವಿವೆ. ಅಧಿಕೃತ ಪ್ರೇತ್ರದಲ್ಲಿ ಅನೇಕ ತರದ ಕಾಯದೆ ಬದ್ಧ ರೀತಿಯಲ್ಲಿ ಪ್ರಶ್ನೆಗಳ ಚರ್ಚೆ, ರಾಜಿ, ಒಪ್ಪಂದ ಹಾಗೂ ನ್ಯಾಯನಿರ್ಣಯದ ಮುಖಾಂತರ ಇತ್ಯರ್ಥಗೊಳಿಸಿಕೊಳ್ಳುವ ಅನುಕೂಲತೆ ಇದೆ. ಶಿಕ್ಷಣದಂಥ ಕ್ಷೇತ್ರದಲ್ಲಿ ಸಹ ಶಾಲೇಜ ಹಾಗೂ ವಿದ್ಯಾಪೀಠಗಳಲ್ಲಿ ವಿದ್ಯಾರ್ಥಿಗಳು ಆರಿಸಿದ ಪ್ರತಿನಿಧಿಮಂಡಳಗಳು ಇರುತ್ತವೆ. ಮತ್ತು ಅನೇಕ ತರದ ಪ್ರತಿನಿಧಿ ಸ್ವರೂಪದ ಸಮೀತಿ, ಸಂಡಿಕೇಟು, ಏಕೆಡೆಮಿಕ್ ಕೌನ್ಸಿಲ್ ಇರುತ್ತವೆ. ಸಾಮಾನ್ಯ ನಾಗರಿಕರ ಹಿತರಕ್ಷಣೆಕಾಗಿ ಕಾಯದೆ ಬದ್ಧವಾದ ವ್ಯವಸ್ಥೆ ಇರುತ್ತವೆ. ಮತ್ತು ಅವಶ್ಯವೆನಿಸಿದರೆ ಪಂಚಾಯತ್ ಮತ್ತು ಮುಖಾಂತರ ಪ್ರಶ್ನೆಗಳ ಇತ್ಯರ್ಥ, ಮತ್ತು ಚರ್ಚೆಯೂ ಆಗಬಹುದು.

ಇಷ್ಟೆಲ್ಲ ಅನುಕೂಲತೆಗಳು ಇರುತಿದ್ದಾ ಹರತಾಳ ಸಂಯು ಮಾಡಲಾದ್ದೂ ಗಳನ್ನು ಆಶ್ರಯಿಸುವದು ಎಂದೂ ಲೋಕಶಾಹಿಗೆ ಪೋಷಕವಲ್ಲ. ಲೋಕಶಾಹಿ ಇಲ್ಲದಲ್ಲಿ ಮತ್ತು ಈ ಪ್ರಕಾರದ ಪರಿವಾರು ವೈಧಾನಿಕ ಮಾರ್ಗಗಳು ಉಪಲಬ್ಧವಿಲ್ಲದಲ್ಲಿ ನೂತ್ಯ ನಿರ ಪಾಯವಾಗಿ ಸಂಘರ್ಷಕ್ಕೆ ಕಾರಣವಾಗಬಲ್ಲ ಪರಿಸ್ಥಿತಿಗಳನ್ನು ಆಶ್ರಯಿಸಬೇಕಾಗುತ್ತದೆ ಎಂಬ ದನ್ನೇ ನಾನು ಹೇಳಿದ್ದು.

ಇಂದು ನವ್ಯ ದೇಶದಲ್ಲಿ ಸಂಘರ್ಷ ನಡೆದಾಗ ಯೋಜಕರ ಇಚ್ಛೆ ಇರಲಿ ಇಲ್ಲದಿರಲಿ, ಬಲಾತ್ಕಾರ, ಉತ್ಪಾತ, ಕಲ್ಲು ತೂರಾಟ, ಆಸ್ತಿಪಾಸ್ತಿಗಳ ನಾಶ ಮೊದಲಾದವು ತಗದಿರುವದೇ ಆಸರೂಪ ತಮ್ಮ ನ್ಯಾಯವಾದ ಬೇಡಿಕೆಯನ್ನು ಸಂಪಾದಿಸುವ ಅಸ್ತ್ರವಾಗಿ ಸಂಪ ಹರತಾಳಗಳನ್ನು ಆಶ್ರಯಿಸುವವರೇ ಅನ್ಯರಿಗೂ ತಮಗೆ ಯೋಗ್ಯ ಕೆಂಡಂಗೆ ನಡೆಯಲಿಕ್ಕೆ, ಇರುವ ನ್ಯಾಯವಾದ ಹಕ್ಕನ್ನು ನಷ್ಟಪಡಿಸುತ್ತಾರೆ. ನಂತ್ರ ಅವರಿಗೂ ಸಹ ಸ್ವತಂತ್ರ ವಿಚಾರ ಮಾಡುವ ಹಾಗೂ ಅದರಂತೆ ನಡೆಯುವ ಸಕ್ಕಿದೆ ಎಂಬುದನ್ನೇ ದುರ್ಲಕ್ಷಿಸುತ್ತಾರೆ. ವಸ್ತು ತಮ್ಮ ಇಂಥ ವರ್ತನೆಯಿಂದ ಲೋಕತಾಹಿಗೂ ಮಾರ್ಗದಿಂದ ತಮ್ಮ ಹಕ್ಕುಗಳನ್ನು ಸಂಪಾದಿಸಬೇಕು ಎನ್ನುವವರೇ ಲೋಕಶಾಹಿ ಪದ್ಧತಿಯನ್ನು ಮುರಿಯೊಗೆಯುತ್ತಿದ್ದಾರೆ.

ನವ್ಯ ದೇಶವು ಇಂದು ಅನೇಕಾನೇಕ ಸಂಕಟಗಳೊಳಗಿಂದ ಮಾರ್ಗ ಕ್ರಮಿಸಬೇಕಾಗಿದೆ. ಆದ್ದರಿಂದ ಪರಮೋವಧಿ ಪರಿಶ್ರಮ ನೂಡಿ, ಪರಮೋವಧಿ ಉತ್ಪಾದನೆ ಮಾಡುವ, ಮತ್ತು ನವ್ಯ ಪದ್ಧತಿ ಇದ್ದದ್ದರಲ್ಲಿ ಒಂದಿಷ್ಟಾ ಹಾಗಾಗದಂತೆ ಜಾಗ್ರತೆ ವಹಿಸಿ ಉಪಯೋಗಿಸಿಕೊಳ್ಳುವದೂ ಅವಶ್ಯವಿದೆ. ಇಂಥ ಪರಿಸ್ಥಿತಿಯಲ್ಲಿಯ ಸಂಘ ಹರತಾಳಗಳಿಂದ ದೇಶದ ಪರಿಸ್ಥಿತಿ ಇನ್ನಿಷ್ಟು ಕೆಡುತ್ತದೆ. ಉತ್ಪಾದನವನ್ನು ಇನ್ನಿಷ್ಟು ಕಡಿಮೆಯಾಗತ್ತದೆ. ಹೂಡಿಕೆಗೆ ವಿಲಂಬವಾಗಿ ಬೆಲೆಗಳು ಇನಿಷ್ಟು ಏರುತ್ತವೆ. ವ್ಯವಸ್ಥಾ ಖರ್ಚು ಜಾಗೂ ದುರಸ್ತಿ ಖರ್ಚು ಹೆಚ್ಚಾಗಿ ಜನರ ಮೇಲೆ ಕರಭಾರ ಹೆಚ್ಚುತ್ತದೆ. ಮತ್ತು ರಾಷ್ಟ್ರಕ್ಕೆ ಭಾರೀ ನಷ್ಟ ಶಬ್ದಿ ಭಯಾನಕ ಪರಿಸ್ಥಿತಿ ಉಂಟಾಗುತ್ತದೆ.

ಜವಾಬುದಾರಿಯಿಂದ ವರ್ತಿಸಿ ವಿಚಾರ ವಿನಿಮಯದ ಮುಖಾಂತರವೇ ಪ್ರಶ್ನೆ ಬಗೆಹರಿಸಿಕೊಳ್ಳುವದೂ ವಿರುದ್ಧ ಪಕ್ಷನ್ನು ನಿರಾತಂಕ ಪಟ್ಟು ಅನುಚಿತ ಮಾರ್ಗಕ್ಕೆ ಎಳಸದಂತೆ ನೋಡಿಕೊಳ್ಳುವದೂ ಜವಾಬುದಾರ ಜನರ ಕರ್ತವ್ಯವಿರುತ್ತದೆ. ಮತ್ತು ಗಂಭೀರ ಪರಿಸ್ಥಿತಿ ಉಂಟಾದ ಮೇಲೆ ಸಂಘ ಹೋರಾಗೀ ಗಳ ನಿರ್ಣಾರ ಮಾಡುವದ ದಲ್ಲಾ ಉಭಯ ಪಕ್ಷದ ಪ್ರತಿನಿಧಿಗಳಾ ಒಂದೆಡೆ ಕೂಡಿ ಮಾರ್ಗ ತೆಗೆಯುಬೇಕು. ತಮ್ಮ ಹಿತಕ್ಕಿಂತ ರಾಷ್ಟ್ರಹಿತ ಹೆಚ್ಚಿನದು ಎಂಬುದನ್ನು ಒಕ್ಕದಲ್ಲ ಇಂಥ ತಮ್ಮ ನಿರ್ಣಾರವು ಗೌಣ ಎಂದು ಎಣಿಸಿ ಶಾಂತಿಯುಯ ಮಾರ್ಗದಿಂದಲೇ ಪರಿಸ್ಥಿತಿಗೆ ಹೊಂದಿಕೊಂಡು ಪರಸ್ಪರರ ಅಕ್ಕೈಯ ಭಾವನೆಯಿಂದ ಪರಿಹಾರವನ್ನು ಕಂಡು ಕೊಳ್ಳಬೇಕು. ಇದೇ ರಚನಾತ್ಮಕ ಮಾರ್ಗವಾಗಿದೆ. ಈ ರೀತಿಯಲ್ಲಿ ರಾಜಿಯಿಂದ ಬಗೆಹರಿಯಲಿಲ್ಲದೆ ಶಕ್ತಿಯಿಂದಲೇ ಹೋದಲ್ಲಿ ಸ್ವಸಂತೋಷದಿಂದ ಪಂಚ ನಿರ್ಣಯಕ್ಕೆ ವಹಿಸಬೇಕು. ಮತ್ತು ಅದೂ ಸಾಧ್ಯವಾಗದಿದ್ದಲ್ಲಿ ನ್ಯಾಯಾಲಯಕ್ಕೆ ಹೋಗಬಹುದು. (ಪ್ರಜಾಪ್ರಭುತ್ವದಿಂದ)

ಸ್ತ್ರೀ ಪುರುಷರೆಲ್ಲರ ನಂಬಿಕೆಗೆ ಅರ್ಹವಾದ
"ನವಜೀವ ಕಲ್ಪಂ" (ರಿ.)
(ಆಯುರ್ವೇದಿಯ ಟಾನಿಕ್)
ಕಸ್ತೂರಿ ವರ್ಧಕ, ಆರೋಗ್ಯದಾಯಕ ಹಾಗೂ ಉಲ್ಲಾಸಕರ ಟಾನಿಕ್
ಖಾತರಿಯಾದ ಆಯುರ್ವೇದ ಔಷಧಿ ಮತ್ತು ದಕ್ಷ ವೈದ್ಯಕೀಯ
ಸಲಹೆಗಳಿಗೆ, ಇವರಿಗೆ ಬರೆಯಿರಿ

ದಿ ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ.

ರಿಜಿಸ್ಟರ್ಡ್ ಆಫೀಸು:—ಲೈಟ್ ಹೌಸ್ ಹಿಲ್ ರೋಡು, ಮಂಗಳೂರು—3

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ವಿನ್ಯಾಛಿನ ನಗದಗಳ ಆಡಿನ ಮೇಲೆ ಪಡೆದ ಸಾಲವನ್ನು ವ್ಯಾಪಾರೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ, ರಿಜಿಸ್ಟರ್ಡ ನೋಟೀಸು ಮೂಲಕ ಕೇಳಿ ಕೊಂಡಿದ್ದರೂ ಕೆಲವರಿಗೆ ರಿಜಿಸ್ಟರ್ಡ ನೋಟೀಸು ಗಳು ಕಾರಣಾಂತರಗಳಿಂದ ಸಮಯೋಚಿತ ವಾಪಾಸು ಬಂದಿರುವುದರಿಂದಲೂ ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ, ಸದ್ರಿ ಯವರಿಗೆ—ಪ—ಅವರ ವಾರಿಸುದಾರರಿಗೆ ಈ ಮೂಲಕ ಕೇಳಿಯಪಡಿಸುವುದೇನೆಂದರೆ, ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾರೀಕು 31ರ ಒಳಗಾಗಿ ಬೇಂಕಿಗೆ ವಾರಿಸಾಗತಿ ಮಾಡಲು ತಪ್ಪಿದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗದಗಳನ್ನು ತಾರೀಕು 11—11—1967ನೇ ಶನಿವಾರ ಪ್ರಧ್ಯಾಹ್ನ ಗಂಟೆ 12ಕ್ಕೆ ಸರಿಯಾಗಿ ಬೇಂಕಿನ ಪಂಚಾರದಲ್ಲಿ ಬಹಿರಂಗ ಹರಾಜು ಮಾಡಲಾಯಿತು—ಯೂ—ಬೇಂಕಿಗೆ ಯಾವ್ದ ಕಂಡ ಇತರ ದಿನಗಳಲ್ಲಿ ಪುನ: ನೋಟೀಸು ಕೊಡದೇನೇ ಬಹಿರಂಗ ಯೂ—ಜಾಗಿಯಾಗಿ ಹರಾಜು ಮಾಡಲಾಯಿತು.; ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು—ವೆ—ನಷ್ಟವನ್ನು ತೆರಲು ಸದ್ರಿ ಸಾಲಗಾರರು ಮ ಅವರ ವಾರೀಸು ದಾರರು ಜವಾಬುದಾರರಾಗಿರುತ್ತಾರೆ ತಿಳಿದಿರಲಿ.

ಸಾಲದ ಖಾತ್ರಿ ನಂಬರು	ಸಾಲಗಾರನ ಹೆಸರು ಮತ್ತು ವಿಳಾಸ	ಮೊಬಲಗು ರೂ. ಪೈಸೆ
64/66	ವಂಕಟ ಭಟ್ಟ, ಈಶ್ವರ ಭಟ್ಟರ ಮಗ, ಕಲ್ಲಾಡಿ ಗ್ರಾಮ ಮತ್ತು ಪೋಸ್ಟ್, ಕುಂದಾಪುರ ತಾಲೂಕು.	148—75
18/66	ಎ. ಸುಂಕರ ಪೆಜ್ಜರ್, ವಂಕಪ್ಪ ಪೆಜ್ಜರರ ಮಗ, ಆನೆಗಲ್ಲಿ ಗ್ರಾಮ ಮತ್ತು ಪೋಸ್ಟ್, ಕುಂದಾಪುರ ತಾಲೂಕು.	245—00

ಕುಂದಾಪುರ
17—10—67

ಕೆ. ಶೀನಪ್ಪ ರೈ
ಮೆನೇಜರ್

ಕುಂದಾಪುರ ವಜ್ರಿಸ್ಟಾ ಕೋರ್ಟ್‌ನಲ್ಲಿ

O. S. 241/67

ವಾದಿ—ಬಿಲ್ಲಾಡಿಬೆಟ್ಟು ರಾಮಯ್ಯ ಶೆಟ್ಟಿ
ಪ್ರತಿವಾದಿ—N. ನಂಜಯ್ಯ ಶೆಟ್ಟಿ

ಕುಂದಾಪುರ ತಾಲ್ಲೂ ನಾಡವಿ ಗ್ರಾಮದ ಪ್ಲರುವ ಬಿಲ್ಲಾಡಿಬೆಟ್ಟು ರಾಮಯ್ಯ ಶೆಟ್ಟಿ ಮಗ, ನ S K Central Co-operative Whole Sale Stores Ltd. Mangalore ಯಿಂದ ನಾಕಂಡಾಗಿದ್ದಿದ್ದ, ಪ್ರತಿವಾದಿ N ನಂಜಿಂಪ ಶೆಟ್ಟಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಪ್ರತಿವಾದಿಯಿಂದ ವಾದಿಗೆ ತಾ—7—6—640 ರೂಪಾಂಡ ನೋಟು ಪ್ರಕಾರ ಬರತಕ್ಕ ಋಣ ಬಡ್ಡಿಯನ್ನು ಬಾಸುವಿಕೊಳ್ಳುವ ಬಗ್ಗೆ ವಾದಿ ಮೇಲ್ಕು ಪೂರಿತ ಮೇಲಿನ ದಾವಾ ಮೇಲ್ಕಾಣಿಸಿದ ಕೋರ್ಟಿನಲ್ಲಿ ತಾ 20—11—1967ನೇ ದಿನ ಬೆಳಿಗ್ಗೆ 11 ಗಂಟೆಗೆ ಕ್ರಮ ಯಿಡೆಯಾಗಿದ್ದ ಎಂಬ ಸಂಗ್ತಿ ಈ ಮೂಲಕ ಪ್ರತಿವಾದಿಗೆ ತಿಳಿಸಲಾಗಿದೆ. ಆಕ್ಷೇಪಯುದ್ದರೆ ಸದ್ರಿ ದಿನ್ನ ಹಾಜರಿ ಮಾಡಿಕೊಳ್ಳತಕ್ಕದ್ದು ತಿಳಿದಿರುವುದು.

B. S. Shetty
Vakil for Plaintiff

Coondapoor, 20—10—67

ಒಂಭತ್ತು

ಎಲ್ಲೆಲ್ಲಿ ಏನೇನು?

ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಸ್ಥಾಪಿಸುವ ಶ್ರೀ ಬಾಹುಬಲಿ ಏಗ್ರಹದ ಶಿಲಾಮುಹೂರ್ತ

ಕಾರ್ಕಳದ ೩೫ನೆಯ ವರ್ಷದ ಹಿಂದಿರುವ ಭಾರೀ ಬಂಡೆಕಲ್ಲಿಂದ ಏಗ್ರಹವಾಗಿ ಮೂರ್ತಿಸಿ ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಸ್ಥಾಪಿಸಲು ಧರ್ಮಾದರ್ಶಿ ಶ್ರೀ ವೀರೇಂದ್ರ ಹೆಗ್ಗಡೆಯವರು ಕಾರ್ಯೋನ್ಮುಖರಾಗಿದ್ದಾರೆಂದು ತಿಳಿದು ಬಂದಿದೆ.

ಏಗ್ರಹದ ತಯಾರಿಯ ಕೆಲಸವನ್ನು ಕಾರ್ಕಳದ ಶಿಲ್ಪಿ ಶ್ರೀ ಅರ್. ಗೋಪಾಲ ಜನಾರ್ಧನ ರೆಂಜೆಯವರಿಗೆ ವಹಿಸಲಾಗಿದೆ. ತಾ. 13ರಂದು ಶಿಲಾಮುಹೂರ್ತವನ್ನು ಶ್ರೀ ಹೆಗ್ಗಡೆಯವರ ಚಿರಂಜೀವಿಯಾದ ಶ್ರೀ ವೀರೇಂದ್ರ ಕುಮಾರರವರ ನೇತೃತ್ವದಲ್ಲಿ ನೆರವೇರಿಸಲಾಯಿತು. ಅಂದು ಪ್ರಾತಃಕಾಲ ಶ್ರೀ ಗೋಪಾಲ ರೆಂಜೆಯವರು ಕಲಾಕಾರ್ಯಕ್ಕೆ ನಾಂದಿಯನ್ನು ಹಾಕಿದರು.

ಏಗ್ರಹ ರಚನಾ ಕಾರ್ಯವು ಕೇವಲ ಒಂದು ವರ್ಷದೊಳಗೆ ಮುಗಿಯಬಹುದೆಂದೂ ಸುಮಾರು 300ರಿಂದ 500ಕ್ಕೂ ಹೆಚ್ಚು ರೂ. ಗಳವರೆಗೆ ನೆರವು ಬಹುದೆಂದೂ ಅಂದಾಜು ಮಾಡಲಾಗಿದೆ. ಕಲ್ಲಿನ ಉದ್ದವು 80ಅಡಿಗಳಿಗೂ ಮಿಕ್ಕಿ ಆಗಲಿವೆ 18 ಅಡಗಳಷ್ಟಿದ್ದು, 8ಅಡಿ ಬಿಸ್ತಾರವಿದೆ. ಇದನ್ನು ಸುಮಾರು 12 ಅಡಿ ಎತ್ತರದ ಏಗ್ರಹವನ್ನಾಗಿ ಮೂರ್ತಿಸುವ ಅಂದಾಜು ಮಾಡಲಾಗಿದೆ.

ಯಕ್ಷಗಾನ ಕಲಾ ತರಬೇತಿ ಕೇಂದ್ರದ ಉದ್ಘಾಟನೆ

ಬ್ರಹ್ಮಾವರದಲ್ಲಿ ಯಕ್ಷಗಾನಕಲಾತರಬೇತಿ ಕೇಂದ್ರದ ಉದ್ಘಾಟನಾ ಸಮಾರಂಭವು ತಾ. 16ರಲ್ಲಿ ಶ್ರೀ ಬಿ. ರಮೇಶ ಪೈಗಳಿಂದ ನೆರವೇರಿಸಲ್ಪಟ್ಟಿತು. ಕೇಂದ್ರದ ನಿರ್ದೇಶಕರಾದ ಡಾ|| ಕೆ. ಶಿವರಾಮ ಕಾರಂತರು ಕಥಕಳಿ ನೃತ್ಯಕ್ಕೆ ಕಲಿಯಲ್ಲಿರುವ ಸ್ಥಾನವನ್ನು ವಿವರಿಸಿ ಜನರಿಗೆ ಕಲಿಯಲ್ಲಿ ಅಭಿರುಚಿ ಹೆಚ್ಚಬೇಕೆಂದು ಯಕ್ಷಗಾನವನ್ನು ಹೆಚ್ಚಾಗಿ ಪ್ರೋತ್ಸಹಿಸುವಂತೆ ಕರೆಕೊಟ್ಟರು. ಈಗ ಕಲಿಯನ್ನೇ ಆಸರೆಯಾಗಿಸಿಕೊಂಡಿರುವ ಹಲವು ವೃತ್ತಿಗಳ ಕಾರಂತರಂಥ ಇದು ನಶಿಸಿಹೋಗಬಾರದೆಂಬ ದೃಷ್ಟಿಯಿಂದ ಈ ಕೇಂದ್ರವನ್ನು ತೆರೆಯಲಾಗಿದೆಯೆಂದರು.

ಈ ಕೇಂದ್ರಕ್ಕೆ ಮೈಸೂರು ಸಂಗೀತ ನಾಟಕ ಅಕಾಡೆಮಿಯವರೂ ಸಾಂಬಯ ಹಲವು ಮಿತ್ರರೂ ಸಹಾಯ ನೀಡುವೆಂಬುದಾಗಿ ಹೇಳಿಯವರಿದರು. ತರಬೇತಿಗಾಗಿ ಬಂದ ಹೊರಗಿನ ವಿದ್ಯಾರ್ಥಿಗಳಿಗೆ ವರ್ಷಕ್ಕೆ 300/ರೂ ಸ್ಕಾಲರ್ ಶಿಪ್ ಕೊಡಬೇಕಾಗಿದೆ. ಇದಕ್ಕಾಗಿ ನಮಗೆ ಕಲಾಭಿಮಾನಿಗಳ ನೆರವು ಅಗತ್ಯವಂದರು.

ಶ್ರೀ ಬೈರಾಡಿ ನಂಕಟಕೃಷ್ಣರಾಯರು ಸಂದೇಶ ವಾಚನ ನೂಡಿದರು ಶ್ರೀ ಕು. ಶಿ. ಹರಿದಾಸ ಭಟ್ಟರು ಕಾರಂತರ ಕಲಾ ಸ್ಫೂರ್ತಿಯಿಂದ ಕಲಾಸಿದ್ಧಿಯಾಗುತ್ತದೆಂದರು. ಇವರಿಗೆ ಮಂಜೇಶ್ವರ ಎಳಕೆಪಿ.ಯವರೂ ನೆರವಾಗಬೇಕೆಂದರು.

ಶ್ರೀ ಎ. ಜೆ. ಆಲ್ವೆಯವರು ಸಂಸ್ಥೆಯ ಪ್ರಾಮುಖ್ಯತೆಯನ್ನು ವಿವರಿಸಿದರು, ಕಾರಂತರು ಕಲೆಯು ಪರಿಣಾಮಕಾರಿಯಾಗುವಂತೆ ನೂಡಿರುತ್ತಾರೆಂದರು.

ಶ್ರೀ ಟಿ. ರಮೇಶ ಪೈಗಳು ತಮ್ಮ ಭಾಷಣದಲ್ಲಿ ಈ ಸಂಸ್ಥೆಯ ಸ್ಥಾಪನೆಗೆ ಬಹಳ ಕಷ್ಟ ಕರವಾದುದೆಂದೂ ಡಾ|| ಕಾರಂತರ ಮಾರ್ಗದರ್ಶನದಿಂದ ಆದು ಉನ್ನತ ಸ್ಥಾನಗಳಿಸುವು ದರಲ್ಲಿ ಸಂದೇಹವಿಲ್ಲವೆಂದೂ ಹೇಳಿದರು.

ಸಿಂಡಿಕೇಟಿನ ಬಿದರ್ ಶಾಖೆ

ಸಿಂಡಿಕೇಟ್ ಬ್ಯಾಂಕಿನ ಬಿದರ್ ಶಾಖೆಯು ತಾ. 18—10—67ರಂದು ಡೋರ್ ನಂಬರ್ 6-3-67/2668, ಬಸವೇಶ್ವರ್ ಗಂಜ್ ಬಿದರ್ [ಮೈಸೂರು ರಾಜ್ಯ] ಎಂಬಲ್ಲಿ ತೆರೆಯಲ್ಪಟ್ಟಿದೆ, ಬಿದರ್ ಜಿಲ್ಲೆಯಲ್ಲಿ ಬಿದರ್ ಶಾಖೆಯೂ ಸಿಂಡಿಕೇಟಿನ ಎಂಡನೆ ಶಾಖೆಯೂ ಆಗಿದೆ. ಈ ಶಾಖೆಯು ತೆರೆಯುವಿಕೆಯಿಂದಾಗಿ ಸಿಂಡಿಕೇಟ್ ಬ್ಯಾಂಕಿಗೆ ಈಗ 218 ಶಾಖೆಗಳಾದಂತಾಯಿತು. ಬಿದರಿನ ಜನತೆಯಿಂದ ಕೃಷಿಕರು, ಕೈಗಾರಿಕೆ ಮತ್ತು ವ್ಯಾಪಾರೋದ್ಯಮಿಗಳಿಂದ ಸಿಂಡಿಕೇಟಿನ ಒಂದು ಶಾಖೆಯು ಸ್ಥಾಪನೆಯಾದೊಡನೆ ಬಂಡವಾಳ ಸ್ವಾಗತಿಸಲ್ಪಟ್ಟಿತ್ತು. ಸಿಂಡಿಕೇಟು ಬ್ಯಾಂಕು ಬಿದರ ಜಿಲ್ಲೆಯನ್ನು ಕೃಷಿ ಆರ್ಥಿಕ ಸಬಲತಿನ ಯೋಜನೆಗೆ ಆಯಸ್ಕಿದ್ದು ಅಲ್ಪಾವಧಿ ಮತ್ತು ಮಧ್ಯಾವಧಿಯ ಸಾಲವನ್ನು ಹೊರತೂ ಟ್ರಾಕ್ಟರುಗಳಿಗೆ ಸಾಲವನ್ನು ನೀಡುವುದರಿಂದ ಈ ಜಿಲ್ಲೆಯ ಪ್ರಗತಿಯು ಹೊಸ ದಾರಿಯನ್ನು ತುಳಿಯಲಿದೆ. ಬಿದರ್ ಜಿಲ್ಲೆಯ ಆರ್ಥಿಕ ಅಭಿವೃದ್ಧಿಯಲ್ಲಿ ಸಿಂಡಿಕೇಟ್ ಶಾಖೆಯು ತೆರೆಯುವಿಕೆಯೂ ಒಂದು ಪ್ರಾಮುಖ್ಯ ಮೈಲುಗಲ್ಲಾಗಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

"ಕಾಯಕ ಮಾಡದವರಿಗೆ ಜೀವಿಸುವ ಹಕ್ಕಿಲ್ಲ"

ಸಾಗರ ನೀರ ಶೈವ ಸಮಾಜದವರು ಕಲ್ಯಾಣಮಂಟಪದಲ್ಲಿ ವರ್ಷಡಿಸಿದ್ದ ಸಭೆಯಲ್ಲಿ ಸಚಿವ ಶ್ರೀ ಬಿ. ಡಿ. ಜತ್ತಿಯವರು ಶ್ರೀ ಬಸವ ಜಯಂತಿಯ ಸಂಭ್ರಮದಲ್ಲಿ ಸಾಧಿಸಿದ ಆದ್ಯತ ಕಾರ್ಯಗಳನ್ನು ವಿವರಿಸಿದರು.

ಶ್ರೀ ಬಸವೇಶ್ವರರು 1191ರಲ್ಲಿ ಹುಟ್ಟಿ 1167ರಲ್ಲಿ ಶೈಷ್ಯೋನಂದರೆಂದೂ ಇವರು ಕಾಯಕ ಮಾಡದೆ ಯಾರಿಗೂ ಜೀವಿಸುವ ಹಕ್ಕಿಲ್ಲವೆಂದೂ ಘೋಷಿಸಿದ್ದರೆಂದೂ ಶ್ರೀ ಜತ್ತಿಯವರು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಮು. ನಿ. ಪ್ರಣವ ಸ್ವರೂಪಿಗಳಾದ ಶ್ರೀ ಶಿವಕುಮಾರ ಸ್ವಾಮಿಗಳು ವಿರಕ್ತ ಮಠ ತಿರಳ ಕೊಪ್ಪ ಇವರು ವಹಿಸಿದ್ದರು. ವೀರ ತೈವ ಸಮಾಜದ ಕಾರ್ಯದರ್ಶಿ ಶ್ರೀ ಕೆ. ಶಿವಾನಂದ ಪ್ರಭುವರು ಸ್ವಾಗತ ಭಾಷಣ ಮಾಡಿದರು.

ಶ್ರೀ ಬಿ. ಡಿ. ಜತ್ತಿಯವರು ಬೆಂಗಳೂರಲ್ಲಿ ಪಟ್ಟಸ್ಥಳದ ಸಾಮಿನೆಟಗಾಗಿ ಅವು ಅಂತಸ್ತಿನ ಕಟ್ಟಡವನ್ನು ಕಟ್ಟಿಸಿ ವಿದ್ಯಾರ್ಥಿಗಳಲ್ಲಿ

ತರಂಗ ಮಾಲೆ

ಕಡಲಿನ ತೀರದಿ
ತರಂಗ ಮಾಲೆಗ—
ಳೇಳುತ, ಬೀಳುತ, ನಲಿಯುತಿವೆ;
ಹೊನ್ನಿನ ರೂಪವ
ತಾಳುತ, ಉಡುಗುತ
ನೇಸರ ಗೆಳೆತನ ಬೆಳೆಸುತಿವೆ.
ಜಲದೊಳು ರವಿತಾ
ಮುಳುಗುವ ಸಮಯದಿ
ಕೆನ್ನೀರಿನ ತರವಾಗುವುವು
ಬಾನಿನ ವರ್ಣವ
ತನ್ನೊಳು ಕರಗಿಸಿ
ಫೀನಿಗೆ ಬಣ್ಣವ ಕೊಡಿಸುವುವು.
ಭರದಲಿ ಏಳುವ
ತೆರೆಗಳ ಗರ್ಜನೆ
ಮನವನು ಜಾಗ್ರತಗೊಳಿಸುವುದು
ಸೃಷ್ಟಿಯ ರಚನೆಯ
ವಿಚಿತ್ರ ರೂಪವ
ವಿಶ್ವದ ಜನತೆಗೆ ತೋರುವುದು.
ಹಾರುವ ತೆರೆಯೊಳು
ಆಡಗಿಹ ನೊರೆಗಳು
ಸೀರೆಯ ಸೆರಗಿನ ತರದಲಿವೆ,
ಸಮುದ್ರ ರಾಜನ
ಕಾಲೊಳು ಗೆಜ್ಜೆಗ—
ಳನುದಿನ ನಪ್ಪಳ ಮಾಡುತಿವೆ.

—ನ. ಭ. ನೆಂಪು.

ನಮ್ಮ ಭಾರತ

ಒಹೋ... ನಮ್ಮ ಭಾರತ
ಭರತ ಜನ್ಮಭೂಮಿ ಭಾರತ
ಪುಣ್ಯ ಭೂಮಿ ಭಾರತ

ಇಲ್ಲಿ ನೆಹರು ಜನಿಸಿ ಬೆಳೆದರು
ಏಕ್ಯ ಶಾಂತಿಗಾಗಿ ದುಡಿದರು
ಲೋಕವೆಲ್ಲ ಸುತ್ತಿ ಮೆರೆದರು

ತಿಲಕ ಗಾಂಧಿ ಮಹಾತ್ಮರು
ವಲ್ಲಭ, ಲಾಲ ವೀರರು
ಭರತ ಮಾತಾ ಪುತ್ರರು

ದೇಶಕಾಗಿ ದುಡಿದವರಿವರು
ದೇಶಕಾಗಿ ಮಡಿದವರಿವರು
ವಿಶ್ವ ಖ್ಯಾತಿ ಪಡೆದವರಿವರು

— ಕೆ. ಟಿ. ಸ್ವಾಮಿ
ನಾಯಕನಹಟ್ಟಿ

ನಡೆಯುವ ಕಾರ್ಯಕ್ರಮವು ಇದ್ದಿಯೂ ನಡೆಯುವುದೆಂದೂ ಶ್ರೀ ಬಸವೇಶ್ವರರ ಕಾಲದ ವೇದಾಲಯಗಳು ಜೀರ್ಣೋದ್ಧಾರವಾಗುವೆಂದೂ ತಿಳಿಸಿದರು.

ನೀನು-ನಾನು

ನೀನು—ಕಾವ್ಯ ಚಂದಿರ
ನಾನು, ಕವನಗಾರ ತಾರ
ನಿನ್ನ ಮಂದಿರ ಸುಂದರ
ನನಗು—ನಿನಗು ಹತ್ತಿರ

ನಿನ್ನ ಮಿರುಗು ನಯನ
ನನ್ನ ನಿನ್ನ ಮಿಲನ
ಅದುವೇ ಮಧುರ ಕಲ್ಪನಾ
ಬಂದು ನಿಂತ ಭಾವನಾ !

ಇಂದಿಗೆ ವರುಷ ಹಿನ್ನ— ನನ್ನ ವರಿಚ್ಛ
ನೀನು ಜಯ— ವಿಜಯ ಮಾಡು
ನೀನೆ ನನ್ನ ಚೇತನಾ
ನೀಡೆ ನಿತ್ಯ ಚೇತನಾ !

ಹಿನ್ನೆ ಸಚ್ಚಿತ್ ಪನಗೆ ಕನ್ನಡಿ
ನನ್ನ ಜೀವನ ಕನ್ನಡಿಗೆ ಮುನ್ನುಡಿ
ಇಂದಿನಿಂದ ನನ್ನ—ನಿನ್ನ ಶೋಭನ
ಸೌಖ್ಯ ಬಾಳನ ಸಂಭ್ರಮ !

— 'ಮಲ್ಲಾ

ಮಿತಸಂತಾನ

ಮೂರು ಮಕ್ಕಳ ಪಡೆದು ಮಿತ ಸಂತಾ
ನ
ಮೂರು ಮಕ್ಕಳ ಮನೆಯಲ್ಲಿ ಅರಸಾ
ಜ
ಎಲ್ಲರೂ ಪೇಳುವುದು ಶಾಸ್ತ್ರವಾ
ಇಕ್ಕುವುದೆಂ
ಹಾಳು ಜೀವನ ಮುಂದೆ ನೀ ತಳಿಯದಿ
ರು

ಪದ್ಧತಿ-ರದ್ದತಿ

ಮೈಸೂರು ದರಾ ಒಪ್ಪಿ ರದ್ದತಿ
ಆಯ್ತು
ವಿದೇಶಿ ಪ್ರವಾಸಿಗರ "ಪಯಣ"
'ಭೇಟಿ ಯೂ ಹೋಯ್ತು
ದರಾ ...ತ್ಸವ ಅಡಚಣೆಗಿನ್ನು
ತೆದೂ
ಹಳೆಯ ಜಂಬೂಸವಾರಿಗೂ ಜೀವದಾ

ಕನಕವಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭ್ರಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳನ್ನಷ್ಟೇ ಶಕ್ತರನ್ನಾಗುವಂತೆ ಮಾಡುವಲ್ಲಿ

ಬೆಲೆ: 0-19 ಪೈಸೆ.

ರಿಯರ ಪ್ರತಿಗಳಿಗೆ ವಿಚಾರಿಸಿರಿ:.

ಭವಯುಗ ಪ್ರೆಸ್, ಉಡುಪಿ

ನಿರೀಕ್ಷಿಸಿರಿ!

ಬರುವ ವಾರ ಪ್ರಕಟವಾಗಲಿದೆ —

ಪ್ರಸಿದ್ಧ ಲೇಖಕ—ಸಾಹಿತಿಗಳ
ಬರಹಗಳಿಂದ ಕೂಡಿದ

ದೀಪಾವಳಿ
ವಿಶೇಷ ಸಂಚಿಕೆ

ಚಂದಾದಾರರಿಗೆ ಉಚಿತ.

ಇತರರಿಗೆ 0—50 ಪೈಸೆ. 0—60 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಡಲಾಗುವುದು. ರೂ. 10/- ಕಳಿಸಿ ಹೊಸದಾಗಿ ಚಂದಾದಾರರಾಗುವವರಿಗೂ ಈ ಸಂಚಿಕೆಯನ್ನು ಉಚಿತವಾಗಿ ಕಳಿಸಲಾಗುವುದು.

ಮೇನೇಜರ್, ಭವಯುಗ, ಉಡುಪಿ

V. M. Hegde, Bijjal
P. O. Wajgod, Tq. Siddapur (N. K.)

ರಬ್ಬರ್ ಸ್ಟಾಂಪುಗಳು!!

ನಿಮಗೆ ಬೇಕಾಗುವ ಎಲ್ಲಾ ನಮೂನೆಯ
ಅಂದವಾದ ರಬ್ಬರ್ ಸ್ಟಾಂಪುಗಳಿಗೆ
ನಮ್ಮಲ್ಲಿ ವಿಚಾರಿಸಿರಿ:—

VINAYAKA STAMPS

ಇಂಗ್ಲೀಷ್, ಕನ್ನಡ, ಹಿಂದಿ, ತಮಿಳು ಭಾಷೆಗಳಲ್ಲಿ

ನಿಮ್ಮ ಮನ ಒಪ್ಪುವಂತೆ ಒದಗಿಸುತ್ತೇವೆ.
ವಿವರಗಳಿಗೆ ರಿಪ್ಲೈ ಕಾರ್ಡ್ ಇಟ್ಟು ಮೇಲಿನ ವಿಳಾಸಕ್ಕೆ ಬರೆಯಿರಿ.

ತಾತನ ನೆಲೆ

(ಎರಡನೇ ಪುಟದಿಂದ)

'ಸರಿ ಹಾಗೆ ಮಾಡಿ' ಎಂದರು ನೂಧವನ್.

ಊರ ಎಂದೊಡನೆ ತಾತನ ನೆನಪಾಗಿತ್ತು. ಆದೇ ನೆನಪನ್ನು ಮರೆಯುವೆ ಮನೆಗೆ ಬಂದಿದ್ದಳು. ಅಲ್ಲಿಗೆ ಹೋಗಲು ರೈಲು ಟ್ರಿಕೇಟು ಕೊಳ್ಳಲು ಆಳು ಕಳುಹಿಸಿದಳು.

ಅದೃಷ್ಟವಶಾತ್ ಎರಡು ದಿನಗಳಲ್ಲಿ ಪ್ರಯಾಣ ಮಾಡಲು ಟಿಕೇಟು ದೊರೆಯಿತ್ತು.

ತಾತನಿಗೆ, ತಾನು ಬರ್ತೇನೆ ಎಂದು ಮುಂಚಿತವಾಗಿ ತಿಳಿಸ ಬೇಕೋ ಬೇಡವೋ? ಎಂದು ಯೋಚಿಸಿ ಸೀಮೂ ಕೊನೆಗೆ ಬೇಡವೆಂದು ನಿಶ್ಚಯಿಸಿ, ತಾರು ಕೊಡದೆ ರೈಲು ಹತ್ತಿದಳು.

ಒಂದೂವರೆ ದಿವಸದ ಪ್ರಾಣಿ ಸಹ ಪ್ರಯಾಣಿಕರು ಡಬ್ಬಿಯಲ್ಲಿ ಒಬ್ಬಿಬ್ಬರ ಹೊರತು ಇನ್ಯಾರೂ ಇರಲಿಲ್ಲ. ಅವರೊಡನೆ ಮಾತನಾಡುವ ಗೋಜಿಗೆ ಹೋಗದೆ ಸೀಮೂ, ಹಾದು ಹೋಗುವ ಪ್ರದೇಶಗಳನ್ನು ಉಕ್ಷಿಸತೊಡಗಿದಳು.

ಇಕ್ಕೆಲಗಳಲ್ಲಿ ಪರ್ವತ ಪ್ರದೇಶಗಳು. ಫಲವತ್ತಾದ ಹೊಲಗಳು. ವಿಶಾಲವಾದ ಮೈದಾನು ಪ್ರದೇಶ. ಅಲ್ಲಲ್ಲಿ ಗಿಡ, ಮರಗಳೂ, ನಡು ನಡುವೆ ನಿಲ್ದಾಣದ ಸಣಿಕಪ ವಿರುವ ಪಟ್ಟಣಗಳು. ರೈಲು ಚಲಿಸಿದಂತೆ ಹಾದು ಹೋದಂತೆ, ಬಾಲ್ಯದ ನೆನಪಾಗ ಲಾರಂಭಿಸಿತು. ತಾತನ ಮನೆಯಿಂದ, ತಂದೆ ಮನೆಗೆ ಅವಸ್ಟು ಬಾರಿ ರೈಲಿನಲ್ಲಿ ಪ್ರಯಾಣ ಮಾಡಿದ್ದಳು!

ಅಗ, ಇದ್ದ ಲವಲವಿಕೆ ಉತ್ಸಾಹ ಈಗ ಇಲ್ಲ. ಜೀವನ ಈಗ ನೀರಸವೆನಿಸಿತ್ತು. ಬೆಳೆದಂತೆ, ಅನುಭವ ಹೆಚ್ಚಿದಂತೆ ಇಚ್ಚೆಗಳೂ, ನಾನಾ ಮುಖವಾಗಿ ಹರಡುವುವು. ಬಾಲ್ಯದಲ್ಲಿ ಆಳವಾದ ಆಲೋಚನೆಗಳು ಇಲ್ಲ. ಆದರಿಂದ ಎಂತಹ ತೃಪ್ತಿ, ಸಮಾಧಾನ, ಚಿಕ್ಕ, ಪುಟ್ಟ ವಿಷಯುಗಳಿಂದ ದೊರಕುತಿದ್ದುವು!

ಕತ್ತಲಾಗುತ್ತಾ ಬಂತು. ಮಾರುದಿನ ಸಂಜೆಗೆ ಇಳಯುವ ನಿಲ್ದಾಣ ಬರುವುದು!

ಸೀಮೂ ಯೋಚಿಸುತ್ತಾ ಇದ್ದುದರಿಂದ ಊಟ ಕಲಿಯುವಾಗ, ಬೊಗ, ಕಂದು ಹೋಗಿತ್ತು, ವಲ್ಲಾನತೆ ಹರಡಿತ್ತು. ಅವಳು ಭವಿಷ್ಯದ ಬಗ್ಗೆ ನಿಶ್ಚಯುಕ್ಕೆ ಬಂದಿರಲಿಲ್ಲ. ಮನಸ್ಸು ಹಿಂಎಗಿಂತಲೂ ಭಾರವಾಗಿತ್ತು.

ಸ್ಟೇಷನ್ನಿನಲ್ಲಿ ಪರಿಚಿತರಾರೂ ಕಾಣಿಸಲಿಲ್ಲ. ಕೂಲಿಯವನೊಡನೆ ಸಾಮಾನು ಹೊಂಸಿ ನಿಲ್ದಾಣದ ಹೊರಗಡೆ ಬಂದು ನಿಂತಿದ್ದ ಟ್ಯಾಕ್ಸಿ ಎನ್ನು ಗೊತ್ತುಮಾಡಿ, ತಾತನಿಯವಸ್ಟಿಗೆ ಹೋದಳು.

ಮೂರು ಮೈಲು ದೂರದ ಹಾದಿ ಬೇಗನೆ ಕ್ರಮಿಸಲಾಯಿತು. ಮಾಡಿ ಮನೆಯ ಇದಿರು, ಹಳೆಯ ಗೇಟು, ಟಾಸ್ಸ ಕಾಂತಿತು. ಬಾಗಿದ ಹೂವಿನ ಮರ ದಟ್ಟವಾಗಿ ಹರಡಿದ್ದ ಮಲ್ಲಿಗೆ ಬಳ್ಳಿ, ತಾತನನ್ನಿಗೆ ಬಾಲ್ಯದ ಎಲ್ಲ ಇದ್ದಂತಿತ್ತು. ಮನೆ ಗೇಟು. ಇದಿರಿನ ತೋಟ.

ಮುಂಬಾಗಿಲನ್ನು ತಲಪಿದಾಗ, ಚಾವಡಿಯಲ್ಲಿ ಯಾರೂ ಇಲ್ಲ. ತಾತ ಸಂಜೆ ಸಮಯ ಅಲ್ಲಿ ಕುಳಿತು ಕೊಳ್ಳುವ ವಾಡಿಕೆ.

ಬಾಗಿಲು ಬಡಿದಾಗ ಆಳು ಬಂದು ತೆರೆದನು.

ಪರಿಚಿತ ಆಳು; ಶೀನ.

"ಏನಮ್ಮಾ?" ಎಂದು ವಿಚಾರಿಸಿದ.

ಸೀಮೂಳನ್ನು ಅವನು ಚಿಕ್ಕಂದಿನಿಂದ ಎತ್ತಿ ಆಡಿಸಿದವನು.

"ತಾತ ಇಲ್ಲವೆ?"

"ಇದ್ದಾರೆ. ಅವರ ಮೈ ಜೆನ್ನಾಗಿಲ್ಲ' ಕೊಂಚ ಗಾಬರಿಯಾಯಿತು. ಸೀಮೂಳಿಗೆ.

ಒಳಗಡೆ ಹೋದಾಗ, ತಾತ ಆರಾಮಾಸನದಲ್ಲಿ ಹೊದಿಕೆಯನ್ನು ಬಿಗಿಯೊಗಿ ಹೊದ್ದುಕೊಂಡು ಕುಳಿತಿದು ಕಾಣಿಸಿತು.

ಮೊಮ್ಮಗಳನ್ನು ನೋಡಿ, 'ಬಂಡೆಯಾ? ನಿನಗೆ ಕಾರು ಕಳಿಹಿಸಬೇಕೆಂದಿದ್ದೆ' ಎಂದರು.

ಹತ್ತಿರ ಬಂದು ಸೀಮೂ ಕುಳಿತಾಗ,

"ಹೇಗೆ ಇದ್ದೀ? ನಿನ್ನ ಸಿನಿಮಾ ಕೆಲಸ ಭಾರೀ ಜೋರಾಗಿ ನಡೆಯುತ್ತಿದೆಯಲ್ಲಾ?' ಎಂದರು ನಸು ನಗುತ್ತಾ.

'ಹಾಗೇನಿಲ್ಲ.'

"ಎಲ್ಲಾ ಸಮಾಚಾರ ತಿಳಿಸುವಿಯಂತೆ ಈಗ ದಣಿವಾರಿಸಿಕೊಳ್ಳು. ಒಗಡೆ ಹೋಗಿ ಕಾಫಿ ಫಲಾಹಾರ ತೆಗೆದುಕೋ.' ಎಂದರು.

ರಾತ್ರಿ ಆ ಮಾತು ಈ ಮಾತು ಮಲಗುವ ಮುನ್ನ ತಾತನೊಡನೆ ಆಡಿದ್ದಾಗ.

"ನೀನು ಬದಲಾಗಿರುವಿ. ಹಿಂದಿನಂತೆ ಇಲ್ಲ.' ಎಂದರು ತಾತ.

"ಹೇಗೆ?'

'ಹಿಂದೆ ಎಳೆಯ ಹುಡುಗಿಯಂತೆ ಇದ್ದೆ. ಈಗ ಭಾರೀ ಯೋಚನೆಯಲ್ಲಿ ಮುಳುಗಿದಂತೆ ಇದೆ.

'ನಿಮಗೆ ಹೇಗೆ ತಿಳಿಯುತ್ತದೋ?"

"ನಿನ್ನ ಮೊಗ ನೋಡಿದರೆ ಸಾಕು, ಎಲ್ಲಾ ತಿಳಿದು ಬಿಡುತ್ತದೆ.

"ಏನು ತಿಳಿಯುತು ನಿವ ಗೆ?"

"ಯಾವನೋ ಒಬ್ಬ ನಿನ್ನ ಮನಸ್ಸಿನ ನೆಮ್ಮದಿ ಹಾಳು ಮಾಡಿರಬೇಕು ಅದರ ಯೋಜನೆ ಮಾಡುವಂತೆ ಇವೆ."

ಸೀಮೂ ಗಟ್ಟಿಯಾಗಿ ನಕ್ಕಳು.

"ನೀನು ನಕ್ಕು ಬಿಟ್ಟರೆ ನಿನ್ನಿಂದ ಸತ್ಯವನ್ನು ಅಡಗಿಸಲು ಸಾಧ್ಯವಿಲ್ಲ."

"ಆದರಿಲಿ ತಾತ, ನೀವು ಒಬ್ಬರೇ ಇಷ್ಟು ವರ್ಷಗಳ ಕಾಲ ಈ ಊರಿನಲ್ಲಿ ಹೇಗೆ ಸಮಯ ಕಳೆದಿರಿ?"

"ಬೇಕಾದಷ್ಟು ಕೆಲಸವಿತ್ತು. ಕಾಲ ಹೋದುದೇ ತಿಳಿಯಲಿಲ್ಲ."

"ನನಗೇನೋ ಇಲ್ಲಿಂದ ನಾಳೆಯೇ ಹೊರಟು ಬಿಡೋಣ ಎಂದು ಅನಿಸುತ್ತದೆ.'

'ಅಷ್ಟೊಂದು ಬೇಸರ ಹಿಡಿದರೆ ನಾಳೆ ನೀನು ನಮ್ಮ ಒಂದು ಕೇಂದ್ರಕ್ಕೆ ಹೋಗಿ ಅಲ್ಲಿನ ಸಂಚಾಲಕಿ ಸರಸ್ವತಿ ಬಾಯಿಯ ಸರಿಚಯ ಮಾಡಿಕೋ. ಪ್ರತಿಭಾನ್ವಿತ ಹೆಂಗಸು. ನಿನಗೆ ಬೇಕಿ ಕೆಲಸಾಲು ಉತ್ತಮ ಸಂಗಾತಿಯಾಗಬಹುದು."

'ಹೌದೇ? ಯಾರಿದು? ಸರಸ್ವತಿ ಬಾಯಿ.'

'ಅದೆಲ್ಲಾ ಅವರೇ ಹೇಳಬಹುದು. ಜೀವನದಲ್ಲಿ ಯಶಸ್ಸು, ಕೀರ್ತಿ ಸಂಪನ್ನೂ ಗಳಿಸಿದಾಕೆ.'

'ಹಾಗಾದರೆ ಖಂಡಿತಾ ಭೇಟಿಯಾಗ ಬೇಕು' ಎಂದಳು ಸೀಮೂ.

ಮನಸ್ಸಿನ ಅಸಮಾಧಾನ ಕಳೆಯಲೆಂದು ತಾತನನ್ನಲ್ಲಿಗೆ ಒಂದೂ, ಹಿಂದಿನ ಉತ್ಸಾಹ ಬಂದಿಲ್ಲಿ. ಯೋಜನೆಗಳು, ಕಡಿಮೆಯಾದಂತೆ ಇಲ್ಲಿ. ಇನ್ನೂ ಹೊಸ ಜನರ ಪರಿಚಯದಿಂದ ಆಗುವ ಒಂದು ನಾವನ್ನು ಚೆನ್ನಾಗಿ ಕಳೆಯೋಣ ಎಂದು, ಸೀಮೂ, ಮರ ದಿನವೇ ಸರಸ್ವತಿ ಬಾಯಿಯನ್ನು ಕಾಣಲು ಹೊರಟಳು.

ತಾತನ ಆರೋಗ್ಯ ವಿಚಾರಿಸಿ ತಿರುಗಾಡಲು ಅವಕಾಶನೀಯದುದರಿಂದ ಬೆಳಿಗ್ಗೆ ಕೇಂದ್ರಕ್ಕೆ ಹೋದಳು ಅವಳ ತಾತ ನಾಸ್ತು ಅವರ ನಾಲ್ಕಾರು ಸ್ನೇಹಿತರು, ಸಂಜೆ ವೇಳೆ ಕಲೆತು ವಿಚಾರ ವಿನಿಮಯಮಾಡಲುಒಂದುಅಧ್ಯಾತ್ಮಿಕ ಕೇಂದ್ರ ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದರು.

ಕೇಂದ್ರದ ಕಟ್ಟಡವನ್ನು ಅವಳು ಹಿಂದೆಯೇ ನೋಡಿದ್ದಳು. ಒಂದಿಸ್ಟಿನ ಕಟ್ಟಡ. ಸೀಮೂ ಹೋದಾಗ, ಮಂಬಾಗಿಲು ತೆರೆದಿತ್ತು. ಹೋಟೆದಲ್ಲಿ ಹೂವುಗಳು ಅರಳಿದ್ದುವು.

ನೆಟ್ಟಗೆ ಒಳಗೆ ಹೋದಳು ಸೀಮೂ. ವಿಶಾಲವಾದ ಕೋಣೆಯಲ್ಲಿ ಮೇಜಿನ ಬಳಿ ಯಸ್ಕಾದ ಮಹಿಳೆ ಕುಳಿತುದು ಕಾಣಿಸಿತು. ಪೆಸರ ಪರಿಚಿತವಾಗಿತ್ತು. ಎಲ್ಲಿ ನೋಡಿದುದು ಎಂದು ಸೀಮೂಗೆ ನೆನಪಿಗೆ ಬರಲಿಲ್ಲ.

ಸೀಮೂಳನ್ನು ನೋಡಿದೊಡನೆ, ಆಕೆ ಎದ್ದು "ಬನ್ನಿ" ಎಂದು ಮುಗುಳ್ನಗುತ್ತಾ ಸ್ವಾಗತಿಸಿದರು.

'ನಾನು ಸೀಮೂ' ಎಂದು ಪರಿಚಯ ಹೇಳಿದಳು ಸೀಮೂ.

'ನನಗೆ ತಿಳಿಯುತು. ನಿಮ್ಮ ತಾತ ಹೇಳಿದ್ದರು, ನೀವು ಸದ್ಯದಲ್ಲಿ ಬರಬಹುದು ಎಂದು' ಯಾವಾಗ ಬಂದಿರಿ.

ಸೀಮೂ ಹಿಂದು ಕುರ್ಚಿಯಲ್ಲಿ ಕುಳಿತು ಕೊಳ್ಳುತ್ತಾ,

'ನಿನ್ನೆ ಬಂದೆ' ಎಂದಳು.

'ನಿಮಗೆ ರಜಾ ದೊರೆಯಿತೇ'

"ಹೌದು. ದೊರಕಿಸಿಕೊಂಡು ಬಂದೆ."

"ನನಗೂ ಹಿಂದೆ ಬಿಡುವಿಲ್ಲದಷ್ಟು ಕೆಲಸವಿತ್ತು. ಆರೇಳು ಚಿತ್ರಗಳಲ್ಲಿ ಒಮ್ಮೆಗೆ ಪಾತ್ರ ವಹಿಸ ಬೇಕಾಗುವಾಗ ವಿಶ್ರಾಂತಿಯೇ ಸಿಗುವುದಿಲ್ಲ.'

ಸೀಮೂಳಿಗೆ ಸರಸ್ವತಿ ಬಾಯಿಯೊಂದು ತಕ್ಷಣ ತಿಳಿಯಿತು. ಹಿಂದೆ ಒಂದು ಕಾಲದಲ್ಲಿ ಚಿತ್ರದಲ್ಲಿ ನಟಿಸುತ್ತಿದ್ದ, ಜನಪ್ರಿಯವಾಗಿದ್ದ ತಾರೆ. ಈಗ ಚಿತ್ರರಂಗದಿಂದ ದೂರವಾಗಿದ್ದಳು. ಇವರೂ ನುರಿತು ಬಿಟ್ಟಿದ್ದರು. ಖ್ಯಾತಿಯ ಶಿಖರವನ್ನೇರಿದ್ದ ಅವಳು, ಈಗ ಸರ್ವ ಸಾಮಾನ್ಯ ಜೀವನವನ್ನು ಹೃದ್ಯಾಹ್ಲಾದಲ್ಲಿ ಬಾಳುತ್ತಿರುವಳು.

ಹಿಂದಿನ ಜೀವನದ ಕುರುಡಿಗೆ ಎಂಬಂತೆ ಹಳೆಯ ಮೇಕಪ್ಪಿನ ಕೃತ್ರಿಮ ಲೇಪನವಿರಲಿಲ್ಲ. ಆಗ ಆ ಮೇಕಪ್ಪಿನ ಅವಶ್ಯಕತೆಯಿಲ್ಲಿತ್ತು. ಸೆರಗಿಗೆ ತಗಲಿಸಿದ್ದ ಬ್ರೂಚ್, ಧರಿಸಿದ್ದ ಬ್ಲೌಸ್, ಕಟ್ಟಿದ ಮುಡಿ, ಎಲ್ಲಾ ಇಪ್ಪತ್ತು ವರ್ಷಗಳ ಹಿಂದೆ ನಟಿಯರು ಅನುಸರಿಸುತಿದ್ದ ಮಾದರಿ, ಕೂದಲು ನೆರೆತಿತ್ತು. ಆದರೂ ಯೌವನದ ಕಳೆಯನ್ನು ಉಳಿಸಲೋಸುಗ ಉಡಿಗೆ, ತೊಡಿಗೆ, ಕೇಶಾಲಂಕಾರಗಳಿಂದ ಪ್ರಯತ್ನ ಮಾಡಿದಂತಿತ್ತು. ಈಗ ಅದು ಅನವಶ್ಯಕವಾಗಿ ಕಾಣುತಿತ್ತು.

ವಿಮಲಳಿಗಾಗಿ ಸೀಮೂ, ಸರಸ್ವತಿ ಬಾಯಿ ಹೇಳುತಿದ್ದ ಒಬ್ಬಳ ಗತ ಜೀವನದ ಕತೆಯನ್ನು ಅಲಿಸಿದಳು.

ನಿರ್ಮಾಪಕರು, ಉದಯರಿ, ಇತರ ತಾರೆಯರ ಪ್ರೇಮಪಾಶ, ಹೊಸ ಮುಖ ಬಂದೊಡನೆ ಹಳೆಯ ನಟಿಯರು ಜನಪ್ರಿಯತೆ ಕಳೆದು ಕೊಳ್ಳುವ ರೀತಿ, ಇವೆಲ್ಲಾ, ಸರಸ್ವತಿ ಬಾಯಿಯ ಮೂತಿಸಿಲ್ಲಿ ಬಂದು ಹೋದವು.

"ಈಗ ಇಲ್ಲಿ ಬಂದು ನೆಲಸಿರುವಿರಾ?"

ಇದೀಗಲೇ ಹೊಸತಾಗಿ ತೆರೆಯಲ್ಪಟ್ಟಿದೆ.

ನೇತ್ರ ರಕ್ಷಣೆಗಾಗಿ— ನಿಮ್ಮ ಕಣ್ಣುಗಳ ಸೌಂದರ್ಯಕ್ಕಾಗಿ

ಅತ್ಯಾಧುನಿಕ ಆಕರ್ಷಕ ವಿಧಾನ

ಕಾಂಟೆಕ್ಟ್ ಲೆನ್ಸ್ (Contact Lens)



Phone. 20118

The only Qualified optometrist of South

Shetty's Optics & Contact Lens Clinic

London Qualified Optometrists

೭ ಈ'ಗೆನ್ ಬೋಸ್ಟ್ರೀಟ್, ಬಾಕ್ಕುಯಾರ್ ಗೇಟ್ ಪೋಸ್ಟ್ ಆಫೀಸಿನ ಎದುರು

ಬೊಂಬಾಯಿ - ೧.

ಲಂಡನ್ ಶರಬೇತಾದ ಹಾಗೂ ಜಗದ್ವ್ಯಾಪಿ ಅನುಭವವುಳ್ಳ ನೇತ್ರ ತಜ್ಞರಿಂದ ನೇತ್ರ ಪರೀಕ್ಷೆ.

ದಕ್ಷಿಣ ಕನ್ನಡಿಗರಲ್ಲೇ ಮೊದಲಿಗರಾದ ಕಾಂಟೆಕ್ಟ್ ಲೆನ್ಸ್ ತಜ್ಞರು.

ಒಂದೇ ಲೆನ್ಸಿನಲ್ಲಿ ಪ್ರತ್ಯೇಕ ಪವರಿನ ೧೪ ವಿಧದ್ಯ ಭಾಗಗಳಿರುವ 'ಬೈಲೆಕ್ಸ್ ಲೆನ್ಸ್'ನ ತಜ್ಞರು.

NAVAYUGA 26—10—1967
Registered with the Registrar
of News Papers for India
under No. R. N. 3646/'67

REGD. No. B. G. 176
LICENCE No. 31
Licensed to Post without Prepayment

ಏನಾದರೂ ಮೊತನಾಡಬೇಕೆಂದು, ಸೀಮೆ ಕೇಳಿದಳು.

ಹೌದು. ಈಗ ನಾನು ವಿರಾಮ ಜೀವನವನ್ನು ಬಾಳುತಿದ್ದೇನೆ. ಈ ಅಭ್ಯಾಕ್ಷಿಕೇಂದ್ರವು ಸಂಜೆ ವೇಳೆ ಕಳೆಯಲುಬಂದು ಸಾಧನವಾಗಿದೆ. ಆದಕ್ಕೆ ನಿಮ್ಮ ತಾತ ನಿಗೆ ಎಷ್ಟು ಕೃತಜ್ಞನಾಗಿದ್ದರೂ ಸಾಲದು."

ಸೀಮಳಿಗೆ ಅವರ ಮಾತು ಹೆಚ್ಚು ಕೇಳಬೇಕೆಂದಾಗಲಿಲ್ಲ. ಮುಂದೆ ಭವಿಷ್ಯದಲ್ಲಿ ತಾನು ಕೂಡಾ ಇವಳಂತೆ ನಟೇ ಜೀವನ ನಿಲ್ಲಿಸಿದಾಗ ಆಗಬೇಕು. ಈ ಕರಾಳ ಸತ್ಯ ದೋಚರಿಸಿತು. ಬಂದು ಒಂದು ತಾಸಿನ ಪತ್ರಿರವಾಗಿರಬೇಕು. ಸೀಮೆ ಕೈಗಡಿಯಾರ ನೋಡಿದಳು.

ಸರಸ್ವತಿಬ್ಬಾ "ನಿಮಗೆ ವೇಳೆ ಇಲ್ಲಾಂತ ಕಾಣುತ್ತದೆ.' ಎಂದಳು.

'ಹೌದು; ಕೆಲವು ಪತ್ರಗಳನ್ನು ಬರೆಯಲಿದೆ. ಹೇಳಿದಾಗ, ನಾನಿನ್ನು ಬರ್ತೇನೆ" ಎಂದು ಎದ್ದಳು.

"ನೀವು ಹೋಗುವ ಮುನ್ನ ಬನ್ನಿ. ಏಷಯು ಮೊತನಾಡಲಿದೆ.'

'ಹುಂ ಬರ್ತೇನೆ." ಎಂದು ಸೀಮೆ ಮನೆಕಡೆ ನಡೆದಳು. ತಾತ ಇದಿರೇ ಇದ್ದರು.

"ಬೇಗನೆ ಮರಳಿ ಬಂದಿ"

"ಹೌದು. ಆಕೆ ಚಿತ್ರ ನಟಿಯಾಗಿದ್ದರು."

"ಹೌದಾದು ನಿನಗೆ ತಿಳಿದಿರಬಹುದೆಂದು ಕೊಂಡೆ"

ನಸು ನಗುತ್ತಾ ತಾತ ನುಡಿದರು.

"ಇಲ್ಲ. ಆಕಯೇ ಹೇಳಿದರು."

'ಪ್ರತಿಭಾವಂತ ನಟಿ.'

'ಹೌದು. ಇನ್ನೂ ಎಲ್ಲಾ ವಿಷಯದಲ್ಲಿ ಆಸಕ್ತಿ ಇರಿಸಿ ಕೊಂಡಿರುವರು.'

'ಅವಳನ್ನು ರಾತ್ರಿವಾಗ ನಿನ್ನ ನೆನಪೆ ಬರುತಿತ್ತು.' ತಾತ ಹೇಳಿದಾಗ, ಸೀಮೆಳಿಗೆ ಎಲ್ಲಿಲ್ಲದ ಕೋಪ ಬಂತು.

"ಅವಳು ನಟಿಯಾಗಿರುವಾಗ ನಿನ್ನಂತೆ ಯಶಸ್ವೀ ತಾರೆಯಾದಳು. ಏಕಾಕಿನಿಯೂ ಗಿಯೇ ಜೀವನ ಸಾಗಿಸಿದಳು."

"ಹುಂ" ಎಂದು ಅವಳು ಅತ್ತ ಹೋದಳು. ತಾತ, ಹಿಂದಿನಿಂದ ಬರುತ್ತಾ, ಹೇಳಿದರು. "ಎಷ್ಟೆಷ್ಟೊ ಮಂದಿ ಅವಳನ್ನು ವಿವಾಹವಾಗಲು ಬಂದರು, ಎಲ್ಲರನ್ನೂ ನಿರಾಕರಿಸಿದಳು. ಈಗ ಏಕಾಕಿನಿಯಾಗಿ ಇಲ್ಲಿ ಜೀವನ ಸಾಗಿಸುತಿದ್ದಾಳೆ.' ಸೀಮೆ ಮೊತನಾಡಲಿಲ್ಲ.

"ನಿಷ್ಣ ಅಣ್ಣನು ಪತ್ರ ಬರೆದಿದ್ದನು. ನೀನು ಈಗ ವಿವಾಹವಾಗುವುದಿಲ್ಲ ಅನ್ನು ತ್ತೀ. ನೀನಾದರೂ ಹೇಳಬಾರದ ಎಂದು.'

"ಹುಂ.

'ನಾನು ಹೇಳಿದರೆ ಬೂರು ಕೇಳುತ್ತಾರೆ?" ತಾತ ಇಷ್ಟರ ತನಕ ಲಘುವಾಗಿ ಮೊತನಾಡುತಿದ್ದವರು ಗಟ್ಟಿಸಿರು ಬಿಟ್ಟರು.

"ಯೋಗ್ಯ ವರ ದೊರೆತರೆ, ಹುಡುಗಿಯರಿಗೆ ಮದುವೆ ಮಾಡುವುದು ಒಳ್ಳೆಯದು. ಎಂದು ನಮ್ಮ ಹಳಬರ ಅಭಿಪ್ರಾಯ.'

ಸೀಮೆ ಉತ್ತರವೀಯಲಿಲ್ಲ.

'ನಾನು ಹೇಳುವುದನ್ನು ಹೇಳಿಯಾಯಿತು. ಇನ್ನು ನಿನ್ನಿಷ್ಟ." ಎಂದು ತಾತ ಅಲ್ಲಿಂದ ಹೋದರು.

ಆ ರಾತ್ರಿ, ಸೀಮೆಳಿಗೆ ಬಹಳ ಹೊತ್ತು ನಿದ್ರೆ ಬರಲಿಲ್ಲ. ಬೆಳಗಿನ ಜಾವದಲ್ಲಿ ಕಣ್ಣಿಗೆ ಜೊಂಪು ಹಿಡಿಯಿತು. ಕನಸು ಬಿತ್ತು. ತಾತನಲ್ಲಿಂದ ಹಿಂದೆ ಹೊರಟು ಹೋದ ಕನಸು. ಅವಳು ಮನೆ ತಲಪುವಾಗ ಅಲ್ಲಿ ಸ್ವಾಗತಿಸಲು ರಾಮು ಬಂದಿದ್ದನು. ಅವನನ್ನು ನೋಡಿದೊಡನೆ ಅವಳ ದುಗುಡ ತುಂಬಿದ ಮನಸ್ಸು ಅರಿವಿಲ್ಲದೆಯೇ ಉಲ್ಲಾಸದಿಂದ ನಲಿಯಿತು. ಕನಸಿನಿಂದ ಎಚ್ಚೆತ್ತರೋ, ಉಲ್ಲಾಸ ಮಾಯವಾಗಿರಲಿಲ್ಲ.

ಮರುದಿನ ಮುಂಜಾನೆಯೇ, ತಾತ ನೊಡನೆ ಇಂದು ಸಂಜೆಯ ರೈಲಿಗೆ 'ಹೋಗುತ್ತೇನೆ' ಎಂದಳವಳು.

ಸೀಮೆಳ ಪ್ರಫುಲ್ಲವಾದ ಮುಖವನ್ನು ಈಕ್ಷಿಸುತ್ತಾ, 'ಇಷ್ಟು ಅವಸರವೇನು? ಒಂದು ವಾರ ಇರಲು ಬಂದವಳಲ್ಲವೆ?'

'ಹೌದು.'

'ಈಗ?'

'ಎರಡು ದಿವಸಗಳಲ್ಲಿ ಹಿಂದೆ ಮಾರಳಲೂ ಬಹುದು' ಎಂದಳು ಮುಗುಳ್ನಗುತ್ತಾ.

"ಓಹೋ ನಿನ್ನ ನಿಶ್ಚಿತಾರ್ಥವನ್ನು ತಿಳಿಸಲು ಬರುವುದು" ಎಂದರು ತಾತ ಸಂತೋಷದಿಂದ.

ಸೀಮೂ, ಮೌನವಾಗಿಯೇ ಮತ್ತೂ ಮುಗುಳ್ನಗುತಿದ್ದಳು.

ನಗೆ ಬಿಂದು

ತನ್ನನ್ನು ಹೇಗಾದರೂ ಉಳಿಸಬೇಕು; ದಯೆ ತೋರಬೇಕು ಎಂದಿತ್ಯಾದಿಯಾಗಿ ಘನ ಹೊಂದಿದ ನ್ಯಾಯಾಲಯದಲ್ಲಿ ಓರ್ವ ಕಳ್ಳನು ವಿಜ್ಞಾಪಿಸಿದ....

"...ಹೂಂ?....ಯಾಕೆ?"

'ತನ್ನನ್ನೇ ಹೊಂದಿ ಜೀವಿಸುವ ಅನೇಕ ಮಂದಿಯಿದ್ದಾರೆ. ಅವರೆಲ್ಲರೂ ಉಸುವಾಸವಾಗ ಬೇಕಾದೀತು....'

'ಮಕ್ಕಳೆಷ್ಟು....'

"ಇನ್ನೂ ಆಗಿಲ್ಲವಾದರೂ ಅನೇಕ ಮಂದಿ ನೋಲೀಸರಿದ್ದಾರೆ...."

ಪತ್ನಿ:—"ನೀವು ಏನು ಮಾಡಿದರೂ ಅನರ್ಥ ಆಥವಾ ಅನಾಹುತವಿಲ್ಲದಿಲ್ಲ. ಸ್ವಲ್ಪ ಯೋಚಿಸಿದರೆ ಹೀಗಾಗಲಿಕ್ಕೆ ಕಾರಣವೇ ಇಲ್ಲ...."

ಪತಿ:—'ನಿಜ;...ಉದಾಹರಣೆಗೆ ನಿನ್ನ ವಿವಾಹವನ್ನೇ ತೆಗೆದರಾಯ್ತು...'

"ಬೇಕಾಗಿದ್ದಾರೆ" ಎಂಬ ಶಿರೋನಾಮೆಯ ಒಂದು ಕವತೆಯನ್ನು ಪತ್ರಿಕಾ ಸಂಪಾದಕರಿಗೆ ಕಳುಹಿಸಿದೆ."

"...ಅದು ಪ್ರಕಟವಾಯ್ತೆ?..."

"ಇಲ್ಲ; ಜಾಹೀರಾತು ದರಶೆತ್ತಿ ಮಾತ್ರವೇ ಪ್ರಕಟಿಸಲಾಗುವುದೆಂಬ ಒಂದು ಉತ್ತರ ಲಭಿಸಿತು...."

ಪತ್ನಿಗೆ ಪ್ರಸವ ವೇದನೆ ಪ್ರಾರಂಭವಾದೊಡನೆಯೇ ರಾಮಣ್ಣ ಹೋಗಿ ಡಾಕ್ಟರನ್ನು ಕರೆ ತಂದನು. ಡಾಕ್ಟರ್ ಪ್ರಸವ ಕೊಠಡಿಯೊಳಗೆ ಪ್ರವೇಶಿಸಿಬಾಗಿಲು ಮುಕ್ಕಿ ಸ್ವಲ್ಪ ಹೊತ್ತಾದ ಬಳಿಕ ಬಾಗಿಲುಗಳೆಡೆಯಲ್ಲಿ ತಲೆ ಚಾಚಿ, 'ಸ್ಕ್ರೂ ಡ್ರೈವರ್ ಇದೆಯೆ?" ಎಂದು ವಿಚಾರಿಸಿದರು.

ರಾಮಣ್ಣ ಅವಸರದಲ್ಲಿ ಹುಡುಕಿ ತಂದು ಕೊಟ್ಟ.

ಸ್ವಲ್ಪ ಕಳೆದು ಡಾಕ್ಟರ್ ಬಾಗಿಲುಗಳೆಡೆಯಲ್ಲಿ ತಲೆ ಚಾಚಿ, 'ಜೂರಿ ಬೇಗಾಗಿತ್ತು.'

ಎಂದಾಗ ರಾಮಣ್ಣ ಆದನ್ನೂ ಹುಡುಕಿ ತಂದ.

ಸ್ವಲ್ಪ ಕಳೆದು, 'ಕತ್ತಿಯಿದೆಯೇ?' ಎಂದು ಕೇಳಿದ ಡಾಕ್ಟರರ ಅಗತ್ಯವನ್ನೂ ರಾಮಣ್ಣ ಪೂರೈಸಿದ. ಸ್ವಲ್ಪ ಕಳೆದು, "ಕೊಡಲಿಯಿದ್ದರೆ ಒಳ್ಳೆಯದು" ಎಂದಾ ಡಾಕ್ಟರ್ ಹೇಳಿದಾಗ ರಾಮಣ್ಣನಿಗೆ ತುಂಬಾ ಗಾಬರಿಯಾಗಿತ್ತು.

'ಏನಾಯ್ತು, ಡಾಕ್ಟರ್?—"

"ಏನೂ ಇಲ್ಲ; ನನ್ನ ಬೇಗ್‌ನ ಬೀಗ ತೆಗೆಯು ಬರುವುದಿಲ್ಲ...." ಎಂದಾಗಿತ್ತು. ಬೆವರು ಬಿಟ್ಟ ನನದ ಡಾಕ್ಟರರ ಉತ್ತರ.

'ನಿನ್ನ ಮಗಳು ಸಂಗೀತ ಕಲಿಯಲಿಕ್ಕೆ ಸ್ವಿದ್ದಾದನ್ನು ನಿಶ್ಚಿಸಿದರೇಕೆ?...'

'ಅವಳೂ ತಾಯಿಯಂತೆ 'ಸಾ....ರೀ' 'ಸಾ.....ರೀ' ಎನ್ನಲಾರಂಭಿಸಿದ್ದರಿಂದ ಮಾತ್ರ!...'

—ಎಚ್. ಎಂ. ವಿಜಯನಾರಾಯಣ

ದಿ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಆಂಗ್ಲ ಸ್ವಯಂಬೋಧಿನಿ

ಸುಲಭದಲ್ಲಿ ಇಂಗ್ಲಿಷ್

(English Made Easy)

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ.ಎಂಬತ್ತು.(ಟಿ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

(Letter Writing Made Easy)

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು

ಬೆಲೆ:ರೂ. 1-25 (ಟ್ಯಾಪ್ತಿ ಪ್ರತ್ಯೇಕ)

ಡಾ। ಕೊರಡ್ಕಲ್ ವೆಂಕಟ್ರಾವ್ ವಿರಚಿತ

ಮನೆ - ಮದ್ದು

(Home-Remedies)

ನೂರಾರು ಕಾಯಿಲೆಗಳಿಗೆ ಮನೆಯಲ್ಲೆ ಮದ್ದು ಮಾಡಿಕೊಳ್ಳುವ ವಿಧಾನ ವಿವರಿಸುವ ಗೃಹವೈದ್ಯ.

ಬೆಲೆ ರೂ. 2—00 (ಟ. ಖ. ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ:—

ಪನಧಾರಕೆ ಪುಸ್ತಕ ಭಂಡಾರ, ಉಡುಪಿ, ಪಿ. ಕೆ.

ಉಡುಪಿ ಲೇಂಡ್ ಟ್ರೈಬ್ಯುನಲ್
ಕೋರ್ಟಿನಲ್ಲಿ
L. T. O. P. 66/1967

ಜಗನ್ನಾಥ ಹೆಗ್ಡೆ —ಅರ್ಜಿದಾರ
ಮತ್ತು
ಶ್ರೀನಿವಾಸ ಹೆಗ್ಡೆ —ಎದ್ರಿ

ಎದ್ರಿ ಶ್ರೀನಿವಾಸ ಹೆಗ್ಡೆ, ಕೊರಸಳು ಹಂಗ್ಸುವಿನ ಮಗ, ಉದ್ದಿ ತಾಲೂಕು ಕುಕ್ಕೆಹಳ್ಳಿ ಗ್ರಾಮ—ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ಅರ್ಜಿದಾರರಿಗೆ ನಿಮ್ಮಿಂದ ಬರಬೇಕಾದ ವಿಶ್ವವಾಸ ಸಂಗತಿದ ಗೇಣಿ ವಸೂಲು ತೀರ್ಪು ಮಾಡುವ ಬಗ್ಗೆಂದ ಅರ್ಜಿಯು ತಾ. 27—10—67 ಕ್ಕೆ ಯಿಟ್ಟಿದ್ದ. ಉದಾಹರಿಸುವಂತಾದಿದ್ದರೆ ಆ ದಿನ ಪೂರ್ವಾಹ್ನ 11 ಘಂಟೆಗೆ ಸದರೀ ಕೋರ್ಟು ಮುಂದೆ ಹಾಜರ್ರಾಗಿ ಜ್ಯಾಬ್ತೀರು ಮಾಡಿಕೊಳ್ಳ ಇಲ್ಲದಿದ್ದು,ತಪ್ಪಿದ್ದ ನಿಮ್ಮ ಗೈರು ಹಾಜರಿಯಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟ್ ಹುಕುಂ ಪ್ರಕಾರ)

K. Balachandra Rao
Advocate for Petitioner

ಉಡುಪಿ, ತಾ. 10—10—67

Edited, Printed & Published by K. H. Shetty at the Navayuga Press, Udipi, S. India.